ಶ್ರೀಮನ್ಮಹಾಭಾರತ

ಭಾರತ ದರ್ಶನ ಪ್ರಕಾಶನ



ಅನುಶಾಸನ
ಪರ್ವ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್ ॥

ಸಂಪುಟ ೨೮

ಭಾರತ ದರ್ಶನ ಪ್ರಕಾಶನ

ಶ್ರೀಮನ್ಮಹಾಭಾರತ

(ವ್ಯಾಸಭಾರತದ ಕನ್ನಡ ಸರಳಾನುವಾದ)

ಭಾತಿ ಸರ್ವೇಷು ವೇದೇಷು
ರತಿಃ ಸರ್ವೇಷು ಜನ್ತುಷು ।
ತರಣಂ ಸರ್ವತೀರ್ಥಾನಾಂ
ತೇನ ಭಾರತಮುಚ್ಯತೇ ॥

ಸಂಪುಟ 28

ಮುದ್ರಕರು:

ಭಾರತ ದರ್ಶನ ಮುದ್ರಣಾಲಯ

163, ಮಂಜುನಾಥ ರಸ್ತೆ, 2ನೇ ಬ್ಲಾಕ್, ತ್ಯಾಗರಾಜನಗರ,

ಬೆಂಗಳೂರು - 560 028

ದೂರವಾಣಿ: 080-26765381

ಪ್ರಥಮ ಇ-ಮುದ್ರಣ ಜನವರಿ ೨೦೧೪

ಆದಿ ಅಧ್ಯಕ್ಷರು:

ಪರಮಪೂಜ್ಯ ಶ್ರೀ ಶ್ರೀ
ರಂಗಪ್ರಿಯಮಹಾದೇಶಿಕಸ್ವಾಮಿಗಳವರು

ಆದಿ ವ್ಯವಸ್ಥಾಪಕ ಸಂಪಾದಕರು:

ದಿ|| ಕೆ.ಎಸ್. ಕೌಶಿಕ್ ('ವಿಶ್ವಾಮಿತ್ರ')

ಆದಿ ಸಂಪಾದಕರು:

ದಿ|| ವಿದ್ವಾನ್ ಹೆಚ್.ಎನ್. ರಂಗಸ್ವಾಮೀ

ಆದಿ ಸಂಪಾದಕರು:

ದಿ|| ವಿದ್ವಾನ್ ರಾಮೇಶ್ವರಾವಧಾನೀ

ಸಂಪಾದಕ ಮಂಡಲಿ:

ಶ್ರೀ ಶ್ರೀಹರಿ
ಶ್ರೀ ನೆ.ವೆಂ. ಶ್ರೀನಿವಾಸರಾಯ

ಶ್ರೀ ಎ. ಸೂರ್ಯನಾರಾಯಣ್,M.A. B.Com., B.L.,
ಕೋಶಾಧ್ಯಕ್ಷರು

ವಿನಮ್ರವಚನಗಳು

ದಯಾಮಯನಾದ ಭಗವಂತನ ಕರುಣೆಯಿಂದಲೂ-ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ಸಿದ್ಧವಾಗಿರುವ ಶ್ರೀಮನ್ಮಹಾಭಾರತದ ಇಪ್ಪತ್ತೆಂಟನೆಯ ಸಂಪುಟರೂಪವಾದ ಕುಸುಮವನ್ನು-'ಕೆರೆಯ ನೀರನು ಕೆರೆಗೆ ಚೆಲ್ಲಿ'-ಎಂಬ ಪುರಂದರದಾಸರ ಸೂಕ್ತಿಯಂತೆ ದಿವ್ಯಪುರುಷನ ಪಾದಾರವಿಂದಗಳಲ್ಲಿ ಸಮರ್ಪಿಸಿ, ಪ್ರಸಾದರೂಪವಾದ ಆ ದಿವ್ಯಸಂಪುಟಕುಸುಮವನ್ನು ಪ್ರಿಯವಾಚಕರ ಅಂಜಲಿಪುಟಗಳಲ್ಲಿಡುತ್ತಿದ್ದೇವೆ. ಇಪ್ಪತ್ತೇಳನೆಯ ಮೆಟ್ಟಲಿನಿಂದ ಇಪ್ಪತ್ತೆಂಟನೆಯ ಮೆಟ್ಟಲಿಗೆ ಹತ್ತುವ ವೇಳೆಗೆ ಹೆಚ್ಚು ಆಯಾಸವೇ ಆಯಿತು; ವೇಳೆಯೂ ಆಯಿತು. ದಯಾಮಯನಾದ ಅವನ ಪ್ರೇರಣೆಯಂತೆ ಮೇಲೆ ಹತ್ತಲು ಸತ್ಪುರುಷರ ಆಶ್ರಯವೂ ಸ್ವಲ್ಪಮಟ್ಟಿಗೆ ಸಿಕ್ಕಿತು. ಮುಂದೆ ಎಷ್ಟೇ ತೊಂದರೆಗಳು ಸಂಭವಿಸಿದರೂ ಕರುಣಾಮೂರ್ತಿಯಾದ ಭಗವಂತನು ಎಲ್ಲವನ್ನೂ ಪರಿಹರಿಸಿಕೊಟ್ಟು ಈ ಮಹಾಕಾರ್ಯವನ್ನು ಮುಗಿಸಿಕೊಡುವನೆಂಬ ಭರವಸೆಯೂ ಉಂಟಾಗಿದೆ. ಆದರೆ ಇದನ್ನು ಕೇವಲ ಭಾವುಕತೆಯಿಂದ ಬರೆಯುತ್ತಿರುವರೆಂದು ಯಾರೂ ಭಾವಿಸಬಾರದು. ಪ್ರತ್ಯಕ್ಷಾನುಭವದ ವಿಷಯವೇ ಆಗಿದೆ. 1983ರಲ್ಲಿ ರಿಯಾಯ್ತಿ ಬೆಲೆಯ ಕಾಗದವು ಸಿಕ್ಕದೆ ಸುಮಾರು ಒಂದು ಲಕ್ಷದ ಹದಿನೈದು ಸಾವಿರ ರೂ.ಗಳನ್ನು ಹೆಚ್ಚಾಗಿ ಕೊಡಬೇಕಾಗಿ ಬಂದು ಹಣದ ಮುಗ್ಗಟ್ಟನ್ನು ಎದುರಿಸುತ್ತಿದ್ದಾಗ ಸಾವಿರಾರು ಮೈಲಿಗಳಷ್ಟು ದೂರವಿರುವ ಅಮೇರಿಕದ ಫ್ಲಾರಿಡಾ ಎಂಬ ಸ್ಥಳದಿಂದ ಶ್ರೀ ಆರ್. ಚಂದ್ರಶೇಖರ್ ಎಂಬುವರು ಅಪ್ರಾರ್ಥಿತವಾಗಿ 5289/-ರೂ.ಗಳನ್ನು ($500/-) ಕಳುಹಿಸಿಕೊಟ್ಟರು. ಹಿಂದೆ ಕೂಡ ಅನೇಕರು ಸ್ವಪ್ರೇರಣೆಯಿಂದ ಧನಸಹಾಯವನ್ನು ಮಾಡಿದ್ದಾರೆ. ಮುಂದೂ ಮಾಡಬಹುದು. ಆದರೆ ಹಣದ ಮುಗ್ಗಟ್ಟನ್ನು ಎದುರಿಸುತ್ತಿದ್ದಾಗ ಪರಮಾತ್ಮನು ಯಾವ ರೀತಿಯಲ್ಲಿ ಧೈರ್ಯವನ್ನು ತುಂಬಿಕೊಟ್ಟನೆಂಬುದಕ್ಕೆ ಇದೊಂದು ದೃಷ್ಟಾಂತಮಾತ್ರವಾಗಿದೆ. ಇಂತಹ ಅನುಭವಗಳಿಂದ ಶ್ರೀಮನ್ಮಹಾಭಾರತವನ್ನು ಯಶಸ್ವಿಯಾಗಿ ಮುಗಿಸಿ ಪರಮಾತ್ಮನ ಪಾದಾರವಿಂದಗಳಲ್ಲಿ ಸಮರ್ಪಿಸಿ ಅದರ ಮೂಲಕವಾಗಿ ಕನ್ನಡ ಬಾಂಧವರಿಗೆ ನೀಡುವ ಭರವಸೆಯನ್ನು ಹೊಂದಿರುತ್ತೇವೆ. ಈ ಸಂಪುಟದಲ್ಲಿ ಅನುಶಾಸನ ಪರ್ವವೇ ಮುಂದುವರಿದಿದೆ. ಒಂದೇ ಧರ್ಮವನ್ನು ಹಲವಾರು ರೀತಿಗಳಲ್ಲಿ ಪ್ರತಿಪಾದಿಸಿ ಹೇಳಿದ್ದಾರೆ. ಗೋವಿನ ಮಾಹಾತ್ಮ್ಯ ಮತ್ತು ಗೋದಾನದ ಮಾಹಾತ್ಮ್ಯೆಯಿದೆ. ಈ ಪ್ರಕರಣವನ್ನು ನೋಡಿದರೆ ನಿಶ್ಚಯವಾಗಿಯೂ ನಮ್ಮ ದೇಶದಲ್ಲಿ ಗೋವಧೆಯು ಹೇಗೆ ಬಂತೆಂಬ ಚಿಂತೆಗೆ ಕಾರಣವಾಗುತ್ತದೆ. ಗೋವಿನಂತಹ ಪೂಜ್ಯವಸ್ತುವೇ ಲೋಕದಲ್ಲಿ ಮತ್ತೊಂದಿಲ್ಲ. ಅಂತಹ ಪರಮಪವಿತ್ರವಾದ ಮತ್ತು ಮಾತೃಸ್ವರೂಪಿಣಿಯಾದ ಗೋವನ್ನಿಂದು ನಮ್ಮ

ದೇಶದಲ್ಲಿ ಲಕ್ಷ-ಲಕ್ಷ ಸಂಖ್ಯೆಯಲ್ಲಿ ಮಾಂಸಕ್ಕಾಗಿ ಕೊಲ್ಲಲಾಗುತ್ತಿದೆ. ಗೋವಧೆಯು ಹೀಗೆಯೇ ಮುಂದುವರಿದರೆ ಮುಂದಿನ ಐವತ್ತು-ನೂರು ವರ್ಷಗಳಲ್ಲಿ ಗೋವಿನ ಪೀಳಿಗೆಯೇ ಇರಲಾರದು. ಪವಿತ್ರವಾದ ಭಾರತಭೂಮಿಯಲ್ಲಿ ಗೋಹತ್ಯೆಯು ಅತ್ಯಂತಹೇಯವಾದುದು. ಇದರ ವಿಷಯವಾಗಿ ಕಣ್ಮುಚ್ಚಿ ಕುಳಿತಿರುವ ನಾವೂ ಗೋಹತ್ಯಾ ಪಾಪಕ್ಕೆ ಭಾಗಿಗಳೇ ಆಗುತ್ತೇವೆ. ಆದುದರಿಂದ ಗೋಹತ್ಯೆಯನ್ನು ತಡೆಯಲು ಪ್ರಯತ್ನಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವೂ ಆಗಿದೆ.

ಕಾಗದವು ಮೊದಲಾಗಿ ಎಲ್ಲ ಪದಾರ್ಥಗಳ ಬೆಲೆಯೂ 1972ರಲ್ಲಿ ಇದ್ದುದಕ್ಕಿಂತ ಒಂದಕ್ಕೆ ಮೂರುಪಟ್ಟು ನಾಲ್ಕುಪಟ್ಟು ಹೆಚ್ಚಾಗಿದೆ. ಸಂಪುಟಗಳ ಬೆಲೆಯನ್ನು ಹೆಚ್ಚಿಸುವುದು ಅನಿವಾರ್ಯವೆಂದು ನಮಗೂ ಅನ್ನಿಸುತ್ತಿದೆ. ಪೂರ್ಣಮಾಲೆಯ ಗ್ರಾಹಕರಿಗೆ ಕೇವಲ 9/- ರೂ. ಗಳಿಗೆ ಒಂದು ಸಂಪುಟವು ದೊರೆಯುತ್ತಿದೆಯೆಂದರೆ ಅನೇಕರು ನಂಬದಂತಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಇಷ್ಟೇ ಪುಟಗಳಿರುವ ಇದೇ ತರಹದ ಪುಸ್ತಕಗಳ ಬೆಲೆ ಇಪ್ಪತ್ತೈದು ರೂ. ಗಳಿಂದ ಐವತ್ತು ರೂಪಾಯಿಗಳವರೆಗೂ ಇದೆ. ಇದು ಎಲ್ಲರಿಗೂ ಗೊತ್ತಿರುವ ವಿಷಯವೇ ಆಗಿದೆ. ಆದರೂ ಈ ವರ್ಷದ ಕಡೆಯವರೆಗೆ ಪೂರ್ಣಮಾಲೆಯ ಚಂದಾಹಣವನ್ನಾಗಲೀ-ಬಿಡಿಸಂಪುಟಗಳ ಬೆಲೆಯನ್ನಾಗಲೀ ಹೆಚ್ಚಿಸದಿರಲು ನಿರ್ಧರಿಸಲಾಗಿದೆ. ಸಾವಿರಾರು ಸಂಖ್ಯೆಯಲ್ಲಿ ಗ್ರಾಹಕರಾಗಬೇಕೆಂಬುದೇ ಇದಕ್ಕೆ ಮುಖ್ಯಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ಈ ವರ್ಷ ಕಡೆಯ ಪಕ್ಷ ನಾಲ್ಕು ಸಾವಿರ ಹೊಸಗ್ರಾಹಕರನ್ನು ಕೂಡಿಸಿಕೊಳ್ಳುವ ಆಶಯವಿದೆ. ಈ ಆಶಯವು ಪೂರ್ಣಗೊಳ್ಳಬೇಕಾದರೆ ನಮ್ಮ ಗ್ರಾಹಕರೆಲ್ಲರೂ ಇಬ್ಬಿಬ್ಬರು ಗ್ರಾಹಕರನ್ನು ಮಾಡಿಕೊಡಲು ಶ್ರದ್ಧೆಯಿಂದ ಪ್ರಯತ್ನಿಸಬೇಕು. ಇಷ್ಟು ಮಾತ್ರದ ಸಹಕಾರದಿಂದ ನಮ್ಮ ಸಂಕಲ್ಪವು ನೆರವೇರುವುದು. ಕೆನರಾ, ಸಿಂಡಿಕೇಟ್, ಕಾರ್ಪೊರೇಷನ್, ನ್ಯಾಷನಲ್ ಕೋ-ಆಪರೇಟಿವ್, ವಿಶ್ವೇಶ್ವರಯ್ಯ ಕೋ-ಆಪರೇಟಿವ್–ಈ ಎಲ್ಲ ಬ್ಯಾಂಕುಗಳಲ್ಲಿಯೂ ಈ ವರ್ಷದ ಕಡೆಯವರೆಗೆ ಸಾಲದ ಸೌಲಭ್ಯವನ್ನು ವಿಸ್ತರಿಸಿರುತ್ತಾರೆ. ಈ ಸದವಕಾಶವನ್ನು ಉಪಯೋಗಿಸಿಕೊಂಡು ಪ್ರತಿಯೊಬ್ಬ ಗ್ರಾಹಕರೂ ಇಬ್ಬರು ಗ್ರಾಹಕರನ್ನು ಮಾಡಿಕೊಡಬೇಕೆಂದು ಕಳಕಳಿಯಿಂದ ಪ್ರಾರ್ಥಿಸುತ್ತೇವೆ.

ಇದೇ ರುಧಿರೋದ್ಗಾರಿ ಸಂವತ್ಸರದ ಶ್ರಾವಣ ಬಹುಳ ದ್ವಾದಶಿಯ (4ನೇ ಸೆಪ್ಟೆಂಬರ್ 1983) ದಿನ ಬೆಂಗಳೂರು ಶಂಕರಪುರದಲ್ಲಿರುವ ಶಂಕರಮಠದ ಭವ್ಯಸಭಾಂಗಣದಲ್ಲಿ ಮಂಗಳವಾದ್ಯಗಳು ಮೊಳಗುತ್ತಿರಲು ಶ್ರೀಮನ್ಮಹಾಭಾರತದ 27ನೆಯ ಸಂಪುಟದ ಪ್ರಕಾಶನವಾಯಿತು. ಸಂಜೆ 6 ಗಂಟೆಗೆ ಸರಿಯಾಗಿ ಭಾರತ ದರ್ಶನ ಪ್ರಕಾಶನದ ಅಧ್ಯಕ್ಷರು ಸಂಪಾದಕ ಮಂಡಲಿಯವರೊಂದಿಗೆ ಪೂರ್ಣ

ಕುಂಭಸಹಿತವಾಗಿ ಹಿರಿಯ ಶ್ರೀಗಳಾದ ಶ್ರೀಮಚ್ಛಂಕರಾಚಾರ್ಯ ಶ್ರೀ ಶ್ರೀಮದಭಿನವವಿದ್ಯಾತೀರ್ಥಮಹಾಸ್ವಾಮಿಗಳನ್ನು ಸಂದರ್ಶಿಸಿ ಅವರ ಅನುಜ್ಞೆಯನ್ನು ಪಡೆದರು. ಅನಂತರ ಕಿರಿಯ ಶ್ರೀಗಳಾದ ಶ್ರೀಮಚ್ಛಂಕರಾಚಾರ್ಯ ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳನ್ನು ಪೂರ್ಣಕುಂಭದೊಂದಿಗೆ ಸಭಾಮಂಟಪಕ್ಕೆ ಕರೆತರಲಾಯಿತು. ಶ್ರೀ ಶ್ರೀಗಳವರು ಆಸನದಲ್ಲಿ ಮಂಡಿಸಿದ ಮೇಲೆ ವೇದಘೋಷದೊಂದಿಗೆ ಕಾರ್ಯಕ್ರಮವು ಪ್ರಾರಂಭವಾಯಿತು. ಋಗ್ವೇದ, ಯಜುರ್ವೇದ ಮತ್ತು ಸಾಮವೇದಘೋಷಗಳನಂತರ ಶ್ರೀಮತೀ ಸತ್ಯವತಿಯವರು ಸ್ವಾಗತಪದ್ಯಗಳನ್ನು ಹಾಡಿದ ಬಳಿಕ ವಿದ್ವಾನ್ ಹೆಚ್. ಎನ್. ರಂಗಸ್ವಾಮಿಗಳು ಶ್ರೀ ಶ್ರೀಗಳವರನ್ನೂ ಮತ್ತು ಸಭಿಕರನ್ನೂ ಸ್ವಾಗತಿಸುತ್ತಾ–ಇದುವರೆಗೂ ಶ್ರೀಮನ್ಮಹಾಭಾರತಪ್ರಕಾಶನವು ನಡೆದುಬಂದ ಹಾದಿಯನ್ನು ವಿವರಿಸಿ, ಈಗ ಪ್ರಕಾಶನವು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದರು. 'ಕಾಗದ, ಶಾಯಿ, ಕೆಲಸಗಾರರ ಸಂಬಳಗಳು ಬಹಳ ಏರಿರುವಾಗಲೂ ಕೇವಲ ಧರ್ಮಪ್ರಚಾರದ ದೃಷ್ಟಿಯಿಂದ ಈ ಕೆಲಸವು ನಡೆಯುತ್ತಿರುವುದರಿಂದ–ಹಿಂದಿನ ಬೆಲೆಗೇ ಪುಸ್ತಕಗಳನ್ನು ವಿತರಣೆಮಾಡಲಾಗುತ್ತಿದೆ'–ಎಂದರು.

ಅನಂತರ ಶ್ರೀವೇದವ್ಯಾಸರಿಗೂ, ಸರಸ್ವತೀದೇವಿಗೂ, ಶ್ರೀಮನ್ಮಹಾಭಾರತದ ಸಂಪುಟಗಳಿಗೂ ಪೂಜೆಯನ್ನು ಸಲ್ಲಿಸಲಾಯಿತು. ಬಳಿಕ ಮಂಗಳ ವಾದ್ಯಘೋಷಗಳ ನಡುವೆ ಶ್ರೀ ಶ್ರೀ ಭಾರತೀತೀರ್ಥಮಹಾಸ್ವಾಮಿಗಳವರು ತಮ್ಮ ಅಮೃತಹಸ್ತದಿಂದ 27ನೆಯ ಸಂಪುಟವನ್ನು ಪ್ರಕಾಶನಗೊಳಿಸಿದರು. ಶ್ರೀಮತೀ ವಿಜಯಲಕ್ಷ್ಮೀ ಅವರು ಸಂಪುಟದಲ್ಲಿ ಬರುವ ಗಂಗಾಮಾಹಾತ್ಮ್ಯದ ಶ್ಲೋಕಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪ್ರಕಾಶನದ ಅಧ್ಯಕ್ಷರಾದ ಶ್ರೀ ವರದದೇಶಿಕಾಚಾರ್ಯರಂಗಪ್ರಿಯರು ಸಂಪುಟದ ಪರಿಚಯವನ್ನು ಮಾಡಿಕೊಟ್ಟರು. 'ದಾನಧರ್ಮಪರ್ವವೆಂದೇ ಹೆಸರಾಗಿರುವ ಅನುಶಾಸನಪರ್ವದ 56 ಅಧ್ಯಾಯಗಳನ್ನು ಒಳಗೊಂಡಿರುವ ಈ ಸಂಪುಟದಲ್ಲಿ ದಾನದ ಮಾಹಾತ್ಮ್ಯ, ಗಿಡ-ಮರಗಳನ್ನು ನೆಟ್ಟು ತೋಪುಗಳನ್ನು ಬೆಳೆಸುವುದು ಮತ್ತು ಬಾವಿ, ಕೊಳ, ಕೆರೆ, ಕಟ್ಟೆಗಳನ್ನು ಕಟ್ಟಿಸುವುದು–ಇವುಗಳಿಂದಾಗುವ ಪುಣ್ಯಪ್ರಾಪ್ತಿ ಮತ್ತು ಅಕ್ಷಯಲೋಕ ಗಳ ಪ್ರಾಪ್ತಿಗಳು ವರ್ಣಿಸಲ್ಪಟ್ಟಿವೆ. ವಿಶೇಷವಾಗಿ ಗಂಗೆಯ ಮಾಹಾತ್ಮ್ಯ, ಗೋವಿನ ಮಾಹಾತ್ಮ್ಯಗಳು ಸೂಕ್ತದೃಷ್ಟಾಂತಗಳೊಂದಿಗೆ ಹೇಳಲ್ಪಟ್ಟಿವೆ. ಸ್ತ್ರೀಯರ ಗುಣ-ದೋಷಗಳನ್ನು ಸ್ತ್ರೀಯರ ಬಾಯಲ್ಲಿಯೇ ಹೇಳಿಸಿದ್ದಾರೆ. ಇದೇ ಸಂಪುಟದಲ್ಲಿ ಬರುವ ಶಿವಸಹಸ್ರನಾಮವು ಮಹಾಮಂತ್ರವಾಗಿದ್ದು ಶ್ರೀಮನ್ಮಹಾಭಾರತವು ಶೈವ-ವೈಷ್ಣವಸಮನ್ವಯದ್ಯೋತಕವಾಗಿರುವುದನ್ನು ತೋರಿಸುತ್ತದೆ'-ಎಂದು ಹೇಳಿದರು.

ಅನಂತರ ಶ್ರೀ ಶ್ರೀಗಳವರು ಆಶೀರ್ವಚನಗಳನ್ನು ನೀಡುತ್ತಾ ಹೀಗೆ ಅಪ್ಪಣೆ ಕೊಡಿಸಿದರು –"ನಾವು ಭಾಗವಹಿಸುವ ಕೆಲವು ಕಾರ್ಯಕ್ರಮಗಳಲ್ಲಿ ಕಾರ್ಯನಿರ್ವಾಹಕರು–'ಇಂದಿನ ದಿನ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ'–ಎಂದು ಹೇಳುವುದು ರೂಢಿ. ಹಾಗೆಂದರೆ ಅರ್ಥವೇನು?–ಎಂದು ಕೇಳಿದರೆ ಅದು ರೂಢಿ ಎಂದೇ ಅವರು ಹೇಳಿಯಾರು. ಆದರೆ ನಮ್ಮ ಪೂರ್ವಿಕರು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ ಯಾವುದೆಂಬುದನ್ನು ಸುಸ್ಪಷ್ಟವಾಗಿ ಹೇಳಿದ್ದಾರೆ :

ಕೃತಗಙ್ಗೋದಕಸ್ನಾನಂ ಶ್ರುತಭಾರತಸತ್ಕಥಮ್ ।
ಅರ್ಚಿತಾಚ್ಯುತಪಾದಾಬ್ಜಂ ದಿನಂ ಕಲ್ಪಶತಾದ್ವರಮ್ ॥

ಯಾವ ದಿನ ಪವಿತ್ರವಾದ ಗಂಗೆಯಲ್ಲಿ ಸ್ನಾನಮಾಡುವೆವೋ, ಯಾವ ದಿನ ಶ್ರೀಮನ್ಮಹಾಭಾರತಗ್ರಂಥಪಠಣವನ್ನು ಮಾಡುವೆವೋ–ಅದರಲ್ಲಿನ ಕಥೆಗಳನ್ನು ಕೇಳುವೆವೋ–ಯಾವ ದಿನ ಭಗವಾನ್ ಶ್ರೀಕೃಷ್ಣನ ಪೂಜೆಯನ್ನು ಮಾಡುವೆವೋ ಆ ದಿನವೇ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ದಿನ- ಎಂಬ ಪೂರ್ವಸೂರಿಗಳ ಈ ದಿವ್ಯವಾದ ಮಾತು ಎಂದೆಂದಿಗೂ ಅನುಸರಣೀಯ. ಶ್ರೀ ವರದದೇಶಿಕಾಚಾರ್ಯರು ಹೇಳಿದ–ಶ್ರೀಮನ್ಮಹಾಭಾರತವು ಶೈವ-ವೈಷ್ಣವ ಸಮನ್ವಯದ್ಯೋತಕಗ್ರಂಥವೆಂಬುದು ಬಹಳ ಸಮಂಜಸವಾಗಿದೆ. ಭಾರತದರ್ಶನ ಪ್ರಕಾಶನಸಂಸ್ಥೆಯವರು ಕೈಗೊಂಡಿರುವ ಈ ಸ್ತುತ್ಯಕಾರ್ಯಕ್ಕೆ ನಮ್ಮ ಪೂರ್ಣ ಆಶೀರ್ವಾದವಿದೆ. ಭಗವಂತನಾದ ಶ್ರೀಕೃಷ್ಣನ, ಶಾರದಾ-ಚಂದ್ರಮೌಳೀಶ್ವರರ ಪೂರ್ಣಾನುಗ್ರಹವು ಇವರಿಗುಂಟಾಗಲಿ. ಮುಂದಿನ ಸಂಪುಟಗಳು ಸುಗಮವಾಗಿ ಹೊರಬರಲಿ."

ಅನಂತರ ಶ್ರೀ ರಾಮಚಂದ್ರಾಪುರಮಠದ ಶ್ರೀ ಶ್ರೀಮಚ್ಛಂಕರಾಚಾರ್ಯ ಶ್ರೀ ಶ್ರೀ ರಾಘವೇಂದ್ರಭಾರತೀಸ್ವಾಮಿಗಳು ಕಳುಹಿಸಿದ್ದ ಸುವರ್ಣಮಂತ್ರಾಕ್ಷತೆಗಳನ್ನು ಶ್ರೀ ಶ್ರೀ ಮಹಾಸ್ವಾಮಿಗಳು ಸಂಪಾದಕಮಂಡಲಿಗೆ ಅನುಗ್ರಹಿಸಿದರು. ಶ್ರೀಗುರುವಂದನೆ ಮತ್ತು ಶಾಂತಿಪಾಠಗಳೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಈ ಸಂಪುಟಕ್ಕೆ ಸನ್ಮಾನ್ಯ ಶ್ರೀ ಎಲ್. ಎಸ್. ಶೇಷಗಿರಿರಾಯರು ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿರುತ್ತಾರೆ. ಇವರಿಗೆ ನಮ್ಮ ಹೃತ್ಪೂರ್ವಕವಂದನೆಗಳು.

ಸ್ವಯಂಪ್ರೇರಣೆಯಿಂದ ಸಹಾಯಧನವನ್ನು ಕಳುಹಿಸಿರುವವರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುವುದೂ ಮತ್ತು ನಮ್ಮ ಗ್ರಾಹಕರಿಗೆ ಅವರ ಪರಿಚಯವನ್ನು ಮಾಡಿಕೊಡುವುದೂ ನಮ್ಮ ಕರ್ತವ್ಯವಾಗಿದೆ. ಶ್ರೀ ಆರ್. ಚಂದ್ರಶೇಖರ್ ಎಂ. ಡಿ. ಫ್ಲಾರಿಡಾ ($500) 5289/- ರೂ.ಗಳು, ಶ್ರೀಮತಿ ಮನೋಹರಮ್ಮ, ಕೋಲಾರ 1001/- ರೂ.ಗಳು, ಶ್ರೀ ಸಂಜೀವಶೆಟ್ಟಿ,

ಮುಂಬಾಯಿ 101/-ರೂ.ಗಳು, ಶ್ರೀ ವಿ. ಲಕ್ಷ್ಮೀನಾರಾಯಣ, ಬೆಂಗಳೂರು 500/-ರೂ.ಗಳು ಡಾ॥ ಕೃಷ್ಣ ಮೂರ್ತಿ, ಕೋಲಾರ 200/-ರೂ.ಗಳು, ಶ್ರೀಮತೀ ಲಕ್ಷ್ಮಮ್ಮ, ಬೆಂಗಳೂರು 500/-ರೂ.ಗಳು, ಶ್ರೀ ಹೆಚ್. ಟಿ. ನಂಜಪ್ಪ, ಸಕಲೇಶಪುರ 101/- ರೂ.ಗಳು, ಶ್ರೀಮತಿ ವಿ. ಜಯಾ, ಮೈಸೂರು 108/- ರೂ. ಗಳು, ಶ್ರೀ ಬಿ.ಕೆ.ಅನಂತರಾಮಯ್ಯ, ಸಾಲಗ್ರಾಮ 101/- ರೂ.ಗಳು ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ಸಂಪಾದಕಮಂಡಲಿಯ ವಿದ್ವಾಂಸರು ಅವಿರತವಾಗಿ ಶ್ರಮಿಸಿ ಈ ಸಂಪುಟವನ್ನು ಸಂಪಾದಿಸಿಕೊಟ್ಟಿರುತ್ತಾರೆ. ಪ್ರಕಾಶನದ ಅಧ್ಯಕ್ಷರಾದ ವಿದ್ವಾನ್ ವರದದೇಶಿಕಾಚಾರ್ಯರಂಗಪ್ರಿಯರು ಮಾರ್ಗದರ್ಶನಮಾಡುತ್ತಿದ್ದಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ತೆರೆಯ ಮರೆಯಲ್ಲಿ ಅನೇಕರು ಮಹಾಭಾರತದ ಪ್ರಚಾರವನ್ನು ಮಾಡುತ್ತಾ ಗ್ರಾಹಕರನ್ನು ಸಂಗ್ರಹಿಸಿ ಕೊಡುತ್ತಿದ್ದಾರೆ. ಕೆಲವು ವೇಳೆ ಅಂತಹ ಮಹಾನುಭಾವರು ಯಾರೆಂಬುದರ ಅರಿವು ನಮಗೂ ಇರುವುದಿಲ್ಲ. ಆ ರೀತಿಯಲ್ಲವರು ನಿಃಸ್ವಾರ್ಥದಿಂದ ಮಹಾಭಾರತದ ಪ್ರಚಾರಕಾರ್ಯವನ್ನು ಮಾಡುತ್ತಿರುತ್ತಾರೆ. ಇಂತಹ ಪರಮಸಾತ್ತ್ವಿಕ ಸತ್ಪುರುಷರೆಲ್ಲರಿಗೂ ದಯಾಮಯನಾದ ಪರಮಾತ್ಮನು ಇನ್ನೂ ಹೆಚ್ಚಿನ ಧರ್ಮನಿಷ್ಠೆಯನ್ನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ. ಏಕೆಂದರೆ: ಒಂದು ಕಡೆ ಧರ್ಮಗ್ರಂಥವಿದೆ. ಮತ್ತೊಂದು ಕಡೆ ಧರ್ಮಗ್ರಂಥವನ್ನು ಓದುವ ಅಭಿಮಾನಿಗಳಿರುತ್ತಾರೆ. ಇವೆರಡರ ಸಂಯೋಜಕರು ಅವಶ್ಯವಾಗಿ ಬೇಕು. ಈ ಕಾರ್ಯವು ಧರ್ಮದಲ್ಲಿ ನಿಷ್ಠೆಯಿರುವವರಿಂದಲೇ ಸಾಧ್ಯ. ದಯಾಮಯನಾದ ಪರಮಾತ್ಮನು ನಮ್ಮ ಪ್ರಿಯವಾಚಕರೆಲ್ಲರಿಗೂ ಆಯುಷ್ಯ-ಆರೋಗ್ಯ, ಐಶ್ವರ್ಯಗಳನ್ನೂ, ಧರ್ಮದಲ್ಲಿ ನಿಷ್ಠೆಯನ್ನೂ ದಯಪಾಲಿಸಿ ಸಂರಕ್ಷಿಸಬೇಕೆಂಬ ಮಾನಸಿಕ ಪ್ರಾರ್ಥನೆಯೊಡನೆ ವಿರಮಿಸುವೆವು.

-ಪ್ರಕಾಶಕರು.

ಮುನ್ನುಡಿ

ಮಹಾಭಾರತಕ್ಕೆ ಸಮನಾಗಿ ನಿಲ್ಲಬಲ್ಲ ಮತ್ತೊಂದು ಮಹಾಕಾವ್ಯವು ಜಗತ್ತಿನಲ್ಲಿ ಕಾಣುವುದಿಲ್ಲ-ಎನ್ನುವ ಮಾತನ್ನು ನಾವು ಭಾರತೀಯರೆಂಬ ಅಭಿಮಾನ ಆಡಿಸುವುದಿಲ್ಲ. ಮನುಷ್ಯನು ಯಾವ ರಾಗಗಳನ್ನೂ ಬಯಕೆಗಳನ್ನೂ ಅನುಭವಿಸಬಹುದೋ ಅವೆಲ್ಲ ಇಲ್ಲಿ ಕಾಣುತ್ತವೆ. ಇಲ್ಲಿನ ಪರ್ವತಸದೃಶ ವ್ಯಕ್ತಿಗಳಿಗೆ ಬರುವ ಸಂತೋಷ-ದುಃಖಗಳು, ಗೆಲವು-ಸೋಲುಗಳು, ಸನ್ಮಾನ-ಅಪಮಾನಗಳು, ಕೋಪ-ಸಂಯಮಗಳು ಈ ಪ್ರಮಾಣದಲ್ಲಿ, ಇಷ್ಟು ಪ್ರವಾಹಸದೃಶಶಕ್ತಿಯಲ್ಲಿ ಬೇರಾವ ಕೃತಿಯಲ್ಲೂ ಕಾಣುವುದಿಲ್ಲ. ಮನುಷ್ಯನು, ದೈಹಿಕ ಮತ್ತು ಮಾನಸಿಕ ಪ್ರಪಂಚಗಳಲ್ಲಿ ಪಡೆಯಬಹುದಾದ ಎಲ್ಲ ಅನುಭವಗಳ ಶಕ್ತಿಯ ಪರಾಕಾಷ್ಠೆಯನ್ನು ತೋರುವ ಈ ಕೃತಿಯಲ್ಲಿ ಚಿಂತನೆ ಹಾಸು ಹೊಕ್ಕಾಗಿದೆ. ಎಲ್ಲ ಅನುಭವಗಳಿಗೆ ಬೆಲೆ ಕಟ್ಟುತ್ತದೆ. ಈ ಕೃತಿ ಮನುಷ್ಯನ ಚೇತನವನ್ನು ಬೇರಿನವರೆಗೆ ಅಲ್ಲಾಡಿಸಿ ತತ್ತರಿಸುವಂತೆ ಮಾಡಿ ಬಾಳಿನ ಗುರಿ, ಅರ್ಥ ಮತ್ತು ಮೌಲ್ಯಗಳನ್ನು ಪರೀಕ್ಷೆಮಾಡಿಕೊಳ್ಳುವಂತೆ ಮಾಡುತ್ತದೆ. ಇಂತಹ ಮಹಾಕೃತಿಯ ಒಂದು ಸಂಪುಟಕ್ಕೆ ಕೆಲವು ಮಾತುಗಳ ಮುನ್ನುಡಿಯ ದೀಪಹಚ್ಚುವುದು ನನಗೆ ಗೌರವ, ಭಾಗ್ಯ ಎಂದು ಭಾವಿಸುತ್ತೇನೆ.

'ಶಾಂತಿಪರ್ವ' ದ ನಂತರ ಬರುವ 'ಅನುಶಾಸನಪರ್ವ' ಶಿಕ್ಷಣದ ಪರ್ವ. ಬಾಳನ್ನು ಸಾರ್ಥಕಗೊಳಿಸುವ ಪರಮಸೂತ್ರಗಳಿಂದ ಹಿಡಿದು ಹೇಗೆ ಮಲಗಬೇಕು, ಹೇಗೆ ಮಲಗಬಾರದು. ಎಲ್ಲಿಗೆ ಹೋಗಬಹುದು, ಎಲ್ಲಿಗೆ ಹೋಗಬಾರದು-ಇಂತಹ ನಿತ್ಯಜೀವನದ ಅತಿಸಾಮಾನ್ಯವಿವರಗಳವರೆಗೆ ಎಲ್ಲ ವಿಷಯಗಳನ್ನೂ ಕುರಿತು ಇಲ್ಲಿ ಮಾರ್ಗದರ್ಶನವಿದೆ. ಸಾಮಾನ್ಯವಿಷಯಗಳಲ್ಲಿ ಹಲವು ವಿಧಿ-ನಿಷೇಧಗಳು ಅಂದಿನ ಕಾಲ-ಸಮಾಜದ ಸ್ವರೂಪ ಇವುಗಳ ಸಂದರ್ಭದಲ್ಲಿ ಅರ್ಥವತ್ತಾಗಿದ್ದಿರಬಹುದು; ಕಾಲ ತಂದ ಬದಲಾವಣೆಗಳಿಂದ ಅವುಗಳ ಪ್ರಯೋಜನ ನಷ್ಟವಾಗಿರಬಹುದು. ಹಲವಾರು ವಿಧಿ-ನಿಷೇಧಗಳು ದೇಹವನ್ನು ಶುಚಿಯಾಗಿಟ್ಟುಕೊಳ್ಳಲು ನೆರವಾಗುವುವು. ಹಲವು ಆಚಾರಗಳು ಪಿತೃಗಳೊಡನೆ, ಸುತ್ತಣ ಜಗತ್ತಿನೊಡನೆ ಸಂಬಂಧ ಕಲ್ಪಿಸುವಂತಹವು. ಇಂತಹ ಸಂಬಂಧ ಸಾಧ್ಯವಾದರೆ ಜಗತ್ತಿನಲ್ಲಿ ತಾನು ಏಕಾಕಿ, ಅನಾಥ ಎನ್ನಿಸುವುದಿಲ್ಲ. ಮುಖ್ಯವಾಗಿ ಇಲ್ಲಿ ನಾವು ಕಾಣುವುದು ಕೃಷಿಪ್ರಧಾನವಾದ, ಗೋವಿಗೆ ಅತ್ಯಂತ ಭಕ್ತಿ ಸಲ್ಲುವ ಒಂದು ಸಮಾಜ. ಈ ಸಮಾಜದ ಸಂಯಮ ಮತ್ತು ವಿವೇಕಗಳೇ ಮೂರ್ತೀಭವಿಸಿದಂತಿರುವ ಭೀಷ್ಮನು ಇದರ ಪಾಲನೆಯ ಹೊಣೆ ಹೊರಲಿರುವ ಯುಧಿಷ್ಠಿರನಿಗೆ ಮಾಡುವ ಎಲ್ಲ ಉಪದೇಶದ ಅಡಿಪಾಯ ಎಂದರೆ ಸಂಯಮ ಮತ್ತು ಸಾರ್ಥಕಬದುಕು; ಕ್ಷುಲ್ಲಕ ಬಯಕೆಗಳನ್ನು ದೂರಮಾಡಿದ ಮತ್ತು ದಾನ, ಸತ್ಯ, ಧರ್ಮಗಳು ಬೆಳಗುವ ಬದುಕು. "ಯಃ ಸರ್ವಮಾಂಸಾನಿ ನ ಭಕ್ಷಯೀತ (ಪುಟ 4193)'' "ದಾನ್ತಾಃ

ಸರ್ವತ್ರ ಸುಖಿನಃ " (ಪುಟ 4211) ಎಂದು ಪ್ರಾರಂಭವಾಗುವ ಭಾಗಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. **"ಸತ್ಯೇನ ಸೂರ್ಯಸ್ತಪತಿ ಸತ್ಯೇನಾಗ್ನಿಃ ಪ್ರದೀಪ್ಯತೇ । ಸತ್ಯೇನ ಮರುತೋ ವಾನ್ತಿ ಸರ್ವಂ ಸತ್ಯೇ ಪ್ರತಿಷ್ಠಿತಮ್** " (ಪುಟ 4216) ಜೊತೆಗೆ **"ದಮಃ ಸತ್ಯಫಲಾವಾಪ್ತಿರುಕ್ತಾ ಸರ್ವಾತ್ಮನಾ ಮಯಾ" "ಅಸಂಶಯಂ ವಿನೀತಾತ್ಮಾ ಸ ವೈ ಸ್ವರ್ಗೇ ಮಹೀಯತೇ"** (ಪುಟ 4217) ಇಂತಹ ವಾಕ್ಯಗಳನ್ನು ಯಾವ ನಾಗರಿಕತೆ ತನ್ನ ಸದಸ್ಯರಲ್ಲಿ ಅತಿ ಪರಿಪಕ್ವವಿವೇಕಪಡೆದವನಿಂದ ಅವನ ಮರಣಕಾಲದಲ್ಲಿ ಒಬ್ಬ ಚಕ್ರವರ್ತಿಗೆ ಹೇಳಿಸಬಲ್ಲುದೋ –ಆ ನಾಗರಿಕತೆ ಬಹು ಶ್ರೇಷ್ಠ ಎನ್ನುವುದರಲ್ಲಿ ಸಂಶಯವಿಲ್ಲ. ಇಲ್ಲಿ ಅಲ್ಲಲ್ಲಿ ಬ್ರಾಹ್ಮಣನಿಗೆ ಬಹುಮಾನ್ಯತೆ ನೀಡುವ ಮಾತುಗಳಿವೆ. ಇವು ಕೆಲವರಿಗಾದರೂ ಸ್ವಾರ್ಥಪರಾಯಣತ್ವವಾಗಿ ಕಾಣಬಹುದು. ಆದರೆ ಇಲ್ಲಿ ಮನ್ನಣೆಗೆ ಪಾತ್ರನಾಗುವ ಬ್ರಾಹ್ಮಣ ಎಂತಹವನೆಂಬುದನ್ನು ಗಮನಿಸಬೇಕು. **"ತ್ಯಾಗಸ್ಯ ಚಾಪಿ ಸಮ್ಪತ್ತಿಃ" "ಕುಟುಮ್ಬಿಕೋ ಧರ್ಮಕಾಮಃ** "(ಪುಟ 4366) **"ಪ್ರತಿಗ್ರಹೇ ಸಂಯಮೋ ವೈ"** (ಪುಟ 4376) ಈ ಪದಗಳಿಂದ ಪ್ರಾರಂಭವಾಗುವ ಭಾಗಗಳನ್ನೂ ಇಂತಹ ಇತರ ಭಾಗಗಳನ್ನೂ ಅಗತ್ಯವಾಗಿ ಗಮನಿಸಬೇಕು. ಇಂತಹವನನ್ನೇ ಲಕ್ಷಿಸದ ಗೌತಮನೆಂಬ ಬ್ರಾಹ್ಮಣನ ವರ್ಣನೆ ಇದು. "ಮೃದುಸ್ವಭಾವದವನಾದ, ಮನಸ್ಸನ್ನು ಅಧೀನದಲ್ಲಿಟ್ಟುಕೊಂಡಿದ್ದ, ಜಿತೇಂದ್ರಿಯನಾದ ಗೌತಮ." **"ಅಗಾಧೇ ವಿಮಲೇ ಶುದ್ಧೇ ಸತ್ಯತೋಯೇ ಧೃತಿಹ್ರದೇ । ಸ್ನಾತವ್ಯಂ ಮಾನಸೇ ತೀರ್ಥೇ ಸತ್ತ್ವಮಾಲಮ್ಬ್ಯ ಶಾಶ್ವತಮ್॥"** (ಪುಟ 4561) ಈ ಮಾತುಗಳನ್ನೂ ಅಗತ್ಯವಾಗಿ ಗಮನಿಸಬೇಕು. ಇಂತಹ ಶುಭ್ರಮನಸ್ಸಿನವರು ಶುಭ್ರಶೀಲರು ಯಾವ ಸಮಾಜಕ್ಕೇ ಆಗಲೀ ಭೂಷಣ ಪ್ರಾಯರು. ಇವರು ಇಲ್ಲಿ ಗೌರವಪಡೆಯುವ ಬ್ರಾಹ್ಮಣರು.

ಪ್ರಾಯಶಃ ಇಂದಿನ ಭಾರತದ ಎಲ್ಲ ಕ್ಲೇಶಗಳಿಗೆ ಒಂದು ಮೂಲಕಾರಣವನ್ನು ಹುಡುಕುವುದಾದರೆ ಅದು ಶಿಸ್ತಿನ ಅಭಾವ. ನಾಯಕರಾಗಿರುವವರು. ನಾಯಕರಾಗಬಯಸುವವರು, ಹಲವು ವರ್ಗಗಳಿಗೆ ಮಾರ್ಗದರ್ಶನಮಾಡುವ ಹೊಣೆ ಹೊತ್ತವರು, ವಿದ್ಯಾವಂತರು-ಇಂತಹವರಲ್ಲಿಯೂ ಶಿಸ್ತಿನ ಅಭಾವವಿದ್ದರೆ ಯಾವ ಸಂವಿಧಾನವಾಗಲೀ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಆಗಲೀ, ಸಿವಿಲ್ ಪ್ರೊಸೀಜರ್ ಕೋಡ್ ಆಗಲೀ ಅಂತಹ ಸಮಾಜಕ್ಕೆ ಯಾವ ರೀತಿಯಲ್ಲೂ ನೆರವಾಗಲಾರದು. ಶಿಸ್ತು ಮನುಷ್ಯನ ಒಳಗಿನಿಂದ ಮೂಡಿ ಬರಬೇಕು. ತಾನು ಮನುಷ್ಯ, ತಾನು ಮೃಗವಲ್ಲ, ಕ್ರಿಮಿ-ಕೀಟವಲ್ಲ ಎಂಬ ಅರಿವಿನಿಂದ ಮೂಡಿ ಬರಬೇಕು. ಶಿಸ್ತು, ಸಂಯಮ, ಶುಭ್ರಶೀಲಗಳಿಗೆ ಮುಡಿಪಾದ 'ಅನುಶಾಸನಪರ್ವ' ವನ್ನು ಮನಸ್ಸಿಟ್ಟು ಅಧ್ಯಯನ ಮಾಡಬೇಕು. ಇದರಲ್ಲಿ ಹೇಳಿರುವುದೆಲ್ಲ ಅಕ್ಷರಶಃ ಇಂದಿಗೂ ಗ್ರಾಹ್ಯ ಎಂದು ಯಾರೂ ಹೇಳುವುದಿಲ್ಲ. ನಿತ್ಯಜೀವನದ ಹಲವಾರು ಆಚಾರಗಳ ವಿವರಗಳಿಗೆ ಈ ಮಾತು ಅನ್ವಯಿಸಬಹುದು. ಅವರವರ ಅರಿವಿನ

ಬೆಳಕಿನಲ್ಲಿ ಅವರವರು ನಡೆಯಬೇಕು. ಆದರೆ ಇದನ್ನು ಆಕ್ಷೇಪಿಸುವಾಗ, ಇದರಲ್ಲಿ ಹೇಳಿರುವುದು ತ್ಯಾಜ್ಯ ಎಂದು ನಿರ್ಧರಿಸುವಾಗ-ಅದಕ್ಕೆ ಅಗತ್ಯವಾದ ಯೋಗ್ಯತೆಯನ್ನು, ಅಧಿಕಾರವನ್ನು ತಮ್ಮ ಅಸ್ಖಲಿತಬ್ರಹ್ಮಚರ್ಯದಿಂದ, ಅಚಲಸತ್ಯನಿಷ್ಠೆಯಿಂದ ಪ್ರಶ್ನಾತೀತ ಶೀಲದಿಂದ ಸಂಪಾದಿಸಿಕೊಂಡಿದ್ದೇವೆ-ಎಂದು ಆತ್ಮಸಾಕ್ಷಿಯಾಗಿ ಹೇಳುವಂತಿರಬೇಕು. ಮಹಾಭಾರತದ ಈ ಅನುವಾದವನ್ನು ಕನ್ನಡಿಗರಿಗೆ ಒದಗಿಸುವ ಮಹತ್ಕಾರ್ಯವನ್ನು ಕೈಕೊಂಡವರಿಗೆ ನಮನಗಳು.

ಎಲ್. ಎಸ್. ಶೇಷಗಿರಿರಾವ್
ಜ್ಯೋತಿ, 267, ಮೂರನೆಯ ಬ್ಲಾಕ್
ಜಯನಗರ, ಬೆಂಗಳೂರು-560011.

ದ್ವಿತೀಯ ಮುದ್ರಣದ ಪ್ರಸ್ತಾವನೆ

ದಯಾಮಯನಾದ ಭಗವಂತನ ಕೃಪೆಯಿಂದಲೂ, ಸದ್ಗುರುವಿನ ದಿವ್ಯಾಶೀರ್ವಾದದಿಂದಲೂ, ಸತ್ಪುರುಷರ ಸಹಕಾರ-ಸದಾಶಯಗಳಿಂದಲೂ ೨೮ನೆಯ ಸಂಪುಟದ ಪುನರ್ಮುದ್ರಣವನ್ನು ಮುಗಿಸಿದ್ದೇವೆ. ನಮ್ಮ ಪ್ರಿಯಗ್ರಾಹಕರು ೨೮ನೆಯ ಸಂಪುಟದ ಬಗೆಗೆ ಕೇಳಿ-ಕೇಳಿ ಬೇಸತ್ತಿದ್ದಾರೆ. ಏಕೆಂದರೆ ಅನೇಕರಿಗೆ ಈ ಸಂಪುಟವು ಲಭಿಸಿದರೆ ೩೨ ಸಂಪುಟಗಳೂ ಲಭಿಸಿದಂತಾಗುತ್ತದೆ. ಸಾವಕಾಶವಾದದ್ದೂ ದೈವಸಂಕಲ್ಪವೆಂದೇ ನಮ್ಮ ಭಾವನೆ. ನಾವು ಪ್ರಯತ್ನಿಸುತ್ತಿರಬಹುದೇ ಹೊರತು ಕಾರ್ಯವು ಸಫಲವಾಗಬೇಕಾದರೆ ಅವನ ಕೃಪಾದೃಷ್ಟಿ ಬೀಳಲೇಬೇಕು. ಅವನ ಸಂಕಲ್ಪದಂತೆ ಎಲ್ಲವೂ ನಡೆಯುತ್ತದೆ. ಹೀಗೆಂದು ಭಾವಿಸಿ ಗ್ರಾಹಕರು ಬೇಸರಿಸಬಾರದಾಗಿ ವಿನಂತಿಸುತ್ತೇವೆ.

D.T.P. ಮೂಲಕ ಮುದ್ರಣವಾಗುತ್ತಿರುವುದರಲ್ಲಿ ಇದು ಎರಡನೆಯ ಸಂಪುಟ. ಹಿಂದಿನಂತೆಯೇ ಭಗವಂತನ ದಯೆಯಿಂದ ಲೇಸರ್ ಲೈನ್ ಗ್ರಾಫಿಕ್ಸ್ ಇವರ ತಾಂತ್ರಿಕ ನೆರವು ಸಿಕ್ಕಿತು. ಎಲಿಗೆಂಟ್ ಮುದ್ರಣಾಲಯದವರು ಮುದ್ರಣ ಮಾಡಿಕೊಟ್ಟು ಸಹಕರಿಸಿದ್ದಾರೆ. ಇವರೆಲ್ಲರಿಗೂ ನಮ್ಮ ಹೃತ್ಪೂರ್ವಕವಂದನೆಗಳು. ಮುಂದೆಯೂ ಇವರ ಸಹಕಾರದಿಂದ ಮತ್ತು ದೈವಕೃಪೆಯಿಂದ ಬೇಗ-ಬೇಗನೆ ಸಂಪುಟಗಳನ್ನು ಹೊರತರಲು ಸಾಧ್ಯವಾಗುವುದೆಂದು ಭಾವಿಸಿದ್ದೇವೆ.

ಸಂಪಾದಕಮಂಡಲಿಯ ವಿದ್ವಾಂಸರು ತಪ್ಪು-ಒಪ್ಪುಗಳನ್ನು ನೋಡಿಕೊಟ್ಟು ಸಹಕರಿಸುತ್ತಿದ್ದಾರೆ. ಇವರಿಗೂ ನಮ್ಮ ಹೃತ್ಪೂರ್ವಕವಂದನೆಗಳು.

ಸರ್ವೇ ಜನಾಃ ಸುಖಿನೋಭವನ್ತು ಸಮಸ್ತಸನ್ಮಙ್ಗಲಾನಿ ಭವನ್ತು

—ಪ್ರಕಾಶಕರು.

ಶ್ರೀಮನ್ಮಹಾಭಾರತದ ಇಪ್ಪತ್ತೆಂಟನೆಯ ಸಂಪುಟದ
ವಿಷಯಾನುಕ್ರಮಣಿಕೆ

ಚತುರ್ಥ ಮುದ್ರಣದ ಪ್ರಸ್ತಾವನೆ

ಕರುಣಾಮಯನಾದ ಪರಮಾತ್ಮನ ದಯೆಯಿಂದಲೂ ಶ್ರೀರಂಗ ಮಹಾಗುರುವಿನ ಆಶೀರ್ವಾದದಿಂದಲೂ ಸಜ್ಜನರ ಸಹಕಾರ-ಸದಾಶಯ ಗಳಿಂದಲೂ ೨೮ನೇ ಸಂಪುಟದ ನಾಲ್ಕನೆಯ ಮುದ್ರಣವನ್ನು ಮುಗಿಸುತ್ತಿದ್ದೇವೆ. ಈಗ ನಾಲ್ಕು ಪೂರ್ಣಮಾಲೆಗಳ ೫೮ ಸಂಪುಟಗಳೂ ದೊರೆಯುತ್ತವೆ. ನಮ್ಮ ಪ್ರಿಯ ಗ್ರಾಹಕರು ಈ ೪ ಗ್ರಂಥರತ್ನಗಳನ್ನು ತಾವು ಕೊಳ್ಳುವುದಲ್ಲದೆ ತಮ್ಮ ಬಂಧುವರ್ಗದವರಿಗೂ-ಮಿತ್ರವರ್ಗದವರಿಗೂ ಕೊಡಿಸಿಕೊಟ್ಟು ಈ ಮಹಾಗ್ರಂಥಗಳ ಪ್ರಚಾರಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ಸರ್ವೇಜನಾಃ ಸುಖಿನೋಭವನ್ತು   ಸಮಸ್ತಸನ್ಮಙ್ಗಲಾನಿ ಭವನ್ತು

–ಪ್ರಕಾಶಕರು.

ಶ್ರೀಮಹಾಗಣಪತಯೇ ನಮಃ ಶ್ರೀಮಹಾಸರಸ್ವತ್ಯೈ ನಮಃ ಶ್ರೀಸದ್ಗುರವೇ ನಮಃ

ॐ

ನಾರಾಯಣಂ ನಮಸ್ಕೃತ್ಯ ನರಂ ಚೈವ ನರೋತ್ತಮಮ್ ।
ದೇವೀಂ ಸರಸ್ವತೀಂ ಚೈವ ತತೋ ಜಯಮುದೀರಯೇತ್॥

ಮಹಾಭಾರತ-ಅನುಶಾಸನಪರ್ವ ;

ಇಪ್ಪತ್ತೆಂಟನೆಯ ಸಂಪುಟ

೬೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪಾದರಕ್ಷೆ, ಗಾಡಿ, ಎಳ್ಳು, ಭೂಮಿ, ಗೋವು ಮತ್ತು ಅನ್ನ -ಈ ವಸ್ತುಗಳ ದಾನದ ಮಹಿಮೆ

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ :

"ಪಾರಿಕ್ಷಿತ ! ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದಹ್ಯಮಾನಾಯ ವಿಪ್ರಾಯ ಯಃ ಪ್ರಯಚ್ಛತ್ಯುಪಾನಹೌ ।
ಯತ್ಫಲಂ ತಸ್ಯ ಭವತಿ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಬೇಸಿಗೆಯಲ್ಲಿ ಕಾದ ನೆಲದ ಮೇಲೆ ನಡೆದುಹೋಗುತ್ತಿರುವಾಗ ಹೆಜ್ಜೆಗಳು ಸುಟ್ಟು ಪರಿತಪಿಸುತ್ತಿರುವ ಬ್ರಾಹ್ಮಣನಿಗೆ ಪಾದರಕ್ಷೆಗಳನ್ನು ದಾನಮಾಡುವವನಿಗೆ ಯಾವ ಫಲವು ಸಿಕ್ಕುತ್ತದೆ? ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ :

ಉಪಾನಹೌ ಪ್ರಯಚ್ಛೇದ್ಯೋ ಬ್ರಾಹ್ಮಣೇಭ್ಯಃ ಸಮಾಹಿತಃ ।
ಮರ್ದತೇ ಕಣ್ಟಕಾನ್ಸರ್ವಾನ್ವಿಷಮಾನ್ನಿಸ್ತರತ್ಯಪಿ ॥೨॥
ಸ ಶತ್ರೂಣಾಮುಪರಿ ಚ ಸಂತಿಷ್ಠತಿ ಯುಧಿಷ್ಠಿರ ॥೩॥

"ಧರ್ಮಜ! ಏಕಾಗ್ರಚಿತ್ತನಾಗಿ ಬ್ರಾಹ್ಮಣರಿಗೆ ಪಾದರಕ್ಷೆಗಳನ್ನು ದಾನ ಮಾಡುವವನು ಕಾರ್ಯಸಾಧನೆಯ ಮಾರ್ಗದಲ್ಲಿ ಪ್ರಾಪ್ತವಾಗಬಹುದಾದ

ಸಕಲಕಂಟಕಗಳನ್ನೂ ಪರಿಹರಿಸಿಕೊಳ್ಳುತ್ತಾನೆ. ದುರ್ಗಮವಾದ ವಿಪತ್ತುಗಳಿಂದಲೂ ಪಾರಾಗುತ್ತಾನೆ. ಶತ್ರುಗಳನ್ನೂ ಮೆಟ್ಟಿ ನಿಲ್ಲುತ್ತಾನೆ.

ಯಾನಂ ಚಾಶ್ವತರೀಯುಕ್ತಂ ತಸ್ಯ ಶುಭ್ರಂ ವಿಶಾಮ್ಪತೇ ।
ಉಪತಿಷ್ಠತಿ ಕೌನ್ತೇಯ ರೌಪ್ಯಕಾಞ್ಚನಭೂಷಿತಮ್ ।
ಶಕಟಂ ದಮ್ಯಸಂಯುಕ್ತಂ ದತ್ತಂ ಭವತಿ ಚೈವ ಹಿ ॥೪॥

ಎತ್ತುಗಳಿಂದ ಯುಕ್ತವಾದ ಗಾಡಿಯನ್ನು ದಾನಮಾಡುವವನು ಜನ್ಮಾಂತರದಲ್ಲಿ ಹೇಸರಗತ್ತೆಗಳಿಂದ ಕೂಡಿದ, ಉಜ್ಜ್ವಲವಾದ, ಬೆಳ್ಳಿಯಿಂದಲೂ ಚಿನ್ನದಿಂದಲೂ ಸಮಲಂಕೃತವಾದ ರಥವನ್ನು ಹೊಂದುತ್ತಾನೆ."

ಯುಧಿಷ್ಠಿರಃ

ಯತ್ಫಲಂ ತಿಲದಾನೇ ಚ ಭೂಮಿದಾನೇ ಚ ಕೀರ್ತಿತಮ್ ।
ಗೋದಾನೇ ಚಾನ್ನದಾನೇ ಚ ಭೂಯಸ್ತದ್ಬ್ರೂಹಿ ಕೌರವ ॥೫॥

"ಕುರುನಂದನನೇ! ಎಳ್ಳು, ಭೂಮಿ, ಗೋವು ಮತ್ತು ಅನ್ನ–ಇವುಗಳನ್ನು ದಾನಮಾಡುವುದರಿಂದ ಯಾವ ಫಲಗಳು ಲಭಿಸುತ್ತವೆಯೆಂಬುದನ್ನು ಇನ್ನೂ ವಿಸ್ತಾರವಾಗಿ ಹೇಳು."

ಭೀಷ್ಮಃ

"ಕೌಂತೇಯ! ತಿಲದಾನಕ್ಕೆ ಯಾವ ಫಲವಿರುವುದೆಂಬುದನ್ನು ಹೇಳುವೆನು; ಕೇಳು. ನಾನು ಹೇಳುವುದನ್ನು ಕೇಳಿದನಂತರ ಯಥಾವತ್ತಾಗಿ ಎಳ್ಳನ್ನು ದಾನಮಾಡು.

ಪಿತೄಣಾಂ ಪರಮಂ ಭೋಜ್ಯಂ ತಿಲಾಃ ಸೃಷ್ಟಾಃ ಸ್ವಯಮ್ಭುವಾ ।
ತಿಲದಾನೇನ ವೈ ತಸ್ಮಾತ್ಪಿತೃಪಕ್ಷಃ ಪ್ರಮೋದತೇ ॥೬॥

ಬ್ರಹ್ಮನು ಸೃಷ್ಟಿಸಿದ ಎಳ್ಳು ಪಿತೃಗಳಿಗೆ ಪರಮಶ್ರೇಷ್ಠವಾದ ಭೋಜನ ಪದಾರ್ಥವಾಗಿದೆ. ಆದುದರಿಂದ ಎಳ್ಳನ್ನು ದಾನಮಾಡುವುದರಿಂದ ಪಿತೃಗಣವು ಸಂತೋಷಗೊಳ್ಳುತ್ತದೆ.

ಮಾಘಮಾಸೇ ತಿಲಾನ್ಯಸ್ತು ಬ್ರಾಹ್ಮಣೇಭ್ಯಃ ಪ್ರಯಚ್ಛತಿ ।
ಸರ್ವಸತ್ತ್ವಸಮಾಕೀರ್ಣಂ ನರಕಂ ಸ ನ ಪಶ್ಯತಿ ॥೭॥

ಮಾಘಮಾಸದಲ್ಲಿ ಬ್ರಾಹ್ಮಣರಿಗೆ ಎಳ್ಳನ್ನು ದಾನಮಾಡುವವನು– ಸಕಲ ಪ್ರಾಣಿಗಳಿಂದಲೂ ತುಂಬಿಹೋಗಿರುವ ನರಕವನ್ನು ನೋಡಬೇಕಾಗುವುದಿಲ್ಲ.

ಸರ್ವಸತ್ರೈಶ್ಚ ಯಜತೇ ಯಸ್ತಿಲೈರ್ಯಜತೇ ಪಿತೄನ್ ।
ನ ಚಾಕಾಮೇನ ದಾತವ್ಯಂ ತಿಲಶ್ರಾದ್ಧಂ ಕದಾಚನ ॥೯॥

ಎಳ್ಳಿನ ಮೂಲಕವಾಗಿ ಪಿತೃದೇವತೆಗಳನ್ನು ಪೂಜಿಸುವವನು–ಸಕಲ ಸತ್ರಗಳನ್ನೂ ಮಾಡಿದ ಫಲಕ್ಕೆ ಭಾಗಿಯಾಗುತ್ತಾನೆ. ನಿಷ್ಕಾಮನಾದವನು ತಿಲಶ್ರಾದ್ಧವನ್ನು ಯಾವಾಗಲೂ ಮಾಡಬಾರದು.

ಮಹರ್ಷೇಃ ಕಶ್ಯಪಸ್ಯೈತೇ ಗಾತ್ರೇಭ್ಯಃ ಪ್ರಸೃತಾಸ್ತಿಲಾಃ ।
ತತೋ ದಿವ್ಯಂ ಗತಾ ಭಾವಂ ಪ್ರದಾನೇಷು ತಿಲಾಃ ಪ್ರಭೋ ॥೧೦॥

ಕಶ್ಯಪಮಹರ್ಷಿಯ ಶರೀರದಿಂದ ಎಳ್ಳಿನ ಕಾಳುಗಳು ಹೊರಹೊಮ್ಮಿ ಬಂದುವು. ಆದುದರಿಂದಲೇ ಅವು ದಾನಗಳಲ್ಲಿ ದಿವ್ಯಭಾವವನ್ನು ಹೊಂದಿದುವು.

ಪೌಷ್ಟಿಕಾ ರೂಪದಾಶ್ಚೈವ ತಥಾ ಪಾಪವಿನಾಶನಾಃ ।
ತಸ್ಮಾತ್ಸರ್ವಪ್ರದಾನೇಭ್ಯಸ್ತಿಲದಾನಂ ವಿಶಿಷ್ಯತೇ ॥೧೧॥

ಎಳ್ಳು ಪುಷ್ಟಿಯನ್ನುಂಟುಮಾಡುವ ಪದಾರ್ಥವಾಗಿದೆ. ಸುಂದರವಾದ ರೂಪವನ್ನು ಕೊಡುತ್ತದೆ. ಹಾಗೆಯೇ ದಾನಮಾಡಿದವರ ಪಾಪಗಳನ್ನೂ ವಿನಾಶಗೊಳಿಸುತ್ತದೆ. ಆದುದರಿಂದ ಎಲ್ಲ ದಾನಗಳಿಗಿಂತಲೂ ತಿಲದಾನವು ವೈಶಿಷ್ಟ್ಯವನ್ನು ಹೊಂದಿದೆ.

ಆಪಸ್ತಮ್ಬಶ್ಚ ಮೇಧಾವೀ ಶಙ್ಖಶ್ಚ ಲಿಖಿತಸ್ತಥಾ ।
ಮಹರ್ಷಿರ್ಗೌತಮಶ್ಚಾಪಿ ತಿಲದಾನೈರ್ದಿವಂ ಗತಾಃ ॥೧೨॥

ಮೇಧಾವಿಗಳಾದ ಆಪಸ್ತಂಬರೂ, ಶಂಖ-ಲಿಖಿತರೂ, ಗೌತಮ ಮಹರ್ಷಿಗಳೂ ತಿಲದಾನವನ್ನು ಮಾಡಿಯೇ ಸ್ವರ್ಗಕ್ಕೆ ಹೋಗಿರುವರು.

ತಿಲಹೋಮರತಾ ವಿಪ್ರಾಃ ಸರ್ವೇ ಸಂಯತಮೈಥುನಾಃ ।
ಸಮಾ ಗವ್ಯೇನ ಹವಿಷಾ ಪ್ರವೃತ್ತಿಷು ಚ ಸಂಸ್ಥಿತಾಃ ॥೧೩॥

ಋತುಕಾಲಗಳಲ್ಲಿ ಮಾತ್ರವೇ ಪತ್ನಿಯ ಸಮಾಗಮಮಾಡುವ,

ಧರ್ಮಕಾರ್ಯಗಳಲ್ಲಿ ತೊಡಗಿರುವ ಎಲ್ಲ ಬ್ರಾಹ್ಮಣರೂ ತುಪ್ಪಕ್ಕೆ ಸಮವಾಗಿ ಹೋಮಕ್ಕೆ ಉಪಯೋಗಿಸಬಹುದಾದ ಎಳ್ಳಿನ ಹೋಮದಲ್ಲಿ ನಿರತರಾಗಿರುತ್ತಾರೆ. (ಎಳ್ಳಿನ ಹೋಮಮಾಡುವವರು ಹೆಚ್ಚು ಆಚಾರನಿಷ್ಠರಾಗಿರಬೇಕು. ಮೈಥುನಾದಿಗಳಲ್ಲಿ ಸಂಯಮದಿಂದಿರಬೇಕು. ಹೋಮದ್ರವ್ಯಗಳಲ್ಲಿ ಎಳ್ಳು ತುಪ್ಪಕ್ಕೆ ಸಮಾನವಾದುದು.)

ಸರ್ವೇಷಾಮಿತಿ ದಾನಾನಾಂ ತಿಲದಾನಂ ವಿಶಿಷ್ಯತೇ ।
ಅಕ್ಷಯಂ ಸರ್ವದಾನಾನಾಂ ತಿಲದಾನಮಿಹೋಚ್ಯತೇ ॥೧೪॥

ಎಲ್ಲ ದಾನಗಳಿಗಿಂತಲೂ ತಿಲದಾನವು ವಿಶಿಷ್ಟವಾಗಿದೆ. ಇದು ಎಲ್ಲ ದಾನಗಳಿಗಿಂತಲೂ ಮಿಗಿಲಾದ ಅಕ್ಷಯವಾದ ಫಲವನ್ನು ಕೊಡುವುದೆಂದು ಹೇಳುತ್ತಾರೆ.

ಉಚ್ಛಿನ್ನೇ ತು ಪುರಾ ಹವ್ಯೇ ಕುಶಿಕರ್ಷಿಃ ಪರಂತಪಃ ।
ತಿಲೈರಗ್ನಿತ್ರಯಂ ಹುತ್ವಾ ಪ್ರಾಪ್ತವಾನ್ಗತಿಮುತ್ತಮಾಮ್ ॥೧೫॥

ಹಿಂದೊಮ್ಮೆ ಕುಶಿಕಮಹರ್ಷಿಯು ಯಜ್ಞಮಾಡುತ್ತಿದ್ದಾಗ ಘೃತ ರೂಪವಾದ ಹವಿಸ್ಸು ಮುಗಿದುಹೋಗಲಾಗಿ ಎಳ್ಳಿನಿಂದಲೇ ಮೂರು ಅಗ್ನಿಕುಂಡಗಳಲ್ಲಿಯೂ ಹೋಮಮಾಡಿ ಶ್ರೇಷ್ಠವಾದ ಗತಿಯನ್ನು ಪಡೆದುಕೊಂಡನು.

ಕುರುಶ್ರೇಷ್ಠನೇ! ನಾನು ನಿನಗೆ ಉತ್ತಮೋತ್ತಮವಾದ ಎಳ್ಳಿನ ದಾನದ ವಿಷಯವನ್ನೂ ಮತ್ತು ಯಾವ ವಿಧಿ-ವಿಧಾನಗಳಿಂದ ಎಳ್ಳನ್ನು ದಾನಮಾಡಬೇಕೆಂಬುದನ್ನೂ ಹೇಳಿದ್ದೇನೆ. ಮುಂದೆ ಯಜ್ಞಮಾಡಲು ಇಚ್ಛಿಸಿದ ದೇವತೆಗಳ ಮತ್ತು ಸ್ವಯಂಭುಬ್ರಹ್ಮನ ಸಮಾಗಮಕಾಲದಲ್ಲಿ ಜರುಗಿದ ಸಂಭಾಷಣೆಯನ್ನು ಹೇಳುತ್ತೇನೆ.

ಭೂಮಂಡಲದ ಒಂದು ಭಾಗದಲ್ಲಿ ಯಜ್ಞಮಾಡಲು ಬಯಸಿದ ದೇವತೆಗಳು ಬ್ರಹ್ಮನ ಬಳಿಗೆ ಹೋಗಿ–'ನಾವೆಲ್ಲರೂ ಸೇರಿ ಯಜ್ಞ ಮಾಡೋಣ. ಯಜ್ಞಮಾಡಲು ಯೋಗ್ಯವಾದ, ಶುಭಕರವಾದ ಪ್ರದೇಶವೊಂದನ್ನು ದಯಪಾಲಿಸು'–ಎಂದು ಬ್ರಹ್ಮನನ್ನು ಪ್ರಾರ್ಥಿಸಿಕೊಂಡರು. ದೇವತೆಗಳು ಪ್ರಾರ್ಥನೆಯನ್ನು ಮುಂದುವರಿಸಿ ಹೇಳಿದರು :

"ಪೂಜ್ಯನೇ! ಮಹಾಭಾಗನೇ! ನೀನು ಭೂಮಂಡಲಕ್ಕೂ ಮತ್ತು

ಸಮಗ್ರವಾದ ಸ್ವರ್ಗಕ್ಕೂ ಸ್ವಾಮಿಯಾಗಿರುವೆ. ನಿನ್ನ ಅನುಜ್ಞೆಯನ್ನು ಪಡೆದುಕೊಂಡು ನೀನು ಹೇಳುವ ಸ್ಥಳದಲ್ಲಿಯೇ ನಾವೆಲ್ಲರೂ ಸೇರಿ ಯಜ್ಞಮಾಡೋಣ. ಭೂಮಿಯ ಒಡೆಯನು ಅನುಮತಿಯನ್ನು ಕೊಡದಿದ್ದರೆ ಆ ಸ್ಥಳದಲ್ಲಿ ಮಾಡುವ ಯಜ್ಞವು ಫಲದಾಯಕವಾಗುವುದಿಲ್ಲ. ನೀನು ಜಗತ್ತಿನ ಸ್ಥಾವರ-ಜಂಗಮಗಳೆಲ್ಲಕ್ಕೂ ಸ್ವಾಮಿಯಾಗಿರುವೆ. ಆದುದರಿಂದ ಭೂಮಿಯಲ್ಲಿ ಯಜ್ಞಮಾಡಲು ನಮಗೆ ಅನುಮತಿಯನ್ನು ಕೊಟ್ಟು ಅನುಗ್ರಹಿಸು."

ಬ್ರಹ್ಮನು ಹೇಳುತ್ತಾನೆ :

"ಕಾಶ್ಯಪನಂದನರೇ! ಸುರಶ್ರೇಷ್ಠರೇ! ನೀವು ಪೃಥ್ವಿಯ ಯಾವ ಭಾಗದಲ್ಲಿ ಯಜ್ಞಮಾಡಲು ಇಚ್ಛಿಸಿರುವಿರೋ–ಆ ಭೂಭಾಗವನ್ನೇ ನಿಮಗೆ ಕೊಡುತ್ತೇನೆ."

ದೇವತೆಗಳು ಹೇಳುತ್ತಾರೆ :

"ಪೂಜ್ಯನೇ! ನಾವು ಕೃತಕೃತ್ಯರಾದೆವು. ಪರ್ಯಾಪ್ತವಾದ ದಕ್ಷಿಣೆಗಳಿಂದ ಯುಕ್ತವಾದ ಯಜ್ಞಗಳನ್ನು ಮಾಡುತ್ತೇವೆ. ಹಿಮವತ್ಪರ್ವತದ ಬಳಿ ಇರುವ ಈ ಪ್ರದೇಶವನ್ನು ನಿತ್ಯವೂ ಮುನಿಗಳು ಉಪಾಸಿಸುತ್ತಿದ್ದಾರೆ. (ಈ ಪ್ರದೇಶದಲ್ಲಿಯೇ ಆಶ್ರಯವನ್ನು ಪಡೆದಿರುತ್ತಾರೆ.) ಆದುದರಿಂದ ಈ ಋಷಿಗಳಿಂದ ಆಶ್ರಯಿಸಲ್ಪಟ್ಟಿರುವ ಈ ಪ್ರದೇಶದಲ್ಲಿಯೇ ನಾವೂ ಯಜ್ಞಮಾಡುತ್ತೇವೆ." ಹೀಗೆ ಬ್ರಹ್ಮನ ಅನುಜ್ಞೆಯನ್ನು ದೇವತೆಗಳು ಪಡೆದುಕೊಂಡರು. ಅನಂತರ ಅಗಸ್ತ್ಯ, ಕಣ್ವ, ಭೃಗು, ಅತ್ರಿ, ವೃಷಾಕಪಿ, ಅಸಿತ, ದೇವಲ–ಇವರೆಲ್ಲರೂ ದೇವತೆಗಳ ಆ ಮಹಾಯಜ್ಞದಲ್ಲಿ ಭಾಗ ವಹಿಸಿದರು. ಆ ಎಲ್ಲ ಋತ್ವಿಜರ ಸಹಕಾರದಿಂದ ಮಹಾತ್ಮರಾದ ದೇವತೆಗಳು ವಿಧಿ-ನಿಯಮಗಳಿಂದ ಚ್ಯುತವಾಗದಂತೆ ಯಜ್ಞವನ್ನು ಪ್ರಾರಂಭಿಸಿ ಆ ಮಹಾಯಜ್ಞವನ್ನು ಯಥೋಚಿತವಾದ ಕಾಲದಲ್ಲಿ ಪರಿಸಮಾಪ್ತಿ ಗೊಳಿಸಿದರು. ಶ್ರೇಷ್ಠಪರ್ವತವಾದ ಹಿಮಾಲಯದ ತಪ್ಪಲಿನಲ್ಲಿ ಯಜ್ಞವನ್ನು ಪರಿಸಮಾಪ್ತಿಗೊಳಿಸಿದ ದೇವತೆಗಳು ಭೂದಾನವನ್ನು ಮಾಡಿದರು. ಯಜ್ಞ

ವನ್ನು ಮಾಡಿದುದರಿಂದ ಪ್ರಾಪ್ತವಾದ ಪುಣ್ಯದ ಆರನೆಯ ಒಂದು ಭಾಗ ಪುಣ್ಯವು ಅವರಿಗೆ ಭೂದಾನದಿಂದಲೇ ಲಭಿಸಿತು.

ಪ್ರಾದೇಶಮಾತ್ರಂ ಭೂಮೇಸ್ತು ಯೋ ದದ್ಯಾದನುಪಸ್ಕೃತಮ್ ।
ಸ ಸೀದತಿ ನ ಕೃಚ್ಛ್ರೇಷು ನ ಚ ದುರ್ಗಾಣ್ಯವಾಪ್ನುತೇ ॥೨೬॥

ಪರಿಷ್ಕರಿಸಲ್ಪಡದೇ ಇರುವ ಭೂಮಿಯ ಪ್ರಾದೇಶಮಾತ್ರವನ್ನಾದರೂ (ಒಂದು ಚೋಟುದ್ದ ಭೂಮಿಯನ್ನಾದರೂ) ದಾನಮಾಡಿದವನು ದುರ್ಗಮವಾದ ಯಾವ ಕಷ್ಟಗಳನ್ನೂ ಹೊಂದುವುದಿಲ್ಲ. ಒಂದು ವೇಳೆ ಕಷ್ಟಗಳಿಗೆ ಗುರಿಯಾದರೂ ಅವನು ವಿನಾಶಹೊಂದುವುದಿಲ್ಲ. (ಭೂದಾನದ ಫಲದಿಂದಾಗಿ ಅವನ ಎಲ್ಲ ಕಷ್ಟಗಳೂ ಪರಿಹಾರವಾಗುತ್ತವೆ.)

ಶೀತವಾತಾತಪಸಹಾಂ ಗೃಹಭೂಮಿಂ ಸುಸಂಸ್ಕೃತಾಮ್ ।
ಪ್ರದಾಯ ಸುರಲೋಕಸ್ಥಃ ಪುಣ್ಯಾಂತೇಽಪಿ ನ ಚಾಲ್ಯತೇ ॥೨೭॥

ಶೀತವನ್ನೂ, ಗಾಳಿಯನ್ನೂ, ಬಿಸಿಲನ್ನೂ ತಡೆದುಕೊಳ್ಳುವ ಪರಿಷ್ಕರಿಸಲ್ಪಟ್ಟ ಗೃಹಭೂಮಿಯನ್ನು ದಾನಮಾಡಿದವನು–ಅವಸಾನಾ ನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ. ಅವನ ಪುಣ್ಯವೆಲ್ಲವೂ ಮುಗಿದುಹೋದರೂ ಭೂದಾನದ ಅಕ್ಷಯಫಲದ ಕಾರಣದಿಂದ ಅವನು ಸ್ವರ್ಗದಿಂದ ಚ್ಯುತನಾಗುವುದಿಲ್ಲ.

ಮುದಿತೋ ವಸತಿ ಪ್ರಾಜ್ಞಃ ಶಕ್ರೇಣ ಸಹ ಪಾರ್ಥಿವ ।
ಪ್ರತಿಶ್ರಯಪ್ರದಾನಾಚ್ಚ ಸೋಽಪಿ ಸ್ವರ್ಗೇ ಮಹೀಯತೇ ॥೨೮॥

ಯೋಗ್ಯನಾದ ಬ್ರಾಹ್ಮಣನಿಗೆ ಗೃಹವನ್ನು ದಾನಮಾಡುವ ಪ್ರಾಜ್ಞನು ಸ್ವರ್ಗಲೋಕದಲ್ಲಿ ಇಂದ್ರನೊಡನೆ ಆನಂದದಿಂದ ವಾಸಮಾಡುತ್ತಾನೆ ಮತ್ತು ದೇವತೆಗಳಿಂದಲೂ ಸಮ್ಮಾನಿತನಾಗುತ್ತಾನೆ.

ಅಧ್ಯಾಪಕಕುಲೇ ಜಾತಃ ಶ್ರೋತ್ರಿಯೋ ನಿಯತೇಂದ್ರಿಯಃ ।
ಗೃಹೇ ಯಸ್ಯ ವಸೇತ್ತುಷ್ಟಃ ಪ್ರಧಾನಂ ಲೋಕಮಶ್ನುತೇ ॥೨೯॥

ಅಧ್ಯಾಪಕವಂಶದಲ್ಲಿ ಹುಟ್ಟಿರುವ, ಶ್ರೋತ್ರಿಯನಾದ ಮತ್ತು ಜಿತೇಂದ್ರಿಯನಾದ ಬ್ರಾಹ್ಮಣನು–ಯಾವ ದಾನಿಯು ಕೊಟ್ಟ ಮನೆಯಲ್ಲಿ

ಸಂತುಷ್ಟನಾಗಿ ವಾಸಮಾಡಿಕೊಂಡಿರುವನೋ–ಆ ಗೃಹದಾನಿಯು ಶ್ರೇಷ್ಠ ವಾದ ಲೋಕಗಳನ್ನು ಹೊಂದುತ್ತಾನೆ.

ತಥಾ ಗವಾರ್ಥೇ ಶರಣಂ ಶೀತವರ್ಷಸಹಂ ದೃಢಮ್ ।
ಆಸಪ್ತಮಂ ತಾರಯತಿ ಕುಲಂ ಭರತಸತ್ತಮ ॥೩೦॥

ಭರತಶ್ರೇಷ್ಠನೇ! ಗೋವುಗಳ ಸಲುವಾಗಿ ಚಳಿ-ಮಳೆ-ಗಾಳಿಗಳನ್ನು ತಡೆಯುವ ದೃಢವಾದ ಕೊಟ್ಟಿಗೆಯನ್ನು ಕಟ್ಟಿಸಿಕೊಡುವವನು ಏಳು ತಲೆಗಳವರೆಗೆ ತನ್ನ ಕುಲವನ್ನು ಉದ್ಧಾರಮಾಡುತ್ತಾನೆ.

ಕ್ಷೇತ್ರಭೂಮಿಂ ದದಲ್ಲೋಕೇ ಶುಭಾಂ ಶ್ರಿಯಮವಾಪ್ನುಯಾತ್ ।
ರತ್ನಭೂಮಿಂ ಪ್ರದದ್ಯಾತ್ತು ಕುಲವಂಶಂ ಪ್ರವರ್ಧಯೇತ್ ॥೩೧॥

ಗದ್ದೆ-ಹೊಲ-ತೋಟಗಳನ್ನು ದಾನಮಾಡುವವನು ಈ ಲೋಕ ದಲ್ಲಿಯೇ ಶುಭಸಂಪತ್ತನ್ನು ಹೊಂದುತ್ತಾನೆ. ರತ್ನವಿರುವ ಭೂಮಿಯನ್ನು ದಾನಮಾಡುವವನು ತನ್ನ ಕುಲದ ವಂಶಪರಂಪರೆಯನ್ನು ವೃದ್ಧಿ ಗೊಳಿಸುತ್ತಾನೆ.

ನ ಚೋಷರಾಂ ನ ನಿರ್ದಗ್ಧಾಂ ಮಹೀಂ ದದ್ಯಾತ್ಕಥಂಚನ ।
ನ ಶ್ಮಶಾನಪರೀತಾಂ ಚ ನ ಚ ಪಾಪನಿಷೇವಿತಾಮ್ ॥೩೨॥

ಬಂಜರುಭೂಮಿಯನ್ನಾಗಲೀ, ಬೆಂಕಿಬಿದ್ದು ಸುಟ್ಟುಹೋಗಿರುವ ಭೂಮಿಯನ್ನಾಗಲೀ, ಶ್ಮಶಾನಕ್ಕೆ ಸಮೀಪದ ಭೂಮಿಯನ್ನಾಗಲೀ, ಪಾಪಿಷ್ಠರು ವಾಸಮಾಡುತ್ತಿದ್ದ ಭೂಮಿಯನ್ನಾಗಲೀ–ಬ್ರಾಹ್ಮಣರಿಗೆ ದಾನಮಾಡಬಾರದು.

ಪಾರಕ್ಯೇ ಭೂಮಿದೇಶೇ ತು ಪಿತೄಣಾಂ ನಿರ್ವಪೇತ್ತು ಯಃ ।
ತದ್ಭೂಮಿಂ ವಾಪಿ ಪಿತೃಭಿಃ ಶ್ರಾದ್ಧಕರ್ಮ ವಿಹನ್ಯತೇ ॥೩೩॥

ಪರಕೀಯರ ಭೂಮಿಯಲ್ಲಿ ಯಾವನು ಪಿತೃಶ್ರಾದ್ಧವನ್ನು ಮಾಡು ವನೋ, ಪರಕೀಯರ ಭೂಮಿಯನ್ನು ಪಿತೃಗಳ ಪ್ರೀತ್ಯರ್ಥವಾಗಿ ದಾನ ಮಾಡುವನೋ–ಅವನ ಶ್ರಾದ್ಧಕರ್ಮ-ದಾನಕರ್ಮಗಳೆರಡೂ ನಷ್ಟವಾಗಿ ಹೋಗುತ್ತವೆ. (ನಿಷ್ಫಲವಾಗುತ್ತವೆ.)

ತಸ್ಮಾತ್ಕ್ರೀತ್ವಾ ಮಹೀಂ ದದ್ಯಾತ್ಸ್ವಲ್ಪಾಮಪಿ ವಿಚಕ್ಷಣಃ ।
ಪಿಣ್ಡಃ ಪಿತೃಭ್ಯೋ ದತ್ತೋ ವೈ ತಸ್ಯಾಂ ಭವತಿ ಶಾಶ್ವತಃ ॥೩೪॥

ಆದುದರಿಂದ ವಿದ್ವಾಂಸನಾದವನು ಸ್ವಲ್ಪವೇ ಭೂಮಿಯನ್ನಾದರೂ ಕ್ರಯಕ್ಕೆ ತೆಗೆದುಕೊಂಡು ದಾನಮಾಡಬೇಕು. ತನ್ನದೇ ಆದ ಭೂಮಿಯಲ್ಲಿ ಪಿತೃಗಳ ಸಲುವಾಗಿ ಕೊಡುವ ಪಿಂಡವು ಶಾಶ್ವತವಾಗಿರುತ್ತದೆ. (ಅಕ್ಷಯವಾಗುತ್ತದೆ.)

ಅಟವೀಪರ್ವತಾಶ್ಚೈವ ನದ್ಯಸ್ತೀರ್ಥಾನಿ ಯಾನಿ ಚ ।
ಸರ್ವಾಣ್ಯಸ್ವಾಮಿಕಾನ್ಯಾಹುರ್ನ ಹಿ ತತ್ರ ಪರಿಗ್ರಹಃ ॥೩೫॥

ವನ-ಪರ್ವತ-ನದೀ-ತೀರ್ಥಗಳು ಯಾವೊಬ್ಬನ ಆಸ್ತಿಯೂ ಅಲ್ಲ. ಅವು ಯಾವೊಬ್ಬನ ಅಧೀನದಲ್ಲಿಯೂ ಇರತಕ್ಕವುಗಳಲ್ಲ. ಆದುದರಿಂದ ಅವುಗಳ ವಿಷಯದಲ್ಲಿ ಯಾರಿಗೂ ಪರಿಗ್ರಹವಿಲ್ಲ.

ಯುಧಿಷ್ಠಿರ! ನಿನಗೆ ಇದುವರೆಗೂ ಭೂದಾನದ ಫಲವನ್ನು ಹೇಳಿದ್ದೇನೆ. ಮುಂದೆ ಗೋದಾನದ ಫಲವನ್ನು ಹೇಳುತ್ತೇನೆ.

ಗಾವೋಽಧಿಕಾಸ್ತಪಸ್ವಿಭ್ಯೋ ಯಸ್ಮಾತ್ಸರ್ವೇಭ್ಯ ಏವ ಚ ।
ತಸ್ಮಾನ್ಮಹೇಶ್ವರೋ ದೇವಸ್ತಪಸ್ತಾಭಿಃ ಸಹಾಸ್ಥಿತಃ ॥೩೬॥

ಹಸುಗಳು ಎಲ್ಲ ತಪಸ್ವಿಗಳಿಗಿಂತಲೂ ಶ್ರೇಷ್ಠವಾದುವುಗಳು. ಈ ಕಾರಣದಿಂದಲೇ ಮಹೇಶ್ವರನು ಗೋವುಗಳೊಡನೆಯೇ ಇದ್ದು ತಪಸ್ಸನ್ನು ಮಾಡುತ್ತಿದ್ದನು.

ಬ್ರಾಹ್ಮೇ ಲೋಕೇ ವಸನ್ತ್ಯೇತಾಃ ಸೋಮೇನ ಸಹ ಭಾರತ ।
ಯಾಂ ತಾಂ ಬ್ರಹ್ಮರ್ಷಯಃ ಸಿದ್ಧಾಃ ಪ್ರಾರ್ಥಯನ್ತಿ ಪರಾಂ ಗತಿಮ್॥

ಈ ಗೋವುಗಳು ಚಂದ್ರನೊಡನೆ ಬ್ರಹ್ಮಲೋಕದಲ್ಲಿ ವಾಸಮಾಡುತ್ತವೆ. ಅಲ್ಲಿ ವಾಸಮಾಡುವ ಬ್ರಹ್ಮರ್ಷಿಗಳೂ ಮತ್ತು ಸಿದ್ಧರೂ ಪರಾಗತಿಯನ್ನು (ಮೋಕ್ಷವನ್ನು) ಪ್ರಾರ್ಥಿಸುತ್ತಾರೆ. ಅವರೊಡನೆ ಈ ಗೋವುಗಳೂ ಪರಾಗತಿಯನ್ನು ಪ್ರಾರ್ಥಿಸುತ್ತವೆ.

ಪಯಸಾ ಹವಿಷಾ ದಧ್ನಾ ಶಕೃತಾ ಚಾಥ ಚರ್ಮಣಾ ।
ಅಸ್ಥಿಭಿಶ್ಚೋಪಕುರ್ವನ್ತಿ ಶೃಙ್ಗೈರ್ವಾಲೈಶ್ಚ ಭಾರತ ॥೩೮॥

ಗೋವುಗಳು ತಮ್ಮ ಹಾಲು-ಮೊಸರು-ತುಪ್ಪಗಳಿಂದಲೂ, ಸಗಣಿ

ಯಿಂದಲೂ, ಚರ್ಮದಿಂದಲೂ, ಮೂಳೆಗಳಿಂದಲೂ, ಕೊಂಬುಗಳಿಂದಲೂ, ಬಾಲಗಳಿಂದಲೂ ಜಗತ್ತಿಗೆ ಉಪಕಾರವನ್ನು ಮಾಡುತ್ತವೆ.

ನಾಸಾಂ ಶೀತಾತಪೌ ಸ್ಯಾತಾಂ ಸದೈತಾಃ ಕರ್ಮ ಕುರ್ವತೇ ॥೪೦॥
ನ ವರ್ಷವಿಷಯಂ ವಾಪಿ ದುಃಖಮಾಸಾಂ ಭವತ್ಯುತ ।
ಬ್ರಾಹ್ಮಣೈಃ ಸಹಿತಾ ಯಾನ್ತಿ ತಸ್ಮಾತ್ಪಾರಮಕಂ ಪದಮ್ ॥೪೧॥

ಹಸುಗಳು ಯಾವಾಗಲೂ ಲೋಕಹಿತಕ್ಕಾಗಿ ಕರ್ಮವನ್ನು ಮಾಡುತ್ತಲೇ ಇರುತ್ತವೆ. ಅವುಗಳನ್ನು ಶೀತವಾಗಲೀ, ಬಿಸಿಲಾಗಲೀ, ಮಳೆಯಾಗಲೀ ಬಾಧೆಪಡಿಸುವುದಿಲ್ಲ. ಅವುಗಳಿಗೆ ಯಾವ ವಿಧವಾದ ದುಃಖವೂ ಉಂಟಾಗುವುದಿಲ್ಲ. ಈ ಕಾರಣದಿಂದಲೇ ಅವು ಬ್ರಾಹ್ಮಣರೊಡನೆ ಪರಮಪದಸ್ವರೂಪವಾದ ಬ್ರಹ್ಮಲೋಕಕ್ಕೆ ಹೋಗುತ್ತವೆ.

ಏಕಂ ಗೋಬ್ರಾಹ್ಮಣಂ ತಸ್ಮಾತ್ಪ್ರವದನ್ತಿ ಮನೀಷಿಣಃ ।
ರನ್ತಿದೇವಸ್ಯ ಯಜ್ಞೇ ತಾಃ ಪಶುತ್ವೇನೋಪಕಲ್ಪಿತಾಃ ॥೪೨॥
ಅತಶ್ಚರ್ಮಣ್ವತೀ ರಾಜನ್ಗೋಚರ್ಮಭ್ಯಃ ಪ್ರವರ್ತಿತಾ ।
ಪಶುತ್ವಾಚ್ಚ ವಿನಿರ್ಮುಕ್ತಾಃ ಪ್ರದಾನಾಯೋಪಕಲ್ಪಿತಾಃ ॥೪೩॥

ಈ ಕಾರಣದಿಂದಲೇ ವಿದ್ವಾಂಸರು ಗೋವನ್ನೂ ಮತ್ತು ಬ್ರಾಹ್ಮಣನನ್ನೂ ಒಂದೇ ಎಂದು ಹೇಳುತ್ತಾರೆ. ರಂತಿದೇವನ ಯಜ್ಞದಲ್ಲಿ ಗೋವುಗಳನ್ನು ಯಜ್ಞಪಶುಗಳನ್ನಾಗಿ ಕಲ್ಪಿಸಿಕೊಂಡರು. ಅವುಗಳನ್ನು ತೊಳೆಯುವಾಗ ಚರ್ಮದ ಮೂಲಕವಾಗಿ ಹೊರಟ ನೀರೇ 'ಚರ್ಮಣ್ವತೀ'–ಎಂಬ ಹೆಸರಿನ ನದಿಯಾಗಿ ಪ್ರವಹಿಸಿತು. ಅನಂತರ ಆ ಗೋವುಗಳನ್ನು ಪಶುತ್ವದಿಂದ ವಿಮೋಚನೆಮಾಡಿ ಯಜ್ಞಾಂಗವಾಗಿ ದಾನಕೊಡಲು ಇಟ್ಟುಕೊಂಡರು.

ತಾ ಇಮಾ ವಿಪ್ರಮುಖ್ಯೇಭ್ಯೋ ಯೋ ದದಾತಿ ಮಹೀಪತೇ ।
ನಿಸ್ತರೇದಾಪದಂ ಕೃಚ್ಛ್ರಾಂ ವಿಷಮಸ್ಥೋಽಪಿ ಪಾರ್ಥಿವ ॥೪೪॥

ಯಾವನು ಈ ಗೋವುಗಳನ್ನು ಶ್ರೇಷ್ಠರಾದ ಬ್ರಾಹ್ಮಣರಿಗೆ ದಾನ ಮಾಡುವನೋ–ಅವನು ಮಹಾಸಂಕಟದಲ್ಲಿದ್ದರೂ ಅಂತಹ ಮಹಾ ವಿಪತ್ತಿನಿಂದ ಪಾರಾಗುತ್ತಾನೆ.

ಗವಾಂ ಸಹಸ್ರದಃ ಪ್ರೇತ್ಯ ನರಕಂ ನ ಪ್ರಪದ್ಯತೇ ।
ಸರ್ವತ್ರ ವಿಜಯಂ ಚಾಪಿ ಲಭತೇ ಮನುಜಾಧಿಪ ॥೪೫॥

ಸಾವಿರ ಗೋವುಗಳನ್ನು ದಾನಮಾಡುವವನು ಮರಣಾನಂತರದಲ್ಲಿ ನರಕಕ್ಕೆ ಹೋಗುವುದಿಲ್ಲ. ಅವನು ಸರ್ವತ್ರ ವಿಜಯವನ್ನೇ ಹೊಂದುತ್ತಾನೆ.

ಅಮೃತಂ ವೈ ಗವಾಂ ಕ್ಷೀರಮಿತ್ಯಾಹ ತ್ರಿದಶಾಧಿಪಃ ।
ತಸ್ಮಾದ್ದದಾತಿ ಯೋ ಧೇನುಮಮೃತಂ ಸ ಪ್ರಯಚ್ಛತಿ ॥೪೬॥

ದೇವರಾಜನಾದ ಇಂದ್ರನು ಗೋವುಗಳ ಹಾಲನ್ನು ಅಮೃತವೆಂದೇ ಹೇಳಿರುವನು. ಆದುದರಿಂದ ಗೋದಾನಮಾಡುವವನು ಅಮೃತವನ್ನೇ ದಾನಮಾಡಿದಂತಾಗುತ್ತದೆ.

ಅಗ್ನೀನಾಮವ್ಯಯಂ ಹ್ಯೇತದ್ಧೌಮ್ಯಂ ವೇದವಿದೋ ವಿದುಃ ।
ತಸ್ಮಾದ್ದದಾತಿ ಯೋ ಧೇನುಂ ಸ ಹೌಮ್ಯಂ ಸಂಪ್ರಯಚ್ಛತಿ ॥೪೭॥

ಗೋಘೃತರೂಪವಾದ ಹವಿಸ್ಸನ್ನು ಅಗ್ನಿಗಳಲ್ಲಿ ಹೋಮ ಮಾಡುವುದರಿಂದ ಅವಿನಾಶಿಯಾದ ಫಲವುಂಟಾಗುವುದೆಂದು ವೇದವಿದ ರಾದ ವಿದ್ವಾಂಸರು ತಿಳಿಯುತ್ತಾರೆ. ಆದುದರಿಂದ ಗೋವನ್ನು ದಾನ ಮಾಡುವವನು ಪವಿತ್ರವಾದ ಹವಿಸ್ಸನ್ನೇ ದಾನಮಾಡಿದಂತಾಗುತ್ತದೆ.

ಸ್ವರ್ಗೋ ವೈ ಮೂರ್ತಿಮಾನೇಷ ವೃಷಭಂ ಯೋ ಗವಾಂಪತಿಮ್।
ವಿಪ್ರೇ ಗುಣಯುತೇ ದದ್ಯಾತ್ಸ ವೈ ಸ್ವರ್ಗೇ ಮಹೀಯತೇ ॥೪೮॥

ವೃಷಭವು ಸ್ವರ್ಗದ ಮೂರ್ತಿಮತ್ತಾದ ಸ್ವರೂಪವೇ ಆಗಿದೆ. ಗೋಪತಿಯಾದ ಅಂತಹ ವೃಷಭವನ್ನು ಗುಣವಂತನಾದ ಬ್ರಾಹ್ಮಣನಿಗೆ ದಾನಮಾಡಿದವನು ಸ್ವರ್ಗಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಪ್ರಾಣಾ ವೈ ಪ್ರಾಣಿನಾಮೇತೇ ಪ್ರೋಚ್ಯನ್ತೇ ಭರತರ್ಷಭ।
ತಸ್ಮಾದ್ದದಾತಿ ಯೋ ಧೇನುಂ ಪ್ರಾಣಾನೇಷ ಪ್ರಯಚ್ಛತಿ ॥೪೯॥

ಭರತಶ್ರೇಷ್ಠನೇ! ಹಾಲಿನ ಮೂಲಕವಾಗಿ ಸಕಲ ಪ್ರಾಣಿಗಳನ್ನೂ ಗೋವುಗಳು ರಕ್ಷಿಸುವುದರಿಂದ ಪ್ರಾಣಿಗಳ ಪ್ರಾಣಗಳೆಂದೂ ಅವುಗಳನ್ನು

ಕರೆಯುತ್ತಾರೆ. ಆದುದರಿಂದ ಹಸುವನ್ನು ದಾನವಾಗಿ ಕೊಟ್ಟವನು ಪ್ರಾಣಗಳನ್ನೇ ದಾನವಾಗಿ ಕೊಟ್ಟಂತಾಗುತ್ತದೆ.

ಗಾವಃ ಶರಣ್ಯಾ ಭೂತಾನಾಮಿತಿ ವೇದವಿದೋ ವಿದುಃ ।
ತಸ್ಮಾದ್ದದಾತಿ ಯೋ ಧೇನುಂ ಶರಣಂ ಸಂಪ್ರಯಚ್ಛತಿ ॥೫೦॥

ಗೋವುಗಳು ಸಕಲಪ್ರಾಣಿಗಳಿಗೂ ಶರಣ್ಯಗಳೆಂದು (ಆಶ್ರಯ ಭೂತಗಳೆಂದು) ವೇದವಿದರಾದ ವಿದ್ವಾಂಸರು ತಿಳಿಯುತ್ತಾರೆ. ಆದುದರಿಂದ ಗೋವನ್ನು ದಾನಮಾಡುವವನು ಶರಣವನ್ನು (ಆಶ್ರಯವನ್ನು) ದಾನಮಾಡಿದಂತಾಗುತ್ತದೆ.

ನ ವಧಾರ್ಥಂ ಪ್ರದಾತವ್ಯಾ ನ ಕೀನಾಶೇ ನ ನಾಸ್ತಿಕೇ ।
ಗೋಜೀವಿನೇ ನ ದಾತವ್ಯಾ ತಥಾ ಗೌರ್ಭರತರ್ಷಭ ॥೫೧॥

ವಧೆಮಾಡುವ ಸಲುವಾಗಿ ಗೋವನ್ನು ಕೇಳುವವನಿಗೆ ಖಂಡಿತ ವಾಗಿಯೂ ಗೋವನ್ನು ಕೊಡಬಾರದು. ರಹಸ್ಯದಲ್ಲಿ ಕೊಲ್ಲುವ ಕಟುಕನಿಗೂ ಕೊಡಬಾರದು. ಬೇಸಾಯಗಾರನಿಗೂ ಕೊಡಬಾರದು. ನಾಸ್ತಿಕನಿಗೂ ಕೊಡಬಾರದು. ಗೋವಿನಿಂದಲೇ ಜೀವನವನ್ನು ನಿರ್ವಹಿಸುವವನಿಗೂ ಕೊಡಬಾರದು.

ದದತ್ಸ ತಾದೃಶಾನಾಂ ವೈ ನರೋ ಗಾಂ ಪಾಪಕರ್ಮಣಾಮ್ ।
ಅಕ್ಷಯಂ ನರಕಂ ಯಾತೀತ್ಯೇವಮಾಹುರ್ಮಹರ್ಷಯಃ ॥೫೨॥

ಅಂತಹ ಪಾಪಕರ್ಮಿಗಳಿಗೆ ಗೋವುಗಳನ್ನು ದಾನವಾಗಿ ಕೊಡುವವನು ಅಕ್ಷಯವಾದ ನರಕದಲ್ಲಿ ಬೀಳುವನೆಂದು ಮಹರ್ಷಿಗಳು ಹೇಳುತ್ತಾರೆ.

ನ ಕೃಶಾಂ ನಾಪವತ್ಸಾಂ ವಾ ವನ್ಧ್ಯಾಂ ರೋಗಾನ್ವಿತಾಂ ತಥಾ ।
ನ ವ್ಯಙ್ಗಾಂ ನ ಪರಿಶ್ರಾನ್ತಾಂ ದದ್ಯಾದ್ಗಾಂ ಬ್ರಾಹ್ಮಣಾಯ ವೈ ॥೫೩॥

ಬಡಕಲು ಹಸುವನ್ನೂ, ಕರುವಿಲ್ಲದ ಹಸುವನ್ನೂ, ಬಂಜೆಹಸುವನ್ನೂ, ರೋಗಗ್ರಸ್ತವಾದ ಹಸುವನ್ನೂ, ಅಂಗಹೀನವಾದ ಹಸುವನ್ನೂ, ಬಳಲಿರುವ (ಮುದಿಯಾದ) ಹಸುವನ್ನೂ ಬ್ರಾಹ್ಮಣನಿಗೆ ದಾನಮಾಡಬಾರದು.

ದಶಗೋಸಹಸ್ರದೋ ಹಿ ಶಕ್ರೇಣ ಸಹ ಮೋದತೇ ।
ಅಕ್ಷಯಾಲ್ಲಭತೇ ಲೋಕಾನ್ನರಃ ಶತಸಹಸ್ರಶಃ ॥೫೪॥

ಹತ್ತು ಸಾವಿರ ಗೋವುಗಳನ್ನು ದಾನಮಾಡಿದವನು ಅವಸಾನಾ ನಂತರದಲ್ಲಿ ಇಂದ್ರನ ಜೊತೆಯಲ್ಲಿಯೇ ಆನಂದವಾಗಿರುತ್ತಾನೆ. ಲಕ್ಷ ಗೋವುಗಳನ್ನು ದಾನಮಾಡಿದವನು ಅಕ್ಷಯವಾದ ಲೋಕಗಳನ್ನು ಹೊಂದುತ್ತಾನೆ.

ಯುಧಿಷ್ಠಿರ! ನಾನು ಈ ರೀತಿಯಲ್ಲಿ ನಿನಗೆ ಗೋದಾನ-ತಿಲದಾನ-ಭೂದಾನಗಳ ಮಾಹಾತ್ಮ್ಯವನ್ನು ಹೇಳಿರುವೆನು. ಈಗ ಪುನಃ ನಾನು ಅನ್ನದಾನದ ಮಹಿಮೆಯನ್ನು ಹೇಳುತ್ತೇನೆ.

ಅನ್ನದಾನಂ ಪ್ರಧಾನಂ ಹಿ ಕೌನ್ತೇಯ ಪರಿಚಕ್ಷತೇ ।
ಅನ್ನಸ್ಯ ಹಿ ಪ್ರದಾನೇನ ರನ್ತಿದೇವೋ ದಿವಂ ಗತಃ ॥೫೬॥

ಕೌಂತೇಯನೇ! ಅನ್ನದಾನವೇ ಶ್ರೇಷ್ಠವಾದ ದಾನವೆಂದು ಹೇಳುತ್ತಾರೆ. ಅನ್ನದಾನದಿಂದಲೇ ರಂತಿದೇವನು ಸ್ವರ್ಗಕ್ಕೆ ಹೋದನು.

ಶ್ರಾನ್ತಾಯ ಕ್ಷುಧಿತಾಯಾನ್ನಂ ಯಃ ಪ್ರಯಚ್ಛತಿ ಭೂಮಿಪಃ ।
ಸ್ವಾಯಂಭುವಂ ಮಹತ್ಸ್ಥಾನಂ ಸ ಗಚ್ಛತಿ ನರಾಧಿಪ ॥೫೭॥

ಜನಾಧಿಪನೇ! ಯಾವ ಭೂಪಾಲನು ಹಸಿವಿನಿಂದ ಬಳಲಿ ಬೆಂಡಾಗಿರುವ ಮನುಷ್ಯನಿಗೆ ಅನ್ನವನ್ನು ದಾನಮಾಡುವನೋ–ಅವನು ಬ್ರಹ್ಮನ ಪರಮಧಾಮಕ್ಕೆ ಹೋಗುತ್ತಾನೆ.

ನ ಹಿರಣ್ಯೈರ್ನ ವಾಸೋಭಿರ್ನಾನ್ಯದಾನೇನ ಭಾರತ ।
ಪ್ರಾಪ್ನುವನ್ತಿ ನರಾಃ ಶ್ರೇಯೋ ಯಥಾ ಹ್ಯನ್ನಪ್ರದಾಃ ಪ್ರಭೋ ॥೫೮॥

ಅನ್ನದಾನಮಾಡುವ ಮನುಷ್ಯರು ಯಾವ ರೀತಿಯಲ್ಲಿ ಪರಮ ಶ್ರೇಯಸ್ಸನ್ನು ಹೊಂದುವರೋ–ಅದೇ ರೀತಿಯಲ್ಲಿ ಸುವರ್ಣದಾನ ಮಾಡುವವರಾಗಲೀ, ವಸ್ತ್ರದಾನಮಾಡುವವರಾಗಲೀ, ಅಥವಾ ಯಾವುದೇ ಇತರ ದಾನವನ್ನು ಮಾಡುವವರಾಗಲೀ–ಶ್ರೇಯಸ್ಸನ್ನು ಹೊಂದುವುದಿಲ್ಲ.

ಅನ್ನಂ ವೈ ಪ್ರಥಮಂ ದ್ರವ್ಯಮನ್ನಂ ಶ್ರೀಶ್ಚ ಪರಾ ಮತಾ ।
ಅನ್ನಾತ್ಪ್ರಾಣಃ ಪ್ರಭವತಿ ತೇಜೋ ವೀರ್ಯಂ ಬಲಂ ತಥಾ ॥೫೯॥

ಅನ್ನವೇ ಪ್ರಥಮದ್ರವ್ಯವಾಗಿದೆ. ಅನ್ನವನ್ನು ಶ್ರೇಷ್ಠವಾದ ಸಂಪತ್ತೆಂದೂ ಹೇಳುತ್ತಾರೆ. ಅನ್ನದಿಂದಲೇ ಪ್ರಾಣ-ತೇಜಸ್ಸು-ವೀರ್ಯ-ಬಲಗಳು ಪುಷ್ಟ ವಾಗುತ್ತವೆ.

ಸದ್ಯೋ ದದಾತಿ ಯಶ್ಚಾನ್ನಂ ಸದೈಕಾಗ್ರಮನಾ ನರಃ ।
ನ ಸ ದುರ್ಗಾಣ್ಯವಾಪ್ನೋತೀತ್ಯೇವಮಾಹ ಪರಾಶರಃ ॥೬೦॥

ಯಾವ ಮನುಷ್ಯನು ಸದಾ ಏಕಾಗ್ರಚಿತ್ತನಾಗಿದ್ದು ಯಾಚಕರಿಗೆ ಒಡನೆಯೇ ಅನ್ನವನ್ನು ನೀಡುವನೋ–ಅಂತಹವನು ದಾಟಲು ಅಸಾಧ್ಯವಾದ ಕಷ್ಟಗಳನ್ನು ಹೊಂದುವುದೇ ಇಲ್ಲವೆಂದು ಪರಾಶರರು ಹೇಳಿರುತ್ತಾರೆ.

ಅರ್ಚಯಿತ್ವಾ ಯಥಾನ್ಯಾಯಂ ದೇವೇಭ್ಯೋಽನ್ನಂ ನಿವೇದಯೇತ್।
ಯದನ್ನಾ ಹಿ ನರಾ ರಾಜಂಸ್ತದನ್ನಾಸ್ತಸ್ಯ ದೇವತಾಃ ॥೬೧॥

ಮನುಷ್ಯರು ಅನುದಿನವೂ ಯಥಾವಿಧಿಯಾಗಿ ದೇವತಾರ್ಚನೆಯನ್ನು ಮಾಡಿ ದೇವತೆಗಳಿಗೆ ಅನ್ನವನ್ನು ನಿವೇದನೆಮಾಡಬೇಕು. ಯಾವ ಪುರುಷನು ಯಾವ ಅನ್ನವನ್ನು ಭೋಜನಮಾಡುವನೋ–ಅವನು ಆರಾಧಿಸುವ ದೇವತೆಗಳೂ ಅದೇ ಅನ್ನವನ್ನೇ ಪರಿಗ್ರಹಿಸುತ್ತಾರೆ.

ಕೌಮುದೇ ಶುಕ್ಲಪಕ್ಷೇ ತು ಯೋಽನ್ನದಾನಂ ಕರೋತ್ಯುತ ।
ಸ ಸನ್ತರತಿ ದುರ್ಗಾಣಿ ಪ್ರೇತ್ಯ ಚಾನನ್ತ್ಯಮಶ್ನುತೇ ॥೬೨॥

ಕಾರ್ತಿಕಮಾಸದ ಶುಕ್ಲಪಕ್ಷದಲ್ಲಿ ಅನ್ನದಾನಮಾಡುವವನು ಅಸಾಧ್ಯವಾದ ಮಹಾಕಷ್ಟಗಳಿಂದಲೂ ಪಾರಾಗುತ್ತಾನೆ ಮತ್ತು ಅವಸಾನಾನಂತರದಲ್ಲಿ ಪರಲೋಕಕ್ಕೆ ಹೋಗಿ ಅಕ್ಷಯವಾದ ಸುಖಗಳನ್ನೂ ಅನುಭವಿಸುತ್ತಾನೆ.

ಅಭುಕ್ತ್ವಾತಿಥಯೇ ಚಾನ್ನಂ ಪ್ರಯಚ್ಛೇದ್ಯಃ ಸಮಾಹಿತಃ ।
ಸ ವೈ ಬ್ರಹ್ಮವಿದಾಂ ಲೋಕಾನ್ಪ್ರಾಪ್ನುಯಾದ್ಭರತರ್ಷಭ ॥೬೩॥

ಭರತಶ್ರೇಷ್ಠನೇ! ತಾನು ಊಟವನ್ನು ಮಾಡುವ ಮೊದಲು ಅತಿಥಿ ಗಳಿಗೆ ಏಕಾಗ್ರಚಿತ್ತನಾಗಿ ಅನ್ನವನ್ನು ಬಡಿಸುವವನು ಅವಸಾನಾನಂತರದಲ್ಲಿ ಬ್ರಹ್ಮವಿದರ ಲೋಕಗಳಿಗೆ ಹೋಗುತ್ತಾನೆ.

ಸುಕೃಚ್ಛ್ರಾಮಾಪದಂ ಪ್ರಾಪ್ತಶ್ಚಾನ್ನದಃ ಪುರುಷಸ್ತರೇತ್
ಪಾಪಂ ತರತಿ ಚೈವೇಹ ದುಷ್ಕೃತಂ ಚಾಪಕರ್ಷತಿ ॥೬೪॥

ಅನ್ನದಾನವನ್ನು ಮಾಡುವವನು ಅತ್ಯಂತ ಕಠಿನವಾದ ಆಪತ್ತಿನಲ್ಲಿ ಸಿಲುಕಿಕೊಂಡಿದ್ದರೂ ಅನ್ನದಾನದ ಫಲದ ಪ್ರಭಾವದಿಂದ ಅಂತಹ ಆಪತ್ತಿನಿಂದಲೂ ಪಾರಾಗುತ್ತಾನೆ. ಪಾಪವನ್ನೂ ದಾಟುತ್ತಾ, ದುಷ್ಕೃತ್ಯಗಳನ್ನು ಸೆಳೆದುಹಾಕುತ್ತಾನೆ. (ದುಷ್ಕೃತ್ಯಗಳನ್ನು ಮಾಡುವುದಿಲ್ಲ.)

ಯುಧಿಷ್ಠಿರ! ಹೀಗೆ ನಾನು ನಿನಗೆ ಅನ್ನ-ತಿಲ-ಭೂಮಿ-ಗೋದಾನಗಳ ಫಲಗಳನ್ನು ಹೇಳಿರುತ್ತೇನೆ.”

೬೬ನೆಯ ಅಧ್ಯಾಯವು ಮುಗಿಯಿತು.

೬೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅನ್ನದಾನ-ಜಲದಾನಗಳ ಮಹಿಮೆ

ಯುಧಿಷ್ಠಿರನು ಹೇಳುತ್ತಾನೆ :

ಶ್ರುತಂ ದಾನಫಲಂ ತಾತ ಯತ್ತ್ವಯಾ ಪರಿಕೀರ್ತಿತಮ್ ।
ಅನ್ನದಾನಂ ವಿಶೇಷೇಣ ಪ್ರಶಸ್ತಮಿಹ ಭಾರತ ॥೧॥

“ಭರತನಂದನನೇ! ನೀನು ಹೇಳಿದ ದಾನಫಲಗಳೆಲ್ಲವನ್ನೂ ಕೇಳಿದೆನು. ಅದರಲ್ಲಿ ವಿಶೇಷವಾಗಿ ಅನ್ನದಾನವು ಪ್ರಶಸ್ತವೆಂಬುದನ್ನೂ ಕೇಳಿದೆನು.

ಪಾನೀಯದಾನಮೇವೈತತ್ಕಥಂ ಚೇಹ ಮಹಾಫಲಮ್ ।
ಇತ್ಯೇತಚ್ಛ್ರೋತುಮಿಚ್ಛಾಮಿ ವಿಸ್ತರೇಣ ಪಿತಾಮಹ ॥೨॥

ಈಗ ಜಲದಾನದಿಂದ ಮಹಾಫಲವು ಹೇಗೆ ಪ್ರಾಪ್ತವಾಗುವುದೆಂಬುದನ್ನು ಕೇಳಲಿಚ್ಛಿಸಿದ್ದೇನೆ. ಈ ವಿಷಯವನ್ನು ವಿಸ್ತಾರವಾಗಿ ಹೇಳು.”

ಭೀಷ್ಮನು ಹೇಳುತ್ತಾನೆ:

“ಸತ್ಯಪರಾಕ್ರಮನೇ! ಜಲದಾನದ ಸಂಬಂಧವಾಗಿ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಹೇಳುತ್ತೇನೆ. ನಾನು ಹೇಳುವುದನ್ನು ಏಕಾಗ್ರಚಿತ್ತನಾಗಿ ಕೇಳು. ಜಲದಾನದಿಂದ ಹಿಡಿದು ಎಲ್ಲ ದಾನಗಳ ಫಲಗಳನ್ನೂ

ಹೇಳುತ್ತೇನೆ. ಮನುಷ್ಯನು ಅನ್ನ ಮತ್ತು ಪಾನೀಯಗಳನ್ನು ದಾನಮಾಡು ವುದರಿಂದ ಯಾವ ಫಲವನ್ನು ಪಡೆಯುವನೆಂಬುದನ್ನು ಕೇಳು.

ನ ತಸ್ಮಾತ್ಪರಮಂ ದಾನಂ ಕಿಂಚಿದಸ್ತೀತಿ ಮೇ ಮನಃ ।
ಅನ್ನಾತ್ಪ್ರಾಣಭೃತಸ್ತಾತ ಪ್ರವರ್ತನ್ತೇ ಹಿ ಸರ್ವಶಃ ॥೫॥

ಅನ್ನದಾನಕ್ಕಿಂತಲೂ ಮಿಗಿಲಾದ ದಾನವು ಯಾವುದೂ ಇಲ್ಲವೆಂಬುದು ನನ್ನ ಮನಸ್ಸಿನಲ್ಲಿ ಖಚಿತವಾಗಿಬಿಟ್ಟಿದೆ. ಏಕೆಂದರೆ : ಅನ್ನದಿಂದಲೇ ಪ್ರಾಣಿಗಳು ಹುಟ್ಟುತ್ತವೆ.

ತಸ್ಮಾದನ್ನಂ ಪರಂ ಲೋಕೇ ಸರ್ವಲೋಕೇಷು ಕಥ್ಯತೇ ।
ಅನ್ನಾದ್ಬಲಂ ಚ ತೇಜಶ್ಚ ಪ್ರಾಣಿನಾಂ ವರ್ಧತೇ ಸದಾ ।
ಅನ್ನದಾನಮತಸ್ತಸ್ಮಾಚ್ಛ್ರೇಷ್ಠಮಾಹ ಪ್ರಜಾಪತಿಃ ॥೬॥

ಮನುಷ್ಯಲೋಕದಲ್ಲಿ ಅನ್ನವೇ ಶ್ರೇಷ್ಠವಾದುದೆಂದು ಸರ್ವಲೋಕ ಗಳಲ್ಲಿಯೂ ಹೇಳಲ್ಪಡುತ್ತದೆ. ಅನ್ನದಿಂದಲೇ ಪ್ರಾಣಿಗಳ ಬಲ ಮತ್ತು ತೇಜಸ್ಸು ಗಳು ಸದಾ ವೃದ್ಧಿಸುತ್ತವೆ. ಈ ಕಾರಣದಿಂದಲೇ ಪ್ರಜಾಪತಿಬ್ರಹ್ಮನು ಅನ್ನದಾನವೇ ಸರ್ವಶ್ರೇಷ್ಠವೆಂದು ಹೇಳಿರುವನು.

ಅನ್ನದಾನವನ್ನು ಏಕೆ ಮಾಡಬೇಕು ಮತ್ತು ಹೇಗೆ ಮಾಡಬೇಕು– ಎಂಬ ವಿಷಯದಲ್ಲಿ ದೇವತೆಗಳು ಯಜ್ಞಮಾಡುತ್ತಿದ್ದ ಸಮಯದಲ್ಲಿ ಸಾವಿತ್ರಿಯು ಹೇಳಿದ ಶುಭಕರವಾದ ಮಾತನ್ನು ನೀನೂ ಕೇಳಿರುವೆ.

ಅನ್ನೇ ದತ್ತೇ ನರೇಣೇಹ ಪ್ರಾಣಾ ದತ್ತಾ ಭವನ್ತ್ಯುತ ।
ಪ್ರಾಣದಾನಾದ್ಧಿ ಪರಮಂ ನ ದಾನಮಿಹ ವಿದ್ಯತೇ ॥೮॥

‘ಮನುಷ್ಯನು ಅನ್ನಗತಪ್ರಾಣನಾಗಿರುವುದರಿಂದ ಅನ್ನವನ್ನು ದಾನ ಮಾಡಿದರೆ ಪ್ರಾಣವನ್ನೇ ದಾನಮಾಡಿದಂತಾಗುತ್ತದೆ. ಪ್ರಾಣದಾನಕ್ಕಿಂತಲೂ ಶ್ರೇಷ್ಠವಾದ ದಾನವು ಬೇರೆ ಯಾವುದೂ ಇಲ್ಲ. (ಆದುದರಿಂದ ಅನ್ನದಾನವು ಪರಮಶ್ರೇಷ್ಠವಾದುದು.)’

ಯುಧಿಷ್ಠಿರ! ಅನ್ನದಾನದ ವಿಷಯದಲ್ಲಿ ಲೋಮಶರ ಅಭಿಪ್ರಾಯ ವನ್ನೂ ನೀನು ಕೇಳಿರುವೆ.

ಪ್ರಾಣಾನ್ದತ್ತ್ವಾ ಕಪೋತಾಯ ಯತ್ಪ್ರಾಪ್ತಂ ಶಿಬಿನಾ ಪುರಾ ।
ತಾಂ ಗತಿಂ ಲಭತೇ ದತ್ತ್ವಾ ದ್ವಿಜಸ್ಯಾನ್ನಂ ವಿಶಾಮ್ಪತೇ ॥೯॥
ತಸ್ಮಾದ್ವಿಶಿಷ್ಟಾಂ ಗಚ್ಛನ್ತಿ ಪ್ರಾಣದಾ ಇತಿ ನಃ ಶ್ರುತಮ್ ॥೧೦॥

ಪೂರ್ವಕಾಲದಲ್ಲಿ ಶಿಬಿಯು ಪಾರಿವಾಳಕ್ಕೆ ಪ್ರಾಣದಾನಮಾಡಿದುದರಿಂದ ಅವನಿಗೆ ಯಾವ ಸದ್ಗತಿಯು ಲಭಿಸಿತೋ–ಅದೇ ಸದ್ಗತಿಯನ್ನೇ ಮಾನವನು ಬ್ರಾಹ್ಮಣನಿಗೆ ಅನ್ನದಾನಮಾಡುವುದರಿಂದ ಪಡೆದುಕೊಳ್ಳುತ್ತಾನೆ. ಆದುದರಿಂದ ಪ್ರಾಣದಾನಮಾಡಿದವರು ಎಲ್ಲದಕ್ಕಿಂತಲೂ ಶ್ರೇಷ್ಠವಾದ ಗತಿಯನ್ನು ಹೊಂದುವರೆಂದು ನಾವು ಕೇಳಿದ್ದೇವೆ.

ಅನ್ನಂ ವಾಪಿ ಪ್ರಭವತಿ ಪಾನೀಯಾತ್ಕುರುಸತ್ತಮ ।
ನೀರಜಾತೇನ ಹಿ ವಿನಾ ನ ಕಿಂಚಿತ್ಸಮ್ಪ್ರವರ್ತತೇ ॥೧೧॥

ಕುರುಶ್ರೇಷ್ಠನೇ! ಎಲ್ಲರ ಪ್ರಾಣಪೋಷಕವಾದ ಅನ್ನವಾದರೂ ನೀರಿನಿಂದಲೇ ಬೆಳೆಯಬೇಕಾಗಿದೆ. ನೀರಿನಿಂದ ಬೆಳೆಯುವ ಧಾನ್ಯ (ಅನ್ನ) ವಿಲ್ಲದಿದ್ದರೆ ಪ್ರಪಂಚದಲ್ಲಿ ಯಾವುದೂ ಮುನ್ನಡೆಯುವುದೇ ಇಲ್ಲ.

ನೀರಜಾತಶ್ಚ ಭಗವಾನ್ಸೋಮೋ ಗ್ರಹಗಣೇಶ್ವರಃ ।
ಅಮೃತಂ ಚ ಸುಧಾ ಚೈವ ಸ್ವಾಹಾ ಚೈವ ಸ್ವಧಾ ತಥಾ ॥೧೨॥
ಅನ್ನೌಷಧ್ಯೋ ಮಹಾರಾಜ ವೀರುಧಶ್ಚ ಜಲೋದ್ಭವಾಃ ।
ಯತಃ ಪ್ರಾಣಭೃತಾಂ ಪ್ರಾಣಾಃ ಸಮ್ಭವನ್ತಿ ವಿಶಾಮ್ಪತೇ ॥೧೩॥

ಗ್ರಹಗಳ ಸಮೂಹಕ್ಕೆ ಅಧಿಪತಿಯಾದ ಸೋಮನು ನೀರಿನಲ್ಲಿಯೇ ಹುಟ್ಟಿದವನು. ಅಮೃತ, ಸುಧಾ, ಸ್ವಾಹಾ, ಸ್ವಧಾ, ಅನ್ನ, ಓಷಧಿ, ಹುಲ್ಲು ಮತ್ತು ಲತೆಗಳೂ ನೀರಿನಿಂದಲೇ ಹುಟ್ಟಿವೆ. ಇವುಗಳಿಂದಲೇ ಪ್ರಾಣಿಗಳ ಪ್ರಾಣಗಳೂ ಆವಿರ್ಭವಿಸುತ್ತವೆ ಮತ್ತು ಪುಷ್ಟಿಯನ್ನೂ ಹೊಂದುತ್ತವೆ.

ದೇವಾನಾಮಮೃತಂ ಹ್ಯನ್ನಂ ನಾಗಾನಾಂ ಚ ಸುಧಾ ತಥಾ ।
ಪಿತೄಣಾಂ ಚ ಸ್ವಧಾ ಪ್ರೋಕ್ತಾ ಪಶೂನಾಂ ಚಾಪಿ ವೀರುಧ ॥೧೪॥

ನೀರಿನಲ್ಲಿ ಹುಟ್ಟಿರುವ ಅಮೃತವೇ ದೇವತೆಗಳಿಗೆ ಅನ್ನವಾಗಿದೆ. ಸುಧೆಯೇ ಸರ್ಪಗಳಿಗೆ ಅನ್ನವಾಗಿದೆ. ಸ್ವಧೆಯೇ ಪಿತೃಗಳಿಗೆ ಅನ್ನವಾಗಿದೆ. ಹುಲ್ಲು-ಬಳ್ಳಿಗಳೇ ಪಶುಗಳಿಗೆ ಅನ್ನವಾಗಿವೆ.

ಅನ್ನಮೇವ ಮನುಷ್ಯಾಣಾಂ ಪ್ರಾಣಾನಾಹುರ್ಮನೀಷಿಣಃ ।
ತಚ್ಚ ಸರ್ವಂ ನರವ್ಯಾಘ್ರ ಪಾನೀಯಾತ್ಸಮ್ಪ್ರವರ್ತತೇ ।
ತಸ್ಮಾತ್ಪಾನೀಯದಾನಾದ್ವೈ ನ ಪರಂ ವಿದ್ಯತೇ ಕ್ವಚಿತ್ ॥೧೫॥

ವಿದ್ವಾಂಸರು ಅನ್ನವೇ ಮನುಷ್ಯರಿಗೆ ಪ್ರಾಣಗಳೆಂದು ಹೇಳುತ್ತಾರೆ. ಎಲ್ಲ ವಿಧವಾದ ಅನ್ನಗಳೂ (ಧಾನ್ಯಗಳೂ) ನೀರಿನಿಂದಲೇ ಹುಟ್ಟಿ ಬೆಳೆಯುತ್ತವೆ. ಆದುದರಿಂದ ಜಲದಾನಕ್ಕಿಂತಲೂ ಶ್ರೇಷ್ಠವಾದ ದಾನವೇ ಬೇರೆ ಯಾವುದೂ ಇಲ್ಲ.

ತಚ್ಚ ದದ್ಯಾನ್ನರೋ ನಿತ್ಯಂ ಯದೀಚ್ಛೇದ್ಭೂತಿಮಾತ್ಮನಃ ॥೧೬॥
ಧನ್ಯಂ ಯಶಸ್ಯಮಾಯುಷ್ಯಂ ಜಲದಾನಮಿಹೋಚ್ಯತೇ ।
ಶತ್ರೂಂಶ್ಚಾಪ್ಯಧಿ ಕೌನ್ತೇಯ ಸದಾ ತಿಷ್ಠತಿ ತೋಯದಃ ॥೧೭॥

ಆತ್ಮಕಲ್ಯಾಣವನ್ನು ಇಚ್ಛಿಸುವ ಮನುಷ್ಯನು ನಿತ್ಯವೂ ಜಲದಾನವನ್ನು ಮಾಡಬೇಕು. ಜಲದಾನವು ಧನ, ಯಶಸ್ಸು ಮತ್ತು ಆಯುಷ್ಯಗಳನ್ನು ವರ್ಧಿಸುತ್ತದೆಯೆಂದು ಹೇಳುತ್ತಾರೆ. ಜಲದಾನಿಯು ಶತ್ರುಗಳನ್ನೂ ಮೆಟ್ಟಿ ನಿಲ್ಲುತ್ತಾನೆ.

ಸರ್ವಕಾಮಾನವಾಪ್ನೋತಿ ಕೀರ್ತಿಂ ಚೈವ ಹಿ ಶಾಶ್ವತೀಮ್ ।
ಪ್ರೇತ್ಯ ಚಾನನ್ತ್ಯಮಶ್ನಾತಿ ಪಾಪೇಭ್ಯಶ್ಚ ಪ್ರಮುಚ್ಯತೇ ॥೧೮॥

ಜಲದಾನಿಯು ಮನೋವಾಂಛಿತವಾದ ಎಲ್ಲ ಕಾಮನೆಗಳನ್ನೂ ಪಡೆದುಕೊಳ್ಳುತ್ತಾನೆ. ಅಕ್ಷಯವಾದ ಕೀರ್ತಿಯನ್ನೂ ಪಡೆಯುತ್ತಾನೆ. ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ. ಪರಲೋಕಕ್ಕೆ ಹೋದನಂತರ ಅಕ್ಷಯಸುಖವನ್ನೂ ಉಪಭೋಗಿಸುತ್ತಾನೆ.

ತೋಯದೋ ಮನುಜವ್ಯಾಘ್ರ ಸ್ವರ್ಗಂ ಗತ್ವಾ ಮಹಾದ್ಯುತೇ ।
ಅಕ್ಷಯಾನ್ಸಮವಾಪ್ನೋತಿ ಲೋಕಾನಿತ್ಯಬ್ರವೀನ್ಮನುಃ ॥೧೯॥

ಮಹಾತೇಜಸ್ವಿಯೇ! ಪುರುಷಸಿಂಹನೇ! ಯುಧಿಷ್ಠಿರ! ಜಲದಾನಿಯು ಸ್ವರ್ಗಕ್ಕೆ ಹೋಗಿ ಅಲ್ಲಿ ಅಕ್ಷಯವಾದ ಲೋಕಗಳನ್ನು ಹೊಂದುವನೆಂದು ಮನುವೇ ಹೇಳಿದ್ದಾನೆ.”

ಆ೬೭ನೆಯ ಅಧ್ಯಾಯವು ಮುಗಿಯಿತು.

೬೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ತಿಲ-ಜಲ-ದೀಪ-ರತ್ನಗಳೇ ಮೊದಲಾದ ವಸ್ತುಗಳ ದಾನದ ಮಹಿಮೆ : ಯಮಧರ್ಮ-ಬ್ರಾಹ್ಮಣರ ಸಂವಾದ

ಯುಧಿಷ್ಠಿರನು ಹೇಳುತ್ತಾನೆ:

ತಿಲಾನಾಂ ಕೀದೃಶಂ ದಾನಮಥ ದೀಪಸ್ಯ ಚೈವ ಹಿ ।
ಅನ್ನಾನಾಂ ವಾಸಸಾಂ ಚೈವ ಭೂಯ ಏವ ಬ್ರವೀಹಿ ಮೇ ॥೧॥

"ಪಿತಾಮಹನೇ! ತಿಲದಾನಮಾಡಿದರೆ ಯಾವ ಫಲವಿದೆ? ದೀಪ ದಾನ, ಅನ್ನದಾನ ಮತ್ತು ವಸ್ತ್ರದಾನಗಳಿಗೆ ಯಾವ ಫಲಗಳೆಂಬುದನ್ನು ಪುನಃ ಹೇಳು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಒಬ್ಬ ಬ್ರಾಹ್ಮಣನಿಗೂ ಯಮಧರ್ಮನಿಗೂ ನಡೆದ ಪುರಾತನವಾದ ಇತಿಹಾಸರೂಪವಾದ ಸಂವಾದ ವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಮಧ್ಯದೇಶದಲ್ಲಿ ಗಂಗಾ-ಯಮುನೆ ಯರ ಮಧ್ಯಭಾಗದಲ್ಲಿ ಯಾಮುನಪರ್ವತದ ಕೆಳಭಾಗದಲ್ಲಿ ಬ್ರಾಹ್ಮಣರ ದೊಡ್ಡದಾದ ಅಗ್ರಹಾರವಿದ್ದಿತು. 'ಪರ್ಣಶಾಲಾ'-ಎಂಬ ಹೆಸರಿನಿಂದ ವಿಖ್ಯಾತವಾಗಿದ್ದ ಆ ಗ್ರಾಮವು ಅತ್ಯಂತರಮಣೀಯವಾಗಿಯೂ ಇದ್ದಿತು. ಅಲ್ಲಿ ವಿದ್ವಾಂಸರಾದ ಅನೇಕಬ್ರಾಹ್ಮಣರು ವಾಸವಾಗಿದ್ದರು. ಒಮ್ಮೆ ಯಮರಾಜನು, ಕಪ್ಪಾದ ವಸ್ತ್ರವನ್ನುಟ್ಟಿದ್ದ, ಕೆಂಗಣ್ಣನಾಗಿದ್ದ, ಮೇಲ್ಮುಖವಾದ ರೋಮಗಳುಳ್ಳವನಾಗಿದ್ದ, ಕಾಗೆಯ ಕಾಲುಗಳಿಗೆ-ಕಣ್ಣುಗಳಿಗೆ ಮತ್ತು ಮೂಗಿಗೆ ಸಮಾನವಾದ ಮೊಣಕಾಲುಗಳನ್ನೂ, ಕಣ್ಣುಗಳನ್ನೂ, ಮೂಗನ್ನೂ ಹೊಂದಿದ್ದ ಒಬ್ಬ ಪುರುಷನಿಗೆ (ತನ್ನ ದೂತನಿಗೆ) ಹೇಳಿದನು:

"ನೀನು ಭೂಲೋಕದಲ್ಲಿ ಗಂಗಾ-ಯಮುನೆಯರ ಮಧ್ಯದಲ್ಲಿರುವ ಬ್ರಾಹ್ಮಣರ ಅಗ್ರಹಾರಕ್ಕೆ ಹೋಗು. ಅಲ್ಲಿರುವ ಅಗಸ್ತ್ಯಗೋತ್ರೋದ್ಭವನಾದ, ಅಗಸ್ತ್ಯಶರ್ಮಾ ಎಂಬ ಹೆಸರಿನ, ಶಮಪರಾಯಣನಾದ, ವಿದ್ವಾಂಸನಾದ, ಅಧ್ಯಾಪಕನಾದ, ಆವರಣದಿಂದ ರಹಿತನಾಗಿರುವ (ಉತ್ತರೀಯವನ್ನು ಹೊದೆದುಕೊಳ್ಳದಿರುವ) ಬ್ರಾಹ್ಮಣನನ್ನು ಇಲ್ಲಿಗೆ ಕರೆದುಕೊಂಡು ಬಾ.

ಆದರೆ ಅದೇ ಗ್ರಾಮದಲ್ಲಿಯೇ ಅವನಿಗೆ ಅನುರೂಪನಾದ ಮತ್ತೊಬ್ಬ ಬ್ರಾಹ್ಮಣನೂ ಇರುವನು. ಅವನು ಕೂಡ ಅಗಸ್ತ್ಯ ಶರ್ಮನ ಗೋತ್ರದವನೇ ಆಗಿರುವನು. ಅವನ ಮನೆಯೂ ನಾನು ಹೇಳಿದ ಅಗಸ್ತ್ಯಶರ್ಮನ ಮನೆಯ ಪಕ್ಕದಲ್ಲಿಯೇ ಇದೆ. ಗುಣ, ವೇದಾಧ್ಯಯನ ಮತ್ತು ಕುಲಗಳಲ್ಲಿಯೂ ಅವನಿಗೆ ಸದೃಶನಾಗಿಯೇ ಇರುವನು. ಅವನಿಗಿರುವಷ್ಟೇ ಮಕ್ಕಳು ಇವನಿಗೂ ಇವೆ. ಆಚಾರ-ವ್ಯವಹಾರಗಳಲ್ಲಿಯೂ ಧೀಮಂತನಾದ ಆ ಅಗಸ್ತ್ಯಶರ್ಮನಿಗೆ ಇವನೂ ಸಮಾನನಾಗಿಯೇ ಇರುವನು. ಆದರೆ ನೀನು ಅವನನ್ನು ಮಾತ್ರ ಕರೆತರಬೇಡ. ನಾನು ಹೇಳಿದ, ವಸ್ತ್ರದಿಂದ ಅನಾವೃತನಾಗಿರುವ ಅಗಸ್ತ್ಯಶರ್ಮನನ್ನೇ ಇಲ್ಲಿಗೆ ಕರೆದುಕೊಂಡು ಬಾ. ಏಕೆಂದರೆ: ನಾನು ಅವನನ್ನು ಸತ್ಕರಿಸಬೇಕಾಗಿದೆ."

ಯುಧಿಷ್ಠಿರ! ಯಮರಾಜನ ಆಜ್ಞೆಯಂತೆ ಯಮದೂತನು ಪರ್ಣಶಾಲಾಗ್ರಾಮಕ್ಕೆ ಹೋದನು. ಆದರೆ ಯಮನು ಹೇಳಿದುದಕ್ಕೆ ವಿರುದ್ಧವಾಗಿ ಅವನು ಯಾರನ್ನು ಕರೆತರುವುದು ಬೇಡವೆಂದು ಹೇಳಿದ್ದನೋ ಅವನನ್ನೇ ಯಮನ ಬಳಿಗೆ ಕರೆದುಕೊಂಡು ಬಂದನು.

ತಾನು ಹೇಳಿದ ಬ್ರಾಹ್ಮಣನನ್ನು ತನ್ನ ದೂತನು ಕರೆದುಕೊಂಡು ಬರಲಿಲ್ಲವೆಂಬುದು ತಿಳಿಯಿತಾದರೂ ವೀರ್ಯವಂತನಾದ ಯಮನು, ಬ್ರಾಹ್ಮಣನು ಬರುತ್ತಲೇ ಪ್ರತ್ಯುತ್ಥಾನಮಾಡಿ ಅವನನ್ನು ಸ್ವಾಗತಿಸಿ ಯಥಾವಿಧಿಯಾಗಿ ಸತ್ಕರಿಸಿ ಪುನಃ ದೂತನೊಡನೆ ಹೇಳಿದನು : 'ನೀಯತಾಮೇಷಃ ಸೋಽನ್ಯಃ ಆನೀಯತಾಮ್' 'ಇವನನ್ನು ಕರೆದುಕೊಂಡು ಹೋಗು. ಆ ಮತ್ತೊಬ್ಬನನ್ನು ಕರೆದುಕೊಂಡು ಬಾ.'

ಯಮಧರ್ಮನು ಹೇಳಿದ ಆ ಮಾತನ್ನು ಕೇಳಿ ವೇದಾಧ್ಯಯನವನ್ನು ಮಾಡಿ ಬಹಳವಾಗಿ ಬಳಲಿದ್ದ ಆ ಬ್ರಾಹ್ಮಣನು ಯಮನೊಡನೆ ಹೇಳಿದನು:

ಯೋ ಮೇ ಕಾಲೋ ಭವೇಚ್ಛೇಷಸ್ತಂ ವಸೇಯಮಿಹಾಚ್ಯುತ ॥೧೨॥

"ಅಚ್ಯುತನೇ! ಉಳಿದಿರುವ ನನ್ನ ಆಯುಷ್ಯವನ್ನು ಇಲ್ಲಿಯೇ ಕಳೆಯುತ್ತೇನೆ".

ಯಮಃ

ನಾಹಂ ಕಾಲಸ್ಯ ವಿಹಿತಂ ಪ್ರಾಪ್ನೋಮೀಹ ಕಥಂಚನ ।
ಯೋ ಹಿ ಧರ್ಮಂ ಚರತಿ ವೈ ತಂ ತು ಜಾನಾಮಿ ಕೇವಲಮ್ ॥

"ಬ್ರಾಹ್ಮಣನೇ! ನಾನು ಕಾಲದ ವಿಧಾನವೇನೆಂಬುದನ್ನು ತಿಳಿದವನಾಗಿಲ್ಲ. (ಕಾಲವು ಮುಗಿಯದೇ ಬರುವವರನ್ನು ಇಲ್ಲಿ ಇಟ್ಟುಕೊಳ್ಳುವುದಿಲ್ಲ.) ಧರ್ಮಾಚರಣೆಯನ್ನು ಮಾಡುವವರನ್ನು ಮಾತ್ರವೇ ತಿಳಿಯುತ್ತೇನೆ.

ಗಚ್ಛ ವಿಪ್ರ ತ್ವಮದ್ಯೈವ ಆಲಯಂ ಸ್ವಂ ಮಹಾದ್ಯುತೇ ।
ಬ್ರೂಹಿ ಸರ್ವಂ ಯಥಾ ಸ್ವೈರಂ ಕರವಾಣಿ ಕಿಮಚ್ಯುತ ॥೧೪॥

ಯಾವಾಗಲೂ ಧರ್ಮದಿಂದ ಚ್ಯುತನಾಗದಿರುವ ಮಹಾತೇಜಸ್ವಿಯಾದ ಬ್ರಾಹ್ಮಣನೇ! ನೀನೀಗಲೇ ನಿನ್ನ ಮನೆಗೆ ಹೊರಟುಹೋಗು. ನಿನ್ನ ಇಚ್ಛಾನುಸಾರವಾಗಿ ಏನನ್ನಾದರೂ ಹೇಳುವುದಿದ್ದರೆ ಹೇಳು. ನಾನು ನಿನಗಾಗಿ ಯಾವ ಕಾರ್ಯವನ್ನು ಮಾಡಿಕೊಡಲಿ?"

ಬ್ರಾಹ್ಮಣಃ

ಯತ್ತತ್ರ ಕೃತ್ವಾ ಸುಮಹತ್ಪುಣ್ಯಂ ಸ್ಯಾತ್ತದ್ಬ್ರವೀಹಿ ಮೇ ।
ಸರ್ವಸ್ಯ ಹಿ ಪ್ರಮಾಣಂ ತ್ವಂ ತ್ರೈಲೋಕ್ಯಸ್ಯಾಪಿ ಸತ್ತಮ ॥೧೫॥

"ಸತ್ಪುರುಷಶ್ರೇಷ್ಠನೇ! ಪ್ರಪಂಚದಲ್ಲಿ ಯಾವ ಕಾರ್ಯವನ್ನು ಮಾಡುವುದರಿಂದ ಮಹಾಪುಣ್ಯವು ಲಭಿಸುತ್ತದೆ? ಈ ವಿಷಯವನ್ನು ನನಗೆ ಹೇಳು. ಸಮಗ್ರವಾದ ಮೂರು ಲೋಕಗಳಿಗೂ ಧರ್ಮದ ವಿಷಯದಲ್ಲಿ ನೀನೇ ಪ್ರಮಾಣಭೂತನಾಗಿರುವೆ."

ಯಮಃ

ಶೃಣು ತತ್ತ್ವೇನ ವಿಪ್ರರ್ಷೇ ಪ್ರದಾನವಿಧಿಮುತ್ತಮಮ್ ।
ತಿಲಾಃ ಪರಮಕಂ ದಾನಂ ಪುಣ್ಯಂ ಚೈವೇಹ ಶಾಶ್ವತಮ್ ॥೧೬॥

"ಬ್ರಹ್ಮರ್ಷಿಯೇ! ದಾನದ ಉತ್ತಮವಿಧಿಯನ್ನು ಯಥಾವತ್ತಾಗಿ ಕೇಳು. ತಿಲದಾನವು ಎಲ್ಲ ದಾನಗಳಿಗಿಂತಲೂ ಶ್ರೇಷ್ಠವಾದುದು. ತಿಲದಾನದಿಂದ ಶಾಶ್ವತವಾದ (ಅಕ್ಷಯವಾದ) ಪುಣ್ಯವು ಲಭಿಸುತ್ತದೆ.

ತಿಲಾಶ್ಚ ಸಮ್ಪ್ರದಾತವ್ಯಾ ಯಥಾಶಕ್ತಿ ದ್ವಿಜರ್ಷಭ ।
ನಿತ್ಯದಾನಾತ್ಸರ್ವಕಾಮಾಂಸ್ತಿಲಾ ನಿರ್ವರ್ತಯನ್ತ್ಯುತ ॥೧೭॥

ಶಕ್ತ್ಯನುಸಾರವಾಗಿ ಎಳ್ಳನ್ನು ದಾನಮಾಡಬೇಕು. ನಿತ್ಯವೂ ತಿಲದಾನಮಾಡುವುದರಿಂದ ಅವೇ ದಾತೃವಿನ ಸಕಲಕಾಮನೆಗಳನ್ನೂ ಪೂರ್ಣ ಗೊಳಿಸಿಕೊಡುತ್ತವೆ.

ತಿಲಾಞ್ಶ್ರಾದ್ಧೇ ಪ್ರಶಂಸನ್ತಿ ದಾನಮೇತದ್ಧ್ಯನುತ್ತಮಮ್ ।
ತಾನ್ಪ್ರಯಚ್ಛಸ್ವ ವಿಪ್ರೇಭ್ಯೋ ವಿಧಿದೃಷ್ಟೇನ ಕರ್ಮಣಾ ॥೧೮॥

ಶ್ರಾದ್ಧಕರ್ಮಗಳಲ್ಲಿ ವಿದ್ವಾಂಸರು ತಿಲವನ್ನು ಪ್ರಶಂಸೆಮಾಡುತ್ತಾರೆ. (ಪಿತೃಗಳ ಸಂತೃಪ್ತಿಗಾಗಿ ಶ್ರಾದ್ಧಕರ್ಮಗಳಲ್ಲಿ ಎಳ್ಳನ್ನೇ ಪೂಜಾದಿಗಳಿಗೆ ಉಪಯೋಗಿಸುತ್ತಾರೆ.) ತಿಲದಾನವು ಎಲ್ಲ ದಾನಗಳಿಗಿಂತಲೂ ಉತ್ತಮವಾದ ದಾನವಾಗಿದೆ. ಆದುದರಿಂದ ನೀನೂ ಕೂಡ ಶಾಸ್ತ್ರವಿಧಿಗೆ ಅನು ಸಾರವಾಗಿ ಬ್ರಾಹ್ಮಣರಿಗೆ ಎಳ್ಳನ್ನು ದಾನಮಾಡು.

ವೈಶಾಖ್ಯಾಂ ಪೌರ್ಣಮಾಸ್ಯಾಂ ತು ತಿಲಾನ್ದದ್ಯಾದ್ದ್ವಿಜಾತಿಷು ।
ತಿಲಾ ಭಕ್ಷಯಿತವ್ಯಾಶ್ಚ ಸದಾ ತ್ವಾಲಮ್ಭನಂ ಚ ತೈಃ ॥೧೯॥
ಕಾರ್ಯಂ ಸತತಮಿಚ್ಛದ್ಭಿಃ ಶ್ರೇಯಃ ಸರ್ವಾತ್ಮನಾ ಗೃಹೇ ।
ತಥಾಪಃ ಸರ್ವದಾ ದೇಯಾಃ ಪೇಯಾಶ್ಚೈವ ನ ಸಂಶಯಃ ॥೨೦॥

ವೈಶಾಖಮಾಸದ ಹುಣ್ಣಿಮೆಯಂದು ಬ್ರಾಹ್ಮಣರಿಗೆ ತಿಲದಾನ ಮಾಡಬೇಕು. ಎಳ್ಳು ಭಕ್ಷಣೆಗೂ ಯೋಗ್ಯವಾಗಿದೆ. ಒಟ್ಟಿನಲ್ಲಿ ಎಳ್ಳಿನೊಡನೆ ಯಾವಾಗಲೂ ಸಂಪರ್ಕವಿಟ್ಟುಕೊಂಡಿರಬೇಕು. (ಅದರ ಎಣ್ಣೆಯನ್ನು ಹಚ್ಚಿಕೊಳ್ಳುವುದರ ಮೂಲಕ, ಭಕ್ಷಿಸುವುದರ ಮೂಲಕ, ದಾನಕೊಡುವುದರ ಮೂಲಕ ಸಂಪರ್ಕವಿಟ್ಟುಕೊಂಡಿರಬೇಕು.) ಸತತವಾಗಿ ಶ್ರೇಯಸ್ಸನ್ನು ಅಪೇಕ್ಷಿಸುವವನು ಸರ್ವಪ್ರಕಾರದಿಂದಲೂ ಮನೆಯಲ್ಲಿ ಎಳ್ಳನ್ನು ಉಪಯೋಗಿಸುತ್ತಿರಬೇಕು ಮತ್ತು ದಾನಮಾಡುತ್ತಿರಬೇಕು. ಅದೇ ರೀತಿಯಲ್ಲಿ ಜಲದಾನವನ್ನೂ ಮತ್ತು ಜಲಪಾನವನ್ನೂ ಮಾಡುತ್ತಿರಬೇಕು. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ಪುಷ್ಕರಿಣ್ಯಸ್ತಡಾಗಾನಿ ಕೂಪಾಂಶ್ಚೈವಾತ್ರ ಖಾನಯೇತ್ ।
ಏತತ್ಸುದುರ್ಲಭತರಮಿಹಲೋಕೇ ದ್ವಿಜೋತ್ತಮ ॥೨೧॥

ಮನುಷ್ಯನು ಈ ಲೋಕದಲ್ಲಿ ಕೊಳಗಳನ್ನೂ, ತಟಾಕಗಳನ್ನೂ, ಬಾವಿಗಳನ್ನೂ ತೋಡಿಸಬೇಕು. ಇದು ಇಹಲೋಕದಲ್ಲಿ ಅತ್ಯಂತದುರ್ಲಭವಾದ ಪುಣ್ಯಕಾರ್ಯವಾಗಿದೆ.

ಆಪೋ ನಿತ್ಯಂ ಪ್ರದೇಯಾಸ್ತೇ ಪುಣ್ಯಂ ಹ್ಯೇತದನುತ್ತಮಮ್ ।
ಪ್ರಪಾಶ್ಚ ಕಾರ್ಯಾ ದಾನಾರ್ಥಂ ನಿತ್ಯಂ ತೇ ದ್ವಿಜಸತ್ತಮ ।
ಭುಕ್ತೇಽಪ್ಯನ್ನಂ ಪ್ರದೇಯಂ ತು ಪಾನೀಯಂ ವೈ ವಿಶೇಷತಃ ॥೨೨॥

ದ್ವಿಜಶ್ರೇಷ್ಠನೇ! ನೀನು ನಿತ್ಯವೂ ಜಲದಾನವನ್ನು ಮಾಡಬೇಕು. ಅದಕ್ಕಾಗಿಯೇ ಅರವಟ್ಟಿಗೆಗಳನ್ನು ಕಟ್ಟಿಸಬೇಕು. ಇದು ಸರ್ವೋತ್ತಮವಾದ ಪುಣ್ಯಕಾರ್ಯವಾಗಿದೆ. ಊಟಮಾಡಿದವನಿಗೂ (ಊಟವಾದನಂತರ) ವಿಶೇಷವಾಗಿ ಕುಡಿಯಲು ನೀರನ್ನು ಕೊಡಬೇಕು."

ಯುಧಿಷ್ಠಿರ! ಯಮಧರ್ಮನು ಹೀಗೆ ಹೇಳುತ್ತಲೇ ಯಮದೂತನು ಬ್ರಾಹ್ಮಣನನ್ನು ಅವನ ಮನೆಗೆ ಕರೆದೊಯ್ದನು. ಮನೆಗೆ ಹೋದನಂತರ ಬ್ರಾಹ್ಮಣನು ಯಮನ ಆಜ್ಞಾನುಸಾರವಾಗಿ ಎಲ್ಲವನ್ನೂ ಮಾಡಿದನು. (ತಿಲದಾನ-ಜಲದಾನಗಳನ್ನು ಮಾಡಿದನು.)

ಯಮಧರ್ಮನ ಆಜ್ಞೆಯಂತೆ ಬ್ರಾಹ್ಮಣನನ್ನು ಬಿಟ್ಟುಬರಲು ಹೋಗಿದ್ದ ಯಮದೂತನು ಈ ಬಾರಿ ಸ್ವಲ್ಪವೂ ಕಷ್ಟವಿಲ್ಲದೇ ಯಮಧರ್ಮನು ಅಪೇಕ್ಷಿಸಿದ್ದ ಅಗಸ್ತ್ಯಶರ್ಮನನ್ನೇ ಕರೆದುಕೊಂಡು ಬಂದು ಯಮನಿಗೆ ನಿವೇದಿಸಿದನು.

ಪ್ರತಾಪವಂತನಾದ ಯಮಧರ್ಮನು ಧರ್ಮಜ್ಞನಾದ ಅಗಸ್ತ್ಯಶರ್ಮನನ್ನು ಆದರಪೂರ್ವಕವಾಗಿ ಸ್ವಾಗತಿಸಿ ಸತ್ಕರಿಸಿ ಅವನೊಡನೆ ಸ್ವಲ್ಪ ಹೊತ್ತು ಮಾತನಾಡುತ್ತಿದ್ದು ತನ್ನ ದೂತನೊಡನೆ ಅವನನ್ನು ಅವನ ಅಗ್ರಹಾರಕ್ಕೆ ಕಳುಹಿಸಿದನು.

ಯಮನು ಅವನಿಗೂ ದಾನಗಳ ಸಂಬಂಧವಾಗಿ ಎಲ್ಲವನ್ನೂ

ಉಪದೇಶಿಸಿದನು. ಯಮದೂತನೊಡನೆ ಪರಲೋಕದಿಂದ ತನ್ನ ಗ್ರಾಮಕ್ಕೆ ಅಗಸ್ತ್ಯಶರ್ಮನು ಹಿಂದಿರುಗಿದನಂತರ ಯಮನು ಹೇಳಿದಂತೆಯೇ ಎಲ್ಲವನ್ನೂ ಮಾಡಿದನು.

ಯಮಧರ್ಮನು ಅಗಸ್ತ್ಯಶರ್ಮನಿಗೆ ಉಪದೇಶಿಸುವಾಗ ಪಿತೃಗಳಿಗೆ ಹಿತವನ್ನುಂಟುಮಾಡುವ ಅಪೇಕ್ಷೆಯಿಂದ ದೀಪದಾನದ ಪ್ರಶಂಸೆಯನ್ನೂ ಮಾಡಿದನು. ಆದುದರಿಂದ ಪ್ರತಿನಿತ್ಯವೂ ದೀಪಗಳನ್ನು ದಾನಮಾಡುವವನು ಪಿತೃಗಳನ್ನು ಉದ್ಧರಿಸುತ್ತಾನೆ.

ದಾತವ್ಯಾಃ ಸತತಂ ದೀಪಾಸ್ತಸ್ಮಾದ್ಭರತಸತ್ತಮ ।
ದೇವತಾನಾಂ ಪಿತೄಣಾಂ ಚ ಚಕ್ಷುಷ್ಯಂ ಚಾತ್ಮನಾಂ ವಿಭೋ ॥೨೮॥

ಭರತಶ್ರೇಷ್ಠನೇ! ದೇವತೆಗಳನ್ನೂ ಪಿತೃಗಳನ್ನೂ ಉದ್ದೇಶಿಸಿ ಸದಾ ದೀಪಗಳನ್ನು ದಾನಮಾಡುತ್ತಲೇ ಇರಬೇಕು. ಅದರಿಂದ ನಮ್ಮ ಕಣ್ಣುಗಳ ತೇಜಸ್ಸೂ ವೃದ್ಧಿಸುತ್ತದೆ.

ರತ್ನದಾನಂ ಚ ಸುಮಹತ್ಪುಣ್ಯಮುಕ್ತಂ ಜನಾಧಿಪ ।
ತಾನಿ ವಿಕ್ರೀಯ ಯಜತೇ ಬ್ರಾಹ್ಮಣೋ ಹ್ಯಭಯಂಕರಃ ॥೨೯॥

ರತ್ನದಾನವನ್ನು ಮಹಾಪುಣ್ಯಪ್ರಾಪಕವೆಂದು ಹೇಳುತ್ತಾರೆ. ಸರ್ವ ಪ್ರಾಣಿಗಳಿಗೂ ಅಭಯಂಕರನಾದ ಬ್ರಾಹ್ಮಣನು ದಾನದಿಂದ ಲಭಿಸಿದ ರತ್ನಗಳನ್ನು ಮಾರಿ ಬಂದ ಧನದಿಂದ ಯಜ್ಞವನ್ನು ಮಾಡುತ್ತಾನೆ.

ಯದ್ವೈ ದದಾತಿ ವಿಪ್ರೇಭ್ಯೋ ಬ್ರಾಹ್ಮಣಃ ಪ್ರತಿಗೃಹ್ಯ ವೈ।
ಉಭಯೋಃ ಸ್ಯಾತ್ತದಕ್ಷಯ್ಯಂ ದಾತುರಾದಾತುರೇವ ಚ ॥೩೦॥

ಬ್ರಾಹ್ಮಣನು ದಾನಿಯೊಬ್ಬನಿಂದ ರತ್ನವನ್ನು ದಾನವಾಗಿ ಪಡೆದು ಪುನಃ ಆ ರತ್ನವನ್ನೇ ಮತ್ತೊಬ್ಬ ಬ್ರಾಹ್ಮಣನಿಗೆ ದಾನಮಾಡಿದರೆ–ದಾನಿಗೂ ಮತ್ತು ಪ್ರತಿಗ್ರಾಹಿಗೂ ಅಕ್ಷಯವಾದ ಪುಣ್ಯವು ಪ್ರಾಪ್ತವಾಗುತ್ತದೆ.

ಯೋ ದದಾತಿ ಸ್ಥಿತಃ ಸ್ಥಿತ್ಯಾಂ ತಾದೃಶಾಯ ಪ್ರತಿಗ್ರಹಮ್ ।
ಉಭಯೋರಕ್ಷಯಂ ಧರ್ಮಂ ತಂ ಮನುಃ ಪ್ರಾಹ ಧರ್ಮವಿತ್ ॥

ಬ್ರಾಹ್ಮಣನು ತಾನೂ ಧರ್ಮದ ಮರ್ಯಾದೆಯಲ್ಲಿ ಸ್ಥಿರನಾಗಿದ್ದು, ತನಗೆ

ಸದೃಶನಾದ ಬ್ರಾಹ್ಮಣನಿಗೆ ತಾನು ಪ್ರತಿಗ್ರಹಿಸಿದ ದಾನವನ್ನೇ ಪುನಃ ದಾನವಾಗಿ ಕೊಟ್ಟರೆ–ದಾನವನ್ನು ಕೊಟ್ಟವನಿಗೂ ಮತ್ತು ಪಡೆದವನಿಗೂ ಅಕ್ಷಯವಾದ ಪುಣ್ಯವು ಲಭಿಸುವುದೆಂದು ಮನುವು ಹೇಳಿದ್ದಾನೆ.

ವಾಸಸಾಂ ಸಮ್ಪ್ರದಾನೇನ ಸ್ವದಾರನಿರತೋ ನರಃ ।
ಸುವಸ್ತ್ರಶ್ಚ ಸುವೇಷಶ್ಚ ಭವತೀತ್ಯನುಶುಶ್ರುಮ ॥೩೨॥

ಸ್ವಪತ್ನೀನಿಷ್ಠನಾದ ಮನುಷ್ಯನು ವಸ್ತ್ರದಾನವನ್ನು ಮಾಡುವುದರಿಂದ ಮನೋಹರವಾದ ವೇಷ-ಭೂಷಣಸಂಪನ್ನನೂ ಸುಂದರವಾದ ವಸ್ತ್ರಗಳುಳ್ಳವನೂ ಆಗುವನೆಂದು ನಾವು ಕೇಳಿದ್ದೇವೆ.

ಪುರುಷಶ್ರೇಷ್ಠನೇ! ಹೀಗೆ ನಾನು ಗೋದಾನ, ಸುವರ್ಣದಾನ ಮತ್ತು ತಿಲದಾನಗಳ ಮಹಿಮೆಯನ್ನು ಹಲವಾರು ಬಾರಿ ವೇದಶಾಸ್ತ್ರಗಳ ಪ್ರಾಮಾಣ್ಯವನ್ನು ಗಮನಿಸಿ ವರ್ಣಿಸಿದ್ದೇನೆ.

ವಿವಾಹಾಂಶ್ಚೈವ ಕುರ್ವೀತ ಪುತ್ರಾನುತ್ಪಾದಯೇತ ಚ ।
ಪುತ್ರಲಾಭೋ ಹಿ ಕೌರವ್ಯ ಸರ್ವಲಾಭಾದ್ವಿಶಿಷ್ಯತೇ ॥೩೪॥

ಕುರುನಂದನನೇ! ಮನುಷ್ಯರು ವಿವಾಹಗಳನ್ನು ಮಾಡಿಕೊಳ್ಳಬೇಕು. ಮಕ್ಕಳನ್ನು ಪಡೆಯಬೇಕು. ಪುತ್ರಲಾಭವು ಉಳಿದೆಲ್ಲ ಲಾಭಗಳಿಗಿಂತಲೂ ಶ್ರೇಷ್ಠವಾದುದು.”

ಒ೮ನೆಯ ಅಧ್ಯಾಯವು ಮುಗಿಯಿತು.

ಒ೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೋದಾನದ ಮಹಿಮೆ ಮತ್ತು ಗೋ–ಬ್ರಾಹ್ಮಣರ ರಕ್ಷಣೆಯಿಂದ ಲಭಿಸುವ ಪುಣ್ಯ

ಯುಧಿಷ್ಠಿರನು ಹೇಳುತ್ತಾನೆ :

ಭೂಯ ಏವ ಕುರುಶ್ರೇಷ್ಠ ದಾನಾನಾಂ ವಿಧಿಮುತ್ತಮಮ್ ।
ಕಥಯಸ್ವ ಮಹಾಪ್ರಾಜ್ಞ ಭೂಮಿದಾನಂ ವಿಶೇಷತಃ ॥೧॥

"ಮಹಾಪ್ರಾಜ್ಞನೇ! ಕುರುಶ್ರೇಷ್ಠ! ದಾನಗಳ ಉತ್ತಮವಿಧಿಯನ್ನು ಪುನಃ ಹೇಳು. ಅದರಲ್ಲಿಯೂ ವಿಶೇಷವಾಗಿ ಭೂದಾನದ ಮಹಿಮೆಯನ್ನು ಹೇಳು.

ಪೃಥಿವೀಂ ಕ್ಷತ್ರಿಯೋ ದದ್ಯಾದ್ಬ್ರಾಹ್ಮಣಾಯೇಷ್ಟಿಕರ್ಮಿಣೇ।
ವಿಧಿವತ್ಪ್ರತಿಗೃಹ್ಣೀಯಾನ್ನ ತ್ವನ್ಯೋ ದಾತುಮರ್ಹತಿ ॥೨॥

ಯಜ್ಞಮಾಡುವ ಬ್ರಾಹ್ಮಣನಿಗೆ ಕ್ಷತ್ರಿಯರಾಜನು ಮಾತ್ರವೇ ಭೂಮಿಯನ್ನು ದಾನವಾಗಿ ಕೊಡಬಲ್ಲನು. ಹಾಗೆ ಕ್ಷತ್ರಿಯನು ಕೊಡುವ ಭೂದಾನವನ್ನು ಬ್ರಾಹ್ಮಣನು ವಿಧಿವತ್ತಾಗಿ ಪ್ರತಿಗ್ರಹಿಸಬಲ್ಲನು. ಬೇರೆ ಯಾರೂ ಭೂದಾನವನ್ನು ಮಾಡಲಾರರು.

ಸರ್ವವರ್ಣೈಸ್ತು ಯಚ್ಛಕ್ಯಂ ಪ್ರದಾತುಂ ಫಲಕಾಂಕ್ಷಿಭಿಃ ।
ವೇದೇ ವಾ ಯತ್ಸಮಾಖ್ಯಾತಂ ತನ್ಮೇ ವ್ಯಾಖ್ಯಾತುಮರ್ಹಸಿ ॥೩॥

ಫಲಾಕಾಂಕ್ಷಿಗಳಾದ ಎಲ್ಲ ವರ್ಣದವರಿಗೂ ಯಾವುದನ್ನು ದಾನವಾಗಿ ಕೊಡಲು ಸಾಧ್ಯವಾಗುವುದೋ ಅಥವಾ ವೇದದಲ್ಲಿ ಯಾವ ದಾನವು ಪ್ರತಿಪಾದಿತವಾಗಿದೆಯೋ–ಅದರ ವಿಷಯವಾಗಿ ವಿವರಿಸಿ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ :

ತುಲ್ಯನಾಮಾನಿ ದೇಯಾನಿ ತ್ರೀಣಿ ತುಲ್ಯಫಲಾನಿ ಚ ।
ಸರ್ವಕಾಮಫಲಾನೀಹ ಗಾವಃ ಪೃಥ್ವೀ ಸರಸ್ವತೀ ॥೪॥

"ಗೋವು, ಭೂಮಿ ಮತ್ತು ಸರಸ್ವತೀ–ಈ ಮೂರಕ್ಕೂ 'ಗೌಃ'-ಎಂಬ ಸಮಾನವಾದ ಹೆಸರಿದೆ. ಈ ಮೂರನ್ನೂ ದಾನವಾಗಿ ಕೊಡಬೇಕು. ಈ ಮೂರರ ದಾನಫಲವೂ ಒಂದೇ ಆಗಿರುತ್ತದೆ. ಈ ಮೂರು ವಸ್ತುಗಳೂ ಮನುಷ್ಯನ ಸರ್ವಕಾಮನೆಗಳನ್ನೂ ಪೂರ್ಣಮಾಡಿಕೊಡುತ್ತವೆ.

ಯೋ ಬ್ರೂಯಾಚ್ಚಾಪಿ ಶಿಷ್ಯಾಯ ಧರ್ಮ್ಯಾಂ ಬ್ರಾಹ್ಮೀಂ ಸರಸ್ವತೀಮ್।
ಪೃಥಿವೀಗೋಪ್ರದಾನಾಭ್ಯಾಂ ತುಲ್ಯಂ ಸ ಫಲಮಶ್ನುತೇ ॥೫॥

ಯಾವ ಬ್ರಾಹ್ಮಣನು ತನ್ನ ಶಿಷ್ಯನಿಗೆ ಧರ್ಮಾನುಕೂಲವಾದ ಬ್ರಾಹ್ಮೀ ಸರಸ್ವತಿಯನ್ನು (ವೇದವಾಣಿಯನ್ನು) ಉಪದೇಶಿಸುವನೋ–ಅವನು ಭೂದಾನ-ಗೋದಾನಗಳಿಗೆ ಸಮಾನವಾದ ಫಲವನ್ನೇ ಹೊಂದುತ್ತಾನೆ.

ತಥೈವ ಗಾಃ ಪ್ರಶಂಸನ್ತಿ ನ ತು ದೇಯಂ ತತಃ ಪರಮ್ ।
ಸಂನಿಕೃಷ್ಟಫಲಾಸ್ತಾ ಹಿ ಲಘ್ವರ್ಥಾಶ್ಚ ಯುಧಿಷ್ಠಿರ ॥೬॥

ಅದೇ ರೀತಿಯಲ್ಲಿ ಗೋದಾನದ ಪ್ರಶಂಸೆಯನ್ನೂ ಮಾಡುತ್ತಾರೆ. ಗೋದಾನಕ್ಕಿಂತಲೂ ಮಿಗಿಲಾದ ದಾನವೇ ಇಲ್ಲ. ಗೋವುಗಳು ಶೀಘ್ರವಾಗಿ ಫಲಕೊಡತಕ್ಕುವುಗಳು. ಮೇಲಾಗಿ ಅಲ್ಪದ್ರವ್ಯದಿಂದ ಸಾಧಿಸಲ್ಪಡ ತಕ್ಕುವುಗಳು.

ಮಾತರಃ ಸರ್ವಭೂತಾನಾಂ ಗಾವಃ ಸರ್ವಸುಖಪ್ರದಾಃ ।
ವೃದ್ಧಿಮಾಕಾಂಕ್ಷತಾ ನಿತ್ಯಂ ಗಾವಃ ಕಾರ್ಯಾಃ ಪ್ರದಕ್ಷಿಣಾಃ ॥೭॥

ಗೋವುಗಳು ಎಲ್ಲ ಪ್ರಾಣಿಗಳಿಗೂ ಮಾತೃಸ್ವರೂಪವಾಗಿವೆ. ಎಲ್ಲರಿಗೂ ಸುಖವನ್ನುಂಟುಮಾಡತಕ್ಕುವುಗಳು. ಅಭ್ಯುದಯವನ್ನು ಅಪೇಕ್ಷಿಸುವ ಮನುಷ್ಯನು ಯಾವಾಗಲೂ ಗೋವುಗಳನ್ನು ಬಲಭಾಗಕ್ಕೆ ಬಿಟ್ಟುಕೊಂಡು ಹೋಗಬೇಕು. (ಪ್ರದಕ್ಷಿಣೆ ಮಾಡಬೇಕು.)

ಸಂತಾಡ್ಯಾ ನ ತು ಪಾದೇನ ಗವಾಂ ಮಧ್ಯೇ ನ ಚ ವ್ರಜೇತ್ ।
ಮಙ್ಗಲಾಯತನಂ ದೇವ್ಯಸ್ತಸ್ಮಾತ್ಪೂಜ್ಯಾಃ ಸದೈವ ಹಿ ॥೮॥

ಗೋವುಗಳನ್ನು ಕಾಲಿನಿಂದ ಒದೆಯಬಾರದು. ಅವುಗಳ ಮಧ್ಯದಲ್ಲಿ ಹೋಗಬಾರದು. ಗೋವುಗಳು ಮಂಗಳಕ್ಕೆ ಆಶ್ರಯಭೂತವಾದ ದೇವತೆಗಳೇ ಆಗಿವೆ. ಆದುದರಿಂದ ಅವುಗಳು ಸರ್ವಕಾಲಗಳಲ್ಲಿಯೂ ಪೂಜೆಮಾಡಲು ಯೋಗ್ಯವಾದುವುಗಳಾಗಿವೆ.

*** ಪ್ರಚೋದನಂ ದೇವಕೃತಂ ಗವಾಂ ಕರ್ಮಸು ವರ್ತತಾಮ್ ।**
ಪೂರ್ವಮೇವಾಕ್ಷರಂ ಚಾನ್ಯದಭಿಧೇಯಂ ತತಃ ಪರಮ್ ॥೯॥

ಗೋವುಗಳನ್ನು ಕೆಲಸಗಳಿಗೆ ಉಪಯೋಗಿಸಿಕೊಳ್ಳಬಹುದು. ಅವು

---

*ಈ ಶ್ಲೋಕದ ಉತ್ತರಾರ್ಧವು ತುಂಬಾ ತೊಡಕಾಗಿರುವುದು. ಶಬ್ದಗಳು ಅರ್ಥವಾಗುವಂತಿದ್ದರೂ ಸಮನ್ವಯಿಸುವುದು ಕಷ್ಟ. ಉತ್ತರಾರ್ಧದಲ್ಲಿ ಪಾಠಭೇದವಿದೆ. 'ನಾನ್ಯದಭಿಧೇಯಂ ಕಥಂಚನ-ಚಾನ್ಯದಭಿಧೇಯಂ ತತಃ ಪರಮ್-ಹೀಗೆ ಎರಡು ಪಾಠಗಳಿವೆ. ವ್ಯಾಖ್ಯಾನಕಾರರು **ಪೂರ್ವಮೇವಾಕ್ಷರಂ** ಎಂಬುದಕ್ಕೆ **ಪೂರ್ವಂ ಯಜ್ಞಾರ್ಥಮೇವ ಚೋದನಂ, ಅಕ್ಷರಂ**=ಶ್ರೇಯಸ್ಕರವು.

ಗಳನ್ನು ಕಾರ್ಯಾರ್ಥವಾಗಿ ಪ್ರೇರಿಸುವುದು ದೇವತೆಗಳೇ ಮೊದಲಿನಿಂದ ಏರ್ಪಡಿಸಿರುವ ಶಾಶ್ವತವಾದ ಧರ್ಮವಾಗಿದೆ.

ಹೀಗೆ ಅವುಗಳ ಸೇವೆಯನ್ನು ಸ್ವೀಕರಿಸುವುದಲ್ಲದೇ ಇನ್ನೂ ಕೆಲವು ವಿಷಯಗಳನ್ನು ಅವುಗಳ ಬಗೆಗೆ ಹೇಳಬೇಕಾಗಿದೆ. (ಗೋವುಗಳ ಸೇವೆಯನ್ನು ಸ್ವೀಕರಿಸುವುದರಲ್ಲಿ ದೋಷವಿಲ್ಲ. ಅದು ದೈವಿಕವಾದ ನಿಯಮ. ದೇವತೆಗಳಿಗೂ ಸಮ್ಮತವಾದುದು. ಏಕೆಂದರೆ : ದೇವ-ಪಿತೃಕಾರ್ಯಗಳಿಗೆ ಬೇಕಾದ ಹವ್ಯ-ಕವ್ಯಗಳೂ, ಯಜ್ಞಕ್ಕೆ ಬೇಕಾದ ಉಳುಮೆ, ಪದಾರ್ಥಗಳ ಸಾಗಾಣಿಕೆ–ಇತ್ಯಾದಿಗಳೂ ಹಸುಗಳ ಮತ್ತು ಎತ್ತುಗಳ ಸೇವೆಯನ್ನು ಅಪೇಕ್ಷಿಸುತ್ತವೆ. ಮನುಷ್ಯರ ಕಾರ್ಯಕ್ಕೆ ಮಾತ್ರವಲ್ಲದೇ ದೇವಕಾರ್ಯಕ್ಕೂ ಅವುಗಳ ಸೇವೆ ಅನಿವಾರ್ಯವಾಗಿರುವುದರಿಂದ ಅದು, ದೇವತೆಗಳು ಸಹಜವಾಗಿ ಏರ್ಪಡಿಸಿರುವ ನಿಯಮವೆಂದೇ ತಿಳಿಯಬೇಕು. ಆದರೆ ಅವುಗಳಿಂದ ಉಪಯೋಗವನ್ನು ಪಡೆಯುವುದು ಮಾತ್ರವಲ್ಲದೆ ಅವುಗಳ ಸೇವೆಯನ್ನು ಭಕ್ತಿ-ಶ್ರದ್ಧೆಗಳಿಂದ ಮಾಡುವುದೂ ಅತ್ಯಾವಶ್ಯಕ. ಅವುಗಳನ್ನು ಸರ್ವಥಾ ಹಿಂಸಿಸಬಾರದು. ಅವುಗಳ ರಕ್ಷಣೆಯನ್ನು ಮಾಡಬೇಕು.)

ಪ್ರಚಾರೇ ವಾ ನಿವಾತೇ ವಾ ಬುಧೋ ನೋದ್ವೇಜಯೇತ ಗಾಃ ।
ತೃಷಿತಾ ಹ್ಯಭಿವೀಕ್ಷನ್ತ್ಯೋ ನರಂ ಹನ್ಯುಃ ಸಬಾನ್ಧವಮ್ ॥೧೦॥

ವಿದ್ವಾಂಸನಾದವನು, ಗೋವುಗಳು ಹುಲ್ಲುಮೇಯುವ ಸ್ಥಳದಲ್ಲಿರುವಾಗಲೂ (ಹುಲ್ಲುಗಾವಲಿನಲ್ಲಿರುವಾಗಲೂ) ಉಪದ್ರವವಿಲ್ಲದ ಜಾಗದಲ್ಲಿ

ಅನ್ಯತ್ ಕೃಷ್ಯಾದ್ಯರ್ಥಂ ತು ತತಃ ಪರಂ ವೈದಿಕಕರ್ಷಣಮನುಪ್ರವೃತ್ತಂ **ಅಭಿಧೇಯಂ ವಾಚ್ಯಂ ಅರ್ಥಾತ್ ನಿನ್ದ್ಯಂ.** ಅನಂತರ ವೈದಿಕಕರ್ಮವನ್ನು ಅನುಸರಿಸಿ ಪ್ರವೃತ್ತವಾದ ಕೃಷಿಕರ್ಷಣವು ನಿಂದ್ಯವಾದುದು. ಮೊದಲು ಯಜ್ಞಭೂಮಿಯನ್ನು ಉಳಲು ಮಾತ್ರವೇ ಎತ್ತುಗಳನ್ನು ಉಪಯೋಗಿಸುತ್ತಿದ್ದರು. ಅನಂತರ ಅದನ್ನು ಬೇಸಾಯಕ್ಕೂ ಉಪಯೋಗಿಸಲು ಪ್ರಾರಂಭಿಸಿದರು. ಯಜ್ಞಕ್ಕಾಗಿ ಭೂಮಿಯನ್ನು ಉಳುವುದೂ ಮತ್ತು ಆ ಸಮಯದಲ್ಲಿ ಪ್ರಚೋದಿಸುವುದೂ ಶ್ರೇಯಸ್ಕರ. ಬೇಸಾಯಕ್ಕಾಗಿ ಉಪಯೋಗಿಸುವುದಾಗಲೀ ಆ ಸಮಯದಲ್ಲಿ ಚಾವಟಿಯಿಂದ ಎತ್ತುಗಳನ್ನು ಹೊಡೆಯುವುದಾಗಲೀ ನಿಂದ್ಯವಾದುದು–ಇದು ವ್ಯಾಖ್ಯಾನಕಾರರ ಅಭಿಪ್ರಾಯವಾಗಿದೆ.

ಮೆಲುಕುಹಾಕುತ್ತಾ ಮಲಗಿರುವಾಗಲೂ ಅವುಗಳನ್ನು ಉದ್ವೇಗಗೊಳಿಸ ಬಾರದು. ಬಾಯಾರಿದ ಹಸುಗಳು ನೀರುಬೇಕೆಂಬುದನ್ನು ಸೂಚಿಸುತ್ತಾ ತಮ್ಮ ರಕ್ಷಕನ ಕಡೆಗೆ ನೋಡುತ್ತವೆ.

ಆ ಸಮಯದಲ್ಲೇನಾದರೂ ನೀರನ್ನು ಕುಡಿಸಲು ಗೋಪಾಲಕನು ಉದಾಸೀನಮಾಡಿದರೆ ಕ್ರೂರವಾದ ದೃಷ್ಟಿಯಿಂದ ನೋಡುತ್ತಾ ಗೋಪಾಲ ನನ್ನು ಬಂಧುಗಳ ಸಮೇತ ಸುಟ್ಟುಹಾಕಿಬಿಡುತ್ತವೆ.

ಪಿತೃಸದ್ಮಾನಿ ಸತತಂ ದೇವತಾಯತನಾನಿ ಚ ।
ಪೂಯನ್ತೇ ಶಕೃತಾ ಯಾಸಾಂ ಪೂತಂ ಕಿಮಧಿಕಂ ತತಃ ॥೧೧॥

ಹಸುಗಳ ಸಗಣಿಯು ಪಿತೃಗೃಹಗಳನ್ನು (ಪಿತೃಗಳ ಸಲುವಾಗಿ ಶ್ರಾದ್ಧಮಾಡುವ ಸ್ಥಳಗಳನ್ನು) ಪವಿತ್ರಗೊಳಿಸುತ್ತದೆ. ದೇವಮಂದಿರಗಳನ್ನೂ ಪವಿತ್ರಗೊಳಿಸುತ್ತದೆ. (ಸಗಣಿಯಿಂದ ಸಾರಿಸಿದರೆ ದೇವಮಂದಿರಗಳೂ ಶ್ರಾದ್ಧಮಾಡುವ ಸ್ಥಳಗಳೂ ಪವಿತ್ರವಾಗುತ್ತವೆ.) ಇದಕ್ಕಿಂತಲೂ ಅಧಿಕವಾದ ಪವಿತ್ರವಸ್ತುವು ಪ್ರಪಂಚದಲ್ಲಿ ಬೇರೆ ಯಾವುದಿದೆ? (ಸಗಣಿಯೇ ಮತ್ತೊಂದನ್ನು ಪವಿತ್ರಗೊಳಿಸುವಷ್ಟು ಪಾವಿತ್ರ್ಯವನ್ನು ಹೊಂದಿರುವಾಗ ಹಸುವಿನ ವಿಷಯವಾಗಿ ಹೇಳುವುದೇನಿದೆ?) [ಸಗಣಿಯಿಂದ ನೆಲವನ್ನು ಸಾರಿಸುವುದರಿಂದ ರೋಗಜನಕವಾದ ಹುಳು-ಹುಪ್ಪಟೆಗಳು ನಾಶವಾಗಿ ಮನೆಯಲ್ಲಿ ವಾಸಿಸುವವರ ಆರೋಗ್ಯಕ್ಕೆ ಕಾರಣವಾಗುವುದೆಂದು ಇತ್ತೀಚೆಗೆ ಅಮೆರಿಕಾದ ವಿಜ್ಞಾನಿಗಳು ಹೇಳಿದ್ದಾರೆ.]

ಘಾಸಮುಷ್ಟಿಂ ಪರಗವೇ ದದ್ಯಾತ್ಸಂವತ್ಸರಂ ತು ಯಃ ।
ಅಕೃತ್ವಾ ಸ್ವಯಮಾಹಾರಂ ವ್ರತಂ ತತ್ಸರ್ವಕಾಮಿಕಮ್ ॥೧೨॥

ಆಹಾರವನ್ನು ತೆಗೆದುಕೊಳ್ಳುವ ಮೊದಲು ಒಂದು ವರ್ಷ ಪರ್ಯಂತವಾಗಿ ಅನುದಿನವೂ ಒಂದು ಮುಷ್ಟಿ ಹುಲ್ಲನ್ನು ಬೇರೆಯವರ ಹಸುವಿಗೆ ತಿನ್ನಿಸುವ ವ್ರತವು, ವ್ರತನಿಷ್ಠನ ಸರ್ವಕಾಮನೆಗಳನ್ನೂ ಪೂರ್ಣಗೊಳಿಸುವುದಾಗಿದೆ.

ಸ ಹಿ ಪುತ್ರಾನ್ಯಶೋಽರ್ಥಂ ಚ ಶ್ರಿಯಂ ಚಾಪ್ಯಧಿಗಚ್ಛತಿ ।
ನಾಶಯತ್ಯಶುಭಂ ಚೈವ ದುಃಸ್ವಪ್ನಂ ಚಾಪ್ಯಪೋಹತಿ ॥೧೩॥

ಈ ವ್ರತವನ್ನು ಪೂರೈಸಿದವನು ಪುತ್ರರನ್ನೂ, ಧನವನ್ನೂ,

ಸಂಪತ್ತನ್ನೂ ಪಡೆದುಕೊಳ್ಳುತ್ತಾನೆ. ಘಾಸಮುಷ್ಟಿವ್ರತವು ಅಶುಭವನ್ನೂ, ದುಃಸ್ವಪ್ನವನ್ನೂ ಹೋಗಲಾಡಿಸುತ್ತದೆ."

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದೇಯಾಃ ಕಿಂಲಕ್ಷಣಾ ಗಾವಃ ಕಾಶ್ಚಾಪಿ ಪರಿವರ್ಜಯೇತ್ ।
ಕೀದೃಶಾಯ ಪ್ರದಾತವ್ಯಾ ನ ದೇಯಾಃ ಕೀದೃಶಾಯ ಚ ॥೧೪॥

"ಪಿತಾಮಹನೇ! ಎಂತಹ ಲಕ್ಷಣಗಳುಳ್ಳ ಗೋವುಗಳನ್ನು ದಾನ ಮಾಡಬೇಕು? ಎಂತಹ ಗೋವುಗಳನ್ನು ದಾನಮಾಡಬಾರದು? ಎಂತಹ ಬ್ರಾಹ್ಮಣನಿಗೆ ಗೋದಾನಮಾಡಬೇಕು.? ಎಂತಹವನಿಗೆ ದಾನಮಾಡ ಬಾರದು?"

ಭೀಷ್ಮನು ಹೇಳುತ್ತಾನೆ :

ಅಸದ್ವೃತ್ತಾಯ ಪಾಪಾಯ ಲುಬ್ಧಾಯಾನೃತವಾದಿನೇ ।
ಹವ್ಯಕವ್ಯವ್ಯಪೇತಾಯ ನ ದೇಯಾ ಗೌಃ ಕಥಂಚನ ॥೧೫॥

"ದುರಾಚಾರಿಗೂ, ಪಾಪಿಷ್ಠನಿಗೂ, ಲೋಭಿಗೂ, ಸುಳ್ಳನಿಗೂ, ದೇವಯಜ್ಞಗಳನ್ನೂ ಶ್ರಾದ್ಧಕರ್ಮಗಳನ್ನೂ ಮಾಡದೇ ಇರುವವನಿಗೂ– ಯಾವುದೇ ಕಾರಣದಿಂದಲೂ ಗೋದಾನವನ್ನು ಮಾಡಬಾರದು.

ಭಿಕ್ಷವೇ ಬಹುಪುತ್ರಾಯ ಶ್ರೋತ್ರಿಯಾಯಾಹಿತಾಗ್ನಯೇ ।
ದತ್ತ್ವಾ ದಶಗವಾಂ ದಾತಾ ಲೋಕಾನಾಪ್ನೋತ್ಯನುತ್ತಮಾನ್ ॥೧೬॥

ಬಹುಪುತ್ರವಂತನೂ, ನಿತ್ಯಾಗ್ನಿಹೋತ್ರಿಯೂ, ವೇದಾಂತನಿಷ್ಠನೂ ಆಗಿರುವ ಶ್ರೋತ್ರಿಯನಿಗೆ ಹತ್ತು ಗೋವುಗಳನ್ನು ದಾನಕೊಡುವವನು ಅವಸಾನಾನಂತರದಲ್ಲಿ ಉತ್ತಮವಾದ ಲೋಕಗಳನ್ನು ಹೊಂದುತ್ತಾನೆ.

ಯಶ್ಚೈವ ಧರ್ಮಂ ಕುರುತೇ ತಸ್ಯ ಧರ್ಮಫಲಂ ಚ ಯತ್ ।
ಸರ್ವಸ್ಯೈವಾಂಶಭಾಗ್ದಾತಾ ತನ್ನಿಮಿತ್ತಂ ಪ್ರವೃತ್ತಯಃ ॥೧೭॥

ಗೋದಾನವನ್ನು ತೆಗೆದುಕೊಂಡವನು-ಗೋದಾನವನ್ನು ಪಡೆದ ನಂತರ ಆತ್ಮಪ್ರೇರಿತನಾಗಿ ಯಾವ ಧರ್ಮಾಚರಣೆಯನ್ನು ಮಾಡುವನೋ ಅಂತಹ ಧರ್ಮಾಚರಣೆಯಿಂದ ಲಭ್ಯವಾಗುವ ಸಂಪೂರ್ಣಫಲದ ಒಂದು ಭಾಗವು ಗೋವನ್ನು ದಾನವಾಗಿ ಕೊಟ್ಟವನಿಗೂ ಸೇರುತ್ತದೆ. ಗೋದಾನವನ್ನು

ಪಡೆದುದರ ನಿಮಿತ್ತವಾಗಿ ಪ್ರತಿಗ್ರಾಹಿಗೆ ಧರ್ಮದಲ್ಲಿ ಪ್ರವೃತ್ತಿಯುಂಟಾದುದರಿಂದ ಆ ಧರ್ಮಕಾರ್ಯದ ಫಲದಲ್ಲಿ ಒಂದಂಶವು ದಾನಿಗೆ ಸೇರುವುದು ಸಹಜವಾಗಿದೆ.

ಯಶ್ಚೈವಮುತ್ಪಾದಯತೇ ಯಶ್ಚೈನಂ ತ್ರಾಯತೇ ಭಯಾತ್ ।
ಯಶ್ಚಾಸ್ಯ ಕುರುತೇ ವೃತ್ತಿಂ ಸರ್ವೇ ತೇ ಪಿತರಸ್ತ್ರಯಃ ॥೧೮॥

ಜನ್ಮದಾತನು, ಜೀವಭಯದಿಂದ ರಕ್ಷಿಸುವವನು ಮತ್ತು ಜೀವನಕ್ಕೆ ವೃತ್ತಿಯನ್ನು ಕಲ್ಪಿಸಿಕೊಡುವವನು–ಈ ಮೂವರೂ ಪಿತೃಗಳಾಗುತ್ತಾರೆ.

ಕಲ್ಮಷಂ ಗುರುಶುಶ್ರೂಷಾ ಹನ್ತಿ ಮಾನೋ ಮಹದ್ಯಶಃ ।
ಅಪುತ್ರತಾಂ ತ್ರಯಃ ಪುತ್ರಾ ಅವೃತ್ತಿಂ ದಶ ಧೇನವಃ ॥೧೯॥

ಗುರುಜನರ ಶುಶ್ರೂಷೆಯು ಸಮಸ್ತಪಾಪಗಳನ್ನೂ ಹೋಗಲಾಡಿಸುತ್ತದೆ. ದುರಭಿಮಾನವು ಮಹಾಯಶಸ್ಸನ್ನು ಹಾಳುಮಾಡುತ್ತದೆ. ಮೂವರು ಮಕ್ಕಳು ಅಪುತ್ರತ್ವದ ದೋಷವನ್ನು ನಿವಾರಣೆಮಾಡುತ್ತಾರೆ. ಹಾಲು ಕರೆಯುವ ಹತ್ತು ಹಸುಗಳು ವೃತ್ತಿಹೀನತೆಯನ್ನು ದೂರಮಾಡುತ್ತವೆ.

ವೇದಾನ್ತನಿಷ್ಠಸ್ಯ ಬಹುಶ್ರುತಸ್ಯ
ಪ್ರಜ್ಞಾನತೃಪ್ತಸ್ಯ ಜಿತೇನ್ದ್ರಿಯಸ್ಯ ।
ಶಿಷ್ಟಸ್ಯ ದಾನ್ತಸ್ಯ ಯತಸ್ಯ ಚೈವ
ಭೂತೇಷು ನಿತ್ಯಂ ಪ್ರಿಯವಾದಿನಶ್ಚ ॥೨೦॥
ಯಃ ಕ್ಷುದ್ಭಯಾದ್ವೈ ನ ವಿಕರ್ಮ ಕುರ್ಯಾ-
ನ್ಮೃದುಶ್ಚ ಶಾನ್ತೋ ಹ್ಯತಿಥಿಪ್ರಿಯಶ್ಚ ।
ವೃತ್ತಿಂ ದ್ವಿಜಾಯಾತಿಸೃಜೇತ ತಸ್ಮೈ
ಯಸ್ತುಲ್ಯಶೀಲಶ್ಚ ಸಪುತ್ರದಾರಃ ॥೨೧॥

ವೇದಾಂತನಿಷ್ಠನಾದ, ಶಾಸ್ತ್ರಪಾರಂಗತನಾದ, ಆಧ್ಯಾತ್ಮಿಕಜ್ಞಾನದಿಂದ ತೃಪ್ತನಾಗಿರುವ, ಇಂದ್ರಿಯಗಳನ್ನು ನಿಗ್ರಹಿಸಿರುವ, ಪ್ರಯತ್ನಶೀಲನಾದ, ಶಿಷ್ಟನಾದ, ಮನೋನಿಗ್ರಹಿಯಾದ, ಸಮಸ್ತಪ್ರಾಣಿಗಳ ವಿಷಯದಲ್ಲಿಯೂ (ಎಲ್ಲರೊಡನೆಯೂ) ಪ್ರಿಯವಾದ ಮಾತುಗಳನ್ನಾಡುವ, ಹಸಿವಿನ ಭಯದಿಂದಲಾದರೂ ದುಷ್ಕಾರ್ಯವನ್ನು ಮಾಡದಿರುವ, ಮೃದುಸ್ವಭಾವದವನಾದ,

ಶಾಂತನಾದ, ಅತಿಥಿಪ್ರಿಯನಾದ, ಸರ್ವರನ್ನೂ ಸಮಭಾವದಿಂದ ಕಾಣುವ, ಪತ್ನೀ-ಪುತ್ರಯುಕ್ತನಾಗಿರುವ ಬ್ರಾಹ್ಮಣನಿಗೆ ಸಂಸಾರನಿರ್ವಹಣೆಗಾಗಿ ರಾಜನು ವೃತ್ತಿಯನ್ನು ಕಲ್ಪಿಸಿಕೊಡಬೇಕು.

ಶುಭೇ ಪಾತ್ರೇ ಯೇ ಗುಣಾ ಗೋಪ್ರದಾನೇ
ತಾವಾನ್ದೋಷೋ ಬ್ರಾಹ್ಮಣಸ್ವಾಪಹಾರೇ ।
ಸರ್ವಾವಸ್ಥಂ ಬ್ರಾಹ್ಮಣಸ್ವಾಪಹಾರೋ
ದಾರಾಶ್ಚೈಷಾಂ ದೂರತೋ ವರ್ಜನೀಯಾಃ ॥೨೨॥

ಸತ್ಪಾತ್ರನಾದ ಬ್ರಾಹ್ಮಣನಿಗೆ ಗೋದಾನಮಾಡುವುದರಿಂದ ಎಷ್ಟು ಪುಣ್ಯವು ಪ್ರಾಪ್ತವಾಗುವುದೋ-ಅಷ್ಟೇ ಪಾಪವು ಅವನ ಸ್ವತ್ತನ್ನು ಅಪಹರಿಸುವುದರಿಂದ ಪ್ರಾಪ್ತವಾಗುತ್ತದೆ. ಆದುದರಿಂದ ಯಾವುದೇ ಪರಿಸ್ಥಿತಿಯಲ್ಲಿಯೂ ಬ್ರಾಹ್ಮಣರ ಸ್ವತ್ತನ್ನು ಅಪಹರಿಸಬಾರದು ಮತ್ತು ಅವರ ಪತ್ನಿಯರನ್ನು ದೂರದಿಂದಲೇ ಪರಿತ್ಯಜಿಸಬೇಕು.”

೬೯ನೆಯ ಅಧ್ಯಾಯವು ಮುಗಿಯಿತು.

೭೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣನ ಸ್ವತ್ತನ್ನು ಅಪಹರಿಸುವುದರಿಂದ ಉಂಟಾಗುವ ಹಾನಿಯ ವಿಷಯದಲ್ಲಿ ದೃಷ್ಟಾಂತರೂಪವಾಗಿ ನೃಗರಾಜನ ಉಪಾಖ್ಯಾನ

ಭೀಷ್ಮನು ಹೇಳುತ್ತಾನೆ :

ಅತ್ರೈವ ಕೀರ್ತ್ಯತೇ ಸದ್ಭಿರ್ಬ್ರಾಹ್ಮಣಸ್ವಾಭಿಮರ್ಶನೇ ।
ನೃಗೇಣ ಸುಮಹತ್ಕೃಚ್ಛ್ರಂ ಯದವಾಪ್ತಂ ಕುರೂದ್ವಹ ॥೧॥

“ಕುರುಶ್ರೇಷ್ಠನೇ! ಈ ವಿಷಯದಲ್ಲಿ ಸತ್ಪುರುಷರು ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ್ದರಿಂದ ನೃಗರಾಜನಿಗೆ ಒದಗಿದ ಮಹಾಸಂಕಟವನ್ನು ದೃಷ್ಟಾಂತವಾಗಿ ಹೇಳುತ್ತಾರೆ. ಹಿಂದೆ ದ್ವಾರಕಾಪಟ್ಟಣವನ್ನು ಕಟ್ಟುತ್ತಿದ್ದಾಗ ಹುಲ್ಲಿನಿಂದಲೂ ಬಳ್ಳಿಗಳಿಂದಲೂ ಸಮಾವೃತವಾಗಿದ್ದ ದೊಡ್ಡದೊಂದು ಬಾವಿಯು ಗೋಚರಿಸಿತೆಂಬುದನ್ನು ನಾವೂ ಕೇಳಿದ್ದೆವು. ಆ ಬಾವಿಯಿಂದ

ನೀರನ್ನು ತೆಗೆದುಕೊಳ್ಳಬೇಕೆಂಬ ಆಶಯದಿಂದ ಅಲ್ಲಿದ್ದ ಜನರು ಬಹಳವಾಗಿ ಪ್ರಯತ್ನಿಸುತ್ತಿದ್ದರು. ಬಹಳವಾಗಿ ಶ್ರಮಪಟ್ಟು ಬಾವಿಯ ಸುತ್ತಲೂ ಬೆಳೆದಿದ್ದ ಹುಲ್ಲು-ಬಳ್ಳಿಗಳನ್ನು ತೆಗೆದುಹಾಕಿದನಂತರ ಆ ಬಾವಿಯ ನೀರಿನಲ್ಲಿ ದೊಡ್ಡದಾದ ಶರೀರವನ್ನು ಹೊಂದಿದ್ದ ಓತಿಕೇತವಿದ್ದುದನ್ನು ನೋಡಿದರು. ಸಾವಿರಾರು ಜನರು ಸೇರಿ ಅದನ್ನು ಮೇಲೆತ್ತಲು ಪ್ರಯತ್ನಿಸಿದರು. ಪರ್ವತೋಪಮವಾಗಿದ್ದ ಆ ಓತಿಕೇತವನ್ನು ಚರ್ಮದ ಪಟ್ಟಿಯಿಂದ ಬಿಗಿದು ಹಗ್ಗಗಳ ಮೂಲಕವಾಗಿ ಮೇಲಕ್ಕೆಳೆದುಕೊಳ್ಳಲು ಪ್ರಯತ್ನಿಸಿದರು. ಅವರೆಷ್ಟು ಪ್ರಯತ್ನಿಸಿದರೂ ಆ ಮಹಾಪ್ರಾಣಿಯನ್ನು ಬಾವಿಯಿಂದ ಮೇಲಕ್ಕೆ ತರಲು ಅವರಿಗೆ ಸಾಧ್ಯವಾಗಲೇ ಇಲ್ಲ. ಬಳಿಕ ಅವರೆಲ್ಲರೂ ಶ್ರೀಕೃಷ್ಣನ ಬಳಿಗೆ ಹೋಗಿ ಹೇಳಿದರು:

“ಕೃಷ್ಣ! ಅಲ್ಲಿರುವ ಬಾವಿಯೊಳಗೆ ದೊಡ್ಡದಾದ ಓತಿಕೇತವು ಬಿದ್ದು ಬಿಟ್ಟಿದೆ. ಅದು ಬಾವಿಯೆಲ್ಲವನ್ನೂ ಆವರಿಸಿಕೊಂಡುಬಿಟ್ಟಿದೆ. ಅದನ್ನು ಮೇಲಕ್ಕೆತ್ತುವವರೇ ಯಾರೂ ಇಲ್ಲ. ನಾವಂತೂ ನಮ್ಮ ಪ್ರಯತ್ನದಲ್ಲಿ ವಿಫಲರಾದೆವು.”

ಅವರ ಮಾತನ್ನು ಕೇಳಿ ಶ್ರೀಕೃಷ್ಣನು ಬಾವಿಯ ಬಳಿಗೆ ಹೋದನು. ಕ್ಷಣಮಾತ್ರದಲ್ಲಿ ಬಾವಿಯಲ್ಲಿದ್ದ ಓತಿಕೇತವನ್ನು ಮೇಲಕ್ಕೆತ್ತಿದನು. ಶ್ರೀಕೃಷ್ಣನ ಸ್ಪರ್ಶಮಾತ್ರದಿಂದ ಓತಿಕೇತದ ಶರೀರದಿಂದ ರಾಜನೊಬ್ಬನು ಹೊರ ಬಂದನು. ಶ್ರೀಕೃಷ್ಣನು ರಾಜನನ್ನು ನೋಡಿ ‘ನೀನಾರು?’–ಎಂದು ಪ್ರಶ್ನಿಸಿದನು. ರಾಜನು ತನ್ನ ಪರಿಚಯಮಾಡಿಕೊಡುತ್ತಾ ಹಿಂದಿನ ಜನ್ಮದಲ್ಲಿ ತಾನು ನೃಗನೆಂಬ ಹೆಸರಿನಿಂದ ಪ್ರಸಿದ್ಧನಾಗಿದ್ದೆನೆಂದೂ, ಒಂದು ಸಾವಿರ ಯಜ್ಞಗಳನ್ನು ಮಾಡಿದ್ದೆನೆಂದೂ ಹೇಳಿದನು.

ಹಾಗೆ ಹೇಳಿದ ನೃಗನನ್ನು ಮಾಧವನು ಪ್ರಶ್ನಿಸಿದನು.

ಶುಭಂ ತ್ವಯಾ ಕರ್ಮ ಕೃತಂ ನ ಪಾಪಕಮ್ ।
ಕಥಂ ಭವಾನ್ದುರ್ಗತಿಮೀದೃಶೀಂ ಗತೋ
ನರೇನ್ದ್ರ ತದ್ಬ್ರೂಹಿ ಕಿಮೇತದೀದೃಶಮ್ ॥೮॥

“ನೀನು ಶುಭಕಾರ್ಯವನ್ನೇ ಮಾಡಿರುವೆ. ಪಾಪಕಾರ್ಯವನ್ನೇನೂ ಮಾಡಿರುವುದಿಲ್ಲ. ಹೀಗಿರುವಾಗ ನೀನು ಇಂತಹ ದುರ್ಗತಿಯನ್ನೇಕೆ

ಹೊಂದಿದೆ? ಇಂತಹ ಕಷ್ಟವು ನಿನಗೇಕೆ ಪ್ರಾಪ್ತವಾಯಿತು? ಆ ವಿಷಯವನ್ನು ಹೇಳು.

ಶತಂ ಸಹಸ್ರಾಣಿ ಗವಾಂ ಶತಂ ಪುನಃ
ಪುನಃ ಶತಾನ್ಯಷ್ಟಶತಾಯುತಾನಿ ।
ತ್ವಯಾ ಪುರಾ ದತ್ತಮಿತೀಹ ಶುಶ್ರುಮ
ನೃಪ ದ್ವಿಜೇಭ್ಯಃ ಕ್ವ ನು ತದ್ಗತಂ ತವ ॥೯॥

ಹಿಂದೆ ನೀನು ಬ್ರಾಹ್ಮಣರಿಗೆ ಒಂದು ಲಕ್ಷ ಗೋವುಗಳನ್ನು ದಾನ ಮಾಡಿರುವೆಯೆಂಬುದನ್ನು ನಾವೂ ಕೇಳಿರುವೆವು. ಇಷ್ಟು ಮಾತ್ರವಲ್ಲ. ಎರಡನೆಯ ಬಾರಿಗೆ ಪುನಃ ನೂರು ಗೋವುಗಳನ್ನೂ, ಮೂರನೆಯ ಬಾರಿಗೆ ಹಲವು ನೂರು ಗೋವುಗಳನ್ನೂ, ನಾಲ್ಕನೆಯ ಬಾರಿಗೆ ಎಂಬತ್ತು ಲಕ್ಷಗೋವುಗಳನ್ನೂ ಬ್ರಾಹ್ಮಣರಿಗೆ ದಾನಮಾಡಿರುವೆಯೆಂಬುದನ್ನೂ ಕೇಳಿರುವೆವು. ಹೀಗೆ ಲಕ್ಷೋಪಲಕ್ಷ ಗೋವುಗಳನ್ನು ದಾನಮಾಡಿದುದರ ಪುಣ್ಯಫಲವು ಎಲ್ಲಿ ಹೋಯಿತು?"

ಅದಕ್ಕುತ್ತರವಾಗಿ ನೃಗನು ಹೇಳಿದನು :

"ಕೃಷ್ಣ! ಅಗ್ನಿಹೋತ್ರಿಯಾದ ಬ್ರಾಹ್ಮಣನೊಬ್ಬನು ಪ್ರವಾಸದಲ್ಲಿದ್ದನು. ಅವನಲ್ಲಿ ಒಂದು ಹಸುವಿದ್ದಿತು. ಅದು ಒಂದು ದಿನ ಬ್ರಾಹ್ಮಣನ ಮನೆಯಿಂದ ತಪ್ಪಿಸಿಕೊಂಡು ಬಂದು ನನ್ನ ಗೋಶಾಲೆಯೊಳಗೆ ಸೇರಿಕೊಂಡಿತು. ನನ್ನ ಗೋಪಾಲಕರು ನನ್ನಲ್ಲಿದ್ದ ಸಾವಿರ ಹಸುಗಳ ಜೊತೆಗೆ ಅದನ್ನೂ ಸೇರಿಸಿಯೇ ಎಣಿಕೆ ಮಾಡಿಬಿಟ್ಟರು. ಪರಲೋಕದಲ್ಲಿ ಮನೋವಾಂಛಿತವಾದ ಫಲಗಳನ್ನು ಹೊಂದಬೇಕೆಂಬ ಆಶೆಯಿದ್ದ ನಾನು ಆ ಹಸುವೂ ನನ್ನದೇ ಎಂದು ಭಾವಿಸಿ ಬ್ರಾಹ್ಮಣನೊಬ್ಬನಿಗೆ ಅದನ್ನು ದಾನವಾಗಿ ಕೊಟ್ಟುಬಿಟ್ಟೆನು.

ಅತ್ತಲಾಗಿ ಪ್ರವಾಸದಿಂದ ಹಿಂದಿರುಗಿದ ಅಗ್ನಿಹೋತ್ರಿಯು ಮನೆಯಲ್ಲಿ ಹಸುವನ್ನು ಕಾಣದೇ ಎಲ್ಲ ಕಡೆಗಳಲ್ಲಿಯೂ ಹುಡುಕುತ್ತಿದ್ದಾಗ ಆ ಹಸುವು ಬೇರೊಬ್ಬ ಬ್ರಾಹ್ಮಣನ ಮನೆಯಲ್ಲಿದ್ದುದನ್ನು ನೋಡಿದನು. ಒಡನೆಯೇ ಅವನು ಆ ಬ್ರಾಹ್ಮಣನ ಬಳಿಗೆ ಹೋಗಿ 'ಮಮೇಯಂ'-'ಈ ಹಸುವು

ನನ್ನದು'-ಎಂದು ಹೇಳಿದನು. ಅವರಿಬ್ಬರಲ್ಲಿ ವಿವಾದವುಂಟಾಯಿತು. ಅವರು ಹಸುವಿನ ಒಡೆತನವನ್ನು ಇತ್ಯರ್ಥಪಡಿಸಿಕೊಳ್ಳಲಾಗದೇ ಕೋಪಾವಿಷ್ಟರಾಗಿ ನನ್ನ ಬಳಿಗೆ ಬಂದರು. ಅವರಿಬ್ಬರಲ್ಲಿ ನನ್ನಿಂದ ದಾನತೆಗೆದುಕೊಂಡ ಬ್ರಾಹ್ಮಣನು ಹೇಳಿದನು:

'ಭವಾನ್ ದಾತಾ' 'ಮಹಾರಾಜ! ನೀನೇ ನನಗೆ ಈ ಹಸುವನ್ನು ಸ್ವಲ್ಪ ದಿವಸಗಳ ಹಿಂದೆ ದಾನವಾಗಿ ಕೊಟ್ಟಿರುವೆ. ಈಗ ಇವನು ತನ್ನದೆಂದು ಹೇಳಿಕೊಳ್ಳುತ್ತಿದ್ದಾನೆ.'

'ಭವಾನ್ ಹರ್ತಾ' 'ನೀನೇ ಈ ಹಸುವನ್ನು ಕದ್ದಿರುವೆ. ಹಸುವು ನನ್ನದು'–ಎಂದು ಅಗ್ನಿಹೋತ್ರಿಯು ಕೋಪಾವಿಷ್ಟನಾಗಿ ಹೇಳಿದನು.

ಆಗ ನಾನು–ಆ ಹಸುವಿಗೆ ಬದಲಾಗಿ ಹತ್ತು ಸಾವಿರ ಹಸುಗಳನ್ನು ವಿನಿಮಯರೂಪವಾಗಿ ಪಡೆದು ಅಗ್ನಿಹೋತ್ರಿಯ ಹಸುವನ್ನು ಹಿಂದಿರುಗಿಸುವಂತೆ ನನ್ನಿಂದ ಗೋವನ್ನು ಪ್ರತಿಗ್ರಹಿಸಿದ್ದ ಬ್ರಾಹ್ಮಣನನ್ನು ಪ್ರಾರ್ಥಿಸಿಕೊಂಡೆನು.

ಅದಕ್ಕೆ ಬ್ರಾಹ್ಮಣನು ಸಮ್ಮತಿಸದೆ ಹೀಗೆ ಹೇಳಿದನು:

ದೇಶಕಾಲೋಪಸಮ್ಪನ್ನಾ ದೋಗ್ಧ್ರೀ ಶಾನ್ತಾತಿವತ್ಸಲಾ ।
ಸ್ವಾದುಕ್ಷೀರಪ್ರದಾ ಧನ್ಯಾ ಮಮ ನಿತ್ಯಂ ನಿವೇಶನೇ ॥೧೫॥

"ಮಹಾರಾಜ! ಈ ಹಸುವು ದೇಶ-ಕಾಲಗಳಿಗೆ ಅನುರೂಪವಾಗಿದೆ. ಚೆನ್ನಾಗಿ ಹಾಲು ಕೊಡುತ್ತದೆ. ಬಹಳ ಸಾಧುವಾಗಿದೆ. ನಮ್ಮಲ್ಲಿ ವಾತ್ಸಲ್ಯವುಳ್ಳದ್ದಾಗಿದೆ. ಅತ್ಯಂತರುಚಿಕರವಾದ ಹಾಲನ್ನೇ ಕೊಡುತ್ತದೆ. ಮೇಲಾಗಿ ಇದು ಉತ್ತಮಜಾತಿಯ ಹಸುವಾಗಿದೆ. ಆದುದರಿಂದ ಇದು ಸದಾ ನನ್ನ ಮನೆಯಲ್ಲಿಯೇ ಇರಲಿ.

ಕೃತಂ ಚ ಭರತೇ ಸಾ ಗೌರ್ಮಮ ಪುತ್ರಮಪಸ್ತನಮ್ ।
ನ ಸಾ ಶಕ್ಯಾ ಮಯಾ ದಾತುಮಿತ್ಯುಕ್ತ್ವಾ ಸ ಜಗಾಮ ಹ ॥೧೬॥

ತನ್ನ ಹಾಲಿನಿಂದಲೇ ಈ ಹಸುವು ತಾಯಿಯಿಲ್ಲದ ನನ್ನ ಮಗನನ್ನು ಭರಿಸಿ-ಪೋಷಿಸುತ್ತಿದೆ. ಆದುದರಿಂದ ಈ ಹಸುವನ್ನು ಕೊಡಲು

ಸಾಧ್ಯವಿಲ್ಲ.”–ಎಂದು ಹೇಳಿ ಹಸುವನ್ನು ಹೊಡೆದುಕೊಂಡು ಹೊರಟೇ ಹೋದನು.

ಅನಂತರ ನಾನು, ಕಳೆದುಕೊಂಡ ಹಸುವಿಗೆ ಬದಲಾಗಿ ಒಂದು ಲಕ್ಷ ಗೋವುಗಳನ್ನು ತೆಗೆದುಕೊಳ್ಳುವಂತೆ ಅಗ್ನಿಹೋತ್ರಿಯನ್ನು ವಿನಯಪೂರ್ವಕವಾಗಿ ಪ್ರಾರ್ಥಿಸಿದೆನು. ಮಧುಸೂದನ! ನನ್ನ ಮಾತನ್ನು ಅವನೂ ತಿರಸ್ಕರಿಸುತ್ತಾ ಹೀಗೆ ಹೇಳಿದನು:

ನ ರಾಜ್ಞಾಂ ಪ್ರತಿಗೃಹ್ಣಾಮಿ ಶಕ್ತೋಽಹಂ ಸ್ವಸ್ಯ ಮಾರ್ಗಣೇ ।
ಸೈವ ಗೌರ್ದೀಯತಾಂ ಶೀಘ್ರಂ ಮಮೇತಿ ಮಧುಸೂದನ ॥೧೮॥

“ನಾನು ರಾಜರಿಂದ ಯಾವುದೇ ದಾನವನ್ನೂ ಪ್ರತಿಗ್ರಹ ಮಾಡುವುದಿಲ್ಲ. ನನಗಾಗಿ ಐಶ್ವರ್ಯವನ್ನು ಸಂಪಾದಿಸಿಕೊಳ್ಳಲು ನಾನು ಸಮರ್ಥನಾಗಿದ್ದೇನೆ. ನನ್ನ ಆ ಹಸುವನ್ನೇ ನನಗೆ ಶೀಘ್ರವಾಗಿ ಕೊಟ್ಟುಬಿಡು.”

ಕೃಷ್ಣ! ನಾನು ಆ ಅಗ್ನಿಹೋತ್ರಿಗೆ ಬೇಕಾದಷ್ಟು ಚಿನ್ನ, ಕುದುರೆಗಳು, ಬೆಳ್ಳಿಯ ರಥಗಳು–ಎಲ್ಲವನ್ನೂ ಒಂದು ಹಸುವಿನ ವಿನಿಮಯರೂಪವಾಗಿ ಕೊಡಲು ಸಿದ್ಧನಾಗಿದ್ದೆನು. ಆದರೆ ಅದಾವುದನ್ನೂ ತೆಗೆದುಕೊಳ್ಳದೇ ಆ ಬ್ರಾಹ್ಮಣಶ್ರೇಷ್ಠನೂ ಹೊರಟೇಹೋದನು.

ಅದೇ ಸಮಯದಲ್ಲಿಯೇ ಕಾಲಧರ್ಮದಿಂದ ಚೋದಿತನಾದ ನಾನು ಅವಸಾನವನ್ನು ಹೊಂದಿ ಪಿತೃಲೋಕಕ್ಕೆ ಹೋಗಿ ಯಮರಾಜನನ್ನು ಸಂಧಿಸಿದೆನು. ಯಮರಾಜನು ನನ್ನನ್ನು ಆದರದಿಂದ ಬರಮಾಡಿಕೊಂಡು ಯಥಾವಿಧಿಯಾಗಿ ಸತ್ಕರಿಸಿದನಂತರ ನನ್ನೊಡನೆ ಈ ಮಾತನ್ನು ಹೇಳಿದನು:

ನಾನ್ತಃ ಸಂಖ್ಯಾಯತೇ ರಾಜಂಸ್ತವ ಪುಣ್ಯಸ್ಯ ಕರ್ಮಣಃ ।
ಅಸ್ತಿ ಚೈವ ಕೃತಂ ಪಾಪಮಜ್ಞಾನಾತ್ತದಪಿ ತ್ವಯಾ ।
ಚರಸ್ವ ಪಾಪಂ ಪಶ್ಚಾದ್ವಾ ಪೂರ್ವಂ ವಾ ತ್ವಂ ಯಥೇಚ್ಛಸಿ ॥೨೨॥

“ನೃಗಮಹಾರಾಜನೇ! ನೀನು ಮಾಡಿರುವ ಪುಣ್ಯಕರ್ಮಗಳನ್ನು ಎಣಿಕೆ ಮಾಡಿ ಮುಗಿಸಲಾಗುವುದಿಲ್ಲ. (ಅಸಂಖ್ಯಾತವಾದ ಪುಣ್ಯಕರ್ಮಗಳನ್ನು ಮಾಡಿರುವೆ.) ಆದರೆ ನೀನು ಒಂದು ಪಾಪಕರ್ಮವನ್ನೂ ಮಾಡಿರುವೆ. ಅದಾದರೂ ಅಜ್ಞಾನದಿಂದ ಮಾಡಿದುದು. ಆದರೂ ಅದರ ಫಲವನ್ನು ನೀನು ಉಪಭೋಗಿಸಲೇಬೇಕು. ನಿನಗೊಂದು ಅವಕಾಶವಿದೆ. ಆ ಪಾಪದ ಫಲವನ್ನು

ನೀನು ಮೊದಲಾದರೂ ಅನುಭವಿಸಬಹುದು. ಕಡೆಯಲ್ಲಾದರೂ ಅನುಭವಿಸಬಹುದು. ನಿನ್ನ ಇಚ್ಛೆಯಿದ್ದಂತೆ ಮಾಡು.

ರಕ್ಷಿತಾಸ್ಮೀತಿ ಚೋಕ್ತಂ ತೇ ಪ್ರತಿಜ್ಞಾ ಚಾನೃತಾ ತವ ।
ಬ್ರಾಹ್ಮಣಸ್ವಸ್ಯ ಚಾದಾನಂ ದ್ವಿವಿಧಸ್ತೇ ವ್ಯತಿಕ್ರಮಃ ॥೨೩॥

ನೀನು ಪ್ರಜೆಗಳ ಯೋಗ-ಕ್ಷೇಮಗಳನ್ನು ನೋಡಿಕೊಂಡು ಅವರನ್ನು ರಕ್ಷಿಸುವುದಾಗಿ ಪ್ರತಿಜ್ಞೆಯನ್ನು ಮಾಡಿದ್ದೆ. ಬ್ರಾಹ್ಮಣನ ಧನವನ್ನು (ಹಸುವನ್ನು) ರಕ್ಷಿಸದೇ ಇದ್ದುದರಿಂದ ನಿನ್ನ ಪ್ರತಿಜ್ಞೆಯು ಸುಳ್ಳಾಯಿತು. ಎರಡನೆಯದಾಗಿ: ನೀನು ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದೆ. ಹೀಗೆ ನಿನ್ನಿಂದ ಎರಡು ಬಗೆಯಾದ ಅಪರಾಧಗಳು ನಡೆದಿವೆ.”

ಪ್ರಭುವೇ! ಶ್ರೀಕೃಷ್ಣ! ನಾನು ಯಮಧರ್ಮನು ಹೇಳಿದ ಮಾತನ್ನು ಅಂಗೀಕರಿಸುತ್ತಾ ಅವನನ್ನು ಕುರಿತು:

ಪೂರ್ವಂ ಕೃಚ್ಛ್ರಂ ಚರಿಷ್ಯೇಽಹಂ ಪಶ್ಚಾಚ್ಛುಭಂ।

‘ನಾನು ಮೊದಲು ಪಾಪದ ಫಲವನ್ನು ಉಪಭೋಗಿಸಿಬಿಡುತ್ತೇನೆ. ಅನಂತರ ಪುಣ್ಯಫಲವನ್ನು.......’ಎಂದು ಹೇಳುತ್ತಿರುವಾಗಲೇ ಭೂಮಿಯ ಮೇಲೆ ಬಿದ್ದುಬಿಟ್ಟೆನು. ಹಾಗೆ ನಾನು ಬೀಳುತ್ತಿದ್ದಾಗ ಯಮಧರ್ಮನು ಗಟ್ಟಿಯಾಗಿ ಹೇಳುತ್ತಿದ್ದ ಈ ಮಾತುಗಳನ್ನು ಕೇಳಿಸಿಕೊಂಡೆನು:

ವಾಸುದೇವಃ ಸಮುದ್ಧರ್ತಾ ಭವಿತಾ ತೇ ಜನಾರ್ದನಃ ॥೨೫॥

ಪೂರ್ಣೇ ವರ್ಷಸಹಸ್ರಾನ್ತೇ ಕ್ಷೀಣೇ ಕರ್ಮಣಿ ದುಷ್ಕೃತೇ।
ಪ್ರಾಪ್ಸ್ಯಸೇ ಶಾಶ್ವತಾಲ್ಲೋಕಾಞ್ಜಿತಾನ್ಸ್ವೇನೈವ ಕರ್ಮಣಾ ॥೨೬॥

“ಪೂರ್ಣವಾಗಿ ಒಂದು ಸಾವಿರ ವರ್ಷಗಳು ಕಳೆದನಂತರ ನೀನು ಮಾಡಿರುವ ಈ ಎರಡು ಪಾಪಗಳ ಫಲಾನುಭವವು ಮುಗಿಯುತ್ತದೆ. ಆ ಸಮಯದಲ್ಲಿ ಜನಾರ್ದನನಾದ, ವಸುದೇವನ ಮಗನಾದ ಶ್ರೀಕೃಷ್ಣನು ನಿನ್ನನ್ನು ಉದ್ಧರಿಸುತ್ತಾನೆ. ಅನಂತರ ನೀನು ನಿನ್ನ ಪುಣ್ಯಕರ್ಮಗಳಿಂದಲೇ ಜಯಿಸಿರುವ ಶಾಶ್ವತವಾದ ಪುಣ್ಯಲೋಕಗಳನ್ನು ಹೊಂದುವೆ.”

ಯಮಧರ್ಮನ ಆ ಮಾತು ಮುಗಿಯುವ ವೇಳೆಗೆ ನನಗೆ ಕೃಕಲಾಸದ (ಓತಿಕೇತದ) ಜನ್ಮವು ಪ್ರಾಪ್ತವಾಗಿದ್ದಿತು. ತಲೆಕೆಳಗಾಗಿ ಈ ಬಾವಿಯಲ್ಲಿ

ಬಿದ್ದುದರ ಅರಿವಾಯಿತು. ನನಗೆ ಪ್ರಾಣಿಯ ಜನ್ಮವು ಪ್ರಾಪ್ತವಾಗಿದ್ದರೂ ಸ್ಮರಣಶಕ್ತಿಯು ನನ್ನನ್ನು ಬಿಟ್ಟುಹೋಗಲಿಲ್ಲ.

ತ್ವಯಾ ತು ತಾರಿತೋಽಸ್ಮ್ಯದ್ಯ ಕಿಮನ್ಯತ್ರ ತಪೋಬಲಾತ್ ।
ಅನುಜಾನೀಹಿ ಮಾಂ ಕೃಷ್ಣ ಗಚ್ಛೇಯಂ ದಿವಮದ್ಯ ವೈ ॥೨೮॥

ಕೃಷ್ಣ! ನನ್ನನ್ನು ನೀನಿಂದು ಉದ್ಧರಿಸಿರುವೆ. ಇದಕ್ಕೆ ನಿನ್ನ ತಪೋಬಲವಲ್ಲದೇ ಬೇರೆ ಯಾವ ಕಾರಣವಿದೆ? ನಾನೀಗ ಸ್ವರ್ಗಕ್ಕೆ ಹೋಗುತ್ತೇನೆ. ಅನುಮತಿಸು."

ಯುಧಿಷ್ಠಿರ! ಬಳಿಕ ಅರಿಂದಮನಾದ ನೃಗರಾಜನು ಶ್ರೀಕೃಷ್ಣನ ಅನುಮತಿಯನ್ನು ಪಡೆದು ಜನಾರ್ದನನಿಗೆ ನಮಸ್ಕರಿಸಿ ದಿವ್ಯವಾದ ಮಾರ್ಗವನ್ನು ಆಶ್ರಯಿಸಿ ಸ್ವರ್ಗಲೋಕಕ್ಕೆ ಹೊರಟುಹೋದನು. ನೃಗನು ಸ್ವರ್ಗಕ್ಕೆ ಹೊರಟುಹೋದನಂತರ ವಾಸುದೇವನು ಈ ಶ್ಲೋಕವನ್ನು ಹೇಳಿದನು:

ಬ್ರಾಹ್ಮಣಸ್ವಂ ನ ಹರ್ತವ್ಯಂ ಪುರುಷೇಣ ವಿಜಾನತಾ ।
ಬ್ರಾಹ್ಮಣಸ್ವಂ ಹೃತಂ ಹನ್ತಿ ನೃಗಂ ಬ್ರಾಹ್ಮಣಗೌರಿವ ॥೩೧॥

"ವಿದ್ವಾಂಸನಾದ ಪುರುಷನು ಬ್ರಾಹ್ಮಣನ ಸ್ವತ್ತನ್ನು ಅಪಹರಿಸಬಾರದು. ಬ್ರಾಹ್ಮಣನ ಸ್ವತ್ತಾಗಿದ್ದ ಗೋವು ನೃಗನನ್ನು ವಿನಾಶಗೊಳಿಸಿದಂತೆ–ಬ್ರಾಹ್ಮಣನ ಐಶ್ವರ್ಯವು ಅಪಹರಿಸಿದವನನ್ನು ವಿನಾಶಗೊಳಿಸುತ್ತದೆ."

ಸತಾಂ ಸಮಾಗಮಃ ಸದ್ಭಿರ್ನಾಫಲಃ ಪಾರ್ಥ ವಿದ್ಯತೇ ।
ವಿಮುಕ್ತಂ ನರಕಾತ್ಪಶ್ಯ ನೃಗಂ ಸಾಧುಸಮಾಗಮಾತ್ ॥೩೨॥

ಕುಂತೀಪುತ್ರನೇ! ಸತ್ಪುರುಷರೊಡನೆ ಸತ್ಪುರುಷರ ಸಮಾಗಮವು ಯಾವಾಗಲೂ ವ್ಯರ್ಥವಾಗುವುದಿಲ್ಲ. ನೋಡು, ಯುಧಿಷ್ಠಿರ! ಸಾಧು ಸಮಾಗಮದಿಂದ (ಶ್ರೀಕೃಷ್ಣನ ಸಂಸ್ಪರ್ಶದಿಂದ) ನೃಗನು ನರಕದಿಂದ ವಿಮುಕ್ತನಾದನು.

ಪ್ರದಾನಫಲವತ್ತತ್ರ ದ್ರೋಹಸ್ತತ್ರ ತಥಾಫಲಃ ।
ಅಪಚಾರಂ ಗವಾಂ ತಸ್ಮಾದ್ವರ್ಜಯೇತ ಯುಧಿಷ್ಠಿರ ॥೩೩॥

ಗೋವುಗಳನ್ನು ದಾನಮಾಡುವುದರಿಂದ ಉತ್ತಮವಾದ ಫಲವು

ಲಭಿಸುವಂತೆಯೇ ಗೋವುಗಳಿಗೆ ದ್ರೋಹವನ್ನುಂಟುಮಾಡುವುದರಿಂದ ಕೆಟ್ಟ ಫಲವೂ ಉಂಟಾಗುತ್ತದೆ. (ಪಾಪವು ಸಂಘಟಿಸುತ್ತದೆ.) ಆದುದರಿಂದ ಗೋವುಗಳಿಗೆ ಅಪಚಾರಮಾಡುವುದನ್ನು (ಕಷ್ಟಕೊಡುವುದನ್ನು) ನಿಲ್ಲಿಸ ಬೇಕು."

೭೦ನೆಯ ಅಧ್ಯಾಯವು ಮುಗಿಯಿತು.

೭೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ತಂದೆಯ ಶಾಪದಿಂದ ಯಮನ ಬಳಿಗೆ ನಾಚಿಕೇತನ ಆಗಮನ: ಯಮನಿಂದ ನಾಚಿಕೇತನಿಗೆ ಗೋದಾನದ ಮಹಿಮೆಯ ವಿವರಣೆ

ಯುಧಿಷ್ಠಿರನು ಹೇಳುತ್ತಾನೆ:

ದತ್ತಾನಾಂ ಫಲಸಮ್ಪ್ರಾಪ್ತಿಂ ಗವಾಂ ಪ್ರಬ್ರೂಹಿ ಮೇಽನಘ ।
ವಿಸ್ತರೇಣ ಮಹಾಬಾಹೋ ನ ಹಿ ತೃಪ್ಯಾಮಿ ಕಥ್ಯತಾಮ್ ॥೧॥

"ಮಹಾಬಾಹುವೇ! ಅನಘನೇ! ಗೋವುಗಳನ್ನು ದಾನಮಾಡುವುದರಿಂದ ಯಾವ ಫಲವು ಲಭಿಸುವುದೆಂಬುದನ್ನು ಇನ್ನೂ ವಿಸ್ತಾರವಾಗಿ ಹೇಳು. ನಿನ್ನ ವಚನಾಮೃತವನ್ನು ಎಷ್ಟು ಕೇಳಿದರೂ ತೃಪ್ತಿಯೇ ಆಗುವುದಿಲ್ಲ. ಇನ್ನೂ ಕೇಳುತ್ತಲೇ ಇರಬೇಕೆನ್ನಿಸುತ್ತದೆ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಈ ವಿಷಯದಲ್ಲಿ ಉದ್ದಾಲಕಿಮಹರ್ಷಿಯ ಮತ್ತು ನಾಚಿಕೇತನ ಪುರಾತನವಾದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು; ಕೇಳು:

ಒಮ್ಮೆ ಉದ್ದಾಲಕಿಯು ಯಜ್ಞದೀಕ್ಷೆಯನ್ನು ಕೈಗೊಂಡು ಪುತ್ರನಾದ ನಾಚಿಕೇತನಿಗೆ ತಾನು ದೀಕ್ಷಾಬದ್ಧನಾಗಿರುವವರೆಗೂ ತನ್ನ ಸೇವೆಯಲ್ಲಿಯೇ ನಿರತನಾಗಿರುವಂತೆ ಹೇಳಿದನು. ತಂದೆಯು ಹೇಳಿದಂತೆ ನಾಚಿಕೇತನು ಅವನ ದೀಕ್ಷೆಯು ಮುಗಿಯುವವರೆಗೂ ಅವನ ಸೇವೆಯಲ್ಲಿಯೇ ನಿರತನಾಗಿದ್ದನು. ಯಜ್ಞನಿಯಮವು ಮುಗಿದನಂತರ ಉದ್ದಾಲಕಿಯು ಮಗನಿಗೆ ಹೇಳಿದನು:

"ಮಗು! ನಾಚಿಕೇತ! ಸ್ನಾನಮಾಡುವ ಮತ್ತು ವೇದಾಧ್ಯಯನ ಮಾಡುವ ಆತುರದಲ್ಲಿದ್ದ ನನಗೆ ನದೀತೀರದಲ್ಲಿ ಸಂಗ್ರಹಿಸಿಟ್ಟಿದ್ದ ಸಮಿತ್ತು, ದರ್ಭೆ, ಹೂವು, ಕಲಶ, ಭೋಜನಸಾಮಗ್ರಿಗಳು (ಫಲ-ಮೂಲಗಳು)– ಇವೆಲ್ಲವನ್ನೂ ತರಲು ಮರೆತುಹೋಯಿತು. ನೀನೀಗಲೇ ನದೀತೀರಕ್ಕೆ ಹೋಗಿ ಅವೆಲ್ಲವನ್ನೂ ತೆಗೆದುಕೊಂಡು ಬಾ."

ತಂದೆಯ ಅಪ್ಪಣೆಯಂತೆ ನಾಚಿಕೇತನು ನದೀತೀರಕ್ಕೆ ಹೋದನು. ಅವನು ಹೋಗುವ ವೇಳೆಗೆ ನದಿಯಲ್ಲಿ ಪ್ರವಾಹವು ಬಂದಿದ್ದು ತಂದೆಯು ಸಂಗ್ರಹಿಸಿಟ್ಟಿದ್ದ ವಸ್ತುಗಳೆಲ್ಲವೂ ಅದರಲ್ಲಿ ಕೊಚ್ಚಿಹೋಗಿದ್ದುವು. ಒಡನೆಯೇ ನಾಚಿಕೇತನು ತಂದೆಯ ಬಳಿಗೆ ಬಂದು 'ನ ಪಶ್ಯಾಮಿ ತತ್' 'ನೀನು ಹೇಳಿದ ವಸ್ತುಗಳನ್ನು ನಾನು ನದೀತೀರದಲ್ಲಿ ನೋಡಲಿಲ್ಲ'- ಎಂದು ಹೇಳಿದನು.

ಆ ಸಮಯದಲ್ಲಿ ಉದ್ದಾಲಕಿಯು ಹಸಿವಿನಿಂದಲೂ-ಬಾಯಾರಿಕೆ ಯಿಂದಲೂ ಬಹಳವಾಗಿ ಬಳಲಿದ್ದನು. ಮಗನು ಹೇಳಿದ ಆ ಮಾತನ್ನು ಕೇಳುತ್ತಲೇ ಅವನಿಗೆ ತಡೆಯಲಾಗದಷ್ಟು ಕೋಪವು ಬಂದಿತು. ಮಹಾ ತಪಸ್ವಿಯಾದ ಋಷಿಯು–'ನದಿಯ ತೀರದಲ್ಲಿ ನೀನೇನನ್ನೂ ಕಾಣಲಿಲ್ಲವೇ? ಹಾಗಾದರೆ ಯಮನನ್ನು ನೋಡು; ಹೋಗು'–ಎಂದು ಮಗನನ್ನು ಶಪಿಸಿಬಿಟ್ಟನು.

ತಂದೆಯ ವಾಗ್ವಜ್ರದಿಂದ ಪ್ರಹೃತನಾದ ನಾಚಿಕೇತನು ಬದ್ಧಾಂಜಲಿಯಾಗಿ-'ಪ್ರಸೀದ! ತಾತ! ಪ್ರಸೀದ!' 'ಪ್ರಸನ್ನನಾಗು ತಂದೆಯೇ!'- ಎಂದು ಹೇಳುತ್ತಿದ್ದಂತೆಯೇ ಗತಪ್ರಾಣನಾಗಿ ಕುಸಿದುಬಿದ್ದನು. ನಾಚಿಕೇತನು ಬಿದ್ದುದನ್ನು ನೋಡಿ ತಂದೆಯಾದ ಉದ್ದಾಲಕಿಯು ದುಃಖದಿಂದ ವಿಮೋಹಗೊಂಡವನಾಗಿ- 'ಕಿಂ ಮಯಾ ಕೃತಂ' 'ಅಯ್ಯೋ! ನಾನೇನು ಮಾಡಿಬಿಟ್ಟೆನು?'-ಎಂದು ಹೇಳುತ್ತಾ ಭೂಮಿಯ ಮೇಲೆ ಬಿದ್ದನು. ದುಃಖಪರೀತನಾಗಿದ್ದ, ಮಗನನ್ನೇ ಕುರಿತು ಬಾರಿ-ಬಾರಿಗೂ ಶೋಕಿ ಸುತ್ತಿದ್ದ ಉದ್ದಾಲಕಿಗೆ ಶೋಕಾವಸ್ಥೆಯಲ್ಲಿಯೇ ದಿನದ ಶೇಷವೂ ಕಳೆದು

ಹೋಯಿತು. ಹಾಗೆಯೇ ಭಯಂಕರವಾದ ರಾತ್ರಿಯೂ ಕಳೆದುಹೋಯಿತು. ದರ್ಭಶಯ್ಯೆಯಲ್ಲಿದ್ದ ನಾಚಿಕೇತನು ತಂದೆಯ ಅಶ್ರುಬಿಂದುಗಳಿಂದ ತೋಯ್ದುಹೋದವನಾಗಿ–ಒಣಗುತ್ತಿರುವ ಸಸ್ಯವು ಮಳೆಯ ನೀರಿನಿಂದ ನೆನೆಸಲ್ಪಟ್ಟು ಅಳ್ಳಾಡುವಂತೆ ಕೈ-ಕಾಲುಗಳನ್ನು ಆಡಿಸತೊಡಗಿದನು. ನಿದ್ದೆಯು ಕಳೆದನಂತರ ಎಚ್ಚರಗೊಳ್ಳುವಂತೆ–ಯಮಲೋಕದಿಂದ ಹಿಂದಿರುಗಿ ಬಂದಿದ್ದ ದುರ್ಬಲನಾಗಿದ್ದ, ದಿವ್ಯವಾದ ಗಂಧಗಳಿಂದ ವ್ಯಾಪ್ತನಾಗಿದ್ದ ಮಗನನ್ನು ಉದ್ದಾಲಕಿಯು ಪ್ರಶ್ನಿಸಿದನು:

ಅಪಿ ಪುತ್ರ ಜಿತಾ ಲೋಕಾಃ ಶುಭಾಸ್ತೇ ಸ್ವೇನ ಕರ್ಮಣಾ ।
ದಿಷ್ಟ್ಯಾ ಚಾಸಿ ಪುನಃ ಪ್ರಾಪ್ತೋ ನ ಹಿ ತೇ ಮಾನುಷಂ ವಪುಃ ॥

"ಮಗು! ನಿನ್ನ ಶುಭಕರ್ಮಗಳಿಂದ ಪುಣ್ಯಲೋಕಗಳೆಲ್ಲವನ್ನೂ ನೀನು ಜಯಿಸಿದೆಯಲ್ಲವೇ? ನನ್ನ ಸೌಭಾಗ್ಯದಿಂದಲೇ ನೀನು ಪುನಃ ಇಲ್ಲಿಗೆ ಆಗಮಿಸಿರುವೆ. ಈಗ ನಿನಗೆ ಹಿಂದಿದ್ದಂತೆ ಮಾನುಷಶರೀರವಿಲ್ಲ. ದಿವ್ಯವಾದ ಶರೀರವನ್ನು ಹೊಂದಿರುವೆ."

ಮಹಾತ್ಮನಾದ ಉದ್ದಾಲಕಿಯು ಹೀಗೆ ಪ್ರಶ್ನಿಸಲಾಗಿ, ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿದ್ದ ನಾಚಿಕೇತನು ಪರಲೋಕದ ವಾರ್ತೆಯನ್ನು ಮುನಿಗಳ ಮಧ್ಯದಲ್ಲಿದ್ದ ತಂದೆಗೆ ಹೇಳತೊಡಗಿದನು:

"ತಂದೆಯೇ! ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತಾ ನಾನು ಶೀಘ್ರವಾಗಿ ಹೊರಟು ವಿಶಾಲವಾಗಿಯೂ, ಸುಂದರವಾಗಿಯೂ, ಪ್ರಭಾವಯುಕ್ತವಾಗಿಯೂ ಇದ್ದ ಯಮನ ಪಟ್ಟಣವನ್ನು ಸೇರಿ ಸಾವಿರ ಯೋಜನಗಳವರೆಗೂ ಸುವರ್ಣದಂತೆ ಜಾಜ್ವಲ್ಯಮಾನವಾಗಿ ಕಾಣುತ್ತಿದ್ದ ಯಮಧರ್ಮನ ಸಭೆಯನ್ನು ನೋಡಿದೆನು. ನಾನು ಯಮಧರ್ಮನಿಗೆ ಎದುರಾಗಿ ಹೋದುದನ್ನು ನೋಡಿದೊಡನೆಯೇ ಯಮರಾಜನು ತನ್ನ ಸೇವಕರನ್ನು ಕರೆದು ನನಗೆ ಕುಳಿತುಕೊಳ್ಳಲು ಆಸನವನ್ನು ಕೊಡುವಂತೆ ಆಜ್ಞಾಪಿಸಿದನು. ನಿನಗೆ ಗೌರವವನ್ನು ತೋರುವ ಸಲುವಾಗಿ ವೈವಸ್ವತನು ಅರ್ಘ್ಯ-ಪಾದ್ಯಾದಿಗಳನ್ನು ತರಿಸಿ ನನ್ನನ್ನು ವಿಧಿವತ್ತಾಗಿ ಸತ್ಕರಿಸಿದನು.

ಯಮರಾಜನ ಸಭಾಸದಸ್ಯರಿಂದ ಸಮಾವೃತನಾಗಿ ಅವರಿಂದ ಸತ್ಕರಿಸಲ್ಪಟ್ಟ ನಾನು ಯಮಧರ್ಮನೊಡನೆ ಮೆಲ್ಲ-ಮೆಲ್ಲಗೆ ಈ ಮಾತನ್ನು ಹೇಳಿದೆನು :

ಪ್ರಾಪ್ತೋಽಸ್ಮಿ ತೇ ವಿಷಯಂ ಧರ್ಮರಾಜ
ಲೋಕಾನರ್ಹೋ ಯಾನಹಂ ತಾನ್ವಿಧತ್ಸ್ವ ॥೧೭॥

“ಧರ್ಮರಾಜನೇ! ನಾನು ನಿನ್ನ ರಾಜ್ಯಕ್ಕೆ ಬಂದಿರುತ್ತೇನೆ. ನಾನು ಮಾಡಿರುವ ಕರ್ಮಗಳಿಗೆ ಅನುಗುಣವಾಗಿ ಯಾವ ಲೋಕಗಳಿಗೆ ಹೋಗಲು ಅರ್ಹನಾಗಿರುವೆನೋ–ಆ ಲೋಕಗಳಿಗೆ ಹೋಗಲು ನನಗೆ ಅನುಮತಿಯನ್ನು ದಯಪಾಲಿಸು.”

ಆ ನನ್ನ ಮಾತನ್ನು ಕೇಳಿ ಯಮನು ನನ್ನೊಡನೆ ಹೇಳಿದನು:

ಯಮೋಽಬ್ರವೀನ್ಮಾಂ ನ ಮೃತೋಽಸಿ ಸೌಮ್ಯ
ಯಮಂ ಪಶ್ಯೇತ್ಯಾಹ ಸ ತ್ವಾಂ ತಪಸ್ವೀ ।
ಪಿತಾ ಪ್ರದೀಪ್ತಾಗ್ನಿಸಮಾನತೇಜಾ
ನ ತಚ್ಛಕ್ಯಮನೃತಂ ವಿಪ್ರ ಕರ್ತುಮ್ ॥೧೮॥

“ಸೌಮ್ಯನೇ! ನೀನು ಮರಣವನ್ನು ಹೊಂದಿ ಇಲ್ಲಿಗೆ ಬಂದಿರುವುದಿಲ್ಲ. ಪ್ರದೀಪ್ತನಾದ ಅಗ್ನಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ನಿನ್ನ ತಂದೆಯು–‘ಯಮಂ ಪಶ್ಯೇತ್ಯಾಹ’ ‘ಯಮನನ್ನು ನೋಡು’– ಎಂದನು. ಅವನ ಆ ಮಾತನ್ನು ಸುಳ್ಳುಮಾಡಲು ಸಾಧ್ಯವೇ ಇಲ್ಲ.

ದೃಷ್ಟಸ್ತೇಽಹಂ ಪ್ರತಿಗಚ್ಛಸ್ವ ತಾತ
ಶೋಚತ್ಯಸೌ ತವ ದೇಹಸ್ಯ ಕರ್ತಾ ।
ದದಾನಿ ಕಿಂ ಚಾಪಿ ಮನಃಪ್ರಣೀತಂ
ಪ್ರಿಯಾತಿಥೇಸ್ತವ ಕಾಮಾನ್ವೃಣೀಷ್ವ ॥೧೯॥

ಮಗು! ನಿನ್ನ ತಂದೆಯ ಆಜ್ಞೆಯಂತೆ ನನ್ನನ್ನು ನೋಡಿಯಾಯಿತು. ನೀನಿನ್ನು ಹಿಂದಿರುಗಬಹುದು. ನಿನ್ನ ದೇಹಕ್ಕೆ ಕರ್ತೃವಾದ ಆ ನಿನ್ನ ತಂದೆಯು ಶೋಕಮಗ್ನನಾಗಿದ್ದಾನೆ. ನೀನು ನನಗೆ ಪ್ರಿಯನಾದ ಅತಿಥಿಯಾಗಿರುವೆ. ಮನೋವಾಂಛಿತವಾದ ಯಾವ ವಸ್ತುಗಳನ್ನು ನಿನಗೆ ಕೊಡಲಿ? ನಿನಗೆ ಬೇಕಾದುದನ್ನು ನನ್ನಿಂದ ಪಡೆದುಕೊ.”

ತಂದೆಯೇ! ಯಮಧರ್ಮನು ಹೀಗೆ ಹೇಳಿದನಂತರ ಅವನ ಮಾತಿಗೆ ಉತ್ತರವಾಗಿ ನಾನು ಹೇಳಿದೆನು :

ಪ್ರಾಪ್ತೋಽಸ್ಮಿ ತೇ ವಿಷಯಂ ದುರ್ನಿವರ್ತ್ಯಮ್ ।
ಇಚ್ಛಾಮ್ಯಹಂ ಪುಣ್ಯಕೃತಾಂ ಸಮೃದ್ಧಾನ್-
ಲೋಕಾನ್ದ್ರಷ್ಟುಂ ಯದಿ ತೇಽಹಂ ವರಾರ್ಹಃ ॥೨೦॥

"ಸಾಮಾನ್ಯರಿಂದ ಹಿಂದಿರುಗಲು ಸಾಧ್ಯವಾಗದ ನಿನ್ನ ರಾಜ್ಯಕ್ಕೆ ನಾನು ಬಂದುಬಿಟ್ಟಿದ್ದೇನೆ. ಪುಣ್ಯಾತ್ಮರಿಗೆ ಪ್ರಾಪ್ತವಾಗುವ ಸಮೃದ್ಧವಾದ ಲೋಕಗಳನ್ನು ನೋಡಲು ಬಯಸಿದ್ದೇನೆ. ನಾನು ನಿನ್ನಿಂದ ವರವನ್ನು ಪಡೆದುಕೊಳ್ಳಲು ಅರ್ಹನಾಗಿದ್ದರೆ ಆ ಎಲ್ಲ ಲೋಕಗಳನ್ನೂ ನನಗೆ ತೋರಿಸು."

ದ್ವಿಜೇಂದ್ರನೇ! ನಾನು ಹಾಗೆ ಹೇಳಿದೊಡನೆಯೇ ಯಮದೇವನು ವಾಹನಗಳಿಂದ ಯುಕ್ತವಾಗಿದ್ದ, ಒಳ್ಳೆಯ ಪ್ರಭೆಯಿಂದ ಕೂಡಿ ಪ್ರಕಾಶಮಾನವಾಗಿದ್ದ ರಥದಲ್ಲಿ ನನ್ನನ್ನು ಕೂರಿಸಿಕೊಂಡು ತನ್ನ ಅಧೀನದಲ್ಲಿದ್ದ, ಪುಣ್ಯಾತ್ಮರಿಗೆ ಲಭ್ಯವಾಗುವ ಎಲ್ಲ ಲೋಕಗಳನ್ನೂ ನನಗೆ ತೋರಿಸಿದನು.

ಅಪಶ್ಯಂ ತತ್ರ ವೇಶ್ಮಾನಿ ತೈಜಸಾನಿ ಮಹಾತ್ಮನಾಮ್ ।
ನಾನಾಸಂಸ್ಥಾನರೂಪಾಣಿ ಸರ್ವರತ್ನಮಯಾನಿ ಚ ॥೨೧॥

ಅಲ್ಲಿ ನಾನು ಮಹಾತ್ಮರಿಗೆ ಪ್ರಾಪ್ತವಾಗುವ ತೇಜೋಮಯವಾದ ಭವನಗಳನ್ನು ನೋಡಿದೆನು. ಅವುಗಳ ರೂಪ-ವರ್ಣ-ಆಕಾರ-ಪ್ರಾಕಾರಗಳು ನಾನಾವಿಧವಾಗಿದ್ದುವು. ಎಲ್ಲ ಭವನಗಳೂ ರತ್ನಮಯವಾಗಿದ್ದುವು.

ಚನ್ದ್ರಮಣ್ಡಲಶುಭ್ರಾಣಿ ಕಿಙ್ಕಿಣೀಜಾಲವನ್ತಿ ಚ ।
ಅನೇಕಶತಭೌಮಾನಿ ಸಾನ್ತರ್ಜಲವನಾನಿ ಚ ॥೨೩॥

ವೈದೂರ್ಯಾರ್ಕಪ್ರಕಾಶಾನಿ ರೂಪ್ಯರುಕ್ಮಮಯಾನಿ ಚ ।
ತರುಣಾದಿತ್ಯವರ್ಣಾನಿ ಸ್ಥಾವರಾಣಿ ಚರಾಣಿ ಚ ॥೨೪॥

ಕೆಲವು ಸೌಧಗಳು ಚಂದ್ರಮಂಡಲದಂತೆ ಶುಭ್ರವಾಗಿದ್ದುವು. ಚಿಕ್ಕ- ಚಿಕ್ಕ ಗೆಜ್ಜೆಗಳಿಂದ ಕೂಡಿದ್ದ ಜಾಲರಿಗಳಿಂದ ಸಮಲಂಕೃತವಾಗಿದ್ದುವು. ಅಲ್ಲಿ ನೂರಾರು ಪ್ರಾಸಾದಮಂಡಲಗಳಿದ್ದುವು. ಅವುಗಳ ಒಳಭಾಗದಲ್ಲಿಯೇ ಸರೋವರಗಳೂ ಉದ್ಯಾನಗಳೂ ಇದ್ದುವು. ಕೆಲವು ಭವನಗಳು

ವೈಡೂರ್ಯದಂತೆ ಮತ್ತು ಸೂರ್ಯನಂತೆ ಪ್ರಕಾಶಿಸುತ್ತಿದ್ದುವು. ಕೆಲವು ಸೌಧಗಳು ರಜತಮಯವಾಗಿಯೂ ಸುವರ್ಣಮಯವಾಗಿಯೂ ಇದ್ದುವು. ಕೆಲವು ಸೌಧಗಳು ಬಾಲಸೂರ್ಯನ ವರ್ಣದಿಂದ ಕೂಡಿದ್ದುವು. ಆ ದಿವ್ಯಸೌಧಗಳಲ್ಲಿ ಕೆಲವು ಚಲಿಸುತ್ತಿದ್ದುವು. ಕೆಲವು ಇದ್ದಲ್ಲಿಯೇ ಇರುತ್ತಿದ್ದುವು. (ಸ್ಥಾವರಗಳಾಗಿದ್ದುವು.)

ಭಕ್ಷ್ಯಭೋಜ್ಯಮಯಾಞ್ಶೈಲಾನ್ವಾಸಾಂಸಿ ಶಯನಾನಿ ಚ ।
ಸರ್ವಕಾಮಫಲಾಂಶ್ಚೈವ ವೃಕ್ಷಾನ್ಭವನಸಂಸ್ಥಿತಾನ್ ॥೨೫॥

ಆ ದಿವ್ಯಸೌಧಗಳಲ್ಲಿ ಭಕ್ಷ್ಯ-ಭೋಜ್ಯಗಳು ಪರ್ವತದಂತೆ ರಾಶಿ-ರಾಶಿಯಾಗಿ ಬಿದ್ದಿದ್ದುವು. ವಸ್ತ್ರಗಳೂ, ಹಾಸಿಗೆಗಳೂ ಹೇರಳವಾಗಿದ್ದುವು. ಮನೋವಾಂಛಿತವಾದ ಫಲಗಳನ್ನು ಕೊಡುವ ವೃಕ್ಷಗಳು ಆ ದಿವ್ಯಭವನಗಳ ಆವರಣದಲ್ಲಿಯೇ ಇದ್ದುವು. ಅವೆಲ್ಲವನ್ನೂ ನಾನು ನೋಡಿದೆನು.

ನದ್ಯೋ ವೀಥ್ಯಃ ಸಭಾ ವಾಪ್ಯೋ ದೀರ್ಘಿಕಾಶ್ಚೈವ ಸರ್ವಶಃ ।
ಘೋಷವನ್ತಿ ಚ ಯಾನಾನಿ ಯುಕ್ತಾನ್ಯಥ ಸಹಸ್ರಶಃ ॥೨೬॥

ಆ ದಿವ್ಯಲೋಕಗಳಲ್ಲಿ ಅನೇಕನದಿಗಳಿದ್ದುವು. ಸುಂದರವಾದ ಬೀದಿಗಳಿದ್ದುವು. ಸಭಾಭವನಗಳಿದ್ದುವು. ಎಲ್ಲೆಡೆಯಲ್ಲಿಯೂ ಬಾವಿಗಳೂ-ಸರೋವರಗಳೂ ಇದ್ದುವು. ಅಶ್ವವೇ ಮೊದಲಾದ ವಾಹನಗಳಿಂದ ಯುಕ್ತವಾಗಿದ್ದ, ಗಂಭೀರವಾಗಿ ಶಬ್ದಮಾಡುತ್ತಿದ್ದ ಸಾವಿರಾರು ಯಾನಗಳು ಅಲ್ಲಿ ತಿರುಗಾಡುತ್ತಿದ್ದುವು.

ಕ್ಷೀರಸ್ರವಾ ವೈ ಸರಿತೋ ಗಿರೀಂಶ್ಚ
ಸರ್ಪಿಸ್ತಥಾ ವಿಮಲಂ ಚಾಪಿ ತೋಯಮ್ ।
ವೈವಸ್ವತಸ್ಯಾನುಮತಾಂಶ್ಚ ದೇಶಾ-
ನದೃಷ್ಟಪೂರ್ವಾನ್ಸುಬಹೂನಪಶ್ಯಮ್ ॥೨೭॥

ಹಾಲಿನ ಪ್ರವಾಹದಿಂದ ಕೂಡಿದ್ದ ನದಿಗಳನ್ನು ನಾನಲ್ಲಿ ನೋಡಿದೆನು. ಅನೇಕಪರ್ವತಗಳನ್ನೂ ನೋಡಿದೆನು. ತುಪ್ಪದ ನದಿಗಳನ್ನೂ ವಿಮಲವಾದ ನೀರಿನ ಸರೋವರಗಳನ್ನೂ ನೋಡಿದೆನು. ವೈವಸ್ವತನ ಅನುಮತಿಯಿಂದ ಹಿಂದೆ ಯಾವಾಗಲೂ ನೋಡದೇ ಇದ್ದ ಅನೇಕ ಪ್ರದೇಶಗಳನ್ನು ನಾನು ನೋಡಿದೆನು.

ಆ ಎಲ್ಲವನ್ನೂ ನೋಡಿ ಪುರಾತನನಾದ, ಪ್ರಭಾವಶಾಲಿಯಾದ ಧರ್ಮರಾಜನನ್ನು ಪ್ರಶ್ನಿಸಿದೆನು:

ಕ್ಷೀರಸ್ಯೈತಾಃ ಸರ್ಪಿಷಶ್ಚೈವ ನದ್ಯಃ
ಶಶ್ವತ್ಸ್ರೋತಾಃ ಕಸ್ಯ ಭೋಜ್ಯಾಃ ಪ್ರದಿಷ್ಟಾಃ ॥೨೮॥

"ಯಾವಾಗಲೂ ಪೂರ್ಣವಾಗಿ ಹರಿಯುತ್ತಿರುವ ಈ ಕ್ಷೀರ-ಘೃತನದಿಗಳು ಯಾರ ಉಪಭೋಗಕ್ಕಾಗಿ ನಿಯತವಾಗಿವೆ?"

ನನ್ನ ಪ್ರಶ್ನೆಗೆ ಉತ್ತರವಾಗಿ ಯಮನು ಹೇಳಿದನು :

ಯಮೋಽಬ್ರವೀದ್ವಿದ್ಧಿ ಭೋಜ್ಯಾಸ್ತ್ವಮೇತಾ
ಯೇ ದಾತಾರಃ ಸಾಧವೋ ಗೋರಸಾನಾಮ್ ।
ಅನ್ಯೇ ಲೋಕಾಃ ಶಾಶ್ವತಾ ವೀತಶೋಕೈಃ
ಸಮಾಕೀರ್ಣಾ ಗೋಪ್ರದಾನೇ ರತಾನಾಮ್ ॥೨೯॥

"ಯಾವ ಸತ್ಪುರುಷರು ಗೋರಸವನ್ನು (ಹಾಲು-ಮಜ್ಜಿಗೆ-ಮೊಸರು-ತುಪ್ಪಗಳನ್ನು) ದಾನಮಾಡುವರೋ–ಅಂತಹವರಿಗೆ ಇಲ್ಲಿರುವ ಹಾಲು-ತುಪ್ಪಗಳ ನದಿಗಳು ಭೋಜನಸಾಮಗ್ರಿಗಳಾಗಿವೆಯೆಂಬುದನ್ನು ನೀನು ತಿಳಿದುಕೊ. ಗೋದಾನಮಾಡುವುದರಲ್ಲಿಯೇ ಯಾರು ನಿರತರಾಗಿರುವರೋ–ಅಂತಹವರೆಲ್ಲರಿಗೂ ಶೋಕರಹಿತವಾದ ಶಾಶ್ವತವಾದ ಮತ್ತು ಅಂತಹ ಪುಣ್ಯಾತ್ಮರಿಂದಲೇ ತುಂಬಿರುವ ಇತರ ಪುಣ್ಯಲೋಕಗಳೂ ಇವೆ.

ನ ತ್ವೇತಾಸಾಂ ದಾನಮಾತ್ರಂ ಪ್ರಶಸ್ತಂ
ಪಾತ್ರಂ ಕಾಲೋ ಗೋವಿಶೇಷೋ ವಿಧಿಶ್ಚ ।
ಜ್ಞಾತ್ವಾ ದೇಯಂ ವಿಪ್ರ ಗವಾನ್ತರಂ ಹಿ
ದುಃಖಂ ಜ್ಞಾತುಂ ಪಾವಕಾದಿತ್ಯಭೂತಮ್ ॥೩೦॥

ವಿಪ್ರಶ್ರೇಷ್ಠನೇ! ಗೋವುಗಳನ್ನು ಕೇವಲ ದಾನಮಾಡುವುದೇ ಪ್ರಶಸ್ತವಲ್ಲ. ಸತ್ಪಾತ್ರನಾದ ಬ್ರಾಹ್ಮಣ, ದಾನಕೊಡಲು ಯೋಗ್ಯವಾದ ಕಾಲ, ಶ್ರೇಷ್ಠವಾದ ಉತ್ತಮಜಾತಿಯ ಹಸು ಮತ್ತು ಗೋದಾನವಿಧಿ-ಇವೆಲ್ಲವನ್ನೂ ತಿಳಿದುಕೊಂಡು ದಾನಮಾಡಬೇಕು. ಗೋವುಗಳಲ್ಲಿ ತಾರತಮ್ಯವನ್ನು

ತಿಳಿಯುವುದು ಬಹಳ ಕಷ್ಟವೇ ಸರಿ. ಅಂತೆಯೇ ಅಗ್ನಿ ಮತ್ತು ಸೂರ್ಯರ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿರುವ ಸತ್ಪಾತ್ರರಾದ ಬ್ರಾಹ್ಮಣರನ್ನು ಹುಡುಕುವುದೂ ಸುಲಭದ ಕಾರ್ಯವಲ್ಲ.

ಸ್ವಾಧ್ಯಾಯವಾನ್ಯೋಽತಿಮಾತ್ರಂ ತಪಸ್ವೀ
ವೈತಾನಸ್ಥೋ ಬ್ರಾಹ್ಮಣಃ ಪಾತ್ರಮಾಸಾಮ್ ।
ಕೃಚ್ಛ್ರೋತ್ಸೃಷ್ಟಾಃ ಪೋಷಣಾಭ್ಯಾಗತಾಶ್ಚ
ದ್ವಾರೈರೇತೈರ್ಗೋವಿಶೇಷಾಃ ಪ್ರಶಸ್ತಾಃ ॥೩೧॥

ಯಾವ ಬ್ರಾಹ್ಮಣನು ವೇದಾಧ್ಯಯನವನ್ನು ಮಾಡಿರುವನೋ, ಅಧಿಕತಪಸ್ವಿಯೋ, ಯಜ್ಞಾನುಷ್ಠಾನಗಳಲ್ಲಿ ನಿರತನಾಗಿರುವನೋ–ಅಂತಹ ವನು ಗೋದಾನವನ್ನು ಪ್ರತಿಗ್ರಹಿಸಲು ಶ್ರೇಷ್ಠಪಾತ್ರನಾಗಿದ್ದಾನೆ. ಮೊದಲನೆಯ ದಾಗಿ ಬಂಧನದಿಂದ ಮುಕ್ತವಾಗಿಸಲ್ಪಟ್ಟ ಹಸುಗಳೂ, ಎರಡನೆಯದಾಗಿ ಪೋಷಣಾರ್ಥವಾಗಿ ದರಿದ್ರನ ಮನೆಯಿಂದ ಆಗಮಿಸಿದ ಹಸುಗಳೂ ವಿಶೇಷರೀತಿಯ ಗೋವುಗಳೆಂದೂ ದಾನಕೊಡಲು ಪ್ರಶಸ್ತವಾದುವು ಗಳೆಂದೂ ಹೇಳುತ್ತಾರೆ.

ತಿಸ್ರೋ ರಾತ್ರ್ಯಸ್ತ್ವದ್ಭಿರುಪೋಷ್ಯ ಭೂಮೌ
ತೃಪ್ತಾ ಗಾವಸ್ತರ್ಪಿತೇಭ್ಯಃ ಪ್ರದೇಯಾಃ ।
ವತ್ಸೈಃ ಪ್ರೀತಾಃ ಸುಪ್ರಜಾಃ ಸೋಪಚಾರಾ-
ಸ್ತ್ರ್ಯಹಂ ದತ್ತ್ವಾಗೋರಸೈರ್ವರ್ತಿತವ್ಯಮ್ ॥೩೨॥

ದಾನಕೊಡುವವನು ಮೂರು ರಾತ್ರಿಗಳು ಉಪೋಷ್ಯವಿದ್ದು ಜಲಾಹಾರಿ ಯಾಗಿರಬೇಕು. ನೆಲದ ಮೇಲೆ ಮಲಗಬೇಕು. ದಾನಕೊಡುವ ಹಸುಗಳನ್ನು ಚೆನ್ನಾಗಿ ಮೇವು ಹಾಕಿ ತೃಪ್ತಿಗೊಳಿಸಿರಬೇಕು. ಅವು ತಮ್ಮ ಕರುಗಳೊಡನೆ ಪ್ರಸನ್ನವಾಗಿರಬೇಕು. ಮುಂದೆಯೂ ಅವು ಈಯುವಂತಿರಬೇಕು. ಹಾಲುಕರೆಯುವ ಕಂಚಿನ ಪಾತ್ರೆಯೇ ಮೊದಲಾದ ಸಾಮಗ್ರಿಗಳಿಂದ ಯುಕ್ತವಾಗಿರಬೇಕು. ಅಂತಹ ಗೋವುಗಳನ್ನು ಭೋಜನ-ದಕ್ಷಿಣಾದಿಗಳಿಂದ ತೃಪ್ತರಾದ ಬ್ರಾಹ್ಮಣರಿಗೆ ದಾನಮಾಡಬೇಕು. ದಾನಮಾಡಿದನಂತರ ಮೂರು ದಿನಗಳು ಕೇವಲ ಗೋರಸವನ್ನೇ ಆಹಾರವಾಗಿ ತೆಗೆದುಕೊಳ್ಳಬೇಕು.

ದತ್ತ್ವಾ ಧೇನುಂ ಸುವ್ರತಾಂ ಕಾಂಸ್ಯದೋಹಾಂ
ಕಲ್ಯಾಣವತ್ಸಾಮಪಲಾಯಿನೀಂ ಚ ।
ಯಾವನ್ತಿ ರೋಮಾಣಿ ಭವನ್ತಿ ತಸ್ಯಾ-
ಸ್ತಾವದ್ವರ್ಷಾಣ್ಯಶ್ನುತೇ ಸ್ವರ್ಗಲೋಕಮ್ ॥೩೩॥

ಒಳ್ಳೆಯ ಸ್ವಭಾವದಿಂದಿರುವ (ಒದೆಯುವುದು, ಹಾಯುವುದು ಇತ್ಯಾದಿ ದುರ್ಗುಣಗಳಿಲ್ಲದ) ಶುಭಲಕ್ಷಣಯುಕ್ತವಾದ, ಕರುವನ್ನು ಹೊಂದಿರುವ, ಓಡಿಹೋಗುವ ಸ್ವಭಾವವಿಲ್ಲದ ಧೇನುವನ್ನು ಕಂಚಿನ ಕರೆಯುವ ಪಾತ್ರೆಯೊಡನೆ ದಾನಮಾಡಿದವನು–ದಾನವಾಗಿ ಕೊಟ್ಟ ಆ ಹಸುವಿನಲ್ಲಿ ಎಷ್ಟು ರೋಮಗಳಿವೆಯೋ ಅಷ್ಟು ವರ್ಷಗಳ ಕಾಲ ಸ್ವರ್ಗಲೋಕದ ಭೋಗಗಳನ್ನು ಅನುಭವಿಸುತ್ತಾನೆ.

ತಥಾನಡ್ವಾಹಂ ಬ್ರಾಹ್ಮಣೇಭ್ಯಃ ಪ್ರದಾಯ
ದಾನ್ತಂ ಧುರ್ಯಂ ಬಲವನ್ತಂ ಯುವಾನಮ್ ।
ಕುಲಾನುಜೀವ್ಯಂ ವೀರ್ಯವನ್ತಂ ಬೃಹನ್ತಂ
ಭುಙ್ಕ್ತೇ ಲೋಕಾನ್ಸಮ್ಮಿತಾನ್ಧೇನುದಸ್ಯ ॥೩೪॥

ಇದೇ ರೀತಿಯಲ್ಲಿ ಚೆನ್ನಾಗಿ ಪಳಗಿರುವ, ಭಾರವನ್ನು ಹೊರಲು ಸಮರ್ಥವಾದ, ಬಲಿಷ್ಠವಾದ, ಪ್ರಾಯದ, ಕೃಷಿಕರ ಜೀವನವನ್ನು ನಿರ್ವಹಿಸುವ, ವೀರ್ಯಶಕ್ತಿಯುತವಾದ, ದೊಡ್ಡದಾದ ಎತ್ತನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡುವವನು–ಗೋವನ್ನು ದಾನಕೊಟ್ಟವನಿಗೆ ಲಭಿಸುವ ಲೋಕಗಳಿಗೆ ಸದೃಶವಾದ ಪುಣ್ಯಲೋಕಗಳನ್ನೇ ಉಪಭೋಗಿಸುತ್ತಾನೆ.

ಗೋಷು ಕ್ಷಾನ್ತಂ ಗೋಶರಣ್ಯಂ ಕೃತಜ್ಞಂ
ವೃತ್ತಿಗ್ಲಾನಂ ತಾದೃಶಂ ಪಾತ್ರಮಾಹುಃ ।
ವೃದ್ಧೇ ಗ್ಲಾನೇ ಸಮ್ಭ್ರಮೇ ವಾ ಮಹಾರ್ಥೇ
ಕೃಷ್ಯರ್ಥಂ ವಾ ಹೋಮ್ಯಹೇತೋಃ ಪ್ರಸೂತ್ಯಾಮ್ ॥
ಗುರ್ವರ್ಥಂ ವಾ ಬಾಲಪುಷ್ಟ್ಯಾಭಿಷಙ್ಗಾಂ
ಗಾಂ ವೈ ದಾತುಂ ದೇಶಕಾಲೋಽವಿಶಿಷ್ಟಃ।
ಅನ್ತರ್ಜ್ಞಾತಾಃ ಸಕ್ರಯಜ್ಞಾನಲಬ್ಧಾಃ
ಪ್ರಾಣಕ್ರೀತಾ ನಿರ್ಜಿತಾ ಯೌತಕಾಶ್ಚ ॥೩೬॥

ಗೋವುಗಳ ವಿಷಯದಲ್ಲಿ ಅತ್ಯಂತಕ್ಷಮಾಶೀಲನಾಗಿರುವ, ಅವುಗಳನ್ನು ರಕ್ಷಿಸುವುದರಲ್ಲಿ ಸಮರ್ಥನಾಗಿರುವ, ಕೃತಜ್ಞನಾದ, ವೃತ್ತಿರಹಿತನಾದ ಬ್ರಾಹ್ಮಣನು ಗೋದಾನಕ್ಕೆ ಸತ್ಪಾತ್ರನೆಂದು ಹೇಳುತ್ತಾರೆ. ವೃದ್ಧನಿಗೆ, ರೋಗದ ಕಾರಣದಿಂದ ಪಥ್ಯಭೋಜನವನ್ನು ಅಪೇಕ್ಷಿಸುವವನಿಗೆ, ದುರ್ಭಿಕ್ಷವೇ ಮೊದಲಾದುವುಗಳಿಂದ ಗಾಬರಿಗೊಂಡಿರುವವನಿಗೆ, ಮಹಾಯಜ್ಞವನ್ನು ಅನುಷ್ಠಾನಮಾಡಲು ಇಚ್ಛಿಸಿರುವವನಿಗೆ ಗೋವನ್ನು ದಾನಮಾಡಬೇಕು. ಬೇಸಾಯಕ್ಕಾಗಿ, ಅಗ್ನಿಹೋತ್ರದ ಹೋಮಾರ್ಥವಾಗಿ, ಮಕ್ಕಳು ಹುಟ್ಟಿದಾಗ, ಗುರುದಕ್ಷಿಣೆಕೊಡಲು ಶಿಷ್ಯನು ಯಾಚನೆಮಾಡಲು ಬಂದಾಗ, ಬಾಲಕನ ಪುಷ್ಟಿಗಾಗಿ ಗೋಕ್ಷೀರದ ಆವಶ್ಯಕತೆಯಿದ್ದಾಗ–ಇಂತಹ ವ್ಯಕ್ತಿಗಳಿಗೆ ಇಂತಹ ಕಾಲದಲ್ಲಿ ಗೋದಾನವನ್ನು ಮಾಡಬಹುದು. (ಇಂತಹ ಸಮಯಗಳಲ್ಲಿ ಪವಿತ್ರಕಾಲದ, ಪವಿತ್ರದೇಶದ ಮತ್ತು ವಿಧಿ-ನಿಯಮಗಳ ವಿಚಾರಮಾಡ ಬೇಕಾಗಿಲ್ಲ.) ಒಳ್ಳೆಯ ಮತ್ತು ಸಮೃದ್ಧವಾಗಿ ಹಾಲು ಕೊಡುವುವೆಂಬುದನ್ನೂ, ಉತ್ತಮವಾದ ಶೀಲ-ಸ್ವಭಾವಗಳಿಂದ ಕೂಡಿವೆಯೆಂಬುದನ್ನೂ ತಿಳಿದು ಕ್ರಯಕ್ಕೆ ಪಡೆದ ಗೋವುಗಳು, ಒಬ್ಬನಲ್ಲಿರುವ ಜ್ಞಾನವನ್ನು ಪುರಸ್ಕರಿಸುವ ಸಲುವಾಗಿ ಪಾರಿತೋಷಿಕರೂಪವಾಗಿ ಕೊಡಲ್ಪಟ್ಟ ಗೋವುಗಳು, ಪ್ರಾಣಿಗಳ ವಿನಿಮಯದಿಂದ ಪಡೆದ ಗೋವುಗಳು, ಯುದ್ಧದಲ್ಲಿ ಗೆದ್ದುತಂದ ಗೋವು ಗಳು ಮತ್ತು ವಿವಾಹಸಮಯದಲ್ಲಿ ಮಾವನಿಂದ ಬಳುವಳಿಯ ರೂಪವಾಗಿ ಕೊಡಲ್ಪಟ್ಟ ಗೋವುಗಳು–ದಾನಕೊಡಲು ಯೋಗ್ಯವಾದುವುಗಳು."

ತಂದೆಯೇ! ವೈವಸ್ವತನು ಹೇಳಿದ ಮಾತುಗಳನ್ನು ಕೇಳಿ ಪುನಃ ನಾನು ಅವನನ್ನು ಪ್ರಶ್ನಿಸಿದೆನು:

"ಯಮರಾಜನೇ! ಗೋವುಗಳೇ ಸಿಕ್ಕದಿದ್ದು ಗೋದಾನಮಾಡಲು ಸಾಧ್ಯವಾಗದಿದ್ದರೆ–ಮನುಷ್ಯರು ಗೋದಾನಮಾಡುವವರಿಗೆ ಪ್ರಾಪ್ತವಾಗುವ ಲೋಕಗಳಿಗೆ ಹೇಗೆ ಹೋಗುತ್ತಾರೆ?"

ನನ್ನ ಪ್ರಶ್ನೆಯನ್ನು ಕೇಳಿ ಧೀಮಂತನಾದ ಯಮರಾಜನು ಗೋದಾನಕ್ಕೆ ಸಂಬಂಧಿಸಿದ ಶ್ರೇಷ್ಠವಾದ ಗತಿಯನ್ನೂ ಮತ್ತು ಗೋದಾನದ ಫಲಕ್ಕೆ

ಸಮಾನವಾದ ಫಲಕೊಡುವ ದಾನಗಳನ್ನೂ ವಿವರಿಸಿ ಹೇಳಿದನು. ಅವನ ಅಭಿಪ್ರಾಯದಂತೆ ಗೋವಿಲ್ಲದೆಯೇ ಗೋದಾನಮಾಡಿದವರು ಅನೇಕ ರಿದ್ದಾರೆ. ಗೋವಿಗೆ ಬದಲಾಗಿ ಯಮರಾಜನು ಹೇಳಿದ ದಾನಪ್ರಕರಣಗಳು ಹೀಗಿವೆ:

ಅಲಾಭೇ ಯೋ ಗವಾಂ ದದ್ಯಾದ್ಘೃತಧೇನುಂ ಯತವ್ರತಃ ।
ತಸ್ಯೈತಾ ಘೃತವಾಹಿನ್ಯಃ ಕ್ಷರನ್ತೇ ವತ್ಸಲಾ ಇವ ॥೩೯॥

"ನಿಜವಾದ ಗೋವುಗಳು ಸಿಕ್ಕದಿದ್ದಲ್ಲಿ ಮನುಷ್ಯನು ನಿಯಮವಾದ ವ್ರತಾನುಷ್ಠಾನಪರನಾಗಿ ತುಪ್ಪದಿಂದ ಮಾಡಿದ ಧೇನುವನ್ನೇ ದಾನವಾಗಿ ಕೊಡಬೇಕು. ಹಾಗೆ ಘೃತಧೇನುವನ್ನು ದಾನಮಾಡಿದವನ ಸಲುವಾಗಿ ಇಲ್ಲಿ ಹರಿಯುತ್ತಿರುವ ಘೃತನದಿಗಳೇ ಕರುಗಳಿಂದ ಕೂಡಿದ ಗೋವುಗಳಂತೆ ಘೃತವನ್ನು ಸುರಿಸುತ್ತವೆ.

ಘೃತಾಲಾಭೇ ತು ಯೋ ದದ್ಯಾತ್ತಿಲಧೇನುಂ ಯತವ್ರತಃ ।
ಸ ದುರ್ಗಾತ್ತಾರಿತೋ ಧೇನ್ವಾ ಕ್ಷೀರನದ್ಯಾಂ ಪ್ರಮೋದತೇ ॥೪೦॥

ತುಪ್ಪವೂ ಸಿಕ್ಕದಿದ್ದರೆ ಮನುಷ್ಯನು ನಿಯತವಾದ ವ್ರತಾನುಷ್ಠಾನವನ್ನು ಮಾಡಿ ಎಳ್ಳಿನಿಂದ ಮಾಡಿದ ಗೋವನ್ನು ದಾನಮಾಡಬೇಕು. ಅವನು ಆ ಧೇನುವಿನ ಮೂಲಕವಾಗಿಯೇ ಕಷ್ಟಗಳಿಂದ ಪಾರಾಗಿ ಅವಸಾನಾನಂತರ ಇಲ್ಲಿರುವ ಕ್ಷೀರನದಿಯಲ್ಲಿ ಹಾಲನ್ನು ಕುಡಿದು ಆನಂದಪಡುತ್ತಾನೆ.

ತಿಲಾಲಾಭೇ ತು ಯೋ ದದ್ಯಾಜ್ಜಲಧೇನುಂ ಯತವ್ರತಃ ।
ಸ ಕಾಮಪ್ರವಹಾಂ ಶೀತಾಂ ನದೀಮೇತಾಮುಪಾಶ್ನುತೇ ॥೪೧॥

ಎಳ್ಳೂ ಸಿಕ್ಕದಿದ್ದರೆ ಮನುಷ್ಯನು ನಿಯತವಾದ ವ್ರತಾನುಷ್ಠಾನವನ್ನು ಮಾಡಿ ಜಲಧೇನುವನ್ನು ದಾನಕೊಡಬೇಕು. ಅದರ ಫಲವಾಗಿ ಆ ಮನುಷ್ಯನು ಅವಸಾನಾನಂತರದಲ್ಲಿ, ಅಭೀಷ್ಟವಾದ ವಸ್ತುಗಳನ್ನೇ ಪ್ರವಾಹ ರೂಪದಲ್ಲಿ ಒಯ್ಯುವ ಈ ಶೀತಲನದಿಯ ಸಮೀಪದಲ್ಲಿದ್ದುಕೊಂಡು, ಶಾಶ್ವತವಾದ ಸುಖವನ್ನು ಅನುಭವಿಸುತ್ತಾನೆ."

ಧರ್ಮದಿಂದ ಚ್ಯುತನಾಗದ ತಂದೆಯೇ! ಹೀಗೆ ಧರ್ಮರಾಜನು ಅಲ್ಲಿದ್ದ ಪುಣ್ಯಲೋಕಗಳನ್ನು ತೋರಿಸಿದನು. ಅವುಗಳೆಲ್ಲವನ್ನೂ ನೋಡಿ ನಾನು ಪರಮಹರ್ಷಿತನಾದೆನು.

ಅಪ್ಪ! ನಾನು ನಿನಗೆ ಈ ಒಂದು ಪ್ರಿಯವಾದ ವೃತ್ತಾಂತವನ್ನು ಹೇಳುವೆನು. ಅತ್ಯಲ್ಪಧನದಿಂದ ಸಾಧ್ಯವಾಗುವ ಮಹಾಕ್ರತುವನ್ನು ಮಾಡುವ ವಿಧಾನವನ್ನು ನಾನು ಯಮನಿಂದ ತಿಳಿದುಕೊಂಡು ಬಂದಿದ್ದೇನೆ. ಆ ಮಹಾಕ್ರತುವು ವೇದವಿಧಿಗೆ ಅನುಸಾರವಾಗಿ ನನ್ನಿಂದ ಪ್ರಕಟವಾಗಿ ಸರ್ವತ್ರ ಪ್ರಚಲಿತವಾಗುತ್ತದೆ.

ಶಾಪೋ ಹ್ಯಯಂ ಭವತೋಽನುಗ್ರಹಾಯ
ಪ್ರಾಪ್ತೋ ಮಯಾ ಯತ್ರ ದೃಷ್ಟೋ ಯಮೋ ವೈ ।
ದಾನವ್ಯುಷ್ಟಿಂ ತತ್ರ ದೃಷ್ಟ್ವಾ ಮಹಾತ್ಮ-
ನ್ನಿಃಸಂದಿಗ್ಧಾನ್ದಾನಧರ್ಮಾಂಶ್ಚರಿಷ್ಯೇ ॥೪೪॥

ಮಹಾತ್ಮನೇ! ನೀನು ಕೊಟ್ಟ ಶಾಪವು ನನಗೆ ಪರಮಾನುಗ್ರಹವಾಗಿಯೇ ಪರಿಣಮಿಸಿತು. ಶಾಪದ ಕಾರಣದಿಂದ ನಾನು ಯಮರಾಜನನ್ನು ಸಂದರ್ಶಿಸುವಂತಾಯಿತು. ಯಮಲೋಕದಲ್ಲಿ ದಾನದ ಫಲವನ್ನು ಪ್ರತ್ಯಕ್ಷವಾಗಿ ನೋಡಿಬಂದಿರುವ ನಾನು ಸಂದೇಹಕ್ಕೆ ಎಡೆಯೇ ಇಲ್ಲದ ದಾನಧರ್ಮವನ್ನು ಅನುಷ್ಠಾನಮಾಡುತ್ತೇನೆ.

ಮಹರ್ಷಿಯೇ! ನನ್ನ ವಿಷಯದಲ್ಲಿ ಸಂತೋಷಗೊಂಡ ಯಮನು ಪುನಃ ಪುನಃ ಈ ವಿಷಯವನ್ನು ನನ್ನೊಡನೆ ಹೇಳಿದನು :

ದಾನೇನ ಯಃ ಪ್ರಯತೋಽಭೂತ್ಸದೈವ
ವಿಶೇಷತೋ ಗೋಪ್ರದಾನಂ ಚ ಕುರ್ಯಾತ್ ॥೪೫॥

"ಮಗು! ದಾನಮಾಡುವುದರಿಂದ ಪೂತಾತ್ಮನಾಗಲು ಇಚ್ಛಿಸುವವನು ಯಾವಾಗಲೂ ವಿಶೇಷವಾಗಿ ಗೋದಾನವನ್ನು ಮಾಡಬೇಕು.

ಶುದ್ಧೋ ಹ್ಯರ್ಥೋ ನಾವಮನ್ಯಸ್ವ ಧರ್ಮಾ-
ನ್ಪಾತ್ರೇ ದೇಯಂ ದೇಶಕಾಲೋಪಪನ್ನೇ ।

ತಸ್ಮಾದ್ಗಾವಸ್ತೇ ನಿತ್ಯಮೇವ ಪ್ರದೇಯಾ
ಮಾ ಭೂಚ್ಚ ತೇ ಸಂಶಯಃ ಕಶ್ಚಿದತ್ರ ||೪೬||

ಮುನಿಕುಮಾರನೇ! ಗೋಧನವೆಂಬುದು ಅತ್ಯಂತಶುದ್ಧವಾದುದು. ಧರ್ಮಗಳನ್ನು ಎಂದಿಗೂ ಅನಾದರಣೆಮಾಡಬೇಡ. ಉತ್ತಮವಾದ ದೇಶ ಮತ್ತು ಕಾಲಗಳು ಒದಗಿದಾಗ ಸತ್ಪಾತ್ರನಲ್ಲಿ ದಾನಮಾಡಬೇಕು. ಆದುದರಿಂದ ನೀನು ಸದಾ ಗೋದಾನವನ್ನು ಮಾಡುತ್ತಾ ಇರಬೇಕು. ಈ ವಿಷಯದಲ್ಲಿ ನಿನ್ನ ಮನಸ್ಸಿನಲ್ಲಿ ಸ್ವಲ್ಪವಾದರೂ ಸಂಶಯವು ಉಂಟಾಗದಿರಲಿ.

ಏತಾಃ ಪುರಾ ಹ್ಯದದನ್ನಿತ್ಯಮೇವ
ಶಾನ್ತಾತ್ಮಾನೋ ದಾನಪಥೇ ನಿವಿಷ್ಟಾಃ ।
ತಪಾಂಸ್ಯುಗ್ರಾಣ್ಯಪ್ರತಿಶಙ್ಕಮಾನಾ-
ಸ್ತೇ ವೈ ದಾನಂ ಪ್ರದದುಶ್ಚೈವ ಶಕ್ತ್ಯಾ ||೪೭||

ಹಿಂದೆ ಶಾಂತಚಿತ್ತರಾದ ಪುರುಷರು ದಾನಧರ್ಮಮಾರ್ಗವನ್ನೇ ಆಶ್ರಯಿಸಿ ನಿತ್ಯವೂ ಗೋದಾನವನ್ನು ಮಾಡುತ್ತಲೇ ಇದ್ದರು. ಅವರಿಗೆ ತಮ್ಮ ಉಗ್ರವಾದ ತಪಸ್ಸಿನ ಫಲಪ್ರಾಪ್ತಿಯ ವಿಷಯದಲ್ಲಿ ಸ್ವಲ್ಪವಾದರೂ ಸಂದೇಹವಿಲ್ಲದಿದ್ದರೂ ಅತಿಸುಲಭವೆನಿಸಿದ ಗೋದಾನವನ್ನು ಯಥಾಶಕ್ತಿ ಮಾಡುತ್ತಲೇ ಇದ್ದರು.

ಕಾಲೇ ಚ ಶಕ್ತ್ಯಾ ಮತ್ಸರಂ ವರ್ಜಯಿತ್ವಾ
ಶುದ್ಧಾತ್ಮಾನಃ ಶ್ರದ್ಧಿನಃ ಪುಣ್ಯಶೀಲಾಃ ।
ದತ್ತ್ವಾ ಗಾ ವೈ ಲೋಕಮಮುಂ ಪ್ರಪನ್ನಾ
ದೇದೀಪ್ಯನ್ತೇ ಪುಣ್ಯಶೀಲಾಸ್ತು ನಾಕೇ ||೪೮||

ಶುದ್ಧಚಿತ್ತರಾದ, ಶ್ರದ್ಧಾಳುಗಳಾದ, ಪುಣ್ಯಾತ್ಮರಾದ ಪುರುಷರು ಮಾತ್ಸರ್ಯವನ್ನು ತೊರೆದು ಉಚಿತವಾದ ಕಾಲಗಳಲ್ಲಿ ಯಥಾಶಕ್ತಿ ಗೋವುಗಳನ್ನು ದಾನಮಾಡಿ ಈ ಲೋಕಕ್ಕೆ ಬಂದು ಪುಣ್ಯಶೀಲರಾಗಿ ಅವಸಾನಾನಂತರದಲ್ಲಿ ಸ್ವರ್ಗದಲ್ಲಿ ತೊಳ-ತೊಳಗಿ ಬೆಳಗುತ್ತಿರುತ್ತಾರೆ.

ಏತದ್ದಾನಂ ನ್ಯಾಯಲಬ್ಧಂ ದ್ವಿಜೇಭ್ಯಃ
ಪಾತ್ರೇ ದತ್ತಂ ಪ್ರಾಪಣೀಯಂ ಪರೀಕ್ಷ್ಯ ।
ಕಾಮ್ಯಾಷ್ಟಮ್ಯಾ ವರ್ತಿತವ್ಯಂ ದಶಾಹಂ
ರಸೈರ್ಗವಾಂ ಶಕೃತಾ ಪ್ರಸ್ನವೈರ್ವಾ ॥೪೯॥

ನ್ಯಾಯಪೂರ್ವಕವಾಗಿ ಸಂಪಾದಿಸಿದ ಗೋವನ್ನು ಬ್ರಾಹ್ಮಣರಿಗೆ ದಾನವಾಗಿ ಕೊಡಬೇಕು. ಪರೀಕ್ಷಿಸಿ ಸತ್ಪಾತ್ರನಲ್ಲಿ ದಾನಮಾಡಿದ ಗೋವನ್ನು ಅವನ ಮನೆಗೆ ಕಳುಹಿಸಿಕೊಡಬೇಕು. ಯಾವುದಾದರೊಂದು ಶುಭವಾದ ಅಷ್ಟಮಿಯಿಂದ ಪ್ರಾರಂಭಿಸಿ ಹತ್ತು ದಿವಸಗಳವರೆಗೆ ಗೋರಸಗಳ ಸೇವನೆಯಿಂದಾಗಲೀ (ಹಾಲು-ಮೊಸರು-ತುಪ್ಪಗಳ ಸೇವನೆಯಿಂದಾಗಲೀ) ಗೋಮಯ-ಗೋಮೂತ್ರಗಳ ಸೇವನೆಯಿಂದಾಗಲೀ ಇರಬೇಕು.

ದೇವವ್ರತೀ ಸ್ಯಾದ್ವೃಷಭಪ್ರದಾನೈ-
ರ್ವೇದಾವಾಪ್ತಿರ್ಗೋಯುಗಸ್ಯ ಪ್ರದಾನೇ ।
ತೀರ್ಥಾವಾಪ್ತಿರ್ಗೋಪ್ರಯುಕ್ತಪ್ರದಾನೇ
ಪಾಪೋತ್ಸರ್ಗಃ ಕಪಿಲಾಯಾಃ ಪ್ರದಾನೇ ॥೫೦॥

ಒಂದು ಎತ್ತನ್ನು ದಾನಮಾಡುವ ಮನುಷ್ಯನು ದೇವತ್ವವನ್ನು ಹೊಂದಲು ವ್ರತವನ್ನು ಮಾಡುವ ದೇವವ್ರತಿಯಾಗುತ್ತಾನೆ. ಎರಡು ಎತ್ತುಗಳನ್ನು ದಾನಮಾಡಿದರೆ ಜನ್ಮಾಂತರದಲ್ಲಿ ವೇದವಿದ್ಯೆಯು ಸಿದ್ಧಿಸುತ್ತದೆ. ಎತ್ತುಗಳಿಂದ ಕೂಡಿದ ಶಕಟವನ್ನು ದಾನಮಾಡಿದರೆ ತೀರ್ಥಯಾತ್ರೆಯನ್ನು ಮಾಡಿದ ಫಲವು ಪ್ರಾಪ್ತವಾಗುತ್ತದೆ. ಕಪಿಲಾಧೇನುವಿನ ದಾನದಿಂದ ಪಾಪಗಳ ನಿರಸನವಾಗುತ್ತದೆ.

ಗಾಮಪ್ಯೇಕಾಂ ಕಪಿಲಾಂ ಸಮ್ಪ್ರದಾಯ
ನ್ಯಾಯೋಪೇತಾಂ ಕಲುಷಾದ್ವಿಪ್ರಮುಚ್ಯೇತ್ ।
ಗವಾಂ ರಸಾತ್ಪರಮಂ ನಾಸ್ತಿ ಕಿಂಚಿ-
ದ್ಗವಾಂ ಪ್ರದಾನಂ ಸುಮಹದ್ವದನ್ತಿ ॥೫೧॥

ಮನುಷ್ಯನು ನ್ಯಾಯೋಚಿತವಾದ ರೀತಿಯಲ್ಲಿ ಸಂಪಾದಿಸಿದ ಕಪಿಲ ವರ್ಣದ ಒಂದು ಗೋವನ್ನು ದಾನವಾಗಿ ಕೊಟ್ಟರೂ ಸಮಸ್ತಪಾಪಗಳಿಂದ

ವಿಮುಕ್ತನಾಗುತ್ತಾನೆ. ಗೋರಸಕ್ಕಿಂತಲೂ (ಹಾಲಿಗಿಂತಲೂ) ಶ್ರೇಷ್ಠವಾದ ವಸ್ತುವು ಬೇರೆ ಯಾವುದೂ ಇಲ್ಲ. ಆದುದರಿಂದ ವಿದ್ವಾಂಸರು ಗೋದಾನವನ್ನು ಮಹತ್ತ್ವಪೂರ್ಣವಾದ ದಾನವೆಂದು ಹೇಳುತ್ತಾರೆ.

ಗಾವೋ ಲೋಕಾಂಸ್ತಾರಯನ್ತಿ ಕ್ಷರನ್ತ್ಯೋ
ಗಾವಶ್ಚಾನ್ನಂ ಸಂಜನಯನ್ತಿ ಲೋಕೇ ।
ಯಸ್ತಂ ಜಾನನ್ನ ಗವಾಂ ಹಾರ್ದಮೇತಿ
ಸ ವೈ ಗನ್ತಾ ನಿರಯಂ ಪಾಪಚೇತಾಃ ॥೫೨॥

ಹಸುಗಳು ಹಾಲನ್ನು ಹರಿಸಿ ಸಕಲಲೋಕಗಳನ್ನೂ ಹಸಿವಿನಿಂದ ಪಾರುಮಾಡುತ್ತವೆ. ಹಸುಗಳು ಲೋಕದಲ್ಲಿ ಅನ್ನವನ್ನು ಸೃಷ್ಟಿಸುತ್ತವೆ. ಈ ವಿಷಯಗಳನ್ನು ತಿಳಿದೂ ಯಾವನು ಹಸುಗಳ ವಿಷಯದಲ್ಲಿ ಸೌಹಾರ್ದಭಾವದಿಂದಿರುವುದಿಲ್ಲವೋ–ಅಂತಹ ಪಾಪಾತ್ಮನಾದ ಮನುಷ್ಯನು ನರಕಕ್ಕೆ ಹೋಗುವನು.

ಯೈಸ್ತದ್ದತ್ತಂ ಗೋಸಹಸ್ರಂ ಶತಂ ವಾ
ದಶಾರ್ಧಂ ವಾ ದಶ ವಾ ಸಾಧುವತ್ಸಮ್ ।
ಅಪ್ಯೇಕಾ ವೈ ಸಾಧವೇ ಬ್ರಾಹ್ಮಣಾಯ
ಸಾಸ್ಯಾಮುಷ್ಮಿನ್ಪುಣ್ಯತೀರ್ಥಾ ನದೀ ವೈ ॥೫೩॥

ಯಾರು ಸತ್ಪಾತ್ರರಲ್ಲಿ ಸಾವಿರ, ನೂರು, ಹತ್ತು, ಐದು ಹಸುಗಳನ್ನು ದಾನಮಾಡುವರೋ-ಯಾರು ಒಳ್ಳೆಯ ಕರುವಿನಿಂದ ಕೂಡಿದ ಒಂದು ಹಸುವನ್ನಾದರೂ ದಾನವಾಗಿ ಕೊಡುವರೋ–ಅಂತಹವರ ಸಲುವಾಗಿ ಆ ಧೇನುಗಳು ಪರಲೋಕದಲ್ಲಿ ಇಷ್ಟಾರ್ಥಗಳನ್ನು ಕೊಡುವ ಪುಣ್ಯತೀರ್ಥದಿಂದ ಕೂಡಿದ ನದಿಗಳಾಗುತ್ತವೆ.

ಪ್ರಾಪ್ತ್ಯಾ ಪುಷ್ಟ್ಯಾ ಲೋಕಸಂರಕ್ಷಣೇನ
ಗಾವಸ್ತುಲ್ಯಾಃ ಸೂರ್ಯಪಾದೈಃ ಪೃಥಿವ್ಯಾಮ್ ।
ಶಬ್ದಶ್ಚೈಕಃ ಸಂತತಿಶ್ಚೋಪಭೋಗಾ-
ಸ್ತಸ್ಮಾದ್ಗೋದಃ ಸೂರ್ಯ ಇವಾವಭಾತಿ ॥೫೪॥

ಪ್ರಾಪ್ತಿ, ಪುಷ್ಟಿ ಮತ್ತು ಲೋಕಸಂರಕ್ಷಣಗಳಿಂದ ಪ್ರಪಂಚದಲ್ಲಿ ಗೋವುಗಳು ಸೂರ್ಯನ ಕಿರಣಗಳಿಗೆ ಸಮಾನವಾಗಿವೆ. ಎರಡರ ಶಬ್ದವೂ

ಒಂದೇ ಆಗಿರುತ್ತದೆ. ಗೋಶಬ್ದವು ಧೇನುವಾಚಕವೂ ರಶ್ಮಿವಾಚಕವೂ ಆಗಿದೆ. ಗೋವಿನಿಂದಲೇ ಸಂತಾನ ಮತ್ತು ಉಪಭೋಗಗಳು ಪ್ರಾಪ್ತವಾಗುತ್ತವೆ. ಆದುದರಿಂದ ಗೋದಾನವನ್ನು ಮಾಡಿದವನು ಕಿರಣಗಳನ್ನು ಪ್ರಸರಿಸುವ ಸೂರ್ಯನಂತೆಯೇ ಪ್ರಕಾಶಿಸುತ್ತಾನೆ.

ಗುರುಂ ಶಿಷ್ಯೋ ವರಯೇದ್ಗೋಪ್ರದಾನೇ
ಸ ವೈ ಗನ್ತಾ ನಿಯತಂ ಸ್ವರ್ಗಮೇವ ।
ವಿಧಿಜ್ಞಾನಾಂ ಸುಮಹದ್ಧರ್ಮ ಏಷ
ವಿಧಿಂ ಹ್ಯಾದ್ಯಂ ವಿಧಯಃ ಸಂವಿಶನ್ತಿ ॥೫೫॥

ಶಿಷ್ಯನು ಗೋದಾನಮಾಡಬೇಕಾದಾಗ ಗುರುವನ್ನೇ ಆಹ್ವಾನಿಸಿ ಅವನಿಗೇ ಗೋದಾನವನ್ನು ಮಾಡಬೇಕು. ಹಾಗೆ ಗೋದಾನವನ್ನು ಮಾಡಿದ ಶಿಷ್ಯನು ಅವಸಾನಾನಂತರದಲ್ಲಿ ನಿಶ್ಚಯವಾಗಿಯೂ ಸ್ವರ್ಗಕ್ಕೆ ಹೋಗುತ್ತಾನೆ. ದಾನವಿಧಿಯನ್ನು ತಿಳಿದಿರುವವರಿಗೆ ಗೋದಾನಧರ್ಮವು ಮಹಾಧರ್ಮವಾಗಿರುತ್ತದೆ. ಉಳಿದೆಲ್ಲ ವಿಧಿಗಳೂ ಮೊದಲನೆಯದಾದ ಈ ಗೋದಾನವಿಧಿಯಲ್ಲಿಯೇ ಅಂತರ್ಗತವಾಗುತ್ತವೆ.

ಇದಂ ದಾನಂ ನ್ಯಾಯಲಬ್ಧಂ ದ್ವಿಜೇಭ್ಯಃ
ಪಾತ್ರೇ ದತ್ತ್ವಾ ಪ್ರಾಪಯೇಥಾಃ ಪರೀಕ್ಷ್ಯ ।
ತ್ವಯ್ಯಾಶಂಸನ್ತ್ಯಮರಾ ಮಾನವಾಶ್ಚ
ವಯಂ ಚಾಪಿ ಪ್ರಸೃತೇ ಪುಣ್ಯಶೀಲೇ ॥೫೬॥

ನೀನು ನ್ಯಾಯೋಚಿತವಾದ ರೀತಿಯಲ್ಲಿ ಹಸುಗಳನ್ನು ಸಂಪಾದಿಸಿ ಅವುಗಳನ್ನು ಬ್ರಾಹ್ಮಣರಿಗೆ ದಾನಕೊಡಬೇಕು. ಚೆನ್ನಾಗಿ ಪರೀಕ್ಷಿಸಿ ಸತ್ಪಾತ್ರನಿಗೆ ಹಸುವನ್ನು ದಾನಕೊಟ್ಟನಂತರ ಆ ಹಸುವನ್ನು ಅವನ ಮನೆಗೇ ಒಯ್ದುಕೊಡಬೇಕು. ದೇವತೆಗಳೂ, ಮನುಷ್ಯರೂ ಮತ್ತು ನಾವೂ ವಿನೀತನಾದ ಮತ್ತು ಪುಣ್ಯಶೀಲನಾದ ನಿನ್ನಲ್ಲಿ ದಾನಧರ್ಮವನ್ನು ಅಪೇಕ್ಷಿಸುತ್ತೇವೆ.”

ಬ್ರಹ್ಮರ್ಷಿಯೇ! ಯಮಧರ್ಮನು ಹೀಗೆ ಹೇಳಿದನು. ಅನಂತರ ಧರ್ಮಾತ್ಮನಾದ ಧರ್ಮರಾಜನನ್ನು ನಾನು ತಲೆಬಾಗಿ ನಮಸ್ಕರಿಸಿ ಅವನಿಂದ ಅನುಜ್ಞೆಯನ್ನು ಪಡೆದು ನಿನ್ನ ಚರಣಗಳ ಸಮೀಪಕ್ಕೆ ಹಿಂದಿರುಗಿದೆನು."

೭೧ನೆಯ ಅಧ್ಯಾಯವು ಮುಗಿಯಿತು.

೭೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೋಲೋಕಗಳ ಮತ್ತು ಗೋದಾನದ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ : ಭೀಷ್ಮನಿಂದ-ಬ್ರಹ್ಮನನ್ನು ಕೇಳಿದ ಇಂದ್ರನ ಪ್ರಶ್ನೆಗಳ ವಿವರಣೆ

ಯುಧಿಷ್ಠಿರನು ಹೇಳುತ್ತಾನೆ :

ಉಕ್ತಂ ತೇ ಗೋಪ್ರದಾನಂ ವೈ ನಾಚಿಕೇತಮೃಷಿಂ ಪ್ರತಿ ।
ಮಾಹಾತ್ಮ್ಯಮಪಿ ಚೈವೋಕ್ತಮುದ್ದೇಶೇನ ಗವಾಂ ಪ್ರಭೋ ॥೧॥

"ಪ್ರಭುವೇ! ನಾಚಿಕೇತಮುನಿಯ ವಿಷಯವನ್ನು ಹೇಳುವಾಗ ನೀನು ಗೋವುಗಳ ಸಂಬಂಧವಾಗಿ ಅವುಗಳ ದಾನದ ವಿಷಯವನ್ನೂ ಮತ್ತು ಮಾಹಾತ್ಮ್ಯವನ್ನೂ ಹೇಳಿದೆ.

ಮಹಾಮತಿಯಾದ ಪಿತಾಮಹನೇ! ಅಜ್ಞಾನದಿಂದ ಮಾಡಿದ ಒಂದು ಅಪರಾಧಕ್ಕಾಗಿ ಮಹಾತ್ಮನಾದ ನೃಗನು ಮಹಾದುಃಖವನ್ನೇ ಅನುಭವಿಸಿದನು. ದ್ವಾರವತಿಯ ಬಳಿಯಲ್ಲಿದ್ದ ಬಾವಿಯಲ್ಲಿ ನೃಗನು ವಾಸಮಾಡುತ್ತಿದ್ದಾಗ ಶ್ರೀಕೃಷ್ಣನೇ ಅವನ ಮೋಕ್ಷಕ್ಕೆ ಕಾರಣಭೂತನಾದನು. ಈ ವಿಷಯವನ್ನು ನಾನು ನಿನ್ನಿಂದ ಕೇಳಿದೆನು. ಆದರೆ ಗೋಲೋಕದ ವಿಷಯದಲ್ಲಿ ನನಗೊಂದು ಸಂದೇಹವಿದೆ. ಗೋದಾನಮಾಡಿದವರು ಯಾವ ಲೋಕದಲ್ಲಿ ನಿವಾಸ ಮಾಡುತ್ತಾರೆ? ಎಂಬುದನ್ನು ಕೇಳಲು ಇಚ್ಛಿಸುತ್ತೇನೆ."

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಈ ವಿಷಯದಲ್ಲಿ ವಿದ್ವಾಂಸರು ಪುರಾತನವಾದ ಇತಿಹಾಸವನ್ನು ಉದಾಹರಿಸುತ್ತಾರೆ. ಹಿಂದೆ ಇಂದ್ರನು ಬ್ರಹ್ಮನನ್ನು ಈ ಪ್ರಶ್ನೆಯನ್ನೇ ಕೇಳಿದ್ದನು:

ಸ್ವರ್ಲೋಕವಾಸಿನಾಂ ಲಕ್ಷ್ಮೀಮಭಿಭೂಯ ಸ್ವಯಾರ್ಚಿಷಾ ।
ಗೋಲೋಕವಾಸಿನಃ ಪಶ್ಯೇ ವ್ರಜತಃ ಸಂಶಯೋಽತ್ರ ಮೇ ॥೬॥

“ಚತುರ್ಮುಖನೇ! ಗೋಲೋಕದ ನಿವಾಸಿಗಳು ತಮ್ಮದೇ ಆದ ತೇಜಸ್ಸಿನಿಂದ ಸ್ವರ್ಗಲೋಕವಾಸಿಗಳ ಕಾಂತಿಯನ್ನೂ ತಿರಸ್ಕರಿಸಿ ಹೋಗುತ್ತಿರುವುದನ್ನು ನಾನು ಕಾಣುತ್ತಿದ್ದೇನೆ. ಈ ವಿಷಯದಲ್ಲಿ ನನಗೊಂದು ಸಂದೇಹವುಂಟಾಗಿದೆ.

ಕೀದೃಶಾ ಭಗವಲ್ಲೋಕಾ ಗವಾಂ ತದ್ಬ್ರೂಹಿ ಮೇಽನಘ ।
ಯಾನಾವಸನ್ತಿ ದಾತಾರ ಏತದಿಚ್ಛಾಮಿ ವೇದಿತುಮ್ ॥೭॥

ಅನಘನೇ! ಗೋದಾನಮಾಡುವವರು ಅವಸಾನಾನಂತರದಲ್ಲಿ ವಾಸ ಮಾಡುವ ಲೋಕಗಳು ಎಂತಹವು? ಈ ವಿಷಯವನ್ನು ತಿಳಿಯಲು ಅಪೇಕ್ಷಿಸಿದ್ದೇನೆ.

ಕೀದೃಶಾಃ ಕಿಂಫಲಾಃ ಕಿಂಸ್ವಿತ್ಪರಮಸ್ತತ್ರ ಕೋ ಗುಣಃ ।
ಕಥಂ ಚ ಪುರುಷಾಸ್ತತ್ರ ಗಚ್ಛನ್ತಿ ವಿಗತಜ್ವರಾಃ ॥೮॥

ಆ ಲೋಕಗಳು ಹೇಗಿವೆ? ಅಲ್ಲಿ ಎಂತಹ ಫಲಗಳು ಸಿಕ್ಕುತ್ತವೆ? ಅಲ್ಲಿಯ ಸರ್ವಶ್ರೇಷ್ಠವಾದ ಗುಣವು ಯಾವುದು? ಗೋದಾನಮಾಡುವವರು ಎಲ್ಲ ವಿಧವಾದ ಚಿಂತೆಗಳಿಂದಲೂ ಮುಕ್ತರಾಗಿ ಅಲ್ಲಿಗೆ ಹೇಗೆ ಹೋಗುತ್ತಾರೆ?

ಕಿಯತ್ಕಾಲಂ ಪ್ರದಾನಸ್ಯ ದಾತಾ ಚ ಫಲಮಶ್ನುತೇ ।
ಕಥಂ ಬಹುವಿಧಂ ದಾನಂ ಸ್ಯಾದಲ್ಪಮಪಿ ವಾ ಕಥಮ್ ॥೯॥

ಗೋದಾನಮಾಡಿದವನು ಎಷ್ಟು ಸಮಯದವರೆಗೆ ಅಲ್ಲಿಯ ಸುಖೋಪಭೋಗಗಳನ್ನು ಅನುಭವಿಸಿಕೊಂಡಿರುತ್ತಾನೆ? ಅನೇಕವಿಧವಾದ

ದಾನವನ್ನು ಹೇಗೆ ಮಾಡಲು ಸಾಧ್ಯವಾಗುತ್ತದೆ? ಸ್ವಲ್ಪವೇ ದಾನವನ್ನು ಮಾಡಿ ಮಹಾಫಲವನ್ನು ಹೊಂದುವುದು ಹೇಗೆ?

ಬಹ್ವೀನಾಂ ಕೀದೃಶಂ ದಾನಮಲ್ಪಾನಾಂ ವಾಪಿ ಕೀದೃಶಮ್ ।
ಅದತ್ತ್ವಾ ಗೋಪ್ರದಾಃ ಸನ್ತಿ ಕೇನ ವಾ ತಚ್ಚ ಶಂಸ ಮೇ ॥೧೦॥

ಅಸಂಖ್ಯಾತವಾದ ಗೋವುಗಳ ದಾನವು ಯಾವ ರೀತಿಯದು? ಅಲ್ಪಸಂಖ್ಯಾತವಾದ ಗೋವುಗಳ ದಾನವು ಯಾವ ರೀತಿಯದು? ಗೋವುಗಳನ್ನೇ ದಾನಮಾಡದಿದ್ದರೂ ಗೋದಾನಿಗಳು ಹೇಗಾಗುತ್ತಾರೆ?–ಈ ಎಲ್ಲ ವಿಷಯಗಳನ್ನೂ ಹೇಳು.

ಕಥಂ ವಾ ಬಹುದಾತಾ ಸ್ಯಾದಲ್ಪದಾತ್ರಾ ಸಮಃ ಪ್ರಭೋ ।
ಅಲ್ಪಪ್ರದಾತಾ ಬಹುದಃ ಕಥಂ ಸ್ವಿತ್ಸ್ಯಾದಿಹೇಶ್ವರ ॥೧೧॥

ಸುರೇಶ್ವರನೇ! ಬಹುದಾನಮಾಡುವವನು ಅಲ್ಪದಾನಿಗೆ ಸಮಾನನು ಹೇಗಾಗುತ್ತಾನೆ ? ಅಲ್ಪದಾನಿಯು ಬಹುದಾನಿಗೆ ಸಮಾನನು ಹೇಗಾಗುತ್ತಾನೆ?

ಕೀದೃಶೀ ದಕ್ಷಿಣಾ ಚೈವ ಗೋಪ್ರದಾನೇ ವಿಶಿಷ್ಯತೇ ।
ಏತತ್ತಥ್ಯೇನ ಭಗವನ್ಮಮ ಶಂಸಿತುಮರ್ಹಸಿ ॥೧೨॥

ಗೋದಾನದಲ್ಲಿ ಎಂತಹ ದಕ್ಷಿಣೆಯು ಶ್ರೇಷ್ಠವೆನಿಸುತ್ತದೆ?–ಈ ಎಲ್ಲ ವಿಷಯಗಳನ್ನೂ ನನಗೆ ಯಥಾವತ್ತಾಗಿ ಹೇಳುವ ಕೃಪೆಮಾಡು.”

೭೨ನೆಯ ಅಧ್ಯಾಯವು ಮುಗಿಯಿತು.

೭೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮನು ಇಂದ್ರನಿಗೆ ಗೋಲೋಕಗಳನ್ನೂ ಗೋದಾನದ ಮಹಿಮೆಯನ್ನೂ ವಿವರಿಸಿ ಹೇಳಿದುದು

ಧರ್ಮಜ! ಬ್ರಹ್ಮನು ಹೇಳುತ್ತಾನೆ :

ಯೋಽಯಂ ಪ್ರಶ್ನಸ್ತ್ವಯಾ ಪೃಷ್ಟೋ ಗೋಪ್ರದಾನಾದಿಕಾರಿತಃ ।
ನಾಸ್ತಿ ಪ್ರಷ್ಟಾಸ್ತಿ ಲೋಕೇಽಸ್ಮಿಂಸ್ತ್ವತ್ತೋಽನ್ಯೋ ಹಿ ಶತಕ್ರತೋ ॥೧॥

"ಶತಕ್ರತುವೇ! ಗೋದಾನಕ್ಕೆ ಸಂಬಂಧಿಸಿದಂತೆ ನೀನು ಯಾವ ಈ ಪ್ರಶ್ನೆಗಳನ್ನು ಕೇಳಿರುವೆಯೋ–ಇಂತಹ ಪ್ರಶ್ನೆಗಳನ್ನು ಕೇಳುವವರು ಈ ಲೋಕದಲ್ಲಿ ನಿನ್ನನ್ನು ಬಿಟ್ಟು ಬೇರೆ ಯಾರೂ ಇರುವುದಿಲ್ಲ.

ಅನೇಕಪ್ರಕಾರವಾದ ಗೋಲೋಕಗಳಿವೆ. ಆ ಲೋಕಗಳನ್ನು ನೀನು ನೋಡಲಾರೆ. ನಾನು ಆ ಲೋಕಗಳನ್ನು ನೋಡಬಲ್ಲೆನು ಮತ್ತು ಪತಿ ವ್ರತಾಸ್ತ್ರೀಯರೂ ಆ ಲೋಕಗಳನ್ನು ನೋಡಬಲ್ಲರು.

ಕರ್ಮಭಿಶ್ಚಾಪಿ ಸುಶುಭೈಃ ಸುವ್ರತಾ ಋಷಯಸ್ತಥಾ ।
ಸಶರೀರಾ ಹಿ ತಾನ್ಯಾನ್ತಿ ಬ್ರಾಹ್ಮಣಾಃ ಶುಭಬುದ್ಧಯಃ ॥೩॥

ಉತ್ತಮವಾದ ವ್ರತಗಳನ್ನು ಅನುಷ್ಠಾನಮಾಡುವ ಋಷಿಗಳೂ, ಸಾತ್ತ್ವಿಕವಾದ ಬುದ್ಧಿಯುಳ್ಳ ಬ್ರಾಹ್ಮಣರೂ–ತಾವು ಮಾಡುವ ಶುಭಕರ್ಮ ಗಳಿಂದ ಸಶರೀರರಾಗಿಯೇ ಶುಭಪ್ರದವಾದ ಆ ಲೋಕಗಳಿಗೆ ಹೋಗ ಬಲ್ಲರು.

ಶರೀರನ್ಯಾಸಮೋಕ್ಷೇಣ ಮನಸಾ ನಿರ್ಮಲೇನ ಚ ।
ಸ್ವಪ್ನಭೂತಾಂಶ್ಚ ತಾಲ್ಲೋಕಾನ್ಪಶ್ಯನ್ತೀಹಾಪಿ ಸುವ್ರತಾಃ ॥೪॥

ಉತ್ತಮವಾದ ವ್ರತಗಳನ್ನು ಅನುಷ್ಠಾನಮಾಡುವ ಯೋಗಿಗಳು ಶರೀರವನ್ನು ಬಿಟ್ಟು ಮೋಕ್ಷವನ್ನು ಪಡೆಯುವ ಸಮಯದಲ್ಲಿ (ಸಮಾಧ್ಯ ವಸ್ಥೆಯಲ್ಲಿ) ನಿರ್ಮಲವಾದ ಮನಸ್ಸಿನಿಂದ ಸ್ವಪ್ನಪ್ರಾಯವಾದ ಆ ಲೋಕಗಳನ್ನು ಇಲ್ಲಿಂದಲೇ ಕಾಣುತ್ತಾರೆ.

ಸಹಸ್ರಾಕ್ಷನೇ! ಆ ಲೋಕಗಳು ಎಂತಹ ಗುಣಗಳುಳ್ಳವುಗಳೆಂಬುದನ್ನು ಹೇಳುವೆನು; ಕೇಳು:

ನ ತತ್ರ ಕ್ರಮತೇ ಕಾಲೋ ನ ಜರಾ ನ ಚ ಪಾವಕಃ ॥೫॥
ತಥಾ ನಾಸ್ತ್ಯಶುಭಂ ಕಿಂಚಿನ್ನ ವ್ಯಾಧಿಸ್ತತ್ರ ನ ಕ್ಲಮಃ ।
ಯದ್ಯಚ್ಚ ಗಾವೋ ಮನಸಾ ತಸ್ಮಿನ್ವಾಞ್ಛನ್ತಿ ವಾಸವ ॥೬॥
ತತ್ಸರ್ವಂ ಪ್ರಾಪ್ನುವನ್ತಿ ಸ್ಮ ಮಮ ಪ್ರತ್ಯಕ್ಷದರ್ಶನಾತ್ ।
ಕಾಮಗಾಃ ಕಾಮಚಾರಿಣ್ಯಃ ಕಾಮಾತ್ಕಾಮಾಂಶ್ಚ ಭುಞ್ಜತೇ ॥೭॥

ಆ ಗೋಲೋಕಗಳು ಕಾಲಾತೀತವಾದ ಲೋಕವಾಗಿವೆ. ಆದುದರಿಂದ ಅಲ್ಲಿರುವವರಿಗೆ ವೃದ್ಧಾಪ್ಯವೇ ಬರುವುದಿಲ್ಲ. ಅಲ್ಲಿ ಅಗ್ನಿಯೂ ಇಲ್ಲ. ಅಲ್ಲಿ ಯಾರಿಗೂ ಯಾವ ವಿಧವಾದ ಅಶುಭವೂ ಸ್ವಲ್ಪವಾದರೂ ಉಂಟಾಗುವುದಿಲ್ಲ. ರೋಗಗಳ ಬಾಧೆಯಿರುವುದಿಲ್ಲ. ಆಯಾಸವಿರುವುದಿಲ್ಲ. ಅಲ್ಲಿರುವ ಗೋವುಗಳಿಗೆ ಮನಸ್ಸಿನಲ್ಲಿ ಬಯಸಿದ ವಸ್ತುಗಳೆಲ್ಲವೂ ಒಡನೆಯೇ ಲಭಿಸುತ್ತವೆ. ಇದನ್ನು ನಾನು ಪ್ರತ್ಯಕ್ಷವಾಗಿಯೇ ನೋಡಿದ್ದೇನೆ. ಅಲ್ಲಿರುವ ಗೋವುಗಳು ಸ್ವೇಚ್ಛೆಯಿಂದ ಸಂಚರಿಸಲು ಇಚ್ಛೆಪಡುತ್ತವೆ. ಅಂತೆಯೇ ಸಂಚರಿಸುತ್ತವೆ. ಸಂಕಲ್ಪಮಾತ್ರದಿಂದಲೇ ಸಕಲವಿಧವಾದ ಕಾಮನೆಗಳನ್ನೂ ಪಡೆದುಕೊಂಡು ಉಪಭೋಗಿಸುತ್ತವೆ.

ವಾಪ್ಯಃ ಸರಾಂಸಿ ಸರಿತೋ ವಿವಿಧಾನಿ ವನಾನಿ ಚ ।
ಗೃಹಾಣಿ ಪರ್ವತಾಶ್ಚೈವ ಯಾವದ್ದ್ರವ್ಯಂ ಚ ಕಿಂಚನ ॥೮॥
ಮನೋಜ್ಞಂ ಸರ್ವಭೂತೇಭ್ಯಃ ಸರ್ವತನ್ತ್ರಂ ಪ್ರದೃಶ್ಯತೇ ।
ಈದೃಶಾದ್ವಿಪುಲಾಲ್ಲೋಕಾನ್ನಾಸ್ತಿ ಲೋಕಸ್ತಥಾವಿಧಃ ॥೯॥

ಆ ಲೋಕದಲ್ಲಿ ಬಾವಿಗಳು, ಸರಸ್ಸುಗಳು, ನದಿಗಳು, ವಿಧ-ವಿಧವಾದ ಅರಣ್ಯಗಳು, ದಿವ್ಯವಾದ ಸೌಧಗಳು, ಪರ್ವತಗಳು–ಇವೇ ಮೊದಲಾದ ಎಲ್ಲ ವಸ್ತುಗಳೂ ಇವೆ. ಸಕಲಪ್ರಾಣಿಗಳಿಗೂ ಅದು ಮನಮೋಹಕವಾದ ಲೋಕವಾಗಿದೆ. ಅಲ್ಲಿರುವ ಕಾಮನಾವಸ್ತುಗಳ ಮೇಲೆ ಅಲ್ಲಿರುವವರೆಲ್ಲರಿಗೂ ಸಮಾನವಾದ ಅಧಿಕಾರವಿರುವುದು ಕಂಡುಬರುತ್ತದೆ. ಇಷ್ಟು ವಿಶಾಲವಾಗಿರುವ ಲೋಕಕ್ಕಿಂತ ಬೇರೆಯದಾದ, ಗೋಲೋಕದಂತೆಯೇ ಇರುವ ಲೋಕವು ಯಾವುದೂ ಇಲ್ಲ.

ತತ್ರ ಸರ್ವಸಹಾಃ ಕ್ಷಾನ್ತಾ ವತ್ಸಲಾ ಗುರುವರ್ತಿನಃ ।
ಅಹಙ್ಕಾರೈರ್ವಿರಹಿತಾ ಯಾನ್ತಿ ಶಕ್ರ ನರೋತ್ತಮಾಃ ॥೧೦॥

ದೇವೇಂದ್ರನೇ! ಎಲ್ಲವನ್ನೂ (ಶೋಕ-ದುಃಖಗಳನ್ನೂ ಕಾಯಕ್ಲೇಶಗಳನ್ನೂ) ಸಹಿಸುವ, ಸಹನಶೀಲರಾದ, ದಯಾಳುಗಳಾದ, ಗುರುಜನರ ಆಜ್ಞೆಯಂತೆ ವರ್ತಿಸುವ, ಅಹಂಕಾರ-ಮಮಕಾರಗಳಿಂದ ವಿಹೀನರಾದ ಮಾನವಶ್ರೇಷ್ಠರು ಅಂತಹ ಗೋಲೋಕಕ್ಕೆ ಹೋಗುತ್ತಾರೆ.

ಯಃ ಸರ್ವಮಾಂಸಾನಿ ನ ಭಕ್ಷಯೀತ
ಪುಮಾನ್ಸದಾ ಭಾವಿತೋ ಧರ್ಮಯುಕ್ತಃ ।
ಮಾತಾಪಿತ್ರೋರರ್ಚಿತಾ ಸತ್ಯಯುಕ್ತಃ
ಶುಶ್ರೂಷಿತಾ ಬ್ರಾಹ್ಮಣಾನಾಮನಿನ್ದ್ಯಃ ॥೧೧॥
ಅಕ್ರೋಧನೋ ಗೋಷು ತಥಾ ದ್ವಿಜೇಷು
ಧರ್ಮೇ ರತೋ ಗುರುಶುಶ್ರೂಷಕಶ್ಚ ।
ಯಾವಜ್ಜೀವಂ ಸತ್ಯವೃತ್ತೇ ರತಶ್ಚ
ದಾನೇ ರತೋ ಯಃ ಕ್ಷಮೀ ಚಾಪರಾಧೇ ॥೧೨॥
ಮೃದುರ್ದಾನ್ತೋ ದೇವಪರಾಯಣಶ್ಚ
ಸರ್ವಾತಿಥಿಶ್ಚಾಪಿ ತಥಾ ದಯಾವಾನ್ ।
ಈದೃಗ್ಗುಣೋ ಮಾನವಸ್ತಂ ಪ್ರಯಾತಿ
ಲೋಕಂ ಗವಾಂ ಶಾಶ್ವತಂ ಚಾವ್ಯಯಂ ಚ ॥೧೩॥

ಯಾವನು ಯಾವುದೇ ಮಾಂಸವನ್ನೂ ತಿನ್ನುವುದಿಲ್ಲವೋ, ಸದಾ ಭಗವಚ್ಚಿಂತನೆಯಲ್ಲಿಯೇ ನಿರತನಾಗಿರುವನೋ, ಧರ್ಮಪರಾಯಣನಾಗಿರುವನೋ, ಮಾತಾ-ಪಿತೃಗಳ ಪೂಜೆಯನ್ನು ಮಾಡುವನೋ, ಸತ್ಯನಿಷ್ಠನೋ, ಬ್ರಾಹ್ಮಣರ ಶುಶ್ರೂಷೆಯನ್ನು ಮಾಡುವನೋ, ಅನಿಂದ್ಯನೋ, ಗೋವುಗಳ ವಿಷಯದಲ್ಲಾಗಲೀ–ಬ್ರಾಹ್ಮಣರ ವಿಷಯದಲ್ಲಾಗಲೀ ಕೋಪಗೊಳ್ಳುವುದಿಲ್ಲವೋ, ಧರ್ಮದಲ್ಲಿ ಅನುರಕ್ತನಾಗಿರುವನೋ, ಗುರುಜನರ ಶುಶ್ರೂಷೆ ಮಾಡುವನೋ, ಜೀವಪರ್ಯಂತವಾಗಿ ಸತ್ಯವ್ರತವನ್ನು ಕೈಗೊಂಡಿರುವನೋ, ದಾನಶೀಲನೋ, ಅಪರಾಧಮಾಡಿದವರನ್ನು ಕ್ಷಮಿಸುವನೋ, ಮೃದುಸ್ವಭಾವದವನೋ, ಜಿತೇಂದ್ರಿಯನೋ, ದೇವಾರಾಧಕನೋ, ಎಲ್ಲ ಅತಿಥಿಗಳನ್ನೂ ಅಕ್ಕರೆಯಿಂದ ಸತ್ಕರಿಸುವನೋ, ದಯಾವಂತನೋ–ಅಂತಹ ಸದ್ಗುಣಪರಿಪೂರ್ಣನಾದ ಮಾನವನು ಮಾತ್ರವೇ ಶಾಶ್ವತವಾದ ಅವ್ಯಯವಾದ ಗೋಲೋಕಕ್ಕೆ ಹೋಗುತ್ತಾನೆ.

ನ ಪಾರದಾರೀ ಪಶ್ಯತಿ ಲೋಕಮೇತಂ
ನ ವೈ ಗುರುಘ್ನೋ ನ ಮೃಷಾ ಸಮ್ಪ್ರಲಾಪೀ ।
ಸದಾ ಪ್ರವಾದೀ ಬ್ರಾಹ್ಮಣೇಷ್ವಾತ್ತವೈರೋ
ದೋಷೈರೇತೈರ್ಯಶ್ಚ ಯುಕ್ತೋ ದುರಾತ್ಮಾ ॥೧೪॥
ನ ಮಿತ್ರಧ್ರುಙ್ನೈಕೃತಿಕಃ ಕೃತಘ್ನಃ
ಶಠೋಽನೃಜುರ್ಧರ್ಮವಿದ್ವೇಷಕಶ್ಚ ।
ನ ಬ್ರಹ್ಮಹಾ ಮನಸಾಪಿ ಪ್ರಪಶ್ಯೇ-
ದ್ಗವಾಂ ಲೋಕಂ ಪುಣ್ಯಕೃತಾಂ ನಿವಾಸಮ್ ॥೧೫॥

ಪರಸ್ತ್ರೀಗಾಮಿಯೂ, ಗುರುಹತ್ಯೆಯನ್ನು ಮಾಡಿದವನೂ, ಸುಳ್ಳನ್ನು ಹೇಳುವವನೂ, ಪರನಿಂದಕನೂ, ಬ್ರಾಹ್ಮಣರೊಡನೆ ವೈರವನ್ನು ಕಟ್ಟಿಕೊಂಡಿರುವವನೂ–ಪುಣ್ಯತಮವಾದ ಆ ಗೋಲೋಕವನ್ನು ನೋಡಲಾರನು. ಇಂತಹ ದೋಷಗಳಿಂದ ಯುಕ್ತನಾದ ದುರಾತ್ಮನಿಗೆ ಆ ಗೋಲೋಕವು ಲಭಿಸುವುದಿಲ್ಲ. ಮಿತ್ರದ್ರೋಹಿಯೂ, ವಂಚಕನೂ, ಮಾಡಿದ ಉಪಕಾರವನ್ನು ಮರೆಯುವವನೂ, ಶಠನೂ, ಕುಟಿಲನೂ, ಧರ್ಮದ್ವೇಷಿಯೂ, ಬ್ರಹ್ಮಹತ್ಯೆಯನ್ನು ಮಾಡಿದವನೂ–ಪುಣ್ಯಾತ್ಮರಿಗೆ ನಿವಾಸಸ್ಥಾನವಾದ ಗೋಲೋಕವನ್ನು ಮನಸ್ಸಿನಿಂದಲೂ ಕಾಣಲಾರನು.

ಸುರೇಶ್ವರನೇ! ಗೋಲೋಕದ ಮಾಹಾತ್ಮ್ಯದ ವಿಷಯವಾಗಿ ನಿನಗೆ ಎಲ್ಲವನ್ನೂ ಹೇಳಿದ್ದೇನೆ. ಮುಂದೆ ಗೋದಾನಮಾಡುವವರಿಗೆ ಎಂತಹ ಫಲವು ಸಿಕ್ಕುವುದೆಂಬುದನ್ನು ಹೇಳುವೆನು ಕೇಳು:

ದಾಯಾದ್ಯಲಬ್ಧೈರರ್ಥೈರ್ಯೋ ಗಾಃ ಕ್ರೀತ್ವಾ ಸಮ್ಪ್ರಯಚ್ಛತಿ ।
ಧರ್ಮಾರ್ಜಿತಧನೈಃ ಕ್ರೀತಾನ್ಸ ಲೋಕಾನಾಪ್ನುತೇಽಕ್ಷಯಾನ್ ॥೧೬॥

ಯಾವ ಮನುಷ್ಯನು ಪಿತ್ರಾರ್ಜಿತವಾದ ಧನದಿಂದ ಹಸುಗಳನ್ನು ಕೊಂಡುಕೊಂಡು ಅದನ್ನು ಸತ್ಪಾತ್ರನಲ್ಲಿ ದಾನಮಾಡುವನೋ ಮತ್ತು ಧರ್ಮದಿಂದ ಸಂಪಾದಿಸಿದ ಹಣದಿಂದ ಹಸುಗಳನ್ನು ಕೊಂಡುಕೊಂಡು ದಾನಮಾಡುವನೋ–ಅವನು ಅಕ್ಷಯವಾದ ಪುಣ್ಯಲೋಕಗಳನ್ನು ಹೊಂದುತ್ತಾನೆ.

ಯೋ ವೈ ದ್ಯೂತೇ ಧನಂ ಜಿತ್ವಾ ಗಾಃ ಕ್ರೀತ್ವಾ ಸಮ್ಪ್ರಯಚ್ಛತಿ ।
ಸ ದಿವ್ಯಮಯುತಂ ಶಕ್ರ ವರ್ಷಾಣಾಂ ಫಲಮಶ್ನುತೇ ॥೧೮॥

ಯಾವನು ಜೂಜಾಟದಲ್ಲಿ ಗೆದ್ದ ಹಣದಿಂದ ಹಸುವನ್ನು ಕೊಂಡುಕೊಂಡು ಅದನ್ನು ಸತ್ಪಾತ್ರನಲ್ಲಿ ದಾನಮಾಡುವನೋ–ಅವನು ಹತ್ತು ಸಾವಿರ ದಿವ್ಯವರ್ಷಗಳವರೆಗೆ ಆ ಗೋದಾನದ ಫಲವನ್ನನುಭವಿಸುತ್ತಾನೆ.

ದಾಯಾದ್ಯಾ ಯಸ್ಯ ವೈ ಗಾವೋ ನ್ಯಾಯಪೂರ್ವೈರುಪಾರ್ಜಿತಾಃ ।
ಪ್ರದದ್ಯಾತ್ತಾಃ ಪ್ರದಾತೄಣಾಂ ಸಮ್ಭವನ್ತ್ಯಪಿ ಚ ಧ್ರುವಾಃ ॥೧೯॥

ಯಾವನ ಪಾಲಿಗೆ ಹಸುಗಳು ತಂದೆಯ ಆಸ್ತಿಯ ಭಾಗಗಳಾಗಿ ಬಂದಿವೆಯೋ–ಅಂತಹ ಹಸುಗಳನ್ನೂ, ನ್ಯಾಯಪೂರ್ವಕವಾಗಿ ಸಂಪಾದಿಸಿದ ಹಣದಿಂದ ಕೊಂಡುಕೊಂಡ ಗೋವುಗಳನ್ನೂ ದಾನಮಾಡುವ ದಾನಿಗಳಿಗೆ ಆ ಗೋವುಗಳು ಶಾಶ್ವತವಾದ ಫಲವನ್ನು ಕೊಡುತ್ತವೆ.

ಪ್ರತಿಗೃಹ್ಯ ತು ಯೋ ದದ್ಯಾದ್ಗಾಃ ಸಂಶುದ್ಧೇನ ಚೇತಸಾ ।
ತಸ್ಯಾಪೀಹಾಕ್ಷಯಾಲ್ಲೋಕಾನ್ಧ್ರುವಾನ್ವಿದ್ಧಿ ಶಚೀಪತೇ ॥೨೦॥

ಶಚೀಪತಿಯೇ! ಯಾವನು ಗೋದಾನವನ್ನು ತೆಗೆದುಕೊಂಡು ಅದೇ ಗೋವನ್ನೇ ಶುದ್ಧವಾದ ಮನಸ್ಸಿನಿಂದ ಸತ್ಪಾತ್ರನಲ್ಲಿ ದಾನಮಾಡುವನೋ–ಅವನೂ ಕೂಡ ಅಕ್ಷಯವಾದ ಮತ್ತು ಶಾಶ್ವತವಾದ ಲೋಕಗಳನ್ನು ಹೊಂದುವನೆಂದು ತಿಳಿ.

ಜನ್ಮಪ್ರಭೃತಿ ಸತ್ಯಂ ಚ ಯೋ ಬ್ರೂಯಾನ್ನಿಯತೇನ್ದ್ರಿಯಃ ।
ಗುರುದ್ವಿಜಸಹಃ ಕ್ಷಾನ್ತಸ್ತಸ್ಯ ಗೋಭಿಃ ಸಮಾ ಗತಿಃ ॥೨೧॥

ಹುಟ್ಟಿದಾಗಿನಿಂದಲೂ ಯಾವನು ಸತ್ಯವನ್ನೇ ಹೇಳುವನೋ, ಜಿತೇಂದ್ರಿಯನಾಗಿರುವನೋ, ಗುರುಜನರು ಮತ್ತು ಬ್ರಾಹ್ಮಣರು ಹೇಳುವ ಕಠಿನೋಕ್ತಿಗಳನ್ನೂ ಸಹಿಸಿಕೊಳ್ಳುವನೋ ಮತ್ತು ಕ್ಷಮಾಶೀಲನೋ–ಅಂತಹವನು ಗೋವನ್ನು ದಾನಮಾಡಿದವನು ಹೊಂದುವ ಗತಿಯನ್ನೇ ಹೊಂದುತ್ತಾನೆ. (ಗೋಲೋಕಕ್ಕೆ ಹೋಗುತ್ತಾನೆ.)

ನ ಜಾತು ಬ್ರಾಹ್ಮಣೋ ವಾಚ್ಯೋ ಯದವಾಚ್ಯಂ ಶಚೀಪತೇ ।
ಮನಸಾ ಗೋಷು ನ ದ್ರುಹ್ಯೇದ್ಗೋವೃತ್ತಿರ್ಗೋಽನುಕಲ್ಪಕಃ ॥೨೨॥

ಸತ್ಯೇ ಧರ್ಮೇ ಚ ನಿರತಸ್ತಸ್ಯ ಶಕ್ರ ಫಲಂ ಶೃಣು ।
ಗೋಸಹಸ್ರೇಣ ಸಮಿತಾ ತಸ್ಯ ಧೇನುರ್ಭವತ್ಯುತ ॥೨೩॥

ಮಹೇಂದ್ರನೇ! ಬ್ರಾಹ್ಮಣರ ವಿಷಯದಲ್ಲಿ ಯಾವಾಗಲೂ ಅವಾಚ್ಯವಾದ ಮಾತುಗಳನ್ನಾಡಬಾರದು. ಗೋವುಗಳಿಗೆ ದ್ರೋಹವನ್ನು ಮನಸ್ಸಿನಿಂದಲೂ ನೆನೆಯಬಾರದು. ಹೀಗೆ ಹಸುವಿಗೆ ಸಮಾನವಾದ ಜೀವಿಕೆಯಲ್ಲಿಯೇ ನಿರತನಾಗಿ (ಪರಿಗ್ರಹರಹಿತನಾಗಿ) ಗೋವುಗಳಿಗೆ ಹುಲ್ಲು-ನೀರುಗಳನ್ನು ಒದಗಿಸುತ್ತಾ ಸತ್ಯದಲ್ಲಿ-ಧರ್ಮದಲ್ಲಿ ನಿರತನಾಗಿರುವವನಿಗೆ ಎಂತಹ ಮಹಾಫಲವು ಲಭಿಸುವುದೆಂಬುದನ್ನು ಕೇಳು. ಅಂತಹವನು ಮಾಡುವ ಒಂದು ಗೋದಾನವೇ ಸಾವಿರ ಗೋವುಗಳನ್ನು ದಾನಮಾಡಿದಷ್ಟು ಫಲವನ್ನು ಕೊಡುತ್ತದೆ.

ಕ್ಷತ್ರಿಯಸ್ಯ ಗುಣೈರೇತೈರಪಿ ತುಲ್ಯಫಲಂ ಶೃಣು ।
ತಸ್ಯಾಪಿ ದ್ವಿಜತುಲ್ಯಾ ಗೌರ್ಭವತೀತಿ ವಿನಿಶ್ಚಯಃ ॥೨೪॥

ಕ್ಷತ್ರಿಯನೂ ಇದೇ ಗುಣಗಳಿಂದ ಸಂಪನ್ನನಾಗಿದ್ದರೆ ಅವನಿಗೂ ಬ್ರಾಹ್ಮಣನಿಗೆ ಲಭಿಸುವ ಸಹಸ್ರ ಗೋದಾನದ ಫಲವೇ ಲಭಿಸುತ್ತದೆ. ದಾನಮಾಡಿದ ಆ ಹಸುವು ಬ್ರಾಹ್ಮಣನನ್ನು ಉದ್ಧರಿಸುವಂತೆಯೇ ಕ್ಷತ್ರಿಯನನ್ನೂ ಉದ್ಧರಿಸುತ್ತದೆ. ಇದು ಧರ್ಮಾತ್ಮರ ನಿಶ್ಚಯವಾಗಿದೆ.

ವೈಶ್ಯಸ್ಯೈತೇ ಯದಿ ಗುಣಾಸ್ತಸ್ಯ ಪಞ್ಚಶತಂ ಭವೇತ್ ।
ಶೂದ್ರಸ್ಯಾಪಿ ವಿನೀತಸ್ಯ ಚತುರ್ಭಾಗಫಲಂ ಸ್ಮೃತಮ್ ॥೨೫॥

ವೈಶ್ಯನೂ ಇದೇ ಗುಣಗಳಿಂದ ಸಂಪನ್ನನಾಗಿದ್ದು ಒಂದು ಹಸುವನ್ನು ದಾನಮಾಡಿದರೆ ಅವನಿಗೆ ಐದು ನೂರು ಹಸುಗಳನ್ನು ದಾನಮಾಡಿದ ಪುಣ್ಯಫಲವು ಲಭಿಸುತ್ತದೆ. ಸತ್ಯ-ಧರ್ಮನಿರತನಾದ ಗೋಬ್ರಾಹ್ಮಣ ಪೂಜಕನಾದ ಶೂದ್ರನು ಒಂದು ಹಸುವನ್ನು ದಾನಮಾಡಿದರೆ ಇನ್ನೂರೈವತ್ತು ಹಸುಗಳನ್ನು ದಾನಮಾಡಿದ ಪುಣ್ಯವು ಅವನಿಗೆ ಲಭಿಸುತ್ತದೆ.

ಏತಚ್ಚೈನಂ ಯೋಽನುತಿಷ್ಠೇತ ಯುಕ್ತಃ
ಸತ್ಯೇ ರತೋ ಗುರುಶುಶ್ರೂಷಯಾ ಚ ।
ದಕ್ಷಃ ಕ್ಷಾನ್ತೋ ದೇವತಾರ್ಥೀ ಪ್ರಶಾನ್ತಃ
ಶುಚಿರ್ಬುದ್ಧೋ ಧರ್ಮಶೀಲೋಽನಹಂವಾಕ್ ॥೨೬॥

ಮಹತ್ಫಲಂ ಪ್ರಾಪ್ಯತೇ ಸ ದ್ವಿಜಾಯ
ದತ್ತ್ವಾ ದೋಗ್ಧ್ರೀಂ ವಿಧಿನಾನೇನ ಧೇನುಮ್ ।

ಯಾವನು ಏಕಾಗ್ರಚಿತ್ತನಾಗಿ ಗೋಸೇವಾವ್ರತವನ್ನು ಪರಿಪಾಲಿಸುವನೋ, ಸತ್ಯನಿಷ್ಠನಾಗಿರುವನೋ, ಗುರುಸೇವಾಪರಾಯಣನೋ, ದಕ್ಷನೋ, ಕ್ಷಮಾಶೀಲನೋ, ದೇವಭಕ್ತನೋ, ಪ್ರಶಾಂತನೋ, ಪವಿತ್ರನೋ, ಜ್ಞಾನವಂತನೋ, ಧರ್ಮಾತ್ಮನೋ, ಅನಹಂಕಾರಿಯೋ–ಅಂತಹವನು ಇದೇ ವಿಧಾನದಿಂದ ಕರೆಯುವ ಹಸುವನ್ನು ಬ್ರಾಹ್ಮಣನಿಗೆ ದಾನಮಾಡಿದರೆ ಮಹಾಫಲವನ್ನು ಪಡೆಯುತ್ತಾನೆ.

ನಿತ್ಯಂ ದದ್ಯಾದೇಕಭಕ್ತಃ ಸದಾ ಚ
ಸತ್ಯೇ ಸ್ಥಿತೋ ಗುರುಶುಶ್ರೂಷಿತಾ ಚ ॥೨೭॥
ವೇದಾಧ್ಯಾಯೀ ಗೋಷು ಯೋ ಭಕ್ತಿಮಾಂಶ್ಚ
ನಿತ್ಯಂ ದತ್ತ್ವಾ ಯೋಽಭಿನನ್ದೇತ ಗಾಶ್ಚ ।
ಜಾತಿತೋ ಯಶ್ಚ ಗವಾಂ ನಮೇತ
ಇದಂ ಫಲಂ ಶಕ್ರ ನಿಬೋಧ ತಸ್ಯ ॥೨೮॥

ಯಾವನು ಪ್ರತಿದಿನವೂ ಒಂದೇ ಹೊತ್ತು ಊಟಮಾಡುತ್ತಾ ಪ್ರತಿನಿತ್ಯವೂ ಗೋದಾನಮಾಡುವನೋ, ಸತ್ಯನಿಷ್ಠನೋ, ಗುರುಶುಶ್ರೂಷಕನೋ, ವೇದಾಧ್ಯಾಯಿಯೋ, ಗೋಭಕ್ತನೋ, ನಿತ್ಯವೂ ಗೋವುಗಳನ್ನು ದಾನಮಾಡುವುದರಿಂದ ಸಂತುಷ್ಟನಾಗುವನೋ, ಹುಟ್ಟಿದಾಗಿನಿಂದಲೂ ಗೋವುಗಳಿಗೆ ನಮಸ್ಕರಿಸುತ್ತಿರುವನೋ– ಅಂತಹವನಿಗೆ ಲಭಿಸುವ ಈ ಫಲವನ್ನು ಕೇಳು.

ಯತ್ಸ್ಯಾದಿಷ್ಟ್ವಾ ರಾಜಸೂಯೇ ಫಲಂ ತು
ಯತ್ಸ್ಯಾದಿಷ್ಟ್ವಾ ಬಹುನಾ ಕಾಞ್ಚನೇನ ।
ಏತತ್ತುಲ್ಯಂ ಫಲಮಪ್ಯಾಹುರಗ್ರ್ಯಂ
ಸರ್ವೇ ಸನ್ತಸ್ತ್ವೃಷಯೋ ಯೇ ಚ ಸಿದ್ಧಾಃ ॥೨೯॥

ರಾಜಸೂಯಯಾಗವನ್ನು ಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ, ಅಪಾರವಾದ ಸುವರ್ಣವನ್ನು ವ್ಯಯಿಸಿ ಯಜ್ಞ

ಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ–ಅಂತಹ ಫಲಕ್ಕೆ ನಿತ್ಯಗೋದಾನದ ಫಲವು ಸಮಾನವೆಂದೂ, ಆದುದರಿಂದಲೇ ಗೋದಾನದ ಫಲವು ಸರ್ವಶ್ರೇಷ್ಠವಾದುದೆಂದೂ ಎಲ್ಲ ಸಂತರೂ, ಋಷಿಗಳೂ ಮತ್ತು ಸಿದ್ಧರೂ ಹೇಳುತ್ತಾರೆ.

ಯೋಽಗ್ರಂ ಭಕ್ತಂ ಕಿಂಚಿದಪ್ರಾಶ್ಯ ದದ್ಯಾ-
ದ್ಗೋಭ್ಯೋ ನಿತ್ಯಂ ಗೋವ್ರತೀ ಸತ್ಯವಾದೀ ।
ಶಾನ್ತೋಽಲುಬ್ಧೋ ಗೋಸಹಸ್ರಸ್ಯ ಪುಣ್ಯಂ
ಸಂವತ್ಸರೇಣಾಪ್ನುಯಾತ್ಸತ್ಯಶೀಲಃ ॥೩೦॥

ಯಾವನು ಗೋಸೇವೆಯ ವ್ರತವನ್ನು ಕೈಗೊಂಡು ಪ್ರತಿನಿತ್ಯವೂ ಊಟಕ್ಕೆ ಮೊದಲು ಗೋವುಗಳಿಗೆ ಗೋಗ್ರಾಸವನ್ನು ಅರ್ಪಿಸುವನೋ, ಸತ್ಯವಾದಿಯೋ, ಶಾಂತನೋ, ಲೋಭರಹಿತನೋ–ಅಂತಹ ಸತ್ಯಶೀಲನಾದ ಪುರುಷನು ಹೀಗೆ ಒಂದು ವರ್ಷ ಗೋಸೇವೆಯನ್ನು ಮಾಡಿ ಒಂದು ಸಾವಿರ ಗೋವುಗಳನ್ನು ದಾನಮಾಡಿದ ಪುಣ್ಯಕ್ಕೆ ಭಾಗಿಯಾಗುತ್ತಾನೆ.

ಯದೇಕಭಕ್ತಮಶ್ನೀಯಾದ್ದದ್ಯಾದೇಕಂ ಗವಾಂ ಚ ಯತ್ ।
ದಶವರ್ಷಾಣ್ಯನನ್ತಾನಿ ಗೋವ್ರತೀ ಗೋಽನುಕಮ್ಪಕಃ ॥೩೧॥

ಗೋವುಗಳ ವಿಷಯದಲ್ಲಿ ಅನುಕಂಪೆಯುಳ್ಳ ಯಾವನು ಗೋಸೇವಾ ವ್ರತವನ್ನು ಕೈಗೊಂಡು ಅನುದಿನವೂ ಒಂದೇ ಹೊತ್ತು ಊಟಮಾಡುತ್ತಾ ಮತ್ತೊಂದು ಹೊತ್ತಿನ ತನ್ನ ಊಟವನ್ನು ಗೋವಿಗೆ ತಿನ್ನಿಸುತ್ತಾ ಹತ್ತು ವರ್ಷಗಳವರೆಗೆ ಗೋಸೇವೆಯಲ್ಲಿ ನಿರತನಾಗಿರುವನೋ– ಅಂತಹವನಿಗೆ ಲಭಿಸುವ ಪುಣ್ಯವು ಅನಂತವಾದುದು.

ಏಕೇನೈವ ಚ ಭಕ್ತೇನ ಯಃ ಕ್ರೀತ್ವಾ ಗಾಂ ಪ್ರಯಚ್ಛತಿ ।
ಯಾವನ್ತಿ ತಸ್ಯಾ ರೋಮಾಣಿ ಸಮ್ಭವನ್ತಿ ಶತಕ್ರತೋ ।
ತಾವತ್ಪ್ರದಾನಾತ್ಸ ಗವಾಂ ಫಲಮಾಪ್ನೋತಿ ಶಾಶ್ವತಮ್ ॥೩೨॥

ಶತಕ್ರತುವೇ! ಯಾವನು ಹತ್ತು ವರ್ಷಗಳ ಪರ್ಯಂತವಾಗಿ ದಿನದಲ್ಲಿ ಒಂದೇ ಹೊತ್ತು ಊಟಮಾಡುತ್ತಾ ಮತ್ತೊಂದು ಹೊತ್ತಿನ ಊಟದ

ಉಳಿತಾಯದಲ್ಲಿ ಹಸುವನ್ನು ಕೊಂಡು ಅದನ್ನು ಸತ್ಪಾತ್ರನಲ್ಲಿ ದಾನ ಮಾಡುವನೋ–ಅಂತಹವನು ದಾನಮಾಡಿದ ಆ ಹಸುವಿನಲ್ಲಿ ಎಷ್ಟು ರೋಮಗಳಿರುವುವೋ ಅಷ್ಟು ಸಂಖ್ಯೆಯ ಗೋವುಗಳನ್ನು ದಾನಮಾಡಿದ ಶಾಶ್ವತವಾದ ಫಲವನ್ನು ಹೊಂದುತ್ತಾನೆ. ಬ್ರಾಹ್ಮಣನಿಗೆ ಈ ಫಲವು ಲಭಿಸುತ್ತದೆ. ಕ್ಷತ್ರಿಯನಿಗೆ ಇದೇ ಫಲವು ಹೇಗೆ ಲಭಿಸುವುದೆಂಬುದನ್ನು ಹೇಳುವೆನು; ಕೇಳು:

ಪಞ್ಚವಾರ್ಷಿಕಮೇವಂ ತು ಕ್ಷತ್ರಿಯಸ್ಯ ಫಲಂ ಸ್ಮೃತಮ್ ।
ತತೋಽರ್ಧೇನ ತು ವೈಶ್ಯಸ್ಯ ಶೂದ್ರೋ ವೈಶ್ಯಾರ್ಧತಃ ಸ್ಮೃತಃ ॥೩೪॥

ಕ್ಷತ್ರಿಯನು ಐದು ವರ್ಷಗಳ ಪರ್ಯಂತವಾಗಿ ಈ ವ್ರತವನ್ನು ಅನುಷ್ಠಾನಮಾಡಿದರೆ ಅವನಿಗೆ ಬ್ರಾಹ್ಮಣನಿಗೆ ಲಭಿಸುವ ಫಲವೇ ಲಭಿಸುತ್ತದೆ. ವೈಶ್ಯನು ಮೂವತ್ತು ತಿಂಗಳು, ಶೂದ್ರನು ಹದಿನೈದು ತಿಂಗಳು ಇದೇ ವ್ರತವನ್ನು ಆಚರಿಸಿದರೆ ಬ್ರಾಹ್ಮಣನಿಗೆ ಲಭಿಸುವ ಫಲವೇ ಲಭಿಸುತ್ತದೆ.

ಯಶ್ಚಾತ್ಮವಿಕ್ರಯಂ ಕೃತ್ವಾ ಗಾಃ ಕ್ರೀತ್ವಾ ಸಮ್ಪ್ರಯಚ್ಛತಿ ।
ಯಾವತ್ಸನ್ದರ್ಶಯೇದ್ಗಾಂ ವೈ ಸ ತಾವತ್ಫಲಮಶ್ನುತೇ ॥೩೫॥

ಯಾವನು ತನ್ನನ್ನೇ ಮಾರಿಕೊಂಡು ಅದರಿಂದ ಬಂದ ದ್ರವ್ಯದಿಂದ ಗೋವನ್ನು ಕೊಂಡುಕೊಂಡು ಸತ್ಪಾತ್ರನಲ್ಲಿ ದಾನಮಾಡುವನೋ–ಅಂತಹವನು ಪ್ರಪಂಚದಲ್ಲಿ ಗೋವನ್ನು ನೋಡುತ್ತಿರುವವರೆಗೂ (ಗೋ ಜಾತಿಯು ಇರುವವರೆಗೂ) ಆ ದಾನದ ಫಲವನ್ನು ಅನುಭವಿಸುತ್ತಲೇ ಇರುತ್ತಾನೆ.

ರೋಮ್ಣಿ ರೋಮ್ಣಿ ಮಹಾಭಾಗ ಲೋಕಾಶ್ಚಾಸ್ಯಾಕ್ಷಯಾಃ ಸ್ಮೃತಾಃ।
ಸಂಗ್ರಾಮೇಷ್ವರ್ಜಯಿತ್ವಾ ತು ಯೋ ವೈ ಗಾಃ ಸಮ್ಪ್ರಯಚ್ಛತಿ ।
ಆತ್ಮವಿಕ್ರಯತುಲ್ಯಾಸ್ತಾಃ ಶಾಶ್ವತಾ ವಿದ್ಧಿ ಕೌಶಿಕ ॥೩೬॥

ಕೌಶಿಕನೇ! ಹಸುವಿನ ಒಂದೊಂದು ರೋಮದಲ್ಲಿಯೂ ಅಕ್ಷಯವಾದ ಲೋಕಗಳು ಪ್ರತಿಷ್ಠಿತವಾಗಿವೆ. ಯುದ್ಧದಲ್ಲಿ ಗೆದ್ದ ಗೋವುಗಳನ್ನು ಯಾವನು ದಾನಮಾಡುವನೋ ಮತ್ತು ತನ್ನನ್ನೇ ಮಾರಿಕೊಂಡು ಬಂದ ಹಣದಿಂದ

ಗೋವನ್ನು ಕೊಂಡು ಯಾವನು ದಾನಮಾಡುವನೋ–ಆ ಇಬ್ಬರಿಗೂ ಶಾಶ್ವತವಾದ ಸಮಾನಫಲವೇ ಲಭಿಸುವುದೆಂದು ತಿಳಿ.

ಅಭಾವೇ ಯೋ ಗವಾಂ ದದ್ಯಾತ್ತಿಲಧೇನುಂ ಯತವ್ರತಃ ।
ದುರ್ಗಾತ್ಸ ತಾರಿತೋ ಧೇನ್ವಾ ಕ್ಷೀರನದ್ಯಾಂ ಪ್ರಮೋದತೇ ॥೩೭॥

ಯಾವನು ಹಸುಗಳ ಅಭಾವವಿದ್ದಾಗ ನಿಯಮವ್ರತಾನುಷ್ಠಾನಪರನಾಗಿ ಎಳ್ಳಿನಿಂದ ಮಾಡಿದ ಹಸುವನ್ನು ದಾನಮಾಡುವನೋ–ಅವನು ದಾನಮಾಡಿದ ಆ ಹಸುವಿನ ಸಹಾಯವನ್ನು ಪಡೆದು (ಗೋದಾನಫಲದಿಂದ) ದಾಟಲಸಾಧ್ಯವಾದ ಸಂಕಟದಿಂದಲೂ ಪಾರಾಗುತ್ತಾನೆ ಮತ್ತು ಕ್ಷೀರನದಿಯ ತೀರದಲ್ಲಿ ಆನಂದದಿಂದಿರುತ್ತಾನೆ.

ನ ತ್ವೇವಾಸಾಂ ದಾನಮಾತ್ರಂ ಪ್ರಶಸ್ತಂ
ಪಾತ್ರಂ ಕಾಲೋ ಗೋವಿಶೇಷೋ ವಿಧಿಶ್ಚ ।
ಕಾಲಜ್ಞಾನಂ ವಿಪ್ರ ಗವಾನ್ತರಂ ಹಿ
ದುಃಖಂ ಜ್ಞಾತುಂ ಪಾವಕಾದಿತ್ಯಭೂತಮ್ ॥೩೮॥

ವಿಪ್ರಶ್ರೇಷ್ಠನೇ! (ದೇವೇಂದ್ರ!) ಹಸುಗಳನ್ನು ಸುಮ್ಮನೆ ದಾನ ಮಾಡಿಬಿಡುವುದು ಅಷ್ಟೇನೂ ಪ್ರಶಂಸೆಗೆ ಪಾತ್ರವಾಗುವುದಿಲ್ಲ. ಉತ್ತಮ ಪಾತ್ರನು ಸಿಕ್ಕಬೇಕು. ಉತ್ತಮವಾದ ಸಮಯವಾಗಿರಬೇಕು. ಉತ್ತಮವಾದ ಗೋವನ್ನೇ ಆರಿಸಿ ದಾನಮಾಡಬೇಕು. ವಿಧಿಪೂರ್ವಕವಾಗಿಯೂ ಮಾಡಬೇಕು. ಒಳ್ಳೆಯ ಕಾಲವು ಯಾವುದೆಂಬುದನ್ನು ತಿಳಿಯುವುದೂ ಹಸುಗಳಲ್ಲಿ ತಾರತಮ್ಯವನ್ನು ತಿಳಿಯುವುದೂ, ಅಗ್ನಿ ಮತ್ತು ಸೂರ್ಯರಿಗೆ ಸಮಾನವಾದ ತೇಜಸ್ಸಿನಿಂದ ಕೂಡಿರುವ ಸತ್ಪಾತ್ರನು ಯಾರೆಂಬುದನ್ನು ತಿಳಿಯುವುದೂ ಕಠಿನವೇ ಸರಿ.

ಸ್ವಾಧ್ಯಾಯಾಢ್ಯಂ ಶುದ್ಧಯೋನಿಂ ಪ್ರಶಾನ್ತಂ
ವೈತಾನಸ್ಥಂ ಪಾಪಭೀರುಂ ಬಹುಜ್ಞಮ್ ।
ಗೋಷು ಕ್ಷಾನ್ತಂ ನಾತಿತೀಕ್ಷ್ಣಂ ಶರಣ್ಯಂ
ವೃತ್ತಿಗ್ಲಾನಂ ತಾದೃಶಂ ಪಾತ್ರಮಾಹುಃ ॥೩೯॥

ವೇದಾಧ್ಯಯನಸಂಪನ್ನನಾಗಿರುವವನನ್ನೂ, ಸತ್ಕುಲಪ್ರಸೂತನನ್ನೂ, ಶಾಂತಸ್ವಭಾವದವನನ್ನೂ, ಯಜ್ಞಪರಾಯಣನನ್ನೂ, ಪಾಪಕರ್ಮಮಾಡಲು

ಹೆದರುವವನನ್ನೂ, ಅನೇಕಶಾಸ್ತ್ರಗಳ ಪರಿಚಯವಿರುವವನನ್ನೂ, ಗೋವುಗಳ ವಿಷಯದಲ್ಲಿ ಕ್ಷಮೆಯಿಂದಿರುವವನನ್ನೂ, ಅತಿತೀಕ್ಷ್ಣವಾದ ಸ್ವಭಾವ ವಿಲ್ಲದವನನ್ನೂ, ಗೋವುಗಳನ್ನು ರಕ್ಷಿಸಲು ಸಮರ್ಥನಾದವನನ್ನೂ, ಜೀವಿಕೆಗೆ ಯಾವ ವೃತ್ತಿಯೂ ಇಲ್ಲದವನನ್ನೂ-ಗೋದಾನಕ್ಕೆ ಸುಪಾತ್ರನೆಂದು ಹೇಳುತ್ತಾರೆ.

ವೃತ್ತಿಗ್ಲಾನೇ ಸೀದತಿ ಚಾತಿಮಾತ್ರಂ
ಕೃಷ್ಯರ್ಥೇ ವಾ ಹೋಮ್ಯಹೇತೋಃ ಪ್ರಸೂತೇಃ ।
ಗುರ್ವರ್ಥಂ ವಾ ಬಾಲಸಂವೃದ್ಧಯೇ ವಾ
ಧೇನುಂ ದದ್ಯಾದ್ದೇಶಕಾಲೇಽವಿಶಿಷ್ಟೇ ॥೪೦॥

ಯಾವ ಬ್ರಾಹ್ಮಣನು ಜೀವಿಸಲು ವೃತ್ತಿಯಿಲ್ಲದವನಾಗಿರುವನೋ, ಅತ್ಯಂತಕಷ್ಟದಲ್ಲಿರುವನೋ–ಅಂತಹವನಿಗೆ ಉಚಿತವಾದ ದೇಶ-ಕಾಲ ಗಳನ್ನು ನಿರೀಕ್ಷಿಸದೇ ಯಾವ ಕಾಲದಲ್ಲಾದರೂ ಗೋದಾನವನ್ನು ಮಾಡ ಬಹುದು. ಅಲ್ಲದೇ ವ್ಯವಸಾಯದ ಸಲುವಾಗಿಯೂ, ಹೋಮದ (ಯಜ್ಞದ) ಸಲುವಾಗಿಯೂ, ಗರ್ಭಿಣಿಯ ಮತ್ತು ಬಾಣಂತಿಯ ಪೋಷಣೆಯ ಸಲು ವಾಗಿಯೂ, ಗುರುದಕ್ಷಿಣೆಗಾಗಿಯೂ, ಮಕ್ಕಳನ್ನು ಸಾಕುವ ಸಲುವಾಗಿಯೂ ಯಾವ ಸಮಯದಲ್ಲಾದರೂ ಗೋದಾನವನ್ನು ಮಾಡಬಹುದು.

ಅನ್ತರ್ಜ್ಞಾತಾಃ ಸಕ್ರಯಜ್ಞಾನಲಬ್ಧಾಃ
ಪ್ರಾಣೈಃ ಕ್ರೀತಾಸ್ತೇಜಸಾ ಯೌತಕಾಶ್ಚ ।
ಕೃಚ್ಛ್ರೋತ್ಸೃಷ್ಟಾಃ ಪೋಷಣಾಭ್ಯಾಗತಾಶ್ಚ
ದ್ವಾರೈರೇತೈರ್ಗೋವಿಶೇಷಾಃ ಪ್ರಶಸ್ತಾಃ ॥೪೧॥

ಗರ್ಭವನ್ನು ಧರಿಸಿರುವ, (ಪರೀಕ್ಷಿಸಿ ಒಳ್ಳೆಯ ಗುಣಗಳಿಂದ ಕೂಡಿರುವುವೆಂದು ನಿಶ್ಚಿತವಾದ), ಕ್ರಯಕ್ಕೆ ಪಡೆದಿರುವ, ಜ್ಞಾನಕ್ಕೆ ಪಾರಿತೋಷಿಕರೂಪವಾಗಿ ಲಭಿಸಿದ, ತನ್ನನ್ನೇ ಮಾರಿಕೊಂಡು ಬಂದ ಹಣದಿಂದ ಕೊಂಡುಕೊಂಡ, ಪರಾಕ್ರಮದಿಂದ ಗೆದ್ದುಕೊಂಡ, ಮದುವೆಯ ಕಾಲದಲ್ಲಿ ಬಳುವಳಿಯಾಗಿ ಬಂದಿರುವ, ಬಂಧನದಿಂದ ಬಿಡುಗಡೆಯನ್ನು ಹೊಂದಿರುವ, ಪಾಲನೆ-ಪೋಷಣೆಗಳಿಗಾಗಿ ದರಿದ್ರನಾದವನ ಮನೆಯಿಂದ

ತಾವಾಗಿಯೇ ಆಗಮಿಸಿದ ಹಸುಗಳು ದಾನಕ್ಕೆ ಯೋಗ್ಯವಾದುವುಗಳು. ಈ ಮೂಲಕವಾಗಿ ಪ್ರಾಪ್ತವಾದ ಗೋವುಗಳು ದಾನಮಾಡಲು ಪ್ರಶಸ್ತ ವಾದುವುಗಳು.



ಬಲಾನ್ವಿತಾಃ ಶೀಲವಯೋಪಪನ್ನಾಃ
ಸರ್ವಾಃ ಪ್ರಶಂಸನ್ತೇ ಸುಗನ್ಧವತ್ಯಃ ।
ಯಥಾ ಹಿ ಗಙ್ಗಾ ಸರಿತಾಂ ವರಿಷ್ಠಾ
ತಥಾರ್ಜುನೀನಾಂ ಕಪಿಲಾ ವರಿಷ್ಠಾ ॥೪೨॥

ಹೃಷ್ಟ-ಪುಷ್ಟವಾಗಿರುವ, ಒಳ್ಳೆಯ ಸ್ವಭಾವವುಳ್ಳ, ಚಿಕ್ಕವಯಸ್ಸಿನ, ಸುಗಂಧಯುಕ್ತವಾದ ಎಲ್ಲ ಹಸುಗಳೂ ದಾನಕ್ಕೆ ಪ್ರಶಸ್ತವಾಗಿವೆ. ನದಿಗಳಲ್ಲಿ

ಗಂಗಾನದಿಯು ಎಲ್ಲ ನದಿಗಳಿಗಿಂತಲೂ ಶ್ರೇಷ್ಠವಾಗಿರುವಂತೆ–ಹಸುಗಳಲ್ಲಿ ಕಪಿಲಾಧೇನುವು ಎಲ್ಲ ಹಸುಗಳಿಗಿಂತಲೂ ಶ್ರೇಷ್ಠವಾದುದು.

ತಿಸ್ರೋ ರಾತ್ರೀಸ್ತ್ವದ್ಭಿರುಪೋಷ್ಯ ಭೂಮೌ
ತೃಪ್ತಾ ಗಾವಸ್ತರ್ಪಿತೇಭ್ಯಃ ಪ್ರದೇಯಾಃ ।
ವತ್ಸೈಃ ಪುಷ್ಟೈಃ ಕ್ಷೀರಪೈಃ ಸುಪ್ರಚಾರಾ-
ಸ್ತ್ರ್ಯಹಂ ದತ್ತ್ವಾ ಗೋರಸೈರ್ವರ್ತಿತವ್ಯಮ್ ॥೪೩॥

ಗೋದಾನದ ವಿಧಿಯು ಈ ಪ್ರಕಾರವಾಗಿದೆ : ಗೋದಾನಮಾಡು ವವನು ದಾನಮಾಡುವುದಕ್ಕೆ ಮೊದಲು ಮೂರು ರಾತ್ರಿಗಳು ಉಪವಾಸ ದಿಂದಿದ್ದು ಕೇವಲ ಜಲಾಹಾರಿಯಾಗಿರಬೇಕು. ನೆಲದ ಮೇಲೆ ಮಲಗಿ ಕೊಳ್ಳಬೇಕು. ದಾನಕೊಡುವ ಹಸುಗಳನ್ನು ಹುಲ್ಲು-ನೀರು-ಹಿಂಡಿ ಮೊದಲಾದುವುಗಳಿಂದ ತೃಪ್ತಿಪಡಿಸಬೇಕು ಮತ್ತು ಅವುಗಳ ಸೇವೆಯನ್ನು ಮಾಡಬೇಕು. ದಾನಕೊಡುವ ದಿನ ಸತ್ಪಾತ್ರನಾದ ಬ್ರಾಹ್ಮಣನಿಗೆ ಭೋಜನ ಮಾಡಿಸಿ ತೃಪ್ತಿಪಡಿಸಿ ಅನಂತರ ಗೋವುಗಳನ್ನು ಹಾಲುಕುಡಿಯುವ ಪುಷ್ಟ ವಾದ ಕರುಗಳೊಡನೆ ದಾನಮಾಡಿ ಪುನಃ ಮೂರು ದಿವಸಗಳು ಗೋರಸವನ್ನು (ಹಾಲನ್ನು) ಮಾತ್ರ ಸೇವಿಸಬೇಕು. (ಮೂರು ದಿವಸಗಳು ಉಪವಾಸ ಮಾಡಿದ ಮೇಲೆ ಮೂರು ದಿನ ಒಂದೊಂದು ಗೋವನ್ನು ದಾನಮಾಡಬೇಕು. ಆ ಮೂರು ದಿವಸಗಳೂ ಗೋರಸವನ್ನೇ ಸೇವಿಸುತ್ತಿರಬೇಕು. ಹೀಗೂ ಅರ್ಥ ಮಾಡಬಹುದಾಗಿದೆ.)

ದತ್ತ್ವಾ ಧೇನುಂ ಸುವ್ರತಾಂ ಸಾಧುದೋಹಾಂ
ಕಲ್ಯಾಣವತ್ಸಾಮಪಲಾಯಿನೀಂ ಚ ।
ಯಾವನ್ತಿ ರೋಮಾಣಿ ಭವನ್ತಿ ತಸ್ಯಾ-
ಸ್ತಾವನ್ತಿ ವರ್ಷಾಣಿ ಭವನ್ತ್ಯಮುತ್ರ ॥೪೪॥

ಯಾವನು ಸಾಧುವಾಗಿರುವ, ತಂಟೆಮಾಡದೇ ಹಾಲುಕೊಡುವ, ಸುಂದರವಾದ ಕರುವಿನಿಂದ ಕೂಡಿರುವ, ತಪ್ಪಿಸಿಕೊಂಡು ಓಡಿಹೋಗದೇ ಇರುವ ಗೋವನ್ನು ದಾನಮಾಡುವನೋ–ಅಂತಹವನು ದಾನಕೊಟ್ಟ ಆ

ಹಸುವಿನ ಶರೀರದಲ್ಲಿರುವ ರೋಮಗಳ ಸಂಖ್ಯೆಯಷ್ಟು ವರ್ಷಗಳನ್ನು ಪರಲೋಕದಲ್ಲಿ ಸುಖವಾಗಿ ಕಳೆಯುತ್ತಾನೆ.

ತಥಾನಡ್ವಾಹಂ ಬ್ರಾಹ್ಮಣಾಯ ಪ್ರದಾಯ
ಧುರ್ಯಂ ಯುವಾನಂ ಬಲಿನಂ ವಿನೀತಮ್ ।
ಹಲಸ್ಯ ವೋಢಾರಮನನ್ತವೀರ್ಯಂ
ಪ್ರಾಪ್ನೋತಿ ಲೋಕಾನ್ದಶಧೇನುದಸ್ಯ ॥೪೫॥

ಹಾಗೆಯೇ ಭಾರವನ್ನೆಳೆಯಲು ಸಮರ್ಥವಾದ, ಬಲಿಷ್ಠವಾದ, ಯುವವಯಸ್ಸಿನ, ಸಾಧುವಾದ, ನೇಗಿಲನ್ನೆಳೆಯುವ, ಅಪಾರಬಲವುಳ್ಳ ಎತ್ತನ್ನು ದಾನಮಾಡುವವನು ಹತ್ತು ಗೋವುಗಳನ್ನು ದಾನಮಾಡುವುದರಿಂದ ಪ್ರಾಪ್ತವಾಗುವ ಪುಣ್ಯಲೋಕಗಳನ್ನು ಹೊಂದುತ್ತಾನೆ.

ಕಾನ್ತಾರೇ ಬ್ರಾಹ್ಮಣಾನ್ಗಾಶ್ಚ ಯಃ ಪರಿತ್ರಾತಿ ಕೌಶಿಕ ।
ಕ್ಷಣೇನ ವಿಪ್ರಮುಚ್ಯೇತ ತಸ್ಯ ಪುಣ್ಯಫಲಂ ಶೃಣು ॥೪೬॥

ಕೌಶಿಕನೇ! ಯಾವನು ದುರ್ಗಮವಾದ ಅರಣ್ಯದಲ್ಲಿ ಸಿಲುಕಿರುವ ಬ್ರಾಹ್ಮಣರನ್ನೂ ಗೋವುಗಳನ್ನೂ ರಕ್ಷಿಸುವನೋ–ಅವನು ಆ ಕ್ಷಣದಲ್ಲಿಯೇ ಎಲ್ಲ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ಇಷ್ಟು ಮಾತ್ರವಲ್ಲ; ಗೋ-ಬ್ರಾಹ್ಮಣರ ರಕ್ಷಣೆಯಿಂದ ಅವನಿಗೆ ಪ್ರಾಪ್ತವಾಗುವ ಪುಣ್ಯಫಲಗಳನ್ನು ಹೇಳುವೆನು; ಕೇಳು:

ಅಶ್ವಮೇಧಕ್ರತೋಸ್ತುಲ್ಯಂ ಫಲಂ ಭವತಿ ಶಾಶ್ವತಮ್ ।
ಮೃತ್ಯುಕಾಲೇ ಸಹಸ್ರಾಕ್ಷ ಯಾಂ ವೃತ್ತಿಮನುಕಾಂಕ್ಷತೇ ॥೪೭॥

ಸಹಸ್ರಾಕ್ಷನೇ! ಅವನಿಗೆ ಅಶ್ವಮೇಧಯಾಗವನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲಕ್ಕೆ ಸದೃಶವಾದ ಫಲವೇ ಲಭಿಸುತ್ತದೆ. ಮುಂದೆ ಮೃತ್ಯುಕಾಲದಲ್ಲಿ ಯಾವ ಸ್ಥಿತಿಯನ್ನು ಅಪೇಕ್ಷಿಸುವನೋ–ಮರುಹುಟ್ಟಿನಲ್ಲಿ ಅದನ್ನೇ ಅವನು ಪಡೆದುಕೊಳ್ಳುತ್ತಾನೆ.

ಲೋಕಾನ್ಬಹುವಿಧಾನ್ದಿವ್ಯಾನ್ಯಚ್ಚಾಸ್ಯ ಹೃದಿ ವರ್ತತೇ ।
ತತ್ಸರ್ವಂ ಸಮವಾಪ್ನೋತಿ ಕರ್ಮಣೈತೇನ ಮಾನವಃ ॥೪೮॥
ಗೋಭಿಶ್ಚ ಸಮನುಜ್ಞಾತಃ ಸರ್ವತ್ರ ಚ ಮಹೀಯತೇ ।

ಅನೇಕಪ್ರಕಾರವಾದ ದಿವ್ಯಲೋಕಗಳನ್ನೂ, ಅವನ ಹೃದಯದಲ್ಲಿರ ಬಹುದಾದ ಬೇರೆ ಯಾವುದೇ ಕಾಮನೆಗಳನ್ನೂ ಗೋ-ಬ್ರಾಹ್ಮಣರ ರಕ್ಷಣೆಯಿಂದ ಮಾನವನು ಪಡೆದುಕೊಳ್ಳುತ್ತಾನೆ. ಗೋವುಗಳ ಅನುಗ್ರಹಕ್ಕೆ ಪಾತ್ರನಾದವನು ಸರ್ವತ್ರ ಪೂಜ್ಯನಾಗುತ್ತಾನೆ.

ಯಸ್ತ್ವೇತೇನೈವ ಕಲ್ಪೇನ ಗಾಂ ವನೇಷ್ವನುಗಚ್ಛತಿ ॥೪೯॥
ತೃಣಗೋಮಯಪರ್ಣಾಶೀ ನಿಃಸ್ಪೃಹೋ ನಿಯತಃ ಶುಚಿಃ ।
ಅಕಾಮಂ ತೇನ ವಸ್ತವ್ಯಂ ಮುದಿತೇನ ಶತಕ್ರತೋ ।
ಮಮ ಲೋಕೇ ಸುರೈಃ ಸಾರ್ಧಂ ಲೋಕೇ ಯತ್ರಾಪಿ ಚೇಚ್ಛತಿ ॥

ಯಾವನು ಇದೇ ವಿಧಿಯಿಂದಲೇ (ಗೋ-ಬ್ರಾಹ್ಮಣರ ರಕ್ಷಣೆಯ ಉದ್ದೇಶದಿಂದಲೇ) ಗೋವುಗಳನ್ನನುಸರಿಸಿ ಅರಣ್ಯಕ್ಕೆ ಹೋಗುವನೋ- ನಿಃಸ್ಪೃಹನಾಗಿ ನಿಯಮಾನುಷ್ಠಾನಪರನಾಗಿ ಹುಲ್ಲನ್ನೂ, ಗೋಮಯವನ್ನೂ (ಸಗಣಿಯನ್ನೂ) ಮತ್ತು ತರಗೆಲೆಗಳನ್ನೂ ತಿಂದುಕೊಂಡು ಜೀವಿಸುವನೋ– ಅಂತಹವನು ಯಾವ ವಿಧವಾದ ಕಾಮನೆಗಳೂ ಇಲ್ಲದೇ ಅವಸಾನಾನಂತರ ದಲ್ಲಿ ನನ್ನ ಲೋಕಕ್ಕೆ ಬಂದು ದೇವತೆಗಳೊಡನೆ ಆನಂದಿಸುತ್ತಾನೆ ಅಥವಾ ತಾನು ಇಚ್ಛಿಸುವ ಲೋಕಗಳಿಗೆ ಹೋಗುತ್ತಾನೆ.”

ಳಿನೆಯ ಅಧ್ಯಾಯವು ಮುಗಿಯಿತು.

೭೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಇತರರ ಹಸುಗಳನ್ನು ಕದ್ದು ದಾನಕೊಡುವುದರಲ್ಲಿ ಮತ್ತು ಮಾರುವುದರಲ್ಲಿ ಇರುವ ದೋಷಗಳು: ಗೋಹತ್ಯೆಯ ಭಯಂಕರ ಪರಿಣಾಮ: ಗೋದಾನ ಮತ್ತು ಸುವರ್ಣದಕ್ಷಿಣೆಗಳ ಮಾಹಾತ್ಮ್ಯ

ಇಂದ್ರನು ಪಿತಾಮಹನನ್ನು ಪ್ರಶ್ನಿಸುತ್ತಾನೆ:

ಜಾನನ್ಯೋ ಗಾಮಪಹರೇದ್ವಿಕ್ರೀಯಾಚ್ಚಾರ್ಥಕಾರಣಾತ್ ।
ಏತದ್ವಿಜ್ಞಾತುಮಿಚ್ಛಾಮಿ ಕ್ವ ನು ತಸ್ಯ ಗತಿರ್ಭವೇತ್ ॥೧॥

“ಪಿತಾಮಹನೇ! ಒಬ್ಬನು ತಿಳಿದೂ-ತಿಳಿದೂ ಹಣದಾಸೆಯಿಂದ ಮತ್ತೊಬ್ಬನ ಹಸುವನ್ನು ಕದ್ದು ಅದನ್ನು ಬೇರೊಬ್ಬರಿಗೆ ಮಾರಿದರೆ ಅಂತಹವನಿಗೆ ಎಂತಹ ಗತಿಯು ಪ್ರಾಪ್ತವಾಗುತ್ತದೆ? ಇದನ್ನು ತಿಳಿದುಕೊಳ್ಳಲು ನಾನು ಇಚ್ಛಿಸಿದ್ದೇನೆ.”

ಬ್ರಹ್ಮನು ಹೇಳುತ್ತಾನೆ :

ಭಕ್ಷಾರ್ಥಂ ವಿಕ್ರಯಾರ್ಥಂ ವಾ ಯೇಽಪಹಾರಂ ಹಿ ಕುರ್ವತೇ ।
ದಾನಾರ್ಥಂ ಬ್ರಾಹ್ಮಣಾರ್ಥಾಯ ತತ್ರೇದಂ ಶ್ರೂಯತಾಂ ಫಲಮ್॥

“ಮಹೇಂದ್ರನೇ! ತಿನ್ನುವುದಕ್ಕಾಗಲೀ, ಮಾರುವುದಕ್ಕಾಗಲೀ ಬ್ರಾಹ್ಮಣನಿಗೆ ದಾನಕೊಡುವುದಕ್ಕಾಗಲೀ–ಬೇರೆಯವನ ಹಸುವನ್ನು ಕದ್ದರೆ ಅದರಿಂದ ಅವರಿಗೆ ಪ್ರಾಪ್ತವಾಗುವ ಫಲವನ್ನು ಹೇಳುವೆನು; ಕೇಳು:

ವಿಕ್ರಯಾರ್ಥಂ ಹಿ ಯೋ ಹಿಂಸ್ಯಾದ್ಭಕ್ಷಯೇದ್ವಾ ನಿರಙ್ಕುಶಃ ।
ಘಾತಯಾನಂ ಹಿ ಪುರುಷಂ ಯೇಽನುಮನ್ಯೇಯುರರ್ಥಿನಃ ॥೩॥

ಮಾಂಸವನ್ನು ಮಾರುವ ಸಲುವಾಗಿ ಯಾವ ಸ್ವೇಚ್ಛಾಚಾರಿಯು ಗೋವನ್ನು ಹಿಂಸಿಸುವನೋ (ಕೊಲ್ಲುವನೋ) ಅಥವಾ ಗೋಮಾಂಸವನ್ನು ಭಕ್ಷಿಸುವನೋ ಮತ್ತು ಯಾವ ಸ್ವಾರ್ಥಪರರಾದ ಮನುಷ್ಯರು ಗೋವನ್ನು ವಧಿಸಲು ಕಟುಕನಿಗೆ ಅನುಮತಿಯನ್ನು ಕೊಡುವರೋ–ಅವರೆಲ್ಲರೂ ಮಹಾಪಾಪಕ್ಕೆ ಭಾಗಿಗಳಾಗುತ್ತಾರೆ.

ಘಾತಕಃ ಖಾದಕೋ ವಾಪಿ ತಥಾ ಯಶ್ಚಾನುಮನ್ಯತೇ ।

ಯಾವನ್ತಿ ತಸ್ಯಾ ರೋಮಾಣಿ ತಾವದ್ವರ್ಷಾಣಿ ಮಜ್ಜತಿ ॥೪॥

ಗೋವನ್ನು ಕೊಲ್ಲುವವನಾಗಲೀ, ಗೋಮಾಂಸವನ್ನು ತಿನ್ನುವವನಾಗಲೀ, ಗೋಹತ್ಯೆಗೆ ಅನುಮತಿಸುವವನಾಗಲೀ–ಕೊಲೆಗೀಡಾದ ಆ ಹಸುವಿನಲ್ಲಿ ಎಷ್ಟು ರೋಮಗಳಿರುವುವೋ–ಅಷ್ಟು ವರ್ಷಗಳ ಕಾಲ ನರಕದಲ್ಲಿ ಬಿದ್ದಿರುತ್ತಾರೆ.

ಯೇ ದೋಷಾ ಯಾದೃಶಾಶ್ಚೈವ ದ್ವಿಜಯಜ್ಞೋಪಘಾತಕೇ ।
ವಿಕ್ರಯೇ ಚಾಪಹಾರೇ ಚ ತೇ ದೋಷಾ ವೈ ಸ್ಮೃತಾಃ ಪ್ರಭೋ ॥

ಬ್ರಾಹ್ಮಣನು ಮಾಡುತ್ತಿರುವ ಯಜ್ಞವನ್ನು ಹಾಳುಮಾಡಿದವನಿಗೆ ಎಂತಹ ಮತ್ತು ಎಷ್ಟು ಪಾಪಗಳು ಉಂಟಾಗುವುವೋ–ಅಂತಹುದೇ ಮತ್ತು ಅಷ್ಟೇ ಪಾಪಗಳು ಇತರರ ಗೋವುಗಳನ್ನು ಕದಿಯುವವನಿಗೂ ಮತ್ತು ಮಾರುವವನಿಗೂ ಉಂಟಾಗುತ್ತವೆ.

ಅಪಹೃತ್ಯ ತು ಯೋ ಗಾಂ ವೈ ಬ್ರಾಹ್ಮಣಾಯ ಪ್ರಯಚ್ಛತಿ ।
ಯಾವದ್ದಾನಫಲಂ ತಸ್ಯಾಸ್ತಾವನ್ನಿರಯಮೃಚ್ಛತಿ ॥೬॥

ಯಾವನು ಬೇರೆಯವರ ಗೋವನ್ನು ಕದ್ದು ತಂದು ಬ್ರಾಹ್ಮಣನಿಗೆ ದಾನಮಾಡುವನೋ–ಅಂತಹವನು ತಾನೇ ಸಂಪಾದಿಸಿದ ಗೋವನ್ನು ದಾನಮಾಡುವುದರಿಂದ ಪ್ರಾಪ್ತವಾಗುವ ಪುಣ್ಯವು ಎಷ್ಟು ವರ್ಷಗಳ ವರೆಗಿರುವುದೋ ಅಷ್ಟು ವರ್ಷಗಳವರೆಗೆ ನರಕದಲ್ಲಿ ಬೀಳುತ್ತಾನೆ.

ಸುವರ್ಣಂ ದಕ್ಷಿಣಾಮಾಹುರ್ಗೋಪ್ರದಾನೇ ಮಹಾದ್ಯುತೇ ।
ಸುವರ್ಣಂ ಪರಮಿತ್ಯುಕ್ತಂ ದಕ್ಷಿಣಾರ್ಥಮಸಂಶಯಮ್ ॥೭॥

ಮಹಾತೇಜಸ್ವಿಯೇ! ದೇವೇಂದ್ರನೇ! ಗೋದಾನದಲ್ಲಿ ಸುವರ್ಣ ದಕ್ಷಿಣೆಯನ್ನು ಸೇರಿಸಿಕೊಡಬೇಕೆಂಬ ವಿಧಿಯಿದೆ. ದಕ್ಷಿಣೆಯನ್ನು ಕೊಡಲು ಸುವರ್ಣವೇ ಶ್ರೇಷ್ಠವೆಂಬುದರಲ್ಲಿ ಸಂಶಯವೇ ಇಲ್ಲ.

ಗೋಪ್ರದಾನಾತ್ತಾರಯತೇ ಸಪ್ತ ಪೂರ್ವಾಂಸ್ತಥಾ ಪರಾನ್ ।
ಸುವರ್ಣಂ ದಕ್ಷಿಣಾಂ ಕೃತ್ವಾ ತಾವದ್ದ್ವಿಗುಣಮುಚ್ಯತೇ ॥೮॥

ಮನುಷ್ಯನು ಗೋದಾನಮಾಡುವುದರಿಂದ ತನ್ನ ಹಿಂದಿನ ಏಳು ತಲೆಮಾರಿನವರನ್ನೂ ಮುಂದಿನ ಏಳು ತಲೆಮಾರಿನವರನ್ನೂ ಉದ್ಧಾರ

ಮಾಡುತ್ತಾನೆ. ಸುವರ್ಣಸಹಿತವಾಗಿ ಗೋದಾನಮಾಡುವುದರಿಂದ ಎರಡರಷ್ಟು ಅಂದರೆ : ಹಿಂದಿನ ಮತ್ತು ಮುಂದಿನ ಹದಿನಾಲ್ಕು ತಲೆಮಾರಿನ ವರನ್ನು ಉದ್ಧರಿಸುತ್ತಾನೆ.

ಸುವರ್ಣಂ ಪರಮಂ ದಾನಂ ಸುವರ್ಣಂ ದಕ್ಷಿಣಾ ಪರಾ ।
ಸುವರ್ಣಂ ಪಾವನಂ ಶಕ್ರ ಪಾವನಾನಾಂ ಪರಂ ಸ್ಮೃತಮ್ ॥೯॥

ಇಂದ್ರನೇ! ಸುವರ್ಣದಾನವು ಪರಮಶ್ರೇಷ್ಠವಾದುದು. ಸುವರ್ಣ ದಕ್ಷಿಣೆಯೇ ಶ್ರೇಷ್ಠವಾದ ದಕ್ಷಿಣೆ. ಪವಿತ್ರಗೊಳಿಸುವ ವಸ್ತುಗಳಲ್ಲಿ ಸುವರ್ಣವೇ ಪರಮಪವಿತ್ರವಾದುದು.

ಕುಲಾನಾಂ ಪಾವನಂ ಪ್ರಾಹುರ್ಜಾತರೂಪಂ ಶತಕ್ರತೋ ।
ಏಷಾ ಮೇ ದಕ್ಷಿಣಾ ಪ್ರೋಕ್ತಾ ಸಮಾಸೇನ ಮಹಾದ್ಯುತೇ ॥೧೦॥

ಮಹಾತೇಜಸ್ವಿಯೇ! ಶತಕ್ರತುವೇ! ಸುವರ್ಣವು (ಸುವರ್ಣದಾನವು) ಕುಲವನ್ನೇ ಪವಿತ್ರಗೊಳಿಸುವುದೆಂದು ಹೇಳುತ್ತಾರೆ. ಹೀಗೆ ನಾನು ನಿನಗೆ ಸುವರ್ಣದಕ್ಷಿಣೆಯ ವಿಷಯವನ್ನು ಸಂಕ್ಷೇಪವಾಗಿ ಹೇಳಿದ್ದೇನೆ."

ಭೀಷ್ಮನು ಹೇಳುತ್ತಾನೆ :

"ಭರತಶ್ರೇಷ್ಠನೇ! ಯುಧಿಷ್ಠಿರ! ಗೋವಿನ ಸಂಬಂಧವಾದ ಈ ವಿಷಯವನ್ನು ಪಿತಾಮಹನು ಇಂದ್ರನಿಗೆ ಹೇಳಿದನು. ಇಂದ್ರನು ದಶರಥರಾಜನಿಗೂ ದಶರಥನು ತನ್ನ ಮಗನಾದ ಶ್ರೀರಾಮನಿಗೂ ಈ ವಿಷಯವನ್ನು ಹೇಳಿದರು. ಅನಂತರ ಗೋವಿನ ಈ ಮಾಹಾತ್ಮ್ಯವನ್ನು ಶ್ರೀರಾಮನು ತನ್ನ ಪ್ರೀತಿಯ ತಮ್ಮನಾದ ಯಶೋವಂತನಾದ ಲಕ್ಷ್ಮಣನಿಗೆ ಹೇಳಿದನು. ಅರಣ್ಯದಲ್ಲಿ ಶ್ರೀರಾಮನೊಡನೆ ವಾಸಮಾಡುತ್ತಿದ್ದಾಗ ಲಕ್ಷ್ಮಣನು ಈ ಗೋಚರಿತವನ್ನು ಅಲ್ಲಿದ್ದ ಋಷಿಗಳಿಗೆ ಹೇಳಿದನು.

ಹೀಗೆ ಪರಂಪರೆಯಾಗಿ ಬಂದ ದುರ್ಧರವಾದ (ಅನುಷ್ಠಾನ ಮಾಡಲು ಕಷ್ಟಸಾಧ್ಯವಾದ) ಗೋವ್ರತವನ್ನು ಕಠೋರವ್ರತನಿಷ್ಠರಾದ ಋಷಿಗಳೂ ಧಾರ್ಮಿಕರಾದ ರಾಜರೂ ಧಾರಣೆಮಾಡಿದರು. (ಕೈಗೊಂಡರು.) ನನ್ನ ಉಪಾಧ್ಯಾಯರು ಈ ಗೋವ್ರತವನ್ನು ನನಗೆ ಉಪದೇಶಿಸಿದರು.

ಯ ಇದಂ ಬ್ರಾಹ್ಮಣೋ ನಿತ್ಯಂ ವದೇದ್ಬ್ರಾಹ್ಮಣಸಂಸದಿ ।

ಯಜ್ಞೇಷು ಗೋಪ್ರದಾನೇಷು ದ್ವಯೋರಪಿ ಸಮಾಗಮೇ ।
ತಸ್ಯ ಲೋಕಾಃ ಕಿಲಾಕ್ಷಯ್ಯಾ ದೈವತೈಃ ಸಹ ನಿತ್ಯದಾ ॥೧೫॥

ಈ ಗೋಮಾಹಾತ್ಮ್ಯವನ್ನು ಯಾವ ಬ್ರಾಹ್ಮಣನು ಬ್ರಾಹ್ಮಣರ ಸಭೆಯಲ್ಲಿ ಪ್ರತಿನಿತ್ಯವೂ ಪ್ರವಚನಮಾಡುವನೋ–ಯಜ್ಞದ ಸಮಯದಲ್ಲಿಯೂ ಗೋದಾನಮಾಡುವ ಸಮಯದಲ್ಲಿಯೂ ಮತ್ತು ಇಬ್ಬರ ಸಮಾಗಮವಾದಾಗಲೂ ಪಠಿಸುವನೋ–ಅಂತಹವನಿಗೆ ಅಕ್ಷಯವಾದ ಪುಣ್ಯಲೋಕಗಳು ಲಭಿಸುತ್ತವೆ. ಹಾಗೂ ಅಲ್ಲಿ ದೇವತೆಗಳೊಡನೆ ನಿತ್ಯವೂ ಆನಂದದಿಂದಿರುತ್ತಾನೆ."

ಎಪ್ಪತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

ಎಪ್ಪತ್ತೈದನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವ್ರತ, ನಿಯಮ, ದಮ, ಸತ್ಯ, ಬ್ರಹ್ಮಚರ್ಯ, ಮಾತಾ-ಪಿತೃ-ಗುರುಶುಶ್ರೂಷೆ: ಇವುಗಳ ಮಹತ್ತ್ವ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ವಿಸ್ರಮ್ಭಿತೋಽಹಂ ಭವತಾ ಧರ್ಮಾನ್ಪ್ರವದತಾ ವಿಭೋ ।
ಪ್ರವಕ್ಷ್ಯಾಮಿ ತು ಸಂದೇಹಂ ತನ್ಮೇ ಬ್ರೂಹಿ ಪಿತಾಮಹ ॥೧॥

"ವಿಭುವೇ! ನೀನು ನನಗೆ ಧರ್ಮೋಪದೇಶವನ್ನು ಮಾಡಿ ಧರ್ಮದಲ್ಲಿ ದೃಢವಾದ ವಿಶ್ವಾಸವುಂಟಾಗುವಂತೆ ಮಾಡಿರುವೆ. ಈಗ ನಾನು ನನ್ನ ಮನಸ್ಸಿನಲ್ಲುಂಟಾಗಿರುವ ಸಂದೇಹಗಳನ್ನು ಹೇಳುತ್ತೇನೆ. ಆ ನನ್ನ ಸಂದೇಹಗಳನ್ನು ನಿವಾರಿಸು.

ವ್ರತಾನಾಂ ಕಿಂ ಫಲಂ ಪ್ರೋಕ್ತಂ ಕೀದೃಶಂ ವಾ ಮಹಾದ್ಯುತೇ ।
ನಿಯಮಾನಾಂ ಫಲಂ ಕಿಂ ಚ ಸ್ವಧೀತಸ್ಯ ಚ ಕಿಂ ಫಲಮ್ ॥೨॥

ಮಹಾತೇಜಸ್ವಿಯೇ! ವ್ರತಾಚರಣೆಯಿಂದ ಬರುವ ಫಲವಾವುದು? ಅದು ಎಂತಹುದು? ನಿಯಮಪಾಲನೆ ಮತ್ತು ವೇದಾಧ್ಯಯನಗಳಿಂದ ಯಾವ ಫಲವು ಲಭಿಸುತ್ತದೆ?

ದತ್ತಸ್ಯೇಹ ಫಲಂ ಕಿಂ ಚ ವೇದಾನಾಂ ಧಾರಣೇ ಚ ಕಿಮ್ ।
ಅಧ್ಯಾಪನೇ ಫಲಂ ಕಿಂ ಚ ಸರ್ವಮಿಚ್ಛಾಮಿ ವೇದಿತುಮ್ ॥೩॥

ದಾನಮಾಡುವುದರಿಂದ, ವೇದಗಳನ್ನು ಹೃದ್ಗತವಾಗಿ ಮಾಡಿಕೊಳ್ಳು ವುದರಿಂದ ಮತ್ತು ವೇದಗಳನ್ನು ಅಧ್ಯಯನಮಾಡಿಸುವುದರಿಂದ ಎಂತಹ ಫಲವು ಲಭಿಸುತ್ತದೆ? ಈ ಎಲ್ಲವನ್ನೂ ತಿಳಿಯಲು ಇಚ್ಛಿಸಿದ್ದೇನೆ.

ಅಪ್ರತಿಗ್ರಾಹಕೇ ಕಿಂ ಚ ಫಲಂ ಲೋಕೇ ಪಿತಾಮಹ ।
ತಸ್ಯ ಕಿಂ ಚ ಫಲಂ ದೃಷ್ಟಂ ಶ್ರುತಂ ಯಸ್ತು ಪ್ರಯಚ್ಛತಿ ॥೪॥

ಪಿತಾಮಹನೇ! ಲೋಕದಲ್ಲಿ ಪ್ರತಿಗ್ರಹವನ್ನೇ ಮಾಡದೇ ಇರುವವನಿಗೆ ಎಂತಹ ಫಲವು ಲಭಿಸುತ್ತದೆ? ವೇದವನ್ನು ಹೇಳಿಕೊಡುವವನಿಗೆ ಯಾವ ಫಲವು ಲಭಿಸುತ್ತದೆ?

ಸ್ವಕರ್ಮನಿರತಾನಾಂ ಚ ಶೂರಾಣಾಂ ಚಾಪಿ ಕಿಂ ಫಲಮ್ ।
ಶೌಚೇ ಚ ಕಿಂ ಫಲಂ ಪ್ರೋಕ್ತಂ ಬ್ರಹ್ಮಚರ್ಯೇ ಚ ಕಿಂ ಫಲಮ್ ॥

ಸ್ವಕರ್ಮನಿರತರಾದ ಶೂರರಿಗೆ (ಕ್ಷತ್ರಿಯರಿಗೆ) ಯಾವ ಫಲವು ಲಭಿಸುತ್ತದೆ? ಶೌಚಾಚಾರಕ್ಕೆ ಮತ್ತು ಬ್ರಹ್ಮಚರ್ಯಪಾಲನೆಗೆ ಯಾವ ಫಲವಿದೆ?

ಪಿತೃಶುಶ್ರೂಷಣೇ ಕಿಂ ಚ ಮಾತೃಶುಶ್ರೂಷಣೇ ತಥಾ ।
ಆಚಾರ್ಯಗುರುಶುಶ್ರೂಷಾಸ್ವನುಕ್ರೋಶಾನುಕಮ್ಪನೇ ॥೬॥

ಮಾತಾ-ಪಿತೃಶುಶ್ರೂಷೆಯಿಂದ ಯಾವ ಫಲವು ಪ್ರಾಪ್ತವಾಗುತ್ತದೆ? ಆಚಾರ್ಯರನ್ನೂ ಗುರುಜನರನ್ನೂ ಸೇವಿಸುವುದರಿಂದ ಯಾವ ಫಲವು ಲಭಿಸುತ್ತದೆ? ಪ್ರಾಣಿಗಳ ವಿಷಯದಲ್ಲಿ ದಯೆಯನ್ನೂ ಅನುಕಂಪವನ್ನೂ ತೋರುವುದರಿಂದ ಯಾವ ಫಲವು ಲಭಿಸುತ್ತದೆ?

ಧರ್ಮಜ್ಞನೇ! ಪಿತಾಮಹನೇ! ಈ ಎಲ್ಲವನ್ನೂ ನಾನು ಯಥಾವತ್ತಾಗಿ ಸಮಗ್ರವಾಗಿ ತಿಳಿಯಲು ಇಚ್ಛಿಸಿದ್ದೇನೆ. ಇದನ್ನು ತಿಳಿಯಲು ನನಗೆ ಹೆಚ್ಚಿನ ಕುತೂಹಲವುಂಟಾಗಿದೆ."

ಭೀಷ್ಮನು ಹೇಳುತ್ತಾನೆ :

ಯೋ ವ್ರತಂ ವೈ ಯಥೋದ್ದಿಷ್ಟಂ ತಥಾ ಸಮ್ಪ್ರತಿಪದ್ಯತೇ ।
ಅಖಣ್ಡಂ ಸಮ್ಯಗಾರಭ್ಯ ತಸ್ಯ ಲೋಕಾಃ ಸನಾತನಾಃ ॥೮॥

"ಯಾವ ಮನುಷ್ಯನು ಶಾಸ್ತ್ರೋಕ್ತವಾದ ವಿಧಿಗೆ ಅನುಸಾರವಾಗಿ ವ್ರತ

ವನ್ನು ಶುದ್ಧಚಿತ್ತನಾಗಿ ಆರಂಭಿಸಿ ಪೂರ್ಣಗೊಳಿಸುವನೋ–ಅಂತಹವನಿಗೆ ಸನಾತನವಾದ ಶುಭಲೋಕಗಳು ಪ್ರಾಪ್ತವಾಗುತ್ತವೆ.

ನಿಯಮಾನಾಂ ಫಲಂ ರಾಜನ್ಪ್ರತ್ಯಕ್ಷಮಿಹ ದೃಶ್ಯತೇ ।
ನಿಯಮಾನಾಂ ಕ್ರತೂನಾಂ ಚ ತ್ವಯಾವಾಪ್ತಮಿದಂ ಫಲಮ್ ॥೯॥

ಪ್ರಪಂಚದಲ್ಲಿ ನಿಯಮಗಳ ಪರಿಪಾಲನೆಗೆ ಫಲವು ಪ್ರತ್ಯಕ್ಷವಾಗಿಯೇ ಕಾಣುತ್ತದೆ. ನೀನಾದರೂ ನಿಯಮಗಳ ಮತ್ತು ಯಜ್ಞಗಳ ಫಲವನ್ನೇ ಪಡೆದುಕೊಂಡಿರುವೆ.

ಸ್ವಧೀತಸ್ಯಾಪಿ ಚ ಫಲಂ ದೃಶ್ಯತೇಽಮುತ್ರ ಚೇಹ ಚ ।
ಇಹ ಲೋಕೇಽಥವಾ ನಿತ್ಯಂ ಬ್ರಹ್ಮಲೋಕೇ ಚ ಮೋದತೇ ॥೧೦॥

ವೇದಗಳ ಅಧ್ಯಯನಕ್ಕೂ ಫಲವನ್ನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಕಾಣಲು ಸಾಧ್ಯವಿದೆ. ವೇದಾಧ್ಯಯನಮಾಡಿದವನು ಇಹದಲ್ಲಿಯೂ, ಅವಸಾನಾನಂತರದಲ್ಲಿ ಬ್ರಹ್ಮಲೋಕದಲ್ಲಿಯೂ ಆನಂದಭರಿತನಾಗಿರುತ್ತಾನೆ.

ಯುಧಿಷ್ಠಿರ! ಮುಂದೆ ನೀನು ದಮದ ಫಲವನ್ನು ವಿವರವಾಗಿ ಕೇಳು:

ದಾನ್ತಾಃ ಸರ್ವತ್ರ ಸುಖಿನೋ ದಾನ್ತಾಃ ಸರ್ವತ್ರ ನಿರ್ವೃತಾಃ ॥೧೧॥

ಜಿತೇಂದ್ರಿಯರಾದವರು ಎಲ್ಲ ಕಡೆಗಳಲ್ಲಿಯೂ ಸುಖಿಗಳಾಗಿಯೂ ಸಂತುಷ್ಟರಾಗಿಯೂ ಇರುತ್ತಾರೆ.

ಯತ್ರೇಚ್ಛಾಗಾಮಿನೋ ದಾನ್ತಾಃ ಸರ್ವಶತ್ರುನಿಷೂದನಾಃ ।
ಪ್ರಾರ್ಥಯನ್ತಿ ಚ ಯದ್ದಾನ್ತಾ ಲಭನ್ತೇ ತನ್ನ ಸಂಶಯಃ ॥೧೨॥

ಜಿತೇಂದ್ರಿಯರಾದವರು ಇಚ್ಛೆಬಂದಲ್ಲಿಗೆ ಹೋಗುತ್ತಾರೆ. ಇಚ್ಛೆಪಟ್ಟ ವಸ್ತುಗಳನ್ನು ಪಡೆದುಕೊಳ್ಳುತ್ತಾರೆ. ಜಿತೇಂದ್ರಿಯರಾದವರು ಕಾಮ- ಕ್ರೋಧ ಗಳೇ ಮೊದಲಾದ ಸರ್ವಶತ್ರುಗಳನ್ನೂ ವಿನಾಶಗೊಳಿಸುತ್ತಾರೆ. ಇದರಲ್ಲಿ ಸಂಶಯವೇ ಇಲ್ಲ.

ಯುಜ್ಯನ್ತೇ ಸರ್ವಕಾಮೈರ್ಹಿ ದಾನ್ತಾಃ ಸರ್ವತ್ರ ಪಾಣ್ಡವ ।
ಸ್ವರ್ಗೇ ಯಥಾ ಪ್ರಮೋದನ್ತೇ ತಪಸಾ ವಿಕ್ರಮೇಣ ಚ ।
ದಾನೈರ್ಯಜ್ಞೈಶ್ಚ ವಿವಿಧೈಸ್ತಥಾ ದಾನ್ತಾಃ ಕ್ಷಮಾನ್ವಿತಾಃ ॥೧೩॥

ಯುಧಿಷ್ಠಿರ! ಜಿತೇಂದ್ರಿಯರಾದವರು ಎಲ್ಲ ಕಡೆಗಳಲ್ಲಿಯೂ ತಮಗೆ ಬೇಕಾದ ವಸ್ತುಗಳನ್ನು ಪಡೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಅವರು ತಮ್ಮ ತಪಸ್ಸಿನಿಂದಲೂ, ಪರಾಕ್ರಮದಿಂದಲೂ, ದಾನಾದಿಗಳಿಂದಲೂ, ವಿಧ-ವಿಧವಾದ ಯಜ್ಞಗಳಿಂದಲೂ ಈ ಲೋಕದಲ್ಲಿಯೂ ಮತ್ತು ಸ್ವರ್ಗಲೋಕದಲ್ಲಿಯೂ ಆನಂದವನ್ನು ಅನುಭವಿಸುತ್ತಾರೆ. ಅಂತೆಯೇ ಇಂದ್ರಿಯಗಳನ್ನು ದಮನಗೊಳಿಸಿರುವ ಪುರುಷರು ಕ್ಷಮಾವಂತರೂ ಆಗಿರುತ್ತಾರೆ.

ದಾನಾದ್ದಮೋ ವಿಶಿಷ್ಟೋ ಹಿ ದದತ್ಕಿಂಚಿದ್ದ್ವಿಜಾತಯೇ ।
ದಾತಾ ಕುಪ್ಯತಿ ನೋ ದಾನ್ತಸ್ತಸ್ಮಾದ್ದಾನಾತ್ಪರಂ ದಮಃ ॥೧೪॥
ಯಸ್ತು ದದ್ಯಾದಕುಪ್ಯನ್ಹಿ ತಸ್ಯ ಲೋಕಾಃ ಸನಾತನಾಃ ॥೧೫॥

ದಾನಕ್ಕಿಂತಲೂ ದಮವು ಶ್ರೇಷ್ಠವಾದುದು. ದಾನಿಯು ಬ್ರಾಹ್ಮಣನಿಗೆ ದಾನಕೊಡುವಾಗ ಕಾರಣಾಂತರಗಳಿಂದ ಕೆಲವೊಮ್ಮೆ ಕೋಪಿಸಿಕೊಳ್ಳಲೂ ಬಹುದು. ಆದರೆ ಜಿತೇಂದ್ರಿಯನಾದವನು ಕ್ರೋಧಾದಿಗಳನ್ನು ನಿಗ್ರಹಿಸಿ ಬಿಟ್ಟಿರುವುದರಿಂದ ಯಾವುದೇ ಕಾರಣದಿಂದಲೂ ಕೋಪಿಸಿಕೊಳ್ಳುವುದಿಲ್ಲ. ಈ ಕಾರಣದಿಂದಲೇ ದಾನಕ್ಕಿಂತಲೂ ದಮವು ಶ್ರೇಷ್ಠವೆಂದು ಹೇಳುತ್ತಾರೆ. ಯಾವ ಮನುಷ್ಯನು ಯಾವುದೇ ಕಾರಣದಿಂದಲೂ ಕೋಪಗೊಳ್ಳದೇ ದಾನವನ್ನು ಕೊಡುವನೋ–ಅಂತಹವನಿಗೆ ಸನಾತನವಾದ ಲೋಕಗಳು ಪ್ರಾಪ್ತವಾಗುತ್ತವೆ.

ಕ್ರೋಧೋ ಹನ್ತಿ ಹಿ ಯದ್ದಾನಂ ತಸ್ಮಾದ್ದಾನಾತ್ಪರಂ ದಮಃ ।
ಅದೃಶ್ಯಾನಿ ಮಹಾರಾಜ ಸ್ಥಾನಾನ್ಯಯುತಶೋ ದಿವಿ ॥೧೬॥
ಋಷೀಣಾಂ ಸರ್ವಲೋಕೇಷು ಯಾನೀತೋ ಯಾನ್ತಿ ದೇವತಾಃ ।
ದಮೇನ ಯಾನಿ ನೃಪತೇ ಗಚ್ಛನ್ತಿ ಪರಮರ್ಷಯಃ ।
ಕಾಮಯಾನಾ ಮಹತ್ಸ್ಥಾನಂ ತಸ್ಮಾದ್ದಾನಾತ್ಪರಂ ದಮಃ ॥೧೭॥

ದಾನಕೊಡುವ ಸಮಯದಲ್ಲಿ ಸ್ವಲ್ಪವಾದರೂ ಕ್ರೋಧವುಂಟಾದರೆ– ಆ ಕ್ರೋಧವೇ ದಾನದ ಫಲವನ್ನು ಹಾಳುಮಾಡಿಬಿಡುತ್ತದೆ. ಆದುದರಿಂದ ದಾನಕ್ಕಿಂತಲೂ ದಮವೇ ಶ್ರೇಷ್ಠವಾದುದು. ಸಮಸ್ತಲೋಕಗಳಲ್ಲಿಯೂ ಇರುವ ಋಷಿಗಳಿಗೆ ಸ್ವರ್ಗದಲ್ಲಿ ಅದೃಶ್ಯವಾದ ಸಾವಿರಾರು ಸ್ಥಾನಗಳಿವೆ. ದೇವತೆಗಳೂ ಮತ್ತು ಮಹರ್ಷಿಗಳೂ ಅಂತಹ ಅದೃಶ್ಯಸ್ಥಾನಗಳಿಗೆ ಹೋಗಲಿಚ್ಛಿಸಿ ಜಿತೇಂದ್ರಿಯರಾಗಿದ್ದು ಆ ಅದೃಶ್ಯಸ್ಥಾನಗಳಿಗೆ ಹೋಗುತ್ತಾರೆ. (ದಮವೇ ಸ್ವರ್ಗದಲ್ಲಿರುವ ಆ ಅದೃಶ್ಯಸ್ಥಾನಗಳಿಗೆ ಹೋಗಲು ಮುಖ್ಯ ಸಾಧನವಾಗಿದೆ.) ಆದುದರಿಂದ ದಾನಕ್ಕಿಂತಲೂ ದಮವೇ ಶ್ರೇಷ್ಠವಾದುದು.

ಅಧ್ಯಾಪಕಃ ಪರಿಕ್ಲೇಶಾದಕ್ಷಯಂ ಫಲಮಶ್ನುತೇ ।
ವಿಧಿವತ್ಪಾವಕಂ ಹುತ್ವಾ ಬ್ರಹ್ಮಲೋಕೇ ನರಾಧಿಪ ॥೧೮॥

ನರಾಧಿಪನೇ! ಅಧ್ಯಾಪಕನು ಬಹಳ ಕಷ್ಟಪಟ್ಟು ಶಿಷ್ಯರಿಗೆ ಪಾಠ ಹೇಳುವ ಕಾರಣ ಅಕ್ಷಯವಾದ ಫಲವನ್ನು ಹೊಂದುತ್ತಾನೆ. ವಿಧಿವತ್ತಾಗಿ ಅಗ್ನಿಯಲ್ಲಿ ಹೋಮಮಾಡುವವನು ಬ್ರಹ್ಮಲೋಕದಲ್ಲಿಯೂ ಪೂಜಿಸಲ್ಪಡುತ್ತಾನೆ.

ಅಧೀತ್ಯಾಪಿ ಹಿ ಯೋ ವೇದಾನ್ನ್ಯಾಯವಿದ್ಭ್ಯಃ ಪ್ರಯಚ್ಛತಿ ।
ಗುರುಕರ್ಮಪ್ರಶಂಸೀ ತು ಸೋಽಪಿ ಸ್ವರ್ಗೇ ಮಹೀಯತೇ ॥೧೯॥

ವೇದಗಳನ್ನು ಅಧ್ಯಯನಮಾಡಿ ಯಾವನು ನ್ಯಾಯಪರಾಯಣರಾದ ಶಿಷ್ಯರಿಗೆ ಉಪದೇಶಿಸುವನೋ ಮತ್ತು ಗುರುವು ಮಾಡಿದ ಕ್ರಮಗಳನ್ನು ಪ್ರಶಂಸೆಮಾಡುವನೋ–ಅಂತಹವನೂ ಸ್ವರ್ಗಲೋಕದಲ್ಲಿ ಪೂಜ್ಯನಾಗುತ್ತಾನೆ.

ಕ್ಷತ್ರಿಯೋಽಧ್ಯಯನೇ ಯುಕ್ತೋ ಯಜನೇ ದಾನಕರ್ಮಣಿ ।
ಯುದ್ಧೇ ಯಶ್ಚ ಪರಿತ್ರಾತಾ ಸೋಽಪಿ ಸ್ವರ್ಗೇ ಮಹೀಯತೇ ॥೨೦॥

ಅಧ್ಯಯನ-ಯಜನ-ದಾನಕರ್ಮಗಳಲ್ಲಿ ನಿರತನಾಗಿರುವ ಮತ್ತು ಯುದ್ಧದಲ್ಲಿ ಸತ್ಪುರುಷರನ್ನು ರಕ್ಷಿಸುವ ಕ್ಷತ್ರಿಯನೂ ಸ್ವರ್ಗಲೋಕದಲ್ಲಿ ಪೂಜ್ಯನಾಗುತ್ತಾನೆ.

ವೈಶ್ಯಃ ಸ್ವಕರ್ಮನಿರತಃ ಪ್ರದಾನಾಲ್ಲಭತೇ ಮಹತ್ ।
ಶೂದ್ರಃ ಸ್ವಕರ್ಮನಿರತಃ ಸ್ವರ್ಗಂ ಶುಶ್ರೂಷಯಾರ್ಚ್ಛತಿ ॥೨೧॥

ಸ್ವಕರ್ಮನಿರತನಾದ ವೈಶ್ಯನು ದಾನಮಾಡುವುದರಿಂದ ಮಹತ್ತಾದ ಸ್ಥಾನವನ್ನು ಹೊಂದುತ್ತಾನೆ. ಸ್ವಕರ್ಮನಿರತನಾದ ಶೂದ್ರನು ಶುಶ್ರೂಷೆಯಿಂದ ಸ್ವರ್ಗವನ್ನು ಹೊಂದುತ್ತಾನೆ.

ಶೂರಾ ಬಹುವಿಧಾಃ ಪ್ರೋಕ್ತಾಸ್ತೇಷಾಮರ್ಥಾಂಸ್ತು ಮೇ ಶೃಣು ।
ಶೂರಾನ್ವಯಾನಾಂ ನಿರ್ದಿಷ್ಟಂ ಫಲಂ ಶೂರಸ್ಯ ಚೈವ ಹಿ ॥೨೨॥

ಶೂರರಲ್ಲಿ ಅನೇಕರೀತಿಯ ಶೂರರು ಹೆಸರಿಸಲ್ಪಡುತ್ತಾರೆ. ಅವರೆಲ್ಲರಿಗೂ ಪ್ರಾಪ್ತವಾಗುವ ಪ್ರಯೋಜನವನ್ನು ಹೇಳುವೆನು; ಕೇಳು: ಶೂರನಿಗೂ ಮತ್ತು ಅವನ ವಂಶದವರಿಗೂ ಇಂತಹುದೇ ಫಲವೆಂಬುದು ನಿರ್ದಿಷ್ಟವಾಗಿದೆ.

ಯಜ್ಞಶೂರಾ ದಮೇ ಶೂರಾಃ ಸತ್ಯಶೂರಾಸ್ತಥಾಪರೇ ।
ಯುದ್ಧಶೂರಾಸ್ತಥೈವೋಕ್ತಾ ದಾನಶೂರಾಶ್ಚ ಮಾನವಾಃ ॥೨೩॥

ಕೆಲವರು ಯಜ್ಞಶೂರರಾಗಿರುತ್ತಾರೆ. (ಸದಾ ಯಜ್ಞಮಾಡುತ್ತಲೇ ಇರುತ್ತಾರೆ.) ಕೆಲವರು ದಮಶೂರರಾಗಿರುತ್ತಾರೆ. (ಜಿತೇಂದ್ರಿಯತೆಯೇ ಪರಮಧ್ಯೇಯವುಳ್ಳವರಾಗಿರುತ್ತಾರೆ.) ಕೆಲವರು ಸತ್ಯಶೂರರಾಗಿರುತ್ತಾರೆ. (ಯಾವುದೇ ಕಾರಣದಿಂದಲೂ ಆಪತ್ಕಾಲದಲ್ಲಿಯೂ ಸುಳ್ಳನ್ನು ಹೇಳು ವುದಿಲ್ಲ.) ಕೆಲವರು ಯುದ್ಧಶೂರರಾಗಿರುತ್ತಾರೆ. (ಯುದ್ಧಮಾಡುತ್ತಲೇ ಮಡಿಯಬೇಕೆಂಬ ಧ್ಯೇಯವುಳ್ಳವರಾಗಿರುತ್ತಾರೆ.) ಕೆಲವರು ದಾನಶೂರ ರಾಗಿರುತ್ತಾರೆ. (ಯಾಚಕನು ಕೇಳಿದ್ದನ್ನು ಇಲ್ಲವೆನ್ನಕೂಡದೆಂಬ ಪ್ರತಿಜ್ಞೆಯನ್ನು ಕೈಗೊಂಡಿರುತ್ತಾರೆ.)

ಸಾಂಖ್ಯಶೂರಾಶ್ಚ ಬಹವೋ ಯೋಗಶೂರಾಸ್ತಥಾಪರೇ ।
ಅರಣ್ಯೇ ಗೃಹವಾಸೇ ಚ ತ್ಯಾಗೇ ಶೂರಾಸ್ತಥಾಪರೇ ॥೨೪॥

ಕೆಲವರು ಸಾಂಖ್ಯಶಾಸ್ತ್ರದಲ್ಲಿ ಅಗಾಧವಾದ ಪಾಂಡಿತ್ಯವನ್ನು ಪಡೆದು ಸಾಂಖ್ಯಶೂರರೆನಿಸಿಕೊಂಡಿರುತ್ತಾರೆ. ಕೆಲವರು ಯೋಗಾಭ್ಯಾಸನಿರತರಾಗಿದ್ದು ಯೋಗದಿಂದ ಸಾಧಿಸಬಹುದಾದ ಎಲ್ಲವನ್ನೂ ಸಾಧಿಸಿಕೊಂಡು ಯೋಗಶೂರರೆನಿಸಿಕೊಂಡಿರುತ್ತಾರೆ. ಕೆಲವರು ಅರಣ್ಯದಲ್ಲಿಯೇ ವಾಸ

ಮಾಡುತ್ತಾ ಅಲ್ಲಿರುವ ದುಷ್ಟಮೃಗಗಳೊಡನೆಯೂ ಸಾಧುಪ್ರಾಣಿಗಳೊಡನೆಯೂ ಹೊಂದಿಕೊಂಡಿದ್ದು ಅರಣ್ಯಶೂರರೆನಿಸಿಕೊಂಡಿರುತ್ತಾರೆ. ಕೆಲವರು ಗೃಹಸ್ಥಾಶ್ರಮದಲ್ಲಿ ಮಾಡಬೇಕಾದ ಅನುಷ್ಠಾನಗಳೆಲ್ಲವನ್ನೂ ಸಾಂಗೋಪಾಂಗವಾಗಿ ಶಾಸ್ತ್ರವಿಧಿಗೆ ಅನುಸಾರವಾಗಿ ಮಾಡುತ್ತಾ ಗೃಹಸ್ಥಶೂರರೆನಿಸಿಕೊಳ್ಳುತ್ತಾರೆ. ಕೆಲವರು ಸರ್ವವನ್ನೂ ಪರಿತ್ಯಾಗಮಾಡಿ ತ್ಯಾಗಶೂರರೆನಿಸಿಕೊಂಡಿರುತ್ತಾರೆ.

ಆರ್ಜವೇ ಚ ತಥಾ ಶೂರಾಃ ಶಮೇ ವರ್ತನ್ತಿ ಮಾನವಾಃ ।
ತೈಸ್ತೈಶ್ಚ ನಿಯಮೈಃ ಶೂರಾ ಬಹವಃ ಸನ್ತಿ ಚಾಪರೇ ।
ವೇದಾಧ್ಯಯನಶೂರಾಶ್ಚ ಶೂರಾಶ್ಚಾಧ್ಯಾಪನೇ ರತಾಃ ॥೨೫॥
ಗುರುಶುಶ್ರೂಷಯಾ ಶೂರಾಃ ಪಿತೃಶುಶ್ರೂಷಯಾಪರೇ ।
ಮಾತೃಶುಶ್ರೂಷಯಾ ಶೂರಾ ಭೈಕ್ಷ್ಯಶೂರಾಸ್ತಥಾಪರೇ ॥೨೬॥

ಕೆಲವರು ಸರಳತೆಯಲ್ಲಿ ಅಥವಾ ನೇರವಾದ ನಡವಳಿಕೆಯಲ್ಲಿ ಶೂರರೆನಿಸಿಕೊಂಡಿರುತ್ತಾರೆ. ಕೆಲವರು ಮನೋನಿಗ್ರಹದಲ್ಲಿ ಶೂರರೆನಿಸಿಕೊಂಡಿರುತ್ತಾರೆ. ವೇದಾಧ್ಯಯನದಲ್ಲಿ ನಿಷ್ಣಾತರಾದವರು ಅಧ್ಯಯನಶೂರರೆನಿಸಿಕೊಳ್ಳುತ್ತಾರೆ. (ಇಂತಹ ಶೂರತ್ವವನ್ನು ಪ್ರದರ್ಶಿಸುವಾಗ ಕೆಲವರು ಕಠೋರಾಭ್ಯಾಸಿಗಳು ವೇದವನ್ನು ಹಿಂದು-ಮುಂದಾಗಿ ಹೇಳುವುದನ್ನೂ ಅಭ್ಯಾಸಮಾಡಿರುತ್ತಾರೆ.) ಕೆಲವರು ವೇದವನ್ನು ಅಧ್ಯಯನ ಮಾಡಿಸುವುದರಲ್ಲಿ ಶೂರರಾಗಿರುತ್ತಾರೆ. ಗುರುಶುಶ್ರೂಷೆಯೇ ಪರಮಶ್ರೇಷ್ಠವಾದ ಕರ್ತವ್ಯವೆಂದು ಭಾವಿಸಿ ಅದರಲ್ಲಿಯೇ ಯಾವಾಗಲೂ ನಿರತರಾಗಿರತಕ್ಕವರು ಗುರುಶುಶ್ರೂಷಾಶೂರರು. ಪಿತೃಶುಶ್ರೂಷೆಯನ್ನೂ ಮಾತೃಶುಶ್ರೂಷೆಯನ್ನೂ ಪರಮಧ್ಯೇಯವನ್ನಾಗಿ ಮಾಡಿಕೊಂಡು ಯಾವಾಗಲೂ ತಂದೆ-ತಾಯಿಗಳ ಸೇವೆಯಲ್ಲಿಯೇ ನಿರತರಾಗಿರತಕ್ಕವರು ಪಿತೃಶುಶ್ರೂಷಾಶೂರರು-ಮಾತೃಶುಶ್ರೂಷಾಶೂರರು ಎನಿಸಿಕೊಳ್ಳುತ್ತಾರೆ. ಭಿಕ್ಷಾಟನೆಯಿಂದಲೇ ಜೀವನವನ್ನು ಹೊರೆಯಲು ನಿಶ್ಚಯಿಸಿ ಆಜೀವಪರ್ಯಂತವಾಗಿ ಭಿಕ್ಷಾಟನೆಯನ್ನೇ ಮಾಡುವವರು ಭೈಕ್ಷ್ಯಶೂರರೆನಿಸಿಕೊಳ್ಳುತ್ತಾರೆ. ಹೀಗೆ ಆಯಾ ನಿಯಮಗಳನ್ನೇ

ಪರಮಲಕ್ಷ್ಯವನ್ನಾಗಿಟ್ಟುಕೊಂಡು ಆ ನಿಯಮಗಳನ್ನು ಸದಾ ಆಚರಿಸುತ್ತಿರುವ ಶೂರರು ಅನೇಕರಿದ್ದಾರೆ.

ಅರಣ್ಯೇ ಗೃಹವಾಸೇ ಚ ಶೂರಾಶ್ಚಾತಿಥಿಪೂಜನೇ ।
ಸರ್ವೇ ಯಾನ್ತಿ ಪರಾಲ್ಲೋಕಾನ್ಸ್ವಕರ್ಮಫಲನಿರ್ಜಿತಾನ್ ॥೨೭॥

ಕೆಲವರು ಅರಣ್ಯವಾಸದಲ್ಲಿಯೂ, ಕೆಲವರು ಗೃಹವಾಸದಲ್ಲಿಯೂ, ಕೆಲವರು ಅತಿಥಿಸತ್ಕಾರದಲ್ಲಿಯೂ ಶೂರರೆನಿಸಿಕೊಂಡಿರುತ್ತಾರೆ. ಅವರೆಲ್ಲರೂ ತಮ್ಮ-ತಮ್ಮ ಕರ್ಮಗಳ ಗುರಿಯನ್ನು ಮುಟ್ಟಿ ಅದರ ಫಲದ ಮೂಲಕವಾಗಿ ಜಯಿಸಲ್ಪಟ್ಟ ಶ್ರೇಷ್ಠವಾದ ಲೋಕಗಳಿಗೆ ಹೋಗುತ್ತಾರೆ.

ಧಾರಣಂ ಸರ್ವವೇದಾನಾಂ ಸರ್ವತೀರ್ಥಾವಗಾಹನಮ್ ।
ಸತ್ಯಂ ಚ ಬ್ರುವತೋ ನಿತ್ಯಂ ಸಮಂ ವಾ ಸ್ಯಾನ್ನ ವಾ ಸಮಮ್॥೨೮॥

ಸರ್ವವೇದಗಳನ್ನೂ ಧಾರಣೆಮಾಡುವುದು (ಅಧ್ಯಯನಮಾಡಿ ನೆನಪಿನಲ್ಲಿಟ್ಟುಕೊಳ್ಳುವುದು), ಪ್ರಪಂಚದ ಸಕಲತೀರ್ಥಗಳಲ್ಲಿಯೂ ಸ್ನಾನಮಾಡುವುದು–ಇವುಗಳ ಪುಣ್ಯವು ನಿತ್ಯವೂ ಸತ್ಯವನ್ನೇ ಹೇಳುವವನಿಗೆ ಲಭಿಸುವ ಪುಣ್ಯಕ್ಕೆ ಸಮಾನವಾಗಬಹುದು; ಆಗದೆಯೂ ಇರಬಹುದು. (ಪುಣ್ಯಕರ್ಮಗಳಲ್ಲಿ ಸತ್ಯಭಾಷಣವೇ ಶ್ರೇಷ್ಠವಾದುದು.)

ಅಶ್ವಮೇಧಸಹಸ್ರಂ ಚ ಸತ್ಯಂ ಚ ತುಲಯಾ ಧೃತಮ್ ।
ಅಶ್ವಮೇಧಸಹಸ್ರಾದ್ಧಿ ಸತ್ಯಮೇವ ವಿಶಿಷ್ಯತೇ ॥೨೯॥

ಸಾವಿರ ಅಶ್ವಮೇಧಗಳನ್ನು ಮಾಡಿದ ಪುಣ್ಯವನ್ನೂ ಮತ್ತು ಸತ್ಯ ನಿಷ್ಠೆಯಿಂದ ಪ್ರಾಪ್ತವಾಗುವ ಪುಣ್ಯವನ್ನೂ ತಕ್ಕಡಿಯಲ್ಲಿಟ್ಟು ತೂಗಿದರೆ ಸತ್ಯನಿಷ್ಠೆಯಿಂದ ಪ್ರಾಪ್ತವಾಗುವ ಪುಣ್ಯವೇ ಹೆಚ್ಚು ಭಾರವಾಗಿರುವುದು ಕಂಡುಬರುತ್ತದೆ. ಆದುದರಿಂದ ಸಾವಿರ ಅಶ್ವಮೇಧಗಳಿಗಿಂತಲೂ ಸತ್ಯನಿಷ್ಠೆಯೇ ವಿಶಿಷ್ಟವಾದುದು.

ಸತ್ಯೇನ ಸೂರ್ಯಸ್ತಪತಿ ಸತ್ಯೇನಾಗ್ನಿಃ ಪ್ರದೀಪ್ಯತೇ ।
ಸತ್ಯೇನ ಮರುತೋ ವಾನ್ತಿ ಸರ್ವಂ ಸತ್ಯೇ ಪ್ರತಿಷ್ಠಿತಮ್ ॥೩೦॥

ಸತ್ಯದ ಪ್ರಭಾವದಿಂದಲೇ ಸೂರ್ಯನು ಶಾಖವನ್ನುಂಟುಮಾಡುತ್ತಾನೆ.

ಅಗ್ನಿಯು ಪ್ರಜ್ವಲಿಸುತ್ತಾನೆ. ವಾಯುವು ಬೀಸುತ್ತದೆ. ಎಲ್ಲವೂ ಸತ್ಯದಲ್ಲಿಯೇ ಪ್ರತಿಷ್ಠಿತವಾಗಿವೆ.

ಸತ್ಯೇನ ದೇವಾಃ ಪ್ರೀಯನ್ತೇ ಪಿತರೋ ಬ್ರಾಹ್ಮಣಾಸ್ತಥಾ
ಸತ್ಯಮಾಹುಃ ಪರೋ ಧರ್ಮಸ್ತಸ್ಮಾತ್ಸತ್ಯಂ ನ ಲಙ್ಘಯೇತ್ ॥೩೧॥

ಸತ್ಯನಿಷ್ಠೆಯಿಂದಲೇ ದೇವ-ಪಿತೃ-ಬ್ರಾಹ್ಮಣರು ಪ್ರಸನ್ನರಾಗುತ್ತಾರೆ. ಸತ್ಯನಿಷ್ಠೆಯನ್ನೇ ಶ್ರೇಷ್ಠವಾದ ಧರ್ಮವೆಂದೂ ಹೇಳುತ್ತಾರೆ. ಆದುದರಿಂದ ಸತ್ಯವನ್ನು ಉಲ್ಲಂಘಿಸಬಾರದು.

ಮುನಯಃ ಸತ್ಯನಿರತಾ ಮುನಯಃ ಸತ್ಯವಿಕ್ರಮಾಃ ।
ಮುನಯಃ ಸತ್ಯಶಪಥಾಸ್ತಸ್ಮಾತ್ಸತ್ಯಂ ವಿಶಿಷ್ಯತೇ ॥೩೨॥

ಮುನಿಗಳು ಸತ್ಯದಲ್ಲಿಯೇ ನಿರತರಾಗಿರುತ್ತಾರೆ. ಸತ್ಯವೇ ಪರಾಕ್ರಮವುಳ್ಳವರಾಗಿರುತ್ತಾರೆ. ಸತ್ಯಪ್ರತಿಜ್ಞರಾಗಿರುತ್ತಾರೆ. ಆದುದರಿಂದಲೇ ಸತ್ಯ ನಿಷ್ಠೆಯು ಎಲ್ಲ ಧರ್ಮಗಳಿಗಿಂತಲೂ ಶ್ರೇಷ್ಠವಾದ ಧರ್ಮವಾಗಿದೆ.

ಸತ್ಯವನ್ತಃ ಸ್ವರ್ಗಲೋಕೇ ಮೋದನ್ತೇ ಭರತರ್ಷಭ ।
ದಮಃ ಸತ್ಯಫಲಾವಾಪ್ತಿರುಕ್ತಾ ಸರ್ವಾತ್ಮನಾ ಮಯಾ ॥೩೩॥

ಭರತಶ್ರೇಷ್ಠನೇ ! ಸತ್ಯವಂತರಾದವರು ಸ್ವರ್ಗಲೋಕದಲ್ಲಿ ಆನಂದ ಪಡುತ್ತಾರೆ. ಆದರೆ ದಮವು (ಇಂದ್ರಿಯನಿಗ್ರಹವು) ಸತ್ಯದಿಂದ ಲಭಿಸುವ ಫಲಪ್ರಾಪ್ತಿಗೆ ಮೂಲಕಾರಣವಾಗಿದೆ. ನಾನು ಹೃತ್ಪೂರ್ವಕವಾಗಿ ಈ ಮಾತನ್ನು ನಿನಗೆ ಹೇಳುತ್ತಿದ್ದೇನೆ.

ಅಸಂಶಯಂ ವಿನೀತಾತ್ಮಾ ಸ ವೈ ಸ್ವರ್ಗೇ ಮಹೀಯತೇ ॥೩೪॥

ಮನಸ್ಸನ್ನು ವಶಪಡಿಸಿಕೊಂಡು ವಿನಯಶಾಲಿಯಾಗಿರತಕ್ಕವನು ಸ್ವರ್ಗಲೋಕದಲ್ಲಿ ಪೂಜಿಸಲ್ಪಡುತ್ತಾನೆ. ನರಾಧಿಪನೇ! ಇನ್ನು ಮುಂದೆ ಬ್ರಹ್ಮಚರ್ಯದ ಫಲವನ್ನು ಹೇಳುವೆನು; ಕೇಳು:

ಆಜನ್ಮಮರಣಾದ್ಯಸ್ತು ಬ್ರಹ್ಮಚಾರೀ ಭವೇದಿಹ ।
ನ ತಸ್ಯ ಕಿಂಚಿದಪ್ರಾಪ್ಯಮಿತಿ ವಿದ್ಧಿ ನರಾಧಿಪ ॥೩೫॥

ಯಾವನು ಹುಟ್ಟಿದಾಗಿನಿಂದ ಸಾಯುವವರೆಗೂ ಬ್ರಹ್ಮಚಾರಿ

ಯಾಗಿಯೇ ಇರುವನೋ–ಅವನಿಗೆ ದೊರಕದೇ ಇರುವ ವಸ್ತುವೇ ಯಾವುದೂ ಇಲ್ಲವೆಂದು ತಿಳಿ.

ಬಹ್ವ್ಯಃ ಕೋಟ್ಯಸ್ತ್ವೃಷೀಣಾಂ ತು ಬ್ರಹ್ಮಲೋಕೇ ವಸನ್ತ್ಯುತ ।
ಸತ್ಯೇ ರತಾನಾಂ ಸತತಂ ದಾನ್ತಾನಾಮೂರ್ಧ್ವರೇತಸಾಮ್ ॥೩೬॥

ಈ ಲೋಕದಲ್ಲಿ ಸತ್ಯನಿಷ್ಠರಾಗಿದ್ದ, ಜಿತೇಂದ್ರಿಯರಾಗಿದ್ದ ಮತ್ತು ಊರ್ಧ್ವರೇತಸ್ಕರಾಗಿದ್ದ ಅನೇಕಕೋಟಿ ಋಷಿಗಳು ಈಗ ಬ್ರಹ್ಮಲೋಕದಲ್ಲಿ ವಾಸಮಾಡುತ್ತಿದ್ದಾರೆ.

ಬ್ರಹ್ಮಚರ್ಯಂ ದಹೇದ್ರಾಜನ್ಸರ್ವಪಾಪಾನ್ಯುಪಾಸಿತಮ್ ।
ಬ್ರಾಹ್ಮಣೇನ ವಿಶೇಷೇಣ ಬ್ರಾಹ್ಮಣೋ ಹ್ಯಗ್ನಿರುಚ್ಯತೇ ॥೩೭॥

ಯಾವನಾದರೂ ವಿಶೇಷವಾದ ರೀತಿಯಲ್ಲಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸಿದ್ದೇ ಆದರೆ-ಅವನು ಆ ಬ್ರಹ್ಮಚರ್ಯದಿಂದಲೇ ತನ್ನಲ್ಲಿರುವ ಸಕಲಪಾಪಗಳನ್ನೂ ಭಸ್ಮಮಾಡಿಬಿಡುತ್ತಾನೆ. ಈ ನಿಯಮವು ಬ್ರಾಹ್ಮಣನಿಗೆ ವಿಶೇಷವಾಗಿ ಅನ್ವಯಿಸುತ್ತದೆ. ಏಕೆಂದರೆ : ನೈಷ್ಠಿಕಬ್ರಹ್ಮಚರ್ಯವನ್ನು ಪಾಲಿಸುತ್ತಿರುವ ಬ್ರಾಹ್ಮಣನನ್ನು ಅಗ್ನಿಯೆಂದೇ ಹೇಳುತ್ತಾರೆ.

ಪ್ರತ್ಯಕ್ಷಂ ಹಿ ತಥಾ ಹ್ಯೇತದ್ಬ್ರಾಹ್ಮಣೇಷು ತಪಸ್ವಿಷು ।
ಬಿಭೇತಿ ಹಿ ಯಥಾ ಶಕ್ರೋ ಬ್ರಹ್ಮಚಾರಿಪ್ರಧರ್ಷಿತಃ ॥೩೮॥
ತದ್ಬ್ರಹ್ಮಚರ್ಯಸ್ಯ ಫಲಮೃಷೀಣಾಮಿಹ ದೃಶ್ಯತೇ ॥೩೯॥

ತಪಸ್ವಿಗಳಾದ ಬ್ರಾಹ್ಮಣರಲ್ಲಿ ಈ ಅಗ್ನಿತ್ವವು ಪ್ರತ್ಯಕ್ಷವಾಗಿಯೇ ಕಾಣುತ್ತದೆ. ಬ್ರಹ್ಮಚಾರಿಗೆ ಎದುರಾಗಿ ನಿಲ್ಲಲು ಇಂದ್ರನೂ ಹೆದರುತ್ತಾನೆ. ಬ್ರಹ್ಮಚರ್ಯದ ಫಲವು ಋಷಿಗಳಲ್ಲಿಯೂ ಕಂಡುಬರುತ್ತದೆ.

ಯುಧಿಷ್ಠಿರ! ಇನ್ನು ಮುಂದೆ ನಾನು ಮಾತಾ-ಪಿತೃಗಳ ಶುಶ್ರೂಷೆಯಿಂದ ಪ್ರಾಪ್ತವಾಗುವ ಪುಣ್ಯವನ್ನು ಹೇಳುವೆನು; ಕೇಳು :

ಶುಶ್ರೂಷತೇ ಯಃ ಪಿತರಂ ನ ಚಾಸೂಯೇತ್ಕದಾಚನ ।
ಮಾತರಂ ಭ್ರಾತರಂ ವಾಪಿ ಗುರುಮಾಚಾರ್ಯಮೇವ ಚ ॥೪೦।

ತಸ್ಯ ರಾಜನ್ಫಲಂ ವಿದ್ಧಿ ಸ್ವರ್ಲೋಕೇ ಸ್ಥಾನಮರ್ಚಿತಮ್ ।
ನ ಚ ಪಶ್ಯೇತ ನರಕಂ ಗುರುಶುಶ್ರೂಷಯಾತ್ಮವಾನ್ ॥೪೧॥

ಮಹಾರಾಜ! ಯಾವನು ತಂದೆ-ತಾಯಿಗಳನ್ನೂ, ಗುರುಗಳನ್ನೂ, ಆಚಾರ್ಯರನ್ನೂ, ಹಿರಿಯಣ್ಣನನ್ನೂ ನಿರಂತರವಾಗಿ ಸೇವಿಸುವನೋ–ಅವರ ಗುಣಗಳಲ್ಲಿ ದೋಷಗಳನ್ನೆಣಿಸುವುದಿಲ್ಲವೋ*ಅಂತಹವನು ಸ್ವರ್ಗಲೋಕದಲ್ಲಿ ಸರ್ವಸಮ್ಮಾನಿತವಾದ ಸ್ಥಾನವನ್ನು ಪಡೆಯುವನೆಂದು ತಿಳಿ. ಅಂತಹ ಅಮೋಘವಾದ ಫಲವು ತಂದೆ-ತಾಯಿಗಳ, ಗುರುಗಳ, ಆಚಾರ್ಯರ ಮತ್ತು ಜ್ಯೇಷ್ಠಭ್ರಾತೃವಿನ ಸೇವೆಯಿಂದ ಪ್ರಾಪ್ತವಾಗುತ್ತದೆ. ಗುರುಶುಶ್ರೂಷೆಯಲ್ಲಿ ನಿರತನಾದ, ಜಿತೇಂದ್ರಿಯನಾದ ಮನುಷ್ಯನು ಯಾವ ಕಾರಣದಿಂದಲೂ ನರಕವನ್ನು ನೋಡಬೇಕಾಗುವುದಿಲ್ಲ."

ಎಪ್ಪತ್ತೈದನೆಯ ಅಧ್ಯಾಯವು ಮುಗಿಯಿತು.

೭೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೋದಾನದ ವಿಧಿ: ಗೋವುಗಳ ಪ್ರಾರ್ಥನೆ: ಗೋದಾನಮಾಡಿದ ರಾಜರ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ವಿಧಿಂ ಗವಾಂ ಪರಂ ಶ್ರೋತುಮಿಚ್ಛಾಮಿ ನೃಪ ತತ್ತ್ವತಃ ।
ಯೇನ ತಾಂಛಾಶ್ವತಾಲ್ಲೋಕಾನರ್ಥಿನಾಂ ಪ್ರಾಪ್ನುಯಾದಿಹ ॥೧॥

"ನರೇಶ್ವರನೇ! ನಾನೀಗ (ಪುಣ್ಯಲೋಕಗಳನ್ನು ಪಡೆಯಲು ಇಚ್ಛಿಸುವವರು) ಗೋದಾನದ ಯಾವ ವಿಧಿಯಿಂದ ಶಾಶ್ವತವಾದ ಪುಣ್ಯಲೋಕಗಳನ್ನು ಪಡೆಯುವರೋ ಅಂತಹ ಗೋದಾನದ ಉತ್ತಮ ವಿಧಿಯನ್ನು ಯಥಾವತ್ತಾಗಿ ಕೇಳಲು ಬಯಸುತ್ತೇನೆ."

ಭೀಷ್ಮನು ಹೇಳುತ್ತಾನೆ :

ನ ಗೋದಾನಾತ್ಪರಂ ಕಿಂಚಿದ್ವಿದ್ಯತೇ ವಸುಧಾಧಿಪ ।
ಗೌರ್ಹಿ ನ್ಯಾಯಾಗತಾ ದತ್ತಾ ಸದ್ಯಸ್ತಾರಯತೇ ಕುಲಮ್ ॥೨॥

---

* ನ ಚಾಸೂಯೇತ್-ಎಂದು ಮೂಲವಿದೆ. ಅಸೂಯಾ=ಗುಣೇಷು ದೋಷಾವಿಷ್ಕರಣಂ, ಗುಣಗಳಲ್ಲಿ ದೋಷಗಳನ್ನು ಹುಡುಕುವಿಕೆ.

"ಯುಧಿಷ್ಠಿರ! ಗೋದಾನಕ್ಕಿಂತಲೂ ಶ್ರೇಷ್ಠವಾದ ಬೇರೆ ಯಾವ ದಾನವೂ ಇಲ್ಲ. ನ್ಯಾಯವಾದ ಮಾರ್ಗಗಳಿಂದ ಪ್ರಾಪ್ತವಾಗಿ ದಾನಮಾಡಲ್ಪಟ್ಟ ಗೋವು ಒಡನೆಯೇ ದಾತೃವಿನ ಕುಲವನ್ನು ಪಾವನಗೊಳಿಸುತ್ತದೆ.

ಸತಾಮರ್ಥೇ ಸಮ್ಯಗುತ್ಪಾದಿತೋ ಯಃ
ಸ ವೈ ಕ್ಲೃಪ್ತಃ ಸಮ್ಯಗಾಭ್ಯಃ ಪ್ರಜಾಭ್ಯಃ ।
ತಸ್ಮಾತ್ಪೂರ್ವಂ ಹ್ಯಾದಿಕಾಲಪ್ರವೃತ್ತಂ
ಗೋದಾನಾರ್ಥಂ ಶೃಣು ರಾಜನ್ವಿಧಿಂ ಮೇ ॥೩॥

ಋಷಿಗಳು ಸತ್ಪುರುಷರಿಗೋಸ್ಕರ ಗೋದಾನದ ವಿಧಿಯನ್ನು ಉತ್ತಮವಾಗಿ ರಚಿಸಿ ಅದನ್ನು ಈ ಪ್ರಜೆಗಳಿಗೆ ವಿಶೇಷವಾಗಿ ಅನುಗ್ರಹಿಸಿ ಕೊಟ್ಟಿದ್ದಾರೆ. ಬಹಳ ಹಿಂದಿನಿಂದಲೂ ಪ್ರಚಲಿತವಾಗಿರುವ ಶ್ರೇಷ್ಠವಾದ, ಗೋದಾನದ ಸಲುವಾಗಿ ರಚಿತವಾಗಿರುವ ಆ ವಿಧಿಯನ್ನು ಹೇಳುವೆನು; ಕೇಳು:

ಹಿಂದೊಮ್ಮೆ ಗೋದಾನದ ಸಲುವಾಗಿ ಮಾಂಧಾತೃಚಕ್ರವರ್ತಿಯ ಸಮೀಪಕ್ಕೆ ಅನೇಕ ಹಸುಗಳು ತರಲ್ಪಟ್ಟುವು. ಆ ಸಮಯದಲ್ಲಿ ಮಾಂಧಾತೃವಿಗೆ ಆ ಗೋವುಗಳನ್ನು ಹೇಗೆ ದಾನಕೊಡುವುದೆಂಬ ಜಿಜ್ಞಾಸೆ ಯುಂಟಾಗಿ, ನೀನು ನನ್ನನ್ನು ಕೇಳಿರುವ ಈ ಪ್ರಶ್ನೆಯನ್ನೇ ಮಾಂಧಾತೃವೂ ಬೃಹಸ್ಪತಿಯನ್ನು ಕೇಳಿದನು. ಬೃಹಸ್ಪತಿಯು ಉತ್ತರಿಸುತ್ತಾ ಹೇಳಿದನು:

ದ್ವಿಜಾತಿಮತಿಸತ್ಕೃತ್ಯ ಶ್ವಃ ಕಾಲಮಭಿವೇದ್ಯ ಚ ।
ಗೋದಾನಾರ್ಥೇ ಪ್ರಯುಞ್ಜೀತ ರೋಹಿಣೀಂ ನಿಯತವ್ರತಃ ॥೫॥
ಆಹ್ವಾನಂ ಚ ಪ್ರಯುಞ್ಜೀತ ಸಮಙ್ಗೇ ಬಹುಲೇತಿ ಚ ।
ಪ್ರವಿಶ್ಯ ಚ ಗವಾಂ ಮಧ್ಯಮಿಮಾಂ ಶ್ರುತಿಮುದಾಹರೇತ್ ॥೬॥

"ಗೋದಾನವನ್ನು ಮಾಡಲು ಇಚ್ಛಿಸಿರುವ ಮನುಷ್ಯನು ನಿಯಮ ಪೂರ್ವಕವಾಗಿ ವ್ರತಾನುಷ್ಠಾನವನ್ನು ಮಾಡಬೇಕು. ಸತ್ಪಾತ್ರನಾದ ಬ್ರಾಹ್ಮಣನನ್ನು ಆಹ್ವಾನಿಸಿ ಅವನನ್ನು ಯಥಾಯೋಗ್ಯವಾಗಿ ಸತ್ಕರಿಸಿ– 'ನಾಳೆ ಪ್ರಾತಃಕಾಲ ತಮಗೆ ಹಸುವನ್ನು ದಾನಕೊಡುತ್ತೇನೆ'–ಎಂದು ಅವನೊಡನೆ ಹೇಳಬೇಕು. ಅನಂತರ ರೋಹಿಣೀ (ಕೆಂಪುಬಣ್ಣದ) ಹಸುವನ್ನು

ತಂದು ಅದನ್ನು ಮುಟ್ಟಿಕೊಂಡು 'ಸಮಙ್ಗೇ ಬಹುಲೇ'–ಎಂದು ಹೇಳಬೇಕು. ಅನಂತರ ಗೋವುಗಳ ಮಧ್ಯದಲ್ಲಿ ನಿಂತುಕೊಂಡು ಈ ಮಂತ್ರವನ್ನು ಹೇಳಬೇಕು.

ಗೌರ್ಮೇ ಮಾತಾ ವೃಷಭಃ ಪಿತಾ ಮೇ
ದಿವಂ ಶರ್ಮ ಜಗತೀ ಮೇ ಪ್ರತಿಷ್ಠಾ ।

"ಹಸುವು ನನ್ನ ತಾಯಿಯಾಗಿದೆ. ಗೂಳಿಯು ನನ್ನ ತಂದೆಯಾಗಿದೆ. ಗೋ-ವೃಷಭಗಳೆರಡೂ ನನಗೆ ಸ್ವರ್ಗವನ್ನೂ ಐಹಿಕಸುಖವನ್ನೂ ದಯ ಪಾಲಿಸಲಿ. ಹಸುವೇ ನನ್ನ ಜೀವಿಕೆಗೆ ಆಧಾರಭೂತವಾಗಿದೆ." ಹೀಗೆ ಹೇಳಿಕೊಂಡು ಗೋವನ್ನು ಶರಣುಹೊಂದಿ ಆ ಗೋವುಗಳ ಮಧ್ಯದಲ್ಲಿಯೇ ಮೌನಿಯಾಗಿ ಆ ರಾತ್ರಿಯನ್ನು ಕಳೆದು ಗೋದಾನಕಾಲದಲ್ಲಿಯೂ ಅದೇ ಮಂತ್ರವನ್ನೇ ಹೇಳಬೇಕು.

ಸತಾಮೇಕಾಂ ನಿಶಾಂ ಗೋಭಿಃ ಸಮಸಖ್ಯಃ ಸಮವ್ರತಃ ।
ಐಕಾತ್ಮ್ಯಗಮನಾತ್ಸದ್ಯಃ ಕಲುಷಾದ್ವಿಪ್ರಮುಚ್ಯತೇ ॥೮॥

ಹೀಗೆ ಗೋದಾನಿಯು ಒಂದು ರಾತ್ರಿ ಹಸುಗಳೊಡನಿದ್ದು, ಅವುಗಳಿಗೆ ಸಮಾನವಾಗಿ ನಡೆದುಕೊಳ್ಳುತ್ತಾ, ಅವುಗಳೊಡನೆ ಸ್ನೇಹಭಾವದಿಂದಿರುತ್ತಾ ಏಕಾತ್ಮಭಾವವನ್ನು ಹೊಂದಿದ್ದೇ ಆದರೆ ಆ ಕ್ಷಣದಲ್ಲಿಯೇ ಅವನು ಸಕಲಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಉತ್ಸೃಷ್ಟವೃಷವತ್ಸಾ ಹಿ ಪ್ರದೇಯಾ ಸೂರ್ಯದರ್ಶನೇ ।
ತ್ರಿದಿವಂ ಪ್ರತಿಪತ್ತವ್ಯಮರ್ಥವಾದಾಶಿಷಸ್ತವ ॥೯॥

ಸೂರ್ಯೋದಯದ ಸಮಯದಲ್ಲಿ ಗಂಡುಕರುವಿನೊಡನೆ ಗೋವನ್ನು ದಾನಮಾಡಿ ಸ್ವರ್ಗವನ್ನು ಹೊಂದಬೇಕು. ಅರ್ಥವಾದಮಂತ್ರದಲ್ಲಿರುವ ಆಶೀರ್ವಾದಗಳು ನಿನ್ನ (ಗೋದಾನಿಯ) ವಿಷಯದಲ್ಲಿ ಸಫಲವಾಗುತ್ತವೆ.

(ಅರ್ಥವಾದಮಂತ್ರವು ಈ ರೀತಿಯಾಗಿದೆ. ಗೋವನ್ನು ದಾನ ಮಾಡಿದನಂತರ ಈ ಮಂತ್ರವನ್ನು ಹೇಳಿಕೊಂಡು ಗೋವನ್ನು ಪ್ರಾರ್ಥಿಸಬೇಕು.)

ಊರ್ಜಸ್ವಿನ್ಯ ಊರ್ಜಮೇಧಾಶ್ಚ ಯಜ್ಞೇ
ಗರ್ಭೋಽಮೃತಸ್ಯ ಜಗತೋಽಸ್ಯ ಪ್ರತಿಷ್ಠಾ।
ಕ್ಷಿತೇ ರೋಹಃ ಪ್ರವಹಃ ಶಶ್ವದೇವ
ಪ್ರಾಜಾಪತ್ಯಾಃ ಸರ್ವಮಿತ್ಯರ್ಥವಾದಾಃ ||೧೦||

'ಗೋವುಗಳು ಉತ್ಸಾಹಸಂಪನ್ನವಾದುವುಗಳು. ಬಲದಿಂದಲೂ ಬುದ್ಧಿಯಿಂದಲೂ ಕೂಡಿದುವುಗಳು. ಯಜ್ಞಾಂಗವಾದ ಅಮೃತಸ್ವರೂಪವಾದ ಹವಿಸ್ಸನ್ನು (ತುಪ್ಪವನ್ನು) ಗರ್ಭದಲ್ಲಿ ಧರಿಸಿರತಕ್ಕುವುಗಳು. ಈ ಜಗತ್ತಿಗೇ ಆಶ್ರಯವಾಗಿರತಕ್ಕುವುಗಳು. ಭೂಮಿಯಲ್ಲಿ ಉಂಟಾಗುವ ಬೆಳೆಗಳು, ಶಾಶ್ವತವಾದ ಸಂಪತ್ತಿನ ಪ್ರವಾಹ–ಇವೆಲ್ಲವೂ ಗೋವುಗಳೇ ಆಗಿವೆ. ಇವು ಪ್ರಜಾಪತಿಯ ಮಕ್ಕಳು'-ಎಂಬುದೇ ಗೋವಿನ ವಿಷಯವಾದ ಅರ್ಥವಾದ ಮಂತ್ರವು.

ಗಾವೋ ಮಮೈನಃ ಪ್ರಣುದಂತು ಸೌರ್ಯಾ-
ಸ್ತಥಾ ಸೌಮ್ಯಾಃ ಸ್ವರ್ಗಯಾನಾಯ ಸಂತು।
ಆತ್ಮಾನಂ ಮೇ ಮಾತೃವಚ್ಚಾಶ್ರಯಂತು
ತಥಾನುಕ್ತಾಃ ಸಂತು ಸರ್ವಾಶಿಷೋ ಮೇ ||೧೧||

ಸೂರ್ಯ-ಚಂದ್ರದೇವತಾಕವಾಗಿರುವ ಗೋವುಗಳು ನನ್ನ ಪಾಪಗಳನ್ನು ನಾಶಗೊಳಿಸಲಿ. ಸ್ವರ್ಗಕ್ಕೆ ಹೋಗಲು ಗೋವುಗಳು ನನಗೆ ಯಾನರೂಪವಾಗಿರಲಿ. ತಾಯಿಯೋಪಾದಿಯಲ್ಲಿ ನನ್ನನ್ನು ಆಶ್ರಯಿಸಲಿ. ಈ ಮಂತ್ರಗಳಲ್ಲಿ ಹೇಳದಿರುವ ಇಷ್ಟವಾದ ಸಕಲವಸ್ತುಗಳೂ ಕೂಡ ಗೋಮಾತೆಯ ಕೃಪೆಯಿಂದ ನನಗೆ ಲಭಿಸಲಿ.

ಶೇಷೋತ್ಸರ್ಗೇ ಕರ್ಮಭಿರ್ದೇಹಮೋಕ್ಷೇ
ಸರಸ್ವತ್ಯಃ ಶ್ರೇಯಸೇ ಸಮ್ಪ್ರವೃತ್ತಾಃ ।
ಯೂಯಂ ನಿತ್ಯಂ ಸರ್ವಪುಣ್ಯೋಪವಾಹ್ಯಾಂ
ದಿಶಧ್ವಂ ಮೇ ಗತಿಮಿಷ್ಟಾಂ ಪ್ರಸನ್ನಾಃ ||೧೨||

ಗೋವುಗಳೇ! ದೇಹವನ್ನು ಬಿಟ್ಟ ಬಳಿಕ ಮಾಡಬೇಕಾದ ಕರ್ಮಗಳನ್ನು ಆಚರಿಸಿ ಅವುಗಳ ಅಂಗವಾಗಿ ವೃಷೋತ್ಸರ್ಜನೆಯನ್ನು ಮಾಡಿದಾಗ

ನೀವು ದೇಹವನ್ನು ಬಿಟ್ಟ ಚೇತನನಿಗೆ ಶ್ರೇಯಸ್ಸಿನ ಮಹಾಪ್ರವಾಹವನ್ನೇ ಹರಿಸಲು ತೊಡಗುವಿರಿ. ನನ್ನಲ್ಲಿ ಪ್ರಸನ್ನರಾದ ನೀವು ಯಾವಾಗಲೂ ಪುಣ್ಯಪ್ರವಾಹಗಳಿಂದಲೇ ದೊರೆಯುವ ಇಷ್ಟವಾದ ಸದ್ಗತಿಯನ್ನು ದಯಪಾಲಿಸಿರಿ.

(ಶೋಷೋತ್ಸರ್ಗೇ–ಎಂಬ ಪಾಠದ ಪ್ರಕಾರ ಹೀಗೆ ಅರ್ಥವಾಗುತ್ತದೆ. ಕ್ಷಯವೇ ಮೊದಲಾದ ರೋಗಗಳು ಹೋಗುವುದಕ್ಕೂ, ದೇಹಬಂಧನದಿಂದ ಬಿಡುಗಡೆಯಾಗುವುದಕ್ಕೂ, ಶ್ರೇಯಸ್ಸನ್ನು ಅನುಗ್ರಹಿಸುವುದಕ್ಕೂ ತೊಡಗಿದಾಗ ನೀವು ಸರಸ್ವತೀಪ್ರವಾಹಗಳೇ ಆಗುವಿರಿ. ನನ್ನಲ್ಲಿ ಪ್ರಸನ್ನರಾದ ನೀವು ಸದಾ ಪುಣ್ಯಗಳ ಪ್ರವಾಹದಿಂದ ದೊರೆಯುವ ಇಷ್ಟವಾದ ಸದ್ಗತಿಯನ್ನು ನನಗೆ ದಯಪಾಲಿಸಿರಿ.)

ಯಾ ವೈ ಯೂಯಂ ಸೋಽಹಮದ್ಯೈವ ಭಾವೋ
ಯುಷ್ಮಾನ್ದತ್ತ್ವಾ ಚಾಹಮಾತ್ಮಪ್ರದಾತಾ ।
ಮನಶ್ಚ್ಯುತಾ ಮನ ಏವೋಪಪನ್ನಾಃ
ಸಂಧುಕ್ಷಧ್ವಂ ಸೌಮ್ಯರೂಪೋಗ್ರರೂಪಾಃ ॥೧೩॥
ಏವಂ ತಸ್ಯಾಗ್ರೇ ಪೂರ್ವಮರ್ಧಂ ವದೇತ
ಗವಾಂ ದಾತಾ ವಿಧಿವತ್ಪೂರ್ವದೃಷ್ಟಃ ।
ಪ್ರತಿಬ್ರೂಯಾಚ್ಛೇಷಮರ್ಧಂ ದ್ವಿಜಾತಿಃ
ಪ್ರತಿಗೃಹ್ಣನ್ವೈ ಗೋಪ್ರದಾನೇ ವಿಧಿಜ್ಞಃ ॥೧೪॥

‘ಗೋವುಗಳೇ! ನಿಮ್ಮ ಯಾವ ಸ್ವರೂಪವಿದೆಯೋ ಅದು ನನ್ನ ಸ್ವರೂಪವೇ ಆಗಿದೆ. ನಿಮಗೂ ಮತ್ತು ನನಗೂ ಯಾವ ಭೇದವೂ ಇಲ್ಲ. ಈ ಕಾರಣದಿಂದಲೇ ನಿಮ್ಮನ್ನು ದಾನಮಾಡುವ ನಾನು ನನ್ನನ್ನೇ ದಾನವಾಗಿ ಕೊಟ್ಟುಕೊಳ್ಳುತ್ತಿದ್ದೇನೆ’–ಎಂದು ಗೋದಾನಮಾಡುವವನು ಗೋವುಗಳ ಮುಂದುಗಡೆ ನಿಂತು ಪೂರ್ವದಿಕ್ಕಿಗೆ ದೃಷ್ಟಿಯುಳ್ಳವನಾಗಿ ವಿಧಿವತ್ತಾಗಿ ಈ ಶ್ಲೋಕದ ಪೂರ್ವಾರ್ಧವನ್ನು ಹೇಳಬೇಕು.

ಹೀಗೆ ಹೇಳಿದನಂತರ ಗೋಪ್ರದಾನವಿಧಿಯನ್ನು ಚೆನ್ನಾಗಿ ತಿಳಿದಿರುವ ಬ್ರಾಹ್ಮಣನು ಗೋವುಗಳನ್ನು ಪರಿಗ್ರಹಿಸುತ್ತಾ ಶ್ಲೋಕದ ಈ ಉತ್ತರಾರ್ಧವನ್ನು ಹೇಳಬೇಕು.

ಮನಶ್ಚ್ಯುತಾ ಮನ ಏವ್ಯೋಪಪನ್ನಾಃ
ಸಂಧುಕ್ಷಧ್ವಂ ಸೌಮ್ಯರೂಪೋಗ್ರರೂಪಾಃ ॥

ಗೋವುಗಳೇ! ನೀವು ಸೌಮ್ಯರೂಪರೂ ಆಗಿರುವಿರಿ. ಉಗ್ರ ರೂಪರೂ ಆಗಿರುವಿರಿ. (ಸೇವೆಯನ್ನು ಮಾಡುವವರ ವಿಷಯದಲ್ಲಿ ಸೌಮ್ಯರೂ-ಹಿಂಸೆಯನ್ನು ಮಾಡುವವರ ವಿಷಯದಲ್ಲಿ ಉಗ್ರರೂ ಆಗಿರುವಿರಿ.) ದಾನಿಯು 'ಇವು ನನ್ನವಲ್ಲ'-ಎಂಬ ಮನಸ್ಸಿನಿಂದ ನಿಮ್ಮನ್ನು ಬಿಟ್ಟುಕೊಟ್ಟಿದ್ದಾನೆ. 'ಇವು ನಮಗೆ ಸೇರಿವೆ'– ಎಂಬ ಮನಸ್ಸಿನಿಂದ ನಾವು ಪರಿಗ್ರಹಿಸಿದ್ದೇವೆ. ನೀವು ನಮ್ಮಿಬ್ಬರ ಅಭೀಷ್ಟಗಳನ್ನೂ ನೆರವೇರಿಸಿರಿ.

ಗೋಪ್ರದಾನೀತಿ ವಕ್ತವ್ಯಮರ್ಘ್ಯವಸ್ತ್ರವಸುಪ್ರದಃ ।
ಊರ್ಧ್ವಾಸ್ಯಾ ಭವಿತವ್ಯಾ ಚ ವೈಷ್ಣವೀತಿ ಚ ಚೋದಯೇತ್ ।
ನಾಮ ಸಂಕೀರ್ತಯೇತ್ತಸ್ಯಾ ಯಥಾಸಂಖ್ಯೋತ್ತರಂ ಸ ವೈ ॥೧೫॥

ಸಾಕ್ಷಾತ್ತಾಗಿ ಗೋವನ್ನು ದಾನಕೊಡಲು ಸಾಧ್ಯವಾಗದಿದ್ದಾಗ ಅದರ ಬದಲಿಗೆ ಗೋವಿನ ಬೆಲೆಯನ್ನೂ, ವಸ್ತ್ರವನ್ನೂ ಮತ್ತು ಸುವರ್ಣವನ್ನೂ ಕೊಡುವವನೂ ಗೋದಾನೀ ಎನಿಸಿಕೊಳ್ಳುತ್ತಾನೆ. ಬೆಲೆಯ ರೂಪದಲ್ಲಿ, ವಸ್ತ್ರದ ರೂಪದಲ್ಲಿ ಮತ್ತು ಸುವರ್ಣದ ರೂಪದಲ್ಲಿ ಕೊಡುವ ಗೋವುಗಳನ್ನು ಅನುಕ್ರಮವಾಗಿ 'ಊರ್ಧ್ವಾಸ್ಯಾ', 'ಭವಿತವ್ಯಾ' ಮತ್ತು 'ವೈಷ್ಣವೀ' ಎಂಬ ಹೆಸರುಗಳಿಂದ ಕರೆಯಬೇಕು. ದಾನಕೊಡುವ ಸಮಯದಲ್ಲಿ ಈ ಹೆಸರುಗಳನ್ನೇ ಹೇಳಿಕೊಂಡು ಸಂಕಲ್ಪಮಾಡಬೇಕು. ಇಮಾಂ ಊರ್ಧ್ವಾಸ್ಯಾಂ–ಇಮಾಂ ಭವಿತವ್ಯಾಂ–ಇಮಾಂ ವೈಷ್ಣವೀಂ–ತುಭ್ಯಮಹಂ ಸಂಪ್ರದದೇ ನ ಮಮ ನ ಮಮ-ಎಂದು ಹೇಳಿಕೊಂಡು ದಾನಕೊಡಬೇಕು. ದಾನತೆಗೆದುಕೊಳ್ಳುವವನೂ ಇಮಾಂ ಊರ್ಧ್ವಾಸ್ಯಾಂ ಪ್ರತಿಗೃಹ್ಣಾಮಿ–ಇಮಾಂ ಭವಿತವ್ಯಾಂ ಪ್ರತಿಗೃಹ್ಣಾಮಿ-ಇಮಾಂ ವೈಷ್ಣವೀಂ ಪ್ರತಿಗೃಹ್ಣಾಮಿ–ಎಂದು ಕ್ರಮವಾಗಿ ಹೇಳಬೇಕು.

ಫಲಂ ಷಟ್ತ್ರಿಂಶದಷ್ಟೌ ಚ ಸಹಸ್ರಾಣಿ ಚ ವಿಂಶತಿಃ ॥೧೬॥
ಏವಮೇತಾನುಗ್ಗಣಾನ್ವಿದ್ಯಾದ್ಗವಾದೀನಾಂ ಯಥಾಕ್ರಮಮ್ ।
ಗೋಪ್ರದಾತಾ ಸಮಾಪ್ನೋತಿ ಸಮಸ್ತಾನಷ್ಟಮೇ ಕ್ರಮೇ ॥೧೭॥

ಗೋವಿನ ಬದಲಿಗೆ ಅದರ ಪೂರ್ಣವಾದ ಬೆಲೆಯನ್ನು ದಾನ ಮಾಡುವವನು–ದಿವ್ಯಲೋಕದಲ್ಲಿ ಮೂವತ್ತಾರು ಸಾವಿರ ವರ್ಷಗಳ ಕಾಲ ಪುಣ್ಯಫಲವನ್ನು ಅನುಭವಿಸುತ್ತಾನೆ. ಯಥಾಶಕ್ತಿ ವಸ್ತ್ರದಾನಮಾಡುವವನು–ಎಂಟು ಸಾವಿರ ವರ್ಷಗಳು ಆ ಪುಣ್ಯಫಲವನ್ನು ಅನುಭವಿಸುತ್ತಾನೆ. ಯಥಾಶಕ್ತಿ ಸುವರ್ಣದಾನಮಾಡುವವನು ಇಪ್ಪತ್ತು ಸಾವಿರ ವರ್ಷಗಳು ಆ ಪುಣ್ಯಫಲವನ್ನು ಅನುಭವಿಸುತ್ತಾನೆ. ದಾನವನ್ನು ಸ್ವೀಕರಿಸಿದವನು ಎಂಟು ಹೆಜ್ಜೆಗಳನ್ನಿಟ್ಟೊಡನೆಯೇ ದಾನಿಗೆ ಪುಣ್ಯಫಲವು ಬಂದು ಸೇರುತ್ತದೆ.[೧]

ಗೋದಃ ಶೀಲೀ ನಿರ್ಭಯಶ್ಚಾರ್ಘದಾತಾ
ನ ಸ್ಯಾದ್ದುಃಖೀ ವಸುದಾತಾ ಚ ಕಾಮಮ್ ।
ಉಪಸ್ಯೋಢಾ ಭಾರತೇ ಯಶ್ಚ ವಿದ್ವಾ-
ನ್ವಿಖ್ಯಾತಾಸ್ತೇ ವೈಷ್ಣವಾಶ್ಚನ್ದ್ರಲೋಕಾಃ ॥೧೮॥

ಶೀಲವಂತನಾಗಿ ಸನ್ಮಾರ್ಗದಲ್ಲಿ ಸಂಪಾದಿಸಿದ ಸಾಕ್ಷಾತ್ತಾದ ಗೋವನ್ನು ದಾನಮಾಡುವವನು-ಭಯರಹಿತನಾಗುತ್ತಾನೆ. ಅದರ ಪ್ರತ್ಯಾಮ್ನಾಯವಾಗಿ ವಸ್ತ್ರವೇ ಮೊದಲಾದ ಪದಾರ್ಥಗಳನ್ನು ಯಥಾಶಕ್ತಿಯಾಗಿ ದಾನ ಮಾಡುವವನು ದುಃಖರಹಿತನಾಗುತ್ತಾನೆ. ಗೋವಿನ ಪ್ರತಿನಿಧಿಯಾಗಿ ಯಥೇಷ್ಟವಾಗಿ ಸುವರ್ಣವನ್ನು ದಾನಮಾಡುವವನೂ ದುಃಖರಹಿತನಾಗುತ್ತಾನೆ. ಪ್ರಾತಃಕಾಲದಲ್ಲಿಯೇ ಈ ದಾನದ ಕರ್ಮವನ್ನು ನಿರ್ವಹಿಸುವವನೂ ಭಾರತೇತಿಹಾಸದಲ್ಲಿ ನಿಷ್ಣಾತನಾಗಿರುವ ಜ್ಞಾನಿಯೂ ದುಃಖರಹಿತರಾಗುತ್ತಾರೆ. ಇವರು ಖ್ಯಾತಿಯನ್ನು ಪಡೆದು ವಿಷ್ಣುಭಕ್ತರಾಗಿ ಚಂದ್ರನಂತೆ ಆಹ್ಲಾದವನ್ನುಂಟುಮಾಡುತ್ತಾ ಬೆಳಗುತ್ತಾರೆ.[೨]

---

[೧] ಹೀಗೆ ಶಾಸ್ತ್ರಾನುಸಾರವಾಗಿ ಗೋವಿಗೆ ಬದಲಾಗಿ ಕೊಡುವ ದಾನಗಳಿಗೆ ಮೇಲೆ ಹೇಳಿದಂತೆ ಕ್ರಮವಾಗಿ ಊರ್ಧ್ವಾಸ್ಯಾ, ಭವಿತವ್ಯಾ ಮತ್ತು ವೈಷ್ಣವೀ-ಎಂದು ಹೆಸರು. ಮುಖ್ಯಪದಾರ್ಥಗಳನ್ನು ದಾನಮಾಡಲು ಸಾಧ್ಯವಾಗದಿದ್ದಾಗ ಅದರ ಬದಲಿಗೆ ಮಾಡುವ ಶಾಸ್ತ್ರೀಯದಾನಕ್ಕೆ ಪ್ರತ್ಯಾಮ್ನಾಯ ಅಥವಾ ನಿಷ್ಕ್ರಯ-ಎಂದು ಹೆಸರು.

[೨] ಈ ಶ್ಲೋಕದಲ್ಲಿ ಊಢಸ್ಯೋಢಾ ಭಾರತ ಯಶ್ಚ ವಿದ್ವಾನ್-ಎಂಬ ಪಾಠಾಂತರವಿದೆ. ಅದರ ಪ್ರಕಾರ : ಭಾರತನೇ! ದಾನಕ್ಕಾಗಿ ಹಾಲನ್ನು ಕರೆಯುವವನು ಮತ್ತು ಗೋದಾನದ ರಹಸ್ಯವನ್ನು ತಿಳಿದವನು-ಎಂದು ಅರ್ಥವಾಗುತ್ತದೆ.

ಗಾ ವೈ ದತ್ತ್ವಾ ಗೋವ್ರತೀ ಸ್ಯಾತ್ತ್ರಿರಾತ್ರಂ
ನಿಶಾಂ ಚೈಕಾಂ ಸಂವಸೇತೇಹ ತಾಭಿಃ ।
ಕಾಮಾಷ್ಟಮ್ಯಾಂ ವರ್ತಿತವ್ಯಂ ತ್ರಿರಾತ್ರಂ
ರಸೈರ್ವಾ ಗೋಃ ಶಕೃತಾ ಪ್ರಸನ್ನೈರ್ವಾ ॥೧೯॥

ಗೋದಾನಮಾಡಿದನಂತರ ಮನುಷ್ಯನು ಮೂರು ರಾತ್ರಿಗಳವರೆಗೆ ಗೋವ್ರತಿಯಾಗಿರಬೇಕು. ಒಂದು ರಾತ್ರಿ ಗೋವುಗಳ ಜೊತೆಯಲ್ಲಿಯೇ ಇರಬೇಕು. ಕಾಮಾಷ್ಟಮಿಯಿಂದ ಹಿಡಿದು ಮೂರು ದಿನಗಳು ಗೋವಿನ ಸಗಣಿಯನ್ನಾಗಲೀ, ರಸಗಳನ್ನಾಗಲೀ, (ಹಾಲು-ಮೊಸರು-ಮಜ್ಜಿಗೆ ಮುಂತಾದುವು) ತಿನ್ನುತ್ತಾ ಕಳೆಯಬೇಕು.

ದೇವವ್ರತೀ ಸ್ಯಾದ್ವೃಷಭಪ್ರದಾನೇ
ವೇದಾವಾಪ್ತಿರ್ಗೋಯುಗಸ್ಯ ಪ್ರದಾನೇ ।
ತಥಾ ಗವಾಂ ವಿಧಿಮಾಸಾದ್ಯ ಯಜ್ವಾ
ಲೋಕಾನಗ್ರ್ಯಾನ್ವಿನ್ದತೇ ನಾವಿಧಿಜ್ಞಃ ॥೨೦॥

ವೃಷಭವನ್ನು ದಾನವಾಗಿ ಕೊಡುವುದರಿಂದ ಮನುಷ್ಯನು ದೇವವ್ರತಿಯಾಗುತ್ತಾನೆ. (ದೇವವ್ರತದ ಫಲವಾದ ದೇವತ್ತ್ವವನ್ನು ಪಡೆಯುತ್ತಾನೆ.) ಒಂದು ಹೋರಿಯನ್ನೂ ಮತ್ತು ಒಂದು ಹಸುವನ್ನೂ ದಾನವಾಗಿ ಕೊಡುವವನಿಗೆ ವೇದಾಭ್ಯಾಸಮಾಡಿದ ಪುಣ್ಯವು ಲಭಿಸುತ್ತದೆ. ಗೋದಾನದ ವಿಧಿಯನ್ನು ತಿಳಿದು ಯಾಗಮಾಡುವವನು ಶ್ರೇಷ್ಠವಾದ ಲೋಕಗಳನ್ನು ಹೊಂದುತ್ತಾನೆ. ಗೋದಾನವಿಧಿಯನ್ನು ತಿಳಿಯದೇ ಯಜ್ಞಮಾಡುವವನು ಅಂತಹ ಫಲವನ್ನು ಹೊಂದುವುದಿಲ್ಲ.

ಕಾಮಾನ್ಸರ್ವಾನ್ಪಾರ್ಥಿವಾನೇಕಸಂಸ್ಥಾ-
ನ್ಯೋ ವೈ ದದ್ಯಾತ್ಕಾಮದುಘಾಂ ಚ ಧೇನುಮ್ ।
ಸಮ್ಯಕ್ತಾಃ ಸ್ಯುರ್ಹವ್ಯಕವ್ಯೌಘವತ್ಯ-
ಸ್ತಾಸಾಮುಕ್ಷ್ಣಾಂ ಜ್ಯಾಯಸಾಂ ಸಮ್ಪ್ರದಾನಮ್ ॥೨೧॥

ಮಹಾರಾಜ! ಯಥೇಷ್ಟವಾಗಿ ಹಾಲುಕರೆಯುವ ಹಸುವನ್ನು ದಾನಮಾಡುವವನು-ಅನೇಕವಿಧಿಗಳಿಗೆ ಸಂಬಂಧಪಟ್ಟ ಎಲ್ಲ ಕಾಮನೆಗಳನ್ನೂ ಪಡೆಯುತ್ತಾನೆ. ಏಕೆಂದರೆ : ಆ ಹಸುಗಳು ದೇವತೆಗಳಿಗೆ ಭೋಗ್ಯವಾದ ಹವ್ಯಗಳ ಮತ್ತು ಪಿತೃಗಳಿಗೆ ಭೋಗ್ಯವಾದ ಕವ್ಯಗಳ ಪ್ರವಾಹವನ್ನೇ

ಕರೆಯುತ್ತವೆ. ಆ ಹಸುಗಳು ಶ್ರೇಷ್ಠವಾದ ಹೋರಿಗಳನ್ನೂ ಕೊಡುತ್ತವೆ. ದೇವತೆಗಳಿಗೂ ಪಿತೃಗಳಿಗೂ ಭೋಗ್ಯವಾಗಿರುವ ಹವ್ಯ-ಕವ್ಯಗಳೂ ಮತ್ತು ವ್ಯವಹಾರಕ್ಕೆ ಅವಶ್ಯಕವಾಗಿರುವ ಹೋರಿಗಳೂ-ಎಲ್ಲವೂ ಶ್ರೇಷ್ಠವಾದ ಹಸುವನ್ನೇ ಅವಲಂಬಿಸಿವೆ. ಆದುದರಿಂದ ಅಂತಹ ಹಸುವನ್ನು ದಾನ ಮಾಡಿದರೆ ಐಹಿಕವಾದ ಮತ್ತು ಸ್ವರ್ಗಕ್ಕೆ ಸಂಬಂಧಪಟ್ಟ ಎಲ್ಲ ಕಾಮನೆಗಳೂ ಕೈಗೂಡುತ್ತವೆ.

ನ ಚಾಶಿಷ್ಯಾಯಾವ್ರತಾಯೋಪಕುರ್ಯಾ-
ನ್ನಾಶ್ರದ್ದಧಾನಾಯ ನ ವಕ್ರಬುದ್ಧಯೇ ।
ಗುಹ್ಯೋ ಹ್ಯಯಂ ಸರ್ವಲೋಕಸ್ಯ ಧರ್ಮೋ
ನೇಮಂ ಧರ್ಮಂ ಯತ್ರ ತತ್ರ ಪ್ರಜಲ್ಪೇತ್ ॥೨೨॥

ಈ ಗೋದಾನವಿಧಿಯನ್ನು ಶಿಷ್ಯನಲ್ಲದವನಿಗಾಗಲೀ, ವ್ರತನಿಷ್ಠನಲ್ಲದವನಿಗಾಗಲೀ, ಶ್ರದ್ಧೆಯಿಲ್ಲದವನಿಗಾಗಲೀ, ಕುಟಿಲಬುದ್ಧಿಯವನಿಗಾಗಲೀ ಉಪದೇಶಿಸಬಾರದು. ಸರ್ವಲೋಕಗಳಿಗೂ ಧರ್ಮವಾಗಿರುವ ಈ ಗೋದಾನ ಧರ್ಮವು ಪರಮರಹಸ್ಯವಾದುದು. ಆದುದರಿಂದ ಈ ಧರ್ಮವನ್ನು ಎಲ್ಲೆಂದರಲ್ಲಿ ಹೇಳಬಾರದು.

ಸನ್ತಿ ಲೋಕೇಽಶ್ರದ್ದಧಾನಾ ಮನುಷ್ಯಾಃ
ಸನ್ತಿ ಕ್ಷುದ್ರಾ ರಾಕ್ಷಸಮಾನುಷೇಷು ।
ಏಷಾಮೇತದ್ದೀಯಮಾನಂ ಹ್ಯನಿಷ್ಟಂ
ಯೇ ನಾಸ್ತಿಕ್ಯಂ ಚಾಶ್ರಯನ್ತೇಽಲ್ಪಪುಣ್ಯಾಃ ॥೨೩॥

ಲೋಕದಲ್ಲಿ ಇಂತಹ ಧರ್ಮದಲ್ಲಿ ವಿಶ್ವಾಸವಿಲ್ಲದಿರುವ ಮನುಷ್ಯರು ಅನೇಕರಿದ್ದಾರೆ. ಮನುಷ್ಯರಲ್ಲಿ ರಾಕ್ಷಸೀಪ್ರಕೃತಿಯ ಅನೇಕ ಕ್ಷುದ್ರಜನರಿದ್ದಾರೆ. ಅಲ್ಪಪುಣ್ಯರಾದ ಅನೇಕಜನರು ನಾಸ್ತಿಕ್ಯವನ್ನು ಆಶ್ರಯಿಸಿರುತ್ತಾರೆ. ಅಂತಹವರಿಗೆ ಪುಣ್ಯತಮವಾದ ಈ ಗೋದಾನಧರ್ಮವನ್ನು ಉಪದೇಶಿಸುವುದರಿಂದ ಅನಿಷ್ಟವೇ ಉಂಟಾಗುತ್ತದೆ. ಅಭೀಷ್ಟವುಂಟಾಗುವುದಿಲ್ಲ.'

ಬಾರ್ಹಸ್ಪತ್ಯಂ ವಾಕ್ಯಮೇತನ್ನಿಶಮ್ಯ
ಯೇ ರಾಜಾನೋ ಗೋಪ್ರದಾನಾನಿ ದತ್ತ್ವಾ ।
ಲೋಕಾನ್ಪ್ರಾಪ್ತಾಃ ಪುಣ್ಯಶೀಲಾಃ ಪ್ರವೃತ್ತಾ-
ಸ್ತಾನ್ಮೇ ರಾಜನ್ಕೀರ್ತ್ಯಮಾನಾನ್ನಿಬೋಧ ॥೨೪॥

ಯುಧಿಷ್ಠಿರ! ಬೃಹಸ್ಪತಿಯು ಮಾಡಿದ ಈ ಗೋದಾನವಿಧಿಯ ಉಪದೇಶವನ್ನು ಪಡೆದು ಯಾವ ಯಾವ ರಾಜರು ವಿಧಿಪೂರ್ವಕವಾಗಿ ಗೋವುಗಳನ್ನು ದಾನಮಾಡಿ ಪುಣ್ಯಶೀಲರಾಗಿ ಅವಸಾನಾನಂತರದಲ್ಲಿ ಉತ್ತಮವಾದ ಲೋಕಗಳನ್ನು ಪಡೆದರೆಂಬುದನ್ನು ಹೇಳುವೆನು; ಕೇಳು:

ಉಶೀನರೋ ವಿಷ್ವಗಶ್ವೋನೃಗಶ್ಚ
ಭಗೀರಥೋ ವಿಶ್ರುತೋ ಯೌವನಾಶ್ವಃ ।
ಮಾನ್ಧಾತಾ ವೈ ಮುಚುಕುನ್ದಶ್ಚ ರಾಜಾ
ಭೂರಿದ್ಯುಮ್ನೋ ನೈಷಧಃ ಸೋಮಕಶ್ಚ ॥೨೫॥
ಪುರೂರವೋ ಭರತಶ್ಚಕ್ರವರ್ತೀ
ಯಸ್ಯಾನ್ವವಾಯೇ ಭರತಾಃ ಸರ್ವ ಏವ ।
ತಥಾ ವೀರೋ ದಾಶರಥಿಶ್ಚ ರಾಮೋ
ಯೇ ಚಾಪ್ಯನ್ಯೇ ವಿಶ್ರುತಾಃ ಕೀರ್ತಿಮನ್ತಃ ॥೨೬॥
ತಥಾ ರಾಜಾ ಪೃಥುಕರ್ಮಾ ದಿಲೀಪೋ
ದಿವಂ ಪ್ರಾಪ್ತೋ ಗೋಪ್ರದಾನೈರ್ವಿಧಿಜ್ಞಃ ।
ಯಜ್ಞೈರ್ದಾನೈಸ್ತಪಸಾ ರಾಜಧರ್ಮೈ-
ರ್ಮಾನ್ಧಾತಾಭೂದ್ಗೋಪ್ರದಾನೈಶ್ಚ ಯುಕ್ತಃ ॥೨೭॥

ಉಶೀನರ, ವಿಷ್ವಗಶ್ವ, ನೃಗ, ಭಗೀರಥ, ಸುವಿಖ್ಯಾತನಾದ, ಯುವನಾಶ್ವನ ಮಗನಾದ ಮಾಂಧಾತಮಹಾರಾಜ, ಮುಚುಕುಂದ, ಭೂರಿದ್ಯುಮ್ನ, ನಿಷಧಾಧಿಪತಿಯಾದ ನಲ, ಸೋಮಕ, ಪುರೂರವಸ, ಯಾವನ ವಂಶದವರೆಲ್ಲರೂ ಭರತರೆಂಬ ಹೆಸರನ್ನು ಪಡೆದಿರುವರೋ-ಅಂತಹ ಭರತಚಕ್ರವರ್ತಿ, ದಶರಥನ ಮಗನಾದ, ವೀರನಾದ ಶ್ರೀರಾಮ, ಕೀರ್ತಿಮಂತರಾದ ಮತ್ತು ವಿಖ್ಯಾತರಾದ ಇನ್ನೂ ಅನೇಕರಾಜರು ಗೋದಾನವನ್ನು ಮಾಡಿ ಪುಣ್ಯಲೋಕಗಳನ್ನು ಪಡೆದುಕೊಂಡಿರುವರು. ಗೋದಾನವಿಧಿಯನ್ನು ತಿಳಿದಿದ್ದ, ದೊಡ್ಡ-ದೊಡ್ಡ ಕಾರ್ಯಗಳನ್ನು ಮಾಡಿದ ದಿಲೀಪನೂ ಗೋವುಗಳನ್ನು ದಾನಮಾಡಿದುದರಿಂದ ಸ್ವರ್ಗಕ್ಕೆ ಹೋದನು. ಮಾಂಧಾತಚಕ್ರವರ್ತಿಯಾದರೋ ಯಜ್ಞ, ದಾನ, ತಪಸ್ಸು, ರಾಜಧರ್ಮ, ಗೋದಾನ-ಇವೇ ಮೊದಲಾದ ಸಮಸ್ತಗುಣಗಳಿಂದಲೂ ಸಂಪನ್ನನಾಗಿದ್ದನು.

ಯುಧಿಷ್ಠಿರ! ನೀನೂ ಕೂಡ ನಾನು ಹೇಳಿರುವ ಬೃಹಸ್ಪತಿಯ ಈ ಉಪದೇಶವನ್ನು ಧಾರಣೆಮಾಡು. ಕುರುಗಳ ರಾಜ್ಯವನ್ನು ಪಡೆದುಕೊಂಡು ಸುಪ್ರೀತನಾಗಿ ಪವಿತ್ರವಾದ ಗೋವುಗಳನ್ನು ದಾನಮಾಡು."

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ:

"ಜನಮೇಜಯ! ಗೋಪ್ರದಾನದ ವಿಷಯವಾಗಿ ಭೀಷ್ಮನು ಹೇಳಿದಂತೆಯೇ ಧರ್ಮರಾಜನು ಎಲ್ಲವನ್ನೂ ಮಾಡಿದನು. ದೇವದೇವನಾದ ಬೃಹಸ್ಪತಿಯಿಂದ ಉಪದಿಷ್ಟವಾದ ಗೋಧರ್ಮವನ್ನು ಮಾಂಧಾತ ಚಕ್ರವರ್ತಿಯು ಧಾರಣೆಮಾಡಿದಂತೆ ಭೀಷ್ಮನು ಉಪದೇಶಿಸಿದ ಗೋಧರ್ಮವನ್ನು ಯುಧಿಷ್ಠಿರನು ಧಾರಣೆಮಾಡಿದನು.

ಇತಿ ನೃಪ ಸತತಂ ಗವಾಂ ಪ್ರದಾನೇ
ಯವಶಕಲಾನ್ಸಹ ಗೋಮಯೈಃ ಪಿಬಾನಃ ।
ಕ್ಷಿತಿತಲಶಯನಃ ಶಿಖೀ ಯತಾತ್ಮಾ
ವೃಷ ಇವ ರಾಜವೃಷಸ್ತದಾ ಬಭೂವ ॥೩೦॥

ರಾಜರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ಆ ದಿನಗಳಲ್ಲಿ ಸತತವಾಗಿ ಗೋದಾನಮಾಡುವುದರಲ್ಲಿಯೇ ನಿರತನಾಗಿರುತ್ತಾ ಗೋಮೂತ್ರ-ಗೋಮಯಗಳೊಡನೆ ಗೋಧಿಯ ಕಾಳುಗಳನ್ನು ಆಹಾರವನ್ನಾಗಿ ಸೇವಿಸುತ್ತಾ ನೆಲದ ಮೇಲೆ ಮಲಗುತ್ತಾ ಜಲಾಹಾರಿಯಾಗಿ ಇಂದ್ರಿಯಗಳನ್ನು ಸಂಯಮಿಸಿ ಸಾಕ್ಷಾತ್ ಧರ್ಮಮೂರ್ತಿಯಂತೆಯೇ ಕಾಣುತ್ತಿದ್ದನು.

ನರಪತಿರಭವತ್ಸದೈವತಾಭ್ಯಃ
ಪ್ರಯತಮನಾಸ್ತ್ವಭಿಸಂಸ್ತುವಂಶ್ಚ ತಾಃ ಸ್ಮ ।
ನ ಚ ಧುರಿ ನೃಪ ಗಾಮಯುಕ್ತ ಭೂಯ-
ಸ್ತುರಗವರೈರಗಮಚ್ಚ ಯತ್ರ ತತ್ರ ॥೩೧॥

ಯುಧಿಷ್ಠಿರನು ಎಲ್ಲ ಕಾಲಗಳಲ್ಲಿಯೂ ಗೋವುಗಳ ವಿಷಯದಲ್ಲಿ ವಿನೀತಭಾವದಿಂದಿರುತ್ತಾ ಅವುಗಳನ್ನು ಸ್ತೋತ್ರಮಾಡುತ್ತಿದ್ದನು. ಅವನು ತಾನು ಪ್ರಯಾಣಮಾಡಬೇಕಾದ ರಥಕ್ಕೆ ಗೋವುಗಳನ್ನು (ಎತ್ತುಗಳನ್ನು)

ಕಟ್ಟಿಸುತ್ತಿರಲಿಲ್ಲ. ಶ್ರೇಷ್ಠವಾದ ಕುದುರೆಗಳ ರಥದಲ್ಲಿ ಕುಳಿತು ಅಲ್ಲಲ್ಲಿ ತಿರುಗಾಡುತ್ತಿದ್ದನು."

೭೬ನೆಯ ಅಧ್ಯಾಯವು ಮುಗಿಯಿತು.

೭೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕಪಿಲಾಗೋವುಗಳ ಉತ್ಪತ್ತಿ ಮತ್ತು ಅವುಗಳ ಮಹಿಮೆ

ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾರೆ :

ತತೋ ಯುಧಿಷ್ಠಿರೋ ರಾಜಾ ಭೂಯಃ ಶಾನ್ತನವಂ ನೃಪಮ್ ।
ಗೋದಾನವಿಸ್ತರಂ ಧರ್ಮಾನ್ಪಪ್ರಚ್ಛ ವಿನಯಾನ್ವಿತಃ ॥೧॥

"ಜನಮೇಜಯ! ಅನಂತರ ಯುಧಿಷ್ಠಿರನು ಗೋದಾನದ ವಿಸ್ತಾರವಾದ ವಿಧಿಯನ್ನೂ ಮತ್ತು ಅದಕ್ಕೆ ಸಂಬಂಧಿಸಿದ ಧರ್ಮಗಳನ್ನೂ ಹೇಳುವಂತೆ ಶಾಂತನುವಿನ ಮಗನಾದ ಭೀಷ್ಮನನ್ನು ಪುನಃ ವಿನಯಪೂರ್ವಕವಾಗಿ ಕೇಳಿಕೊಂಡನು.

ಗೋಪ್ರದಾನಗುಣಾನ್ಸಮ್ಯಕ್ಪುನರ್ಮೇ ಬ್ರೂಹಿ ಭಾರತ ।
ನ ಹಿ ತೃಪ್ಯಾಮ್ಯಹಂ ವೀರ ಶೃಣ್ವಾನೋಽಮೃತಮೀದೃಶಮ್ ॥೨॥

"ಭಾರತನೇ! ಪುನಃ ನನಗೆ ಗೋದಾನದ ಗುಣಗಳನ್ನು ಚೆನ್ನಾಗಿ ಮನದಟ್ಟಾಗುವಂತೆ ಹೇಳು. ವೀರನೇ! ಅಮೃತಸ್ವರೂಪವಾದ ಈ ಉಪದೇಶವನ್ನು ಎಷ್ಟು ಕೇಳಿದರೂ ನನಗೆ ತೃಪ್ತಿಯೆಂಬುದೇ ಇಲ್ಲ."

ಜನಮೇಜಯ! ಧರ್ಮರಾಜನು ಹೀಗೆಂದು ಹೇಳಲಾಗಿ ಶಾಂತನವ ರಾಜನು ಸಮಗ್ರವಾದ ಗೋದಾನದ ವಿಧಿಗಳನ್ನು ಚೆನ್ನಾಗಿ ವಿವರಿಸಿ ಹೇಳಿದನು:

ವತ್ಸಲಾಂ ಗುಣಸಮ್ಪನ್ನಾಂ ತರುಣೀಂ ವಸ್ತ್ರಸಂಯುತಾಮ್ ।
ದತ್ತ್ವೇದೃಶೀಂ ಗಾಂ ವಿಪ್ರಾಯ ಸರ್ವಪಾಪೈಃ ಪ್ರಮುಚ್ಯತೇ ।
ಅಸುರ್ಯಾ ನಾಮ ತೇ ಲೋಕಾ ಗಾಂ ದತ್ತ್ವಾ ತಾನ್ನ ಗಚ್ಛತಿ ॥೪॥

"ಯುಧಿಷ್ಠಿರ! ಕರುವಿನಿಂದ ಕೂಡಿದ, ಗುಣಯುಕ್ತವಾದ (ಹೆಚ್ಚು ಹಾಲುಕೊಡುವ, ಒದೆಯದೇ ಇರುವ, ಹಾಯದೇ ಇರುವ-ಇವೇ ಮುಂತಾದ ಒಳ್ಳೆಯ ಗುಣಗಳುಳ್ಳ), ವಸ್ತ್ರದಿಂದ ಹೊದಿಸಲ್ಪಟ್ಟ ಪಡ್ಡೆಯ ಹಸುವನ್ನು ಬ್ರಾಹ್ಮಣನಿಗೆ ದಾನಮಾಡಿದವನು ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ಅಸುರ್ಯಾ ಎಂಬ ಅಂಧಕಾರಮಯವಾದ ನರಕ ಲೋಕಗಳಿವೆ. ಇಂತಹ ಗೋವನ್ನು ದಾನಮಾಡಿದವನು ಅಂತಹ ನರಕ ಲೋಕಗಳಿಗೆ ಹೋಗಬೇಕಾಗುವುದಿಲ್ಲ.

ಪೀತೋದಕಾಂ ಜಗ್ಧತೃಣಾಂ ನಷ್ಟಕ್ಷೀರಾಂ ನಿರಿನ್ದ್ರಿಯಾಮ್ ॥೫॥
ಜರಾರೋಗೋಪಸಮ್ಪನ್ನಾಂ ಜೀರ್ಣಾಂ ವಾಪೀಮಿವಾಜಲಾಮ್ ।
ದತ್ತ್ವಾ ತಮಃ ಪ್ರವಿಶತಿ ದ್ವಿಜಂ ಕ್ಲೇಶೇನ ಯೋಜಯೇತ್ ॥೬॥

ನೀರನ್ನು ಕುಡಿದು ಹುಲ್ಲನ್ನು ತಿಂದು ಮುಗಿಸಿರುವ (ನೀರು ಕುಡಿಯಲೂ-ಹುಲ್ಲುತಿನ್ನಲೂ ಸಾಧ್ಯವಿಲ್ಲದಷ್ಟು ಜೀರ್ಣವಾಗಿರುವ), ಹಾಲಿಲ್ಲದ, ಶಿಥಿಲವಾದ ಇಂದ್ರಿಯಗಳಿಂದ ಕೂಡಿರುವ, ಮುಪ್ಪಿನಿಂದಲೂ ರೋಗದಿಂದಲೂ ಸೊರಗಿರುವ, ನೀರಿಲ್ಲದ ಬಾವಿಯಂತೆ ಕೃಶವಾಗಿ ಹೋಗಿ ಯಾವುದೇ ಕೆಲಸಕ್ಕೂ ಉಪಯೋಗವಿಲ್ಲದ ಹಸುವನ್ನು ದಾನಮಾಡುವವನು ದಾನತೆಗೆದುಕೊಂಡ ಬ್ರಾಹ್ಮಣನನ್ನು ಕಷ್ಟದಲ್ಲಿ ಬೀಳಿಸುತ್ತಾನೆ. ಅಂತಹ ಹಸುವಿನಿಂದ ದಾನಪಡೆದವನಿಗೆ ಯಾವ ವಿಧವಾದ ಸುಖವೂ ಉಂಟಾಗುವುದಿಲ್ಲ. ಆದುದರಿಂದಲೇ ಅಂತಹ ಹಸುವನ್ನು ದಾನಕೊಡುವವನು ಅಂಧಕಾರಮಯವಾದ ನರಕದಲ್ಲಿ ಬೀಳುತ್ತಾನೆ.

ರುಷ್ಟಾ ದುಷ್ಟಾ ವ್ಯಾಧಿತಾ ದುರ್ಬಲಾ ವಾ
ನೋ ದಾತವ್ಯಾ ಯಾಶ್ಚ ಮೂಲ್ಯೈರದತ್ತೈಃ ।
ಕ್ಲೇಶೈರ್ವಿಪ್ರಂ ಯೋ ಫಲೈಃ ಸಂಯುನಕ್ತಿ
ತಸ್ಯಾವೀರ್ಯಾಶ್ಚಾಫಲಾಶ್ಚೈವ ಲೋಕಾಃ ॥೭॥

ಮುಟ್ಟಿದೊಡನೆಯೇ ಸಿಡಿಮಿಡಿಗೊಳ್ಳುವ, ದುಷ್ಟಸ್ವಭಾವದ, ವ್ಯಾಧಿಪೀಡಿತವಾದ, ದುರ್ಬಲವಾದ, ಮೌಲ್ಯವನ್ನು ಕೊಡದೆಯೇ ತೆಗೆದು

ಕೊಂಡು ಬಂದಿರುವ ಹಸುಗಳನ್ನು ದಾನಮಾಡಬಾರದು. ಯಾವನು ನಿಷ್ಫಲವಾದ ಬರಡು ಹಸುಗಳನ್ನು ಬ್ರಾಹ್ಮಣನಿಗೆ ದಾನಮಾಡಿ ಅವನನ್ನು ನಾನಾವಿಧವಾದ ಕಷ್ಟಗಳಿಗೆ ಗುರಿಪಡಿಸುವನೋ–ಅಂತಹವನಿಗೆ ನಿರ್ವೀರ್ಯವಾದ ನಿಷ್ಫಲವಾದ ಲೋಕಗಳು (ನರಕಲೋಕಗಳು) ಲಭಿಸುತ್ತವೆ.

ಬಲಾನ್ವಿತಾಃ ಶೀಲವಯೋಪಪನ್ನಾಃ
ಸರ್ವೇ ಪ್ರಶಂಸನ್ತಿ ಸುಗನ್ಧವತ್ಯಃ ।
ಯಥಾ ಹಿ ಗಙ್ಗಾ ಸರಿತಾಂ ವರಿಷ್ಠಾ
ತಥಾರ್ಜುನೀನಾಂ ಕಪಿಲಾ ವರಿಷ್ಠಾ ॥೮॥

ಹೃಷ್ಟ-ಪುಷ್ಟವಾಗಿರುವ, ಒಳ್ಳೆಯ ಶೀಲವುಳ್ಳ, ಎಳೆವಯಸ್ಸಿನ, ಸುಗಂಧವನ್ನು ಹೊರಸೂಸುವ ಕಪಿಲಾಧೇನುಗಳನ್ನು ಎಲ್ಲರೂ ಪ್ರಶಂಸೆ ಮಾಡುತ್ತಾರೆ. ಸರಿತ್ತುಗಳಲ್ಲಿ ಗಂಗೆಯು ಹೇಗೆ ಶ್ರೇಷ್ಠಳೋ ಹಾಗೆಯೇ ಕಪಿಲಾಧೇನುವು ಗೋವುಗಳಲ್ಲಿಯೇ ಶ್ರೇಷ್ಠವಾದುದು."

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕಸ್ಮಾತ್ಸಮಾನೇ ಬಹುಲಾಪ್ರದಾನೇ
ಸದ್ಭಿಃ ಪ್ರಶಸ್ತಂ ಕಪಿಲಾಪ್ರದಾನಮ್ ।
ವಿಶೇಷಮಿಚ್ಛಾಮಿ ಮಹಾಪ್ರಭಾವಂ
ಶ್ರೋತುಂ ಸಮರ್ಥೋಽಸ್ಮಿ ಭವಾನ್ಪ್ರವಕ್ತುಮ್ ॥೯॥

"ಭಾರತನೇ! ಗೋದಾನವು ಎಲ್ಲ ಬಣ್ಣಗಳ ಗೋವುಗಳ ವಿಷಯದಲ್ಲಿಯೂ ಸಮಾನವಾಗಿರುವಾಗ ಸತ್ಪುರುಷರು ಕಪಿಲಾಧೇನುವಿನ ದಾನವು ಅತ್ಯಂತಪ್ರಶಸ್ತವೆಂದು ಯಾವ ಕಾರಣದಿಂದ ಹೇಳುತ್ತಾರೆ? ಕಪಿಲಾಧೇನುಗಳಲ್ಲಿರುವ ಮಹಾಪ್ರಭಾವವನ್ನೂ ಮತ್ತು ವಿಶೇಷವನ್ನೂ ತಿಳಿದುಕೊಳ್ಳಲಿಚ್ಛಿಸುತ್ತೇನೆ. ನಾನು ಕೇಳಲು ಸಮರ್ಥನಾಗಿರುವಂತೆ ನೀನು ಯಾವುದೇ ವಿಷಯವನ್ನಾದರೂ ಹೇಳಲು ಸಮರ್ಥನಾಗಿರುವೆ. ಆದುದರಿಂದ ದಯಮಾಡಿ ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ವೃದ್ಧರು ಹೇಳುತ್ತಿದ್ದ ಬಹಳ ಹಿಂದಿನದಾದ ಕಪಿಲಾ ಗೋವಿನ ವೃತ್ತಾಂತವನ್ನು ನಾನು ಕೇಳಿದ್ದೇನೆ. ಕಪಿಲಾಧೇನುಗಳು ಹೇಗೆ ಹುಟ್ಟಿದುವು ಎಂಬುದನ್ನು ಸಮಗ್ರವಾಗಿ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು:

ಹಿಂದೆ ಸೃಷ್ಟಿಯ ಪ್ರಾರಂಭಕಾಲದಲ್ಲಿ ಸ್ವಯಂಭೂಬ್ರಹ್ಮನು ಪ್ರಜೆಗಳನ್ನು ಸೃಷ್ಟಿಸುವಂತೆ ದಕ್ಷನಿಗೆ ಆದೇಶವನ್ನು ನೀಡಿದನು. ಆದರೆ ದಕ್ಷನು ಪ್ರಜೆಗಳಿಗೆ ಹಿತವನ್ನುಂಟುಮಾಡುವ ಅಪೇಕ್ಷೆಯಿಂದ ಮೊದಲು ಪ್ರಜೆಗಳ ವೃತ್ತಿಯನ್ನು (ಜೀವನದ ಸಾಧನಗಳನ್ನು) ಸೃಷ್ಟಿಸಿದನು.

ಯಥಾ ಹ್ಯಮೃತಮಾಶ್ರಿತ್ಯ ವರ್ತಯನ್ತಿ ದಿವೌಕಸಃ ।
ತಥಾ ವೃತ್ತಿಂ ಸಮಾಶ್ರಿತ್ಯ ವರ್ತಯನ್ತಿ ಪ್ರಜಾ ವಿಭೋ ॥೧೨॥

ದೇವತೆಗಳು ಯಾವ ರೀತಿಯಲ್ಲಿ ಅಮೃತವನ್ನೇ ಆಶ್ರಯಿಸಿ ಜೀವಿಸಿರುವರೋ–ಅದೇ ರೀತಿಯಲ್ಲಿ ಪ್ರಜೆಗಳು ಭೂಲೋಕದಲ್ಲಿ ವೃತ್ತಿಯನ್ನಾಶ್ರಯಿಸಿ ಜೀವಿಸುತ್ತಾರೆ.

ಅಚರೇಭ್ಯಶ್ಚ ಭೂತೇಭ್ಯಶ್ಚರಾಃ ಶ್ರೇಷ್ಠಾಃ ಸದಾ ನರಾಃ ।
ಬ್ರಾಹ್ಮಣಾಶ್ಚ ತತಃ ಶ್ರೇಷ್ಠಾಸ್ತೇಷು ಯಜ್ಞಾಃ ಪ್ರತಿಷ್ಠಿತಾಃ ॥೧೩॥

ಸ್ಥಾವರಪ್ರಾಣಿಗಳಿಗಿಂತಲೂ ಜಂಗಮಪ್ರಾಣಿಗಳು ಶ್ರೇಷ್ಠವಾದುವು. ಜಂಗಮಪ್ರಾಣಿಗಳಲ್ಲಿ ಮನುಷ್ಯರು ಶ್ರೇಷ್ಠರು. ಮನುಷ್ಯರಲ್ಲಿ ಬ್ರಾಹ್ಮಣರು ಶ್ರೇಷ್ಠರು. ಏಕೆಂದರೆ: ಅವರಲ್ಲಿಯೇ ಯಜ್ಞಗಳು ಪ್ರತಿಷ್ಠಿತವಾಗಿವೆ. (ಯಜ್ಞಗಳು ಅವರಿಂದಲೇ ನಡೆಸಲ್ಪಡುತ್ತವೆ.)

ಯಜ್ಞೈರವಾಪ್ಯತೇ ಸೋಮಃ ಸ ಚ ಗೋಷು ಪ್ರತಿಷ್ಠಿತಃ ।
ತತೋ ದೇವಾಃ ಪ್ರಮೋದನ್ತೇ ಪೂರ್ವಂ ವೃತ್ತಿಸ್ತತಃ ಪ್ರಜಾಃ ॥೧೪॥

ಯಜ್ಞಗಳಿಂದ ಸೋಮರಸವು ಲಭಿಸುತ್ತದೆ. ದೇವತೆಗಳು ಸೋಮ ರಸವನ್ನು ಪಾನಮಾಡಿ ಆನಂದಪಡುತ್ತಾರೆ. ದೇವತೆಗಳಿಗೆ ಸೋಮ ರಸವನ್ನು ಒದಗಿಸುವ ಯಜ್ಞವು ಗೋವುಗಳಲ್ಲಿ ಪ್ರತಿಷ್ಠಿತವಾಗಿದೆ. (ಗೋವುಗಳಲ್ಲಿರುವ ಹವಿಷ್ಯದಿಂದಲೇ ಯಜ್ಞವು ಸಂಪನ್ನವಾಗುತ್ತದೆ.) ಈ ಕಾರಣದಿಂದಲೇ ದಕ್ಷನು ಮೊದಲು ಪ್ರಜೆಗಳಿಗೆ ವೃತ್ತಿಯನ್ನು ಸೃಷ್ಟಿಸಿ

ಅನಂತರ ಪ್ರಜೆಗಳನ್ನು ಸೃಷ್ಟಿಸಿದನು. ಹುಟ್ಟುತ್ತಲೇ ಸಕಲಪ್ರಾಣಿಗಳೂ ಜೀವನಸಾಧನಕ್ಕಾಗಿ ಕೋಲಾಹಲವನ್ನು ಮಾಡತೊಡಗಿದುವು. ಹಸಿದ ಹಸುಳೆಗಳು ತಾಯಿ-ತಂದೆಗಳ ಸಮೀಪಕ್ಕೆ ಓಡಿಹೋಗುವಂತೆ-ಹುಟ್ಟಿದ ಪ್ರಾಣಿಗಳು ಜೀವಿಕೆಯನ್ನು ಕಲ್ಪಿಸಿಕೊಡುವ ದಕ್ಷನ ಸಮೀಪಕ್ಕೆ ಹೋದುವು. ಈ ವಿಷಯವನ್ನು ಮನಗಂಡು ಪೂಜ್ಯನಾದ ದಕ್ಷಪ್ರಜಾಪತಿಯು ತನ್ನ ಪ್ರಜೆಗಳ ಜೀವಿಕೆಗಾಗಿ ಅಮೃತವನ್ನು ಕುಡಿದನು.

ಸ ಗತಸ್ತಸ್ಯ ತೃಪ್ತಿಂ ತು ಗನ್ಧಂ ಸುರಭಿಮುದ್ಗಿರನ್ ।
ದದರ್ಶೋದ್ಗಾರಸಂವೃತ್ತಾಂ ಸುರಭಿಂ ಮುಖಜಾಂ ಸುತಾಮ್ ॥

ಅಮೃತಪಾನದಿಂದ ಸಂತೃಪ್ತನಾದ ಪ್ರಜಾಪತಿಯ ಮುಖದಿಂದ ಸುಗಂಧವು ಹೊರಸೂಸಿತು. ಸುಗಂಧದ ಜೊತೆಯಲ್ಲಿಯೇ ಸುರಭಿ ಎಂಬ ಹೆಸರಿನ ಗೋವೂ ಹುಟ್ಟಿತು. ಮುಖದಿಂದ ಹುಟ್ಟಿದ ಆ ಸುರಭಿಯನ್ನು ದಕ್ಷನು ತನ್ನ ಪುತ್ರಿಯನ್ನಾಗಿ ಮಾಡಿಕೊಂಡನು. ದಕ್ಷನ ಮುಖದಿಂದ ಹುಟ್ಟಿದ ಸುರಭಿಯು ಜಗತ್ತಿಗೇ ತಾಯಿಯರಾದ ಸೌರಭೇಯೀ ಎಂಬ ಹೆಸರಿನ ಗೋವುಗಳನ್ನು ಸೃಷ್ಟಿಸಿತು. ಚಿನ್ನದ ಬಣ್ಣದಿಂದ ಕೂಡಿದ್ದ ಸೌರಭೇಯೀಧೇನು ಗಳು ಕಪಿಲಾಧೇನುಗಳೆಂದು ಪ್ರಸಿದ್ಧವಾದುವು. ಅವುಗಳೇ ಪ್ರಜೆಗಳಿಗೆ ಹಾಲುಕೊಡುವುದರ ಮೂಲಕವಾಗಿ ಜೀವನವೃತ್ತಿಯನ್ನು ಕಲ್ಪಿಸಿಕೊಟ್ಟುವು. ನದಿಗಳ ಅಲೆಗಳಿಂದ ನೊರೆಯು ಹುಟ್ಟುವಂತೆ–ಸರ್ವತ್ರ ಸುರಿಸುತ್ತಿದ್ದ ಕಪಿಲಾಧೇನುಗಳ ಅಮೃತರೂಪವಾದ ಹಾಲಿನಿಂದ ನೊರೆಯು ಹುಟ್ಟಿತು. ಒಮ್ಮೆ, ಆಗ ತಾನೇ ಹಾಲುಕುಡಿದಿದ್ದ ಸುರಭಿಯ ಕರುವೊಂದರ ಬಾಯಿಂದ ಹೊರಬಂದ ನೊರೆಯು, ಭೂಮಿಯ ಮೇಲೆ ನಿಂತಿದ್ದ ಶಿವನ ತಲೆಯ ಮೇಲೆ ಬಿದ್ದಿತು. ಅದರಿಂದ ಕ್ರುದ್ಧನಾದ ಶಿವನು ರೋಹಿಣಿಯನ್ನು (ಕಪಿಲಾಧೇನುವನ್ನು) ದಹಿಸಿಬಿಡುವನೋ ಎಂಬಂತೆ ತನ್ನ ಫಾಲನೇತ್ರದಿಂದ ದುರ-ದುರನೆ ನೋಡಿದನು. ಸೂರ್ಯಕಿರಣಗಳ ಪ್ರಸರಣದಿಂದ ಮೇಘಗಳ ಕಪ್ಪುಬಣ್ಣವು ಹಲವಾರು ಬಣ್ಣಗಳಾಗುವಂತೆ-ರುದ್ರನ ಹಣೆಗಣ್ಣಿನ ತೇಜಸ್ಸಿನಿಂದ ಕಪಿಲಾಧೇನುಗಳ ಹೊಂಬಣ್ಣವು ಹಲವು ಬಣ್ಣಗಳಾಗಿ ಪರಿವರ್ತಿತವಾಯಿತು. ಆದರೆ ಭಯದಿಂದ ತಪ್ಪಿಸಿಕೊಂಡು ಚಂದ್ರನನ್ನಾ

ಶ್ರಯಿಸಿದ ಹಸುಗಳ ಬಣ್ಣವು ಬದಲಾಗಲಿಲ್ಲ. ಅವು ಹುಟ್ಟುವಾಗ ಇದ್ದಂತೆಯೇ ಚಿನ್ನದ ಬಣ್ಣದವುಗಳೇ ಆಗಿದ್ದುವು. ಆ ಸಮಯದಲ್ಲಿ ದಕ್ಷನು ಕ್ರುದ್ಧನಾಗಿದ್ದ ಮಹಾದೇವನಿಗೆ ಹೇಳಿದನು:

ಅಮೃತೇನಾವಸಿಕ್ತಸ್ತ್ವಂ ನೋಚ್ಛಿಷ್ಟಂ ವಿದ್ಯತೇ ಗವಾಮ್ ।
ಯಥಾ ಹ್ಯಮೃತಮಾದಾಯ ಸೋಮೋ ವಿಸ್ಯಂದತೇ ಪುನಃ ।
ತಥಾ ಕ್ಷೀರಂ ಕ್ಷರನ್ತ್ಯೇತಾ ರೋಹಿಣ್ಯೋಽಮೃತಸಮ್ಭವಮ್ ॥೨೪॥

"ಮಹಾದೇವನೇ! ಕರುವಿನ ಬಾಯಿಯಿಂದ ಬಂದ ಹಾಲಿನ ನೊರೆಯು ನಿನ್ನ ಮೇಲೆ ಬಿದ್ದುದರಿಂದ ನೀನು ಅಮೃತಸಿಕ್ತನಾದೆ. ಹಸುಗಳಲ್ಲಿ ಉಚ್ಛಿಷ್ಟವೆಂಬುದೇ ಇಲ್ಲ. ಹೇಗೆ ಚಂದ್ರನು ಅಮೃತವನ್ನು ಕುಡಿದು ಪುನಃ ಅಮೃತವನ್ನೇ ಸುರಿಸುವನೋ–ಹಾಗೆಯೇ ಹಸುಗಳು ಅಮೃತದಿಂದ ಹುಟ್ಟಿದ ಹಾಲನ್ನೇ ನೀಡುತ್ತವೆ.

ನ ದುಷ್ಯತ್ಯನಿಲೋ ನಾಗ್ನಿರ್ನ ಸುವರ್ಣಂ ನ ಚೋದಧಿಃ ।
ನಾಮೃತೇನಾಮೃತಂ ಪೀತಂ ವತ್ಸಪೀತಾ ನ ವತ್ಸಲಾ ॥೨೫॥
ಇಮಾಲ್ಲೋಕಾನ್ಭರಿಷ್ಯನ್ತಿ ಹವಿಷಾ ಪ್ರಸ್ರವೇಣ ಚ ।
ಆಸಾಮೈಶ್ವರ್ಯಮಿಚ್ಛನ್ತಿ ಸರ್ವೇಽಮೃತಮಯಂ ಶುಭಮ್ ॥೨೬॥

ಯಾವ ರೀತಿಯಲ್ಲಿ ವಾಯು, ಅಗ್ನಿ, ಸುವರ್ಣ, ಸಮುದ್ರ, ದೇವತೆಗಳಿಂದ ಕುಡಿಯಲ್ಪಟ್ಟ ಅಮೃತ–ಇವುಗಳು ಉಚ್ಛಿಷ್ಟವೆನಿಸಿಕೊಳ್ಳುವುದಿಲ್ಲವೋ ಅದೇ ರೀತಿಯಲ್ಲಿ ಕರುವಿಗೆ ಹಾಲುಣಿಸಿದ ಹಸುವಾಗಲೀ-ಕರುವಿನ ಬಾಯಿಯಿಂದ ಹೊರಬಂದ ನೊರೆಯಾಗಲೀ ಉಚ್ಛಿಷ್ಟಗಳಾಗುವುದಿಲ್ಲ. ಗೋವುಗಳು ತಮ್ಮಲ್ಲಿರುವ ತುಪ್ಪದಿಂದಲೂ ಮತ್ತು ಹಾಲಿನಿಂದಲೂ ಈ ಲೋಕಗಳನ್ನೇ ಭರಿಸಿವೆ. (ಪೋಷಿಸುತ್ತಿವೆ.) ಈ ಕಾರಣದಿಂದಲೇ ಜಗತ್ತಿನಲ್ಲಿರುವ ಎಲ್ಲ ಪ್ರಜೆಗಳೂ ಹಸುಗಳಲ್ಲಿ ಅಮೃತಮಯವಾದ, ಶುಭಕರವಾದ ಕ್ಷೀರಸಂಪತ್ತಿರಲೆಂದು ಆಶಿಸುತ್ತಾರೆ."

ಯುಧಿಷ್ಠಿರ! ಪ್ರಜಾಪತಿಯು ರುದ್ರನಿಗೆ ಹೀಗೆ ಹೇಳಿ ಅನೇಕ ಹಸುಗಳೊಡನೆ ಒಂದು ವೃಷಭವನ್ನೂ ಬಹುಮಾನವಾಗಿ ಕೊಟ್ಟು ರುದ್ರನ ಮನಸ್ಸನ್ನು ಪ್ರಸನ್ನಗೊಳಿಸಿದನು.

ಪ್ರೀತಶ್ಚಾಪಿ ಮಹಾದೇವಶ್ಚಕಾರ ವೃಷಭಂ ತದಾ ।
ಧ್ವಜಂ ಚ ವಾಹನಂ ಚೈವ ತಸ್ಮಾತ್ಸ ವೃಷಭಧ್ವಜಃ ॥೨೮॥

ಅದರಿಂದ ಸುಪ್ರೀತನಾದ ಮಹೇಶ್ವರನು ಪ್ರಜಾಪತಿಯು ಕೊಟ್ಟ ವೃಷಭವನ್ನು ತನ್ನ ಧ್ವಜದ ಚಿಹ್ನೆಯನ್ನಾಗಿಯೂ-ವಾಹನವನ್ನಾಗಿಯೂ ಮಾಡಿಕೊಂಡನು. ಅದರಿಂದಲೇ ಅವನು ವೃಷಭಧ್ವಜನಾದನು.

ತತೋ ದೇವೈರ್ಮಹಾದೇವಸ್ತದಾ ಪಶುಪತಿಃ ಕೃತಃ ।
ಈಶ್ವರಃ ಸ ಗವಾಂ ಮಧ್ಯೇ ವೃಷಭಾಙ್ಕಃ ಪ್ರಕೀರ್ತಿತಃ ॥೨೯॥

ಅನಂತರ ದೇವತೆಗಳು ಶಿವನನ್ನು ಪಶುಗಳಿಗೆ ಅಧಿಪತಿಯನ್ನಾಗಿ ಮಾಡಿದರು. ಪಶುಗಳ ಮಧ್ಯದಲ್ಲಿದ್ದ ಮಹಾದೇವನನ್ನು ವೃಷಭಾಂಕನೆಂದೂ ಕರೆದರು.

ಏವಮವ್ಯಗ್ರವರ್ಣಾನಾಂ ಕಪಿಲಾನಾಂ ಮಹೌಜಸಾಮ್ ।
ಪ್ರದಾನೇ ಪ್ರಥಮಃ ಕಲ್ಪಃ ಸರ್ವಾಸಾಮೇವ ಕೀರ್ತಿತಃ ॥೩೦॥

ಹೀಗೆ ಮಹಾತೇಜಸ್ಸಿನಿಂದಲೂ ಬದಲಾಗದ ಬಣ್ಣದಿಂದಲೂ ಕೂಡಿರುವ ಕಪಿಲಾಧೇನುಗಳಿಗೆ ದಾನದಲ್ಲಿ ಉಳಿದೆಲ್ಲ ಗೋವುಗಳಿಗಿಂತಲೂ ಅಗ್ರಸ್ಥಾನವಿದೆ.

ಲೋಕಜ್ಯೇಷ್ಠಾ ಲೋಕವೃತ್ತಿಪ್ರವೃತ್ತಾ
ರುದ್ರೋಪೇತಾಃ ಸೋಮವಿಷ್ಯನ್ದಭೂತಾಃ ।
ಸೌಮ್ಯಾಃ ಪುಣ್ಯಾಃ ಕಾಮದಾಃ ಪ್ರಾಣದಾಶ್ಚ
ಗಾ ವೈ ದತ್ತ್ವಾ ಸರ್ವಕಾಮಪ್ರದಃ ಸ್ಯಾತ್ ॥೩೧॥

ಗೋವುಗಳು ಪ್ರಪಂಚದಲ್ಲಿ ಸರ್ವಶ್ರೇಷ್ಠವಾದ ಪ್ರಾಣಿಗಳಾಗಿವೆ. ಲೋಕದ ಪ್ರಜೆಗಳಿಗೆ ಜೀವನವೃತ್ತಿಯನ್ನು ಕಲ್ಪಿಸಿಕೊಡತಕ್ಕುವುಗಳಾಗಿವೆ. ರುದ್ರನಿಂದ ಸ್ವೀಕರಿಸಲ್ಪಟ್ಟಿವೆ. ಚಂದ್ರನಿಂದ ಹೊರಹೊಮ್ಮುವ ಅಮೃತ ಸ್ವರೂಪವಾಗಿವೆ. ಸೌಮ್ಯಸ್ವಭಾವದುವುಗಳಾಗಿಯೂ, ಮಂಗಳಸ್ವರೂಪಗಳಾಗಿಯೂ, ಮನುಷ್ಯರ ಕಾಮನೆಗಳನ್ನು ಪೂರ್ಣಗೊಳಿಸುವುಗಳಾಗಿಯೂ ಪ್ರಾಣದಾನಮಾಡುವುಗಳಾಗಿಯೂ ಇರುವ ಗೋವುಗಳನ್ನು ದಾನಮಾಡಿದರೆ ಮನುಷ್ಯನು ಸಕಲಕಾಮನಾವಸ್ತುಗಳನ್ನೂ ದಾನಮಾಡಿದವನಂತಾಗುತ್ತಾನೆ.

ಇದಂ ಗವಾಂ ಪ್ರಭವವಿಧಾನಮುತ್ತಮಂ
ಪಠನ್ಸದಾಶುಚಿರಪಿ ಮಙ್ಗಲಪ್ರಿಯಃ ।
ವಿಮುಚ್ಯತೇ ಕಲಿಕಲುಷೇಣ ಮಾನವಃ
ಶ್ರಿಯಂ ಸುತಾನ್ಧನಪಶುಮಾಪ್ನುಯಾತ್ಸದಾ ॥೩೨॥

ಅಶುಚಿಯೇ ಆಗಿದ್ದರೂ ಮಾನವನು ಕಪಿಲಾಗೋವುಗಳ ಉತ್ಪತ್ತಿ ವಿಧಾನವನ್ನು ತಿಳಿಸುವ ಉತ್ತಮೋತ್ತಮವಾದ ಈ ಆಖ್ಯಾನವನ್ನು ಸದಾ ಪಠಿಸುತ್ತಿದ್ದರೆ ಮಂಗಳಮಯನಾಗುತ್ತಾನೆ. ಕಲಿದೋಷದಿಂದ ವಿಮುಕ್ತನಾಗುತ್ತಾನೆ. ಸಂಪತ್ತನ್ನೂ, ಮಕ್ಕಳನ್ನೂ, ಧನವನ್ನೂ, ಪಶುಗಳನ್ನೂ ಯಾವಾಗಲೂ ಹೊಂದಿರುತ್ತಾನೆ.

ಹವ್ಯಂ ಕವ್ಯಂ ತರ್ಪಣಂ ಶಾನ್ತಿಕರ್ಮ
ಯಾನಂ ವಾಸೋ ವೃದ್ಧಬಾಲಸ್ಯ ತುಷ್ಟಿಃ ।
ಏತಾನ್ಸರ್ವಾನ್ಗೋಪ್ರದಾನೇ ಗುಣಾನ್ವೈ
ದಾತಾ ರಾಜನ್ನಾಪ್ನುಯಾದ್ವೈ ಸದೈವ ॥೩೩॥

ಯುಧಿಷ್ಠಿರಮಹಾರಾಜ! ಗೋದಾನಮಾಡುವವನು ಹವ್ಯ-ಕವ್ಯ-ತರ್ಪಣ-ಶಾಂತಿಕರ್ಮಾದಿಗಳನ್ನು ಮಾಡಿದ ಫಲವನ್ನೂ, ಯಾನಗಳನ್ನೂ, ವಸ್ತ್ರಗಳನ್ನೂ ಪಡೆದುಕೊಳ್ಳುತ್ತಾನೆ. ಅವನ ಆಶ್ರಯದಲ್ಲಿರುವ ಬಾಲಕರಿಗೂ ವೃದ್ಧರಿಗೂ ಸಂತೋಷವುಂಟಾಗುತ್ತದೆ. ಹೀಗೆ ಗೋದಾನಮಾಡಿದ ಮನುಷ್ಯನು ಈ ಎಲ್ಲ ಫಲಗಳನ್ನೂ ಒಡನೆಯೇ ಪಡೆದುಕೊಳ್ಳುತ್ತಾನೆ.”

ವೈಶಂಪಾಯನರು ಹೇಳುತ್ತಾರೆ:

“ಜನಮೇಜಯ! ಭೀಷ್ಮನು ಹೇಳಿದ ಈ ಮಾತುಗಳನ್ನು ಕೇಳಿ ಆಜಮೀಢವಂಶೀಯನಾದ ಯುಧಿಷ್ಠಿರನು ತನ್ನ ಅನುಜರೊಡನೆ ಸುವರ್ಣವರ್ಣದ ಗೋವುಗಳನ್ನೂ, ಎತ್ತುಗಳನ್ನೂ ಬ್ರಾಹ್ಮಣಶ್ರೇಷ್ಠರಿಗೆ ದಾನಮಾಡಿದನು.

ಹೀಗೆಯೇ ಯುಧಿಷ್ಠಿರನು ಯಜ್ಞಗಳಲ್ಲಿ ದಕ್ಷಿಣೆಗಾಗಿಯೂ, ಪುಣ್ಯ ಲೋಕಗಳನ್ನು ಜಯಿಸುವ ಸಲುವಾಗಿಯೂ, ಕೀರ್ತಿಯನ್ನು ವಿಸ್ತರಿಸುವ

ಸಲುವಾಗಿಯೂ ಬ್ರಾಹ್ಮಣೋತ್ತಮರಿಗೆ ಲಕ್ಷೋಪಲಕ್ಷ ಗೋವುಗಳನ್ನು ದಾನ ಮಾಡಿದನು."

೭೭ನೆಯ ಅಧ್ಯಾಯವು ಮುಗಿಯಿತು.

೭೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಸಿಷ್ಠರಿಂದ ಸೌದಾಸನಿಗೆ ಗೋದಾನದ ವಿಧಿಯ ಉಪದೇಶ

ಭೀಷ್ಮನು ಹೇಳುತ್ತಾನೆ:

ಏತಸ್ಮಿನ್ನೇವ ಕಾಲೇ ತು ವಸಿಷ್ಠಮೃಷಿಸತ್ತಮಮ್ ।
ಇಕ್ಷ್ವಾಕುವಂಶಜೋ ರಾಜಾ ಸೌದಾಸೋ ವದತಾಂ ವರಃ ॥೧॥

"ಯುಧಿಷ್ಠಿರ! ಅದೇ ಸಮಯದಲ್ಲಿ ಇಕ್ಷ್ವಾಕುವಂಶಜನಾದ, ವಾಗ್ಮಿಗಳಲ್ಲಿ ಶ್ರೇಷ್ಠನಾದ ಸೌದಾಸನೆಂಬ ರಾಜನು ಎಲ್ಲ ಲೋಕಗಳಲ್ಲಿಯೂ ಸಂಚರಿಸುತ್ತಿದ್ದ, ಬ್ರಹ್ಮಜ್ಞಾನಕ್ಕೆ ಭಂಡಾರಪ್ರಾಯರಾಗಿದ್ದ, ಸಿದ್ಧಪುರುಷರಾದ, ಸನಾತನರಾದ, ಋಷಿಶ್ರೇಷ್ಠರಾದ, ಪುರೋಹಿತರಾದ ವಸಿಷ್ಠರನ್ನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಪ್ರಶ್ನಿಸಿದನು:

ತ್ರೈಲೋಕ್ಯೇ ಭಗವನ್ಕಿಂಸ್ವಿತ್ಪವಿತ್ರಂ ಕಥ್ಯತೇಽನಘ ।
ಯತ್ಕೀರ್ತಯನ್ಸದಾ ಮರ್ತ್ಯಃ ಪ್ರಾಪ್ನುಯಾತ್ಪುಣ್ಯಮುತ್ತಮಮ್ ॥೨॥

"ಪೂಜ್ಯರೇ! ಪಾಪರಹಿತರೇ! ಮನುಷ್ಯನು ಹೆಸರನ್ನು ಉಚ್ಚರಿಸುವ ಮಾತ್ರದಿಂದಲೇ ಪುಣ್ಯವನ್ನು ಹೊಂದಲು ಸಾಧ್ಯವಾಗುವ ಪವಿತ್ರವಾದ ವಸ್ತುವು ಮೂರು ಲೋಕಗಳಲ್ಲಿ ಯಾವುದಿದೆ? ಯಾವ ವಸ್ತುವಿಗೆ ಅಂತಹ ಪವಿತ್ರತೆಯಿದೆಯೆಂದು ಋಷಿ-ಮುನಿಗಳು ಹೇಳುತ್ತಾರೆ?"

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ನಮಸ್ಕಾರಮಾಡಿ ಹೀಗೆ ಪ್ರಶ್ನೆಯನ್ನು ಕೇಳಿದ ಸೌದಾಸನ ಹಿತಾರ್ಥವಾಗಿ ವಿದ್ವಾಂಸರಾದ ವಸಿಷ್ಠರು ಗೋವುಗಳಿಗೆ ನಮಸ್ಕರಿಸಿ ಗವೋಪನಿಷತ್ತನ್ನು (ಗೋವುಗಳ ಮಹಿಮಾರಹಸ್ಯವನ್ನು ಪ್ರಕಟಿಸುವ ವಿದ್ಯೆಯನ್ನು) ಹೇಳತೊಡಗಿದರು:

ಗಾವಃ ಸುರಭಿಗನ್ಧಿನ್ಯಸ್ತಥಾ ಗುಗ್ಗುಲುಗನ್ಧಯಃ ।
ಗಾವಃ ಪ್ರತಿಷ್ಠಾ ಭೂತಾನಾಂ ಗಾವಃ ಸ್ವಸ್ತ್ಯಯನಂ ಮಹತ್ ॥೫॥



"ಸೌದಾಸನೇ! ಗೋವುಗಳು ವಸಂತರ್ತುವಿನ ಸುಗಂಧದಿಂದ ಕೂಡಿರತಕ್ಕುವುಗಳು. ಕೆಲವು ಹಾಲುಮಡ್ಡಿವಾಸನೆಯಿಂದಲೂ ಕೂಡಿರುತ್ತವೆ. ಗೋವುಗಳೇ ಸಮಸ್ತಪ್ರಾಣಿಗಳಿಗೂ ಆಧಾರಭೂತವಾಗಿವೆ. ಪ್ರಾಣಿಗಳ ಸೌಭಾಗ್ಯಕ್ಕೆ ಗೋವುಗಳು ಆಶ್ರಯಸ್ಥಾನಗಳಾಗಿವೆ.

ಗಾವೋ ಭೂತಂ ಚ ಭವ್ಯಂ ಚ ಗಾವಃ ಪುಷ್ಟಿಃ ಸನಾತನೀ ।
ಗಾವೋ ಲಕ್ಷ್ಮ್ಯಾಸ್ತಥಾ ಮೂಲಂ ಗೋಷು ದತ್ತಂ ನ ನಶ್ಯತಿ ॥೬॥

ಗೋವುಗಳು ಭೂತ-ಭವ್ಯ-ಭವಿಷ್ಯಗಳಾಗಿವೆ. ಗೋವುಗಳು ಪ್ರಾಣಿಗಳಿಗೆ ಶಾಶ್ವತವಾದ ಪುಷ್ಟಿಯನ್ನು ಕೊಡುತ್ತವೆ. ಗೋವುಗಳು ಲಕ್ಷ್ಮಿಗೆ ಮೂಲಕಾರಣಗಳಾಗಿವೆ. (ಲಕ್ಷ್ಮಿಯ ಒಲುಮೆಯನ್ನು ಸಂಪಾದಿಸಬೇಕಾದರೆ ಗೋವುಗಳನ್ನು ಸೇವಿಸಬೇಕು.) ಗೋವುಗಳಿಗೆ ಮಾಡಿದ ಸೇವೆಯು ಎಂದಿಗೂ ವ್ಯರ್ಥವಾಗುವುದಿಲ್ಲ.

ಅನ್ನಂ ಹಿ ಪರಮಂ ಗಾವೋ ದೇವಾನಾಂ ಪರಮಂ ಹವಿಃ ।
ಸ್ವಾಹಾಕಾರವಷಟ್ಕಾರೌ ಗೋಷು ನಿತ್ಯಂ ಪ್ರತಿಷ್ಠಿತೌ ॥೭॥

ಗೋವುಗಳು ಸರ್ವೋತ್ತಮವಾದ ಅನ್ನದ ಪ್ರಾಪ್ತಿಗೆ ಕಾರಣಗಳಾಗಿವೆ. ದೇವತೆಗಳಿಗೆ ಉತ್ತಮವಾದ ಹವಿಸ್ಸನ್ನು ಕೊಡತಕ್ಕುವುಗಳಾಗಿವೆ. ಸ್ವಾಹಾಕಾರ-ವಷಟ್ಕಾರಗಳು ಗೋವುಗಳನ್ನೇ ಅವಲಂಬಿಸಿವೆ.

ಗಾವೋ ಯಜ್ಞಸ್ಯ ಹಿ ಫಲಂ ಗೋಷು ಯಜ್ಞಾಃ ಪ್ರತಿಷ್ಠಿತಾಃ ॥೮॥

ಗೋವುಗಳು ಯಜ್ಞದ ಫಲರೂಪವೂ ಆಗಿವೆ. ಗೋವುಗಳಲ್ಲಿಯೇ ಯಜ್ಞಗಳೆಲ್ಲವೂ ಪ್ರತಿಷ್ಠಿತವಾಗಿವೆ. (ಎಲ್ಲ ಯಜ್ಞಗಳೂ ಗೋವುಗಳನ್ನೇ ಆಶ್ರಯಿಸಿವೆ.)

ಸಾಯಂ ಪ್ರಾತಶ್ಚ ಸತತಂ ಹೋಮಕಾಲೇ ಮಹಾದ್ಯುತೇ ।
ಗಾವೋ ದದತಿ ವೈ ಹೌಮ್ಯಮೃಷಿಭ್ಯಃ ಪುರುಷರ್ಷಭ ॥೯॥

ಮಹಾದ್ಯುತಿಮಂತನೇ! ಪುರುಷಶ್ರೇಷ್ಠನೇ! ಗೋವುಗಳು ಬೆಳಿಗ್ಗೆ ಮತ್ತು ಸಾಯಂಕಾಲ ನಡೆಯುವ ಹೋಮದ ಸಮಯದಲ್ಲಿ ಋಷಿಗಳಿಗೆ ಹೋಮಕ್ಕೆ ಸಂಬಂಧಿಸಿದ ದಧಿ-ಕ್ಷೀರ-ಘೃತಗಳನ್ನು ಸತತವಾಗಿ ಕೊಡುತ್ತವೆ.

ಯಾನಿ ಕಾನಿ ಚ ದುರ್ಗಾಣಿ ದುಷ್ಕೃತಾನಿ ಕೃತಾನಿ ಚ ।
ತರನ್ತಿ ಚೈವ ಪಾಪ್ಮಾನಂ ಧೇನುಂ ಯೇ ದದತಿ ಪ್ರಭೋ ॥೧೦॥

ಯಾರು ಧೇನುವನ್ನು ದಾನಮಾಡುವರೋ–ಅವರು ದಾಟಲು ಅಸಾಧ್ಯವಾದ ಯಾವುದೇ ವಿಧವಾದ ಕಷ್ಟಪರಂಪರೆಗಳನ್ನಾಗಲೀ ದಾಟುತ್ತಾರೆ. ತಾವು ಹಿಂದೆ ಮಾಡಿದ ದುಷ್ಕೃತಗಳಿಂದಲೂ ಮುಕ್ತರಾಗುತ್ತಾರೆ.

ಏಕಾಂ ಚ ದಶಗುರ್ದದ್ಯಾದ್ದಶ ದದ್ಯಾಚ್ಚ ಗೋಶತೀ ।
ಶತಂ ಸಹಸ್ರಗುರ್ದದ್ಯಾತ್ಸರ್ವಂ ತುಲ್ಯಫಲಾ ಹಿ ತೇ ॥೧೧॥

ಹತ್ತು ಹಸುಗಳನ್ನಿಟ್ಟುಕೊಂಡಿರುವವನು ಒಂದು ಹಸುವನ್ನು ದಾನ ಮಾಡಬೇಕು. ನೂರು ಹಸುಗಳನ್ನಿಟ್ಟುಕೊಂಡಿರುವವನು ಹತ್ತು ಹಸುಗಳನ್ನು ದಾನಮಾಡಬೇಕು. ಸಾವಿರ ಹಸುಗಳನ್ನಿಟ್ಟುಕೊಂಡಿರುವವನು ನೂರು ಹಸುಗಳನ್ನು ದಾನಮಾಡಬೇಕು. ಈ ಮೂವರಿಗೂ ಸಮಾನವಾದ ಫಲವೇ ಸಿಕ್ಕುತ್ತದೆ.

ಅನಾಹಿತಾಗ್ನಿಃ ಶತಗುರಯಜ್ವಾ ಚ ಸಹಸ್ರಗುಃ ।
ಸಮೃದ್ಧೋ ಯಶ್ಚ ಕೀನಾಶೋ ನಾರ್ಘ್ಯಮರ್ಹನ್ತಿ ತೇ ತ್ರಯಃ ॥೧೨॥

ನೂರು ಹಸುಗಳನ್ನಿಟ್ಟುಕೊಂಡೂ ಅಗ್ನಿಹೋತ್ರವನ್ನು ಮಾಡದಿರುವವನು, ಸಾವಿರ ಹಸುಗಳನ್ನಿಟ್ಟುಕೊಂಡೂ ಸೋಮಯಾಗವನ್ನು ಮಾಡದವನು, ಸಂಪದ್ಭರಿತನಾಗಿದ್ದೂ ಕೃಪಣನಾಗಿರುವವನು–ಈ ಮೂವರೂ ಅರ್ಘ್ಯಸ್ವೀಕಾರಕ್ಕೆ (ಸಮ್ಮಾನಕ್ಕೆ) ಯೋಗ್ಯರಲ್ಲ.

ಕಪಿಲಾಂ ಯೇ ಪ್ರಯಚ್ಛನ್ತಿ ಸವತ್ಸಾಂ ಕಾಂಸ್ಯದೋಹನಾಮ್ ।
ಸುವ್ರತಾಂ ವಸ್ತ್ರಸಂವೀತಾಮುಭೌ ಲೋಕೌ ಜಯನ್ತಿ ತೇ ॥೧೩॥

ಉತ್ತಮಲಕ್ಷಣಗಳಿಂದ ಕೂಡಿರುವ, ವಸ್ತ್ರದಿಂದ ಆಚ್ಛಾದಿತವಾದ, ಕರುವಿನಿಂದ ಕೂಡಿದ ಕಪಿಲಾಧೇನುವನ್ನು ಹಾಲು ಕರೆಯುವ ಕಂಚಿನ ಪಾತ್ರೆಯೊಡನೆ ದಾನಮಾಡುವವರು ಇಹ-ಪರಗಳೆರಡನ್ನೂ ಜಯಿಸುತ್ತಾರೆ.

ಯುವಾನಮಿನ್ದ್ರಿಯೋಪೇತಂ ಶತೇನ ಶತಯೂಥಪಮ್।
ಗವೇನ್ದ್ರಂ ಬ್ರಾಹ್ಮಣೇನ್ದ್ರಾಯ ಭೂರಿಶೃಙ್ಗಮಲಂಕೃತಮ್ ॥೧೪॥
ವೃಷಭಂ ಯೇ ಪ್ರಯಚ್ಛನ್ತಿ ಶ್ರೋತ್ರಿಯಾಯ ಪರಂತಪ ।
ಐಶ್ವರ್ಯಂ ತೇಽಧಿಗಚ್ಛನ್ತಿ ಜಾಯಮಾನಾಃ ಪುನಃ ಪುನಃ ॥೧೫॥

ಪರಂತಪನೇ! ದೃಢವಾದ ಇಂದ್ರಿಯಗಳಿಂದ ಕೂಡಿದ್ದು, ನೂರು ಹಸುಗಳ ಗುಂಪಿಗೆ ಅಧಿಪತಿಯಾಗಿರುವ, ಎತ್ತರವಾದ ಕೊಂಬುಗಳುಳ್ಳ, ಅಲಂಕರಿಸಲ್ಪಟ್ಟ ಹರೆಯದ ಹೋರಿಯನ್ನು ನೂರು ಹಸುಗಳೊಡನೆ

ಶ್ರೋತ್ರಿಯನಾದ ಬ್ರಾಹ್ಮಣಶ್ರೇಷ್ಠನಿಗೆ ದಾನಮಾಡುವವರು ಈ ಪ್ರಪಂಚದಲ್ಲಿ ಹುಟ್ಟಿದಾಗಲೆಲ್ಲಾ ಐಶ್ವರ್ಯಸಂಪನ್ನರಾಗಿಯೇ ಹುಟ್ಟುತ್ತಾರೆ.

ನಾಕೀರ್ತಯಿತ್ವಾ ಗಾಃ ಸುಪ್ಯಾತ್ತಾಸಾಂ ಸಂಸ್ಮೃತ್ಯ ಚೋತ್ಪತೇತ್ ।
ಸಾಯಂಪ್ರಾತರ್ನಮಸ್ಯೇಚ್ಚ ಗಾಸ್ತತಃ ಪುಷ್ಟಿಮಾಪ್ನುಯಾತ್ ॥೧೬॥

ಗೋವುಗಳ ನಾಮಸಂಕೀರ್ತನವನ್ನು ಮಾಡದೇ ಮಲಗಬಾರದು. ಗೋವುಗಳನ್ನು ಸ್ಮರಿಸಿಕೊಂಡೇ ಪ್ರಾತಃಕಾಲದಲ್ಲಿ ಹಾಸಿಗೆಯಿಂದ ಏಳಬೇಕು. ಸಾಯಂಕಾಲ-ಪ್ರಾತಃಕಾಲಗಳೆರಡರಲ್ಲಿಯೂ ಅವುಗಳನ್ನು ನಮಸ್ಕರಿಸಬೇಕು. ಹೀಗೆ ಅನುದಿನವೂ ಮಾಡುವುದರಿಂದ ಮನುಷ್ಯನು ಬಲವನ್ನೂ ಪುಷ್ಟಿಯನ್ನೂ ಹೊಂದುತ್ತಾನೆ.

ಗವಾಂ ಮೂತ್ರಪುರೀಷಸ್ಯ ನೋದ್ವಿಜೇತ ಕಥಂಚನ ।
ನ ಚಾಸಾಂ ಮಾಂಸಮಶ್ನೀಯಾದ್ಗವಾಂ ಪುಷ್ಟಿಂ ತಥಾಪ್ನುಯಾತ್ ॥

ಗೋಮಯ-ಗೋಮೂತ್ರಗಳನ್ನು ನೋಡಿ ಯಾವುದೇ ಕಾರಣ ದಿಂದಲೂ ಉದ್ವಿಗ್ನರಾಗಬಾರದು. (ಸೇವಿಸಲು ಹೇಸಿಗೆ ಪಟ್ಟುಕೊಳ್ಳ ಬಾರದು.) ಗೋಮೂತ್ರ-ಗೋಮಯಗಳು ಪರಮಪವಿತ್ರವಾದುವುಗಳು. (ಗೋಸಂಬಂಧವಾದ ಹಾಲು-ಮೊಸರು-ತುಪ್ಪ-ಗೋಮೂತ್ರ-ಗೋಮಯ ಗಳೇ ಪಂಚಗವ್ಯಗಳೆನಿಸಿಕೊಂಡು ಇದರ ಪ್ರಾಶನದಿಂದ ಆಯುರಾರೋಗ್ಯ, ಐಶ್ವರ್ಯಗಳು ಲಭಿಸುವುವು. ಪಾಪನಿವೃತ್ತಿಯಾಗುವುದು.) ಆದರೆ ಹಸುಗಳ ಮಾಂಸವನ್ನು ಮಾತ್ರ ತಿನ್ನಲೇಬಾರದು. ಪಂಚಗವ್ಯಸೇವನೆಯಿಂದ ಮನುಷ್ಯನು ಪುಷ್ಟಿಯನ್ನು ಹೊಂದುತ್ತಾನೆ.

ಗಾಶ್ಚ ಸಂಕೀರ್ತಯೇನ್ನಿತ್ಯಂ ನಾವಮನ್ಯೇತ ತಾಸ್ತಥಾ ।
ಅನಿಷ್ಟಂ ಸ್ವಪ್ನಮಾಲಕ್ಷ್ಯ ಗಾಂ ನರಃ ಸಮ್ಪ್ರಕೀರ್ತಯೇತ್ ॥೧೮॥

ಪ್ರತಿನಿತ್ಯವೂ ಗೋವಿನ ನಾಮಸ್ಮರಣೆಯನ್ನು ಮಾಡಬೇಕು. ಅವು ಗಳನ್ನು ಯಾವಾಗಲೂ ತಿರಸ್ಕರಿಸಬಾರದು. ಮನುಷ್ಯನು ಅನಿಷ್ಟವಾದ ಸ್ವಪ್ನವನ್ನು ಕಂಡರೆ ಒಡನೆಯೇ ಗೋವನ್ನು ಸ್ಮರಿಸಿಕೊಳ್ಳಬೇಕು. ಅದರಿಂದ ಅನಿಷ್ಟಸ್ವಪ್ನದ ದೋಷವು ನಿವಾರಣೆಯಾಗುತ್ತದೆ.

ಗೋಮಯೇನ ಸದಾ ಸ್ನಾಯಾತ್ಕರೀಷೇ ಚಾಪಿ ಸಂವಿಶೇತ್ ।
ಶ್ಲೇಷ್ಮಮೂತ್ರಪುರೀಷಾಣಿ ಪ್ರತಿಘಾತಂ ಚ ವರ್ಜಯೇತ್ ॥೧೯॥

ಪ್ರತಿನಿತ್ಯವೂ ಗೋಮಯವನ್ನು (ಹಸುವಿನ ಸಗಣಿಯನ್ನು) ಶರೀರಕ್ಕೆ ಲೇಪಿಸಿಕೊಂಡು ಸ್ನಾನಮಾಡಬೇಕು. ಹಸುಗಳ ಒಣಗಿದ ಸಗಣಿಯ ಮೇಲೆ (ಬೆರಣಿಯ ಮೇಲೆ) ಕುಳಿತುಕೊಳ್ಳಬೇಕು. ಹಸುವಿನ ಸಗಣಿಯ ಮೇಲೆ ಕಫವನ್ನು ಉಗಿಯಬಾರದು. ಮೂತ್ರ-ಪುರೀಷೋತ್ಸರ್ಜನೆಗಳನ್ನು ಮಾಡಬಾರದು. ಗೋವುಗಳನ್ನು ಯಾವುದೇ ಕಾರಣದಿಂದಲೂ ಪ್ರಹರಿಸಬಾರದು.

ಸಾರ್ದ್ರೇ ಚರ್ಮಣಿ ಭುಞ್ಜೀತ ನಿರೀಕ್ಷೇದ್ವಾರುಣೀಂ ದಿಶಮ್ ।
ವಾಗ್ಯತಃ ಸರ್ಪಿಷಾ ಭೂಮೌ ಗವಾಂ ಪುಷ್ಟಿಂ ಸದಾಶ್ನುತೇ ॥೨೦॥

ಜಲಪ್ರೋಕ್ಷಣೆಯಿಂದ ಆರ್ದ್ರವಾಗಿರುವ ಗೋಚರ್ಮದ ಮೇಲೆ ಪಶ್ಚಿಮಾಭಿಮುಖವಾಗಿ ಕುಳಿತು ಮೌನಿಯಾಗಿ ಗೋಘೃತದಿಂದ ಯುಕ್ತವಾದ ಅನ್ನವನ್ನು ನೆಲದ ಮೇಲೆ ಬಡಿಸಿಕೊಂಡು ಊಟಮಾಡಬೇಕು. ಇದನ್ನು ಗೋಸಮೃದ್ಧಿಕರವಾದ ವ್ರತವೆಂದು ಕರೆಯುತ್ತಾರೆ.

ಘೃತೇನ ಜುಹುಯಾದಗ್ನಿಂ ಘೃತೇನ ಸ್ವಸ್ತಿ ವಾಚಯೇತ್ ।
ಘೃತಂ ದದ್ಯಾದ್ಘೃತಂ ಪ್ರಾಶೇದ್ಗವಾಂ ಪುಷ್ಟಿಂ ಸದಾಶ್ನುತೇ ॥೨೧॥

ಅಗ್ನಿಯಲ್ಲಿ ತುಪ್ಪದಿಂದ ಹೋಮಮಾಡಬೇಕು. ತುಪ್ಪವನ್ನು ಕೈಯಲ್ಲಿಟ್ಟುಕೊಂಡು ಸ್ವಸ್ತಿವಾಚನವನ್ನು ಮಾಡಬೇಕು. ತುಪ್ಪವನ್ನು ದಾನವಾಗಿ ಕೊಡಬೇಕು. ತಾನೂ ಕೂಡ ಘೃತವನ್ನು ಪ್ರಾಶನಮಾಡಬೇಕು. ಹೀಗೆ ಮಾಡುವವನು ಗೋವುಗಳ ಸಮೃದ್ಧಿಯನ್ನು ಸದಾಕಾಲಗಳಲ್ಲಿಯೂ ಹೊಂದಿರುತ್ತಾನೆ. (ಅಂತಹವನ ಬಳಿಯಲ್ಲಿ ಹೃಷ್ಟ-ಪುಷ್ಟವಾದ ಗೋವುಗಳು ಸದಾ ಇರುತ್ತವೆ.)

ಗೋಮತ್ಯಾ ವಿದ್ಯಯಾ ಧೇನುಂ ತಿಲಾನಾಮಭಿಮನ್ತ್ರ್ಯ ಯಃ ।
ಸರ್ವರತ್ನಮಯೀಂ ದದ್ಯಾನ್ನ ಸ ಶೋಚೇತ್ಕೃತಾಕೃತೇ ॥೨೨॥

ರತ್ನಗಳಿಂದ ಯುಕ್ತವಾದ ತಿಲಧೇನುವನ್ನು **‘ಗೋಮಾಗ್ಂ ಅಗ್ನೇಽವಿಮಾಗ್ಂ ಅಶ್ವೀ’**–ಎಂಬ ಗೋಮತೀವಿದ್ಯಾಮಂತ್ರದಿಂದ ಅಭಿ

ಮಂತ್ರಿಸಿ ದಾನಮಾಡುವವನು–ಹಿಂದೆ ಮಾಡಿದ ಮತ್ತು ಮುಂದೆ ಮಾಡುವ ಕರ್ಮಗಳ ವಿಷಯವಾಗಿ ಶೋಕಪಡಬೇಕಾಗುವುದಿಲ್ಲ.

ಗಾವೋ ಮಾಮುಪತಿಷ್ಠನ್ತು ಹೇಮಶೃಙ್ಗ್ಯಃ ಪಯೋಮುಚಃ ।
ಸುರಭ್ಯಃ ಸೌರಭೇಯ್ಯಶ್ಚ ಸರಿತಃ ಸಾಗರಂ ಯಥಾ ॥೨೩॥

"ಯಾವ ರೀತಿಯಲ್ಲಿ ನದಿಗಳು ಸಮುದ್ರದ ಬಳಿಗೆ ಹೋಗುವುವೋ–ಅದೇ ರೀತಿಯಲ್ಲಿ ಸುವರ್ಣಮಯವಾದ ಕೊಂಬುಗಳುಳ್ಳ, ಹಾಲುಕೊಡುವ ಸುರಭೀ (ಕಪಿಲಾ) ಧೇನುಗಳೂ, ಸೌರಭೇಯೀಧೇನುಗಳೂ ನನ್ನ ಬಳಿಗೆ ಬರಲಿ.

ಗಾ ವೈ ಪಶ್ಯಾಮ್ಯಹಂ ನಿತ್ಯಂ
ಗಾವಃ ಪಶ್ಯನ್ತು ಮಾಂ ಸದಾ ।
ಗಾವೋಽಸ್ಮಾಕಂ ವಯಂ ತಾಸಾಂ
ಯತೋ ಗಾವಸ್ತತೋ ವಯಮ್ ॥೨೪॥

ನಾನು ಪ್ರತಿನಿತ್ಯವೂ ಗೋವುಗಳನ್ನು ನೋಡುತ್ತೇನೆ. ಗೋವುಗಳೂ ನನ್ನನ್ನು ಅನುದಿನವೂ ಕೃಪಾದೃಷ್ಟಿಯಿಂದ ನೋಡಲಿ. ಹಸುಗಳೆಲ್ಲವೂ ನಮ್ಮವೇ ಆಗಿವೆ. ನಾವೂ ಹಸುಗಳಿಗೆ ಸೇರಿದವರಾಗಿದ್ದೇವೆ. ಗೋವುಗಳು ಎಲ್ಲಿರುವುವೋ ಅಲ್ಲಿಯೇ ನಾವೂ ಇರುವೆವು."

ಏವಂ ರಾತ್ರೌ ದಿವಾ ಚಾಪಿ ಸಮೇಷು ವಿಷಮೇಷು ಚ ।
ಮಹಾಭಯೇಷು ಚ ನರಃ ಕೀರ್ತಯನ್ಮುಚ್ಯತೇ ಭಯಾತ್ ॥೨೫॥

ಹೀಗೆ ಯಾವ ಮನುಷ್ಯನು ಹಗಲಿನಲ್ಲಿಯೂ-ರಾತ್ರಿಯಲ್ಲಿಯೂ, ಕಷ್ಟ-ಸುಖಗಳು ಸಮವಾಗಿದ್ದಾಗಲೂ, ಕಷ್ಟಗಳೇ ಬಹಳವಾಗಿದ್ದಾಗಲೂ ಮತ್ತು ಮಹಾಭಯವುಂಟಾದ ಸಮಯದಲ್ಲಿಯೂ ಗೋಮಾತೆಯ ಸಂಕೀರ್ತನಮಾಡುವನೋ–ಅಂತಹ ಮನುಷ್ಯನು ನಾನಾವಿಧವಾದ ಕಷ್ಟಗಳಿಂದಲೂ ಮತ್ತು ಭಯಗಳಿಂದಲೂ ವಿಮುಕ್ತನಾಗುತ್ತಾನೆ."

ಎ೮ನೆಯ ಅಧ್ಯಾಯವು ಮುಗಿಯಿತು.

೭೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ತಪಸ್ಸಿನ ಮೂಲಕವಾಗಿ ಗೋವುಗಳಿಂದ ಅಭೀಷ್ಟವಾದ ವರಗಳ ಪ್ರಾಪ್ತಿ : ಗೋದಾನದ ಮಹಿಮೆ : ವಿಭಿನ್ನಪ್ರಕಾರದ ಗೋವುಗಳ ದಾನಗಳಿಂದ ಲಭಿಸುವ ವಿಭಿನ್ನಪ್ರಕಾರದ ಲೋಕಗಳ ವಿವರಣೆ

ವಸಿಷ್ಠರು ಸೌದಾಸನಿಗೆ ಹೇಳುತ್ತಾರೆ :

ಶತಂ ವರ್ಷಸಹಸ್ರಾಣಾಂ ತಪಸ್ತಪ್ತಂ ಸುದುಷ್ಕರಮ್ ।
ಗೋಭಿಃ ಪೂರ್ವಂ ವಿಸೃಷ್ಟಾಭಿರ್ಗಚ್ಛೇಮ ಶ್ರೇಷ್ಠತಾಮಿತಿ ॥೧॥


ಲೋಕೇಽಸ್ಮಿನ್ದಕ್ಷಿಣಾನಾಂ ಚ ಸರ್ವಾಸಾಂ ವಯಮುತ್ತಮಾಃ ।
ಭವೇಮ ನ ಚ ಲಿಪ್ಯೇಮ ದೋಷೇಣೇತಿ ಪರಂತಪ ॥೨॥

ಅಸ್ಮತ್ಪುರೀಷಸ್ನಾನೇನ ಜನಃ ಪೂಯೇತ ಸರ್ವದಾ ।
ಶಕೃತಾ ಚ ಪವಿತ್ರಾರ್ಥಂ ಕುರ್ವೀರನ್ದೇವಮಾನುಷಾಃ ॥೩॥

ತಥಾ ಸರ್ವಾಣಿ ಭೂತಾನಿ ಸ್ಥಾವರಾಣಿ ಚರಾಣಿ ಚ ।
ಪ್ರದಾತಾರಶ್ಚ ಲೋಕಾನ್ನೋ ಗಚ್ಛೇಯುರಿತಿ ಮಾನದ ॥೪॥

“ಪರಂತಪನೇ! ಪೂರ್ವಕಾಲದಲ್ಲಿ ಗೋವುಗಳ ಸೃಷ್ಟಿಯಾದನಂತರ ಅವುಗಳೆಲ್ಲವೂ ಕಲೆತು ಒಂದು ಲಕ್ಷ ವರ್ಷಗಳ ಪರ್ಯಂತವಾಗಿ ಬಹಳ ದುಷ್ಕರವಾದ ತಪಸ್ಸನ್ನು ಮಾಡಿದುವು. ಎಲ್ಲ ಪ್ರಾಣಿಗಳಿಗಿಂತಲೂ ಶ್ರೇಷ್ಠತೆಯನ್ನು ಪಡೆಯಬೇಕೆಂಬುದೇ ತಪಸ್ಸಿನ ಉದ್ದೇಶವಾಗಿದ್ದಿತು. ‘ಲೋಕದಲ್ಲಿ ಪ್ರಚಲಿತವಾಗಿರುವ ಎಲ್ಲ ವಿಧವಾದ ದಕ್ಷಿಣಾವಸ್ತುಗಳಲ್ಲಿ ನಾವೇ ಶ್ರೇಷ್ಠರೆಂದು ಪರಿಗಣಿತರಾಗಬೇಕು. ನಾವು ಯಾವುದೇ ದೋಷದಿಂದಲೂ ಲಿಪ್ತರಾಗಬಾರದು. ನಮ್ಮ ಸಗಣಿಯನ್ನು ಶರೀರಕ್ಕೆ ಹಚ್ಚಿಕೊಂಡು ಸ್ನಾನ ಮಾಡುವುದರಿಂದ ಜನರು ಪವಿತ್ರರಾಗಬೇಕು. ದೇವತೆಗಳೂ ಮತ್ತು ಮನುಷ್ಯರೂ ಪವಿತ್ರತೆಗಾಗಿ ಗೋಮಯವನ್ನು ಉಪಯೋಗಿಸಬೇಕು. ಹಾಗೆಯೇ ಸ್ಥಾವರ-ಜಂಗಮಪ್ರಾಣಿಗಳೆಲ್ಲವೂ ಗೋಮಯದಿಂದ ಪರಿಶುದ್ಧವಾಗಬೇಕು. ನಮ್ಮನ್ನು ಸತ್ಪಾತ್ರರಲ್ಲಿ ದಾನಮಾಡುವವರು ನಮ್ಮ

ಲೋಕಗಳಿಗೇ (ಗೋಲೋಕಗಳಿಗೆ) ಹೋಗುವಂತಾಗಬೇಕು.'–ಇವೆಲ್ಲವೂ ಗೋವುಗಳ ತಪಸ್ಸಿನ ಉದ್ದೇಶಗಳಾಗಿದ್ದುವು.



ತಪಸ್ಸಿನ ಕಡೆಯಲ್ಲಿ ಪ್ರಭುವಾದ ಬ್ರಹ್ಮನೇ ಪ್ರತ್ಯಕ್ಷನಾಗಿ ಬಂದು 'ನಿಮ್ಮ ಆಶಯದಂತೆ ಎಲ್ಲವೂ ನೆರವೇರಲಿ. ನೀವು ಸಮಸ್ತಲೋಕಗಳನ್ನೂ ಉದ್ಧರಿಸಿರಿ'–ಎಂದು ಗೋವುಗಳಿಗೆ ವರವನ್ನಿತ್ತನು.

ತಮ್ಮ ಸಮಸ್ತಕಾಮನೆಗಳೂ ಬ್ರಹ್ಮನಿತ್ತ ವರದಿಂದ ಲಭಿಸಿದನಂತರ ಗೋವುಗಳು ತಪಸ್ಸಿನಿಂದ ಮೇಲೆದ್ದುವು. ಗೋವುಗಳು ಭೂತ-ಭವಿಷ್ಯದ್ವರ್ತಮಾನಗಳೆಂಬ ಮೂರು ಕಾಲಗಳಿಗೂ ಮಾತೃಸ್ವರೂಪ ಗಳಾಗಿವೆ.

ಪ್ರಾತರ್ನಮಸ್ಯಾಸ್ತಾ ಗಾವಸ್ತತಃ ಪುಷ್ಟಿಮವಾಪ್ನುಯಾತ್ ॥೬॥

ಆದುದರಿಂದ ಗೋವುಗಳನ್ನು ಪ್ರಾತಃಕಾಲದಲ್ಲಿ ನಮಸ್ಕರಿಸಬೇಕು. ತತ್ಫಲವಾಗಿ ಮನುಷ್ಯನು ಪುಷ್ಟಿಯನ್ನು ಹೊಂದುತ್ತಾನೆ.

ತಪಸ್ಸಿನ ಕಡೆಯಲ್ಲಿ ಗೋವುಗಳು ಬ್ರಹ್ಮನ ವರದಿಂದಾಗಿ ಸಂಪೂರ್ಣ ಜಗತ್ತಿಗೂ ಆಶ್ರಯಭೂತಗಳಾದುವು. ಆದುದರಿಂದ ಮಹಾಭಾಗ್ಯಶಾಲಿಗಳಾದ ಗೋವುಗಳು ಪರಮಪವಿತ್ರವಾದುವುಗಳೆಂದು ಹೇಳುತ್ತಾರೆ. ಅದೇ ರೀತಿಯಲ್ಲಿ ಗೋವುಗಳು ಸಕಲಪ್ರಾಣಿಗಳ ತಲೆಗಳನ್ನೂ ಮೆಟ್ಟಿ ನಿಂತಿವೆ. (ಎಲ್ಲ ಪ್ರಾಣಿಗಳಿಗಿಂತಲೂ ಶ್ರೇಷ್ಠವಾದುವುಗಳೂ, ವಂದನೀಯವಾದುವುಗಳೂ ಆಗಿವೆ.)

ಸಮಾನವತ್ಸಾಂ ಕಪಿಲಾಂ ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ಬ್ರಹ್ಮಲೋಕೇ ಮಹೀಯತೇ ॥೮॥

ಹಾಲುಕೊಡುವ, ಒಳ್ಳೆಯ ನಿಷ್ಠೆಯಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ, ತನಗೆ ಸಮಾನವಾದ ಕರುವಿನಿಂದ ಕೂಡಿದ ಕಪಿಲಾಧೇನುವನ್ನು ದಾನಮಾಡುವವನು ಬ್ರಹ್ಮಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಲೋಹಿತಾಂ ತುಲ್ಯವತ್ಸಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್।
ಸುವ್ರತಾಂ ವಸ್ತ್ರಸಂವೀತಾಂ ಸೂರ್ಯಲೋಕೇ ಮಹೀಯತೇ ॥೯॥

ಹಾಲುಕೊಡುವ, ಒಳ್ಳೆಯ ನಿಷ್ಠೆಯಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ, ತನಗೆ ಅನುಗುಣವಾದ ಕರುವಿನಿಂದ ಕೂಡಿದ ಕೆಂಪು ಹಸುವನ್ನು ದಾನಕೊಡುವವನು ಸೂರ್ಯಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಸಮಾನವತ್ಸಾಂ ಶಬಲಾಂ ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಂ ಸೋಮಲೋಕೇ ಮಹೀಯತೇ ॥೧೦॥

ಹಾಲುಕೊಡುವ, ಒಳ್ಳೆಯ ನಿಷ್ಠೆಯಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ, ತನಗೆ ಅನುಗುಣವಾದ ಕರುವಿನಿಂದ ಕೂಡಿದ ಅಳಗ (ಮಿಶ್ರವರ್ಣದ) ಹಸುವನ್ನು ದಾನಮಾಡುವವನು ಚಂದ್ರಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಸಮಾನವತ್ಸಾಂ ಶ್ವೇತಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಮಿನ್ದ್ರಲೋಕೇ ಮಹೀಯತೇ ॥೧೧॥

ಹಾಲುಕೊಡುವ, ಒಳ್ಳೆಯ ನಿಷ್ಠೆಯಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ, ತನಗೆ ಸಮಾನವಾದ ಕರುವಿನಿಂದ ಕೂಡಿದ ಬಿಳಿಯ ಹಸುವನ್ನು ದಾನಮಾಡುವವನು ಇಂದ್ರಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಸಮಾನವತ್ಸಾಂ ಕೃಷ್ಣಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್ ।
ಸುವ್ರತಾಂ ವಸ್ತ್ರಸಂವೀತಾಮಗ್ನಿಲೋಕೇ ಮಹೀಯತೇ ॥೧೨॥

ಹಾಲುಕೊಡುವ, ಒಳ್ಳೆಯ ನಿಷ್ಠೆಯಿಂದ ಕೂಡಿದ, ವಸ್ತ್ರದಿಂದ ಹೊದ್ದಿಸಲ್ಪಟ್ಟ, ತನಗೆ ಸದೃಶವಾದ ಕರುವಿನಿಂದ ಕೂಡಿದ ಕಪ್ಪು ಹಸುವನ್ನು ದಾನಮಾಡುವವನು ಅಗ್ನಿಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಸಮಾನವತ್ಸಾಂ ಧೂಮ್ರಾಂ ತು ಧೇನುಂ ದತ್ತ್ವಾ ಪಯಸ್ವಿನೀಮ್।
ಸುವ್ರತಾಂ ವಸ್ತ್ರಸಂವೀತಾಂ ಯಾಮ್ಯಲೋಕೇ ಮಹೀಯತೇ ॥೧೩॥

ಹಾಲುಕೊಡುವ, ಒಳ್ಳೆಯ ನಿಷ್ಠೆಯಿಂದ ಕೂಡಿದ, ವಸ್ತ್ರದಿಂದ ಹೊದ್ದಿಸಲ್ಪಟ್ಟ, ತನಗೆ ಅನುಗುಣವಾದ ಕರುವಿನಿಂದ ಯುಕ್ತವಾದ, ಧೂಮ್ರವರ್ಣದ ಹಸುವನ್ನು ದಾನಮಾಡುವವನು ಯಮನ ಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಅಪಾಂ ಫೇನಸವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ವಾರುಣಂ ಲೋಕಮಾಪ್ನುತೇ ॥೧೪॥

ನೀರಿನ ನೊರೆಯಂತೆ ಬಣ್ಣವುಳ್ಳ, ಕರುವಿನಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ ಹಸುವನ್ನು ಕರೆಯುವ ಕಂಚಿನ ಪಾತ್ರೆಯೊಡನೆ ದಾನ ಮಾಡುವವನು ವರುಣನ ಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ವಾತರೇಣುಸವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ವಾಯುಲೋಕೇ ಮಹೀಯತೇ ॥೧೫॥

ಗಾಳಿಯಿಂದ ಎಬ್ಬಿಸಲ್ಪಟ್ಟ ಧೂಳಿನಂತೆ ಬಣ್ಣವಿರುವ (ಕಂದು ಬಣ್ಣದ), ಕರುವಿನಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ ಹಸುವನ್ನು ಕರೆಯುವ ಕಂಚಿನ ಪಾತ್ರೆಯೊಡನೆ ದಾನಮಾಡುವವನು ವಾಯುಲೋಕದಲ್ಲಿ ಸಮ್ಮಾನಿತ ನಾಗುತ್ತಾನೆ.

ಹಿರಣ್ಯವರ್ಣಾಂ ಪಿಙ್ಗಾಕ್ಷೀಂ ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ಕೌಬೇರಂ ಲೋಕಮಶ್ನುತೇ ॥೧೬॥

ಪಿಂಗಲವರ್ಣದ ಕಣ್ಣುಗ್ಗಳುಳ್ಳ, ಕರುವಿನಿಂದ ಯುಕ್ತವಾದ, ಬಟ್ಟೆಯಿಂದ ಹೊದ್ದಿಸಲ್ಪಟ್ಟ, ಸುವರ್ಣವರ್ಣದ ಹಸುವನ್ನು ಕರೆಯುವ ಕಂಚಿನ ಪಾತ್ರೆಯೊಡನೆ ದಾನಮಾಡುವವನು ಕುಬೇರನ ಲೋಕಕ್ಕೆ ಹೋಗುತ್ತಾನೆ.

ಪಲಾಲಧೂಮ್ರವರ್ಣಾಂ ತು ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ಪಿತೃಲೋಕೇ ಮಹೀಯತೇ ॥೧೭॥

ಉರಿಯುತ್ತಿರುವ ಹುಲ್ಲಿನ ಧೂಮಕ್ಕೆ ಸಮಾನವಾದ ಬಣ್ಣವುಳ್ಳ, ಕರುವಿನಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ ಹಸುವನ್ನು ಕರೆಯುವ ಕಂಚಿನ ಪಾತ್ರೆಯೊಡನೆ ದಾನಮಾಡುವವನು ಪಿತೃಗಳ ಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಸವತ್ಸಾಂ ಪೀವರೀಂ ದತ್ತ್ವಾ ದೃತಿಕಣ್ಠಾಮಲಂಕೃತಾಮ್।
ವೈಶ್ವದೇವಮಸಮ್ಬಾಧಂ ಸ್ಥಾನಂ ಶ್ರೇಷ್ಠಂ ಪ್ರಪದ್ಯತೇ ॥೧೮॥

ಗಂಗೆದೊಗಲಿನ ಕಂಠದಿಂದ ಕೂಡಿರುವ, ಕರುವಿನಿಂದ ಯುಕ್ತವಾದ, ಆಭರಣಗಳಿಂದ ಸಮಲಂಕೃತವಾದ, ಹೃಷ್ಟ-ಪುಷ್ಟವಾಗಿರುವ ಹಸುವನ್ನು ದಾನಮಾಡುವವನು ಯಾವ ವಿಧವಾದ ಈತಿ-ಬಾಧೆಗಳೂ ಇಲ್ಲದ ವಿಶ್ವೇದೇವತೆಗಳ ಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾನೆ.

ಸಮಾನವತ್ಸಾಂ ಗೌರೀಂ ತು ಧೇನುಂ ದತ್ತ್ವಾ ಪಯಸ್ವಿನೀಮ್
ಸುವ್ರತಾಂ ವಸ್ತ್ರಸಂವೀತಾಂ ವಸೂನಾಂ ಲೋಕಮಾಪ್ನುಯಾತ್ ॥೧೯॥

ಹಾಲುಕೊಡುವ, ತನಗೆ ಸಮಾನವಾದ ಕರುವನ್ನು ಹೊಂದಿರುವ, ಒಳ್ಳೆಯ ನಿಷ್ಠೆಯಿಂದಿರುವ, ವಸ್ತ್ರದಿಂದ ಆಚ್ಛಾದಿತವಾದ ಬಿಳಿಯಬಣ್ಣದ ಹಸುವನ್ನು ದಾನಮಾಡುವವನು ವಸುಗಳ ಲೋಕವನ್ನು ಹೊಂದುತ್ತಾನೆ.

ಪಾಣ್ಡುಕಮ್ಬಲವರ್ಣಾಭಾಂ ಸವತ್ಸಾಂ ಕಾಂಸ್ಯದೋಹನಾಮ್ ।
ಪ್ರದಾಯ ವಸ್ತ್ರಸಂವೀತಾಂ ಸಾಧ್ಯಾನಾಂ ಲೋಕಮಾಪ್ನುತೇ ॥೨೦॥

ಬಿಳಿಯ ಕಂಬಳಿಯಂತೆ ಬಣ್ಣವುಳ್ಳ, ಕರುವಿನಿಂದ ಕೂಡಿದ, ವಸ್ತ್ರದಿಂದ ಆಚ್ಛಾದಿತವಾದ ಹಸುವನ್ನು, ಕರೆಯುವ ಕಂಚಿನ ಪಾತ್ರೆಯೊಡನೆ ದಾನಮಾಡುವವನು ಸಾಧ್ಯರ ಲೋಕವನ್ನು ಹೊಂದುತ್ತಾನೆ.

ವೈರಾಟಪೃಷ್ಠಮುಕ್ಷಾಣಂ ಸರ್ವರತ್ನೈರಲಂಕೃತಮ್ ।
ಪ್ರದದನ್ಮರುತಾಂ ಲೋಕಾನ್ಸ ರಾಜನ್ಪ್ರತಿಪದ್ಯತೇ ॥೨೧॥

ವಿಶಾಲವಾದ ಪೃಷ್ಠಭಾಗವಿರುವ ಎತ್ತನ್ನು, ಸಕಲವಿಧವಾದ ರತ್ನಗಳಿಂದಲೂ ಅಲಂಕರಿಸಿ ಬ್ರಾಹ್ಮಣನಿಗೆ ದಾನಮಾಡುವವನು ಮರುತ್ತುಗಳ ಲೋಕಕ್ಕೆ ಹೋಗುತ್ತಾನೆ.

ವಯೋಪಪನ್ನಂ ಲೀಲಾಙ್ಗಂ ಸರ್ವರತ್ನಸಮನ್ವಿತಮ್ ।
ಗನ್ಧರ್ವಾಪ್ಸರಸಾಂ ಲೋಕಾನ್ದತ್ತ್ವಾ ಪ್ರಾಪ್ನೋತಿ ಮಾನವಃ ॥೨೨॥

ತಾರುಣ್ಯದಿಂದಲೂ, ಸುಂದರವಾದ ಅಂಗಗಳಿಂದಲೂ ಕೂಡಿರುವ, ಸಕಲವಿಧವಾದ ರತ್ನಗಳಿಂದಲೂ ಸಮಲಂಕೃತವಾಗಿರುವ ಎತ್ತನ್ನು ದಾನ ಮಾಡುವವನು ಗಂಧರ್ವರ ಮತ್ತು ಅಪ್ಸರೆಯರ ಲೋಕಗಳನ್ನು ಹೊಂದುತ್ತಾನೆ.

ದೃತಿಕಣ್ಠಮನಡ್ವಾಹಂ ಸರ್ವರತ್ನೈರಲಂಕೃತಮ್ ।
ದತ್ತ್ವಾ ಪ್ರಜಾಪತೇರ್ಲೋಕಾನ್ವಿಶೋಕಃ ಪ್ರತಿಪದ್ಯತೇ ॥೨೩॥

ಗಂಗೆದೊಗಲಿನ ಕುತ್ತಿಗೆಯಿಂದ ಕೂಡಿರುವ, ಸರ್ವರತ್ನಗಳಿಂದಲೂ ಸಮಲಂಕೃತವಾದ ಎತ್ತನ್ನು ದಾನಮಾಡುವವನು ಶೋಕರಹಿತನಾಗಿ ಪ್ರಜಾಪತಿಯ ಲೋಕಗಳನ್ನು ಹೊಂದುತ್ತಾನೆ.

ಗೋಪ್ರದಾನರತೋ ಯಾತಿ ಭಿತ್ತ್ವಾ ಜಲದಸಂಚಯಾನ್ ।
ವಿಮಾನೇನಾರ್ಕವರ್ಣೇನ ದಿವಿ ರಾಜನ್ವಿರಾಜತೇ ॥೨೪॥

ಸೌದಾಸರಾಜನೇ! ಯಾವಾಗಲೂ ಗೋದಾನದಲ್ಲಿಯೇ ನಿರತನಾಗಿರ ತಕ್ಕವನು ಸೂರ್ಯನ ದೇದೀಪ್ಯಮಾನವಾದ ವರ್ಣದಿಂದ ಕೂಡಿದ

ವಿಮಾನದಲ್ಲಿ ಕುಳಿತು ಮೇಘಮಂಡಲವನ್ನು ಭೇದಿಸಿಕೊಂಡು ಸ್ವರ್ಗಕ್ಕೆ ಹೋಗಿ ಅಲ್ಲಿ ವಿರಾಜಿಸುತ್ತಾನೆ.

ತಂ ಚಾರುವೇಷಾಃ ಸುಶ್ರೋಣ್ಯಃ ಸಹಸ್ರಂ ಸುರಯೋಷಿತಃ ।
ರಮಯನ್ತಿ ನರಶ್ರೇಷ್ಠಂ ಗೋಪ್ರದಾನರತಂ ನರಮ್ ॥೨೫॥

ಗೋದಾನದಲ್ಲಿಯೇ ನಿರತನಾಗಿದ್ದು ಅವಸಾನಾನಂತರದಲ್ಲಿ ವಿಮಾನಾರೂಢನಾಗಿ ಸ್ವರ್ಗಕ್ಕೆ ಹೋಗುವ ಆ ಮನುಷ್ಯನನ್ನು ಸುಂದರವಾದ ವೇಷಗಳನ್ನು ಧರಿಸಿರುವ, ಮನೋಹರವಾದ ನಿತಂಬಗಳನ್ನು ಹೊಂದಿರುವ ಸಾವಿರಾರು ದೇವಾಂಗನೆಯರು ಸೇವೆಯಿಂದ ಸಂತೋಷಪಡಿಸುತ್ತಾರೆ.

ವೀಣಾನಾಂ ವಲ್ಲಕೀನಾಂ ಚ ನೂಪುರಾಣಾಂ ಚ ಶಿಞ್ಜಿತೈಃ ।
ಹಾಸೈಶ್ಚ ಹರಿಣಾಕ್ಷೀಣಾಂ ಸುಪ್ತಃ ಸ ಪ್ರತಿಬೋಧ್ಯತೇ ॥೨೬॥

ಗೋದಾನನಿರತನು ಸ್ವರ್ಗದಲ್ಲಿ ಮಲಗಿ ನಿದ್ರಿಸಿದಾಗ ವೀಣೆಗಳ, ವಲ್ಲಕಿಗಳ (ವೀಣೆಯ ಪ್ರಭೇದ) ಮಧುರಸ್ವರಗಳಿಂದಲೂ, ಅಪ್ಸರಸ್ತ್ರೀಯರ ಕಾಲಂದಿಗೆಗಳ ಝಣ-ಝಣಾತ್ಕಾರಗಳಿಂದಲೂ, ಮೃಗನೇತ್ರೆಯರಾದ ಯುವತಿಯರ ಹಾಸ-ಪರಿಹಾಸಗಳಿಂದಲೂ ಎಚ್ಚರಗೊಳ್ಳುತ್ತಾನೆ.

ಯಾವನ್ತಿ ರೋಮಾಣಿ ಭವನ್ತಿ ಧೇನ್ವಾ-
ಸ್ತಾವನ್ತಿ ವರ್ಷಾ ಮಹೀಯತೇ ಸಃ ।
ಸ್ವರ್ಗಚ್ಯುತಶ್ಚಾಪಿ ತತೋ ನೃಲೋಕೇ
ಪ್ರಸೂಯತೇ ವೈ ವಿಪುಲೇ ಗೃಹೇ ಸಃ ॥೨೭॥

ದಾನಮಾಡಿದ ಹಸುವಿನ ಶರೀರದಲ್ಲಿ ಎಷ್ಟು ರೋಮಗಳಿರುವುವೋ ಅಷ್ಟು ವರ್ಷಗಳು ಗೋದಾನಿಯು ಸ್ವರ್ಗಲೋಕದಲ್ಲಿ ಸಮ್ಮಾನಿತನಾಗಿರುತ್ತಾನೆ. ಅನಂತರ ಅವನು ಸ್ವರ್ಗದಿಂದ ಚ್ಯುತನಾದರೂ ಮನುಷ್ಯಲೋಕದಲ್ಲಿ ವಿಪುಲವಾದ ಸಂಪತ್ತಿನಿಂದ ಕೂಡಿರುವ ಮನೆಯಲ್ಲಿಯೇ ಹುಟ್ಟುತ್ತಾನೆ."

ಳ೯ನೆಯ ಅಧ್ಯಾಯವು ಮುಗಿಯಿತು

೮೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೋವುಗಳ ಮತ್ತು ಗೋದಾನದ ಮಹಿಮೆ

ವಸಿಷ್ಠರು ಸೌದಾಸನಿಗೆ ಹೇಳುತ್ತಾರೆ:

“ಸೌದಾಸನೇ! ಮನುಷ್ಯನು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಆಚಮನಮಾಡಿ ಈ ಶ್ಲೋಕಗಳನ್ನು ಜಪಿಸಬೇಕು:

ಘೃತಕ್ಷೀರಪ್ರದಾ ಗಾವೋ ಘೃತಯೋನ್ಯೋ ಘೃತೋದ್ಭವಾಃ ।
ಘೃತನದ್ಯೋ ಘೃತಾವರ್ತಾಸ್ತಾ ಮೇ ಸಂತು ಸದಾ ಗೃಹೇ ॥೧॥

ಘೃತಂ ಮೇ ಹೃದಯೇ ನಿತ್ಯಂ ಘೃತಂ ನಾಭ್ಯಾಂ ಪ್ರತಿಷ್ಠಿತಮ್ ।
ಘೃತಂ ಸರ್ವೇಷು ಗಾತ್ರೇಷು ಘೃತಂ ಮೇ ಮನಸಿ ಸ್ಥಿತಮ್ ॥೨॥

ಗಾವೋ ಮಮಾಗ್ರತೋ ನಿತ್ಯಂ ಗಾವಃ ಪೃಷ್ಠತ ಏವ ಚ ।
ಗಾವೋ ಮೇ ಸರ್ವತಶ್ಚೈವ ಗವಾಂ ಮಧ್ಯೇ ವಸಾಮ್ಯಹಮ್ ॥೩॥

ಇತ್ಯಾಚಮ್ಯ ಜಪೇತ್ಸಾಯಂ ಪ್ರಾತಶ್ಚ ಪುರುಷಃ ಸದಾ ।
ಯದಹ್ನಾ ಕುರುತೇ ಪಾಪಂ ತಸ್ಮಾತ್ಸ ಪರಿಮುಚ್ಯತೇ ॥೪॥

“ಗೋವುಗಳು ಹಾಲು-ತುಪ್ಪಗಳನ್ನು ಕೊಡತಕ್ಕುವುಗಳು. ತುಪ್ಪಕ್ಕೆ ಉತ್ಪತ್ತಿಸ್ಥಾನಗಳಾಗಿವೆ. ತುಪ್ಪವನ್ನು ಉತ್ಪಾದಿಸತಕ್ಕುವುಗಳು. ತುಪ್ಪದ ನದಿಯ ರೂಪಗಳಲ್ಲಿರತಕ್ಕುವುಗಳು. ತುಪ್ಪದ ಸುಳಿಯ ರೂಪದಲ್ಲಿರತಕ್ಕುವುಗಳು. ಅವು ಯಾವಾಗಲೂ ನನ್ನ ಮನೆಯಲ್ಲಿರಲಿ. ಘೃತವು ನಿತ್ಯವೂ ನನ್ನ ಹೃದಯದಲ್ಲಿರಲಿ. ಘೃತವು ನನ್ನ ನಾಭಿಯಲ್ಲಿ ಪ್ರತಿಷ್ಠಿತವಾಗಲಿ. ಘೃತವು ನನ್ನೆಲ್ಲ ಅವಯವಗಳಲ್ಲಿಯೂ ವ್ಯಾಪ್ತವಾಗಲಿ. ಘೃತವು ನನ್ನ ಮನಸ್ಸಿನಲ್ಲಿರಲಿ. ಗೋವುಗಳು ನಿತ್ಯವೂ ನನ್ನ ಮುಂಭಾಗದಲ್ಲಿರಲಿ. ಹಿಂಭಾಗದಲ್ಲಿಯೂ ಇರಲಿ. ನನ್ನ ಸುತ್ತಲೂ ಇರಲಿ. ಗೋವುಗಳ ಮಧ್ಯದಲ್ಲಿಯೇ ನಾನು ವಾಸಮಾಡುತ್ತೇನೆ.’–ಹೀಗೆ ಸಾಯಂಕಾಲ-ಪ್ರಾತಃಕಾಲಗಳಲ್ಲಿ ಜಪಿಸಬೇಕು. ಸಾಯಂಕಾಲದಲ್ಲಿ ಜಪಿಸುವುದರಿಂದ ಮನುಷ್ಯನು ಹಗಲಿನಲ್ಲಿ ಮಾಡಿದ ಪಾಪಗಳಿಂದ ಮುಕ್ತನಾಗುತ್ತಾನೆ. ಪ್ರಾತಃಕಾಲದಲ್ಲಿ ಜಪಿಸುವುದರಿಂದ ರಾತ್ರಿಯಲ್ಲಿ ಮಾಡಿದ ಪಾಪಗಳಿಂದ ಮುಕ್ತನಾಗುತ್ತಾನೆ.

ಪ್ರಾಸಾದಾ ಯತ್ರ ಸೌವರ್ಣಾ ವಸೋರ್ಧಾರಾ ಚ ಯತ್ರ ಸಾ ।
ಗನ್ಧರ್ವಾಪ್ಸರಸೋ ಯತ್ರ ತತ್ರ ಯಾನ್ತಿ ಸಹಸ್ರದಾಃ ॥೫॥

ಸಾವಿರ ಗೋವುಗಳನ್ನು ದಾನಮಾಡುವವರು-ಸುವರ್ಣಮಯವಾದ ಪ್ರಾಸಾದಗಳಿರುವ, ದೇವಗಂಗೆಯು ಪ್ರವಹಿಸುವ ಮತ್ತು ಗಂಧರ್ವಾಪ್ಸರೆಯರಿರುವ ಸ್ವರ್ಗಲೋಕಕ್ಕೆ ಹೋಗುತ್ತಾರೆ.

ನವನೀತಪಙ್ಕಾಃ ಕ್ಷೀರೋದಾ ದಧಿಶೈವಲಸಂಕುಲಾಃ ।
ವಹನ್ತಿ ಯತ್ರ ವೈ ನದ್ಯಸ್ತತ್ರ ಯಾನ್ತಿ ಸಹಸ್ರದಾಃ ॥೬॥

ಸಾವಿರ ಗೋವುಗಳನ್ನು ದಾನಮಾಡುವವರು–ಬೆಣ್ಣೆಯ ರೂಪದಲ್ಲಿರುವ ಕೆಸರಿನಿಂದಲೂ, ಮೊಸರಿನ ರೂಪದಲ್ಲಿರುವ ಪಾಚಿಯಿಂದಲೂ ತುಂಬಿರುವ ಹಾಲಿನ ಹೊಳೆಗಳಿರುವ ದಿವ್ಯಲೋಕದಲ್ಲಿ ವಾಸಮಾಡುತ್ತಾರೆ.

ಗವಾಂ ಶತಸಹಸ್ರಂ ತು ಯಃ ಪ್ರಯಚ್ಛೇದ್ಯಥಾವಿಧಿ ।
ಪರಾಂ ವೃದ್ಧಿಮವಾಪ್ಯಾಥ ಸ್ವರ್ಗಲೋಕೇ ಮಹೀಯತೇ ॥೭॥

ವಿಧಿಪೂರ್ವಕವಾಗಿ ಒಂದು ಲಕ್ಷ ಗೋವುಗಳನ್ನು ದಾನಮಾಡುವವನು ಪರಮಾಭ್ಯುದಯವನ್ನು ಹೊಂದಿ ಸ್ವರ್ಗದಲ್ಲಿ ಸಮ್ಮಾನಿತನಾಗುತ್ತಾನೆ.

ದಶ ಚೋಭಯತಃ ಪುತ್ರೋ ಮಾತಾಪಿತ್ರೋಃ ಪಿತಾಮಹಾನ್।
ದಧಾತಿ ಸುಕೃತಾಲ್ಲೋಕಾನ್ಪುನಾತಿ ಚ ಕುಲಂ ನರಃ ॥೮॥

ಲಕ್ಷಗೋವುಗಳನ್ನು ದಾನಮಾಡಿದವನು ತನ್ನ ಪಿತೃವಂಶದ ಮತ್ತು ಮಾತೃವಂಶದ ಹತ್ತು ತಲೆಮಾರಿನವರನ್ನೂ ಪವಿತ್ರಗೊಳಿಸಿ ಪುಣ್ಯಮಯವಾದ ಲೋಕಗಳಿಗೆ ಕಳುಹಿಸುತ್ತಾನೆ. ತನ್ನ ಕುಲವನ್ನೂ ಪಾವನಗೊಳಿಸುತ್ತಾನೆ.

ಧೇನ್ವಾಃ ಪ್ರಮಾಣೇನ ಸಮಪ್ರಮಾಣಾಂ
ಧೇನುಂ ತಿಲಾನಾಮಪಿ ಚ ಪ್ರದಾಯ ।
ಪಾನೀಯದಾತಾ ಚ ಯಮಸ್ಯ ಲೋಕೇ
ನ ಯಾತನಾಂ ಕಾಞ್ಚಿದುಪೈತಿ ತತ್ರ ॥೯॥

ಗೋವಿನ ಗಾತ್ರಕ್ಕೆ ಅನುಗುಣವಾದ ತಿಲಧೇನುವನ್ನು ಮಾಡಿ ದಾನ ಮಾಡುವವನೂ, ಗೋವುಗಳಿಗೆ ನೀರುಕುಡಿಸುವವನೂ (ಜಲಧೇನುವನ್ನು ದಾನಮಾಡುವವನೂ) ಅವಸಾನಾನಂತರದಲ್ಲಿ ಯಮನ ಲೋಕದಲ್ಲಿ ಸ್ವಲ್ಪವಾದರೂ ಯಾತನೆಯನ್ನು ಹೊಂದುವುದಿಲ್ಲ.

ಪವಿತ್ರಮಗ್ರ್ಯಂ ಜಗತಃ ಪ್ರತಿಷ್ಠಾ
ದಿವೌಕಸಾಂ ಮಾತರೋಽಥಾಪ್ರಮೇಯಾಃ ।
ಅನ್ವಾಲಭೇದ್ದಕ್ಷಿಣತೋ ವ್ರಜೇಚ್ಚ
ದದ್ಯಾಚ್ಚ ಪಾತ್ರೇ ಪ್ರಸಮೀಕ್ಷ್ಯ ಕಾಲಮ್ ॥೧೦॥

ಗೋವುಗಳು ಎಲ್ಲ ಪವಿತ್ರವಾದ ವಸ್ತುಗಳಿಗಿಂತಲೂ ಹೆಚ್ಚು ಪವಿತ್ರವಾದ ಪ್ರಾಣಿಗಳಾಗಿವೆ. ದೇವತೆಗಳಿಗೂ ಮಾತೃಸ್ವರೂಪಗಳಾಗಿವೆ. ಅವುಗಳ ಮಹಿಮೆಯನ್ನು ಅಳೆಯಲು ಸಾಧ್ಯವೇ ಇಲ್ಲ. ಗೋವುಗಳನ್ನು ಆದರ ಪೂರ್ವಕವಾಗಿ ಸ್ಪರ್ಶಿಸಬೇಕು ಮತ್ತು ಬಲಕ್ಕೆ ಬಿಟ್ಟುಕೊಂಡು ಹೋಗಬೇಕು. ಉತ್ತಮವಾದ ಕಾಲವನ್ನು ಪ್ರತೀಕ್ಷಿಸಿ ಗೋವುಗಳನ್ನು ಸತ್ಪಾತ್ರರಲ್ಲಿ ದಾನ ಮಾಡಬೇಕು.

ಧೇನುಂ ಸವತ್ಸಾಂ ಕಪಿಲಾಂ ಭೂರಿಶೃಙ್ಗೀಂ
ಕಾಂಸ್ಯೋಪದೋಹಾಂ ವಸನೋತ್ತರೀಯಾಮ್ ।
ಪ್ರದಾಯ ತಾಂ ಗಾಹತಿ ದುರ್ವಿಗಾಹ್ಯಾಂ
ಯಾಮ್ಯಾಂ ಸಭಾಂ ವೀತಭಯೋ ಮನುಷ್ಯಃ ॥೧೧॥

ದಪ್ಪವಾದ ಮತ್ತು ಎತ್ತರವಾದ ಕೊಂಬುಗಳನ್ನು ಹೊಂದಿರುವ, ಉತ್ತರೀಯವಸ್ತ್ರದಿಂದ ಆಚ್ಛಾದಿತವಾದ, ಕರುವಿನಿಂದ ಕೂಡಿರುವ ಕಪಿಲಾ ಗೋವನ್ನು, ಕರೆಯುವ ಕಂಚಿನ ಪಾತ್ರೆಯೊಡನೆ ದಾನಮಾಡಿದವನು ಪ್ರವೇಶಿಸಲು ಅಸಾಧ್ಯವಾದ ಯಮರಾಜನ ಸಭಾಮಂದಿರವನ್ನು ಯಾವ ವಿಧವಾದ ಭಯವೂ ಇಲ್ಲದೇ ಪ್ರವೇಶಿಸಲು ಸಮರ್ಥನಾಗುತ್ತಾನೆ.

ಸುರೂಪಾ ಬಹುರೂಪಾಶ್ಚ ವಿಶ್ವರೂಪಾಶ್ಚ ಮಾತರಃ ।
ಗಾವೋ ಮಾಮುಪತಿಷ್ಠನ್ತಾಮಿತಿ ನಿತ್ಯಂ ಪ್ರಕೀರ್ತಯೇತ್ ॥೧೨॥

'ಸುಂದರವಾದ ರೂಪಗಳನ್ನು ಹೊಂದಿರುವ, ಬಹುಪ್ರಕಾರವಾದ

ರೂಪ-ವರ್ಣಗಳುಳ್ಳ ಮತ್ತು ವಿಶ್ವರೂಪಿಣಿಯರಾದ ಗೋಮಾತೆಯರು ಸದಾ ನನ್ನ ಸಮೀಪದಲ್ಲಿಯೇ ಇರಲಿ'–ಎಂದು ನಿತ್ಯವೂ ಪ್ರಾರ್ಥಿಸುತ್ತಿರಬೇಕು.

ನಾತಃ ಪುಣ್ಯತರಂ ದಾನಂ ನಾತಃ ಪುಣ್ಯತರಂ ಫಲಮ್ ।
ನಾತೋ ವಿಶಿಷ್ಟಂ ಲೋಕೇಷು ಭೂತಂ ಭವಿತುಮರ್ಹತಿ ॥೧೩॥

ಗೋದಾನಕ್ಕಿಂತಲೂ ಪುಣ್ಯತರವಾದ ಬೇರೆ ದಾನವಿಲ್ಲ. ಗೋದಾನ ಫಲಕ್ಕಿಂತಲೂ ಪುಣ್ಯತರವಾದ ಬೇರೆ ಫಲವಿಲ್ಲ. ಗೋವುಗಳಿಗಿಂತಲೂ ಶ್ರೇಷ್ಠವಾದುದು ಮೂರು ಲೋಕಗಳಲ್ಲಿಯೂ ಹಿಂದೆ ಇರಲಿಲ್ಲ. ಮುಂದೂ ಇರಲಾರದು.

ತ್ವಚಾ ಲೋಮ್ನಾಥ ಶೃಙ್ಗೈರ್ವಾ ವಾಲೈಃ ಕ್ಷೀರೇಣ ಮೇದಸಾ ।
ಯಜ್ಞಂ ವಹತಿ ಸಂಭೂಯ ಕಿಮಸ್ತ್ಯಭ್ಯಧಿಕಂ ತತಃ ॥೧೪॥

ಚರ್ಮ, ರೋಮ, ಕೊಂಬು, ಬಾಲ, ಹಾಲು, ಮೇದಸ್ಸು–ಇವುಗಳೆಲ್ಲವನ್ನೂ ಕ್ರೋಢೀಕರಿಸಿಕೊಂಡು (ಹಾಲು-ಮೊಸರು ಮತ್ತು ತುಪ್ಪಗಳ ಮೂಲಕವಾಗಿ) ಧೇನುವು ಯಜ್ಞಕ್ರಿಯೆಯನ್ನು ನಿರ್ವಹಿಸುತ್ತದೆ. ಆದುದರಿಂದ ಗೋವಿಗಿಂತಲೂ ಶ್ರೇಷ್ಠವಾದ ಪ್ರಾಣಿಯು ಬೇರೆ ಯಾವುದಿದೆ?

ಯಯಾ ಸರ್ವಮಿದಂ ವ್ಯಾಪ್ತಂ ಜಗತ್ಸ್ಥಾವರಜಙ್ಗಮಮ್ ।
ತಾಂ ಧೇನುಂ ಶಿರಸಾ ವನ್ದೇ ಭೂತಭವ್ಯಸ್ಯ ಮಾತರಮ್ ॥೧೫॥

ಚರಾಚರಪ್ರಾಣಿಗಳಿಂದ ಯುಕ್ತವಾಗಿರುವ ಈ ಪ್ರಪಂಚವು ಯಾವ ಪವಿತ್ರವಾದ ಧೇನುವಿನಿಂದ ವ್ಯಾಪ್ತವಾಗಿರುವುದೋ–ಭೂತ-ಭವಿಷ್ಯಗಳಿಗೆ ತಾಯಿಯಾದ ಅಂತಹ ಧೇನುವನ್ನು ತಲೆಬಾಗಿ ನಮಸ್ಕರಿಸುತ್ತೇನೆ.

ಗುಣವಚನಸಮುಚ್ಚಯೈಕದೇಶೋ
ನೃವರ ಮಯೈಷ ಗವಾಂ ಪ್ರಕೀರ್ತಿತಸ್ತೇ ।
ನ ಚ ಪರಮಿಹ ದಾನಮಸ್ತಿ ಗೋಭ್ಯೋ
ಭವತಿ ನ ಚಾಪಿ ಪರಾಯಣಂ ತಥಾನ್ಯತ್ ॥೧೬॥

ಸೌದಾಸನೇ! ನರಶ್ರೇಷ್ಠ! ಗೋವುಗಳ ಗುಣವಚನಾಮೃತಸಾಗರದಲ್ಲಿ ಏಕದೇಶವನ್ನು (ಅತ್ಯಲ್ಪಭಾಗವನ್ನು) ಮಾತ್ರವೇ ನಾನು ನಿನಗೆ ಹೇಳಿರುವೆನು.

ನಿಷ್ಕೃಷ್ಟವಾಗಿ ಹೇಳುವುದಾದರೆ ಗೋದಾನಕ್ಕಿಂತಲೂ ಶ್ರೇಷ್ಠವಾದ ಬೇರೆ ದಾನವಿಲ್ಲ. ಐಹಿಕಾಮುಷ್ಮಿಕಫಲಗಳಿಗೆ ಗೋವಿನ ಆಶ್ರಯಕ್ಕಿಂತಲೂ ಬೇರೆಯದಾದ ಆಶ್ರಯವೂ ಇಲ್ಲ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ವಸಿಷ್ಠಮಹರ್ಷಿಗಳ ವಚನಾಮೃತವನ್ನು ಕೇಳಿ ಭೂದಾನಿಯಾದ, ಮಹಾತ್ಮನಾದ, ಸೌದಾಸನು–'ಗೋದಾನವು ಬಹಳ ಉತ್ತಮವಾದ ಪುಣ್ಯಕಾರ್ಯವೇ ಆಗಿದೆ'–ಎಂದು ನಿಶ್ಚಯಿಸಿ ನಿಯತಾತ್ಮನಾಗಿ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ಅನೇಕಗೋವುಗಳನ್ನು ದಾನಮಾಡಿದನು. ಅದರ ಫಲವಾಗಿ ಉತ್ತಮವಾದ ಪುಣ್ಯಲೋಕಗಳನ್ನೂ ಹೊಂದಿದನು."

೮೦ನೆಯ ಅಧ್ಯಾಯವು ಮುಗಿಯಿತು.

೮೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೋವುಗಳ ಮಾಹಾತ್ಮ್ಯ : ವ್ಯಾಸರಿಂದ ಶುಕನಿಗೆ ಗೋವುಗಳ ಮಹತ್ತ್ವದ ಕಥನ

ಯುಧಿಷ್ಠಿರನು ಹೇಳುತ್ತಾನೆ:

ಪವಿತ್ರಾಣಾಂ ಪವಿತ್ರಂ ಯಚ್ಛಿಷ್ಟಂ ಲೋಕೇ ಚ ಯದ್ಭವೇತ್ ।
ಪಾವನಂ ಪರಮಂ ಚೈವ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಪ್ರಪಂಚದಲ್ಲಿ ಪವಿತ್ರವಾದ ವಸ್ತುಗಳೆಲ್ಲಕ್ಕೂ ಯಾವುದು ಪವಿತ್ರತರವಾಗಿದೆಯೋ, ಲೋಕದಲ್ಲಿ ಪೂಜ್ಯವಾದುದೆಂದು ಯಾವುದನ್ನು ಹೇಳುವರೋ, ಪರಮಪಾವನವಾದುದು ಯಾವುದಿದೆಯೋ ಅದನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಗಾವೋ ಮಹಾರ್ಥಾಃ ಪುಣ್ಯಾಶ್ಚ ತಾರಯನ್ತಿ ಚ ಮಾನವಾನ್ ।
ಧಾರಯನ್ತಿ ಪ್ರಜಾಶ್ಚೇಮಾ ಹವಿಷಾ ಪಯಸಾ ತಥಾ ॥೨॥

“ಯುಧಿಷ್ಠಿರ! ಗೋವುಗಳು ಪ್ರಪಂಚದಲ್ಲಿ ಪರಮಪ್ರಯೋಜನಕರವಾದ ಪ್ರಾಣಿಗಳಾಗಿವೆ. ಪುಣ್ಯರೂಪಿಗಳಾಗಿದ್ದು ಮನುಷ್ಯರನ್ನು ಕಷ್ಟಗಳಿಂದ ಉದ್ಧರಿಸುತ್ತವೆ. ತುಪ್ಪದಿಂದಲೂ, ಹಾಲಿನಿಂದಲೂ ಅವು ಈ ಪ್ರಜೆಗಳೆಲ್ಲರನ್ನೂ ಧಾರಣೆಮಾಡಿವೆ. (ಪ್ರಜೆಗಳನ್ನು ಪರಿಪಾಲಿಸುತ್ತಿವೆ.)

ನ ಹಿ ಪುಣ್ಯತಮಂ ಕಿಂಚಿದ್ಗೋಭ್ಯೋ ಭರತಸತ್ತಮ ।
ಏತಾಃ ಪುಣ್ಯಾಃ ಪವಿತ್ರಾಶ್ಚ ತ್ರಿಷು ಲೋಕೇಷು ಸತ್ತಮಾಃ ॥೩॥

ಭರತಶ್ರೇಷ್ಠನೇ! ಗೋವುಗಳಿಗಿಂತಲೂ ಪುಣ್ಯತಮವಾದ ಪ್ರಾಣಿಯು ಬೇರೊಂದಿಲ್ಲ. ಅವು ಮಾನವರಿಗೆ ಪುಣ್ಯವನ್ನುಂಟುಮಾಡತಕ್ಕುವುಗಳು. ಪವಿತ್ರವಾದುವುಗಳು. ಮೂರು ಲೋಕಗಳಲ್ಲಿಯೂ ಶ್ರೇಷ್ಠವಾದುವುಗಳು.

ದೇವಾನಾಮುಪರಿಷ್ಟಾಚ್ಚ ಗಾವಃ ಪ್ರತಿವಸನ್ತಿ ವೈ ।
ದತ್ತ್ವಾ ಚೈತಾಸ್ತಾರಯನ್ತೇ ಯಾನ್ತಿ ಸ್ವರ್ಗಂ ಮನೀಷಿಣಃ ॥೪॥

ಗೋವುಗಳು ದೇವತೆಗಳ ಲೋಕಗಳಿಗಿಂತಲೂ ಮೇಲಿನ ಲೋಕಗಳಲ್ಲಿ ವಾಸಮಾಡುತ್ತವೆ. ಅವುಗಳನ್ನು ದಾನವಾಗಿ ಕೊಡುವ ವಿದ್ವಾಂಸರು ತಮ್ಮನ್ನೂ ಉದ್ಧರಿಸಿಕೊಳ್ಳುತ್ತಾರೆ. ಅವಸಾನಾನಂತರದಲ್ಲಿ ಸ್ವರ್ಗಕ್ಕೂ ಹೋಗುತ್ತಾರೆ.

ಮಾನ್ಧಾತಾ ಯೌವನಾಶ್ವಶ್ಚ ಯಯಾತಿರ್ನಹುಷಸ್ತಥಾ ।
ಗಾ ವೈ ದದನ್ತಃ ಸತತಂ ಸಹಸ್ರಶತಸಮ್ಮಿತಾಃ ।
ಗತಾಃ ಪರಮಕಂ ಸ್ಥಾನಂ ದೇವೈರಪಿ ಸುದುರ್ಲಭಮ್ ॥೫॥

ಯುವನಾಶ್ವನ ಮಗನಾದ ಮಾಂಧಾತೃಚಕ್ರವರ್ತಿ, ಸೋಮವಂಶೀಯನಾದ ನಹುಷ, ಯಯಾತಿ–ಇವರೆಲ್ಲರೂ ಸತತವಾಗಿ ಲಕ್ಷ-ಲಕ್ಷ ಗೋವುಗಳನ್ನು ದಾನಮಾಡುತ್ತಿದ್ದು ಅವಸಾನಾನಂತರದಲ್ಲಿ ದೇವತೆಗಳಿಗೂ ಹೊಂದಲು ದುರ್ಲಭವಾದ ಪರಮೋತ್ಕೃಷ್ಟವಾದ ಸ್ಥಾನಕ್ಕೆ ಹೋದರು.

ಅನಘನೇ! ಈ ವಿಷಯದಲ್ಲಿ ಹಿಂದೆ ನಡೆದ ಒಂದು ವೃತ್ತಾಂತವನ್ನು ನಿನಗೆ ಹೇಳುತ್ತೇನೆ. ಹಿಂದೊಮ್ಮೆ ಬುದ್ಧಿವಂತನಾದ ಶುಕನು ಆಹ್ನಿಕಾದಿಗಳನ್ನು ಮುಗಿಸಿಕೊಂಡು ಪರಿಶುದ್ಧನಾಗಿ, ವಿನಯಶೀಲವಾದ ಮನಸ್ಸಿನಿಂದ

ಕೂಡಿದವನಾಗಿ–ಋಷಿಶ್ರೇಷ್ಠರಾದ, ಭೂತ-ಭವಿಷ್ಯಗಳನ್ನು ಪ್ರತ್ಯಕ್ಷವಾಗಿ ನೋಡುವ ಸಾಮರ್ಥ್ಯವನ್ನು ಹೊಂದಿದ್ದ, ಪಿತೃವರೇಣ್ಯರಾದ ಕೃಷ್ಣದ್ವೈಪಾಯನವ್ಯಾಸರನ್ನು ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಪ್ರಶ್ನಿಸಿದನು:

"ತಂದೆಯವರೇ! ಯಾವ ಯಜ್ಞವು ಇತರ ಎಲ್ಲ ಯಜ್ಞಗಳಿಗಿಂತಲೂ ಶ್ರೇಷ್ಠವೆಂಬುದಾಗಿ ನಿಮಗೆ ಕಂಡುಬಂದಿದೆ?

ಕಿಂ ಚ ಕೃತ್ವಾ ಪರಂ ಸ್ಥಾನಂ ಪ್ರಾಪ್ನುವನ್ತಿ ಮನೀಷಿಣಃ ।
ಕೇನ ದೇವಾಃ ಪವಿತ್ರೇಣ ಸ್ವರ್ಗಮಶ್ನನ್ತಿ ವಾ ವಿಭೋ ॥೯॥

ಪ್ರಭುಗಳೇ! ವಿದ್ವಾಂಸರಾದವರು ಯಾವ ಕರ್ಮವನ್ನು ಮಾಡಿ ಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾರೆ? ಪವಿತ್ರವಾದ ಯಾವ ಕಾರ್ಯವನ್ನು ಮಾಡಿದುದರಿಂದ ದೇವತೆಗಳು ಸ್ವರ್ಗಸುಖವನ್ನು ಅನುಭವಿಸುತ್ತಿದ್ದಾರೆ?

ಕಿಂ ಚ ಯಜ್ಞಸ್ಯ ಯಜ್ಞತ್ವಂ ಕ್ವ ಚ ಯಜ್ಞಃ ಪ್ರತಿಷ್ಠಿತಃ ।
ದೇವಾನಾಮುತ್ತಮಂ ಕಿಂ ಚ ಕಿಂ ಸತ್ರಮಿತಃ ಪರಮ್ ॥೧೦॥

ಪವಿತ್ರಾಣಾಂ ಪವಿತ್ರಂ ಚ ಯತ್ತದ್ಬ್ರೂಹಿ ಪಿತರ್ಮಮ ॥೧೧॥

ಯಜ್ಞದ ಯಜ್ಞತ್ವವು ಯಾವುದು? ಯಜ್ಞವು ಯಾವುದರಲ್ಲಿ ಪ್ರತಿಷ್ಠಿತವಾಗಿದೆ ಅಥವಾ ಯಾವುದನ್ನು ಆಶ್ರಯಿಸಿದೆ? ದೇವತೆಗಳಿಗೆ ಉತ್ತಮವಾದ ವಸ್ತುವು ಯಾವುದು? ಈಗ ಪ್ರಚಲಿತವಾಗಿರುವ ಯಜ್ಞಕ್ಕಿಂತಲೂ ಶ್ರೇಷ್ಠವಾದ ಸತ್ರವು ಯಾವುದು? ಪವಿತ್ರವಾದ ವಸ್ತುಗಳೆಲ್ಲಕ್ಕೂ ಪವಿತ್ರತರವಾದ ವಸ್ತುವು ಯಾವುದಿರುವುದೋ ಅದನ್ನು ನನಗೆ ಹೇಳಿರಿ."

ಯುಧಿಷ್ಠಿರ! ಶುಕನ ಪ್ರಶ್ನೆಯನ್ನು ಕೇಳಿ ಪರಮಧರ್ಮಿಷ್ಠರಾದ ವ್ಯಾಸರು ಮಗನಿಗೆ ಯಥಾವತ್ತಾಗಿ ಎಲ್ಲ ವಿಷಯಗಳನ್ನೂ ಹೇಳತೊಡಗಿದರು.

ಗಾವಃ ಪ್ರತಿಷ್ಠಾ ಭೂತಾನಾಂ ತಥಾ ಗಾವಃ ಪರಾಯಣಮ್ ।
ಗಾವಃ ಪುಣ್ಯಾಃ ಪವಿತ್ರಾಶ್ಚ ಗೋಧನಂ ಪಾವನಂ ತಥಾ ॥೧೨॥

“ಮಗು! ಪ್ರಾಣಿಗಳಲ್ಲಿ ಗೋವುಗಳು ಸರ್ವೋತ್ಕೃಷ್ಟವಾದುವುಗಳು. ಪ್ರಾಣಿಗಳಿಗೆ ಅವು ಆಶ್ರಯಭೂತವಾಗಿವೆ. ಪುಣ್ಯರೂಪಗಳೂ, ಪವಿತ್ರಗಳೂ ಆಗಿವೆ. ಗೋಧನವು ಎಲ್ಲರನ್ನೂ ಪಾವನಗೊಳಿಸುತ್ತದೆ.

ಹಿಂದೆ ಗೋವುಗಳಿಗೆ ಕೊಂಬುಗಳಿರಲಿಲ್ಲವೆಂಬುದನ್ನು ನಾವು ಕೇಳಿದ್ದೆವು. ಕೊಂಬುಗಳನ್ನು ಪಡೆದುಕೊಳ್ಳುವುದಕ್ಕಾಗಿಯೇ ಗೋವುಗಳು ಪ್ರಭುವಾದ, ಅವಿನಾಶಿಯಾದ ಬ್ರಹ್ಮನನ್ನು ಕುರಿತು ತಪಸ್ಸನ್ನು ಮಾಡಿದುವು. ಗೋವುಗಳು ಅಭೀಷ್ಟಸಿದ್ಧಿಗಾಗಿ ಪ್ರಾಯೋಪವೇಶವ್ರತವನ್ನು (ಮರಣಾಂತ ವಾದ ಉಪವಾಸವನ್ನು) ಕೈಗೊಂಡಿರುವುದನ್ನು ನೋಡಿ ದಯಾಮಯನಾದ ಬ್ರಹ್ಮನು ಪ್ರತ್ಯಕ್ಷನಾಗಿ–ಒಂದೊಂದು ಗೋವಿಗೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಅವುಗಳ ಅಭೀಷ್ಟಗಳನ್ನು ನೆರವೇರಿಸಿಕೊಟ್ಟನು. ಯಾವ ಯಾವ ಗೋವುಗಳ ಮನಸ್ಸಿನಲ್ಲಿ ಎಷ್ಟೆಷ್ಟು ಉದ್ದದ ಕೊಂಬುಗಳು ಬೇಕೆಂಬ ಆಶಯವಿದ್ದಿತೋ ಅಷ್ಟಷ್ಟು ಉದ್ದದ ಕೊಂಬುಗಳು ಆ ಹಸುಗಳಿಗೆ ಬೆಳೆದುವು. ಕೊಂಬುಗಳಿಂದ ಕೂಡಿದ ನಾನಾವರ್ಣದ ಹಸುಗಳು ಆ ಸಮಯದಲ್ಲಿ ಬಹಳವಾಗಿ ಪ್ರಕಾಶಿಸಿದುವು. ಬ್ರಹ್ಮನಿಂದ ವರಗಳನ್ನು ಪಡೆದ ಗೋವುಗಳು ಹವ್ಯ-ಕವ್ಯಗಳನ್ನು ಕೊಡತಕ್ಕುವುಗಳೂ, ಶುಭದಾಯಕಗಳೂ, ಪುಣ್ಯಸ್ವರೂಪಗಳೂ, ಪವಿತ್ರವಾದುವುಗಳೂ, ಸೌಭಾಗ್ಯದಿಂದ ಕೂಡಿದುವುಗಳೂ, ದಿವ್ಯವಾದ ಅಂಗಗಳಿಂದಲೂ ಮತ್ತು ಲಕ್ಷಣಗಳಿಂದಲೂ ಯುಕ್ತವಾದುವುಗಳೂ ಆದುವು.

ಗಾವಸ್ತೇಜೋ ಮಹದ್ದಿವ್ಯಂ ಗವಾಂ ದಾನಂ ಪ್ರಶಸ್ಯತೇ ।
ಯೇ ಚೈತಾಃ ಸಮ್ಪ್ರಯಚ್ಛನ್ತಿ ಸಾಧವೋ ವೀತಮತ್ಸರಾಃ ॥೧೭॥

ತೇ ವೈ ಸುಕೃತಿನಃ ಪ್ರೋಕ್ತಾಃ ಸರ್ವದಾನಪ್ರದಾಶ್ಚ ತೇ ।
ಗವಾಂ ಲೋಕಂ ಯಥಾ ಪುಣ್ಯಮಾಪ್ನುವನ್ತಿ ಚ ತೇಽನಘ ॥೧೮॥

ನಿಷ್ಪಾಪನೇ! ಗೋವುಗಳು ದಿವ್ಯವಾದ ಮಹಾತೇಜೋರೂಪಗಳೇ ಆಗಿವೆ. ಗೋವುಗಳ ದಾನವು ಪ್ರಶಂಸನೀಯವಾದುದು. ಮಾತ್ಸರ್ಯ ರಹಿತರಾಗಿ ಯಾವ ಸತ್ಪುರುಷರು ಗೋವುಗಳನ್ನು ದಾನಮಾಡುವರೋ–

ಅವರು ಸುಕೃತಿಗಳೆಂದು ಪರಿಗಣಿತರಾಗುತ್ತಾರೆ ಮತ್ತು ಗೋದಾನಮಾತ್ರದಿಂದಲೇ ಸಕಲದಾನಗಳನ್ನೂ ಮಾಡಿದವರಾಗುತ್ತಾರೆ. ಅವಸಾನಾನಂತರದಲ್ಲಿ ಪುಣ್ಯತಮವಾದ ಗೋಲೋಕಗಳನ್ನೇ ಹೊಂದುತ್ತಾರೆ.

ಯತ್ರ ವೃಕ್ಷಾ ಮಧುಫಲಾ ದಿವ್ಯಪುಷ್ಪಫಲೋಪಗಾಃ ।
ಪುಷ್ಪಾಣಿ ಚ ಸುಗನ್ಧೀನಿ ದಿವ್ಯಾನಿ ದ್ವಿಜಸತ್ತಮ ॥೧೯॥

ಆ ಗೋಲೋಕದಲ್ಲಿ ವೃಕ್ಷಗಳು ಸುಮಧುರವಾದ ಫಲಗಳನ್ನು ಬಿಡುತ್ತವೆ. ದಿವ್ಯವಾದ ಪುಷ್ಪಗಳಿಂದಲೂ ಸಂಪನ್ನವಾಗಿರುತ್ತವೆ. ಪುಷ್ಪಗಳು ರಮಣೀಯವಾಗಿಯೂ, ಸುಗಂಧಯುಕ್ತವಾಗಿಯೂ ಇರುತ್ತವೆ.

ಸರ್ವಾ ಮಣಿಮಯೀ ಭೂಮಿಃ ಸರ್ವಕಾಞ್ಚನವಾಲುಕಾ ।
ಸರ್ವರ್ತುಸುಖಸಂಸ್ಪರ್ಶಾ ನಿಷ್ಪಙ್ಕಾ ನೀರಜಾಃ ಶುಭಾ ॥೨೦॥

ಗೋಲೋಕದಲ್ಲಿ ಭೂಮಿಯು ಮಣಿಮಯವಾಗಿದೆ ಮತ್ತು ಸುವರ್ಣಮಯವಾದ ಮಳಲಿನಿಂದ ಯುಕ್ತವಾಗಿದೆ. ಅದರ ಸ್ಪರ್ಶವು ಎಲ್ಲ ಋತುಗಳಲ್ಲಿಯೂ ಸುಖದಾಯಕವಾಗಿರುತ್ತದೆ. ಗೋಲೋಕದಲ್ಲಿರುವ ಭೂಮಿಯಲ್ಲಿ ಕೆಸರಾಗಲೀ–ಧೂಳಾಗಲೀ ಇರುವುದಿಲ್ಲ. ಭೂಮಿಯು ಸರ್ವದಾ ಸುಖದಾಯಕವಾಗಿರುತ್ತದೆ.

ರಕ್ತೋತ್ಪಲವನೈಶ್ಚೈವ ಮಣಿಖಣ್ಡೈರ್ಹಿರಣ್ಮಯೈಃ ।
ತರುಣಾದಿತ್ಯಸಂಕಾಶೈರ್ಭಾನ್ತಿ ತತ್ರ ಜಲಾಶಯಾಃ ॥೨೧॥

ಅಲ್ಲಿಯ ಜಲಾಶಯಗಳು, ಕೆಂದಾವರೆಗಳ ಸಮೂಹಗಳಿಂದಲೂ, ಬಾಲಸೂರ್ಯನ ಪ್ರಕಾಶಕ್ಕೆ ಸಮಾನವಾದ ಪ್ರಕಾಶವುಳ್ಳ ರತ್ನಗಳಿಂದ ನಿಬದ್ಧವಾದ ಸುವರ್ಣಮಯವಾದ ಸೋಪಾನಗಳಿಂದಲೂ ಪ್ರಕಾಶಿಸುತ್ತಿವೆ.

ಮಹಾರ್ಹಮಣಿಪತ್ರೈಶ್ಚ ಕಾಞ್ಚನಪ್ರಭಕೇಸರೈಃ ।
ನೀಲೋತ್ಪಲವಿಮಿಶ್ರೈಶ್ಚ ಸರೋಭಿರ್ಬಹುಪಙ್ಕಜೈಃ ॥೨೨॥

ಬಹುಮುಖ್ಯವಾದ ಮಣಿಗಳನ್ನೇ ದಳಗಳನ್ನಾಗಿ ಹೊಂದಿರುವ, ಸುವರ್ಣದ ಪ್ರಭೆಯಿಂದ ಕೂಡಿರುವ ಕೇಸರಗಳುಳ್ಳ, ನೀಲಕಮಲ

ಗಳೊಡನೆ ಬೆರೆತುಕೊಂಡಿರುವ ಕೆಂದಾವರೆಗಳಿಂದ ಯುಕ್ತವಾದ ಸರೋವರಗಳಿಂದ ಗೋಲೋಕದ ಭೂಮಿಯು ಸಮಲಂಕೃತವಾಗಿದೆ.

ಕರವೀರವನೈಃ ಫುಲ್ಲೈಃ ಸಹಸ್ರಾವರ್ತಸಂವೃತೈಃ ।
ಸಂತಾನಕವನೈಃ ಫುಲ್ಲೈರ್ವೃಕ್ಷೈಶ್ಚ ಸಮಲಂಕೃತಾಃ ॥೨೩॥

ಆ ಸರೋವರಗಳು ಸಾವಿರಾರು ಸುಳಿಗಳಿಂದ ಕೂಡಿದ್ದು, ವಿಕಸಿತವಾದ ಗನ್ನೇರಳೇವೃಕ್ಷಗಳ ಉಪವನಗಳಿಂದಲೂ, ವಿಕಸಿತವಾದ ವೃಕ್ಷಗಳಿಂದ ಕೂಡಿದ ಸಂತಾನಕವೆಂಬ ಕಲ್ಪವೃಕ್ಷಗಳ ವನಗಳಿಂದಲೂ ಸಮಲಂಕೃತ ವಾಗಿವೆ.

ನಿರ್ಮಲಾಭಿಶ್ಚ ಮುಕ್ತಾಭಿರ್ಮಣಿಭಿಶ್ಚ ಮಹಾಪ್ರಭೈಃ ।
ಉದ್ಧೂತಪುಲಿನಾಸ್ತತ್ರ ಜಾತರೂಪೈಶ್ಚ ನಿಮ್ನಗಾಃ ॥೨೪॥

ಗೋಲೋಕದಲ್ಲಿ ಮೇಲೆದ್ದಿರುವ ಮರಳುದಿಣ್ಣೆಗಳಿಂದ ಕೂಡಿದ ನದಿಗಳು–ನಿರ್ಮಲವಾದ ಮುತ್ತುಗಳಿಂದಲೂ, ಮಹಾಪ್ರಭೆಯಿಂದ ಯುಕ್ತವಾದ ಮಣಿಗಳಿಂದಲೂ, ಸುವರ್ಣಗಳಿಂದಲೂ ಯುಕ್ತವಾಗಿವೆ.

ಸರ್ವರತ್ನಮಯೈಶ್ಚಿತ್ರೈರವಗಾಢಾ ದ್ರುಮೋತ್ತಮೈಃ ।
ಜಾತರೂಪಮಯೈಶ್ಚಾನ್ಯೈ ರ್ಹುತಾಶನಸಮಪ್ರಭೈಃ ॥೨೫॥

ರತ್ನಮಯವಾದ ಮತ್ತು ವಿಚಿತ್ರವಾದ ವೃಕ್ಷಗಳೂ, ಯಜ್ಞೇಶ್ವರನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವ ಸುವರ್ಣಮಯವಾದ ವೃಕ್ಷಗಳೂ ಆ ನದಿಯ ತೀರಗಳಲ್ಲಿದ್ದು ಅವು ಆ ನದಿಯಲ್ಲಿ ಸ್ನಾನ ಮಾಡುತ್ತಿವೆಯೋ ಎಂಬಂತೆ ಕಾಣುತ್ತಿವೆ.

ಸೌವರ್ಣಾ ಗಿರಯಸ್ತತ್ರ ಮಣಿರತ್ನಶಿಲೋಚ್ಚಯಾಃ ।
ಸರ್ವರತ್ನಮಯೈರ್ಭಾನ್ತಿ ಶೃಙ್ಗೈಶ್ಚಾರುಭಿರುಚ್ಛ್ರಿತೈಃ ॥೨೬॥

ಗೋಲೋಕದಲ್ಲಿ ಸುವರ್ಣಮಯವಾದ ಗಿರಿಗಳೂ, ಮಣಿರತ್ನಗಳ ಶೈಲಸಮೂಹಗಳೂ ಇವೆ. ಅವು ಸರ್ವರತ್ನಮಯವಾದ, ಎತ್ತರವಾದ, ಸುಮನೋಹರವಾದ ಶಿಖರಗಳಿಂದ ಪ್ರಕಾಶಿಸುತ್ತಿವೆ.”

ಭೀಷ್ಮನು ತನ್ನ ಮಾತಿನಲ್ಲಿ ಯುಧಿಷ್ಠಿರನಿಗೆ ಹೇಳುತ್ತಾನೆ:

ನಿತ್ಯಪುಷ್ಪಫಲಾಸ್ತತ್ರ ನಗಾಃ ಪತ್ರರಥಾಕುಲಾಃ ।
ದಿವ್ಯಗನ್ಧರಸೈಃ ಪುಷ್ಪೈಃ ಫಲೈಶ್ಚ ಭರತರ್ಷಭ ॥೨೮॥

ಭರತರ್ಷಭನೇ! ಅಲ್ಲಿರುವ ವೃಕ್ಷಗಳಲ್ಲಿ ಎಲ್ಲ ಕಾಲಗಳಲ್ಲಿಯೂ ಫಲ-ಪುಷ್ಪಗಳಿರುತ್ತವೆ. ಅವು ಪಕ್ಷಿಗಳಿಂದ ತುಂಬಿರುತ್ತವೆ. ಅವುಗಳ ಪುಷ್ಪಗಳು ದಿವ್ಯಗಂಧಗಳಿಂದಲೂ, ಫಲಗಳು ದಿವ್ಯರಸಗಳಿಂದಲೂ ಯುಕ್ತವಾಗಿರುತ್ತವೆ.*

ರಮನ್ತೇ ಪುಣ್ಯಕರ್ಮಾಣಸ್ತತ್ರ ನಿತ್ಯಂ ಯುಧಿಷ್ಠಿರ ।
ಸರ್ವಕಾಮಸಮೃದ್ಧಾರ್ಥಾ ನಿಃಶೋಕಾ ಗತಮನ್ಯವಃ ॥೨೯॥

ಯುಧಿಷ್ಠಿರ! ಗೋಲೋಕದಲ್ಲಿ ಪುಣ್ಯಕರ್ಮಿಗಳು ಪೂರ್ಣಕಾಮರಾಗಿ ಮತ್ತು ಸಫಲಮನೋರಥರಾಗಿ, ಶೋಕರಹಿತರಾಗಿ, ಕೋಪರಹಿತರಾಗಿ ನಿತ್ಯವೂ ವಿಹರಿಸುತ್ತಿರುತ್ತಾರೆ.

ವಿಮಾನೇಷು ವಿಚಿತ್ರೇಷು ರಮಣೀಯೇಷು ಭಾರತ ।
ಮೋದನ್ತೇ ಪುಣ್ಯಕರ್ಮಾಣೋ ವಿಹರನ್ತೋ ಯಶಸ್ವಿನಃ ॥೨೯॥

ಭರತನೇ! ಗೋಲೋಕದಲ್ಲಿ ಪುಣ್ಯಕರ್ಮವನ್ನು ಮಾಡಿರುವ ಯಶೋವಂತರಾದ ಜನರು ರಮಣೀಯವಾದ ಮತ್ತು ವಿಚಿತ್ರವಾದ ವಿಮಾನಗಳಲ್ಲಿ ವಿಹರಿಸುತ್ತಾ ಆನಂದಪಡುತ್ತಾರೆ.

ಉಪಕ್ರೀಡನ್ತಿ ತಾನ್ರಾಜಞ್ಛುಭಾಶ್ಚಾಪ್ಸರಸಾಂ ಗಣಾಃ ।
ಏತಾಲ್ಲೋಕಾನವಾಪ್ನೋತಿ ಗಾಂ ದತ್ತ್ವಾ ವೈ ಯುಧಿಷ್ಠಿರ ॥೩೦॥

---

* ಈ ಅಧ್ಯಾಯದ ಇನ್ನೂ ಕೆಲವು ಶ್ಲೋಕಗಳಲ್ಲಿ ಭೀಷ್ಮನು ಯುಧಿಷ್ಠಿರನನ್ನು ಸಂಬೋಧಿಸಿ ಹೇಳಿರುವಂತಿದೆ. ವಸ್ತುತಃ ಇಲ್ಲಿ ವ್ಯಾಸರು ಶುಕನಿಗೆ ಹೇಳುತ್ತಿದ್ದಾರೆ. ವ್ಯಾಸರ ಮಾತನ್ನೇ ಹೇಳುವಾಗ ಸ್ವಾಭಾವಿಕವಾಗಿ ಭೀಷ್ಮನು ವ್ಯಾಸರ ಮಾತನ್ನೇ ಯುಧಿಷ್ಠಿರನಿಗೆ ಹೇಳಿದನೆಂದು ಭಾವಿಸಿಕೊಳ್ಳಬೇಕಾಗಿದೆ. ವ್ಯಾಸರು ನೇರವಾಗಿ ಶುಕನಿಗೆ ಹೇಳುತ್ತಿರುವಾಗ ಯುಧಿಷ್ಠಿರನನ್ನು ಸಂಬೋಧಿಸುವ ಕಾರಣವಿಲ್ಲ. ಅಥವಾ ಭೀಷ್ಮನು ವ್ಯಾಸರು ಹೇಳಿರದ ಇನ್ನೂ ಕೆಲವು ವಿಷಯಗಳನ್ನು ಹೇಳಿರಲೂಬಹುದು. ಅಂತಹ ಸಂದರ್ಭದಲ್ಲಿ ಹೀಗೆ ಸಂಬೋಧಿಸಿರಬಹುದು. ಕಡೆಯಲ್ಲಿ ಭೀಷ್ಮನು ಈ ಎಲ್ಲವನ್ನೂ ವ್ಯಾಸರು ಶುಕನಿಗೆ ಹೇಳಿದರೆಂಬುದನ್ನು ಸ್ಪಷ್ಟಪಡಿಸುತ್ತಾನೆ.

ಮಹಾರಾಜ! ಗೋಲೋಕದಲ್ಲಿ ಅಂತಹ ಪುಣ್ಯಕರ್ಮಿಗಳೊಡನೆ ಸುಂದರಿಯರಾದ ಅಪ್ಸರೆಯರು ಕ್ರೀಡಿಸುತ್ತಾರೆ. ಗೋದಾನದಿಂದ ಮನುಷ್ಯರು ಅಂತಹ ಸುಖದಾಯಕವಾದ ಲೋಕಗಳನ್ನು ಹೊಂದುತ್ತಾರೆ.

ವ್ಯಾಸ-ಶುಕರ ಸಂಭಾಷಣೆಯನ್ನು ಭೀಷ್ಮನು ಯಥಾವತ್ತಾಗಿ ಮುಂದುವರಿಸುತ್ತಾನೆ.

ಯೇಷಾಮಧಿಪತಿಃ ಪೂಷಾ ಮಾರುತೋ ಬಲವಾನ್ಬಲೀ ।
ಐಶ್ವರ್ಯೇ ವರುಣೋ ರಾಜಾ ನಾಮಮಾತ್ರಂ ಯುಗನ್ಧರಾಃ ॥೩೧॥

ಸುರೂಪಾ ಬಹುರೂಪಾಶ್ಚ ವಿಶ್ವರೂಪಾಶ್ಚ ಮಾತರಃ ।
ಪ್ರಾಜಾಪತ್ಯಮಿತಿ ಬ್ರಹ್ಮಞ್ಜಪೇನ್ನಿತ್ಯಂ ಯತವ್ರತಃ ॥೩೨॥

“ಶುಕ! ಶಕ್ತಿಶಾಲಿಯಾದ ಸೂರ್ಯನೂ, ಬಲಶಾಲಿಯಾದ ವಾಯುವೂ ಯಾವ ಲೋಕಗಳಿಗೆ ಅಧಿಪತಿಗಳಾಗಿರುವರೋ, ಯಾವ ಲೋಕಗಳಲ್ಲಿರುವ ಐಶ್ವರ್ಯಗಳಿಗೆ ವರುಣನು ಅಧಿಪತಿಯಾಗಿರುವನೋ–ಅಂತಹ ಲೋಕಗಳಿಗೆ ಗೋದಾನವನ್ನು ಮಾಡಿರುವವರು ಹೋಗುತ್ತಾರೆ. ಗೋವುಗಳಲ್ಲಿ ಯುಗಂಧರಾ, ಸುರೂಪಾ, ಬಹುರೂಪಾ, ವಿಶ್ವರೂಪಾ–ಎಂಬ ಹಸುಗಳು ಸಕಲಪ್ರಾಣಿಗಳಿಗೂ ಮಾತೃಪ್ರಾಯವಾಗಿವೆ. ಮನುಷ್ಯನು ನಿಯಮಪೂರ್ವಕವಾಗಿ ಪ್ರಜಾಪತಿಯು ಹೇಳಿರುವ ಮಾತೃಸ್ವರೂಪಿಣಿಯರಾದ ಈ ಗೋವುಗಳ ಹೆಸರುಗಳನ್ನು ಜಪಿಸಬೇಕು. (ಇದರಿಂದಲೂ ಗೋಲೋಕದ ಪ್ರಾಪ್ತಿಯಾಗುತ್ತದೆ.)

ಗಾಶ್ಚ ಶುಶ್ರೂಷತೇ ಯಶ್ಚ ಸಮನ್ವೇತಿ ಚ ಸರ್ವಶಃ ।
ತಸ್ಮೈ ತುಷ್ಟಾಃ ಪ್ರಯಚ್ಛನ್ತಿ ವರಾನಪಿ ಸುದುರ್ಲಭಾನ್ ॥೩೩॥

ಯಾವನು ಗೋವುಗಳ ಶುಶ್ರೂಷೆಯನ್ನು ಮಾಡುವನೋ, ಯಾವಾಗಲೂ ಅವುಗಳ ಜೊತೆಯಲ್ಲಿಯೇ ಇರುವನೋ-ಅಂತಹವನ ವಿಷಯದಲ್ಲಿ ತೃಪ್ತಿಯನ್ನು ಹೊಂದುವ ಗೋವುಗಳು ಅವನಿಗೆ ಅತ್ಯಂತ ದುರ್ಲಭವಾದ ವರಗಳನ್ನು ದಯಪಾಲಿಸುತ್ತವೆ.

ದ್ರುಹ್ಯೇನ್ನ ಮನಸಾ ವಾಪಿ ಗೋಷು ತಾ ಹಿ ಸುಖಪ್ರದಾಃ ।
ಅರ್ಚಯೇತ ಸದಾ ಚೈವ ನಮಸ್ಕಾರೈಶ್ಚ ಪೂಜಯೇತ್ ।
ದಾನ್ತಃ ಪ್ರೀತಮನಾ ನಿತ್ಯಂ ಗವಾಂ ವ್ಯುಷ್ಟಿಂ ತಥಾಶ್ನುತೇ ॥೩೪॥

ಗೋವುಗಳ ವಿಷಯದಲ್ಲಿ ಮನಸ್ಸಿನಿಂದಲೂ ದ್ರೋಹವನ್ನೆಣಿಸ ಬಾರದು. ಅವುಗಳು ಮನುಷ್ಯನಿಗೆ ಸುಖವನ್ನುಂಟುಮಾಡತಕ್ಕುವುಗಳು. ಅವುಗಳನ್ನು ಯಾವಾಗಲೂ ಸತ್ಕರಿಸಬೇಕು. ನಮಸ್ಕಾರಾದಿಗಳಿಂದ ಪೂಜಿಸಬೇಕು.

ಜಿತೇಂದ್ರಿಯನಾದ, ಪ್ರಸನ್ನಾತ್ಮನಾದ ಮನುಷ್ಯನು ನಿತ್ಯವೂ ಹೀಗೆ ಸೇವೆಯನ್ನು ಮಾಡುತ್ತಾ ಸಮೃದ್ಧಿಯನ್ನು ಹೊಂದುತ್ತಾನೆ.

ತ್ರ್ಯಹಮುಷ್ಣಂ ಪಿಬೇನ್ಮೂತ್ರಂ ತ್ರ್ಯಹಮುಷ್ಣಂ ಪಿಬೇತ್ಪಯಃ ।
ಗವಾಮುಷ್ಣಂ ಪಯಃ ಪೀತ್ವಾ ತ್ರ್ಯಹಮುಷ್ಣಂ ಘೃತಂ ಪಿಬೇತ್ ॥
ತ್ರ್ಯಹಮುಷ್ಣಂ ಘೃತಂ ಪೀತ್ವಾ ವಾಯುಭಕ್ಷೋ ಭವೇತ್ತ್ರ್ಯಹಮ್ ॥

ಮೂರು ದಿವಸಗಳು ಬಿಸಿಯಾದ ಗೋಮೂತ್ರವನ್ನು ಕುಡಿಯಬೇಕು. ಮತ್ತೆ ಮೂರು ದಿವಸಗಳು ಬಿಸಿಯಾದ ಹಸುವಿನ ಹಾಲನ್ನು ಕುಡಿಯಬೇಕು. ಮೂರು ದಿವಸಗಳು ಹಸುಗಳ ಬಿಸಿಯಾದ ಹಾಲನ್ನು ಕುಡಿದನಂತರ ಪುನಃ ಮೂರು ದಿವಸಗಳು ಬಿಸಿಯಾದ ತುಪ್ಪವನ್ನು ಕುಡಿಯಬೇಕು. ಅನಂತರ ಮೂರು ದಿವಸಗಳು ವಾಯುಭಕ್ಷನಾಗಿರಬೇಕು. (ನಿರಾಹಾರಿಯಾಗಿರ ಬೇಕು.) ಈ ನಿಯಮದಲ್ಲಿದ್ದುಕೊಂಡು ಗೋಸೇವೆಯನ್ನು ಮಾಡುವವನು ಸಮೃದ್ಧಿಯನ್ನು ಹೊಂದುತ್ತಾನೆ.

ಯೇನ ದೇವಾಃ ಪವಿತ್ರೇಣ ಭುಞ್ಜತೇ ಲೋಕಮುತ್ತಮಮ್ ।
ಯತ್ಪವಿತ್ರಂ ಪವಿತ್ರಾಣಾಂ ತದ್ಘೃತಂ ಶಿರಸಾ ವಹೇತ್ ॥೩೭॥

ದೇವತೆಗಳು ಯಾವ ಗೋಘೃತದ ಪ್ರಭಾವದಿಂದ ಉತ್ತಮೋತ್ತಮ ವಾದ ಲೋಕವನ್ನು ಪರಿಪಾಲಿಸುವರೋ, ಯಾವುದು ಪವಿತ್ರವಾದ ವಸ್ತುಗಳೆಲ್ಲಕ್ಕೂ ಪವಿತ್ರವೋ–ಅಂತಹ ಘೃತವನ್ನು ಶಿರಸ್ಸಿನಿಂದ ಧಾರಣೆ ಮಾಡಿಕೊಳ್ಳಬೇಕು.

ಘೃತೇನ ಜುಹುಯಾದಗ್ನಿಂ ಘೃತೇನ ಸ್ವಸ್ತಿ ವಾಚಯೇತ್ ।
ಘೃತಂ ಪ್ರಾಶೇದ್ಘೃತಂ ದದ್ಯಾದ್ಗವಾಂ ಪುಷ್ಟಿಂ ತಥಾಶ್ನುತೇ ॥೩೮॥

ಗೋಘೃತದಿಂದ ಅಗ್ನಿಯಲ್ಲಿ ಗೋಮತೀಮಂತ್ರದಿಂದ ಹೋಮ ಮಾಡಬೇಕು. ಘೃತವನ್ನೇ ದಕ್ಷಿಣೆಯಾಗಿ ಕೊಟ್ಟು ಬ್ರಾಹ್ಮಣರ ಮೂಲಕ ವಾಗಿ ಸ್ವಸ್ತಿವಾಚನವನ್ನು ಮಾಡಿಸಬೇಕು. ಘೃತವನ್ನು ಪ್ರಾಶನಮಾಡಬೇಕು.

ತುಪ್ಪವನ್ನು ದಾನವಾಗಿ ಕೊಡಬೇಕು. ಹೀಗೆ ಮಾಡುವುದರಿಂದ ಗೋವುಗಳ ಅಭಿವೃದ್ಧಿಯಾಗುತ್ತದೆ.

ನಿರ್ಹೃತೈಶ್ಚ ಯವೈರ್ಗೋಭಿರ್ಮಾಸಂ ಪ್ರಶ್ರಿತಯಾವಕಃ ।
ಬ್ರಹ್ಮಹತ್ಯಾಸಮಂ ಪಾಪಂ ಸರ್ವಮೇತೇನ ಶುಧ್ಯತೇ ॥೩೯॥

ಗೋವಿನ ಸಗಣಿಯಿಂದ ಹೊರತೆಗೆದ ಗೋಧಿಯ ಕಾಳುಗಳಿಂದ ಮಾಡಿದ ಗಂಜಿಯಿಂದಲೇ ಒಂದು ತಿಂಗಳಿರುವ ವಿನಯಶೀಲನಾದ ಯವಭಕ್ಷಕನು ಆ ಒಂದು ನಿಯಮದಿಂದಲೇ ಬ್ರಹ್ಮಹತ್ಯಾಪಾಪಕ್ಕೆ ಸಮಾನ ವಾದ ಸಕಲಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಪರಾಭವಾರ್ಥಂ ದೈತ್ಯಾನಾಂ ದೇವೈಃ ಶೌಚಮಿದಂ ಕೃತಮ್ ।
ತೇ ದೇವತ್ವಮಪಿ ಪ್ರಾಪ್ತಾಃ ಸಂಸಿದ್ಧಾಶ್ಚ ಮಹಾಬಲಾಃ ॥೪೦॥

ದೈತ್ಯರನ್ನು ಪರಾಭವಗೊಳಿಸುವ ಸಲುವಾಗಿ ದೇವತೆಗಳು ಸಂಪೂರ್ಣ ವಾಗಿ ಶುದ್ಧಿಗೊಳಿಸುವ ಗೋಮಯನಿರ್ಹೃತಯವಭಕ್ಷಣವ್ರತವನ್ನು ಮಾಡಿ ದರು. ಮಹಾಬಲರಾದ ದೇವತೆಗಳು ಅದರಿಂದ ದೇವತ್ವವನ್ನು ಪಡೆದ ರಲ್ಲದೇ ಕಾರ್ಯಸಿದ್ಧಿಯನ್ನೂ ಪಡೆದರು. (ದೈತ್ಯರನ್ನು ಪರಾಜಯಗೊಳಿಸಿ ದರು.)

ಗಾವಃ ಪವಿತ್ರಾಃ ಪುಣ್ಯಾಶ್ಚ ಪಾವನಂ ಪರಮಂ ಮಹತ್ ।
ತಾಶ್ಚ ದತ್ತ್ವಾ ದ್ವಿಜಾತಿಭ್ಯೋ ನರಃ ಸ್ವರ್ಗಮುಪಾಶ್ನುತೇ ॥೪೧॥

ಗೋವುಗಳು ಪವಿತ್ರವಾದುವು. ಪುಣ್ಯಸ್ವರೂಪವುಳ್ಳವು. ಪಾವನ ಗೊಳಿಸತಕ್ಕುವು. ಪರಮಶ್ರೇಷ್ಠವಾದುವು ಮತ್ತು ಮಹತ್ತ್ವವುಳ್ಳವು. ಅಂತಹ ಗೋವುಗಳನ್ನು ಬ್ರಾಹ್ಮಣರಿಗೆ ದಾನಮಾಡಿದ ಮನುಷ್ಯನು ಸ್ವರ್ಗಸುಖವನ್ನು ಉಪಭೋಗಿಸುತ್ತಾನೆ.

ಗವಾಂ ಮಧ್ಯೇ ಶುಚಿರ್ಭೂತ್ವಾ ಗೋಮತೀಂ ಮನಸಾ ಜಪೇತ್ ।
ಪೂತಾಭಿರದ್ಭಿರಾಚಮ್ಯ ಶುಚಿರ್ಭವತಿ ನಿರ್ಮಲಃ ॥೪೨॥

ಪವಿತ್ರವಾದ ನೀರಿನಿಂದ ಆಚಮನಮಾಡಿ ಪರಿಶುದ್ಧನಾಗಿ ಹಸುಗಳ ಮಧ್ಯದಲ್ಲಿ ಗೋಮತೀಮಂತ್ರವನ್ನು (ಗೋಮಾಗ್ಂ ಅಗ್ನೇಽವಿಮಾಗ್ಂ ಅಶ್ವೀ-ಎಂಬ ಮಂತ್ರವನ್ನು) ಮನಸ್ಸಿನಲ್ಲಿ ಜಪಮಾಡುವುದರಿಂದ ಮನುಷ್ಯನು

ಶುಚಿಯಾಗಿ ನಿರ್ಮಲನಾಗುತ್ತಾನೆ. (ಎಲ್ಲ ಪಾಪಗಳಿಂದಲೂ ಮುಕ್ತ ನಾಗುತ್ತಾನೆ.)

ಅಗ್ನಿಮಧ್ಯೇ ಗವಾಂ ಮಧ್ಯೇ ಬ್ರಾಹ್ಮಣಾನಾಂ ಚ ಸಂಸದಿ ।
ವಿದ್ಯಾವೇದವ್ರತಸ್ನಾತಾ ಬ್ರಾಹ್ಮಣಾಃ ಪುಣ್ಯಕರ್ಮಿಣಃ ॥೪೩॥
ಅಧ್ಯಾಪಯೇರಞ್ಶಿಷ್ಯಾನ್ವೈ ಗೋಮತೀಂ ಯಜ್ಞಸಮ್ಮಿತಾಮ್ ।
ತ್ರಿರಾತ್ರೋಪೋಷಿತೋ ಭೂತ್ವಾ ಗೋಮತೀಂ ಲಭತೇ ವರಮ್ ॥

ವೇದವಿದ್ಯೆಯನ್ನೂ ವೇದವ್ರತಗಳನ್ನೂ ಮುಗಿಸಿ ಸ್ನಾತಕರಾಗಿರುವ, ಪುಣ್ಯಕರ್ಮಿಗಳಾದ ಬ್ರಾಹ್ಮಣರು ಪಂಚಾಗ್ನಿಗಳ ಮಧ್ಯದಲ್ಲಾಗಲೀ, ಗೋವುಗಳ ಮಧ್ಯದಲ್ಲಾಗಲೀ ಬ್ರಾಹ್ಮಣರ ಸಭೆಯಲ್ಲಾಗಲೀ ಯಜ್ಞಸದೃಶ ವಾದ ಗೋಮತೀವಿದ್ಯೆಯನ್ನು ಅಥವಾ ಮಂತ್ರವನ್ನು ಶಿಷ್ಯರಿಗೆ ಉಪದೇಶಿಸ ಬೇಕು. ಹಾಗೆ ಉಪದೇಶವನ್ನು ಪಡೆದ ಗೋಮತೀಮಹಾಮಂತ್ರವನ್ನು ಉಪವಾಸದಿಂದಿದ್ದು ಮೂರು ರಾತ್ರಿಗಳವರೆಗೆ ಪುನಶ್ಚರಣೆಮಾಡುವವನು ಗೋವುಗಳಿಂದ ವರವನ್ನು ಪಡೆಯುತ್ತಾನೆ.

ಪುತ್ರಕಾಮಶ್ಚ ಲಭತೇ ಪುತ್ರಂ ಧನಮಥಾಪಿ ವಾ ।
ಪತಿಕಾಮಾ ಚ ಭರ್ತಾರಂ ಸರ್ವಕಾಮಾಂಶ್ಚ ಮಾನವಃ ।
ಗಾವಸ್ತುಷ್ಟಾಃ ಪ್ರಯಚ್ಛನ್ತಿ ಸೇವಿತಾ ವೈ ನ ಸಂಶಯಃ ॥೪೫॥

ಪುತ್ರಕಾಮನು ಮಕ್ಕಳನ್ನೂ, ಧನಕಾಮನು ಐಶ್ವರ್ಯವನ್ನೂ ಪಡೆ ಯುತ್ತಾನೆ. ಪತಿಯನ್ನು ಇಚ್ಛಿಸಿದ ಕನ್ಯೆಯು ಪತಿಯನ್ನು ಪಡೆಯುತ್ತಾಳೆ. ಮಾನವನ ಸರ್ವಕಾಮನೆಗಳೂ ಗೋಮತೀಮಂತ್ರಜಪದಿಂದ ಸಿದ್ಧಿಸುತ್ತವೆ. ಮನುಷ್ಯರಿಂದ ಸಂಸೇವಿತವಾಗಿ ಸಂತುಷ್ಟವಾದ ಗೋವುಗಳು ಎಲ್ಲವನ್ನೂ ಕೊಡುತ್ತವೆ. ಇದರಲ್ಲಿ ಸಂಶಯವೇ ಇಲ್ಲ.

ಏವಮೇತಾ ಮಹಾಭಾಗಾ ಯಜ್ಞಿಯಾಃ ಸರ್ವಕಾಮದಾಃ ।
ರೋಹಿಣ್ಯ ಇತಿ ಜಾನೀಹಿ ನೈತಾಭ್ಯೋ ವಿದ್ಯತೇ ಪರಮ್ ॥೪೬॥

ಶುಕದೇವನೇ! ಹೀಗೆ ಮಹಾಭಾಗ್ಯಶಾಲಿಗಳಾದ ಗೋವುಗಳು ಯಜ್ಞದ ಪ್ರಧಾನವಾದ ಅಂಗಗಳಾಗಿವೆಯೆಂದೂ ಮನುಷ್ಯನ ಸಕಲವಿಧವಾದ ಕಾಮನೆಗಳನ್ನೂ ಪೂರೈಸತಕ್ಕುವುಗಳೆಂದೂ ತಿಳಿ. ಇವುಗಳಿಗಿಂತ ಶ್ರೇಷ್ಠವಾದ ಪ್ರಾಣಿಯು ಬೇರೆ ಯಾವುದೂ ಇಲ್ಲ.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಮಹಾತ್ಮರಾದ ವ್ಯಾಸರು ಮಹಾತೇಜಸ್ವಿಯಾದ ಶುಕನಿಗೆ ಹೀಗೆ ಗೋವಿನ ಮಾಹಾತ್ಮ್ಯವನ್ನು ಹೇಳಿದನಂತರ ಶುಕನೂ ಕೂಡ ಅನುದಿನವೂ ಗೋವುಗಳನ್ನು ಪೂಜಿಸತೊಡಗಿದನು. ಆದುದರಿಂದ ನೀನೂ ಗೋವುಗಳನ್ನು ಪೂಜಿಸು.”

೮೧ನೆಯ ಅಧ್ಯಾಯವು ಮುಗಿಯಿತು.

೮೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಲಕ್ಷ್ಮೀ ಮತ್ತು ಗೋವುಗಳ ಸಂವಾದ: ಲಕ್ಷ್ಮಿಯ ಪ್ರಾರ್ಥನೆಯಂತೆ ಆಕೆಯು ಗೋಮಯದಲ್ಲಿಯೂ ಗೋಮೂತ್ರದಲ್ಲಿಯೂ ನಿವಾಸಿಸಲು ಗೋವುಗಳು ಸಮ್ಮತಿಸಿದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಮಯಾ ಗವಾಂ ಪುರೀಷಂ ವೈ ಶ್ರಿಯಾ ಜುಷ್ಟಮಿತಿ ಶ್ರುತಮ್ ।
ಏತದಿಚ್ಛಾಮ್ಯಹಂ ಶ್ರೋತುಂ ಸಂಶಯೋಽತ್ರ ಪಿತಾಮಹ ॥೧॥

“ಪಿತಾಮಹನೇ! ಗೋಮಯವು ಲಕ್ಷ್ಮಿಯಿಂದ ಸೇವಿಸಲ್ಪಡುವುದೆಂದೂ (ಲಕ್ಷ್ಮಿಯು ಅಲ್ಲಿ ವಾಸಮಾಡುವಳೆಂದೂ) ನಾನು ಕೇಳಿದ್ದೇನೆ. ಈ ವಿಷಯದಲ್ಲಿ ನನಗೆ ಸಂಶಯವಿದೆ. ಈ ವಿಷಯವನ್ನು ನಾನು ಕೇಳಬೇಕೆಂದಿರುತ್ತೇನೆ.”

ಭೀಷ್ಮನು ಹೇಳುತ್ತಾನೆ:

“ಭರತರ್ಷಭನೇ! ಈ ವಿಷಯದಲ್ಲಿ ಹಿಂದೆ ಗೋವುಗಳಿಗೂ-ಲಕ್ಷ್ಮಿಗೂ ನಡೆದ ಇತಿಹಾಸರೂಪವಾದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಒಮ್ಮೆ ಲಕ್ಷ್ಮಿಯು ಮನೋಹರವಾದ ರೂಪವನ್ನು ಧರಿಸಿ ಹಸುಗಳ ಕೊಟ್ಟಿಗೆಯನ್ನು ಪ್ರವೇಶಿಸಿದಳು. ಲಕ್ಷ್ಮಿಯ ರೂಪಸಂಪತ್ತನ್ನು ನೋಡಿ ಗೋಶಾಲೆಯಲ್ಲಿದ್ದ ಗೋವುಗಳು ಅಚ್ಚರಿಗೊಂಡು ಲಕ್ಷ್ಮಿಯನ್ನು ಪ್ರಶ್ನಿಸಿದುವು:

ಕಾಸಿ ದೇವಿ ಕುತೋ ವಾ ತ್ವಂ ರೂಪೇಣಾಪ್ರತಿಮಾ ಭುವಿ ।
ವಿಸ್ಮಿತಾಃ ಸ್ಮ ಮಹಾಭಾಗೇ ತವ ರೂಪಸ್ಯ ಸಮ್ಪದಾ ॥೪॥

"ದೇವಿ! ನೀನು ಯಾರು? ಎಲ್ಲಿಂದ ಬಂದಿರುವೆ? ನೀನು ಈ ಪ್ರಪಂಚದಲ್ಲಿಯೇ ಅಪ್ರತಿಮಳಾದ ರೂಪವತಿಯಾಗಿರುವೆ. ಮಹಾಭಾಗ್ಯ ಶಾಲಿನಿಯೇ! ನಿನ್ನ ರೂಪರಾಶಿಯನ್ನು ನೋಡಿ ನಾವು ವಿಸ್ಮಿತರಾಗಿದ್ದೇವೆ.

ಇಚ್ಛಾಮ ತ್ವಾಂ ವಯಂ ಜ್ಞಾತುಂ ಕಾ ತ್ವಂ ಕ್ವ ಚ ಗಮಿಷ್ಯಸಿ ।
ತತ್ತ್ವೇನ ವರವರ್ಣಾಭೇ ಸರ್ವಮೇತದ್ಬ್ರವೀಹಿ ನಃ ॥೫॥

ನಾವು ನೀನಾರೆಂಬುದನ್ನು ತಿಳಿಯುವ ಇಚ್ಛೆಯುಳ್ಳವರಾಗಿದ್ದೇವೆ. ಆದುದರಿಂದ ಸುಂದರಿಯೇ! ನೀನು ಯಾರು? ಮತ್ತು ಎಲ್ಲಿಗೆ ಹೋಗುತ್ತಿರುವೆ?–ಎಂಬುದನ್ನು ಯಥಾವತ್ತಾಗಿ ಹೇಳು."

ಲಕ್ಷ್ಮಿಯು ಹೇಳುತ್ತಾಳೆ:

ಲೋಕಕಾನ್ತಾಸ್ಮಿ ಭದ್ರಂ ವಃ ಶ್ರೀರ್ನಾಮಾಹಂ ಪರಿಶ್ರುತಾ ।
ಮಯಾ ದೈತ್ಯಾಃ ಪರಿತ್ಯಕ್ತಾ ವಿನಷ್ಟಾಃ ಶಾಶ್ವತೀಃ ಸಮಾಃ ॥೬॥

"ಗೋವುಗಳೇ! ನಿಮಗೆ ಮಂಗಳವಾಗಲಿ. 'ಶ್ರೀ' ಎಂಬ ಹೆಸರಿನಿಂದ ನಾನು ಪ್ರಸಿದ್ಧಳಾಗಿದ್ದೇನೆ. ನಾನು ಲೋಕದಲ್ಲಿರುವವರೆಲ್ಲರಿಗೂ ಬೇಕಾದ ವಳು. ನಾನೀಗ ದೈತ್ಯರನ್ನು ಪರಿತ್ಯಜಿಸಿ ಬಂದಿರುವೆನು. ಈ ಕಾರಣದಿಂದ ಅವರೆಲ್ಲರೂ ಬಹಳ ಕಾಲದವರೆಗೂ ಹಾಳಾಗಿಹೋಗುವರು.

ಮಯಾಭಿಪನ್ನಾ ದೇವಾಶ್ಚ ಮೋದನ್ತೇ ಶಾಶ್ವತೀಃ ಸಮಾಃ ।
ಇನ್ದ್ರೋ ವಿವಸ್ವಾನ್ಸೋಮಶ್ಚ ವಿಷ್ಣುರಾಪೋಽಗ್ನಿರೇವ ಚ ॥೭॥

ನನ್ನ ಮರೆಹೊಕ್ಕಿರುವ ಇಂದ್ರ, ಸೂರ್ಯ, ಚಂದ್ರ, ವಿಷ್ಣು, ವರುಣ, ಅಗ್ನಿ-ಇವರೇ ಮೊದಲಾದ ದೇವತೆಗಳು ಮುಂದೆ ಬಹಳ ಕಾಲದವರೆಗೂ ಆನಂದದಿಂದಿರುತ್ತಾರೆ.

ಮಯಾಭಿಪನ್ನಾಃ ಸಿದ್ಧ್ಯನ್ತೇ ಋಷಯೋ ದೇವತಾಸ್ತಥಾ ।
ಯಾನ್ನಾವಿಶಾಮ್ಯಹಂ ಗಾವಸ್ತೇ ವಿನಶ್ಯನ್ತಿ ಸರ್ವಶಃ ॥೮॥

ಗೋವುಗಳೇ! ನನ್ನ ಮರೆಹೊಕ್ಕಿರುವ ಋಷಿಗಳೂ ದೇವತೆಗಳೂ ಸಿದ್ಧಿಯನ್ನು ಹೊಂದುತ್ತಾರೆ. ನಾನು ಯಾರ ಶರೀರವನ್ನು ಪ್ರವೇಶಿಸುವು

ದಿಲ್ಲವೋ–ಅವರೆಲ್ಲರೂ ಸಂಪೂರ್ಣವಾಗಿ ವಿನಾಶಹೊಂದುತ್ತಾರೆ. ನಾನು ಯಾರ ಶರೀರವನ್ನು ಪ್ರವೇಶಿಸುವೆನೋ–ಅವರೆಲ್ಲರೂ ಆನಂದತುಂದಿಲರಾಗಿರುತ್ತಾರೆ.

ಧರ್ಮಶ್ಚಾರ್ಥಶ್ಚ ಕಾಮಶ್ಚ ಮಯಾ ಜುಷ್ಟಾಃ ಸುಖಾನ್ವಿತಾಃ ।
ಏವಂಪ್ರಭಾವಾಂ ಮಾಂ ಗಾವೋ ವಿಜಾನೀತ ಸುಖಪ್ರದಾಃ ॥೯॥



ಸರ್ವರಿಗೂ ಸುಖವನ್ನು ಕೊಡುವ ಧೇನುಗಳೇ! ಧರ್ಮಾರ್ಥ-ಕಾಮಗಳು ನನ್ನ ಸಹಯೋಗವಿದ್ದರೇನೇ ಮಾನವನಿಗೆ ಸುಖದಾಯಕಗಳಾಗುತ್ತವೆ. ನಾನು ಇಂತಹ ಪ್ರಭಾವವುಳ್ಳವಳೆಂಬುದನ್ನು ನೀವೆಲ್ಲರೂ ತಿಳಿಯಿರಿ.

ಇಚ್ಛಾಮಿ ಚಾಪಿ ಯುಷ್ಮಾಸು ವಸ್ತುಂ ಸರ್ವಾಸು ನಿತ್ಯದಾ ।
ಆಗತ್ಯ ಪ್ರಾರ್ಥಯೇ ಯುಷ್ಮಾಞ್ಶ್ರೀಜುಷ್ಟಾ ಭವತಾಥ ವೈ ॥೧೦॥

ನಾನು ನಿಮ್ಮೆಲ್ಲರ ಶರೀರಗಳಲ್ಲಿಯೂ ಶಾಶ್ವತವಾಗಿರಲು ಇಚ್ಛಿಸುತ್ತೇನೆ. ಆದುದರಿಂದ ನಾನಾಗಿಯೇ ಬಂದು ನಿಮ್ಮನ್ನು ಪ್ರಾರ್ಥಿಸುತ್ತಿದ್ದೇನೆ. ನನ್ನ ಪ್ರಾರ್ಥನೆಯಂತೆ ನೀವೆಲ್ಲರೂ ನನಗೆ ಆಶ್ರಯವನ್ನಿತ್ತು ಶ್ರೀಸಂಪನ್ನರಾಗಿರಿ.”

ಗೋವುಗಳು ಹೇಳುತ್ತವೆ:

ಅಧ್ರುವಾ ಚಪಲಾ ಚ ತ್ವಂ ಸಾಮಾನ್ಯಾ ಬಹುಭಿಃ ಸಹ ।
ನ ತ್ವಾಮಿಚ್ಛಾಮ ಭದ್ರಂ ತೇ ಗಮ್ಯತಾಂ ಯತ್ರ ರಂಸ್ಯಸೇ ॥೧೧॥

“ದೇವೀ! ನೀನು ಚಂಚಲಳು. ಎಲ್ಲಿಯೂ ಸ್ಥಿರವಾಗಿರತಕ್ಕವಳಲ್ಲ. ಇದಲ್ಲದೇ ನೀನು ಅನೇಕರೊಡನೆ ಏಕಕಾಲದಲ್ಲಿ ಸಂಬಂಧವನ್ನಿಟ್ಟುಕೊಳ್ಳುವೆ. ಆದುದರಿಂದ ನಾವು ನಿನ್ನನ್ನು ಬಯಸುವುದಿಲ್ಲ. ನಿನಗೆ ಮಂಗಳವಾಗಲಿ. ನಿನಗೆಲ್ಲಿ ಸಂತಸವಾಗುವುದೋ ಅಲ್ಲಿಗೆ ಹೊರಟುಹೋಗು.

ವಪುಷ್ಮನ್ತ್ಯೋ ವಯಂ ಸರ್ವಾಃ ಕಿಮಸ್ಮಾಕಂ ತ್ವಯಾದ್ಯ ವೈ ।
ಯಥೇಷ್ಟಂ ಗಮ್ಯತಾಂ ತತ್ರ ಕೃತಕಾರ್ಯಾ ವಯಂ ತ್ವಯಾ ॥೧೨॥

ನಾವೆಲ್ಲರೂ ಹೃಷ್ಟ-ಪುಷ್ಟರಾಗಿಯೂ ರೂಪವತಿಯರಾಗಿಯೂ ಇರುವೆವು. ನಿನ್ನಿಂದ ನಮಗೇನಾಗಬೇಕಾಗಿದೆ? ನೀನು ದರ್ಶನವನ್ನಿತ್ತಿರುವೆ. ಇದರಿಂದಲೇ ನಾವು ಕೃತಕೃತ್ಯರಾಗಿದ್ದೇವೆ. ಆದುದರಿಂದ ನಿನ್ನ ಇಚ್ಛೆಯಿದ್ದೆಡೆಗೆ ಹೊರಟುಹೋಗು.”

ಲಕ್ಷ್ಮಿಯು ಹೇಳುತ್ತಾಳೆ:

ಕಿಮೇತದ್ವಃ ಕ್ಷಮಂ ಗಾವೋ ಯನ್ಮಾಂ ನೇಹಾಭಿನನ್ದಥ ।
ನ ಮಾಂ ಸಂಪ್ರತಿಗೃಹ್ಣೀಧ್ವಂ ಕಸ್ಮಾದ್ವೈ ದುರ್ಲಭಾಂ ಸತೀಮ್ ॥

“ಗೋವುಗಳೇ! ಇದೇನು ಹೀಗೆ ಹೇಳುತ್ತಿರುವಿರಿ? ಸ್ವಯಂಪ್ರೇರಿತಳಾಗಿ ಬಂದಿರುವ ನನ್ನನ್ನು ಅಭಿನಂದಿಸದೇ ಇರುವುದು ನಿಮಗೆ ಉಚಿತವೆನಿಸುವುದೇ? ನಾನು ಸಾಧ್ವಿಯಾಗಿದ್ದೇನೆ. ಅತ್ಯಂತ ದುರ್ಲಭಳೂ ಆಗಿದ್ದೇನೆ. ಹೀಗಿರುವಾಗ ನನ್ನನ್ನೇಕೆ ಈಗ ನೀವು ಸ್ವೀಕರಿಸುತ್ತಿಲ್ಲ?

ಸತ್ಯಂ ಚ ಲೋಕವಾದೋಽಯಂ ಲೋಕೇ ಚರತಿ ಸುವ್ರತಾಃ ।
ಸ್ವಯಂ ಪ್ರಾಪ್ತೇ ಪರಿಭವೋ ಭವತೀತಿ ವಿನಿಶ್ಚಯಃ ॥೧೪॥

ಉತ್ತಮವ್ರತವನ್ನು ಪರಿಪಾಲಿಸುವ ಗೋವುಗಳೇ! 'ಆಹ್ವಾನವಿಲ್ಲದೇ ತಾನಾಗಿಯೇ ಒಬ್ಬನ ಮನೆಗೆ ಹೋದವನಿಗೆ ತಿರಸ್ಕಾರವು ನಿಶ್ಚಿತ'–ಎಂಬ ಗಾದೆಯು ನಿಮ್ಮ ಈ ವರ್ತನೆಯಿಂದ ಸತ್ಯವಾಯಿತು.

ಮಹದುಗ್ರಂ ತಪಃ ಕೃತ್ವಾ ಮಾಂ ನಿಷೇವನ್ತಿ ಮಾನವಾಃ ।
ದೇವದಾನವಗನ್ಧರ್ವಾಃ ಪಿಶಾಚೋರಗರಾಕ್ಷಸಾಃ ॥೧೫॥

ದೇವ-ದಾನವ-ಗಂಧರ್ವರೂ, ಪಿಶಾಚರೂ, ಸರ್ಪಗಳೂ, ರಾಕ್ಷಸರೂ ಮತ್ತು ಮಾನವರೂ ಮಹೋಗ್ರವಾದ ತಪಸ್ಸನ್ನು ಮಾಡಿ ನನ್ನ ಸೇವೆಯನ್ನು ಮಾಡುತ್ತಾರೆ. (ಹೀಗಿರುವಾಗ ನಾನಾಗಿಯೇ ಬಂದರೂ ನನ್ನನ್ನು ನೀವು ತಿರಸ್ಕರಿಸುತ್ತಿರುವಿರಿ.)

ಪ್ರಭಾವ ಏಷ ವೋ ಗಾವಃ ಪ್ರತಿಗೃಹ್ಣೀತ ಮಾಮಿಹ ।
ನಾವಮನ್ಯಾ ಹ್ಯಹಂ ಸೌಮ್ಯಾಸ್ತ್ರೈಲೋಕ್ಯೇ ಸಚರಾಚರೇ ॥೧೬॥

ಸೌಮ್ಯಸ್ವಭಾವವುಳ್ಳ ಗೋವುಗಳೇ! ನಿಮ್ಮಲ್ಲಿರುವ ಪ್ರಭಾವದಿಂದಲೇ ನಾನು ಆಕರ್ಷಿತಳಾಗಿ ನಿಮ್ಮ ಬಳಿಗೆ ಬಂದಿರುವೆನು. ಈಗಲೇ ನನ್ನನ್ನು ಪ್ರತಿಗ್ರಹಿಸಿರಿ. ಚರಾಚರಪ್ರಾಣಿಗಳಿಂದ ಯುಕ್ತವಾದ ಮೂರು ಲೋಕಗಳಲ್ಲಿ ಯಾರಿಂದಲೂ ನಾನು ಅವಮಾನಿಸಲ್ಪಡತಕ್ಕವಳಲ್ಲ."

ಗೋವುಗಳು ಹೇಳುತ್ತವೆ:

ನಾವಮನ್ಯಾಮಹೇ ದೇವಿ ನ ತ್ವಾಂ ಪರಿಭವಾಮಹೇ।
ಅಧ್ರುವಾ ಚಲಚಿತ್ತಾಸಿ ತತಸ್ತ್ವಾಂ ವರ್ಜಯಾಮಹೇ ॥೧೭॥

"ದೇವಿ! ನಾವು ನಿನ್ನನ್ನು ಅವಮಾನಿಸುವುದೂ ಇಲ್ಲ; ಅನಾದರಣೆ ಮಾಡುವುದೂ ಇಲ್ಲ. (ನಮಗೂ ನಿನ್ನ ವಿಷಯದಲ್ಲಿ ಅಪಾರವಾದ ಭಕ್ತಿ-ಗೌರವಗಳೇ ಇವೆ.) ಆದರೆ ನೀನು ಅಸ್ಥಿರಳೂ ಚಂಚಲಚಿತ್ತಳೂ ಆಗಿರುವೆ. ಈ ಕಾರಣದಿಂದ ನಿನ್ನನ್ನು ವರ್ಜಿಸುತ್ತಿದ್ದೇವೆ.

ಬಹುನಾ ಚ ಕಿಮುಕ್ತೇನ ಗಮ್ಯತಾಂ ಯತ್ರ ವಾಞ್ಛಸಿ ।
ವಪುಷ್ಮನ್ತ್ಯೋ ವಯಂ ಸರ್ವಾಃ ಕಿಮಸ್ಮಾಕಂ ತ್ವಯಾನಘೇ ॥೧೮॥

ದೇವಿ! ಈ ವಿಷಯದಲ್ಲಿ ಹೆಚ್ಚು ಮಾತನಾಡುವುದರಿಂದ ಪ್ರಯೋಜನವೇನಿದೆ? ನಾವೆಲ್ಲರೂ ಹೃಷ್ಟ-ಪುಷ್ಟರಾಗಿಯೂ ರೂಪವತಿಯರಾಗಿಯೂ ಇರುವೆವು. ನಿನ್ನಿಂದ ನಮಗೇನಾಗಬೇಕಾಗಿದೆ? ಆದುದರಿಂದ ನೀನು ಎಲ್ಲಿಗೆ ಹೋಗಲು ಬಯಸುವೆಯೋ ಅಲ್ಲಿಗೆ ಹೊರಟು ಹೋಗು."

ಲಜ್ಜಿತಳಾದ ಲಕ್ಷ್ಮಿಯು ಹೇಳುತ್ತಾಳೆ:

ಅವಜ್ಞಾತಾ ಭವಿಷ್ಯಾಮಿ ಸರ್ವಲೋಕಸ್ಯ ಮಾನದಾಃ ।
ಪ್ರತ್ಯಾಖ್ಯಾನೇನ ಯುಷ್ಮಾಕಂ ಪ್ರಸಾದಃ ಕ್ರಿಯತಾಂ ಮಮ ॥೧೯॥

"ಎಲ್ಲರಿಗೂ ಮಾನವನ್ನು ಕೊಟ್ಟು ಕಾಪಾಡುವ ಗೋವುಗಳೇ! ಸ್ವಯಂಪ್ರೇರಿತಳಾಗಿ ಬಂದಿರುವ ನನ್ನನ್ನು ನೀವೇನಾದರೂ ತ್ಯಾಗಮಾಡಿದ್ದೇ ಆದರೆ–ಸಂಪೂರ್ಣಜಗತ್ತಿನಿಂದಲೇ ನಾನು ತಿರಸ್ಕೃತಳೂ ಉಪೇಕ್ಷಿತಳೂ ಆಗುತ್ತೇನೆ. ಆದುದರಿಂದ ನನ್ನ ವಿಷಯದಲ್ಲಿ ಕೃಪೆದೋರಿ ನನ್ನನ್ನು ಸ್ವೀಕರಿಸಿರಿ.

ಮಹಾಭಾಗಾ ಭವತ್ಯೋ ವೈ ಶರಣ್ಯಾಃ ಶರಣಾಗತಾಮ್ ।
ಪರಿತ್ರಾಯನ್ತು ಮಾಂ ನಿತ್ಯಂ ಭಜಮಾನಾಮನಿನ್ದಿತಾಮ್ ॥೨೦॥

ನೀವೆಲ್ಲರೂ ಮಹಾಭಾಗ್ಯವತಿಯರು. ಶರಣಾಗತರಾಗಿ ಬಂದವರಿಗೆ ಆಶ್ರಯವನ್ನು ಕೊಡತಕ್ಕವರು. ನಾನೀಗ ನಿಮ್ಮಲ್ಲಿಗೆ ಶರಣಾಗತಳಾಗಿ ಬಂದಿರುವೆನು. ನಿಮ್ಮನ್ನೇ ಸೇವಿಸಲು ಇಚ್ಛಿಸುತ್ತಿರುವ, ಅನಿಂದ್ಯಳಾದ ನನಗೆ ಆಶ್ರಯವನ್ನಿತ್ತು ಅನುದಿನವೂ ಸಂರಕ್ಷಿಸಿರಿ.

ಮಾನನಾಮಹಮಿಚ್ಛಾಮಿ ಭವತ್ಯಃ ಸತತಂ ಶಿವಾಃ ।
ಅಪ್ಯೇಕಾಙ್ಗೇಷ್ವಧೋ ವಸ್ತುಮಿಚ್ಛಾಮಿ ಚ ಸುಕುತ್ಸಿತೇ ॥೨೧॥

ಗೋವುಗಳೇ! ನೀವು ಎಲ್ಲರಿಗೂ ಸದಾ ಕಲ್ಯಾಣವನ್ನುಂಟು ಮಾಡುತ್ತಿರುವಿರಿ. ನಾನು ನಿಮ್ಮಿಂದ ಮಾನ್ಯತೆಯನ್ನು ಪಡೆಯಲು ಬಯಸುತ್ತೇನೆ.

ನಿಮ್ಮ ಯಾವುದಾದರೂ ಅಂಗದಲ್ಲಿ–ಅದು ಕುತ್ಸಿತವಾದ ಅಂಗವೇ ಆಗಿದ್ದರೂ ಸರಿಯೇ–ಅಲ್ಲಿ ವಾಸಮಾಡಿಕೊಂಡಿರಲು ಬಯಸುತ್ತೇನೆ. ಅಷ್ಟಕ್ಕಾದರೂ ಅವಕಾಶವನ್ನು ಮಾಡಿಕೊಡಿರಿ.

ನ ವೋಽಸ್ತಿ ಕುತ್ಸಿತಂ ಕಿಂಚಿದಙ್ಗೇಷ್ವಾಲಕ್ಷ್ಯತೇಽನಘಾಃ ।
ಪುಣ್ಯಾಃ ಪವಿತ್ರಾಃ ಸುಭಗಾ ಮಮಾದೇಶಂ ಪ್ರಯಚ್ಛಥ ।
ವಸೇಯಂ ಯತ್ರ ವೋ ದೇಹೇ ತನ್ಮೇ ವ್ಯಾಖ್ಯಾತುಮರ್ಹಥ ॥೨೨॥

ಪಾಪರಹಿತರಾದ ಗೋವುಗಳೇ! ನಿಜವಾಗಿ ಹೇಳುವುದಾದರೆ ನಿಮ್ಮ ಅಂಗಗಳಲ್ಲಿ ಕುತ್ಸಿತವಾದುದೆಂಬುದೇ ಇಲ್ಲ. ನೀವೆಲ್ಲರೂ ಪುಣ್ಯಾತ್ಮರು. ಪವಿತ್ರಾತ್ಮರು. ಭಾಗ್ಯವತಿಯರು. ನನಗೆ ಆಜ್ಞೆಯನ್ನು ಮಾಡಿರಿ. ನಿಮ್ಮ ಶರೀರದ ಯಾವ ಅಂಗದಲ್ಲಿ ವಾಸಮಾಡಿಕೊಂಡಿರಬೇಕೆಂಬುದನ್ನು ನನಗೆ ಸ್ಪಷ್ಟವಾಗಿ ಹೇಳುವ ಕೃಪೆಮಾಡಿರಿ."

ಯುಧಿಷ್ಠಿರ! ಲಕ್ಷ್ಮಿಯು ಹೀಗೆ ಪ್ರಾರ್ಥಿಸಿಕೊಂಡನಂತರ ಕರುಣೆಯಿಂದಲೂ ವಾತ್ಸಲ್ಯದಿಂದಲೂ ಕೂಡಿದ್ದ, ಶುಭಸ್ವರೂಪಗಳಾದ ಎಲ್ಲ ಗೋವುಗಳೂ ಒಟ್ಟಾಗಿ ಸೇರಿ ಸಮಾಲೋಚಿಸಿ ಲಕ್ಷ್ಮಿಯೊಡನೆ ಹೇಳಿದುವು:

ಅವಶ್ಯಂ ಮಾನನಾ ಕಾರ್ಯಾ ತವಾಸ್ಮಾಭಿರ್ಯಶಸ್ವಿನೀ ।
ಶಕೃನ್ಮೂತ್ರೇ ನಿವಸ ತ್ವಂ ಪುಣ್ಯಮೇತದ್ಧಿ ನಃ ಶುಭೇ ॥೨೪॥

"ಶುಭಾಂಗಿಯೇ! ಯಶಸ್ವಿನಿಯೇ! ಅವಶ್ಯವಾಗಿ ನಾವು ನಿನ್ನನ್ನು ಸಮ್ಮಾನಿಸಲೇಬೇಕು. ಇದು ನಮ್ಮ ಕರ್ತವ್ಯವಾಗಿದೆ. ನೀನು ನಮ್ಮ ಸಗಣಿ-ಗಂಜಲಗಳಲ್ಲಿ ವಾಸಮಾಡು. ಇವೆರಡೂ ನಮ್ಮ ಪರಮಪವಿತ್ರವಾದ ವಸ್ತುಗಳಾಗಿವೆ."

ಲಕ್ಷ್ಮಿಯು ಹೇಳುತ್ತಾಳೆ:

ದಿಷ್ಟ್ಯಾ ಪ್ರಸಾದೋ ಯುಷ್ಮಾಭಿಃ ಕೃತೋ ಮೇಽನುಗ್ರಹಾತ್ಮಕಃ ।
ಏವಂ ಭವತು ಭದ್ರಂ ವಃ ಪೂಜಿತಾಸ್ಮಿ ಸುಖಪ್ರದಾ ॥೨೫॥

"ಸುಖಪ್ರದೆಯರಾದ ಗೋವುಗಳೇ! ನನ್ನ ಭಾಗ್ಯವಿಶೇಷದಿಂದ ನೀವು ನನಗೆ ಅನುಗ್ರಹರೂಪವಾದ ಪ್ರಸಾದವನ್ನು ಕರುಣೆಸಿರುವಿರಿ. ನಿಮ್ಮಲ್ಲಿ

ಆಶ್ರಯವನ್ನಿತ್ತು ನನ್ನನ್ನು ಅನುಗ್ರಹಿಸಿರುವಿರಿ. ನೀವು ಹೇಳಿದಂತೆಯೇ ನಾನು ಗೋಮಯ-ಗೋಮೂತ್ರಗಳಲ್ಲಿ ವಾಸಮಾಡಿಕೊಂಡಿರುತ್ತೇನೆ. ನಿಮ್ಮಿಂದ ಸತ್ಕೃತಳಾಗಿದ್ದೇನೆ. ನಿಮಗೆ ಮಂಗಳವಾಗಲಿ."

ಯುಧಿಷ್ಠಿರ! ಹೀಗೆ ಲಕ್ಷ್ಮಿಯು ಗೋವುಗಳೊಡನೆ ಒಡಂಬಡಿಕೆಯನ್ನು ಮಾಡಿಕೊಂಡು ಆ ಹಸುಗಳೆಲ್ಲವೂ ನೋಡುತ್ತಿದ್ದಂತೆಯೇ ಅಂತರ್ಹಿತಳಾದಳು. (ಮಾಯವಾದಳು.) ಹೀಗೆ ನಾನು ನಿನಗೆ ಗೋಮಯದ ಮಾಹಾತ್ಮ್ಯವನ್ನು ಹೇಳಿದ್ದೇನೆ. ಪುನಃ ನಾನು ಹೇಳಲಿರುವ ಗೋವುಗಳ ಮಾಹಾತ್ಮ್ಯವನ್ನು ಅವಧರಿಸು."

೮೨ನೆಯ ಅಧ್ಯಾಯವು ಮುಗಿಯಿತು.

೮೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮನು ಇಂದ್ರನಿಗೆ ಗೋವುಗಳ ಮತ್ತು ಗೋಲೋಕಗಳ ಉತ್ಕರ್ಷವನ್ನು ಹೇಳಿದುದು

ಭೀಷ್ಮನು ಹೇಳುತ್ತಾನೆ:

ಯೇ ಚ ಗಾಂ ಸಮ್ಪ್ರಯಚ್ಛನ್ತಿ ಹುತಶಿಷ್ಟಾಶಿನಶ್ಚ ಯೇ ।
ತೇಷಾಂ ಸತ್ರಾಣಿ ಯಜ್ಞಾಶ್ಚ ನಿತ್ಯಮೇವ ಯುಧಿಷ್ಠಿರ ॥೧॥

"ಯುಧಿಷ್ಠಿರ! ಯಾವ ಮನುಷ್ಯರು ಗೋವನ್ನು ದಾನಮಾಡುವರೋ ಮತ್ತು ಯಜ್ಞಶಿಷ್ಟವಾದ ಅನ್ನವನ್ನು ಊಟಮಾಡುವರೋ-ಅಂತಹವರಿಗೆ ಪ್ರತಿನಿತ್ಯವೂ ಅನ್ನದಾನಮಾಡಿದ ಮತ್ತು ಯಜ್ಞಮಾಡಿದ ಫಲವು ಲಭಿಸುತ್ತದೆ.

ಋತೇ ದಧಿ ಘೃತೇನೇಹ ನ ಯಜ್ಞಃ ಸಮ್ಪ್ರವರ್ತತೇ ।
ತೇನ ಯಜ್ಞಸ್ಯ ಯಜ್ಞತ್ವಮತೋ ಮೂಲಂ ಚ ಕಥ್ಯತೇ ॥೨॥

ಮೊಸರು-ತುಪ್ಪಗಳಿಲ್ಲದೇ ಯಜ್ಞವು ಸಂಪನ್ನವಾಗುವುದಿಲ್ಲ. ದಧಿ-ಘೃತಗಳಿಂದಲೇ ಯಜ್ಞಕ್ಕೆ ಯಜ್ಞತ್ವವು ಪ್ರಾಪ್ತವಾಗುವುದು. ಆದುದರಿಂದಲೇ ಹಸುವನ್ನು ಯಜ್ಞಕ್ಕೆ ಮೂಲವೆನ್ನುತ್ತಾರೆ.

ದಾನಾನಾಮಪಿ ಸರ್ವೇಷಾಂ ಗವಾಂ ದಾನಂ ಪ್ರಶಸ್ಯತೇ।
ಗಾವಃ ಶ್ರೇಷ್ಠಾಃ ಪವಿತ್ರಾಶ್ಚ ಪಾವನಂ ಹ್ಯೇತದುತ್ತಮಮ್ ॥೩॥

ಎಲ್ಲ ವಿಧವಾದ ದಾನಗಳಿಗಿಂತಲೂ ಗೋವುಗಳ ದಾನವು ಪ್ರಶಸ್ತವಾದುದು. ಗೋದಾನವು ಉತ್ತಮೋತ್ತಮವಾದುದು. ಗೋವುಗಳು ಶ್ರೇಷ್ಠವಾದುವುಗಳೂ, ಪವಿತ್ರವಾದುವುಗಳೂ, ಪರಮಪಾವನವಾದುವುಗಳೂ ಆಗಿವೆ.

ಪುಷ್ಟ್ಯರ್ಥಮೇತಾಃ ಸೇವೇತ ಶಾನ್ತ್ಯರ್ಥಮಪಿ ಚೈವ ಹ ।
ಪಯೋದಧಿಘೃತಂ ಚಾಸಾಂ ಸರ್ವಪಾಪಪ್ರಮೋಚನಮ್ ॥೪॥

ಮನುಷ್ಯನು ತನ್ನ ಶರೀರದ ಪುಷ್ಟಿಗಾಗಿಯೂ ಮತ್ತು ಎಲ್ಲ ವಿಧವಾದ ವಿಘ್ನಗಳ (ಕಷ್ಟಗಳ) ಉಪಶಮನಕ್ಕಾಗಿಯೂ ಗೋವುಗಳ ಸೇವೆಯನ್ನು ಮಾಡಬೇಕು. ಗೋವುಗಳ ಹಾಲು-ಮೊಸರು-ತುಪ್ಪಗಳು ಸಕಲವಿಧವಾದ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದಿಸುತ್ತವೆ.

ಗಾವಸ್ತೇಜಃ ಪರಂ ಪ್ರೋಕ್ತಮಿಹ ಲೋಕೇ ಪರತ್ರ ಚ ।
ನ ಗೋಭ್ಯಃ ಪರಮಂ ಕಿಂಚಿತ್ಪವಿತ್ರಂ ಭರತರ್ಷಭ ॥೫॥

ಭರತಶ್ರೇಷ್ಠನೇ! ಗೋವುಗಳು ಇಹಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಮಹಾತೇಜೋರೂಪಗಳೆಂದು ಹೇಳಲ್ಪಟ್ಟಿವೆ. ಗೋವುಗಳಿಗಿಂತಲೂ ಪರಮಪವಿತ್ರವಾದುದು ಬೇರೆಯಾವುದೂ ಇಲ್ಲ. ಈ ವಿಷಯದಲ್ಲಿ ಹಿಂದೆ ಪಿತಾಮಹನಿಗೂ ಮತ್ತು ಇಂದ್ರನಿಗೂ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಹಿಂದೆ ದೇವತೆಗಳು ದೈತ್ಯರನ್ನು ಪರಾಜಯಗೊಳಿಸಿದನಂತರ ಇಂದ್ರನು ತ್ರಿಲೋಕಾಧಿಪತಿಯಾದನು. ಅವನ ಆಧಿಪತ್ಯದಲ್ಲಿ ಪ್ರಜೆಗಳೆಲ್ಲರೂ ಪರಮ ಹೃಷ್ಟರಾಗಿಯೂ, ಸತ್ಯ-ಧರ್ಮಪರಾಯಣರಾಗಿಯೂ ಇದ್ದರು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಋಷಿಗಳೂ, ಗಂಧರ್ವರೂ, ಕಿನ್ನರರೂ, ನಾಗರೂ, ರಾಕ್ಷಸರೂ, ದೇವಾಸುರರೂ, ಸುಪರ್ಣರೂ, ಪ್ರಜಾಪತಿಗಳೂ ಬ್ರಹ್ಮನ ಸೇವೆಯಲ್ಲಿ ತೊಡಗಿದ್ದರು. ನಾರದ-ಪರ್ವತರೂ, ವಿಶ್ವಾವಸುವೂ, ಹಾಹಾ

ಮತ್ತು ಹೂಹೂಗಳೆಂಬ ಗಂಧರ್ವರೂ ದಿವ್ಯತಾನಗಳಲ್ಲಿ (ಸ್ವರಪ್ರಸ್ತಾರಗಳಲ್ಲಿ) ಹಾಡುತ್ತಾ ಪ್ರಭುವಾದ ಬ್ರಹ್ಮನನ್ನು ಉಪಾಸಿಸುತ್ತಿದ್ದರು. ವಾಯುದೇವನು ದಿವ್ಯಪುಷ್ಪಗಳನ್ನು ಬ್ರಹ್ಮನ ಪೂಜೆಗಾಗಿ ಹೊತ್ತುತಂದನು. ಆರು ಋತುಗಳೂ ಸುಗಂಧಯುಕ್ತವಾದ ಪುಷ್ಪಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ಬ್ರಹ್ಮನ ಪೂಜೆಗಾಗಿ ತಂದುವು. ಬ್ರಹ್ಮನ ಪೂಜೆಗಾಗಿ ದೇವತೆಗಳ ಸಮೂಹವೇ ಅಲ್ಲಿ ಸೇರಿದ್ದಿತು. ಸಕಲಪ್ರಾಣಿಗಳೂ ಅಲ್ಲಿಗೆ ಆಗಮಿಸಿದ್ದುವು. ಆ ಸ್ಥಳವು ದಿವ್ಯಸ್ತ್ರೀಯರಿಂದಲೂ ಚಾರಣರಿಂದಲೂ ಸಮಾವೃತವಾಗಿದ್ದಿತು. ದಿವ್ಯವಾದ ವಾದ್ಯಗಳು ಮೊಳಗುತ್ತಿದ್ದುವು. ಆ ಸಂದರ್ಭದಲ್ಲಿ ಇಂದ್ರನು ದೇವೇಶನಾದ ಬ್ರಹ್ಮನಿಗೆ ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಪ್ರಶ್ನಿಸಿದನು:

ದೇವಾನಾಂ ಭಗವನ್ಕಸ್ಮಾಲ್ಲೋಕೇಶಾನಾಂ ಪಿತಾಮಹ ।
ಉಪರಿಷ್ಟಾದ್ಗವಾಂ ಲೋಕ ಏತದಿಚ್ಛಾಮಿ ವೇದಿತುಮ್ ॥೧೩॥

"ಪಿತಾಮಹನೇ! ಪೂಜ್ಯನೇ! ಗೋಲೋಕವು ಯಾವ ಕಾರಣದಿಂದ ದೇವತೆಗಳ ಮತ್ತು ಲೋಕಪಾಲರ ಲೋಕಗಳಿಗಿಂತಲೂ ಮೇಲಿದೆ? ಈ ವಿಷಯವನ್ನು ತಿಳಿಯಲು ಅಪೇಕ್ಷಿಸಿದ್ದೇನೆ.

ಕಿಂ ತಪೋ ಬ್ರಹ್ಮಚರ್ಯಂ ವಾ ಗೋಭಿಃ ಕೃತಮಿಹೇಶ್ವರ ।
ದೇವಾನಾಮುಪರಿಷ್ಟಾದ್ಯದ್ವಸನ್ತ್ಯರಜಸಃ ಸುಖಮ್ ॥೧೪॥

ಈಶ್ವರನೇ! ಗೋವುಗಳು ದೇವತೆಗಳಿಗಿಂತಲೂ ಮೇಲ್ಭಾಗದಲ್ಲಿ ರಜೋಗುಣದಿಂದ ರಹಿತವಾಗಿ ಸುಖದಿಂದ ವಾಸಮಾಡುತ್ತವೆ. ಅಂತಹ ಉನ್ನತಸ್ಥಾನವನ್ನು ಹೊಂದಲು ಅವು ಯಾವ ತಪಸ್ಸನ್ನು ಮಾಡಿದುವು? ಯಾವ ರೀತಿಯಲ್ಲಿ ಬ್ರಹ್ಮಚರ್ಯವ್ರತವನ್ನು ಪಾಲಿಸುತ್ತಿದ್ದುವು?–ಎಂಬುದನ್ನು ಹೇಳು."

ಇಂದ್ರನು ಹೀಗೆ ಪ್ರಶ್ನಿಸಲಾಗಿ ಬ್ರಹ್ಮನು ಬಲಾಸುರಹಂತಕನಾದ ಇಂದ್ರನಿಗೆ ಹೇಳಿದನು:

"ಬಲನಿಷೂದನನೇ! ನೀನು ನಿತ್ಯವೂ ಗೋವುಗಳನ್ನು ಅನಾದರಣೆ ಮಾಡುತ್ತಿರುವೆ. ಈ ಕಾರಣದಿಂದಲೇ ನೀನು ಅವುಗಳ ಮಾಹಾತ್ಮ್ಯವನ್ನು

ತಿಳಿದವನಾಗಿಲ್ಲ. ಗೋವುಗಳ ಪರಮಪ್ರಭಾವವನ್ನೂ ಮತ್ತು ಮಾಹಾತ್ಮ್ಯ ವನ್ನೂ ಹೇಳುವೆನು; ಕೇಳು:

ಯಜ್ಞಾಙ್ಗಂ ಕಥಿತಾ ಗಾವೋ ಯಜ್ಞ ಏವ ಚ ವಾಸವ ।
ಏತಾಭಿಶ್ಚ ವಿನಾ ಯಜ್ಞೋ ನ ವರ್ತೇತ ಕಥಂಚನ ॥೧೭॥

ವಾಸವನೇ! ಗೋವುಗಳನ್ನು ಯಜ್ಞಾಂಗವೆಂದೂ ಸಾಕ್ಷಾತ್ ಯಜ್ಞವೇ ಎಂದೂ ಹೇಳುತ್ತಾರೆ. ಏಕೆಂದರೆ: ಅವುಗಳಿಲ್ಲದೇ (ಅವುಗಳ ದಧಿ-ಕ್ಷೀರ-ಘೃತಗಳಿಲ್ಲದೇ) ಯಜ್ಞವೇ ನಡೆಯುವಂತಿಲ್ಲ.

ಧಾರಯನ್ತಿ ಪ್ರಜಾಶ್ಚೈವ ಪಯಸಾ ಹವಿಷಾ ತಥಾ ।
ಏತಾಸಾಂ ತನಯಾಶ್ಚಾಪಿ ಕೃಷಿಯೋಗಮುಪಾಸತೇ ।
ಜನಯನ್ತಿ ಚ ಧಾನ್ಯಾನಿ ಬೀಜಾನಿ ವಿವಿಧಾನಿ ಚ ॥೧೮॥

ಗೋವುಗಳು ಹಾಲು-ಮೊಸರು-ತುಪ್ಪಗಳಿಂದ ಪ್ರಜೆಗಳ ಪಾಲನೆ-ಪೋಷಣೆಗಳನ್ನು ಮಾಡುತ್ತವೆ. ಅವುಗಳಲ್ಲಿ ಹುಟ್ಟುವ ಗಂಡುಕರುಗಳು (ಹೋರಿಗಳು) ಕೃಷಿಯ ಕೆಲಸಕ್ಕೆ ಅನುವಾಗುತ್ತವೆ. ಧಾನ್ಯಗಳನ್ನೂ ವಿಧ-ವಿಧವಾದ ಬೀಜಗಳನ್ನೂ ಉತ್ಪಾದಿಸುತ್ತವೆ.

ತತೋ ಯಜ್ಞಾಃ ಪ್ರವರ್ತನ್ತೇ ಹವ್ಯಂ ಕವ್ಯಂ ಚ ಸರ್ವಶಃ ॥೧೯॥
ಪಯೋದಧಿಘೃತಂ ಚೈವ ಪುಣ್ಯಾಶ್ಚೈತಾಃ ಸುರಾಧಿಪ ।
ವಹನ್ತಿ ವಿವಿಧಾನ್ಭಾರಾನ್ ಕ್ಷುತ್ತೃಷ್ಣಾಪರಿಪೀಡಿತಾಃ ॥೨೦॥

ಸುರಾಧಿಪನೇ! ಗೋವುಗಳಿಂದಲೇ ಯಜ್ಞಗಳೂ, ಹವ್ಯ-ಕವ್ಯಗಳೂ* ನಡೆಯುತ್ತವೆ. ಪುಣ್ಯರೂಪಿಗಳಾದ ಗೋವುಗಳು ಹಾಲು- ಮೊಸರು-ತುಪ್ಪಗಳನ್ನು ಕೊಡುತ್ತವೆ. ಎತ್ತುಗಳು ಹಸಿವು-ಬಾಯಾರಿಕೆಗಳಿಂದ ಬಳಲಿದ್ದರೂ ಅನೇಕರೀತಿಯ ಭಾರಗಳನ್ನು ಹೊರುತ್ತವೆ.

ಮುನೀಂಶ್ಚ ಧಾರಯನ್ತೀಹ ಪ್ರಜಾಶ್ಚೈವಾಪಿ ಕರ್ಮಣಾ ।
ವಾಸವಾಕೂಟವಾಹಿನ್ಯಃ ಕರ್ಮಣಾ ಸುಕೃತೇನ ಚ ॥೨೧॥

ಹೀಗೆ ಗೋವುಗಳು ತಮ್ಮ ಕರ್ಮಗಳಿಂದ ಋಷಿಗಳನ್ನೂ ಪ್ರಜೆ

---

*ಹವ್ಯಂ: ದೇವತೆಗಳಿಗೆ ಕೊಡುವ ಆಹುತಿ.; ಕವ್ಯಂ: ಪಿತೃಗಳಿಗೆ ಕೊಡುವ ಆಹುತಿ.

ಗಳನ್ನೂ ಪರಿಪಾಲಿಸುತ್ತವೆ. ವಾಸವನೇ! ಅವುಗಳ ವ್ಯವಹಾರದಲ್ಲಿ ಕೌಟಿಲ್ಯ ವೆಂಬುದೇ ಇಲ್ಲ. ಸದಾ ಸತ್ಕರ್ಮಗಳಲ್ಲಿಯೇ ತೊಡಗಿರುತ್ತವೆ. ಈ ಕಾರಣ ದಿಂದಲೇ ಗೋವುಗಳು ಯಾವಾಗಲೂ ನಮಗಿಂತಲೂ ಮೇಲ್ಭಾಗದಲ್ಲಿ ವಾಸಮಾಡುತ್ತವೆ.

ನಾನು ನಿನ್ನ ಪ್ರಶ್ನೆಗೆ ಅನುಗುಣವಾಗಿ ಗೋವುಗಳು ದೇವತೆಗಳ ಲೋಕಗಳಿಗಿಂತಲೂ ಮೇಲಿನ ಲೋಕದಲ್ಲಿ ಹೇಗೆ ವಾಸಮಾಡುತ್ತಿವೆ ಯೆಂಬುದಕ್ಕೆ ಕಾರಣವನ್ನು ತಿಳಿಸಿರುತ್ತೇನೆ. ಹೀಗೆ ಗೋವುಗಳಿಗೆ ಅಮೂಲ್ಯವಾದ ವರಗಳೂ ಲಭಿಸಿವೆ. ಮೇಲಾಗಿ ಪ್ರಸನ್ನವಾದ ಗೋವುಗಳು ಭಕ್ತರಿಗೆ ವರಗಳನ್ನೂ ಕೊಡುತ್ತವೆ.

ಸುರಭಿಗೋವುಗಳು ಪುಣ್ಯಕರ್ಮಗಳನ್ನು ಮಾಡತಕ್ಕುವುಗಳು. ಪಾವನ ವಾದುವುಗಳು. ಶುಭಲಕ್ಷಣಗಳಿಂದ ಕೂಡಿರತಕ್ಕುವುಗಳು. ಸುರಶ್ರೇಷ್ಠನೇ! ಯಾವ ಕಾರಣದಿಂದ ಈ ಸುರಭಿಗೋವುಗಳು ಭೂಲೋಕಕ್ಕೆ ಹೋದು ವೆಂಬುದನ್ನು ಹೇಳುವೆನು; ಕೇಳು:

ಹಿಂದೆ ಸತ್ಯಯುಗದಲ್ಲಿ ಮಹಾತ್ಮರಾದ ದೇವಶ್ರೇಷ್ಠರು ಮೂರು ಲೋಕಗಳನ್ನೂ ಆಳುತ್ತಿದ್ದರು. ಆ ಸಮಯದಲ್ಲಿ ಅದಿತಿಯು ಪುತ್ರನನ್ನು ಪಡೆಯುವ ಸಲುವಾಗಿ ಒಂದೇ ಕಾಲಿನಿಂದ ನಿಂತು ದುಶ್ಚರವಾದ ಮತ್ತು ಘೋರವಾದ ತಪಸ್ಸನ್ನು ಮಾಡುತ್ತಿದ್ದಳು. ಅದಿತಿಯ ತಪಸ್ಸಿನಿಂದ ಸುಪ್ರೀತ ನಾದ ಮಹಾವಿಷ್ಣುವು ಅವಳಿಗೆ ಮಗನಾಗಿ ಹುಟ್ಟುವ ಆಶಯದಿಂದ ತಾನೇ ಅವಳ ಗರ್ಭದಲ್ಲಿ ಸೇರಿಕೊಂಡನು. ಮಹಾದೇವಿಯಾದ ಅದಿತಿಯು ಮಹಾ ತಪಸ್ಸನ್ನು ಮಾಡುತ್ತಿದ್ದುದನ್ನು ನೋಡಿ ದಕ್ಷನ ಮಗಳಾದ, ಧರ್ಮಪರಾಯಣೆ ಯಾದ ಸುರಭಿದೇವಿಯೂ ಪರಮಹೃಷ್ಟಳಾಗಿ ತಾನೂ ಕೂಡ ಘೋರವಾದ ತಪಸ್ಸಿನಲ್ಲಿ ತೊಡಗಿದಳು. ದೇವ- ಗಂಧರ್ವರಿಂದ ಸಂಸೇವಿತವಾದ ರಮ್ಯ ವಾದ ಕೈಲಾಸಶಿಖರದಲ್ಲಿ ಶ್ರೇಷ್ಠವಾದ ಯೋಗವನ್ನಾಶ್ರಯಿಸಿ ಹನ್ನೊಂದು ಸಾವಿರ ವರ್ಷಗಳ ಕಾಲ ಸುರಭಿಯು ಒಂದೇ ಕಾಲಿನಲ್ಲಿ ನಿಂತು ತಪಸ್ಸನ್ನು ಮಾಡುತ್ತಿದ್ದಳು. ಋಷಿಗಳಿಂದಲೂ ಮಹಾಸರ್ಪಗಳಿಂದಲೂ ಯುಕ್ತರಾದ ದೇವತೆಗಳು ಸುರಭಿಯ ಕಠೋರವಾದ ತಪಸ್ಸಿನಿಂದ ಪರಿತಪಿಸಿದರು. ಆ ಸಮಯದಲ್ಲಿ ಅವರೆಲ್ಲರೂ ರಕ್ಷಣಾರ್ಥವಾಗಿ ನನ್ನ ಬಳಿಗೆ ಬಂದರು.

ನಾವೆಲ್ಲರೂ ಸೇರಿ ಸುರಭಿಯು ತಪಸ್ಸುಮಾಡುತ್ತಿದ್ದ ಕೈಲಾಸಶಿಖರಕ್ಕೆ ಹೋದೆವು. ತಪಸ್ವಿನಿಯಾದ ಸುರಭಿದೇವಿಯನ್ನು ನಾನು ಪ್ರಶ್ನಿಸಿದೆನು:



ಕಿಮರ್ಥಂ ತಪ್ಯಸೇ ದೇವಿ ತಪೋ ಘೋರಮನಿನ್ದಿತೇ ।
ಪ್ರೀತಸ್ತೇಽಹಂ ಮಹಾಭಾಗೇ ತಪಸಾನೇನ ಶೋಭನೇ ॥೩೨॥
ವರಯಸ್ವ ವರಂ ದೇವಿ ದಾತಾಸ್ಮೀತಿ ಪುರಂದರ ॥೩೩॥

"ಅನಿಂದ್ಯಳೇ! ದೇವಿ! ನೀನು ಯಾವ ಕಾರಣದಿಂದ ಈ ಘೋರವಾದ ತಪಸ್ಸನ್ನು ಮಾಡುತ್ತಿರುವೆ? ಮಹಾಭಾಗಳೇ! ನಿನ್ನ ತಪಸ್ಸಿನಿಂದ ನಾನು

ಸುಪ್ರೀತನಾಗಿದ್ದೇನೆ. ಶೋಭನಳೇ! ನಿನಗೆ ಬೇಕಾದ ವರವನ್ನು ಕೇಳು. ನೀನು ಕೇಳಿದ ವರವನ್ನು ಕೊಡುವೆನು.”

ನನ್ನ ಪ್ರಶ್ನೆಗೆ ಉತ್ತರವಾಗಿ ಸುರಭಿಯು ಹೇಳಿದಳು:

ವರೇಣ ಭಗವನ್ಮಹ್ಯಂ ಕೃತಂ ಲೋಕಪಿತಾಮಹ ।
ಏಷ ಏವ ವರೋ ಮೇಽದ್ಯ ಯತ್ಪ್ರೀತೋಽಸಿ ಮಯಾನಘ ॥೩೪॥

“ಅನಘನೇ! ಪೂಜ್ಯನೇ! ಲೋಕಪಿತಾಮಹನೇ! ನೀನು ವರವನ್ನು ದಯಪಾಲಿಸಿಯಾಗಿದೆ. ನೀನು ಸುಪ್ರೀತನಾಗಿರುವುದೇ ನನಗೆ ಮಹಾವರ ವಾಗಿದೆ.”

ತ್ರಿದಶೇಶ್ವರನೇ! ಶಚೀಪತಿಯೇ! ದೇವೇಂದ್ರ! ಹಾಗೆ ಹೇಳಿದ ಸುರಭಿಗೆ ನಾನು ಪುನಃ ಏನು ಹೇಳಿದೆನೆಂಬುದನ್ನು ಕೇಳು:

ಅಲೋಭಕಾಮ್ಯಯಾ ದೇವಿ ತಪಸಾ ಚ ಶುಭಾನನೇ ।
ಪ್ರಸನ್ನೋಽಹಂ ವರಂ ತಸ್ಮಾದಮರತ್ವಂ ದದಾಮಿ ತೇ ॥೩೬॥

“ದೇವಿ! ಶುಭಾನನೆಯೇ! ಯಾವ ವಿಧವಾದ ಲೋಭ-ಕಾಮನೆಗಳೂ ಇಲ್ಲದೇ ನೀನು ಮಾಡಿರುವ ತಪಸ್ಸಿನಿಂದ ನಾನು ಪರಮಪ್ರೀತನಾಗಿದ್ದೇನೆ. ಆದುದರಿಂದ ನಿನಗೆ ಅಮರತ್ವದ ವರವನ್ನು ಕೊಡುತ್ತೇನೆ.

ತ್ರಯಾಣಾಮಪಿ ಲೋಕಾನಾಮುಪರಿಷ್ಟಾನ್ನಿವತ್ಸ್ಯಸಿ ।
ಮತ್ಪ್ರಸಾದಾಚ್ಚ ವಿಖ್ಯಾತೋ ಗೋಲೋಕಃ ಸಮ್ಭವಿಷ್ಯತಿ ॥೩೭॥

ನನ್ನ ಕೃಪೆಯಿಂದ ನೀನು ಸ್ವರ್ಗ-ಮರ್ತ್ಯ-ಪಾತಾಳಲೋಕಗಳಿಗೂ ಮೇಲಿರುವ ಲೋಕದಲ್ಲಿ ವಾಸಮಾಡುವೆ. ನೀನು ವಾಸಮಾಡುವ ಲೋಕವು ಗೋಲೋಕವೆಂದೇ ವಿಖ್ಯಾತವಾಗುತ್ತದೆ.

ಮಾನುಷೇಷು ಚ ಕುರ್ವಾಣಾಃ ಪ್ರಜಾಃ ಕರ್ಮ ಶುಭಾಸ್ತವ ।
ನಿವತ್ಸ್ಯನ್ತಿ ಮಹಾಭಾಗೇ ಸರ್ವಾ ದುಹಿತರಶ್ಚ ತೇ ॥೩೮॥

ಮಹಾಭಾಗಳೇ! ನಿನ್ನ ಶುಭಪ್ರಜೆಗಳೂ (ಹೋರಿಗಳೂ), ಎಲ್ಲ ಹೆಣ್ಣು ಮಕ್ಕಳೂ (ಕಡಸುಗಳೂ) ಮನುಷ್ಯಲೋಕದಲ್ಲಿ ಮಾನವರಿಗೆ ಉಪಯುಕ್ತ ವಾದ ಕರ್ಮಗಳನ್ನು ಮಾಡುತ್ತಾ ವಾಸಿಸುತ್ತವೆ.

ಮನಸಾ ಚಿನ್ತಿತಾ ಭೋಗಾಸ್ತ್ವಯಾ ವೈ ದಿವ್ಯಮಾನುಷಾಃ ।
ಯಚ್ಚ ಸ್ವರ್ಗೇ ಸುಖಂ ದೇವಿ ತತ್ತೇ ಸಮ್ಪತ್ಸ್ಯತೇ ಶುಭೇ ॥೩೯॥

ಶುಭಕರಳೇ! ನೀನು ಮನಸ್ಸಿನಲ್ಲಿ ಚಿಂತಿಸುವ ದೇವ-ಮನುಷ್ಯ ಭೋಗಗಳು ನಿನಗೆ ಒಡನೆಯೇ ಲಭಿಸುತ್ತವೆ. ಸ್ವರ್ಗೀಯಸುಖವೂ ಪ್ರಾಪ್ತವಾಗುತ್ತದೆ"–ಎಂದು ಹೇಳಿ ನಾನು ಸುರಭಿಯನ್ನು ಸಂತೈಸಿದೆನು.

ತಸ್ಯಾ ಲೋಕಾಃ ಸಹಸ್ರಾಕ್ಷ ಸರ್ವಕಾಮಸಮನ್ವಿತಾಃ ।
ನ ತತ್ರ ಕ್ರಮತೇ ಮೃತ್ಯುರ್ನ ಜರಾ ನ ಚ ಪಾವಕಃ ॥೪೦॥

ಸಹಸ್ರಾಕ್ಷನೇ! ಸುರಭಿಯು ವಾಸಿಸುತ್ತಿರುವ ಗೋಲೋಕಗಳು ಸಕಲವಿಧವಾದ ಕಾಮನಾವಸ್ತುಗಳಿಂದಲೂ ಸಂಪನ್ನವಾಗಿವೆ. ಅಲ್ಲಿ ಜರಾ-ಮರಣಗಳ ಬಾಧೆಯಾಗಲೀ, ಅಗ್ನಿಯ ಬಾಧೆಯಾಗಲೀ, ಇರುವುದಿಲ್ಲ.

ನ ದೈವಂ ನಾಶುಭಂ ಕಿಂಚಿದ್ವಿದ್ಯತೇ ತತ್ರ ವಾಸವ ।
ತತ್ರ ದಿವ್ಯಾನ್ಯರಣ್ಯಾನಿ ದಿವ್ಯಾನಿ ಭವನಾನಿ ಚ ।
ವಿಮಾನಾನಿ ಸುಯುಕ್ತಾನಿ ಕಾಮಗಾನಿ ಚ ವಾಸವ ॥೪೧॥

ಆ ಗೋಲೋಕಗಳಲ್ಲಿ ದೈವಿಕವಾದ ಉಪದ್ರವಗಳು ಉಂಟಾಗುವುದಿಲ್ಲ. ಯಾರಿಗೂ ಅಮಂಗಳವುಂಟಾಗುವುದಿಲ್ಲ. ಅಲ್ಲಿ ದಿವ್ಯವಾದ ಅರಣ್ಯಗಳೂ, ದಿವ್ಯವಾದ ಭವನಗಳೂ, ಸುಂದರವಾದ ಮತ್ತು ಇಚ್ಛಾನುಸಾರವಾಗಿ ಹೋಗುವ ವಿಮಾನಗಳೂ ಇವೆ.

ಬ್ರಹ್ಮಚರ್ಯೇಣ ತಪಸಾ ಯತ್ನೇನ ಚ ದಮೇನ ಚ ।
ದಾನೈಶ್ಚ ವಿವಿಧೈಃ ಪುಣ್ಯೈಸ್ತಥಾ ತೀರ್ಥಾನುಸೇವನಾತ್ ॥೪೨॥
ತಪಸಾ ಮಹತಾ ಚೈವ ಸುಕೃತೇನ ಚ ಕರ್ಮಣಾ ।
ಶಕ್ಯಃ ಸಮಾಸಾದಯಿತುಂ ಗೋಲೋಕಃ ಪುಷ್ಕರೇಕ್ಷಣ ॥೪೩॥

ಪುಷ್ಕರಾಕ್ಷನೇ! ದೇವೇಂದ್ರ! ಬ್ರಹ್ಮಚರ್ಯ, ತಪಸ್ಸು, ಪ್ರಯತ್ನ, ಇಂದ್ರಿಯನಿಗ್ರಹ, ನಾನಾಪ್ರಕಾರವಾದ ದಾನಗಳು, ಪುಣ್ಯಕರ್ಮಗಳು, ತೀರ್ಥಯಾತ್ರೆ, ಮಹಾತಪಸ್ಸು ಮತ್ತು ಸತ್ಕರ್ಮಗಳ ಅನುಷ್ಠಾನ-ಇವುಗಳಿಂದ ಗೋಲೋಕಕ್ಕೆ ಹೋಗಲು ಸಾಧ್ಯವಾಗುತ್ತದೆ.

ಅಸುರಹಂತಕನೇ! ಶಕ್ರ! ನಾನು ಗೋವಿನ ವಿಷಯವಾಗಿ ಎಲ್ಲವನ್ನೂ ನಿನಗೆ ಹೇಳಿರುವೆನು. ಇನ್ನು ಮುಂದಾದರೂ ನೀನು ಗೋವುಗಳ ವಿಷಯದಲ್ಲಿ ಅನಾದರಣೆಯನ್ನು ಮಾಡಬಾರದು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಬ್ರಹ್ಮನ ಮಾತನ್ನು ಕೇಳಿ ಸಹಸ್ರಾಕ್ಷನು ಅನುದಿನವೂ ಗೋವುಗಳನ್ನು ಪೂಜಿಸತೊಡಗಿದನು ಮತ್ತು ಮುಂದೆ ಅವುಗಳ ವಿಷಯದಲ್ಲಿ ಗೌರವಭಾವದಿಂದಿರತೊಡಗಿದನು.

ಮಹಾತೇಜಸ್ವಿಯೇ! ನಿನಗೆ ನಾನು ಪಾವನವಾದ, ಪರಮಪವಿತ್ರವಾದ ಉತ್ತಮೋತ್ತಮವಾದ ಗೋವುಗಳ ಮಾಹಾತ್ಮ್ಯವನ್ನು ಸಮಗ್ರವಾಗಿ ಹೇಳಿರುವೆನು.

ಕೀರ್ತಿತಂ ಪುರುಷವ್ಯಾಘ್ರ ಸರ್ವಪಾಪವಿಮೋಚನಮ್ ।
ಯ ಇದಂ ಕಥಯೇನ್ನಿತ್ಯಂ ಬ್ರಾಹ್ಮಣೇಭ್ಯಃ ಸಮಾಹಿತಃ ॥೪೮॥
ಹವ್ಯಕವ್ಯೇಷು ಯಜ್ಞೇಷು ಪಿತೃಕಾರ್ಯೇಷು ಚೈವ ಹ ।
ಸಾರ್ವಕಾಮಿಕಮಕ್ಷಯ್ಯಂ ಪಿತೄಂಸ್ತಸ್ಯೋಪತಿಷ್ಠತೇ ॥೪೯॥

ಪುರುಷಸಿಂಹನೇ! ಧರ್ಮಜ! ಈ ಗೋಮಾಹಾತ್ಮ್ಯದ ಕೀರ್ತನವು ಸಕಲಪಾಪಗಳನ್ನೂ ಹೋಗಲಾಡಿಸುತ್ತದೆ. ಏಕಾಗ್ರಚಿತ್ತನಾಗಿ ಹವ್ಯ-ಕವ್ಯಗಳ ಸಮಯದಲ್ಲಿ, ಯಜ್ಞದ ಸಮಯದಲ್ಲಿ, ಪಿತೃಕಾರ್ಯಗಳಲ್ಲಿ ಭಾಗವಹಿಸುವ ಬ್ರಾಹ್ಮಣರಿಗೆ ಗೋಮಹಿಮೆಯನ್ನು ಶ್ರುತಪಡಿಸುವುದರಿಂದ ಅವನ ಪಿತೃಗಳಿಗೆ ಅಕ್ಷಯವಾದ ಸಕಲಕಾಮನೆಗಳೂ ಲಭಿಸುತ್ತವೆ.

ಗೋಷು ಭಕ್ತಶ್ಚ ಲಭತೇ ಯದ್ಯದಿಚ್ಛತಿ ಮಾನವಃ ।
ಸ್ತ್ರಿಯೋಽಪಿ ಭಕ್ತಾ ಯಾ ಗೋಷು ತಾಶ್ಚ ಕಾಮಮವಾಪ್ನುಯುಃ ॥

ಗೋಭಕ್ತನು ಅಪೇಕ್ಷಿಸಿದ ವಸ್ತುಗಳೆಲ್ಲವನ್ನೂ ಪಡೆದುಕೊಳ್ಳುತ್ತಾನೆ. ಗೋಭಕ್ತೆಯರಾದ ಸ್ತ್ರೀಯರೂ ಸಕಲಕಾಮನೆಗಳನ್ನೂ ಹೊಂದುತ್ತಾರೆ.

ಪುತ್ರಾರ್ಥೀ ಲಭತೇ ಪುತ್ರಂ ಕನ್ಯಾರ್ಥೀ ತಾಮವಾಪ್ನುಯಾತ್ ।
ಧನಾರ್ಥೀ ಲಭತೇ ವಿತ್ತಂ ಧರ್ಮಾರ್ಥೀ ಧರ್ಮಮಾಪ್ನುಯಾತ್ ॥

ವಿದ್ಯಾರ್ಥೀ ಚಾಪ್ನುಯಾದ್ವಿದ್ಯಾಂ ಸುಖಾರ್ಥೀ ಪ್ರಾಪ್ನುಯಾತ್ಸುಖಮ್ ।
ನ ಕಿಂಚಿದ್ದುರ್ಲಭಂ ಚೈವ ಗವಾಂ ಭಕ್ತಸ್ಯ ಭಾರತ ॥೫೨॥

ಗೋಮಾಹಾತ್ಮ್ಯದ ಶ್ರವಣ-ಪಠನಾದಿಗಳಿಂದ ಪುತ್ರನನ್ನಪೇಕ್ಷಿಸುವವನು ಪುತ್ರನನ್ನೂ, ಕನ್ಯೆಯನ್ನಪೇಕ್ಷಿಸುವವನು ಕನ್ಯೆಯನ್ನೂ, ಧನವನ್ನಪೇಕ್ಷಿಸುವವನು ಧನವನ್ನೂ, ಧರ್ಮವನ್ನಪೇಕ್ಷಿಸುವವನು ಧರ್ಮವನ್ನೂ ಪಡೆದುಕೊಳ್ಳುತ್ತಾನೆ. ವಿದ್ಯಾರ್ಥಿಯು ವಿದ್ಯೆಯನ್ನೂ ಸುಖಾರ್ಥಿಯು ಸುಖವನ್ನೂ ಪಡೆದುಕೊಳ್ಳುತ್ತಾನೆ. ಭಾರತನೇ! ಗೋಭಕ್ತನಿಗೆ ದುರ್ಲಭವಾದ ವಸ್ತುವು ಯಾವುದೂ ಇಲ್ಲ."

ಲ೩ನೆಯ ಅಧ್ಯಾಯವು ಮುಗಿಯಿತು.

ಲ೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಭೀಷ್ಮನು ಪಿಂಡವನ್ನು ತಂದೆಯ ಕೈಯಲ್ಲಿಡದೇ ದರ್ಭೆಯ ಮೇಲಿಟ್ಟುದು: ಸುವರ್ಣದ ಉತ್ಪತ್ತಿ: ಸುವರ್ಣದಾನದ ಮಹಿಮೆಯ ವಿಷಯವಾಗಿ ವಸಿಷ್ಠ-ಪರಶುರಾಮರ ಸಂವಾದ: ದೇವತೆಗಳಿಗೆ ಪಾರ್ವತಿಯ ಶಾಪ: ತಾರಕಾಸುರನಿಗೆ ಹೆದರಿ ದೇವತೆಗಳು ಬ್ರಹ್ಮನನ್ನು ಶರಣುಹೋದುದು

ಯುಧಿಷ್ಠಿರನು ಹೇಳುತ್ತಾನೆ:

ಉಕ್ತಂ ಪಿತಾಮಹೇನೇದಂ ಗವಾಂ ದಾನಮನುತ್ತಮಮ್ ।
ವಿಶೇಷೇಣ ನರೇನ್ದ್ರಾಣಾಮಿಹ ಧರ್ಮಮವೇಕ್ಷತಾಮ್ ॥೧॥

"ಪಿತಾಮಹನೇ! ಎಲ್ಲ ಮಾನವರ ಸಲುವಾಗಿ–ಅದರಲ್ಲಿಯೂ ವಿಶೇಷವಾಗಿ ಧರ್ಮದೃಷ್ಟಿಯುಳ್ಳ ರಾಜರ ಸಲುವಾಗಿ–ಉತ್ತಮೋತ್ತಮವಾದ ಗೋದಾನದ ವಿಧಿ-ನಿಯಮಗಳನ್ನು ವಿವರಿಸಿ ಹೇಳಿರುವೆ.

ರಾಜ್ಯಪರಿಪಾಲನೆಯೆಂಬುದು ಸತತವೂ ದುಃಖದಾಯಕವಾದುದು. ಅದರಲ್ಲಿಯೂ ಜಿತೇಂದ್ರಿಯರಲ್ಲದವರಿಗೆ ರಾಜ್ಯಪರಿಪಾಲನೆಯು ಅತ್ಯಂತ ಕಠಿನವೇ ಸರಿ. ಈ ಕಾರಣದಿಂದ ಪ್ರಾಯಶಃ ರಾಜರಿಗೆ ಉತ್ತಮಗತಿಯು

ಸಿಕ್ಕಲಾರದು. ನಿಯಮಪೂರ್ವಕವಾಗಿ ಭೂಮಿಯನ್ನೇ ಯಾರು ದಾನ ಮಾಡಿಬಿಡುವರೋ–ಅಂತಹವರು ಮಾತ್ರವೇ ಪಾವನರಾಗಿರುತ್ತಾರೆ.

ಕುರುನಂದನನೇ! ಪಿತಾಮಹ! ನೀನು ನನಗೆ ಸಮಸ್ತಧರ್ಮಗಳನ್ನೂ ಹೇಳಿರುವೆ. ಅಂತೆಯೇ ನೃಗಚಕ್ರವರ್ತಿಯು ಗೋದಾನಮಾಡಿದ ವಿಷಯ ವನ್ನೂ ನಾಚಿಕೇತಮುನಿಯು ಗೋದಾನಮಾಡಿದ ವಿಷಯವನ್ನೂ ಈ ಹಿಂದೆಯೇ ಹೇಳಿರುವೆ. ವೇದೋಪನಿಷತ್ತುಗಳು, ಯಾವ ಯಾವ ಕರ್ಮ ಗಳಲ್ಲಿ ಎಷ್ಟೆಷ್ಟು ಅಥವಾ ಯಾವ ಬಗೆಯ ದಕ್ಷಿಣೆಗಳನ್ನು ಕೊಡಬೇಕೆಂಬುದನ್ನು ಸೂಚಿಸಿವೆ. ಎಲ್ಲ ಯಜ್ಞಗಳಲ್ಲಿಯೂ ದಕ್ಷಿಣಾರೂಪವಾಗಿ ಭೂಮಿಯ ನ್ನಾಗಲೀ, ಗೋವುಗಳನ್ನಾಗಲೀ, ಸುವರ್ಣವನ್ನಾಗಲೀ ಕೊಡಬೇಕೆಂದು ನಿರ್ದಿಷ್ಟವಾಗಿದೆ. ಆದರೆ ಸುವರ್ಣವೇ ಶ್ರೇಷ್ಠವಾದ ದಕ್ಷಿಣೆಯೆಂದು ಶ್ರುತಿಯು ಹೇಳುತ್ತದೆ. ನಾನು ಈ ವಿಷಯವನ್ನು ಯಥಾವತ್ತಾಗಿ ತಿಳಿಯಬೇಕೆಂದಿರುವೆನು.

ಕಿಂ ಸುವರ್ಣಂ ಕಥಂ ಜಾತಂ ಕಸ್ಮಿನ್ಕಾಲೇ ಕಿಮಾತ್ಮಕಮ್ ।
ಕಿಂ ದೈವಂ ಕಿಂ ಫಲಂ ಚೈವ ಕಸ್ಮಾಚ್ಚ ಪರಮುಚ್ಯತೇ ॥೭॥

'ಸುವರ್ಣ'-ಎಂದರೇನು? ಅದು ಹೇಗೆ ಹುಟ್ಟಿತು? ಯಾವಾಗ ಹುಟ್ಟಿತು? ಅದಕ್ಕೆ ಉಪಾದಾನವು (ಮೂಲಕಾರಣ) ಯಾವುದು? ಸುವರ್ಣದ ಅಧಿದೇವತೆಯು ಯಾರು? ಸುವರ್ಣದಾನದಿಂದ ಯಾವ ಫಲವು ಲಭಿಸುತ್ತದೆ? ಅದನ್ನು ಎಲ್ಲಕ್ಕಿಂತಲೂ ಶ್ರೇಷ್ಠವಾದುದೆಂದು ಏಕೆ ಹೇಳುತ್ತಾರೆ?

ಕಸ್ಮಾದ್ದಾನಂ ಸುವರ್ಣಸ್ಯ ಪೂಜಯನ್ತಿ ಮನೀಷಿಣಃ ।
ಕಸ್ಮಾಚ್ಚ ದಕ್ಷಿಣಾರ್ಥಂ ತದ್ಯಜ್ಞ ಕರ್ಮಸು ಶಸ್ಯತೇ ॥೮॥

ವಿದ್ವಾಂಸರು ಸುವರ್ಣದಾನವನ್ನು ಏಕೆ ಶ್ಲಾಘಿಸುತ್ತಾರೆ? ಯಜ್ಞಕರ್ಮಗಳಲ್ಲಿ ದಕ್ಷಿಣೆಗಾಗಿ ಸುವರ್ಣವನ್ನೇ ಏಕೆ ಪ್ರಶಂಸಿಸುತ್ತಾರೆ?

ಭೂಮಿಗಿಂತಲೂ ಮತ್ತು ಗೋವುಗಳಿಗಿಂತಲೂ ಸುವರ್ಣವು ಯಾವ ಕಾರಣದಿಂದ ಹೆಚ್ಚು ಪಾವನವೂ ಶ್ರೇಷ್ಠವೂ ಆಗಿದೆ? ದಕ್ಷಿಣೆಗಳಲ್ಲಿ

ಸುವರ್ಣವೇ ಎಲ್ಲ ದಕ್ಷಿಣೆಗಳಿಗಿಂತಲೂ ಶ್ರೇಷ್ಠವಾದ ದಕ್ಷಿಣೆಯೆಂದು ಏಕೆ ಹೇಳಲ್ಪಟ್ಟಿದೆ? ಪಿತಾಮಹನೇ! ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಅನೇಕಕಾರಣಗಳಿಂದ ಕೂಡಿರುವ ವಿಸ್ತಾರವಾದ ಸುವರ್ಣೋತ್ಪತ್ತಿಯ ಚರಿತ್ರೆಯನ್ನು ಏಕಾಗ್ರಚಿತ್ತನಾಗಿ ಕೇಳು. ಈ ವಿಷಯದಲ್ಲಿ ನನ್ನ ಅನುಭವವನ್ನೇ ನಿನಗೆ ಹೇಳುತ್ತೇನೆ.

ಮಹಾತೇಜಸ್ವಿಯಾದ ನನ್ನ ತಂದೆ ಶಾಂತನುವು ದೇಹತ್ಯಾಗ ಮಾಡಿದನು. ಅವನಿಗೆ ಶ್ರಾದ್ಧಮಾಡುವ ಸಲುವಾಗಿ ನಾನು ಗಂಗಾದ್ವಾರಕ್ಕೆ (ಹರಿದ್ವಾರಕ್ಕೆ) ಹೋಗಿ ಶ್ರಾದ್ಧಕರ್ಮವನ್ನು ಆರಂಭಿಸಿದೆನು. ನನ್ನ ತಾಯಿಯಾದ ಗಂಗಾದೇವಿಯೂ ಆ ಸಮಯದಲ್ಲಿ ನನಗೆ ನೆರವಾದಳು. ಅನಂತರ ನಾನು ಅನೇಕಮುನಿಗಳನ್ನೂ ಮತ್ತು ಸಿದ್ಧರನ್ನೂ ಅಗ್ರಭಾಗದಲ್ಲಿ ಕುಳ್ಳಿರಿಸಿಕೊಂಡು ಜಲತರ್ಪಣವೇ ಮೊದಲಾದ ಶ್ರಾದ್ಧಕಾರ್ಯಗಳನ್ನು ಆರಂಭಿಸಿದೆನು. ಏಕಾಗ್ರಚಿತ್ತನಾಗಿ ನಾನು ಯಥಾಶಾಸ್ತ್ರವಾಗಿ ಶ್ರಾದ್ಧದ ಪೂರ್ವ ಕರ್ಮಗಳೆಲ್ಲವನ್ನೂ ಮುಗಿಸಿ ಅನಂತರ ಯಥಾವಿಧಿಯಾಗಿ ಪಿಂಡಪ್ರದಾನ ಮಾಡಲು ಪ್ರಾರಂಭಿಸಿದೆನು. ಆ ಸಮಯಕ್ಕೆ ಸರಿಯಾಗಿ ಪಿಂಡಪ್ರದಾನ ಮಾಡಲು ಹಾಸಿದ ದರ್ಭೆಗಳ ವಿನ್ಯಾಸವನ್ನು ಭೇದಿಸಿಕೊಂಡು ಸುಂದರವಾದ ಅಂಗದದಿಂದ (ತೋಳಿನ ಆಭರಣದಿಂದ) ಕೂಡಿದ್ದ ನೀಳವಾದ ತೋಳು ಹೊರಕ್ಕೆ ಬಂದಿತು. ಹಾಗೆ ದರ್ಭೆಗಳ ವಿನ್ಯಾಸವನ್ನು ಭೇದಿಸಿಕೊಂಡು ಮೇಲೆ ಬಂದ ತೋಳನ್ನು ನೋಡಿ ನನ್ನ ತಂದೆಯೇ ಸಾಕ್ಷಾತ್ತಾಗಿ ಪಿಂಡವನ್ನು ಪ್ರತಿಗ್ರಹಿಸಲು ಬಂದಿರುವನೆಂದು ತಿಳಿದು ನನಗೆ ಅತ್ಯಂತವಿಸ್ಮಯವಾಯಿತು. ಆದರೆ ಮರುಕ್ಷಣದಲ್ಲಿಯೇ ನಾನು ಶಾಸ್ತ್ರವಿಧಿಯನ್ನು ವಿಚಾರಮಾಡಿದಾಗ– ಮನುಷ್ಯನ ಕೈಯಲ್ಲಿ ಪಿಂಡವನ್ನಿಡುವುದು ವೇದವಿಹಿತವಲ್ಲವೆಂಬುದು ನನ್ನ ಸ್ಮರಣೆಗೆ ಬಂದಿತು.

ಪಿತೃಗಳು ಸಾಕ್ಷಾತ್ತಾಗಿ ಬಂದು ಕರ್ತೃವಿನ ಕೈಯಿಂದ ಪಿಂಡವನ್ನು ಯಾವಾಗಲೂ ತೆಗೆದುಕೊಳ್ಳುವುದಿಲ್ಲ. ವಿನ್ಯಸ್ತವಾದ ದರ್ಭೆಗಳಲ್ಲಿಯೇ

ಪಿಂಡಪ್ರದಾನವನ್ನು ಮಾಡಬೇಕೆಂಬುದು ಶಾಸ್ತ್ರವಿಧಿಯಾಗಿದೆ. ಶಾಸ್ತ್ರ ಪ್ರಾಮಾಣ್ಯದಲ್ಲಿರುವ ಸೂಕ್ಷ್ಮತೆಯನ್ನೂ ಪಿಂಡಪ್ರದಾನವಿಧಿಯನ್ನೂ ಸ್ಮರಿಸುತ್ತಾ ನಾನು ಕಣ್ಣಿಗೆ ಕಾಣುತ್ತಿದ್ದ ತಂದೆಯ ಹಸ್ತವನ್ನು ಅನಾದರಣೆಮಾಡಿ



ವಿನ್ಯಸ್ತವಾದ ದರ್ಭೆಗಳಲ್ಲಿಯೇ ಪಿಂಡಪ್ರದಾನಮಾಡಿದೆನು. ಮನುಜ ಶ್ರೇಷ್ಠನೇ! ಯುಧಿಷ್ಠಿರ! ನಾನು ಶಾಸ್ತ್ರಮಾರ್ಗಾನುಸಾರವಾಗಿ ದರ್ಭೆಗಳಲ್ಲಿ ಪಿಂಡಪ್ರದಾನಮಾಡಿದೆನು. (ಯಾವುದೇ ಸಂದರ್ಭದಲ್ಲಿಯೂ ವಿಮೋಹಿತ ನಾಗದೇ ಶಾಸ್ತ್ರವಿಧಿಗೆ ಅನುಸಾರವಾಗಿಯೇ ನಡೆಯಬೇಕೆಂಬುದನ್ನು ನೀನೂ ತಿಳಿಯಬೇಕು.) ಅನಂತರ ನನ್ನ ತಂದೆಯ ತೋಳು ಅದೃಶ್ಯವಾಗಿ

ಹೋಯಿತು. ಅಂದಿನ ರಾತ್ರಿ ಸ್ವಪ್ನದಲ್ಲಿ ನನ್ನ ಪಿತೃಗಳು ನನಗೆ ದರ್ಶನವನ್ನಿತ್ತು ಪ್ರಸನ್ನತೆಯಿಂದ ಈ ಮಾತನ್ನು ಹೇಳಿದರು: “ಪ್ರೀತಾಃ ಸ್ಮ ಭರತರ್ಷಭ–ಭರತಶ್ರೇಷ್ಠನೇ! ನಾವು ಸುಪ್ರೀತರಾಗಿದ್ದೇವೆ.

ನಿನಗೆ ಶಾಸ್ತ್ರದಲ್ಲಿರುವ ವಿಶೇಷಜ್ಞಾನವನ್ನು ನೋಡಿ ನಾವು ಪ್ರಸನ್ನರಾಗಿದ್ದೇವೆ. ನೀನು ಯಾವ ಕಾರಣದಿಂದಲೂ ಧರ್ಮದ ವಿಷಯದಲ್ಲಿ ವ್ಯಾಮೋಹಗೊಳ್ಳಲಿಲ್ಲ.

ತ್ವಯಾ ಹಿ ಕುರ್ವತಾ ಶಾಸ್ತ್ರಂ ಪ್ರಮಾಣಮಿಹ ಪಾರ್ಥಿವ ।
ಆತ್ಮಾ ಧರ್ಮಃ ಶ್ರುತಂ ವೇದಾಃ ಪಿತರಶ್ಚರ್ಷಿಭಿಃ ಸಹ ॥೨೩॥
ಸಾಕ್ಷಾತ್ಪಿತಾಮಹೋ ಬ್ರಹ್ಮಾ ಗುರವೋಽಥ ಪ್ರಜಾಪತಿಃ ।
ಪ್ರಮಾಣಮುಪನೀತಾ ವೈ ಸ್ಥಿತಾಶ್ಚ ನ ವಿಚಾಲಿತಾಃ ॥೨೪॥

ನೀನು ಶಾಸ್ತ್ರವನ್ನೇ ಪ್ರಮಾಣವನ್ನಾಗಿಟ್ಟುಕೊಂಡು ಕರ್ಮವನ್ನು ಮಾಡಿರುವೆಯಾದ ಕಾರಣ ಆತ್ಮಾ, ಧರ್ಮ, ಶಾಸ್ತ್ರ, ವೇದಗಳು, ಪಿತೃಗಳು, ಋಷಿಗಳು, ಪಿತಾಮಹನಾದ ಬ್ರಹ್ಮಾ, ಗುರುಗಳು, ಪ್ರಜಾಪತಿ–ಇವರೆಲ್ಲರೂ ಪ್ರಮಾಣೀಭೂತರಾದರು. (ಇವರ ಅಸ್ತಿತ್ತ್ವವು ಸ್ಥಿರಪಟ್ಟಿತು.) ಧರ್ಮದಲ್ಲಿಯೇ ಸ್ಥಿರವಾದ ಬುದ್ಧಿಯುಳ್ಳವರು ನಿನ್ನ ಆದರ್ಶವನ್ನು ನೋಡಿ ಧರ್ಮದಿಂದ ವಿಚಲಿತರಾಗದಂತಾಯಿತು.

ತದಿದಂ ಸಮ್ಯಗಾರಬ್ಧಂ ತ್ವಯಾದ್ಯ ಭರತರ್ಷಭ ।
ಕಿಂ ತು ಭೂಮೇರ್ಗವಾಂ ಚಾರ್ಥೇ ಸುವರ್ಣಂ ದೀಯತಾಮಿತಿ ॥

ಭರತಶ್ರೇಷ್ಠನೇ! ಈ ಕಾರ್ಯವನ್ನು (ಶ್ರಾದ್ಧಕಾರ್ಯವನ್ನು) ನೀನು ಶಾಸ್ತ್ರಮಾರ್ಗಾನುಸಾರವಾಗಿ ಚೆನ್ನಾಗಿ ಆರಂಭಿಸಿರುವೆ. ಈಗ ನಾವು ಹೇಳುವಂತೆ ಭೂದಾನ-ಗೋದಾನಗಳ ಪ್ರತ್ಯಾಮ್ನಾಯವಾಗಿ ಸುವರ್ಣವನ್ನು ದಾನಮಾಡು.

ಏವಂ ವಯಂ ಚ ಧರ್ಮಜ್ಞ ಸರ್ವೇ ಚಾಸ್ಮತ್ಪಿತಾಮಹಾಃ ।
ಪಾವಿತಾ ವೈ ಭವಿಷ್ಯನ್ತಿ ಪಾವನಂ ಹಿ ಪರಂ ಹಿ ತತ್ ॥೨೬॥

ಧರ್ಮಜ್ಞನೇ! ಹೀಗೆ ಮಾಡುವುದರಿಂದ ನಾವೂ ಪಾವನರಾಗು

ತ್ತೇವೆ. ನಮ್ಮ ಎಲ್ಲ ಪಿತಾಮಹರೂ ಪಾವನರಾಗುತ್ತಾರೆ. ಏಕೆಂದರೆ: ಸುವರ್ಣವು ಎಲ್ಲ ವಸ್ತುಗಳಿಗಿಂತಲೂ ಶ್ರೇಷ್ಠವಾದ ಪವಿತ್ರವಸ್ತುವಾಗಿದೆ.

ದಶ ಪೂರ್ವಾನ್ದಶೈವಾನ್ಯಾಂಸ್ತಥಾ ಸಂತಾರಯನ್ತಿ ತೇ ।
ಸುವರ್ಣಂ ಯೇ ಪ್ರಯಚ್ಛನ್ತಿ ಏವಂ ಮತ್ಪಿತರೋಽಬ್ರುವನ್ ॥೨೭॥

ಯಾರು ಸುವರ್ಣವನ್ನು ದಾನಮಾಡುವರೋ ಅವರು ತಮ್ಮ ಹಿಂದಿನ ಮತ್ತು ಮುಂದಿನ ಹತ್ತು ತಲೆಮಾರಿನವರನ್ನು ಉದ್ಧರಿಸುತ್ತಾರೆ”–ಎಂಬುದಾಗಿ ಕನಸಿನಲ್ಲಿ ಕಾಣಿಸಿಕೊಂಡ ನನ್ನ ಪಿತೃಗಳು ಹೇಳಿದರು. ಒಡನೆಯೇ ನಾನು ಎಚ್ಚರಗೊಂಡು ಕನಸಿನಲ್ಲಿ ನಡೆದುದನ್ನು ಸ್ಮರಿಸಿ ವಿಸ್ಮಿತನಾದೆನು. ಪಿತೃಗಳ ಆದೇಶದಂತೆ ನಾನು ಸುವರ್ಣವನ್ನು ದಾನಮಾಡಲು ನಿಶ್ಚಯಿಸಿದೆನು.

ವಿಭುವೇ! ಸುವರ್ಣದ ಉತ್ಪತ್ತಿಯ ಮತ್ತು ಅದರ ಮಾಹಾತ್ಮ್ಯದ ವಿಷಯದಲ್ಲಿ ಜಮದಗ್ನಿಯ ಮಗನಾದ ಪರಶುರಾಮನಿಗೆ ಸಂಬಂಧಿಸಿದ ಧನ ಮತ್ತು ಆಯುಸ್ಸುಗಳನ್ನು ವೃದ್ಧಿಪಡಿಸುವ ಪುರಾತನವಾದ ಈ ಇತಿಹಾಸವನ್ನು ಕೇಳು:

ತೀವ್ರವಾದ ರೋಷದಿಂದ ಕೂಡಿದ್ದ ಜಮದಗ್ನಿಯ ಮಗನಾದ ಪರಶುರಾಮನು-ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆಮಾಡಿ ಭೂಮಿಯನ್ನು ಕ್ಷತ್ರಿಯರಿಂದ ರಹಿತವನ್ನಾಗಿ ಮಾಡಿದನು. ಬಳಿಕ ರಾಜೀವಲೋಚನನಾದ, ವೀರನಾದ ಪರಶುರಾಮನು ಸಮಗ್ರವಾದ ಭೂಮಂಡಲವನ್ನೂ ಗೆದ್ದು ಬ್ರಾಹ್ಮಣರಿಂದಲೂ ಕ್ಷತ್ರಿಯರಿಂದಲೂ ಸಮ್ಮಾನಿತವಾದ, ಸಕಲಕಾಮನೆಗಳನ್ನೂ ಸಂಪೂರ್ಣಗೊಳಿಸುವ ಅಶ್ವಮೇಧಯಾಗವನ್ನು ಮಾಡಿದನು.

ಅಶ್ವಮೇಧಯಾಗವಾದರೋ ಸರ್ವಪ್ರಾಣಿಗಳನ್ನೂ ಪಾವನಗೊಳಿಸ ತಕ್ಕುದು. ತೇಜಸ್ಸನ್ನೂ, ಕಾಂತಿಯನ್ನೂ ವರ್ಧಿಸತಕ್ಕುದು. ಅಂತಹ ಯಜ್ಞವನ್ನು ಮಾಡಿದುದರ ಫಲವಾಗಿ ತೇಜಸ್ವಿಯಾದ ಪರಶುರಾಮನು ಪಾಪರಹಿತನಾದರೂ-ಯಜ್ಞಮಾಡಿದುದರಿಂದ ಅವನ ಮನಸ್ಸಿನ ಭಾರವು ಕಡಿಮೆಯಾಗಲಿಲ್ಲ. (ಪಾಪಮುಕ್ತನಾದೆನೆಂದು ಭಾವಿಸಲಿಲ್ಲ. ಮನಸ್ಸು

ಹಗುರವಾಗಲಿಲ್ಲ.) ಬಹುದಕ್ಷಿಣಾಕವಾದ ಅಶ್ವಮೇಧಯಾಗವನ್ನು ಮಾಡಿದ ನಂತರ ಮಹಾತ್ಮನಾದ ಪರಶುರಾಮನು ಅಲ್ಲಿ ಉಪಸ್ಥಿತರಾಗಿದ್ದ ಶಾಸ್ತ್ರಜ್ಞರಾದ ಋಷಿಗಳನ್ನೂ ದೇವತೆಗಳನ್ನೂ ಪ್ರಶ್ನಿಸಿದನು:

ಪಾವನಂ ಯತ್ಪರಂ ನೃಣಾಮುಗ್ರೇ ಕರ್ಮಣಿ ವರ್ತತಾಮ್ ।

"ಕ್ರೂರಕರ್ಮಗಳಲ್ಲಿ ನಿರತರಾಗಿರತಕ್ಕವರನ್ನು ಪಾವನಗೊಳಿಸತಕ್ಕುದು ಬೇರೆ ಯಾವುದಿದೆ?"

ಪರಶುರಾಮನು ಹೀಗೆ ಪ್ರಶ್ನಿಸಲಾಗಿ ವೇದ-ಶಾಸ್ತ್ರಜ್ಞರಾದ ಮಹರ್ಷಿಗಳು ಹೇಳಿದರು:

ರಾಮ ವಿಪ್ರಾಃ ಸತ್ಕ್ರಿಯನ್ತಾಂ ವೇದಪ್ರಾಮಾಣ್ಯದರ್ಶನಾತ್ ।
ಭೂಯಶ್ಚ ವಿಪ್ರರ್ಷಿಗಣಾಃ ಪ್ರಷ್ಟವ್ಯಾಃ ಪಾವನಂ ಪ್ರತಿ ।
ತೇ ಯದ್ಬ್ರೂಯುರ್ಮಹಾಪ್ರಾಜ್ಞಾಸ್ತಚ್ಚೈವ ಸಮುದಾಚರ ॥೩೭॥

"ಪರಶುರಾಮನೇ! ವೇದಪ್ರಾಮಾಣ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಬ್ರಾಹ್ಮಣರನ್ನು ಸತ್ಕರಿಸು. ಪರಮಪಾವನವಾದ ವಸ್ತುವು ಯಾವುದೆಂಬುದರ ವಿಷಯವಾಗಿ ಪುನಃ ವಿಪ್ರರ್ಷಿಗಳನ್ನು ಕೇಳು. ಮಹಾಪ್ರಾಜ್ಞರಾದ ವಿಪ್ರರ್ಷಿಗಳು ಏನು ಹೇಳುವರೋ ಅದರಂತೆ ಆಚರಿಸು."


ವಿಪ್ರರ್ಷಿಗಳೂ ಮತ್ತು ದೇವತೆಗಳೂ ಹೇಳಿದ ಆ ಮಾತಿನಂತೆ ಮಹಾತೇಜಸ್ವಿಯಾದ ಪರಶುರಾಮನು ವಸಿಷ್ಠರನ್ನೂ, ನಾರದರನ್ನೂ, ಅಗಸ್ತ್ಯರನ್ನೂ, ಕಾಶ್ಯಪರನ್ನೂ ಸಂಧಿಸಿ ಅದೇ ವಿಷಯವಾಗಿ ಪ್ರಶ್ನಿಸಿದನು:

ಜಾತಾ ಮತಿರ್ಮೇ ವಿಪ್ರೇನ್ದ್ರಾಃ ಕಥಂ ಪೂಯೇಯಮಿತ್ಯುತ ।
ಕೇನ ವಾ ಕರ್ಮಯೋಗೇನ ಪ್ರದಾನೇನೇಹ ಕೇನ ವಾ ॥೩೯॥
ಯದಿ ವೋಽನುಗ್ರಹಕೃತಾ ಬುದ್ಧಿರ್ಮಾಂ ಪ್ರತಿ ಸತ್ತಮಾಃ ।
ಪ್ರಬ್ರೂತ ಪಾವನಂ ಕಿಂ ಮೇ ಭವೇದಿತಿ ತಪೋಧನಾಃ ॥೪೦॥

"ವಿಪ್ರೇಂದ್ರರೇ! ನಾನು ಪೂತನಾಗುವುದು ಹೇಗೆಂಬ ವಿಷಯವಾಗಿ ನನ್ನ ಮನಸ್ಸಿನಲ್ಲಿ ಆಲೋಚನೆಯು ಹುಟ್ಟಿದೆ. ಯಾವ ಕರ್ಮವನ್ನು ಮಾಡುವುದರಿಂದ ಮತ್ತು ಯಾವ ವಸ್ತುವನ್ನು ದಾನವಾಗಿ ಕೊಡುವುದರಿಂದ ನಾನು ಪಾವನನಾಗುತ್ತೇನೆ? ತಪೋಧನರೇ! ವಿಪ್ರಶ್ರೇಷ್ಠರೇ! ನಿಮಗೆ ನನ್ನ

ವಿಷಯದಲ್ಲಿ ಅನುಗ್ರಹಬುದ್ಧಿಯಿರುವುದಾದರೆ ನನ್ನನ್ನು ಪವಿತ್ರಗೊಳಿಸುವ ಸಾಧನವು ಯಾವುದೆಂಬುದನ್ನು ಹೇಳಿರಿ.”

ಪರಶುರಾಮನ ಪ್ರಶ್ನೆಗೆ ಉತ್ತರವಾಗಿ ವಸಿಷ್ಠಾದಿ ಮಹರ್ಷಿಗಳು ಹೇಳಿದರು:



ಗಾಶ್ಚ ಭೂಮಿಂ ಚ ವಿತ್ತಂ ಚ ದತ್ತ್ವೇಹ ಭೃಗುನನ್ದನ |
ಪಾಪಕೃತ್ಪೂಯತೇ ಮರ್ತ್ಯ ಇತಿ ಭಾರ್ಗವ ಶುಶ್ರುಮ ||೪೧||

“ಭಾರ್ಗವನೇ! ಪಾಪವನ್ನು ಮಾಡಿದ ಮನುಷ್ಯನು ಭೂಮಿ, ಗೋವುಗಳು ಮತ್ತು ಧನವನ್ನು ದಾನಮಾಡುವುದರಿಂದ ಪೂತನಾಗುವನೆಂದು ನಾವು ಕೇಳಿದ್ದೇವೆ.

ಅನ್ಯದ್ದಾನಂ ತು ವಿಪ್ರರ್ಷೇ ಶ್ರೂಯತಾಂ ಪಾವನಂ ಮಹತ್ ।
ದಿವ್ಯಮತ್ಯದ್ಭುತಾಕಾರಮಪತ್ಯಂ ಜಾತವೇದಸಃ ॥೪೨॥

ವಿಪ್ರರ್ಷಿಯೇ! ದಾನಕೊಡಲು ಸರ್ವಥಾ ಯೋಗ್ಯವಾದ ಮಹಾ ಪಾವನವಾದ ಮತ್ತೊಂದು ವಸ್ತುವೂ ಇದೆ. ಅದನ್ನೂ ಕೇಳು. ಅದು ದಿವ್ಯವಾದುದು; ಅದ್ಭುತವಾದ ಆಕಾರವುಳ್ಳದ್ದು. ಮೇಲಾಗಿ ಅಗ್ನಿಯಿಂದ ಹುಟ್ಟಿದುದು.

ಪೂರ್ವಕಾಲದಲ್ಲಿ ಅಗ್ನಿಯು ಎಲ್ಲ ಲೋಕಗಳನ್ನೂ ದಹಿಸಿದಾಗ ಅವನ ವೀರ್ಯದಿಂದಲೇ ಆ ವಸ್ತುವು ಹುಟ್ಟಿತೆಂದು ನಾವು ಕೇಳಿದ್ದೇವೆ. ಅದೀಗ ಸುವರ್ಣವೆಂದು ವಿಖ್ಯಾತವಾಗಿದೆ. ಅದನ್ನು ದಾನಮಾಡುವುದರಿಂದ ನೀನು ಸಿದ್ಧಿಯನ್ನು ಹೊಂದುವೆ."

ಬಳಿಕ ಕಠೋರವ್ರತನಿಷ್ಠರಾದ ಪೂಜ್ಯರಾದ ವಸಿಷ್ಠರು ರಾಮನಿಗೆ ಹೇಳಿದರು:

ಶೃಣು ರಾಮ ಯಥೋತ್ಪನ್ನಂ ಸುವರ್ಣಮನಲಪ್ರಭಮ್ ।
ಫಲಂ ದಾಸ್ಯತಿ ತೇ ಯತ್ತು ದಾನಂ ಪರಮಿಹೋಚ್ಯತೇ ॥೪೪॥
ಸುವರ್ಣಂ ಯಚ್ಚ ಯಸ್ಮಾಚ್ಚ ಯಥಾ ಚ ಗುಣವತ್ತಮಮ್ ।
ತನ್ನಿಬೋಧ ಮಹಾಬಾಹೋ ಸರ್ವಂ ನಿಗದತೋ ಮಮ ॥೪೫॥

"ಪರಶುರಾಮನೇ! ಅಗ್ನಿಗೆ ಸಮಾನವಾದ ಸುವರ್ಣವು ಹೇಗೆ ಹುಟ್ಟಿತೆಂಬುದನ್ನು ಕೇಳು. ಸುವರ್ಣದ ದಾನವು ನಿನಗೆ ಉತ್ತಮಫಲವನ್ನು ಕೊಡುತ್ತದೆ. ದಾನಗಳಲ್ಲಿ ಸುವರ್ಣದಾನವು ಪರಮೋತ್ಕೃಷ್ಟವಾದುದೆಂದು ಹೇಳಲ್ಪಟ್ಟಿದೆ. ಸುವರ್ಣದ ಸ್ವರೂಪವೇನು? ಯಾರಿಂದ ಅದು ಹುಟ್ಟಿತು? ಯಾವ ಕಾರಣದಿಂದ ಅದನ್ನು ವಿಶೇಷಗುಣವುಳ್ಳದ್ದೆಂದು ಹೇಳುತ್ತಾರೆ? ಸುವರ್ಣಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನೂ ಹೇಳುವೆನು; ಕೇಳು.

ಅಗ್ನೀಷೋಮಾತ್ಮಕಮಿದಂ ಸುವರ್ಣಂ ವಿದ್ಧಿ ನಿಶ್ಚಯೇ ।
ಅಜೋಽಗ್ನಿರ್ವರುಣೋ ಮೇಷಃ ಸೂರ್ಯೋಽಶ್ವ ಇತಿ ದರ್ಶನಮ್ ॥

ಚಿನ್ನವು ಅಗ್ನಿ ಮತ್ತು ಸೋಮರ ಅಂಶವಾಗಿರುವುದನ್ನು ನಿಶ್ಚಯ ರೂಪದಿಂದ ತಿಳಿ. ಆಡು ಅಗ್ನಿಯ ಅಂಶವಾಗಿದೆ. ಕುರಿಯು ವರುಣನ ಅಂಶವಾಗಿದೆ. ಕುದುರೆಯು ಸೂರ್ಯನ ಅಂಶವಾಗಿದೆ.

ಕುಞ್ಜರಾಶ್ಚ ಮೃಗಾ ನಾಗಾ ಮಹಿಷಾಶ್ಚಾಸುರಾ ಇತಿ ।
ಕುಕ್ಕುಟಾಶ್ಚ ವರಾಹಾಶ್ಚ ರಾಕ್ಷಸಾ ಭೃಗುನನ್ದನ ॥೪೭॥
ಇಡಾ ಗಾವಃ ಪಯಃ ಸೋಮೋ ಭೂಮಿರಿತ್ಯೇವ ಚ ಸ್ಮೃತಿಃ ॥೪೮॥

ಆನೆಗಳು, ಮೃಗಗಳು, ಸರ್ಪಗಳು, ಎಮ್ಮೆಗಳು-ಇವೆಲ್ಲವೂ ಅಸುರರ ಅಂಶಗಳಾಗಿವೆ. ಕೋಳಿಗಳೂ, ಹಂದಿಗಳೂ, ರಾಕ್ಷಸರ ಅಂಶಗಳಿಂದ ಹುಟ್ಟಿವೆ. ಯಜ್ಞಗಳು, ಗೋವುಗಳು, ಹಾಲು ಮತ್ತು ಸೋಮರಸಗಳು ಭೂಮಿಯ ಅಂಶಗಳಾಗಿವೆ.

ಜಗತ್ಸರ್ವಂ ಚ ನಿರ್ಮಥ್ಯ ತೇಜೋರಾಶಿಃ ಸಮುತ್ಥಿತಃ ।
ಸುವರ್ಣಮೇಭ್ಯೋ ವಿಪ್ರರ್ಷೇ ರತ್ನಂ ಪರಮಮುತ್ತಮಮ್ ॥೪೯॥

ವಿಪ್ರರ್ಷಿಯೇ! ಜಗತ್ತೆಲ್ಲವನ್ನೂ ಮಥಿಸಿದುದರಿಂದ ಉತ್ಪನ್ನವಾದ ತೇಜೋರಾಶಿಯೇ ಸುವರ್ಣವಾಗಿದೆ. ಆದುದರಿಂದ ಎಲ್ಲ ವಸ್ತುಗಳಿಗಿಂತಲೂ ಸುವರ್ಣವು ಪರಮಶ್ರೇಷ್ಠವಾದುದು ಮತ್ತು ರತ್ನಪ್ರಾಯವಾದುದು.

ಏತಸ್ಮಾತ್ಕಾರಣಾದ್ದೇವಾ ಗನ್ಧರ್ವೋರಗರಾಕ್ಷಸಾಃ ।
ಮನುಷ್ಯಾಶ್ಚ ಪಿಶಾಚಾಶ್ಚ ಪ್ರಯತಾ ಧಾರಯನ್ತಿ ತತ್ ॥೫೦॥

ಈ ಕಾರಣದಿಂದಲೇ ದೇವ-ಗಂಧರ್ವರೂ, ಉರಗರೂ, ರಾಕ್ಷಸರೂ, ಮನುಷ್ಯರೂ, ಪಿಶಾಚರೂ-ಸುವರ್ಣವನ್ನು ಪ್ರಯತ್ನಪೂರ್ವಕವಾಗಿ ಧರಿಸುತ್ತಾರೆ.

ಮುಕುಟೈರಙ್ಗದಯುತೈರಲಙ್ಕಾರೈಃ ಪೃಥಗ್ವಿಧೈಃ ।
ಸುವರ್ಣವಿಕೃತೈಸ್ತತ್ರ ವಿರಾಜನ್ತೇ ಭೃಗೂತ್ತಮ ॥೫೧॥

ಭೃಗುಶ್ರೇಷ್ಠನೇ! ದೇವ-ಗಂಧರ್ವ-ರಾಕ್ಷಸರೇ ಮೊದಲಾದವರು ಸುವರ್ಣದಿಂದ ಮಾಡಲ್ಪಟ್ಟ ಕಿರೀಟಗಳಿಂದಲೂ, ಭುಜಕೀರ್ತಿಗಳಿಂದಲೂ,

ನಾನಾವಿಧವಾದ ಉಂಗುರ, ಹಾರ, ಬಳೆ, ಮೊದಲಾದ ಆಲಂಕಾರಿಕವಸ್ತುಗಳಿಂದಲೂ ಪ್ರಕಾಶಮಾನರಾಗಿದ್ದಾರೆ.

ತಸ್ಮಾತ್ಸರ್ವಪವಿತ್ರೇಭ್ಯಃ ಪವಿತ್ರಂ ಪರಮಂ ಸ್ಮೃತಮ್ ।
ಭೂಮೇರ್ಗೋಭ್ಯೋಽಥ ರತ್ನೇಭ್ಯಸ್ತದ್ವಿದ್ಧಿ ಮನುಜರ್ಷಭ ॥೫೨॥

ಆದುದರಿಂದ ಪವಿತ್ರವಾದುವೆಂದು ಹೇಳಲ್ಪಟ್ಟಿರುವ ಭೂಮಿ, ಗೋವುಗಳು, ರತ್ನ-ಇವೇ ಮೊದಲಾದ ವಸ್ತುಗಳಿಗಿಂತಲೂ ಸುವರ್ಣವು ಪವಿತ್ರತಮವಾದುದೆಂದು ತಿಳಿ.

ಪೃಥಿವೀಂ ಗಾಶ್ಚ ದತ್ತ್ವೇಹ ಯಚ್ಚಾನ್ಯದಪಿ ಕಿಂಚನ ।
ವಿಶಿಷ್ಯತೇ ಸುವರ್ಣಸ್ಯ ದಾನಂ ಪರಮಕಂ ವಿಭೋ ॥೫೩॥

ಭೂಮಿ, ಗೋವುಗಳು ಮತ್ತು ಬೇರೆ ಇನ್ನಾವುದೇ ವಸ್ತುಗಳ ದಾನಕ್ಕಿಂತಲೂ ಸುವರ್ಣದಾನವು ವಿಶೇಷಫಲದಾಯಕವಾದುದು. ಸುವರ್ಣದಾನವು ಪರಮಶ್ರೇಷ್ಠವಾದುದೆಂದು ಹೇಳುತ್ತಾರೆ.

ಅಕ್ಷಯಂ ಪಾವನಂ ಚೈವ ಸುವರ್ಣಮಮರದ್ಯುತೇ ।
ಪ್ರಯಚ್ಛ ದ್ವಿಜಮುಖ್ಯೇಭ್ಯಃ ಪಾವನಂ ಹ್ಯೇತದುತ್ತಮಮ್ ॥೫೪॥

ದೇವೋಪಮತೇಜಸ್ವಿಯೇ! ಪರಶುರಾಮನೇ! ಸುವರ್ಣದಾನವು ಅಕ್ಷಯಪುಣ್ಯದಾಯಕವಾದುದು ಮತ್ತು ಪರಮಪಾವನವಾದುದು. ಪರಮಪಾವನವಾದ ಉತ್ತಮೋತ್ತಮವಾದ ಅಂತಹ ಸುವರ್ಣವನ್ನು ದ್ವಿಜಶ್ರೇಷ್ಠರಿಗೆ ದಾನಮಾಡು.

ಸುವರ್ಣಮೇವ ಸರ್ವಾಸು ದಕ್ಷಿಣಾಸು ವಿಧೀಯತೇ ।
ಸುವರ್ಣಂ ಯೇ ಪ್ರಯಚ್ಛನ್ತಿ ಸರ್ವದಾಸ್ತೇ ಭವನ್ತ್ಯುತ ॥೫೫॥

ಎಲ್ಲ ಕರ್ಮಗಳಲ್ಲಿಯೂ ಸುವರ್ಣದಕ್ಷಿಣೆಯೇ ವಿಧಿಸಲ್ಪಟ್ಟಿದೆ. (ದಕ್ಷಿಣೆಯನ್ನು ಸುವರ್ಣರೂಪದಲ್ಲಿಯೇ ಕೊಡಬೇಕೆಂಬ ನಿಯಮವಿದೆ.) ಯಾರು ಸುವರ್ಣದಾನಮಾಡುವರೋ–ಅವರು ಎಲ್ಲವನ್ನೂ ದಾನಮಾಡಿದ ಮಹಾಪುಣ್ಯಕ್ಕೆ ಭಾಗಿಗಳಾಗುತ್ತಾರೆ.

ದೇವತಾಸ್ತೇ ಪ್ರಯಚ್ಛನ್ತಿ ಯೇ ಸುವರ್ಣಂ ದದತ್ಯಥ ।
ಅಗ್ನಿರ್ಹಿ ದೇವತಾಃ ಸರ್ವಾಃ ಸುವರ್ಣಂ ಚ ತದಾತ್ಮಕಮ್ ॥೫೬॥

ಅಗ್ನಿಯು ಸರ್ವದೇವತೆಗಳ ಸ್ವರೂಪನು. ಸುವರ್ಣವು ಅಗ್ನ್ಯಾತ್ಮಕವಾದುದು. ಆದುದರಿಂದ ಸುವರ್ಣವನ್ನು ದಾನಮಾಡುವವರು ದೇವತೆಗಳನ್ನು ದಾನಮಾಡಿದವರಾಗುತ್ತಾರೆ.

ತಸ್ಮಾತ್ಸುವರ್ಣಂ ದದತಾ ದತ್ತಾಃ ಸರ್ವಾಃ ಸ್ಮ ದೇವತಾಃ ।
ಭವನ್ತಿ ಪುರುಷವ್ಯಾಘ್ರ ನ ಹ್ಯತಃ ಪರಮಂ ವಿದುಃ ॥೫೭॥

ಆದುದರಿಂದ ಸುವರ್ಣವನ್ನು ದಾನಮಾಡುವುದರಿಂದ ದೇವತೆಗಳನ್ನೇ ದಾನಮಾಡಿದಂತಾಗುತ್ತದೆ. ಸುವರ್ಣದಾನಕ್ಕಿಂತಲೂ ಪರಮಶ್ರೇಷ್ಠವಾದ ದಾನವು ಬೇರೆ ಯಾವುದೂ ಇಲ್ಲವೆಂದು ವಿದ್ವಾಂಸರು ತಿಳಿಯುತ್ತಾರೆ.

ಸರ್ವಶಾಸ್ತ್ರಗಳನ್ನೂ ತಿಳಿದಿರುವವರಲ್ಲಿ ಶ್ರೇಷ್ಠನೇ! ವಿಪ್ರರ್ಷಿಯೇ! ಪುನಃ ನಿನಗೆ ಸುವರ್ಣದ ಮಾಹಾತ್ಮ್ಯವನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು:

ಭಾರ್ಗವನೇ! ಪುರಾಣದಲ್ಲಿ ಪ್ರಜಾಪತಿಯು ಹೇಳಿರುವ ನ್ಯಾಯೋಚಿತವಾದ ಈ ಮಾತನ್ನು ಹಿಂದೆ ನಾನು ಪೌರಾಣಿಕರಿಂದ ಕೇಳಿದ್ದೆನು.

ಶ್ರೇಷ್ಠವಾದ ಹಿಮವತ್ಪರ್ವತದಲ್ಲಿ ಶೂಲಪಾಣಿಯಾದ, ಮಹಾತ್ಮನಾದ, ಪೂಜ್ಯನಾದ ರುದ್ರನ ವಿವಾಹವು ದೇವಿಯಾದ ರುದ್ರಾಣಿಯೊಡನೆ ನಡೆದು, ಮಹಾತ್ಮನಾದ ಪರಶಿವನ ಮತ್ತು ಪಾರ್ವತೀದೇವಿಯ ಸಮಾಗಮದ ವೇಳೆಯಲ್ಲಿ ಒಂದು ಪ್ರಸಂಗವು ನಡೆಯಿತು.

ದೇವತೆಗಳೆಲ್ಲರೂ ಉದ್ವಿಗ್ನರಾಗಿ ಕೈಲಾಸಪರ್ವತದಲ್ಲಿ ಸುಖಾಸೀನರಾಗಿದ್ದ ಶಿವ-ಪಾರ್ವತಿಯರ ಬಳಿಗೆ ಹೋದರು. ಎಲ್ಲರೂ ತಲೆಬಾಗಿ ನಮಸ್ಕರಿಸಿ ಶಿವ-ಪಾರ್ವತಿಯರನ್ನು ಪ್ರಸನ್ನಗೊಳಿಸಿ ರುದ್ರನಿಗೆ ಹೇಳಿದರು:

ಅಯಂ ಸಮಾಗಮೋ ದೇವ ದೇವ್ಯಾ ಸಹ ತವಾನಘ ।
ತಪಸ್ವಿನಸ್ತಪಸ್ವಿನ್ಯಾ ತೇಜಸ್ವಿನ್ಯಾತಿತೇಜಸಃ ॥೬೩॥

“ಅನಘನೇ! ದೇವಿಯೊಡನೆ ಈ ನಿನ್ನ ಸಮಾಗಮವು ತಪಸ್ವಿನಿಯೊಡನೆ ತಪಸ್ವಿಯ ಮತ್ತು ತೇಜಸ್ವಿನಿಯೊಡನೆ ಅತಿತೇಜಸ್ವಿಯ ಸಮಾಗಮವಾದಂತಾಗಿದೆ.

ಅಮೋಘತೇಜಾಸ್ತ್ವಂ ದೇವ ದೇವೀ ಚೇಯಮುಮಾ ತಥಾ ॥೬೪॥
ಅಪತ್ಯಂ ಯುವಯೋರ್ದೇವ ಬಲವದ್ಭವಿತಾ ವಿಭೋ ।
ತನ್ನೂನಂ ತ್ರಿಷು ಲೋಕೇಷು ನ ಕಿಞ್ಚಿಚ್ಛೇಷಯಿಷ್ಯತಿ ॥೬೫॥

ದೇವ! ನೀನು ಅಮೋಘವಾದ ತೇಜಸ್ಸಿನಿಂದ ಕೂಡಿರುವೆ. ಅಂತೆಯೇ ದೇವಿಯೂ ಅಮೋಘವಾದ ತೇಜಸ್ಸಿನಿಂದ ಕೂಡಿರುತ್ತಾಳೆ. ನಿಮ್ಮ ಸಮಾಗಮದಿಂದ ಹುಟ್ಟುವ ಪುತ್ರನು ಮಹಾಬಲಿಷ್ಠನಾಗುವನೆಂಬುದರಲ್ಲಿ ಸಂದೇಹವೇ ಇಲ್ಲ. ನಿಮ್ಮ ಆ ಪುತ್ರನು ಮೂರು ಲೋಕಗಳಲ್ಲಿ ಯಾವುದನ್ನೂ ಉಳಿಸಲಾರನೆಂಬುದೂ ನಿಜ.

ತದೇಭ್ಯಃ ಪ್ರಣತೇಭ್ಯಸ್ತ್ವಂ ದೇವೇಭ್ಯಃ ಪೃಥುಲೋಚನ ।
ವರಂ ಪ್ರಯಚ್ಛ ಲೋಕೇಶ ತ್ರೈಲೋಕ್ಯಹಿತಕಾಮ್ಯಯಾ ॥೬೬॥

ವಿಶಾಲಾಕ್ಷನೇ! ದೇವೇಶನೇ! ಮೂರು ಲೋಕಗಳಿಗೂ ಹಿತವಾಗಬೇಕೆಂಬ ಆಶಯದಿಂದ ತಲೆಬಾಗಿ ನಮಸ್ಕರಿಸಿ ಪ್ರಾರ್ಥಿಸುತ್ತಿರುವ ಈ ದೇವತೆಗಳಿಗೆ ವರವನ್ನು ದಯಪಾಲಿಸು.

ಅಪತ್ಯಾರ್ಥಂ ನಿಗೃಹ್ಣೀಷ್ವ ತೇಜಃ ಪರಮಕಂ ವಿಭೋ ।
ತ್ರೈಲೋಕ್ಯಸಾರೌ ಹಿ ಯುವಾಂ ಲೋಕಂ ಸಂತಾಪಯಿಷ್ಯಥಃ ॥೬೭॥

ವಿಭುವೇ! ಸಂತಾನಾರ್ಥವಾಗಿ ಪ್ರಕಟವಾಗಲಿರುವ ಪರಮಶ್ರೇಷ್ಠವಾದ ನಿನ್ನ ದಿವ್ಯತೇಜಸ್ಸನ್ನು (ವೀರ್ಯವನ್ನು) ನಿಗ್ರಹಿಸು. ನೀವಿಬ್ಬರೂ ಮೂರು ಲೋಕಗಳ ಸಾರಭೂತರಾಗಿರುವಿರಿ. ನಿಮ್ಮ ಸಮಾಗಮದಿಂದ ಹುಟ್ಟುವ ಅಪತ್ಯದ ಮೂಲಕವಾಗಿ ಮೂರು ಲೋಕಗಳನ್ನೂ ಸಂತಾಪಗೊಳಿಸುವಿರಿ. ಏಕೆಂದರೆ:

ತದಪತ್ಯಂ ಹಿ ಯುವಯೋರ್ದೇವಾನಭಿಭವೇದ್ಧ್ರುವಮ್ ।
ನ ಹಿ ತೇ ಪೃಥಿವೀ ದೇವೀ ನ ಚ ದ್ಯೌರ್ನ ದಿವಂ ವಿಭೋ ॥೬೮॥
ನೇದಂ ಧಾರಯಿತುಂ ಶಕ್ತಾಃ ಸಮಸ್ತಾ ಇತಿ ಮೇ ಮತಿಃ ।
ತೇಜಃಪ್ರಭಾವನಿರ್ದಗ್ಧಂ ತಸ್ಮಾತ್ಸರ್ವಮಿದಂ ಜಗತ್ ॥೬೯॥

ನಿಮಗೆ ಹುಟ್ಟುವ ಆ ಮಗನು ನಿಶ್ಚಯವಾಗಿಯೂ ದೇವತೆಗಳೆಲ್ಲರನ್ನೂ ಪರಾಭವಗೊಳಿಸುತ್ತಾನೆ. ಆ ನಿನ್ನ ಪುತ್ರನನ್ನು ಪೃಥಿವೀದೇವಿ

ಯಾಗಲೀ, ಆಕಾಶವಾಗಲೀ, ಸ್ವರ್ಗವಾಗಲೀ ಧರಿಸಲಾರವು. ಭೂಮ್ಯಾಕಾಶ-ಸ್ವರ್ಗಗಳು ಒಟ್ಟಾಗಿ ಸೇರಿದರೂ ಧರಿಸಲಾರವೆಂಬುದು ನಮ್ಮ ಅಭಿಪ್ರಾಯವಾಗಿದೆ. ಆದುದರಿಂದ ನಿಮ್ಮ ಮಗನ ತೇಜಸ್ಸಿನ ಪ್ರಭಾವದಿಂದ ಸಂಪೂರ್ಣಜಗತ್ತೂ ದಗ್ಧವಾಗಿ ಹೋಗುತ್ತದೆ.

ತಸ್ಮಾತ್ಪ್ರಸಾದಂ ಭಗವನ್ಕರ್ತುಮರ್ಹಸಿ ನಃ ಪ್ರಭೋ ।
ನ ದೇವ್ಯಾಂ ಸಮ್ಭವೇತ್ಪುತ್ರೋ ಭವತಃ ಸುರಸತ್ತಮ ।
ಧೈರ್ಯಾದೇವ ನಿಗೃಹ್ಣೀಷ್ವ ತೇಜೋ ಜ್ವಲಿತಮುತ್ತಮಮ್ ॥೭೦॥

ಪ್ರಭುವೇ! ಆದುದರಿಂದ ನಮ್ಮ ವಿಷಯದಲ್ಲಿ ಅನುಗ್ರಹಬುದ್ಧಿಯುಳ್ಳವನಾಗು. ಸುರಶ್ರೇಷ್ಠನೇ! ಪಾರ್ವತಿಯ ಗರ್ಭದಲ್ಲಿ ನಿನ್ನಿಂದ ಪುತ್ರನು ಹುಟ್ಟದಿರಲಿ. ಮೂರುಲೋಕಗಳ ಹಿತಕ್ಕಾಗಿ ಪ್ರಜ್ವಲಿಸುವ ಉತ್ತಮೋತ್ತಮವಾದ ನಿನ್ನ ತೇಜಸ್ಸನ್ನು ಸ್ಖಲನವಾಗದಂತೆ ಧೈರ್ಯದಿಂದ ನಿಗ್ರಹಿಸು.”

ವಸಿಷ್ಠರು ಪರಶುರಾಮನಿಗೆ ಹೇಳುತ್ತಾರೆ:

“ವಿಪ್ರರ್ಷಿಯೇ! ದೇವತೆಗಳು ಹೀಗೆ ಪ್ರಾರ್ಥಿಸಿಕೊಂಡನಂತರ ಪೂಜ್ಯನಾದ ವೃಷಭಧ್ವಜನು–‘ಏವಮಸ್ತು’ ‘ಹಾಗೆಯೇ ಆಗಲಿ’–ಎಂದು ಅಭಯವನ್ನಿತ್ತನು.

ಇತ್ಯುಕ್ತ್ವಾ ಚೋರ್ಧ್ವಮನಯದ್ರೇತೋ ವೃಷಭವಾಹನಃ ।
ಊರ್ಧ್ವರೇತಾಃ ಸಮಭವತ್ತತಃ ಪ್ರಭೃತಿ ಚಾಪಿ ಸಃ ॥೭೧॥

ದೇವತೆಗಳಿಗೆ ಅಭಯದಾನವನ್ನು ಮಾಡಿದನಂತರ ವೃಷಭವಾಹನನಾದ ಶಂಕರನು ಸ್ಖಲಿತವಾಗುವುದರಲ್ಲಿದ್ದ ತೇಜಸ್ಸನ್ನು ಊರ್ಧ್ವಮುಖವಾಗಿ ತಿರುಗಿಸಿದನು. ಅಲ್ಲಿಂದ ಮುಂದೆ ಪರಶಿವನು ‘ಊರ್ಧ್ವರೇತಾಃ’ ಎಂಬ ಅನ್ವರ್ಥನಾಮವನ್ನು ಪಡೆದನು.

ದೇವತೆಗಳು ತನ್ನಲ್ಲಿ ಸಂತಾನವಾಗಲು ಪ್ರತಿಬಂಧಿಸಿದರೆಂದು ಕುಪಿತಳಾದ ರುದ್ರಾಣಿಯು ಸ್ತ್ರೀಸ್ವಭಾವಕ್ಕೆ ಅನುಗುಣವಾಗಿ ದೇವತೆಗಳನ್ನು ಉದ್ದೇಶಿಸಿ ಕಠೋರವಾದ ಈ ಮಾತನ್ನು ಹೇಳಿದಳು:

ಯಸ್ಮಾದಪತ್ಯಕಾಮೋ ವೈ ಭರ್ತಾ ಮೇ ವಿನಿವರ್ತಿತಃ ।
ತಸ್ಮಾತ್ಸರ್ವೇ ಸುರಾ ಯೂಯಮನಪತ್ಯಾ ಭವಿಷ್ಯಥ ॥೭೪॥

"ದೇವತೆಗಳೇ! ನನ್ನ ಪತಿಯು ನನ್ನಲ್ಲಿ ಸಂತಾನವನ್ನು ಪಡೆಯಲು ಇಚ್ಛಿಸಿದ್ದ ಸಮಯದಲ್ಲಿ ನೀವೆಲ್ಲರೂ ಸೇರಿ ಪುತ್ರೋತ್ಪತ್ತಿಯ ಕ್ರಿಯೆಯಿಂದ ನನ್ನ ಪತಿಯನ್ನು ವಿಮುಖನನ್ನಾಗಿ ಮಾಡಿದಿರಿ. ಆದುದರಿಂದ ನೀವೆಲ್ಲರೂ ಮಕ್ಕಳಿಲ್ಲದವರೇ ಆಗುವಿರಿ.

ಪ್ರಜೋಚ್ಛೇದೋ ಮಮ ಕೃತೋ ಯಸ್ಮಾದ್ಯುಷ್ಮಾಭಿರದ್ಯ ವೈ ।
ತಸ್ಮಾತ್ಪ್ರಜಾ ವಃ ಖಗಮಾಃ ಸರ್ವೇಷಾಂ ನ ಭವಿಷ್ಯತಿ ॥೭೫॥

ಆಕಾಶಗಾಮಿಗಳಾದ ದೇವತೆಗಳೇ! ನೀವೆಲ್ಲರೂ ಸೇರಿ ನನಗೆ ಸಂತಾನವಾಗದಂತೆ ಮಾಡಿದ ಕಾರಣ ಇನ್ನು ಮುಂದೆ ನಿಮಗಾರಿಗೂ ಮಕ್ಕಳೇ ಆಗುವುದಿಲ್ಲ."

ಭಾರ್ಗವನೇ! ಉಮಾದೇವಿಯು ಹೀಗೆ ದೇವತೆಗಳಿಗೆ ಶಾಪಕೊಟ್ಟ ಸಮಯದಲ್ಲಿ ಅಗ್ನಿದೇವನಿರಲಿಲ್ಲ. ಆದುದರಿಂದ ಅಗ್ನಿಯೊಬ್ಬನನ್ನು ಬಿಟ್ಟು ಉಳಿದ ದೇವತೆಗಳೆಲ್ಲರೂ ರುದ್ರಾಣಿಯ ಶಾಪದಿಂದ ಸಂತಾನಹೀನ ರಾದರು.

ಯದ್ಯಪಿ ರುದ್ರನು ತೇಜಸ್ಸನ್ನು (ರೇತಸ್ಸನ್ನು) ನಿಗ್ರಹಿಸಿದರೂ ಸ್ವಲ್ಪ ಭಾಗ ರೇತಸ್ಸು ಸ್ಖಲಿತವಾಗಿ ಭೂಮಿಯ ಮೇಲೆ ಬಿದ್ದಿತು. ಪರಮಾದ್ಭುತವಾಗಿದ್ದ ಆ ತೇಜಸ್ಸು ಭೂಮಿಯ ಮೇಲಿದ್ದ ಅಗ್ನಿಯಲ್ಲಿ ಬಿದ್ದು ದಿನ-ದಿನಕ್ಕೂ ವೃದ್ಧಿಯನ್ನು ಹೊಂದುತ್ತಿದ್ದಿತು. ರುದ್ರನ ತೇಜಸ್ಸು ಅಗ್ನಿಯ ತೇಜಸ್ಸಿನೊಡನೆ ಮಿಲಿತವಾಗಿ ಸ್ವಯಂಭೂಪುರುಷನ ರೂಪದಲ್ಲಿ ಅಭಿವ್ಯಕ್ತವಾಯಿತು.

ಅದೇ ಕಾಲದಲ್ಲಿ ತಾರಕನೆಂಬ ಹೆಸರಿನ ಅಸುರನು ಮಹಾಪ್ರಭಾವ ಶಾಲಿಯಾಗಿದ್ದನು. ಅವನು ತನ್ನ ವೀರ್ಯ-ಪರಾಕ್ರಮಗಳಿಂದ ಇಂದ್ರನೇ ಮೊದಲಾದ ದೇವತೆಗಳನ್ನು ಸಂತಾಪಗೊಳಿಸುತ್ತಿದ್ದನು. ದೈತ್ಯನಾದ ತಾರಕನ ಪರಾಕ್ರಮದಿಂದ ಆದಿತ್ಯರು, ವಸುಗಳು, ರುದ್ರರು, ಮರುದ್ಗಣಗಳು, ಅಶ್ವಿನೀದೇವತೆಗಳು, ಸಾಧ್ಯರು–ಇವರೇ ಮೊದಲಾದ ಎಲ್ಲ ದೇವತೆಗಳೂ ಸಂತ್ರಸ್ತರಾದರು. ತಾರಕನ ಅನುಯಾಯಿಗಳಾದ ಅಸುರರು ದೇವತೆಗಳ

ಸ್ಥಾನಗಳನ್ನೂ, ವಿಮಾನಗಳನ್ನೂ, ಪಟ್ಟಣಗಳನ್ನೂ, ಋಷಿಗಳ ಆಶ್ರಮ ಗಳನ್ನೂ ಆಕ್ರಮಿಸಿಕೊಂಡರು. ಅಸುರರ ಉಪಟಳದಿಂದ ದೀನಮನಸ್ಕರಾದ ಎಲ್ಲ ದೇವತೆಗಳೂ ಮತ್ತು ಋಷಿಗಳೂ ವಿಭುವಾದ, ಅಜರನಾದ ಬ್ರಹ್ಮನನ್ನು ಶರಣುಹೊಂದಿದರು."

೮೪ನೆಯ ಅಧ್ಯಾಯವು ಮುಗಿಯಿತು.

೮೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮನಿಂದ ದೇವತೆಗಳಿಗೆ ಆಶ್ವಾಸನೆ: ಅಗ್ನಿಯ ಅನ್ವೇಷಣೆ: ಅಗ್ನಿಯಿಟ್ಟಿದ್ದ ಶಿವತೇಜಸ್ಸನ್ನು ಗಂಗೆಯು ಹಿಮವತ್ಪರ್ವತದಲ್ಲಿ ಹಾಕಿದುದು: ಸುವರ್ಣದ ಮತ್ತು ಕಾರ್ತಿಕೇಯನ ಉತ್ಪತ್ತಿ: ವರುಣರೂಪಧಾರಿಯಾದ ಮಹಾದೇವನ ಯಜ್ಞದಲ್ಲಿ ಅಗ್ನಿಯಿಂದ ಪ್ರಜಾಪತಿಗಳ ಮತ್ತು ಸುವರ್ಣದ ಪ್ರಾದುರ್ಭಾವ: ಕಾರ್ತಿಕೇಯನಿಂದ ತಾರಕಾಸುರನ ವಧೆ

ದೇವತೆಗಳು ಬ್ರಹ್ಮನಿಗೆ ಹೇಳುತ್ತಾರೆ:

ಅಸುರಸ್ತಾರಕೋ ನಾಮ ತ್ವಯಾ ದತ್ತವರಃ ಪ್ರಭೋ ।
ಸುರಾನೃಷೀಂಶ್ಚ ಕ್ಲಿಶ್ನಾತಿ ವಧಸ್ತಸ್ಯ ವಿಧೀಯತಾಮ್ ॥೧॥

"ಪ್ರಭುವೇ! ನಿನ್ನಿಂದ ವರವನ್ನು ಪಡೆದಿರುವ ತಾರಕನೆಂಬ ಹೆಸರಿನ ಅಸುರನು ದೇವತೆಗಳನ್ನೂ-ಋಷಿಗಳನ್ನೂ ಬಹಳವಾಗಿ ಪೀಡಿಸುತ್ತಿದ್ದಾನೆ. ಅವನಿಗೆ ವಧೆಯನ್ನು ವಿಧಿಸು. (ಅವನ ಸಂಹಾರವು ಮಾಡಲ್ಪಡಲಿ.).

ಪಿತಾಮಹನೇ! ಅವನಿಂದ ನಮಗೆ ಬಹಳ ಭಯವಾಗಿದೆ. ದೇವನೇ! ನಮ್ಮನ್ನು ರಕ್ಷಿಸು. ನಿನ್ನನ್ನು ಬಿಟ್ಟರೆ ನಮಗೆ ಬೇರೆ ರಕ್ಷಕರೇ ಇಲ್ಲ."

ಬ್ರಹ್ಮನು ಹೇಳುತ್ತಾನೆ:

"ದೇವತೆಗಳೇ! ನಾನು ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸಮಾನಭಾವದಿಂದಿರತಕ್ಕವನು. ಆದರೆ ಅಧರ್ಮವನ್ನೆಂದಿಗೂ ಸಹಿಸ ತಕ್ಕವನಲ್ಲ. ಆದುದರಿಂದ ದೇವರ್ಷಿಗಳನ್ನು ಬಾಧೆಪಡಿಸುತ್ತಿರುವ ತಾರಕನ ವಧೆಯು ಕ್ಷಿಪ್ರದಲ್ಲಿಯೇ ಆಗಲಿ.

ವೇದಾ ಧರ್ಮಾಶ್ಚ ನೋಚ್ಛೇದಂ ಗಚ್ಛೇಯುಃ ಸುರಸತ್ತಮಾಃ ।
ವಿಹಿತಂ ಪೂರ್ವಮೇವಾತ್ರ ಮಯಾ ವೈ ವ್ಯೇತು ವೋ ಜ್ವರಃ ॥೪॥

ಸುರಶ್ರೇಷ್ಠರೇ! ವೇದಗಳೂ ಮತ್ತು ಧರ್ಮಗಳೂ ನಾಶಹೊಂದ ಬಾರದು. ತಾರಕನ ವಧೋಪಾಯವನ್ನು ನಾನು ಈ ಹಿಂದೆಯೇ ಸಿದ್ಧಗೊಳಿಸಿರುವೆನು. ಆದುದರಿಂದ ನಿಮ್ಮ ಭಯವು ದೂರವಾಗಲಿ.”

ದೇವತೆಗಳು ಹೇಳುತ್ತಾರೆ:

“ಪಿತಾಮಹನೇ! ನಿನ್ನ ವರದಿಂದಲೇ ಅವನು ಮಹಾಬಲಿಷ್ಠನಾಗಿ ಗರ್ವಿತನಾಗಿದ್ದಾನೆ. ದೇವತೆಗಳಿಗಂತೂ ಅವನನ್ನು ಸಂಹರಿಸಲು ಸಾಧ್ಯವೇ ಇಲ್ಲ. ಹೀಗಿರುವಾಗ ಅವನು ಹೇಗೆ ಶಾಂತನಾಗುತ್ತಾನೆ? (ಅಡಗುತ್ತಾನೆ?) ದೇವತೆಗಳಿಂದಾಗಲೀ, ರಾಕ್ಷಸರಿಂದಾಗಲೀ ಅಸುರರಿಂದಾಗಲೀ-ವಧೆಯು ಪ್ರಾಪ್ತವಾಗದಂತೆ ಅವನು ನಿನ್ನಿಂದಲೇ ವರವನ್ನು ಪಡೆದುಕೊಂಡಿರುತ್ತಾನೆ. ಹಿಂದೆ ನಾವು ರುದ್ರಾಣಿಯಲ್ಲಿ ಸಂತಾನವಾಗುವುದನ್ನು ತಡೆದಾಗ ಅವಳು ನಮಗಾರಿಗೂ ಮಕ್ಕಳಾಗದಂತೆ ಶಾಪವನ್ನಿತ್ತಿರುವಳು. ಆ ಶಾಪದಿಂದಾಗಿ ನಮಗೆ ಮಕ್ಕಳಾಗದೇ ಇರುವುದರಿಂದ ನಮ್ಮ ಮಕ್ಕಳಾದರೂ ತಾರಕನನ್ನು ಸಂಹರಿಸುವರೆಂಬುದಕ್ಕೂ ಅವಕಾಶವಿಲ್ಲವಾಗಿದೆ.”

ಬ್ರಹ್ಮನು ಹೇಳುತ್ತಾನೆ:

“ಸುರಶ್ರೇಷ್ಠರೇ! ಪಾರ್ವತಿಯು ಶಾಪವನ್ನು ಕೊಟ್ಟ ಕಾಲದಲ್ಲಿ ಅಗ್ನಿಯು ಅಲ್ಲಿರಲಿಲ್ಲ. ಆದುದರಿಂದ ಉಮೆಯ ಶಾಪವು ಅಗ್ನಿಗೆ ಅನ್ವಯಿಸುವುದಿಲ್ಲ. ದೇವತೆಗಳ ಶತ್ರುಗಳನ್ನು ಸಂಹರಿಸಲು ಅವನು ಸಂತಾನವನ್ನು ಪಡೆಯುತ್ತಾನೆ. ಅಗ್ನಿಯ ಸಂತಾನವು ದೇವ-ದಾನವ-ರಾಕ್ಷಸರನ್ನೂ, ಮನುಷ್ಯರನ್ನೂ, ಗಂಧರ್ವರನ್ನೂ, ನಾಗರನ್ನೂ, ಪಕ್ಷಿಗಳನ್ನೂ ಮೀರಿರುತ್ತದೆ. ಅದು–ಯಾವನಿಂದ ನಿಮಗೆ ಈ ಭಯವುಂಟಾಗಿರುವುದೋ–ಆ ತಾರಕಾಸುರನನ್ನು ಅಮೋಘವಾದ ಅಸ್ತ್ರಶಕ್ತಿಯಿಂದ ಸಂಹರಿಸುತ್ತದೆ. ಇಷ್ಟು ಮಾತ್ರವಲ್ಲ. ಇತರ ದೇವಶತ್ರುಗಳನ್ನೂ ಸಂಹರಿಸುತ್ತದೆ. ಸನಾತನವಾದ ಸಂಕಲ್ಪವನ್ನೇ ಕಾಮ ಎಂದು ಕರೆಯುತ್ತಾರೆ. ಆ ಕಾಮದ ಪರಿಣಾಮವಾಗಿ ರುದ್ರನ ತೇಜಸ್ಸು

ಸ್ಖಲಿತವಾಗಿ ಅಗ್ನಿಯಲ್ಲಿ ಬಿದ್ದಿತು. ಎರಡನೆಯ ಅಗ್ನಿಯಂತೆಯೇ ಇದ್ದ ತೇಜಸ್ಸೆಂಬ ಆ ಮಹಾಭೂತವನ್ನು ಅಗ್ನಿಯು ದೇವಶತ್ರುಗಳ ವಧಾರ್ಥವಾಗಿ ಗಂಗೆಯಲ್ಲಿ ಇರಿಸಿ ಅವಳಿಂದ ಪುತ್ರನನ್ನು ಪಡೆದುಕೊಳ್ಳುತ್ತಾನೆ. ರುದ್ರಾಣಿಯು ದೇವತೆಗಳಿಗೆ ಶಾಪಕೊಟ್ಟಾಗ ಅಗ್ನಿಯು ನಷ್ಟವಾಗಿ ಹೋಗಿದ್ದನು. ಆದುದರಿಂದ ಅವನು ಆ ಶಾಪಕ್ಕೆ ಭಾಗಿಯಾಗಲಿಲ್ಲ. ಅವನಿಂದ ನಿಮ್ಮೆಲ್ಲರ ಭಯವನ್ನೂ ಹೋಗಲಾಡಿಸುವ ಪಾವಕಿಯು (ಅಗ್ನಿಪುತ್ರನು) ಹುಟ್ಟುತ್ತಾನೆ. ನೀವೀಗಲೇ ಅಗ್ನಿದೇವನನ್ನು ಹುಡುಕಿರಿ ಮತ್ತು ಅವನನ್ನು ಈ ಕಾರ್ಯದಲ್ಲಿ ನಿಯೋಜಿಸಿರಿ. ನಿಷ್ಪಾಪರೇ! ತಾರಕಾಸುರನ ವಧೋಪಾಯವನ್ನು ನಿಮಗೆ ತಿಳಿಸಿದ್ದೇನೆ.

ನ ಹಿ ತೇಜಸ್ವಿನಾಂ ಶಾಪಾಸ್ತೇಜಸ್ಸು ಪ್ರಭವನ್ತಿ ವೈ ।
ಬಲಾನ್ಯತಿಬಲಂ ಪ್ರಾಪ್ಯ ದುರ್ಬಲಾನಿ ಭವನ್ತಿ ವೈ ॥೧೫॥

ತೇಜಸ್ವಿಗಳ ಶಾಪವು ಅತಿತೇಜಸ್ವಿಗಳಲ್ಲಿ ಯಾವವಿಧವಾದ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಬಲಿಷ್ಠರಾದವರು ಅತ್ಯಂತ ಬಲಿಷ್ಠನಾದವನ ಬಳಿಗೆ ಹೋದರೆ ದುರ್ಬಲರೇ ಆಗುತ್ತಾರೆ.

ಹನ್ಯಾದವಧ್ಯಾನ್ವರದಾನಪಿ ಚೈವ ತಪಸ್ವಿನಃ ।
ಸಂಕಲ್ಪಾಭಿರುಚಿಃ ಕಾಮಃ ಸನಾತನತಮೋಽಭವತ್ ॥೧೬॥

ಸಂಕಲ್ಪವೇ ಕಾಮವಾದುದರಿಂದ ಆ ಸಂಕಲ್ಪವನ್ನು ಪೂರ್ಣಗೊಳಿಸುವುದರಲ್ಲಿಯೇ ಕಾಮನು (ಅಗ್ನಿಯು) ಅಭಿರುಚಿಯುಳ್ಳವನಾಗಿದ್ದಾನೆ. ಆದುದರಿಂದಲೇ ಕಾಮನು ಸನಾತನನಿಗೂ ಸನಾತನನಾಗಿದ್ದಾನೆ. ಅಂತಹ ಕಾಮನು ಅವಧ್ಯರನ್ನೂ ವಧಿಸಬಲ್ಲನು. ಅವಧ್ಯನಾಗುವಂತೆ ವರಕೊಟ್ಟವರನ್ನೂ ವಧಿಸಬಲ್ಲನು. ತಪಸ್ವಿಗಳನ್ನೂ ವಧಿಸಬಲ್ಲನು. ಸಂಕಲ್ಪವು ಅಥವಾ ಕಾಮನು ಅಷ್ಟು ಬಲಿಷ್ಠನಾದವನು.

ಜಗತ್ಪತಿರನಿರ್ದೇಶ್ಯಃ ಸರ್ವಗಃ ಸರ್ವಭಾವನಃ ।
ಹೃಚ್ಛಯಃ ಸರ್ವಭೂತಾನಾಂ ಜ್ಯೇಷ್ಠೋ ರುದ್ರಾದಪಿ ಪ್ರಭುಃ ॥೧೭॥

ಕಾಮನು ಜಗತ್ಪತಿಯು. ಅನಿರ್ವಚನೀಯನು. ಎಲ್ಲ ಕಡೆಗಳಿಗೂ ಹೋಗತಕ್ಕವನು. (ಸರ್ವವ್ಯಾಪಿಯು). ಎಲ್ಲವನ್ನೂ ಸೃಷ್ಟಿಸುವವನು. ಎಲ್ಲ ಪ್ರಾಣಿಗಳ ಹೃದಯಗಳಲ್ಲಿಯೂ ಪವಡಿಸಿರುವ ಕಾಮದೇವನು ಸರ್ವಸಮರ್ಥನು. ರುದ್ರನಿಗಿಂತಲೂ ಜ್ಯೇಷ್ಠನಾದವನು.

ತೇಜೋರಾಶಿಯಾದ ಹುತಾಶನನನ್ನು ಕ್ಷಿಪ್ರವಾಗಿ ಹುಡುಕಿರಿ. ದೇವತೆಗಳೇ! ಅವನೇ ನಿಮ್ಮ ಮನೋಗತವಾಗಿರುವ ಕಾಮವನ್ನು (ಅಪೇಕ್ಷೆಯನ್ನು) ಪೂರೈಸಿಕೊಡುತ್ತಾನೆ."

ವಸಿಷ್ಠರು ಪರಶುರಾಮನಿಗೆ ಹೇಳುತ್ತಾರೆ:

"ಭೃಗುನಂದನನೇ! ದೇವತೆಗಳು ಮಹಾತ್ಮನಾದ ಬ್ರಹ್ಮನ ಮಾತನ್ನು ಕೇಳಿ ಸಫಲಮನೋರಥರಾಗಿ ಅಗ್ನಿಯನ್ನು ಹುಡುಕುವ ಸಲುವಾಗಿ ಅಲ್ಲಿಂದ ಹೊರಟರು. ದೇವತೆಗಳೊಡನೆ ಋಷಿಗಳೂ ಅಗ್ನಿದೇವನ ದರ್ಶನಾಕಾಂಕ್ಷಿಗಳಾಗಿ ಅವನಲ್ಲಿಯೇ ನೆಟ್ಟಮನಸ್ಸುಳ್ಳವರಾಗಿ ಅಗ್ನಿಯನ್ನು ಮೂರು ಲೋಕಗಳಲ್ಲಿಯೂ ಹುಡುಕಿದರು. ಉತ್ತಮವಾದ ತಪೋಬಲದಿಂದ ಯುಕ್ತರಾಗಿದ್ದ, ತೇಜಸ್ವಿಗಳಾದ, ಲೋಕವಿಖ್ಯಾತರಾದ, ಸಿದ್ಧಸಂಕಲ್ಪರಾದ ದೇವರ್ಷಿಗಳು ಎಲ್ಲ ಲೋಕಗಳಲ್ಲಿಯೂ ಅಗ್ನಿದೇವನನ್ನು ಹುಡುಕಿದರು. ಆ ಅಗ್ನಿಯು ತನ್ನ ಆತ್ಮದಲ್ಲಿಯೇ (ಜಲದಲ್ಲಿಯೇ) ಲಯಗೊಂಡು ಹೊರ ಜಗತ್ತಿಗೆ ಕಾಣಿಸದವನಾಗಿದ್ದನು. ಆಗ ಅವನನ್ನು ಪಡೆಯದೇ ಭಯಗೊಂಡವರಾಗಿ ಅವನನ್ನು ಕಾಣುವುದರಲ್ಲಿ ಅತ್ಯಾಸಕ್ತರಾಗಿದ್ದ ದೇವರ್ಷಿಗಳಿಗೆ ಅಗ್ನಿಯ ತೇಜಸ್ಸಿನಿಂದ ದಗ್ಧವಾಗಿ ಆಯಾಸಗೊಂಡಿದ್ದ ಕಪ್ಪೆಯೊಂದು ರಸಾತಲದಿಂದ ಮೇಲಕ್ಕೆ ಬಂದು ಹೀಗೆ ಹೇಳಿತು:

"ದೇವತೆಗಳೇ! ನೀವು ಹುಡುಕುತ್ತಿರುವ ಅಗ್ನಿಯು ರಸಾತಲದ ತಳದಲ್ಲಿರುವನು. ಅಗ್ನಿಯಿಂದ ಹುಟ್ಟಿದ ತಾಪದಿಂದ ಭಯಗೊಂಡು ನಾನು ಇಲ್ಲಿಗೆ ಬಂದೆನು. ಪೂಜ್ಯನಾದ ಅಗ್ನಿದೇವನು ತನ್ನ ತೇಜಸ್ಸುಗಳಿಂದ ನೀರಿನೊಡನೆ ಬೆರೆತು ನೀರಿನ ಮಧ್ಯದಲ್ಲಿ ಮಲಗಿದ್ದಾನೆ. ಅಲ್ಲಿದ್ದ ನಾವು ಅಗ್ನಿಯ ತೇಜಸ್ಸಿನಿಂದ ಸಂತಪ್ತರಾದೆವು. ನಿಮಗೆ ಅವನ ದರ್ಶನವು

ಇಷ್ಟವಾಗಿರುವುದಾದರೆ–ಅವನಿಂದ ಕಾರ್ಯವೇನಾದರೂ ಆಗಬೇಕಾಗಿದ್ದರೆ–ನೀವು ರಸಾತಲಕ್ಕೇ ಹೋಗಿ ಅವನನ್ನು ಸಂಧಿಸಿರಿ. ದೇವತೆಗಳೇ! ನೀವು ಅಗ್ನಿಯ ಬಳಿಗೆ ಹೋಗಿರಿ. ನಾವು ಅಗ್ನಿಯ ಭಯದಿಂದ ತಪ್ಪಿಸಿಕೊಳ್ಳಲು ಬೇರೆಲ್ಲಿಗಾದರೂ ಹೋಗುತ್ತೇವೆ.”

ಕಪ್ಪೆಯು ಹೀಗೆ ಹೇಳಿ ಶೀಘ್ರವಾಗಿ ನೀರಿನೊಳಕ್ಕೆ ಹೊರಟುಹೋಯಿತು. ಅಗ್ನಿದೇವನು ಕಪ್ಪೆಯ ಚಾಡಿಕೋರತನವನ್ನು ತಿಳಿದು ಅದರ ಬಳಿಗೆ ಹೋಗಿ–‘ಇನ್ನು ಮುಂದೆ ನಿನಗೆ ರಸಗಳ ಅನುಭವವಾಗದಿರಲಿ’–ಎಂದು ಶಪಿಸಿದನು. ಅಗ್ನಿಯು ಮಂಡೂಕಕ್ಕೆ ಹೀಗೆ ಶಾಪಕೊಟ್ಟು ಬೇರೆ ಕಡೆ ವಾಸಮಾಡಲು ಅವಸರದಿಂದ ಹೊರಟುಹೋದನು. ದೇವತೆಗಳಿಗೆ ಮಾತ್ರ ತನ್ನನ್ನು ತೋರಿಸಿಕೊಳ್ಳಲಿಲ್ಲ. ಆದರೆ ದೇವತೆಗಳು ಕಪ್ಪೆಗಳನ್ನು ಅನುಗ್ರಹಿಸಿದರು.

ಭಾರ್ಗವ! ದೇವತೆಗಳು ಕಪ್ಪೆಗಳನ್ನು ಯಾವ ರೀತಿ ಅನುಗ್ರಹಿಸಿದರೆಂಬುದನ್ನು ಹೇಳುವೆನು; ಕೇಳು:

ಅಗ್ನಿಯ ಶಾಪದಿಂದ ನಾಲಿಗೆಯನ್ನು ಕಳೆದುಕೊಂಡ ಕಪ್ಪೆಗಳಿಗೆ ದೇವತೆಗಳು ಹೇಳಿದರು:

ಅಗ್ನಿಶಾಪಾದಜಿಹ್ವಾಪಿ ರಸಜ್ಞಾನಬಹಿಷ್ಕೃತಾಃ ।
ಸರಸ್ವತೀಂ ಬಹುವಿಧಾಂ ಯೂಯಮುಚ್ಚಾರಯಿಷ್ಯಥ ॥೩೧॥

“ಮಂಡೂಕಗಳೇ! ನೀವು ಅಗ್ನಿಯ ಶಾಪದಿಂದಾಗಿ ನಾಲಿಗೆಯನ್ನು ಕಳೆದುಕೊಂಡು ರಸಾಸ್ವಾದನೆಯನ್ನು ಮಾಡಲಾರದವರಾಗಿದ್ದರೂ ನಮ್ಮ ಅನುಗ್ರಹದಿಂದ ನಾನಾವಿಧವಾದ ವಾಣಿಯನ್ನು ಉಚ್ಚರಿಸಲು ನೀವು ಸಮರ್ಥರಾಗುವಿರಿ. (ನಾಲಗೆಯಿಲ್ಲದಿದ್ದರೂ ನೀವು ಮೂಕರಾಗುವುದಿಲ್ಲ.)

ಬಿಲವಾಸಂ ಗತಾಂಶ್ಚೈವ ನಿರಾಹಾರಾನಚೇತಸಃ ।
ಗತಾಸೂನಪಿ ಸಂಶುಷ್ಕಾನ್ಭೂಮಿಃ ಸಂಧಾರಯಿಷ್ಯತಿ ।
ತಮೋಘನಾಯಾಮಪಿ ವೈ ನಿಶಾಯಾಂ ವಿಚರಿಷ್ಯಥ ॥೩೨॥

ಹೊರಗೆ ತಿರುಗಾಡಲು ಸಾಧ್ಯವಾಗದೇ ಬಿಲದಲ್ಲಿಯೇ ವಾಸ ಮಾಡುತ್ತಾ ಆಹಾರವಿಲ್ಲದೇ ನೀವು ಪ್ರಾಣತೊರೆದಿದ್ದರೂ, ಶುಷ್ಕವಾಗಿ ಹೋಗಿದ್ದರೂ ಭೂಮಿಯು ನಿಮ್ಮನ್ನು ಧರಿಸಿರುತ್ತದೆ. ವರ್ಷಾಕಾಲವು ಬಂದೊಡನೆಯೇ ನೀವು ಪುನಃ ಜೀವಂತರಾಗುವಿರಿ. ಗಾಢಾಂಧಕಾರದಿಂದ ತುಂಬಿರುವ ರಾತ್ರಿಯಲ್ಲಿಯೂ ನೀವು ಸಂಚರಿಸಬಲ್ಲಿರಿ."

ಭಾರ್ಗವ! ಹೀಗೆ ದೇವತೆಗಳು ಕಪ್ಪೆಗಳಿಗೆ ವರವನ್ನಿತ್ತು ಪುನಃ ಅಗ್ನಿಯನ್ನು ಹುಡುಕುವ ಸಲುವಾಗಿ ಭೂಮಿಯಲ್ಲಿ ಅಲೆದಾಡಿದರು. ಆದರೆ ಅಗ್ನಿದೇವನು ಮಾತ್ರ ಅವರಿಗೆ ಎಲ್ಲಿಯೂ ಸಿಕ್ಕಲಿಲ್ಲ. ಹೀಗೆಯೇ ಸಂಚರಿಸುತ್ತಿದ್ದಾಗ ಐರಾವತಕ್ಕೆ ಸಮಾನವಾಗಿದ್ದ ಆನೆಯೊಂದು ಎದುರಾಗಿ ಬಂದು ದೇವತೆಗಳೊಡನೆ-'**ಅಶ್ವತ್ಥಸ್ಥೋಽಗ್ನಿಃ**'-'ಅಗ್ನಿಯು ಅಶ್ವತ್ಥವೃಕ್ಷದಲ್ಲಿ ಸೇರಿ ಕೊಂಡಿದ್ದಾನೆ'- ಎಂದು ಹೇಳಿತು.

ಆ ವಿಷಯವನ್ನು ತಿಳಿದ ಅಗ್ನಿಯು ಕ್ರೋಧಮೂರ್ಛಿತನಾಗಿ ಎಲ್ಲ ಆನೆಗಳಿಗೂ–'**ಪ್ರತೀಪಾ ಭವತಾಂ ಜಿಹ್ವಾ ಭವಿತ್ರೀ**' 'ನಿಮ್ಮ ನಾಲಿಗೆಯು ತಿರುಗು-ಮುರುಗಾಗುತ್ತದೆ'–ಎಂದು ಶಾಪವನ್ನಿತ್ತನು.

ಆನೆಯಿಂದ ಅಶ್ವತ್ಥದಲ್ಲಿರುವನೆಂದು ಸೂಚಿಸಲ್ಪಟ್ಟ ಅಗ್ನಿಯು ಆನೆಗಳಿಗೆ ಹೀಗೆ ಶಾಪಕೊಟ್ಟು ಅಶ್ವತ್ಥವೃಕ್ಷದಿಂದ ಹೊರಬಿದ್ದು ಚೆನ್ನಾಗಿ ಮಲಗಿ ನಿದ್ರಿಸಬೇಕೆಂಬ ಆಶಯದಿಂದ ಬನ್ನೀಮರದ ಗರ್ಭವನ್ನು ಸೇರಿದನು.

ಅಗ್ನಿಯನ್ನು ತೋರಿಸಿಕೊಟ್ಟುದಕ್ಕಾಗಿ ಸುಪ್ರೀತರಾದ ದೇವತೆಗಳು ಆನೆಗಳನ್ನು ಯಾವ ವರದಾನದಿಂದ ಅನುಗ್ರಹಿಸಿದರೆಂಬುದನ್ನು ಹೇಳುವೆನು; ಕೇಳು:

ಪ್ರತೀಪಯಾ ಜಿಹ್ವಯಾಪಿ ಸರ್ವಾಹಾರಂ ಕರಿಷ್ಯಥ ।
ವಾಚಂ ಚೋಚ್ಚಾರಯಿಷ್ಯಧ್ವಮುಚ್ಚೈರವ್ಯಞ್ಜಿತಾಕ್ಷರಾಮ್ ॥

"ಆನೆಗಳೇ! ನೀವು ತಿರುಗು-ಮುರುಗಾದ ನಾಲಿಗೆಗಳಿಂದ ಕೂಡಿದವರಾಗಿದ್ದರೂ ಆ ನಾಲಿಗೆಗಳಿಂದಲೇ ಸಕಲವಿಧವಾದ ಆಹಾರವನ್ನು ತಿನ್ನಲು ಸಮರ್ಥರಾಗುವಿರಿ. ಉಚ್ಚಸ್ವರದಿಂದ ವಾಕ್ಯವನ್ನು ಹೇಳುವಿರಿ. ಆದರೆ ನಿಮ್ಮ ಮಾತಿನಲ್ಲಿರುವ ಅಕ್ಷರಗಳು ಸ್ಪಷ್ಟವಾಗಿ ಅಭಿವ್ಯಕ್ತವಾಗುವುದಿಲ್ಲ."

ಹೀಗೆ ಆನೆಗಳನ್ನು ಅನುಗ್ರಹಿಸಿ ದೇವತೆಗಳು ಪುನಃ ಅಗ್ನಿಯನ್ನು ಹುಡುಕತೊಡಗಿದರು. ಹಿಂದೆಯೇ ಹೇಳಿದಂತೆ ಅಶ್ವತ್ಥವೃಕ್ಷದಿಂದ ಹೊರಟ ಅಗ್ನಿಯು ಶಮೀವೃಕ್ಷದಲ್ಲಿ (ಬನ್ನಿಯ ಮರದಲ್ಲಿ) ಸೇರಿಕೊಂಡನು. ದೇವತೆಗಳು ಅಗ್ನಿಯನ್ನು ಭೂಮಿಯ ಎಲ್ಲ ಕಡೆಗಳಲ್ಲಿಯೂ ಹುಡುಕುತ್ತಿರುವ ಸಮಯದಲ್ಲಿ ಗಿಳಿಯೊಂದು ಅಗ್ನಿಯಿರುವ ಸ್ಥಳವನ್ನು ದೇವತೆಗಳಿಗೆ ತಿಳಿಸಿಕೊಟ್ಟಿತು.

ಬನ್ನೀಮರದ ಗರ್ಭದಲ್ಲಿದ್ದ ಅಗ್ನಿಯನ್ನು ದೇವತೆಗಳು ಬೆನ್ನಟ್ಟಿ ಹೋದರು. ಅದನ್ನು ತಿಳಿದ ಅಗ್ನಿಯು ಗಿಳಿಗಳಿಗೆ ಮಾತಿಲ್ಲದವುಗಳಾಗುವಂತೆ ಶಾಪವನ್ನಿತ್ತನು. ಹೀಗೆ ಅಗ್ನಿದೇವನು ಗಿಳಿಗಳ ನಾಲಿಗೆಗಳನ್ನೂ ತಿರುಗು-ಮುರುಗುಮಾಡಿದನು. ದೇವತೆಗಳು ಶಮೀಗರ್ಭದಲ್ಲಿದ್ದ ಅಗ್ನಿಯನ್ನು ನೋಡಿದರು. ಗಿಳಿಗಳಿಗೆ ಅಗ್ನಿಯು ಶಾಪವಿತ್ತುದನ್ನು ಕೇಳಿ ಅದರ ವಿಷಯದಲ್ಲಿ ಕೃಪಾವಿಷ್ಟರಾಗಿ ಗಿಳಿಗಳನ್ನು ಕುರಿತು ಹೇಳಿದರು:

ಭವಿತಾ ನ ತ್ವಮತ್ಯನ್ತಂ ಶುಕತ್ವೇ ನಷ್ಟವಾಗಿತಿ ।
ಆವೃತ್ತಜಿಹ್ವಸ್ಯ ಸತೋ ವಾಕ್ಯಂ ಕಾನ್ತಂ ಭವಿಷ್ಯತಿ ।
ಬಾಲಸ್ಯೇವ ಪ್ರವೃದ್ಧಸ್ಯ ಕಲಮವ್ಯಕ್ತಮದ್ಭುತಮ್ ॥೪೨॥

"ಶುಕಯೋನಿಯಲ್ಲಿರುವ ನಿಮ್ಮ ಮಾತು ಸಂಪೂರ್ಣವಾಗಿ ನಷ್ಟ ವಾಗುವುದಿಲ್ಲ. ಸ್ವಲ್ಪಮಾತನಾಡಲು ನಿಮಗೆ ಸಾಧ್ಯವಾಗುತ್ತದೆ. ತಿರುಗು ಮುರುಗಾಗಿರುವ ನಿಮ್ಮ ನಾಲಿಗೆಯ ಮೂಲಕವಾಗಿ ನೀವಾಡುವ ಮಾತುಗಳು ಸುಮಧುರವಾಗಿಯೂ ಕಮನೀಯವಾಗಿಯೂ ಇರುತ್ತವೆ. ಬಾಲಕನಾಡುವ ತೊದಲುನುಡಿಗಳು ಅವ್ಯಕ್ತವಾಗಿದ್ದರೂ ವಯಸ್ಸಾದವರಿಗೆ ಅದ್ಭುತವಾಗಿ ತೋರುವಂತೆ–ನೀವಾಡುವ ಮಾತುಗಳು ಎಲ್ಲರಿಗೂ ಅದ್ಭುತವಾಗಿ ಕಾಣುತ್ತವೆ ಮತ್ತು ಪ್ರಿಯವಾಗುತ್ತವೆ."

ಹೀಗೆ ಗಿಳಿಗಳನ್ನು ಅನುಗ್ರಹಿಸಿ ದೇವತೆಗಳು ಶಮೀಗರ್ಭದಲ್ಲಿದ್ದ ಅಗ್ನಿಯನ್ನು ನೋಡಿದರು. ಸರ್ವಕರ್ಮಗಳಲ್ಲಿಯೂ ಬನ್ನಿಯ ಮರವನ್ನೇ ಅಗ್ನಿಯ ಪುಣ್ಯಸ್ಥಾನವನ್ನಾಗಿ ಕಲ್ಪಿಸಿದರು. ಈ ಕಾರಣದಿಂದಲೇ ಅಗ್ನಿಯು ಯಾವಾಗಲೂ ಶಮೀಗರ್ಭಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಮುಂದೆ ಮನುಷ್ಯರು

ಶಮಿಯನ್ನು ಕಡೆದು ಅದರಲ್ಲಿರುವ ಅಗ್ನಿಯನ್ನು ಪಡೆಯುವ ಉಪಾಯವನ್ನು ಕಂಡುಕೊಂಡರು.

ಅಗ್ನಿಯು ರಸಾತಲತಳದಲ್ಲಿ ನೀರಿನಲ್ಲಿ ಪವಡಿಸಿದ್ದನೆಂದು ಹೇಳಲಿಲ್ಲವೇ? ಅಗ್ನಿದೇವನು ನೀರಿನಲ್ಲಿ ಮಲಗಿದ ಕಾರಣ ಅವನ ತೇಜಸ್ಸಿನಿಂದ ಉಷ್ಣತ್ವವನ್ನು ಪಡೆದ ನೀರು ಪರ್ವತಗಳಲ್ಲಿ ಝರಿಯ ರೂಪಗಳಲ್ಲಿ ಹರಿಯುತ್ತಾ ಅವುಗಳಲ್ಲಿರುವ ಉಷ್ಣತ್ವವನ್ನು ಹೊರಹಾಕುತ್ತದೆ. (ಕೆಲವು ಬಿಸಿನೀರಿನ ಬುಗ್ಗೆಗಳ ರೂಪದಲ್ಲಿಯೂ ಇವೆ.) ಶಮೀಗರ್ಭದಲ್ಲಿದ್ದ ಅಗ್ನಿಯು ತನ್ನನ್ನನುಸರಿಸಿ ಬಂದ ದೇವತೆಗಳನ್ನು ನೋಡಿ ವ್ಯಥಿತನಾಗಿ, ನಿಮ್ಮ ಆಗಮನಕ್ಕೆ ಕಾರಣವೇನೆಂದು ಅವರನ್ನು ಕೇಳಿದನು. ಅಗ್ನಿಯ ಪ್ರಶ್ನೆಗೆ ಉತ್ತರವಾಗಿ ಎಲ್ಲ ದೇವತೆಗಳೂ ಮತ್ತು ಮಹರ್ಷಿಗಳೂ ಹೇಳಿದರು:

ತ್ವಾಂ ನಿಯೋಕ್ಷ್ಯಾಮಹೇ ಕಾರ್ಯೇ ತದ್ಭವಾನ್ಕರ್ತುಮರ್ಹತಿ।
ಕೃತೇ ಚ ತಸ್ಮಿನ್ಭವಿತಾ ತವಾಪಿ ಸುಮಹಾನ್ಗುಣಃ ॥೪೯॥

"ಅಗ್ನಿದೇವನೇ! ನಾವು ನಿನ್ನನ್ನು ಒಂದು ಕಾರ್ಯದಲ್ಲಿ ನಿಯೋಜಿಸುತ್ತೇವೆ. ಆ ಕಾರ್ಯವನ್ನು ನೀನು ಮಾಡಿಕೊಡಬೇಕಾಗಿದೆ. ಆ ಕಾರ್ಯವನ್ನು ಪೂರೈಸಿಕೊಡುವುದರಿಂದ ನಿನಗೂ ಒಳ್ಳೆಯದಾಗುತ್ತದೆ."

ಅಗ್ನಿಯು ಹೇಳುತ್ತಾನೆ:

ಬ್ರೂತ ಯದ್ಭವತಾಂ ಕಾರ್ಯಂ ಕರ್ತಾಸ್ಮಿ ತದಹಂ ಸುರಾಃ ।
ಭವತಾಂ ತು ನಿಯೋಜ್ಯೋಽಸ್ಮಿ ಮಾ ವೋಽತ್ರಾಸ್ತು ವಿಚಾರಣಾ ॥

"ದೇವತೆಗಳೇ! ನಿಮ್ಮ ಕಾರ್ಯವೇನೆಂಬುದನ್ನು ಹೇಳಿರಿ. ಅದನ್ನು ಅವಶ್ಯವಾಗಿ ಮಾಡುತ್ತೇನೆ. ನಾನು ನಿಮ್ಮ ಆಜ್ಞಾಪಾಲಕನಾಗಿದ್ದೇನೆ. ಆದುದರಿಂದ ನೀವು ಈ ವಿಷಯದಲ್ಲಿ ಯೋಚಿಸಬೇಕಾದ ಕಾರಣವಿಲ್ಲ."

ದೇವತೆಗಳು ಹೇಳುತ್ತಾರೆ:

"ಅಗ್ನಿದೇವನೇ! ಬ್ರಹ್ಮನ ವರದಿಂದ ದರ್ಪಿತನಾಗಿರುವ ತಾರಕನೆಂಬ ಅಸುರನು ತನ್ನ ಪರಾಕ್ರಮದಿಂದ ನಮ್ಮನ್ನು ಬಹಳವಾಗಿ ಪೀಡಿಸುತ್ತಿದ್ದಾನೆ. ಆದುದರಿಂದ ನೀನು ಅವನ ವಧೆಗಾಗಿ ಯಾವುದಾದರೂ ಉಪಾಯವನ್ನು

ಕಲ್ಪಿಸು. ಅವನ ವಧೋಪಾಯವನ್ನು ಕಲ್ಪಿಸಿಕೊಟ್ಟು ದೇವತೆಗಳನ್ನೂ ಪ್ರಜಾಪತಿಗಳನ್ನೂ, ಋಷಿಗಳನ್ನೂ ಸಂರಕ್ಷಿಸು. ಹವ್ಯವಾಹನನೇ! ಮಹಾ ಪರಾಕ್ರಮಿಯಾದ ತಾರಕಾಸುರನ ದೆಸೆಯಿಂದ ಉಂಟಾಗಿರುವ ಭಯವನ್ನು ಹೋಗಲಾಡಿಸಲು ಸಮರ್ಥನಾದ, ಮಹಾತೇಜಸ್ವಿಯಾದ ಮತ್ತು ಪರಾಕ್ರಮಿಯಾದ ಪುತ್ರನನ್ನು ಪಡೆದುಕೊ. ಮಹಾದೇವಿಯಾದ ಪಾರ್ವತಿಯ ಶಾಪದಿಂದ ನಾವೆಲ್ಲರೂ ಸಂತಾನಹೀನರಾಗಿದ್ದೇವೆ. ಈ ಸಮಯದಲ್ಲಿ ನಿನ್ನ ವೀರ್ಯವನ್ನು (ವೀರ್ಯದಿಂದ ಹುಟ್ಟುವ ಪುತ್ರನನ್ನು) ಬಿಟ್ಟು ನಮಗೆ ಬೇರೆ ಯಾವ ಆಶ್ರಯವೂ ಇಲ್ಲವಾಗಿದೆ. ಆದುದರಿಂದ ಪ್ರಭುವೇ! ವೀರ್ಯವಂತನಾದ ಪುತ್ರನನ್ನು ಹುಟ್ಟಿಸಿ ನಮ್ಮೆಲ್ಲರನ್ನೂ ಕಾಪಾಡು."

ವಸಿಷ್ಠರು ಹೇಳುತ್ತಾರೆ:

"ಭಾರ್ಗವ! ದೇವತೆಗಳು ಹೀಗೆ ಪ್ರಾರ್ಥಿಸಿದನಂತರ ದುರಾಧರ್ಷನಾದ ಅಗ್ನಿಯು ಹಾಗೆಯೇ ಆಗಲೆಂದು ಹೇಳಿ ಗಂಗಾಭಾಗೀರಥಿಯ ತೀರಕ್ಕೆ ಹೋದನು. ಗಂಗಾದೇವಿಯೊಡನೆ ಸಮಾಗಮವನ್ನು ಮಾಡಿ ಅವಳಲ್ಲಿ ಗರ್ಭವನ್ನು (ಮಹಾದೇವನಿಂದ ಪಡೆದುಕೊಂಡಿದ್ದ ವೀರ್ಯವನ್ನು) ಇರಿಸಿದನು. ಹುಲ್ಲಿನ ಮೆದೆಯಲ್ಲಿ ಬಿದ್ದ ಅಗ್ನಿಯ ಕಣವು ಕ್ಷಣ-ಕ್ಷಣಕ್ಕೂ ವೃದ್ಧಿಹೊಂದುವಂತೆ–ಅಗ್ನಿಯಿಂದ ಇರಿಸಲ್ಪಟ್ಟ ಗರ್ಭವು ಗಂಗಾದೇವಿಯ ಹೊಟ್ಟೆಯಲ್ಲಿ ದಿನ-ದಿನಕ್ಕೂ ಬೆಳೆಯತೊಡಗಿತು. ಅಗ್ನಿದೇವನ ತೇಜೋರೂಪವಾದ ರೇತಸ್ಸನ್ನು ಧರಿಸಿದ್ದ ಗಂಗಾದೇವಿಯ ಮನಸ್ಸು ವ್ಯಾಕುಲಗೊಂಡಿತು. ಗರ್ಭಸ್ಥವಾಗಿದ್ದ ಅಗ್ನಿದೇವನ ತೇಜಸ್ಸಿನಿಂದ ಆಕೆಯು ತೀವ್ರವಾಗಿ ಪರಿತಪಿಸತೊಡಗಿದಳು. ಅವಳಿಗೆ ಆ ಗರ್ಭವನ್ನು ಧರಿಸಿರಲು ಸಾಧ್ಯವೇ ಆಗಲಿಲ್ಲ. ಹೀಗೆ ಅಗ್ನಿಯು ತೇಜೋಯುಕ್ತವಾದ ಗರ್ಭವನ್ನು ಗಂಗಾದೇವಿಯಲ್ಲಿ ಇರಿಸಿದಾಗ ಅಸುರನೊಬ್ಬನು ಗಂಗಾದೇವಿಯ ಬಳಿಗೆ ಬಂದು ಭಯಂಕರವಾಗಿ ಗರ್ಜಿಸಿದನು. ಆಕಸ್ಮಿಕವಾದ ಆ ಮಹಾಗರ್ಜನೆಯನ್ನು ಕೇಳಿ ಗಂಗಾದೇವಿಯ ಕಣ್ಣಾಲಿಗಳು ತಿರುಗತೊಡಗಿದುವು ಮತ್ತು ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು. ಅವಳು ಸ್ವಲ್ಪ ಹೊತ್ತು ಎಚ್ಚರದಪ್ಪಿದಳು. ಅವಳಿಗೆ ಗರ್ಭವನ್ನು ಹೆಚ್ಚು ಹೊತ್ತು ಧರಿಸಿರಲು ಸಾಧ್ಯವಾಗಲಿಲ್ಲ. ತನ್ನ ಉದ್ವಿಗ್ನತೆಯನ್ನು ಹೋಗಲಾಡಿಸಿಕೊಳ್ಳುವುದಕ್ಕೂ ಸಾಧ್ಯವಾಗಲಿಲ್ಲ. ಆ

ಸಮಯದಲ್ಲಿ ಜಾಹ್ನವಿಯು ಅಗ್ನಿಯ ತೇಜಸ್ಸಿನಿಂದ ವ್ಯಾಪ್ತವಾದ ಶರೀರವುಳ್ಳವಳಾಗಿದ್ದಳು. ಅಸುರನ ಗರ್ಜನೆಯಿಂದಾಗಿ ನಡುಗುತ್ತಿದ್ದಳು. ಗರ್ಭದ ಬಲದಿಂದ ಬಹಳವಾಗಿ ಸೋತಿದ್ದ ಗಂಗೆಯು ಅಗ್ನಿಯೊಡನೆ ಹೇಳಿದಳು:

"ಪೂಜ್ಯನೇ! ನಾನು ನಿನ್ನ ಈ ತೇಜಸ್ಸನ್ನು ಧಾರಣೆಮಾಡಲು ಅಸಮರ್ಥಳಾಗಿದ್ದೇನೆ. ಅನಘನೇ! ನಿನ್ನ ಸಂಬಂಧವಾದ ಈ ಗರ್ಭವನ್ನು ಧರಿಸಿರುವುದರಿಂದ ನಾನು ವಿಮೂಢಳಾಗಿದ್ದೇನೆ. ಹಿಂದಿನಂತೆ ಈಗ ನಾನು ಸ್ವಾಸ್ಥ್ಯದಿಂದಿಲ್ಲ. ಪೂಜ್ಯನೇ! ನಾನು ಬಹಳ ದುಃಖಿತಳಾಗಿದ್ದೇನೆ. ಇದರಿಂದಾಗಿ ನನ್ನ ಬುದ್ಧಿಯೇ ಕೆಟ್ಟುಹೋಗಿದೆ. ನಿನ್ನ ತೇಜೋರೂಪವಾದ ಗರ್ಭವನ್ನು ಧರಿಸಲು ನಾನು ಸಮರ್ಥಳಲ್ಲ. ಬಹಳ ದುಃಖದಿಂದ ನಾನು ಈ ಗರ್ಭವನ್ನು ವಿಸರ್ಜಿಸುತ್ತೇನೆ. ಸ್ವೇಚ್ಛೆಯಿಂದಲ್ಲ. ಮಹಾದ್ಯುತಿಮಂತನಾದ ವಿಭಾವಸುವೇ! ಈ ತೇಜಸ್ಸಿನೊಡನೆ ನನಗೆ ಯಾವ ಸಂಪರ್ಕವೂ ಇಲ್ಲ. ಅತ್ಯಂತಸೂಕ್ಷ್ಮವಾದ ಈ ಸಂಬಂಧವೂ ದೇವತೆಗಳಿಗೆ ಪ್ರಾಪ್ತವಾಗಿರುವ ವಿಪತ್ತಿನ ಕಾರಣದಿಂದಾಗಿ ಉಂಟಾಗಿದೆ. ಹುತಾಶನನೇ! ತೇಜಸ್ಸಿನ ತ್ಯಾಗವು ಗುಣಯುಕ್ತವಾಗಿರಲಿ; ದೋಷಯುಕ್ತವಾಗಿರಲಿ; ಧರ್ಮವಾಗಿರಲಿ; ಅಧರ್ಮವಾಗಿರಲಿ–ಎಲ್ಲವೂ ನಿನಗೇ ಸೇರಿದ್ದಾಗಿದೆ. ಇದರಲ್ಲಿ ನನಗೆ ಯಾವ ಸಂಬಂಧವೂ ಇಲ್ಲ."

ಗಂಗಾದೇವಿಯ ಆ ಮಾತನ್ನು ಕೇಳಿ ಅಗ್ನಿದೇವನು ಹೇಳಿದನು:

"ದೇವಿ! ಈ ಗರ್ಭವು ನನ್ನ ತೇಜಸ್ಸಿನಿಂದ ಯುಕ್ತವಾಗಿದೆ. ಇದರಿಂದ ಮಹಾಗುಣಯುಕ್ತವಾದ ಫಲವು ಪ್ರಾಪ್ತವಾಗುತ್ತದೆ. ಆದುದರಿಂದ ನೀನು ಈ ಗರ್ಭವನ್ನು ಧರಿಸಿಕೊಂಡಿರು. ವಿಸರ್ಜಿಸಬೇಡ. ಸಮಗ್ರವಾದ ಭೂಮಂಡಲವನ್ನೇ ಧರಿಸಲು ನೀನು ಸಮರ್ಥಳಾಗಿರುವೆ. ನನ್ನ ರೇತಸ್ಸನ್ನು ಧಾರಣೆಮಾಡುವುದರಿಂದ ನಿನಗೆ ಈ ಪ್ರಪಂಚದಲ್ಲಿ ಲಭಿಸದೇ ಇರತಕ್ಕುದು ಯಾವುದೂ ಇರುವುದಿಲ್ಲ."

ಭಾರ್ಗವ! ಹೀಗೆ ಅಗ್ನಿಯು ಗರ್ಭವನ್ನು ವಿಸರ್ಜಿಸದಂತೆ ಗಂಗೆಯನ್ನು ತಡೆದನು. ದೇವತೆಗಳೂ ತಡೆದರು. ಆದರೂ ಕೂಡ ಗಂಗಾ

ದೇವಿಯು ಅಗ್ನಿಯ ತೇಜಸ್ಸಿನ ತಾಪವನ್ನು ತಾಳಲಾರದೇ ಮೇರುಪರ್ವತದ ಶಿಖರದಲ್ಲಿ ಅದನ್ನು ವಿಸರ್ಜಿಸಿಬಿಟ್ಟಳು.

ಗಂಗಾದೇವಿಯು ಆ ಗರ್ಭವನ್ನು ಧರಿಸುವುದರಲ್ಲಿ ಸಮರ್ಥಳಾಗಿದ್ದರೂ ರುದ್ರನ ತೇಜಸ್ಸಿನಿಂದ ತೊಂದರೆಗೊಳಿಸಲ್ಪಟ್ಟ ಅವಳು ಆ ಗರ್ಭವನ್ನು ತನ್ನ ತೇಜಸ್ಸಿನಿಂದ ಧರಿಸಿಕೊಳ್ಳಲು ಅಸಮರ್ಥಳಾದಳು. ಪ್ರದೀಪ್ತವಾದ ಅಗ್ನಿಯ ಪ್ರಭೆಯನ್ನು ಹೊಂದಿದ್ದ ಆ ಗರ್ಭವನ್ನು ಗಂಗಾದೇವಿಯು ಬಹಳ ದುಃಖದಿಂದ ಪರಿತ್ಯಾಗಮಾಡಿದಳು. ಬಳಿಕ ಅಗ್ನಿಯು ಗಂಗಾದೇವಿಗೆ ದರ್ಶನವನ್ನಿತ್ತು ನದಿಗಳಲ್ಲಿ ಶ್ರೇಷ್ಠಳಾದ ಗಂಗೆಯನ್ನು ಪ್ರಶ್ನಿಸಿದನು:

"ದೇವಿ! ನಿನ್ನಲ್ಲಿದ್ದ ಗರ್ಭವು ನಿನಗೆ ಸುಖದಾಯಕವಾಗಿದ್ದಿತೇ? ಅದು ಯಾವ ಬಣ್ಣದ್ದಾಗಿದ್ದಿತು? ಯಾವ ರೂಪದಿಂದ ಅದು ಕಾಣಿಸಿಕೊಂಡಿತು? ಎಂತಹ ತೇಜಸ್ಸಿನಿಂದ ಯುಕ್ತವಾಗಿದ್ದಿತು? ಈ ಎಲ್ಲ ವಿಷಯಗಳನ್ನೂ ಹೇಳು."

"ಅಗ್ನಿದೇವ! ನನ್ನಿಂದ ವಿಸೃಷ್ಟವಾದ ಆ ಗರ್ಭವು ಸುವರ್ಣ ಮಯವಾಗಿದ್ದಿತು. ನಿನ್ನಂತೆಯೇ ತೇಜೋವಿಶಿಷ್ಟವಾಗಿದ್ದಿತು. ಸುವರ್ಣದಂತೆ ನಿರ್ಮಲವಾಗಿಯೂ ಕಾಂತಿಯುಕ್ತವಾಗಿಯೂ ಇದ್ದಿತು. ಅದು ತನ್ನ ಕಾಂತಿ ಯಿಂದ ಪರ್ವತವನ್ನೇ ಬೆಳಗಿತು. ತಾಪನಗೊಳಿಸುವವರಲ್ಲಿ ಶ್ರೇಷ್ಠನಾದ ಅಗ್ನಿದೇವನೇ! ಕಮಲಗಳಿಂದಲೂ ಕನ್ನೈದಿಲೆಗಳಿಂದಲೂ ಯುಕ್ತವಾದ ಸರೋವರವು ಶೀತಲವಾಗಿರುವಂತೆ–ಆ ಗರ್ಭವು ಅತ್ಯಂತಶೀತಲವಾಗಿ ದ್ದಿತು. ಅದರ ವಾಸನೆಯು ಕದಂಬಪುಷ್ಪಗಳ ವಾಸನೆಯಂತೆಯೇ ಇದ್ದಿತು. ಸೂರ್ಯನ ರಶ್ಮಿಗಳಂತೆಯೇ ಆ ಗರ್ಭದ ತೇಜಸ್ಸು ಪೃಥಿವಿಯಲ್ಲಿರುವ ಅಥವಾ ಪರ್ವತಗಳಲ್ಲಿರುವ ಯಾವ ಯಾವ ವಸ್ತುಗಳ ಮೇಲೆ ಬಿದ್ದಿತೋ ಆ ವಸ್ತುಗಳೆಲ್ಲವೂ ಸುವರ್ಣದಂತೆಯೇ ಕಾಣುತ್ತಿದ್ದುವು. ಆ ಗರ್ಭವು ಅಥವಾ ಶಿಶುವು ತನ್ನ ತೇಜಸ್ಸಿನಿಂದ ಚರಾಚರಗಳಿಂದ ಕೂಡಿದ ಮೂರು ಲೋಕಗಳನ್ನೂ ಬೆಳಗುತ್ತಾ ಪರ್ವತಗಳ ಕಡೆಗೂ, ನದಿಗಳ ಕಡೆಗೂ, ಪರ್ವತಗಳಲ್ಲಿದ್ದ ಚಿಲುಮೆಗಳ ಕಡೆಗೂ ಧಾವಿಸಿತು. (ಅದರ ತೇಜಸ್ಸು

ಸರ್ವತ್ರ ವ್ಯಾಪಿಸಿತು). ಹವ್ಯವಾಹನನೇ! ನಿನ್ನ ಆ ಪುತ್ರನು ಅಂತಹ ಅನುಪಮವಾದ ತೇಜಸ್ಸಿನಿಂದ ಕೂಡಿದ್ದನು. ತೇಜಸ್ಸಿನಲ್ಲಿ ಅವನು ಸೂರ್ಯಾಗ್ನಿಗಳಿಗೆ ಸಮಾನನಾಗಿದ್ದನು. ಕಾಂತಿಯಲ್ಲಿ ಮತ್ತೊಬ್ಬ ಚಂದ್ರ ನಂತೆಯೇ ಕಂಗೊಳಿಸುತ್ತಿದ್ದನು."

ವಸಿಷ್ಠರು ಹೇಳುತ್ತಾರೆ:

"ಪರಶುರಾಮ! ಹೀಗೆ ಹೇಳಿ ಗಂಗೆಯು ಅಲ್ಲಿಯೇ ಕಣ್ಮರೆಯಾದಳು. ತೇಜಸ್ವಿಯಾದ ಅಗ್ನಿಯೂ ದೇವತೆಗಳು ಅಪೇಕ್ಷಿಸಿದ್ದ ಕಾರ್ಯವನ್ನು ಪೂರೈಸಿ ಇಷ್ಟವಾದ ಸ್ಥಳಕ್ಕೆ ಹೊರಟುಹೋದನು.

ಅಗ್ನಿಯು ಇಂತಹ ಕರ್ಮವನ್ನು ಮಾಡಿದುದರಿಂದ ಮತ್ತು ಶ್ರೇಷ್ಠವಾದ ಗುಣಗಳನ್ನು ಹೊಂದಿರುವುದರಿಂದ ದೇವತೆಗಳೂ ಮತ್ತು ಋಷಿಗಳೂ ಅವನನ್ನು ಹಿರಣ್ಯರೇತಸನೆಂದು ಕರೆದರು. ಅಗ್ನಿಜನಿತವಾದ ಹಿರಣ್ಯ (ವಸು) ವನ್ನು ಭೂದೇವಿಯು ಧಾರಣೆಮಾಡಿದುದರಿಂದ ಅವಳು ವಸುಮತೀ ಎಂದು ವಿಖ್ಯಾತಳಾದಳು.

ಪರಮಾದ್ಭುತವಾಗಿದ್ದ, ಮಹಾತೇಜಸ್ಸಿನಿಂದ ಕೂಡಿದ್ದ, ಅಗ್ನಿಯ ಅಂಶದಿಂದ ಗಂಗೆಯಲ್ಲಿ ಹುಟ್ಟಿದ ಆ ಗರ್ಭವು ದಿವ್ಯವಾದ ನೊಜೆಹುಲ್ಲಿನ ಗುತ್ತಿಯಲ್ಲಿ ಸೇರಿಕೊಂಡು ವೃದ್ಧಿಯನ್ನು ಹೊಂದಿತು. ಬಾಲಸೂರ್ಯನ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಕೂಡಿದ್ದ ಆ ಬಾಲಕನನ್ನು ಕೃತ್ತಿಕಾಧಿ ದೇವತೆಗಳು ನೋಡಿದರು. ಅವರು ಆ ಮಗುವನ್ನು ತಮ್ಮ ಪುತ್ರನೆಂದೇ ಭಾವಿಸಿ ಮೊಲೆಹಾಲುಣಿಸಿ ಸಾಕತೊಡಗಿದರು.

ತತಃ ಸ ಕಾರ್ತಿಕೇಯತ್ವಮವಾಪ ಪರಮದ್ಯುತಿಃ ।
ಸ್ಕನ್ನತ್ವಾತ್ಸ್ಕನ್ದತಾಂ ಚಾಪಿ ಗುಹಾವಾಸಾದ್ಗುಹೋಽಭವತ್ ॥೮೨॥

ಕೃತ್ತಿಕಾನಕ್ಷತ್ರಾಧಿದೇವತೆಗಳು ಸಾಕಿದ ಕಾರಣ ಮಹಾದ್ಯುತಿಮಂತನಾದ ಆ ಬಾಲಕನು ಕಾರ್ತಿಕೇಯನೆಂಬ ಹೆಸರನ್ನು ಪಡೆದನು. ಸ್ಕನ್ನವಾದ ಗರ್ಭದಿಂದ ಹುಟ್ಟಿದುದರಿಂದ ಸ್ಕಂದನಾದನು. ಪರ್ವತದ ಗುಹೆಯಲ್ಲಿದ್ದ ನೊಜೆಹುಲ್ಲಿನ ಮಧ್ಯದಲ್ಲಿ ವಾಸಮಾಡುತ್ತಿದ್ದುದರಿಂದ ಗುಹನೂ ಆದನು.

ಭಾರ್ಗವ! ಹೀಗೆ ಅಗ್ನಿಯ ಸಂತಾನರೂಪವಾಗಿ ಸುವರ್ಣವು ಹುಟ್ಟಿತು. ಚಿನ್ನದಲ್ಲಿ ಜಂಬೂನದಿಯಲ್ಲಿ ಹುಟ್ಟಿದ ಜಾಂಬೂನದವೆಂಬ

ಚಿನ್ನವು ಬಹಳ ಶ್ರೇಷ್ಠವಾದುದು. ಅದು ದೇವತೆಗಳಿಗೆ ಭೂಷಣ ವಸ್ತುವೂ ಆಗಿದೆ. ಅಲ್ಲಿಂದ ಮುಂದಕ್ಕೆ ಸುವರ್ಣಕ್ಕೆ ಜಾತರೂಪವೆಂದೂ ಹೆಸರಾಯಿತು. ಜಾತರೂಪವು ರತ್ನಗಳೆಲ್ಲಕ್ಕೂ ಉತ್ತಮವಾದ ರತ್ನವಾಗಿದೆ. ಎಲ್ಲ ಭೂಷಣಗಳಿಗೂ ಶ್ರೇಷ್ಠವಾದ ಭೂಷಣವೂ (ಒಡವೆಯೂ) ಆಗಿದೆ.

ಪವಿತ್ರಂ ಚ ಪವಿತ್ರಾಣಾಂ ಮಙ್ಗಲಾನಾಂ ಚ ಮಙ್ಗಲಮ್ ।
ಯತ್ಸುವರ್ಣಂ ಸ ಭಗವಾನಗ್ನಿರೀಶಃ ಪ್ರಜಾಪತಿಃ ॥೮೫॥

ಸುವರ್ಣವು ಎಲ್ಲ ಪವಿತ್ರವಸ್ತುಗಳಿಗಿಂತಲೂ ಪವಿತ್ರವಾದುದು. ಎಲ್ಲ ಮಂಗಳವಸ್ತುಗಳಿಗಿಂತಲೂ ಮಂಗಳದಾಯಕವಾದುದು. ಸುವರ್ಣವೇ ಅಗ್ನಿಯ, ಈಶ್ವರನ ಮತ್ತು ಪ್ರಜಾಪತಿಯ ಸ್ವರೂಪವೂ ಆಗಿದೆ.

ಕನಕವು ಎಲ್ಲ ಪವಿತ್ರವಸ್ತುಗಳಿಗೂ ಪವಿತ್ರತಮವಾದುದು. ಜಾತ ರೂಪವು ಅಗ್ನೀಷೋಮಾತ್ಮಕವೆಂದೂ ಹೇಳುತ್ತಾರೆ.

ಭಾರ್ಗವ! ಮುಂದೆ ನಿನಗೆ ಪರಮಾತ್ಮನಾದ ಪಿತಾಮಹಬ್ರಹ್ಮನಿಗೆ ಪರಬ್ರಹ್ಮದರ್ಶನವಾದ ಪೂರ್ವೇತಿಹಾಸವನ್ನು ಹೇಳುತ್ತೇನೆ:

ಹಿಂದೊಮ್ಮೆ ಸರ್ವೇಶ್ವರನಾದ, ಮಹಾತ್ಮನಾದ, ಪೂಜ್ಯನಾದ ರುದ್ರನು ವರುಣನ ರೂಪವನ್ನು ಧರಿಸಿ ವರುಣನ ಸಾಮ್ರಾಜ್ಯದಲ್ಲಿ ಅಧಿಪತಿ ಯಾಗಿದ್ದನು. ಆ ಸಮಯದಲ್ಲಿ ಅವನ ಬಳಿಗೆ ಅಗ್ನಿಮುಖರಾದ ದೇವತೆ ಗಳೂ, ಮುನಿಗಳೂ ಆಗಮಿಸಿದರು. ಯಜ್ಞಾಂಗಗಳೂ, ವಷಟ್ಕಾರವೂ, ಸಾಮಗಳೂ, ಸಾವಿರಾರು ಯಜುಸ್ಸುಗಳೂ, ಪದ-ಕ್ರಮಗಳಿಂದ ಸಮಲಂಕೃತ ವಾದ ಋಗ್ವೇದವೂ ರುದ್ರನ ಸಮೀಪಕ್ಕೆ ಮೂರ್ತಿಮತ್ತಾಗಿ ಬಂದುವು.

ವೇದಗಳ ಲಕ್ಷಣಗಳೂ, ಉದಾತ್ತಾದಿಸ್ವರಗಳೂ, ಸ್ತೋಭಗಳೂ, ನಿರುಕ್ತಗಳೂ, ಸುರಪಂಕ್ತಿಗಳೂ, ಓಂಕಾರಗಳೂ, ಯಜ್ಞದ ಕಣ್ಣುಗಳಂತಿರುವ ನಿಗ್ರಹ-ಪ್ರಗ್ರಹಗಳೂ ಮೂರ್ತಿಮತ್ತಾಗಿ ಶಿವನ ಬಳಿಗೆ ಬಂದುವು. ವೇದಗಳೂ, ಉಪನಿಷತ್ತುಗಳೂ, ಎಲ್ಲ ವಿದ್ಯೆಗಳೂ ಮೂರ್ತಿಮತ್ತಾಗಿ

ಅಲ್ಲಿಗೆ ಬಂದುವು. ವೇದಮಾತೆಯಾದ ಸಾವಿತ್ರಿಯೂ ಅಲ್ಲಿಗೆ ಆಗಮಿಸಿದಳು. ಆ ಸಮಯದಲ್ಲಿ ಶಿವನು ಭೂತ-ವರ್ತಮಾನ ಮತ್ತು ಭವಿಷ್ಯಗಳೆಂಬ ಮೂರು ಕಾಲಗಳನ್ನೂ ಧರಿಸಿದ್ದನು.

ಆಗ ಪಿನಾಕಪಾಣಿಯಾದ ಶಿವನು ಒಂದು ಯಜ್ಞವನ್ನು ಮಾಡಲು ಉಪಕ್ರಮಿಸಿದನು. ಅದರಲ್ಲಿ ಅವನು ತನ್ನನ್ನೇ ತನಗೆ ಆಹುತಿಯನ್ನಾಗಿ ಕೊಟ್ಟುಕೊಂಡನು. ಹೀಗೆ ಮಾಡಿ ಅವನು ಬಹುರೂಪವಾದ ಆ ಯಜ್ಞವನ್ನು ಶೋಭಾಯಮಾನಗೊಳಿಸಿದನು.

ಸ್ವರ್ಗ, ಆಕಾಶ, ಪೃಥಿವೀ, ಶೂನ್ಯಪ್ರದೇಶ, ಭೂಪತಿ, ಸರ್ವ ವಿದ್ಯೇಶ್ವರ, ಅಗ್ನಿ–ಈ ಎಲ್ಲದರ ಸ್ವರೂಪನೂ ಶಿವನೇ ಆಗಿದ್ದಾನೆ.

ಮಹಾದೇವನೇ ಬ್ರಹ್ಮನೂ, ಶಿವನೂ, ರುದ್ರನೂ, ವರುಣನೂ, ಅಗ್ನಿಯೂ, ಪ್ರಜಾಪತಿಯೂ ಆಗಿದ್ದಾನೆ. ಪೂಜ್ಯನಾದ ರುದ್ರದೇವನನ್ನು ಸರ್ವಭೂತಪತಿಯೆಂದೂ ಶಿವನೆಂದೂ (ಮಂಗಳಕರನೆಂದೂ) ಭಕ್ತರು ಕೀರ್ತನೆಮಾಡುತ್ತಾರೆ.

ಭಾರ್ಗವ! ನಾನು ಹಿಂದೆ ಹೇಳಿದಂತೆ ರುದ್ರನ ಆತ್ಮಯಜ್ಞವು ನಡೆಯುತ್ತಿರಲಾಗಿ ಅದರಲ್ಲಿ ಭಾಗವಹಿಸಲು ತಪಸ್ಸುಗಳೂ, ಕ್ರತುಗಳೂ ಮೂರ್ತಿಮತ್ತಾಗಿ ಬಂದುವು. ದೀಪ್ತವ್ರತಳಾದ ದೀಕ್ಷಾದೇವಿಯು ಬಂದಳು. ದಿಕ್ಪಾಲಕರ ಸಹಿತವಾಗಿ ದಿಕ್ಕುಗಳೂ ಆಗಮಿಸಿದುವು. ದೇವಪತ್ನಿಯರೂ, ದೇವಕನ್ಯೆಯರೂ, ದೇವಮಾತೆಯರೂ ಆಗಮಿಸಿದರು. ಮಹಾತ್ಮನಾದ ವರುಣರೂಪಿಯಾದ ಪಶುಪತಿಯ ಯಜ್ಞಕ್ಕೆ ಆಗಮಿಸಿದ್ದ ದೇವಾಂಗನೆಯರೆಲ್ಲರೂ ಸುಪ್ರೀತರಾದರು. ಆ ಸಮಯದಲ್ಲಿ ಪರಮಸುಂದರಿಯರಾಗಿದ್ದ ಮತ್ತು ಪರಮಹೃಷ್ಟರಾಗಿದ್ದ ದೇವಾಂಗನೆಯರನ್ನು ನೋಡಿದ ಬ್ರಹ್ಮನ ರೇತಸ್ಸು ಸ್ಖಲಿತವಾಗಿ ನೆಲದ ಮೇಲೆ ಬಿದ್ದಿತು. ಸಮೀಪದಲ್ಲಿಯೇ ಇದ್ದ ಪೂಷನು ಅದನ್ನು ನೋಡಿ, ನೆಲದ ಧೂಳಿನೊಡನೆ ಸಂಸಿಕ್ತವಾಗಿದ್ದ ಬ್ರಹ್ಮನ ಆ ರೇತಸ್ಸನ್ನು ತನ್ನೆರಡು ಕೈಗಳಿಂದಲೂ ಸಂಗ್ರಹಿಸಿ ಪರಶಿವನ ಯಜ್ಞಾಗ್ನಿಯಲ್ಲಿ ಹಾಕಿಬಿಟ್ಟನು. ಪ್ರಜ್ವಲಿಸುತ್ತಿದ್ದ ಅಗ್ನಿಯಲ್ಲಿ ಯಜ್ಞಾಂಗವಾದ ಆಹುತಿಗಳು ಬೀಳುತ್ತಿರಲಾಗಿ ಬ್ರಹ್ಮನ ವೀರ್ಯವು ಪುನಃ ಸ್ಖಲಿತವಾಯಿತು. ಸ್ಖಲಿತವಾದೊಡನೆಯೇ ಬ್ರಹ್ಮನು ಆ ವೀರ್ಯವನ್ನು ಸ್ರುವದಲ್ಲಿ ತೆಗೆದುಕೊಂಡು

ಆಜ್ಯವನ್ನು ಹೋಮಮಾಡುವಂತೆಯೇ ಮಂತ್ರಪೂರ್ವಕವಾಗಿ ಅಗ್ನಿಯಲ್ಲಿ ಹೋಮಮಾಡಿದನು. ಶಕ್ತಿಶಾಲಿಯಾದ ಬ್ರಹ್ಮನು ತ್ರಿಗುಣಾತ್ಮಕವಾದ ಆ ವೀರ್ಯದಿಂದ ನಾಲ್ಕು ವಿಧವಾದ ಪ್ರಾಣಿಸಮುದಾಯಕ್ಕೂ ಜನ್ಮವನ್ನಿತ್ತನು. (ವೀರ್ಯವನ್ನು ಯಜ್ಞಾಗ್ನಿಯಲ್ಲಿ ಹೋಮಮಾಡಿದುದರ ಪರಿಣಾಮವಾಗಿ ನಾಲ್ಕು ವಿಧವಾದ ಪ್ರಾಣಿಗಳೂ ಯಜ್ಞಾಗ್ನಿಯಿಂದ ಪ್ರಾದುರ್ಭವಿಸಿದುವು.) ಬ್ರಹ್ಮನ ವೀರ್ಯದ ರಜೋಗುಣದ ಅಂಶದಿಂದ ಲೋಕದಲ್ಲಿ ತೈಜಸಪ್ರಧಾನ ವಾದ ಜಂಗಮಪ್ರಾಣಿಗಳು ಹುಟ್ಟಿದುವು. ತಮಸ್ಸಿನ ಅಂಶದಿಂದ ವೃಕ್ಷವೇ ಮೊದಲಾದ ಸ್ಥಾವರಪ್ರಾಣಿಗಳು ಹುಟ್ಟಿದುವು. ಬ್ರಹ್ಮನ ವೀರ್ಯದ ಸಾತ್ತ್ವಿಕಾಂಶವು ರಜೋಗುಣ-ತಮೋಗುಣಗಳಲ್ಲಿ ಬೆರೆತುಹೋಯಿತು. ಆ ಸತ್ತ್ವಗುಣವು ಪ್ರಕಾಶಸ್ವರೂಪವಾದ ಬುದ್ಧಿಯ ಸ್ವರೂಪವೇ ಆಗಿದೆ. ಆಕಾಶವೇ ಮೊದಲಾದ ಸಂಪೂರ್ಣವಿಶ್ವವೂ ಬುದ್ಧಿಯ ಕಾರ್ಯಗಳೇ ಆದುದರಿಂದ ಅದರ ಸ್ವರೂಪಗಳೇ ಆಗಿವೆ. ಎಲ್ಲ ಪ್ರಾಣಿಗಳಲ್ಲಿಯೂ ಯಾವ ಸತ್ವಗುಣ-ತೇಜಸ್ಸುಗಳಿವೆಯೋ-ಅವು ಬ್ರಹ್ಮನ ವೀರ್ಯದಿಂದಲೇ ಪ್ರಕಟವಾದುವುಗಳು. ಯಜ್ಞಾಗ್ನಿಯಲ್ಲಿ ಬ್ರಹ್ಮನು ರೇತಸ್ಸನ್ನು ಮಂತ್ರಪೂರ್ವಕ ವಾಗಿ ಹೋಮಮಾಡಿದೊಡನೆಯೇ ತಮ್ಮ ತಮ್ಮ ಹುಟ್ಟುಗುಣಗಳಿಂದ ಕೂಡಿದ ಮೂವರು ಪುರುಷರು ಅವಿರ್ಭವಿಸಿದರು.

ಭೃಗಿತ್ಯೇವ ಭೃಗುಃ ಪೂರ್ವಮಙ್ಗಾರೇಭ್ಯೋಽಙ್ಗಿರಾಭವತ್ ।
ಅಙ್ಗಾರಸಂಶ್ರಯಾಚ್ಚೈವ ಕವಿರಿತ್ಯಪರೋಽಭವತ್ ।
ಸಹ ಜ್ವಾಲಾಭಿರುತ್ಪನ್ನೋ ಭೃಗುಸ್ತಸ್ಮಾದ್ಭೃಗುಃ ಸ್ಮೃತಃ ॥೧೦೬॥

ವೀರ್ಯವು ಭೃಗ್ ಎಂದು ಹೊತ್ತಿಕೊಂಡೊಡನೆಯೇ ಭೃಗು ಎಂಬ ಪುರುಷನು ಹುಟ್ಟಿದನು. ಅಂಗಾರದಿಂದ (ಕೆಂಡದಿಂದ) ಅಂಗಿರಸನು ಹುಟ್ಟಿ ದನು. ಅಂಗಾರವನ್ನಾಶ್ರಯಿಸಿದ್ದ ಜ್ವಾಲೆಯಿಂದ 'ಕವಿ'–ಎಂಬ ಮೂರನೆಯ ಪುರುಷನು ಹುಟ್ಟಿದನು. ಭಗ್ಗನೆ ಹೊತ್ತಿಕೊಂಡ ಜ್ವಾಲೆಯೊಡನೆ ಪ್ರಕಟ ವಾದುದರಿಂದ ಮೊದಲನೆಯವನನ್ನು 'ಭೃಗು-ಭೃಗು'–ಎಂದೇ ಕರೆದರು.

ಮರೀಚಿಭ್ಯೋ ಮರೀಚಿಸ್ತು ಮಾರೀಚಃ ಕಶ್ಯಪೋ ಹ್ಯಭೂತ್ ।
ಅಙ್ಗಾರೇಭ್ಯೋಽಙ್ಗಿರಾಸ್ತಾತ ವಾಲಖಿಲ್ಯಾಃ ಕುಶೋಚ್ಚಯಾತ್ ॥೧೦೭॥

ಹೋಮಾಗ್ನಿಯ ಕಿರಣಗಳಿಂದ ಮರೀಚಿಯು ಹುಟ್ಟಿದನು. ಮರೀಚಿಯ ಮಗನು ಮಾರೀಚನು. ಮುಂದೆ ಅವನೇ ಕಶ್ಯಪನೆಂಬ ಹೆಸರಿನಿಂದ ವಿಖ್ಯಾತನಾದನು. ಹಿಂದೆ ಹೇಳಿದಂತೆ ಅಂಗಾರದಿಂದ ಅಂಗಿರಸನು ಹುಟ್ಟಿದನು. ದರ್ಭೆಗಳ ಸಮೂಹದಿಂದ ವಾಲಖಿಲ್ಯರೆಂಬ ಋಷಿಗಳು ಹುಟ್ಟಿದರು.

ಅತ್ರೈವಾತ್ರೇತಿ ಚ ವಿಭೋ ಜಾತಮತ್ರಿಂ ವದನ್ತ್ಯಪಿ ।
ತಥಾ ಭಸ್ಮವ್ಯಪೋಹೇಭ್ಯೋ ಬ್ರಹ್ಮರ್ಷಿಗಣಸಮ್ಮತಾಃ ॥೧೦೮॥
ವೈಖಾನಸಾಃ ಸಮುತ್ಪನ್ನಾಸ್ತಪಃಶ್ರುತಗುಣೇಪ್ಸವಃ ।
ಅಶ್ರುತೋಽಸ್ಯ ಸಮುತ್ಪನ್ನಾವಶ್ವಿನೌ ರೂಪಸಮ್ಮತೌ ॥೧೦೯॥

ಇಲ್ಲಿಯೇ ಈ ದರ್ಭೆಗಳ ಸಮೂಹದಿಂದಲೇ ಮತ್ತೊಬ್ಬ ಬ್ರಹ್ಮರ್ಷಿಯು ಹುಟ್ಟಿದನು. ಹೀಗೆ 'ಅತ್ರ'-ಎಂದರೆ 'ಇಲ್ಲಿ'-ಹುಟ್ಟಿದ್ದರಿಂದ ಅವನನ್ನು ಅತ್ರಿ ಎಂದು ಕರೆದರು. ಬ್ರಹ್ಮರ್ಷಿಗಳ ಸಮೂಹದಿಂದ ಸಮ್ಮಾನಿತರಾದ, ತಪಸ್ಸು, ಗುಣ ಮತ್ತು ಶಾಸ್ತ್ರಜ್ಞಾನವನ್ನು ಪಡೆಯಲು ಆಸಕ್ತರಾಗಿದ್ದ ವೈಖಾನಸರು ಭಸ್ಮರಾಶಿಯಿಂದ ಹುಟ್ಟಿದರು. ರೂಪಸಂಪತ್ತಿಯಿಂದ ಕೂಡಿ ಸರ್ವತ್ರ ಸಮ್ಮಾನಿತರಾದ ಅಶ್ವಿನೀದೇವತೆಗಳು ಅಗ್ನಿದೇವನ ಕಣ್ಣೀರಿನಿಂದ ಹುಟ್ಟಿದರು.

ಶೇಷಾಃ ಪ್ರಜಾನಾಂ ಪತಯಃ ಸ್ರೋತೇಭ್ಯಸ್ತಸ್ಯ ಜಜ್ಞಿರೇ ।
ಋಷಯೋ ರೋಮಕೂಪೇಭ್ಯಃ ಸ್ವೇದಾಚ್ಛನ್ದೋ ಬಲಾನ್ಮನಃ ॥೧೧೦॥

ಅಗ್ನಿದೇವನ ಕಿವಿಯೇ ಮೊದಲಾದ ಇಂದ್ರಿಯಗಳಿಂದ ಉಳಿದ ಪ್ರಜಾಪತಿಗಳು ಹುಟ್ಟಿದರು. ಅಗ್ನಿದೇವನ ರೋಮಕೂಪಗಳಿಂದ ಋಷಿಗಳು ಹುಟ್ಟಿದರು. ಬೆವರಿನ ಹನಿಗಳಿಂದ ಛಂದಸ್ಸುಗಳು ಪ್ರಾದುರ್ಭವಿಸಿದುವು. ವೀರ್ಯದಿಂದ ಮನಸ್ಸು ಹುಟ್ಟಿತು.

ಏತಸ್ಮಾತ್ಕಾರಣಾದಾಹುರಗ್ನಿಃ ಸರ್ವಾಸ್ತು ದೇವತಾಃ ।
ಋಷಯಃ ಶ್ರುತಸಂಪನ್ನಾ ವೇದಪ್ರಾಮಾಣ್ಯದರ್ಶನಾತ್ ॥೧೧೧॥

ಈ ಕಾರಣದಿಂದಲೇ ಶಾಸ್ತ್ರಜ್ಞಾನಸಂಪನ್ನರಾದ ಮಹರ್ಷಿಗಳು ವೇದಪ್ರಾಮಾಣ್ಯವನ್ನೇ ದೃಷ್ಟಿಯಲ್ಲಿಟ್ಟುಕೊಂಡು ಅಗ್ನಿಯನ್ನು ಸರ್ವದೇವತಾ ಸ್ವರೂಪನೆಂದು ಹೇಳುತ್ತಾರೆ.

ಯಾನಿ ದಾರೂಣಿ ನಿರ್ಯಾಸಾಸ್ತೇ ಮಾಸಾಃ ಪಕ್ಷಸಂಜ್ಞಿತಾಃ ।
ಅಹೋರಾತ್ರಾ ಮುಹೂರ್ತಾಶ್ಚ ಪಿತ್ತಂ ಜ್ಯೋತಿಶ್ಚ ದಾರುಣಮ್ ॥

ಸಮಿತ್ತುಗಳನ್ನು ಅಗ್ನಿಯಲ್ಲಿ ಹಾಕಿದಾಗ ಅವುಗಳಿಂದ ಹೊರಡುತ್ತಿದ್ದ ರಸಗಳೇ ಮಾಸ-ಪಕ್ಷ-ಅಹೋರಾತ್ರ-ಮುಹೂರ್ತಗಳೆಂಬ ಸಂಜ್ಞೆಯನ್ನು ಪಡೆದುವು. ಅಗ್ನಿಯಲ್ಲಿದ್ದ ಪಿತ್ತರಸವು ಉಗ್ರವಾದ ತೇಜಸ್ಸಿನ ರೂಪದಲ್ಲಿ ಪ್ರಕಟವಾಯಿತು.

ರೌದ್ರಂ ಲೋಹಿತಮಿತ್ಯಾಹುರ್ಲೋಹಿತಾತ್ಕನಕಂ ಸ್ಮೃತಮ್ ।
ತನ್ಮೈತ್ರಮಿತಿ ವಿಜ್ಞೇಯಂ ಧೂಮಾಚ್ಚ ವಸವಃ ಸ್ಮೃತಾಃ ॥೧೧೬॥

ಅಗ್ನಿಯ ಭಯಂಕರಜ್ವಾಲೆಯನ್ನು ಲೋಹಿತವೆಂದು ಕರೆಯುತ್ತಾರೆ. ಲೋಹಿತದಿಂದ ಕನಕವು ಹುಟ್ಟಿತು. ಕನಕವನ್ನೇ ಮೈತ್ರದೇವತೆಯೆಂದು ತಿಳಿಯಬೇಕು. ಅಗ್ನಿಯ ಹೊಗೆಯಿಂದ ವಸುಗಳು ಪ್ರಾದುರ್ಭವಿಸಿದರು.

ಅರ್ಚಿಷೋ ಯಾಶ್ಚ ತೇ ರುದ್ರಾಸ್ತಥಾದಿತ್ಯಾ ಮಹಾಪ್ರಭಾಃ ।
ಉದ್ದಿಷ್ಟಾಸ್ತೇ ತಥಾಙ್ಗಾರಾ ಯೇ ಧಿಷ್ಣ್ಯೇಷು ದಿವಿ ಸ್ಥಿತಾಃ ॥೧೧೭॥

ಅಗ್ನಿಯ ಮಹಾಜ್ವಾಲೆಗಳು ಏಕಾದಶರುದ್ರರ ಮತ್ತು ಮಹಾಪ್ರಭೆಯಿಂದ ಕೂಡಿರುವ ದ್ವಾದಶಾದಿತ್ಯರ ಸ್ವರೂಪಗಳೇ ಆಗಿವೆ. ಯಜ್ಞಕುಂಡದಲ್ಲಿದ್ದ ಇತರ ಬೆಂಕಿಯ ಕೆಂಡಗಳು ಆಕಾಶದಲ್ಲಿರುವ ನಕ್ಷತ್ರಮಂಡಲದಲ್ಲಿ ಜ್ಯೋತಿಃಪುಂಜರೂಪದಲ್ಲಿ ಪ್ರತಿಷ್ಠಿತವಾಗಿವೆ.

ಆದಿಕರ್ತಾ ಚ ಲೋಕಸ್ಯ ತತ್ಪರಂ ಬ್ರಹ್ಮ ತದ್ಧ್ರುವಮ್।
ಸರ್ವಕಾಮದಮಿತ್ಯಾಹುಸ್ತದ್ರಹಸ್ಯಮುವಾಚ ಹ ॥೧೧೮॥

ಅಗ್ನಿಯು ಪರಬ್ರಹ್ಮಸ್ವರೂಪನೆಂಬ, ಅವಿನಾಶಿಯೆಂಬ, ಶಾಶ್ವತನೆಂಬ ನಿಗೂಢವಿಷಯವನ್ನು ಈ ಲೋಕದ ಆದಿಕರ್ತೃವಾದ ಬ್ರಹ್ಮನೇ ಹೇಳಿರುವನು. ಅಗ್ನಿದೇವನು–ಪ್ರಾರ್ಥಿಸುವವರ ಸಕಲಕಾಮನೆಗಳನ್ನೂ ಪೂರೈಸಿಕೊಡತಕ್ಕವನೆಂದು ಮಹರ್ಷಿಗಳು ಹೇಳುತ್ತಾರೆ.

ಅನಂತರ ವಾಯ್ವಾತ್ಮಕನಾದ, ವರುಣರೂಪಿಯಾದ ಮಹಾದೇವನು ಇದು ತನ್ನ ಯಜ್ಞವೆಂದೂ, ತಾನಿಲ್ಲಿ ಗೃಹಪತಿ (ಯಜಮಾನ) ಯಾಗಿರುವೆನೆಂದೂ ದೇವತೆಗಳಿಗೆ ಹೇಳಿದನು.

ತ್ರೀಣಿ ಪೂರ್ವಾಣ್ಯಪತ್ಯಾನಿ ಮಮ ತಾನಿ ನ ಸಂಶಯಃ ।
ಇತಿ ಜಾನೀತ ಖಗಮಾ ಮಮ ಯಜ್ಞಫಲಂ ಹಿ ತತ್ ॥೧೧೭॥

"ಆಕಾಶಚಾರಿಗಳಾದ ದೇವತೆಗಳೇ! ಈ ಹಿಂದೆ ಹುಟ್ಟಿದ ಭೃಗು, ಅಂಗಿರಸ ಮತ್ತು ಕವಿಗಳು ನನ್ನ ಮಕ್ಕಳೇ ಆಗಿರುವರು. ಇದರಲ್ಲಿ ಯಾವ ಸಂಶಯವೂ ಇಲ್ಲ. ಈ ವಿಷಯವನ್ನು ನೀವು ಚೆನ್ನಾಗಿ ತಿಳಿಯಿರಿ. ಈ ಮೂವರೂ ನಾನು ಮಾಡಿದ ಯಜ್ಞದ ಫಲವಾಗಿಯೇ ಆವಿರ್ಭೂತ ರಾಗಿರುವರು."

ಅದಕ್ಕೆ ಪ್ರತಿಯಾಗಿ ಅಗ್ನಿಯು ಹೇಳಿದನು:

ಮದಙ್ಗೇಭ್ಯಃ ಪ್ರಸೂತಾನಿ ಮದಾಶ್ರಯಕೃತಾನಿ ಚ ।
ಮಮೈವ ತಾನ್ಯಪತ್ಯಾನಿ ವರುಣೋ ಹ್ಯವಶಾತ್ಮಕಃ ॥೧೧೮॥

"ಮಹಾದೇವನು ಹೇಳಿದುದು ಸರಿಯಲ್ಲ. ಈ ಮೂವರು ಮಕ್ಕಳೂ ನನ್ನ ಶರೀರದ ಅವಯವಗಳಿಂದಲೇ ಹುಟ್ಟಿದವರು. ಬ್ರಹ್ಮನು ನನ್ನನ್ನೇ ಆಶ್ರಯಿಸಿ ಈ ಮೂವರನ್ನೂ ಸೃಷ್ಟಿಸಿರುವನು. ಆದುದರಿಂದ ಇವರು ನನ್ನ ಮಕ್ಕಳೇ ಆಗಿದ್ದಾರೆ. ವರುಣರೂಪಿಯಾದ ಪರಮೇಶ್ವರನಿಗೆ ಇವರ ಮೇಲೆ ಯಾವ ಅಧಿಕಾರವೂ ಇಲ್ಲ."

ರುದ್ರಾಗ್ನಿಗಳ ಮಾತುಗಳನ್ನು ಅಲ್ಲಗಳೆಯುತ್ತಾ ಲೋಕಪಿತಾಮಹನಾದ ಲೋಕಗುರುವಾದ ಬ್ರಹ್ಮನು ಹೇಳಿದನು:

ಮಮೈವ ತಾನ್ಯಪತ್ಯಾನಿ ಮಮ ಶುಕ್ರಂ ಹುತಂ ಹಿ ತತ್ ।
ಅಹಂ ಕರ್ತಾ ಹಿ ಸತ್ರಸ್ಯ ಹೋತಾ ಶುಕ್ರಸ್ಯ ಚೈವ ಹ ।
ಯಸ್ಯ ಬೀಜಂ ಫಲಂ ತಸ್ಯ ಶುಕ್ರಂ ಚೇತ್ಕಾರಣಂ ಮತಮ್ ॥೧೨೦॥

"ನನ್ನ ವೀರ್ಯವನ್ನು ಆಹುತಿಯ ರೂಪದಲ್ಲಿ ಮಂತ್ರಪುರಸ್ಸರವಾಗಿ ಹೋಮಮಾಡಿದುದರಿಂದ ಈ ಮೂವರೂ ಹುಟ್ಟಿದ್ದಾರೆ. ಆದುದರಿಂದ ಈ ಮೂವರೂ ನನ್ನ ಮಕ್ಕಳೇ ಆಗಿದ್ದಾರೆ. ಯಜ್ಞದ ಕರ್ತೃವೂ ನಾನೇ. ಶುಕ್ರವನ್ನು ಅಗ್ನಿಯಲ್ಲಿ ಹೋಮಮಾಡಿದವನೂ ನಾನೇ. ಬೀಜವು ಯಾವನದೋ ಆ ಬೀಜದಲ್ಲಿ ಬಿಡುವ ಫಲವೂ ಅವನದೇ–ಎಂಬುದು ಲೋಕನ್ಯಾಯವಾಗಿದೆ.

ಆದುದರಿಂದ ಈ ಮೂವರೂ ಹುಟ್ಟಲು ನನ್ನ ವೀರ್ಯವೇ ಕಾರಣವಾಗಿದ್ದರೆ ಇವರೆಲ್ಲರೂ ನನ್ನ ಮಕ್ಕಳೇ ಎಂಬುದರಲ್ಲಿ ಸಂದೇಹವೇ ಇಲ್ಲ."

ರುದ್ರಾಗ್ನಿ-ಬ್ರಹ್ಮರು ಹೀಗೆ ಚರ್ಚೆಯಲ್ಲಿ ತೊಡಗಿದ್ದಾಗ, ದೇವತೆಗಳೆಲ್ಲರೂ ಪಿತಾಮಹನ ಬಳಿಗೆ ಹೋಗಿ ತಲೆಬಾಗಿ ನಮಸ್ಕರಿಸಿ ಬದ್ಧಾಂಜಲಿಗಳಾಗಿ ಹೇಳಿದರು:

ವಯಂ ಚ ಭಗವನ್ಸರ್ವೇ ಜಗಚ್ಚ ಸಚರಾಚರಮ್ ।
ತವೈವ ಪ್ರಸವಾಃ ಸರ್ವೇ ತಸ್ಮಾದಗ್ನಿರ್ವಿಭಾವಸುಃ ।
ವರುಣಶ್ಚೇಶ್ವರೋ ದೇವೋ ಲಭತಾಂ ಕಾಮಮೀಪ್ಸಿತಮ್ ॥೧೨೨॥

"ಪೂಜ್ಯನೇ! ಪಿತಾಮಹನೇ! ಚರಾಚರವಸ್ತುಗಳಿಂದ ಯುಕ್ತವಾದ ಜಗತ್ತೂ ಮತ್ತು ನಾವೆಲ್ಲರೂ ನಿನ್ನ ಸಂತಾನವೇ ಆಗಿರುವೆವು. ಆದುದರಿಂದ ಪ್ರಕಾಶಮಾನನಾದ ಈ ಅಗ್ನಿಯೂ-ವರುಣರೂಪಿಯಾದ ಮಹಾದೇವನೂ ತಮ್ಮ ಮನೋವಾಂಛಿತವನ್ನು ಪಡೆದುಕೊಳ್ಳಲಿ."

ದೇವತೆಗಳ ಆ ಪ್ರಾರ್ಥನೆಗೆ ಬ್ರಹ್ಮನು ಸಮ್ಮತಿಸಿದನು. ಬ್ರಹ್ಮನ ಆಜ್ಞೆಯಂತೆ ಜಲಜಂತುಗಳಿಗೆ ಸ್ವಾಮಿಯಾದ ವರುಣನ ರೂಪವನ್ನು ಧರಿಸಿದ್ದ ಮಹಾದೇವನು ಸೂರ್ಯಸಮಾನವರ್ಚಸ್ವಿಯಾಗಿದ್ದ, ಮೊದಲು ಹುಟ್ಟಿದ ಭೃಗುವನ್ನು ತನ್ನ ಪುತ್ರನನ್ನಾಗಿ ಪ್ರತಿಗ್ರಹಿಸಿದನು. ಅನಂತರ ಮಹಾದೇವನೇ ಅಂಗಿರಸನನ್ನು ಅಗ್ನಿಯ ಪುತ್ರನೆಂದು ನಿಶ್ಚಯಿಸಿದನು. ಬಳಿಕ ಮೂರನೆಯವನಾದ ಕವಿಯನ್ನು ತತ್ತ್ವವಿದನಾದ ಪಿತಾಮಹನು ತನ್ನ ಮಗನನ್ನಾಗಿ ಪ್ರತಿಗ್ರಹಿಸಿದನು.

ಉತ್ಪತ್ತಿಕಾರ್ಯವನ್ನು ಚೆನ್ನಾಗಿ ತಿಳಿದಿದ್ದ ಭೃಗುವು ವಾರುಣ-ಎಂಬ ಹೆಸರಿನಿಂದ ವಿಖ್ಯಾತನಾದನು. ತೇಜಸ್ವಿಯಾದ ಅಂಗಿರಸನು ಆಗ್ನೇಯ–ಎಂಬ ಹೆಸರಿನಿಂದಲೂ-ಶ್ರೀಮಂತನಾದ, ಯಶೋವಂತನಾದ ಕವಿಯು ಬ್ರಾಹ್ಮ-ಎಂಬ ಹೆಸರಿನಿಂದಲೂ ವಿಖ್ಯಾತರಾದರು. ಲೋಕದಲ್ಲಿ ಭೃಗ್ವಂಗಿರಸರಿಬ್ಬರೂ ಸೃಷ್ಟಿಯ ವಿಸ್ತಾರಕರೆಂದು ಪ್ರಸಿದ್ಧರಾಗಿರುವರು. ಹೀಗೆ ಭೃಗ್ವಂಗಿರಸ-

ಕವಿಗಳು ಪ್ರಜಾಪತಿಗಳಾದರು. ಉಳಿದೆಲ್ಲವೂ ಅವರ ಸಂತಾನಗಳೇ ಆಗಿವೆ. ಸಕಲಚರಾಚರಜಗತ್ತೂ ಅವರ ಸಂತಾನವೇ ಆಗಿರುವುದೆಂದು ತಿಳಿ.

ಭೃಗುವಿಗೆ ಅವನ ಸಮಾನಗುಣಗಳುಳ್ಳ ಏಳು ಮಂದಿ ಪುತ್ರರಾದರು.

ಚ್ಯವನೋ ವಜ್ರಶೀರ್ಷಶ್ಚ ಶುಚಿರೌರ್ವಸ್ತಥೈವ ಚ ।
ಶುಕ್ರೋ ವರೇಣ್ಯಶ್ಚ ವಿಭುಃ ಸವನಶ್ಚೇತಿ ಸಪ್ತ ತೇ ॥೧೨೮॥

ಚ್ಯವನ, ವಜ್ರಶೀರ್ಷ, ಶುಚಿ, ಔರ್ವ, ಶುಕ್ರ, ವರೇಣ್ಯ ಮತ್ತು ಸವನ–ಇವರು ಭೃಗುವಿನ ಮಕ್ಕಳು. ಅವರನ್ನು ಭಾರ್ಗವರೆಂದೂ ವಾರುಣರೆಂದೂ ಕರೆಯುತ್ತಾರೆ. ಪರಶುರಾಮ! ನೀನೂ ಅವರ ವಂಶಕ್ಕೇ ಸೇರಿದವನಾಗಿರುವೆ.

ಅಂಗಿರಸನಿಗೆ ಎಂಟು ಮಕ್ಕಳು ಹುಟ್ಟಿದರು. ಅವರನ್ನೂ ವಾರುಣರೆಂದೇ ಕರೆಯುವ ವಾಡಿಕೆಯಿದೆ.

ಬೃಹಸ್ಪತಿರುತಥ್ಯಶ್ಚ ಪಯಸ್ಯಃ ಶಾನ್ತಿರೇವ ಚ ।
ಘೋರೋ ವಿರೂಪಃ ಸಂವರ್ತಃ ಸುಧನ್ವಾ ಚಾಷ್ಟಮಃ ಸ್ಮೃತಃ॥

ಬೃಹಸ್ಪತಿ, ಉತಥ್ಯ, ಪಯಸ್ಯ, ಶಾಂತಿ, ಘೋರ, ವಿರೂಪ, ಸಂವರ್ತ ಮತ್ತು ಸುಧನ್ವಾ-ಇವರು ಅಂಗಿರಸನ ಮಕ್ಕಳು. ಜ್ಞಾನನಿಷ್ಠರಾದ ಮತ್ತು ರೋಗ-ಶೋಕರಹಿತರಾದ ಅವರೆಲ್ಲರೂ ಅಗ್ನಿವಂಶಜರು.

ಬ್ರಹ್ಮನ ಮಗನಾದ ಕವಿಯ ಮಕ್ಕಳಿಗೂ ವಾರುಣರೆಂಬ ಸಂಜ್ಞೆಯೇ ಇದೆ. ಕವಿಗೆ ಎಂಟು ಮಕ್ಕಳು. ಅವರೆಲ್ಲರೂ ಪುತ್ರೋಚಿತವಾದ ಗುಣಗಳಿಂದ ಸಂಪನ್ನರಾಗಿಯೂ, ಬ್ರಹ್ಮವಾದಿಗಳಾಗಿಯೂ, ಶುಭಗುಣಗಳಿಂದ ಯುಕ್ತ ರಾಗಿಯೂ ಇದ್ದರು.

ಕವಿಃ ಕಾವ್ಯಶ್ಚ ಧೃಷ್ಣುಶ್ಚ ಬುದ್ಧಿಮಾನುಶನಾ ತಥಾ ।
ಭೃಗುಶ್ಚ ವಿರಜಾಶ್ಚೈವ ಕಾಶೀ ಚೋಗ್ರಶ್ಚ ಧರ್ಮವಿತ್ ॥೧೩೩॥

ಕವಿ, ಕಾವ್ಯ, ಧೃಷ್ಣು, ಬುದ್ಧಿವಂತನಾದ ಉಶನಸ (ಶುಕ್ರಾಚಾರ್ಯ), ಭೃಗು, ವಿರಜಸ, ಕಾಶೀ, ಧರ್ಮಜ್ಞನಾದ ಉಗ್ರ–ಇವರೇ ಕವಿಯ ಆ ಎಂಟು

ಮಕ್ಕಳು. ಅವರಿಂದ ಈ ಜಗತ್ತು ವ್ಯಾಪ್ತವಾಗಿದೆ. ಅವರೆಲ್ಲರೂ ಪ್ರಜಾಪತಿಗಳು. ಪ್ರಜೆಗಳ ಗುಣಗಳಿಂದ ಯುಕ್ತರಾಗಿರುವುದರಿಂದ ಅವರನ್ನು ಪ್ರಜೆಗಳೆಂದೂ ಕರೆಯುತ್ತಾರೆ.

ಭಾರ್ಗವ! ಹೀಗೆ ಭೃಗು, ಅಂಗಿರಸ ಮತ್ತು ಕವಿಗಳ ಸಂತಾನ ಪರಂಪರೆಗಳಿಂದ ಈ ಜಗತ್ತು ವ್ಯಾಪ್ತವಾಗಿದೆ.

ವಿಪ್ರಶ್ರೇಷ್ಠನೇ! ಪರಶುರಾಮ! ಪ್ರಭಾವಶಾಲಿಯಾದ, ವರುಣ ರೂಪಿಯಾದ ರುದ್ರನು ಮೊದಲು ಕವಿಯನ್ನೂ ಭೃಗುವನ್ನೂ ಪುತ್ರರನ್ನಾಗಿ ಪರಿಗ್ರಹಿಸಿದನು. ಈ ಕಾರಣದಿಂದಲೇ ಭೃಗು-ಕವಿಗಳಿಗೆ ವಾರುಣರೆಂಬ ಹೆಸರು ಬಂದಿತು.

ಜ್ವಾಲೆಗಳಿಂದ ಸುಶೋಭಿಸುವ ಅಗ್ನಿದೇವನು ವರುಣರೂಪಿಯಾದ ಮಹಾದೇವನಿಂದ ಅಂಗಿರಸನನ್ನು ಪುತ್ರರೂಪದಿಂದ ಪಡೆದುಕೊಂಡನು. ಆದುದರಿಂದ ಅಂಗಿರಸವಂಶೀಯರೆಲ್ಲರಿಗೂ ಆಂಗಿರಸರೆಂದೂ ವಾರುಣರೆಂದೂ ಹೆಸರಾಯಿತು.

ಹಿಂದೆ ದೇವತೆಗಳು ಪ್ರಜಾಪತಿಬ್ರಹ್ಮನನ್ನು ಸ್ತೋತ್ರಾದಿಗಳಿಂದ ಪ್ರಸನ್ನಗೊಳಿಸಿ ಅವನಿಗೆ ಹೇಳಿದರು:

“ಪ್ರಭುವೇ! ನಿನ್ನ ಅನುಗ್ರಹದಿಂದ ಜಗದೀಶ್ವರರಾದ ಭೃಗ್ವಂಗಿರಸ-ಕವಿಗಳು ತಮ್ಮ ಸಂತಾನಪರಂಪರೆಗಳ ಮೂಲಕವಾಗಿ ನಮ್ಮನ್ನು ಸಂಕಟದಿಂದ ಉದ್ಧರಿಸುವರು. ಇವರೆಲ್ಲರೂ ಪ್ರಜಾಪತಿಗಳಾಗುವರು. ಎಲ್ಲರೂ ಮಹಾ ತಪಸ್ವಿಗಳಾಗುವರು. ನಿನ್ನ ಅನುಗ್ರಹದಿಂದ ಈ ಲೋಕವನ್ನೀಗ ಇವರು ಉದ್ಧರಿಸುವರು. ನಿನ್ನ ಅನುಗ್ರಹದಿಂದ ಇವರೆಲ್ಲರೂ ವಂಶಪ್ರವರ್ತಕ ರಾಗುವರು. ನಿನ್ನ ತೇಜಸ್ಸನ್ನು ವೃದ್ಧಿಹೊಂದಿಸುವರು. ಇವರೆಲ್ಲರೂ ವೇದ ವಿದ್ವಾಂಸರಾಗುವರು. ಪುಣ್ಯಾತ್ಮರಾಗುವರು. ಇವರೆಲ್ಲರ ಸ್ವಭಾವವೂ ಸೌಮ್ಯವಾದುದು. ಪ್ರಜಾಪತಿಯ ವಂಶದಲ್ಲಿ ಹುಟ್ಟಿರುವ ಈ ಮಹರ್ಷಿ ಗಳು ಯಾವಾಗಲೂ ದೇವತೆಗಳ ಪಕ್ಷದಲ್ಲಿರುತ್ತಾರೆ. ತಪಸ್ಸಿನಲ್ಲಿ ನಿರತರಾಗಿರುತ್ತಾರೆ. ಶ್ರೇಷ್ಠವಾದ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಾರೆ.

ಚರಾಚರಗಳಿಂದ ಯುಕ್ತವಾದ ಈ ಜಗತ್ತೂ ಮತ್ತು ನಾವೂ ಕೂಡ ನಿನ್ನ ಸಂತಾನಗಳೇ ಆಗಿದ್ದೇವೆ. ಹೇಗೆಂದರೆ: ದೇವತೆಗಳನ್ನೂ ಮತ್ತು ಬ್ರಾಹ್ಮಣರನ್ನೂ ಸೃಷ್ಟಿಸಿರುವವನು ನೀನೇ ಆಗಿರುವೆ.

ಪಿತಾಮಹನೇ! ಕಶ್ಯಪನನ್ನು ಮೊದಲ್ಗೊಂಡು ಭಾರ್ಗವರ ಪರ್ಯಂತವಾಗಿ ಎಲ್ಲರೂ ನಿನ್ನ ಮಕ್ಕಳೇ ಆಗಿರುವರೆಂದು ಭಾವಿಸಿ ನಮ್ಮ ಅಪರಾಧವನ್ನು ಕ್ಷಮಿಸುವುದು ನಿನಗೆ ಯೋಗ್ಯವಾಗಿದೆ. ಪ್ರಜಾಪತಿಗಣಗಳು ಇದೇ ರೂಪದಿಂದಲೇ ಮುಂದೆ ಪ್ರಜೆಗಳನ್ನು ಸೃಷ್ಟಿಸುತ್ತಾರೆ. ಸೃಷ್ಟಿಯ ಪ್ರಾರಂಭದಿಂದ ಪ್ರಲಯಪರ್ಯಂತವಾಗಿ ಅವರೆಲ್ಲರೂ ತಮ್ಮ-ತಮ್ಮ ಸ್ಥಾನಗಳಲ್ಲಿ ಪ್ರತಿಷ್ಠಿತರಾಗಿರುತ್ತಾರೆ."

ವಸಿಷ್ಠರು ಹೇಳುತ್ತಾರೆ:

ಭಾರ್ಗವ! ದೇವತೆಗಳ ಆ ಮಾತನ್ನು ಕೇಳಿ ಲೋಕಪಿತಾಮಹನಾದ ಬ್ರಹ್ಮನು ಹಾಗೆಯೇ ಆಗಲೆಂದನು. ಅದರಿಂದ ಪರಮಪ್ರೀತರಾದ ದೇವತೆಗಳು ತಮ್ಮ-ತಮ್ಮ ಸ್ಥಾನಗಳಿಗೆ ತೆರಳಿದರು.

ಹೀಗೆ ಹಿಂದೆ ಸೃಷ್ಟಿಯ ಪ್ರಾರಂಭಕಾಲದಲ್ಲಿ ವರುಣನ ರೂಪವನ್ನು ಧರಿಸಿದ್ದ ಮಹಾತ್ಮನಾದ, ದೇವಶ್ರೇಷ್ಠನಾದ ರುದ್ರನ ಯಜ್ಞದ ಸಮಯದಲ್ಲಿ ಈ ವೃತ್ತಾಂತವು ನಡೆಯಿತು.

ಅಗ್ನಿರ್ಬ್ರಹ್ಮಾ ಪಶುಪತಿಃ ಶರ್ವೋ ರುದ್ರಃ ಪ್ರಜಾಪತಿಃ ।
ಅಗ್ನೇರಪತ್ಯಮೇತದ್ವೈ ಸುವರ್ಣಮಿತಿ ಧಾರಣಾ ॥೧೪೭॥

ಅಗ್ನಿಯೇ ಬ್ರಹ್ಮನು, ಪಶುಪತಿಯು, ಶರ್ವನು, ರುದ್ರನು ಮತ್ತು ಪ್ರಜಾಪತಿಸ್ವರೂಪನು. ಸುವರ್ಣವೂ ಅಗ್ನಿಯ ಸಂತಾನವೇ ಆಗಿದೆ.

ಅಗ್ನ್ಯಭಾವೇ ಚ ಕುರುತೇ ವಹ್ನಿಸ್ಥಾನೇಷು ಕಾಞ್ಚನಮ್।
ಜಾಮದಗ್ನ್ಯ ಪ್ರಮಾಣಜ್ಞೋ ವೇದಶ್ರುತಿನಿದರ್ಶನಾತ್ ॥೧೪೮॥

ಜಮದಗ್ನಿಯ ಪುತ್ರನಾದ ಪರಶುರಾಮನೇ! ವೇದಪ್ರಮಾಣವನ್ನು ತಿಳಿದಿರುವ ಪುರುಷನು ವೈದಿಕಶ್ರುತಿಯ ದೃಷ್ಟಾಂತಾನುಸಾರವಾಗಿ ಅಗ್ನಿಯು ಇಲ್ಲದಿದ್ದಾಗ ಅಗ್ನಿಯ ಸ್ಥಾನದಲ್ಲಿ ಸುವರ್ಣವನ್ನೇ ಇಡುತ್ತಾನೆ.

ಕುಶಸ್ತಮ್ಬೇ ಜುಹೋತ್ಯಗ್ನಿಂ ಸುವರ್ಣೇ ತತ್ರ ಚ ಸ್ಥಿತೇ ।
ವಲ್ಮೀಕಸ್ಯ ವಪಾಯಾಂ ಚ ಕರ್ಣೇ ವಾಜಸ್ಯ ದಕ್ಷಿಣೇ ॥೧೪೯॥
ಶಕಟೋರ್ವ್ಯಾಂ ಪರಸ್ಯಾಪ್ಸು ಬ್ರಾಹ್ಮಣಸ್ಯ ಕರೇ ತಥಾ ।
ಹುತೇ ಪ್ರೀತಿಕರೀಮೃದ್ಧಿಂ ಭಗವಾಂಸ್ತತ್ರ ಮನ್ಯತೇ ॥೧೫೦॥

ದರ್ಭೆಯ ಪುಂಜದಲ್ಲಿ, ಪುಂಜದ ಮೇಲಿಟ್ಟಿರುವ ಸುವರ್ಣದಲ್ಲಿ, ಹುತ್ತದ ಪೊಟರೆಯಲ್ಲಿ, ಆಡಿನ ಬಲಗಿವಿಯಲ್ಲಿ, ಗಾಡಿಯು ತಿರುಗಾಡುವ ದಾರಿಯಲ್ಲಿ, ಬೇರೆಯವರ ಜಲಾಶಯಗಳಲ್ಲಿ (ಶ್ರೇಷ್ಠವಾದ ತೀರ್ಥಗಳಲ್ಲಿ) ಮತ್ತು ಬ್ರಾಹ್ಮಣನ ಕೈಯಲ್ಲಿ–ವೇದಪ್ರಾಮಾಣ್ಯವನ್ನು ತಿಳಿದಿರುವವರು ಹೋಮಮಾಡುತ್ತಾರೆ. ಇಂತಹ ಸ್ಥಳಗಳಲ್ಲಿ ಹೋಮಮಾಡಿದರೆ–ಪೂಜ್ಯನಾದ ಅಗ್ನಿದೇವನು ಪ್ರೀತಿಕರವಾದ ಆಹುತಿಸಮೃದ್ಧಿಯು ಲಭಿಸಿತೆಂದು ತಿಳಿಯುತ್ತಾನೆ.

ತಸ್ಮಾದಗ್ನಿಪರಾಃ ಸರ್ವೇ ದೇವತಾ ಇತಿ ಶುಶ್ರುಮ ।
ಬ್ರಹ್ಮಣೋ ಹಿ ಪ್ರಭೂತೋಽಗ್ನಿರಗ್ನೇರಪಿ ಚ ಕಾಞ್ಚನಮ್ ॥೧೫೧॥

ಆದುದರಿಂದ ದೇವತೆಗಳೆಲ್ಲರೂ ಅಗ್ನಿಯಿಂದ ಅನಂತರದವರೆಂದೂ ಅಗ್ನಿಯೇ ಮುಖ್ಯನಾದವನೆಂದೂ ನಾವು ಕೇಳಿದ್ದೇವೆ. ಬ್ರಹ್ಮನಿಂದ ಅಗ್ನಿಯು ಪ್ರಾದುರ್ಭವಿಸಿದನು. ಅಗ್ನಿಯಿಂದ ಸುವರ್ಣವು ಹುಟ್ಟಿತು.

ತಸ್ಮಾದ್ಯೇ ವೈ ಪ್ರಯಚ್ಛನ್ತಿ ಸುವರ್ಣಂ ಧರ್ಮದರ್ಶಿನಃ ।
ದೇವತಾಸ್ತೇ ಪ್ರಯಚ್ಛನ್ತಿ ಸಮಸ್ತಾ ಇತಿ ನಃ ಶ್ರುತಮ್ ॥೧೫೨॥

ಆದುದರಿಂದ ಧರ್ಮದರ್ಶಿಗಳಾದ ಯಾವ ಮನುಷ್ಯರು ಸುವರ್ಣವನ್ನು ದಾನಮಾಡುವರೋ-ಅವರು ಸಮಸ್ತದೇವತೆಗಳನ್ನೂ ದಾನಮಾಡಿದ ಫಲವನ್ನು ಪಡೆಯುವರೆಂದೂ ನಾವು ಕೇಳಿದ್ದೇವೆ.

ತಸ್ಯ ಚಾತಮಸಾ ಲೋಕಾ ಗಚ್ಛತಃ ಪರಮಾಂ ಗತಿಮ್ ।
ಸ್ವರ್ಲೋಕೇ ರಾಜರಾಜ್ಯೇನ ಸೋಽಭಿಷಿಚ್ಯೇತ ಭಾರ್ಗವ ॥೧೫೩॥

ಸುವರ್ಣದಾನಿಯ ಲೋಕಗಳು ಅಂಧಕಾರದಿಂದ ರಹಿತವಾಗಿ ಜ್ಯೋತಿರ್ಮಯವಾಗಿರುತ್ತವೆ. ಸ್ವರ್ಗಲೋಕದಲ್ಲಿ ಅವನನ್ನು ರಾಜರಾಜನಾದ ಕುಬೇರನ ಸ್ಥಾನದಲ್ಲಿ ಕುಳ್ಳಿರಿಸಿ ಅಭಿಷೇಚಿಸುತ್ತಾರೆ.

ಆದಿತ್ಯೋದಯಸಮ್ಪ್ರಾಪ್ತೇ ವಿಧಿಮನ್ತ್ರಪುರಸ್ಕೃತಮ್ ।
ದದಾತಿ ಕಾಞ್ಚನಂ ಯೋ ವೈ ದುಃಸ್ವಪ್ನಂ ಪ್ರತಿಹನ್ತಿ ಸಃ ॥೧೫೪॥

ಯಾವನು ಸೂರ್ಯೋದಯಕಾಲದಲ್ಲಿ ವಿಧಿಮಂತ್ರಪುರಸ್ಸರವಾಗಿ ಸುವರ್ಣವನ್ನು ದಾನಮಾಡುವನೋ–ಅವನು ಎಲ್ಲ ಪಾಪಗಳನ್ನೂ ಮತ್ತು ದುಃಸ್ವಪ್ನಗಳನ್ನೂ ವಿನಾಶಗೊಳಿಸಿಕೊಳ್ಳುತ್ತಾನೆ.

ದದಾತ್ಯುದಿತಮಾತ್ರೇ ಯಸ್ತಸ್ಯ ಪಾಪ್ಮಾ ವಿಧೂಯತೇ ।
ಮಧ್ಯಾಹ್ನೇ ದದತೋ ರುಕ್ಮಂ ಹನ್ತಿ ಪಾಪಮನಾಗತಮ್ ॥೧೫೫॥

ಸೂರ್ಯನು ಹುಟ್ಟಿದೊಡನೆಯೇ ಸುವರ್ಣದಾನಮಾಡುವವನ ಪಾಪಗಳೆಲ್ಲವೂ ಸಂಪೂರ್ಣವಾಗಿ ವಿನಾಶವಾಗುತ್ತವೆ. ಮಧ್ಯಾಹ್ನದಲ್ಲಿ ಸುವರ್ಣವನ್ನು ದಾನಮಾಡುವವನ ಮುಂದಾಗುವ ಪಾಪಗಳೂ ವಿನಾಶಹೊಂದುತ್ತವೆ.

ದದಾತಿ ಪಶ್ಚಿಮಾಂ ಸಂಧ್ಯಾಂ ಯಃ ಸುವರ್ಣಂ ಯತವ್ರತಃ ।
ಬ್ರಹ್ಮವಾಯ್ವಗ್ನಿಸೋಮಾನಾಂ ಸಾಲೋಕ್ಯಮುಪಯಾತಿ ಸಃ ॥೧೫೬॥

ವ್ರತಾನುಷ್ಠಾನಪರನಾಗಿದ್ದು ಸಾಯಂಕಾಲದಲ್ಲಿ ಸುವರ್ಣವನ್ನು ದಾನಮಾಡುವವನು ಬ್ರಹ್ಮಾ, ವಾಯು, ಅಗ್ನಿ ಮತ್ತು ಸೋಮರ ಲೋಕಗಳಿಗೆ ಸಮಾನವಾದ ಲೋಕವನ್ನು ಹೊಂದುತ್ತಾನೆ.

ಸೇನ್ದ್ರೇಷು ಚೈವ ಲೋಕೇಷು ಪ್ರತಿಷ್ಠಾಂ ವಿನ್ದತೇ ಶುಭಾಮ್ ।
ಇಹ ಲೋಕೇ ಯಶಃ ಪ್ರಾಪ್ಯ ಶಾನ್ತಪಾಪ್ಮಾ ಚ ಮೋದತೇ ॥೧೫೭॥

ಇಂದ್ರಲೋಕವೇ ಮೊದಲಾದ ಸಕಲಲೋಕಗಳಲ್ಲಿಯೂ ಸುವರ್ಣ ದಾನಿಯು ಶುಭಸಮ್ಮಾನವನ್ನು ಹೊಂದುತ್ತಾನೆ. ಈ ಲೋಕದಲ್ಲಿಯೂ ಪಾಪರಹಿತನಾಗಿ ಯಶೋವಂತನಾಗಿ ಆನಂದಪಡುತ್ತಾನೆ.

ತತಃ ಸಮ್ಪದ್ಯತೇಽನ್ಯೇಷು ಲೋಕೇಷ್ವಪ್ರತಿಮಃ ಸದಾ ।
ಅನಾವೃತಗತಿಶ್ಚೈವ ಕಾಮಚಾರೋ ಭವತ್ಯುತ ॥೧೫೮॥

ಸತ್ತನಂತರ ಹೊಂದುವ ಪುಣ್ಯಲೋಕಗಳಲ್ಲಿ ಸುವರ್ಣದಾನಿಯು ಅಪ್ರತಿಮಪುಣ್ಯಶಾಲಿಯೆಂಬ ಖ್ಯಾತಿಯನ್ನು ಪಡೆಯುತ್ತಾನೆ. ಅವನ

ಸಂಚಾರದಲ್ಲಿ ಯಾವ ಪ್ರತಿಬಂಧವೂ ಇರುವುದಿಲ್ಲ. ಇಚ್ಛಾನುಸಾರವಾಗಿ ಎಲ್ಲಿಗೆಂದರಲ್ಲಿಗೆ ಹೋಗುತ್ತಿರುತ್ತಾನೆ.

ನ ಚ ಕ್ಷರತಿ ತೇಭ್ಯಶ್ಚ ಯಶಶ್ಚೈವಾಪ್ನುತೇ ಮಹತ್ ।
ಸುವರ್ಣಮಕ್ಷಯಂ ದತ್ತ್ವಾ ಲೋಕಾಂಶ್ಚಾಪ್ನೋತಿ ಪುಷ್ಕಲಾನ್ ॥

ಅಕ್ಷಯಪುಣ್ಯಪ್ರದವಾದ ಸುವರ್ಣವನ್ನು ದಾನಮಾಡುವವನು ಪುಣ್ಯಲೋಕಗಳಿಂದ ಯಾವಾಗಲೂ ಜಾರುವುದೇ ಇಲ್ಲ. ಮಹಾಯಶಸ್ಸನ್ನು ಹೊಂದುತ್ತಾನೆ. ಹೇರಳವಾದ ಸುಖೋಪಭೋಗಗಳಿಂದ ಕೂಡಿರುವ ಪುಣ್ಯಲೋಕಗಳನ್ನು ಹೊಂದುತ್ತಾನೆ.

ಯಸ್ತು ಸಂಜನಯಿತ್ವಾಗ್ನಿಮಾದಿತ್ಯೋದಯನಂ ಪ್ರತಿ ।
ದದ್ಯಾದ್ವೈ ವ್ರತಮುದ್ದಿಶ್ಯ ಸರ್ವಕಾಮಾನ್ಸಮಶ್ನುತೇ ॥೧೬೦॥

ಸೂರ್ಯೋದಯದ ಸಮಯದಲ್ಲಿ ಅಗ್ನಿಯನ್ನು ಪ್ರತಿಷ್ಠಾಪಿಸಿ ಯಾವುದಾದರೂ ವ್ರತವನ್ನು ಉದ್ದೇಶಿಸಿ ಸುವರ್ಣದಾನವನ್ನು ಮಾಡುವವನು ಸಕಲವಿಧವಾದ ಕಾಮನೆಗಳನ್ನೂ ಹೊಂದುತ್ತಾನೆ.

ಅಗ್ನಿಮಿತ್ಯೇವ ತತ್ಪ್ರಾಹುಃ ಪ್ರದಾನಂ ಚ ಸುಖಾವಹಮ್ ।
ಯಥೇಷ್ಟಗುಣಸಂವೃತ್ತಂ ಪ್ರವರ್ತಕಮಿತಿ ಸ್ಮೃತಮ್ ॥೧೬೧॥

ಸುವರ್ಣವನ್ನು ಅಗ್ನಿಸ್ವರೂಪವೆಂದೇ ಹೇಳುತ್ತಾರೆ. ಆದುದರಿಂದ ಅದರ ದಾನವು ಅತ್ಯಂತಸುಖಾವಹವಾದುದು. ಯಥೇಷ್ಟವಾದ ಪುಣ್ಯವನ್ನು ಹೊಂದಿಸತಕ್ಕುದು. ದಾನಮಾಡುವ ಇಚ್ಛೆಯನ್ನು ಹುಟ್ಟಿಸತಕ್ಕುದು.

ನಿಷ್ಪಾಪನೇ! ಭಾರ್ಗವ! ಈಗ ನಾನು ನಿನಗೆ ಸುವರ್ಣದ ಉತ್ಪತ್ತಿಯ ಕಥೆಯನ್ನೂ-ಕಾರ್ತಿಕೇಯನ ಜನ್ಮವೃತ್ತಾಂತವನ್ನೂ ಹೇಳಿದೆನು. ಈ ವಿಷಯವನ್ನು ಚೆನ್ನಾಗಿ ಮನನಮಾಡು. ಬಹುಕಾಲಾನಂತರದಲ್ಲಿ ಹೃಷ್ಟ-ಪುಷ್ಟನಾಗಿ ಬೆಳೆದ ಕಾರ್ತಿಕೇಯನನ್ನು ಇಂದ್ರಪ್ರಮುಖರಾದ ದೇವತೆಗಳು ತಮ್ಮ ಸೇನಾಪತಿಯನ್ನಾಗಿ ಮಾಡಿಕೊಂಡರು. ಮೂರು ಲೋಕಗಳಿಗೂ ಹಿತವನ್ನುಂಟುಮಾಡುವ ಇಚ್ಛೆಯಿಂದ ಮಹೇಂದ್ರನ ಆಜ್ಞಾನುಸಾರವಾಗಿ ಕಾರ್ತಿಕೇಯನು ತಾರಕಾಸುರನನ್ನೂ ಮತ್ತು ಅವನ ಅನುಯಾಯಿಗಳಾದ ದೈತ್ಯರನ್ನೂ-ಅಸುರರನ್ನೂ ಸಂಹಾರಮಾಡಿದನು.

ಪರಶುರಾಮ! ಸುವರ್ಣದಾನದಲ್ಲಿರುವ ಮಹಾಪುಣ್ಯವನ್ನು ನಿನಗೆ ಹೇಳಿದ್ದೇನೆ. ದಾನಿಗಳಲ್ಲಿ ಶ್ರೇಷ್ಠನಾದವನೇ! ನೀನು ಕೂಡ ಬ್ರಾಹ್ಮಣರಿಗೆ ಸುವರ್ಣವನ್ನು ದಾನಮಾಡು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ವಸಿಷ್ಠರು ಹೀಗೆ ಹೇಳಿದನಂತರ ಪರಶುರಾಮನು ಬ್ರಾಹ್ಮಣರಿಗೆ ಯಥೇಚ್ಛವಾಗಿ ಸುವರ್ಣವನ್ನು ದಾನಮಾಡಿ ಸಕಲವಿಧವಾದ ಪಾಪಗಳಿಂದಲೂ ಮುಕ್ತನಾದನು. ಕೌಂತೇಯ! ಹೀಗೆ ನಾನು ನಿನಗೆ ಸುವರ್ಣಪ್ರದಾನದ ಫಲ ಮತ್ತು ಅದರ ಹುಟ್ಟಿನ ವಿಷಯ ಈ ಎಲ್ಲವನ್ನೂ ಹೇಳಿದ್ದೇನೆ. ಆದುದರಿಂದ ನೀನು ಕೂಡ ಬ್ರಾಹ್ಮಣರಿಗೆ ಹೆಚ್ಚಾಗಿ ಸುವರ್ಣವನ್ನು ದಾನಮಾಡು. ಸುವರ್ಣವನ್ನು ದಾನವಾಗಿ ಕೊಡುವುದರಿಂದ ನೀನು ಸಕಲಪಾಪಗಳಿಂದಲೂ ಮುಕ್ತನಾಗುವೆ."

ಲ೫ನೆಯ ಅಧ್ಯಾಯವು ಮುಗಿಯಿತು.

ಲ೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕಾರ್ತಿಕೇಯನ ಉತ್ಪತ್ತಿ: ಪಾಲನ-ಪೋಷಣೆಗಳು: ದೇವಸೈನ್ಯಾಧಿಪತ್ಯದಲ್ಲಿ ಅಭಿಷೇಕ: ತಾರಕಾಸುರನ ವಧೆ

ಯುಧಿಷ್ಠಿರನು ಹೇಳುತ್ತಾನೆ:

ಉಕ್ತಾಃ ಪಿತಾಮಹೇನೇಹ ಸುವರ್ಣಸ್ಯ ವಿಧಾನತಃ ।
ವಿಸ್ತರೇಣ ಪ್ರದಾನಸ್ಯ ಯೇ ಗುಣಾಃ ಶ್ರುತಿಲಕ್ಷಣಾಃ ॥೧॥

"ಪಿತಾಮಹನೇ! ಸುವರ್ಣವನ್ನು ವಿಧಿಪೂರ್ವಕವಾಗಿ ದಾನಮಾಡುವುದರಿಂದ ವೇದೋಕ್ತವಾದ ಯಾವ ಫಲಗಳು ಪ್ರಾಪ್ತವಾಗುವುವೋ–ಆ ಫಲಗಳೆಲ್ಲವನ್ನೂ ನೀನು ವಿಶದವಾಗಿ ವರ್ಣಿಸಿರುವೆ. ಸುವರ್ಣದ ಉತ್ಪತ್ತಿಯ ಕಾರಣವನ್ನೂ ಹೇಳಿರುವೆ. ಈಗ ನೀನು ತಾರಕಾಸುರನ ವಧೆಯು ಹೇಗಾಯಿತೆಂಬುದನ್ನು ಹೇಳು. ದೇವತೆಗಳಿಗೂ ಅವನು ಅವಧ್ಯನಾಗಿದ್ದನೆಂದು ನೀನೇ ಹೇಳಿದ್ದೆ. ಹೀಗಿರುವಾಗ ಅವನಿಗೆ ಮೃತ್ಯುವು ಹೇಗೆ ಪ್ರಾಪ್ತವಾಯಿತು? ಈ ವಿಷಯವನ್ನು ವಿಸ್ತಾರವಾಗಿ ಹೇಳು. ಕುರುಕುಲವನ್ನು ಉದ್ಧರಿಸಿದವನೇ!

ತಾರಕಾಸುರವಧೆಯ ಕಥೆಯನ್ನು ಸಮಗ್ರವಾಗಿ ನಿನ್ನಿಂದ ಕೇಳಲು ಇಚ್ಛಿಸಿರುವೆನು. ಇದನ್ನು ಕೇಳಬೇಕೆಂದು ನನಗೆ ಹೆಚ್ಚು ಕುತೂಹಲವುಂಟಾಗಿದೆ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ವಿಪನ್ನಕೃತ್ಯರಾದ (ಅಗ್ನಿಯು ನಿಕ್ಷೇಪಿಸಿದ್ದ ಗರ್ಭವನ್ನು ಭರಿಸಲಾಗದೇ ಗಂಗಾದೇವಿಯು ತ್ಯಾಗಮಾಡಿದುದರಿಂದ ಕಾರ್ಯವನ್ನು ಹಾಳುಮಾಡಿಕೊಂಡ) ದೇವರ್ಷಿಗಳು ಆ ಸಮಯದಲ್ಲಿ ಗಂಗೆಯಿಂದ ಪರಿತ್ಯಕ್ತವಾದ ಗರ್ಭವನ್ನು ಧರಿಸುವಂತೆ ಕೃತ್ತಿಕಾದೇವತೆಗಳನ್ನು ಪ್ರಚೋದಿಸಿದರು. ದೇವತೆಗಳಲ್ಲಿ ಯಾವ ಸ್ತ್ರೀಯೂ ಅಗ್ನಿಯ ಮತ್ತು ರುದ್ರನ ಆ ದಿವ್ಯತೇಜಸ್ಸನ್ನು ಭರಿಸಲು ಸಮರ್ಥರಾಗಲಿಲ್ಲ. ಕೃತ್ತಿಕಾದೇವತೆಗಳು ಮಾತ್ರವೇ ತಮ್ಮ ಓಜಸ್ಸಿನಿಂದ ಆ ಗರ್ಭವನ್ನು ಭರಿಸಲು ಸಮರ್ಥರಾದರು. ಶ್ರೇಷ್ಠವಾದ ವೀರ್ಯದಿಂದ ಯುಕ್ತನಾಗಿದ್ದ ಪಾವಕನು–ತಾನು ಇಟ್ಟ ತೇಜಸ್ಸನ್ನು ಗರ್ಭದಲ್ಲಿ ಧರಿಸಿದುದಕ್ಕಾಗಿ ಆ ಕೃತ್ತಿಕೆಯರ ವಿಷಯದಲ್ಲಿ ಪರಮಪ್ರೀತನಾದನು. ಆರು ಕೃತ್ತಿಕಾದೇವತೆಗಳೂ ಅಗ್ನಿಗೆ ಸಂಬಂಧಿಸಿದ ಗರ್ಭವನ್ನು ಪೋಷಿಸಿದರು. ಅಗ್ನಿಯ ಆ ದಿವ್ಯವಾದ ತೇಜಸ್ಸು ಆರು ಮಾರ್ಗಗಳ ಮೂಲಕವಾಗಿ ಕೃತ್ತಿಕೆಯರ ಗರ್ಭದಲ್ಲಿ ಇಡಲ್ಪಟ್ಟಿದ್ದಿತು. ಮಹಾತ್ಮನಾದ ಕುಮಾರನು ಕೃತ್ತಿಕೆಯರ ಗರ್ಭಗಳಲ್ಲಿ ಬೆಳೆಯುತ್ತಿರುವಾಗ ಅವನ ತೇಜಸ್ಸಿನಿಂದ ವ್ಯಾಪ್ತರಾದ ಕೃತ್ತಿಕೆಯರು ಸ್ವಲ್ಪವಾದರೂ ನೆಮ್ಮದಿಯನ್ನು ಕಾಣಲಿಲ್ಲ. ಅವನ ತೇಜಸ್ಸಿನಿಂದ ಪರಿತಪಿಸತೊಡಗಿದರು. ಕುಮಾರನ ತೇಜಸ್ಸಿನಿಂದ ವ್ಯಾಪ್ತರಾಗಿದ್ದ ಕೃತ್ತಿಕಾದೇವತೆಗಳು ಪ್ರಸವಕಾಲವು ಸನ್ನಿಹಿತವಾಗಲಾಗಿ ಏಕಕಾಲದಲ್ಲಿ ಕುಮಾರನನ್ನು ಪ್ರಸವಿಸಿದರು. ಸುವರ್ಣವೂ ಅವನ ಜೊತೆಯಲ್ಲಿಯೇ ಹುಟ್ಟಿತು. ಆರು ಮಂದಿಯ ಆಶ್ರಯವನ್ನು ಪಡೆದಿದ್ದರೂ ಏಕಾತ್ಮನಾಗಿ ಹೊರಬಂದ ಆ ಗರ್ಭವನ್ನು ಸುವರ್ಣದ ಸಮೀಪದಿಂದ ಪೃಥ್ವೀದೇವಿಯು ಪ್ರತಿಗ್ರಹಿಸಿದಳು. ಆ ಗರ್ಭವು ದಿವ್ಯವಾದ ಆಕೃತಿಯನ್ನು ಹೊಂದಿದ್ದಿತು. ಅಗ್ನಿಯ ಪ್ರಭೆಯಂತೆ ಕಾಂತಿಯುಕ್ತವಾಗಿದ್ದಿತು. ಬಹಳ ಸುಂದರವಾಗಿ ಕಾಣುತ್ತಿದ್ದ ಆ ಗರ್ಭವು ದಿವ್ಯವಾದ ನೊಜೆಹುಲ್ಲಿನ ಗುತ್ತಿಯನ್ನು ಆಶ್ರಯಿಸಿ ಅಲ್ಲಿಯೇ ಬೆಳೆಯ ತೊಡಗಿತು. ಸೂರ್ಯಕಾಂತಿಗೆ ಸಮಾನವಾದ ಕಾಂತಿಯಿಂದ ಬೆಳಗುತ್ತಿದ್ದ,

ದರ್ಭೆಯ ಕಾಡಿನಲ್ಲಿದ್ದ ಬಾಲಕನನ್ನು ಕೃತ್ತಿಕೆಯರು ನೋಡಿದರು. ಸೌಹಾರ್ದದಿಂದ ಆ ಶಿಶುವಿನ ವಿಷಯದಲ್ಲಿ ಪುತ್ರಸ್ನೇಹವುಂಟಾಗಿ ಸ್ತನ್ಯವನ್ನು ಕೊಟ್ಟು ಅದನ್ನು ಪೋಷಿಸತೊಡಗಿದರು.

ಅಭವತ್ಕಾರ್ತಿಕೇಯಃ ಸ ತ್ರೈಲೋಕ್ಯೇ ಸಚರಾಚರೇ ।
ಸ್ಕನ್ನತ್ವಾತ್ಸ್ಕಂದತಾಂ ಪ್ರಾಪ್ತೋ ಗುಹಾವಾಸಾದ್ಗುಹೋಽಭವತ್ ॥

ಕೃತ್ತಿಕಾನಕ್ಷತ್ರದೇವತೆಗಳು ಸಾಕಿದ ಕಾರಣ ಚರಾಚರಗಳಿಂದ ಕೂಡಿದ ಮೂರು ಲೋಕಗಳಲ್ಲಿಯೂ ಕುಮಾರನು ಕಾರ್ತಿಕೇಯನೆಂದು ಪ್ರಸಿದ್ಧನಾದನು. ಸ್ಕನ್ನನಾದುದರಿಂದ ಸ್ಕಂದನೂ, ಗುಹೆಯಲ್ಲಿ ವಾಸಮಾಡುತ್ತಿದ್ದುದರಿಂದ ಗುಹನೂ ಆದನು.

ಕಾರ್ತಿಕೇಯನು ಹುಟ್ಟಿದೊಡನೆಯೇ ಮೂವತ್ತು ಮೂರು ದೇವತೆಗಳೂ, ದಶದಿಕ್ಕುಗಳೂ, ದಿಕ್ಪಾಲರೂ, ಬ್ರಹ್ಮ-ವಿಷ್ಣು-ಮಹೇಶ್ವರರೂ, ಯಮ- ಪೂಷಾ-ಅರ್ಯಮಾ-ಭಗ-ಅಂಶ-ಮಿತ್ರ-ಸಾಧ್ಯರೂ, ವಸುಗಳೂ, ಇಂದ್ರನೂ, ಅಶ್ವಿನೀಕುಮಾರರೂ, ವರುಣ-ವಾಯುಗಳೂ, ಆಕಾಶ-ಚಂದ್ರ- ನಕ್ಷತ್ರ- ಗ್ರಹಗಣಗಳೂ, ರವಿಯೂ, ದೇವತೆಗಳನ್ನು ಆಶ್ರಯಿಸಿದ್ದ ವಿಭಿನ್ನಜಾತಿಯ ಪ್ರಾಣಿಗಳೂ, ಅಗ್ನಿಪುತ್ರನಾದ ಅದ್ಭುತನಾದ ಸ್ಕಂದನನ್ನು ನೋಡಲು ಆಗಮಿಸಿದರು. ಕಾರ್ತಿಕೇಯನ ಸುತ್ತಲೂ ನಿಂತು ಸ್ತೋತ್ರ ಮಾಡಿದರು. ಗಂಧರ್ವರು ಅವನ ಸುಂದರರೂಪವನ್ನು ಹಾಡಿಹೊಗಳಿದರು. ಆರು ಮುಖಗಳುಳ್ಳ, ಹನ್ನೆರಡು ಕಣ್ಣುಗಳುಳ್ಳ, ಬ್ರಾಹ್ಮಣಪ್ರಿಯನಾದ, ಸ್ಥೂಲವಾದ ಹೆಗಲುಗಳನ್ನು ಹೊಂದಿದ್ದ, ಹನ್ನೆರಡು ಭುಜಗಳಿಂದ ಕಂಗೊಳಿಸುತ್ತಿದ್ದ, ಸೂರ್ಯಾಗ್ನಿಗಳ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿದ್ದ, ನೊಜೆಯ ಹುಲ್ಲಿನ ಗುತ್ತಿಯಲ್ಲಿ ಮಲಗಿದ್ದ ಕುಮಾರನನ್ನು ದೇವತೆಗಳೂ ಮತ್ತು ಋಷಿಗಳೂ ನೋಡಿ ಮಹಾಸಂತೋಷವನ್ನು ಹೊಂದಿದರು. ತಾರಕಾಸುರನು ಹತನಾದನೆಂದೇ ಭಾವಿಸಿದರು. ಅನಂತರ ದೇವತೆಗಳೆಲ್ಲರೂ ಕುಮಾರಸ್ವಾಮಿಗೆ ಪ್ರಿಯವಾದ ವಸ್ತುಗಳೆಲ್ಲವನ್ನೂ ಪಾರಿತೋಷಿಕವಾಗಿ ಕೊಟ್ಟರು. ಆಟಗಳಲ್ಲಿ ತೊಡಗಿದ್ದ ಕುಮಾರನಿಗೆ ಪಕ್ಷಿಗಳೂ ಆಟದ ಸಾಮಾನುಗಳನ್ನು ಬಳುವಳಿಯಾಗಿ ಕೊಟ್ಟುವು. ಗರುಡನು ವಿಚಿತ್ರವಾದ ರೆಕ್ಕೆಗಳಿಂದ ಕೂಡಿದ್ದ ತನ್ನ ಮರಿಯಾದ ನವಿಲನ್ನೇ ಕುಮಾರನಿಗೆ ಒಪ್ಪಿಸಿದನು.

ರಾಕ್ಷಸರು ವರಾಹ-ಮಹಿಷಗಳೆರಡನ್ನೂ ಬಳುವಳಿಯಾಗಿ ಕೊಟ್ಟರು. ಅರುಣನು ಅಗ್ನಿಸದೃಶವಾದ ಕೆಂಪಾದ ಕೋಳಿಯನ್ನು ಒಪ್ಪಿಸಿದನು. ಚಂದ್ರನು ಕುರಿಯನ್ನೂ, ಸೂರ್ಯನು ಸುಂದರವಾದ ಪ್ರಭೆಯನ್ನೂ, ಗೋಮಾತೆಯಾದ ಸುರಭಿಯು ಒಂದು ಲಕ್ಷ ಗೋವುಗಳನ್ನೂ ಕುಮಾರನಿಗೆ ಕಾಣಿಕೆಯಾಗಿ ಕೊಟ್ಟರು. ಅಗ್ನಿಯು ಸುಂದರವಾದ ಆಡನ್ನೂ, ಇಳೆಯು ಪುಷ್ಪ-ಫಲಗಳನ್ನೂ, ಸುಧನ್ವನು ಗಾಡಿಯನ್ನೂ ಮತ್ತು ವಿಶಾಲವಾದ ಮೂಕಿಯುಳ್ಳ ರಥವನ್ನೂ ಬಳುವಳಿಯಾಗಿ ಕೊಟ್ಟರು. ವರುಣನು ವರುಣಲೋಕದ ಸುಂದರವಾದ ಮತ್ತು ದಿವ್ಯವಾದ ಅನೇಕ ಆನೆಗಳನ್ನೂ, ದೇವರಾಜನಾದ ಇಂದ್ರನು ಸಿಂಹ-ವ್ಯಾಘ್ರ-ಗಜಗಳನ್ನೂ, ಇತರ ಅನೇಕ ವಿಧವಾದ ಪಕ್ಷಿಗಳನ್ನೂ, ಘೋರವಾದ ಹಿಂಸ್ರಮೃಗಗಳನ್ನೂ, ನಾನಾವಿಧವಾದ ಶ್ವೇತಛತ್ರಗಳನ್ನೂ ಬಳುವಳಿಯಾಗಿ ಕೊಟ್ಟರು. ಅನೇಕರಾಕ್ಷಸರೂ ಮತ್ತು ಅಸುರರೂ ಪ್ರಭುವಾದ ಕುಮಾರಸ್ವಾಮಿಯ ಅನುಯಾಯಿಗಳಾದರು. ದಿನ-ದಿನಕ್ಕೂ ಬೆಳೆಯುತ್ತಿದ್ದ ಕುಮಾರಸ್ವಾಮಿಯನ್ನು ನೋಡಿ ತಾರಕಾಸುರನು ಅವನನ್ನು ಯುದ್ಧಕ್ಕೆ ಆಹ್ವಾನಿಸಿದನು. ಆದರೆ ಅನೇಕವಿಧವಾದ ಉಪಾಯಗಳಿಂದಲೂ ತಾರಕನಿಗೆ ವಿಭುವಾದ ಕುಮಾರನನ್ನು ಸಂಹರಿಸಲು ಸಾಧ್ಯವಾಗಲಿಲ್ಲ. ದೇವತೆಗಳು ಗುಹಾವಾಸಿಯಾಗಿದ್ದ ಕುಮಾರನಿಗೆ ದೇವಸೈನ್ಯಾಧಿಪತ್ಯದಲ್ಲಿ ಪಟ್ಟಗಟ್ಟುವುದರ ಮೂಲಕವಾಗಿ ಅವನನ್ನು ಸಮ್ಮಾನಿಸಿ ಅವನಿಗೆ ತಾರಕಾಸುರನು ಮಾಡಿದ ದ್ರೋಹಗಳೆಲ್ಲವನ್ನೂ ವಿವರಿಸಿ ಹೇಳಿದರು. ಮಹಾಪರಾಕ್ರಮಿಯಾದ, ದೇವಸೇನಾಪತಿಯಾದ, ಪ್ರಭುವಾದ ಕಾರ್ತಿಕೇಯನು ವೃದ್ಧಿಯನ್ನು ಹೊಂದಿ ಅಮೋಘವಾದ ಶಕ್ತ್ಯಾಯುಧದಿಂದ ತಾರಕಾಸುರನನ್ನು ಸಂಹರಿಸಲಾಗಿ ದೇವೇಂದ್ರನು ಪುನಃ ದೇವರಾಜ್ಯಕ್ಕೆ ರಾಜನಾದನು. ಪ್ರತಾಪಿಯಾದ ಸ್ಕಂದನು ಸೇನಾಪತಿಯ ಸ್ಥಾನದಲ್ಲಿದ್ದು ಕೊಂಡು ಬಹಳವಾಗಿ ಪ್ರಕಾಶಿಸಿದನು. ಅವನು ದೇವತೆಗಳಿಗೆ ಸ್ವಾಮಿಯೂ- ಸಂರಕ್ಷಕನೂ ಆದನು. ಶಂಕರನಿಗೂ ಪ್ರಿಯನಾದನು. ಅಗ್ನಿಪುತ್ರನಾದ ಆ ಕುಮಾರನೇ ಪೂಜ್ಯನಾದ ಹಿರಣ್ಯಮೂರ್ತಿಯೂ ಆಗಿದ್ದಾನೆ. ಸದಾ ಕೌಮಾರಾವಸ್ಥೆಯಲ್ಲಿಯೇ ಇರುವ ಕಾರ್ತಿಕೇಯನು ದೇವಸೈನಾಪತ್ಯವನ್ನು ಪಡೆದುಕೊಂಡನು. ಕಾರ್ತಿಕೇಯನ ಜೊತೆಯಲ್ಲಿಯೇ ಹುಟ್ಟಿದ ಸುವರ್ಣವು ಅಗ್ನಿಯ ಮಹಾತೇಜಸ್ಸೆಂದು

ಹೇಳಲ್ಪಟ್ಟಿದೆ. ಆದುದರಿಂದಲೇ ಸುವರ್ಣವು ಮಂಗಳಕರವಾದುದೂ ಶ್ರೇಷ್ಠವಾದ ರತ್ನವೂ ಆಗಿದೆ. ಅದರ ದಾನದಿಂದ ಅಕ್ಷಯವಾದ ಮತ್ತು ಉತ್ತಮವಾದ ಫಲವು ಲಭಿಸುತ್ತದೆ.

ಯುಧಿಷ್ಠಿರ! ಹೀಗೆ ಹಿಂದೆ ವಸಿಷ್ಠರು ಪರಶುರಾಮನಿಗೆ ಸುವರ್ಣದ ಉತ್ಪತ್ತಿಯ ವಿಷಯವಾಗಿ ಹೇಳಿದ್ದರು. ಆದುದರಿಂದ ನೀನು ಕೂಡ ಯಥೇಚ್ಛವಾಗಿ ಸುವರ್ಣವನ್ನು ದಾನಮಾಡಲು ಪ್ರಯತ್ನಿಸು. ಪರಶುರಾಮನು ಸುವರ್ಣವನ್ನು ದಾನಮಾಡಿಯೇ ಸಕಲಪಾಪಗಳಿಂದಲೂ ವಿಮುಕ್ತನಾದನು ಮತ್ತು ಸಾಮಾನ್ಯಮನುಷ್ಯರಿಗೆ ಸುದುರ್ಲಭವಾದ ಉತ್ತಮಸ್ಥಾನವನ್ನು ಸ್ವರ್ಗದಲ್ಲಿ ಪಡೆದುಕೊಂಡನು.”

ಆ೮೬ನೆಯ ಅಧ್ಯಾಯವು ಮುಗಿಯಿತು.

೮೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಿವಿಧತಿಥಿಗಳಲ್ಲಿ ಶ್ರಾದ್ಧಮಾಡುವುದರ ಫಲ

ಯುಧಿಷ್ಠಿರನು ಹೇಳುತ್ತಾನೆ:

ಚಾತುರ್ವರ್ಣ್ಯಸ್ಯ ಧರ್ಮಾತ್ಮನ್ಧರ್ಮಾಃ ಪ್ರೋಕ್ತಾ ಯಥಾ ತ್ವಯಾ ।
ತಥೈವ ಮೇ ಶ್ರಾದ್ಧವಿಧಿಂ ಕೃತ್ಸ್ನಂ ಪ್ರಬ್ರೂಹಿ ಪಾರ್ಥಿವ ॥೧॥

“ಧರ್ಮಾತ್ಮನೇ! ಪಿತಾಮಹನೇ! ಚಾತುರ್ವಣ್ಯದ ಧರ್ಮಗಳನ್ನು ಸಮಗ್ರವಾಗಿ ಹೇಳಿದಂತೆಯೇ ಈಗ ನನಗಾಗಿ ಶ್ರಾದ್ಧವಿಧಿಯನ್ನೂ ಸಮಗ್ರವಾಗಿ ಹೇಳು.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಯುಧಿಷ್ಠಿರನು ಹೀಗೆ ಪ್ರಾರ್ಥಿಸಿಕೊಳ್ಳಲು ಶಾಂತನುವಿನ ಪುತ್ರನಾದ ಭೀಷ್ಮನು ಶ್ರಾದ್ಧವಿಧಿಯನ್ನು ಸಮಗ್ರವಾಗಿ ಹೇಳಲು ಉಪಕ್ರಮಿಸಿದನು.

ಭೀಷ್ಮನು ಹೇಳುತ್ತಾನೆ:

“ಪರಂತಪನೇ! ಯುಧಿಷ್ಠಿರ! ಧನ, ಯಶಸ್ಸು ಮತ್ತು ಮಕ್ಕಳ ಪ್ರಾಪ್ತಿಗೆ ಕಾರಣವಾದ, ಪಿತೃಯಜ್ಞವೆನಿಸಿರುವ ಶ್ರಾದ್ಧಕರ್ಮವಿಧಿಯನ್ನು ಏಕಾಗ್ರಚಿತ್ತನಾಗಿ ಕೇಳು:

ದೇವಾಸುರ-ಮನುಷ್ಯರಿಗೂ, ಗಂಧರ್ವೋರಗ-ರಾಕ್ಷಸರಿಗೂ, ಪಿಶಾಚ-ಕಿನ್ನರರಿಗೂ ಪಿತೃದೇವತೆಗಳು ಯಾವಾಗಲೂ ಪೂಜ್ಯರಾಗಿರುತ್ತಾರೆ. ಮೊದಲು ಪಿತೃದೇವತೆಗಳಿಗೆ ಪೂಜೆಮಾಡಿ ಅನಂತರದಲ್ಲಿ ದೇವತೆಗಳನ್ನು ಪೂಜಿಸುತ್ತಾರೆ. ಆದುದರಿಂದ ಮನುಷ್ಯನು ಸರ್ವಯಜ್ಞಗಳ ಮೂಲಕವಾಗಿ ಪಿತೃದೇವತೆಗಳನ್ನು ಯಾವಾಗಲೂ ಪೂಜಿಸುತ್ತಿರಬೇಕು. ಪಿತೃಗಳ ಶ್ರಾದ್ಧಕ್ಕೆ 'ಅನ್ವಾಹಾರ್ಯ' ಎನ್ನುತ್ತಾರೆ. ಆದುದರಿಂದ ವಿಶೇಷವಿಧಿಯ ಮೂಲಕವಾಗಿ ಅದನ್ನು ಅನುಷ್ಠಾನಮಾಡುವುದು ಮುಖ್ಯವಾದ ಪಕ್ಷವಾಗಿದೆ. ಎಲ್ಲ ದಿನಗಳಲ್ಲಿಯೂ ಶ್ರಾದ್ಧಮಾಡಿದರೂ ಪಿತೃಗಳು ತೃಪ್ತಿಹೊಂದುತ್ತಾರೆ. ಈಗ ನಾನು ನಿನಗೆ ತಿಥಿ ಮತ್ತು ಆ ತಿಥಿಗಳ ಗುಣ ಮತ್ತು ಅವಗುಣಗಳನ್ನು ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು:

ಪಿತ್ರ್ಯಾನರ್ಚ್ಯ ಪ್ರತಿಪದಿ ಪ್ರಾಪ್ನುಯಾತ್ಸುಗೃಹೇ ಸ್ತ್ರಿಯಃ ।
ಅಭಿರೂಪಪ್ರಜಾಯಿನ್ಯೋ ದರ್ಶನೀಯಾ ಬಹುಪ್ರಜಾಃ ॥೯॥

ಪಾಡ್ಯದಂದು ಪಿತೃಗಳಿಗೆ ಶ್ರಾದ್ಧವನ್ನು ಮಾಡಿದರೆ ತತ್ಫಲವಾಗಿ ಮನುಷ್ಯನು ಉತ್ತಮವಾದ ತನ್ನ ಮನೆಯಲ್ಲಿ ತನಗೆ ಅನುರೂಪವಾದ ಬಹುಸಂತಾನವುಳ್ಳ ಚೆಲುವೆಯರಾದ ಭಾರ್ಯೆಯರನ್ನು ಪಡೆಯುತ್ತಾನೆ.

ಸ್ತ್ರಿಯೋ ದ್ವಿತೀಯಾಂ ಜಾಯನ್ತೇ ತೃತೀಯಾಯಾಂ ತು ವಾಜಿನಃ ।
ಚತುರ್ಥ್ಯಾಂ ಕ್ಷುದ್ರಪಶವೋ ಭವನ್ತಿ ಬಹವೋ ಗೃಹೇ ॥೧೦॥

ಬಿದಿಗೆಯ ದಿವಸ ಶ್ರಾದ್ಧಮಾಡಿದರೆ ಪುತ್ರಿಯರು ಹುಟ್ಟುತ್ತಾರೆ. ತದಿಗೆಯ ದಿವಸ ಶ್ರಾದ್ಧಮಾಡಿದರೆ ಮನೆಯಲ್ಲಿ ಅಶ್ವಸಮೃದ್ಧಿಯಾಗುತ್ತದೆ. ಚತುರ್ಥಿಯ ದಿವಸ ಶ್ರಾದ್ಧಮಾಡಿದರೆ ಸಣ್ಣ-ಸಣ್ಣಪ್ರಾಣಿಗಳ (ಆಡು-ಕುರಿ ಮುಂತಾದುವುಗಳ) ಸಮೃದ್ಧಿಯಾಗುತ್ತದೆ.

ಪಞ್ಚಮ್ಯಾಂ ಬಹವಃ ಪುತ್ರಾ ಜಾಯನ್ತೇ ಕುರ್ವತಾಂ ನೃಪ ।
ಕುರ್ವಾಣಾಸ್ತು ನರಾಃ ಷಷ್ಠ್ಯಾಂ ಭವನ್ತಿ ದ್ಯುತಿಭಾಗಿನಃ ॥೧೧॥

ಪಂಚಮಿಯಂದು ಪಿತೃಶ್ರಾದ್ಧವನ್ನು ಮಾಡುವವರಿಗೆ ಬಹುಪುತ್ರರು ಹುಟ್ಟುತ್ತಾರೆ. ಷಷ್ಠಿಯಂದು ಶ್ರಾದ್ಧಮಾಡುವವರು ಕಾಂತಿಮಂತರಾಗುತ್ತಾರೆ.

ಕೃಷಿಭಾಗೀ ಭವೇಚ್ಛ್ರಾದ್ಧಂ ಕುರ್ವಾಣಃ ಸಪ್ತಮೀಂ ನೃಪ ।
ಅಷ್ಟಮ್ಯಾಂ ತು ಪ್ರಕುರ್ವಾಣೋ ವಾಣಿಜ್ಯೇ ಲಾಭಮಾಪ್ನುಯಾತ್॥

ಸಪ್ತಮಿಯ ದಿನ ಶ್ರಾದ್ಧಮಾಡುವವನು ಕೃಷಿಯಲ್ಲಿ ಲಾಭವನ್ನು ಗಳಿಸುತ್ತಾನೆ. ಅಷ್ಟಮಿಯ ದಿನ ಶ್ರಾದ್ಧಮಾಡುವವನು ವ್ಯಾಪಾರದಲ್ಲಿ ಲಾಭವನ್ನು ಗಳಿಸುತ್ತಾನೆ.

ನವಮ್ಯಾಂ ಕುರ್ವತಃ ಶ್ರಾದ್ಧಂ ಭವತ್ಯೇಕಶಫಂ ಬಹು ।
ವಿವರ್ಧನ್ತೇ ತು ದಶಮೀಂ ಗಾವಃ ಶ್ರಾದ್ಧಾನಿ ಕುರ್ವತಃ ॥೧೩॥

ನವಮಿಯಂದು ಶ್ರಾದ್ಧಮಾಡುವವನಿಗೆ ಒಂದೇ ಗೊರಸಿನಿಂದ ಕೂಡಿರುವ ಕುದುರೆಯೇ ಮೊದಲಾದ ಪ್ರಾಣಿಗಳ ಸಮೃದ್ಧಿಯಾಗುತ್ತದೆ. ದಶಮಿಯ ದಿನ ಶ್ರಾದ್ಧಮಾಡುವವನಿಗೆ ಗೋಸಂಪತ್ತು ಹೆಚ್ಚುತ್ತದೆ.

ಕುಪ್ಯಭಾಗೀ ಭವೇನ್ಮರ್ತ್ಯಃ ಕುರ್ವನ್ನೇಕಾದಶೀಂ ನೃಪ ।
ಬ್ರಹ್ಮವರ್ಚಸಿನಃ ಪುತ್ರಾ ಜಾಯನ್ತೇ ತಸ್ಯ ವೇಶ್ಮನಿ ॥೧೪॥

ಏಕಾದಶಿಯ ದಿನ ಶ್ರಾದ್ಧಮಾಡುವವನು ಬೆಳ್ಳಿ-ಚಿನ್ನಗಳನ್ನು ಬಿಟ್ಟು ಉಳಿದ ಲೋಹಗಳ ಸಮೃದ್ಧಿಯನ್ನು ಪಡೆಯುತ್ತಾನೆ. ಅಂತಹವನ ಮನೆಯಲ್ಲಿ ಬ್ರಹ್ಮತೇಜಸ್ಸಿನಿಂದ ಕೂಡಿದ ಮಕ್ಕಳು ಹುಟ್ಟುತ್ತಾರೆ.

ದ್ವಾದಶ್ಯಾಮೀಹಮಾನಸ್ಯ ನಿತ್ಯಮೇವ ಪ್ರದೃಶ್ಯತೇ ।
ರಜತಂ ಬಹುವಿತ್ತಂ ಚ ಸುವರ್ಣಂ ಚ ಮನೋರಮಮ್ ॥೧೫॥

ದ್ವಾದಶಿಯ ದಿವಸ ಪ್ರಯತ್ನಪೂರ್ವಕವಾಗಿ ಶ್ರಾದ್ಧಮಾಡುವವನಿಗೆ ಯಾವಾಗಲೂ ಮನೋಹರವಾದ ಸುವರ್ಣ, ಬೆಳ್ಳಿ ಮತ್ತು ಧನಗಳು ನಿತ್ಯವೂ ಕಾಣುತ್ತಿರುತ್ತವೆ.

ಜ್ಞಾತೀನಾಂ ತು ಭವೇಚ್ಛ್ರೇಷ್ಠಃ ಕುರ್ವಞ್ಛ್ರಾದ್ಧಂ ತ್ರಯೋದಶೀಮ್ ।
ಅವಶ್ಯಂ ತು ಯುವಾನೋಽಸ್ಯ ಪ್ರಮೀಯನ್ತೇ ನರಾ ಗೃಹೇ ॥೧೬॥

ಯುದ್ಧಭಾಗೀ ಭವೇನ್ಮರ್ತ್ಯಃ ಕುರ್ವಞ್ಛ್ರಾದ್ಧಂ ಚತುರ್ದಶೀಮ್ ।
ಅಮಾವಾಸ್ಯಾಂ ತು ನಿರ್ವಾಪಾತ್ಸರ್ವಕಾಮಾನವಾಪ್ನುಯಾತ್ ॥೧೭॥

ತ್ರಯೋದಶಿಯ ದಿನ ಶ್ರಾದ್ಧಮಾಡುವವನು ತನ್ನ ಕುಟುಂಬದ ಜನರಲ್ಲಿ ಶ್ರೇಷ್ಠನೆನಿಸಿಕೊಳ್ಳುತ್ತಾನೆ. ಆದರೆ ಚತುರ್ದಶಿಯ ದಿನ ಶ್ರಾದ್ಧಮಾಡಿದರೆ ಅವನ ಮನೆಯಲ್ಲಿ ಯುವಕರಾದ ಮಕ್ಕಳೇ ಸಾಯುತ್ತಾರೆ. ತಾನೂ ಕೂಡ ಯುದ್ಧದಲ್ಲಿ ಭಾಗವಹಿಸಬೇಕಾಗುತ್ತದೆ. (ಆದುದರಿಂದ ಚತುರ್ದಶಿಯ ದಿವಸ ಪಿತೃಶ್ರಾದ್ಧವನ್ನು ಮಾಡಬಾರದು.) ಅಮಾವಾಸ್ಯೆಯಂದು ಪಿತೃಶ್ರಾದ್ಧವನ್ನು ಮಾಡುವುದರಿಂದ ಯಜಮಾನನು ತನ್ನ ಸಂಪೂರ್ಣಕಾಮನೆಗಳನ್ನೂ ಹೊಂದುತ್ತಾನೆ.

ಕೃಷ್ಣಪಕ್ಷೇ ದಶಮ್ಯಾದೌ ವರ್ಜಯಿತ್ವಾ ಚತುರ್ದಶೀಮ್ ।
ಶ್ರಾದ್ಧಕರ್ಮಣಿ ತಿಥ್ಯಸ್ತು ಪ್ರಶಸ್ತಾ ನ ತಥೇತರಾಃ ॥೧೮॥

ಕೃಷ್ಣಪಕ್ಷದಲ್ಲಿ ದಶಮಿಯನ್ನು ಮೊದಲ್ಗೊಂಡು ಚತುರ್ದಶಿಯನ್ನು ಬಿಟ್ಟು ಅಮಾವಾಸ್ಯೆಯವರೆಗಿನ ತಿಥಿಗಳು ಶ್ರಾದ್ಧಕರ್ಮಕ್ಕೆ ಬಹಳ ಪ್ರಶಸ್ತವಾಗಿವೆ. ಪಾಡ್ಯದಿಂದ ನವಮಿಯವರೆಗಿನ ತಿಥಿಗಳು ಅಷ್ಟು ಪ್ರಶಸ್ತಗಳಲ್ಲ.

ಯಥಾ ಚೈವಾಪರಃ ಪಕ್ಷಃ ಪೂರ್ವಪಕ್ಷಾದ್ವಿಶಿಷ್ಯತೇ ।
ತಥಾ ಶ್ರಾದ್ಧಸ್ಯ ಪೂರ್ವಾಹ್ಣಾದಪರಾಹ್ಣೋ ವಿಶಿಷ್ಯತೇ ॥೧೯॥

ಯಾವ ರೀತಿಯಲ್ಲಿ ಶ್ರಾದ್ಧಕರ್ಮಕ್ಕೆ ಶುಕ್ಲಪಕ್ಷಕ್ಕಿಂತಲೂ ಕೃಷ್ಣಪಕ್ಷವೇ ಶ್ರೇಷ್ಠವೋ–ಅದೇ ರೀತಿಯಲ್ಲಿ ಪೂರ್ವಾಹ್ಣಕ್ಕಿಂತಲೂ ಅಪರಾಹ್ಣಕಾಲವೇ ಶ್ರೇಷ್ಠವಾದುದು."

೮೭ನೆಯ ಅಧ್ಯಾಯವು ಮುಗಿಯಿತು.

ಅ೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರಾದ್ಧಗಳಲ್ಲಿ ಪಿತೃಗಳು ಹೇಗೆ ತೃಪ್ತಿಹೊಂದುವರೆಂಬುದರ ನಿರೂಪಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕಿಂಸ್ವಿದ್ದತ್ತಂ ಪಿತೃಭ್ಯೋ ವೈ ಭವತ್ಯಕ್ಷಯಮೀಶ್ವರ ।
ಕಿಂ ಹವಿಶ್ಚಿರರಾತ್ರಾಯ ಕಿಮಾನನ್ತ್ಯಾಯ ಕಲ್ಪತೇ ॥೧॥

"ಪಿತಾಮಹನೇ! ಪಿತೃಗಳ ಪ್ರೀತ್ಯರ್ಥವಾಗಿ ಕೊಡುವ ಯಾವ ವಸ್ತುವು ಅಕ್ಷಯವನ್ನು ಹೊಂದುತ್ತದೆ? ಯಾವ ಹವ್ಯವಸ್ತುವನ್ನು ದಾನ ಕೊಡುವುದರಿಂದ ಪಿತೃಗಳು ಬಹಳ ದಿವಸಗಳವರೆಗೆ ತೃಪ್ತರಾಗಿರುತ್ತಾರೆ ಮತ್ತು ಯಾವ ವಸ್ತುವನ್ನು ಕೊಡುವುದರಿಂದ ಅನಂತಕಾಲದವರೆಗೂ ತೃಪ್ತರಾಗಿರುತ್ತಾರೆ?–ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಹವೀಂಷಿ ಶ್ರಾದ್ಧಕಲ್ಪೇ ತು ಯಾನಿ ಶ್ರಾದ್ಧವಿದೋ ವಿದುಃ ।
ತಾನಿ ಮೇ ಶೃಣು ಕಾಮ್ಯಾನಿ ಫಲಂ ಚೈವ ಯುಧಿಷ್ಠಿರ ॥೨॥

"ಯುಧಿಷ್ಠಿರ! ಶ್ರಾದ್ಧವಿಧಿಗಳ ರಹಸ್ಯಗಳನ್ನು ತಿಳಿದ ವಿದ್ವಾಂಸರು ಶ್ರಾದ್ಧಕಲ್ಪದಲ್ಲಿ ಯಾವ ಹವಿಸ್ಸುಗಳನ್ನು ನಿಯತಗೊಳಿಸಿರುವರೋ ಅವೆಲ್ಲವೂ ಕಾಮ್ಯಫಲಗಳನ್ನೇ ಕೊಡತಕ್ಕುವುಗಳಾಗಿವೆ. ನಾನು ಅಂತಹ ಹವಿಸ್ಸುಗಳನ್ನೂ ಮತ್ತು ಅದರಿಂದ ಲಭಿಸುವ ಫಲಗಳನ್ನೂ ಹೇಳುತ್ತೇನೆ. ಎಲ್ಲವನ್ನೂ ಕೇಳು.

ತಿಲೈರ್ವ್ರೀಹಿಯವೈರ್ಮಾಷೈರದ್ಭಿರ್ಮೂಲಫಲೈಸ್ತಥಾ ।
ದತ್ತೇನ ಮಾಸಂ ಪ್ರೀಯನ್ತೇ ಶ್ರಾದ್ಧೇನ ಪಿತರೋ ನೃಪ ॥೩॥

ಎಳ್ಳು, ಕೆಂಬತ್ತ, ಜವೆ, ಉದ್ದು, ನೀರು, ಗೆಡ್ಡೆ-ಗೆಣಸುಗಳು ಮತ್ತು ಹಣ್ಣುಗಳು–ಇವುಗಳ ಮೂಲಕವಾಗಿ ಮಾಡಿದ ಶ್ರಾದ್ಧದಿಂದ ಪಿತೃಗಳು ಒಂದು ಮಾಸದವರೆಗೆ ತೃಪ್ತರಾಗಿರುತ್ತಾರೆ.

ವರ್ಧಮಾನತಿಲಂ ಶ್ರಾದ್ಧಮಕ್ಷಯಂ ಮನುರಬ್ರವೀತ್ ।
ಸರ್ವೇಷ್ವೇವ ತು ಭೋಜ್ಯೇಷು ತಿಲಾಃ ಪ್ರಾಧಾನ್ಯತಃ ಸ್ಮೃತಾಃ ॥೪॥

ಯಾವ ಶ್ರಾದ್ಧದಲ್ಲಿ ಎಳ್ಳಿನ ಭಾಗವೇ ಹೆಚ್ಚಾಗಿರುವುದೋ-ಆ ಶ್ರಾದ್ಧವು ಅಕ್ಷಯವಾದುದೆಂದು ಮನುವು ಹೇಳಿದ್ದಾನೆ. ಶ್ರಾದ್ಧಸಂಬಂಧವಾದ ಎಲ್ಲ ಭೋಜ್ಯಪದಾರ್ಥಗಳಲ್ಲಿಯೂ ಎಳ್ಳನ್ನು ಪ್ರಧಾನವಾಗಿ ಉಪಯೋಗಿಸ ಬೇಕೆಂದು ಹೇಳಲ್ಪಟ್ಟಿದೆ.

ಗವ್ಯೇನ ದತ್ತಂ ಶ್ರಾದ್ಧೇ ತು ಸಂವತ್ಸರಮಿಹೋಚ್ಯತೇ ।
ಯಥಾ ಗವ್ಯಂ ತಥಾ ಯುಕ್ತಂ ಪಾಯಸಂ ಸರ್ಪಿಷಾ ಸಹ ॥೫॥

ಗೋಸಂಬಂಧವಾದ ವಸ್ತುಗಳಿಂದ (ಹಾಲು, ತುಪ್ಪ, ಮೊಸರು ಮುಂತಾದುವುಗಳಿಂದ) ಮಾಡಲ್ಪಟ್ಟ ಶ್ರಾದ್ಧವು ಪಿತೃಗಳಿಗೆ ಒಂದು ವರ್ಷದವರೆಗೆ ತೃಪ್ತಿಯನ್ನುಂಟುಮಾಡುತ್ತದೆ. ಗೋಸಂಬಂಧವಾದ ವಸ್ತುಗಳ ಮೂಲಕವಾಗಿ ಶ್ರಾದ್ಧಮಾಡಿದರೆ ಯಾವ ಫಲವು ಲಭಿಸುವುದೋ–ಅದೇ ಫಲವು ತುಪ್ಪದಿಂದ ಯುಕ್ತವಾದ ಪಾಯಸದ ಮೂಲಕವಾಗಿ ಶ್ರಾದ್ಧ ಮಾಡುವುದರಿಂದಲೂ ಪ್ರಾಪ್ತವಾಗುತ್ತದೆ.

ಈ ವಿಷಯದಲ್ಲಿ ವಿದ್ವಾಂಸರು ಪಿತೃಗೀತೆಯನ್ನು ಉದಾಹರಿಸುತ್ತಾರೆ. ಈ ಪಿತೃಗೀತೆಯನ್ನು ಹಿಂದೆ ಸನತ್ಕುಮಾರನು ನನ್ನೊಡನೆ ಸಂಭಾಷಿಸುತ್ತಿದ್ದಾಗ ಹೇಳಿದ್ದನು.

ಅಪಿ ನಃ ಸ್ವಕುಲೇ ಜಾಯಾದ್ಯೋ ನೋ ದದ್ಯಾತ್ತ್ರಯೋದಶೀಮ್ ।
ಮಘಾಸು ಸರ್ಪಿಸ್ಸಂಯುಕ್ತಂ ಪಾಯಸಂ ದಕ್ಷಿಣಾಯನೇ ॥೭॥

'ನಮ್ಮ ಕುಲದಲ್ಲಿ ನಮ್ಮ ಪ್ರೀತ್ಯರ್ಥವಾಗಿ ದಕ್ಷಿಣಾಯನದಲ್ಲಿ ಭಾದ್ರಪದ ಬಹುಳದಲ್ಲಿ ಮಖಾನಕ್ಷತ್ರದಿಂದ ಯುಕ್ತವಾಗಿರುವ ತ್ರಯೋದಶಿಯಂದು ಘೃತಯುಕ್ತವಾದ ಪಾಯಸವನ್ನು ಕೊಡುವವನು ಹುಟ್ಟುವನೇ?'

ಅಜೇನ ವಾಪಿ ಲೌಹೇನ ಮಘಾಸ್ವೇವ ಯತವ್ರತಃ ।
ಹಸ್ತಿಚ್ಛಾಯಾಸು ವಿಧಿವತ್ಕರ್ಣವ್ಯಜನವೀಜಿತಮ್ ॥೮॥

ಮಘಾನಕ್ಷತ್ರಯುಕ್ತವಾದ ದಿನದಲ್ಲಿ ಗಜಚ್ಛಾಯಾಪುಣ್ಯಕಾಲದಲ್ಲಿ* ವ್ಯಜನರೂಪವಾದ ಆನೆಯ ಕಿವಿಗಳಿಂದ ಗಾಳಿಯು ಬೀಸಲ್ಪಡುತ್ತಿರುವಾಗ ಆಡಿನ ಸಂಬಂಧವಾದ ಕೆಂಪಾದ ಮಾಂಸವನ್ನು ನಮ್ಮ ಪ್ರೀತ್ಯರ್ಥವಾಗಿ ಅರ್ಪಿಸುವವನು ಹುಟ್ಟುವನೇ?

ಏಷ್ಟವ್ಯಾ ಬಹವಃ ಪುತ್ರಾ ಯದ್ಯೇಕೋಽಪಿ ಗಯಾಂ ವ್ರಜೇತ್ ।
ಯತ್ರಾಸೌ ಪ್ರಥಿತೋ ಲೋಕೇಷ್ವಕ್ಷಯ್ಯಕರಣೋ ವಟಃ ॥೯॥

ಮನುಷ್ಯನು ಬಹುಪುತ್ರರನ್ನು ಪಡೆಯುವ ಅಭಿಲಾಷೆಯನ್ನಿಟ್ಟು ಕೊಳ್ಳಬೇಕು. ಏಕೆಂದರೆ: ಅವರಲ್ಲಿ ಒಬ್ಬನಾದರೂ ಗಯೆಗೆ ಹೋದಾನು. ಅಲ್ಲಿಗೆ ಹೋಗಿ ತನ್ನ ತಂದೆಯ ಪ್ರೀತ್ಯರ್ಥವಾಗಿ ಶ್ರಾದ್ಧವನ್ನು ಮಾಡಿಯಾನು. ಶ್ರಾದ್ಧದ ಫಲವನ್ನು ಅಕ್ಷಯಗೊಳಿಸುವ ತ್ರಿಲೋಕಪ್ರಸಿದ್ಧವಾದ ಅಕ್ಷಯ ವಟವೃಕ್ಷವು ಗಯೆಯಲ್ಲಿದೆ.

ಆಪೋ ಮೂಲಂ ಫಲಂ ಮಾಂಸಮನ್ನಂ ವಾಪಿ ಪಿತೃಕ್ಷಯೇ ।
ಯತ್ಕಿಂಚಿನ್ಮಧುಸಮ್ಮಿಶ್ರಂ ತದಾನನ್ತ್ಯಾಯ ಕಲ್ಪತೇ ॥೧೦॥

ಪಿತೃಗಳು ಮರಣಹೊಂದಿದ ತಿಥಿಯಂದು ನೀರು, ಗೆಡ್ಡೆ-ಗೆಣಸುಗಳು, ಫಲ, ಮಾಂಸ, ಅನ್ನ–ಇವುಗಳಲ್ಲಿ ಯಾವುದನ್ನಾದರೂ ಜೇನುತುಪ್ಪದೊಡನೆ ಸೇರಿಸಿ ಪಿತೃಗಳ ತೃಪ್ತ್ಯರ್ಥವಾಗಿ ಸಮರ್ಪಿಸಿದರೆ ಅದು ಅವರಿಗೆ ಅನಂತಕಾಲದವರೆಗೂ ತೃಪ್ತಿಯನ್ನುಂಟುಮಾಡುತ್ತದೆ.

(ಈ ಅಧ್ಯಾಯದಲ್ಲಿ ಗೋರಖಪುರದವರು ಛಾಪಿಸಿರುವ ಪುಸ್ತಕದ ಪ್ರಕಾರ ೧೦ ಶ್ಲೋಕಗಳಿವೆ. ಉಳಿದ ಪುಸ್ತಕಗಳಲ್ಲಿ ೧೫ ಶ್ಲೋಕಗಳಿವೆ. ಆ ೫ ಶ್ಲೋಕಗಳೂ ಇರಬೇಕಾದುದು ಸೂಕ್ತವಾಗಿ ಕಾಣುತ್ತದೆ. ಆದುದರಿಂದ ಆ ೫ ಶ್ಲೋಕಗಳನ್ನೂ ಈ ಮುಂದೆ ಕೊಡಲಾಗಿದೆ.)

---

* ಪ್ರೇತಪಕ್ಷೇ ತ್ರಯೋದಶ್ಯಾಂ ಮಘಾಸ್ವಿನ್ದುಃ ಕರೇ ರವಿಃ ॥ ಪ್ರೇತಪಕ್ಷವೆಂದರೆ ಭಾದ್ರಪದ ಕೃಷ್ಣಪಕ್ಷದಲ್ಲಿ (ಪಿತೃಪಕ್ಷದಲ್ಲಿ) ತ್ರಯೋದಶೀತಿಥಿಯಲ್ಲಿ ಚಂದ್ರನು ಮಘಾನಕ್ಷತ್ರದಲ್ಲಿಯೂ, ಸೂರ್ಯನು ಹಸ್ತಾನಕ್ಷತ್ರದಲ್ಲಿಯೂ ಇರುವಾಗ ಗಜಚ್ಛಾಯಾ ಎಂಬ ಪುಣ್ಯಕಾಲವು ಉದಯವಾಗುತ್ತದೆ.

ಳನೆಯ ಶ್ಲೋಕವಾದನಂತರ :

ದ್ವೌ ಮಾಸೌ ತು ಭವೇತ್ತೃಪ್ತಿರ್ಮತ್ಸ್ಯೈಃ ಪಿತೃಗಣಸ್ಯ ಹ ।
ತ್ರೀನ್ಮಾಸಾನಾವಿಕೇನಾಹುಶ್ಚತುರ್ಮಾಸಂ ಶಶೇನ ಹ ॥೫॥

ಮೀನುಗಳ ಮೂಲಕವಾಗಿ ಶ್ರಾದ್ಧಮಾಡಿದರೆ ಪಿತೃಗಳಿಗೆ ಎರಡು ಮಾಸಗಳವರೆಗೆ ತೃಪ್ತಿಯಿರುತ್ತದೆ. ಕುರಿಯ ಸಂಬಂಧವಾದ ಮಾಂಸದ ಮೂಲಕವಾಗಿ ಶ್ರಾದ್ಧಮಾಡಿದರೆ ಮೂರು ಮಾಸಗಳವರೆಗೆ ತೃಪ್ತಿಯಿರುತ್ತದೆ. ಮೊಲದ ಮಾಂಸದ ಮೂಲಕವಾಗಿ ಶ್ರಾದ್ಧಮಾಡಿದರೆ ನಾಲ್ಕು ಮಾಸಗಳವರೆಗೆ ತೃಪ್ತಿಯಿರುತ್ತದೆ.

ಅಜೇನ ಮಾಸಾನ್ಪ್ರೀಯನ್ತೇ ಪಞ್ಚೈವ ಪಿತರೋ ನೃಪ ।
ವಾರಾಹೇಣ ತು ಷಣ್ಮಾಸಾನ್ಸಪ್ತ ವೈ ಶಾಕುಲೇನ ತು ॥೬॥

ಆಡಿನ ಮಾಂಸದ ಮೂಲಕವಾಗಿ ಶ್ರಾದ್ಧಮಾಡಿದರೆ ಐದು ಮಾಸಗಳವರೆಗೆ ಪಿತೃಗಳು ಸುಪ್ರೀತರಾಗಿರುತ್ತಾರೆ. ಕಾಡುಹಂದಿಯ ಮಾಂಸದ ಮೂಲಕವಾಗಿ ಶ್ರಾದ್ಧಮಾಡಿದರೆ ಆರು ತಿಂಗಳವರೆಗೆ ತೃಪ್ತಿಯಿಂದಿರುತ್ತಾರೆ. ಕೆಂಪುಮೀನಿನ ಮೂಲಕವಾಗಿ ಶ್ರಾದ್ಧಮಾಡಿದರೆ ಏಳು ತಿಂಗಳವರೆಗೆ ತೃಪ್ತಿಯಿಂದಿರುತ್ತಾರೆ.

ಮಾಸಾನಷ್ಟೌ ಪಾರ್ಷತೇನ ರೌರವೇಣ ನವ ಪ್ರಭೋ ।
ಗವಯಸ್ಯ ತು ಮಾಂಸೇನ ತೃಪ್ತಿಃ ಸ್ಯಾದ್ದಶಮಾಸಕೀ ॥೭॥

ಚಿತ್ರಮೃಗದ ಮಾಂಸದಿಂದ ಶ್ರಾದ್ಧಮಾಡಿದರೆ ಪಿತೃಗಳು ಎಂಟು ಮಾಸಗಳವರೆಗೆ ತೃಪ್ತರಾಗಿರುತ್ತಾರೆ. ಕೃಷ್ಣಮೃಗದ ಮಾಂಸದ ಮೂಲಕವಾಗಿ ಶ್ರಾದ್ಧಮಾಡಿದರೆ ಒಂಬತ್ತು ತಿಂಗಳವರೆಗೆ ತೃಪ್ತರಾಗಿರುತ್ತಾರೆ. ಗವಯದ (ಹಸುವಿನಂತೆ ಇರುವ ಒಂದು ಅರಣ್ಯಪ್ರಾಣಿ) ಮಾಂಸದ ಮೂಲಕವಾಗಿ ಶ್ರಾದ್ಧಮಾಡಿದರೆ ಹತ್ತು ಮಾಸಗಳವರೆಗೆ ತೃಪ್ತಿಯಿಂದಿರುತ್ತಾರೆ.

ಮಾಂಸೇನೈಕಾದಶ ಪ್ರೀತಿಃ ಪಿತೄಣಾಂ ಮಾಹಿಷೇಣ ತು ।
ಗವ್ಯೇನ ದತ್ತೇ ಶ್ರಾದ್ಧೇ ತು ಸಂವತ್ಸರಮಿಹೋಚ್ಯತೇ ॥೮॥

ಎಮ್ಮೆಯ ಮಾಂಸದಿಂದ ಶ್ರಾದ್ಧವನ್ನು ಮಾಡಿದರೆ ಹನ್ನೊಂದು

ತಿಂಗಳವರೆಗೆ ಪಿತೃಗಳು ತೃಪ್ತರಾಗಿರುತ್ತಾರೆ. ಗೋಸಂಬಂಧವಾದ ಹಾಲು-ಮೊಸರು-ತುಪ್ಪಗಳಿಂದ ಶ್ರಾದ್ಧಮಾಡಿದರೆ ಒಂದು ವರ್ಷದವರೆಗೆ ಪಿತೃಗಳು ತೃಪ್ತಿಯಿಂದಿರುತ್ತಾರೆ.

ಯಥಾ ಗವ್ಯಂ ತಥಾ ಯುಕ್ತಂ ಪಾಯಸಂ ಸರ್ಪಿಷಾ ಸಹ ।

ಗೋಸಂಬಂಧವಾದ ಹಾಲು-ಮೊಸರುಗಳಿಂದ ಪಿತೃಗಳು ಒಂದು ವರ್ಷದವರೆಗೆ ತೃಪ್ತರಾಗಿರುವಂತೆ–ತುಪ್ಪದಿಂದ ಮಿಶ್ರವಾದ ಪಾಯಸದ ಮೂಲಕವಾಗಿ ಶ್ರಾದ್ಧಮಾಡಿದರೂ ಒಂದು ವರ್ಷದವರೆಗೆ ತೃಪ್ತಿಯಿಂದಿರುತ್ತಾರೆ.

ವಾರ್ಧ್ರೀಣಸಸ್ಯ ಮಾಂಸೇನ ತೃಪ್ತಿರ್ದ್ವಾದಶವಾರ್ಷಿಕೀ ॥೯॥

ಘೇಂಡಾಮೃಗದ ಮಾಂಸದಿಂದ ಶ್ರಾದ್ಧಮಾಡಿದರೆ ಪಿತೃಗಳು ಹನ್ನೆರಡು ವರ್ಷಗಳು ತೃಪ್ತಿಯಿಂದಿರುತ್ತಾರೆ.

ಆನನ್ತ್ಯಾಯ ಭವೇದ್ದತ್ತಂ ಖಡ್ಗಮಾಂಸಂ ಪಿತೃಕ್ಷಯೇ ।
ಕಾಲಶಾಕಂ ಚ ಚಾಹಂ ಚಾಪ್ಯಾನನ್ತ್ಯಂ ಛಾಗ ಉಚ್ಯತೇ ॥೧೦॥

ಪಿತೃಗಳು ಮರಣಹೊಂದಿದ ದಿನದಲ್ಲಿ ಖಡ್ಗಮೃಗದ ಮಾಂಸದಿಂದ ಶ್ರಾದ್ಧಮಾಡಿದರೆ ಅನಂತಕಾಲದವರೆಗೂ ಅವರು ತೃಪ್ತಿಯಿಂದಿರುತ್ತಾರೆ. ಕರಿಬೇವು, ಕಾಂಚನವೃಕ್ಷದ ಹೂವು ಮತ್ತು ಆಡು (ಆಡಿನ ಮಾಂಸ)– ಇವು ಪಿತೃಗಳಿಗೆ ಅನಂತವಾದ ತೃಪ್ತಿಯನ್ನು ಉಂಟುಮಾಡುತ್ತವೆಂದು ಹೇಳುತ್ತಾರೆ.”

(ಕಲಿಯುಗದಲ್ಲಿ ಶ್ರಾದ್ಧಕರ್ಮಗಳಲ್ಲಿ ಮಾಂಸವು ನಿಷೇಧಿಸಲ್ಪಟ್ಟಿದೆ. ಈಗ ಅಂತಹ ಸಂಪ್ರದಾಯವಿರುವುದಿಲ್ಲ. ಮೇಲಾಗಿ ಇವು ಗ್ರಾಹ್ಯಗಳೂ ಅಲ್ಲ. ಉಪಯೋಗಿಸುತ್ತಿದ್ದ ಯುಗದಲ್ಲಿಯೇ ಅದು ಐಚ್ಛಿಕವಾಗಿತ್ತು. ‘ನಿವೃತ್ತಿಸ್ತು ಮಹಾಫಲಾ’ ಎಂದು ಮನುವು ಸ್ಪಷ್ಟವಾಗಿಯೇ ಹೇಳಿದ್ದಾನೆ.)

೮೮ನೆಯ ಅಧ್ಯಾಯವು ಮುಗಿಯಿತು.

೮೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಿಭಿನ್ನನಕ್ಷತ್ರಗಳಲ್ಲಿ ಶ್ರಾದ್ಧಮಾಡುವುದರಿಂದ ಪ್ರಾಪ್ತವಾಗುವ ಫಲಗಳ ವಿವರಣೆ

ಭೀಷ್ಮನು ಹೇಳುತ್ತಾನೆ:

ಯಮಸ್ತು ಯಾನಿ ಶ್ರಾದ್ಧಾನಿ ಪ್ರೋವಾಚ ಶಶಬಿನ್ದವೇ ।
ತಾನಿ ಮೇ ಶೃಣು ಕಾಮ್ಯಾನಿ ನಕ್ಷತ್ರೇಷು ಪೃಥಕ್ಪೃಥಕ್ ॥೧॥

"ಯುಧಿಷ್ಠಿರ! ಯಮನು ಶಶಬಿಂದುವಿಗೆ ಭಿನ್ನ-ಭಿನ್ನನಕ್ಷತ್ರಗಳಲ್ಲಿ ಮಾಡಬೇಕಾದ ಕಾಮ್ಯಶ್ರಾದ್ಧಗಳನ್ನು ಹೇಳಿರುವನು. ಅದನ್ನು ನಿನಗೂ ಹೇಳುವೆನು; ಕೇಳು:

ಶ್ರಾದ್ಧಂ ಯಃ ಕೃತ್ತಿಕಾಯೋಗೇ ಕುರ್ವೀತ ಸತತಂ ನರಃ ।
ಅಗ್ನೀನಾಧಾಯ ಸಾಪತ್ಯೋ ಯಜೇತ ವಿಗತಜ್ವರಃ ॥೨॥

ಯಾವ ಮನುಷ್ಯನು ಕೃತ್ತಿಕಾನಕ್ಷತ್ರವಿದ್ದ ದಿನದಲ್ಲಿ ಶ್ರಾದ್ಧವನ್ನು ಮಾಡುವನೋ–ಅವನು ಪುತ್ರವಂತನಾಗಿ, ರೋಗಗಳಿಂದಲೂ, ಚಿಂತೆಗಳಿಂದಲೂ ವಿಮುಕ್ತನಾಗಿ ಅಗ್ನ್ಯಾಧಾನವನ್ನು ಮಾಡಿ ಯಾಗಗಳನ್ನು ಮಾಡುವನು.

ಅಪತ್ಯಕಾಮೋ ರೋಹಿಣ್ಯಾಂ ತೇಜಸ್ಕಾಮೋ ಮೃಗೋತ್ತಮೇ ।
ಕ್ರೂರಕರ್ಮಾ ದದಚ್ಛ್ರಾದ್ಧಮಾರ್ದ್ರಾಯಾಂ ಮಾನವೋ ಭವೇತ್ ॥೩॥

ಸತ್ಸಂತಾನವನ್ನು ಅಪೇಕ್ಷಿಸುವವನು ರೋಹಿಣೀನಕ್ಷತ್ರಯುಕ್ತವಾದ ದಿನದಲ್ಲಿಯೂ, ತೇಜಸ್ಸನ್ನು ಅಪೇಕ್ಷಿಸುವವನು ಮೃಗಶಿರಾನಕ್ಷತ್ರಯುಕ್ತವಾದ ದಿನದಲ್ಲಿಯೂ ಶ್ರಾದ್ಧಮಾಡಬೇಕು. ಆರ್ದ್ರಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಕ್ರೂರಿಯಾಗುತ್ತಾನೆ. (ಆದುದರಿಂದ ಆರ್ದ್ರಾನಕ್ಷತ್ರದಲ್ಲಿ ಶ್ರಾದ್ಧವನ್ನು ಮಾಡಬಾರದು.)

ಧನಕಾಮೋ ಭವೇನ್ಮರ್ತ್ಯಃ ಕುರ್ವಞ್ಶ್ರಾದ್ಧಂ ಪುನರ್ವಸೌ ।
ಪುಷ್ಟಿಕಾಮೋಽಥ ಪುಷ್ಯೇಣ ಶ್ರಾದ್ಧಮೀಹೇತ ಮಾನವಃ ॥೪॥

ಧನಕಾಮನು ಪುನರ್ವಸುನಕ್ಷತ್ರಯುಕ್ತವಾದ ದಿನದಲ್ಲಿಯೂ,

ಪುಷ್ಟಿಕಾಮನು ಪುಷ್ಯನಕ್ಷತ್ರಯುಕ್ತವಾದ ದಿನದಲ್ಲಿಯೂ ಶ್ರಾದ್ಧವನ್ನು ಮಾಡಬೇಕು

ಆಶ್ಲೇಷಾಯಾಂ ದದಚ್ಛ್ರಾದ್ಧಂ ಧೀರಾನ್ಪುತ್ರಾನ್ಪ್ರಜಾಯತೇ ।
ಜ್ಞಾತೀನಾಂ ತು ಭವೇಚ್ಛ್ರೇಷ್ಠೋ ಮಘಾಸು ಶ್ರಾದ್ಧಮಾವಪನ್ ॥೫॥

ಆಶ್ಲೇಷಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಧೀರರಾದ ಮಕ್ಕಳನ್ನು ಪಡೆಯುತ್ತಾನೆ. ಮಘಾನಕ್ಷತ್ರದಲ್ಲಿ ಶ್ರಾದ್ಧಮಾಡಿ ಪಿತೃಗಳಿಗೆ ಪಿಂಡಪ್ರದಾನ ಮಾಡುವವನು ತನ್ನ ಜ್ಞಾತಿ-ಬಾಂಧವರೆಲ್ಲರಿಗಿಂತಲೂ ಶ್ರೇಷ್ಠನಾಗುತ್ತಾನೆ.

ಫಲ್ಗುನೀಷು ದದಚ್ಛ್ರಾದ್ಧಂ ಸುಭಗಃ ಶ್ರಾದ್ಧದೋ ಭವೇತ್ ।
ಅಪತ್ಯಭಾಗುತ್ತರಾಸು ಹಸ್ತೇನ ಫಲಭಾಗ್ಭವೇತ್ ॥೬॥

ಪೂರ್ವಫಲ್ಗುನೀನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಸೌಭಾಗ್ಯಶಾಲಿ ಯಾಗುತ್ತಾನೆ. ಉತ್ತರಫಲ್ಗುನೀನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಪುತ್ರ ವಂತನಾಗುತ್ತಾನೆ. ಹಸ್ತನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಅಭೀಷ್ಟವಾದ ಫಲವನ್ನು ಹೊಂದುತ್ತಾನೆ.

ಚಿತ್ರಾಯಾಂ ತು ದದಚ್ಛ್ರಾದ್ಧಂ ಲಭೇದ್ರೂಪವತಃ ಸುತಾನ್ ।
ಸ್ವಾತಿಯೋಗೇ ಪಿತೄನರ್ಚ್ಯ ವಾಣಿಜ್ಯಮುಪಜೀವತಿ ॥೭॥

ಚಿತ್ತಾನಕ್ಷತ್ರದಲ್ಲಿ ಶ್ರಾದ್ಧಮಾಡಿ ಪಿಂಡಪ್ರದಾನವನ್ನು ಮಾಡುವವನು ರೂಪವಂತರಾದ ಮಕ್ಕಳನ್ನು ಪಡೆಯುತ್ತಾನೆ. ಸ್ವಾತೀನಕ್ಷತ್ರದಲ್ಲಿ ಪಿತೃ ಯಜ್ಞವನ್ನು ಮಾಡುವವನು ವಾಣಿಜ್ಯವೃತ್ತಿಯಿಂದ ಜೀವಿಸುತ್ತಾನೆ.

ಬಹುಪುತ್ರೋ ವಿಶಾಖಾಸು ಪುತ್ರಮೀಹನ್ಭವೇನ್ನರಃ ।
ಅನುರಾಧಾಸು ಕುರ್ವಾಣೋ ರಾಜಚಕ್ರಂ ಪ್ರವರ್ತಯೇತ್ ॥೮॥

ಪುತ್ರಾಪೇಕ್ಷಿಯಾಗಿ ವಿಶಾಖಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಬಹುಪುತ್ರರನ್ನು ಪಡೆಯುತ್ತಾನೆ. ಅನುರಾಧಾನಕ್ಷತ್ರದಲ್ಲಿ ಶ್ರಾದ್ಧಮಾಡು ವವನು ರಾಜ್ಯಮಂಡಲದ ಶಾಸಕನಾಗುತ್ತಾನೆ.

ಆಧಿಪತ್ಯಂ ವ್ರಜೇನ್ಮರ್ತ್ಯೋ ಜ್ಯೇಷ್ಠಾಯಾಮಪವರ್ಜಯನ್ ।
ನರಃ ಕುರುಕುಲಶ್ರೇಷ್ಠ ಋದ್ಧೋ ದಮಪುರಃಸರಃ ॥೯॥

ಕುರುಕುಲಶ್ರೇಷ್ಠನೇ! ಜ್ಯೇಷ್ಠಾನಕ್ಷತ್ರದಲ್ಲಿ ಇಂದ್ರಿಯಸಂಯಮ

ಪೂರ್ವಕವಾಗಿ ಪಿಂಡಪ್ರದಾನಮಾಡುವ ಮನುಷ್ಯನು ಸಮೃದ್ಧಿಶಾಲಿಯಾಗುತ್ತಾನೆ ಮತ್ತು ಜನ್ಮಾಂತರದಲ್ಲಿ ಪ್ರಭುತ್ವವನ್ನು ಪಡೆಯುತ್ತಾನೆ.

ಮೂಲೇ ತ್ವಾರೋಗ್ಯಮೃಚ್ಛೇತ ಯಶೋಽಷಾಢಾಸು ಚೋತ್ತಮಮ್ ।
ಉತ್ತರಾಸು ತ್ವಷಾಢಾಸು ವೀತಶೋಕಶ್ಚರೇನ್ಮಹೀಮ್ ॥೧೦॥

ಮೂಲನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಆರೋಗ್ಯವಂತನಾಗಿರುತ್ತಾನೆ. ಪೂರ್ವಾಷಾಢಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಉತ್ತಮವಾದ ಯಶಸ್ಸನ್ನು ಗಳಿಸುತ್ತಾನೆ. ಉತ್ತರಾಷಾಢಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಶೋಕರಹಿತನಾಗಿ ಪೃಥ್ವಿಯಲ್ಲಿ ಸಂಚರಿಸುತ್ತಾನೆ.

ಶ್ರಾದ್ಧಂ ತ್ವಭಿಜಿತಾ ಕುರ್ವನ್ಭಿಷಕ್ಸಿದ್ಧಿಮವಾಪ್ನುಯಾತ್ ।
ಶ್ರವಣೇಷು ದದಚ್ಛ್ರಾದ್ಧಂ ಪ್ರೇತ್ಯ ಗಚ್ಛೇತ್ಸ ಸದ್ಗತಿಮ್ ॥೧೧॥

ಅಭಿಜಿನ್ನಕ್ಷತ್ರದಲ್ಲಿ ಶ್ರಾದ್ಧಮಾಡುವವನು ವೈದ್ಯಶಾಸ್ತ್ರದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ. (ಉತ್ತಮವೈದ್ಯನಾಗುತ್ತಾನೆ.) ಶ್ರವಣನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಅವಸಾನಾನಂತರದಲ್ಲಿ ಸದ್ಗತಿಯನ್ನು ಪಡೆಯುತ್ತಾನೆ.

ರಾಜ್ಯಭಾಗೀ ಧನಿಷ್ಠಾಯಾಂ ಭವೇತ ನಿಯತಂ ನರಃ ।
ನಕ್ಷತ್ರೇ ವಾರುಣೇ ಕುರ್ವನ್ಭಿಷಕ್ಸಿದ್ಧಿಮವಾಪ್ನುಯಾತ್ ॥೧೨॥

ಧನಿಷ್ಠಾನಕ್ಷತ್ರದಲ್ಲಿ ನಿಯಮಪೂರ್ವಕವಾಗಿ ಶ್ರಾದ್ಧವನ್ನು ಮಾಡುವವನು ರಾಜ್ಯಕ್ಕೆ ಅಧಿಪತಿಯಾಗುತ್ತಾನೆ. ವರುಣನ ಸಂಬಂಧವಾದ ಶತಭಿಷಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ವೈದ್ಯಸಿದ್ಧಿಯನ್ನು ಪಡೆಯುತ್ತಾನೆ.

ಪೂರ್ವಪ್ರೋಷ್ಠಪದಾಃ ಕುರ್ವನ್ಬಹೂನ್ವಿನ್ದತ್ಯಜಾವಿಕಾಮ್ ।
ಉತ್ತರಾಸು ಪ್ರಕುರ್ವಾಣೋ ವಿನ್ದತೇ ಗಾಃ ಸಹಸ್ರಶಃ ॥೧೩॥

ಪೂರ್ವಭಾದ್ರಪದಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಬಹುಸಂಖ್ಯಾತವಾದ ಆಡು-ಕುರಿಗಳನ್ನು ಹೊಂದುತ್ತಾನೆ. ಉತ್ತರಾಭಾದ್ರಪದಾನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಸಾವಿರಾರು ಗೋವುಗಳನ್ನು ಹೊಂದುತ್ತಾನೆ.

ಬಹುಕುಪ್ಯಕೃತಂ ವಿತ್ತಂ ವಿನ್ದತೇ ರೇವತೀಂ ಶ್ರಿತಃ ।
ಅಶ್ವನೀಷ್ವಶ್ವಾನ್ವಿನ್ದೇತ ಭರಣೀಷ್ವಾಯುರುತ್ತಮಮ್ ॥೧೪॥

ರೇವತೀನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಚಿನ್ನ-ಬೆಳ್ಳಿ-ಈ ಎರಡನ್ನು ಬಿಟ್ಟು ಉಳಿದೆಲ್ಲ ವಿಧವಾದ ಸಂಪತ್ತನ್ನೂ ಪಡೆಯುತ್ತಾನೆ. ಅಶ್ವಿನೀನಕ್ಷತ್ರದಲ್ಲಿ ಶ್ರಾದ್ಧಮಾಡುವವನು ಕುದುರೆಗಳನ್ನು ಹೊಂದುತ್ತಾನೆ. ಭರಣೀನಕ್ಷತ್ರದಲ್ಲಿ ಶ್ರಾದ್ಧಮಾಡಿ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡುವವನು ಉತ್ತಮಾಯುಷ್ಯವನ್ನು (ದೀರ್ಘಾಯುಷ್ಯವನ್ನು) ಹೊಂದುತ್ತಾನೆ.

ಯುಧಿಷ್ಠಿರ! ಯಮನು ಹೇಳಿದ ಈ ಶ್ರಾದ್ಧವಿಧಿಯನ್ನು ಕೇಳಿ ಶಶಬಿಂದುವು ಆಯಾ ನಕ್ಷತ್ರಗಳಲ್ಲಿ ಶ್ರಾದ್ಧಕರ್ಮವನ್ನು ಮಾಡಿದನು. ಅದರ ಫಲವಾಗಿ ಆ ರಾಜನು ಸ್ವಲ್ಪವೂ ಕ್ಲೇಶವೇ ಇಲ್ಲದೇ ಪೃಥ್ವಿಯನ್ನು ಜಯಿಸಿ ಆಳತೊಡಗಿದನು."

ಲ೯ನೆಯ ಅಧ್ಯಾಯವು ಮುಗಿಯಿತು.

೯೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರಾದ್ಧಗಳಲ್ಲಿ ಬ್ರಾಹ್ಮಣರ ಪರೀಕ್ಷೆ: ಪಂಕ್ತಿದೂಷಕರಾದ ಮತ್ತು ಪಂಕ್ತಿಪಾವನರಾದ ಬ್ರಾಹ್ಮಣರ ವರ್ಣನೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕೀದೃಶೇಭ್ಯಃ ಪ್ರದಾತವ್ಯಂ ಭವೇಚ್ಛ್ರಾದ್ಧಂ ಪಿತಾಮಹ ।
ದ್ವಿಜೇಭ್ಯಃ ಕುರುಶಾರ್ದೂಲ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

"ಕುರುಶಾರ್ದೂಲನಾದ ಪಿತಾಮಹನೇ! ಎಂತಹ ಬ್ರಾಹ್ಮಣರಿಗೆ ಶ್ರಾದ್ಧದಲ್ಲಿ ಆಮಂತ್ರಣವನ್ನು ಕೊಡಬೇಕು? ಈ ವಿಷಯವನ್ನು ನನಗಾಗಿ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ:

ಬ್ರಾಹ್ಮಣಾನ್ನ ಪರೀಕ್ಷೇತ ಕ್ಷತ್ರಿಯೋ ದಾನಧರ್ಮವಿತ್ ।
ದೈವೇ ಕರ್ಮಣಿ ಪಿತ್ರ್ಯೇ ತು ನ್ಯಾಯಮಾಹುಃ ಪರೀಕ್ಷಣಮ್ ॥೨॥

"ಯುಧಿಷ್ಠಿರ! ದಾನಧರ್ಮದ ರಹಸ್ಯವನ್ನು ತಿಳಿದಿರುವ ಕ್ಷತ್ರಿಯನು ದೈವಸಂಬಂಧವಾದ ಕರ್ಮದಲ್ಲಿ (ಯಜ್ಞಾದಿಗಳಲ್ಲಿ) ಬ್ರಾಹ್ಮಣರನ್ನು ಪರೀಕ್ಷಿಸಬಾರದು. ಆದರೆ ಪಿತೃಕಾರ್ಯಗಳಿಗೆ ನಿಮಂತ್ರಿಸುವಾಗ ಅವರನ್ನು ಪರೀಕ್ಷಿಸಿ ಆಮಂತ್ರಿಸುವುದು ನ್ಯಾಯವಾದುದೆಂದು ವಿದ್ವಾಂಸರು ಹೇಳುತ್ತಾರೆ.

ದೇವತಾಃ ಪೂಜಯನ್ತೀಹ ದೈವೇನೈವೇಹ ತೇಜಸಾ ।
ಉಪೇತ್ಯ ತಸ್ಮಾದ್ದೇವೇಭ್ಯಃ ಸರ್ವೇಭ್ಯೋ ದಾಪಯೇನ್ನರಃ ॥೩॥

ದೇವತೆಗಳು ದೈವಿಕವಾದ ತೇಜಸ್ಸಿನಿಂದ ಯುಕ್ತರಾಗಿದ್ದರೂ ಈ ಜಗತ್ತಿನಲ್ಲಿ ಬ್ರಾಹ್ಮಣರ ಪೂಜೆಯನ್ನು ಮಾಡುತ್ತಾರೆ. (ಬ್ರಾಹ್ಮಣರನ್ನು ಸಮಾದರಿಸುತ್ತಾರೆ.) ಆದುದರಿಂದ ದೇವತೆಗಳನ್ನುದ್ದೇಶಿಸಿ ಎಲ್ಲ ಬ್ರಾಹ್ಮಣರಿಗೂ ದಾನವನ್ನು ಕೊಡಬೇಕು. (ಅವರ ಯೋಗ್ಯತೆಯನ್ನು ಪರೀಕ್ಷಿಸಬೇಕಾಗಿಲ್ಲ.) (ದೈವಕರ್ಮಗಳಲ್ಲಿ ದೈವತೇಜಸ್ಸಿನಿಂದಲೇ ಫಲಪ್ರಾಪ್ತಿ ಯಾಗುವುದರಿಂದ ಬ್ರಾಹ್ಮಣರನ್ನು ಪರೀಕ್ಷಿಸದೇ ದಾನಮಾಡಬಹುದು. ಆದರೆ ಶ್ರಾದ್ಧಗಳಲ್ಲಿ ತತ್ರ ಪಿತರೋ ದೇವತಾ ಬ್ರಾಹ್ಮಣಸ್ತ್ವಾಹವನೀಯಾರ್ಥೇ– ಎಂಬ ವಚನದಂತೆ ಬ್ರಾಹ್ಮಣರೇ ಮುಖ್ಯರಾದುದರಿಂದ-ಪರೀಕ್ಷಿಸಬೇಕು.)

ಶ್ರಾದ್ಧೇ ತ್ವಥ ಮಹಾರಾಜ ಪರೀಕ್ಷೇದ್ಬ್ರಾಹ್ಮಣಾನ್ಬುಧಃ ।
ಕುಲಶೀಲವಯೋರೂಪೈರ್ವಿದ್ಯಯಾಭಿಜನೇನ ಚ ॥೪॥

ಆದರೆ ಶ್ರಾದ್ಧಕ್ಕೆ ಆಮಂತ್ರಿಸುವಾಗ ವಿದ್ವಾಂಸನಾದ ಬ್ರಾಹ್ಮಣನ ಕುಲ, ಶೀಲ, ವಯಸ್ಸು, ರೂಪ, ವಿದ್ಯೆ ಮತ್ತು ಅವನ ವಂಶಜರು– ಮುಂತಾದುವನ್ನು ಪರೀಕ್ಷಿಸಬೇಕು.

ಬ್ರಾಹ್ಮಣರಲ್ಲಿ ಕೆಲವರು ಪಂಕ್ತಿದೂಷಕರಾಗಿಯೂ ಕೆಲವರು ಪಂಕ್ತಿಪಾವನರಾಗಿಯೂ ಇರುತ್ತಾರೆ. ಮೊದಲು ನಾನು ಅಪಾಂಕ್ತೇಯರ ವಿಷಯವಾಗಿ ಹೇಳುತ್ತೇನೆ.*

---

*ಪಂಕ್ತಿದೂಷಕರು, ಪಂಕ್ತಿಪಾವನರು-ಎಂದರೆ: ಭೋಜನಕ್ಕೆ ಜೊತೆಯಲ್ಲಿ ಕುಳಿತುಕೊಳ್ಳಲು ಅಯೋಗ್ಯರಾದವರು ಮತ್ತು ಕುಳಿತುಕೊಳ್ಳಲು ಯೋಗ್ಯರಾದವರು- ಎಂದರ್ಥ. ಅಪಾಂಕ್ತೇಯನೊಬ್ಬನು ಮಧ್ಯದಲ್ಲಿ ಕುಳಿತರೆ ಆ ಪಂಕ್ತಿಯೇ ದೂಷ್ಯವಾಗುತ್ತದೆ. ಹಾಗೆಯೇ ಪುಣ್ಯಾತ್ಮನೊಬ್ಬನು ಕುಳಿತರೆ ಆ ಪಂಕ್ತಿಯೇ ಪಾವನವಾಗುತ್ತದೆ.

ಕಿತವೋ ಭ್ರೂಣಹಾ ಯಕ್ಷ್ಮೀ ಪಶುಪಾಲೋ ನಿರಾಕೃತಿಃ ।
ಗ್ರಾಮಪ್ರೇಷ್ಯೋ ವಾರ್ಧುಷಿಕೋ ಗಾಯನಃ ಸರ್ವವಿಕ್ರಯೀ ॥೬॥
ಆಗಾರದಾಹೀ ಗರದಃ ಕುಣ್ಡಾಶೀ ಸೋಮವಿಕ್ರಯೀ ।
ಸಾಮುದ್ರಿಕೋ ರಾಜಭೃತ್ಯಸ್ತೈಲಿಕಃ ಕೂಟಕಾರಕಃ ॥೭॥
ಪಿತ್ರಾ ವಿವದಮಾನಶ್ಚ ಯಸ್ಯ ಚೋಪಪತಿರ್ಗೃಹೇ ।
ಅಭಿಶಸ್ತಸ್ತಥಾ ಸ್ತೇನಃ ಶಿಲ್ಪಂ ಯಶ್ಚೋಪಜೀವತಿ ॥೮॥
ಪರ್ವಕಾರಶ್ಚ ಸೂಚೀ ಚ ಮಿತ್ರಧ್ರುಕ್ಪಾರದಾರಿಕಃ ।
ಅವ್ರತಾನಾಮುಪಾಧ್ಯಾಯಃ ಕಾಣ್ಡಪೃಷ್ಠಸ್ತಥೈವ ಚ ॥೯॥
ಶ್ವಭಿಶ್ಚ ಯಃ ಪರಿಕ್ರಾಮೇದ್ಯಃ ಶುನಾ ದಷ್ಟ ಏವ ಚ ।
ಪರಿವಿತ್ತಿಶ್ಚ ಯಶ್ಚ ಸ್ಯಾದ್ದುಶ್ಚರ್ಮಾ ಗುರುತಲ್ಪಗಃ ॥೧೦॥
ಕುಶೀಲವೋ ದೇವಲಕೋ ನಕ್ಷತ್ರೈರ್ಯಶ್ಚ ಜೀವತಿ ।
ಈದೃಶೈರ್ಬ್ರಾಹ್ಮಣೈರ್ಭುಕ್ತಮಪಾಙ್ಕ್ತೇಯೈರ್ಯುಧಿಷ್ಠಿರ ।
ರಕ್ಷಾಂಸಿ ಗಚ್ಛತೇ ಹವ್ಯಮಿತ್ಯಾಹುರ್ಬ್ರಹ್ಮವಾದಿನಃ ॥೧೧॥

ಜೂಜಾಡುವವನು, ಭ್ರೂಣಹತ್ಯೆಯನ್ನು ಮಾಡಿದವನು, ಕ್ಷಯರೋಗ ಪೀಡಿತನಾಗಿರುವವನು, ಪಶುಗಳನ್ನು ಪಾಲನೆಮಾಡುವವನು, ಅವಿದ್ಯಾವಂತನು, ಗ್ರಾಮಸೇವಕನು, ಬಡ್ಡಿಯಿಂದ ಜೀವಿಸುವವನು, ಗಾಯಕನು, ಎಲ್ಲ ವಿಧವಾದ ವಸ್ತುಗಳನ್ನೂ ಮಾರುವವನು, ಇತರರ ಮನೆಗೆ ಬೆಂಕಿ ಹಚ್ಚಿದವನು, ವಿಷಕೊಟ್ಟವನು, [1]ಕುಂಡನ ಮನೆಯಲ್ಲಿ ಊಟಮಾಡುವವನು, ಸೋಮಲತೆಯನ್ನು ಮಾರುವವನು, ಸಾಮುದ್ರಿಕಾಶಾಸ್ತ್ರದಿಂದ (ಹಸ್ತರೇಖಾಶಾಸ್ತ್ರದಿಂದ) ಜೀವನವನ್ನು ನಿರ್ವಹಿಸುವವನು, ರಾಜಸೇವಕನು, ಎಣ್ಣೆಯನ್ನು ಮಾರುವವನು, ಸುಳ್ಳುಸಾಕ್ಷ್ಯವನ್ನು ಹೇಳುವವನು, ತಂದೆಯೊಡನೆ ಜಗಳವಾಡಿದವನು, ಪತ್ನಿಯ ಉಪಪತಿಗೆ ಮನೆಯಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟವನು, ಅಭಿಶಸ್ತನಾದವನು (ಕಲಂಕಿತನು) ಕಳ್ಳನು, ಶಿಲ್ಪವಿದ್ಯೆಯಿಂದಲೇ ಜೀವಿಸುವವನು, ಪರ್ವದಿವಸಗಳಲ್ಲಿ ಸ್ತ್ರೀಸಮಾಗಮವನ್ನು

---

೧ ಪತಿಯು ಜೀವಿಸಿರುವಾಗ ಪರಪುರುಷನಿಂದ ಹುಟ್ಟಿದವನು ಕುಂಡ.

ಮಾಡುವವನು, ಚಾಡಿಕೋರನು, ಮಿತ್ರದ್ರೋಹಿಯು, ಪರಸ್ತ್ರೀಲಂಪಟನು, ವ್ರತಾನುಷ್ಠಾನರಹಿತರಾದವರ ಅಧ್ಯಾಪಕನು, ಆಯುಧಗಳನ್ನು ತಯಾರಿಸಿ ಅದರ ಮಾರಾಟದಿಂದ ಜೀವಿಸುವವನು, ನಾಯಿಯ ಜೊತೆಯಲ್ಲಿ ತಿರುಗಾಡುವವನು, ನಾಯಿಯಿಂದ ಕಚ್ಚಿಸಿಕೊಂಡವನು, ಪರಿವಿತ್ತಿಯು,* ಚರ್ಮರೋಗಿಯು, ಗುರುಪತ್ನಿಯೊಡನೆ ಸಮಾಗಮಮಾಡಿದವನು, ನಾನಾ ಪಾತ್ರಗಳ ಅಭಿನಯವನ್ನು ಮಾಡುವವನು (ವೇಷಾಂತರಗಳನ್ನು ಧರಿಸುವವನು), ದೇವಸ್ಥಾನದ ಪೂಜೆಯಿಂದ ಜೀವಿಸುವವನು, ನಕ್ಷತ್ರಗಳ ಫಲಗಳನ್ನು ಹೇಳಿಕೊಂಡು ಜೀವಿಸುವವನು-ಇವರೆಲ್ಲರೂ ಪಂಕ್ತಿಬಾಹಿರ ರಾದ ಬ್ರಾಹ್ಮಣರಾಗಿರುತ್ತಾರೆ. ಇಂತಹ ಪಂಕ್ತಿದೂಷಕರಾದ ಬ್ರಾಹ್ಮಣರು ತಿಂದ ಅನ್ನವು ರಾಕ್ಷಸರಿಗೆ ಸೇರುವುದೆಂದು ಬ್ರಹ್ಮವಾದಿಗಳು ಹೇಳುತ್ತಾರೆ.

ಶ್ರಾದ್ಧಂ ಭುಕ್ತ್ವಾ ತ್ವಧೀಯೀತ ವೃಷಲೀತಲ್ಪಗಶ್ಚ ಯಃ ।
ಪುರೀಷೇ ತಸ್ಯ ತೇ ಮಾಸಂ ಪಿತರಸ್ತಸ್ಯ ಶೇರತೇ ॥೧೨॥

ಯಾವ ಬ್ರಾಹ್ಮಣನು ಶ್ರಾದ್ಧಭೋಜನವನ್ನು ಮಾಡಿ ಅದೇ ದಿನ ವೇದಾಧ್ಯಯನಮಾಡುವನೋ, ಶೂದ್ರಸ್ತ್ರೀಯೊಡನೆ ಸಮಾಗಮಮಾಡು ವನೋ–ಅಂತಹವನ ಪಿತೃಗಳು ಆ ದಿನ ಮೊದಲಾಗಿ ಒಂದು ಮಾಸದವರೆಗೆ ಅವನ ಪುರೀಷದಲ್ಲಿ (ವಿಷ್ಠೆಯಲ್ಲಿ) ವಾಸಮಾಡುತ್ತಾರೆ.

ಸೋಮವಿಕ್ರಯಿಣೇ ವಿಷ್ಠಾ ಭಿಷಜೇ ಪೂಯಶೋಣಿತಮ್ ।
ನಷ್ಟಂ ದೇವಲಕೇ ದತ್ತಮಪ್ರತಿಷ್ಠಂ ಚ ವಾರ್ಧುಷೇ ॥೧೩॥
ಯತ್ತು ವಾಣಿಜಕೇ ದತ್ತಂ ನೇಹ ನಾಮುತ್ರ ತದ್ಭವೇತ್ ॥೧೪॥

ಸೋಮಲತೆಯನ್ನು ವಿಕ್ರಯಿಸುವ ಬ್ರಾಹ್ಮಣನನ್ನು ನಿಮಂತ್ರಿಸಿ ಶ್ರಾದ್ಧದಲ್ಲಿ ಭೋಜನಮಾಡಿಸಿದರೆ ಪಿತೃಗಳಿಗೆ ಪುರೀಷವನ್ನು ಕೊಟ್ಟಂತಾಗುತ್ತದೆ. ವೈದ್ಯನನ್ನು ನಿಮಂತ್ರಿಸಿ ಶ್ರಾದ್ಧದಲ್ಲಿ ಭೋಜನಮಾಡಿಸಿ

---

* ತಮ್ಮನಿಗೆ ಮದುವೆಯಾದರೂ ಮದುವೆಯಾಗದೇ ಇರುವ ಅಣ್ಣನು ಪರಿವಿತ್ತಿ ಎನಿಸಿಕೊಳ್ಳುತ್ತಾನೆ.

ದರೆ ಪಿತೃಗಳಿಗೆ ಕೀವು ಮತ್ತು ರಕ್ತವನ್ನು ಕೊಟ್ಟಂತಾಗುತ್ತದೆ. ದೇವಾಲಯದ ಪೂಜಾರಿಗೆ ಶ್ರಾದ್ಧದಲ್ಲಿ ಭೋಜನಮಾಡಿಸುವುದರಿಂದ ಶ್ರಾದ್ಧವೇ ನಷ್ಟವಾಗಿ ಹೋಗುತ್ತದೆ. ಪಿತೃಗಳಿಗೂ ತೃಪ್ತಿಯಾಗುವುದಿಲ್ಲ. ಕರ್ತೃವಿಗೂ ಯಾವ ಫಲವೂ ಲಭಿಸುವುದಿಲ್ಲ. ಬಡ್ಡಿಯಿಂದ ಜೀವಿಸುವವನನ್ನು ನಿಮಂತ್ರಿಸಿ ಶ್ರಾದ್ಧದಲ್ಲಿ ಭೋಜನಮಾಡಿಸಿದರೆ ಫಲವು ಅಸ್ಥಿರವಾಗುತ್ತದೆ. ವಾಣಿಜ್ಯವೃತ್ತಿಯಿಂದ ಜೀವಿಸುವ ಬ್ರಾಹ್ಮಣನನ್ನು ನಿಮಂತ್ರಿಸಿ ಶ್ರಾದ್ಧದಲ್ಲಿ ಭೋಜನಮಾಡಿಸಿದರೆ ಐಹಿಕಫಲವೂ ಇಲ್ಲ; ಆಮುಷ್ಮಿಕಫಲವೂ ಇಲ್ಲ. ಶ್ರಾದ್ಧವೇ ನಿರರ್ಥಕವಾಗುತ್ತದೆ.

ಭಸ್ಮನೀವ ಹುತಂ ಹವ್ಯಂ ತಥಾ ಪೌನರ್ಭವೇ ದ್ವಿಜೇ ।
ಯೇ ತು ಧರ್ಮವ್ಯಪೇತೇಷು ಚಾರಿತ್ರಾಪಗತೇಷು ಚ ।
ಹವ್ಯಂ ಕವ್ಯಂ ಪ್ರಯಚ್ಛನ್ತಿ ತೇಷಾಂ ತತ್ಪ್ರೇತ್ಯ ನಶ್ಯತಿ ॥೧೫॥

ಪೌನರ್ಭವನನ್ನು* ನಿಮಂತ್ರಿಸಿ ಶ್ರಾದ್ಧದಲ್ಲಿ ಭೋಜನಮಾಡಿಸಿದರೆ ಭಸ್ಮದಲ್ಲಿ ಹೋಮಮಾಡಿದ ಹವ್ಯದಂತೆ ಶ್ರಾದ್ಧವೇ ನಷ್ಟವಾಗಿ ಹೋಗುತ್ತದೆ. ಯಾರು ಧರ್ಮಹೀನರಾದ ಮತ್ತು ಚಾರಿತ್ರಹೀನರಾದ ಬ್ರಾಹ್ಮಣರಿಗೆ ಹವ್ಯ-ಕವ್ಯಗಳನ್ನು ಕೊಡುವರೋ (ಶ್ರಾದ್ಧಾದಿಗಳಿಗೆ ನಿಮಂತ್ರಿಸುವರೋ)– ಅಂತಹವರ ಕರ್ಮದ ಫಲವು ಪರಲೋಕದಲ್ಲಿ ನಷ್ಟವಾಗಿ ಹೋಗುತ್ತದೆ.

ಜ್ಞಾನಪೂರ್ವಂ ತು ಯೇ ತೇಭ್ಯಃ ಪ್ರಯಚ್ಛನ್ತ್ಯಲ್ಪಬುದ್ಧಯಃ ।
ಪುರೀಷಂ ಭುಞ್ಜತೇ ತೇಷಾಂ ಪಿತರಃ ಪ್ರೇತ್ಯ ನಿಶ್ಚಯಃ ॥೧೬॥

ಯಾವ ಮೂರ್ಖರು ತಿಳಿದೂ-ತಿಳಿದೂ ಅಂತಹ ಪಂಕ್ತಿದೂಷಕರಾದವರನ್ನು ಶ್ರಾದ್ಧಕ್ಕೆ ನಿಮಂತ್ರಿಸಿ ಭೋಜನಮಾಡಿಸುವರೋ–ಅವರ ಪಿತೃಗಳು ನಿಶ್ಚಯವಾಗಿಯೂ ಪರಲೋಕದಲ್ಲಿ ಆ ಅಪಾಂಕ್ತೇಯರ ವಿಷ್ಠೆಯನ್ನೇ ತಿನ್ನುತ್ತಾರೆ.

ಏತಾನಿಮಾನ್ವಿಜಾನೀಯಾದಪಾಙ್ಕ್ತೇಯಾನ್ದ್ವಿಜಾಧಮಾನ್ ।
ಶೂದ್ರಾಣಾಮುಪದೇಶಂ ಚ ಯೇ ಕುರ್ವನ್ತ್ಯಲ್ಪಚೇತಸಃ ॥೧೭॥

---

* ಪೌನರ್ಭವಃ ಎರಡನೆಯ ಸಲ ಮದುವೆಯಾದವಳ ಮಗ.

ಇಂತಹ ಅಧಮಬ್ರಾಹ್ಮಣರನ್ನು ಪಂಕ್ತಿಬಾಹಿರರೆಂದು ತಿಳಿಯಬೇಕು. ಶೂದ್ರನಿಗೆ ವೇದೋಪದೇಶವನ್ನು ಮಾಡುವ ಮೂರ್ಖಬ್ರಾಹ್ಮಣರನ್ನೂ ಪಂಕ್ತಿಬಾಹಿರರೆಂದೇ ತಿಳಿಯಬೇಕು.

ಷಷ್ಟಿಂ ಕಾಣಃ ಶತಂ ಷಣ್ಡಃ ಶ್ವಿತ್ರೀ ಯಾವತ್ಪ್ರಪಶ್ಯತಿ ।
ಪಙ್ಕ್ತ್ಯಾಂ ಸಮುಪವಿಷ್ಟಾಯಾಂ ತಾವದ್ದೂಷಯತೇ ನೃಪ ॥೧೮॥

ಒಕ್ಕಣ್ಣನು ತನ್ನ ಪಂಕ್ತಿಯಲ್ಲಿರುವ ಅರುವತ್ತು ಜನರನ್ನು ದೂಷ್ಯರನ್ನಾಗಿ ಮಾಡುತ್ತಾನೆ. ನಪುಂಸಕನು ನೂರು ಜನರನ್ನು ದೂಷ್ಯರನ್ನಾಗಿ ಮಾಡುತ್ತಾನೆ. ತೊನ್ನುರೋಗವಿರುವವನು ತಾನು ಕುಳಿತಿರುವ ಪಂಕ್ತಿಯಲ್ಲಿ ಎಷ್ಟು ಜನರನ್ನು ನೋಡುವನೋ–ಅವರೆಲ್ಲರನ್ನೂ ದೂಷ್ಯರನ್ನಾಗಿ ಮಾಡುತ್ತಾನೆ.

ಯದ್ವೇಷ್ಟಿತಶಿರಾ ಭುಙ್ಕ್ತೇ ಯದ್ಭುಙ್ಕ್ತೇ ದಕ್ಷಿಣಾಮುಖಃ ।
ಸೋಪಾನತ್ಕಶ್ಚ ಯದ್ಭುಙ್ಕ್ತೇ ಸರ್ವಂ ವಿದ್ಯಾತ್ತದಾಸುರಮ್ ॥೧೯॥

ತಲೆಯಲ್ಲಿ ರುಮಾಲು ಅಥವಾ ಟೊಪ್ಪಿಗೆಯನ್ನಿಟ್ಟುಕೊಂಡು ಮಾಡುವ ಊಟವೂ, ದಕ್ಷಿಣದಿಕ್ಕಿಗೆ ಮುಖಮಾಡಿಕೊಂಡು ಮಾಡುವ ಭೋಜನವೂ, ಪಾದರಕ್ಷೆಗಳನ್ನು ಹಾಕಿಕೊಂಡೇ ಮಾಡುವ ಭೋಜನವೂ-ಆಸುರವೆಂದು ತಿಳಿಯಬೇಕು. (ರಾಕ್ಷಸರಿಗೆ ಸಂಬಂಧಿಸಿದ ಭೋಜನವೆಂದು ತಿಳಿಯಬೇಕು.)

ಅಸೂಯತಾ ಚ ಯದ್ದತ್ತಂ ಯಚ್ಚ ಶ್ರದ್ಧಾವಿವರ್ಜಿತಮ್ ।
ಸರ್ವಂ ತದಸುರೇನ್ದ್ರಾಯ ಬ್ರಹ್ಮಾ ಭಾಗಮಕಲ್ಪಯತ್ ॥೨೦॥

ದೋಷದೃಷ್ಟಿಯನ್ನಿಟ್ಟುಕೊಂಡು ಯಾವನು ದಾನಮಾಡುವನೋ, ಅಶ್ರದ್ಧೆಯಿಂದ ಯಾವನು ದಾನಮಾಡುವನೋ–ಅಂತಹ ದಾನಗಳ ಫಲಗಳೆಲ್ಲವೂ ಅಸುರರ ರಾಜನಾದ ಬಲಿಗೇ ಸೇರತಕ್ಕುವುಗಳೆಂದು ಬ್ರಹ್ಮನು ವಿಭಾಗಮಾಡಿಕೊಟ್ಟಿದ್ದಾನೆ.

ಶ್ವಾನಶ್ಚ ಪಙ್ಕ್ತಿದೂಷಾಶ್ಚ ನಾವೇಕ್ಷೇರನ್ಕಥಂಚನ ।
ತಸ್ಮಾತ್ಪರಿಸೃತೇ ದದ್ಯಾತ್ತಿಲಾಂಶ್ಚಾನ್ವವಕೀರಯೇತ್ ॥೨೧॥

ನಾಯಿಗಳಾಗಲೀ, ಪಂಕ್ತಿಬಾಹಿರರಾದ ಬ್ರಾಹ್ಮಣರಾಗಲೀ ಯಾವುದೇ ಸಂದರ್ಭದಲ್ಲಿಯೂ ಶ್ರಾದ್ಧಕರ್ಮವನ್ನು ನೋಡಲೇಬಾರದು. ಈ ಕಾರಣ ದಿಂದಲೇ ಶ್ರಾದ್ಧಭೋಜನವನ್ನು ನಾಲ್ಕು ಕಡೆಗಳಲ್ಲಿಯೂ ಆವೃತವಾಗಿರುವ ಪ್ರದೇಶದಲ್ಲಿ ಮಾಡಿಸಬೇಕು ಮತ್ತು ಎಳ್ಳನ್ನು ಸುತ್ತಲೂ ಚೆಲ್ಲಿಸಬೇಕು.

ತಿಲೈರ್ವಿರಹಿತಂ ಶ್ರಾದ್ಧಂ ಕೃತಂ ಕ್ರೋಧವಶೇನ ಚ ।
ಯಾತುಧಾನಾಃ ಪಿಶಾಚಾಶ್ಚ ವಿಪ್ರಲುಮ್ಪನ್ತಿ ತದ್ಧವಿಃ ॥೨೨॥

ಎಳ್ಳಿನಿಂದ ರಹಿತವಾದ ಮತ್ತು ಕ್ರೋಧಪೂರ್ವಕವಾಗಿ ಮಾಡುವ ಶ್ರಾದ್ಧದ ಹವಿಸ್ಸನ್ನು ರಾಕ್ಷಸರೂ ಪಿಶಾಚರೂ ಅಪಹರಿಸುತ್ತಾರೆ.

ಅಪಾಙ್ಕ್ತ್ಯೋ ಯಾವತಃ ಪಾಙ್ಕ್ತ್ಯಾನ್ಭುಞ್ಜಾನಾನನುಪಶ್ಯತಿ ।
ತಾವತ್ಫಲಾದ್ಭ್ರಂಶಯತಿ ದಾತಾರಂ ತಸ್ಯ ಬಾಲಿಶಮ್ ॥೨೩॥

ಪಂಕ್ತಿಬಾಹಿರನಾದವನು, ಪಂಕ್ತಿಯಲ್ಲಿ ಕುಳಿತು ಭೋಜನಮಾಡು ತ್ತಿರುವ ಎಷ್ಟು ಜನರನ್ನು ನೋಡುವನೋ–ಅಷ್ಟು ಜನರು ಊಟಮಾಡಿದುದ ರಿಂದ ಪ್ರಾಪ್ತವಾಗುವ ಫಲವು–ಮೂರ್ಖನಾದ ತನ್ನನ್ನು ಆಹ್ವಾನಿಸಿ ಅನ್ನ ಹಾಕಿದ ಅನ್ನದಾನಿಗೆ ಸೇರದಂತೆ ಮಾಡುತ್ತಾನೆ. (ಪಂಕ್ತಿಬಾಹಿರನು ನೋಡುವುದರಿಂದ ಆ ಪಂಕ್ತಿಯಲ್ಲಿರುವವರೆಲ್ಲರೂ ದೂಷ್ಯರಾಗುತ್ತಾರೆ. ದೂಷ್ಯರಿಗೆ ಅನ್ನಹಾಕಿದುದೂ ನಿಷ್ಫಲವಾಗುತ್ತದೆ.)

ಯುಧಿಷ್ಠಿರ! ಇನ್ನು ಮುಂದೆ ನಾನು ಹೇಳುವವರನ್ನು ಪಂಕ್ತಿಪಾವನ ರೆಂದು ತಿಳಿಯಬೇಕು. ಶ್ರಾದ್ಧಕರ್ಮಗಳಲ್ಲಿ ನೀನು ಇವರು ಪಂಕ್ತಿಪಾವನ ರೆಂಬುದನ್ನು ಪರೀಕ್ಷಿಸಿ ನಿಶ್ಚಯಿಸಿಕೊಂಡು ನಿಮಂತ್ರಿಸಬೇಕು.

ವಿದ್ಯಾವೇದವ್ರತಸ್ನಾತಾ ಬ್ರಾಹ್ಮಣಾ ಸರ್ವ ಏವ ಹಿ ।
ಸದಾಚಾರಪರಾಶ್ಚೈವ ವಿಜ್ಞೇಯಾಃ ಸರ್ವಪಾವನಾಃ ॥೨೪॥

ವಿದ್ಯಾಭ್ಯಾಸಮಾಡಿ ವೇದವ್ರತಗಳನ್ನು ಮುಗಿಸಿ, ಸ್ನಾತಕರಾಗಿರುವ ಮತ್ತು ಸದಾಚಾರದಲ್ಲಿಯೇ ತತ್ಪರರಾಗಿರುವ ಸರ್ವಬ್ರಾಹ್ಮಣರೂ ಪಂಕ್ತಿಪಾವನರೆಂದು ತಿಳಿಯಬೇಕು.

ಈಗ ನಾನು ಪಾಂಕ್ತೇಯರಾದ ಬ್ರಾಹ್ಮಣರ ವಿಷಯವಾಗಿ ಹೇಳುತ್ತೇನೆ. ಅವರನ್ನೇ ನೀನು ಪಂಕ್ತಿಪಾವನರೆಂದು ತಿಳಿಯಬೇಕು.

ತ್ರಿಣಾಚಿಕೇತಃ ಪಞ್ಚಾಗ್ನಿಸ್ತ್ರಿಸುಪರ್ಣಃ ಷಡಙ್ಗವಿತ್ ॥೨೬॥
ಬ್ರಹ್ಮದೇಯಾನುಸಂತಾನಶ್ಛನ್ದೋಗೋ ಜ್ಯೇಷ್ಠಸಾಮಗಃ ।
ಮಾತಾಪಿತ್ರೋರ್ಯಶ್ಚ ವಶ್ಯಃ ಶ್ರೋತ್ರಿಯೋ ದಶ ಪೂರುಷಃ ॥೨೭॥

ತ್ರಿಣಾಚಿಕೇತವೆಂಬ ಮಂತ್ರವನ್ನು ಜಪಿಸುವವನು, ಗಾರ್ಹಪತ್ಯಾದಿ ಆವಸಥ್ಯಾಂತವಾದ ಪಂಚಾಗ್ನಿಗಳನ್ನು ಪೂಜಿಸುವವನು, ಚತುಷ್ಕಪರ್ದಾ ಯುವತಿಃ ಎಂಬ ಮಂತ್ರವನ್ನು ಮೊದಲುಮಾಡಿ ಮೂರು ಮಂತ್ರಗಳನ್ನು ಅಥವಾ ಬ್ರಹ್ಮಮೇತು ಮಾಮ್ ಮೊದಲಾದ ತ್ರಿಸುಪರ್ಣಗಳೆಂಬ ಮೂರು ಮಂತ್ರಗಳನ್ನು ಪಠನಮಾಡುವವನು, ಶಿಕ್ಷಾವ್ಯಾಕರಣಾದಿ ಆರು ವೇದಾಂಗ ಗಳನ್ನು ತಿಳಿದಿರತಕ್ಕವನು, ವೇದವಿದರ ಪರಂಪರೆಯಲ್ಲಿ ಹುಟ್ಟಿದವನು ಅಥವಾ ಬ್ರಹ್ಮವಿದ್ಯಾಧ್ಯಾಪಕನು, ಸಾಮವೇದವನ್ನು ಗಾನಮಾಡುವವನು, ಜ್ಯೇಷ್ಠಸಾಮವನ್ನು ಗಾನಮಾಡುವವನು, ತಂದೆ-ತಾಯಿಗಳಿಗೆ ವಿಧೇಯನಾಗಿ ರತಕ್ಕವನು, ಹತ್ತು ತಲೆಮಾರುಗಳಿಂದಲೂ ಶ್ರೋತ್ರಿಯರಿಂದಲೇ (ವೇದ ಪಾಠಿಗಳಿಂದಲೇ) ತುಂಬಿರುವ ಕುಲದಲ್ಲಿ ಹುಟ್ಟಿದವನು–ಇವರೆಲ್ಲರೂ ಪಂಕ್ತಿಪಾವನರು.

ಋತುಕಾಲಾಭಿಗಾಮೀ ಚ ಧರ್ಮಪತ್ನೀಷು ಯಃ ಸದಾ ।
ವೇದವಿದ್ಯಾವ್ರತಸ್ನಾತೋ ವಿಪ್ರಃ ಪಙ್ಕ್ತಿಂ ಪುನಾತ್ಯುತ ॥೨೮॥

ಯಾವನು ತನ್ನ ಧರ್ಮಪತ್ನಿಯೊಡನೆ ಋತುಕಾಲದಲ್ಲಿ ಮಾತ್ರ ಸಮಾಗಮವನ್ನು ಮಾಡುವನೋ, ವೇದಾಧ್ಯಯನಮಾಡಿ ವೇದವ್ರತಗಳನ್ನು ಮುಗಿಸಿ ಸ್ನಾತಕನಾಗಿರುವನೋ–ಅಂತಹ ಬ್ರಾಹ್ಮಣನು ಪಂಕ್ತಿಯನ್ನು ಪಾವನಗೊಳಿಸುತ್ತಾನೆ.

ಅಥರ್ವಶಿರಸೋಽಧ್ಯೇತಾ ಬ್ರಹ್ಮಚಾರೀ ಯತವ್ರತಃ ।
ಸತ್ಯವಾದೀ ಧರ್ಮಶೀಲಃ ಸ್ವಕರ್ಮನಿರತಶ್ಚ ಸಃ ॥೨೯॥

ಅಥರ್ವಣವೇದವನ್ನು ಅಧ್ಯಯನಮಾಡಿರುವವನು, ಬ್ರಹ್ಮಚಾರಿಯು, ಪ್ರಯತ್ನಪೂರ್ವಕವಾಗಿ ವ್ರತಾನುಷ್ಠಾನಗಳನ್ನು ಮಾಡುವವನು, ಸತ್ಯವನ್ನೇ ಹೇಳುವವನು, ಧರ್ಮಶೀಲನು, ತನ್ನ ಕರ್ಮಾನುಷ್ಠಾನಗಳಲ್ಲಿ ನಿರತನಾಗಿರತಕ್ಕವನು–ಇವರೆಲ್ಲರೂ ಪಂಕ್ತಿಯನ್ನು ಪಾವನಗೊಳಿಸುತ್ತಾರೆ.

ಯೇ ಚ ಪುಣ್ಯೇಷು ತೀರ್ಥೇಷು ಅಭಿಷೇಕಕೃತಶ್ರಮಾಃ ।
ಮಖೇಷು ಚ ಸಮನ್ತ್ರೇಷು ಭವನ್ತ್ಯವಭೃಥಪ್ಲುತಾಃ ॥೩೦॥

ಅಕ್ರೋಧನಾ ಹ್ಯಚಪಲಾಃ ಕ್ಷಾನ್ತಾ ದಾನ್ತಾ ಜಿತೇನ್ದ್ರಿಯಾಃ ।
ಸರ್ವಭೂತಹಿತಾ ಯೇ ಚ ಶ್ರಾದ್ಧೇಷ್ವೇತಾನ್ನಿಮನ್ತ್ರಯೇತ್ ॥೩೧॥

ಯಾರು ಪುಣ್ಯತೀರ್ಥಗಳಲ್ಲಿ ಸ್ನಾನಮಾಡಲು ಶ್ರಮಪಟ್ಟಿರುವರೋ, ಮಂತ್ರಪೂರ್ವಕವಾದ ಯಜ್ಞಗಳಲ್ಲಿ ಭಾಗವಹಿಸಿ ಅವಭೃಥಸ್ನಾನವನ್ನು ಮಾಡಿರುವರೋ, ಕ್ರೋಧರಹಿತರಾಗಿರುವರೋ, ಚಾಪಲ್ಯವಿಲ್ಲದವ ರಾಗಿರುವರೋ, ಕ್ಷಮಾಶೀಲರಾಗಿರುವರೋ, ಜಿತೇಂದ್ರಿಯರಾಗಿ ರುವರೋ, ಸರ್ವಪ್ರಾಣಿಗಳ ಹಿತದಲ್ಲಿಯೂ ನಿರತರಾಗಿರುವರೋ– ಅಂತಹ ಬ್ರಾಹ್ಮಣರನ್ನು ಶ್ರಾದ್ಧದಲ್ಲಿ ನಿಮಂತ್ರಿಸಬೇಕು.

ಏತೇಷು ದತ್ತಮಕ್ಷಯ್ಯಮೇತೇ ವೈ ಪಙ್ಕ್ತಿಪಾವನಾಃ ।
ಇಮೇ ಪರೇ ಮಹಾಭಾಗಾ ವಿಜ್ಞೇಯಾ ಪಙ್ಕ್ತಿಪಾವನಾಃ ॥೩೨॥

ಇವರೆಲ್ಲರೂ ಪಂಕ್ತಿಪಾವನರು. ಇವರಿಗೆ ಕೊಡುವ ದಾನವು ಅಕ್ಷಯವಾದ ಫಲವನ್ನು ಕೊಡುತ್ತದೆ. ಇವರಲ್ಲದೇ ನಾನು ಮುಂದೆ ಹೇಳಲಿರುವ ಇನ್ನೂ ಕೆಲವರನ್ನೂ ಪಂಕ್ತಿಪಾವನರೆಂದು ತಿಳಿಯಬೇಕು.

ಯತಯೋ ಮೋಕ್ಷಧರ್ಮಜ್ಞಾ ಯೋಗಾಃ ಸುಚರಿತವ್ರತಾಃ ।
ಯೇ ಚೇತಿಹಾಸಂ ಪ್ರಯತಾಃ ಶ್ರಾವಯನ್ತಿ ದ್ವಿಜೋತ್ತಮಾನ್ ॥೩೩॥
ಯೇ ಚ ಭಾಷ್ಯವಿದಃ ಕೇಚಿದ್ಯೇ ಚ ವ್ಯಾಕರಣೇ ರತಾಃ ।
ಅಧೀಯತೇ ಪುರಾಣಂ ಯೇ ಧರ್ಮಶಾಸ್ತ್ರಾಣ್ಯಥಾಪಿ ಚ ॥೩೪॥
ಅಧೀತ್ಯ ಚ ಯಥಾನ್ಯಾಯಂ ವಿಧಿವತ್ತಸ್ಯ ಕಾರಿಣಃ ।
ಉಪಪನ್ನೋ ಗುರುಕುಲೇ ಸತ್ಯವಾದೀ ಸಹಸ್ರಶಃ ॥೩೫॥
ಅಗ್ರ್ಯಾಃ ಸರ್ವೇಷು ವೇದೇಷು ಸರ್ವಪ್ರವಚನೇಷು ಚ ।
ಯಾವದೇತೇ ಪ್ರಪಶ್ಯನ್ತಿ ಪಙ್ಕ್ತ್ಯಾಸ್ತಾವತ್ಪುನನ್ತ್ಯುತ ॥೩೬॥

ಮೋಕ್ಷಧರ್ಮವನ್ನು ತಿಳಿದಿರುವ, ಉತ್ತಮವಾದ ರೀತಿಯಲ್ಲಿ ವ್ರತಾನುಷ್ಠಾನಗಳನ್ನು ಮಾಡುವ ಸಂಯಮಿಗಳಾದ ಯೋಗಿಗಳು, ಬ್ರಾಹ್ಮಣ

ಶ್ರೇಷ್ಠರ ಸಮ್ಮುಖದಲ್ಲಿ ವಿನೀತರಾಗಿ ಇತಿಹಾಸವನ್ನು ಹೇಳುವವರು, ವೇದಭಾಷ್ಯವನ್ನು ತಿಳಿದವರು, ವ್ಯಾಕರಣದ ಅಧ್ಯಯನದಲ್ಲಿ ನಿರತರಾಗಿರ ತಕ್ಕವರು, ಪುರಾಣಗಳನ್ನು ಅಧ್ಯಯನಮಾಡಿರುವವರು, ಧರ್ಮಶಾಸ್ತ್ರಗಳನ್ನು ಅಧ್ಯಯನಮಾಡಿರುವವರು ಮತ್ತು ಅಧ್ಯಯನಮಾಡಿದುದನ್ನು ಯಥಾವಿಧಿ ಯಾಗಿ ಆಚರಣೆಯಲ್ಲಿಟ್ಟುಕೊಂಡಿರುವವರು, ನಿಯತಕಾಲದವರೆಗೆ ಗುರು ಕುಲದಲ್ಲಿ ಅಧ್ಯಯನಮಾಡಿದವರು, ಸಾವಿರಾರು ಸಂದರ್ಭಗಳಲ್ಲಿ ಸತ್ಯವಾದೀ ಎಂದು ನಿರ್ಣೀತರಾದವರು, ನಾಲ್ಕು ವೇದಗಳ ಅಧ್ಯಯನ-ಅಧ್ಯಾಪನಗಳಲ್ಲಿ ಶ್ರೇಷ್ಠರಾದವರು–ಇವರೆಲ್ಲರೂ ಪಂಕ್ತಿಪಾವನರು. ಇವರು ಪಂಕ್ತಿಯನ್ನು ಎಷ್ಟು ದೂರದವರೆಗೆ ನೋಡುವರೋ–ಅಷ್ಟು ಜನರನ್ನೂ ಪಾವನಗೊಳಿಸುತ್ತಾರೆ.

ತತೋ ಹಿ ಪಾವನಾತ್ಪಙ್ಕ್ತ್ಯಾಃ ಪಙ್ಕ್ತಿಪಾವನ ಉಚ್ಯತೇ ।
ಕ್ರೋಶಾದರ್ಧತೃತೀಯಾಚ್ಚ ಪಾವಯೇದೇಕ ಏವ ಹಿ ।
ಬ್ರಹ್ಮದೇಯಾನುಸಂತಾನ ಇತಿ ಬ್ರಹ್ಮವಿದೋ ವಿದುಃ ॥೩೭॥

ಪಂಕ್ತಿಯನ್ನು ಪಾವನಗೊಳಿಸುವವರಾದುದರಿಂದ ಇವರನ್ನು ಪಂಕ್ತಿ ಪಾವನರೆಂದು ಕರೆಯುತ್ತಾರೆ. ಬ್ರಹ್ಮಜ್ಞಾನಿಗಳ ವಂಶದಲ್ಲಿ ಹುಟ್ಟಿರುವ ಬ್ರಾಹ್ಮಣನೊಬ್ಬನೇ ಮೂರೂವರೆ ಕ್ರೋಶಗಳಷ್ಟು ದೂರದವರೆಗೆ (ಹತ್ತೂವರೆ ಮೈಲಿಗಳವರೆಗೆ) ಇರುವ ಪರಿಸರವನ್ನು ಪವಿತ್ರಗೊಳಿಸುವನೆಂದು ಬ್ರಹ್ಮವಿದರು ತಿಳಿಯುತ್ತಾರೆ.

ಅನೃತ್ವಿಗನುಪಾಧ್ಯಾಯಃ ಸ ಚೇದಗ್ರಾಸನಂ ವ್ರಜೇತ್ ।
ಋತ್ವಿಗ್ಭಿರಭ್ಯನುಜ್ಞಾತಃ ಪಙ್ಕ್ತ್ಯಾ ಹರತಿ ದುಷ್ಕೃತಮ್ ॥೩೮॥

ಋತ್ವಿಜನಲ್ಲದಿದ್ದರೂ, ಅಧ್ಯಾಪಕನಲ್ಲದಿದ್ದರೂ–ಋತ್ವಿಜರಿಂದ ಅನುಜ್ಞೆ ಯನ್ನು ಪಡೆದು ಅಗ್ರಾಸನವನ್ನು ಪಡೆದುಕೊಂಡರೆ ಅಂತಹವನು ಕೂಡ ಪಂಕ್ತಿಯಲ್ಲಿರುವ ದೋಷವನ್ನು ಹರಣಮಾಡುತ್ತಾನೆ. (ಪಂಕ್ತಿಪಾವನ ನಾಗುತ್ತಾನೆ.)

ಅಥ ಚೇದ್ವೇದವಿತ್ಸರ್ವೈಃ ಪಙ್ಕ್ತಿದೋಷೈರ್ವಿವರ್ಜಿತಃ ।
ನ ಚ ಸ್ಯಾತ್ಪತಿತೋ ರಾಜನ್ಪಙ್ಕ್ತಿಪಾವನ ಏವ ಸಃ ॥೩೯॥

ವೇದವಿದನಾಗಿದ್ದು ಸಕಲವಿಧವಾದ ಪಂಕ್ತಿದೋಷಗಳಿಂದಲೂ ರಹಿತನಾಗಿದ್ದರೆ ಪತಿತನಲ್ಲದಿದ್ದರೆ, ಅಂತಹವನೂ ಪಂಕ್ತಿಪಾವನನೇ ಆಗುತ್ತಾನೆ.

ಆದುದರಿಂದ ಸರ್ವಪ್ರಯತ್ನದಿಂದಲೂ ಶ್ರಾದ್ಧಕರ್ಮಕ್ಕೆ ಪರೀಕ್ಷಿಸಿಯೇ ಬ್ರಾಹ್ಮಣರನ್ನು ನಿಮಂತ್ರಿಸಬೇಕು. ಸ್ವಕರ್ಮನಿರತರನ್ನೂ, ಸತ್ಕುಲಪ್ರಸೂತರನ್ನೂ, ಬಹುಶ್ರುತರನ್ನೂ (ವಿದ್ವಾಂಸರನ್ನೂ) ಆಮಂತ್ರಿಸಬೇಕು.

ಯಸ್ಯ ಮಿತ್ರಪ್ರಧಾನಾನಿ ಶ್ರಾದ್ಧಾನಿ ಚ ಹವೀಂಷಿ ಚ ।
ನ ಪ್ರೀಣನ್ತಿ ಪಿತೄನ್ದೇವಾನ್ಸ್ವರ್ಗಂ ಚ ನ ಸ ಗಚ್ಛತಿ ॥೪೧॥

ಯಾವನು ಮಾಡುವ ಶ್ರಾದ್ಧಗಳಲ್ಲಿ ಮಿತ್ರರೇ ಪ್ರಧಾನಭೂತರಾಗಿರುವರೋ-ಅಂತಹ ಶ್ರಾದ್ಧಗಳೂ ಮತ್ತು ಹವಿಸ್ಸುಗಳೂ ಪಿತೃಗಳನ್ನಾಗಲೀ, ದೇವತೆಗಳನ್ನಾಗಲೀ ತೃಪ್ತಿಗೊಳಿಸುವುದಿಲ್ಲ. ಶ್ರಾದ್ಧಕರ್ತನು ಸ್ವರ್ಗಕ್ಕೂ ಹೋಗುವುದಿಲ್ಲ.

ಯಶ್ಚ ಶ್ರಾದ್ಧೇ ಕುರುತೇ ಸಙ್ಗತಾನಿ
ನ ದೇವಯಾನೇನ ಪಥಾ ಸ ಯಾತಿ ।
ಸ ವೈ ಮುಕ್ತಃ ಪಿಪ್ಪಲಂ ಬನ್ಧನಾದ್ವಾ
ಸ್ವರ್ಗಾಲ್ಲೋಕಾಚ್ಚ್ಯವತೇ ಶ್ರಾದ್ಧಮಿತ್ರಃ ॥೪೨॥

ಯಾವನು ಶ್ರಾದ್ಧದಲ್ಲಿ ಬ್ರಾಹ್ಮಣನಿಗೆ ಭೋಜನಮಾಡಿಸಿ ಅವನೊಡನೆ ಸ್ನೇಹವನ್ನು ಬೆಳೆಸುವನೋ–ಅವನು ದೇವಯಾನಮಾರ್ಗದಿಂದ ಪರಲೋಕಕ್ಕೆ ಹೋಗುವುದಿಲ್ಲ. ಶ್ರಾದ್ಧದ ಮೂಲಕವಾಗಿ ಮಿತ್ರತ್ವವನ್ನು ಬೆಳೆಸುವವನು ಅಶ್ವತ್ಥದ ಫಲವು ತೊಟ್ಟಿನಿಂದ ಕಳಚಿ ಕೆಳಕ್ಕೆ ಬೀಳುವಂತೆ ಸ್ವರ್ಗದಿಂದ ಚ್ಯುತನಾಗುತ್ತಾನೆ.

ತಸ್ಮಾನ್ಮಿತ್ರಂ ಶ್ರಾದ್ಧಕೃನ್ನಾದ್ರಿಯೇತ
ದದ್ಯಾನ್ಮಿತ್ರೇಭ್ಯಃ ಸಂಗ್ರಹಾರ್ಥಂ ಧನಾನಿ ।
ಯನ್ಮನ್ಯತೇ ನೈವ ಶತ್ರುಂ ನ ಮಿತ್ರಂ
ತಂ ಮಧ್ಯಸ್ಥಂ ಭೋಜಯೇದ್ಧವ್ಯಕವ್ಯೇ ॥೪೩॥

ಆದುದರಿಂದ ಶ್ರಾದ್ಧಕರ್ಮಗಳಲ್ಲಿ ಮಿತ್ರನನ್ನು ನಿಮಂತ್ರಿಸಬಾರದು. ಮಿತ್ರಸಂಗ್ರಹಣಾರ್ಥವಾಗಿ ಹಣವನ್ನಾದರೂ ಕೊಡಬಹುದು. ಆದರೆ

ಹವ್ಯ-ಕವ್ಯಗಳಲ್ಲಿ ಮಿತ್ರ ಅಥವಾ ಶತ್ರುವೆಂಬ ಭಾವನೆಯಿಲ್ಲದ ಮಧ್ಯಸ್ಥನಾದವನನ್ನೇ ಕರೆದು ಭೋಜನಮಾಡಿಸಬೇಕು.

ಯಥೋಷರೇ ಬೀಜಮುಪ್ತಂ ನ ರೋಹೇ-
ನ್ನ ಚಾವಪ್ತಾ ಪ್ರಾಪ್ನುಯಾದ್ಬೀಜಭಾಗಮ್ ।
ಏವಂ ಶ್ರಾದ್ಧಂ ಭುಕ್ತಮನರ್ಹಮಾಣೈ-
ರ್ನ ಚೇಹ ನಾಮುತ್ರ ಫಲಂ ದದಾತಿ ॥೪೪॥

ಚೌಳುಮಣ್ಣಿನಿಂದ ಕೂಡಿರುವ ಭೂಮಿಯಲ್ಲಿ ಬಿತ್ತಿದ ಬೀಜವು ಬೆಳೆಯುವುದಿಲ್ಲ. ಬೀಜವನ್ನು ಬಿತ್ತಿದವನು ಬೀಜದ ಭಾಗವನ್ನೂ ಹಿಂದಕ್ಕೆ ಪಡೆದುಕೊಳ್ಳುವುದಿಲ್ಲ. ಅದೇ ರೀತಿಯಲ್ಲಿ ಅನರ್ಹರಿಂದ ಭುಂಜಿಸಲ್ಪಟ್ಟ ಶ್ರಾದ್ಧವು ಶ್ರಾದ್ಧಕರ್ತೃವಿಗೆ ಇಹದಲ್ಲಾಗಲೀ ಪರದಲ್ಲಾಗಲೀ ಫಲವನ್ನು ಕೊಡುವುದಿಲ್ಲ.

ಬ್ರಾಹ್ಮಣೋ ಹ್ಯನಧೀಯಾನಸ್ತೃಣಾಗ್ನಿರಿವ ಶಾಮ್ಯತಿ ।
ತಸ್ಮೈ ಶ್ರಾದ್ಧಂ ನ ದಾತವ್ಯಂ ನ ಹಿ ಭಸ್ಮನಿ ಹೂಯತೇ ॥೪೫॥

ಹುಲ್ಲಿಗೆ ಬಿದ್ದ ಬೆಂಕಿಯು ಬೇಗ ನಾಶವಾಗಿಬಿಡುವಂತೆ–ಸ್ವಾಧ್ಯಾಯಹೀನನಾದ ಬ್ರಾಹ್ಮಣನು ತೇಜೋಹೀನನಾಗುತ್ತಾನೆ. ಆದುದರಿಂದ ಅಧ್ಯಯನವನ್ನು ಮಾಡದವನನ್ನು ಶ್ರಾದ್ಧದಲ್ಲಿ ಆಮಂತ್ರಿಸಬಾರದು. ಯಾರೇ ಆಗಲೀ ಬೂದಿಯಲ್ಲಿ ಹೋಮಮಾಡುವುದಿಲ್ಲವಲ್ಲವೇ!

ಸಮ್ಭೋಜನೀ ನಾಮ ಪಿಶಾಚದಕ್ಷಿಣಾ
ಸಾ ನೈವ ದೇವಾನ್ನ ಪಿತೄನುಪೈತಿ ।
ಇಹೈವ ಸಾ ಭ್ರಾಮ್ಯತಿ ಹೀನಪುಣ್ಯಾ
ಶಾಲಾನ್ತರೇ ಗೌರಿವ ನಷ್ಟವತ್ಸಾ ॥೪೬॥

ಯಾವ ಇಬ್ಬರು ಪರಸ್ಪರವಾಗಿ ಶ್ರಾದ್ಧಗಳಲ್ಲಿ ನಿಮಂತ್ರಿತರಾಗಿ ದಕ್ಷಿಣೆಗಳನ್ನು ವಿನಿಮಯಮಾಡಿಕೊಳ್ಳುವರೋ–ಅಂತಹ ದಕ್ಷಿಣೆಗೆ ಪಿಶಾಚದಕ್ಷಿಣೆಯೆಂದು ಹೆಸರು. (ದೇವದತ್ತನು ಮಾಡುವ ಶ್ರಾದ್ಧಕ್ಕೆ ಸೋಮದತ್ತನು ಹೋಗುವುದು; ಸೋಮದತ್ತನು ಮಾಡುವ ಶ್ರಾದ್ಧಕ್ಕೆ ದೇವದತ್ತನು ಹೋಗುವುದು–ಇದು ಪರಸ್ಪರನಿಮಂತ್ರಣ. ದೇವದತ್ತನು ಕೊಡುವಷ್ಟೇ ದಕ್ಷಿಣೆಯನ್ನು ಸೋಮದತ್ತನೂ ಕೊಡುವುದು–ಇದು

ದಕ್ಷಿಣಾವಿನಿಮಯ.) ಹೀಗೆ ಮಾಡುವುದರಿಂದ ಶ್ರಾದ್ಧದ ಹವಿಷ್ಯವು ದೇವತೆಗಳಿಗಾಗಲೀ ಪಿತೃಗಳಿಗಾಗಲೀ ಸೇರುವುದಿಲ್ಲ. ಕರುವನ್ನು ಕಳೆದುಕೊಂಡ ಹಸುವು ಗೋಶಾಲೆಯಲ್ಲಿ ಭ್ರಮಿಸುತ್ತಿರುವಂತೆ–ಪುಣ್ಯದಿಂದ ಹೀನವಾದ ಆ ದಕ್ಷಿಣೆಯು ಇಲ್ಲಿಯೇ ಅದಲು-ಬದಲಾಗುತ್ತಿರುತ್ತದೆ. ದಕ್ಷಿಣೆಗಿರುವ ಮಹತ್ತ್ವವೇನೂ ಆ ವಿನಿಮಯದ್ರವ್ಯದಲ್ಲಿ ಉಳಿದಿರುವುದಿಲ್ಲ.

ಯಥಾಗ್ನೌ ಶಾನ್ತೇ ಘೃತಮಾಜುಹೋತಿ
ತನ್ನೈವ ದೇವಾನ್ನಪಿತೄನುಪೈತಿ ।
ತಥಾ ದತ್ತಂ ನರ್ತನೇ ಗಾಯನೇ ಚ
ಯಾಂ ಚಾನೃತೇ ದಕ್ಷಿಣಾಮಾವೃಣೋತಿ ॥೪೭॥
ಉಭೌ ಹಿನಸ್ತಿ ನ ಭುನಕ್ತಿ ಚೈಷಾ
ಯಾ ಚಾನೃತೇ ದಕ್ಷಿಣಾ ದೀಯತೇ ವೈ ।
ಅಘಾತಿನೀ ಗರ್ಹಿತೈಷಾ ಪತನ್ತೀ
ತೇಷಾಂ ಪ್ರೇತಾನ್ಪಾತಯೇದ್ದೇವಯಾನಾತ್ ॥೪೮॥

ಬೆಂಕಿಯು ಆರಿಹೋಗುವಾಗ ಮಾಡಿದ ಘೃತಹೋಮವು ದೇವತೆಗಳಿಗೂ ಸೇರುವುದಿಲ್ಲ; ಪಿತೃಗಳಿಗೂ ಸೇರುವುದಿಲ್ಲ. ಅದೇ ರೀತಿಯಲ್ಲಿ ನರ್ತಕನಿಗೂ, ಗಾಯಕನಿಗೂ, ಸುಳ್ಳುಹೇಳುವವನಿಗೂ ಕೊಡುವ ದಕ್ಷಿಣೆಯು ನಿಷ್ಫಲವಾಗುತ್ತದೆ. ಅಪಾತ್ರನಾದವನಿಗೆ ಕೊಡುವ ದಕ್ಷಿಣೆಯು ದಾತೃವಿಗೂ ಒಳ್ಳೆಯದನ್ನು ಮಾಡುವುದಿಲ್ಲ. ಅದನ್ನು ತೆಗೆದುಕೊಂಡವನಿಗೂ ಒಳ್ಳೆಯದನ್ನು ಮಾಡುವುದಿಲ್ಲ. ಇಬ್ಬರನ್ನೂ ವಿನಾಶಗೊಳಿಸುತ್ತದೆ. ಇಷ್ಟು ಮಾತ್ರವಲ್ಲ; ಆಘಾತವನ್ನುಂಟುಮಾಡುವ ಮತ್ತು ಅತಿನಿಂದಿತವಾದ ಆ ದಕ್ಷಿಣೆಯು ದಾತೃವಿನ ಪಿತೃಗಳನ್ನೂ ದೇವಯಾನದಿಂದ ಕೆಳಕ್ಕೆ ಬೀಳಿಸುತ್ತದೆ.

ಋಷೀಣಾಂ ಸಮಯೇ ನಿತ್ಯಂ ಯೇ ಚರನ್ತಿ ಯುಧಿಷ್ಠಿರ ।
ನಿಶ್ಚಿತಾಃ ಸರ್ವಧರ್ಮಜ್ಞಾಸ್ತಾನ್ದೇವಾ ಬ್ರಾಹ್ಮಣಾನ್ವಿದುಃ ॥೪೯॥

ಯಾರು ಯಾವಾಗಲೂ ಋಷಿಗಳು ಹೇಳಿರುವ ಧರ್ಮಮಾರ್ಗದಲ್ಲಿಯೇ ನಡೆಯುತ್ತಿರುವರೋ, ನಿಶ್ಚಯಜ್ಞಾನವುಳ್ಳವರಾಗಿರುವರೋ, ಸಂಪೂರ್ಣಧರ್ಮವನ್ನೂ ತಿಳಿದಿರುವರೋ–ಅಂತಹವರನ್ನು ದೇವತೆಗಳು ಬ್ರಾಹ್ಮಣರೆಂದು ತಿಳಿಯುತ್ತಾರೆ.

ಸ್ವಾಧ್ಯಾಯನಿಷ್ಠಾ ಋಷಯೋ ಜ್ಞಾನನಿಷ್ಠಾಸ್ತಥೈವ ಚ ।
ತಪೋನಿಷ್ಠಾಶ್ಚ ಬೋದ್ಧವ್ಯಾಃ ಕರ್ಮನಿಷ್ಠಾಶ್ಚ ಭಾರತ ॥೫೦॥

ಋಷಿಗಳಲ್ಲಿ ಕೆಲವರು ಸ್ವಾಧ್ಯಾಯನಿಷ್ಠರಾಗಿರುತ್ತಾರೆ. ಕೆಲವರು ಜ್ಞಾನನಿಷ್ಠರಾಗಿರುತ್ತಾರೆ. ಕೆಲವರು ತಪೋನಿಷ್ಠರಾಗಿರುತ್ತಾರೆ. ಮತ್ತೆ ಕೆಲವರು ಕರ್ಮನಿಷ್ಠರಾಗಿರುತ್ತಾರೆ–ಎಂದು ತಿಳಿಯಬೇಕು.

ಕವ್ಯಾನಿ ಜ್ಞಾನನಿಷ್ಠೇಭ್ಯಃ ಪ್ರತಿಷ್ಠಾಪ್ಯಾನಿ ಭಾರತ ।
ತತ್ರ ಯೇ ಬ್ರಾಹ್ಮಣಾನ್ಕೇಚಿನ್ನ ನಿನ್ದನ್ತಿ ಹಿ ತೇ ನರಾಃ ॥೫೧॥

ಶ್ರಾದ್ಧಾದಿಗಳನ್ನು ಜ್ಞಾನನಿಷ್ಠರಾದ ಮುನಿಗಳಿಗೆ ಒಪ್ಪಿಸಬೇಕು. (ಶ್ರಾದ್ಧಗಳಲ್ಲಿ ಜ್ಞಾನನಿಷ್ಠರಾದ ಮುನಿಗಳನ್ನು ನಿಮಂತ್ರಿಸಬೇಕು.) ಬ್ರಾಹ್ಮಣರನ್ನು ನಿಂದಿಸದೇ ಇರುವ ಯಾವ ಕೆಲವು ಜನರಿರುವರೋ–ಅವರೇ ಶ್ರೇಷ್ಠರಾದ ಮನುಷ್ಯರು.

ಯೇ ತು ನಿನ್ದನ್ತಿ ಜಲ್ಪೇಷು ನ ತಾಞ್ಛ್ರಾದ್ಧೇಷು ಭೋಜಯೇತ್।
ಬ್ರಾಹ್ಮಣಾ ನಿನ್ದಿತಾ ರಾಜನ್ಹನ್ಯುಸ್ತ್ರೈಪುರುಷಂ ಕುಲಮ್ ॥೫೨॥

ವೈಖಾನಸಾನಾಂ ವಚನಮೃಷೀಣಾಂ ಶ್ರೂಯತೇ ನೃಪ ।
ದೂರಾದೇವ ಪರೀಕ್ಷೇತ ಬ್ರಾಹ್ಮಣಾನ್ವೇದಪಾರಗಾನ್ ॥೫೩॥

ಯಾರು ಪರಸ್ಪರವಾಗಿ ಹರಟುತ್ತಿರುವಾಗ ಬ್ರಾಹ್ಮಣರನ್ನು ನಿಂದಿಸುವರೋ–ಅಂತಹವರನ್ನು ಶ್ರಾದ್ಧಭೋಜನಕ್ಕೆ ಕರೆಯಬಾರದು. ವೈಖಾನಸ ಮಹರ್ಷಿಗಳು ಈ ವಿಷಯವಾಗಿ ಹೀಗೆ ಹೇಳಿದ್ದಾರೆ: 'ನಿಂದಿತರಾದ ಬ್ರಾಹ್ಮಣರು ನಿಂದಿಸಿದವನ ಮುಂದಿನ ಮೂರು ತಲೆಮಾರಿನವರನ್ನು ವಿನಾಶಗೊಳಿಸುತ್ತಾರೆ. ವೇದಪಾರಂಗತರಾದ ಬ್ರಾಹ್ಮಣರನ್ನು ದೂರದಿಂದಲೇ ಪರೀಕ್ಷಿಸಬೇಕು.'

ಪ್ರಿಯೋ ವಾ ಯದಿ ವಾ ದ್ವೇಷ್ಯಸ್ತೇಷಾಂ ತು ಶ್ರಾದ್ಧಮಾವಪೇತ್ ।
ಯಃ ಸಹಸ್ರಂ ಸಹಸ್ರಾಣಾಂ ಭೋಜಯೇದನೃತಾನ್ನರಃ ।
ಏಕಸ್ತಾನ್ಮನ್ತ್ರವಿತ್ಪ್ರೀತಃ ಸರ್ವಾನರ್ಹತಿ ಭಾರತ ॥೫೪॥

ವೇದಜ್ಞನಾದ ಪುರುಷನು ಪ್ರಿಯನಾಗಿರಲಿ, ಅಪ್ರಿಯನಾಗಿರಲಿ-ವಿಚಾರಮಾಡದೇ ಶ್ರಾದ್ಧಕ್ಕೆ ಅವನನ್ನು ನಿಮಂತ್ರಿಸಿ ಭೋಜನಮಾಡಿಸಬೇಕು.

ಒಬ್ಬನು ಅಪಾರವಾದ ಧನವ್ಯಯದಿಂದ ಅಪಾತ್ರರಾದ ಹತ್ತು ಲಕ್ಷ ಬ್ರಾಹ್ಮಣರಿಗೆ ಭೋಜನಮಾಡಿಸಿದರೂ ಅದೆಲ್ಲವೂ ವ್ಯರ್ಥವೇ ಆಗುತ್ತದೆ. ಮಂತ್ರವಿದನಾದ ಬ್ರಾಹ್ಮಣನೊಬ್ಬನೇ ಲಕ್ಷಮಂದಿ ಅಪಾತ್ರರಿಗೆ ವೆಚ್ಚಮಾಡಿದ ಧನವನ್ನು ಪಡೆಯಲು ಯೋಗ್ಯನಾಗಿದ್ದಾನೆ. ಅರ್ಥಾತ್ ಹತ್ತು ಲಕ್ಷಮಂದಿ ಅಪಾತ್ರರಿಗೆ ಭೋಜನಮಾಡಿಸುವುದಕ್ಕಿಂತಲೂ ವೇದಪಾರಂಗತನಾದ ಒಬ್ಬನೇ ಬ್ರಾಹ್ಮಣನನ್ನು ಕರೆದು ಅವನಿಗೆ ಆ ದಕ್ಷಿಣೆಯನ್ನು ಕೊಟ್ಟು ಅವನನ್ನು ತೃಪ್ತಿಪಡಿಸುವುದು ಶ್ರೇಯಸ್ಕರ.”

೯೦ನೆಯ ಅಧ್ಯಾಯವು ಮುಗಿಯಿತು.

೯೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶೋಕಾತುರನಾದ ನಿಮಿಯಿಂದ ಪುತ್ರನ ಸಲುವಾಗಿ ಪಿಂಡ ಪ್ರದಾನ: ಶ್ರಾದ್ಧದ ವಿಷಯದಲ್ಲಿ ಅತ್ರಿಯ ಉಪದೇಶ: ವಿಶ್ವೇದೇವತೆಗಳ ನಾಮಧೇಯಗಳು: ಶ್ರಾದ್ಧದಲ್ಲಿ ತ್ಯಾಜ್ಯವಸ್ತುಗಳು

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕೇನ ಸಂಕಲ್ಪಿತಂ ಶ್ರಾದ್ಧಂ ಕಸ್ಮಿನ್ಕಾಲೇ ಕಿಮಾತ್ಮಕಮ್ ।
ಭೃಗ್ವಙ್ಗಿರಸಿಕೇ ಕಾಲೇ ಮುನಿನಾ ಕತರೇಣ ವಾ ॥೧॥

ಕಾನಿ ಶ್ರಾದ್ಧಾನಿ ವರ್ಜ್ಯಾನಿ ಕಾನಿ ಮೂಲಫಲಾನಿ ಚ ।
ಧಾನ್ಯಜಾತ್ಯಶ್ಚ ಕಾ ವರ್ಜ್ಯಾಸ್ತನ್ಮೇ ಬ್ರೂಹಿ ಪಿತಾಮಹ ॥೨॥

“ಪಿತಾಮಹನೇ! ಯಾರ ಸಂಕಲ್ಪದಿಂದ ಈ ಶ್ರಾದ್ಧಕರ್ಮವು ಮೊದಲ ಬಾರಿಗೆ ಪ್ರಾರಂಭವಾಯಿತು? ಯಾವ ಕಾಲದಲ್ಲಿ ಇದು ಪ್ರಾರಂಭವಾಯಿತು? ಈ ಶ್ರಾದ್ಧದ ಸ್ವರೂಪವೇನು? ಭೃಗ್ವಂಗಿರಸರ ಕಾಲದಲ್ಲಿಯೇ ಇದು ಪ್ರಾರಂಭವಾಗಿದ್ದರೆ ಯಾವ ಮುನಿಯು ಇದನ್ನು ಪ್ರಾರಂಭಿಸಿದನು? ಎಂತಹ ಶ್ರಾದ್ಧವನ್ನು ವರ್ಜಿಸಬೇಕು? ಶ್ರಾದ್ಧಕರ್ಮಗಳಲ್ಲಿ ಯಾವ-ಯಾವ ಫಲ-ಮೂಲಗಳನ್ನು ಉಪಯೋಗಿಸಬಾರದು? ಯಾವ-ಯಾವ ಜಾತಿಯ ಧಾನ್ಯಗಳನ್ನು ಉಪಯೋಗಿಸಬಾರದು?–ಈ ಎಲ್ಲ ವಿಷಯಗಳನ್ನೂ ಹೇಳು.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಶ್ರಾದ್ಧಕರ್ಮವು ಹೇಗೆ ಪ್ರಾರಂಭವಾಯಿತು? ಯಾವ ಕಾಲದಲ್ಲಿ ಪ್ರಾರಂಭವಾಯಿತು? ಅದರ ಸ್ವರೂಪವೇನು? ಶ್ರಾದ್ಧ ಸಂಕಲ್ಪವನ್ನು ಮೊದಲು ಮಾಡಿದವರು ಯಾರು?-ಈ ಎಲ್ಲ ವಿಷಯಗಳನ್ನೂ ಹೇಳುವೆನು; ಕೇಳು:

ಮಹರ್ಷಿಯಾದ, ಪ್ರತಾಪವಂತನಾದ ಅತ್ರಿಯು ಸ್ವಯಂಭುಬ್ರಹ್ಮನ ಮಗನು. ಅತ್ರಿಯ ವಂಶದಲ್ಲಿಯೇ ದತ್ತಾತ್ರೇಯನು ಹುಟ್ಟಿದನು. ತಪೋಧನನಾದ ನಿಮಿಯು ದತ್ತಾತ್ರೇಯನ ಮಗನು. ನಿಮಿಗೆ ‘ಶ್ರೀಮಾನ್’-ಎಂಬ ಮಗನು ಹುಟ್ಟಿದನು. ಅವನು ತನ್ನ ಹೆಸರಿಗೆ ಅನುಗುಣವಾಗಿ ಅತ್ಯಂತ ಕಾಂತಿಯಿಂದ ಯುಕ್ತನಾಗಿದ್ದನು. ಆ ಶ್ರೀಮಂತನು ಒಂದು ಸಾವಿರ ವರ್ಷಗಳವರೆಗೆ ತಪಸ್ಸನ್ನು ಮಾಡುತ್ತಿದ್ದು ಸಾವಿರ ವರ್ಷಗಳು ಪೂರ್ಣವಾಗುತ್ತಲೇ ಕಾಲಧರ್ಮಕ್ಕೆ ಅಧೀನನಾಗಿ ನಿಧನಹೊಂದಿದನು. ತಂದೆಯಾದ ನಿಮಿಯು ಶಾಸ್ತ್ರೋಕ್ತವಾದ ಕರ್ಮಗಳಿಂದ ಅಶೌಚವನ್ನು ನಿವಾರಣೆಮಾಡಿಕೊಂಡು ಪುತ್ರಶೋಕದಲ್ಲಿಯೇ ಮಗ್ನನಾದವನಾಗಿ, ದುಃಖದಿಂದ ಬಹಳವಾಗಿ ಪರಿತಪಿಸುತ್ತಿದ್ದನು. ಮಹಾಮತಿಯಾದ ನಿಮಿಯು ಚತುರ್ದಶಿಯಂದು ಶ್ರಾದ್ಧದಲ್ಲಿ ಕೊಡಲು ಯೋಗ್ಯವಾದ ವಸ್ತುಗಳೆಲ್ಲವನ್ನೂ ಸಂಗ್ರಹಿಸಿ ಪುತ್ರಶೋಕದಲ್ಲಿಯೇ ಮಗ್ನನಾಗಿ ರಾತ್ರಿಯಲ್ಲಿ ಮಲಗಿ ಬೆಳಗಾಗುತ್ತಲೇ ಮೇಲೆದ್ದನು. ಶೋಕದಿಂದ ವ್ಯಥಿತವಾದ ಮನಸ್ಸಿನಿಂದ ಕೂಡಿದ್ದ ನಿಮಿಯ ಬುದ್ಧಿಯು ಸುದೀರ್ಘವಾಗಿ ಯೋಚಿಸತೊಡಗಿತು. ನಿಮಿಯು ಏಕಾಗ್ರಚಿತ್ತನಾಗಿ ಶ್ರಾದ್ಧಕಲ್ಪವನ್ನು ಚಿಂತಿಸತೊಡಗಿದನು:

‘ಶ್ರಾದ್ಧದಲ್ಲಿ ಶಾಸ್ತ್ರದೃಷ್ಟಿಯಿಂದ ಯಾವ-ಯಾವ ಕಂದ-ಮೂಲ-ಫಲಗಳು ಭೋಜನಕ್ಕೆ ಯೋಗ್ಯವೆಂದು ಹೇಳಲ್ಪಟ್ಟಿವೆ? ಮಗನಿಗೆ ಯಾವ-ಯಾವ ಫಲಗಳು ಪ್ರಿಯವಾಗಿದ್ದುವು?–ಈ ಎಲ್ಲವನ್ನೂ ಸಮಾಲೋಚಿಸಿ ತಪೋಧನನಾದ ನಿಮಿಯು ಆ ಎಲ್ಲ ವಸ್ತುಗಳನ್ನೂ ಸಂಗ್ರಹಿಸಿದನು. ಮಹಾಪ್ರಾಜ್ಞನಾದ ನಿಮಿಯು ಅಮಾವಾಸ್ಯೆಯ ದಿನ ಏಳು ಮಂದಿ ಬ್ರಾಹ್ಮಣರನ್ನು ಕರೆತಂದು ಅವರನ್ನು ಯಥಾವಿಧಿಯಾಗಿ ಸತ್ಕರಿಸಿದನು.

ತಾನೇ ಕಲ್ಪಿಸಿದ್ದ ದಕ್ಷಿಣಾಗ್ರವಾದ ದರ್ಭಾಸನಗಳಲ್ಲಿ ಅವರನ್ನು ಕೂರಿಸಿದನು. ಏಕಕಾಲದಲ್ಲಿ ಅವರೆಲ್ಲರಿಗೂ ಊಟವನ್ನು ಬಡಿಸಿದನು.

ಋತೇ ಚ ಲವಣಂ ಭೋಜ್ಯಂ ಶ್ಯಾಮಾಕಾನ್ನಂ ದದೌ ಪ್ರಭುಃ ।

ಪ್ರಭುವಾದ ನಿಮಿಯು ಉಪ್ಪಿಲ್ಲದ ಸಾಮೇಅಕ್ಕಿಯ ಅನ್ನವನ್ನು ಅವರಿಗೆ ಬಡಿಸಿದನು.

ದಕ್ಷಿಣಾಗ್ರಾಸ್ತತೋ ದರ್ಭಾ ವಿಷ್ಟರೇಷು ನಿವೇಶಿತಾಃ ।
ಪಾದಯೋಶ್ಚೈವ ವಿಪ್ರಾಣಾಂ ಯೇ ತ್ವನ್ನಮುಪಭುಞ್ಜತೇ ॥೧೪॥
ಕೃತ್ವಾ ಚ ದಕ್ಷಿಣಾಗ್ರಾನ್ವೈ ದರ್ಭಾನ್ಸ ಪ್ರಯತಃ ಶುಚಿಃ ।
ಪ್ರದದೌ ಶ್ರೀಮತಃ ಪಿಣ್ಡಾನ್ನಾಮಗೋತ್ರಮುದಾಹರನ್ ॥೧೫॥

ಅನಂತರ ನಿಮಿಯು ಊಟಮಾಡಲು ಕುಳಿತಿದ್ದ ಬ್ರಾಹ್ಮಣರ ಕಾಲುಗಳ ಕೆಳಭಾಗದಲ್ಲಿ ಮತ್ತು ದರ್ಭಾಸನದ ಮೇಲ್ಭಾಗದಲ್ಲಿ ದಕ್ಷಿಣಾಗ್ರವಾದ ದರ್ಭೆಗಳನ್ನಿರಿಸಿದನು. ಬಳಿಕ ನಿಮಿಯು ದರ್ಭೆಗಳನ್ನು ತನ್ನ ಮುಂಭಾಗದಲ್ಲಿ ದಕ್ಷಿಣಾಗ್ರವಾಗಿ ಹರಡಿದನು. ಪವಿತ್ರನಾಗಿ ಮತ್ತು ವಿನೀತನಾಗಿ ಮಗನಾದ ಶ್ರೀಮಂತನ ನಾಮ-ಗೋತ್ರಗಳನ್ನು ಹೇಳುತ್ತಾ ತನ್ನ ಮುಂಭಾಗದಲ್ಲಿದ್ದ ದರ್ಭೆಗಳ ಮೇಲೆ ಪಿಂಡಪ್ರದಾನಮಾಡಿದನು.

ಈ ವಿಧವಾಗಿ ಮಗನ ಸಲುವಾಗಿ ಶ್ರಾದ್ಧವನ್ನು ಮಾಡಿದನಂತರ ಮುನಿಶ್ರೇಷ್ಠನಾದ ನಿಮಿಯು ತನಗೆ ಧರ್ಮಸಂಕರದೋಷವು ಪ್ರಾಪ್ತವಾಯಿತೆಂದು ಭಾವಿಸಿದನು. (ಅದುವರೆಗೆ ಯಾರೂ ಮಾಡದಿದ್ದ ಶ್ರಾದ್ಧವನ್ನು ತಾನು ಮಾಡಿದುದು ಧರ್ಮಸಂಕರವೆಂಬ ಭಾವನೆಯು ನಿಮಿಗುಂಟಾಯಿತು.)

ಅಕೃತಂ ಮುನಿಭಿಃ ಪೂರ್ವಂ ಕಿಂ ಮಯೇದಮನುಷ್ಠಿತಮ್ ।
ಕಥಂ ನು ಶಾಪೇನ ನ ಮಾಂ ದಹೇಯುರ್ಬ್ರಾಹ್ಮಣಾ ಇತಿ ॥೧೬॥

“ಋಷಿಗಳು ಹಿಂದೆಂದೂ ಮಾಡದಿದ್ದ ಕರ್ಮವನ್ನು ನಾನೇಕಿಂದು ಮಾಡಿಬಿಟ್ಟೆನು? ನನ್ನ ಸ್ವೇಚ್ಛಾವರ್ತನೆಯನ್ನು ನೋಡಿ ಬ್ರಾಹ್ಮಣರು ಶಾಪಕೊಟ್ಟು ನನ್ನನ್ನು ಭಸ್ಮಮಾಡದೇ ಇರುವರೇ?”

ಈ ವಿಧವಾದ ಚಿಂತೆಯಿಂದ ಸಮಾಕುಲನಾಗಿದ್ದ ನಿಮಿಯು ತನ್ನ ವಂಶಪ್ರವರ್ತಕನಾದ ಅತ್ರಿಯನ್ನು ಧ್ಯಾನಮಾಡಿದನು. ಧ್ಯಾನಮಾಡಿದ ಮರುಕ್ಷಣದಲ್ಲಿಯೇ ತಪೋಧನನಾದ ಅತ್ರಿಯು ಆಗಮಿಸಿದನು. ತನ್ನ ವಂಶಜನಾದ ನಿಮಿಯು ಪುತ್ರಶೋಕದಿಂದ ಸಂಕಟಪಡುತ್ತಿರುವುದನ್ನು ನೋಡಿ ಅವಿನಾಶಿಯಾದ ಅತ್ರಿಯು ಇಷ್ಟವಾದ ಮತ್ತು ಮಧುರವಾದ ಮಾತುಗಳಿಂದ ನಿಮಿಯನ್ನು ಸಂತೈಸಿದನು.

"ತಪೋಧನನೇ! ನೀನು ಮಗನ ಸಲುವಾಗಿ ಪಿತೃಯಜ್ಞವಿಧಿಯಂತೆ ಸಂಕಲ್ಪಿಸಿ ಶ್ರಾದ್ಧವನ್ನು ಮಾಡಿರುವೆ. ಇದರಿಂದ ನೀನು ಧರ್ಮಸಂಕರ ವಾಯಿತೆಂದು ಭಯಪಡಬೇಕಾದ ಕಾರಣವಿಲ್ಲ. ಬ್ರಹ್ಮನೇ ಸ್ವತಃ ಈ ಧರ್ಮವನ್ನು ಹಿಂದೆಯೇ ಕಂಡುಕೊಂಡಿದ್ದಾನೆ. ಸ್ವಯಂಭೂವಿಹಿತವಾದ ಧರ್ಮವನ್ನೇ ನೀನು ಆಚರಿಸಿರುವೆ. ಬ್ರಹ್ಮನನ್ನು ಬಿಟ್ಟು ಬೇರೆ ಯಾರು ತಾನೇ ಶ್ರಾದ್ಧದಲ್ಲಿ ಈ ವಿಧಿಯನ್ನು ಆಚರಣೆಗೆ ತರಲು ಸಮರ್ಥರು? ಶ್ರಾದ್ಧದಲ್ಲಿ ಸ್ವಯಂಭೂವಿಹಿತವಾದ ಈ ವಿಧಿಯನ್ನು ನಿನಗೂ ಹೇಳುತ್ತೇನೆ. ಅದನ್ನು ಕೇಳಿ ಅದರಂತೆಯೇ ಶ್ರಾದ್ಧಕರ್ಮವನ್ನು ಮಾಡು.

ಕೃತ್ವಾಗ್ನೌಕರಣಂ ಪೂರ್ವಂ ಮನ್ತ್ರಪೂರ್ವಂ ತಪೋಧನ ।
ತತೋಗ್ನಯೇಽಥ ಸೋಮಾಯ ವರುಣಾಯ ಚ ನಿತ್ಯಶಃ ॥೨೩॥
ವಿಶ್ವೇದೇವಾಶ್ಚ ಯೇ ನಿತ್ಯಂ ಪಿತೃಭಿಃ ಸಹ ಗೋಚರಾಃ ।
ತೇಭ್ಯಃ ಸಂಕಲ್ಪಿತಾ ಭಾಗಾಃ ಸ್ವಯಮೇವ ಸ್ವಯಮ್ಭುವಾ ॥೨೪॥

ಮೊದಲು ಮಂತ್ರಪೂರ್ವಕವಾಗಿ ಅಗ್ನೌಕರಣವನ್ನು (ಅಗ್ನಿಮುಖವನ್ನು) ಮಾಡಬೇಕು. ಅನಂತರ ಅಗ್ನಿಗೂ, ಸೋಮನಿಗೂ, ವರುಣನಿಗೂ, ಪಿತೃಗಳೊಡನೆಯೇ ನಿತ್ಯವೂ ಇರುವ ವಿಶ್ವೇದೇವತೆಗಳಿಗೂ ಮಂತ್ರಪೂರ್ವಕ ವಾಗಿ ಹೋಮಮಾಡಬೇಕು. ಸಾಕ್ಷಾತ್ ಬ್ರಹ್ಮನೇ ಇವರೆಲ್ಲರಿಗೂ ಹವಿರ್ಭಾಗಗಳನ್ನು ಪಿತೃಯಜ್ಞದಲ್ಲಿ ಕಲ್ಪಿಸಿದ್ದಾನೆ.

ಸ್ತೋತವ್ಯಾ ಚೇಹ ಪೃಥಿವೀ ನಿವಾಪಸ್ಯೇಹ ಧಾರಿಣೀ ।
ವೈಷ್ಣವೀ ಕಾಶ್ಯಪೀ ಚೇತಿ ತಥೈವೇಹಾಕ್ಷಯೇತಿ ಚ ॥೨೫॥

ಅನಂತರ ಶ್ರಾದ್ಧಕ್ಕೆ ಆಧಾರಭೂತಳಾದ ಪೃಥ್ವಿಯನ್ನು ವೈಷ್ಣವೀ, ಕಾಶ್ಯಪೀ, ಅಕ್ಷಯಾ–ಇತ್ಯಾದಿನಾಮಗಳಿಂದ ಸ್ತೋತ್ರಮಾಡಬೇಕು.

ಉದಕಾನಯನೇ ಚೈವ ಸ್ತೋತವ್ಯೋ ವರುಣೋ ಪ್ರಭುಃ ।
ತತೋಽಗ್ನಿಶ್ಚೈವ ಸೋಮಶ್ಚ ಆಪ್ಯಾಯ್ಯಾವಿಹ ತೇಽನಘ ॥೨೬॥

ಶ್ರಾದ್ಧದ ಸಲುವಾಗಿ ನೀರನ್ನು ತರುವಾಗ ಪ್ರಭುವಾದ ವರುಣನ ಸ್ತೋತ್ರವನ್ನು ಮಾಡಬೇಕು. ಬಳಿಕ ಅಗ್ನಿಯನ್ನೂ ಸೋಮನನ್ನೂ ತೃಪ್ತಿಗೊಳಿಸಬೇಕು.

ದೇವಾಸ್ತು ಪಿತರೋ ನಾಮ ನಿರ್ಮಿತಾ ಯೇ ಸ್ವಯಮ್ಭುವಾ ।
ಉಷ್ಣಪಾ ಯೇ ಮಹಾಭಾಗಾಸ್ತೇಷಾಂ ಭಾಗಃ ಪ್ರಕಲ್ಪಿತಃ ॥೨೭॥

ಬ್ರಹ್ಮನಿಂದಲೇ ಹುಟ್ಟಿರುವ ಕೆಲವರು ದೇವತೆಗಳು ಪಿತೃಗಳೆಂಬ ಹೆಸರಿನಿಂದ ಪ್ರಸಿದ್ಧರಾಗಿದ್ದಾರೆ. ಮಹಾಭಾಗರಾದ ಆ ಪಿತೃಗಳನ್ನು ಉಷ್ಣಪರೆಂದೂ ಕರೆಯುತ್ತಾರೆ. ಬ್ರಹ್ಮನು ಶ್ರಾದ್ಧಗಳಲ್ಲಿ ಅವರಿಗೂ ಭಾಗವನ್ನು ಕಲ್ಪಿಸಿದ್ದಾನೆ.

ತೇ ಶ್ರಾದ್ಧೇನಾರ್ಚ್ಯಮಾನಾ ವೈ ವಿಮುಚ್ಯನ್ತೇ ಹ ಕಿಲ್ಬಿಷಾತ್ ।
ಸಪ್ತಕಃ ಪಿತೃವಂಶಸ್ತು ಪೂರ್ವದೃಷ್ಟಃ ಸ್ವಯಮ್ಭುವಾ ॥೨೮॥

ಶ್ರಾದ್ಧದ ಮೂಲಕವಾಗಿ ಉಷ್ಣಪರನ್ನು ಅರ್ಚಿಸಿದರೆ ಶ್ರಾದ್ಧಕರ್ತೃವಿನ ಪಿತೃಗಳು ಪಾಪದಿಂದ ಮುಕ್ತರಾಗುತ್ತಾರೆ. ಅಗ್ನಿಷ್ವಾತ್ತಾದಿ ಸಪ್ತಸಂಖ್ಯಾತವಾದ ಪಿತೃವಂಶವನ್ನು ಬ್ರಹ್ಮನು ಹಿಂದೆಯೇ ನಿರ್ದೇಶಿಸಿದ್ದಾನೆ.

ವಿಶ್ವೇ ಚಾಗ್ನಿಮುಖಾ ದೇವಾಃ ಸಂಖ್ಯಾತಾಃ ಪೂರ್ವಮೇವ ತೇ ।
ತೇಷಾಂ ನಾಮಾನಿ ವಕ್ಷ್ಯಾಮಿ ಭಾಗಾರ್ಹಾಣಾಂ ಮಹಾತ್ಮನಾಮ್॥

ವಿಶ್ವೇದೇವತೆಗಳು ಅಗ್ನಿಮುಖರಾದ ದೇವತೆಗಳು. ಅವರೂ ಶ್ರಾದ್ಧಕರ್ಮಗಳಲ್ಲಿ ಭಾಗಾರ್ಹರೆಂಬುದನ್ನು ಈ ಹಿಂದೆಯೇ ನಾನು ಹೇಳಿದ್ದೇನೆ. ಶ್ರಾದ್ಧದ ಹವಿರ್ಭಾಗಕ್ಕೆ ಅರ್ಹರಾದ ಇನ್ನೂ ಅನೇಕ ಮಹಾತ್ಮರಿದ್ದಾರೆ. ಅವರೆಲ್ಲರ ಶುಭನಾಮಗಳನ್ನೂ ಹೇಳುತ್ತೇನೆ.

ಬಲಂ ಧೃತಿರ್ವಿಪಾಪ್ಮಾ ಚ ಪುಣ್ಯಕೃತ್ಪಾವನಸ್ತಥಾ ।
ಪಾರ್ಷ್ಣಿಕ್ಷೇಮಾ ಸಮೂಹಶ್ಚ ದಿವ್ಯಸಾನುಸ್ತಥೈವ ಚ ॥೩೦॥

ವಿವಸ್ವಾನ್ವೀರ್ಯವಾನ್ಹ್ರೀಮಾನ್ಕೀರ್ತಿಮಾನ್ಕೃತ ಏವ ಚ ।
ಜಿತಾತ್ಮಾ ಮುನಿವೀರ್ಯಶ್ಚ ದೀಪ್ತರೋಮಾ ಭಯಂಕರಃ ॥೩೧॥
ಅನುಕರ್ಮಾ ಪ್ರತೀತಶ್ಚ ಪ್ರದಾತಾಪ್ಯಂಶುಮಾಂಸ್ತಥಾ ।
ಶೈಲಾಭಃ ಪರಮಕ್ರೋಧೀ ಧೀರೋಷ್ಣೀ ಭೂಪತಿಸ್ತಥಾ ॥೩೨॥
ಸ್ರಜೋ ವಜ್ರೀ ವರೀ ಚೈವ ವಿಶ್ವೇದೇವಾಃ ಸನಾತನಾಃ ।
ವಿದ್ಯುದ್ವರ್ಚಾಃ ಸೋಮವರ್ಚಾಃ ಸೂರ್ಯಶ್ರೀಶ್ಚೇತಿ ನಾಮತಃ ॥೩೩॥
ಸೋಮಪಃ ಸೂರ್ಯಸಾವಿತ್ರೋ ದತ್ತಾತ್ಮಾ ಪುಣ್ಡರೀಯಕಃ ।
ಉಷ್ಣೀನಾಭೋ ನಭೋದಶ್ಚ ವಿಶ್ವಾಯುರ್ದೀಪ್ತಿರೇವ ಚ ॥೩೪॥
ಚಮೂಹರಃ ಸುರೇಶಶ್ಚ ವ್ಯೋಮಾರಿಃ ಶಙ್ಕರೋ ಭವಃ ।
ಈಶಃ ಕರ್ತಾ ಕೃತಿರ್ದಕ್ಷೋ ಭುವನೋ ದಿವ್ಯಕರ್ಮಕೃತ್ ॥೩೫॥
ಗಣಿತಃ ಪಞ್ಚವೀರ್ಯಶ್ಚ ಆದಿತ್ಯೋ ರಶ್ಮಿವಾಂಸ್ತಥಾ ।
ಸಪ್ತಕೃತ್ಸೋಮವರ್ಚಾಶ್ಚ ವಿಶ್ವಕೃತ್ಕವಿರೇವ ಚ ॥೩೬॥
ಅನುಗೋಪ್ತಾ ಸುಗೋಪ್ತಾ ಚ ನಪ್ತಾ ಚೇಶ್ವರ ಏವ ಚ ।
ಕೀರ್ತಿತಾಸ್ತೇ ಮಹಾಭಾಗಾಃ ಕಾಲಸ್ಯ ಗತಿಗೋಚರಾಃ ॥೩೭॥

ಬಲ, ಧೃತಿ, ವಿಪಾಪ್ಮಾ, ಪುಣ್ಯಕೃತ್, ಪಾವನ, ಪಾರ್ಷ್ಣಿಕ್ಷೇಮಾ, ಸಮೂಹ, ದಿವ್ಯಸಾನು, ವಿವಸ್ವಂತ, ವೀರ್ಯವಂತ, ಹ್ರೀಮಂತ, ಕೀರ್ತಿಮಂತ, ಕೃತ, ಜಿತಾತ್ಮಾ, ಮುನಿವೀರ್ಯ, ದೀಪ್ತರೋಮಾ, ಭಯಂಕರ, ಅನುಕರ್ಮಾ, ಪ್ರತೀತ, ಪ್ರದಾತಾ, ಅಂಶುಮಂತ, ಶೈಲಾಭ, ಪರಮಕ್ರೋಧೀ, ಧೀರೋಷ್ಣೀ, ಭೂಪತಿ, ಸ್ರಜ, ವಜ್ರೀ, ವರೀ, ಸನಾತನರಾದ ವಿಶ್ವೇದೇವತೆಗಳು, ವಿದ್ಯುದ್ವರ್ಚಸ, ಸೋಮವರ್ಚಸ, ಸೂರ್ಯಶ್ರೀ, ಸೋಮಪ, ಸೂರ್ಯಸಾವಿತ್ರ, ದತ್ತಾತ್ಮಾ, ಪುಂಡರೀಯಕ, ಉಷ್ಣೀನಾಭ, ನಭೋದ, ವಿಶ್ವಾಯು, ದೀಪ್ತಿ, ಚಮೂಹರ, ಸುರೇಶ, ವ್ಯೋಮಾರಿ, ಶಂಕರ, ಭವ, ಈಶ, ಕರ್ತಾ, ಕೃತಿ, ದಕ್ಷ, ಭುವನ, ದಿವ್ಯಕರ್ಮಕೃತ್, ಗಣಿತ, ಪಂಚವೀರ್ಯ, ಆದಿತ್ಯ, ರಶ್ಮಿವಂತ, ಸಪ್ತಕೃತ್, ಸೋಮವರ್ಚಸ, ವಿಶ್ವಕೃತ್, ಕವಿ, ಅನುಗೋಪ್ತಾ, ಸುಗೋಪ್ತಾ, ನಪ್ತಾ ಮತ್ತು ಈಶ್ವರ.

ನಿಮಿಯೇ! ಇವರೆಲ್ಲರೂ ವಿಶ್ವೇದೇವತೆಗಳು. ಹೀಗೆ ನಿನಗೆ ಸನಾತನರಾದ ವಿಶ್ವೇದೇವತೆಗಳ ಶುಭನಾಮಗಳನ್ನು ಹೇಳಿದ್ದೇನೆ. ಮಹಾಭಾಗ್ಯಶಾಲಿಗಳಾದ ಇವರೆಲ್ಲರೂ ಕಾಲದ ಗತಿಯನ್ನು ತಿಳಿದವರಾಗಿದ್ದಾರೆ.

ಈಗ ನಾನು ನಿನಗೆ ಶ್ರಾದ್ಧದಲ್ಲಿ ನಿಷಿದ್ಧವಾದ ವಸ್ತುಗಳನ್ನು ಹೇಳುತ್ತೇನೆ.

ಅಶ್ರಾದ್ಧೇಯಾನಿ ಧಾನ್ಯಾನಿ ಕೋದ್ರವಾಃ ಪುಲಕಾಸ್ತಥಾ ।
ಹಿಂಗುದ್ರವ್ಯೇಷು ಶಾಕೇಷು ಪಲಾಣ್ಡುಂ ಲಸುನಂ ತಥಾ ॥೩೮॥

ಸೌಭಾಞ್ಜನಃ ಕೋವಿದಾರಸ್ತಥಾ ಗೃಞ್ಜನಕಾದಯಃ ।
ಕೂಶ್ಮಾಣ್ಡಜಾತ್ಯಲಾಬುಂ ಚ ಕೃಷ್ಣಂ ಲವಣಮೇವ ಚ ॥೩೯॥

ಗ್ರಾಮ್ಯವಾರಾಹಮಾಂಸಂ ಚ ಯಚ್ಚೈವಾಪ್ರೋಕ್ಷಿತಂ ಭವೇತ್ ।
ಕೃಷ್ಣಾ ಜಾಜೀ ವಿಡಶ್ಚೈವ ಶೀತಪಾಕೀ ತಥೈವ ಚ ।
ಅಙ್ಕುರಾದ್ಯಾಸ್ತಥಾ ವರ್ಜ್ಯಾ ಇಹ ಶೃಙ್ಗಾಟಕಾನಿ ಚ ॥೪೦॥

ಹಾರಕಧಾನ್ಯಗಳನ್ನಾಗಲೀ, ಕ್ಷುದ್ರಧಾನ್ಯಗಳನ್ನಾಗಲೀ ಶ್ರಾದ್ಧದಲ್ಲಿ ಉಪಯೋಗಿಸಬಾರದು. ಒಗ್ಗರಣೆಹಾಕುವ ಪದಾರ್ಥಗಳಲ್ಲಿ ಹಿಂಗನ್ನು ಉಪಯೋಗಿಸಬಾರದು. ತರಕಾರಿಗಳಲ್ಲಿ ಈರುಳ್ಳಿ, ಬೆಳ್ಳುಳ್ಳಿ, ನುಗ್ಗೇಕಾಯಿ, ಕೆಂಚನಾಳದ ಕಾಯಿ, ಗಜ್ಜರಿ ಅಥವಾ ಗಾಜಿನ ಗೆಡ್ಡೆ, ಬೂದಿಗುಂಬಳ, ಸೋರೇ ಮುಂತಾದುವು, ಕಪ್ಪುಬಣ್ಣದ ಉಪ್ಪು, ಗ್ರಾಮವಾಸಿಯಾದ (ಸಾಕಿದ) ಹಂದಿಯ ಮಾಂಸ, ಅಪ್ರೋಕ್ಷಿತವಾದ (ಸಂಸ್ಕಾರಹೀನವಾದ) ಪದಾರ್ಥಗಳು, ಕಪ್ಪುಜೀರಿಗೆ, ನಿಂಬುಪ್ಪು, ಶೀತಪಾಕೀ–ಎಂಬ ತರಕಾರಿ, ಮೊಳಕೆಬಂದಿರುವ ಧಾನ್ಯಗಳು, ಶೃಂಗಾಟಕವೇ ಮೊದಲಾದ ಬಳ್ಳಿಗಳು–ಇವುಗಳನ್ನು ಶ್ರಾದ್ಧದಲ್ಲಿ ಉಪಯೋಗಿಸಬಾರದು.

ವರ್ಜಯೇಲ್ಲವಣಂ ಸರ್ವಂ ತಥಾ ಜಮ್ಬೂಫಲಾನಿ ಚ ।
ಅವಕ್ಷತಾವರುದಿತಂ ತಥಾ ಶ್ರಾದ್ಧೇ ಚ ವರ್ಜಯೇತ್ ॥೪೧॥

ಎಲ್ಲ ವಿಧವಾದ ಉಪ್ಪನ್ನೂ ನೇರಳೆಯ ಹಣ್ಣನ್ನೂ ವರ್ಜಿಸಬೇಕು. ಸೀನಿನಿಂದ ಮತ್ತು ಕಣ್ಣೀರಿನಿಂದ ದೂಷಿತವಾದ ಪದಾರ್ಥಗಳನ್ನು ಶ್ರಾದ್ಧದಲ್ಲಿ ವರ್ಜಿಸಬೇಕು.

ನಿವಾಪೇ ಹವ್ಯಕವ್ಯೇ ವಾ ಗರ್ಹಿತಂ ಚ ಶ್ವದರ್ಶನಮ್ ।
ಪಿತರಶ್ಚ ಹಿ ದೇವಾಶ್ಚ ನಾಭಿನನ್ದನ್ತಿ ತದ್ಧವಿಃ ॥೪೨॥

ಪಿತೃತರ್ಪಣಸಮಯದಲ್ಲಾಗಲೀ, ಹವ್ಯ-ಕವ್ಯಗಳ ಸಮಯದಲ್ಲಾಗಲೀ ನಾಯಿಯ ದರ್ಶನವು ಗರ್ಹಿತವಾದುದು. ನಾಯಿಯು ನೋಡಿದ ಹವಿಸ್ಸನ್ನು ಪಿತೃಗಳಾಗಲೀ ದೇವತೆಗಳಾಗಲೀ ಇಷ್ಟಪಡುವುದಿಲ್ಲ.

ಚಾಣ್ಡಾಲಶ್ವಪಚೌ ವರ್ಜ್ಯೌ ನಿವಾಪೇ ಸಮುಪಸ್ಥಿತೇ ।
ಕಾಷಾಯವಾಸಾಃ ಕುಷ್ಠೀ ವಾ ಪತಿತೋ ಬ್ರಹ್ಮಹಾಪಿ ವಾ ॥೪೩॥

ಸಂಕೀರ್ಣಯೋನಿರ್ವಿಪ್ರಶ್ಚ ಸಮ್ಬನ್ಧೀ ಪತಿತಶ್ಚ ಯಃ ।
ವರ್ಜನೀಯಾ ಬುಧೈರೇತೇ ನಿವಾಪೇ ಸಮುಪಸ್ಥಿತೇ ॥೪೪॥

ಪಿಂಡಪ್ರದಾನದ ಸಮಯದಲ್ಲಿ ಚಂಡಾಲನಾಗಲೀ, ಶ್ವಪಚನಾಗಲೀ ಇರಬಾರದು. ಕಾಷಾಯವಸ್ತ್ರವನ್ನು ಧರಿಸಿರುವವನು, ಕುಷ್ಠರೋಗಿಯು, ಪತಿತನು, ಬ್ರಹ್ಮಹತ್ಯೆಯನ್ನು ಮಾಡಿದವನು, ಸಂಕರಯೋನಿಯಲ್ಲಿ ಹುಟ್ಟಿರುವ ಬ್ರಾಹ್ಮಣ, ಧರ್ಮಭ್ರಷ್ಟನಾದ ಸಂಬಂಧಿ–ಇವರುಗಳನ್ನು ವಿದ್ವಾಂಸರಾದವರು ಶ್ರಾದ್ಧದಲ್ಲಿ ವರ್ಜಿಸಬೇಕು.”

ತಪೋಧನನಾದ ಅತ್ರಿಯು ತನ್ನ ವಂಶೀಯನಾದ ನಿಮಿಗೆ ಹೀಗೆ ಹೇಳಿ ದಿವ್ಯವಾದ ಬ್ರಹ್ಮನ ಸಭೆಗೆ ತೆರಳಿದನು.”

೯೧ನೆಯ ಅಧ್ಯಾಯವು ಮುಗಿಯಿತು.

೯೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪಿತೃದೇವತೆಗಳಿಗೂ ದೇವತೆಗಳಿಗೂ ಶ್ರಾದ್ಧಾನ್ನವು ಜೀರ್ಣಿಸದೇ ಪಿತಾಮಹನ ಬಳಿಗೆ ಹೋದುದು: ಅಗ್ನಿಯ ಮೂಲಕ ಅಜೀರ್ಣದ ನಿವಾರಣೆ: ಶ್ರಾದ್ಧದಲ್ಲಿ ತೃಪ್ತರಾದ ಪಿತೃಗಳ ಆಶೀರ್ವಾದ

ಭೀಷ್ಮನು ಹೇಳುತ್ತಾನೆ:

ತಥಾ ನಿಮೌ ಪ್ರವೃತ್ತೇ ತು ಸರ್ವ ಏವ ಮಹರ್ಷಯಃ ।
ಪಿತೃಯಜ್ಞಂ ತು ಕುರ್ವನ್ತಿ ವಿಧಿದೃಷ್ಟೇನ ಕರ್ಮಣಾ ॥೧॥

"ಯುಧಿಷ್ಠಿರ! ಹೀಗೆ ನಿಮಿಯು ಶ್ರಾದ್ಧಕರ್ಮವನ್ನು ಪ್ರಾರಂಭಿಸಿದನಂತರ ಮುಂದೆ ಎಲ್ಲ ಮಹರ್ಷಿಗಳೂ ಶಾಸ್ತ್ರವಿಧಿಗೆ ಅನುಸಾರವಾಗಿ ಪಿತೃಯಜ್ಞವನ್ನು ಮಾಡಲು ಉಪಕ್ರಮಿಸಿದರು.

ಸದಾ ಧರ್ಮಮಾರ್ಗದಲ್ಲಿಯೇ ತತ್ಪರರಾದ, ನಿಯಮಪೂರ್ವಕವಾಗಿ ವ್ರತಾನುಷ್ಠಾನಗಳನ್ನು ಮಾಡುವ ಮಹರ್ಷಿಗಳು ಪಿತೃಯಜ್ಞದಲ್ಲಿ ಪಿಂಡ ಪ್ರದಾನವನ್ನು ಮಾಡಿದನಂತರ ಪುಣ್ಯತೀರ್ಥಗಳ ಜಲದಿಂದ ತರ್ಪಣವನ್ನು ಕೊಡುತ್ತಿದ್ದರು. ಕಾಲಾನುಕ್ರಮವಾಗಿ ಚಾತುರ್ವರ್ಣ್ಯದವರೂ ಪಿಂಡಪ್ರದಾನಾದಿಗಳಿಂದ ಪಿತೃಗಳನ್ನೂ ದೇವತೆಗಳನ್ನೂ ತೃಪ್ತಿಗೊಳಿಸುತ್ತಿದ್ದರು. ಹೀಗೆ ಶ್ರಾದ್ಧಮಾಡುವವರ ಸಂಖ್ಯೆಯು ಬೆಳೆದಂತೆ ದೇವತೆಗಳೂ ಮತ್ತು ಪಿತೃಗಳೂ ಅಜೀರ್ಣರೋಗದಿಂದ ಪೀಡಿತರಾದರು. ಅತಿಯಾದ ಶ್ರಾದ್ಧಾನ್ನದಿಂದ ಪೀಡಿತರಾದ ಅವರು ಅಜೀರ್ಣರೋಗ ನಿವಾರಣೋಪಾಯವನ್ನು ಕಂಡುಕೊಳ್ಳಲು ಸೋಮನ ಬಳಿಗೆ ಹೋದರು. ಸೋಮನನ್ನು ಸಂಧಿಸಿ 'ನಾವು ಶ್ರಾದ್ಧಾನ್ನದಿಂದ ಪೀಡಿತರಾಗಿದ್ದೇವೆ. ಈ ಅಜೀರ್ಣರೋಗವನ್ನು ತಪ್ಪಿಸಿ ನಮಗೆ ಶ್ರೇಯಸ್ಸುಂಟಾಗುವಂತೆ ಮಾಡು'–ಎಂದು ಕೇಳಿಕೊಂಡರು.

ದೇವ-ಪಿತೃಗಳ ಪ್ರಾರ್ಥನೆಗೆ ಉತ್ತರವಾಗಿ ಸೋಮನು: 'ದೇವತೆಗಳೇ! ನೀವು ಶ್ರೇಯಸ್ಸನ್ನು ಬಯಸುವವರಾಗಿದ್ದರೆ ಈಗಲೇ ಬ್ರಹ್ಮಭವನಕ್ಕೆ ಹೋಗಿರಿ. ಅವನೇ ನಿಮಗೆ ಕಲ್ಯಾಣವನ್ನುಂಟುಮಾಡುತ್ತಾನೆ'–ಎಂದು ಹೇಳಿದನು.

ಸೋಮನು ಹೇಳಿದಂತೆ ದೇವತೆಗಳು ಪಿತೃಗಳೊಡನೆ ಮೇರುಶಿಖರದಲ್ಲಿ ವಿರಾಜಮಾನನಾಗಿದ್ದ ಬ್ರಹ್ಮನ ಬಳಿಗೆ ಹೋಗಿ ಅವನಲ್ಲಿ ತಮ್ಮ ಕಷ್ಟವನ್ನು ತೋಡಿಕೊಂಡರು:

'ಪೂಜ್ಯನೇ! ನಾವು ಅಪಾರವಾದ ಶ್ರಾದ್ಧಾನ್ನವನ್ನು ತಿಂದು ಅಜೀರ್ಣರೋಗದಿಂದ ಕಷ್ಟಪಡುತ್ತಿದ್ದೇವೆ. ನಮ್ಮ ವಿಷಯದಲ್ಲಿ ಕೃಪೆದೋರು. ನಮಗೆ ಶ್ರೇಯಸ್ಸುಂಟಾಗುವಂತೆ ಮಾಡು.'

'ದೇವಪಿತೃಗಳೇ! ನನ್ನ ಸಮೀಪದಲ್ಲಿರುವ ಈ ಅಗ್ನಿದೇವನು ನಿಮಗೆ ಶ್ರೇಯಸ್ಸನ್ನು ಉಂಟುಮಾಡುತ್ತಾನೆ'–ಎಂದು ಬ್ರಹ್ಮನು ಹೇಳಲು ಅಗ್ನಿದೇವನು ದೇವತೆಗಳನ್ನು ಸಂತೈಸುತ್ತಾ ಹೇಳಿದನು:

ಸಹಿತಾಸ್ತಾತ ಭೋಕ್ಷ್ಯಾಮೋ ನಿವಾಪೇ ಸಮುಪಸ್ಥಿತೇ ।
ಜರಯಿಷ್ಯಥ ಚಾಪ್ಯನ್ನಂ ಮಯಾ ಸಾರ್ಧಂ ನ ಸಂಶಯಃ ॥೧೦॥

"ದೇವ-ಪಿತೃಗಳೇ! ಶ್ರಾದ್ಧದ ಸಮಯದಲ್ಲಿ ನಾವೆಲ್ಲರೂ ಸೇರಿಯೇ ಭೋಜನಮಾಡೋಣ. ನನ್ನೊಡನೆ ಭೋಜನಮಾಡುವ ನೀವು ಶ್ರಾದ್ಧಾನ್ನವನ್ನು ಅರಗಿಸಿಕೊಳ್ಳುವಿರಿ. ಇದರಲ್ಲಿ ಸಂಶಯವೇ ಇಲ್ಲ."

ನರೇಶ್ವರನೇ! ಅಗ್ನಿಯ ಮಾತನ್ನು ಕೇಳಿ ಪಿತೃದೇವತೆಗಳು ನಿಶ್ಚಿಂತ ರಾದರು. ಈ ಕಾರಣದಿಂದಲೇ ಶ್ರಾದ್ಧಸಮಯದಲ್ಲಿ ಅಗ್ನಿಗೆ ಮೊದಲು ಹವಿರ್ಭಾಗವನ್ನು ಕೊಡುತ್ತಾರೆ. ಹೋಮದ ಮೂಲಕವಾಗಿ ಅಗ್ನಿಗೆ ಮೊದಲು ಹವಿರ್ಭಾಗವನ್ನು ಕೊಟ್ಟನಂತರ ಪಿತೃಗಳಿಗೆ ಪಿಂಡಪ್ರದಾನವನ್ನು ಮಾಡು ತ್ತಾರೆ. ಅಂತಹ ಪಿಂಡವನ್ನು ಬ್ರಹ್ಮರಾಕ್ಷಸರು ದೂಷ್ಯವನ್ನಾಗಿ ಮಾಡುವುದಿಲ್ಲ.

ರಕ್ಷಾಂಸಿ ಚಾಪವರ್ತನ್ತೇ ಸ್ಥಿತೇ ದೇವೇ ಹುತಾಶನೇ ।
ಪೂರ್ವಂ ಪಿಣ್ಡಂ ಪಿತುರ್ದದ್ಯಾತ್ತತೋ ದದ್ಯಾತ್ಪಿತಾಮಹೇ ॥೧೩॥
ಪ್ರಪಿತಾಮಹಾಯ ಚ ತತ ಏಷ ಶ್ರಾದ್ಧವಿಧಿಃ ಸ್ಮೃತಃ ।
ಬ್ರೂಯಾಚ್ಛ್ರಾದ್ಧೇ ಚ ಸಾವಿತ್ರೀಂ ಪಿಣ್ಡೇ ಪಿಣ್ಡೇ ಸಮಾಹಿತಃ ॥೧೪॥

ಶ್ರಾದ್ಧಸಮಯದಲ್ಲಿ ಅಗ್ನಿದೇವನು ವಿರಾಜಮಾನನಾಗಿರುವಾಗ ರಾಕ್ಷಸರೆಲ್ಲರೂ ಅಲ್ಲಿಂದ ಓಡಿಹೋಗುತ್ತಾರೆ. ಮೊದಲು ತಂದೆಗೆ ಪಿಂಡ ಪ್ರದಾನಮಾಡಬೇಕು. ಅನಂತರ ಪಿತಾಮಹನಿಗೆ ಪಿಂಡಪ್ರದಾನಮಾಡ

ಬೇಕು. ಅನಂತರ ಪ್ರಪಿತಾಮಹನಿಗೆ (ಮುತ್ತಾತನಿಗೆ) ಪಿಂಡಪ್ರದಾನಮಾಡ ಬೇಕು. ಇದನ್ನೇ ಶ್ರಾದ್ಧವಿಧಿ ಎನ್ನುತ್ತಾರೆ. ಶ್ರಾದ್ಧದಲ್ಲಿ ಒಂದೊಂದು ಪಿಂಡ ವನ್ನಿಡುವಾಗಲೂ ಏಕಾಗ್ರಚಿತ್ತನಾಗಿ ಗಾಯತ್ರೀಮಂತ್ರವನ್ನು ಉಚ್ಚರಿಸಬೇಕು.

ಸೋಮಾಯೇತಿ ಚ ವಕ್ತವ್ಯಂ ತಥಾ ಪಿತೃಮತೇತಿ ಚ ।

ಪಿಂಡಪ್ರದಾನದ ಮೊದಲು ಅಗ್ನಿಗೂ ಮತ್ತು ಸೋಮನಿಗೂ ಹೋಮದ ಮೂಲಕವಾಗಿ ಹವಿರ್ಭಾಗಗಳನ್ನು ಕೊಡಬೇಕು. ಅದರ ಮಂತ್ರವು ಕ್ರಮವಾಗಿ ಹೀಗಿರುತ್ತದೆ: **ಅಗ್ನಯೇ ಕವ್ಯವಾಹನಾಯ ಸ್ವಾಹಾ । ಸೋಮಾಯ ಪಿತೃಮತೇ ಸ್ವಾಹಾ ।**

ರಜಸ್ವಲಾ ಚ ಯಾ ನಾರೀ ವ್ಯಙ್ಗಿತಾ ಕರ್ಣಯೋಶ್ಚ ಯಾ ।
ನಿವಾಪೇ ನೋಪತಿಷ್ಠೇತ ಸಂಗ್ರಾಹ್ಯಾ ನಾನ್ಯವಂಶಜಾ ॥೧೫॥

ಶ್ರಾದ್ಧಸಮಯದಲ್ಲಿ ರಜಸ್ವಲೆಯಾದ, ಕಿವುಡಿಯಾದ ಮತ್ತು ಅನ್ಯ ವಂಶಕ್ಕೆ ಸೇರಿದ ಸ್ತ್ರೀಯರು ಇರಬಾರದು.

ಜಲಂ ಪ್ರತರಮಾಣಶ್ಚ ಕೀರ್ತಯೇತ ಪಿತಾಮಹಾನ್ ।
ನದೀಮಾಸಾದ್ಯ ಕುರ್ವೀತ ಪಿತೄಣಾಂ ಪಿಣ್ಡತರ್ಪಣಮ್ ॥೧೬॥

ನೀರನ್ನು ದಾಟುತ್ತಿರುವಾಗ ಪಿತಾಮಹರ ಶುಭನಾಮಗಳನ್ನು ಕೀರ್ತನಮಾಡಬೇಕು. ನದೀತೀರಕ್ಕೆ ಹೋಗಿ ಪಿತೃಗಳಿಗೆ ಪಿಂಡಪ್ರದಾನಮಾಡಿ ತರ್ಪಣವನ್ನು ಕೊಡಬೇಕು.

ಪೂರ್ವಂ ಸ್ವವಂಶಜಾನಾಂ ತು ಕೃತ್ವಾದ್ಭಿಸ್ತರ್ಪಣಂ ಪುನಃ ।
ಸುಹೃತ್ಸಂಬನ್ಧಿವರ್ಗಾಣಾಂ ತತೋ ದದ್ಯಾಜ್ಜಲಾಞ್ಜಲಿಮ್ ॥೧೭॥

ಮೊದಲು ತನ್ನ ಮಾತಾ-ಪಿತೃವರ್ಗದವರಿಗೆ ಜಲತರ್ಪಣವನ್ನಿತ್ತು ಅನಂತರ ಸುಹೃದರಿಗೂ ಮಾತುಲಾದಿ ಸಂಬಂಧಿವರ್ಗದವರಿಗೂ ಜಲಾಂಜಲಿಯನ್ನು (ತರ್ಪಣವನ್ನು) ಕೊಡಬೇಕು.

ಕಲ್ಮಾಷಗೋಯುಗೇನಾಥ ಯುಕ್ತೇನ ತರತೋ ಜಲಮ್ ।
ಪಿತರೋಽಭಿಲಷನ್ತೇ ವೈ ನಾವಂ ಚಾಪ್ಯಧಿರೋಹತಃ ॥೧೮॥

ಚಿತ್ರವರ್ಣದ ಎರಡೆತ್ತುಗಳನ್ನು ಕಟ್ಟಿರುವ ಗಾಡಿಯಲ್ಲಿ ಕುಳಿತು

ನದಿಯನ್ನು ದಾಟುತ್ತಿರುವವನಿಂದಲೂ ನಾವೆಯನ್ನು ಹತ್ತುತ್ತಿರುವವನಿಂದಲೂ ಪಿತೃಗಳು ತರ್ಪಣವನ್ನು ಅಪೇಕ್ಷಿಸುತ್ತಾರೆ.

ಸದಾ ನಾವಿ ಜಲಂ ತಜ್ಜ್ಞಾಃ ಪ್ರಯಚ್ಛನ್ತಿ ಸಮಾಹಿತಾಃ ।

ಪಿಂಡಪ್ರದಾನ-ತರ್ಪಣಾದಿಗಳ ವಿಷಯವನ್ನು ತಿಳಿದಿರುವ ವಿದ್ವಾಂಸರು ಏಕಾಗ್ರಚಿತ್ತರಾಗಿ ನಾವೆಯಲ್ಲಿಯೇ ಸದಾ ಪಿತೃಗಳಿಗೆ ತರ್ಪಣವನ್ನು ಕೊಡುತ್ತಾರೆ.

ಮಾಸಾರ್ಧೇ ಕೃಷ್ಣಪಕ್ಷಸ್ಯ ಕುರ್ಯಾನ್ನಿರ್ವಪಣಾನಿ ಚ ।
ಪುಷ್ಟಿರಾಯುಸ್ತಥಾ ವೀರ್ಯಂ ಶ್ರೀಶ್ಚೈವ ಪಿತೃಭಕ್ತಿತಃ ॥೧೯॥

ಕೃಷ್ಣಪಕ್ಷದ ಮಾಸಾರ್ಧದ ದಿವಸದಂದು (ಅಮಾವಾಸ್ಯೆಯಲ್ಲಿ) ಪಿತೃಗಳ ಸಲುವಾಗಿ ಶ್ರಾದ್ಧ-ತರ್ಪಣಾದಿಗಳನ್ನು ಮಾಡಬೇಕು. ಭಕ್ತಿಪೂರ್ವಕವಾಗಿ ಪಿತೃಗಳಿಗೆ ಶ್ರಾದ್ಧ-ತರ್ಪಣಾದಿಗಳನ್ನು ಮಾಡಿದರೆ ಪುಷ್ಟಿ, ಆಯುಸ್ಸು ಮತ್ತು ಸಂಪತ್ತುಗಳು ಪ್ರಾಪ್ತವಾಗುತ್ತವೆ.*

ಪಿತಾಮಹಃ ಪುಲಸ್ತ್ಯಶ್ಚ ವಸಿಷ್ಠಃ ಪುಲಹಸ್ತಥಾ ।
ಅಙ್ಗಿರಾಶ್ಚ ಕ್ರತುಶ್ಚೈವ ಕಶ್ಯಪಶ್ಚ ಮಹಾನೃಷಿಃ ॥೨೦॥
ಏತೇ ಕುರುಕುಲಶ್ರೇಷ್ಠ ಮಹಾಯೋಗೇಶ್ವರಾಃ ಸ್ಮೃತಾಃ ।
ಏತೇ ಚ ಪಿತರೋ ರಾಜನ್ನೇಷ ಶ್ರಾದ್ಧವಿಧಿಃ ಪರಃ ॥೨೧॥

ಕುರುಕುಲಶ್ರೇಷ್ಠನೇ! ಬ್ರಹ್ಮಾ, ಪುಲಸ್ತ್ಯ, ವಸಿಷ್ಠ, ಪುಲಹ, ಅಂಗಿರಸ, ಕ್ರತು ಮತ್ತು ಮಹರ್ಷಿಯಾದ ಕಾಶ್ಯಪ–ಈ ಏಳು ಋಷಿಗಳು ಮಹಾಯೋಗೇಶ್ವರರೆಂದೂ–ಪಿತೃಗಳೆಂದೂ ಹೇಳಲ್ಪಟ್ಟಿದ್ದಾರೆ. ಈಗ ನಾನು ಹೇಳಿದುದೇ ಶ್ರಾದ್ಧದ ಉತ್ತಮವಿಧಿಯಾಗಿದೆ.

ಪ್ರೇತಾಸ್ತು ಪಿಣ್ಡಸಂಬನ್ಧಾನ್ಮುಚ್ಯನ್ತೇ ತೇನ ಕರ್ಮಣಾ ।
ಇತ್ಯೇಷಾ ಪುರುಷಶ್ರೇಷ್ಠ ಶ್ರಾದ್ಧೋತ್ಪತ್ತಿರ್ಯಥಾಗಮಮ್ ।
ವ್ಯಾಖ್ಯಾತಾ ಪೂರ್ವನಿರ್ದಿಷ್ಟಾ ದಾನಂ ವಕ್ಷ್ಯಾಮ್ಯತಃ ಪರಮ್ ॥೨೨॥

---

* ಕೃಷ್ಣಪಕ್ಷಸ್ಯ ಮಾಸಾರ್ಧೇ ಎಂಬುದಕ್ಕೆ ಅಮಾವಾಸ್ಯೆ ಎಂದು ಅರ್ಥಮಾಡಲಾಗಿದೆ. ಆದರೆ ನಾವು ಎಣಿಸುತ್ತಿರುವಂತೆ ಶುಕ್ಲಪಕ್ಷದ ಆದಿಯಾಗಿ ಮಾಸದ ಎಣಿಕೆಯನ್ನು ಇಟ್ಟುಕೊಂಡರೆ ಮಾಸಾರ್ಧವು ಹುಣ್ಣಿಮೆಯಾಗುತ್ತದೆ. ಹಿಂದೆ ಕೃಷ್ಣಪಕ್ಷದ ಪ್ರಾರಂಭದಿಂದಲೇ ಮಾಸದ ಎಣಿಕೆಯಿದ್ದಿತು. ಈಗಲೂ ಉತ್ತರಭಾರತದಲ್ಲಿ ಕೃಷ್ಣಪಕ್ಷದ ಆದಿಯಿಂದಲೇ ಮಾಸವು ಪ್ರಾರಂಭವಾಗುತ್ತದೆ.

ಪುರುಷಶ್ರೇಷ್ಠನೇ! ಪಿಂಡದ ಸಂಬಂಧವು ಉಂಟಾದೊಡನೆಯೇ ಪಿಂಡಪ್ರದಾನರೂಪವಾದ ಶ್ರಾದ್ಧಕರ್ಮದಿಂದ ಪ್ರೇತರೂಪದಲ್ಲಿರುವ ಪಿತೃಗಳು ಪ್ರೇತತ್ವದಿಂದ ಮುಕ್ತರಾಗುತ್ತಾರೆ. ಯುಧಿಷ್ಠಿರ! ಶಾಸ್ತ್ರಾನುಸಾರವಾಗಿ ನಿನಗೆ ಹಿಂದೆ ಹೇಳಿದ್ದ ಶ್ರಾದ್ಧದ ಉತ್ಪತ್ತಿಯ ಪ್ರಸಂಗವನ್ನು ವಿಸ್ತಾರವಾಗಿ ಹೇಳಿದ್ದೇನೆ. ಇನ್ನು ಮುಂದೆ ದಾನದ ವಿಷಯವನ್ನು ಹೇಳುತ್ತೇನೆ."

೯೨ನೆಯ ಅಧ್ಯಾಯವು ಮುಗಿಯಿತು.

೯೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೃಹಸ್ಥಧರ್ಮದ ರಹಸ್ಯ: ಪ್ರತಿಗ್ರಹದೋಷಸಂಬಂಧವಾಗಿ ವೃಷಾದರ್ಭಿಯ ಮತ್ತು ಸಪ್ತರ್ಷಿಗಳ ಕಥೆ: ಭಿಕ್ಷುರೂಪಧರನಾದ ಇಂದ್ರನಿಂದ ಕೃತ್ಯೆಯ ಸಂಹಾರ: ಸಪ್ತರ್ಷಿಗಳ ರಕ್ಷಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ದ್ವಿಜಾತಯೋ ವ್ರತೋಪೇತಾ ಹವಿಸ್ತೇ ಯದಿ ಭುಞ್ಜತೇ ।
ಅನ್ನಂ ಬ್ರಾಹ್ಮಣಕಾಮಾಯ ಕಥಮೇತತ್ಪಿತಾಮಹ ॥೧॥

"ಪಿತಾಮಹನೇ! ವ್ರತನಿಷ್ಠರಾದ ಬ್ರಾಹ್ಮಣರು ಬ್ರಾಹ್ಮಣನೊಬ್ಬನ ಇಚ್ಛೆಯನ್ನು ಪೂರೈಸುವ ಸಲುವಾಗಿ ಶ್ರಾದ್ಧಾನ್ನವನ್ನು ಊಟಮಾಡಿದರೆ ಅದು ನಿನಗೆ ಹೇಗೆನಿಸುತ್ತದೆ? (ವ್ರತನಿಷ್ಠರಾದವರು ಬ್ರಾಹ್ಮಣನ ಇಚ್ಛೆಯನ್ನು ಪೂರೈಸುವ ಸಲುವಾಗಿ ವ್ರತಭಂಗಮಾಡಿಕೊಳ್ಳುವುದು ಸರಿಯೇ?)"

ಭೀಷ್ಮನು ಹೇಳುತ್ತಾನೆ:

ಅವೇದೋಕ್ತವ್ರತಾಶ್ಚೈವ ಭುಞ್ಜಾನಾಃ ಕಾಮಕಾರಣೇ ।
ವೇದೋಕ್ತೇಷು ಭುಞ್ಜಾನಾ ವ್ರತಲುಪ್ತಾ ಯುಧಿಷ್ಠಿರ ॥೨॥

"ವೇದೋಕ್ತವ್ರತಗಳಲ್ಲಿ ತೊಡಗದವರು ಬ್ರಾಹ್ಮಣನ ಇಚ್ಛೆಯನ್ನು ಪೂರೈಸುವ ಸಲುವಾಗಿ ಶ್ರಾದ್ಧಾನ್ನವನ್ನು ಭೋಜನಮಾಡಬಹುದು. ಆದರೆ ವೇದೋಕ್ತವಾದ ಯಜ್ಞಾಂಗವ್ರತಗಳನ್ನು ಅನುಷ್ಠಾನಮಾಡುತ್ತಿರುವವರು

ಶ್ರಾದ್ಧಾನ್ನವನ್ನು ಭುಂಜಿಸಿದರೆ ವ್ರತಭ್ರಷ್ಟರಾಗುತ್ತಾರೆ. (ಅಂತಹವರು ವ್ರಾತಪತೀಷ್ಟಿರೂಪವಾದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗುತ್ತದೆ.)"

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಯದಿದಂ ತಪ ಇತ್ಯಾಹುರುಪವಾಸಂ ಪೃಥಗ್ಜನಾಃ ।
ತಪಃ ಸ್ಯಾದೇತದೇವೇಹ ತಪೋಽನ್ಯದ್ವಾಪಿ ಕಿಂ ಭವೇತ್ ॥೩॥

"ಕುರುಶ್ರೇಷ್ಠನೇ! ಸಾಮಾನ್ಯಜನರು ಉಪವಾಸವನ್ನೇ ತಪಸ್ಸೆಂದು ಹೇಳುತ್ತಾರೆ. ಇದರಲ್ಲಿ ನಿನ್ನ ಅಭಿಪ್ರಾಯವೇನು? ನಿಶ್ಚಯವಾಗಿಯೂ ಉಪವಾಸವೇ ತಪಸ್ಸೇ? ಅಥವಾ ಬೇರೆ ಯಾವುದಾದರೂ ತಪಸ್ಸೆಂಬುದಿರುವುದೇ?"

ಭೀಷ್ಮನು ಹೇಳುತ್ತಾನೆ:

ಮಾಸಾರ್ಧಮಾಸೋಪವಾಸಾದ್ಯತ್ತಪೋ ಮನ್ಯತೇ ಜನಃ ।
ಆತ್ಮತನ್ತ್ರೋಪಘಾತೀ ಯೋ ನ ತಪಸ್ವೀ ನ ಧರ್ಮವಿತ್ ॥೪॥

"ಯುಧಿಷ್ಠಿರ! ಯಾರು ಅರ್ಧಮಾಸ ಅಥವಾ ಒಂದು ಮಾಸ ಉಪವಾಸಮಾಡಿ ಅದನ್ನೇ ತಪಸ್ಸೆಂದು ಭಾವಿಸುವರೋ–ಅವರು ವ್ಯರ್ಥವಾಗಿ ತಮ್ಮ ಶರೀರಕ್ಕೆ ಕಷ್ಟವನ್ನು ಕೊಟ್ಟುಕೊಳ್ಳುತ್ತಾರೆ. ನಿಜವಾಗಿ ಹೇಳುವುದಾದರೆ ಕೇವಲ ಉಪವಾಸಮಾಡುವವನು ತಪಸ್ವಿಯೂ ಅಲ್ಲ; ಧರ್ಮಜ್ಞನೂ ಅಲ್ಲ.

ತ್ಯಾಗಸ್ಯ ಚಾಪಿ ಸಮ್ಪತ್ತಿಃ ಶಿಷ್ಯತೇ ತಪ ಉತ್ತಮಮ್ ।
ಸದೋಪವಾಸೀ ಚ ಭವೇದ್ಬ್ರಹ್ಮಚಾರೀ ತಥೈವ ಚ ।
ಮುನಿಶ್ಚ ಸ್ಯಾತ್ತದಾ ವಿಪ್ರೋ ದೇವಾಂಶ್ಚೈವ ಸದಾ ಜಪೇತ್ ॥೫॥

ತ್ಯಾಗದ ಸಂಪಾದನೆಯೇ (ದಾನಶೀಲತೆಯೇ) ಎಲ್ಲ ತಪಸ್ಸುಗಳಿಗಿಂತಲೂ ಶ್ರೇಷ್ಠವಾದ ತಪಸ್ಸಾಗಿದೆ. ಬ್ರಾಹ್ಮಣನು ಸದೋಪವಾಸಿಯಾಗಿರಬೇಕು. ಬ್ರಹ್ಮಚಾರಿಯಾಗಿರಬೇಕು. ಮುನಿಯಾಗಿರಬೇಕು ಮತ್ತು ವೇದಗಳನ್ನು ಸದಾ ಪಾರಾಯಣಮಾಡುತ್ತಲೇ ಇರಬೇಕು.

ಕುಟುಮ್ಬಿಕೋ ಧರ್ಮಕಾಮಃ ಸದಾಸ್ವಪ್ನಶ್ಚ ಮಾನವಃ ।
ಅಮಾಂಸಾಶೀ ಸದಾ ಚ ಸ್ಯಾತ್ಪವಿತ್ರಂ ಚ ಸದಾ ಪಠೇತ್ ॥೬॥

ಋತವಾದೀ ಸದಾ ಚ ಸ್ಯಾನ್ನಿಯತಶ್ಚ ಸದಾ ಭವೇತ್ ।
ವಿಘಸಾಶೀ ಕಥಂ ಚ ಸ್ಯಾತ್ಸದಾ ಚೈವಾತಿಥಿಪ್ರಿಯಃ ॥೭॥
ಅಮೃತಾಶೀ ಸದಾ ಚ ಸ್ಯಾತ್ಪವಿತ್ರೀ ಚ ಸದಾ ಭವೇತ್ ॥೮॥

ಗೃಹಸ್ಥನಾದ ಬ್ರಾಹ್ಮಣನು ಧರ್ಮಕಾಮನಾಗಿರಬೇಕು. ಜಾಗ್ರತನಾಗಿರಬೇಕು. ಯಾವಾಗಲೂ ಮಾಂಸವನ್ನು ತಿನ್ನಬಾರದು. ಪವಿತ್ರವಾದ ವೇದಮಂತ್ರಗಳನ್ನು ಸದಾ ಜಪಿಸುತ್ತಿರಬೇಕು. ಸದಾ ಸತ್ಯವನ್ನೇ ಹೇಳಬೇಕು. ಇಂದ್ರಿಯಸಂಯಮಿಯಾಗಿರಬೇಕು. ಅತಿಥಿಪ್ರಿಯನಾಗಿರಬೇಕು. ಅತಿಥಿಗಳು ಊಟಮಾಡಿದನಂತರ ಉಳಿದ ವಿಘಸವನ್ನೂ (ಭೋಜನಶೇಷವನ್ನೂ) ಯಜ್ಞಶೇಷರೂಪವಾದ ಅಮೃತವನ್ನೂ ಭುಂಜಿಸಬೇಕು. ಯಾವಾಗಲೂ ಪವಿತ್ರವಾದ ಮನೋಭಾವದಿಂದಿರಬೇಕು.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕಥಂ ಸದೋಪವಾಸೀ ಸ್ಯಾದ್ಬ್ರಹ್ಮಚಾರೀ ಚ ಪಾರ್ಥಿವ ।
ವಿಘಸಾಶೀ ಕಥಂ ಚ ಸ್ಯಾತ್ಕಥಂ ಚೈವಾತಿಥಿಪ್ರಿಯಃ ॥೯॥

“ಸದೋಪವಾಸಿಯೂ ಬ್ರಹ್ಮಚಾರಿಯೂ ಆಗುವುದು ಹೇಗೆ? ಹೇಗೆ ವಿಘಸಾಶಿಯಾಗುತ್ತಾನೆ? ಅತಿಥಿಪ್ರಿಯನು ಹೇಗಾಗುತ್ತಾನೆ?”

ಭೀಷ್ಮನು ಹೇಳುತ್ತಾನೆ:

ಅನ್ತರಾ ಸಾಯಮಾಶಂ ಚ ಪ್ರಾತರಾಶಂ ಚ ಯೋ ನರಃ ।
ಸದೋಪವಾಸೀ ಭವತಿ ಯೋ ನ ಭುಙ್ಕ್ತೇಽನ್ತರಾ ಪುನಃ ॥೧೦॥

“ಯುಧಿಷ್ಠಿರ! ಯಾವ ಮನುಷ್ಯನು ಪ್ರಾತಃಕಾಲ-ಸಾಯಂಕಾಲಗಳಲ್ಲಿ (ಮಧ್ಯಾಹ್ನ-ರಾತ್ರಿಗಳಲ್ಲಿ) ಮಾತ್ರವೇ ಊಟಮಾಡುತ್ತಾ ಎರಡು ಊಟಗಳ ಮಧ್ಯದಲ್ಲಿ ಯಾವುದನ್ನೂ ತಿನ್ನುವುದಿಲ್ಲವೋ–ಅಂತಹವನು ಸದೋಪವಾಸಿಯಾಗುತ್ತಾನೆ.

ಭಾರ್ಯಾಂ ಗಚ್ಛನ್ಬ್ರಹ್ಮಚಾರೀ ಋತೌ ಭವತಿ ಚೈವ ಹ ।
ಋತವಾದೀ ಸದಾ ಚ ಸ್ಯಾದ್ದಾನಶೀಲಸ್ತು ಮಾನವಃ ॥೧೧॥

ಯಾವನು ಋತುಕಾಲಗಳಲ್ಲಿ ಮಾತ್ರವೇ ಭಾರ್ಯೆಯೊಡನೆ ಸಮಾಗಮಮಾಡುವನೋ–ಅವನು ಬ್ರಹ್ಮಚಾರಿಯಾಗುತ್ತಾನೆ. ಮನುಷ್ಯನು ದಾನಶೀಲನಾಗಿರಬೇಕು. ಸತ್ಯವಾದಿಯಾಗಿರಬೇಕು.

ಅಭಕ್ಷಯನ್ವೃಥಾ ಮಾಂಸಮಮಾಂಸಾಶೀ ಭವತ್ಯುತ ।
ದಾನಂ ದದತ್ಪವಿತ್ರೀ ಸ್ಯಾದಸ್ವಪ್ನಶ್ಚ ದಿವಾSಸ್ವಪನ್ ॥೧೨॥

ನಿಷ್ಕಾರಣವಾಗಿ ಮಾಂಸವನ್ನು ತಿನ್ನದವನು ಅಮಾಂಸಾಶಿಯಾಗುತ್ತಾನೆ. ದಾನವನ್ನು ಕೊಡುವುದರಿಂದ ಪವಿತ್ರನಾಗುತ್ತಾನೆ. ಹಗಲುಹೊತ್ತು ಮಲಗದವನು ಅಸ್ವಪ್ನನೆನಿಸಿಕೊಳ್ಳುತ್ತಾನೆ. (ನಿದ್ರೆಯನ್ನು ಬಿಟ್ಟವನೆನಿಸಿಕೊಳ್ಳುತ್ತಾನೆ.)

ಭೃತ್ಯಾತಿಥಿಷು ಯೋ ಭುಙ್ಕ್ತೇ ಭುಕ್ತವತ್ಸು ನರಃ ಸದಾ ।
ಅಮೃತಂ ಕೇವಲಂ ಭುಙ್ಕ್ತೇ ಇತಿ ವಿದ್ಧಿ ಯುಧಿಷ್ಠಿರ ॥೧೩॥

ಭೃತ್ಯರೂ (ಪೋಷ್ಯವರ್ಗದವರೂ) ಮತ್ತು ಅತಿಥಿಗಳೂ ಭೋಜನ ಮಾಡಿದನಂತರವೇ ಅನ್ನಶೇಷವನ್ನು ಯಾವನು ಭುಂಜಿಸುವನೋ–ಅಂತಹವನು ಅಮೃತವನ್ನೇ ಊಟಮಾಡತಕ್ಕವನೆಂದು ತಿಳಿ.

ಅಭುಕ್ತವತ್ಸು ನಾಶ್ನಾತಿ ಬ್ರಾಹ್ಮಣೇಷು ಚ ಯೋ ನರಃ ।
ಅಭೋಜನೇನ ತೇನಾಸ್ಯ ಜಿತಃ ಸ್ವರ್ಗೋ ಭವತ್ಯುತ ॥೧೪॥

ಬ್ರಾಹ್ಮಣರು ಊಟಮಾಡುವವರೆಗೂ ಯಾವ ಮನುಷ್ಯನು ಊಟಮಾಡುವುದಿಲ್ಲವೋ–ಅಂತಹವನ ಈ ಅಭೋಜನವ್ರತದಿಂದ ಸ್ವರ್ಗವೇ ಜಯಿಸಲ್ಪಡುತ್ತದೆ. (ಬ್ರಾಹ್ಮಣರ ಭೋಜನವಾದನಂತರ ಭೋಜನ ಮಾಡುವೆನೆಂಬ ನಿಯಮವನ್ನು ಸರ್ವದಾ ಪರಿಪಾಲಿಸತಕ್ಕವನು ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ.)

ದೇವೇಭ್ಯಶ್ಚ ಪಿತೃಭ್ಯಶ್ಚ ಸಂಶ್ರಿತೇಭ್ಯಸ್ತಥೈವ ಚ ।
ಅವಶಿಷ್ಟಾನಿ ಯೋ ಭುಙ್ಕ್ತೇ ತಮಾಹುರ್ವಿಘಸಾಶಿನಮ್ ॥೧೫॥

ತೇಷಾಂ ಲೋಕಾ ಹ್ಯಪರ್ಯನ್ತಾಃ ಸದನೇ ಬ್ರಹ್ಮಣಸ್ಮೃತಾಃ ।
ಉಪಸ್ಥಿತಾ ಹ್ಯಪ್ಸರಸೋಗನ್ಧರ್ವೈಶ್ಚ ಜನಾಧಿಪ ॥೧೬॥

ಯಾವನು ದೇವತೆಗಳಿಗೂ ಪಿತೃಗಳಿಗೂ ನಿವೇದನವಾದನಂತರ ಮತ್ತು ಆಶ್ರಿತಜನರು ಭೋಜನಮಾಡಿದನಂತರ ಉಳಿದಿರುವ ಅನ್ನವನ್ನು ಊಟಮಾಡುವನೋ–ಅಂತಹವನನ್ನು ವಿಘಸಾಶೀ ಎನ್ನುತ್ತಾರೆ. ವಿಘಸಾಶಿಗಳಿಗೆ ಬ್ರಹ್ಮಭವನದಲ್ಲಿ ಅಕ್ಷಯವಾದ ಲೋಕಗಳು ಪ್ರಾಪ್ತವಾಗುತ್ತವೆ. ಆ ಲೋಕಗಳಲ್ಲಿ ಅಪ್ಸರೆಯರು ಗಂಧರ್ವರಿಂದೊಡಗೂಡಿ ವಿಘಸಾಶಿಗಳ ಸೇವೆಯನ್ನು ಮಾಡುತ್ತಿರುತ್ತಾರೆ.

ದೇವತಾತಿಥಿಭಿಃ ಸಾರ್ಧಂ ಪಿತೃಭ್ಯಶ್ಚೋಪಭುಞ್ಜತೇ ।
ರಮನ್ತೇ ಪುತ್ರಪೌತ್ರೇಣ ತೇಷಾಂ ಗತಿರನುತ್ತಮಾ ॥೧೭॥

ದೇವತೆಗಳ ಪ್ರೀತ್ಯರ್ಥವಾಗಿ ಹವಿರ್ಭಾಗಗಳನ್ನು ಕೊಟ್ಟು ಅತಿಥಿಗಳಿಗೆ ಭೋಜನಮಾಡಿಸಿದನಂತರ ಭೋಜನಮಾಡುವವರು ಪುತ್ರ-ಪೌತ್ರರನ್ನು ಪಡೆದು ಸಂತೋಷದಿಂದಿರುತ್ತಾರೆ. ಅವಸಾನಾನಂತರದಲ್ಲಿ ಅವರಿಗೆ ಉತ್ತಮೋತ್ತಮವಾದ ಗತಿಯೂ ಸಿಕ್ಕುತ್ತದೆ.”

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಬ್ರಾಹ್ಮಣೇಭ್ಯಃ ಪ್ರಯಚ್ಛನ್ತಿ ದಾನಾನಿ ವಿವಿಧಾನಿ ಚ ।
ದಾತೃಪ್ರತಿಗ್ರಹೀತ್ರೋರ್ವೈ ಕೋ ವಿಶೇಷಃ ಪಿತಾಮಹ ॥೧೮॥

“ಮನುಷ್ಯರು ಬ್ರಾಹ್ಮಣರಿಗೆ ವಿಧ-ವಿಧವಾದ ದಾನಗಳನ್ನು ಕೊಡುತ್ತಾರೆ. ದಾನವನ್ನು ಕೊಡುವವನಲ್ಲಿಯೂ ಮತ್ತು ತೆಗೆದುಕೊಳ್ಳುವವ ನಲ್ಲಿಯೂ ಯಾವ ವೈಶಿಷ್ಟ್ಯವಿರುತ್ತದೆ?”

ಭೀಷ್ಮನು ಉತ್ತರಿಸುತ್ತಾನೆ:

ಸಾಧೋರ್ಯಃ ಪ್ರತಿಗೃಹ್ಣೀಯಾತ್ತಥೈವಾಸಾಧುತೋ ದ್ವಿಜಃ ।
ಗುಣವತ್ಯಲ್ಪದೋಷಃ ಸ್ಯಾನ್ನಿರ್ಗುಣೇ ತು ನಿಮಜ್ಜತಿ ॥೧೯॥

“ಯುಧಿಷ್ಠಿರ! ಬ್ರಾಹ್ಮಣನು ಗುಣಸಂಪನ್ನನಾದ ಸಾಧುವಿನಿಂದಲೂ ಗುಣಹೀನನಾದ ಅಸಾಧುವಿನಿಂದಲೂ ದಾನವನ್ನು ತೆಗೆದುಕೊಳ್ಳುತ್ತಾನೆ. ಗುಣಸಂಪನ್ನನಾದವನಿಂದ ತೆಗೆದುಕೊಂಡರೆ ಸ್ವಲ್ಪವೇ ದೋಷವು ಪ್ರಾಪ್ತ ವಾಗುತ್ತದೆ. ಗುಣಹೀನನಾದವನಿಂದ ದಾನತೆಗೆದುಕೊಂಡರೆ ಪಾಪದಲ್ಲಿಯೇ ಮುಳುಗಿಹೋಗುತ್ತಾನೆ.

ಈ ವಿಷಯದಲ್ಲಿ ಹಿಂದೆ ವೃಷಾದರ್ಭಿಗೂ ಮತ್ತು ಸಪ್ತರ್ಷಿಗಳಿಗೂ ನಡೆದ ಇತಿಹಾಸರೂಪವಾದ ಸಂವಾದವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಹಿಂದೊಂದು ಕಾಲದಲ್ಲಿ ಕಶ್ಯಪ, ಅತ್ರಿ, ವಸಿಷ್ಠ, ಭರದ್ವಾಜ, ಗೌತಮ, ವಿಶ್ವಾಮಿತ್ರ, ಜಮದಗ್ನಿ ಮತ್ತು ಪತಿವ್ರತೆಯಾದ ಅರುಂಧತೀ–ಇವರೆಲ್ಲರೂ ಸಮಾಧಿಯ ಮೂಲಕವಾಗಿ ಸನಾತನಬ್ರಹ್ಮಲೋಕವನ್ನು ಪಡೆಯುವ

ಇಚ್ಛೆಯಿಂದ ತಪಸ್ಸುಮಾಡುತ್ತಾ ಭೂಲೋಕದಲ್ಲಿ ಸಂಚರಿಸುತ್ತಿದ್ದರು. 'ಗಂಡಾ'–ಎಂಬ ಸ್ತ್ರೀಯು ಅವರೆಲ್ಲರ ಸೇವೆಯನ್ನು ಮಾಡುತ್ತಿದ್ದಳು. ಅವಳ ಪತಿಯಾದ ಪಶುಸಖನೆಂಬ ಶೂದ್ರನೂ ಕೂಡ ಸಪ್ತರ್ಷಿಗಳ ಜೊತೆಯಲ್ಲಿಯೇ ಇದ್ದುಕೊಂಡು ಅವರ ಸೇವೆಯನ್ನು ಮಾಡುತ್ತಿದ್ದನು. ಹೀಗಿರಲಾಗಿ ಒಮ್ಮೆ ಲೋಕದಲ್ಲಿ ಅನಾವೃಷ್ಟಿಯುಂಟಾಯಿತು. ಅನೇಕ ವರ್ಷಗಳವರೆಗೆ ಮಳೆಯೇ ಬರಲಿಲ್ಲ. ಬೆಳೆಗಳೂ ಆಗಲಿಲ್ಲ. ಜನರು ಬಹಳ ಕಷ್ಟದಿಂದ ತಮ್ಮ ಪ್ರಾಣಗಳನ್ನು ಉಳಿಸಿಕೊಂಡಿದ್ದರು.

ಅದೇ ಕಾಲದಲ್ಲಿ ಶಿಬಿಯ ಮಗನಾದ ಶೈಬ್ಯನು ತಾನು ಮಾಡಿದ ಒಂದು ಯಜ್ಞದಲ್ಲಿ ದಕ್ಷಿಣಾರ್ಥವಾಗಿ ಋತ್ವಿಜರಿಗೆ ತನ್ನ ಮಗನನ್ನೇ ದಕ್ಷಿಣಾ ರೂಪವಾಗಿ ಕೊಟ್ಟನು. ದುರ್ಭಿಕ್ಷದ ಆ ಸಮಯದಲ್ಲಿ ಅಲ್ಪಾಯುವಾದ ಆ ರಾಜಕುಮಾರನು ಮರಣಹೊಂದಿದನು. ಹಸಿವಿನಿಂದ ಪೀಡಿತರಾಗಿದ್ದ ಮುನಿಶ್ರೇಷ್ಠರಾದ ಸಪ್ತರ್ಷಿಗಳು ರಾಜಕುಮಾರನ ಶವವನ್ನು ಸುತ್ತುವರಿದು ಕುಳಿತರು. ಹಸಿವಿನಿಂದ ಪೀಡಿತರಾಗಿದ್ದ ಮುನಿಶ್ರೇಷ್ಠರಾದ ಸಪ್ತರ್ಷಿಗಳು ಪಾತ್ರೆಯೊಂದರಲ್ಲಿ ರಾಜಕುಮಾರನ ಶವವನ್ನು ಬೇಯಿಸಿದರು. ಲೋಕವೆಲ್ಲವೂ ಅನಾವೃಷ್ಟಿಯಿಂದ ತುಂಬಿಹೋಗಿ ತಿನ್ನಲು ಅನ್ನವೇ ಇಲ್ಲದಿದ್ದ ಆ ಸಮಯದಲ್ಲಿ ಪ್ರಾಣಗಳನ್ನು ಉಳಿಸಿಕೊಳ್ಳುವ ಸಲುವಾಗಿ ಅತಿ ಕಷ್ಟಕರವಾದ, ಘೋರವಾದ ಆ ವೃತ್ತಿಯನ್ನು ಅವರು ಅವಲಂಬಿಸ ಬೇಕಾಯಿತು. ಅದೇ ಮಾರ್ಗವಾಗಿ ಹೋಗುತ್ತಿದ್ದ ಶೈಬ್ಯನು ಅನ್ನಕ್ಕಾಗಿ ಬಹಳ ಕ್ಲೇಶಪಡುತ್ತಿದ್ದ, ಪ್ರಾಣಧಾರಣೆಗಾಗಿ ರಾಜಕುಮಾರನ ಹೆಣವನ್ನೇ ಬೇಯಿಸುತ್ತಿದ್ದ ಋಷಿಗಳಿಗೆ ಹೇಳಿದನು:

ಪ್ರತಿಗ್ರಹಸ್ತಾರಯತಿ ಪುಷ್ಟಿರ್ವೈ ಪ್ರತಿಗೃಹ್ಯತಾಮ್ ।
ಮಯಿ ಯದ್ವಿದ್ಯತೇ ವಿತ್ತಂ ತದ್ವೃಣುಧ್ವಂ ತಪೋಧನಾಃ ॥೨೭॥

"ತಪೋಧನರೇ! ಪ್ರತಿಗ್ರಹವು ಬ್ರಾಹ್ಮಣರ ಅನಿಂದ್ಯವಾದ ವೃತ್ತಿಯಾಗಿದೆ. ಪ್ರತಿಗ್ರಹವು ಬ್ರಾಹ್ಮಣರನ್ನು ದುರ್ಭಿಕ್ಷದಿಂದ ಪಾರು ಮಾಡುತ್ತದೆ. ಪ್ರತಿಗ್ರಹವು ಪುಷ್ಟಿಗೆ ಮುಖ್ಯಸಾಧನವಾಗಿದೆ. ಆದುದರಿಂದ ನನ್ನಲ್ಲಿ ಯಾವ ಸಂಪತ್ತು ಇದೆಯೋ ಅದನ್ನು ದಯಮಾಡಿ ಸ್ವೀಕರಿಸಿರಿ.

ಪ್ರಿಯೋ ಹಿ ಮೇ ಬ್ರಾಹ್ಮಣೋ ಯಾಚಮಾನೋ
ದದ್ಯಾಮಹಂ ವೋಽಶ್ವತರೀಸಹಸ್ರಮ್ ।
ಏಕೈಕಶಃ ಸವೃಷಾಃ ಸಂಪ್ರಸೂತಾಃ
ಸರ್ವೇಷಾಂ ವೈ ಶೀಘ್ರಗಾಃ ಶ್ವೇತರೋಮಾಃ ॥೨೮॥

ನನ್ನನ್ನು ಯಾಚಿಸುವ ಬ್ರಾಹ್ಮಣನು ನನಗೆ ಅತ್ಯಂತ ಪ್ರಿಯನಾಗಿರುತ್ತಾನೆ. ನಾನು ನಿಮ್ಮಲ್ಲಿ ಒಬ್ಬೊಬ್ಬರಿಗೂ ಒಂದೊಂದು ಸಾವಿರ ಹೇಸರಗತ್ತೆಗಳನ್ನು ಕೊಡುತ್ತೇನೆ. ಎಲ್ಲರಿಗೂ ಬಿಳಿಯ ಕೂದಲುಗಳುಳ್ಳ, ಶೀಘ್ರವಾಗಿ ಹೋಗುವ, ಚೆನ್ನಾಗಿ ಬೆಳೆದಿರುವ ಹಸುಗಳನ್ನು ಹೋರಿಗಳೊಡನೆ ಕೊಡುತ್ತೇನೆ.

ಕುಲಂಭರಾನನಡುಹಃ ಶತಂ ಶತಾ-
ನ್ಧುರ್ಯಾಞ್ಛ್ವೇತಾನ್ಸರ್ವಶೋಽಹಂ ದದಾಮಿ ।
ಪ್ರಷ್ಠೌಹೀನಾಂ ಪೀವರಾಣಾಂ ಚ ತಾವ-
ದಗ್ರ್ಯಾ ಗೃಷ್ಟ್ಯೋ ಧೇನವಃ ಸುವ್ರತಾಶ್ಚ ॥೨೯॥

ಕೃಷಿಯ ಮೂಲಕವಾಗಿ ಕುಲವನ್ನು ಭರಿಸುವ, ಬಿಳಿಯ ಬಣ್ಣದ, ಭಾರವನ್ನು ಹೊರುವ ಹತ್ತು ಸಾವಿರ ಎತ್ತುಗಳನ್ನು ನಿಮ್ಮೆಲ್ಲರಿಗೂ ಕೊಡುತ್ತೇನೆ. ಇಷ್ಟು ಮಾತ್ರವಲ್ಲ; ನಾನು ನಿಮ್ಮೆಲ್ಲರಿಗೂ ಹೃಷ್ಟ-ಪುಷ್ಟವಾದ ಮೊದಲನೆಯ ಬಾರಿಗೆ ಗರ್ಭಧರಿಸಿರುವ ಅಥವಾ ಮೊದಲನೆಯ ಕರುವನ್ನು ಈಯ್ದಿರುವ ಒಳ್ಳೆಯ ಸ್ವಭಾವದ ಅಷ್ಟು ಹಸುಗಳನ್ನೂ ದಾನವಾಗಿ ಕೊಡುತ್ತೇನೆ.

ವರಾನ್ಗ್ರಾಮಾನ್ವ್ರೀಹಿರಸಂ ಯವಾಂಶ್ಚ
ರತ್ನಂ ಚಾನ್ಯದ್ದುರ್ಲಭಂ ಕಿಂ ದದಾನಿ ।
ನಾಸ್ಮಿನ್ನಭಕ್ಷ್ಯೇ ಭಾವಮೇವಂ ಕುರುಧ್ವಂ
ಪುಷ್ಟ್ಯರ್ಥಂ ವಃ ಕಿಂ ಪ್ರಯಚ್ಛಾಮ್ಯಹಂ ವೈ ॥೩೦॥

ಶ್ರೇಷ್ಠವಾದ ಗ್ರಾಮಗಳನ್ನೂ, ಬತ್ತವನ್ನೂ, ರಸವನ್ನೂ, ಗೋಧಿಯನ್ನೂ, ರತ್ನವನ್ನೂ ಕೊಡುತ್ತೇನೆ. ದುರ್ಲಭವಾದ ಯಾವುದೇ ವಸ್ತುವನ್ನಾದರೂ ಕೊಡುತ್ತೇನೆ. ಯಾವ ವಸ್ತುವು ಬೇಕೆಂಬುದನ್ನು ಹೇಳಿರಿ.

ನಿಮ್ಮ ಶರೀರಪುಷ್ಟಿಗಾಗಿ ಯಾವ ಪದಾರ್ಥವನ್ನು ನಿಮಗೆ ಕೊಡಲಿ? ಯಾವುದನ್ನಾದರೂ ಕೊಡುತ್ತೇನೆ. ಆದರೆ ನೀವು ಮಾತ್ರ ಹಸಿವಿನ ಕಾರಣದಿಂದ ಈ ಅಭಕ್ಷ್ಯವಸ್ತುವನ್ನು (ಶವವನ್ನು) ತಿನ್ನಲು ಮಾತ್ರ ಮನಸ್ಸು ಮಾಡಬೇಡಿರಿ."

ಋಷಿಗಳು ಹೇಳುತ್ತಾರೆ:

ರಾಜನ್ಪ್ರತಿಗ್ರಹೋ ರಾಜ್ಞಾಂ ಮಧ್ವಾಸ್ವಾದೋ ವಿಷೋಪಮಃ ।
ತಜ್ಜಾನಮಾನಃ ಕಸ್ಮಾತ್ತ್ವಂ ಕುರುಷೇ ನಃ ಪ್ರಲೋಭನಮ್ ॥೩೧॥

"ಮಹಾರಾಜ! ರಾಜರಿಂದ ಕೊಡಲ್ಪಡುವ ದಾನದ ಪ್ರತಿಗ್ರಹವು ಹೊರಗೆ ನೋಡುವುದಕ್ಕೆ ಜೇನುತುಪ್ಪಕ್ಕೆ ಸಮಾನವಾಗಿಯೇ ಇರುತ್ತದೆ. ಆದರೆ ಪರಿಣಾಮದಲ್ಲಿ ಅದು ವಿಷಕ್ಕೆ ಸಮಾನವಾಗುತ್ತದೆ. ಈ ವಿಷಯವನ್ನು ನೀನು ಚೆನ್ನಾಗಿ ತಿಳಿದುಕೊಂಡಿದ್ದರೂ ಅಂತಹ ದಾನವನ್ನು ತೆಗೆದು ಕೊಳ್ಳಲು ನಮ್ಮನ್ನೇಕೆ ಪ್ರಲೋಭನಗೊಳಿಸುತ್ತಿರುವೆ?

ಕ್ಷೇತ್ರಂ ಹಿ ದೈವತಮಿದಂ ಬ್ರಾಹ್ಮಣಾನ್ಸಮುಪಾಶ್ರಿತಮ್ ।
ಅಮಲೋ ಹ್ಯೇಷ ತಪಸಾ ಪ್ರೀತಃ ಪ್ರೀಣಾತಿ ದೇವತಾಃ ॥೩೨॥

ಬ್ರಾಹ್ಮಣರ ಶರೀರವು ದೇವತೆಗಳ ನಿವಾಸಸ್ಥಾನವಾಗಿದೆ. ಬ್ರಾಹ್ಮಣನ ಶರೀರದಲ್ಲಿ ಸಕಲ ದೇವತೆಗಳೂ ಆಶ್ರಯವನ್ನು ಹೊಂದಿದ್ದಾರೆ. ಬ್ರಾಹ್ಮಣನು ತಪಸ್ಸಿನಿಂದ ಪರಿಶುದ್ಧನೂ, ಸಂತುಷ್ಟನೂ ಆದರೆ ಸಮಸ್ತದೇವತೆಗಳನ್ನೂ ಪ್ರಸನ್ನಗೊಳಿಸುತ್ತಾನೆ.*

ಅಹ್ನಾಪೀಹ ತಪೋ ಜಾತು ಬ್ರಾಹ್ಮಣಸ್ಯೋಪಜಾಯತೇ ।
ತದ್ದಾವ ಇವ ನಿರ್ದಹ್ಯಾತ್ಪ್ರಾಪ್ತೋ ರಾಜಪ್ರತಿಗ್ರಹಃ ॥೩೩॥

ದಿನವೆಲ್ಲವೂ ತಪಸ್ಸನ್ನು ಮಾಡಿ ಬ್ರಾಹ್ಮಣನು ಸಂಗ್ರಹಿಸಿದ ತಪಃ ಫಲವನ್ನು ರಾಜನು ಕೊಡುವ ದಾನದ ಪ್ರತಿಗ್ರಹವು ದಾವಾಗ್ನಿಯಂತೆ ಕ್ಷಣಮಾತ್ರದಲ್ಲಿ ಸುಟ್ಟುಹಾಕಿಬಿಡುತ್ತದೆ.

---

*ಯಾವತೀರ್ವೈ ದೇವತಾಸ್ತಾಃ ಸರ್ವಾ ವೇದವಿದಿ ಬ್ರಾಹ್ಮಣೇ ವಸಂತಿ-ಎಂಬ ಯಾಜುಷಮಂತ್ರವೂ ವೇದವಿದನಾದ ಬ್ರಾಹ್ಮಣನ ಶರೀರದಲ್ಲಿ ಸಕಲದೇವತೆಗಳೂ ಇರುವುದೆಂಬುದನ್ನು ಹೇಳುತ್ತದೆ.

ಕುಶಲಂ ಸಹ ದಾನೇನ ರಾಜನ್ನಸ್ತು ಸದಾ ತವ ।
ಅರ್ಥಿಭ್ಯೋ ದೀಯತಾಂ ಸರ್ವಮಿತ್ಯುಕ್ತ್ವಾನ್ಯೇನ ತೇ ಯಯುಃ ॥

ವೃಷಾದರ್ಭಿಯೇ! ನೀನು ಈ ದಾನದೊಡನೆ (ದಾನಮಾಡುವ ಬುದ್ಧಿಯುಳ್ಳವನಾಗಿ) ಸದಾ ಕುಶಲನಾಗಿರು. ನೀನು ಹೇಳಿದ ಈ ಎಲ್ಲ ದಾನಗಳನ್ನೂ ಯಾಚನೆಮಾಡುವವರಿಗೆ ಕೊಡು.”


ಹೀಗೆ ಹೇಳಿ ಸಪ್ತರ್ಷಿಗಳು ಬೇರೆಯ ಹಾದಿಯನ್ನು ಹಿಡಿದು ಹೊರಟುಹೋದರು. ಮರಣಹೊಂದಿದ್ದ ರಾಜಕುಮಾರನ ಮಾಂಸವು ಪಾತ್ರೆಯಲ್ಲಿ ಅಪಕ್ವವಾಗಿಯೇ ಉಳಿಯಿತು. ಅದನ್ನು ಪಕ್ವಮಾಡಿ ತಿನ್ನಲು ಆ ಮಹಾತ್ಮರಿಗೆ ಸಾಧ್ಯವಾಗಲಿಲ್ಲ. ಅದನ್ನು ಅಲ್ಲಿಯೇ ವಿಸರ್ಜಿಸಿ ಆಹಾರಾರ್ಥವಾಗಿ ಎಲ್ಲರೂ ಕಾಡಿಗೆ ಹೊರಟುಹೋದರು.

ಮಂತ್ರಿಗಳು ಶೈಬ್ಯನಿಂದ ಪ್ರಚೋದಿತರಾಗಿ ಅರಣ್ಯಕ್ಕೆ ಹೋಗಿ ಅತ್ತಿಯ ಹಣ್ಣುಗಳನ್ನು ಸಂಗ್ರಹಿಸಿ ಋಷಿಗಳಿಗೆ ಕೊಡಲು ಪ್ರಯತ್ನಿಸಿದರು. ಮಂತ್ರಿಗಳು ಅತ್ತಿಯ ಹಣ್ಣುಗಳಲ್ಲಿಯೂ ಇನ್ನೂ ಇತರ ಹಣ್ಣುಗಳಲ್ಲಿಯೂ ಸುವರ್ಣವನ್ನು ತುಂಬಿದ್ದರು. ಅನಂತರ ರಾಜಸೇವಕರು ಆ ಸುವರ್ಣಪೂರಿತವಾದ ಹಣ್ಣುಗಳನ್ನು ತೆಗೆದುಕೊಂಡು ಋಷಿಗಳನ್ನು ಪ್ರತಿಗ್ರಹಿಸುವಂತೆ ಮಾಡಲು ಅವರ ಹಿಂದೆಯೇ ಹೋದರು. ಆ ಹಣ್ಣುಗಳು ಭಾರವಾಗಿರುವುದನ್ನು ನೋಡಿ ಅವು ಸುವರ್ಣಪೂರಿತವಾದುವುಗಳೆಂಬುದನ್ನು ತಿಳಿದು ಅತ್ರಿಯು ಆ ಹಣ್ಣುಗಳು ಪ್ರತಿಗ್ರಹಕ್ಕೆ ಯೋಗ್ಯವಲ್ಲವೆಂದು ಹೇಳಿದನು. ಅವನು ಮುಂದುವರಿದು ರಾಜಭಟರಿಗೆ ಹೀಗೆ ಹೇಳಿದನು:

ನ ಸ್ಮಹೇ ಮನ್ದವಿಜ್ಞಾನಾ ನ ಸ್ಮಹೇ ಮನ್ದಬುದ್ಧಯಃ ।
ಹೈಮಾನೀಮಾನಿ ಜಾನೀಮಃ ಪ್ರತಿಬುದ್ಧಾಃ ಸ್ಮ ಜಾಗೃಮ ॥೩೭॥
ಇಹ ಹ್ಯೇತದುಪಾದತ್ತಂ ಪ್ರೇತ್ಯ ಸ್ಯಾತ್ಕಟುಕೋದಯಮ್ ।
ಅಪ್ರತಿಗ್ರಾಹ್ಯಮೇವೈತತ್ಪ್ರೇತ್ಯೇಹ ಚ ಸುಖೇಪ್ಸುನಾ ॥೩೮॥

“ರಾಜಸೇವಕರೇ! ನಮ್ಮ ಜ್ಞಾನವು ಮಂದವಾಗಿಲ್ಲ. ನಮ್ಮ ಬುದ್ಧಿಯೂ ಮಂದವಾಗಿಲ್ಲ. ನಾವು ಎಚ್ಚರದಿಂದಲೇ ಇದ್ದೇವೆ. ಜಾಗೃತ

ರಾಗಿದ್ದೇವೆ. ಈ ಹಣ್ಣುಗಳಲ್ಲಿ ಸುವರ್ಣವು ತುಂಬಿರುವುದೆಂಬುದನ್ನು ಚೆನ್ನಾಗಿ ತಿಳಿದಿದ್ದೇವೆ. ನಾವೇನಾದರೂ ಇಂದು ಇದನ್ನು ತೆಗೆದುಕೊಂಡರೆ



ಪರಲೋಕದಲ್ಲಿ ನಮಗೆ ಇದರಿಂದ ಬಹಳ ಕೆಟ್ಟಪರಿಣಾಮವೇ ಉಂಟಾಗುತ್ತದೆ. ಯಾರು ಐಹಿಕವಾದ ಮತ್ತು ಆಮುಷ್ಮಿಕವಾದ ಫಲಗಳನ್ನು ಅಪೇಕ್ಷಿಸುವರೋ–ಅಂತಹವರಿಗೆ ಸುವರ್ಣಭರಿತವಾದ ಈ ಹಣ್ಣುಗಳು ಅಗ್ರಾಹ್ಯವಾಗಿವೆ.”

ಅನಂತರ ಉಳಿದ ಋಷಿಗಳೂ ತೃಷ್ಣೆಯ ವಿಷಯದಲ್ಲಿ ತಮ್ಮ-ತಮ್ಮ ಅಭಿಪ್ರಾಯಗಳನ್ನು ಒಬ್ಬೊಬ್ಬರಾಗಿ ಹೇಳತೊಡಗಿದರು :

ವಸಿಷ್ಠಃ

ಗತೇನ ನಿಷ್ಕಗಣಿತಂ ಸಹಸ್ರೇಣ ಚ ಸಮ್ಮಿತಮ್ ।
ತಥಾ ಬಹುಪ್ರತೀಚ್ಛನ್ವೈ ಪಾಪಿಷ್ಠಾಂ ಪತತೇ ಗತಿಮ್ ॥೩೯॥

“ಪ್ರತಿಗ್ರಹವನ್ನು ಮಾಡುವವನು ಮೊದಲು ನೂರು, ಅನಂತರ ಸಾವಿರ, ಬಳಿಕ ಬಹುಸಂಖ್ಯೆಯ ಸುವರ್ಣನಾಣ್ಯಗಳನ್ನು ಅಪೇಕ್ಷಿಸುತ್ತಾ ನರಕಕ್ಕೆ ಬೀಳುತ್ತಾನೆ.”

ಕಶ್ಯಪಃ

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಸ್ತ್ರಿಯಃ ।
ಸರ್ವಂ ತನ್ನಾಲಮೇಕಸ್ಯ ತಸ್ಮಾದ್ವಿದ್ವಾಞ್ಛಮಂ ಚರೇತ್ ॥೪೦॥

“ಪೃಥಿವಿಯಲ್ಲಿ ಎಷ್ಟು ಬತ್ತ-ಗೋಧಿಗಳೇ ಮೊದಲಾದ ಧಾನ್ಯಗಳಿವೆಯೋ, ಸುವರ್ಣವಿದೆಯೋ, ಪಶುಗಳಿವೆಯೋ, ಸ್ತ್ರೀಯರಿರುವರೋ–ಆ ಎಲ್ಲವೂ ಆಶೆಬಡುಕನಾದ ಒಬ್ಬನಿಗೇ ಸಾಲದಾಗುತ್ತದೆ. ಆದುದರಿಂದ ವಿದ್ವಾಂಸನಾದವನು ಮನಸ್ಸಿನ ತೃಷ್ಣೆಯನ್ನು (ಆಸೆಯನ್ನು) ಶಾಂತಗೊಳಿಸಬೇಕು.”

ಭರದ್ವಾಜಃ

ಉತ್ಪನ್ನಸ್ಯ ರುರೋಃ ಶೃಙ್ಗಂ ವರ್ಧಮಾನಸ್ಯ ವರ್ಧತೇ ।
ಪ್ರಾರ್ಥನಾ ಪುರುಷಸ್ಯೇಹ ತಸ್ಯ ಮಾತ್ರಾ ನ ವಿದ್ಯತೇ ॥೪೧॥

“ಹುಟ್ಟಿದ ಜಿಂಕೆಯು ವೃದ್ಧಿಹೊಂದುತ್ತಿರುವಂತೆ ಅದರ ಕೊಂಬುಗಳೂ ಬೆಳೆಯುತ್ತಲೇ ಹೋಗುತ್ತವೆ. ಅದೇ ರೀತಿಯಲ್ಲಿ ಮನುಷ್ಯನ ಆಶೆಯು ಯಾವಾಗಲೂ ಹೆಚ್ಚುತ್ತಲೇ ಇರುತ್ತದೆ. ಆ ಆಶೆಗೆ ಎಲ್ಲೆಯೆಂಬುದೇ ಇರುವುದಿಲ್ಲ.”

ಗೌತಮಃ

ನ ತಲ್ಲೋಕೇ ದ್ರವ್ಯಮಸ್ತಿ ಯಲ್ಲೋಕಂ ಪ್ರತಿಪೂರಯೇತ್ ।
ಸಮುದ್ರಕಲ್ಪಃ ಪುರುಷೋ ನ ಕದಾಚನ ಪೂರ್ಯತೇ ॥೪೨॥

“ಈ ಪ್ರಪಂಚದಲ್ಲಿ ಮನುಷ್ಯನ ಆಸೆಯನ್ನು ಪೂರ್ಣಗೊಳಿಸುವ ಯಾವ ದ್ರವ್ಯವೂ ಇರುವುದಿಲ್ಲ. ಮನುಷ್ಯನು ಆಸೆಯು ಸಮುದ್ರದಂತೆ. ಸಮುದ್ರವು ಯಾವಾಗಲೂ ತುಂಬದಂತೆ–ಮನುಷ್ಯನ ಆಸೆಯು ಯಾವಾಗಲೂ ಪೂರ್ಣವಾಗುವುದೇ ಇಲ್ಲ.”

ವಿಶ್ವಾಮಿತ್ರಃ

ಕಾಮಂ ಕಾಮಯಮಾನಸ್ಯ ಯದಾ ಕಾಮಃ ಸಮೃಧ್ಯತೇ ।
ಅಥೈನಮಪರಃ ಕಾಮಸ್ತೃಷ್ಣಾ ವಿಧ್ಯತಿ ಬಾಣವತ್ ॥೪೩॥

“ಒಂದು ವಸ್ತುವನ್ನು ಆಶಿಸಿದ ಮನುಷ್ಯನಿಗೆ ಆ ವಸ್ತುವು ಲಭಿಸಿ ಆ ತನ್ನ ಕಾಮನೆಯು ಪೂರ್ಣವಾದ ಕೂಡಲೇ–ಅದರ ಹಿನ್ನೆಲೆಯಲ್ಲಿಯೇ ಬೇರೊಂದು ವಸ್ತುವನ್ನು ಪಡೆದುಕೊಳ್ಳಬೇಕೆನ್ನುವ ಅಭಿಲಾಷೆಯು ಮನಸ್ಸಿನಲ್ಲಿ ಅಂಕುರಿಸುತ್ತದೆ. ಹೀಗೆ ತೃಷ್ಣೆಯೆಂಬುದು ಯಾವಾಗಲೂ ಮನುಷ್ಯನನ್ನು ಬಾಣದಂತೆಯೇ ಚುಚ್ಚುತ್ತಿರುತ್ತದೆ.”

ಜಮದಗ್ನಿಃ

ಪ್ರತಿಗ್ರಹೇ ಸಂಯಮೋ ವೈ ತಪೋ ಧಾರಯತೇ ಧ್ರುವಮ್ ।
ತದ್ಧನಂ ಬ್ರಾಹ್ಮಣಸ್ಯೇಹ ಲುಭ್ಯಮಾನಸ್ಯ ವಿಸ್ರವೇತ್ ॥೪೪॥

“ದಾನವನ್ನು ತೆಗೆದುಕೊಳ್ಳುವುದರಲ್ಲಿ ಸಂಯಮವಿರಬೇಕು. ಸಂಯಮವಿರುವವನು ತನ್ನ ತಪಸ್ಸನ್ನು ರಕ್ಷಿಸಿಕೊಳ್ಳುವನೆಂಬುದು ನಿಜ. ತಪಸ್ಸೇ ಬ್ರಾಹ್ಮಣನ ಧನವಾಗಿದೆ. ಲೌಕಿಕವಾದ ಧನಕ್ಕೆ ಆಸೆಪಡುವವನು ತಪಸ್ಸೆಂಬ ಅಲೌಕಿಕವಾದ ಧನವನ್ನು ಕಳೆದುಕೊಳ್ಳುತ್ತಾನೆ.”

ಅರುನ್ಧತೀ

ಧರ್ಮಾರ್ಥಂ ಸಂಚಯೋ ಯೋ ವೈ ದ್ರವ್ಯಾಣಾಂ ಪಕ್ಷಸಮ್ಮತಃ ।
ತಪಃಸಂಚಯ ಏವೇಹ ವಿಶಿಷ್ಟೋ ದ್ರವ್ಯಸಂಚಯಾತ್ ॥೪೫॥

“ಧರ್ಮಕಾರ್ಯಗಳ ಸಲುವಾಗಿ ದ್ರವ್ಯಸಂಗ್ರಹಣೆಯನ್ನು ಮಾಡಬಹುದೆಂದು ಋಷಿಗಳಲ್ಲಿಯೇ ಒಂದು ಗುಂಪಿನವರ ಅಭಿಪ್ರಾಯವಾಗಿದೆ. ಆದರೆ ನನ್ನ ಅಭಿಪ್ರಾಯದಲ್ಲಿ ದ್ರವ್ಯಸಂಚಯಕ್ಕಿಂತಲೂ ತಪಸ್ಸಿನ ಸಂಚಯವೇ ಶ್ರೇಷ್ಠವಾದುದು.”

ಗಣ್ಡಾದಾಸೀ

ಉಗ್ರಾದಿತೋ ಭಯಾದ್ಯಸ್ಮಾದ್ಬಿಭ್ಯತೀಮೇ ಮಮೇಶ್ವರಾಃ ।
ಬಲೀಯಾಂಸೋ ದುರ್ಬಲವದ್ಬಿಭೇಮ್ಯಹಮತಃ ಪರಮ್ ॥೪೬॥

"ನನ್ನ ಈ ಯಜಮಾನರು ತಪಸ್ಸಿನಿಂದ ಮಹಾಬಲಿಷ್ಠರಾಗಿದ್ದರೂ ಪ್ರತಿಗ್ರಹವೆಂಬ ಉಗ್ರವಾದ ಭಯದಿಂದ ದುರ್ಬಲರಂತೆ ಭೀತರಾಗಿದ್ದಾರೆ. ಆದುದರಿಂದ ಇವರ ಅನುಚರಳಾಗಿರುವ ನಾನೂ ಪ್ರತಿಗ್ರಹಕ್ಕೆ ಭಯ ಪಡುತ್ತೇನೆ."

ಪಶುಸಖಃ

ಯದ್ವೈ ಧರ್ಮೇ ಪರಂ ನಾಸ್ತಿ ಬ್ರಾಹ್ಮಣಾಸ್ತದ್ಧನಂ ವಿದುಃ ।
ವಿಷಯಾರ್ಥಂ ಸುವಿದ್ವಾಂಸಮುಪಾಸೇಯಂ ಯಥಾತಥಮ್ ॥೪೭॥

"ಯಾವ ಧರ್ಮದಲ್ಲಿ ಪರೋಪಕಾರವಿಲ್ಲವೋ ಅದನ್ನೇ ಬ್ರಾಹ್ಮಣರು ಧನವೆಂದು ತಿಳಿಯುತ್ತಾರೆ. (ಧರ್ಮದಲ್ಲಿ ಧನಕ್ಕೆ ಪ್ರಾಧಾನ್ಯವಿದ್ದರೆ ಪರಲೋಕವು ಸಿಕ್ಕುವುದಿಲ್ಲ.) ಪ್ರತಿಗ್ರಹವು ಬ್ರಾಹ್ಮಣನಿಗೆ ಧರ್ಮವೆಂದು ಹೇಳುತ್ತಾರೆ. ಆದರೆ ಪ್ರತಿಗ್ರಹವು ಧನವನ್ನು ಗಳಿಸಿಕೊಟ್ಟು ಜೀವಿಕೆಗೆ ಸಾಧಕವಾಗುವುದೇ ಹೊರತು ಪರಲೋಕಕ್ಕೆ ಸಾಧಕವಾಗುವುದಿಲ್ಲ. ಆದುದರಿಂದ ಬ್ರಾಹ್ಮಣರು ಪ್ರತಿಗ್ರಹಧರ್ಮವನ್ನು ಧನವೆಂದೇ ತಿಳಿಯುತ್ತಾರೆ. ಈ ರಹಸ್ಯವನ್ನು ತಿಳಿಯುವ ಸಲುವಾಗಿ ನಾನು ಯಥಾವತ್ತಾಗಿ ವಿದ್ವಾಂಸರ ಸೇವೆಯನ್ನು ಮಾಡುತ್ತೇನೆ."

ಋಷಿಗಳೆಲ್ಲರೂ ಒಟ್ಟಿಗೇ ಹೇಳುತ್ತಾರೆ:

"ಯಾವ ರಾಜನ ಈ ಪ್ರಜೆಗಳು ವಂಚನಾಯುಕ್ತವಾದ ಈ ಫಲಗಳನ್ನು ನಮಗೆ ಕೊಡಲು ಬಂದಿರುವರೋ ಮತ್ತು ಯಾವನು ಫಲಗಳೆಂಬ ವ್ಯಾಜದಿಂದ ಸುವರ್ಣವನ್ನು ದಾನವಾಗಿ ಕೊಡಲು ಪ್ರಯತ್ನಿಸುತ್ತಿರುವನೋ– ಅವನು ಈ ದಾನವನ್ನು ತನ್ನಲ್ಲಿಯೇ ಇಟ್ಟುಕೊಂಡು ಕುಶಲಿಯಾಗಿರಲಿ."

ಭೀಷ್ಮನು ಹೇಳುತ್ತಾನೆ:

ಯುಧಿಷ್ಠಿರ! ಸಪ್ತರ್ಷಿಗಳು ಹೀಗೆ ಸುವರ್ಣಭರಿತವಾಗಿದ್ದ ಆ

ಫಲಗಳನ್ನು ಪರಿತ್ಯಜಿಸಿ ಆ ಸ್ಥಳದಿಂದ ಬೇರೆಯ ಜಾಗಕ್ಕೆ ಹೊರಟು ಹೋದರು. ಮಂತ್ರಿಗಳು ರಾಜನಿಗೆ ಈ ವಿಷಯವನ್ನು ತಿಳಿಸಿದರು:

"ಮಹಾರಾಜ! ರಾಜಸೇವಕರ ಮೂಲಕವಾಗಿ ನಾವು ಕಳುಹಿಸಿದ್ದ ಸುವರ್ಣಭರಿತವಾದ ಅತ್ತಿಯ ಹಣ್ಣನ್ನು ನೋಡುತ್ತಲೇ ಕಪಟವಿರಬಹುದೆಂಬ ಶಂಕೆಯಿಂದ ಸಪ್ತರ್ಷಿಗಳು ಫಲವನ್ನು ಪ್ರತಿಗ್ರಹಿಸದೇ ಬೇರೊಂದು ಮಾರ್ಗದಿಂದ ಎಲ್ಲಿಗೋ ಹೊರಟುಹೋದರು. ಈ ವಿಷಯವನ್ನು ನಿನಗೆ ತಿಳಿಸಿರುವೆವು."

ವೃಷಾದರ್ಭಿಯು ಮಂತ್ರಿಗಳು ಹೇಳಿದ ಆ ಮಾತನ್ನು ಕೇಳಿ ಕೋಪಗೊಂಡನು. ಆ ಎಲ್ಲ ಋಷಿಗಳಿಗೂ ಪ್ರತೀಕಾರವನ್ನು ಮಾಡಲು ನಿಶ್ಚಯಿಸಿ ರಾಜಧಾನಿಗೆ ತೆರಳಿದನು.

ಅರಮನೆಗೆ ಹೋದನಂತರ ರಾಜನು ತೀವ್ರವಾದ ನಿಯಮಾನುಷ್ಠಾನ ವನ್ನು ಕೈಗೊಂಡು ಸಂಸ್ಕೃತವಾದ ಆಭಿಚಾರಿಕಮಂತ್ರಗಳಿಂದ ಆಹವನೀಯಾಗ್ನಿಯಲ್ಲಿ ಒಂದೊಂದೇ ಆಹುತಿಯನ್ನು ಹೋಮಮಾಡ ತೊಡಗಿದನು. ನಿರ್ದಿಷ್ಟವಾಗಿದ್ದ ಆಹುತಿಗಳು ಮುಗಿದೊಡನೆಯೇ ಆ ಆಹವನೀಯಾಗ್ನಿಯಿಂದ ಲೋಕಭಯಂಕರವಾದ ಕೃತ್ಯೆಯೊಂದು ಪ್ರಾದುರ್ಭವಿಸಿತು. ವೃಷಾದರ್ಭಿಯು ಆ ಕೃತ್ಯೆಯನ್ನು ಯಾತುಧಾನಿಯೆಂದು ಕರೆದನು. ಕಾಳರಾತ್ರಿಯಂತೆ ವಿಕಾರವಾದ ರೂಪದಿಂದ ಕೂಡಿದ್ದ ಆ ಕೃತ್ಯೆಯು ಬದ್ಧಾಂಜಲಿಯಾಗಿ ನಿಂತು ರಾಜನಾದ ವೃಷಾದರ್ಭಿಯನ್ನು '**ಕಿಂ ಕರೋಮಿ**'–'ನಾನು ನಿನಗಾಗಿ ಯಾವ ಕಾರ್ಯವನ್ನು ಮಾಡಲಿ?'–ಎಂದು ಪ್ರಶ್ನಿಸಿತು.

ವೃಷಾದರ್ಭಿಯು ಆಜ್ಞಾಪಿಸಿದನು :

ಋಷೀಣಾಂ ಗಚ್ಛ ಸಪ್ತಾನಾಮರುನ್ಧತ್ಯಾಸ್ತಥೈವ ಚ ।
ದಾಸೀಭರ್ತುಶ್ಚ ದಾಸ್ಯಾಶ್ಚ ಮನಸಾ ನಾಮ ಧಾರಯ ॥೫೫॥
ಜ್ಞಾತ್ವಾ ನಾಮಾನಿ ಚೈವೈಷಾಂ ಸರ್ವಾನ್ಯೇತಾನ್ವಿನಾಶಯ ।
ವಿನಷ್ಟೇಷು ಯಥಾ ಸ್ವೈರಂ ಗಚ್ಛ ಯತ್ರೇಪ್ಸಿತಂ ತವ ॥೫೬॥

"ಯಾತುಧಾನಿಯೇ! ನೀನೀಗಲೇ ಅರಣ್ಯದಲ್ಲಿರುವ ಅರುಂಧತೀ ಸಮೇತರಾದ ಸಪ್ತರ್ಷಿಗಳ ಮತ್ತು ಅವರೊಡನಿರುವ ದಾಸಿಯ ಬಳಿಗೆಹೋಗಿ

ಅವರ ನಾಮಧೇಯಗಳನ್ನು ತಿಳಿದುಕೊ. ಹೆಸರುಗಳಿಗೆ ಅನುಗುಣವಾಗಿರುವ ಅವರ ಸಾಮರ್ಥ್ಯವನ್ನು ತಿಳಿದು ಉಪಾಯಾಂತರಗಳಿಂದ ಅವರೆಲ್ಲರನ್ನೂ ವಿನಾಶಗೊಳಿಸು. ಅವರೆಲ್ಲರೂ ಅವಸಾನಹೊಂದಿದನಂತರ ಮನಬಂದೆಡೆಗೆ ಹೊರಟುಹೋಗು."

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ ! ಭಯಂಕರರೂಪವನ್ನು ಹೊಂದಿದ್ದ ಆ ಯಾತುಧಾನಿಯು ಹಾಗೆಯೇ ಆಗಲೆಂದು ಪ್ರತಿವಚನವನ್ನಿತ್ತು ಸಪ್ತರ್ಷಿಗಳು ಸಂಚಾರಮಾಡುತ್ತಿದ್ದ ವನಕ್ಕೆ ಹೊರಟುಹೋದಳು.

ಆ ಸಮಯದಲ್ಲಿ ಅತ್ರಿಯೇ ಮೊದಲಾದ ಮಹರ್ಷಿಗಳು ಮೂಲ-ಫಲಗಳನ್ನು ಭಕ್ಷಿಸುತ್ತಾ ಅರಣ್ಯದಲ್ಲಿ ಸಂಚರಿಸುತ್ತಿದ್ದರು. ಹೀಗೆಯೇ ಸಂಚರಿಸುತ್ತಿದ್ದಾಗ ಅವರು ಹೃಷ್ಟ-ಪುಷ್ಟವಾದ ಹೆಗಲುಗಳಿಂದಲೂ ಕೈಕಾಲು-ಮುಖ-ಹೊಟ್ಟೆಗಳಿಂದಲೂ ಕೂಡಿದ್ದ ಸ್ಥೂಲಶರೀರನಾದ ಸಂನ್ಯಾಸಿಯೊಬ್ಬನು ನಾಯಿಯೊಡನೆ ಸಂಚರಿಸುತ್ತಿದ್ದುದನ್ನು ನೋಡಿದರು.

ಸರ್ವಾಂಗಪುಷ್ಟನಾಗಿದ್ದ ಮತ್ತು ಶುಭಲಕ್ಷಣಗಳಿಂದ ಕೂಡಿದ್ದ ಆ ಸಂನ್ಯಾಸಿಯನ್ನು ನೋಡಿ ಅರುಂಧತಿಯು ಋಷಿಗಳಿಗೆ–' ನೀವೆಂದಿಗೂ ಹೀಗಾಗಲಾರಿರಿ '–ಎಂದು ಹೇಳಿದಳು. ಸಪ್ತರ್ಷಿಗಳು ಒಬ್ಬೊಬ್ಬರಾಗಿ ಹಾಗಾಗದಿರುವುದಕ್ಕೆ ಕಾರಣವನ್ನು ಹೇಳತೊಡಗಿದರು :

ವಸಿಷ್ಠಃ

ನೈತಸ್ಯೇಹ ಯಥಾಸ್ಮಾಕಮಗ್ನಿಹೋತ್ರಮನಿರ್ಹುತಮ್ ।
ಸಾಯಂ ಪ್ರಾತಶ್ಚ ಹೋತವ್ಯಂ ತೇನ ಪೀವಾಶ್ಶುನಾ ಸಹ ॥೬೧॥

"ಅರುಂಧತೀದೇವಿಯೇ ! ಇವನಿಗೆ ನಮ್ಮಂತೆ ಅಗ್ನಿಹೋತ್ರವಾಗ ಲಿಲ್ಲವೆಂಬ ಚಿಂತೆಯಿಲ್ಲ. ಪ್ರಾತಃಕಾಲ-ಸಾಯಂಕಾಲಗಳಲ್ಲಿ ಅಗ್ನಿಹೋತ್ರವನ್ನು ಮಾಡಬೇಕೆಂಬುದರ ಯೋಚನೆಯೂ ಈ ಸಂನ್ಯಾಸಿಗಿಲ್ಲ. ಆದುದರಿಂದಲೇ ಇವನು ಹೃಷ್ಟನಾಗಿಯೂ–ಪುಷ್ಟನಾಗಿಯೂ ಇದ್ದಾನೆ. ನಾಯಿಯೊಡನೆ ಸ್ವೇಚ್ಛೆಯಿಂದ ತಿರುಗಾಡುತ್ತಲೂ ಇದ್ದಾನೆ."

ಅತ್ರಿಃ

ನೈತಸ್ಯೇಹ ಯಥಾಸ್ಮಾಕಂ ಕ್ಷುಧಾ ವೀರ್ಯಂ ಸಮಾಹತಮ್ ।
ಕೃಚ್ಛ್ರಾಧೀತಂ ಪ್ರಣಷ್ಟಂ ಚ ತೇನ ಪೀವಾಶ್ಶುನಾ ಸಹ ॥೬೨॥

“ನಮ್ಮಂತೆ ಇವನಿಗೆ ಹಸಿವಿನ ಬಾಧೆಯಿಂದ ಶಕ್ತಿಯು ನಷ್ಟವಾಗಿ ಹೋಗಿಲ್ಲ. ಕಷ್ಟಪಟ್ಟು ಅಧ್ಯಯನಮಾಡಿದ್ದ ವೇದಗಳು ಕ್ಷುದ್ಬಾಧೆಯಿಂದ ನಮ್ಮಲ್ಲಿ ಲುಪ್ತವಾಗಿ ಹೋಗಿರುವುದರಿಂದ ನಾವು ಚಿಂತೆಗೊಳಗಾಗಿದ್ದೇವೆ. ಇವನಿಗೆ ಅಂತಹ ಚಿಂತೆ ಯಾವುದೂ ಇಲ್ಲ. ಆದುದರಿಂದ ಈ ಸಂನ್ಯಾಸಿಯು ಹೃಷ್ಟ-ಪುಷ್ಟನಾಗಿದ್ದಾನೆ ಮತ್ತು ಸ್ವೇಚ್ಛೆಯಿಂದ ನಾಯಿಯೊಡನೆ ತಿರುಗಾಡುತ್ತಿದ್ದಾನೆ.”

ವಿಶ್ವಾಮಿತ್ರಃ

ನೈತಸ್ಯೇಹ ಯಥಾಸ್ಮಾಕಂ ಶಶ್ವಚ್ಛಾಸ್ತ್ರಂ ಜರದ್ಗವಃ ।
ಅಲಸಃ ಕ್ಷುತ್ಪರೋ ಮೂರ್ಖಸ್ತೇನ ಪೀವಾಶ್ಶುನಾ ಸಹ ॥೬೩॥

“ಹಸಿವಿನ ಕಾರಣದಿಂದ ಶಾಸ್ತ್ರವೂ ಮತ್ತು ಧರ್ಮವೂ ನಮ್ಮಲ್ಲಿ ಕ್ಷೀಣಿಸಿರುವಂತೆ ಇವನಲ್ಲಿ ಯಾವಾಗಲೂ ಕ್ಷೀಣಿಸಿರುವುದಿಲ್ಲ. ಮೇಲಾಗಿ ಇವನು ಸೋಮಾರಿಯು. ಹಸಿವನ್ನು ಹೋಗಲಾಡಿಸಿಕೊಳ್ಳುವುದರಲ್ಲಿಯೇ ನಿರತನಾಗಿರತಕ್ಕವನು ಮತ್ತು ಮೂರ್ಖನು. ಈ ಕಾರಣದಿಂದ ಈ ಸಂನ್ಯಾಸಿಯು ಹೃಷ್ಟ-ಪುಷ್ಟನಾಗಿದ್ದಾನೆ ಮತ್ತು ಸ್ವೇಚ್ಛೆಯಿಂದ ನಾಯಿಯೊಡನೆ ಸಂಚರಿಸುತ್ತಿದ್ದಾನೆ.”

ಜಮದಗ್ನಿಃ

ನೈತಸ್ಯೇಹ ಯಥಾಸ್ಮಾಕಂ ಭಕ್ತಮಿನ್ಧನಮೇವ ಚ ।
ಸಂಚಿನ್ತ್ಯಂ ವಾರ್ಷಿಕಂ ಚಿತ್ತೇ ತೇನ ಪೀವಾಶ್ಶುನಾ ಸಹ ॥೬೪॥

“ಇವನ ಮನಸ್ಸಿನಲ್ಲಿ ನಮ್ಮಂತೆ ವರ್ಷಪೂರ್ತಿಯಾಗಿ ಅನ್ನವನ್ನೂ ಮತ್ತು ಕಟ್ಟಿಗೆಯನ್ನೂ ಸಂಗ್ರಹಿಸುವ ಯೋಚನೆಯೇ ಉಂಟಾಗುವುದಿಲ್ಲ. ಆದುದರಿಂದಲೇ ಈ ಸಂನ್ಯಾಸಿಯು ಸ್ಥೂಲಕಾಯನಾಗಿದ್ದಾನೆ ಮತ್ತು ನಾಯಿಯೊಡನೆ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದಾನೆ.”

ಕಶ್ಯಪಃ

ನೈತಸ್ಯೇಹ ಯಥಾಸ್ಮಾಕಂ ಚತ್ವಾರಶ್ಚ ಸಹೋದರಾಃ ।
ದೇಹಿ ದೇಹೀತಿ ಭಿಕ್ಷನ್ತಿ ತೇನ ಪೀವಾಞ್ಶುನಾ ಸಹ ॥೬೫॥

"ನಮ್ಮಂತೆ ಇವನಿಗೆ ನಾಲ್ವರು ಸಹೋದರರೂ* ಇಲ್ಲ. ಆ ಸಹೋದರರು ಪ್ರತಿದಿನವೂ ಇವನನ್ನು 'ದೇಹಿ' 'ದೇಹಿ'-ಎಂದು ಯಾಚಿಸುವುದೂ ಇಲ್ಲ. ಈ ಕಾರಣದಿಂದಲೇ ಈ ಸಂನ್ಯಾಸಿಯು ಹೃಷ್ಟ-ಪುಷ್ಟನಾಗಿದ್ದಾನೆ ಮತ್ತು ನಾಯಿಯೊಡನೆ ಸ್ವೇಚ್ಛೆಯಿಂದ ಸಂಚರಿಸುತ್ತಾನೆ."

ಭರದ್ವಾಜಃ

ನೈತಸ್ಯೇಹ ಯಥಾಸ್ಮಾಕಂ ಬ್ರಹ್ಮಬನ್ಧೋರಚೇತಸಃ ।
ಶೋಕೋ ಭಾರ್ಯಾಪವಾದೇನ ತೇನ ಪೀವಾಞ್ಶುನಾ ಸಹ ॥೬೬॥

"ಬ್ರಾಹ್ಮಣಾಪಸದನಾದ ಅವಿವೇಕಿಯಾದ ಇವನಿಗೆ, ನಮ್ಮಂತೆ ಹೆಂಡತಿಗೆ ಕೆಟ್ಟ ಆಪಾದನೆ ಬರುತ್ತದೆಂಬ ಶೋಕವೂ ಇಲ್ಲ. ಆದುದರಿಂದ ಈ ಸಂನ್ಯಾಸಿಯು ಹೃಷ್ಟ-ಪುಷ್ಟನಾಗಿದ್ದಾನೆ ಮತ್ತು ನಾಯಿಯೊಡನೆ ಸ್ವೇಚ್ಛೆಯಿಂದ ತಿರುಗಾಡುತ್ತಾನೆ."

ಗೌತಮಃ

ನೈತಸ್ಯೇಹ ಯಥಾಸ್ಮಾಕಂ ತ್ರಿಕೌಶೇಯಂ ಚ ರಾಙ್ಕವಮ್ ।
ಏಕೈಕಂ ವೈ ತ್ರಿವರ್ಷೀಯಂ ತೇನ ಪೀವಾಞ್ಶುನಾ ಸಹ ॥೬೭॥

"ಈ ಸಂನ್ಯಾಸಿಯು ನಮ್ಮಂತೆ ಮೂರು ವರ್ಷಗಳಷ್ಟು ಹಳೆಯದಾದ ಮತ್ತು ಜೀರ್ಣವಾಗಿರುವ, ದರ್ಭೆಯಿಂದ ಹೆಣೆದಿರುವ ಮೂರು ಸುತ್ತಿನ ಮೇಖಲೆಯನ್ನಾಗಲೀ ಮೃಗಚರ್ಮವನ್ನಾಗಲೀ ಧರಿಸಬೇಕಾಗಿಲ್ಲ. ಈ ಕಾರಣದಿಂದಲೇ ಇವನು ಹೃಷ್ಟ-ಪುಷ್ಟನಾಗಿದ್ದಾನೆ ಮತ್ತು ನಾಯಿಯೊಡನೆ ಸ್ವೇಚ್ಛೆಯಿಂದ ಸಂಚರಿಸುತ್ತಿದ್ದಾನೆ."

---

*ದೇವತೆಗಳು, ಪಿತೃಗಳು, ಅತಿಥಿಗಳು ಮತ್ತು ಆಶ್ರಿತವರ್ಗದವರು–ಇವರೇ ಗೃಹಸ್ಥನ ನಾಲ್ವರು ಸಹೋದರರು.

ಭೀಷ್ಮನು ಹೇಳುತ್ತಾನೆ :

ಯುಧಿಷ್ಠಿರ! ಹೀಗೆ ಸಪ್ತರ್ಷಿಗಳು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದಾಗ ಸಂನ್ಯಾಸಿಯು ಅವರೆಲ್ಲರನ್ನೂ ನೋಡಿ ಅವರ ಸಮೀಪಕ್ಕೆ ಆಗಮಿಸಿ ಯಥಾಶಾಸ್ತ್ರವಾಗಿ ಅವರೆಲ್ಲರನ್ನೂ ಕೈಯಿಂದ ಸ್ಪರ್ಶಿಸಿದನು. ಅನಂತರ ಸಪ್ತರ್ಷಿಗಳೂ ಮತ್ತು ಆ ಸಂನ್ಯಾಸಿಯೂ ಪರಸ್ಪರವಾಗಿ ಕುಶಲಸಮಾಚಾರವನ್ನು ವಿನಿಮಯಮಾಡಿಕೊಳ್ಳುತ್ತಿದ್ದಾಗ ಸಪ್ತರ್ಷಿಗಳು ಸಂನ್ಯಾಸಿಗೆ–'ನಾವು ಹಸಿವನ್ನು ನಿವಾರಿಸಿಕೊಳ್ಳುವುದಕ್ಕಾಗಿ ಈ ಅರಣ್ಯದಲ್ಲಿ ಸಂಚರಿಸುತ್ತಿದ್ದೇವೆ '–ಎಂದು ಹೇಳಿದರು. ಬಳಿಕ ಸಪ್ತರ್ಷಿಗಳು ಸಂನ್ಯಾಸಿಯ ಜೊತೆಯಲ್ಲಿಯೇ ಅಲ್ಲಿಂದ ಹೊರಟರು. ಅವರೆಲ್ಲರ ನಿರ್ಧಾರವೂ ಮತ್ತು ಕಾರ್ಯಗಳೂ ಒಂದೇ ಆಗಿದ್ದುವು. ಈ ಕಾರಣದಿಂದಲೇ ಅವರು ಅರಣ್ಯಗಳಲ್ಲಿ ಸಂಚರಿಸುತ್ತಾ ಗೆಡ್ಡೆ-ಗೆಣಸುಗಳನ್ನು ಭೂಮಿಯಿಂದ ಹೊರತೆಗೆದು ತರುತ್ತಿದ್ದರು. ಹೀಗೆಯೇ ಸಂಚರಿಸುತ್ತಿರಲಾಗಿ ಅವರೊಮ್ಮೆ ದಟ್ಟವಾದ ಮರಗಳಿಂದ ಆವೃತವಾಗಿದ್ದ, ಪವಿತ್ರವಾದ ಮತ್ತು ಪ್ರಸನ್ನವಾದ ನೀರಿನಿಂದ ಯುಕ್ತವಾಗಿದ್ದ , ಶುಭಾವಹವಾದ ಸರೋವರವನ್ನು ನೋಡಿದರು. ಬಾಲಸೂರ್ಯನ ಶರೀರಸದೃಶವಾಗಿದ್ದ (ಎಣೆಗೆಂಪುಬಣ್ಣದಿಂದ ಕೂಡಿದ್ದ) ಕಮಲಗಳಿಂದಲೂ–ವೈದೂರ್ಯವರ್ಣಸದೃಶವಾದ ಪದ್ಮಪತ್ರಗಳಿಂದಲೂ ಸಮಾವೃತವಾಗಿದ್ದ ಸರೋವರವನ್ನು ಸಪ್ತರ್ಷಿಗಳು ನೋಡಿದರು. ಜಲಾಶಯವನ್ನು ಸಂಸೇವಿಸುತ್ತಿದ್ದ ನಾನಾವಿಧವಾದ ಪಕ್ಷಿಗಳಿಂದ ಸಮಾಕುಲವಾಗಿದ್ದ ಸರೋವರವನ್ನು ಅವರು ನೋಡಿದರು. ಆ ಸರೋವರಕ್ಕೆ ಹೋಗಲು ಒಂದೇ ಒಂದು ಬಾಗಿಲಿದ್ದಿತು. ಅಲ್ಲಿಂದ ಯಾವ ವಸ್ತುವನ್ನೂ ಹೊರತರಲಾಗುತ್ತಿರಲಿಲ್ಲ. ಸರೋವರಕ್ಕಿಳಿಯಲು ಒಳ್ಳೆಯ ಸೋಪಾನವಿದ್ದಿತು. ಸರೋವರವು ಕೆಸರಿಲ್ಲದೇ ಸ್ವಚ್ಛವಾಗಿದ್ದಿತು.

ವೃಷಾದರ್ಭಿಯಿಂದ ಸಪ್ತರ್ಷಿಗಳ ವಿನಾಶಾರ್ಥವಾಗಿ ಕಳುಹಿಸಲ್ಪಟ್ಟಿದ್ದ, ವಿಕಾರವಾಗಿ ಕಾಣುತ್ತಿದ್ದ ಯಾತುಧಾನಿಯೆಂಬ ಹೆಸರಿನಿಂದ ವಿಖ್ಯಾತಳಾಗಿದ್ದ ಕೃತ್ಯೆಯು ಆ ಸರೋವರವನ್ನು ಸಂರಕ್ಷಿಸುತ್ತಿದ್ದಳು. ಪಶುಸಖನನ್ನು ಸಹಾಯಕನನ್ನಾಗಿ ಪಡೆದಿದ್ದ ಸಪ್ತರ್ಷಿಗಳು ಮೃಣಾಳಗಳ ಸಂಗ್ರಹಾರ್ಥವಾಗಿ ಕೃತ್ಯೆಯಿಂದ

ರಕ್ಷಿಸಲ್ಪಡುತ್ತಿದ್ದ ಆ ಸರೋವರದ ಬಳಿಗೆ ಹೋದರು. ಸರೋವರದ ದಡದಲ್ಲಿ ನಿಂತಿದ್ದ ವಿಕೃತವಾಗಿ ಕಾಣುತ್ತಿದ್ದ ಯಾತುಧಾನಿಯನ್ನು ನೋಡಿ ಸಪ್ತರ್ಷಿಗಳು ಹೇಳಿದರು:

ಏಕಾ ತಿಷ್ಠಸಿ ಕಾ ಚ ತ್ವಂ ಕಸ್ಯಾರ್ಥೇ ಕಿಂ ಪ್ರಯೋಜನಮ್ ।
ಪದ್ಮಿನೀತೀರಮಾಶ್ರಿತ್ಯ ಬ್ರೂಹಿ ತ್ವಂ ಕಿಂ ಚಿಕೀರ್ಷಸಿ ॥೭೭॥



"ಏಕಾಕಿನಿಯಾಗಿ ಈ ಸರೋವರದ ಸಮೀಪದಲ್ಲಿ ನಿಂತಿರುವ ನೀನು ಯಾರು? ಯಾರಿಗಾಗಿ ನಿಂತಿರುವೆ? ನೀನು ಹೀಗೆ ನಿಂತಿರುವುದರ ಪ್ರಯೋಜನವೇನು? ನೀನಿಲ್ಲಿ ಯಾವ ಕಾರ್ಯವನ್ನು ಮಾಡಲು ಇಚ್ಛಿಸಿರುವೆ?–ಈ ಎಲ್ಲ ವಿಷಯಗಳನ್ನೂ ಹೇಳು."

ಯಾತುಧಾನೀ

ಯಾಸ್ಮಿ ಸಾಸ್ಮ್ಯನುಯೋಗೋ ಮೇ ನ ಕರ್ತವ್ಯಃ ಕಥಂಚನ ।
ಆರಕ್ಷಿಣೀಂ ಮಾಂ ಪದ್ಮಿನ್ಯಾ ವಿತ್ತ ಸರ್ವೇ ತಪೋಧನಾಃ ॥೭೮॥

"ತಪೋಧನರೇ ! ನಾನು ಯಾವಳೋ ಅವಳೇ ಆಗಿದ್ದೇನೆ. ಈ ವಿಷಯದಲ್ಲಿ ಯಾವುದೇ ಕಾರಣದಿಂದಲೂ ನನ್ನನ್ನು ಪ್ರಶ್ನಿಸುವುದು ನಿಮ್ಮ ಕರ್ತವ್ಯವಲ್ಲ. ಈಗ ನಾನು ಈ ಸರೋವರದ ರಕ್ಷಕಳೆಂದು ತಿಳಿಯಿರಿ."

ಋಷಿಗಳು ಹೇಳುತ್ತಾರೆ:

ಸರ್ವ ಏವ ಕ್ಷುಧಾರ್ತಾಃ ಸ್ಮ ನ ಚಾನ್ಯತ್ಕಿಂಚಿದಸ್ತಿ ನಃ ।
ಭವತ್ಯಾಃ ಸಮ್ಮತೇ ಸರ್ವೇ ಗೃಹ್ಣೀಯಾಮ ಬಿಸಾನ್ಯುತ ॥೭೯॥

"ಭದ್ರೇ! ಈ ಸಮಯದಲ್ಲಿ ನಾವು ಹಸಿವಿನಿಂದ ಪೀಡಿತರಾಗಿದ್ದೇವೆ. ನಮ್ಮ ಬಳಿಯಲ್ಲಿ ತಿನ್ನಲು ಯಾವ ವಸ್ತುವೂ ಇಲ್ಲವಾಗಿದೆ. ನಿನ್ನ ಅನುಮತಿಯನ್ನು ಪಡೆದು ಆಹಾರಾರ್ಥವಾಗಿ ಸರೋವರದಲ್ಲಿರುವ ಕಮಲದ ದಂಟುಗಳನ್ನು ಸಂಗ್ರಹಿಸುತ್ತೇವೆ."

ಯಾತುಧಾನೀ

ಸಮಯೇನ ಬಿಸಾನೀತೋ ಗೃಹ್ಣೀಧ್ವಂ ಕಾಮಕಾರತಃ ।
ಏಕೈಕೋ ನಾಮ ಮೇ ಪ್ರೋಕ್ತ್ವಾ ತತೋ ಗೃಹ್ಣೀತ ಮಾಚಿರಮ್॥

"ಋಷಿಗಳೇ! ಒಂದು ನಿಬಂಧನೆಯ ಮೇಲೆ ನೀವು ಈ ಸರೋವರದಲ್ಲಿರುವ ಕಮಲದ ದಂಟುಗಳನ್ನು ನಿಮ್ಮ ಇಚ್ಛಾನುಸಾರವಾಗಿ ತೆಗೆದುಕೊಂಡು ಹೋಗಬಹುದು. ನೀವು ಒಬ್ಬೊಬ್ಬರಾಗಿ ಬನ್ನಿರಿ. ನಿಮ್ಮ ನಾಮಧೇಯಗಳನ್ನು ಹೇಳಿರಿ. ಅನಂತರ ಕಮಲದ ದಂಟುಗಳನ್ನು ಸಂಗ್ರಹಿಸಿಕೊಳ್ಳಿರಿ. ನೀವು ಈ ಕಾರ್ಯದಲ್ಲಿ ವಿಳಂಬಮಾಡಬಾರದು."

ಭೀಷ್ಮನು ಹೇಳುತ್ತಾನೆ:

ಯುಧಿಷ್ಠಿರ! ಯಾತುಧಾನಿಯ ಆ ಮಾತನ್ನು ಕೇಳಿ, ಅವಳು ಕೃತ್ಯೆಯೇ ಎಂದೂ, ತಮ್ಮೆಲ್ಲರನ್ನೂ ವಧಿಸುವ ಇಚ್ಛೆಯುಳ್ಳವಳಾಗಿರುವಳೆಂದೂ ತಿಳಿದು, ಹಸಿವಿನಿಂದ ವ್ಯಾಕುಲಗೊಂಡಿದ್ದ ಅತ್ರಿಯು ಹೇಳಿದನು:

ಅರಾತ್ರಿರತ್ರಿಃ ಸಾ ರಾತ್ರಿರ್ಯಾಂ ನಾಧೀತೇ ತ್ರಿರದ್ಯ ವೈ ।
ಅರಾತ್ರಿರತ್ರಿರಿತ್ಯೇವ ನಾಮ ಮೇ ವಿದ್ಧಿ ಶೋಭನೇ ॥೮೨॥

"ಅರಾತ್ರಿ–ಎಂದರೆ ರಾತ್ರಿಯಿಲ್ಲದವನು. ಯಾವ ದಿನದಲ್ಲಿ ಮೂರುಬಾರಿ (ಪ್ರಾತಃ-ಮಧ್ಯಾಹ್ನ-ಸಾಯಂಕಾಲಗಳಲ್ಲಿ) ಅಧ್ಯಯನ ಮಾಡುವುದಿಲ್ಲವೋ–ಆ ದಿವಸವು ರಾತ್ರಿ (ಕತ್ತಲೆಯ ಸಮಯ; ವೇದಾಧ್ಯಯನದ ತೇಜಸ್ಸು ಇಲ್ಲದ ಸಮಯ)–ಎಂದೇ ಕರೆಯಲ್ಪಡಬೇಕು. ಹೀಗೆ ರಾತ್ರಿಯಿಲ್ಲದ ಅತ್ರಿಯು ನಾನು ಎಂಬುದಾಗಿಯೂ ಇಂದು ನನ್ನ ಹೆಸರಿನ ನಿರ್ವಚನವನ್ನು ತಿಳಿದುಕೊ." (ಅತ್ರಿ ಎಂದರೆ ಜ್ಞಾನೀ. ತ್ರಿ ಎಂದರೆ ತ್ರಿಗುಣಗಳು. ಅವುಗಳಿಲ್ಲದವನು ಎಂದರೆ: ತ್ರಿಗುಣಾತೀತನು ಅತ್ರಿ. ನೀಲಕಂಠೀಯವ್ಯಾಖ್ಯಾನದಂತೆ ಅತ್ರಿ ಎಂದರೆ: ಪಾಪಗಳ ದೆಸೆಯಿಂದ ಕಾಪಾಡುವವನು. **ಯದಿದಂ ಸರ್ವಂ ಪಾಪ್ಮನಃ ಅತ್ರಾಯತ ತದಿದಂ ಕಿಂ ಚ ತತ್ತಸ್ಮಾದತ್ರಯಃ** ಪರಮಾತ್ಮದರ್ಶನವು ಆಗದಿರುವ ಅವಸ್ಥೆಯು ರಾತ್ರಿ. ಅಂತಹ ಅವಸ್ಥೆಯಿಲ್ಲದ ಜ್ಞಾನಿಯು ಅತ್ರಿ. **ಅರಾತ್ರಿರತ್ರೇಃ** ಎಂಬ ಪಾಠಾಂತರವೂ ಇದೆ. 'ಅಜ್ಞಾನಾವಸ್ಥೆ ಅಥವಾ ಅಧ್ಯಯನವು ಇಲ್ಲದಿರುವಿಕೆಯು ನನ್ನಲ್ಲಿ ಇಲ್ಲ. ಆದುದರಿಂದ ನಾನು ಅತ್ರಿಯು.' ಯಾತುಧಾನಿಗೆ ಮೋಹವನ್ನುಂಟುಮಾಡಲು ಅತ್ರಿಮಹರ್ಷಿಯು ತನ್ನ ಹೆಸರಿನ ನಿರ್ವಚನವನ್ನು ರಹಸ್ಯಭಾಷೆಯಲ್ಲಿ ಹೇಳುತ್ತಾನೆ. ಅವಳಿಗೆ ತಿಳಿದಿರುವುದು ಲೌಕಿಕವಾದ ರಾತ್ರಿಯೊಂದೇ. ಅಜ್ಞಾನದ ಅವಸ್ಥೆಯೇ ರಾತ್ರಿ. ಅಧ್ಯಯನವಿಲ್ಲದ ಸಮಯವೇ ರಾತ್ರಿ–ಇತ್ಯಾದಿಗಳು ಅವಳಿಗೆ ಅರ್ಥವಾಗುವುದಿಲ್ಲ.)

ಯಾತುಧಾನೀ

"ಮಹಾತೇಜಸ್ವಿಯೇ! ನೀನು ಹೇಳಿದ ಹೆಸರಿನ ವಿವರಣೆಯನ್ನು ಮನನಮಾಡಿಕೊಳ್ಳುವುದು ನನಗೆ ಕಷ್ಟವೇ ಆಗಿದೆ. ಆದರೂ ನೀನು ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ವಸಿಷ್ಠಃ

ವಸಿಷ್ಠೋಽಸ್ಮಿ ವರಿಷ್ಠೋಽಸ್ಮಿ ವಸೇ ವಾಸಗೃಹೇಷ್ವಪಿ ।
ವಸಿಷ್ಠತ್ವಾಚ್ಚ ವಾಸಾಚ್ಚ ವಸಿಷ್ಠ ಇತಿ ವಿದ್ಧಿ ಮಾಮ್ ॥೮೪॥

"ನಾನು ವಸಿಷ್ಠನು. ಅತ್ಯಂತ ಶ್ರೇಷ್ಠನು. ಆದರೂ ವಾಸದಮನೆಗಳಲ್ಲಿ ವಾಸಮಾಡುವ ಗೃಹಸ್ಥನಾಗಿದ್ದೇನೆ. ಹೀಗೆ ವಸಿಷ್ಠನೂ (ಇಂದ್ರಿಯಗಳನ್ನು

ವಶದಲ್ಲಿ ಇಟ್ಟುಕೊಂಡಿರುವವನು) ವಾಸದ ಮನೆಗಳಲ್ಲಿ ಗೃಹಸ್ಥನಾಗಿ ವಾಸಮಾಡುತ್ತಿರುವವನೂ ಆಗಿರುವುದರಿಂದ ನನ್ನನ್ನು ವಸಿಷ್ಠನೆಂದೇ ತಿಳಿ."

(ವಸಿಷ್ಠ ಎಂದರೆ ವಸುಗಳನ್ನು ಸ್ವಾಧೀನದಲ್ಲಿ ಇಟ್ಟುಕೊಂಡಿರುವವನು. ಎಲ್ಲ ವಸು (ಸಂಪತ್ತುಗಳು) ಅಣಿಮಾದಿ ಅಷ್ಟೈಶ್ವರ್ಯಗಳು ಯಾವನಿಗೆ ವಶವಾಗಿವೆಯೋ ಅಂತಹ ಯೋಗಿಯು–ಎಂದು ನೀಲಕಂಠೀಯ ಭಾಷ್ಯ. ತೈತ್ತಿರೀಯೋಪನಿಷತ್ತಿನಲ್ಲಿ ವಸಿಷ್ಠಶಬ್ದಕ್ಕೆ ಎಲ್ಲವನ್ನೂ ವಶದಲ್ಲಿ ಇಟ್ಟುಕೊಂಡಿರುವವನು; ಸಂಯಮೀ–ಎಂಬ ಅರ್ಥವೇ ಇದೆ. ಯಾತುಧಾನಿಗೆ ಇದು ಒಗಟಿನ ಮಾತೇ ಆಯಿತು. ಏಕೆಂದರೆ: ಮಹಾಸಂಯಮಿಯಾಗಿರುವ ಜ್ಞಾನಿಯು ವಾಸದ ಮನೆಗಳಲ್ಲಿ ವಾಸಮಾಡುವ ಗೃಹಸ್ಥನಾಗಿರಲು ಹೇಗೆ ಸಾಧ್ಯ?–ಎಂಬುದು ಅವಳಿಗೆ ಅರ್ಥವಾಗುವುದಿಲ್ಲ.)

ಯಾತುಧಾನೀ

ನಾಮ ನೈರುಕ್ತಮೇತತ್ತೇ ದುಃಖವ್ಯಾಭಾಷಿತಾಕ್ಷರಮ್ ।
ನೈತದ್ಧಾರಯಿತುಂ ಶಕ್ಯಂ ಗಚ್ಛಾವತರ ಪದ್ಮಿನೀಮ್ ॥೮೫॥

"ಮಹರ್ಷಿಯೇ! ನೀನು ಹೇಳಿದ ನಾಮವ್ಯಾಖ್ಯೆಯು ತುಂಬಾ ಕಷ್ಟವಾಗಿದೆ. ನಾನಿದನ್ನು ಜ್ಞಾಪಕದಲ್ಲಿಟ್ಟುಕೊಳ್ಳಲು ಅಸಮರ್ಥಳಾಗಿದ್ದೇನೆ. ನೀನೂ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ಕಶ್ಯಪಃ

ಕುಲಂ ಕುಲಂ ಚ ಕುವಮಃ ಕುವಮಃ ಕಶ್ಯಪೋ ದ್ವಿಜಃ ।
ಕಾಶ್ಯಃ ಕಾಶನಿಕಾಶತ್ವಾದೇತನ್ಮೇ ನಾಮ ಧಾರಯ ॥೮೬॥

"ಪ್ರತಿಯೊಂದು ಕುಲದಲ್ಲಿಯೂ ಭೂಮಿಯ ಮೇಲೆ ಕಿರಣಗಳನ್ನು ಉಗುಳುತ್ತಿರುವ ಅಥವಾ ನೀರನ್ನು ಸುರಿಸುತ್ತಿರುವ ಕಶ್ಯಪನು ನಾನು. ಕಾಶಪುಷ್ಪಕ್ಕೆ (ಜಂಬುಹುಲ್ಲಿನ ಹೂವಿಗೆ) ಸಮಾನವಾದ ಬಣ್ಣವುಳ್ಳವನೂ ಆಗಿರುವುದರಿಂದ ನಾನು ಕಾಶ್ಯಪ."

(ಕಶ್ಯಪ ಅಥವಾ ಕಾಶ್ಯಪ–ಎಂದರೆ ಸೂರ್ಯ. ಅವನ ತಂದೆಯಾದ

ಕಶ್ಯಪಮಹರ್ಷಿಯೂ ಸೂರ್ಯಸ್ವರೂಪನೇ. ಅವನು ಬಡವರು, ಬಲ್ಲಿದರು, ಪುಣ್ಯವಂತರು, ಪಾಪಿಷ್ಠರು–ಇತ್ಯಾದಿ ಭೇದವಿಲ್ಲದೇ ಎಲ್ಲರ ಮೇಲೂ ಸಮಾನವಾಗಿ ಕಿರಣಗಳನ್ನು ಚೆಲ್ಲುವನು ಅಥವಾ ಮಳೆಯನ್ನು ಸುರಿಸುವನು. ಅವನ ವರ್ಣವು ಕಾಶಪುಷ್ಪದಂತಿದೆ. ಎಲ್ಲರಿಗೂ ಸಮಾನವಾಗಿ ಇರಲು ಒಬ್ಬನಿಗೇ ಹೇಗೆ ಸಾಧ್ಯ? ಎಂಬುದು ಯಾತುಧಾನಿಗೆ ಅರ್ಥವಾಗದ ಒಗಟು. ಕಶ್ಯಪ–ಎಂದರೆ ಶರೀರ. ಎಲ್ಲ ಶರೀರಗಳನ್ನೂ ಕಾಪಾಡುವುದರಿಂದ ಸೂರ್ಯನು ಕಶ್ಯಪ.)

ಯಾತುಧಾನೀ

"ಮಹರ್ಷಿಯೇ! ನಿನ್ನ ಹೆಸರಿನ ತಾತ್ಪರ್ಯವನ್ನು ಮನನ ಮಾಡುವುದೂ ಬಹಳ ಕಷ್ಟವೇ ಆಗಿದೆ. ಆದುದರಿಂದ ನೀನೂ ಕಮಲದ ದಂಟುಗಳ ಸಂಗ್ರಹಾರ್ಥವಾಗಿ ಸರೋವರದಲ್ಲಿ ಇಳಿಯಬಹುದು."

ಭರದ್ವಾಜಃ

ಭರೇ ಸುತಾನ್ಭರೇ ಶಿಷ್ಯಾನ್ಭರೇ ದೇವಾನ್ಭರೇ ದ್ವಿಜಾನ್ ।
ಭರೇ ಭಾರ್ಯಾಂ ಭರೇ ಧ್ವಾಜಂ ಭರದ್ವಾಜೋಽಸ್ಮಿ ಶೋಭನೇ ॥

"ಶೋಭನಳೇ! ನಾನು ಪುತ್ರರನ್ನು ಭರಿಸಿ ಪೋಷಿಸುತ್ತೇನೆ. ಶಿಷ್ಯರನ್ನು ಭರಿಸಿ ಪೋಷಿಸುತ್ತೇನೆ. ದೇವತೆಗಳನ್ನು (ಅಗ್ನಿಹೋತ್ರಾದಿಗಳ ಮೂಲಕ) ಭರಿಸುತ್ತೇನೆ. ಬ್ರಾಹ್ಮಣರನ್ನೂ ಭಾರ್ಯೆಯನ್ನೂ ಭರಿಸಿ ಪೋಷಿಸುತ್ತೇನೆ. ದ್ವಾಜ ಎಂಬ ನಾಮಾರ್ಥವನ್ನು ಭರಿಸುತ್ತೇನೆ. ಆದುದರಿಂದ ನಾನು ಭರದ್ವಾಜನಾಗಿದ್ದೇನೆ."

(ದ್ವಾಜ–ಎರಡು ಹುಟ್ಟುಗಳು. ಒಂದು ಕರ್ಮಕಾಂಡದ ಜನ್ಮ. ಇನ್ನೊಂದು ಜ್ಞಾನಜನ್ಮ. ಎರಡನ್ನೂ ಭರಿಸುವವನು ಭರದ್ವಾಜ. ಒಬ್ಬನೇ ವ್ಯಕ್ತಿಯು ಪರಸ್ಪರ ವಿರುದ್ಧವಾದ ಎರಡು ಹುಟ್ಟುಗಳನ್ನು ಹೇಗೆ ಹೊಂದುವನು? ಎಂಬುದು ಯಾತುಧಾನಿಗೆ ತಿಳಿಯದ ಒಗಟು.)

ಯಾತುಧಾನೀ

"ಮಹರ್ಷಿಯೇ! ನೀನು ಹೇಳಿದ ನಾಮವ್ಯಾಖ್ಯೆಯನ್ನು ಅರ್ಥ

ಮಾಡಿಕೊಳ್ಳುವುದು ನನಗೆ ಕಠಿನವಾಗಿ ಕಾಣುತ್ತಿದೆ. ಇದನ್ನು ಸ್ಮರಣೆಯಲ್ಲಿಟ್ಟುಕೊಳ್ಳುವುದೂ ನನಗೆ ಶಕ್ಯವಿಲ್ಲ. ನೀನೂ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ಗೌತಮಃ

ಗೋದಮೋ ದಮತೋಽಧೂಮೋಽದಮಸ್ತೇ ಸಮದರ್ಶನಾತ್ ।
ವಿದ್ಧಿ ಮಾಂ ಗೌತಮಂ ಕೃತ್ಯೇ ಯಾತುಧಾನಿ ನಿಬೋಧ ಮಾಮ್ ॥

"ಕೃತ್ಯಾದೇವತೆಯೇ! ನಾನು ಹೇಳುವುದನ್ನು ಕೇಳು. ನಾನು ಗೋವುಗಳನ್ನು (ಇಂದ್ರಿಯಗಳನ್ನು) ದಮನಮಾಡಿದ್ದೇನೆ. ಆದುದರಿಂದ ನಾನು ಗೋದಮನು. ನಾನು ಧೂಮರಹಿತನಾದ ಅಗ್ನಿಯಂತೆ ತೇಜಸ್ವಿಯಾಗಿದ್ದೇನೆ. ಎಲ್ಲವನ್ನೂ ಸಮಾನವಾಗಿ ಕಾಣುತ್ತಿರುವುದರಿಂದ ನಿನ್ನಿಂದಾಗಲೀ ಬೇರೆಯವರಿಂದಾಗಲೀ ಅದಮನು."

(ಗೌತಮಃ–ಎಂದರೆ ಬಹುಮಟ್ಟಿಗೆ ಗೋವಿನಂತೆಯೇ ಇರುವವನು; ಅತ್ಯಂತ ಸಾಧು. ಅತ್ಯಂತ **ಗೌಃ ಗೌತಮಃ** ಎಂಬ ಅರ್ಥವೂ ಪ್ರಸಿದ್ಧವಾಗಿದೆ. ಯಾವನಾದರೂ ಒಬ್ಬನು ಗೋವಿನಂತೆ ಸಾಧುವಾಗಿಯೂ ಇದ್ದು ಗೋವುಗಳನ್ನು ದಮನಮಾಡಿ ಅಗ್ನಿಯಂತೆ ಜ್ವಲಿಸುತ್ತಾ ಸಮದರ್ಶಿಯೂ ಆಗಿರಲು ಹೇಗೆ ಸಾಧ್ಯ? ಅಥವಾ ಗೋವುಗಳನ್ನು (ಕಿರಣಗಳನ್ನು) ದಮನ (ಉಪಸಂಹಾರ) ಮಾಡಿ, ಸಾಧುವೂ ಆಗಿ ಹೊಗೆಯಿಲ್ಲದ ಅಗ್ನಿಯಂತೆ ತೊಳ-ತೊಳಗಿ ಬೆಳಗುತ್ತಿರುವುದು ಹೇಗೆ ಸಾಧ್ಯ?–ಎಂಬುದು ಯಾತುಧಾನಿಗೆ ಅರ್ಥವಾಗದ ಒಗಟು.)

ಯಾತುಧಾನೀ

"ಮಹಾಮುನಿಯೇ! ನಿನ್ನ ಹೆಸರಿನ ವ್ಯಾಖ್ಯೆಯನ್ನು ಸ್ಮರಣೆಯಲ್ಲಿಟ್ಟುಕೊಳ್ಳಲು ನನಗೆ ಶಕ್ಯವಿಲ್ಲ. ನೀನೂ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ವಿಶ್ವಾಮಿತ್ರಃ

ವಿಶ್ವೇದೇವಾಶ್ಚ ಮೇ ಮಿತ್ರಂ ಮಿತ್ರಮಸ್ಮಿ ಗವಾಂ ತಥಾ ।
ವಿಶ್ವಾಮಿತ್ರಮಿತಿ ಖ್ಯಾತಂ ಯಾತುಧಾನೀ ನಿಬೋಧ ಮಾಮ್ ॥೯೨॥

"ವಿಶ್ವದ ದೇವತೆಗಳೆಲ್ಲರೂ ನನ್ನ ಮಿತ್ರರು. ನಾನು ಗೋವುಗಳಿಗೂ (ಇಂದ್ರಿಯಗಳಿಗೂ) ಮಿತ್ರನಾಗಿದ್ದೇನೆ. ಇದರಿಂದ ನನ್ನನ್ನು ವಿಶ್ವಾಮಿತ್ರನೆಂಬ ಹೆಸರಿನಿಂದ ವಿಖ್ಯಾತನಾಗಿರುವವನೆಂದು ತಿಳಿ."

(ನಾನು ಎಲ್ಲ ದೇವತೆಗಳಿಗೂ ಮಿತ್ರ. ಎಲ್ಲ ಗೋವುಗಳೂ (ಇಂದ್ರಿಯಗಳೂ) ನನ್ನ ಮಿತ್ರರು. ಇಂದ್ರಿಯಗಳೊಡನೆ ಸ್ನೇಹದಲ್ಲಿಯೇ ಇದ್ದು ಸ್ನೇಹದಿಂದ ಅವುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವನು ನಾನು. **ವಿಶ್ವಸ್ಯ ಹ ವೈ ಮಿತ್ರಂ ವಿಶ್ವಾಮಿತ್ರ ಆಸ ।** ಎಂದು ಶ್ರುತಿಯು ಹೇಳುತ್ತದೆ. ಎಲ್ಲರಿಗೂ ಶತ್ರುಗಳೂ, ಮಿತ್ರರೂ, ಉದಾಸೀನರೂ ಇದ್ದೇ ಇರುತ್ತಾರೆ. ಅವರೊಡನೆ ಆಯಾರೀತಿಯಲ್ಲಿ ವ್ಯವಹರಿಸಬೇಕಾಗುತ್ತದೆ. ಹೀಗಿರುವಾಗ ಇಡೀ ವಿಶ್ವವೇ ಮಿತ್ರನಾಗಿರಲು ಹೇಗೆ ಸಾಧ್ಯ? ಎಂಬುದು ಯಾತುಧಾನಿಗೆ ಅರ್ಥವಾಗದ ಸಮಸ್ಯೆ.)

ಯಾತುಧಾನೀ

"ಮಹರ್ಷಿಯೇ! ನೀನು ಹೇಳಿದ ನಾಮವ್ಯಾಖ್ಯೆಯ ಅಕ್ಷರಗಳನ್ನು ಉಚ್ಚಾರಣೆಮಾಡುವುದೂ ನನಗೆ ಕಠಿನವಾಗಿ ಕಾಣುತ್ತಿದೆ. ಇದನ್ನು ಸ್ಮರಣೆಯಲ್ಲಿಟ್ಟುಕೊಳ್ಳುವುದು ನನಗೆ ಶಕ್ಯವಿಲ್ಲ. ನೀನೂ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ಜಮದಗ್ನಿಃ

ಜಾಜಮದ್ಯ ಜಜಾನೇಹಂ ಜಿಜಾಹೀಹ ಜಿಜಾಯಿಷೀ ।
ಜಮದಗ್ನಿರಿತಿ ಖ್ಯಾತಸ್ತತೋ ಮಾಂ ವಿದ್ಧಿ ಶೋಭನೇ ॥೯೪॥

"ಈಗ ಹುಟ್ಟಿದವನು, ಹಿಂದೆ ಹುಟ್ಟಿದವನು, ಮುಂದೆ ಹುಟ್ಟುವವನು, ಎಂದೆಂದಿಗೂ ಹುಟ್ಟುತ್ತಿರುವವನು–ಹೀಗೆ ಸರ್ವಕಾಲದಲ್ಲಿಯೂ ಇರುವ ಅಗ್ನಿಯು ನಾನು. ಹೀಗೆ ವಿಚಿತ್ರವಾದ ಹುಟ್ಟುಳ್ಳ ಅಗ್ನಿಸ್ವರೂಪನಾದ ಜಮದಗ್ನಿಯು ನಾನೆಂದು ತಿಳಿ." (ಕಾಲತ್ರಯಗಳಲ್ಲಿಯೂ ಏಕರೂಪವಾಗಿರುವ ಒಂದು ಪದಾರ್ಥವು ಹೇಗಿರಬಹುದು ಎಂಬುದು ಯಾತುಧಾನಿಗೆ ತಿಳಿಯದ ಒಗಟು.)

ಜಾಜಮದಿತ್ಯತ್ರ ಆದ್ಯಪದೇ ಪ್ರಥಮಾಕ್ಷರಲೋಪೇ ದ್ವಿತೀಯಸ್ಯಾಗ್ನಿತ್ವೇ ಜಮದಗ್ನಿರಿತಿ ಸಿದ್ಧಂ । ಜಾಜಮತ್ ಎಂಬ ಮೊದಲನೆಯ ಪದದಲ್ಲಿ ಪ್ರಥಮಾಕ್ಷರಲೋಪವಾದರೆ ಜಮತ್ ಎಂಬ ಪದವು ಉಳಿಯುತ್ತದೆ. ಎರಡನೆಯ ಪದವಾದ ಯಜಜಾನೇ ಎಂಬ ಪದಕ್ಕೆ ಅಗ್ನಿ ಎಂದು ಅರ್ಥವಾಗುತ್ತದೆ. ಜಮತ್-ಅಗ್ನಿ ಎರಡೂ ಸೇರಿ ಜಮದಗ್ನಿ ಎಂಬ ಪದವು ಸಿದ್ಧವಾಗುತ್ತದೆ.

ಈ ಶ್ಲೋಕಾರ್ಧದ ಪಾಠಾಂತರವು ಹೀಗಿದೆ :

ಜಾಜಮದ್ಯ ಜಜಾ ನಾಮ ಮೃಜಾಮಾಹ ಜಿಜಾಯಿಷೀ ॥

"ದೇವತೆಗಳಿಂದಲೂ ಅಗ್ನಿಯಿಂದಲೂ ಹುಟ್ಟಿದ ಸಂಪತ್ತು ಎಂಬ ಹೆಸರಿನ ವಸ್ತುವು ಸುಳ್ಳು ಅಥವಾ ನಶ್ವರ ಎಂಬುದಾಗಿ ನನಗೆ ವೇದವು ಹೇಳಿತು. ಆದುದರಿಂದ ನಾನು ಅವುಗಳೆಲ್ಲವನ್ನೂ ಜಯಿಸಿದ್ದೇನೆ."

(ಜಾಜಮದ್ಯಜೇಭ್ಯೋ ದೇವಾಗ್ನಿಭ್ಯೋ ಜಾತಾಃ ಸಂಪದಃ ಕೃತಕತ್ವಾತ್ । ನಾಮ=ನಿಶ್ಚಿತಂ ಮೃಜಾಃ ನಶ್ವರಾ ಇತಿ ಮಾಮಾಹ ಉಕ್ತವಾನ್ ವೇದಃ । ಅತೋಽಹಂ ತಾಃ ಜಿಜಾಯಃ = ಜಿತವಾನಸ್ಮಿ)

ಜಮದಗ್ನಿಯ ಮಾತನ್ನು ಕೇಳಿ ಯಾತುಧಾನಿಯು ಹಿಂದಿನಂತೆಯೇ ಹೇಳಿದಳು:

"ಮಹಾಮುನಿಯೇ! ನಿನ್ನ ಹೆಸರಿನ ವ್ಯಾಖ್ಯೆಯನ್ನು ಸ್ಮರಣೆಯಲ್ಲಿಟ್ಟುಕೊಳ್ಳಲು ನಾನು ಶಕ್ತಳಲ್ಲ. ನೀನು ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ಅರುನ್ಧತೀ

ಧರಾಂ ಧರಿತ್ರೀಂ ವಸುಧಾಂ ಭರ್ತುಸ್ತಿಷ್ಠಾಮ್ಯನನ್ತರಮ್ ॥
ಮನೋಽನುರುನ್ಧತೀ ಭರ್ತುರಿತಿ ಮಾಂ ವಿದ್ಧ್ಯರುನ್ಧತೀಮ್ ॥೯೬॥

"ಧರೆಯು (ಭೂಸ್ವರೂಪಳು) ನಾನು. ಧರೆಯನ್ನು ಧರಿಸಿರುವವಳು ನಾನು. ಸಂಪತ್ತುಗಳನ್ನೂ ನಾನು ಧರಿಸಿದ್ದೇನೆ. ಪತಿಯೊಡನೆ ನಿರಂತರವಾಗಿ ಅವನ ಮನಸ್ಸನ್ನು ಅನುಸರಿಸಿ ನಡೆಯುತ್ತಿರುವ ಅರುಂಧತಿಯು ನಾನು–ಎಂದು ತಿಳಿಯುವವಳಾಗು."

(ಸತ್ಯ, ಧರ್ಮ ಮತ್ತು ಸಾಧ್ವಿಯರು ಧರೆಯ ವ್ಯವಸ್ಥೆಗೆ ಕಾರಣ ರಾದುದರಿಂದ ಅವರನ್ನು ಭೂಮಿಯನ್ನು ಹೊರುವವರು–ಎಂದು ಶಾಸ್ತ್ರಗಳು ಕರೆಯುತ್ತವೆ. ಇಡೀ ಧರೆಯನ್ನು ಧರಿಸಿ ಆ ಹೊಣೆಗಾರಿಕೆಯ ಜೊತೆ ಯಲ್ಲಿಯೇ ಪತಿಯ ಮನಸ್ಸನ್ನು ಅನುಸರಿಸುವುದು ಹೇಗೆ ಸಾಧ್ಯ? ಎಂಬುದು ಯಾತುಧಾನಿಗೆ ತಿಳಿಯದ ಒಗಟು.)

ಅರುಷಃ ಅತಿಕಠಿನಾನ್ ಧರಾದೀನ್ ದಧಾತೀತಿ ಅರುನ್ಧತೀ । ಅನುರುಂಧತೀ ಶಬ್ದದಲ್ಲಿನ ನುಕಾರಲೋಪದಿಂದಲೂ ಅರುಂಧತೀಶಬ್ದದ ನಿಷ್ಪತ್ತಿಯಾಗುವುದು.

ಯಾತುಧಾನೀ

“ದೇವಿ! ನೀನು ಹೇಳಿದ ನಾಮವ್ಯಾಖ್ಯೆಯನ್ನರಿಯುವುದು ನನಗೆ ಕಠಿನವಾಗಿ ಕಾಣುತ್ತಿದೆ. ಇದನ್ನು ಸ್ಮರಣೆಯಲ್ಲಿಟ್ಟುಕೊಳ್ಳುವುದು ನನಗೆ ಶಕ್ಯವಿಲ್ಲ. ನೀನೂ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು.”

ಗಣ್ಡಾ

ವಕ್ತ್ರೈಕದೇಶೇ ಗಣ್ಡೇತಿ ಧಾತುಮೇತಂ ಪ್ರಚಕ್ಷತೇ ।
ತೇನೋನ್ನತೇನ ಗಣ್ಡೇತಿ ವಿದ್ಧಿ ಮಾನಲಸಮ್ಭವೇ ॥೯೮॥

“ಅಗ್ನಿಸಂಭೂತೆಯಾದ ಕೃತ್ಯೆಯೇ! ಮುಖದ ಒಂದು ಭಾಗದಲ್ಲಿ ಗಂಡ (ಕಪೋಲ)–ಎಂಬ ಅವಯವವಿದೆ. **ಗಡಿ–ವದನೈಕದೇಶೇ** ಎಂಬ ಧಾತು ವಿನಿಂದ ಈ ಪದವು ನಿಷ್ಪನ್ನವಾಯಿತೆಂದು ವಿದ್ವಾಂಸರು ಹೇಳುತ್ತಾರೆ. ಈ ಕಪೋಲಸ್ಥಳವು ಎತ್ತರವಾಗಿರುವುದರಿಂದ ನಾನು ಗಂಡಾ ಎಂಬ ಹೆಸರಿನವಳೆಂದು ತಿಳಿ.”

ಯಾತುಧಾನೀ

“ಋಷಿಸೇವಕಿಯೇ! ನೀನು ಹೇಳಿದ ನಾಮವ್ಯಾಖ್ಯೆಯನ್ನರಿಯುವುದು ನನಗೆ ಕಠಿನವಾಗಿ ಕಾಣುತ್ತದೆ. ಇದನ್ನು ಸ್ಮರಣೆಯಲ್ಲಿಟ್ಟುಕೊಳ್ಳುವುದು ನನಗೆ

ಶಕ್ಯವಿಲ್ಲ. ನೀನೂ ಕೂಡ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ಪಶುಸಖಃ

ಪಶೂನ್ರಞ್ಜಾಮಿ ದೃಷ್ಟ್ವಾಹಂ ಪಶೂನಾಂ ಚ ಸದಾ ಸಖಾ ।
ಗೌಣಂ ಪಶುಸಖೇತ್ಯೇವಂ ವಿದ್ಧಿಮಾಮಗ್ನಿಸಂಭವೇ ॥೧೦೦॥

"ಅಗ್ನಿಸಂಭವಳೇ! ಪಶುಗಳನ್ನು ನೋಡಿದೊಡನೆಯೇ ನಾನು ಅವುಗಳಲ್ಲಿ ರಮಿಸುತ್ತಾ ಅವುಗಳನ್ನು ಸಂತೋಷಪಡಿಸುತ್ತೇನೆ. ನಾನು ಪಶುಗಳ ಮಿತ್ರನೂ ಆಗಿದ್ದೇನೆ. ಈ ನನ್ನ ಗುಣಾನುಸಾರವಾಗಿ ನನಗೆ ಪಶುಸಖನೆಂಬ ಹೆಸರು ಬಂದಿರುವುದೆಂದು ತಿಳಿ."

ಯಾತುಧಾನೀ

"ಪಶುಸಖನೇ! ನೀನು ಹೇಳಿದ ನಾಮವ್ಯಾಖ್ಯೆಯ ಅಕ್ಷರಗಳನ್ನು ಉಚ್ಚಾರಣೆಮಾಡುವುದೂ ನನಗೆ ಕಠಿನವಾಗಿ ಕಾಣುತ್ತಿದೆ. ಇದನ್ನು ಸ್ಮರಣೆಯಲ್ಲಿಟ್ಟುಕೊಳ್ಳುವುದೂ ನನಗೆ ಶಕ್ಯವಿಲ್ಲ. ನೀನೂ ಕಮಲದ ದಂಟುಗಳ ಸಂಗ್ರಹಕ್ಕಾಗಿ ಸರೋವರದಲ್ಲಿ ಇಳಿಯಬಹುದು."

ಶುನಃಸಖಃ (ಸಂನ್ಯಾಸೀ)

ಏಭಿರುಕ್ತಂ ಯಥಾ ನಾಮ ನಾಹಂ ವಕ್ತುಮಿಹೋತ್ಸಹೇ ।
ಶುನಃಸಖಸಖಾಯಂ ಮಾಂ ಯಾತುಧಾನ್ಯುಪಧಾರಯ ॥೧೦೨॥

"ಈ ಋಷಿಗಳು ತಮ್ಮ ನಾಮಧೇಯಗಳನ್ನು ನಿನ್ನ ಬುದ್ದಿಗೆ ಗ್ರಹಿಸಲಾಗದ ರೀತಿಯಲ್ಲಿ ಹೇಗೆ ಹೇಳಿದರೋ–ಹಾಗೆ ನಾನು ಹೇಳುವುದಿಲ್ಲ. ಶುನಸ್ಸಖಸಖರ ಗೆಳೆಯನೆಂದು (ಧರ್ಮಸಖರಾದ ಮುನಿಗಳಿಗೆ ಸಹಾಯಕನೆಂದು) ನನ್ನನ್ನು ತಿಳಿ."

(ಶ್ವಾ=ಧರ್ಮಃ ತಸ್ಯ ಸಖಾಯಃ ಮುನಯಃ, ತೇಷಾಂ ಸಖಾ=ಶುನಸ್ಸಖಸಖಃ)

ಯಾತುಧಾನೀ

ನಾಮನ್ಯೈರುಕ್ತಮೇತತ್ತೇ ವಾಕ್ಯಂ ಸಂದಿಗ್ಧಯಾ ಗಿರಾ ।
ತಸ್ಮಾತ್ಪುನರಿದಾನೀಂ ತ್ವಂ ಬ್ರೂಹಿ ಯನ್ನಾಮ ತೇ ದ್ವಿಜ ॥೧೦೩॥

"ವಿಪ್ರಶ್ರೇಷ್ಠನೇ! ನೀನು ಸಂದಿಗ್ಧವಾದ ವಾಣಿಯಿಂದ ನಿನ್ನ ಹೆಸರನ್ನು ಹೇಳಿರುವೆ. ಆದುದರಿಂದ ಪುನಃ ನಿನ್ನ ಹೆಸರನ್ನು ಸ್ಪಷ್ಟವಾಗಿ ಹೇಳು."

ಶುನಃಸಖಃ

ಸಕೃದುಕ್ತ್ವಾ ಮಯಾ ನಾಮ ನ ಗೃಹೀತಂ ತ್ವಯಾ ಯದಿ ।
ತಸ್ಮಾತ್ತ್ರಿದಣ್ಡಾಭಿಹತಾ ಗಚ್ಛ ಭಸ್ಮೇತಿ ಮಾ ಚಿರಮ್ ॥೧೦೪॥

"ನಾನೊಂದು ಬಾರಿ ನನ್ನ ಹೆಸರನ್ನು ಹೇಳಿಯಾಯಿತು. ನೀನು ಗ್ರಹಣಮಾಡದಿದ್ದರೆ ನನ್ನ ತ್ರಿದಂಡದಿಂದ ಹೊಡೆಯಲ್ಪಡುವ ನೀನು ಈ ಕೂಡಲೇ ಭಸ್ಮವಾಗಿ ಹೋಗು."

ಯುಧಿಷ್ಠಿರ! ಹೀಗೆ ಹೇಳುತ್ತಾ ಆ ತ್ರಿದಂಡೀಸಂನ್ಯಾಸಿಯು ಬ್ರಹ್ಮದಂಡಕ್ಕೆ ಸಮಾನವಾಗಿದ್ದ ತನ್ನ ತ್ರಿಶೂಲದಿಂದ ಯಾತುಧಾನಿಯ ತಲೆಯನ್ನು ಪ್ರಹರಿಸಿದನು. ಮರುಕ್ಷಣದಲ್ಲಿಯೇ ಕೃತ್ಯೆಯು ನೆಲದ ಮೇಲೆ ಬಿದ್ದು ಭಸ್ಮವಾಗಿ ಹೋದಳು.

ಹೀಗೆ ಶುನಃಸಖನು ಮಹಾಬಲಶಾಲಿನಿಯಾಗಿದ್ದ ಯಾತುಧಾನಿಯನ್ನು ಸಂಹರಿಸಿ ತ್ರಿದಂಡವನ್ನು ನೆಲದ ಮೇಲಿಟ್ಟು ತಾನೂ ಕೂಡ ಹಚ್ಚನೆಯ ಹುಲ್ಲಿನ ಮೇಲೆ ಕುಳಿತನು. ಅನಂತರ ಆ ಮುನಿಗಳೆಲ್ಲರೂ ತಮ್ಮ ಇಚ್ಛಾನುಸಾರವಾಗಿ ಕಮಲದ ಪುಷ್ಪಗಳನ್ನೂ ಮತ್ತು ದಂಟುಗಳನ್ನೂ ತೆಗೆದುಕೊಂಡು ಸಂತೋಷ ಭರಿತರಾಗಿ ಸರೋವರದಿಂದ ಮೇಲಕ್ಕೆ ಬಂದರು. ಅತ್ಯಂತ ಶ್ರಮದಿಂದ ಕಮಲದ ದಂಟುಗಳನ್ನು ಸರೋವರದ ತೀರದಲ್ಲಿ ಗುಂಪು-ಗುಂಪಾಗಿಟ್ಟು ಸರೋವರದ ನೀರಿನಿಂದ ಜಲತರ್ಪಣವನ್ನು ಮಾಡಿದರು. ಸ್ವಲ್ಪಹೊತ್ತು ಕಳೆದನಂತರ ತರ್ಪಣವನ್ನು ಮುಗಿಸಿಕೊಂಡು ಪುರುಷಶ್ರೇಷ್ಠರಾದ ಮುನಿಗಳೆಲ್ಲರೂ ಸರೋವರದ ತೀರಕ್ಕೆ ಬಂದರು. ಆದರೆ ಅಲ್ಲಿ ಗುಂಪು-ಗುಂಪಾಗಿಟ್ಟಿದ್ದ ಕಮಲದ ದಂಟುಗಳನ್ನು ಅವರು ಕಾಣಲಿಲ್ಲ. ಋಷಿಗಳು ಪರಸ್ಪರವಾಗಿ ಮಾತನಾಡಿಕೊಂಡರು:

ಕೇನ ಕ್ಷುಧಾಪರೀತಾನಾಮಸ್ಮಾಕಂ ಪಾಪಕರ್ಮಣಾ ।
ನೃಶಂಸೇನಾಪನೀತಾನಿ ಬಿಸಾನ್ಯಾಹಾರಕಾಂಕ್ಷಿಣಾಮ್ ॥೧೧೦॥

"ಹಸಿವಿನಿಂದ ಪೀಡಿತರಾಗಿ ಕಮಲದ ದಂಟನ್ನೇ ಆಹಾರರೂಪದಲ್ಲಿ

ತಿನ್ನಬೇಕೆಂಬ ಆಕಾಂಕ್ಷೆಯಿಂದಿದ್ದ ನಮ್ಮ ಕಮಲದ ದಂಟುಗಳ ಹೊರೆಗಳನ್ನು ಪಾಪಕರ್ಮಿಯಾದ ಮತ್ತು ಕ್ರೂರಿಯಾದ ಯಾವನು ಅಪಹರಿಸಿದನು?''

ಯುಧಿಷ್ಠಿರ! ಆ ಮಹಾಮುನಿಗಳು ತಮ್ಮ-ತಮ್ಮಲ್ಲಿಯೇ ಸಂದೇಹ ಪಟ್ಟುಕೊಂಡು ಒಬ್ಬರು ಮತ್ತೊಬ್ಬರನ್ನು ಕದ್ದವನಾರೆಂದು ಕೇಳತೊಡಗಿದರು. ಸಮಸ್ಯೆಯು ಬಗೆಹರಿಯದಿದ್ದಾಗ ಅವರೆಲ್ಲರೂ ಕಲೆತು ಹೇಳಿದರು: 'ಸಮಯಂ ಸರ್ವೇ ಕುರ್ಮಃ'– 'ಕಮಲದ ದಂಟುಗಳನ್ನು ಅಪಹರಿಸಿಲ್ಲ ವೆಂಬ ವಿಷಯದಲ್ಲಿ ನಾವೆಲ್ಲರೂ ಶಪಥವನ್ನು ಮಾಡೋಣ. (ಪ್ರಮಾಣ ಮಾಡೋಣ.)' ಆ ಮಾತಿಗೆ ಎಲ್ಲರೂ ಒಕ್ಕೊರಳಿನಿಂದ 'ಬಾಢಂ' 'ಹಾಗೆಯೇ ಆಗಲಿ'-ಎಂದರು. ಬಳಿಕ ಹಸಿವಿನಿಂದ ಪೀಡಿತರಾಗಿದ್ದ, ಬಹಳವಾಗಿ ಆಯಾಸಗೊಂಡಿದ್ದ ಮುನಿಗಳು ಒಬ್ಬೊಬ್ಬರಾಗಿ ಶಪಥ ಮಾಡಲು ಉಪಕ್ರಮಿಸಿದರು.

ಅತ್ರಿಃ

ಸ ಗಾಂ ಸ್ಪೃಶತು ಪಾದೇನ ಸೂರ್ಯಂ ಚ ಪ್ರತಿಮೇಹತು ।
ಅನಧ್ಯಾಯೇಷ್ವಧೀಯೀತ ಬಿಸಸ್ತೈನ್ಯಂ ಕರೋತಿ ಯಃ ॥೧೧೩॥

"ಕಮಲದ ದಂಟುಗಳ ಕಂತೆಯನ್ನು ಅಪಹರಿಸಿರುವವನು– ಗೋವು ಗಳನ್ನು ಕಾಲಿನಿಂದ ಒದೆಯಲಿ. (ಒದೆಯುವುದರಿಂದ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.) ಸೂರ್ಯನಿಗೆ ಎದುರಾಗಿ ಕುಳಿತು ಮಲವಿಸರ್ಜನೆಮಾಡಲಿ. (ಮಲವಿಸರ್ಜನೆಮಾಡಿದ ಪಾಪಕ್ಕೆ ಗುರಿಯಾಗಲಿ.) ಅನಧ್ಯಯನಗಳಲ್ಲಿ ಅಧ್ಯಯನಮಾಡಲಿ. (ಅನಧ್ಯಯನಗಳಲ್ಲಿ ಅಧ್ಯಯನ ಮಾಡಿದ ಪಾಪಕ್ಕೆ ಗುರಿಯಾಗಲಿ.)"

ವಸಿಷ್ಠಃ

ಅನಧ್ಯಾಯೇ ಪಠೇಲ್ಲೋಕೇ ಶುನಃ ಸ ಪರಿಕರ್ಷತು ।
ಪರಿವ್ರಾಟ್ಕಾಮವೃತ್ತಸ್ತು ಬಿಸಸ್ತೈನ್ಯಂ ಕರೋತಿ ಯಃ ॥೧೧೪॥
ಶರಣಾಗತಂ ಹನ್ತು ಸ ವೈ ಸ್ವಸುತಾಂ ಚೋಪಜೀವತು ।
ಅರ್ಥಾನ್ಕಾಂಕ್ಷತು ಕೀನಾಶಾತ್ ಬಿಸಸ್ತೈನ್ಯಂ ಕರೋತಿ ಯಃ ॥೧೧೫॥

"ಕಮಲದ ದಂಟುಗಳನ್ನು ಅಪಹರಿಸಿರುವವನು–ಲೋಕದಲ್ಲಿ ಅನಧ್ಯಯನಗಳಲ್ಲಿ ಅಥವಾ ನಿಷಿದ್ಧಸಮಯಗಳಲ್ಲಿ ವೇದಾಧ್ಯಯನ ಮಾಡಿದ

ಪಾಪಕ್ಕೆ ಗುರಿಯಾಗಲಿ. ನಾಯಿಯನ್ನೆಳೆದುಕೊಂಡು ತಿರುಗಾಡುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ. ಕಾಮಚಾರಿಯಾದ ಸಂನ್ಯಾಸಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ. ಶರಣಾಗತನನ್ನು ಸಂಹರಿಸಿದವನಿಗೆ, ಮಗಳ ಸಂಪಾದನೆಯಿಂದ ಹೊಟ್ಟೆಹೊರೆಯುವವನಿಗೆ, ಬೇಸಾಯಗಾರನಿಂದ ಹಣವನ್ನು ಅಪೇಕ್ಷಿಸುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಕಶ್ಯಪಃ

ಸರ್ವತ್ರ ಸರ್ವಂ ಲಪತು ನ್ಯಾಸಲೋಪಂ ಕರೋತು ಚ ।
ಕೂಟಸಾಕ್ಷಿತ್ವಮಭ್ಯೇತು ಬಿಸಸ್ತೈನ್ಯಂ ಕರೋತಿ ಯಃ ॥೧೧೬॥

"ಕಮಲದ ದಂಟುಗಳನ್ನು ಅಪಹರಿಸಿರುವವನು– ಕಾಲ-ದೇಶ-ವರ್ತಮಾನಗಳನ್ನು ನೋಡದೇ, ವಾಚ್ಯಾವಾಚ್ಯಗಳನ್ನು ವಿವೇಚಿಸದೇ ಸರ್ವತ್ರ ಸರ್ವವನ್ನೂ ಗಳಹುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ. ನಿಕ್ಷೇಪವಾಗಿಟ್ಟುದನ್ನು ಅಪಹರಿಸುವವನಿಗೆ, ಸುಳ್ಳುಸಾಕ್ಷ್ಯವನ್ನು ಹೇಳುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ವೃಥಾ ಮಾಂಸಾಶನಶ್ಚಾಸ್ತು ವೃಥಾದಾನಂ ಕರೋತು ಚ ।
ಯಾತು ಸ್ತ್ರಿಯಂ ದಿವಾಚೈವ ಬಿಸಸ್ತೈನ್ಯಂ ಕರೋತಿ ಯಃ ॥೧೧೭॥

ಕಮಲದ ದಂಟುಗಳನ್ನು ಅಪಹರಿಸಿರುವವನು–ವ್ಯರ್ಥವಾಗಿ ಮಾಂಸವನ್ನು ತಿನ್ನುವವನಿಗೆ, ವೃಥಾದಾನವನ್ನು ಕೊಡುವವನಿಗೆ (ಪಾತ್ರಾಪಾತ್ರ ವಿವೇಚನೆಯಿಲ್ಲದೇ ದಾನಮಾಡುವವನಿಗೆ), ಹಗಲಿನಲ್ಲಿಯೂ ಸ್ತ್ರೀಸಮಾಗಮಮಾಡುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಭರದ್ವಾಜಃ

ನೃಶಂಸಸ್ತ್ಯಕ್ತಧರ್ಮಾಸ್ತು ಸ್ತ್ರೀಷು ಜ್ಞಾತಿಷು ಗೋಷು ಚ ।
ಬ್ರಾಹ್ಮಣಂ ಚಾಪಿ ಜಯತಾಂ ಬಿಸಸ್ತೈನ್ಯಂ ಕರೋತಿ ಯಃ ॥೧೧೮॥

"ಕಮಲದ ದಂಟುಗಳನ್ನು ಅಪಹರಿಸಿರುವವನು–ಸ್ತ್ರೀಯರ ವಿಷಯದಲ್ಲಿಯೂ, ಅಣ್ಣ-ತಮ್ಮಂದಿರ ವಿಷಯದಲ್ಲಿಯೂ, ಗೋವುಗಳ ವಿಷಯದಲ್ಲಿಯೂ ಕ್ರೌರ್ಯದಿಂದ ವರ್ತಿಸುವವನಿಗೆ, ಧರ್ಮವನ್ನು ಬಿಟ್ಟಿರು

ವವನಿಗೆ, ಯುದ್ಧಮಾಡಲು ಅಥವಾ ವಾದಮಾಡಲು ಅಶಕ್ತನಾದ ಬ್ರಾಹ್ಮಣನೊಡನೆ ಯುದ್ಧಮಾಡಿ ಅಥವಾ ವಾದಮಾಡಿ ಅವನನ್ನು ಪರಾಜಯಗೊಳಿಸಿದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ಉಪಾಧ್ಯಾಯಮಧಃಕೃತ್ವಾ ಋಚೋಽಧ್ಯೇತು ಯಜೂಂಷಿ ಚ ।
ಜುಹೋತು ಚ ಸ ಕಕ್ಷಾಗ್ನೌ ಬಿಸಸ್ತೈನ್ಯಂ ಕರೋತಿ ಯಃ ॥೧೧೯॥

ಕಮಲದ ದಂಟುಗಳನ್ನು ಕದ್ದಿರುವವನು–ಉಪಾಧ್ಯಾಯರನ್ನು ಕೆಳಗೆ ಕೂರಿಸಿ ತಾನು ಪೀಠದಲ್ಲಿ ಕುಳಿತು ಋಗ್ವೇದ-ಯಜುರ್ವೇದಗಳನ್ನು ಅಧ್ಯಯನಮಾಡಿದವನಿಗೆ, ಒಣಹುಲ್ಲಿನಲ್ಲಿರುವ ಅಗ್ನಿಯಲ್ಲಿ ಹೋಮ ಮಾಡಿದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಜಮದಗ್ನಿಃ

ಪುರೀಷಮುತ್ಸೃಜತ್ವಪ್ಸು ಹನ್ತು ಗಾಂ ಚೈವ ದುಹ್ಯತು ।
ಅನೃತೌ ಮೈಥುನಂ ಯಾತು ಬಿಸಸ್ತೈನ್ಯಂ ಕರೋತಿ ಯಃ ॥೧೨೦॥

“ಕಮಲದ ದಂಟುಗಳನ್ನು ಕದ್ದವನು–ನೀರಿನಲ್ಲಿ ಮಲೋತ್ಸರ್ಜನ ಮಾಡುವವನಿಗೆ, ಹಸುವನ್ನು ಕೊಂದವನಿಗೆ, ಹಸುವಿಗೆ ದ್ರೋಹವನ್ನೆಸಗಿದವನಿಗೆ, ಋತುಕಾಲವಲ್ಲದೇ ಬೇರೆಯ ಕಾಲದಲ್ಲಿ ಪತ್ನಿಯೊಡನೆ ಸಮಾಗಮಮಾಡಿದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ದ್ವೇಷ್ಯೋ ಭಾರ್ಯೋಪಜೀವೀ ಸ್ಯಾದ್ದೂರಬನ್ಧುಶ್ಚ ವೈರವಾನ್ ।
ಅನ್ಯೋನ್ಯಸ್ಯಾತಿಥಿಶ್ಚಾಸ್ತು ಬಿಸಸ್ತೈನ್ಯಂ ಕರೋತಿ ಯಃ ॥೧೨೧॥

ಕಮಲದ ದಂಟುಗಳನ್ನು ಕದ್ದವನು–ಎಲ್ಲರೊಡನೆಯೂ ದ್ವೇಷವನ್ನು ಸಾಧಿಸುವವನಿಗೆ, ಎಲ್ಲರಿಂದಲೂ ದ್ವೇಷಿಸಲ್ಪಡುವವನಿಗೆ, ಹೆಂಡತಿಯ ಸಂಪಾದನೆಯಿಂದ ಜೀವನವನ್ನು ನಿರ್ವಹಿಸುವವನಿಗೆ, ಬಂಧುಗಳಿಂದ ದೂರವಿರುವವನಿಗೆ ಮತ್ತು ಅವರೊಡನೆ ವೈರವನ್ನು ಕಟ್ಟಿಕೊಂಡಿರುವವನಿಗೆ, ಒಬ್ಬನು ಮತ್ತೊಬ್ಬನಿಗೆ (ಪರಸ್ಪರ) ಅತಿಥಿಯಾಗುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

(ಅನ್ಯೋನ್ಯಸ್ಯ ಅತಿಥಿಃ–ಎಂದರೆ ಪರಸ್ಪರಮಾತನಾಡಿಕೊಂಡು ಶ್ರಾದ್ಧಸಮಯದಲ್ಲಿ ಅಥವಾ ದಾನಾದಿಗಳನ್ನು ಕೊಡಬೇಕಾದಾಗ ದೇವದತ್ತನು

ಇಂದ್ರದತ್ತನನ್ನೂ , ಇಂದ್ರದತ್ತನು ದೇವದತ್ತನನ್ನೂ ಕರೆಯುವುದಕ್ಕೆ ಪರಸ್ಪರ ಆತಿಥ್ಯ ಎಂದು ಕರೆಯುತ್ತಾರೆ. ಹೀಗೆ ಮಾಡುವುದು ಮಹಾಪಾಪಕರ.)

ಗೌತಮಃ

ಅಧೀತ್ಯ ವೇದಾಂಸ್ತ್ಯಜತು ತ್ರೀನಗ್ನೀನಪವಿಧ್ಯತು ।
ವಿಕ್ರೀಣಾತು ತಥಾ ಸೋಮಂ ಬಿಸಸ್ತೈನ್ಯಂ ಕರೋತಿ ಯಃ ॥೧೨೨॥

"ಕಮಲದ ದಂಟುಗಳನ್ನು ಕದ್ದವನು–ವೇದಗಳನ್ನು ಅಧ್ಯಯನಮಾಡಿ ಅವುಗಳ ಆಲೋಡನೆಯನ್ನು ಬಿಟ್ಟವನಿಗೆ, ಅಗ್ನಿತ್ರಯವನ್ನು ಪರಿತ್ಯಾಗ ಮಾಡಿದವನಿಗೆ, ಸೋಮಲತೆಯನ್ನು ಮಾರುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ಉದಪಾನಪ್ಲವೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ ।
ತಸ್ಯ ಸಾಲೋಕ್ಯತಾಂ ಯಾತು ಬಿಸಸ್ತೈನ್ಯಂ ಕರೋತಿ ಯಃ ॥೧೨೩॥

ಕಮಲದ ದಂಟುಗಳನ್ನು ಕದ್ದವನು–ನದಿಯನ್ನು ದಾಟುವ ತೆಪ್ಪದಂತೆ ಎಲ್ಲರ ಉಪಯೋಗಕ್ಕಾಗಿ ಒಂದೇ ಬಾವಿಯಿರುವ ಗ್ರಾಮದಲ್ಲಿ ವಾಸಮಾಡುವ, ಶೂದ್ರಸ್ತ್ರೀಗೆ ಪತಿಯಾಗಿರುವ ಬ್ರಾಹ್ಮಣನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ವಿಶ್ವಾಮಿತ್ರಃ

ಜೀವತೋ ವೈ ಗುರೂನ್ಭೃತ್ಯಾನ್ಭರನ್ತ್ವಸ್ಯ ಪರೇ ಜನಾಃ ।
ಅಗತಿರ್ಬಹುಪುತ್ರಃ ಸ್ಯಾತ್ ಬಿಸಸ್ತೈನ್ಯಂ ಕರೋತಿ ಯಃ ॥೧೨೪॥

"ಯಾವನು ಜೀವಿಸಿರುವಾಗಲೇ ಅವನ ಮಾತಾ-ಪಿತೃಗಳ, ಭೃತ್ಯರ ಮತ್ತು ಗುರುಜನರ ಭರಣ-ಪೋಷಣಗಳನ್ನು ಬೇರೆಯವರು ಮಾಡುತ್ತಾರೆಯೋ–ಅಂತಹವನಿಗೆ ಪ್ರಾಪ್ತವಾಗುವ ಪಾಪಕ್ಕೆ ಕಮಲದ ದಂಟುಗಳನ್ನು ಕದ್ದವನು ಗುರಿಯಾಗಲಿ. ನಿರ್ಗತಿಕನಾಗಿ ಬಹುಪುತ್ರರನ್ನು ಪಡೆದವನ ಅವಸ್ಥೆಯನ್ನು ಹೊಂದಲಿ.

ಅಶುಚಿರ್ಬ್ರಹ್ಮಕೂಟೋಽಸ್ತು ಋಧ್ಯಾಚ್ಚೈವಾಪ್ಯಹಂಕೃತಃ ।
ಕರ್ಷಕೋ ಮತ್ಸರೀ ಚಾಸ್ತು ಬಿಸಸ್ತೈನ್ಯಂ ಕರೋತಿ ಯಃ ॥೧೨೫॥

ಕಮಲದ ದಂಟುಗಳನ್ನು ಕದ್ದವನು–ವೇದಗಳ ರಾಶಿಯನ್ನೇ ಅಧ್ಯಯನ ಮಾಡಿದ್ದೂ ಅಶುಚಿಯಾಗಿರುವವನಿಗೆ, ಧನಮದದಿಂದ ಅಹಂಕಾರಿಯಾಗಿರುವವನಿಗೆ, ಬ್ರಾಹ್ಮಣನಾಗಿದ್ದೂ ಕೃಷಿಮಾಡುವವನಿಗೆ, ಇತರರ ಔನ್ನತ್ಯವನ್ನು ನೋಡಿ ಹೊಟ್ಟೇಕಿಚ್ಚುಪಡುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ವರ್ಷಾಚರೋಽಸ್ತು ಭೃತಕೋ ರಾಜ್ಞಶ್ಚಾಸ್ತು ಪುರೋಹಿತಃ ।
ಅಯಾಜ್ಯಸ್ಯ ಭವೇದೃತ್ವಿಕ್ ಬಿಸಸ್ತೈನ್ಯಂ ಕರೋತಿ ಯಃ ॥೧೨೬॥

ಕಮಲದ ದಂಟುಗಳನ್ನು ಕದ್ದವನು–ವೇತನವನ್ನು ಪಡೆದುಕೊಂಡು ಮಳೆಗಾಲದಲ್ಲಿ ಉತ್ತು-ಬಿತ್ತು-ಬೇಸಾಯಮಾಡದೇ ಸಂಚರಿಸುವ ಸೇವಕನಿಗೆ, ರಾಜಪುರೋಹಿತನಿಗೆ, ಯಜ್ಞಕ್ಕೆ ಅನಧಿಕಾರಿಯಾದವನು ಮಾಡುವ ಯಜ್ಞದ ಆರ್ತ್ವಿಜ್ಯವನ್ನು ವಹಿಸಿದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಅರುನ್ಧತೀ

ನಿತ್ಯಂ ಪರಿಭವೇಚ್ಛ್ವಶ್ರೂಂ ಭರ್ತುರ್ಭವತಿ ದುರ್ಮನಾಃ ।
ಏಕಾ ಸ್ವಾದು ಸಮಶ್ನಾತು ಬಿಸಸ್ತೈನ್ಯಂ ಕರೋತಿ ಯಾ ॥೧೨೭॥

“ಕಮಲದ ದಂಟುಗಳನ್ನು ಅಪಹರಿಸಿದವಳು–ನಿತ್ಯವೂ ಅತ್ತೆಯನ್ನು ತಿರಸ್ಕಾರಮಾಡುವವಳಿಗೆ, ಗಂಡನ ವಿಷಯದಲ್ಲಿ ಕೆಟ್ಟಮನಸ್ಸುಳ್ಳವಳಿಗೆ, ಒಬ್ಬಳೇ ಕುಳಿತು ರುಚಿಕರವಾದ ತಿಂಡಿ-ತಿನಸುಗಳನ್ನು ತಿನ್ನುವವಳಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ಜ್ಞಾತೀನಾಂ ಗೃಹಮಧ್ಯಸ್ಥಾ ಸಕ್ತೂನತ್ತು ದಿನಕ್ಷಯೇ ।
ಅಭೋಗ್ಯಾ ವೀರಸೂರಸ್ತು ಬಿಸಸ್ತೈನ್ಯಂ ಕರೋತಿ ಯಾ ॥೧೨೮॥

ಕಮಲದ ದಂಟುಗಳನ್ನು ಕದ್ದವಳು–ಕುಟುಂಬದ ಜನರನ್ನು ಅವಮಾನಗೊಳಿಸುತ್ತಾ ಮನೆಯಲ್ಲಿದ್ದುಕೊಂಡು ತಾನೊಬ್ಬಳೇ ಸಾಯಂಕಾಲದ ವೇಳೆಯಲ್ಲಿ ಅರಳು ಹಿಟ್ಟನ್ನು ತಿನ್ನುವವಳಿಗೆ, ಪತಿಯ ಉಪಭೋಗಕ್ಕೆ ಅಯೋಗ್ಯಳಾದವಳಿಗೆ, ಬ್ರಾಹ್ಮಣಿಯಾದರೂ ಕ್ಷತ್ರಿಯಾಣಿಯಂತೆ ಉಗ್ರ

ಸ್ವಭಾವದ ಪುತ್ರನನ್ನು ಪಡೆಯುವವಳಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಗಣ್ಡಾ

ಅನೃತಂ ಭಾಷತು ಸದಾ ಬನ್ಧುಭಿಶ್ಚ ವಿರುಧ್ಯತು ।
ದದಾತು ಕನ್ಯಾಂ ಶುಲ್ಕೇನ ಬಿಸಸ್ತೈನ್ಯಂ ಕರೋತಿ ಯಾ ॥೧೨೯॥

“ಕಮಲದ ದಂಟನ್ನು ಕದ್ದವಳು–ಯಾವಾಗಲೂ ಸುಳ್ಳನ್ನೇ ಹೇಳುತ್ತಿರುವವಳಿಗೆ, ಬಂಧುಗಳೊಡನೆ ವಿರೋಧವನ್ನು ಕಟ್ಟಿಕೊಂಡಿರುವವಳಿಗೆ, ಶುಲ್ಕವನ್ನು ತೆಗೆದುಕೊಂಡು ಕನ್ಯಾದಾನಮಾಡುವವಳಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.

ಸಾಧಯಿತ್ವಾ ಸ್ವಯಂ ಪ್ರಾಶೇದ್ದಾಸ್ಯೇ ಜೀರ್ಯತು ಚೈವ ಹ ।
ವಿಕರ್ಮಣಾ ಪ್ರಮೀಯೇತ ಬಿಸಸ್ತೈನ್ಯಂ ಕರೋತಿ ಯಾ ॥೧೩೦॥

ಕಮಲದ ದಂಟುಗಳನ್ನು ಕದ್ದವಳು–ಅಡಿಗೆಯನ್ನು ಮಾಡಿ ತಾನೊಬ್ಬಳೇ ಊಟಮಾಡುವವಳಿಗೆ, ಇತರರ ಮನೆಯ ದಾಸ್ಯದಿಂದಲೇ ವೃದ್ಧಾಪ್ಯವನ್ನು ಹೊಂದಿದವಳಿಗೆ, ಪಾಪಕರ್ಮವನ್ನು ಮಾಡಿ ಮರಣಹೊಂದಿದವಳಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಪಶುಸಖಃ

ದಾಸ ಏವ ಪ್ರಜಾಯೇತಾಮಪ್ರಸೂತಿರಕಿಂಚನಃ ।
ದೈವತೇಷ್ವನಮಸ್ಕಾರೋ ಬಿಸಸ್ತೈನ್ಯಂ ಕರೋತಿ ಯಾ ॥೧೩೧॥

ಕಮಲದ ದಂಟುಗಳನ್ನು ಕದ್ದವನು–ಮರುಹುಟ್ಟಿನಲ್ಲಿಯೂ ದಾಸನ ಮನೆಯಲ್ಲಿಯೇ ದಾಸನಾಗಿಯೇ ಹುಟ್ಟುವಂತಾಗಲಿ. ಅವನಿಗೆ ಸಂತಾನವಾಗದಿರಲಿ. ದರಿದ್ರನಾಗಿ ದೇವತೆಗಳಿಗೆ ನಮಸ್ಕಾರವನ್ನು ಮಾಡದೇ ಇರುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಶುನಃಸಖಃ

ಅಧ್ವರ್ಯವೇ ದುಹಿತರಂ ವಾ ದದಾತು
ಛನ್ದೋಗೇ ವಾ ಚರಿತಬ್ರಹ್ಮಚರ್ಯೇ ।

ಆಥರ್ವಣಂ ವೇದಮಧೀತ್ಯ ವಿಪ್ರಃ
ಸ್ನಾಯೀತ ವಾ ಯೋ ಹರತೇ ಬಿಸಾನಿ ॥೧೩೨॥

"ಕಮಲದ ದಂಟುಗಳನ್ನು ಕದ್ದವನು–ಬ್ರಹ್ಮಚರ್ಯವ್ರತವನ್ನು ಪೂರ್ಣಗೊಳಿಸಿ ವಿದ್ವಾಂಸನಾಗಿ ಬಂದಿರುವ ಸಾಮಕನಿಗಾಗಲೀ-ಯಾಜುಷ ನಿಗಾಗಲೀ ತನ್ನ ಮಗಳನ್ನು ಕೊಟ್ಟು ಮದುವೆಮಾಡಲಿ. ಅಥವಾ ಆ ಬ್ರಾಹ್ಮಣನು (ಕಮಲದ ದಂಟುಗಳನ್ನು ಕದ್ದವನು) ಅಥರ್ವಣವೇದವನ್ನು ಅಧ್ಯಯನಮಾಡಿ ಸ್ನಾತಕನಾಗಲಿ."

ಶುನಃಸಖನ ಈ ಮಾತುಗಳನ್ನು ಕೇಳಿದೊಡನೆಯೇ ಕಳ್ಳನನ್ನು ಗುರುತಿಸಿದ ಋಷಿಗಳು ಹೇಳಿದರು:

ಇಷ್ಟಮೇತದ್ದ್ವಿಜಾತೀನಾಂ ಯೋಽಯಂ ತೇ ಶಪಥಃ ಕೃತಃ ।
ತ್ವಯಾ ಕೃತಂ ಬಿಸಸ್ತೈನ್ಯಂ ಸರ್ವೇಷಾಂ ನಃ ಶುನಃಸಖ ॥೧೩೩॥

"ಶುನಃಸಖನೇ! ನೀನು ಬ್ರಾಹ್ಮಣರಿಗೆ ಇಷ್ಟವಾದ ಶಪಥವನ್ನೇ ಮಾಡಿರುವೆ. ಆದುದರಿಂದ ನಮ್ಮೆಲ್ಲರ ಕಮಲದ ದಂಟುಗಳನ್ನೂ ನೀನೇ ಕದ್ದಿರುವೆ."

ಶುನಃಸಖಃ

ನ್ಯಸ್ತಮದ್ಯಂ ನ ಪಶ್ಯದ್ಭಿರ್ಯದುಕ್ತಂ ಕೃತಕರ್ಮಭಿಃ ।
ಸತ್ಯಮೇತನ್ನ ಮಿಥ್ಯೈತದ್ಬಿಸಸ್ತೈನ್ಯಂ ಕೃತಂ ಮಯಾ ॥೧೩೪॥

"ಮುನಿಜನರೇ! ನೀವು ಹೇಳಿದುದು ಸತ್ಯವೇ ಆಗಿದೆ. ಸುಳ್ಳಲ್ಲ. ನೀವು ಇಲ್ಲಿ ಬಿಟ್ಟುಹೋದ ಆಹಾರಪದಾರ್ಥಗಳನ್ನು (ಕಮಲದ ದಂಟುಗಳನ್ನು) ಏಕಾಗ್ರತೆಯಿಂದ ಜಲತರ್ಪಣಮಾಡುತ್ತಿದ್ದ ನೀವು ಗಮನಿಸುತ್ತಿರಲಿಲ್ಲ. ಆ ಸಮಯದಲ್ಲಿ ನಾನೇ ಆ ಕಮಲದ ದಂಟುಗಳನ್ನು ಅಪಹರಿಸಿದೆನು.

ನಾನು ನೀವಿಟ್ಟಿದ್ದ ಕಮಲದ ದಂಟುಗಳೆಲ್ಲವನ್ನೂ ಮಾಯವಾಗುವಂತೆ ಮಾಡಿದ್ದೆನು. ಇದೋ ಇಲ್ಲಿ ನೋಡಿರಿ. ನಿಮ್ಮ ಆಹಾರವಸ್ತುಗಳೆಲ್ಲವೂ ಇಲ್ಲಿಯೇ ಇವೆ. ನಿಷ್ಪಾಪರೇ! ಪೂಜ್ಯರಾದ ನಿಮ್ಮ ಪರೀಕ್ಷಾರ್ಥವಾಗಿ ನಾನು ಈ ಕಾರ್ಯವನ್ನು ಮಾಡಿದೆನು. ನಿಮ್ಮೆಲ್ಲರ ರಕ್ಷಣೆಯನ್ನು ಮಾಡಲೆಂದೇ ನಾನಿಲ್ಲಿಗೆ ಬಂದೆನು. ಯಾತುಧಾನಿಯು ಮಹಾಕ್ರೂರಳಾದ ಕೃತ್ಯೆಯಾಗಿದ್ದಳು.

ನಿಮ್ಮೆಲ್ಲರನ್ನೂ ಸಂಹರಿಸುವ ಇಚ್ಛೆಯುಳ್ಳವಳಾಗಿದ್ದಳು. ತಪೋಧನರೇ! ವೃಷಾದರ್ಭಿಯಿಂದ ಕಳುಹಿಸಲ್ಪಟ್ಟಿದ್ದ ಯಾತುಧಾನಿಯು ನನ್ನಿಂದ ಹತಳಾದಳು. ಅಗ್ನಿಯಿಂದ ಹುಟ್ಟಿದ, ಪಾಪಿಷ್ಠೆಯಾದ, ದುಷ್ಟೆಯಾದ ಯಾತು ಧಾನಿಯು ನಿಮ್ಮನ್ನು ಹಿಂಸಿಸಿಯಾಳೆಂದು ಭಾವಿಸಿ ನಾನಿಲ್ಲಿಗೆ ಆಗಮಿಸಿದೆನು. ನನ್ನನ್ನು ಇಂದ್ರನೆಂದು ತಿಳಿಯಿರಿ. ನೀವು ಆಸೆಯೆಂಬುದನ್ನೇ ಸಂಪೂರ್ಣವಾಗಿ ತ್ಯಜಿಸಿರುವ ಕಾರಣ ನಿಮಗೆ ಸರ್ವಕಾಮನೆಗಳನ್ನೂ ನೀಡುವ ಅಕ್ಷಯವಾದ ಲೋಕಗಳು ಪ್ರಾಪ್ತವಾಗಿವೆ. ಇಲ್ಲಿಂದ ಎದ್ದೇಳಿರಿ. ಆ ಪುಣ್ಯಲೋಕಗಳನ್ನು ಹೊಂದಿರಿ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ವಾಸವನ ಮಾತನ್ನು ಕೇಳಿ ಮಹರ್ಷಿಗಳು ಪರಮಪ್ರೀತರಾಗಿ ಹಾಗೆಯೇ ಆಗಲೆಂದು ಪ್ರತ್ಯುತ್ತರಿಸಿ ಇಂದ್ರನ ಜೊತೆಯಲ್ಲಿಯೇ ಸ್ವರ್ಗಕ್ಕೆ ಹೊರಟುಹೋದರು.

ಹೀಗೆ ಆ ಮಹಾತ್ಮರು ಹಸಿವಿನಿಂದ ಪೀಡಿತರಾಗಿದ್ದರೂ ಯಾವುದಕ್ಕೂ ಆಸೆಪಡಲಿಲ್ಲ. ಶೈಬ್ಯನೇ ಮೊದಲಾದ ಮಹಾತ್ಮರು ಅನೇಕ ವಿಧವಾದ ಭೋಗವಸ್ತುಗಳ ಆಸೆಯನ್ನು ತೋರಿಸಿದರೂ ಮಹಾತ್ಮರಾದ ಆ ಮುನಿಗಳು ಆ ಭೋಗವಸ್ತುಗಳಿಗಾಗಿ ಆಸೆಪಡಲಿಲ್ಲ. ಅವರು ಆಸೆಯನ್ನು ಜಯಿಸಿದ್ದ ಕಾರಣದಿಂದಲೇ ಸ್ವರ್ಗಕ್ಕೆ ಹೋದರು.

ತಸ್ಮಾತ್ಸರ್ವಾಸ್ವವಸ್ಥಾಸು ನರೋ ಲೋಭಂ ವಿವರ್ಜಯೇತ್ ।
ಏಷಧರ್ಮಃ ಪರೋ ರಾಜಂಸ್ತಸ್ಮಾಲ್ಲೋಭಂ ವಿವರ್ಜಯೇತ್ ॥

ಮಹಾರಾಜ! ಆದುದರಿಂದ ಮನುಷ್ಯನು ಯಾವುದೇ ಪರಿಸ್ಥಿತಿ ಯಲ್ಲಿಯೂ ಲೋಭವನ್ನು ಪರಿತ್ಯಾಗಮಾಡಬೇಕು. ಇದೇ ಪರಮಶ್ರೇಷ್ಠ ವಾದ ಧರ್ಮವು. ಆದುದರಿಂದ ಲೋಭವನ್ನು ವರ್ಜಿಸಬೇಕು.

ಇದಂ ನರಃ ಸುಚರಿತಂ ಸಮವಾಯೇಷು ಕೀರ್ತಯನ್ ।
ಅರ್ಥಭಾಗೀ ಚ ಭವತಿ ನ ಚ ದುರ್ಗಾಣ್ಯವಾಪ್ನುತೇ ॥೧೪೪॥

ಈ ಸುಚರಿತೆಯನ್ನು ಜನರ ಸಮುದಾಯದಲ್ಲಿ ಕೀರ್ತನಮಾಡುವ ಮನುಷ್ಯನು ಚತುರ್ವಿಧಪುರುಷಾರ್ಥಗಳಿಗೂ ಭಾಗಿಯಾಗುತ್ತಾನೆ. ಅವನೆಂದಿಗೂ ಕಷ್ಟಕ್ಕೆ ಗುರಿಯಾಗುವುದಿಲ್ಲ.

ಪ್ರೀಯನ್ತೇ ಪಿತರಶ್ಚಾಸ್ಯ ಋಷಯೋ ದೇವತಾಸ್ತಥಾ ।
ಯಶೋ ಧರ್ಮಾರ್ಥಭಾಗೀ ಚ ಭವತಿ ಪ್ರೇತ್ಯ ಮಾನವಃ ॥೧೪೫॥

ಇದನ್ನು ಕೀರ್ತನಮಾಡುವವನ ವಿಷಯದಲ್ಲಿ ಅವನ ಪಿತೃಗಳೂ, ದೇವತೆಗಳೂ, ಋಷಿಗಳೂ ಪ್ರಸನ್ನರಾಗುತ್ತಾರೆ. ಅವನು ಈ ಲೋಕದಲ್ಲಿ ಯಶಸ್ಸು, ಧರ್ಮ ಮತ್ತು ಅರ್ಥಗಳನ್ನು ಪಡೆದುಕೊಳ್ಳುತ್ತಾನೆ. ಅವಸಾನಾನಂತರದಲ್ಲಿ ಸ್ವರ್ಗಕ್ಕೆ ಹೋಗಿ ಅಲ್ಲಿಯೂ ಸುಖವಾಗಿರುತ್ತಾನೆ."

೯೩ನೆಯ ಅಧ್ಯಾಯವು ಮುಗಿಯಿತು.

೯೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮಸರಸ್ತೀರ್ಥದಲ್ಲಿ ಅಗಸ್ತ್ಯರ ಕಮಲದ ಅಪಹರಣ: ಬ್ರಹ್ಮರ್ಷಿಗಳ ಮತ್ತು ರಾಜರ್ಷಿಗಳ ಧರ್ಮೋಪದೇಶಪೂರ್ಣವಾದ ಶಪಥಗಳಿಂದ ಕಳುವಾಗಿದ್ದ ಕಮಲಗಳ ಪ್ರಾಪ್ತಿ

ಭೀಷ್ಮನು ಹೇಳುತ್ತಾನೆ :

ಅತ್ರೈವೋದಾಹರನ್ತೀಮಮಿತಿಹಾಸಂ ಪುರಾತನಮ್ ।
ಯದ್ವೃತ್ತಂ ತೀರ್ಥಯಾತ್ರಾಯಾಂ ಶಪಥಂ ಪ್ರತಿ ತಚ್ಛೃಣು ॥೧॥

"ಯುಧಿಷ್ಠಿರ! ಶಪಥದ ವಿಷಯದಲ್ಲಿ ಪುರಾತನವಾದ ಈ ಇತಿಹಾಸವನ್ನೂ ವಿದ್ವಾಂಸರು ಉದಾಹರಿಸುತ್ತಾರೆ. ತೀರ್ಥಯಾತ್ರಾಸಮಯದಲ್ಲಿ ಹೀಗೆಯೇ ಶಪಥಮಾಡಿದ ಒಂದು ಪ್ರಸಂಗವನ್ನು ಹೇಳುವೆನು; ಕೇಳು:

ಹಿಂದೆ ರಾಜರ್ಷಿಗಳೂ ಮತ್ತು ಬ್ರಹ್ಮರ್ಷಿಗಳೂ ಕಮಲವು ಕಳುವಾದ ಕಾರಣದಿಂದ ಶಪಥಮಾಡಿದ್ದರು. ಪಶ್ಚಿಮಸಮುದ್ರದ ತೀರದಲ್ಲಿನ ಪ್ರಭಾಸಕ್ಷೇತ್ರಕ್ಕೆ ಅನೇಕ ಮಹರ್ಷಿಗಳು ಆಗಮಿಸಿ ಏಕತ್ರಕುಳಿತು ಸಮಾಲೋಚನೆ ಮಾಡಿದರು. 'ಅನೇಕ ಪುಣ್ಯತೀರ್ಥಗಳಿಂದ ಸಂಪನ್ನವಾಗಿರುವ ಭೂಮಂಡಲದಲ್ಲಿ ಸಂಚಾರಮಾಡೋಣ. ಇದು ನಮ್ಮೆಲ್ಲರ ಅಭಿಲಾಷೆಯಾಗಿದೆ'–ಎಂದು ಒಮ್ಮತದಿಂದ ನಿರ್ಧರಿಸಿ ಎಲ್ಲರೂ ಜೊತೆಗೂಡಿ ಯಾತ್ರೆಹೊರಟರು. ಶುಕ್ರ, ಅಂಗಿರಸ, ವಿದ್ವಾಂಸನಾದ ಕವಿ, ಅಗಸ್ತ್ಯ,

ನಾರದ, ಪಾರ್ವತ, ಭೃಗು, ವಸಿಷ್ಠ, ಕಶ್ಯಪ, ಗೌತಮ, ವಿಶ್ವಾಮಿತ್ರ, ಜಮದಗ್ನಿ, ಗಾಲವ, ಅಷ್ಟಕ, ಭರದ್ವಾಜ, ಅರುಂಧತೀ, ವಾಲಖಿಲ್ಯಮುನಿಗಳು, ಶಿಬಿ, ದಿಲೀಪ, ನಹುಷ, ಅಂಬರೀಷ, ರಾಜಾ ಯಯಾತಿ, ಧುಂಧುಮಾರ ಮತ್ತು ಪೂರು–ಈ ಎಲ್ಲ ರಾಜರ್ಷಿಗಳೂ ಮತ್ತು ಬ್ರಹ್ಮರ್ಷಿಗಳೂ ಮಹಾನುಭಾವನಾದ, ವೃತ್ರಹಂತಕನಾದ, ಶತಕ್ರತುವಾದ ಇಂದ್ರನನ್ನು ಮುಂದೆಮಾಡಿಕೊಂಡು ವಿಶ್ವವನ್ನು ಪರ್ಯಟನಮಾಡುತ್ತಾ ಅನೇಕಾನೇಕತೀರ್ಥಗಳ ದರ್ಶನವನ್ನೂ ಮಾಡುತ್ತಾ ಮಾಘಮಾಸದ ಹುಣ್ಣಿಮೆಯ ವೇಳೆಗೆ ಪುಣ್ಯತೀರ್ಥವಾದ ಕೌಶಿಕೀನದಿಯ ತೀರಕ್ಕೆ ಹೋದರು. ಕೌಶಿಕೀನದಿಯಲ್ಲಿ ಮಿಂದು ಮುಂದೆ ಪ್ರಯಾಣಮಾಡಿ ಇನ್ನೂ ಅನೇಕ ತೀರ್ಥಗಳಲ್ಲಿ ಸ್ನಾನಮಾಡಿ ಪಾಪಗಳನ್ನು ಕಳೆದುಕೊಂಡ ರಾಜರ್ಷಿಗಳೂ–ಬ್ರಹ್ಮರ್ಷಿಗಳೂ ಪರಮಪವಿತ್ರವಾದ ಬ್ರಹ್ಮಸರತೀರ್ಥಕ್ಕೆ ಹೋದರು. ಅಗ್ನಿಯ ತೇಜಸ್ಸಿಗೆ ಸದೃಶವಾದ ತೇಜಸ್ಸಿನಿಂದ ಕೂಡಿದ್ದ ಇಂದ್ರಪುರಃಸರರಾದ ಆ ಮುನಿಗಳು ದೇವತೀರ್ಥದ ಜಲದಲ್ಲಿ ಸ್ನಾನಮಾಡಿ ಅಲ್ಲಿದ್ದ ಕಮಲದ ದಂಟುಗಳನ್ನೇ ಆಹಾರವಾಗಿ ಸೇವಿಸಿದರು. ಆ ಸಮಯದಲ್ಲಿ ಕೆಲವು ಬ್ರಾಹ್ಮಣರು ಕಮಲಗಳನ್ನು ಕೀಳಲು ಪ್ರಾರಂಭಿಸಿದರು. ಕೆಲವರು ಕಮಲದ ದಂಟುಗಳನ್ನು ಕೀಳುತ್ತಿದ್ದರು. ಮಹರ್ಷಿಗಳಾದ ಅಗಸ್ತ್ಯರೂ ಅನೇಕ ಕಮಲದ ದಂಟುಗಳನ್ನು ಕಿತ್ತು ಒಂದು ಕಡೆ ರಾಶಿಹಾಕಿದ್ದರು. ಆದರೆ ಅವರು ಕೂಡಿಟ್ಟಿದ್ದ ಕಮಲದ ದಂಟುಗಳೆಲ್ಲವೂ ಯಾರಿಂದಲೋ ಅಪಹೃತವಾಗಿದ್ದುದನ್ನು ಎಲ್ಲರೂ ನೋಡಿದರು.

ಆ ಸಮಯದಲ್ಲಿ ಅಗಸ್ತ್ಯರು ಎಲ್ಲ ಮಹರ್ಷಿಗಳನ್ನೂ ಕುರಿತು ಹೇಳಿದರು– " ನನ್ನ ಸುಂದರವಾದ ಕಮಲಗಳನ್ನು ಕದ್ದವರಾರು? ನಾನು ನಿಮ್ಮೆಲ್ಲರ ವಿಷಯದಲ್ಲಿಯೂ ಸಂದೇಹಿಸುತ್ತಿದ್ದೇನೆ. ನಾನು ಕೂಡಿಟ್ಟಿದ್ದ ಕಮಲಗಳನ್ನು ಕೊಟ್ಟುಬಿಡಿರಿ. ನಿಮ್ಮಂತಹ ಸತ್ಪುರುಷರು ಕಮಲಗಳನ್ನು ಅಪಹರಿಸುವುದು ಯೋಗ್ಯವಾಗಿ ಕಾಣುವುದಿಲ್ಲ.

ಶೃಣೋಮಿ ಕಾಲೋ ಹಿಂಸತೇ ಧರ್ಮವೀರ್ಯಂ
ಸೋಽಯಂ ಪ್ರಾಪ್ತೋ ವರ್ತತೇ ಧರ್ಮಪೀಡಾ ।

ಪುರಾಧರ್ಮೋ ವರ್ತತೇ ನೇಹ ಯಾವ-
ತ್ತಾವದ್ಗಚ್ಛಾಮಃ ಸುರಲೋಕಂ ಚಿರಾಯ ॥೧೦॥

ಕಾಲವು ಧರ್ಮದ ಶಕ್ತಿಯನ್ನು ಹಿಂಸೆಪಡಿಸುವುದೆಂಬುದನ್ನು (ಕುಂಠಿತಗೊಳಿಸುವುದೆಂಬುದನ್ನು) ನಾನು ಕೇಳಿದ್ದೇನೆ. ಅಂತಹ ಧರ್ಮಕ್ಕೆ ಪೀಡೆಯನ್ನುಂಟುಮಾಡುವ ಕಾಲವೀಗ ಪ್ರಾಪ್ತವಾಗಿದೆ. ಆದುದರಿಂದ ಜಗತ್ತಿನಲ್ಲಿ ಅಧರ್ಮವು ಹರಡುವುದಕ್ಕೆ ಮೊದಲೇ ನಾವೆಲ್ಲರೂ ಚಿರಕಾಲವಾಸಕ್ಕಾಗಿ ಸ್ವರ್ಗಲೋಕಕ್ಕೆ ಹೊರಟುಹೋಗೋಣ.

ಪುರಾ ವೇದಾನ್ಬ್ರಾಹ್ಮಣಾ ಗ್ರಾಮಮಧ್ಯೇ
ಘುಷ್ಟಸ್ವರಾ ವೃಷಲಾಞ್ಶ್ರಾವಯನ್ತಿ ।
ಪುರಾ ರಾಜಾ ವ್ಯವಹಾರೇಣ ಧರ್ಮಾ-
ನ್ಪಶ್ಯತ್ಯಹಂ ಪರಲೋಕಂ ವ್ರಜಾಮಿ ॥೧೧॥

ಬ್ರಾಹ್ಮಣರು ಗ್ರಾಮದ ಮಧ್ಯದಲ್ಲಿ ಕುಳಿತು ಶೂದ್ರರಿಗೆ ಕೇಳಿಸುವಂತೆ ಉಚ್ಚಸ್ವರದಲ್ಲಿ ವೇದಗಳನ್ನು ಹೇಳುವ, ರಾಜನು ವ್ಯವಹಾರದೃಷ್ಟಿಯಿಂದ ಧರ್ಮವನ್ನು ಆಚರಿಸಲು ಪ್ರಾರಂಭಿಸುವ ಕಾಲವು ಬರುವುದಕ್ಕೆ ಮೊದಲೇ ನಾನು ಪರಲೋಕಕ್ಕೆ ಹೋಗುತ್ತೇನೆ.

ಪುರಾ ವರಾನ್ಪ್ರತ್ಯವರಾನ್ಗರೀಯಸೋ
ಯಾವನ್ನರಾ ನಾವಮಂಸ್ಯನ್ತಿ ಸರ್ವೇ ।
ತಮೋತ್ತರಂ ಯಾವದಿದಂ ನ ವರ್ತತೇ
ತಾವದ್ವ್ರಜಾಮಿ ಪರಲೋಕಂ ಚಿರಾಯ ॥೧೨॥

ಮನುಷ್ಯರು, ಮಹಾಪುರುಷರನ್ನೂ ಮಧ್ಯಮರನ್ನೂ ನೀಚಪುರುಷರಂತೆ ಕಾಣುವ ಮತ್ತು ಈ ಪ್ರಪಂಚವು ಸಂಪೂರ್ಣವಾಗಿ ತಮೋಗುಣಕ್ಕೆ ಪರಿವರ್ತನೆ ಹೊಂದುವ ಕಾಲವು ಬರುವ ಮೊದಲೇ ನಾನು ಚಿರವಾಸಕ್ಕಾಗಿ ಪರಲೋಕಕ್ಕೆ ಹೋಗುತ್ತೇನೆ.

ಪುರಾ ಪ್ರಪಶ್ಯಾಮಿ ಪರೇಣ ಮರ್ತ್ಯಾ-
ನ್ಬಲೀಯಸಾ ದುರ್ಬಲಾನ್ಭುಜ್ಯಮಾನಾನ್ ।
ತಸ್ಮಾದ್ಯಾಸ್ಯಾಮಿ ಪರಲೋಕಂ ಚಿರಾಯ
ನ ಹ್ಯುತ್ಸಹೇ ದ್ರಷ್ಟುಮಿಹ ಜೀವಲೋಕಮ್ ॥೧೩॥

ಬಲಿಷ್ಠರಾದವರು ದುರ್ಬಲರನ್ನು ದಾಸರನ್ನಾಗಿ ಮಾಡಿಕೊಂಡು ಉಪಭೋಗಿಸುವ ಕಾಲವು ಬರುವ ಸೂಚನೆಯನ್ನು ನಾನು ಈಗಾಗಲೇ ಕಾಣುತ್ತಿದ್ದೇನೆ. ಆದುದರಿಂದ ಚಿರವಾಸಕ್ಕಾಗಿ ನಾನು ಪರಲೋಕಕ್ಕೆ ಹೋಗುತ್ತೇನೆ. ಹಾಗೆ ಧರ್ಮಪೀಡಿತವಾದ ಈ ಭೂಲೋಕವನ್ನು ನೋಡಿಕೊಂಡಿರಲು ನನಗೆ ಆಸಕ್ತಿಯಿಲ್ಲ."

ಅಗಸ್ತ್ಯರ ಆ ಮಾತುಗಳನ್ನು ಕೇಳಿ ಅಲ್ಲಿದ್ದ ರಾಜರ್ಷಿಗಳೆಲ್ಲರೂ ಆರ್ತರಾಗಿ ಏಕಕಂಠದಿಂದ ಹೇಳಿದರು:

"ಮಹರ್ಷಿಯೇ! ನಾವು ನಿನ್ನ ಕಮಲವನ್ನು ನಿಶ್ಚಯವಾಗಿಯೂ ಕದ್ದಿರುವುದಿಲ್ಲ. ಮಿಥ್ಯಾಪವಾದಕ್ಕೆ ನಮ್ಮನ್ನು ಗುರಿಮಾಡುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ. ನಾವು ನಿನ್ನ ಕಮಲವನ್ನು ಕಳವು ಮಾಡಿಲ್ಲವೆಂಬುದರ ವಿಷಯದಲ್ಲಿ ಅತ್ಯಂತ ಕಠೋರವಾದ ಶಪಥಗಳಿಂದ ಶಾಪವನ್ನು ಕೊಟ್ಟುಕೊಳ್ಳುತ್ತೇವೆ."

ಯುಧಿಷ್ಠಿರ! ಅಲ್ಲಿ ನೆರೆದಿದ್ದ ಬ್ರಹ್ಮರ್ಷಿಗಳೂ ಮತ್ತು ರಾಜರ್ಷಿಗಳೂ ಹೀಗೆ ಮಾಡುವುದೇ ಧರ್ಮವೆಂಬುದನ್ನು ಸಮಾಲೋಚನೆಗಳಿಂದ ನಿಶ್ಚಯಿಸಿ ತಮ್ಮ ಪುತ್ರ-ಪೌತ್ರರನ್ನೂ ಸೇರಿಸಿಕೊಂಡು ಶಪಥಗಳನ್ನು ಮಾಡಲು ಉಪಕ್ರಮಿಸಿದರು.

ಭೃಗುಃ

ಪ್ರತ್ಯಾಕ್ರೋಶೇದಿಹಾಕ್ರುಷ್ಟಸ್ತಾಡಿತಃ ಪ್ರತಿತಾಡಯೇತ್ ।
ಖಾದೇಚ್ಚ ಪೃಷ್ಠಮಾಂಸಾನಿ ಯಸ್ತೇ ಹರತಿ ಪುಷ್ಕರಮ್ ॥೧೬॥

"ನಿನ್ನ ಕಮಲವನ್ನು ಅಪಹರಿಸಿದವನು–ಬೈಗಳಗಳಿಗೆ ಪ್ರತಿಯಾಗಿ ಬಯ್ಯುವವನಿಗೆ, ಹೊಡೆತಕ್ಕೆ ಪ್ರತಿಯಾಗಿ ಹೊಡೆಯುವವನಿಗೆ ಮತ್ತು ಪೃಷ್ಠದಲ್ಲಿ ಹೊರೆಯನ್ನು ಹೊರುವ ಕುದುರೆ, ಎತ್ತು ಮತ್ತು ಒಂಟೆಗಳ ಮಾಂಸವನ್ನು ತಿನ್ನುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ವಸಿಷ್ಠಃ

ಅಸ್ವಾಧ್ಯಾಯಪರೋ ಲೋಕೇ ಶ್ವಾನಂ ಚ ಪರಿಕರ್ಷತು ।
ಪುರೇ ಚ ಭಿಕ್ಷುರ್ಭವತು ಯಸ್ತೇ ಹರತಿ ಪುಷ್ಕರಮ್ ॥೧೭॥

‘‘ನಿನ್ನ ಕಮಲವನ್ನು ಕದ್ದವನು–ಅಧ್ಯಯನದಿಂದ ವಿಮುಖನಾದವನಿಗೆ, ನಾಯಿಯನ್ನು ಎಳೆದುಕೊಂಡು ತಿರುಗಾಡುತ್ತಿರುವವನಿಗೆ ಮತ್ತು ಸಂನ್ಯಾಸಿ ಯಾಗಿ ಪಟ್ಟಣದಲ್ಲಿ ವಾಸಮಾಡುತ್ತಿರುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.’’

ಕಶ್ಯಪಃ

ಸರ್ವತ್ರ ಸರ್ವಂ ಪಣತು ನ್ಯಾಸೇ ಲೋಭಂ ಕರೋತು ಚ ।
ಕೂಟಸಾಕ್ಷಿತ್ವಮಭ್ಯೇತು ಯಸ್ತೇ ಹರತಿ ಪುಷ್ಕರಮ್ ॥೧೮॥

“ನಿನ್ನ ಕಮಲವನ್ನು ಕದ್ದವನು–ಎಲ್ಲ ಕಡೆಗಳಲ್ಲಿಯೂ ಎಲ್ಲ ವಿಧವಾದ ವಸ್ತುವನ್ನೂ ಮಾರುವವನಿಗೆ (ಎಲ್ಲ ವಸ್ತುಗಳನ್ನೂ ಜೂಜಿನಲ್ಲಿಡುವವನಿಗೆ), ನಿಕ್ಷೇಪವಾಗಿಟ್ಟುದನ್ನು ಅಪಹರಿಸಲು ಬಯಸಿದವನಿಗೆ ಮತ್ತು ಸುಳ್ಳುಸಾಕ್ಷಿಯನ್ನು ಹೇಳಿದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಗೌತಮಃ

ಜೀವತ್ವಹಂಕೃತೋ ಬುದ್ಧ್ಯಾ ವಿಷಮೇಣಾಸಮೇನ ಚ ।
ಕರ್ಷಕೋ ಮತ್ಸರೀ ಚಾಸ್ತು ಯಸ್ತೇ ಹರತಿ ಪುಷ್ಕರಮ್ ॥೧೯॥

“ನಿನ್ನ ಕಮಲವನ್ನು ಅಪಹರಣಮಾಡಿದವನು–ಅಹಂಕಾರಿಯಾಗಿ ಮೂರ್ಖನೊಡನೆಯೂ ಅಯೋಗ್ಯನೊಡನೆಯೂ ಸೇರಿರುವವನಿಗೆ, ಬ್ರಾಹ್ಮಣನಾಗಿದ್ದೂ ಕೃಷಿಮಾಡುವವನಿಗೆ, ಇತರರ ಐಶ್ವರ್ಯವನ್ನು ನೋಡಿ ಹೊಟ್ಟೇಕಿಚ್ಚುಪಡುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಭಾಗಿಯಾಗಲಿ.”

ಅಂಗಿರಾಃ

ಅಶುಚಿರ್ಬ್ರಹ್ಮಕೂಟೋಽಸ್ತು ಶ್ವಾನಂ ಚ ಪರಿಕರ್ಷತು ।
ಬ್ರಹ್ಮಹಾನಿಕೃತಿಶ್ಚಾಸ್ತು ಯಸ್ತೇ ಹರತಿ ಪುಷ್ಕರಮ್ ॥೨೦॥

“ನಿನ್ನ ಕಮಲವನ್ನು ಅಪಹರಿಸಿರುವವನು - ವೇದಗಳ ರಾಶಿಯನ್ನೇ ಅಧ್ಯಯನಮಾಡಿಯೂ ಅಶುಚಿಯಾಗಿರುವವನಿಗೆ, ನಾಯಿಯನ್ನು ಸದಾ ಎಳೆದುಕೊಂಡು ತಿರುಗಾಡುತ್ತಿರುವವನಿಗೆ, ಬ್ರಹ್ಮಹತ್ಯೆಯನ್ನು ಮಾಡಿ

ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳದವನಿಗೆ ಮತ್ತು ವಂಚಕನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ದುನ್ದುಮಾರಃ

ಅಕೃತಜ್ಞಸ್ತು ಮಿತ್ರಾಣಾಂ ಶೂದ್ರಾಯಾಂ ಚ ಪ್ರಜಾಯತು ।
ಏಕಃ ಸಂಪನ್ನಮಶ್ನಾತು ಯಸ್ತೇ ಹರತಿ ಪುಷ್ಕರಮ್ ॥೨೧॥

"ನಿನ್ನ ಕಮಲವನ್ನು ಕದ್ದವನು–ಮಿತ್ರರು ಮಾಡಿದ ಉಪಕಾರವನ್ನು ಮರೆಯುವವನಿಗೆ, ಶೂದ್ರಸ್ತ್ರೀಯಲ್ಲಿ ಮಕ್ಕಳನ್ನು ಪಡೆದ ಬ್ರಾಹ್ಮಣನಿಗೆ, ಸಿದ್ಧವಾದ ಭೋಜನವನ್ನು ಒಬ್ಬನೇ ಕುಳಿತು ಭುಂಜಿಸುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಪೂರುಃ

ಚಿಕಿತ್ಸಾಯಾಂ ಪ್ರಚರತು ಭಾರ್ಯಯಾ ಚೈವ ಪುಷ್ಯತು ।
ಶ್ವಶುರಾತ್ತಸ್ಯ ವೃತ್ತಿಸ್ಯಾತ್ ಯಸ್ತೇ ಹರತಿ ಪುಷ್ಕರಮ್ ॥೨೨॥

"ನಿನ್ನ ಕಮಲವನ್ನು ಕದ್ದವನು–ವೈದ್ಯವೃತ್ತಿಯಿಂದ ಜೀವಿಸುವವನಿಗೆ, ಭಾರ್ಯೆಯು ಸಂಪಾದಿಸಿದ ಹಣದಿಂದ ಹೃಷ್ಟ-ಪುಷ್ಟನಾಗುವವನಿಗೆ, (ಭಾರ್ಯೋಪಜೀವಿಗೆ) ಮಾವನ ಆಶ್ರಯವನ್ನು ಪಡೆದು ಜೀವನವನ್ನು ನಿರ್ವಹಿಸುತ್ತಿರುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ದಿಲೀಪಃ

ಉದಪಾನಪ್ಲವೇ ಗ್ರಾಮೇ ಬ್ರಾಹ್ಮಣೋ ವೃಷಲೀಪತಿಃ ।
ತಸ್ಯ ಲೋಕಾನ್ಸ ವ್ರಜತು ಯಸ್ತೇ ಹರತಿ ಪುಷ್ಕರಮ್ ॥೨೩॥

"ನದಿಯನ್ನು ದಾಟಿಸುವ ತೆಪ್ಪದಂತೆ–ಎಲ್ಲರ ಉಪಯೋಗಕ್ಕೆ ಒಂದೇ ಬಾವಿಯಿರುವ ಗ್ರಾಮದಲ್ಲಿ ವಾಸಮಾಡುತ್ತಿರುವ, ಶೂದ್ರಸ್ತ್ರೀಗೆ ಪತಿಯಾದ ಬ್ರಾಹ್ಮಣನಿಗೆ ಪ್ರಾಪ್ತವಾಗುವ ಲೋಕಗಳು ನಿನ್ನ ಕಮಲವನ್ನು ಕದ್ದವನಿಗೂ ಪ್ರಾಪ್ತವಾಗಲಿ."

ಶುಕ್ರಃ

ವೃಥಾ ಮಾಂಸಂ ಸಮಶ್ನಾತು ದಿವಾ ಗಚ್ಛತು ಮೈಥುನಮ್ ।
ಪ್ರೇಷ್ಯೋ ಭವತು ರಾಜ್ಞಶ್ಚ ಯಸ್ತೇ ಹರತಿ ಪುಷ್ಕರಮ್ ॥೨೪॥

"ನಿನ್ನ ಕಮಲವನ್ನು ಅಪಹರಿಸಿದವನು–ನಿಷ್ಕಾರಣವಾಗಿ ಮಾಂಸವನ್ನು ತಿನ್ನುವವನಿಗೆ, ಹಗಲಿನಲ್ಲಿಯೂ ಸ್ತ್ರೀಸಮಾಗಮವನ್ನು ಮಾಡುವವನಿಗೆ, ರಾಜಸೇವಕನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಜಮದಗ್ನಿಃ

ಅನಧ್ಯಾಯೇಷ್ವಧೀಯೀತ ಮಿತ್ರಂ ಶ್ರಾದ್ಧೇ ಚ ಭೋಜಯೇತ್ ।
ಶ್ರಾದ್ಧೇ ಶೂದ್ರಶ್ಚ ಚಾಶ್ನೀಯಾತ್ ಯಸ್ತೇ ಹರತಿ ಪುಷ್ಕರಮ್ ॥೨೫॥

"ನಿನ್ನ ಕಮಲವನ್ನು ಕದ್ದವನು–ಅನಧ್ಯಯನದಿನಗಳಲ್ಲಿ ಅಧ್ಯಯನ ಮಾಡಿದವನಿಗೆ, ಶ್ರಾದ್ಧದಲ್ಲಿ ಮಿತ್ರನನ್ನೇ ನಿಮಂತ್ರಿಸಿ ಭೋಜನ ಮಾಡಿಸುವವನಿಗೆ, ಶೂದ್ರನು ಮಾಡುವ ಶ್ರಾದ್ಧದಲ್ಲಿ ಭೋಜನವನ್ನು ಮಾಡುವ ಬ್ರಾಹ್ಮಣನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಶಿಬಿಃ

ಅನಾಹಿತಾಗ್ನಿರ್ಮ್ರಿಯತಾಂ ಯಜ್ಞೇ ವಿಘ್ನಂ ಕರೋತು ಚ ।
ತಪಸ್ವಿಭಿರ್ವಿರುಧ್ಯೇಚ್ಚ ಯಸ್ತೇ ಹರತಿ ಪುಷ್ಕರಮ್ ॥೨೬॥

"ನಿನ್ನ ಕಮಲವನ್ನು ಕದ್ದವನು–ಅಗ್ನಿಹೋತ್ರವನ್ನು ಮಾಡದೆಯೇ ಮರಣಹೊಂದುವವನಿಗೆ, ಯಜ್ಞದಲ್ಲಿ ವಿಘ್ನವನ್ನುಂಟುಮಾಡುವವನಿಗೆ, ತಪಸ್ವಿಗಳೊಡನೆ ವಿರೋಧವನ್ನು ಕಟ್ಟಿಕೊಳ್ಳುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಯಯಾತಿಃ

ಅನೃತೌ ಚ ವ್ರತೀ ಚೈವ ಭಾರ್ಯಾಯಾಂ ಚ ಪ್ರಜಾಯತು ।
ನಿರಾಕರೋತು ವೇದಾಂಶ್ಚ ಯಸ್ತೇ ಹರತಿ ಪುಷ್ಕರಮ್ ॥೨೭॥

"ನಿನ್ನ ಕಮಲವನ್ನು ಕದ್ದವನು–ವ್ರತವನ್ನು ಕೈಗೊಂಡಿದ್ದರೂ ಋತುಕಾಲವಲ್ಲದ ಸಮಯದಲ್ಲಿ ಭಾರ್ಯೆಯೊಡನೆ ಸಮಾಗಮಮಾಡಿ

ಮಕ್ಕಳನ್ನು ಪಡೆದವನಿಗೆ, ವೇದವನ್ನು ತಿರಸ್ಕರಿಸುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ನಹುಷಃ

ಅತಿಥಿರ್ಗೃಹಸಂಸ್ಥೋಽಸ್ತು ಕಾಮವೃತ್ತಸ್ತು ದೀಕ್ಷಿತಃ ।
ವಿದ್ಯಾಂ ಪ್ರಯಚ್ಛತು ಭೃತೋ ಯಸ್ತೇ ಹರತಿ ಪುಷ್ಕರಮ್ ॥೨೮॥

"ನಿನ್ನ ಕಮಲವನ್ನು ಕದ್ದವನು–ಅತಿಥಿಯಾಗಿದ್ದೂ ಮನೆಯಲ್ಲಿಯೇ ಸ್ಥಿರವಾಗಿ ಇರುವವನಿಗೆ, ಯಜ್ಞದೀಕ್ಷಿತನಾಗಿದ್ದರೂ ಸ್ವೇಚ್ಛಾಪ್ರವೃತ್ತಿಯಿರುವವನಿಗೆ, ವೇತನವನ್ನು ಪಡೆದು ವಿದ್ಯೆಯನ್ನು ಹೇಳಿಕೊಡುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಅಮ್ಬರೀಷಃ

ನೃಶಂಸಸ್ತ್ಯಕ್ತಧರ್ಮೋಽಸ್ತು ಸ್ತ್ರೀಷು ಜ್ಞಾತಿಷು ಗೋಷು ಚ ।
ನಿಹನ್ತು ಬ್ರಾಹ್ಮಣಂ ಚಾಪಿ ಯಸ್ತೇ ಹರತಿ ಪುಷ್ಕರಮ್ ॥೨೯॥

"ನಿನ್ನ ಕಮಲವನ್ನು ಕದ್ದವನು–ಸ್ತ್ರೀಯರ ವಿಷಯದಲ್ಲಿಯೂ, ಜ್ಞಾತಿಗಳ ವಿಷಯದಲ್ಲಿಯೂ, ಗೋವುಗಳ ವಿಷಯದಲ್ಲಿಯೂ ಕ್ರೂರವಾದ ವರ್ತನೆಯಿರುವವನಿಗೆ, ಧರ್ಮಹೀನನಿಗೆ ಮತ್ತು ಬ್ರಾಹ್ಮಣಹಂತಕನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ನಾರದಃ

ಗೃಹಜ್ಞಾನೀ ಬಹಿಃ ಶಾಸ್ತ್ರಂ ಪಠತಾಂ ವಿಸ್ವರಂ ಪದಮ್ ।
ಗರೀಯಸೋಽವಜಾನಾತು ಯಸ್ತೇ ಹರತಿ ಪುಷ್ಕರಮ್ ॥೩೦॥

"ನಿನ್ನ ಕಮಲವನ್ನು ಕದ್ದವನು–ದೇಹವನ್ನೇ ಆತ್ಮವೆಂದು ತಿಳಿದವನಿಗೆ, ಮರ್ಯಾದೆಯನ್ನು ಉಲ್ಲಂಘಿಸಿ ಶಾಸ್ತ್ರವನ್ನು ಅಧ್ಯಯನಮಾಡುವವನಿಗೆ, ಸ್ವರವಿಲ್ಲದೇ ವೇದವನ್ನು ಹೇಳುವವನಿಗೆ, ಗುರುಜನರನ್ನು ತಿರಸ್ಕರಿಸುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ನಾಭಾಗಃ

ಅನೃತಂ ಭಾಷತು ಸದಾ ಸದ್ಭಿಶ್ಚೈವ ವಿರುಧ್ಯತು ।
ಶುಲ್ಕೇನ ತು ದದತ್ಕನ್ಯಾಂ ಯಸ್ತೇ ಹರತಿ ಪುಷ್ಕರಮ್ ॥೩೧॥

“ನಿನ್ನ ಕಮಲವನ್ನು ಕದ್ದವನು–ಯಾವಾಗಲೂ ಸುಳ್ಳುಹೇಳುವವನಿಗೆ, ಸತ್ಪುರುಷರೊಡನೆ ವಿರೋಧವನ್ನು ಕಟ್ಟಿಕೊಂಡಿರುವವನಿಗೆ ಮತ್ತು ಶುಲ್ಕವನ್ನು ತೆಗೆದುಕೊಂಡು ಕನ್ಯೆಯನ್ನು ದಾನಮಾಡುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಕವಿಃ

ಪದ್ಭ್ಯಾಂ ಸ ಗಾಂ ತಾಡಯತು ಸೂರ್ಯಂ ಚ ಪ್ರತಿಮೇಹತು ।
ಶರಣಾಗತಂ ಸಂತ್ಯಜತು ಯಸ್ತೇ ಹರತಿ ಪುಷ್ಕರಮ್ ॥೩೨॥

“ನಿನ್ನ ಕಮಲವನ್ನು ಕದ್ದವನು–ಗೋವನ್ನು ಕಾಲಿನಿಂದ ಒದ್ದವನಿಗೆ, ಸೂರ್ಯನಿಗೆ ಎದುರಾಗಿ ಕುಳಿತು ಮಲವಿಸರ್ಜನೆಯನ್ನು ಮಾಡಿದವನಿಗೆ ಮತ್ತು ಶರಣಾಗತನನ್ನು ಪರಿತ್ಯಜಿಸಿದವನಿಗೆ ಉಂಟಾಗುವ ಪಾಪಕ್ಕೆ ಗುರಿಯಾಗಲಿ.”

ವಿಶ್ವಾಮಿತ್ರಃ

ಕರೋತು ಭೃತಕೋಽವರ್ಷಾಂ ರಾಜ್ಞಶ್ಚಾಸ್ತು ಪುರೋಹಿತಃ ।
ಋತ್ವಿಗಸ್ತು ಹ್ಯಯಾಜ್ಯಸ್ಯ ಯಸ್ತೇ ಹರತಿ ಪುಷ್ಕರಮ್ ॥೩೩॥

“ನಿನ್ನ ಕಮಲವನ್ನು ಕದ್ದವನು–ಉತ್ತು-ಬಿತ್ತುವುದರ ಮೂಲಕವಾಗಿ ವರ್ಷಾಕಾಲದ ಪ್ರಯೋಜನವನ್ನು ಮಾಡಿಕೊಡದಿರುವ ಭೃತ್ಯನಿಗೆ, ರಾಜಪುರೋಹಿತನಿಗೆ ಮತ್ತು ಅನಧಿಕಾರಿಯಾದವನಿಗೆ ಯಜ್ಞವನ್ನು ಮಾಡಿಸುವ ಋತ್ವಿಜನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಪರ್ವತಃ

ಗ್ರಾಮೇ ಚಾಧಕೃತಃ ಸೋಽಸ್ತು ಖರಯಾನೇನ ಗಚ್ಛತು ।
ಶುನಃ ಕರ್ಷತು ವೃತ್ತ್ಯರ್ಥೇ ಯಸ್ತೇ ಹರತಿ ಪುಷ್ಕರಮ್ ॥೩೪॥

“ನಿನ್ನ ಕಮಲವನ್ನು ಕದ್ದವನು–ಗ್ರಾಮದ ಮುಖ್ಯಸ್ಥನಿಗೆ, ಕತ್ತೆಯನ್ನು ಕಟ್ಟಿದ ಗಾಡಿಯಲ್ಲಿ ಪ್ರಯಾಣಮಾಡಿದವನಿಗೆ, ಭಿಕ್ಷಾವೃತ್ತಿಗಾಗಿ (ಬೇಟೆಯಿಂದ ಜೀವಿಸುವುದಕ್ಕಾಗಿ) ನಾಯಿಯನ್ನು ಜೊತೆಯಲ್ಲಿ ಎಳೆದುಕೊಂಡು ಹೋಗುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಭರದ್ವಾಜಃ

ಸರ್ವಪಾಪಸಮಾದಾನಂ ನೃಶಂಸೇ ಚಾನೃತೇ ಚ ಯತ್ ।
ತತ್ತಸ್ಯಾಸ್ತು ಸದಾ ಪಾಪಂ ಯಸ್ತೇ ಹರತಿ ಪುಷ್ಕರಮ್ ॥೩೫॥

“ನಿನ್ನ ಕಮಲವನ್ನು ಕದ್ದವನು–ಕ್ರೂರಕರ್ಮಿಗೆ, ನಿರ್ದಯಿಗೆ ಮತ್ತು ಅಸತ್ಯವಾದಿಗೆ ಪ್ರಾಪ್ತವಾಗುವ ಸಮಸ್ತಪಾಪಗಳಿಗೂ ಭಾಗಿಯಾಗಲಿ.”

ಅಷ್ಟಕಃ

ಸ ರಾಜಾಸ್ತ್ವಕೃತಪ್ರಜ್ಞಃ ಕಾಮವೃತ್ತಶ್ಚ ಪಾಪಕೃತ್ ।
ಅಧರ್ಮೇಣಾಭಿಶಾಸ್ತೂರ್ವೀಂ ಯಸ್ತೇ ಹರತಿ ಪುಷ್ಕರಮ್ ॥೩೬॥

“ನಿನ್ನ ಕಮಲವನ್ನು ಕದ್ದವನು–ಮಂದಬುದ್ಧಿಯಾದ, ಸ್ವೇಚ್ಛಾಚಾರಿಯಾದ, ಪಾಪಾತ್ಮನಾದ, ಅಧರ್ಮದಿಂದ ರಾಜ್ಯವಾಳುವ ರಾಜನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಗಾಲವಃ

ಪಾಪಿಷ್ಠೇಭ್ಯೋ ಹ್ಯನರ್ಘಾರ್ಹಃ ಸ ನರೋಽಸ್ತು ಸ್ವಪಾಪಕೃತ್ ।
ದತ್ತ್ವಾ ದಾನಂ ಕೀರ್ತಯತು ಯಸ್ತೇ ಹರತಿ ಪುಷ್ಕರಮ್ ॥೩೭॥

“ನಿನ್ನ ಕಮಲವನ್ನು ಕದ್ದವನು–ಪಾಪಿಷ್ಠರಾದವರ ಮಾನ್ಯತೆಗೂ ಪಾತ್ರನಾದವನಿಗೆ (ಅತಿ ಪಾಪಿಷ್ಠನಿಗೆ), ಸ್ವಜನರಿಗೂ ಅಪಕಾರಮಾಡುವವನಿಗೆ, ದಾನವನ್ನು ಕೊಟ್ಟು ಅದನ್ನು ತಾನೇ ಪ್ರಶಂಸೆಮಾಡಿಕೊಳ್ಳುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ಅರುನ್ಧತೀ

ಶ್ವಶ್ರ್ವಾಪವಾದಂ ವದತು ಭರ್ತುರ್ಭವತು ದುರ್ಮನಾಃ ।
ಏಕಾ ಸ್ವಾದು ಸಮಶ್ನಾತು ಯಾ ತೇ ಹರತಿ ಪುಷ್ಕರಮ್ ॥೩೮॥

“ನಿನ್ನ ಕಮಲವನ್ನು ಅಪಹರಣಮಾಡಿದವಳು–ಅತ್ತೆಯನ್ನು ನಿಂದಿಸುವವಳಿಗೆ, ಗಂಡನ ವಿಷಯದಲ್ಲಿ ದುರ್ಭಾವನೆಯನ್ನು ಇಟ್ಟುಕೊಂಡಿರುವವಳಿಗೆ, ರುಚಿಕರವಾದ ತಿಂಡಿ-ತಿನಸುಗಳನ್ನು ಒಬ್ಬಳೇ ತಿನ್ನುವವಳಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ.”

ವಾಲಖಿಲ್ಯಾಃ

ಏಕಪಾದೇನ ವೃತ್ತ್ಯರ್ಥಂ ಗ್ರಾಮದ್ವಾರೇ ಸ ತಿಷ್ಠತು ।
ಧರ್ಮಜ್ಞಸ್ತ್ಯಕ್ತಧರ್ಮಾಸ್ತು ಯಸ್ತೇ ಹರತಿ ಪುಷ್ಕರಮ್ ॥೭೯॥

"ನಿನ್ನ ಕಮಲವನ್ನು ಕದ್ದವನು–ಜೀವಿಕೆಗಾಗಿ ಗ್ರಾಮದ ಹೆಬ್ಬಾಗಿಲಿನಲ್ಲಿ ಒಂದೇ ಕಾಲಿನಲ್ಲಿ ನಿಂತವನಿಗೆ, ಧರ್ಮವನ್ನು ತಿಳಿದವನಾಗಿದ್ದರೂ ಧರ್ಮಾಚರಣೆಯಿಂದ ಹೀನನಾದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಶುನಃಸಖಃ (ಪಶುಸಖಃ)

ಅಗ್ನಿಹೋತ್ರಮನಾದೃತ್ಯ ಸ ಸುಖಂ ಸ್ವಪತು ದ್ವಿಜಃ ।
ಪರಿವ್ರಾಟ್ಕಾಮವೃತ್ತೋಽಸ್ತು ಯಸ್ತೇ ಹರತಿ ಪುಷ್ಕರಮ್ ॥೮೦॥

"ನಿನ್ನ ಕಮಲವನ್ನು ಕದ್ದವನು–ಅಗ್ನಿಹೋತ್ರವನ್ನು ಅವಹೇಳನ ಮಾಡುತ್ತಾ ಅದನ್ನು ಮಾಡಬೇಕಾದ ಸಮಯದಲ್ಲಿ ಮಾಡದೇ ಸುಖವಾಗಿ ಮಲಗಿರುವವನಿಗೆ, ಸಂನ್ಯಾಸಿಯಾಗಿದ್ದೂ ಸ್ವೇಚ್ಛಾಚಾರವಿರುವವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಸುರಭಿಃ

ಬಾಲಜೇನ ನಿದಾನೇನ ಕಾಂಸ್ಯಂ ಭವತು ದೋಹನಮ್ ।
ದುಹ್ಯೇತ ಪರವತ್ಸೇನ ಯಾ ತೇ ಹರತಿ ಪುಷ್ಕರಮ್ ॥೮೧॥

"ನಿನ್ನ ಕಮಲವನ್ನು ಕದ್ದವಳು–ಕರುವನ್ನು ಕಟ್ಟಿಹಾಕಿ ಅದು ಕಿರುಚಿಕೊಳ್ಳುತ್ತಿರುವಾಗ ಕಂಚಿನಪಾತ್ರೆಯಲ್ಲಿ ಹಾಲನ್ನು ಕರೆಯುವವಳಿಗೆ, ಕರುವು ಸತ್ತುಹೋಗಿದ್ದಾಗ ಬೇರೆಯ ಕರುವನ್ನು ಹಸುವಿನ ಮುಂದೆ ನಿಲ್ಲಿಸಿ ಹಾಲುಕರೆಯುವವಳಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗಲಿ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಹೀಗೆ ಅವರೆಲ್ಲರೂ ನಾನಾಪ್ರಕಾರವಾಗಿ ಅನೇಕಾನೇಕ ಶಪಥಗಳನ್ನು ಮಾಡಿದನಂತರ ಅವರೆಲ್ಲರ ಶಪಥಗಳನ್ನೂ ಕೇಳಿ ಸಂತೋಷ ಗೊಂಡ ದೇವರಾಜನಾದ ಇಂದ್ರನು–ಕೋಪಗೊಂಡಿದ್ದ ವಿಪ್ರಶ್ರೇಷ್ಠನಾದ ಅಗಸ್ತ್ಯನಿಗೆ ಹೇಳಿದನು. ಕೌರವೇಂದ್ರನೇ! ಬ್ರಹ್ಮರ್ಷಿಗಳ, ದೇವರ್ಷಿಗಳ ಮತ್ತು ರಾಜರ್ಷಿಗಳ ಮಧ್ಯದಲ್ಲಿ ಕುಪಿತನಾಗಿದ್ದ ಅಗಸ್ತ್ಯಮಹರ್ಷಿಯನ್ನು

ಸಂಬೋಧಿಸಿ ಇಂದ್ರನು ಯಾವ ಮಾತನ್ನು ಹೇಳಿದನೋ ಅದನ್ನೇ ನಿನಗೂ ಹೇಳುವೆನು; ಕೇಳು:

ಇಂದ್ರನೂ ಹೀಗೆ ಶಪಥವನ್ನು ಮಾಡಿದನು:

ಅಧ್ವರ್ಯವೇ ದುಹಿತರಂ ದದಾತು
ಛನ್ದೋಗೇ ವಾ ಚರಿತಬ್ರಹ್ಮಚರ್ಯೇ ।
ಅಥರ್ವಣಂ ವೇದಮಧೀತ್ಯ ವಿಪ್ರಃ
ಸ್ನಾಯೀತ ಯಃ ಪುಷ್ಕರಮಾದದಾತಿ ॥೪೪॥

"ನಿನ್ನ ಕಮಲವನ್ನು ಕದ್ದವನು–ಬ್ರಹ್ಮಚರ್ಯವ್ರತವನ್ನು ಪೂರ್ಣಗೊಳಿಸಿ ವಿದ್ವಾಂಸನಾಗಿ ಬಂದಿರುವ ಸಾಮಗನಿಗಾಗಲೀ, ಯಾಜುಷನಿಗಾಗಲೀ ತನ್ನ ಮಗಳನ್ನು ಕೊಟ್ಟು ಮದುವೆಮಾಡಲಿ ಅಥವಾ ಆ ಬ್ರಾಹ್ಮಣನು (ಕಮಲವನ್ನು ಕದ್ದವನು) ಅಥರ್ವಣವೇದವನ್ನು ಅಧ್ಯಯನ ಮಾಡಿ ಸ್ನಾತಕನಾಗಲಿ.

ಸರ್ವಾನ್ವೇದಾನಧೀಯೀತ ಪುಣ್ಯಶೀಲೋಽಸ್ತು ಧಾರ್ಮಿಕಃ ।
ಬ್ರಹ್ಮಣಃ ಸದನಂ ಯಾತು ಯಸ್ತೇ ಹರತಿ ಪುಷ್ಕರಮ್ ॥೪೫॥

ನಿನ್ನ ಕಮಲವನ್ನು ಕದ್ದವನು–ಸಂಪೂರ್ಣವೇದಗಳನ್ನೂ ಅಧ್ಯಯನ ಮಾಡಿದವನಿಗೆ ಪ್ರಾಪ್ತವಾಗುವ ಪುಣ್ಯಕ್ಕೆ ಭಾಗಿಯಾಗಲಿ. ಪುಣ್ಯಶೀಲನಾಗಲಿ. ಧಾರ್ಮಿಕನಾಗಲಿ. ಅವಸಾನಾನಂತರದಲ್ಲಿ ಬ್ರಹ್ಮಲೋಕಕ್ಕೆ ಹೋಗಲಿ."

ಅಗಸ್ತ್ಯಃ

ಆಶೀರ್ವಾದಸ್ತ್ವಯಾ ಪ್ರೋಕ್ತಃ ಶಪಥೋ ಬಲಸೂದನ ।
ದೀಯತಾಂ ಪುಷ್ಕರಂ ಮಹ್ಯಮೇಷಧರ್ಮಃ ಸನಾತನಃ ॥೪೬॥

"ಬಲಸೂದನನೇ! ದೇವೇಂದ್ರ! ನೀನು ಮಾಡಿದ ಶಪಥವು ಶಾಪರೂಪವಾಗಿಲ್ಲ. ಆಶೀರ್ವಾದರೂಪವಾಗಿದೆ. (ಆದುದರಿಂದ ನನ್ನ ಕಮಲವನ್ನು ನೀನೇ ತೆಗೆದುಕೊಂಡಿರುವೆ.) ನನ್ನ ಕಮಲವನ್ನು ಕೊಟ್ಟುಬಿಡು. ಇದು ಸನಾತನಧರ್ಮವಾಗಿದೆ."

ಇಂದ್ರನು ಹೇಳುತ್ತಾನೆ:

“ಪೂಜ್ಯರೇ! ನಾನು ಲೋಭದಿಂದ ನಿಮ್ಮ ಕಮಲವನ್ನು ತೆಗೆದುಕೊಳ್ಳಲಿಲ್ಲ. ನಿಮ್ಮೆಲ್ಲರ ಧರ್ಮವಾಕ್ಯಗಳನ್ನೂ ಕೇಳುವ ಆಶಯದಿಂದಲೇ ಕಮಲವನ್ನು ಅಪಹರಿಸಿದೆನು. ಆದುದರಿಂದ ದಯಮಾಡಿ ನನ್ನ ಮೇಲೆ ಕೋಪಗೊಳ್ಳಬೇಡಿರಿ. ನಾನಿಂದು ನಿಮ್ಮೆಲ್ಲರ ಮುಖದಿಂದ



ನಿತ್ಯವಾದ, ಅವಿಕಾರಿಯಾದ, ಅನಾಮಯವಾದ, ಸಂಸಾರಸಾಗರವನ್ನು ದಾಟಲು ಸೇತುವೆಯಂತಿರುವ, ಋಷಿಪ್ರಣೀತವಾದ ಶ್ರುತಿಯ ಶ್ರೇಷ್ಠತೆಯನ್ನು ಸಾರಿಹೇಳುವ ಧರ್ಮವಾಕ್ಯಗಳನ್ನು ಕೇಳಿದೆನು. ದ್ವಿಜಶ್ರೇಷ್ಠರೇ! ವಿದ್ವಾಂಸರೇ! ಪೂಜ್ಯರೇ! ಅನಿಂದ್ಯರೇ! ಇದೋ ಈ ನಿಮ್ಮ ಕಮಲಗಳನ್ನು ತೆಗೆದುಕೊಳ್ಳಿರಿ. ನಾನು ಮಾಡಿದ ಅತಿಕ್ರಮವನ್ನು ದಯಮಾಡಿ ಕ್ಷಮಿಸಿರಿ.”*

---

*ಈ ಅಧ್ಯಾಯದಲ್ಲಿ ಸುಮಾರು ಹತ್ತು ಶ್ಲೋಕಗಳು ಹಿಂದಿನ ಅಧ್ಯಾಯದಲ್ಲಿ

ಇಂದ್ರನು ಹೀಗೆ ಹೇಳಿದನಂತರ ತಪಸ್ವಿಗಳಾದ, ಕೋಪಗೊಂಡಿದ್ದ, ಧೀಮಂತರಾದ ಅಗಸ್ತ್ಯರು ಇಂದ್ರನಿಂದ ಕಮಲವನ್ನು ತೆಗೆದುಕೊಂಡು ಪ್ರಸನ್ನ ಚಿತ್ತರಾದರು. ಪುನಃ ರಾಜರ್ಷಿ-ಬ್ರಹ್ಮರ್ಷಿಗಳೆಲ್ಲರೂ ಅರಣ್ಯಮಾರ್ಗದಲ್ಲಿ ನಡೆದುಹೋಗುತ್ತಾ ತೀರ್ಥಯಾತ್ರೆಯನ್ನು ಆರಂಭಿಸಿದರು. ಅಲ್ಲಲ್ಲಿ ಸಿಕ್ಕುತ್ತಿದ್ದ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುತ್ತಿದ್ದರು.

ಆಖ್ಯಾನಂ ಯ ಇದಂ ಯುಕ್ತಃ ಪಠೇತ್ಪರ್ವಣಿ ಪರ್ವಣಿ ।
ನ ಮೂರ್ಖಂ ಜನಯೇತ್ಪುತ್ರಂ ನ ಭವೇಚ್ಚ ನಿರಾಕೃತಿಃ ॥೫೨॥

ಯಾವನು ಪ್ರತಿಯೊಂದು ಪರ್ವದಿವಸಗಳಲ್ಲಿಯೂ ಏಕಾಗ್ರಚಿತ್ತನಾಗಿ ಈ ಆಖ್ಯಾನವನ್ನು ಪಠನಮಾಡುವನೋ–ಅವನು ಮೂರ್ಖನಾದ ಮಗನನ್ನು ಪಡೆಯುವುದಿಲ್ಲ. ಯಾರಿಂದಲೂ ತಿರಸ್ಕೃತನಾಗುವುದಿಲ್ಲ.

ನ ತಮಾಪತ್ಸ್ಪೃಶೇತ್ಕಾಚಿದ್ವಿಜ್ವರೋ ನ ಜರಾವಹಃ ।
ವಿರಜಾಃ ಶ್ರೇಯಸಾ ಯುಕ್ತಃ ಪ್ರೇತ್ಯ ಸ್ವರ್ಗಮವಾಪ್ನುಯಾತ್ ॥೫೩॥

ಈ ಆಖ್ಯಾನವನ್ನು ಪಠಿಸುವವನಿಗೆ ಯಾವವಿಧವಾದ ಆಪತ್ತೂ ಸಂಭವಿಸುವುದಿಲ್ಲ; ನಿಶ್ಚಿಂತನಾಗಿರುತ್ತಾನೆ. ಮುಪ್ಪು ಅವನನ್ನು ಆಕ್ರಮಿ ಸುವುದಿಲ್ಲ. ರಜೋಗುಣವಿಲ್ಲದವನಾಗಿ (ಸಾತ್ವಿಕನಾಗಿ) ಶ್ರೇಯೋವಂತ ನಾಗುತ್ತಾನೆ. ಅವಸಾನಾನಂತರದಲ್ಲಿ ಸ್ವರ್ಗವನ್ನು ಹೊಂದುತ್ತಾನೆ.

ಯಶ್ಚ ಶಾಸ್ತ್ರಮಧೀಯೀತ ಋಷಿಭಿಃ ಪರಿಪಾಲಿತಮ್ ।
ಸ ಗಚ್ಛೇದ್ಬ್ರಹ್ಮಣೋಲೋಕಮವ್ಯಯಂ ಚ ನರೋತ್ತಮ ॥೫೪॥

ನರಶ್ರೇಷ್ಠನೇ! ಯಾವನು ಋಷಿಗಳಿಂದ ರಕ್ಷಿಸಲ್ಪಟ್ಟ ಈ ಶಾಸ್ತ್ರವನ್ನು ಅಧ್ಯಯನಮಾಡುವನೋ–ಅವನು ಅವಿನಾಶಿಯಾದ ಬ್ರಹ್ಮಲೋಕವನ್ನು ಹೊಂದುತ್ತಾನೆ.”

ತೊಂಬತ್ನಾಲ್ಕನೆಯ ಅಧ್ಯಾಯವು ಮುಗಿಯಿತು.

ದ್ದಂತೆಯೇ ಇವೆ. ಕಥೆಯಲ್ಲೂ ಸಾಮ್ಯವಿದೆ. ಈ ಅಧ್ಯಾಯದಲ್ಲಿರುವ ಒಂದು ಅಸಂಗತವೆಂದರೆ ಶುನಃಸಖನ ಹೆಸರು ಬಂದಿರುವುದು. ಅಧ್ಯಾಯದ ಮೊದಲಲ್ಲಿರುವ ಬ್ರಹ್ಮರ್ಷಿಗಳ ಮತ್ತು ರಾಜರ್ಷಿಗಳ ಪಟ್ಟಿಯಲ್ಲಿ ಶುನಃಸಖನ ಅಥವಾ ಭಂಡಾರ್ಕರ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಅವರ ಪುಸ್ತಕದಲ್ಲಿರುವಂತೆ ಪಶುಸಖನ ಹೆಸರೂ ಬಂದಿರುವುದಿಲ್ಲ; ಬರಲು ಕಾರಣವೂ ಇಲ್ಲ. ಆದರೂ ಅವನು ಹೇಳಿರುವ ಒಂದು ಶ್ಲೋಕವಿದೆ. ಕೈ ಬರವಣಿಗೆಯಲ್ಲಿ ಈ ಶ್ಲೋಕವು ಹೇಗೋ ಸೇರಿಹೋಗಿರಬಹುದೆಂದು ಊಹಿಸಬಹು

೯೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಛತ್ರಿ ಮತ್ತು ಪಾದರಕ್ಷೆಗಳ ಉತ್ಪತ್ತಿ: ದಾನದ ವಿಷಯದಲ್ಲಿ ಯುಧಿಷ್ಠಿರನ ಪ್ರಶ್ನೆ: ಸೂರ್ಯನ ಪ್ರಚಂಡಕಿರಣಗಳಿಂದ ರೇಣುಕಾದೇವಿಯ ಸಂತಾಪ: ಜಮದಗ್ನಿಯ ಕೋಪ: ವಿಪ್ರರೂಪಧರನಾದ ಸೂರ್ಯನೊಡನೆ ಜಮದಗ್ನಿಯ ಸಂಭಾಷಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ :

ಯದಿದಂ ಶ್ರಾದ್ಧಕೃತ್ಯೇಷು ದೀಯತೇ ಭರತರ್ಷಭ ।
ಛತ್ರಂ ಚೋಪಾನಹೌ ಚೈವ ಕೇನೈತತ್ಸಂಪ್ರವರ್ತಿತಮ್ ॥೧॥

"ಭರತಶ್ರೇಷ್ಠನೇ! ಶ್ರಾದ್ಧಕರ್ಮಗಳಲ್ಲಿ ಛತ್ರಿಯನ್ನೂ ಪಾದರಕ್ಷೆಗಳನ್ನೂ ದಾನಕೊಡುವುದು ಯಾರಿಂದ ಪ್ರಾರಂಭವಾಯಿತು? ಇವು ಹೇಗೆ ಹುಟ್ಟಿದುವು? ಯಾವ ಕಾರಣದಿಂದ ಇವುಗಳನ್ನು ದಾನವಾಗಿ ಕೊಡುತ್ತಾರೆ? ಇವುಗಳನ್ನು ಶ್ರಾದ್ಧಕರ್ಮಗಳಲ್ಲಿ ಮಾತ್ರವೇ ದಾನವಾಗಿ ಕೊಡುವುದಿಲ್ಲ. ಇತರ ಪುಣ್ಯಕರ್ಮಗಳಲ್ಲಿಯೂ ದಾನವಾಗಿ ಕೊಡುತ್ತಾರೆ. ಅನೇಕ ಸಂದರ್ಭಗಳಲ್ಲಿ ಛತ್ರಿ ಮತ್ತು ಪಾದರಕ್ಷೆಗಳನ್ನು ಪುಣ್ಯದ ಉದ್ದೇಶದಿಂದಲೂ ದಾನಮಾಡುತ್ತಾರೆ. ಇದನ್ನು ನಿನ್ನಿಂದ ಯಥಾವತ್ತಾಗಿ ವಿಶದವಾಗಿ ತಿಳಿಯಲು ಬಯಸಿದ್ದೇನೆ."

ಭೀಷ್ಮನು ಹೇಳುತ್ತಾನೆ:

"ಮಹಾರಾಜ! ಛತ್ರಿಯೂ ಮತ್ತು ಪಾದರಕ್ಷೆಗಳೂ ಹೇಗೆ ಹುಟ್ಟಿದುವು? ಹೇಗೆ ಪ್ರಸಿದ್ಧಿಗೆ ಬಂದುವು ಮತ್ತು ಅವನ್ನು ದಾನವಾಗಿ ಕೊಡಲು ಪ್ರಾರಂಭಿಸಿದವರು ಯಾರು?–ಈ ಎಲ್ಲ ವಿಷಯಗಳನ್ನೂ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು. ಈ ಎರಡು ವಸ್ತುಗಳ ದಾನದ ಫಲಗಳು ಹೇಗೆ ಅಕ್ಷಯವಾಗುತ್ತವೆ ಮತ್ತು ಇವು ಪುಣ್ಯಪ್ರಾಪಕಗಳು ಹೇಗಾದುವು?–

ದಾಗಿದೆ. ಆದರೆ ಎಲ್ಲ ಪುಸ್ತಕಗಳಲ್ಲಿಯೂ ಈ ಶ್ಲೋಕವಿರುವುದು ವಿಶೇಷಸಂಗತಿ. ಶುನಃಸಖನ ಅಥವಾ ಸಂನ್ಯಾಸಿಯ ರೂಪದಲ್ಲಿದ್ದ ಇಂದ್ರನೇ ಅಲ್ಲಿ ಕಮಲದ ದಂಟನ್ನು ಕದ್ದವನು. ಇಲ್ಲಿಯೂ ಇಂದ್ರನೇ ಕಮಲವನ್ನು ಅಪಹರಿಸುತ್ತಾನೆ. ಇಂದ್ರನ ಉತ್ತರವು ಎರಡು ಕಡೆಗಳಲ್ಲಿಯೂ ಒಂದೇ ಆಗಿದೆ. ಈ ಪ್ರಕರಣವೇ ಬೇರೆ–ಎಂದು ಭಾವಿಸಿದರೂ ಶುನಃಸಖನ ಅಥವಾ ಪಶುಸಖನ ಹೆಸರು ಈ ಅಧ್ಯಾಯದಲ್ಲಿ ಬರಲು ಕಾರಣವಿಲ್ಲ.

ಎಂಬುದನ್ನೂ ಸಮಗ್ರವಾಗಿ ಹೇಳುತ್ತೇನೆ. ಈ ವಿಷಯದಲ್ಲಿ ಹಿಂದೆ ಜಮದಗ್ನಿಗೂ ಮತ್ತು ಸೂರ್ಯನಿಗೂ ನಡೆದ ಸಂಭಾಷಣೆಯನ್ನು ವಿದ್ವಾಂಸರು ಉದಾಹರಿಸುತ್ತಾರೆ. ಪೂರ್ವಕಾಲದಲ್ಲಿ ಒಮ್ಮೆ ಪೂಜ್ಯನಾದ ಜಮದಗ್ನಿಯು ಧನುಸ್ಸಿನಿಂದ ಆಟವಾಡುತ್ತಿದ್ದನು. ಅವನು ಬಾರಿ-ಬಾರಿಗೂ ಧನುಸ್ಸಿನಲ್ಲಿ ಬಾಣಗಳನ್ನು ಅನುಸಂಧಾನಮಾಡಿ ಬಿಡುತ್ತಲೇ ಇದ್ದನು. ಹಾಗೆ ಬಿಡುತ್ತಿದ್ದ, ಪ್ರದೀಪ್ತವಾದ ತೇಜಸ್ಸಿನಿಂದ ಕೂಡಿದ್ದ ಬಾಣಗಳನ್ನು ಅವನ ಪತ್ನಿಯಾದ ರೇಣುಕಾದೇವಿಯು ಹಿಂದಕ್ಕೆ ತಂದುಕೊಡುತ್ತಿದ್ದಳು. ಬಾಣಗಳು ಹೋಗುತ್ತಿದ್ದಾಗ ಆಗುತ್ತಿದ್ದ 'ಸೊಯ್'– ಎಂಬ ಶಬ್ದದಿಂದಲೂ ಧನುಸ್ಸಿನ ಟೇಂಕಾರದಿಂದಲೂ ಪುಲಕಿತನಾದ ಜಮದಗ್ನಿಯು ಪುನಃ-ಪುನಃ ಬಾಣ ಗಳನ್ನು ಬಿಡುತ್ತಲೇ ಇದ್ದನು. ಬಿಟ್ಟ ಬಾಣಗಳೆಲ್ಲವನ್ನೂ ರೇಣುಕೆಯು ತಂದು ಕೊಡುತ್ತಿದ್ದಳು. ಹೀಗೆ ಭಾರ್ಗವನು ಬಾಣಪ್ರಯೋಗದ ಆಟವಾಡುತ್ತಿದ್ದಾಗ ಜ್ಯೇಷ್ಠಮಾಸದ ಸೂರ್ಯನು ನೆತ್ತಿಯ ಮೇಲೆ ಬರುತ್ತಿರಲಾಗಿ ವಿಪ್ರಶ್ರೇಷ್ಠನಾದ ಜಮದಗ್ನಿಯು ಪುನಃ ಬಾಣಗಳೆಲ್ಲವನ್ನೂ ಬಿಟ್ಟು ರೇಣುಕೆಗೆ ಹೇಳಿದನು:

"ವಿಶಾಲಾಕ್ಷಿಯೇ! ಬೇಗ ಹೋಗು. ಧನುಸ್ಸಿನಿಂದ ನಾನು ಬಿಟ್ಟಿರುವ ಆ ಬಾಣಗಳನ್ನು ಬೇಗ ತೆಗೆದುಕೊಂಡು ಬಾ. ನೀನು ತರುವ ಆ ಬಾಣಗಳನ್ನು ಪುನಃ ನಾನು ಧನುಸ್ಸಿನಲ್ಲಿ ಅನುಸಂಧಾನಮಾಡಿ ಬಿಡುತ್ತೇನೆ."

ಬಿಸಿಲು ಅಧಿಕವಾಗಿದ್ದುದರಿಂದ ರೇಣುಕೆಯು ಬಾಣಗಳನ್ನು ತರಲು ಮರಗಳ ಮಧ್ಯದಲ್ಲಿ ನೆರಳಿನಲ್ಲಿಯೇ ಹೋಗುತ್ತಿದ್ದಳು. ಆದರೂ ಅವಳ ತಲೆಯೂ ಮತ್ತು ಕಾಲುಗಳೂ ಸುಡುತ್ತಿದ್ದುವು. ಆದುದರಿಂದ ವೃಕ್ಷದ ನೆರಳಿ ನಲ್ಲಿಯೇ ಸ್ವಲ್ಪಹೊತ್ತು ನಿಂತುಕೊಂಡಳು. ಅಸಿತಾಪಾಂಗಿಯಾದ, ಶುಭಾಂಗಿ ಯಾದ ರೇಣುಕೆಯು ಮುಹೂರ್ತಕಾಲ ವೃಕ್ಷದ ನೆರಳಿನಲ್ಲಿ ನಿಂತಿದ್ದಳು. ಆದರೆ ಪತಿಯ ಶಾಪದ ಭಯದಿಂದಾಗಿ ಅಲ್ಲಿಯೇ ಹೆಚ್ಚುಹೊತ್ತು ನಿಲ್ಲದೇ ಬಾಣಗಳನ್ನು ತರಲು ಪುನಃ ಅಲ್ಲಿಂದ ಹೊರಟಳು. ಸುಂದರಾಂಗಿಯಾದ, ಯಶಸ್ವಿನಿಯಾದ ರೇಣುಕೆಯು ಜಮದಗ್ನಿಯು ಬಿಟ್ಟಿದ್ದ ಬಾಣಗಳೆಲ್ಲವನ್ನೂ ತೆಗೆದುಕೊಂಡು ಹಿಂದಿರುಗಿದಳು. ಆದರೆ ಆ ಸಮಯದಲ್ಲವಳು ಬಹಳ ಖಿನ್ನಳಾಗಿದ್ದಳು. ಕಾಲುಗಳ ಸುಡುವಿಕೆಯಿಂದ ತನಗಾಗುತ್ತಿದ್ದ ದುಃಖವನ್ನು

ಕಷ್ಟಪಟ್ಟು ಸಹಿಸಿಕೊಂಡಿದ್ದಳು. ಪತಿಯು ಶಾಪಕೊಟ್ಟು ಬಿಡುವನೆಂಬ ಭಯದಿಂದ ನಡುಗುತ್ತಿದ್ದ ರೇಣುಕೆಯು ಬಾಣಗಳನ್ನು ತೆಗೆದುಕೊಂಡು ಪತಿಯ ಬಳಿಗೆ ಹೋದಳು. ಬಾಣಗಳನ್ನು ತರುವುದು ಸಾವಕಾಶವಾದುದರಿಂದ ಕ್ರುದ್ಧನಾಗಿದ್ದ ಭಾರ್ಗವನು ಶುಭಾನನೆಯಾದ ರೇಣುಕೆಯನ್ನು–'ರೇಣುಕೇ! ಕಿಂ ಚಿರೇಣ ತ್ವಮಾಗತಾ' 'ರೇಣುಕೇ! ನೀನು ಬರಲು ಇಷ್ಟೇಕೆ ಹೊತ್ತಾಯಿತು?'–ಎಂದು ಪುನಃ- ಪುನಃ ಪ್ರಶ್ನಿಸಿದನು.



ರೇಣುಕೆಯು ಉತ್ತರಿಸಿದಳು:

"ತಪೋಧನನೇ! ಪ್ರಜ್ವಲಿಸುತ್ತಿರುವ ಸೂರ್ಯನ ಕಿರಣಗಳಿಂದ ನನ್ನ ತಲೆಯೂ ಸುಟ್ಟುಹೋಯಿತು; ಕಾಲುಗಳೂ ಸುಟ್ಟುಹೋದುವು. ಸೂರ್ಯನ ಪ್ರಖರವಾದ ತೇಜಸ್ಸಿನಿಂದ ತಡೆಯಲ್ಪಟ್ಟ ನಾನು ವೃಕ್ಷದ ಛಾಯೆಯಲ್ಲಿ

ಸ್ವಲ್ಪಕಾಲ ನಿಂತಿದ್ದೆನು. ಈ ಕಾರಣದಿಂದ ನಾನು ಬರುವುದು ಸ್ವಲ್ಪ ತಡವಾಯಿತು. ಸಾವಕಾಶವಾಗಿ ಬಂದುದರ ಕಾರಣವನ್ನು ತಿಳಿದ ನೀನು ದಯಮಾಡಿ ನನ್ನ ಮೇಲೆ ಕೋಪಗೊಳ್ಳಬೇಡ."

ಜಮದಗ್ನಿಯು ಹೇಳುತ್ತಾನೆ:

"ರೇಣುಕೇ! ಹಾಗೋ! ಹಾಗಾದರೆ ನಿನಗೆ ದುಃಖವನ್ನುಂಟುಮಾಡಿದ, ಪ್ರದೀಪ್ತವಾದ ಕಿರಣಗಳನ್ನು ಹೊಂದಿರುವ ಆ ಸೂರ್ಯನನ್ನು ಈಗಲೇ ಬಾಣಗಳಿಂದಲೂ–ಅಗ್ನಿಸದೃಶವಾದ ಅಸ್ತ್ರಗಳ ತೇಜಸ್ಸಿನಿಂದಲೂ ಕೆಳಕ್ಕೆ ಕೆಡವಿಬಿಡುತ್ತೇನೆ."

ಯುಧಿಷ್ಠಿರ! ಮಹಾಪರಾಕ್ರಮಿಯಾದ ಜಮದಗ್ನಿಯು ರೇಣುಕೆಗೆ ಹೀಗೆ ಹೇಳಿ ದಿವ್ಯಧನುಸ್ಸನ್ನು ಟೇಂಕರಿಸಿ, ಅನೇಕ ಬಾಣಗಳನ್ನು ತೆಗೆದುಕೊಂಡು ಸೂರ್ಯನ ಕಡೆಗೆ ಮುಖವನ್ನು ತಿರುಗಿಸಿ ನಿಂತುಕೊಂಡನು. ಸೂರ್ಯನು ಎತ್ತ ಸಾಗುತ್ತಿದ್ದನೋ ಅತ್ತಕಡೆಗೇ ಮಹರ್ಷಿಯ ಮುಖವೂ ತಿರುಗುತ್ತಿದ್ದಿತು. ಹಾಗೆ ಬಾಣಗಳನ್ನು ತೆಗೆದುಕೊಂಡು ತನ್ನ ಮೇಲೆ ಬಾಣಬಿಡಲು ಸಿದ್ಧನಾಗಿದ್ದ ಜಮದಗ್ನಿಯನ್ನು ನೋಡಿ ಸೂರ್ಯನು ಬ್ರಾಹ್ಮಣವೇಷವನ್ನು ಧರಿಸಿ ಮುನಿಯ ಬಳಿಗೆ ಬಂದು ಪ್ರಶ್ನಿಸಿದನು: **'ಕಿಂ ತೇ ಸೂರ್ಯೋಽಪರಾಧ್ಯತೇ'**– 'ಸೂರ್ಯನು ನಿನಗೆ ಮಾಡಿದ ಅಪರಾಧವಾದರೂ ಏನು?'

ಆದತ್ತೇ ರಶ್ಮಿಭಿಃ ಸೂರ್ಯೋ ದಿವಿ ತಿಷ್ಠಂಸ್ತತಸ್ತತಃ ।
ರಸಂ ಹೃತಂ ವೈ ವರ್ಷಾಸು ಪ್ರವರ್ಷತಿ ದಿವಾಕರಃ ॥೨೧॥

ಸೂರ್ಯನು ಆಕಾಶದಲ್ಲಿ ಸಂಚರಿಸುತ್ತಾ ಕಿರಣಗಳಿಂದ ಭೂಮಿಯಲ್ಲಿರುವ ರಸವನ್ನು ಆಯಾ ಸ್ಥಳಗಳಿಂದ ಸಂಗ್ರಹಿಸಿಕೊಳ್ಳುತ್ತಾನೆ. ವರ್ಷಾಕಾಲವು ಬಂದೊಡನೆಯೇ ಪುನಃ ಭೂಮಿಯಮೇಲೆ ಸುರಿಸುತ್ತಾನೆ.

ತತೋಽನ್ನಂ ಜಾಯತೇ ವಿಪ್ರ ಮನುಷ್ಯಾಣಾಂ ಸುಖಾವಹಮ್ ।
ಅನ್ನಂ ಪ್ರಾಣಾ ಇತಿ ಯಥಾ ವೇದೇಷು ಪರಿಪಠ್ಯತೇ ॥೨೨॥

ವಿಪ್ರಶ್ರೇಷ್ಠನೇ! ಹೀಗೆ ಮಳೆಯು ಭೂಮಿಯ ಮೇಲೆ ಬೀಳುವುದರಿಂದ ಮನುಷ್ಯರಿಗೆ ಸುಖದಾಯಕವಾದ ಅನ್ನವು ಹುಟ್ಟುತ್ತದೆ. ಅನ್ನವೇ

ಜೀವಕೋಟಿಗೆ ಪ್ರಾಣವಾಗಿದೆ. (ಮನುಷ್ಯರು ಅನ್ನಗತಪ್ರಾಣರು.) ಈ ವಿಷಯವನ್ನು ವೇದಗಳೇ ಉದ್ಘೋಷಿಸಿವೆ.

ಅಥಾಭ್ರೇಷು ನಿಗೂಢಶ್ಚ ರಶ್ಮಿಭಿಃ ಪರಿವಾರಿತಃ ।
ಸಪ್ತದ್ವೀಪಾನಿಮಾನ್ಬ್ರಹ್ಮನ್ವರ್ಷೇಣಾಭಿವರ್ಷತಿ ॥೨೩॥

ತನ್ನ ಕಿರಣಗಳಿಂದ ಪರಿವೃತನಾದ ಸೂರ್ಯನು ಮೋಡಗಳಲ್ಲಿ ಅಡಗಿಕೊಂಡು ಭೂಮಂಡಲದಲ್ಲಿರುವ ಈ ಸಪ್ತದ್ವೀಪಗಳನ್ನೂ ಮಳೆಯಿಂದ ತುಂಬುತ್ತಾನೆ.

ತತಸ್ತದೌಷಧೀನಾಂ ಚ ವೀರುಧಾಂ ಪುಷ್ಪಪತ್ರಜಮ್ ।
ಸರ್ವಂ ವರ್ಷಾಭಿನಿರ್ವೃತ್ತಮನ್ನಂ ಸಂಭವತಿ ಪ್ರಭೋ ॥೨೪॥

ಹೀಗೆ ಭೂಮಂಡಲದ ಮೇಲೆ ಸೂರ್ಯನು ಮಳೆಗರೆಯುವುದರಿಂದಲೇ ನಾನಾ ಪ್ರಕಾರವಾದ ಓಷಧಿಗಳೂ, ಲತೆಗಳೂ, ಪತ್ರ-ಪುಷ್ಪಗಳೂ, ಹುಲ್ಲುಗಳೂ ಬೆಳೆಯುತ್ತವೆ. ಪ್ರಭುವೇ! ಪ್ರಾಯಶಃ ಎಲ್ಲ ಪ್ರಕಾರವಾದ ಅನ್ನಗಳೂ ಮಳೆಯಿಂದಲೇ ಉತ್ಪನ್ನವಾಗುತ್ತವೆ.

ಜಾತಕರ್ಮಾಣಿ ಸರ್ವಾಣಿ ವ್ರತೋಪನಯನಾನಿ ಚ ।
ಗೋದಾನಾನಿ ವಿವಾಹಾಶ್ಚ ತಥಾ ಯಜ್ಞಸಮೃದ್ಧಯಃ ॥೨೫॥

ಶಾಸ್ತ್ರಾಣಿ ದಾನಾನಿ ತಥಾ ಸಂಯೋಗಾ ವಿತ್ತಸಂಚಯಾಃ ।
ಅನ್ನತಃ ಸಮ್ಪ್ರವರ್ತನ್ತೇ ತಥಾ ತ್ವಂ ವೇತ್ಥ ಭಾರ್ಗವ ॥೨೬॥

ಭಾರ್ಗವ! ಜಾತಕರ್ಮ, ವ್ರತ, ಉಪನಯನ, ವಿವಾಹ, ಗೋದಾನ, ಯಜ್ಞ, ಸಮೃದ್ಧಿ, ಶಾಸ್ತ್ರೀಯದಾನ, ಸಂಯೋಗ ಮತ್ತು ಧನಸಂಗ್ರಹ–ಇವೇ ಮೊದಲಾದ ಎಲ್ಲ ಕಾರ್ಯಗಳೂ ಅನ್ನದಿಂದಲೇ ಆಗುತ್ತವೆ.

ರಮಣೀಯಾನಿ ಯಾವನ್ತಿ ಯಾವದಾರಮ್ಭಕಾಣಿ ಚ ।
ಸರ್ವಮನ್ನಾತ್ಪ್ರಭವತಿ ವಿದಿತಂ ಕೀರ್ತಯಾಮಿ ತೇ ॥೨೭॥

ಸುಂದರವಾದ ಪದಾರ್ಥಗಳು ಯಾವುಗಳಿವೆಯೋ, ಉತ್ಪಾದಿಸ

ಬೇಕಾದವಸ್ತುಗಳು ಯಾವುಗಳಿವೆಯೋ – ಅವೆಲ್ಲವೂ ಅನ್ನದಿಂದಲೇ ಹುಟ್ಟುತ್ತವೆ. ವಿಪ್ರಶ್ರೇಷ್ಠನೇ! ನನಗೆ ತಿಳಿದಿದ್ದುದನ್ನು ನಿನಗೆ ಹೇಳಿಬಿಟ್ಟಿದ್ದೇನೆ.

ಸರ್ವಂ ಹಿ ವೇತ್ಥ ವಿಪ್ರ ತ್ವಂ ಯದೇತತ್ಕೀರ್ತಿತಂ ಮಯಾ ।
ಪ್ರಸಾದಯೇ ತ್ವಾಂ ವಿಪ್ರರ್ಷೇ ಕಿಂ ತೇ ಸೂರ್ಯಂ ನಿಪಾತ್ಯ ವೈ ॥

ವಿಪ್ರಶ್ರೇಷ್ಠನೇ! ನಾನು ಹೇಳಿದುದೆಲ್ಲವನ್ನೂ ನೀನು ತಿಳಿದು ಕೊಂಡಿರುವೆ. ನಿನಗೆ ತಿಳಿಯದ ಯಾವ ವಿಷಯವೂ ಇಲ್ಲ. ಪ್ರಸನ್ನ ನಾಗುವಂತೆ ನಿನ್ನನ್ನು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಸೂರ್ಯನನ್ನು ಕೆಳಕ್ಕೆ ಬೀಳಿಸಿಬಿಟ್ಟರೆ ನಿನಗಾಗುವ ಪ್ರಯೋಜನವಾದರೂ ಏನು? (ಆದುದರಿಂದ ಸೂರ್ಯನನ್ನು ಕೆಳಕ್ಕೆ ಬೀಳಿಸಬೇಕೆನ್ನುವ ನಿನ್ನ ಸಂಕಲ್ಪವನ್ನು ಸಾಕುಮಾಡು.)"

ಿ೯೫ನೆಯ ಅಧ್ಯಾಯವು ಮುಗಿಯಿತು.

೯೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಛತ್ರಿ ಮತ್ತು ಪಾದರಕ್ಷೆಗಳ ಉತ್ಪತ್ತಿ ಮತ್ತು ಅವುಗಳ ದಾನದ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಏವಂ ಪ್ರಯಾಚತಿ ತದಾ ಭಾಸ್ಕರೇ ಮುನಿಸತ್ತಮಃ ।
ಜಮದಗ್ನಿರ್ಮಹಾತೇಜಾಃ ಕಿಂ ಕಾರ್ಯಂ ಪ್ರತ್ಯಪದ್ಯತ ॥೧॥

"ಪಿತಾಮಹನೇ! ಸೂರ್ಯನು ಬ್ರಾಹ್ಮಣನ ವೇಷವನ್ನು ಧರಿಸಿ ಪ್ರಾರ್ಥಿಸಿಕೊಳ್ಳುತ್ತಿದ್ದಾಗ ಮಹಾತೇಜಸ್ವಿಯಾದ, ಮುನಿಶ್ರೇಷ್ಠನಾದ ಜಮದಗ್ನಿಯು ಏನು ಮಾಡಿದನು?"

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಅಗ್ನಿಯ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿದ್ದ, ಮುನಿಶ್ರೇಷ್ಠನಾದ ಜಮದಗ್ನಿಯು–ಬ್ರಾಹ್ಮಣನು ಹಾಗೆ ಯಾಚಿಸುತ್ತಿದ್ದರೂ ಶಾಂತನಾಗಲೇ ಇಲ್ಲ. ಬಳಿಕ ವಿಪ್ರರೂಪಿಯಾಗಿದ್ದ ಸೂರ್ಯನು ಜಮದಗ್ನಿಗೆ

ನಮಸ್ಕಾರಮಾಡಿ ಬದ್ಧಾಂಜಲಿಯಾಗಿ ಪುನಃ ಮಾಧುರ್ಯದಿಂದ ಕೂಡಿದ ಈ ಮಾತನ್ನು ಹೇಳಿದನು:

ಚಲಂ ನಿಮಿತ್ತಂ ವಿಪ್ರರ್ಷೇ ಸದಾ ಸೂರ್ಯಸ್ಯ ಗಚ್ಛತಃ ।
ಕಥಂ ಚಲಂ ಭೇತ್ಸ್ಯಸಿ ತ್ವಂ ಸದಾ ಯಾನ್ತಂ ದಿವಾಕರಮ್ ॥೪॥

"ವಿಪ್ರರ್ಷಿಯೇ! ಸೂರ್ಯನನ್ನು ನೀನು ಬಾಣಗಳಿಂದ ಪ್ರಹರಿಸುವೆನೆಂದು ಹೇಳಿದ್ದೀಯೋ ಸರಿಯೇ. ಆದರೆ ಸೂರ್ಯನು ಸದಾ ಚಲಿಸುತ್ತಲೇ ಇರುವಾಗ ನಿನ್ನ ಲಕ್ಷ್ಯವೂ ಚಂಚಲವಾಗುವುದು. ನಿರಂತರವಾಗಿ ಸಂಚರಿಸುತ್ತಲೇ ಇರುವ ಚಂಚಲನಾದ ಸೂರ್ಯನನ್ನು ನೀನು ಹೇಗೆ ಭೇದಿಸುವೆ?"

ಜಮದಗ್ನಿಃ

ಸ್ಥಿರಂ ಚಾಪಿ ಚಲಂ ಚಾಪಿ ಜಾನೇ ತ್ವಾಂ ಜ್ಞಾನಚಕ್ಷುಷಾ ।
ಅವಶ್ಯಂ ವಿನಯಾಧಾನಂ ಕಾರ್ಯಮದ್ಯ ಮಯಾ ತವ ॥೫॥

"ನನ್ನ ಲಕ್ಷ್ಯವು ಚಂಚಲವಾಗಿರಲಿ ; ಸ್ಥಿರವಾಗಿರಲಿ. ಜ್ಞಾನದೃಷ್ಟಿಯಿಂದ ನೀನು ಸೂರ್ಯನೇ ಎಂಬುದನ್ನು ತಿಳಿದುಕೊಂಡಿದ್ದೇನೆ. ಆದುದರಿಂದ ನಿನ್ನನ್ನು ದಂಡಿಸಿ ವಿನಯಶೀಲನನ್ನಾಗಿ ಮಾಡುವುದು ನನ್ನ ಕರ್ತವ್ಯವೇ ಆಗಿದೆ.

ಮಧ್ಯಾಹ್ನೇ ವೈ ನಿಮೇಷಾರ್ಧಂ ತಿಷ್ಠಸಿ ತ್ವಂ ದಿವಾಕರ ।
ತತ್ರ ಭೇತ್ಸ್ಯಾಮಿ ಸೂರ್ಯಂ ತ್ವಾಂ ನ ಮೇಽತ್ರಾಸ್ತಿ ವಿಚಾರಣಾ ॥೬॥

ದಿವಾಕರನೇ! ಮಧ್ಯಾಹ್ನದ ಸಮಯದಲ್ಲಿ ಅರ್ಧನಿಮಿಷದ ಕಾಲ ನೀನು ಸ್ಥಿರನಾಗಿ ಆಕಾಶದಲ್ಲಿ ನಿಲ್ಲುವೆ. ಆ ಸಮಯದಲ್ಲಿಯೇ ನಿನ್ನನ್ನು ನನ್ನ ಬಾಣಗಳಿಂದ ಭೇದಿಸುತ್ತೇನೆ. ಈ ವಿಷಯವನ್ನು ನಾನು ವಿಚಾರಿಸುವ ಕಾರಣವೇ ಇಲ್ಲ."

ಸೂರ್ಯನು ಹೇಳುತ್ತಾನೆ:

ಅಸಂಶಯಂ ಮಾಂ ವಿಪ್ರರ್ಷೇ ಭೇತ್ಸ್ಯಸೇ ಧನ್ವಿನಾಂ ವರ ।
ಅಪಕಾರಿಣಂ ಮಾಂ ವಿದ್ಧಿ ಭಗವಞ್ಛರಣಾಗತಮ್ ॥೭॥

"ವಿಪ್ರರ್ಷಿಯೇ! ಧನುಷ್ಮಂತರಲ್ಲಿ ಶ್ರೇಷ್ಠನಾದವನೇ! ನೀನು ನನ್ನನ್ನು ಭೇದಿಸಿಯೇ ಭೇದಿಸುವೆ. ಈ ವಿಷಯದಲ್ಲಿ ಸಂಶಯವೇ ಇಲ್ಲ. ಪೂಜ್ಯನೇ! ಯದ್ಯಪಿ ನಾನು ಅಪಕಾರಿಯೇ ಆಗಿದ್ದರೂ ಶರಣಾಗತನಾಗಿ ಬಂದಿರುವೆನೆಂದು ತಿಳಿ."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಸೂರ್ಯನು ಹೀಗೆ ಹೇಳಲಾಗಿ ಜಮದಗ್ನಿಯು ಗಟ್ಟಿಯಾಗಿ ನಕ್ಕು ಹೇಳಿದನು :

ನ ಭೀಃ ಸೂರ್ಯ ತ್ವಯಾ ಕಾರ್ಯಾ ಪ್ರಣಿಪಾತಗತೋಽಹ್ಯಸಿ ॥೮॥

"ಸೂರ್ಯನೇ! ನೀನು ಶರಣಾಗತನಾಗಿರುವೆ. ಆದುದರಿಂದ ಭಯಪಡಬೇಕಾದ ಕಾರಣವಿಲ್ಲ.

ಬ್ರಾಹ್ಮಣೇಷ್ವಾರ್ಜವಂ ಯಚ್ಚ ಸ್ಥೈರ್ಯಂ ಚ ಧರಣೀತಲೇ ।
ಸೌಮ್ಯತಾಂ ಚೈವ ಸೋಮಸ್ಯ ಗಾಮ್ಭೀರ್ಯಂ ವರುಣಸ್ಯ ಚ ॥೯॥

ದೀಪ್ತಿಮಗ್ನೇಃ ಪ್ರಭಾಂ ಮೇರೋಃ ಪ್ರತಾಪಂ ತಪನಸ್ಯ ಚ ।
ಏತಾನ್ಯತಿಕ್ರಮೇದ್ಯೋ ವೈ ಸ ಹನ್ಯಾಚ್ಛರಣಾಗತಮ್ ॥೧೦॥

ಬ್ರಾಹ್ಮಣನಲ್ಲಿ ಯಾವ ಸರಳತೆಯಿದೆಯೋ, ಭೂಮಿಯಲ್ಲಿ ಯಾವ ಸ್ಥಿರತೆಯಿದೆಯೋ, ಚಂದ್ರನಲ್ಲಿ ಯಾವ ಸೌಮ್ಯತೆಯಿದೆಯೋ, ಸಮುದ್ರದಲ್ಲಿ ಯಾವ ಗಾಂಭೀರ್ಯವಿದೆಯೋ, ಅಗ್ನಿಯಲ್ಲಿ ಯಾವ ಪ್ರಕಾಶವಿದೆಯೋ, ಮೇರುವಿನಲ್ಲಿ ಯಾವ ಪ್ರಭೆಯಿದೆಯೋ, ಸೂರ್ಯನಲ್ಲಿ ಯಾವ ತಾಪನವಿದೆಯೋ–ಇವೆಲ್ಲವನ್ನೂ ಉಲ್ಲಂಘಿಸುವವನು (ಇವುಗಳ ಸ್ವಭಾವಗುಣಗಳನ್ನು ಬದಲಾಯಿಸುವೆನೆಂದು ಭಾವಿಸುವವನು) ಶರಣಾಗತನಾಗಿ ಬಂದವನನ್ನು ಸಂಹರಿಸಿಯಾನು.

ಭವೇತ್ಸಗುರುತಲ್ಪೀ ಬ್ರಹ್ಮಹಾ ಚ ಸ ವೈ ಭವೇತ್ ।
ಸುರಾಪಾನಂ ಸ ಕುರ್ಯಾಚ್ಚ ಯೋ ಹನ್ಯಾಚ್ಛರಣಾಗತಮ್ ॥೧೧॥

ಶರಣಾಗತನನ್ನು ಕೊಂದವನು–ಗುರುಪತ್ನೀ ಸಮಾಗಮವನ್ನು

ಮಾಡಿದವನಿಗೆ, ಬ್ರಹ್ಮಹತ್ಯೆಯನ್ನು ಮಾಡಿದವನಿಗೆ, ಸುರಾಪಾನವನ್ನು ಮಾಡಿದವನಿಗೆ ಪ್ರಾಪ್ತವಾಗುವ ಪಾಪಕ್ಕೆ ಗುರಿಯಾಗುವನು.

ಸೂರ್ಯದೇವನೇ! ಈಗ ನೀನು ಮಾಡಿರುವ ಅಪರಾಧಕ್ಕೆ (ಮುಂದೆ ಹೀಗಾಗದಂತೆ) ಸಮಾಧಾನವೊಂದನ್ನು ಯೋಚಿಸು. ನಿನ್ನ ತೀಕ್ಷ್ಣವಾದ ಕಿರಣಗಳಿಂದ ಸುಡುತ್ತಿರುವ ಹಾದಿಯು ಸುಖವಾಗಿ ಸಂಚರಿಸಲು ಯೋಗ್ಯವಾಗಬೇಕು. ಅಂತಹ ಒಂದು ಉಪಾಯವನ್ನು ಸೂಚಿಸು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಭಾರ್ಗವನು ಸೂರ್ಯನಿಗೆ ಹೀಗೆ ಹೇಳಿ ಸುಮ್ಮ ನಾದನು. ಒಡನೆಯೇ ಸೂರ್ಯನು ಜಮದಗ್ನಿಗೆ ಛತ್ರಿಯನ್ನೂ ಮತ್ತು ಪಾದರಕ್ಷೆಗಳನ್ನೂ ಕೊಟ್ಟು ಹೇಳಿದನು:

ಮಹರ್ಷೇ ಶಿರಸ್ತ್ರಾಣಂ ಛತ್ರಂ ಮದ್ರಶ್ಮಿವಾರಣಮ್ ।
ಪ್ರತಿಗೃಹ್ಣೀಷ್ವ ಪದ್ಭ್ಯಾಂ ಚ ತ್ರಾಣಾರ್ಥಂ ಚರ್ಮಪಾದುಕೇ ॥೧೪॥

"ಮಹರ್ಷಿಯೇ ! ನನ್ನ ಕಿರಣಗಳಿಗೆ ತಡೆಯನ್ನುಂಟುಮಾಡುವ ಮತ್ತು ತಲೆಯನ್ನು ರಕ್ಷಿಸುವ ಈ ಛತ್ರಿಯನ್ನೂ–ಕಾಲುಗಳ ರಕ್ಷಣೆಗೋಸ್ಕರ ಚರ್ಮದ ಪಾದುಕೆಗಳನ್ನೂ ಪ್ರತಿಗ್ರಹಿಸು.

ಅದ್ಯಪ್ರಭೃತಿ ಚೈವೇಹ ಲೋಕೇ ಸಂಪ್ರಚರಿಷ್ಯತಿ ।
ಪುಣ್ಯಕೇಷು ಚ ಸರ್ವೇಷು ಪರಮಕ್ಷಯ್ಯಮೇವ ಚ ॥೧೫॥

ಇಂದು ಮೊದಲ್ಗೊಂಡು ಈ ಛತ್ರಿಯೂ ಮತ್ತು ಪಾದರಕ್ಷೆಗಳೂ ಲೋಕದಲ್ಲಿ ಪ್ರಚಲಿತವಾಗುತ್ತವೆ. ಸಕಲವಿಧವಾದ ಪುಣ್ಯಕಾರ್ಯ ಗಳಲ್ಲಿಯೂ ಇವುಗಳ ದಾನವು ಅಕ್ಷಯವಾದ ಫಲವನ್ನು ಕೊಡುತ್ತದೆ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಹೀಗೆ ಛತ್ರಿಯೂ ಮತ್ತು ಪಾದರಕ್ಷೆಗಳೂ ಸೂರ್ಯನಿಂದಲೇ ಪ್ರಚುರಗೊಳಿಸಲ್ಪಟ್ಟಿವೆ. ಈ ವಸ್ತುಗಳನ್ನು ದಾನ ಮಾಡುವುದು ಪುಣ್ಯಕರವೆಂದು ಮೂರು ಲೋಕಗಳಲ್ಲಿಯೂ ಪ್ರಸಿದ್ಧವಾಗಿದೆ.

ಧರ್ಮಜ! ಆದುದರಿಂದ ಬ್ರಾಹ್ಮಣರಿಗೆ ಉತ್ತಮವಾದ ಛತ್ರಿಗಳನ್ನೂ

ಮತ್ತು ಪಾದರಕ್ಷೆಗಳನ್ನೂ ದಾನಮಾಡು. ಆದರಿಂದ ಮಹಾಫಲವು ಲಭಿಸುತ್ತದೆ. ಈ ವಿಷಯದಲ್ಲಿ ನನಗಾವ ಸಂಶಯವೂ ಇಲ್ಲ.



ಛತ್ರಂ ಹಿ ಭರತಶ್ರೇಷ್ಠ ಯಃ ಪ್ರದದ್ಯಾದ್ದ್ವಿಜಾತಯೇ ।
ಶುಭ್ರಂ ಶತಶಲಾಕಂ ವೈ ಸ ಪ್ರೇತ್ಯ ಸುಖಮೇಧತೇ ॥೧೮॥

ಯಾವ ಮನುಷ್ಯನು ನೂರು ಕಬ್ಬಿಣದ ಕಡ್ಡಿಗಳಿಂದ ಯುಕ್ತವಾದ, ಸುಂದರವಾದ ಛತ್ರಿಯನ್ನು ಬ್ರಾಹ್ಮಣನಿಗೆ ದಾನಮಾಡುವನೋ-ಅವನು ಪರಲೋಕದಲ್ಲಿ ಸುಖವಾಗಿರುತ್ತಾನೆ.

ಸ ಶಕ್ರಲೋಕೇ ವಸತಿ ಪೂಜ್ಯಮಾನೋ ದ್ವಿಜಾತಿಭಿಃ ।
ಅಪ್ಸರೋಭಿಶ್ಚ ಸತತಂ ದೇವೈಶ್ಚ ಭರತರ್ಷಭ ॥೧೯॥

ಭರತಶ್ರೇಷ್ಠನೇ! ಛತ್ರಿಗಳನ್ನು ದಾನಮಾಡುವವನು ಬ್ರಾಹ್ಮಣರಿಂದಲೂ, ಅಪ್ಸರೆಯರಿಂದಲೂ, ದೇವತೆಗಳಿಂದಲೂ ಸತತವೂ ಸಮ್ಮಾನಿಸಲ್ಪಡುತ್ತಾ ಇಂದ್ರಲೋಕದಲ್ಲಿ ವಾಸಮಾಡುತ್ತಾನೆ.

ದಹ್ಯಮಾನಾಯ ವಿಪ್ರಾಯ ಯಃ ಪ್ರಯಚ್ಛತ್ಯುಪಾನಹೌ ।
ಸ್ನಾತಕಾಯ ಮಹಾಬಾಹೋ ಸಂಶಿತಾಯ ದ್ವಿಜಾತಯೇ ॥೨೦॥

ಸೋಽಪಿ ಲೋಕಾನವಾಪ್ನೋತಿ ದೈವತೈರಭಿಪೂಜಿತಾನ್ ।
ಗೋಲೋಕೇ ಸ ಮುದಾ ಯುಕ್ತೋ ವಸತಿ ಪ್ರೇತ್ಯ ಭಾರತ ॥೨೧॥

ಮಹಾಬಾಹುವೇ! ಯುಧಿಷ್ಠಿರ! ಸ್ನಾತಕನಾದ, ಕಠೋರವ್ರತನಿಷ್ಠನಾದ, ತೀಕ್ಷ್ಣವಾದ ಸೂರ್ಯನ ಕಿರಣಗಳಿಂದ ದಹಿಸಲ್ಪಡುತ್ತಿರುವ ಬ್ರಾಹ್ಮಣನಿಗೆ ಯಾವನು ಪಾದರಕ್ಷೆಗಳನ್ನು ಕೊಡುವನೋ–ಅವನೂ ಕೂಡ ಅವಸಾನಾನಂತರದಲ್ಲಿ ದೇವತೆಗಳಿಂದಲೂ ಪೂಜಿಸಲ್ಪಡುವ ಲೋಕಗಳಿಗೆ ಹೋಗುತ್ತಾನೆ. ಅಲ್ಲದೇ ಗೋಲೋಕಗಳಲ್ಲಿಯೂ ಸಂತೋಷಭರಿತನಾಗಿ ವಾಸಮಾಡುತ್ತಾನೆ.

ಭರತಶ್ರೇಷ್ಠನೇ! ಹೀಗೆ ನಾನು ನಿನಗೆ ಛತ್ರಿ ಮತ್ತು ಪಾದರಕ್ಷೆಗಳ ದಾನದ ಫಲವನ್ನು ಸಂಗ್ರಹವಾಗಿ ಹೇಳಿರುವೆನು.”

೯೬ನೆಯ ಅಧ್ಯಾಯವು ಮುಗಿಯಿತು.

೯೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೃಹಸ್ಥಧರ್ಮದ ಮತ್ತು ಪಂಚಯಜ್ಞಗಳ ವಿಷಯದಲ್ಲಿ ಶ್ರೀಕೃಷ್ಣ-ಪೃಥ್ವೀದೇವಿಯರ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಗಾರ್ಹಸ್ಥ್ಯಂ ಧರ್ಮಮಖಿಲಂ ಪ್ರಬ್ರೂಹಿ ಭರತರ್ಷಭ ।
ಋದ್ಧಿಮಾಪ್ನೋತಿ ಕಂ ಕೃತ್ವಾ ಮನುಷ್ಯ ಇಹ ಪಾರ್ಥಿವ ॥೧॥

"ಪಿತಾಮಹನೇ! ಭರತಶ್ರೇಷ್ಠನೇ! ಈಗ ನನಗೆ ಗೃಹಸ್ಥಾಶ್ರಮದ ಸಕಲಧರ್ಮಗಳನ್ನೂ ಹೇಳು. ಮನುಷ್ಯನು ಈ ಲೋಕದಲ್ಲಿ ಯಾವ ಕಾರ್ಯವನ್ನು ಮಾಡುವುದರಿಂದ ಸಮೃದ್ಧಿಯನ್ನು ಹೊಂದುತ್ತಾನೆ?"

ಭೀಷ್ಮನು ಹೇಳುತ್ತಾನೆ :

"ಜನಾಧಿಪನೇ! ಈ ವಿಷಯದಲ್ಲಿ ಹಿಂದೆ ವಾಸುದೇವನಿಗೂ, ಭೂದೇವಿಗೂ ನಡೆದ ಪುರಾತನವಾದ ಸಂವಾದವನ್ನು ಹೇಳುತ್ತೇನೆ.

ಪ್ರತಾಪಶಾಲಿಯಾದ ವಾಸುದೇವನೊಮ್ಮೆ ಭೂದೇವಿಯನ್ನು ಸ್ತುತಿಸಿ ಅವಳು ಪ್ರತ್ಯಕ್ಷಳಾದನಂತರ ನೀನೀಗ ಯಾವ ಪ್ರಶ್ನೆಯನ್ನು ಕೇಳಿರುವೆಯೋ ಅದೇ ಪ್ರಶ್ನೆಯನ್ನೇ ಭೂದೇವಿಯನ್ನು ಕೇಳಿದನು:

ಗಾರ್ಹಸ್ಥ್ಯಂ ಧರ್ಮಮಾಶ್ರಿತ್ಯ ಮಯಾ ವಾ ಮದ್ವಿಧೇನ ವಾ ।
ಕಿಮವಶ್ಯಂ ಧರೇ ಕಾರ್ಯಂ ಕಿಂ ವಾ ಕೃತ್ವಾ ಕೃತಂ ಭವೇತ್ ॥೪॥

"ವಸುಂಧರೆಯೇ! ಗೃಹಸ್ಥಾಶ್ರಮಿಯಾಗಿರುವ ನಾನಾಗಲೀ ಅಥವಾ ನನ್ನಂತೆಯೇ ಗೃಹಸ್ಥಾಶ್ರಮಿಗಳಾದ ಇತರರೇ ಆಗಲೀ–ಅವಶ್ಯಕವಾಗಿ ಮಾಡಬೇಕಾದ ಕಾರ್ಯವೇನು? ಯಾವ ಕಾರ್ಯವನ್ನು ಮಾಡಿದರೆ ಗೃಹಸ್ಥನು ಕೃತಕೃತ್ಯನಾಗುತ್ತಾನೆ?"

ಪೃಥ್ವಿಯು ಹೇಳುತ್ತಾಳೆ:

ಋಷಯಃ ಪಿತರೋ ದೇವಾ ಮನುಷ್ಯಾಶ್ಚೈವ ಮಾಧವ ।
ಇಜ್ಯಾಶ್ಚೈವಾರ್ಚನೀಯಾಶ್ಚ ಯಥಾ ಚೈವ ನಿಬೋಧ ಮೇ ॥೫॥

"ಮಾಧವನೇ! ಗೃಹಸ್ಥನು ಯಾವಾಗಲೂ ದೇವತೆಗಳನ್ನೂ, ಪಿತೃ

ಗಳನ್ನೂ, ಋಷಿಗಳನ್ನೂ ಮತ್ತು ಅತಿಥಿಗಳನ್ನೂ ಪೂಜಿಸಬೇಕು ಮತ್ತು ಸತ್ಕರಿಸಬೇಕು. ಹೇಗೆ ಸತ್ಕರಿಸಬೇಕೆಂಬುದನ್ನು ಹೇಳುವೆನು; ಕೇಳು:



ಸದಾ ಯಜ್ಞೇನ ದೇವಾಶ್ಚ ಸದಾತಿಥ್ಯೇನ ಮಾನುಷಾಃ ।
ಛನ್ದತಶ್ಚ ಯಥಾ ನಿತ್ಯಮರ್ಹಾನ್ಭುಞ್ಜೀತ ನಿತ್ಯಶಃ ॥೬॥

ಸತತವಾಗಿ ಯಜ್ಞವನ್ನು ಮಾಡುವುದರ ಮೂಲಕ ದೇವತೆಗಳನ್ನು ಆರಾಧಿಸಬೇಕು. ಸತತವಾಗಿ ಅತಿಥಿಸತ್ಕಾರಮಾಡುತ್ತಾ ಮನುಷ್ಯರನ್ನು ಪೂಜಿಸಬೇಕು. ಇಚ್ಛಾನುಸಾರವಾಗಿ ನಿತ್ಯವೂ ಯೋಗ್ಯರಾದ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು.

ತೇನ ಹ್ಯೃಷಿಗಣಾಃ ಪ್ರೀತಾ ಭವನ್ತಿ ಮಧುಸೂದನ ।
ನಿತ್ಯಮಗ್ನಿಂ ಪರಿಚರೇದಭುಕ್ತ್ವಾ ಬಲಿಕರ್ಮ ಚ ॥೭॥

ಕುರ್ಯಾತ್ತಥೈವ ದೇವಾ ವೈ ಪ್ರೀಯನ್ತೇ ಮಧುಸೂದನ ।
ಕುರ್ಯಾದಹರಹಃ ಶ್ರಾದ್ಧಮನ್ನಾದ್ಯೇನೋದಕೇನ ಚ ।
ಪಯೋ ಮೂಲಫಲೈರ್ವಾಪಿ ಪಿತೄಣಾಂ ಪ್ರೀತಿಮಾಹರನ್ ॥೮॥

ಮಧುಸೂದನನೇ! ಹೀಗೆ ಮಾಡುವುದರಿಂದ ಋಷಿಗಳು ಪ್ರಸನ್ನರಾಗುತ್ತಾರೆ. ಪ್ರತಿದಿನವೂ ಭೋಜನಕ್ಕೆ ಮೊದಲು ಅಗ್ನಿಹೋತ್ರವನ್ನು ಮಾಡಿ ವೈಶ್ವದೇವಬಲಿಹರಣಗಳನ್ನು ಕೊಡಬೇಕು. ಅದರಿಂದ ದೇವತೆಗಳು ಸಂತುಷ್ಟರಾಗುತ್ತಾರೆ. ಪಿತೃಗಳ ಪ್ರಸನ್ನತೆಗಾಗಿ ಪ್ರತಿನಿತ್ಯವೂ ಅನ್ನ, ಜಲ ಅಥವಾ ಹಾಲು, ಗೆಡ್ಡೆ-ಗೆಣಸುಗಳು ಮತ್ತು ಹಣ್ಣುಗಳು–ಇವುಗಳ ಮೂಲಕವಾಗಿಯಾದರೂ ಶ್ರಾದ್ಧವನ್ನು ಮಾಡಬೇಕು.

ಸಿದ್ಧಾನ್ನಾದ್ವೈಶ್ವದೇವಂ ವೈ ಕುರ್ಯಾದಗ್ನೌ ಯಥಾವಿಧಿ ॥೯॥

ಅಗ್ನಿಯಲ್ಲಿ ಸಿದ್ಧಪಡಿಸಿದ ಅನ್ನದಿಂದ (ಸ್ಥಾಲೀಪಾಕದಿಂದ) ಯಥಾವಿಧಿಯಾಗಿ ವೈಶ್ವದೇವವನ್ನು ಅಗ್ನಿಯಲ್ಲಿ ಮಾಡಬೇಕು.

ಅಗ್ನೀಷೋಮಂ ವೈಶ್ವದೇವಂ ಧಾನ್ವನ್ತರ್ಯಮನನ್ತರಮ್ ।
ಪ್ರಜಾನಾಂ ಪತಯೇ ಚೈವ ಪೃಥಗ್ಘೋಮೋ ವಿಧೀಯತೇ ॥೧೦॥

ಮೊದಲು ಅಗ್ನೀಷೋಮರಿಗೂ ಅನಂತರ ವಿಶ್ವೇದೇವತೆಗಳಿಗೂ, ಧನ್ವಂತರಿಗೂ ಮತ್ತು ಕಡೆಯಲ್ಲಿ ಪ್ರಜಾಪತಿಗೂ ಪ್ರತ್ಯೇಕ-ಪ್ರತ್ಯೇಕವಾಗಿ ಹೋಮಮಾಡಬೇಕೆಂಬ ವಿಧಿನಿಯಮವಿದೆ.

ತಥೈವ ಚಾನುಪೂರ್ವ್ಯೇಣ ಬಲಿಕರ್ಮ ಪ್ರಯೋಜಯೇತ್ ।
ದಕ್ಷಿಣಾಯಾಂ ಯಮಾಯೇತಿ ಪ್ರತೀಚ್ಯಾಂ ವರುಣಾಯ ಚ ॥೧೧॥
ಸೋಮಾಯ ಚಾಪ್ಯುದೀಚ್ಯಾಂ ವೈ ವಾಸ್ತುಮಧ್ಯೇ ಪ್ರಜಾಪತೇಃ ।
ಧನ್ವನ್ತರೇಃ ಪ್ರಾಗುದೀಚ್ಯಾಂ ಪ್ರಾಚ್ಯಾಂ ಶಕ್ರಾಯ ಮಾಧವ ॥೧೨॥

ಮಾಧವನೇ! ಹೋಮಮಾಡಿದ ರೀತಿಯಲ್ಲಿಯೇ ಕ್ರಮವಾಗಿ ಬಲಿಕರ್ಮವನ್ನೂ ಮಾಡಬೇಕು. ದಕ್ಷಿಣದಿಕ್ಕಿನಲ್ಲಿ ಯಮನಿಗೂ, ಪಶ್ಚಿಮ

ದಿಕ್ಕಿನಲ್ಲಿ ವರುಣನಿಗೂ, ಉತ್ತರದಿಕ್ಕಿನಲ್ಲಿ ಸೋಮನಿಗೂ, ವಾಸ್ತುವಿನ (ಮನೆಯ) ಮಧ್ಯಭಾಗದಲ್ಲಿ ಪ್ರಜಾಪತಿಗೂ, ಈಶಾನ್ಯದಿಕ್ಕಿನಲ್ಲಿ ಧನ್ವಂತರಿಗೂ ಮತ್ತು ಪೂರ್ವದಿಕ್ಕಿನಲ್ಲಿ ಇಂದ್ರನಿಗೂ ಬಲಿಯನ್ನು ಸಮರ್ಪಿಸಬೇಕು.

ಮನುಷ್ಯೇಭ್ಯ ಇತಿ ಪ್ರಾಹುರ್ಬಲಿಂ ದ್ವಾರಿ ಗೃಹಸ್ಯ ವೈ ।
ಮರುದ್ಭ್ಯೋ ದೈವತೇಭ್ಯಶ್ಚ ಬಲಿಮನ್ತರ್ಗೃಹೇ ಹರೇತ್ ॥೧೩॥

ಮನೆಯ ಬಾಗಿಲಿನಲ್ಲಿ ಸನಕಾದಿ ಮನುಷ್ಯರಿಗೆ ಬಲಿಯನ್ನು ಹಾಕಬೇಕೆಂದು ಹೇಳುತ್ತಾರೆ. ಮರುದ್ಗಣಗಳಿಗೂ ಮತ್ತು ದೇವತೆಗಳಿಗೂ ಮನೆಯ ಮಧ್ಯಭಾಗದಲ್ಲಿ ಬಲಿಯನ್ನು ಸಮರ್ಪಿಸಬೇಕು.

ತಥೈವ ವಿಶ್ವೇದೇವೇಭ್ಯೋ ಬಲಿಮಾಕಾಶತೋ ಹರೇತ್ ।
ನಿಶಾಚರೇಭ್ಯೋ ಭೂತೇಭ್ಯೋ ಬಲಿಂ ನಕ್ತಂ ತಥಾ ಹರೇತ್ ॥೧೪॥

ವಿಶ್ವೇದೇವತೆಗಳಿಗೆ ಬಲಿಯನ್ನು ಆಕಾಶದಲ್ಲಿ ಹಾಕಬೇಕು. (ಆಕಾಶದ ಕಡೆಗೆ ಸಮರ್ಪಿಸಬೇಕು.) ನಿಶಾಚರರಾದ ಭೂತಗಳಿಗೆ ರಾತ್ರಿಯಲ್ಲಿ ಬಲಿಯನ್ನು ಹಾಕಬೇಕು.

ಏವಂ ಕೃತ್ವಾ ಬಲಿಂ ಸಮ್ಯಗ್ದದ್ಯಾದ್ಭಿಕ್ಷಾಂ ದ್ವಿಜಾಯ ವೈ ।
ಅಲಾಭೇ ಬ್ರಾಹ್ಮಣಸ್ಯಾಗ್ನಾವಗ್ರಮುದ್ಧೃತ್ಯ ನಿಕ್ಷಿಪೇತ್ ॥೧೫॥

ಹೀಗೆ ಎಲ್ಲ ದೇವತೆಗಳಿಗೂ ಬಲಿಯನ್ನು ಸಮರ್ಪಿಸಿ ಅನಂತರ ಬ್ರಾಹ್ಮಣನಿಗೆ ವಿಧಿಪೂರ್ವಕವಾಗಿ ಭಿಕ್ಷೆಯನ್ನು ನೀಡಬೇಕು. (ಭೋಜನ ಮಾಡಿಸಬೇಕು.) ಬ್ರಾಹ್ಮಣನು ಸಿಕ್ಕದಿದ್ದರೆ ಅನ್ನದಲ್ಲಿ ಅಗ್ರಗ್ರಾಸವನ್ನು (ಮೊದಲ ನಾಲ್ಕು ತುತ್ತುಗಳನ್ನು) ಅಗ್ನಿಯಲ್ಲಿ ಹೋಮಮಾಡಬೇಕು.

ಯದಾ ಶ್ರಾದ್ಧಂ ಪಿತೃಭ್ಯೋಽಪಿ ದಾತುಮಿಚ್ಛೇತ ಮಾನವಃ ।
ತದಾ ಪಶ್ಚಾತ್ಪ್ರಕುರ್ವೀತ ನಿವೃತ್ತೇ ಶ್ರಾದ್ಧಕರ್ಮಣಿ ॥೧೬॥
ಪಿತೄನ್ಸಂತರ್ಪಯಿತ್ವಾ ತು ಬಲಿಂ ಕುರ್ಯಾದ್ವಿಧಾನತಃ ।
ವೈಶ್ವದೇವಂ ತತಃ ಕುರ್ಯಾತ್ಪಶ್ಚಾದ್ಬ್ರಾಹ್ಮಣವಾಚನಮ್ ॥೧೭॥

ಗೃಹಸ್ಥನು ಪಿತೃಗಳಿಗೆ ಶ್ರಾದ್ಧವನ್ನು ಮಾಡಲು ಇಚ್ಛಿಸಿದ ದಿನ ಮೊದಲು ಶ್ರಾದ್ಧಕರ್ಮವನ್ನು ಮುಗಿಸಬೇಕು. ಶ್ರಾದ್ಧಮಾಡುವುದರಿಂದ ಪಿತೃಗಳನ್ನು

ತೃಪ್ತಿಪಡಿಸಿದನಂತರ ವಿಧಿಪೂರ್ವಕವಾಗಿ ವೈಶ್ವದೇವ-ಬಲಿಹರಣಗಳನ್ನು ಕೊಡಬೇಕು. ಕಡೆಯಲ್ಲಿ ಸತ್ಕಾರಪೂರ್ವಕವಾಗಿ ಬ್ರಾಹ್ಮಣರಿಗೆ ಭೋಜನಮಾಡಿಸಿ ಅವರಿಂದ ಸ್ವಸ್ತಿವಾಚನವನ್ನು ಮಾಡಿಸಬೇಕು.

ತತೋಽನ್ನೇನ ವಿಶೇಷೇಣ ಭೋಜಯೇದತಿಥೀನಪಿ ।
ಅರ್ಚಾಪೂರ್ವಂ ಮಹಾರಾಜ ತತಃ ಪ್ರೀಣಾತಿ ಮಾನವಾನ್ ॥೧೮॥

ಅನಂತರ ವಿಶೇಷವಾದ ಅನ್ನದಿಂದ (ಪ್ರತ್ಯೇಕವಾಗಿ ಮಾಡಿದ ಅನ್ನದಿಂದ) ಅತಿಥಿಗಳಿಗೂ ಸಮ್ಮಾನಪೂರ್ವಕವಾಗಿ ಭೋಜನಮಾಡಿಸ ಬೇಕು. ಹೀಗೆ ಮಾಡುವುದರಿಂದ ಗೃಹಸ್ಥನು ಮನುಷ್ಯರನ್ನೂ ಸಂತುಷ್ಟಿ ಗೊಳಿಸಿದಂತಾಗುತ್ತದೆ.

ಅನಿತ್ಯಂ ಹಿ ಸ್ಥಿತೋ ಯಸ್ಮಾತ್ತಸ್ಮಾದತಿಥಿರುಚ್ಯತೇ ।
ಆಚಾರ್ಯಸ್ಯ ಪಿತುಶ್ಚೈವ ಸಖ್ಯುರಾಪ್ತಸ್ಯ ಚಾತಿಥೇಃ ॥೧೯॥
ಇದಮಸ್ತಿ ಗೃಹೇ ಮಹ್ಯಮಿತಿ ನಿತ್ಯಂ ನಿವೇದಯೇತ್ ।
ತೇ ಯದ್ವದೇಯುಸ್ತತ್ಕುರ್ಯಾದಿತಿ ಧರ್ಮೋ ವಿಧೀಯತೇ ॥೨೦॥

ಯಾವನು ನಿತ್ಯವೂ ಸ್ಥಿರನಾಗಿ ಒಂದೇಕಡೆಯಲ್ಲಿರುವುದಿಲ್ಲವೋ–ಅವನನ್ನು ಅತಿಥಿಯೆಂದು ಕರೆಯುತ್ತಾರೆ. ಗೃಹಸ್ಥನಾದವನು ಆಚಾರ್ಯನಿಗೂ, ತಂದೆಗೂ, ಆಪ್ತಮಿತ್ರನಿಗೂ, ಅತಿಥಿಗೂ–'ಇಂತಹ ವಸ್ತುವು ನನ್ನಲ್ಲಿದೆ. ಇದನ್ನು ಸ್ವೀಕರಿಸಿರಿ'–ಎಂದು ಪ್ರತಿನಿತ್ಯವೂ ನಿವೇದಿಸಿಕೊಳ್ಳಬೇಕು. ಆಚಾರ್ಯನೇ ಮೊದಲಾದವರು ಆಜ್ಞೆಮಾಡಿದಂತೆ ನಡೆದುಕೊಳ್ಳಬೇಕು. (ಅವರು ಹೇಳಿದಂತೆ ಅಡಿಗೆ ಮೊದಲಾದುವುಗಳನ್ನು ಮಾಡಿಸಬೇಕು.) ಧರ್ಮವು ಹೀಗೆ ವಿಧಿಸುತ್ತದೆ.

ಗೃಹಸ್ಥಃ ಪುರುಷಃ ಕೃಷ್ಣ ಶಿಷ್ಟಾಶೀ ಚ ಸದಾ ಭವೇತ್ ।
ರಾಜರ್ತ್ವಿಜಂ ಸ್ನಾತಕಂ ಚ ಗುರುಂ ಶ್ವಶುರಮೇವ ಚ ।
ಅರ್ಚಯೇನ್ಮಧುಪರ್ಕೇಣ ಪರಿಸಂವತ್ಸರೋಷಿತಾನ್ ॥೨೧॥

ಗೃಹಸ್ಥನು ಯಾವಾಗಲೂ ಯಜ್ಞಶಿಷ್ಟವಾದ ಅನ್ನವನ್ನೇ ಭೋಜನ ಮಾಡಬೇಕು. ರಾಜರು, ಋತ್ವಿಕರು, ಸ್ನಾತಕರು, ಗುರುಗಳು ಮತ್ತು

ಹೆಣ್ಣುಕೊಟ್ಟ ಮಾವ–ಇವರು ಒಂದು ವರ್ಷವು ಕಳೆದನಂತರ ಮನೆಗೆ ಆಗಮಿಸಿದರೆ ಅವರಿಗೆ ಮಧುಪರ್ಕವನ್ನಿತ್ತು ಸತ್ಕರಿಸಬೇಕು.

ಶ್ವಭ್ಯಶ್ಚ ಶ್ವಪಚೇಭ್ಯಶ್ಚ ವಯೋಭ್ಯಶ್ಚಾವಪೇದ್ಭುವಿ ।
ವೈಶ್ವದೇವಂ ಹಿ ನಾಮೈತತ್ಸಾಯಂ ಪ್ರಾತರ್ವಿಧೀಯತೇ ॥೨೨॥

ನಾಯಿಗಳ ಸಲುವಾಗಿ, ಚಾಂಡಾಲರ ಸಲುವಾಗಿ ಮತ್ತು ಪಕ್ಷಿಗಳ ಸಲುವಾಗಿ ಭೂಮಿಯಲ್ಲಿ ಅನ್ನವನ್ನು ಹಾಕಬೇಕು. ಈ ಕರ್ಮಕ್ಕೆ ವೈಶ್ವದೇವ–ಎಂದು ಹೆಸರು. ಈ ಕರ್ಮವನ್ನು ಸಾಯಂಕಾಲ ಮತ್ತು ಪ್ರಾತಃಕಾಲಗಳಲ್ಲಿ ಅನುಷ್ಠಾನಮಾಡಬೇಕು.

ಏತಾಂಸ್ತು ಧರ್ಮಾನ್ಗಾರ್ಹಸ್ಥ್ಯಾನ್ಯಃ ಕುರ್ಯಾದನಸೂಯಕಃ ।
ಸ ಇಹರ್ಷಿವರಾನ್ಪ್ರಾಪ್ಯ ಪ್ರೇತ್ಯಲೋಕೇ ಮಹೀಯತೇ ॥೨೩॥

ದೋಷದೃಷ್ಟಿಯಿಲ್ಲದೇ ಈ ಗೃಹಸ್ಥಧರ್ಮಗಳನ್ನು ಪರಿಪಾಲಿಸುವವನು ಈ ಲೋಕದಲ್ಲಿ ಋಷಿ-ಮಹರ್ಷಿಗಳಿಂದ ವರವನ್ನು ಪಡೆದು ಅವಸಾನಾನಂತರದಲ್ಲಿ ಪುಣ್ಯಲೋಕದಲ್ಲಿ ಸಮ್ಮಾನಿತನಾಗುತ್ತಾನೆ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಭೂದೇವಿಯು ಹೇಳಿದ ಗೃಹಸ್ಥಧರ್ಮವನ್ನು ಕೇಳಿ ಪ್ರತಾಪಶಾಲಿಯಾದ ವಾಸುದೇವನೂ ಹಾಗೆಯೇ ಮಾಡಿದನು. ನೀನೂ ಕೂಡ ಗೃಹಸ್ಥಧರ್ಮವನ್ನಾಚರಿಸು. ವೈಶ್ವದೇವಾದಿ ಕರ್ಮಗಳನ್ನು ಯಥಾವಿಧಿಯಾಗಿ ಮಾಡು. ಗೃಹಸ್ಥಧರ್ಮವನ್ನು ಯಥಾವಿಧಿಯಾಗಿ ಪರಿಪಾಲಿಸುತ್ತಿದ್ದರೆ ಈ ಲೋಕದಲ್ಲಿ ಯಶಸ್ಸನ್ನು ಪಡೆದು ಅವಸಾನಾನಂತರದಲ್ಲಿ ಸ್ವರ್ಗವನ್ನು ಹೊಂದುವೆ."

೯೭ನೆಯ ಅಧ್ಯಾಯವು ಮುಗಿಯಿತು.

೯೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ತಪಸ್ವಿಯಾದ ಸುವರ್ಣ ಮತ್ತು ಮನುಗಳ ಸಂವಾದಃ ಪುಷ್ಪ-ಧೂಪ-ದೀಪ ಮತ್ತು ಉಪಹಾರಗಳ ದಾನದ ಮಹಿಮೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಆಲೋಕದಾನಂ ನಾಮ್ನೈತತ್ಕೀದೃಶಂ ಭರತರ್ಷಭ ।
ಕಥಮೇತತ್ಸಮುತ್ಪನ್ನಂ ಫಲಂ ವಾ ತದ್ಬ್ರವೀಹಿ ಮೇ ॥೧॥

“ಭರತಶ್ರೇಷ್ಠನೇ! ದೀಪದಾನ ಎಂಬ ಹೆಸರಿನ ಈ ಕರ್ಮವು ಎಂತಹುದು? ಇದು ಪ್ರಾರಂಭವಾದುದು ಹೇಗೆ? ದೀಪದಾನದ ಫಲವೇನು?–ಈ ವಿಷಯವನ್ನು ನನಗೆ ಹೇಳು.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಪ್ರಜಾಪತಿಮನುವಿಗೂ ಮತ್ತು ಸುವರ್ಣನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಅದನ್ನೇ ನಿನಗೂ ಹೇಳುವೆನು; ಕೇಳು. ಸುವರ್ಣನೆಂಬ ಹೆಸರಿನ ತಪಸ್ವಿಯೊಬ್ಬನಿದ್ದನು. ಅವನ ಶರೀರದ ಬಣ್ಣವು ಚಿನ್ನದ ಬಣ್ಣದಂತೆ ಇದ್ದುದರಿಂದ ಸುವರ್ಣನೆಂದೇ ಅವನು ವಿಖ್ಯಾತನಾದನು. ಅವನು ಉತ್ತಮವಾದ ಕುಲ, ಶೀಲ ಮತ್ತು ಗುಣಗಳಿಂದ ಸಂಪನ್ನನಾಗಿದ್ದನು. ಅಧ್ಯಯನ-ಅಧ್ಯಾಪನಗಳಲ್ಲಿಯೂ ಪಾರಂಗತನಾಗಿದ್ದನು. ತನ್ನ ಗುಣಗಳಿಂದ ಸದ್ವಂಶಗಳಲ್ಲಿ ಹುಟ್ಟಿದ್ದ ಅನೇಕ ಶ್ರೇಷ್ಠಪುರುಷರನ್ನೂ ಮೀರಿಸಿದ್ದನು. ಹೀಗೆಯೇ ಇರುತ್ತಿರಲಾಗಿ ಒಮ್ಮೆ ಆ ಸುವರ್ಣಮುನಿಯು ಪ್ರಜಾಪತಿ ಮನುವನ್ನು ನೋಡಿ ಅವನ ಸಮೀಪಕ್ಕೆ ಹೋದನು. ಇಬ್ಬರೂ ಪರಸ್ಪರವಾಗಿ ಕುಶಲಪ್ರಶ್ನೆಗಳನ್ನು ಮಾಡಿದರು. ಬಳಿಕ ಸತ್ಯಸಂಕಲ್ಪರಾದ ಆ ಇಬ್ಬರೂ ಸುವರ್ಣಮಯವಾದ ಮೇರುಪರ್ವತದ ರಮಣೀಯವಾಗಿದ್ದ ಕಲ್ಲು ಬಂಡೆಯಮೇಲೆ ಒಟ್ಟಿಗೆ ಕುಳಿತುಕೊಂಡರು.

ಅಲ್ಲಿ ಅವರು ಬ್ರಹ್ಮರ್ಷಿಗಳ, ದೇವತೆಗಳ, ದೈತ್ಯರ ಮತ್ತು ಪ್ರಾಚೀನ

ರಾದ ಮಹಾತ್ಮರ ನಾನಾವಿಧವಾದ ಕಥಾಪ್ರಸಂಗದಲ್ಲಿ ನಿರತರಾಗಿದ್ದರು. ಮಾತುಕತೆಗಳ ಮಧ್ಯದಲ್ಲಿ ಸುವರ್ಣನು ಸ್ವಾಯಂಭುವಮನುವಿನೊಡನೆ ಹೇಳಿದನು: "ಮನುಪ್ರಜಾಪತಿಯೇ! ಪ್ರಾಣಿಗಳ ಹಿತಕ್ಕಾಗಿ ನೀನು ಈ ನನ್ನ ಪ್ರಶ್ನೆಗೆ ಉತ್ತರಿಸುವ ಕೃಪೆಮಾಡು.

ಸುಮನೋಭಿರ್ಯದೀಜ್ಯನ್ತೇ ದೈವತಾನಿ ಪ್ರಜೇಶ್ವರ ।
ಕಿಮೇತತ್ಕಥಮುತ್ಪನ್ನಂ ಫಲಂ ಯೋಗಂ ಚ ಶಂಸ ಮೇ ॥೯॥

ಹೂವುಗಳಿಂದ ದೇವತೆಗಳನ್ನು ಪೂಜೆಮಾಡುತ್ತಾರೆ. ಪುಷ್ಪವೆಂದರೆ ಯಾವುದು? ಅದು ಹೇಗೆ ಹುಟ್ಟಿತು? ಇದರಿಂದ ಬೇರೆ ಯಾವ ಉಪಯೋಗವಿದೆ?–ಈ ಎಲ್ಲ ವಿಷಯಗಳನ್ನೂ ಹೇಳು."

ಮನುವು ಹೇಳುತ್ತಾನೆ:

"ಸುವರ್ಣಮುನಿಯೇ! ಈ ವಿಷಯದಲ್ಲಿ ಹಿಂದೆ ಶುಕ್ರಾಚಾರ್ಯನಿಗೂ ಮತ್ತು ಬಲಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಮೂರು ಲೋಕಗಳನ್ನೂ ಆಳುತ್ತಿದ್ದ ವಿರೋಚನನ ಮಗನಾದ ಬಲಿಯ ಸಮೀಪಕ್ಕೆ ಒಮ್ಮೆ ಭೃಗುವಂಶತಿಲಕನಾದ ಶುಕ್ರನು ಆಗಮಿಸಿದನು. ಶುಕ್ರನು ತನ್ನ ಬಳಿಗೆ ಬಂದೊಡನೆಯೇ ಪರ್ಯಾಪ್ತವಾಗಿ ದಕ್ಷಿಣೆಯನ್ನು ಕೊಡುವ, ಸುರಾಧಿಪನಾದ ಬಲಿಯು ಮೇಲೆದ್ದು ಭಾರ್ಗವನನ್ನು ಅರ್ಘ್ಯ-ಪಾದ್ಯಾದಿಗಳಿಂದ ವಿಧಿವತ್ತಾಗಿ ಸತ್ಕರಿಸಿ ಅವನು ಕುಳಿತನಂತರ ಸಿಂಹಾಸನದಲ್ಲಿ ಕುಳಿತುಕೊಂಡನು. ನೀನು ಕೇಳಿದ ಈ ಪ್ರಶ್ನೆಯ ಪ್ರಸಂಗವೇ ಅಲ್ಲಿಯೂ ಬಂದಿತು. ಹೂವುಗಳನ್ನೂ, ಧೂಪ-ದೀಪಗಳನ್ನೂ ದಾನಕೊಡುವುದರಿಂದ ಪ್ರಾಪ್ತವಾಗುವ ಫಲವನ್ನು ಕುರಿತು ದೈತ್ಯೇಂದ್ರನು ಶುಕ್ರನನ್ನು ಪ್ರಶ್ನಿಸಿದನು:

ಸುಮನೋ ಧೂಪದೀಪಾನಾಂ ಕಿಂ ಫಲಂ ಬ್ರಹ್ಮಸತ್ತಮ ।
ಪ್ರದಾನಸ್ಯ ದ್ವಿಜಶ್ರೇಷ್ಠ ತದ್ಭವಾನ್ವಕ್ತುಮರ್ಹತಿ ॥೧೫॥

"ದ್ವಿಜಶ್ರೇಷ್ಠನೇ! ಬ್ರಹ್ಮವಿದರಲ್ಲಿ ಶ್ರೇಷ್ಠನಾದವನೇ! ಹೂವುಗಳನ್ನೂ, ಧೂಪ-ದೀಪಗಳನ್ನೂ ದಾನಮಾಡುವುದರಿಂದ ಯಾವ ಫಲವು ಲಭಿಸುತ್ತದೆ? ಇದನ್ನು ಹೇಳುವ ಕೃಪೆಮಾಡು."

ಶುಕ್ರನು ಹೇಳುತ್ತಾನೆ:

"ದೈತ್ಯೇಂದ್ರನೇ! ಮೊದಲು ತಪಸ್ಸು ಹುಟ್ಟಿತು. ಅನಂತರ ಧರ್ಮವು ಹುಟ್ಟಿತು. ಆ ಮಧ್ಯದಲ್ಲಿ ಲತೆಗಳೂ ಓಷಧಿಗಳೂ ಹುಟ್ಟಿದುವು. ಭೂಮಂಡಲದಲ್ಲಿ ಅನೇಕಪ್ರಕಾರವಾದ ಸೋಮಲತೆಗಳೂ ಹುಟ್ಟಿದುವು. ಅಮೃತ, ವಿಷ ಮತ್ತು ಅನೇಕಜಾತಿಯ ಹುಲ್ಲುಗಳೂ ಹುಟ್ಟಿದುವು.

ಅಮೃತಂ ಮನಸಃ ಪ್ರೀತಂ ಸದ್ಯಸ್ತೃಪ್ತಿಂ ದದಾತಿ ಚ ।
ಮನೋ ಗ್ಲಪಯತೇ ತೀವ್ರಂ ವಿಷಂ ಗನ್ಧೇನ ಸರ್ವಶಃ ॥೧೮॥

ಅಮೃತವು ನೋಡಿದೊಡನೆಯೇ ಮನಸ್ಸಿಗೆ ಸಂತೋಷವನ್ನೂ, ತೃಪ್ತಿಯನ್ನೂ ಉಂಟುಮಾಡುತ್ತದೆ. ಆದರೆ ವಿಷವು ತನ್ನ ವಾಸನೆಯಿಂದ ಮನಸ್ಸಿಗೆ ತೀವ್ರವಾದ ವ್ಯಾಕುಲವನ್ನು ಉಂಟುಮಾಡುತ್ತದೆ.

ಅಮೃತಂ ಮಙ್ಗಲಂ ವಿದ್ಧಿ ಮಹದ್ವಿಷಮಮಙ್ಗಲಮ್ ।
ಓಷಧ್ಯೋ ಹ್ಯಮೃತಂ ಸರ್ವಾ ವಿಷಂ ತೇಜೋಽಗ್ನಿಸಮ್ಭವಮ್ ॥೧೯॥

ಅಮೃತವನ್ನು ಮಂಗಳಕಾರಿಯೆಂದು ತಿಳಿ. ವಿಷವು ಅಮಂಗಳ ಕಾರಿಯು. ಎಲ್ಲ ವಿಧವಾದ ಓಷಧಿಗಳೂ ಅಮೃತಗಳೇ ಆಗಿವೆ. ವಿಷವು ಅಗ್ನಿಯಿಂದ ಹುಟ್ಟಿರುವ ತೇಜಸ್ಸಾಗಿದೆ.

ಮನೋ ಹ್ಲಾದಯತೇ ಯಸ್ಮಾಚ್ಛ್ರಿಯಂ ಚಾಪಿ ದಧಾತಿ ಚ ।
ತಸ್ಮಾತ್ಸುಮನಸಃ ಪ್ರೋಕ್ತಾ ನರೈಃ ಸುಕೃತಕರ್ಮಭಿಃ ॥೨೦॥

ಅಮೃತಮಯವಾದ ಓಷಧಿಲತೆಗಳಿಂದ ಮೂಡಿಬಂದಿರುವ ಪುಷ್ಪಗಳು ನೋಡಿದೊಡನೆಯೇ ಮನಸ್ಸನ್ನು ಆಹ್ಲಾದಗೊಳಿಸುವುದರಿಂದಲೂ ಅವನ್ನು ಮುಡಿದುಕೊಂಡವರಿಗೆ ಶೋಭೆಯನ್ನುಂಟುಮಾಡುವುದರಿಂದಲೂ ಪುಣ್ಯಾತ್ಮರಾದ ಮನುಷ್ಯರು ಅವುಗಳನ್ನು ಸುಮನಸಃ ಎಂದು ಕರೆಯುತ್ತಾರೆ.

ದೇವತಾಭ್ಯಃ ಸುಮನಸೋ ಯೋ ದದಾತಿ ನರಃ ಶುಚಿಃ ।
ತಸ್ಯ ತುಷ್ಯನ್ತಿ ವೈ ದೇವಾಸ್ತುಷ್ಟಾಃ ಪುಷ್ಟಿಂ ದದತ್ಯಪಿ ॥೨೧॥

ಯಾವ ಮನುಷ್ಯನು ಪರಿಶುದ್ಧನಾಗಿ ದೇವತೆಗಳನ್ನು ಪುಷ್ಪಗಳಿಂದ

ಪೂಜಿಸುವನೋ ಅಥವಾ ದೇವತೆಗಳನ್ನುದ್ದೇಶಿಸಿ ಪುಷ್ಪಗಳನ್ನು ದಾನ ಮಾಡುವನೋ–ಅಂತಹವನ ವಿಷಯದಲ್ಲಿ ದೇವತೆಗಳು ತೃಪ್ತರಾಗುತ್ತಾರೆ. ತುಷ್ಟರಾದ ದೇವತೆಗಳು ಪುಷ್ಟಿಯನ್ನೂ ದಯಪಾಲಿಸುತ್ತಾರೆ.

ಯಂ ಯಮುದ್ದಿಶ್ಯ ದೀಯೇರನ್ದೇವಂ ಸುಮನಸಃ ಪ್ರಭೋ ।
ಮಙ್ಗಲಾರ್ಥಂ ಸ ತೇನಾಸ್ಯ ಪ್ರೀತೋ ಭವತಿ ದೈತ್ಯಪ ॥೨೨॥

ದೈತ್ಯರಾಜನೇ! ಪ್ರಭುವೇ! ಯಾವ-ಯಾವ ದೇವತೆಯನ್ನು ಉದ್ದೇಶಿಸಿ ಮನುಷ್ಯರು ಪುಷ್ಪಗಳನ್ನು ಕಲ್ಯಾಣಾರ್ಥವಾಗಿ ದಾನಮಾಡುವರೋ–ಅಂತಹ ಪುಷ್ಪದಾನಿಗಳ ವಿಷಯದಲ್ಲಿ ಆ ದೇವನು ಸುಪ್ರೀತನಾಗುತ್ತಾನೆ.

ಜ್ಞೇಯಾಸ್ತೂಗ್ರಾಶ್ಚ ಸೌಮ್ಯಾಶ್ಚ ತೇಜಸ್ವಿನ್ಯಶ್ಚ ತಾಃ ಪೃಥಕ್ ।
ಓಷಧ್ಯೋ ಬಹುವೀರ್ಯಾ ಹಿ ಬಹುರೂಪಾಸ್ತಥೈವ ಚ ॥೨೩॥

ಓಷಧಿಗಳಲ್ಲಿ ಉಗ್ರವಾದುವು, ಸೌಮ್ಯವಾದುವು, ತೇಜಸ್ಸಿನಿಂದ ಕೂಡಿದುವು, ಬಹುವೀರ್ಯವತ್ತಾದುವು ಮತ್ತು ಬಹುರೂಪವುಳ್ಳವು– ಹೀಗೆ ನಾನಾವಿಧಗಳಿವೆಯೆಂದು ತಿಳಿಯಬೇಕು.

ಯಜ್ಞಿಯಾನಾಂ ವೃಕ್ಷಾಣಾಮಯಜ್ಞೀಯಾನ್ನಿಬೋಧ ಮೇ ।
ಅಸುರಾಣಿ ಚ ಮಾಲ್ಯಾನಿ ದೈವತೇಭ್ಯೋ ಹಿತಾನಿ ಚ ॥೨೪॥

ಯಜ್ಞಕ್ಕೆ ಸಂಬಂಧಿಸಿದ ಮತ್ತು ಯಜ್ಞಕ್ಕೆ ಸಂಬಂಧಿಸದೇ ಇರುವ ವೃಕ್ಷಗಳು ಯಾವುವೆಂಬುದನ್ನು ಹೇಳುವೆನು; ಕೇಳು. ಅಂತೆಯೇ ಅಸುರರಿಗೆ ಹಿತಕರವಾದ ಮತ್ತು ದೇವತೆಗಳಿಗೆ ಹಿತಕರವಾದ ಪುಷ್ಪಗಳು ಯಾವುವೆಂಬುದನ್ನೂ ಹೇಳುತ್ತೇನೆ.

ರಕ್ಷಸಾಮಸುರಾಣಾಂ ಚ ಯಕ್ಷಾಣಾಂ ಚ ತಥಾ ಪ್ರಿಯಾಃ ।
ಮನುಷ್ಯಾಣಾಂ ಪಿತೄಣಾಂ ಚ ಕಾನ್ತಾಯಾಸ್ತ್ವಾನುಪೂರ್ವಶಃ ॥೨೫॥

ರಾಕ್ಷಸ-ಅಸುರ-ಯಕ್ಷ-ಮನುಷ್ಯರಿಗೂ, ಪಿತೃಗಳಿಗೂ ಮತ್ತು ಸ್ತ್ರೀಯರಿಗೂ ಪ್ರಿಯವಾದ ಮತ್ತು ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ ಪುಷ್ಪಗಳು ಯಾವುವೆಂಬುದನ್ನು ಅನುಕ್ರಮವಾಗಿ ಹೇಳುತ್ತೇನೆ.

ವನ್ಯಾ ಗ್ರಾಮ್ಯಾಶ್ಚೇಹ ತಥಾ ಕೃಷ್ಟೋಪ್ತಾಃ ಪರ್ವತಾಶ್ರಯಾಃ ।
ಅಕಣ್ಟಕಾ ಕಣ್ಟಕಿನೋ ಗನ್ಧರೂಪರಸಾನ್ವಿತಾಃ ॥೨೬॥

ಪುಷ್ಪವೃಕ್ಷಗಳಲ್ಲಿ ಕೆಲವು ಕಾಡಿನಲ್ಲಿಯೂ ಬೆಳೆಯುತ್ತವೆ. ಕೆಲವು ಗ್ರಾಮಗಳಲ್ಲಿಯೂ ಬೆಳೆಯುತ್ತವೆ. ಕೆಲವು ಹೂಗಿಡಗಳು ಉತ್ತಿರುವ ಭೂಮಿಯಲ್ಲಿ ಬಿತ್ತನೆಮಾಡಲ್ಪಟ್ಟು ಹುಟ್ಟುತ್ತವೆ. ಮತ್ತೆ ಕೆಲವು ಪರ್ವತಗಳಲ್ಲಿ ತಾವೇ-ತಾವಾಗಿ ಹುಟ್ಟಿ ಬೆಳೆದಿರುತ್ತವೆ. ಕೆಲವು ಮರ ಬಳ್ಳಿಗಳು ಮುಳ್ಳುಗಳಿಂದ ಕೂಡಿರುತ್ತವೆ. ಕೆಲವಕ್ಕೆ ಮುಳ್ಳುಗಳಿರುವುದಿಲ್ಲ. ಆದರೆ ಎಲ್ಲ ವಿಧವಾದ ಪುಷ್ಪಗಳಲ್ಲಿಯೂ ರೂಪ-ರಸ-ಗಂಧಗಳಿರುತ್ತವೆ.

ದ್ವಿವಿಧೋ ಹಿ ಸ್ಮೃತೋ ಗನ್ಧ ಇಷ್ಟೋಽನಿಷ್ಟಶ್ಚ ಪುಷ್ಪಜಃ ।
ಇಷ್ಟಗನ್ಧಾನಿ ದೇವಾನಾಂ ಪುಷ್ಪಾಣೀತಿ ವಿಭಾವಯ ॥೨೭॥

ಹೂವುಗಳ ವಾಸನೆಯಲ್ಲಿಯೂ ಇಷ್ಟವಾದುದು, ಅನಿಷ್ಟವಾದುದು– ಎಂಬ ಎರಡು ವಿಧಗಳಿವೆ. ಇಷ್ಟವಾದ ವಾಸನೆಯುಳ್ಳ ಪುಷ್ಪಗಳು ದೇವತೆಗಳಿಗೆ ಪ್ರಿಯವಾಗುತ್ತವೆ.

ಅಕಣ್ಟಕಾನಾಂ ವೃಕ್ಷಾಣಾಂ ಶ್ವೇತಪ್ರಾಯಾಶ್ಚ ವರ್ಣತಃ ।
ತೇಷಾಂ ಪುಷ್ಪಾಣಿ ದೇವಾನಾಮಿಷ್ಟಾನಿ ಸತತಂ ಪ್ರಭೋ ॥೨೮॥

ಮುಳ್ಳುಗಳಿಲ್ಲದಿರುವ ಲತಾ-ವೃಕ್ಷಗಳಲ್ಲಿರುವ ಹೂಗಳು ಬಿಳುಪಾಗಿದ್ದರೆ ಅಂತಹ ಪುಷ್ಪಗಳು ದೇವತೆಗಳಿಗೆ ಯಾವಾಗಲೂ ಇಷ್ಟವಾಗುತ್ತವೆ.

ಜಲಜಾನಿ ಚ ಮಾಲ್ಯಾನಿ ಪದ್ಮಾದೀನಿ ಚ ಯಾನಿ ವೈ ।
ಗನ್ಧರ್ವನಾಗಯಕ್ಷೇಭ್ಯಸ್ತಾನಿ ದದ್ಯಾದ್ವಿಚಕ್ಷಣಃ ॥೨೯॥

ನೀರಿನಲ್ಲಿ ಹುಟ್ಟುವ ಕಮಲ, ಕನ್ನೈದಿಲೆ ಇವೇ ಮುಂತಾದ ಹೂಗಳನ್ನು ವಿದ್ವಾಂಸನಾದವನು ಗಂಧರ್ವ-ನಾಗ-ಯಕ್ಷರಿಗೆ ಸಮರ್ಪಿಸಬೇಕು. (ಕಮಲವೇ ಮೊದಲಾದ ಪುಷ್ಪಗಳು ಗಂಧರ್ವ-ನಾಗ-ಯಕ್ಷರಿಗೆ ಪ್ರಿಯವಾಗಿರುತ್ತವೆ.)

ಓಷಧ್ಯೋ ರಕ್ತಪುಷ್ಪಾಶ್ಚ ಕಟುಕಾಃ ಕಣ್ಟಕಾನ್ವಿತಾಃ ।
ಶತ್ರೂಣಾಮಭಿಚಾರಾರ್ಥಮಾಥರ್ವಣೇಷು ನಿದರ್ಶಿತಾಃ ॥೩೦॥

ಕಹಿಯಾಗಿರುವ, ಮುಳ್ಳುಗಳಿಂದ ಕೂಡಿರುವ ಓಷಧಿಗಳೂ (ಲತಾ-ವೃಕ್ಷಗಳೂ) ಕೆಂಪು ಹೂವುಗಳೂ ಶತ್ರುಗಳಿಗೆ ಹಿಂಸೆಯನ್ನುಂಟು ಮಾಡುವುದಕ್ಕಾಗಿ ಆಭಿಚಾರಿಕಕ್ರಿಯೆಗಳಲ್ಲಿ ಉಪಯೋಗಿಸಲ್ಪಡತಕ್ಕುವು

ಗಳಿಂದು ಅಥರ್ವಮಂತ್ರಗಳಲ್ಲಿ ಹೇಳಲ್ಪಟ್ಟಿದೆ. (ಮಾಟ-ಮಂತ್ರ ಮುಂತಾದುವುಗಳಿಗೆ ಕೆಂಪುಹೂವುಗಳನ್ನೂ ಮುಳ್ಳಿರುವ ಗಿಡಗಳನ್ನೂ ಉಪಯೋಗಿಸುತ್ತಾರೆ.)

ತೀಕ್ಷ್ಣವೀರ್ಯಾಸ್ತು ಭೂತಾನಾಂ ದುರಾಲಮ್ಭಾಃ ಸಕಣ್ಟಕಾಃ ।
ರಕ್ತಭೂಯಿಷ್ಠವರ್ಣಾಶ್ಚ ಕೃಷ್ಣಾಶ್ಚೈವೋಪಹಾರಯೇತ್ ॥೩೧॥

ಯಾವ ಪುಷ್ಪಗಳು ಸುತ್ತಲೂ ಮುಳ್ಳುಗಳಿಂದ ಆವೃತವಾಗಿರುವುವೋ, ಯಾವ ಹೂಗಳನ್ನು ಸ್ಪರ್ಶಮಾಡಲು ಕೂಡ ಕಷ್ಟಸಾಧ್ಯವೋ, ಕಟುವಾದ ವಾಸನೆಯಿಂದ ಕೂಡಿರುವುವೋ, ರಕ್ತದಂತೆ ಕಡುಗೆಂಪಾದ ಬಣ್ಣದಿಂದ ಕೂಡಿವೆಯೋ–ಅಂತಹ ಪುಷ್ಪಗಳು ಭೂತ-ಪ್ರೇತ-ಪಿಶಾಚಿಗಳಿಗೆ ಯೋಗ್ಯವಾದುವುಗಳು.

ಮನೋ ಹೃದಯನನ್ದಿನ್ಯೋ ವಿಶೇಷಮಧುರಾಶ್ಚ ಯಾಃ ।
ಚಾರುರೂಪಾ ಸುಮನಸೋ ಮಾನುಷಾಣಾಂ ಸ್ಮೃತಾ ವಿಭೋ ॥೩೨॥

ಮನಸ್ಸನ್ನೂ ಹೃದಯವನ್ನೂ ಆನಂದಗೊಳಿಸುವ, ವಿಶೇಷವಾಗಿ ಮಾಧುರ್ಯವಿರುವ, ಸುಂದರವಾಗಿ ಕಾಣುವ ಪುಷ್ಪಗಳು ಮನುಷ್ಯರಿಗೆ ಪ್ರಿಯವಾದುವುಗಳು.

ನ ತು ಶ್ಮಶಾನಸಂಭೂತಾ ದೇವತಾಯತನೋದ್ಭವಾಃ ।
ಸಂನಯೇತ್ಪುಷ್ಟಿಯುಕ್ತೇಷು ವಿವಾಹೇಷು ರಹಃಸು ಚ ॥೩೩॥

ಪೌಷ್ಟಿಕಕರ್ಮಗಳಲ್ಲಿ, ವಿವಾಹಕರ್ಮಗಳಲ್ಲಿ ಮತ್ತು ಏಕಾಂತವಾದ ವಿಹಾರಗಳಲ್ಲಿ–ಶ್ಮಶಾನಗಳಲ್ಲಿ ಮತ್ತು ದೇವಸ್ಥಾನಗಳ ಆವರಣದಲ್ಲಿ ಹುಟ್ಟಿದ ಗಿಡಗಳಿಂದಾಗಲೀ ವೃಕ್ಷಗಳಿಂದಾಗಲೀ ಹೂವುಗಳನ್ನು ತಂದು ಉಪಯೋಗಿಸಬಾರದು.

ಗಿರಿಸಾನುರುಹಾಃ ಸೌಮ್ಯಾ ದೇವಾನಾಮುಪಪಾದಯೇತ್ ।
ಪ್ರೋಕ್ಷಿತಾಭ್ಯುಕ್ಷಿತಾಃ ಸೌಮ್ಯಾ ಯಥಾಯೋಗ್ಯಂ ಯಥಾಸ್ಮೃತಿ ॥೩೪॥

ಪರ್ವತದ ತಪ್ಪಲುಗಳಲ್ಲಿ ಬೆಳೆದಿರುವ ಗಿಡ-ಮರ-ಬಳ್ಳಿಗಳಿಂದ ಸುಂದರವಾದ ಮತ್ತು ಸುಗಂಧಯುಕ್ತವಾದ ಹೂವುಗಳನ್ನು ತಂದು ನೀರಿನಲ್ಲಿ ನೆನೆಸಿ ಅಥವಾ ನೀರಿನಿಂದ ಪ್ರೋಕ್ಷಿಸಿ ಧರ್ಮಶಾಸ್ತ್ರಾನುಸಾರವಾಗಿ ಯೋಗ್ಯವಾದ ರೀತಿಯಲ್ಲಿ ದೇವತೆಗಳಿಗೆ ಸಮರ್ಪಿಸಬೇಕು.

ಗನ್ಧೇನ ದೇವಾಸ್ತುಷ್ಯನ್ತಿ ದರ್ಶನಾದ್ಯಕ್ಷರಾಕ್ಷಸಾಃ ।
ನಾಗಾಃ ಸಮುಪಭೋಗೇನ ತ್ರಿಭಿರೇತೈಸ್ತು ಮಾನುಷಾಃ ॥೩೫॥

ಹೂವುಗಳ ವಾಸನೆಯಿಂದಲೇ ದೇವತೆಗಳು ತೃಪ್ತಿಹೊಂದುತ್ತಾರೆ. ಅದರ ದರ್ಶನದಿಂದ ಯಕ್ಷ-ರಾಕ್ಷಸರು ತೃಪ್ತಿಹೊಂದುತ್ತಾರೆ. ಉಪಭೋಗ ದಿಂದ ಸರ್ಪಗಳು ತೃಪ್ತಿಹೊಂದುತ್ತವೆ. (ತಾಳೇಮರದಲ್ಲಿಯೇ ಸರ್ಪಗಳು ಅಡಗಿಕೊಂಡಿರುವುದು ಲೋಕಪ್ರಸಿದ್ಧವಾಗಿದೆ.) ಮನುಷ್ಯರು ಈ ಮೂರರಿಂದಲೂ ಸಂತುಷ್ಟರಾಗುತ್ತಾರೆ.

ಸದ್ಯಃ ಪ್ರೀಣಾತಿ ದೇವಾನ್ವೈ ತೇ ಪ್ರೀತಾ ಭಾವಯನ್ತ್ಯುತ ।
ಸಂಕಲ್ಪಸಿದ್ಧಾ ಮರ್ತ್ಯಾನಾಮೀಪ್ಸಿತೈಶ್ಚ ಮನೋರಮೈಃ ॥೩೬॥

ಭಕ್ತನು ದೇವತೆಗಳನ್ನು ಸುಮನೋಹರವಾದ, ಸುಗಂಧಯುಕ್ತವಾದ ಪುಷ್ಪಗಳಿಂದ ಅಲಂಕರಿಸಿ ಕೂಡಲೇ ಪ್ರೀತಿಗೊಳಿಸುತ್ತಾನೆ. ಸಿದ್ಧಸಂಕಲ್ಪರಾದ ದೇವತೆಗಳು ಪುಷ್ಪೋಪಹಾರದಿಂದ ಪ್ರೀತರಾಗಿ ಭಕ್ತರನ್ನು ಅವರು ಇಚ್ಛಿಸಿದ ಮನೋರಥಗಳಿಂದ ಪೂರ್ಣಗೊಳಿಸುತ್ತಾರೆ.

ಪ್ರೀತಾಃ ಪ್ರೀಣನ್ತಿ ಸತತಂ ಮಾನಿತಾ ಮಾನಯನ್ತಿ ಚ ।
ಅವಜ್ಞಾತಾವಧೂತಾಶ್ಚ ನಿರ್ದಹನ್ತ್ಯಧಮಾನ್ನರಾನ್ ॥೩೭॥

ಭಕ್ತರು ಮಾಡುವ ಪೂಜಾದಿಗಳಿಂದ ದೇವತೆಗಳು ಪ್ರೀತರಾದರೆ ಭಕ್ತರಿಗೂ ಪ್ರಿಯವನ್ನೇ ಮಾಡುತ್ತಾರೆ. ಸಮ್ಮಾನಿತರಾದರೆ ಭಕ್ತರನ್ನೂ ಸಮ್ಮಾನಿಸುತ್ತಾರೆ. ದೇವತೆಗಳನ್ನು ನಿರಾಕರಿಸುವ ಅಥವಾ ಅವಹೇಳನ ಮಾಡುವ ನರಾಧಮರನ್ನು ಅವರು ದಹಿಸಿಬಿಡುತ್ತಾರೆ.

ದೈತ್ಯೇಂದ್ರನೇ! ಇನ್ನು ಮುಂದೆ ನಾನು ನಿನಗೆ ನಾನಾವಿಧವಾದ ಒಳ್ಳೆಯ ಮತ್ತು ಕೆಟ್ಟಧೂಪಗಳ ವಿಷಯವನ್ನೂ, ಧೂಪದಾನವಿಧಿಯನ್ನೂ ಮತ್ತು ಫಲವನ್ನೂ ಹೇಳುತ್ತೇನೆ.

ನಿರ್ಯಾಸಾಃ ಸಾರಿಣಶ್ಚೈವ ಕೃತ್ರಿಮಾಶ್ಚೈವ ತೇ ತ್ರಯಃ ।
ಇಷ್ಟೋಽನಿಷ್ಟೋ ಭವೇದ್ಗನ್ಧಸ್ತನ್ಮೇ ವಿಸ್ತರಶಃ ಶೃಣು ॥೩೮॥

ಧೂಪಗಳಲ್ಲಿ ಮುಖ್ಯವಾಗಿ ನಿರ್ಯಾಸ, ಸಾರಿ ಮತ್ತು ಕೃತ್ರಿಮಗಳೆಂಬ

ಮೂರು ಭೇದಗಳಿವೆ. ಅವುಗಳ ವಾಸನೆಗಳಲ್ಲಿಯೂ ಇಷ್ಟವಾದುದು ಮತ್ತು ಅನಿಷ್ಟವಾದುದು ಎಂಬ ಎರಡು ಪ್ರಭೇದಗಳಿವೆ. ಈ ಎಲ್ಲ ವಿಷಯಗಳನ್ನೂ ವಿಸ್ತಾರವಾಗಿ ಹೇಳುವೆನು; ಕೇಳು.

ನಿರ್ಯಾಸಾಃ ಸಲ್ಲಕೀವರ್ಜ್ಯಾ ದೇವಾನಾಂ ದಯಿತಾಸ್ತು ತೇ ।
ಗುಗ್ಗುಲುಃ ಪ್ರವರಸ್ತೇಷಾಂ ಸರ್ವೇಷಾಮಿತಿ ನಿಶ್ಚಯಃ ॥೪೦॥

ಹೆಪ್ಪುಗಟ್ಟಿದ ಹಾಲಿಗೆ ನಿರ್ಯಾಸವೆಂದು ಹೆಸರು. ಸಲ್ಲಕೀ (ಆನೇಬೇಲ) ವೃಕ್ಷದ ಹೊರತಾಗಿ ಉಳಿದವೃಕ್ಷಗಳ ನಿರ್ಯಾಸಗಳು ದೇವತೆಗಳಿಗೆ ಬಹಳ ಪ್ರೀತಿಕರವಾಗಿರುತ್ತವೆ. ಆ ಎಲ್ಲ ನಿರ್ಯಾಸಗಳಲ್ಲಿಯೂ ಹಾಲುಮಡ್ಡಿಗಿಡದ ನಿರ್ಯಾಸವು ಶ್ರೇಷ್ಠವಾದುದೆಂದು ನಿಶ್ಚಿತವಾಗಿದೆ.

ಅಗುರುಃ ಸಾರಿಣಾಂ ಶ್ರೇಷ್ಠೋ ಯಕ್ಷರಾಕ್ಷಸಭೋಗಿನಾಮ್ ।
ದೈತ್ಯಾನಾಂ ಸಲ್ಲಕೀಯಶ್ಚ ಕಾಂಕ್ಷತೋ ಯಶ್ಚ ತದ್ವಿಧಃ ॥೪೧॥

(ಕೆಲವು ಮರಗಳ ಕಟ್ಟಿಗೆಗಳನ್ನು ಬೆಂಕಿಗೆಹಾಕಿದಾಗ ಅದರಿಂದ ಬರುವ ಸುಗಂಧಯುಕ್ತವಾದ ಧೂಪಕ್ಕೆ ಸಾರಿ ಎಂದು ಹೆಸರು.) ಅಂತಹ ಧೂಪಗಳಲ್ಲಿ ಅಗುರು ಎಂಬ ಗಿಡಕ್ಕೆ ಸಂಬಂಧಿಸಿದ ಧೂಪವು ಶ್ರೇಷ್ಠವಾದುದು. ಸಾರಿಧೂಪವು ವಿಶೇಷವಾಗಿ ಯಕ್ಷ-ರಾಕ್ಷಸ-ಸರ್ಪಗಳಿಗೆ ಪ್ರಿಯವಾಗಿರುತ್ತದೆ. ದೈತ್ಯರಿಗೆ ಸಲ್ಲಕೀವೃಕ್ಷದ ಮತ್ತು ಅದೇ ಜಾತಿಯ ವೃಕ್ಷಗಳ ಧೂಪವು ಪ್ರಿಯವಾಗಿರುತ್ತದೆ.

ಅಥ ಸರ್ಜರಸಾದೀನಾಂ ಗನ್ಧೈಃ ಪಾರ್ಥಿವ ದಾರವೈಃ ।
ಫಾಣಿತಾಸವಸಂಯುಕ್ತೈರ್ಮನುಷ್ಯಾಣಾಂ ವಿಧೀಯತೇ ॥೪೨॥

ಕಾಕಂಬಿಯಿಂದಲೂ ಮತ್ತು ಆಸವದಿಂದಲೂ ಯುಕ್ತವಾದ ರಾಳವೇ ಮೊದಲಾದ ಸುಗಂಧಚೂರ್ಣಗಳಿಂದಲೂ, ಚಂದನಾದಿ ಕಾಷ್ಠಗಳ ಚೂರ್ಣಗಳಿಂದಲೂ ಮಾಡಲ್ಪಟ್ಟ ಧೂಪಕ್ಕೆ ಕೃತ್ರಿಮವೆನ್ನುತ್ತಾರೆ. ಅಂತಹ ಕೃತಕವಾದ ಧೂಪಗಳು (ಊದುಬತ್ತಿಗಳು) ಮನುಷ್ಯರಿಗೆ ಪ್ರಿಯವಾಗಿರುತ್ತವೆ.

ದೇವದಾನವಭೂತಾನಾಂ ಸದ್ಯಸ್ತುಷ್ಟಿಕರಃ ಸ್ಮೃತಃ ।
ಯೇಽನ್ಯೇ ವೈಹಾರಿಕಾಸ್ತತ್ರ ಮಾನುಷಾಣಾಮಿತಿ ಸ್ಮೃತಾಃ ॥೪೩॥

ಹೀಗೆ ಧೂಪವು ದೇವ-ದಾನವರಿಗೂ ಭೂತಗಣಗಳಿಗೂ ಒಡನೆಯೇ ಸಂತೋಷವನ್ನುಂಟುಮಾಡತಕ್ಕುದೆಂದು ಹೇಳಲ್ಪಟ್ಟಿದೆ. ಇವುಗಳಲ್ಲದೇ ವಿಹಾರಾದಿಗಳಲ್ಲಿ (ಭೋಗ-ವಿಲಾಸಾದಿಗಳಲ್ಲಿ) ಉಪಯೋಗಿಸುವ ಧೂಪ ಗಳೂ ಇವೆ. ಅವೆಲ್ಲವೂ ಮನುಷ್ಯರ ಉಪಯೋಗಕ್ಕಾಗಿಯೇ ಇವೆ.

ಯ ಏವೋಕ್ತಾಃ ಸುಮನಸಾಂ ಪ್ರದಾನೇ ಗುಣಹೇತವಃ ।
ಧೂಪೇಷ್ವಪಿ ಪರಿಜ್ಞೇಯಾಸ್ತ ಏವ ಪ್ರೀತಿವರ್ಧನಾಃ ॥೪೪॥

ಹೂವುಗಳ ಪ್ರದಾನದ ವಿಷಯದಲ್ಲಿ ಯಾವ ವಿಷಯಗಳು ಶ್ರೇಷ್ಠತೆಗೆ (ಗುಣಕ್ಕೆ) ಕಾರಣವೆಂದು ಹೇಳಲ್ಪಟ್ಟಿವೆಯೋ–ಅದೇ ವಿಷಯಗಳು (ಬಣ್ಣವೇ ಮೊದಲಾದುವುಗಳು) ಧೂಪದ ವಿಷಯದಲ್ಲಿಯೂ ದೇವಾದಿಗಳಿಗೆ ಸಂತೋಷಕರವೆಂದು ತಿಳಿಯಬೇಕು.

ದೈತ್ಯೇಂದ್ರನೇ! ಇನ್ನು ಮುಂದೆ ದೀಪದಾನದಿಂದ ಪ್ರಾಪ್ತವಾಗುವ ಉತ್ತಮಫಲಗಳನ್ನು ಹೇಳುತ್ತೇನೆ. ಯಾವಾಗ, ಯಾವ ರೀತಿಯಲ್ಲಿ, ಯಾವನು, ಎಂತಹ ದೀಪವನ್ನು ದಾನಮಾಡಬೇಕೆಂಬುದನ್ನು ವಿಸ್ತಾರವಾಗಿ ಹೇಳುತ್ತೇನೆ.

ಜ್ಯೋತಿಸ್ತೇಜಃ ಪ್ರಕಾಶಂ ವಾಪ್ಯೂರ್ಧ್ವಗಂ ಚಾಪಿ ವರ್ಣ್ಯತೇ ।
ಪ್ರದಾನಂ ತೇಜಸಾಂ ತಸ್ಮಾತ್ತೇಜೋ ವರ್ಧಯತೇ ನೃಣಾಮ್ ॥೪೬॥

ದೀಪವು ಊರ್ಧ್ವಗಾಮಿಯಾದ ತೇಜಸ್ಸೆಂದೂ, ಕೀರ್ತಿಯನ್ನೂ ಕಾಂತಿ ಯನ್ನೂ ಉಂಟುಮಾಡತಕ್ಕುದೆಂದೂ ವರ್ಣಿಸಲ್ಪಟ್ಟಿದೆ. ಆದುದರಿಂದ ತೇಜಸ್ಸುಗಳ (ದೀಪಗಳ) ದಾನವು ಮನುಷ್ಯರ ತೇಜಸ್ಸನ್ನು ವೃದ್ಧಿಗೊಳಿಸುತ್ತದೆ.

ಅನ್ಧನ್ತಮಸ್ತಮಿಸ್ರಂ ಚ ದಕ್ಷಿಣಾಯನಮೇವ ಚ ।
ಉತ್ತರಾಯಣಮೇತಸ್ಮಾಜ್ಜ್ಯೋತಿರ್ದಾನಂ ಪ್ರಶಸ್ಯತೇ ॥೪೭॥

ಅಂಧಂತಮ (ಅಂಧತಾಮಿಸ್ರ) ಎಂಬ ಹೆಸರಿನ ಅಂಧಕಾರಮಯವಾದ ನರಕವಿದೆ. ದಕ್ಷಿಣಾಯನವೂ ಅಂಧಕಾರಮಯವಾಗಿಯೇ ಇದೆ. ಉತ್ತರಾಯಣವು ಪ್ರಕಾಶಮಯವಾಗಿದೆ. ಆದುದರಿಂದ ಅದು ದಕ್ಷಿಣಾಯನಕ್ಕಿಂತಲೂ ಪ್ರಶಸ್ತವಾಗಿದೆ. ಅಂಧಕಾರದ (ಅಂಧತಾಮಿಸ್ರನರಕದ) ನಿವೃತ್ತಿಗಾಗಿ ದೀಪದಾನವು ಪ್ರಶಂಸೆಮಾಡಲ್ಪಟ್ಟಿದೆ.

ಯಸ್ಮಾದೂರ್ಧ್ವಗಮೇತತ್ತು ತಮಸಶ್ಚೈವ ಭೇಷಜಮ್ ।
ತಸ್ಮಾದೂರ್ಧಗತೇರ್ದಾತಾ ಭವೇದತ್ರೇತಿ ನಿಶ್ಚಯಃ ॥೪೮॥

ದೀಪವು ಮೇಲ್ಮುಖನಾಗಿ ಉರಿಯುತ್ತದೆ. ಅದು ಕತ್ತಲಿಗೆ ಔಷಧಪ್ರಾಯವಾಗಿದೆ. ದೀಪವನ್ನು ಬೆಳಗಿಸಿದರೆ ಕತ್ತಲೆಯೆಂಬ ರೋಗವು ಒಡನೆಯೇ ಹೊರಟುಹೋಗುತ್ತದೆ. ಆದುದರಿಂದ ಊರ್ಧ್ವಗತಿಯಿರುವ ದೀಪವನ್ನು ದಾನಮಾಡುವವನು ನಿಶ್ಚಯವಾಗಿಯೂ ಊರ್ಧ್ವಗತಿಯನ್ನೇ ಹೊಂದುತ್ತಾನೆ.

ದೇವಾಸ್ತೇಜಸ್ವಿನೋ ಹ್ಯಸ್ಮಾತ್ಪ್ರಭಾವನ್ತಃ ಪ್ರಕಾಶಕಾಃ ।
ತಾಮಸಾ ರಾಕ್ಷಸಾಶ್ಚೈವ ತಸ್ಮಾದ್ದೀಪಃ ಪ್ರದೀಯತೇ ॥೪೯॥

ದೀಪದಿಂದ ದೇವತೆಗಳು ತೇಜಸ್ವಿಗಳಾಗಿಯೂ, ಪ್ರಭಾಯುಕ್ತರಾಗಿಯೂ ಮತ್ತು ಪ್ರಕಾಶವಂತರಾಗಿಯೂ ಕಾಣುತ್ತಾರೆ. ಅಂಧಕಾರದಿಂದ ರಾಕ್ಷಸರು ಉತ್ತೇಜಿತರಾಗುತ್ತಾರೆ. ಆದುದರಿಂದ ದೇವತೆಗಳ ಪ್ರಸನ್ನತೆಗಾಗಿ ದೀಪವನ್ನು ಕೊಡುತ್ತಾರೆ.

ಆಲೋಕದಾನಾಚ್ಚಕ್ಷುಷ್ಮಾನ್ಪ್ರಭಾಯುಕ್ತೋ ಭವೇನ್ನರಃ ।
ತಾನ್ದತ್ತ್ವಾ ನೋಪಹಿಂಸೇತ ನ ಹರೇನ್ನೋಪನಾಶಯೇತ್ ॥೫೦॥

ದೀಪವನ್ನು ದಾನಮಾಡುವುದರಿಂದ ಮನುಷ್ಯನು ತೇಜಸ್ಸಿನಿಂದ ಕೂಡಿದವನೂ ಒಳ್ಳೆಯ ಕಣ್ಣುಳ್ಳವನೂ ಆಗುತ್ತಾನೆ. ಪ್ರಭಾವಂತನಾಗುತ್ತಾನೆ. ದೀಪದಾನವನ್ನು ಕೊಟ್ಟನಂತರ ಆ ದೀಪವನ್ನು ಅಲುಗಾಡಿಸಬಾರದು. ಬೇರೆಯ ಕಡೆಗೆ ಒಯ್ಯಲೂಬಾರದು. ಆರಿಸಲೂಬಾರದು.

ದೀಪಹರ್ತಾ ಭವೇದನ್ಧಸ್ತಮೋಗತಿರಸುಪ್ರಭಃ ।
ದೀಪಪ್ರದಃ ಸ್ವರ್ಗಲೋಕೇ ದೀಪಮಾಲೇವ ರಾಜತೇ ॥೫೧॥

ದೀಪವನ್ನು ಅಪಹರಿಸುವ ಮನುಷ್ಯನು ಕುರುಡನಾಗುತ್ತಾನೆ.

ತಾಮಸಿಯಾಗುತ್ತಾನೆ. ಕಾಂತಿಹೀನನಾಗುತ್ತಾನೆ. ಮರಣಾನಂತರದಲ್ಲಿ ನರಕಕ್ಕೆ ಹೋಗುತ್ತಾನೆ. ದೀಪದಾನಮಾಡುವವನು ಸ್ವರ್ಗಲೋಕದಲ್ಲಿ ದೀಪದ ಮಾಲೆಯಂತೆ ವಿರಾಜಿಸುತ್ತಾನೆ.

ಹವಿಷಾ ಪ್ರಥಮಃ ಕಲ್ಪೋ ದ್ವಿತೀಯಶ್ಚೌಷಧೀರಸೈಃ ।
ವಸಾಮೇದೋಽಸ್ಥಿನಿರ್ಯಾಸೈರ್ನ ಕಾರ್ಯಃ ಪುಷ್ಟಿಮಿಚ್ಛತಾ ॥೫೨॥

ತುಪ್ಪದ ದೀಪವನ್ನು ದಾನವಾಗಿ ಕೊಡುವುದು ಶ್ರೇಷ್ಠವಾದ ಅನುಷ್ಠಾನವಾಗಿದೆ. ಓಷಧಿರಸಗಳಿಂದ (ಎಣ್ಣೆಯಿಂದ) ಹೊತ್ತಿಸಿದ ದೀಪವನ್ನು ದಾನಮಾಡುವುದು ಎರಡನೆಯ ಅನುಷ್ಠಾನವಾಗಿದೆ. (ತುಪ್ಪದ ದೀಪವನ್ನು ದಾನಮಾಡುವುದು ಶ್ರೇಷ್ಠ. ಎಣ್ಣೆಯ ದೀಪವನ್ನು ದಾನ ಮಾಡುವುದು ಮಧ್ಯಮಪಕ್ಷ.) ಶರೀರದ ಪುಷ್ಟಿಯನ್ನು ಬಯಸುವವನು–ಮಜ್ಜೆ, ಮೇದಸ್ಸು, ಮೂಳೆ–ಇವುಗಳಿಂದ ತೆಗೆದ ಎಣ್ಣೆಯಿಂದ ಕೂಡಿದ ದೀಪವನ್ನು ದಾನಮಾಡಲೇಬಾರದು.

ಗಿರಿಪ್ರಪಾತೇ ಗಹನೇ ಚೈತ್ಯಸ್ಥಾನೇ ಚತುಷ್ಪಥೇ ।
ದೀಪದಾನಂ ಭವೇನ್ನಿತ್ಯಂ ಯ ಇಚ್ಛೇದ್ಭೂತಿಮಾತ್ಮನಃ ॥೫೩॥

ಯಾವನು ತನ್ನ ಕಲ್ಯಾಣವನ್ನು ಬಯಸುವನೋ–ಅವನು ಪರ್ವತಗಳಲ್ಲಿರುವ ದೊಣೆಗಳ ಬಳಿಯಲ್ಲಿ, ಅರಣ್ಯದಲ್ಲಿ, ದೇವಮಂದಿರದಲ್ಲಿ, ನಾಲ್ಕು ಹಾದಿಗಳು ಸೇರುವ ಸ್ಥಳದಲ್ಲಿ ಪ್ರತಿನಿತ್ಯವೂ ದೀಪದಾನಮಾಡಬೇಕು. (ದೀಪವನ್ನು ಬೆಳಗಿಸಬೇಕು.) ಈ ಸ್ಥಳಗಳಲ್ಲಿ ಮಾಡಿದ ದೀಪದಾನವು ಐಶ್ವರ್ಯಪ್ರದವಾಗುತ್ತದೆ.

ಕುಲೋದ್ಯೋತೋ ವಿಶುದ್ಧಾತ್ಮಾ ಪ್ರಕಾಶತ್ವಂ ಚ ಗಚ್ಛತಿ ।
ಜ್ಯೋತಿಷಾಂ ಚ ಸಾಲೋಕ್ಯಂ ದೀಪದಾತಾ ನರಃ ಸದಾ ॥೫೪॥

ದೀಪದಾನಮಾಡುವ ಮನುಷ್ಯನು ತನ್ನ ಕುಲವನ್ನೇ ಉದ್ದೀಪನಗೊಳಿಸುತ್ತಾನೆ. (ಉದ್ಧರಿಸುತ್ತಾನೆ.) ಶುದ್ಧಾತ್ಮನಾಗುತ್ತಾನೆ. ಕಾಂತಿಮಂತನಾಗುತ್ತಾನೆ. ಅವಸಾನಾನಂತರದಲ್ಲಿ ಪ್ರಕಾಶಮಾನವಾದ ಜ್ಯೋತಿಗಳ ಲೋಕಕ್ಕೂ ಹೋಗುತ್ತಾನೆ.

ದೈತ್ಯೇಂದ್ರನೇ! ಮುಂದೆ ದೇವತೆಗಳಿಗೆ, ಯಕ್ಷ-ನಾಗರಿಗೆ, ಭೂತ-

ರಾಕ್ಷಸರಿಗೆ, ಮನುಷ್ಯರಿಗೆ ಬಲಿದಾನಮಾಡುವ ವಿಷಯದಲ್ಲಿ ಕರ್ಮಫಲ ಪ್ರಾಪ್ತಿಗೆ ಸಾಧನವಾದ ಗುಣಗಳನ್ನು ಹೇಳುತ್ತೇನೆ.

ಯೇಷಾಂ ನಾಗ್ರಭುಜೋ ವಿಪ್ರಾ ದೇವತಾತಿಥಿಬಾಲಕಾಃ ।
ರಾಕ್ಷಸಾನೇವ ತಾನ್ವಿದ್ಧಿ ನಿರ್ವಿಶಂಕಾನಮಙ್ಗಲಾನ್ ॥೫೭॥

ಯಾರು ತಾವು ಭೋಜನಮಾಡುವ ಮೊದಲು ದೇವತೆಗಳಿಗೆ ನಿವೇದನಮಾಡುವುದಿಲ್ಲವೋ-ಬ್ರಾಹ್ಮಣರಿಗೂ, ಅತಿಥಿಗಳಿಗೂ ಮತ್ತು ಬಾಲಕರಿಗೂ ಊಟಮಾಡಿಸುವುದಿಲ್ಲವೋ–ಅಂತಹವರನ್ನು ಧರ್ಮಕ್ಕೆ ಭಯಪಡದ ಅಮಂಗಳಸ್ವರೂಪಿಗಳಾದ ರಾಕ್ಷಸರೆಂದೇ ತಿಳಿ.

ತಸ್ಮಾದಗ್ರಂ ಪ್ರಯಚ್ಛೇತ ದೇವೇಭ್ಯಃ ಪ್ರತಿಪೂಜಿತಮ್ ।
ಶಿರಸಾ ಪ್ರಯತಶ್ಚಾಪಿ ಹರೇದ್ಬಲಿಮತನ್ದ್ರಿತಃ ॥೫೮॥

ಆದುದರಿಂದ ಗೃಹಸ್ಥನಾದವನು ಆಲಸ್ಯವನ್ನು ಬಿಟ್ಟು ದೇವತೆಗಳನ್ನು ಸಂಪೂಜಿಸಿ, ತಲೆಬಾಗಿ ನಮಸ್ಕರಿಸಿ, ಶುದ್ಧಚಿತ್ತನಾಗಿ ಅವರಿಗೆ ಪ್ರಥಮ ಬಲಿಯನ್ನು ಸಮರ್ಪಿಸಬೇಕು.

ಗೃಹ್ಣನ್ತಿ ದೇವತಾ ನಿತ್ಯಮಾಶಂಸನ್ತಿ ಸದಾ ಗೃಹಾನ್ ।
ಬಾಹ್ಯಾಶ್ಚಾಗನ್ತವೋ ಯೇಽನ್ಯೇ ಯಕ್ಷರಾಕ್ಷಸಪನ್ನಗಾಃ ॥೫೮॥
ಇತೋ ದತ್ತೇನ ಜೀವನ್ತಿ ದೇವತಾಃ ಪಿತರಸ್ತಥಾ ।
ತೇ ಪ್ರೀತಾಃ ಪ್ರೀಣಯನ್ತ್ಯೇನಮಾಯುಷಾ ಯಶಸಾ ಧನೈಃ ॥೫೯॥

ದೇವತೆಗಳು ಗೃಹಸ್ಥನು ಕೊಡುವ ಬಲಿಯನ್ನು ಸ್ವೀಕರಿಸುತ್ತಾರೆ. ಅದರಿಂದ ತೃಪ್ತರಾಗಿ ಗೃಹಸ್ಥನನ್ನು ಆಶೀರ್ವದಿಸುತ್ತಾರೆ. ದೇವತೆಗಳು, ಪಿತೃಗಳು, ಯಕ್ಷ-ರಾಕ್ಷಸ-ಸರ್ಪಗಳು ಮತ್ತು ಹೊರಗಿನಿಂದ ಬರುವ ಅತಿಥಿಗಳು–ಇವರೆಲ್ಲರೂ ಗೃಹಸ್ಥನು ಕೊಡುವ ಬಲಿಯಿಂದಲೇ ಜೀವಿಸುತ್ತಾರೆ. ಬಲಿದಾನದಿಂದ ಪ್ರಸನ್ನರಾಗುವ ಅವರು ಗೃಹಸ್ಥನನ್ನು ಆಯುಷ್ಯ, ಧನ ಮತ್ತು ಯಶಸ್ಸುಗಳ ಪ್ರದಾನಗಳಿಂದ ಸಂತುಷ್ಟಿಗೊಳಿಸುತ್ತಾರೆ.

ಬಲಯಃ ಸಹ ಪುಷ್ಪೈಸ್ತು ದೇವಾನಾಮುಪಹಾರಯೇತ್ ।
ದಧಿದುಗ್ಧಮಯಾಃ ಪುಣ್ಯಾಃ ಸುಗನ್ಧಾಃ ಪ್ರಿಯದರ್ಶನಾಃ ॥೬೦॥

ದೇವತೆಗಳಿಗೆ ಕೊಡುವ ಬಲಿಯನ್ನು ಪುಷ್ಪಸಹಿತವಾಗಿ ಕೊಡಬೇಕು ಮತ್ತು ಆ ಬಲಿಗಳು ಮೊಸರು-ಹಾಲುಗಳಿಂದ ಕೂಡಿದ್ದು ಪವಿತ್ರ

ವಾಗಿಯೂ ಸುಗಂಧಯುಕ್ತವಾಗಿಯೂ, ನೋಡಲು ಸುಂದರವಾಗಿಯೂ ಇರಬೇಕು.

ಕಾರ್ಯಾ ರುಧಿರಮಾಂಸಾಢ್ಯಾ ಬಲಯೋ ಯಕ್ಷರಕ್ಷಸಾಮ್ ।
ಸುರಾಸವಪುರಸ್ಕಾರಾ ಲಾಜೋಲ್ಲಾಪಿಕಭೂಷಿತಾಃ ॥೬೧॥

ಯಕ್ಷ-ರಾಕ್ಷಸರಿಗೆ ರಕ್ತ-ಮಾಂಸಗಳಿಂದ ಯುಕ್ತವಾದ ಬಲಿಗಳನ್ನು ಸಮರ್ಪಿಸಬೇಕು. ಅವು ಮದ್ಯದಿಂದಲೂ ಆಸವದಿಂದಲೂ ಯುಕ್ತವಾಗಿರಬೇಕು. ಬಲಿಗಳು ಬತ್ತದ ಅರಳಿನಿಂದ ಸಮಲಂಕೃತವಾಗಿರಬೇಕು.

ನಾಗಾನಾಂ ದಯಿತಾ ನಿತ್ಯಂ ಪದ್ಮೋತ್ಪಲವಿಮಿಶ್ರಿತಾಃ ।
ತಿಲಾನ್ಗುಡಸುಸಂಪನ್ನಾನ್ಭೂತಾನಾಮುಪಹಾರಯೇತ್ ॥೬೨॥

ಸರ್ಪಗಳಿಗೆ ಪದ್ಮಗಳ ಮತ್ತು ಕನ್ನೈದಿಲೆಗಳಿಂದ ಕೂಡಿದ ಬಲಿಯು ಬಹಳ ಪ್ರಿಯವಾದುದು. ಬೆಲ್ಲವನ್ನು ಬೆರೆಸಿದ ಎಳ್ಳನ್ನು ಭೂತಗಳಿಗೆ ಬಲಿಯನ್ನಾಗಿ ಕೊಡಬೇಕು.

ಅಗ್ರದಾತಾಗ್ರಭೋಗೀ ಸ್ಯಾದ್ಬಲವೀರ್ಯಸಮನ್ವಿತಃ ।
ತಸ್ಮಾದಗ್ರಂ ಪ್ರಯಚ್ಛೇತ ದೇವೇಭ್ಯಃ ಪ್ರತಿಪೂಜಿತಮ್ ॥೬೩॥

ಯಾವ ಗೃಹಸ್ಥನು ದೇವತೆಗಳಿಗೆ ಮೊದಲು ಬಲಿಯನ್ನು ಸಮರ್ಪಿಸಿ ಅನಂತರ ಭೋಜನಮಾಡುವನೋ–ಅವನು ಉತ್ತಮಭೋಗದಿಂದ ಸಂಪನ್ನನೂ, ಬಲಿಷ್ಠನೂ, ವೀರ್ಯವಂತನೂ ಆಗುತ್ತಾನೆ. ಆದುದರಿಂದ ಮೊದಲು ದೇವತೆಗಳಿಗೆ ಪೂಜೆಮಾಡಿ ಬಲಿಯನ್ನು ಅರ್ಪಿಸಬೇಕು.

ಜ್ವಲನ್ತ್ಯಹರಹೋ ವೇಶ್ಮ ಯಾಶ್ಚಾಸ್ಯ ಗೃಹದೇವತಾಃ ।
ತಾಃ ಪೂಜ್ಯಾ ಭೂತಿಕಾಮೇನ ಪ್ರಸೃತಾಗ್ರಪ್ರದಾಯಿನಾ ॥೬೪॥

ಗೃಹಸ್ಥನ ಗೃಹದೇವತೆಗಳು ಯಾವಾಗಲೂ ಅವನ ಮನೆಯನ್ನು ಪ್ರಕಾಶಗೊಳಿಸುತ್ತಾರೆ. ಆದುದರಿಂದ ಕಲ್ಯಾಣಕಾಮನಾದ ಮನುಷ್ಯನು ಭೋಜನದ ಪ್ರಥಮಭಾಗವನ್ನು ಗೃಹದೇವತೆಗಳಿಗೆ ಸಮರ್ಪಿಸಿ ಸಮ್ಮಾನಿಸಬೇಕು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಶಕ್ರನು ಹೀಗೆ ಅಸುರೇಂದ್ರನಾದ ಬಲಿಗೆ ನಾನಾವಿಧ

ವಾದ ದಾನಗಳ ಮತ್ತು ಬಲಿಗಳ ವಿಷಯವನ್ನು ಹೇಳಿದನು. ಈ ವಿಷಯವನ್ನೇ ಮನುಪ್ರಜಾಪತಿಯು ತಪಸ್ವಿಯಾದ ಸುವರ್ಣನಿಗೆ ಹೇಳಿದನು. ಅನಂತರ ಸುವರ್ಣನು ನಾರದರಿಗೆ ಹೇಳಿದನು. ನಾರದರು ನನಗೆ ಹೇಳಿದರು. ಈಗ ನಾನು ನಿನಗೆ ಹೇಳಿರುವ ವಿಷಯವನ್ನು ನೀನೂ ಮನನಮಾಡಿ ಅದರಂತೆಯೇ ಆಚರಿಸು."

೯೮ನೆಯ ಅಧ್ಯಾಯವು ಮುಗಿಯಿತು.

೯೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಋಷಿಗಳ ವಿಷಯದಲ್ಲಿ ನಹುಷನ ಅಪರಾಧ: ಪ್ರತೀಕಾರಕ್ಕಾಗಿ ಭೃಗು ಮತ್ತು ಅಗಸ್ತ್ಯರ ಮಾತುಕತೆ

ಯುಧಿಷ್ಠಿರನು ಹೇಳುತ್ತಾನೆ:

ಶ್ರುತಂ ಮೇ ಭರತಶ್ರೇಷ್ಠ ಪುಷ್ಪಧೂಪಪ್ರದಾಯಿನಾಮ್ ।
ಫಲಂ ಬಲಿವಿಧಾನೇ ಚ ತದ್ಭೂಯೋ ವಕ್ತುಮರ್ಹಸಿ ॥೧॥

"ಭರತಶ್ರೇಷ್ಠನೇ! ನಾನು ನಿನ್ನಿಂದ ಪುಷ್ಪ-ಧೂಪ-ದೀಪಗಳನ್ನು ದಾನಮಾಡುವವರಿಗೆ ಪ್ರಾಪ್ತವಾಗುವ ಫಲವನ್ನೂ ಬಲಿಯನ್ನು ಸಮರ್ಪಣಮಾಡುವುದರಿಂದ ಪ್ರಾಪ್ತವಾಗುವ ಫಲವನ್ನೂ ಕೇಳಿಯಾಯಿತು. ಇದನ್ನೇ ಪುನಃ ಹೇಳುವ ಕೃಪೆಮಾಡು.

ಧೂಪದಾನ ಮತ್ತು ದೀಪದಾನಗಳ ಫಲವನ್ನೂ, ಗೃಹಸ್ಥರು ಬಲಿಯನ್ನೇಕೆ ಸಮರ್ಪಿಸುತ್ತಾರೆಂಬುದನ್ನೂ ಹೇಳು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಹಿಂದೆ ಈ ವಿಷಯದಲ್ಲಿ ನಹುಷನಿಗೂ, ಅಗಸ್ತ್ಯರಿಗೂ ಮತ್ತು ಭೃಗುವಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ರಾಜರ್ಷಿಯಾದ ನಹುಷನು ಮಹಾತಪಸ್ವಿಯೂ ಆಗಿದ್ದನು. ಅವನು ತನ್ನ ಪುಣ್ಯಕರ್ಮಗಳ ಪ್ರಭಾವದಿಂದ ದೇವರಾಜ್ಯಕ್ಕೂ ಅಧಿಪತಿಯಾದನು.

ಸ್ವರ್ಗದಲ್ಲಿ ವಾಸಮಾಡುತ್ತಿರುವಾಗಲೂ ವಿನಯಶೀಲನಾದ ನಹುಷನು ನಾನಾಪ್ರಕಾರವಾದ ದಿವ್ಯ ಮತ್ತು ಮಾನುಷಕರ್ಮಗಳನ್ನು ಮಾಡುತ್ತಲೇ ಇದ್ದನು. ಸ್ವರ್ಗದಲ್ಲಿ, ಮಹಾತ್ಮನಾದ ನಹುಷನ ಸಮಗ್ರವಾದ ಮಾನುಷ ಕ್ರಿಯೆಗಳೂ ದಿವ್ಯವಾದ ಸನಾತನಕ್ರಿಯೆಗಳೂ ನಡೆಯುತ್ತಲೇ ಇದ್ದುವು.

ಅಗ್ನಿಹೋತ್ರ, ಸಮಿತ್ಸಂಗ್ರಹಣ, ಕುಶಸಂಗ್ರಹಣ, ಪುಷ್ಪಸಂಗ್ರಹಣ, ಅನ್ನ-ಅರಳುಗಳಿಂದ ದೇವತೆಗಳಿಗೆ ಬಲಿದಾನ, ಧೂಪದಾನ, ದೀಪದಾನ (ಧೂಪಸಮರ್ಪಣ ಮತ್ತು ದೀಪಾರಾಧನೆ)–ಇವೆಲ್ಲವೂ ಮಹಾತ್ಮನಾದ ನಹುಷನ ಮನೆಯಲ್ಲಿ ನಡೆಯುತ್ತಲೇ ಇದ್ದುವು. ಸ್ವರ್ಗದಲ್ಲಿದ್ದರೂ ನಹುಷನು ಜಪಯಜ್ಞವನ್ನೂ, ಮನೋಯಜ್ಞವನ್ನೂ (ಧ್ಯಾನಯಜ್ಞವನ್ನೂ) ಮಾಡುತ್ತಲೇ ಇದ್ದನು. ಎಲ್ಲ ದೇವತೆಗಳನ್ನೂ ನ್ಯಾಯೋಚಿತವಾದ ರೀತಿಯಲ್ಲಿ ವಿಧಿವತ್ತಾಗಿ ಹಿಂದಿನಂತೆಯೇ ಆರಾಧಿಸುತ್ತಿದ್ದನು.

ಸ್ವಲ್ಪಕಾಲಾನಂತರ ನಹುಷನು ತಾನೇ ಇಂದ್ರನಾಗಿರುವೆನೆಂದು ಭಾವಿಸಿ ಅಹಂಕಾರಕ್ಕೆ ವಶನಾದನು. ಅದರಿಂದ ಅವನ ಎಲ್ಲ ಕರ್ಮಗಳೂ ನಿಷ್ಫಲವಾದುವು. ವರದಾನದ ಮದದಿಂದ ಮೋಹಿತನಾಗಿದ್ದ ನಹುಷನು ಋಷಿಗಳನ್ನೇ ತನ್ನ ವಾಹನವನ್ನು ಹೊರುವ ವಾಹಕರನ್ನಾಗಿ ಮಾಡಿ ಕೊಂಡನು. ಅದರಿಂದ ಅವನ ಧರ್ಮ-ಕರ್ಮಗಳೆಲ್ಲವೂ ನಾಶವಾಗಿ ಹೋದುವು. ಧರ್ಮದ ಬಲವಿಲ್ಲದೇ ಅವನು ದುರ್ಬಲನಾದನು.

ಅಹಂಕಾರದಿಂದ ಕೊಬ್ಬಿಹೋಗಿದ್ದ ನಹುಷನು ತಪೋಧನರಾದ ಶ್ರೇಷ್ಠರಾದ ಮುನಿಗಳನ್ನು ತನ್ನ ಪಲ್ಲಕ್ಕಿಯ ವಾಹಕರನ್ನಾಗಿ ಮಾಡಿಕೊಂಡು ವಿಹರಿಸುತ್ತಿದ್ದನು. ಹೀಗೆಯೇ ಬಹಳ ಕಾಲವು ಕಳೆದುಹೋಯಿತು. ನಹುಷನು ಸರದಿಯಪ್ರಕಾರ ಒಬ್ಬರಾದ ಮೇಲೆ ಮತ್ತೊಬ್ಬರಂತೆ ಪ್ರತಿಯೊಬ್ಬ ಋಷಿಯೂ ತನ್ನ ಪಲ್ಲಕ್ಕಿಯನ್ನು ಹೊರುವಂತೆ ಮತ್ತು ರಥವನ್ನು ಎಳೆಯು ವಂತೆ ವ್ಯವಸ್ಥೆಮಾಡಿದನು. ಅನುಕ್ರಮವಾಗಿ ಅಗಸ್ತ್ಯರ ಸರದಿಯೂ ಬಂದಿತು. ಆ ಸಮಯದಲ್ಲಿ ಮಹಾತೇಜಸ್ವಿಯಾದ, ಬ್ರಹ್ಮವಿದರಲ್ಲಿ ಶ್ರೇಷ್ಠನಾದ ಭೃಗುವು ಆಶ್ರಮದಲ್ಲಿ ಕುಳಿತಿದ್ದ ಅಗಸ್ತ್ಯರಿಗೆ ಹೇಳಿದನು:

“ಮಹಾಮುನಿಯೇ! ದೇವೇಂದ್ರನ ಪದವಿಯಲ್ಲಿ ಕುಳಿತಿರುವ ದುರ್ಮತಿಯಾದ ಈ ನಹುಷನ ಅವಹೇಳನವನ್ನು ನಾವೇಕೆ ಸಹಿಸಿ ಕೊಂಡಿರೋಣ?”

ಅಗಸ್ತ್ಯರು ಹೇಳುತ್ತಾರೆ:

“ಭೃಗುಮುನಿಯೇ! ನೀನು ಹೇಳುವುದೇನೋ ಸರಿ. ಆದರೆ ವರದನಾದ ಬ್ರಹ್ಮನು ಇವನಿಗೆ ವರವನ್ನು ಕೊಟ್ಟಿರುವನು. ಈ ವಿಷಯವು ನಿನಗೂ ತಿಳಿದಿದೆ. ಹೀಗಿರುವಾಗ ನಾನು ಇವನಿಗೆ ಶಾಪಕೊಡಲು ಹೇಗೆ ತಾನೇ ಸಾಧ್ಯವಾಗುವುದು? (ಶಾಪವು ನಿರರ್ಥಕವಾಗಬಹುದು.) ಇವನು ಸ್ವರ್ಗಲೋಕಕ್ಕೆ ಬರುವ ಸಮಯದಲ್ಲಿ–**‘ಯೋ ಮೇ ದೃಷ್ಟಿಪಥಂ ಗಚ್ಛೇತ್ ಸ ಮೇ ವಶ್ಯೋ ಭವೇತ್’**– ‘ಯಾವನು ನನ್ನ ಕಣ್ಣುಗಳಿಗೆ ಬೀಳುವನೋ, ದೃಗ್ಗೋಚರನಾಗುವನೋ ಅವನು ನನಗೆ ಅಧೀನನಾಗಲಿ’–ಎಂದು ಬ್ರಹ್ಮನನ್ನು ವರಕೇಳಿದನು. ಬ್ರಹ್ಮನು–‘ಹಾಗೆಯೇ ಆಗಲಿ’–ಎನ್ನುತ್ತಾ ಅಮೋಘವಾದ ಈ ವರವನ್ನು ದಯಪಾಲಿಸಿದನು.

ಈ ಕಾರಣದಿಂದಲೇ ಅವನನ್ನು ನಾನಾಗಲೀ, ನೀನಾಗಲೀ, ಇತರ ಯಾವ ಋಷಿಶ್ರೇಷ್ಠನೇ ಆಗಲೀ–ದಹಿಸಲು ಸಾಧ್ಯವಾಗಿಲ್ಲ. ಸ್ವರ್ಗದಿಂದ ತಳ್ಳಲೂ ಸಾಧ್ಯವಾಗಿಲ್ಲ. ಹಿಂದೆ ಮಹಾತ್ಮನಾದ ಬ್ರಹ್ಮನು ಇವನಿಗೆ ಕುಡಿಯಲು ಅಮೃತವನ್ನೂ ಕೊಟ್ಟುಬಿಟ್ಟನು. ಈ ಕಾರಣದಿಂದಲೂ ಇವನನ್ನು ಸ್ವರ್ಗದಿಂದ ಕೆಳಕ್ಕೆ ತಳ್ಳಲು ನಮಗೆ ಸಾಧ್ಯವಾಗಿಲ್ಲ. ಬ್ರಹ್ಮನು ಇವನಿಗೆ ವರವನ್ನು ಕೊಟ್ಟಿರುವುದು ಪ್ರಜೆಗಳ ದುಃಖಕ್ಕೇ ಕಾರಣವಾದಂತಾಯಿತು. ಈ ನರಾಧಮನು ಬ್ರಾಹ್ಮಣರ ವಿಷಯದಲ್ಲಿಯೇ ಅಧರ್ಮದಿಂದ ವರ್ತಿಸುತ್ತಿರುವನು. ವಾಗ್ಮಿಗಳಲ್ಲಿ ಶ್ರೇಷ್ಠನಾದವನೇ! ಈ ಸಮಯದಲ್ಲಿ ನಾವು ಮಾಡಬೇಕಾದ ಕರ್ತವ್ಯವೇನೆಂಬುದನ್ನು ಹೇಳು. ನೀನು ಹೇಗೆ ಹೇಳುವೆಯೋ ಹಾಗೆ ನಾನು ಮಾಡುತ್ತೇನೆ. ಇದರಲ್ಲಿ ಸಂದೇಹವೇ ಇಲ್ಲ.”

ಭೃಗುವು ಹೇಳುತ್ತಾನೆ:

“ಮಹಾಮುನಿಯೇ! ಪಿತಾಮಹನ ಆಜ್ಞೆಯಿಂದಲೇ ನಾನು ನಿನ್ನ ಬಳಿಗೆ ಬಂದಿರುವೆನು. ದೈವವಶದಿಂದ ವಿಮೋಹಿತನಾಗಿರುವ ಬಲಿಷ್ಠನಾದ

ನಹುಷನಿಗೆ ಪ್ರತೀಕಾರವನ್ನು ಮಾಡುವುದೇ ನನ್ನ ಆಗಮನದ ಉದ್ದೇಶ ವಾಗಿದೆ. ಮಹಾದುರ್ಬುದ್ಧಿಯವನಾದ, ದೇವರಾಜನ ಪದವಿಯಲ್ಲಿರುವ ನಹುಷನು ಇಂದು ನಿನ್ನನ್ನು ತನ್ನ ರಥಕ್ಕೆ ಹೂಡುತ್ತಾನೆ. ಇಂದೇ ನಾನು ನನ್ನ ತೇಜಸ್ಸಿನಿಂದ, ಅಹಂಕಾರದಿಂದ ಕೊಬ್ಬಿರುವ ಆ ನಹುಷನನ್ನು ಇಂದ್ರಪದವಿ ಯಿಂದ ಭ್ರಷ್ಟನನ್ನಾಗಿ ಮಾಡಿಬಿಡುತ್ತೇನೆ. ಪಾಪಕರ್ಮಿಯಾದ ಬಲುಕೆಟ್ಟ ಬುದ್ಧಿಯವನಾದ ಈ ನಹುಷನನ್ನು ಇಂದ್ರಪದವಿಯಿಂದ ಕಿತ್ತುಹಾಕಿ ನೀನು ನೋಡುತ್ತಿರುವಂತೆಯೇ ಶತಕ್ರತುವನ್ನೇ ಪುನಃ ಇಂದ್ರಪದವಿಯಲ್ಲಿ ನೆಲೆ ಗೊಳಿಸುತ್ತೇನೆ. ದೈವದಿಂದಲೇ ನಷ್ಟವಾದ ಬುದ್ಧಿಯುಳ್ಳವನಾಗಿರುವುದರಿಂದ ಮಂದಬುದ್ಧಿಯಾದ, ದೇವೇಂದ್ರನ ಪದವಿಯಲ್ಲಿ ಕುಳಿತಿರುವ ಈ ನಹುಷನು ಆತ್ಮವಿನಾಶಕ್ಕಾಗಿಯೇ ನಿನ್ನನ್ನು ಕಾಲಿನಿಂದ ಒದೆಯುತ್ತಾನೆ. ಆದರಿಂದ ಅತಿಯಾಗಿ ಕೋಪಗೊಳ್ಳುವ ನಾನು–ಧರ್ಮವನ್ನು ಉಲ್ಲಂಘಿಸಿರುವ ಬ್ರಾಹ್ಮಣರಿಗೆ ದ್ರೋಹವನ್ನೆಸಗಿರುವ, ಪಾಪಿಷ್ಠನಾದ ನಹುಷನನ್ನು– 'ಅಹಿರ್ಭವಸ್ವ'–'ಸರ್ಪನಾಗು'–ಎಂದು ಶಪಿಸುತ್ತೇನೆ. ಆ ಸಮಯದಲ್ಲಿ ನಾಲ್ಕು ದಿಕ್ಕುಗಳಿಂದಲೂ ಪ್ರತಿಧ್ವನಿತವಾಗಿ ಬರುವ 'ಅಗಸ್ತ್ಯನನ್ನು ಒದೆದ ನಹುಷನಿಗೆ ಧಿಕ್ಕಾರವಿರಲಿ'–ಎಂಬ ಧಿಕ್ಕಾರಶಬ್ದದಿಂದಲೇ ವಿನಾಶ ಹೊಂದುವ, ಶತ್ರುವಾದ, ದುರ್ಬುದ್ಧಿಯವನಾದ, ಪಾಪಕರ್ಮಿಯಾದ, ಐಶ್ವರ್ಯದಿಂದಲೂ ಬಲದಿಂದಲೂ ವಿಮೋಹಿತನಾಗಿರುವ ನಹುಷನನ್ನು ನೀನು ನೋಡುತ್ತಿರುವಂತೆಯೇ ಭೂಮಿಯಲ್ಲಿ ಬೀಳಿಸುತ್ತೇನೆ. ಅಥವಾ ನಿನಗೆ ಹೇಗೆ ಸರಿದೋರುವುದೋ–ಹಾಗೆ ಮಾಡಲೂ ನಾನು ಸಿದ್ಧನಾಗಿದ್ದೇನೆ."

ಯುಧಿಷ್ಠಿರ! ಭೃಗುಮುನಿಯು ಹೀಗೆ ಹೇಳಿದನಂತರ ಅವಿನಾಶಿಯಾದ, ಮಿತ್ರಾವರುಣನ ಮಗನಾದ ಅಗಸ್ತ್ಯನು ಪರಮಪ್ರೀತನೂ ಚಿಂತಾರಹಿತನೂ ಆದನು."

೯೯ನೆಯ ಅಧ್ಯಾಯವು ಮುಗಿಯಿತು.

೧೦೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಹುಷನ ಪತನ : ಇಂದ್ರಪದವಿಯಲ್ಲಿ ಶತಕ್ರತುವಿಗೆ ಪುನಃ ಪಟ್ಟಾಭಿಷೇಕ : ದೀಪದಾನದ ಮಹಿಮೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕಥಂ ವೈ ಸ ವಿಪನ್ನಶ್ಚ ಕಥಂ ವೈ ಪಾತಿತೋ ಭುವಿ ।
ಕಥಂ ಚಾನಿನ್ದ್ರತಾಂ ಪ್ರಾಪ್ತಸ್ತದ್ಭವಾನ್ವಕ್ತುಮರ್ಹತಿ ॥೧॥

"ಪಿತಾಮಹನೇ! ನಹುಷನಿಗೆ ವಿಪತ್ತು ಹೇಗೆ ಒದಗಿಬಂದಿತು? ಅವನು ಭೂಮಿಯಲ್ಲಿ ಹೇಗೆ ಬಿದ್ದನು? ಅವನಿಗೆ ಇಂದ್ರಪದವಿಯೂ ಹೇಗೆ ತಪ್ಪಿಹೋಯಿತು? ಈ ವಿಷಯಗಳನ್ನು ನನಗೆ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ನಾನು ಹಿಂದೆ ಹೇಳಿದಂತೆ ಭೃಗು ಮತ್ತು ಅಗಸ್ತ್ಯರು ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದಾಗ ಮಹಾತ್ಮನಾದ ನಹುಷನ ಅರಮನೆಯಲ್ಲಿ ದೈವಿಕವಾದ ಮತ್ತು ಮಾನುಷಿಕವಾದ ಸಕಲಕರ್ಮಗಳೂ ನಡೆಯುತ್ತಲೇ ಇದ್ದುವು. ಸಮಸ್ತವಾದ ಉಪಕರಣಗಳಿಂದಲೂ ಯುಕ್ತವಾದ ದೀಪದಾನ, ಅನ್ನದಾನ, ಬಲಿಕರ್ಮ, ನಾನಾಪ್ರಕಾರವಾದ ಸ್ನಾನ-ಅಭಿಷೇಕಾದಿಗಳು–ಎಲ್ಲವೂ ಯಥಾಪೂರ್ವವಾಗಿಯೇ ನಡೆಯುತ್ತಿದ್ದುವು. ದೇವಲೋಕ-ಮನುಷ್ಯಲೋಕಗಳಲ್ಲಿ ವಿದ್ವಾಂಸರಿಂದ ನಿರೂಪಿತವಾದ ಸದಾಚಾರಗಳೆಲ್ಲವೂ ಮಹಾತ್ಮನಾದ, ದೇವೇಂದ್ರನಾದ ನಹುಷನ ಅರಮನೆಯಲ್ಲಿ ನಡೆಯುತ್ತಿದ್ದುವು. ಗೃಹಸ್ಥರ ಮನೆಗಳಲ್ಲಿ ಹೀಗೆ ಸದಾಚಾರಗಳು ನಡೆಯುತ್ತಿದ್ದರೆ ಅಂತಹ ಗೃಹಸ್ಥರು ನಿಶ್ಚಯವಾಗಿಯೂ ಉನ್ನತಿಯನ್ನು ಹೊಂದುತ್ತಾರೆ. ಧೂಪದಾನ, ದೀಪದಾನ ಮತ್ತು ದೇವತೆಗಳಿಗೆ ಮಾಡುವ ನಮಸ್ಕಾರ–ಮುಂತಾದುವುಗಳಿಂದಲೂ ಗೃಹಸ್ಥರ ಐಶ್ವರ್ಯವು ವೃದ್ಧಿಸುತ್ತದೆ. ಯಾವ ರೀತಿಯಲ್ಲಿ ಗೃಹಸ್ಥರು ಸಿದ್ಧವಾದ ಅನ್ನದಲ್ಲಿ ಮೊದಲು ಅತಿಥಿಗಳಿಗೆ ಉಣಬಡಿಸುವರೋ–ಅದೇ ರೀತಿಯಲ್ಲಿ ಮನೆಯ ದೇವತೆಗಳನ್ನು ಉದ್ದೇಶಿಸಿ ಬಲಿಯನ್ನು ಸಮರ್ಪಿಸಿದರೆ ದೇವತೆಗಳು ಸುಪ್ರೀತರಾಗುತ್ತಾರೆ. ಬಲಿಕರ್ಮವನ್ನು ಮಾಡು

ವುದರಿಂದ ಗೃಹಸ್ಥನಿಗೆ ಎಷ್ಟು ಸಂತೋಷವಾಗುವುದೋ–ಅದಕ್ಕೆ ನೂರರಷ್ಟು ಸಂತೋಷವು ಬಲಿಯನ್ನು ಸ್ವೀಕರಿಸುವ ದೇವತೆಗಳಿಗೆ ಆಗುತ್ತದೆ. ಇದೇ ರೀತಿಯಲ್ಲಿ ಸತ್ಪುರುಷರು ತಮಗೆ ಕಲ್ಯಾಣವನ್ನುಂಟುಮಾಡುವ ಧೂಪ-ದೀಪ ಗಳನ್ನೂ ನಮಸ್ಕಾರಪೂರ್ವಕವಾಗಿ ದೇವತೆಗಳಿಗೆ ಸಮರ್ಪಿಸುತ್ತಾರೆ.

ಸ್ನಾನೇನಾದ್ಭಿಶ್ಚ ಯತ್ಕರ್ಮ ಕ್ರಿಯತೇ ವೈ ವಿಪಶ್ಚಿತಾ ।
ನಮಸ್ಕಾರಪ್ರಯುಕ್ತೇನ ತೇನ ಪ್ರೀಣನ್ತಿ ದೇವತಾಃ ॥೯॥

ಪಿತರಶ್ಚ ಮಹಾಭಾಗಾ ಋಷಯಶ್ಚ ತಪೋಧನಾಃ ।
ಗೃಹ್ಯಾಶ್ಚ ದೇವತಾಃ ಸರ್ವಾಃ ಪ್ರೀಯನ್ತೇ ವಿಧಿನಾರ್ಚಿತಾಃ ॥೧೦॥

ವಿದ್ವಾಂಸನಾದವನು ಸ್ನಾನಮಾಡಿ ನಮಸ್ಕಾರಪೂರ್ವಕವಾಗಿ ತರ್ಪಣಾದಿಗಳನ್ನು ಮಾಡುವುದರಿಂದ ದೇವತೆಗಳು ಸುಪ್ರೀತರಾಗುತ್ತಾರೆ. ಶಾಸ್ತ್ರವಿಧಿಗೆ ಅನುಸಾರವಾಗಿ ಅರ್ಚನೆಮಾಡುವುದರಿಂದ ಮಹಾಭಾಗರಾದ ಪಿತೃಗಳೂ, ತಪೋಧನರಾದ ಋಷಿಗಳೂ, ಸಮಸ್ತ ಗೃಹದೇವತೆಗಳೂ ಸುಪ್ರೀತರಾಗುತ್ತಾರೆ.

ಇಂತಹ ವಿಚಾರಗಳಿಂದ ತುಂಬಿದ ಬುದ್ಧಿಯನ್ನೇ ಆಶ್ರಯಿಸಿ ನರೇಶ್ವರನಾದ ನಹುಷನು ಮಹತ್ತಾದ ಇಂದ್ರಪದವಿಯನ್ನು ಪಡೆದನಂತರವೂ ಅದ್ಭುತವಾದ ಈ ಪುಣ್ಯಕರ್ಮಗಳನ್ನು ಮಾಡುತ್ತಲೇ ಇದ್ದನು. ಆದರೆ ಸ್ವಲ್ಪ ಕಾಲವು ಕಳೆದನಂತರ ನಹುಷನ ಭಾಗ್ಯಕ್ಷಯದ ಕಾಲವು ಸನ್ನಿಹಿತವಾಯಿತು. ತಾನು ಮಾಡುತ್ತಿದ್ದ ಎಲ್ಲ ಸದಾಚಾರಕರ್ಮಗಳನ್ನೂ ತಿರಸ್ಕರಿಸುತ್ತಾ ಬ್ರಾಹ್ಮಣರ ತೇಜೋವಧೆಯಂತಹ ಪಾಪಕರ್ಮಗಳನ್ನು ಮಾಡಲು ಪ್ರಾರಂಭಿ ಸಿದನು. ಬಲದರ್ಪಿತನಾದ, ದೇವರಾಜನಾದ ನಹುಷನು ಆ ಎಲ್ಲ ಸತ್ಕರ್ಮ ಗಳಿಂದಲೂ ಭ್ರಷ್ಟನಾಗಿ ಹೋದನು. (ಸತ್ಕರ್ಮಗಳೆಲ್ಲವನ್ನೂ ಪರಿತ್ಯಜಿಸಿ ದನು.) ಧೂಪದಾನ, ದೀಪದಾನ, ಜಲತರ್ಪಣ– ಮುಂತಾದುವನ್ನು ವಿಧಿಪೂರ್ವಕವಾಗಿ ಮಾಡುತ್ತಿರಲಿಲ್ಲ. ಅಂತಹ ದುರಾಚಾರಗಳ ಪರಿಣಾಮ ವಾಗಿ ನಹುಷನ ಯಜ್ಞಭೂಮಿಯನ್ನು ರಾಕ್ಷಸರು ಆಕ್ರಮಿಸಿದರು. ರಾಕ್ಷಸ ರಿಂದ ಪ್ರಭಾವಿತನಾದ ಮಹಾಬಲನಾದ ನಹುಷನು ನಸು-ನಗುತ್ತಾ ಸರಸ್ವತೀ

ನದಿಯ ತೀರದಿಂದ ಶೀಘ್ರವಾಗಿ ಬಂದು ತನ್ನ ರಥವನ್ನು ಎಳೆದುಕೊಂಡು ಹೋಗುವಂತೆ ಅಗಸ್ತ್ಯನಿಗೆ ಹೇಳಿಕಳುಹಿಸಿದನು. ಆ ಸಮಯದಲ್ಲಿ ಮಹಾತೇಜಸ್ವಿಯಾದ ಭೃಗುಮುನಿಯು ಮೈತ್ರಾವರುಣಿಗೆ ಹೇಳಿದನು:

ನಿಮೀಲಯ ಸ್ವನಯನೇ ಜಟಾಂ ಯಾವದ್ವಿಶಾಮಿ ತೇ ॥೧೬॥

"ಮಹಾಮುನಿಯೇ! ನಾನು ನಿನ್ನ ಜಟೆಯಲ್ಲಿ ಅಡಗಿಕೊಳ್ಳುವವರೆಗೂ ನೀನು ನಿನ್ನ ಕಣ್ಣುಗಳನ್ನು ಮುಚ್ಚಿಕೊಂಡಿರು."

ಹೀಗೆ ಹೇಳಿ ಮಹಾತೇಜಸ್ವಿಯಾದ ಭೃಗುವು ನಹುಷನನ್ನು ಕೆಳಕ್ಕೆ ಬೀಳಿಸುವ ಸಲುವಾಗಿ ಸ್ಥಾಣುವಿನಂತೆ ಕುಳಿತಿದ್ದ ಅಗಸ್ತ್ಯನ ಜಟೆಯನ್ನು ಪ್ರವೇಶಿಸಿದನು. ಅನಂತರ ದೇವರಾಜನು ಅಗಸ್ತ್ಯನನ್ನು ರಥವನ್ನೆಳೆಯುವ ವಾಹಕನನ್ನಾಗಿ ಪಡೆದುಕೊಂಡನು.

ಅಗಸ್ತ್ಯನು ನಹುಷನ ಬಳಿಗೆ ಹೋಗುತ್ತಲೇ ಅವನೊಡನೆ ಹೇಳಿದನು:

"ದೇವೇಂದ್ರನೇ! ನನ್ನನ್ನು ರಥಕ್ಕೆ ಶೀಘ್ರವಾಗಿ ಯೋಜಿಸು. ನಾನು ಯಾವಸ್ಥಳಕ್ಕೆ ನಿನ್ನನ್ನು ಕೊಂಡೊಯ್ಯಲಿ? ನೀನು ಎಲ್ಲಿಗೆ ಕರೆದೊಯ್ಯಬೇಕೆಂದು ಹೇಳುವೆಯೋ ಅಲ್ಲಿಗೆ ನಿನ್ನನ್ನು ಒಯ್ಯುತ್ತೇನೆ."

ಅಗಸ್ತ್ಯನು ಹೀಗೆ ಹೇಳುತ್ತಲೇ ನಹುಷನು ಅವನನ್ನು ತನ್ನ ರಥದ ಮೂಕಿಗೆ ಕಟ್ಟಿದನು. ಅಗಸ್ತ್ಯನನ್ನು ರಥಕ್ಕೆ ಕಟ್ಟುತ್ತಲೇ ಅಗಸ್ತ್ಯನ ಜಟೆಯಲ್ಲಿದ್ದ ಭೃಗುವು ಪರಮಹರ್ಷಿತನಾದನು. ಆ ಸಮಯದಲ್ಲಿ ಭೃಗುವು ನಹುಷನನ್ನು ಸಾಕ್ಷಾತ್ತಾಗಿ ನೋಡಲಿಲ್ಲ. ತನ್ನನ್ನು ರಥದ ಮೂಕಿಗೆ ಕಟ್ಟಿದರೂ ಮಹಾತ್ಮನಾದ ನಹುಷನ ವರದ ಪ್ರಭಾವವೇನೆಂಬುದನ್ನು ತಿಳಿದಿದ್ದ ಅಗಸ್ತ್ಯನು ಕೋಪ ಗೊಳ್ಳಲಿಲ್ಲ. ರಥದಲ್ಲಿ ಕುಳಿತಿದ್ದ ನಹುಷನು ಅಗಸ್ತ್ಯನನ್ನು ಮುಂದೆ ಹೋಗು ವಂತೆ ಚಾವಟಿಯಿಂದ ಹೊಡೆದು ಪ್ರಚೋದಿಸಿದನು. ಧರ್ಮಾತ್ಮನಾದ ಅಗಸ್ತ್ಯನು ಅದರಿಂದಲೂ ಕೋಪಗೊಳ್ಳಲಿಲ್ಲ. ಸಾವಕಾಶವಾಗಿ ರಥವನ್ನು ಎಳೆದುಕೊಂಡು ಮುಂದೆ ಹೋಗುತ್ತಿದ್ದನು. ಅದು ನಹುಷನಿಗೆ ಸಹ್ಯವಾಗ ಲಿಲ್ಲ. ಒಡನೆಯೇ ನಹುಷನು ಪರಮಕ್ರುದ್ಧನಾಗಿ ಎಡಗಾಲಿನಿಂದ ಅಗಸ್ತ್ಯನ ಶಿರಸ್ಸನ್ನು ಪ್ರಹರಿಸಿದನು. ನಹುಷನು ಹೀಗೆ ಒದ್ದೊಡನೆಯೇ ಜಟಾಂತರ್ಗತ

ನಾಗಿದ್ದ ಭೃಗುವು ಅತ್ಯಂತಕ್ರುದ್ಧನಾಗಿ ಪಾಪಾತ್ಮನಾದ ನಹುಷನನ್ನು ಶಪಿಸಿಬಿಟ್ಟನು:

ಯಸ್ಮಾತ್ಪದಾಹತಃ ಕ್ರೋಧಾಚ್ಛಿರಸೀಮಂ ಮಹಾಮುನಿಮ್ ।
ತಸ್ಮಾದಾಶು ಮಹೀಂ ಗಚ್ಛ ಸರ್ಪೋ ಭೂತ್ವಾ ಸುದುರ್ಮತೇ ॥೨೪॥

"ದುರ್ಮತಿಯೇ! ನೀನು ಕ್ರುದ್ಧನಾಗಿ ಈ ಮಹಾಮುನಿಯ ತಲೆಯನ್ನು ಎಡಗಾಲಿನಿಂದ ಒದೆದೆಯಲ್ಲವೇ? ಆದುದರಿಂದ ನೀನು ಬೇಗನೆ ಸರ್ಪವಾಗಿ ಭೂಮಿಯ ಮೇಲೆ ಬೀಳು."

ಕಣ್ಣಿಗೆ ಕಾಣಿಸದಿದ್ದ ಭೃಗುಮುನಿಯು ಹೀಗೆ ಶಾಪಕೊಟ್ಟೊಡನೆಯೇ ನಹುಷನು ಸರ್ಪವಾಗಿ ಭೂಮಿಯಮೇಲೆ ಬಿದ್ದುಬಿಟ್ಟನು.

ಯುಧಿಷ್ಠಿರ! ನಹುಷನೇನಾದರೂ ಭೃಗುಮುನಿಯನ್ನು ನೋಡಿಬಿಟ್ಟಿದ್ದರೆ ಬ್ರಹ್ಮನ ವರದ ಪರಿಣಾಮವಾಗಿ, ನಹುಷನ ತೇಜಸ್ಸಿನಿಂದ ತನ್ನ ತೇಜಸ್ಸನ್ನು ಕಳೆದುಕೊಳ್ಳುತ್ತಿದ್ದ ಭೃಗುವು, ನಹುಷನನ್ನು ಸ್ವರ್ಗದಿಂದ ಜಾರುವಂತೆ ಮಾಡಲು ಸಮರ್ಥನಾಗುತ್ತಿರಲಿಲ್ಲ. ನಹುಷನು ಅನೇಕ ಪ್ರಕಾರವಾದ ದಾನಗಳನ್ನು ಕೊಡುತ್ತಿದ್ದುದರಿಂದಲೂ, ತಪಸ್ಸಿನಲ್ಲಿ ನಿರತನಾಗಿರುತ್ತಿದ್ದುದ ರಿಂದಲೂ, ನಿಯಮಾನುಷ್ಠಾನಪರನಾಗಿದ್ದುದರಿಂದಲೂ ಭೂಮಿಯ ಮೇಲೆ ಬಿದ್ದರೂ ಸರ್ಪತ್ವವನ್ನು ಹೊಂದಿದರೂ ತನ್ನ ಹಿಂದಿನ ಸ್ಮರಣಶಕ್ತಿಯನ್ನು ಕಳೆದುಕೊಳ್ಳಲಿಲ್ಲ. ಕೆಳಕ್ಕೆ ಬಿದ್ದ ನಹುಷನು ತನಗೆ ಶಾಪದ ವಿಮೋಚನೆ ಯಾಗಬೇಕೆಂದು ಭೃಗುವನ್ನು ಕೇಳಿಕೊಂಡನು. ನಹುಷನ ದಯಾಪೂರ್ಣ ವಾದ ಪ್ರಾರ್ಥನೆಯನ್ನು ಕೇಳಿ ಅಗಸ್ತ್ಯನು ಕೃಪೆಯಿಂದ ನಹುಷನಿಗೆ ಶಾಪದ ವಿಮೋಚನೆಯನ್ನು ಸೂಚಿಸುವಂತೆ ಭೃಗುವನ್ನು ಕೇಳಿಕೊಂಡನು. ಭೃಗು ಮುನಿಯೂ ಕೂಡ ಪ್ರಸನ್ನನಾಗಿ ಶಾಪವು ಅಂತ್ಯವಾಗುವ ಕಾಲವನ್ನು ಹೇಳಿದನು:

ರಾಜಾ ಯುಧಿಷ್ಠಿರೋ ನಾಮ ಭವಿಷ್ಯತಿ ಕುಲೋದ್ವಹಃ ।
ಸ ತ್ವಾಂ ಮೋಕ್ಷಯಿತಾ ಶಾಪಾದಿತ್ಯುಕ್ತ್ವಾನ್ತರಧೀಯತ ॥೩೦॥

'ನಿನ್ನ ಕುಲದಲ್ಲಿ ಯುಧಿಷ್ಠಿರನೆಂಬ ಹೆಸರಿನ ಪ್ರಸಿದ್ಧನಾದ, ಕುಲಶ್ರೇಷ್ಠನಾದ ರಾಜನು ಹುಟ್ಟುತ್ತಾನೆ. ಅವನು ನಿನ್ನನ್ನು ಶಾಪದಿಂದ ವಿಮೋಚನಗೊಳಿಸುತ್ತಾನೆ'–ಎಂದು ಹೇಳಿ ಭೃಗುವು ಅಂತರ್ಹಿತನಾದನು.

ಮಹಾತೇಜಸ್ವಿಯಾದ ಅಗಸ್ತ್ಯನು ಕೂಡ ಶತಕ್ರತುವಿನ ಕಾರ್ಯವನ್ನು ಮಾಡಿಕೊಟ್ಟು ದ್ವಿಜರಿಂದ ಸಮ್ಮಾನಿತನಾಗಿ ತನ್ನ ಆಶ್ರಮಕ್ಕೆ ಹೊರಟುಹೋದನು. ಯುಧಿಷ್ಠಿರ! ಭೃಗುವು ಹೇಳಿದ್ದಂತೆ ನೀನೇ ನಹುಷನನ್ನು ಶಾಪದಿಂದ ಉದ್ಧರಿಸಿದೆ. ಅನಂತರ ನಹುಷನು ನೀನು ನೋಡುತ್ತಿದ್ದಂತೆಯೇ ಬ್ರಹ್ಮಭವನಕ್ಕೆ ಹೋದನು.

ಆ ಸಮಯದಲ್ಲಿ ಭೃಗುವು ತನ್ನ ಶಾಪದಿಂದ ನಹುಷನನ್ನು ಭೂಮಿಯ ಮೇಲೆ ಬೀಳಿಸಿ ಬ್ರಹ್ಮಲೋಕಕ್ಕೆ ಹೋಗಿ ಈ ವಿಷಯವನ್ನು ಬ್ರಹ್ಮನಿಗೆ ತಿಳಿಯಪಡಿಸಿದನು. ಬಳಿಕ ಪಿತಾಮಹನು ಶತಕ್ರತುವನ್ನು ಕರೆತಂದು ದೇವತೆಗಳಿಗೆ ಹೇಳಿದನು:

“ದೇವತೆಗಳೇ! ನನ್ನ ವರದಾನದಿಂದಾಗಿ ನಹುಷನು ದೇವರಾಜ್ಯವನ್ನು ಪಡೆದುಕೊಂಡನು. ಆದರೆ ಕ್ರುದ್ಧನಾದ ಅಗಸ್ತ್ಯನಿಂದ ಸ್ವರ್ಗದಿಂದ ಬೀಳಿಸಲ್ಪಟ್ಟು ಭೂಮಿಯ ಮೇಲೆ ಬಿದ್ದನು. ರಾಜನಿಲ್ಲದಿದ್ದರೆ ಎಲ್ಲಿಯೂ ಯಾರೂ ಕ್ಷೇಮದಿಂದಿರಲು ಸಾಧ್ಯವಾಗುವುದೇ ಇಲ್ಲ. ಆದುದರಿಂದ ಈ ಶಕ್ರನನ್ನೇ ನೀವು ಪುನಃ ದೇವರಾಜನ ಪದವಿಯಲ್ಲಿ ಕುಳ್ಳಿರಿಸಿ ಪಟ್ಟಾಭಿಷೇಕವನ್ನು ಮಾಡಿರಿ.”

ಯುಧಿಷ್ಠಿರ! ಪಿತಾಮಹನಾದ ಬ್ರಹ್ಮನು ಹೇಳಿದುದನ್ನು ಕೇಳಿ ದೇವತೆಗಳು ಪರಮಹೃಷ್ಟರಾಗಿ ಹಾಗೆಯೇ ಆಗಲೆಂದು ಪ್ರತ್ಯುತ್ತರಿಸಿದರು. ಪೂಜ್ಯನಾದ ಬ್ರಹ್ಮನಿಂದಲೇ ದೇವರಾಜ್ಯದ ಅಧಿಪತಿಯಾಗಿ ಅಭಿಷಿಕ್ತನಾದ ವಾಸವನು ಹಿಂದಿನಂತೆಯೇ ರಾರಾಜಿಸಿದನು.

ಪೂರ್ವಕಾಲದಲ್ಲಿ ನಹುಷನ ಅಪರಾಧದಿಂದಾಗಿ ಹೀಗೆ ನಡೆಯಿತು. ನಹುಷನು ಅನವರತವಾಗಿ ಮಾಡುತ್ತಿದ್ದ ಧೂಪದಾನ-ದೀಪದಾನಾದಿ ಕರ್ಮಗಳಿಂದ ಪುನಃ ಸಿದ್ಧಿಯನ್ನು ಪಡೆದನು.

ತಸ್ಮಾದ್ದೀಪಾಃ ಪ್ರದಾತವ್ಯಾಃ ಸಾಯಂ ವೈ ಗೃಹಮೇಧಿಭಿಃ ।
ದಿವ್ಯಂ ಚಕ್ಷುರವಾಪ್ನೋತಿ ಪ್ರೇತ್ಯ ದೀಪಸ್ಯ ದಾಯಕಃ ॥೬॥

ಆದುದರಿಂದ ಗೃಹಸ್ಥರಾದವರು ಸಾಯಂಕಾಲದ ಸಮಯದಲ್ಲಿ

ದೀಪವನ್ನು ದಾನಮಾಡಬೇಕು. ದೀಪದಾನಮಾಡಿದವನು ಮರಣಾನಂತರದಲ್ಲಿ ದಿವ್ಯದೃಷ್ಟಿಯನ್ನು ಪಡೆದುಕೊಳ್ಳುತ್ತಾನೆ.

ಪೂರ್ಣಚನ್ದ್ರಪ್ರತೀಕಾಶಾ ದೀಪದಾಶ್ಚ ಭವನ್ತ್ಯುತ ।
ಯಾವದಕ್ಷಿನಿಮೇಷಾಣಿ ಜ್ವಲನ್ತೇ ತಾವತೀಃ ಸಮಾಃ ।
ರೂಪವಾನ್ಬಲವಾಂಶ್ಚಾಪಿ ನರೋ ಭವತಿ ದೀಪದಃ ॥೬೧॥

ದೀಪದಾನವನ್ನು ಮಾಡುವ ಮನುಷ್ಯರು ನಿಶ್ಚಯವಾಗಿಯೂ ಪೂರ್ಣಚಂದ್ರನಂತೆ ಕಾಂತಿಯುಕ್ತರಾಗುತ್ತಾರೆ. ದಾನಕೊಟ್ಟ ದೀಪವು ಪ್ರಜ್ವಲಿಸುತ್ತಿರುವಾಗ ಎಷ್ಟು ಬಾರಿ ಕಣ್ಣುರೆಪ್ಪೆಗಳು ಸ್ಪಂದಿಸುವುವೋ–ಅಷ್ಟು ವರ್ಷಗಳ ಕಾಲ ದೀಪವನ್ನು ದಾನಮಾಡಿದವನು ರೂಪವಂತನಾಗಿಯೂ ಬಲಿಷ್ಠನಾಗಿಯೂ ಇರುತ್ತಾನೆ."

೧೦೦ನೆಯ ಅಧ್ಯಾಯವು ಮುಗಿಯಿತು.

೧೦೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವುದರಿಂದ ಪ್ರಾಪ್ತವಾಗುವ ದೋಷದ ವಿಷಯದಲ್ಲಿ ಕ್ಷತ್ರಿಯನಿಗೂ-ಚಾಂಡಾಲನಿಗೂ ನಡೆದ ಸಂವಾದ: ಬ್ರಾಹ್ಮಣನ ಸ್ವತ್ತಿನ ರಕ್ಷಣೆಯಲ್ಲಿ ಪ್ರಾಣಾರ್ಪಣೆ ಮಾಡಿದ ಚಾಂಡಾಲನಿಗೆ ಸ್ವರ್ಗಪ್ರಾಪ್ತಿ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಬ್ರಾಹ್ಮಣಸ್ವಾನಿ ಯೇ ಮನ್ದಾ ಹರನ್ತಿ ಭರತರ್ಷಭ ।
ನೃಶಂಸಕಾರಿಣೋ ಮೂಢಾಃ ಕ್ವ ತೇ ಗಚ್ಛನ್ತಿ ಮಾನವಾಃ ॥೧॥

"ಭರತಶ್ರೇಷ್ಠನೇ! ಬ್ರಾಹ್ಮಣರ ಸ್ವತ್ತನ್ನು ಅಪಹರಿಸುವ, ಮೂರ್ಖರಾದ, ಮಂದಬುದ್ಧಿಯುಳ್ಳ, ಕ್ರೂರಕರ್ಮಿಗಳಾದ ಮಾನವರು ಯಾವ ಲೋಕಗಳಿಗೆ ಹೋಗುತ್ತಾರೆ?"

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಚಾಂಡಾಲನಿಗೂ ಮತ್ತು ಕ್ಷತ್ರಬಂಧುವಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ."

ಒಮ್ಮೆ ರಾಜನೊಬ್ಬನು–ನೀರಿನ ಕುಂಡದಲ್ಲಿ ಶರೀರವನ್ನು ತೊಳೆಯುತ್ತಿದ್ದ, ವೃದ್ಧನಾಗಿದ್ದ ಚಾಂಡಾಲನನ್ನು ಪ್ರಶ್ನಿಸಿದನು:

"ಚಾಂಡಾಲನೇ! ನೀನು ವೃದ್ಧನಾಗಿರುವಂತೆ ಕಾಣುತ್ತಿರುವೆ. ಆದರೂ ಬಾಲಕನಂತೆ ಚೇಷ್ಟೆಯನ್ನು ಮಾಡುತ್ತಿರುವೆ. ನೀನು ನಾಯಿಗಳ ಮತ್ತು ಕತ್ತೆಗಳ ಜೊತೆಯಲ್ಲಿಯೇ ಓಡಾಡುತ್ತಿದ್ದು ಅವುಗಳ ಚಲನ-ವಲನಗಳಿಂದ ಹುಟ್ಟಿದ ಧೂಳಿಯನ್ನೇ ಯಾವಾಗಲೂ ಸೇವಿಸುತ್ತಿರುವೆ. ಈಗ ಶರೀರಕ್ಕೆ ಅಂಟಿ ಕೊಂಡಿರುವ ಹಸುವಿನ ಧೂಳಿನ ವಿಷಯದಲ್ಲಿ ಏಕಿಷ್ಟು ಉದ್ವೇಗ ಗೊಂಡಿರುವೆ?

ಸತ್ಪುರುಷರ ದೃಷ್ಟಿಯಿಂದ ನಿಂದ್ಯವಾದ ಕರ್ಮವು ಚಾಂಡಾಲನಿಗೆ ವಿಹಿತವಾಗಿದೆ. ಗೋವಿನ ಧೂಳಿಯಿಂದ ಧೂಸರಿತವಾಗಿರುವ ನಿನ್ನ ಶರೀರವನ್ನು ನೀರಿನ ಕುಂಡದಲ್ಲೇಕೆ ತೊಳೆಯುತ್ತಿರುವೆ?"

ಚಾಂಡಾಲನು ಹೇಳುತ್ತಾನೆ:

"ಮಹಾರಾಜ! ನಾನು ಗೋವಿನ ಧೂಳನ್ನು ತೊಳೆದುಕೊಳ್ಳುವುದಕ್ಕೆ ಕಾರಣವಿದೆ. ಈ ವಿಷಯದಲ್ಲಿ ಹಿಂದೆ ನಡೆದ ಒಂದು ಕಥೆಯನ್ನು ಹೇಳುವೆನು ಕೇಳು. ಬ್ರಾಹ್ಮಣನೊಬ್ಬನ ಹಸುಗಳನ್ನು ಯಾರೋ ಕದ್ದುಕೊಂಡು ಹೋಗುತ್ತಿದ್ದರು. ಆ ಸಮಯದಲ್ಲಿ ಅವುಗಳ ಹಾಲಿನಿಂದ ಮಿಶ್ರವಾದ ಧೂಳಿಯು ದಾರಿಯಲ್ಲಿದ್ದ ಸೋಮಲತೆಯ ಮೇಲೆ ಬಿದ್ದಿತು. ಆ ಸೋಮಲತೆ ಯನ್ನೇ ಯಾಗದಲ್ಲಿ ಉಪಯೋಗಿಸಿ, ಬ್ರಾಹ್ಮಣನ ಸ್ವತ್ತಾದ ಹಸುಗಳ ಹಾಲಿನ ಸಂಬಂಧವಿದ್ದ ಆ ಸೋಮರಸವನ್ನು ಯಜಮಾನನಾದಿಯಾಗಿ ಎಲ್ಲರೂ ಕುಡಿದುಬಿಟ್ಟರು. ಅದರಿಂದ ಅವರೆಲ್ಲರಿಗೂ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ ದೋಷವು ಉಂಟಾಯಿತು. ಅದರ ಪರಿಣಾಮವಾಗಿ ದೀಕ್ಷಿತ, ರಾಜ, ಅಲ್ಲಿದ್ದ ಯಾಜಕರು–ಇವರೆಲ್ಲರೂ ಅವಸಾನಾನಂತರದಲ್ಲಿ ನರಕಕ್ಕೆ ಹೋದರು.

ಬ್ರಾಹ್ಮಣನ ಗೋವುಗಳನ್ನು ಅಪಹರಿಸಿಕೊಂಡು ಹೋದವನ ಊರಿನಲ್ಲಿ ಯಾರು ಆ ಹಸುಗಳ ಹಾಲು, ತುಪ್ಪ, ಮೊಸರು–ಇವುಗಳನ್ನು ಉಪಯೋಗಿಸಿದರೋ–ಆ ಎಲ್ಲ ಬ್ರಾಹ್ಮಣರೂ ಮತ್ತು ಕ್ಷತ್ರಿಯರೂ ಅವಸಾನಾನಂತರದಲ್ಲಿ ನರಕಕ್ಕೆ ಹೋದರು.

ಅಪಹೃತವಾದ ಆ ಬ್ರಾಹ್ಮಣನ ಹಸುಗಳು ಆ ಸ್ಥಳದಲ್ಲಿದ್ದ ಇತರ ಹಸುಗಳನ್ನು ನೋಡುತ್ತಿದ್ದುವು. ಆದರೆ ಅವು ತಮ್ಮ ಯಜಮಾನನನ್ನಾಗಲೀ, ಕರುಗಳನ್ನಾಗಲೀ ಕಾಣುತ್ತಿರಲಿಲ್ಲ. ಅದರಿಂದ ಮಾನಸಿಕವಾದ ಪೀಡೆಯನ್ನು ಅನುಭವಿಸುತ್ತಾ ಆ ಹಸುಗಳು ಥರ-ಥರನೆ ನಡುಗುತ್ತಿದ್ದುವು. ಆ ದಿವಸಗಳಲ್ಲಿ ಅವು ಸಾಧುಗಳಾಗಿ ಹಾಲುಕರೆಯುತ್ತಿದ್ದರೂ ಸ್ವಲ್ಪ ದಿವಸಗಳಲ್ಲಿಯೇ ತಮ್ಮನ್ನು ಅಪಹರಿಸಿಕೊಂಡುಬಂದ ದಂಪತಿಗಳನ್ನೂ, ಅವರ ಮಕ್ಕಳು-ಮೊಮ್ಮಕ್ಕಳನ್ನೂ ಧ್ವಂಸಮಾಡಿಬಿಟ್ಟುವು. ಆ ಹಳ್ಳಿಯಲ್ಲೇ ನಾನು ನನ್ನ ಹಿಂದಿನ ಜನ್ಮದಲ್ಲಿ ಜಿತೇಂದ್ರಿಯನಾಗಿ ಬ್ರಹ್ಮಚರ್ಯವ್ರತಾನುಷ್ಠಾನಮಾಡುತ್ತಾ ವಾಸಮಾಡುತ್ತಿದ್ದೆನು. ಒಂದು ದಿನ ನಾನಿಟ್ಟಿದ್ದ ಭಿಕ್ಷಾನ್ನವು ಆ ಗೋವುಗಳ ಧೂಳಿನಿಂದ ಕೂಡಿದ ಹಾಲಿನಿಂದ ದೂಷಿತವಾಯಿತು. ಆ ಭಿಕ್ಷಾನ್ನವನ್ನೇ ನಾನು ಭಕ್ಷಿಸಿದೆನಾದ ಕಾರಣ ಮರುಹುಟ್ಟಿನಲ್ಲಿ ಚಂಡಾಲನಾದೆನು. ಬ್ರಾಹ್ಮಣನ ಸ್ವತ್ತನ್ನು ಅಪಹರಿಸಿದ ಆ ರಾಜನೂ ನರಕಕ್ಕೆ ಹೋದನು.

ತಸ್ಮಾದ್ಧರೇನ್ನ ವಿಪ್ರಸ್ವಂ ಕದಾಚಿದಪಿ ಕಿಂಚನ ।
ಬ್ರಹ್ಮಸ್ವಂ ರಜಸಾ ಧ್ವಸ್ತಂ ಭುಕ್ತ್ವಾ ಮಾಂ ಪಶ್ಯ ಯಾದೃಶಮ್ ॥೧೧॥

ಆದುದರಿಂದ ಯಾವಾಗಲೂ ಸ್ವಲ್ಪವಾದರೂ ಬ್ರಾಹ್ಮಣನ ಸ್ವತ್ತನ್ನು ಅಪಹರಿಸಬಾರದು. ಬ್ರಾಹ್ಮಣನ ಧನದ ರೂಪವಾದ ಧೂಲೀ ಧೂಸರಿತವಾದ ಹಾಲನ್ನು ಭುಂಜಿಸಿದ ನನ್ನ ಅವಸ್ಥೆಯು ಯಾವ ರೀತಿಯಲ್ಲಿರುವು ದೆಂಬುದನ್ನಾದರೂ ನೋಡು.

ತಸ್ಮಾತ್ಸೋಮೋಽಪ್ಯವಿಕ್ರೇಯಃ ಪುರುಷೇಣ ವಿಪಶ್ಚಿತಾ ।
ವಿಕ್ರಯಂ ತ್ವಿಹ ಸೋಮಸ್ಯ ಗರ್ಹಯನ್ತಿ ಮನೀಷಿಣಃ ॥೧೨॥

ಆದುದರಿಂದ (ಸೋಮಲತೆಯು ಸೋಮಯಜ್ಞವನ್ನು ಮಾಡುವವರ ಸ್ವತ್ತಾಗಿರುವುದರಿಂದ) ವಿದ್ವಾಂಸನಾದವನು ಸೋಮಲತೆಯನ್ನೂ ವಿಕ್ರಯಿಸಬಾರದು. ಸೋಮಲತೆಯ ವಿಕ್ರಯವನ್ನು ವಿದ್ವಾಂಸರಾದವರು ನಿಂದನೆ ಮಾಡುತ್ತಾರೆ.

ಯೇ ಚೈನಂ ಕ್ರೀಣತೇ ತಾತ ಯೇ ಚ ವಿಕ್ರೀಣತೇ ಜನಾಃ ।
ತೇ ತು ವೈವಸ್ವತಂ ಪ್ರಾಪ್ಯ ರೌರವಂ ಯಾನ್ತಿ ಸರ್ವಶಃ ॥೧೩॥

ಸೋಮಲತೆಯನ್ನು ಯಾರು ಮಾರುವರೋ ಮತ್ತು ಯಾರು ಕೊಂಡುಕೊಳ್ಳುವರೋ–ಅವರೆಲ್ಲರೂ ಯಮಲೋಕಕ್ಕೆ ಹೋಗಿ ರೌರವ ನರಕದಲ್ಲಿ ಬೀಳುತ್ತಾರೆ.

ಸೋಮಂ ತು ರಜಸಾ ಧ್ವಸ್ತಂ ವಿಕ್ರೀಯಾದ್ಬುದ್ಧಿಪೂರ್ವಕಮ್ ।
ಶ್ರೋತ್ರಿಯೋ ವಾರ್ಧುಷೀ ಭೂತ್ವಾ ನ ಚಿರಂ ಸ ವಿನಶ್ಯತಿ ।
ನರಕಂ ತ್ರಿಂಶತಂ ಪ್ರಾಪ್ಯ ಸ್ವವಿಷ್ಠಾಮುಪಜೀವತಿ ॥೧೪॥

ಧೂಳಿನಿಂದ ದೂಷಿತವಾದ ಸೋಮಲತೆಯನ್ನು ಬುದ್ಧಿಪೂರ್ವಕವಾಗಿ ಮಾರುವವನು ಬಹಳ ಬೇಗ ವಿನಾಶವನ್ನು ಹೊಂದುತ್ತಾನೆ. ಶ್ರೋತ್ರಿಯನು ಬಡ್ಡಿಹಣದಿಂದ ಜೀವಿಸುವವನಾದಲ್ಲಿ ಅವನೂ ಕೂಡ ಬಹಳ ಬೇಗ ವಿನಾಶ ಹೊಂದುತ್ತಾನೆ. ಅಂತಹ ದೂಷಿತವಾದ ಸೋಮವನ್ನು ಮಾರುವವನೂ ಮತ್ತು ಬಡ್ಡಿಯಿಂದ ಜೀವಿಸುವ ಶ್ರೋತ್ರಿಯನೂ ಮೂವತ್ತು ವರ್ಷಗಳ ಕಾಲ ನರಕದಲ್ಲಿ ತಮ್ಮ ವಿಷ್ಠೆಯನ್ನೇ ತಿಂದುಕೊಂಡು ಜೀವಿಸುತ್ತಾರೆ.

ಶ್ವಚರ್ಯಾಭಿಮಾನಂ ಚ ಸಖಿದಾರೇ ಚ ವಿಪ್ಲವಮ್ ।
ತುಲಯಾ ಧಾರಯನ್ಧರ್ಮಮಭಿಮಾನ್ಯತಿರಿಚ್ಯತೇ ॥೧೫॥

ನೀಚರ ಸೇವೆಯನ್ನು ಮಾಡುವುದು, ದುರಭಿಮಾನ ಮತ್ತು ಮಿತ್ರನ ಪತ್ನಿಯೊಡನೆ ವ್ಯಭಿಚಾರಮಾಡುವುದು–ಈ ಮೂರು ಅಧರ್ಮಗಳನ್ನೂ ತಕ್ಕಡಿಯಲ್ಲಿ ಹಾಕಿ ತೂಗಿದರೆ ದುರಭಿಮಾನಿಯೇ ವಿಶೇಷವಾಗಿ ಧರ್ಮವನ್ನು ಉಲ್ಲಂಘಿಸಿದವನಾಗುತ್ತಾನೆ. (ದುರಭಿಮಾನವು ಹೆಚ್ಚು ಪಾಪಕರ.)

ಶ್ವಾನಂ ವೈ ಪಾಪಿನಂ ಪಶ್ಯ ವಿವರ್ಣಂ ಹರಿಣಂ ಕೃಶಮ್ ।
ಅಭಿಮಾನೇನ ಭೂತಾನಾಮಿಮಾಂ ಗತಿಮುಪಾಗತಮ್ ॥೧೬॥

ಮಹಾರಾಜ! ನನ್ನ ಈ ಪಾಪಿಯಾದ ನಾಯಿಯನ್ನು ನೋಡು. ಇದೀಗ ಬಿಳಚಿಕೊಂಡಿದೆ. ಕಾಂತಿಹೀನವಾಗಿದೆ. ದುರ್ಬಲಗೊಂಡಿದೆ. ಈ ನಾಯಿಯು ಹಿಂದಿನ ಜನ್ಮದಲ್ಲಿ ಮನುಷ್ಯನಾಗಿದ್ದಿತು. ಆಗ ಇತರರ ಮುಂದೆ

ಅಭಿಮಾನವನ್ನು ತೋರಿಸುತ್ತಿದ್ದುದರಿಂದ ಆ ಮನುಷ್ಯನು ಈ ಗತಿಯನ್ನು ಹೊಂದಿದನು.

ಅಹಂ ವೈ ವಿಪುಲೇ ತಾತ ಕುಲೇ ಧನಸಮನ್ವಿತೇ ।
ಅನ್ಯಸ್ಮಿಞ್ಜನ್ಮನಿ ವಿಭೋ ಜ್ಞಾನವಿಜ್ಞಾನಪಾರಗಃ ॥೧೭॥

ಅಭವಂ ತತ್ರ ಜಾನಾನೋ ಹ್ಯೇತಾನ್ದೋಷಾನ್ಮದಾತ್ಸದಾ ।
ಸಂರಬ್ಧ ಏವ ಭೂತಾನಾಂ ಪೃಷ್ಠಮಾಂಸಮಭಕ್ಷಯಮ್ ॥೧೮॥

ಸೋಽಹಂ ತೇನ ಚ ವೃತ್ತೇನ ಭೋಜನೇನ ಚ ತೇನ ವೈ ।
ಇಮಾಮವಸ್ಥಾಂ ಸಂಪ್ರಾಪ್ತಃ ಪಶ್ಯ ಕಾಲಸ್ಯ ಪರ್ಯಯಮ್ ॥೧೯॥

ನಾನೂ ಕೂಡ ಹಿಂದಿನಜನ್ಮದಲ್ಲಿ ಅಪಾರವಾದ ಧನಸಮೃದ್ಧಿಯಿದ್ದ ಕುಲದಲ್ಲಿ ಹುಟ್ಟಿದ್ದೆನು. ಜ್ಞಾನ-ವಿಜ್ಞಾನಪಾರಂಗತನಾಗಿದ್ದೆನು. ನಾನು ಮಾಡುತ್ತಿದ್ದ ಅಪರಾಧಗಳೆಲ್ಲವನ್ನೂ ತಿಳಿದುಕೊಳ್ಳುತ್ತಿದ್ದರೂ ಮದದಿಂದ ಕೊಬ್ಬಿದ್ದುದರಿಂದ ಯಾವುದನ್ನೂ ಲೆಕ್ಕಿಸುತ್ತಿರಲಿಲ್ಲ. ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಸದಾ ಕೋಪಗೊಳ್ಳುತ್ತಿದ್ದೆನು. ಸಹನೆಯೆಂಬುದೇ ಆಗ ನನಗೆ ಇರಲಿಲ್ಲ. ನಿರ್ಲಜ್ಜನಾಗಿ ಪ್ರಾಣಿಗಳ ಪೃಷ್ಠಭಾಗದ ಮಾಂಸವನ್ನು ತಿನ್ನುತ್ತಿದ್ದೆನು. ಅಂತಹ ದುರಭಿಮಾನದ ನಡವಳಿಕೆಯಿಂದಲೂ–ಅಭಕ್ಷ್ಯ ಭೋಜನದಿಂದಲೂ ಈ ಅವಸ್ಥೆಯನ್ನು ಹೊಂದಿದ್ದೇನೆ. ಮಹಾರಾಜ! ಕಾಲದ ವೈಪರೀತ್ಯವನ್ನಾದರೂ ನೋಡು.

ಆದೀಪ್ತಮಿವ ಚೈಲಾನ್ತಂ ಭ್ರಮರೈರಿವ ಚಾರ್ದಿತಮ್ ।
ಧಾವಮಾನಂ ಸುಸಂರಬ್ಧಂ ಪಶ್ಯ ಮಾಂ ರಜಸಾನ್ವಿತಮ್ ॥೨೦॥

ಬೆಂಕಿತಾಗಿದ ಬಟ್ಟೆಯ ಸೆರಗುಳ್ಳವನಂತೆಯೂ, ತೀಕ್ಷ್ಣವಾದ ಮುಖವುಳ್ಳ ದುಂಬಿಗಳಿಂದ ಕಚ್ಚಲ್ಪಟ್ಟವನಂತೆಯೂ ಉದ್ವೇಗಗೊಂಡು ಓಡುತ್ತಿರುವ ಧೂಳುಮುಸುಕಿರುವ ನನ್ನ ಸ್ಥಿತಿಯನ್ನಾದರೂ ನೋಡು.

ಸ್ವಾಧ್ಯಾಯೈಸ್ತು ಮಹತ್ಪಾಪಂ ಹರನ್ತಿ ಗೃಹಮೇಧಿನಃ ।
ದಾನೈಃ ಪೃಥಗ್ವಿಧೈಶ್ಚಾಪಿ ಯಥಾಪ್ರಾಹುರ್ಮನೀಷಿಣಃ ॥೨೧॥

ಗೃಹಸ್ಥನಾದವನು ವೇದಶಾಸ್ತ್ರಗಳ ಅಧ್ಯಯನದಿಂದಲೂ, ನಾನಾವಿಧ

ವಾದ ದಾನಗಳಿಂದಲೂ ತನ್ನ ಪಾಪಗಳನ್ನು ಕಳೆದುಕೊಳ್ಳುತ್ತಾನೆ–ಎಂಬುದಾಗಿ ವಿದ್ವಾಂಸರು ಹೇಳುತ್ತಾರೆ.

ತಥಾ ಪಾಪಕೃತಂ ವಿಪ್ರಮಾಶ್ರಮಸ್ಥಂ ಮಹೀಪತೇ ।
ಸರ್ವಸಙ್ಗವಿನಿರ್ಮುಕ್ತಂ ಛನ್ದಾಂಸ್ಯುತ್ತಾರಯನ್ತ್ಯುತ ॥೨೨॥

ಆಶ್ರಮಧರ್ಮದಲ್ಲಿದ್ದೂ ನಿರ್ಲಿಪ್ತನಾಗಿರುವ, ಸರ್ವಕರ್ಮಗಳ ಫಲತ್ಯಾಗವನ್ನೂ ಮಾಡಿರುವ ಬ್ರಾಹ್ಮಣನು ಅನಿವಾರ್ಯಕಾರಣಗಳಿಂದ ಪಾಪಗಳನ್ನು ಮಾಡಿದರೂ ಅವನು ಪಾರಾಯಣಮಾಡಿದ ವೇದಗಳೇ ಅವನನ್ನು ಉದ್ಧರಿಸುತ್ತವೆ.

ಅಹಂ ಹಿ ಪಾಪಯೋನ್ಯಾಂ ವೈ ಪ್ರಸೂತಃ ಕ್ಷತ್ರಿಯರ್ಷಭ ।
ನಿಶ್ಚಯಂ ನಾಧಿಗಚ್ಛಾಮಿ ಕಥಂ ಮುಚ್ಯೇಯಮಿತ್ಯುತ ॥೨೩॥

ಕ್ಷತ್ರಿಯರ್ಷಭನೇ! ನಾನು ಪಾಪಯೋನಿಯಲ್ಲಿ ಹುಟ್ಟಿದ್ದೇನೆ. ಯಾವ ಉಪಾಯದಿಂದ ಮುಕ್ತನಾಗಬೇಕೆನ್ನುವ ವಿಷಯದಲ್ಲಿ ಸಂಶಯಗ್ರಸ್ತ ನಾಗಿದ್ದೇನೆ.

ಜಾತಿಸ್ಮರತ್ವಂ ಚ ಮಮ ಕೇನಚಿತ್ಪೂರ್ವಕರ್ಮಣಾ ।
ಶುಭೇನ ಯೇನ ಮೋಕ್ಷಂ ವೈ ಪ್ರಾಪ್ತುಮಿಚ್ಛಾಮ್ಯಹಂ ನೃಪ ॥೨೪॥

ಹಿಂದಿನ ಜನ್ಮದಲ್ಲಿ ಮಾಡಿದ ಯಾವುದೋ ಪುಣ್ಯಕರ್ಮದ ಫಲವಾಗಿ ನನಗೆ ಹಿಂದಿನ ಜನ್ಮದ ಸ್ಮರಣೆಯಿದೆ. ಶುಭಕರವಾದ ಈ ಜನ್ಮಾಂತರದ ಸ್ಮರಣೆಯಿರುವುದರಿಂದಲೇ ನಾನು ಮೋಕ್ಷಾಪೇಕ್ಷಿಯಾಗಿದ್ದೇನೆ.

ತ್ವಮಿಮಂ ಸಂಪ್ರಪನ್ನಾಯ ಸಂಶಯಂ ಬ್ರೂಹಿ ಪೃಚ್ಛತೇ ।
ಚಾಣ್ಡಾಲತ್ವಾತ್ಕಥಮಹಂ ಮುಚ್ಯೇಯಮಿತಿ ಸತ್ತಮ ॥೨೫॥

ಸತ್ಪುರುಷಶ್ರೇಷ್ಠನೇ! ಶರಣಾಗತನಾಗಿ ಪ್ರಶ್ನಿಸುತ್ತಿರುವ ನನಗೆ ಈ ಸಂಶಯವನ್ನು ನಿವಾರಣೆಮಾಡು. ಈ ಚಂಡಾಲತ್ವದಿಂದ ನಾನು ಹೇಗೆ ಮುಕ್ತನಾಗುವೆನು?”

ರಾಜನು ಹೇಳುತ್ತಾನೆ:

“ಚಾಂಡಾಲನೇ! ಯಾವ ಕಾರ್ಯವನ್ನು ಮಾಡುವುದರಿಂದ ನೀನು ಮೋಕ್ಷವನ್ನು ಪಡೆಯುವೆಯೆಂಬುದನ್ನು ತಿಳಿದುಕೊ.

ಬ್ರಾಹ್ಮಣಾರ್ಥೇ ತ್ಯಜನ್ಪ್ರಾಣಾನ್ಗತಿಮಿಷ್ಟಾಮವಾಪ್ಸ್ಯಸಿ ॥೨೬॥

ಶ್ರೋತ್ರಿಯನಾದ ಬ್ರಾಹ್ಮಣನನ್ನು ರಕ್ಷಿಸುವ ಸಲುವಾಗಿ ಪ್ರಾಣತ್ಯಾಗಮಾಡುವುದರಿಂದ ನೀನು ನಿನಗೆ ಅಭೀಷ್ಟವಾದ ಗತಿಯನ್ನು ಹೊಂದುವೆ.

ದತ್ತ್ವಾ ಶರೀರಂ ಕ್ರವ್ಯಾದ್ಭ್ಯೋ ರಣಾಗ್ನೌ ದ್ವಿಜಹೇತುಕಮ್ ।
ಹುತ್ವಾ ಪ್ರಾಣಾನ್ಪ್ರಮೋಕ್ಷಸ್ತೇ ನಾನ್ಯಥಾ ಮೋಕ್ಷಮರ್ಹಸಿ ॥೨೭॥

ಬ್ರಾಹ್ಮಣನ ರಕ್ಷಣಾರ್ಥವಾಗಿ ಸಮರಾಗ್ನಿಯಲ್ಲಿ ನಿನ್ನ ಪ್ರಾಣಗಳನ್ನು ಹೋಮಮಾಡಿದನಂತರ ನಿನ್ನ ಶರೀರವು ಮಾಂಸಾಶಿಗಳಾದ ಪ್ರಾಣಿಗಳಿಗೆ ಆಹಾರವಾದರೆ ನಿನಗೆ ಮೋಕ್ಷವು ಸಿಕ್ಕುತ್ತದೆ. ಬೇರೆ ಯಾವ ರೀತಿಯಲ್ಲಿಯೂ ಮೋಕ್ಷವು ಲಭಿಸುವುದಿಲ್ಲ.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ರಾಜನು ಹೀಗೆ ಹೇಳಿದನಂತರ ಆ ಚಾಂಡಾಲನು ಬ್ರಾಹ್ಮಣನ ಸ್ವತ್ತನ್ನು ರಕ್ಷಿಸುವ ಸಲುವಾಗಿ ಯುದ್ಧದಲ್ಲಿ ಪ್ರಾಣಗಳನ್ನು ತೆತ್ತು ತನಗೆ ಇಷ್ಟವಾದ ಗತಿಯನ್ನು ಪಡೆದುಕೊಂಡನು.

ಮಹಾಬಾಹುವೇ! ಮಗು! ಯುಧಿಷ್ಠಿರ! ನೀನೂ ಶಾಶ್ವತವಾದ ಸದ್ಗತಿಯನ್ನು ಪಡೆಯುವ ಇಚ್ಛೆಯುಳ್ಳವನಾಗಿದ್ದರೆ ಬ್ರಾಹ್ಮಣರ ಸ್ವತ್ತನ್ನು ಸಂರಕ್ಷಿಸು.”

೧೦೧ನೆಯ ಅಧ್ಯಾಯವು ಮುಗಿಯಿತು.

ಭಿನ್ನ-ಭಿನ್ನಕರ್ಮಗಳಿಗೆ ಭಿನ್ನ-ಭಿನ್ನವಾದ ಲೋಕಗಳ ಪ್ರಾಪ್ತಿಯ ವಿಷಯದಲ್ಲಿ ಧೃತರಾಷ್ಟ್ರರೂಪಧಾರಿಯಾದ ಇಂದ್ರನಿಗೂ-ಗೌತಮನಿಗೂ ನಡೆದ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಏಕೇ ಲೋಕಾಃ ಸುಕೃತಿನಃ ಸರ್ವೇ ತ್ವಾಹೋ ಪಿತಾಮಹ ।
ತತ್ರ ತತ್ರಾಪಿ ಭಿನ್ನಾಸ್ತೇ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಅವಸಾನಾನಂತರದಲ್ಲಿ ಎಲ್ಲ ಪುಣ್ಯಾತ್ಮರೂ ಒಂದೇ ಪುಣ್ಯಲೋಕಕ್ಕೆ ಹೋಗುವರೇ ಅಥವಾ ಅವರಿಗೆ ಪ್ರಾಪ್ತವಾಗುವ ಲೋಕಗಳು ಭಿನ್ನ-ಭಿನ್ನವಾಗಿರುವುವೇ? ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಕರ್ಮಭಿಃ ಪಾರ್ಥ ನಾನಾತ್ವಂ ಲೋಕಾನಾಂ ಯಾನ್ತಿ ಮಾನವಾಃ ।
ಪುಣ್ಯಾನ್ಪುಣ್ಯಕೃತೋ ಯಾನ್ತಿ ಪಾಪಾನ್ಪಾಪಕೃತೋ ನರಾಃ ॥೨॥

"ಕುಂತೀಕುಮಾರನೇ! ಮಾನವರು ತಮ್ಮ-ತಮ್ಮ ಕರ್ಮಗಳಿಗೆ ಅನುಸಾರವಾಗಿ ನಾನಾಪ್ರಕಾರವಾದ ಲೋಕಗಳಿಗೆ ಹೋಗುತ್ತಾರೆ. ಪುಣ್ಯ ಕರ್ಮಗಳನ್ನು ಮಾಡಿದವರು ಭಿನ್ನ-ಭಿನ್ನವಾದ ಪುಣ್ಯಲೋಕಗಳಿಗೆ ಹೋಗುತ್ತಾರೆ. ಪಾಪಕರ್ಮಗಳನ್ನು ಮಾಡಿದವರು ಭಿನ್ನ-ಭಿನ್ನವಾದ ನರಕಗಳಿಗೆ ಹೋಗುತ್ತಾರೆ.

ಈ ವಿಷಯದಲ್ಲಿ ಹಿಂದೆ ಗೌತಮಮುನಿಗೂ ವಾಸವನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಪೂರ್ವಕಾಲದಲ್ಲಿ ಮೃದುಸ್ವಭಾವದವನಾದ, ಮನಸ್ಸನ್ನು ಅಧೀನದಲ್ಲಿಟ್ಟುಕೊಂಡಿದ್ದ, ಜಿತೇಂದ್ರಿಯನಾದ ಗೌತಮನೆಂಬ ಬ್ರಾಹ್ಮಣನೊಬ್ಬನಿದ್ದನು. ವ್ರತಾನುಷ್ಠಾನಪರನಾಗಿದ್ದ ದಯಾಪರನಾದ ಆ ಬ್ರಾಹ್ಮಣನು ತಾನು ವಾಸಮಾಡುತ್ತಿದ್ದ ಆ ಮಹಾವನದಲ್ಲಿ ತಾಯಿಯಿಲ್ಲದೇ ಬಹಳವಾಗಿ ಕಷ್ಟಪಡುತ್ತಿದ್ದ ಆನೆಯ ಮರಿಯನ್ನು ನೋಡಿದನು. ಮರುಕಗೊಂಡ ಆ

ಬ್ರಾಹ್ಮಣನು ಮರಿಯಾನೆಯನ್ನು ತನ್ನ ಆಶ್ರಮದಲ್ಲಿಟ್ಟುಕೊಂಡು ಸಾಕಿದನು. ಹಲವಾರು ವರ್ಷಗಳನಂತರ ಅದು ಬಲಿಷ್ಠವಾದ ಮಹಾಗಜವಾಯಿತು.

ಗಂಡಸ್ಥಲದಿಂದ ಮದೋದಕವನ್ನು ಸುರಿಸುತ್ತಿದ್ದ, ಪರ್ವತೋಪಮವಾಗಿದ್ದ ಆ ಮಹಾಗಜವನ್ನು ಧೃತರಾಷ್ಟ್ರನ ರೂಪವನ್ನು ಧರಿಸಿದ್ದ ಇಂದ್ರನು ತನ್ನ ವಶಪಡಿಸಿಕೊಂಡನು. ಆನೆಯನ್ನು ಎಳೆದುಕೊಂಡು ಹೋಗುತ್ತಿರುವುದನ್ನು ನೋಡಿ ಕಠೋರವ್ರತನಿಷ್ಠನಾದ, ಮಹಾತಪಸ್ವಿಯಾದ ಗೌತಮನು ಧೃತರಾಷ್ಟ್ರರಾಜನನ್ನು ಕುರಿತು ಹೇಳಿದನು:

ಮಾ ಮೇಽಹಾರ್ಷೀರ್ಹಸ್ತಿನಂ ಪುತ್ರಮೇನಂ
ದುಃಖಾತ್ಪುಷ್ಟಂ ಧೃತರಾಷ್ಟ್ರಾಕೃತಜ್ಞ ।
ಮೈತ್ರಂ ಸತಾಂ ಸಪ್ತಪದಂ ವದನ್ತಿ
ಮಿತ್ರದ್ರೋಹೋ ಮೈವ ರಾಜನ್ಸ್ಪೃಶೇತ್ತ್ವಾಮ್ ॥೮॥

“ಕೃತಜ್ಞತಾಶೂನ್ಯನಾದ ಧೃತರಾಷ್ಟ್ರನೇ! ನೀನು ನನ್ನ ಪುತ್ರನ ರೂಪದಲ್ಲಿರುವ ಈ ಆನೆಯನ್ನು ಎಳೆದುಕೊಂಡು ಹೋಗಬೇಡ. ಬಹಳ ಕಷ್ಟದಿಂದ ನಾನು ಇದರ ಪಾಲನೆ-ಪೋಷಣೆಗಳನ್ನು ಮಾಡಿದ್ದೇನೆ. ಸತ್ಪುರುಷರ ಜೊತೆಯಲ್ಲಿ ಏಳು ಹೆಜ್ಜೆಗಳನ್ನಿಟ್ಟರೆ ಮಿತ್ರತ್ವವುಂಟಾಗುವುದೆಂದು ಹೇಳುತ್ತಾರೆ. ಈ ಕಾರಣದಿಂದ ನಾವಿಬ್ಬರೂ ಮಿತ್ರರಾಗಿದ್ದೇವೆ. ನೀನು ನನ್ನ ಆನೆಯನ್ನು ಎಳೆದುಕೊಂಡು ಹೋಗಿ ಮಿತ್ರದ್ರೋಹವನ್ನು ಮಾಡಬೇಡ. ಮಿತ್ರದ್ರೋಹದ ಪಾಪವು ನಿನ್ನನ್ನು ಸ್ಪರ್ಶಿಸದಿರಲಿ.

ಇಧ್ಮೋದಕಪ್ರದಾತಾರಂ ಶೂನ್ಯಪಾಲಂ ಮಮಾಶ್ರಮೇ ।
ವಿನೀತಮಾಚಾರ್ಯಕುಲೇ ಸುಯುಕ್ತಂ ಗುರುಕರ್ಮಣಿ ॥೯॥
ಶಿಷ್ಟಂ ದಾನ್ತಂ ಕೃತಜ್ಞಂ ಚ ಪ್ರಿಯಂ ಚ ಸತತಂ ಮಮ ।
ನ ಮೇ ವಿಕ್ರೋಶತೋ ರಾಜನ್ಹರ್ತುಮರ್ಹಸಿ ಕುಞ್ಜರಮ್ ॥೧೦॥

ಈ ಆನೆಯು ನನಗೆ ಸಮಿತ್ತನ್ನೂ ನೀರನ್ನೂ ತಂದುಕೊಡುತ್ತದೆ. ಆಶ್ರಮದಲ್ಲಿ ಯಾರೂ ಇಲ್ಲದಿರುವಾಗ ಇದು ಆಶ್ರಮವನ್ನು ರಕ್ಷಿಸುತ್ತದೆ. ಆಚಾರ್ಯರ ವಿಷಯದಲ್ಲಿ ಇದು ವಿನಯದಿಂದ ನಡೆದುಕೊಳ್ಳುತ್ತದೆ.

ಗುರುಸೇವೆಯಲ್ಲಿಯೇ ಯಾವಾಗಲೂ ನಿರತವಾಗಿರುತ್ತದೆ. ಇದು ಶ್ರೇಷ್ಠವಾದ ಪ್ರಾಣಿಯಾಗಿದೆ. ದಮ, ಕೃತಜ್ಞತೆ–ಇತ್ಯಾದಿಗುಣಗಳಿಂದಲೂ ಇದು ಸಂಪನ್ನವಾಗಿದೆ. ಈ ಕಾರಣಗಳಿಂದಲೇ ಈ ಆನೆಯು ನನಗೆ ಅತ್ಯಂತ ಪ್ರಿಯವಾಗಿದೆ. ಕೂಗಿ-ಕೂಗಿ ಹೇಳುತ್ತಿರುವ ನನ್ನನ್ನೂ ನಿರಾಕರಿಸಿ ಈ ಆನೆಯನ್ನು ಸೆಳೆದುಕೊಂಡುಹೋಗುವುದು ನಿನಗೆ ಯೋಗ್ಯವಾಗಿ ಕಾಣುವುದಿಲ್ಲ."

ಧೃತರಾಷ್ಟ್ರಃ

ಗವಾಂ ಸಹಸ್ರಂ ಭವತೇ ದದಾನಿ
ದಾಸೀಶತಂ ನಿಷ್ಕಶತಾನಿ ಪಞ್ಚ ।
ಅನ್ಯಚ್ಚ ವಿತ್ತಂ ವಿವಿಧಂ ಮಹರ್ಷೇ
ಕಿಂ ಬ್ರಾಹ್ಮಣಸ್ಯೇಹ ಗಜೇನ ಕೃತ್ಯಮ್ ॥೧೧॥

"ಮಹರ್ಷಿಯೇ! ಈ ಆನೆಯ ವಿನಿಮಯರೂಪವಾಗಿ ನಿನಗೆ ಒಂದು ಸಾವಿರ ಹಸುಗಳನ್ನು ಕೊಡುತ್ತೇನೆ. ನೂರು ದಾಸಿಯರನ್ನೂ, ಐದು ನೂರು ಸುವರ್ಣನಾಣ್ಯಗಳನ್ನೂ ಕೊಡುತ್ತೇನೆ. ನೀನು ಅಪೇಕ್ಷಿಸಿದರೆ ಇನ್ನೂ ಇತರ ವಿಧ-ವಿಧವಾದ ರತ್ನ-ವೈಡೂರ್ಯಾದಿ ಐಶ್ವರ್ಯಗಳನ್ನೂ ಕೊಡುತ್ತೇನೆ. ಬ್ರಾಹ್ಮಣನಿಗೆ ಈ ಆನೆಯಿಂದೇನು ಪ್ರಯೋಜನ?"

ಗೌತಮಃ

ತವೈವ ಗಾವೋ ಹಿ ಭವನ್ತು ರಾಜ-
ನ್ದಾಸ್ಯಃ ಸನಿಷ್ಕಾ ವಿವಿಧಂ ಚ ರತ್ನಮ್ ।
ಅನ್ಯಚ್ಚ ವಿತ್ತಂ ವಿವಿಧಂ ನರೇನ್ದ್ರ
ಕಿಂ ಬ್ರಾಹ್ಮಣಸ್ಯೇಹ ಧನೇನ ಕೃತ್ಯಮ್ ॥೧೨॥

"ನಿನ್ನ ಆ ಸಾವಿರ ಹಸುಗಳೂ, ನೂರು ದಾಸಿಯರೂ, ಐದು ನೂರು ಸುವರ್ಣನಾಣ್ಯಗಳೂ, ವಿಧ-ವಿಧವಾದ ವಜ್ರ-ವೈಡೂರ್ಯಾದಿಗಳೂ ನಿನ್ನಲ್ಲಿಯೇ ಇರಲಿ. ಬ್ರಾಹ್ಮಣನಿಗೆ ಈ ಧನದಿಂದ ಏನಾಗಬೇಕಾಗಿದೆ?"

ಧೃತರಾಷ್ಟ್ರಃ

ಬ್ರಾಹ್ಮಣಾನಾಂ ಹಸ್ತಿಭಿರ್ನಾಸ್ತಿ ಕೃತ್ಯಂ
ರಾಜನ್ಯಾನಾಂ ನಾಗಕುಲಾನಿ ವಿಪ್ರ ।
ಸ್ವಂ ವಾಹನಂ ನಯತೋ ನಾಸ್ತ್ಯಧರ್ಮೋ
ನಾಗಶ್ರೇಷ್ಠಂ ಗೌತಮಾಸ್ಮಾನ್ನಿವರ್ತ ॥೧೩॥

“ಗೌತಮನೇ! ಬ್ರಾಹ್ಮಣರಿಗೆ ಆನೆಗಳಿಂದ ಯಾವ ಪ್ರಯೋಜನವೂ ಇಲ್ಲ. ಆನೆಗಳ ಸಮೂಹಗಳಿಂದ ರಾಜರಿಗೆ ಪ್ರಯೋಜನವಿದೆ. ಮೇಲಾಗಿ ಆನೆಯು ನನ್ನ ವಾಹನವಾಗಿದೆ. ನನ್ನ ವಾಹನವಾದ ಈ ಶ್ರೇಷ್ಠಗಜವನ್ನು ನಾನು ತೆಗೆದುಕೊಂಡು ಹೋಗುವುದರಲ್ಲಿ ಯಾವ ಅಧರ್ಮವೂ ಇಲ್ಲ. ಆದುದರಿಂದ ನೀನು ಈ ಆನೆಯಿಂದ ಪ್ರತಿನಿವೃತ್ತನಾಗು. (ಆನೆಯ ಆಸೆಯನ್ನು ಬಿಟ್ಟು ಹಿಂದಿರುಗು.)”

ಗೌತಮಃ

ಯತ್ರ ಪ್ರೇತೋ ನನ್ದತಿ ಪುಣ್ಯಕರ್ಮಾ
ಯತ್ರ ಪ್ರೇತಃ ಶೋಚತೇ ಪಾಪಕರ್ಮಾ ।
ವೈವಸ್ವತಸ್ಯ ಸದನೇ ಮಹಾತ್ಮಂ -
ಸ್ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೧೪॥

“ಮಹಾತ್ಮನೇ! ಎಲ್ಲಿಗೆ ಹೋಗಿ ಪುಣ್ಯಕರ್ಮಿಯಾದ ಮನುಷ್ಯನು ಆನಂದಿಸುವನೋ, ಪಾಪಕರ್ಮಿಯಾದ ಮನುಷ್ಯನು ದುಃಖಪಡುವನೋ– ಅಂತಹ ಯಮನ ಭವನದಿಂದಾದರೂ ನನ್ನ ಆನೆಯನ್ನು ನಿನ್ನಿಂದ ಸೆಳೆದು ತರುತ್ತೇನೆ. (ನನ್ನ ಆನೆಯನ್ನು ತೆಗೆದುಕೊಂಡು ನೀನು ಯಮಲೋಕಕ್ಕೆ ಹೋದರೂ ನಾನು ನಿನ್ನನ್ನು ಬಿಡುವವನಲ್ಲ.)”

ಧೃತರಾಷ್ಟ್ರಃ

ಯೇ ನಿಷ್ಕ್ರಿಯಾ ನಾಸ್ತಿಕಾಶ್ರದ್ದಧಾನಾಃ
ಪಾಪಾತ್ಮಾನ ಇನ್ದ್ರಿಯಾರ್ಥೇ ನಿವಿಷ್ಟಾಃ ।
ಯಮಸ್ಯ ತೇ ಯಾತನಾಂ ಪ್ರಾಪ್ನುವನ್ತಿ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೧೫॥

“ಯಾರು ನಿಷ್ಕ್ರಿಯರೋ (ಪುಣ್ಯಕರ್ಮಗಳನ್ನು ಮಾಡದೇ ಅಲಸ

ರಾಗಿರುವವರೋ), ನಾಸ್ತಿಕರೋ, ಕರ್ಮಗಳಲ್ಲಿ ಶ್ರದ್ಧಾಹೀನರಾಗಿರುವರೋ, ಪಾಪಾತ್ಮರೋ, ಇಂದ್ರಿಯಾರ್ಥಗಳಲ್ಲಿಯೇ (ವಿಷಯಸುಖಗಳಲ್ಲಿಯೇ) ಆಸಕ್ತರಾಗಿರುವವರೋ–ಅಂತಹವರು ಮಾತ್ರವೇ ಯಮ ಲೋಕಕ್ಕೆ ಹೋಗಿ ನರಕಯಾತನೆಯನ್ನು ಅನುಭವಿಸುತ್ತಾರೆ. ಆದರೆ ಧೃತರಾಷ್ಟ್ರನೆಂದಿಗೂ ಅಲ್ಲಿಗೆ ಹೋಗತಕ್ಕವನಲ್ಲ."

ಗೌತಮಃ

ವೈವಸ್ವತೀ ಸಂಯಮನೀ ಜನಾನಾಂ
ಯತ್ರಾನೃತಂ ನೋಚ್ಯತೇ ಯತ್ರ ಸತ್ಯಮ್ ।
ಯತ್ರಾಬಲಾ ಬಲಿನಂ ಯಾತಯನ್ತಿ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೧೬॥

"ಯಾವ ಸ್ಥಳದಲ್ಲಿ ಯಾರೂ ಸುಳ್ಳನ್ನೇ ಹೇಳುವುದಿಲ್ಲವೋ, ಎಲ್ಲರೂ ಸದಾ ನಿಜವನ್ನೇ ಹೇಳುವರೋ, ಎಲ್ಲಿ ನಿರ್ಬಲನಾದ ಮನುಷ್ಯನೂ ಬಲಿಷ್ಠನಾದ ಎದುರಾಳಿಯನ್ನು ತನಗಾದ ಅನ್ಯಾಯವನ್ನು ಸರಿಪಡಿಸುವ ಸಲುವಾಗಿ ಎದುರಿಸಿ ನಿಲ್ಲುವನೋ–ಅಂತಹ ಮನುಷ್ಯರನ್ನು ನಿಯಂತ್ರಿಸುವ ಯಮರಾಜನ ಪಟ್ಟಣವು 'ಸಂಯಮನೀ' ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅಲ್ಲಿಗೇ ನೀನು ಹೋದರೂ ನನ್ನ ಆನೆಯನ್ನು ನಿನ್ನಿಂದ ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಜ್ಯೇಷ್ಠಾಂ ಸ್ವಸಾರಂ ಪಿತರಂ ಮಾತರಂ ಚ
ಯಥಾ ಶತ್ರುಂ ಮದಮತ್ತಾಶ್ಚರನ್ತಿ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೧೭॥

"ಮಹರ್ಷಿಯೇ! ಯಾರು ಮದಮತ್ತರಾಗಿ ತಮ್ಮ ಹಿರಿಯಕ್ಕನನ್ನೂ, ತಂದೆಯನ್ನೂ, ತಾಯಿಯನ್ನೂ–ಶತ್ರುವನ್ನು ಕಂಡಂತೆ ಕಾಣುವರೋ–ಅಂತಹವರ ಸಲುವಾಗಿಯೇ ಯಮರಾಜನ ಆ ಲೋಕವಿರುತ್ತದೆ. ಅಂತಹ ಲೋಕಕ್ಕೆ ಧೃತರಾಷ್ಟ್ರನೆಂದಿಗೂ ಹೋಗುವುದಿಲ್ಲ."

ಗೌತಮ:

ಮನ್ದಾಕಿನೀ ವೈಶ್ರವಣಸ್ಯ ರಾಜ್ಞೋ
ಮಹಾಭಾಗಾ ಭೋಗಿಜನಪ್ರವೇಶ್ಯಾ ।
ಗನ್ಧರ್ವಯಕ್ಷೈರಪ್ಸರೋಭಿಶ್ಚ ಜುಷ್ಟಾ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೧೮॥

"ಮಹಾಸೌಭಾಗ್ಯಶಾಲಿನಿಯಾದ ಮಂದಾಕಿನೀನದಿಯು ಕುಬೇರನ ನಗರದಲ್ಲಿ ವಿರಾಜಮಾನವಾಗಿದೆ. ಭೋಗಿಗಳಾದ ಜನರೇ ಆ ನದಿಯನ್ನು ಪ್ರವೇಶಿಸಿ ವಿಹರಿಸಬಲ್ಲರು. ಗಂಧರ್ವರೂ, ಯಕ್ಷರೂ ಮತ್ತು ಅಪ್ಸರೆಯರೂ ಆ ನದಿಯನ್ನು ಸಂಸೇವಿಸುತ್ತಿರುತ್ತಾರೆ. ಆನೆಯನ್ನು ನೀನು ಅಲ್ಲಿಗೇ ಕೊಂಡೊಯ್ದರೂ ನಾನು ಬಿಡುವುದಿಲ್ಲ. ಅಲ್ಲಿಂದಲೂ ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರ:

ಅತಿಥಿವ್ರತಾಃ ಸುವ್ರತಾ ಯೇ ಜನಾ ವೈ
ಪ್ರತಿಶ್ರಯಂ ದದತಿ ಬ್ರಾಹ್ಮಣೇಭ್ಯಃ ।
ಶಿಷ್ಟಾಶಿನಃ ಸಂವಿಭಜ್ಯಾಶ್ರಿತಾಂಶ್ಚ
ಮನ್ದಾಕಿನೀಂ ತೇಽಪಿ ವಿಭೂಷಯನ್ತಿ ॥೧೯॥

"ಯಾರು ಯಾವಾಗಲೂ ಅತಿಥಿಗಳ ಸೇವೆಯಲ್ಲಿಯೇ ತತ್ಪರ ರಾಗಿರುವವರೋ, ಉತ್ತಮವ್ರತಾನುಷ್ಠಾನಪರರೋ, ಬ್ರಾಹ್ಮಣರಿಗೆ ಆಶ್ರಯ ವನ್ನಿತ್ತಿರುವರೋ, ತಮ್ಮ ಆಶ್ರಿತರೆಲ್ಲರಿಗೂ ಅನ್ನವನ್ನು ಹಂಚಿಕೊಟ್ಟು (ಭೋಜನಮಾಡಿಸಿ) ಉಳಿದ ಅನ್ನಶೇಷವನ್ನು ಭುಂಜಿಸುವರೋ–ಅಂತಹ ವರು ಮಾತ್ರವೇ ಮಂದಾಕಿನೀನದಿಯನ್ನು ತಮ್ಮ ಸಾನ್ನಿಧ್ಯದಿಂದ ಸಮಲಂಕರಿ ಸುತ್ತಾರೆ. ಆದರೆ ಧೃತರಾಷ್ಟ್ರರಾಜನು ಅಲ್ಲಿಗೂ ಹೋಗತಕ್ಕವನಲ್ಲ."

ಗೌತಮಃ

ಮೇರೋರಗ್ರೇ ಯದ್ವನಂ ಭಾತಿ ರಮ್ಯಂ
ಸುಪುಷ್ಪಿತಂ ಕಿನ್ನರೀಗೀತಜುಷ್ಟಮ್ ।
ಸುದರ್ಶನಾ ಯತ್ರ ಜಮ್ಬೂರ್ವಿಶಾಲಾ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೨೦॥

“ಮೇರುಪರ್ವತದ ತುದಿಯಲ್ಲಿ ರಮ್ಯವಾದ ಉದ್ಯಾನವನವಿರುವುದು. ಆ ವನವು ಯಾವಾಗಲೂ ಪುಷ್ಪಭರಿತವಾಗಿರುತ್ತದೆ. ಅಲ್ಲಿ ಕಿನ್ನರಿಯರ ಮಧುರಗೀತವೂ ಯಾವಾಗಲೂ ಕೇಳುತ್ತಿರುತ್ತದೆ. ಅಲ್ಲಿಯೇ ನೋಡಲು ಬಹಳ ಸುಂದರವಾಗಿರುವ ವಿಶಾಲವಾದ ನೇರಳೇಹಣ್ಣಿನ ವೃಕ್ಷವಿದೆ. ಅಲ್ಲಿಗೆ ನೀನು ಹೋದರೂ ನಾನು ಬಿಡುವುದಿಲ್ಲ. ಅಲ್ಲಿಗೂ ಬಂದು ನನ್ನ ಆನೆಯನ್ನು ಸೆಳೆದು ತರುತ್ತೇನೆ.”

ಧೃತರಾಷ್ಟ್ರಃ

ಯೇ ಬ್ರಾಹ್ಮಣಾ ಮೃದವಃ ಸತ್ಯಶೀಲಾ
ಬಹುಶ್ರುತಾಃ ಸರ್ವಭೂತಾಭಿರಾಮಾಃ ।
ಯೇಽಧೀಯತೇ ಸೇತಿಹಾಸಂ ಪುರಾಣಂ
ಮಧ್ವಾಹುತ್ಯಾ ಜುಹ್ವತಿ ವೈ ದ್ವಿಜೇಭ್ಯಃ ॥೨೧॥

ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ।
ಯದ್ವಿದ್ಯತೇ ವಿದಿತಂ ಸ್ಥಾನಮಸ್ತಿ
ತದ್ಬ್ರೂಹಿ ತ್ವಂ ತ್ವರಿತೋ ಹ್ಯೇಷ ಯಾಮಿ ॥೨೨॥

“ಯಾವ ಬ್ರಾಹ್ಮಣರು ಕೋಮಲಸ್ವಭಾವದವರೋ, ಸತ್ಯಶೀಲರೋ, ಅನೇಕಶಾಸ್ತ್ರಗಳಲ್ಲಿ ವಿದ್ವಾಂಸರೋ, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಪ್ರೀತಿಯುಳ್ಳವರೋ, ಪುರಾಣೇತಿಹಾಸಗಳನ್ನು ಅಧ್ಯಯನ ಮಾಡಿರುವರೋ, ಬ್ರಾಹ್ಮಣರಿಗೆ ಮಧುರವಾದ ಭೋಜನವನ್ನು ಮಾಡಿಸುವರೋ– ಅಂತಹವರಿಗೆ ಮಾತ್ರವೇ ನೀನು ಹೇಳಿದ ಲೋಕಗಳು ಮೀಸಲಾಗಿವೆ. ಆದರೆ ಅಂತಹ ಲೋಕಗಳಿಗೆ ಧೃತರಾಷ್ಟ್ರನು ಹೋಗತಕ್ಕವನಲ್ಲ. ಗೌತಮ! ನಿನಗೆ ಯಾವ ಸ್ಥಾನಗಳು ತಿಳಿದಿವೆಯೋ–ಆ ಎಲ್ಲ ಸ್ಥಾನಗಳನ್ನೂ ವರ್ಣಿಸು. ನಾನು ಶೀಘ್ರವಾಗಿ ಆ ಲೋಕಗಳಿಗೆ ಹೊರಟುಹೋಗುತ್ತೇನೆ.”

ಗೌತಮಃ

ಸುಪುಷ್ಪಿತಂ ಕಿನ್ನರರಾಜಜುಷ್ಟಂ
ಪ್ರಿಯಂ ವನಂ ನನ್ದನಂ ನಾರದಸ್ಯ ।
ಗನ್ಧರ್ವಾಣಾಮಪ್ಸರಸಾಂ ಚ ಶಶ್ವ-
ತ್ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೨೩॥

"ಸುಂದರವಾದ ಪುಷ್ಪಗಳಿಂದ ಸುಶೋಭಿತವಾದ, ಕಿನ್ನರರಾಜನಿಂದ ಸಂಸೇವ್ಯಮಾನವಾದ, ನಾರದರಿಗೂ-ಗಂಧರ್ವಾಪ್ಸರೆಯರಿಗೂ ಅತಿಪ್ರಿಯವಾದ ನಂದನವೆಂಬ ವನವಿದೆ. ನೀನು ಅಲ್ಲಿಗೆ ಆನೆಯನ್ನು ಒಯ್ದರೂ ಬಿಡುವುದಿಲ್ಲ. ನಾನು ಅಲ್ಲಿಗೇ ಬಂದು ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಯೇ ನೃತ್ಯಗೀತೇ ಕುಶಲಾ ಜನಾಃ ಸದಾ
ಹ್ಯಯಾಚಮಾನಾಃ ಸಹಿತಾಶ್ಚರನ್ತಿ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೨೪॥

"ಯಾರು ನೃತ್ಯ-ಗೀತಗಳಲ್ಲಿ ನಿಪುಣರಾಗಿರುವರೋ, ಯಾವಾಗಲೂ ಯಾರನ್ನೂ ಯಾಚಿಸುವುದಿಲ್ಲವೋ, ಯಾವಾಗಲೂ ಸತ್ಪುರುಷರೊಡನೆಯೇ ಸಂಚರಿಸುವರೋ–ಅಂತಹವರಿಗೆ ಮಾತ್ರವೇ ನಂದನವನವಿರುವ ಆ ಲೋಕವು ಮೀಸಲಾಗಿದೆ. ಆದರೆ ಧೃತರಾಷ್ಟ್ರನು ಮಾತ್ರ ಅಲ್ಲಿಗೆ ಹೋಗತಕ್ಕವನಲ್ಲ."

ಗೌತಮಃ

ಯತ್ರೋತ್ತರಾಃ ಕುರವೋ ಭಾನ್ತಿ ರಮ್ಯಾ
ದೇವೈಃ ಸಾರ್ಧಂ ಮೋದಮಾನಾ ನರೇನ್ದ್ರ ।
ಯತ್ರಾಗ್ನಿಯೌನಾಶ್ಚ ವಸನ್ತಿ ಲೋಕಾ
ಅಬ್ಯೋನಯಃ ಪರ್ವತಯೋನಯಶ್ಚ ॥೨೫॥

ಯತ್ರ ಶಕ್ರೋ ವರ್ಷತಿ ಸರ್ವಕಾಮಾ-
ನ್ಯತ್ರ ಸ್ತ್ರಿಯಃ ಕಾಮಚಾರಾ ಭವನ್ತಿ ।

ಯತ್ರ ಚೇರ್ಷ್ಯಾ ನಾಸ್ತಿ ನಾರೀನರಾಣಾಂ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ||೨೬||

"ನರೇಂದ್ರನೇ! ಎಲ್ಲಿ ರಮಣೀಯವಾದ ಆಕೃತಿಗಳುಳ್ಳ ಉತ್ತರಕುರು ನಿವಾಸಿಗಳು ಅಪೂರ್ವವಾದ ಶೋಭೆಯಿಂದ ಪ್ರಕಾಶಿಸುತ್ತಿರುವರೋ, ದೇವತೆಗಳೊಡನೆ ಕೂಡಿ ಆನಂದಿಸುವರೋ, ಅಗ್ನಿಯಲ್ಲಿಯೂ–ನೀರಿನಲ್ಲಿಯೂ ಮತ್ತು ಪರ್ವತದಲ್ಲಿಯೂ ಹುಟ್ಟಿದ ದಿವ್ಯಮಾನವರು ಎಲ್ಲಿ ವಾಸಮಾಡುವರೋ, ಇಂದ್ರನು ಸರ್ವಕಾಮನೆಗಳನ್ನೂ ಎಲ್ಲಿ ಸುರಿಸುವನೋ, ಎಲ್ಲಿ ಸ್ತ್ರೀಯರೂ ಸ್ವೇಚ್ಛಾಚಾರಿಣಿಯರಾಗಿರುವರೋ, ಸ್ತ್ರೀ-ಪುರುಷರಲ್ಲಿ ಈರ್ಷ್ಯೆಯೆಂಬುದೇ ಎಲ್ಲಿ ಇಲ್ಲವೋ–ಅಲ್ಲಿಗೇ ನೀನು ಹೋದರೂ ನಾನು ನಿನ್ನನ್ನು ಬಿಡುವುದಿಲ್ಲ. ಅಲ್ಲಿಗೂ ಬಂದು ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಯೇ ಸರ್ವಭೂತೇಷು ನಿವೃತ್ತಕಾಮಾ
ಅಮಾಂಸಾದಾ ನ್ಯಸ್ತದಣ್ಡಾಶ್ಚರನ್ತಿ ।
ನ ಹಿಂಸನ್ತಿ ಸ್ಥಾವರಂ ಜಙ್ಗಮಂ ಚ
ಭೂತಾನಾಂ ಯೇ ಸರ್ವಭೂತಾತ್ಮಭೂತಾಃ ||೨೭||

ನಿರಾಶಿಷೋ ನಿರ್ಮಮಾ ವೀತರಾಗಾ
ಲಾಭಾಲಾಭೇ ತುಲ್ಯನಿನ್ದಾಪ್ರಶಂಸಾಃ ।
ತಥಾವಿಧಾನಮೇಷ ಲೋಕೋ ಮಹರ್ಷೇ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ||೨೮||

"ಯಾರು ಸರ್ವಪ್ರಾಣಿಗಳ ವಿಷಯದಲ್ಲಿಯೂ ಕಾಮನಾರಹಿತರಾಗಿರುವರೋ, ಮಾಂಸವನ್ನು ತಿನ್ನುವುದಿಲ್ಲವೋ, ಯಾರನ್ನೂ ದಂಡಿಸುವುದಿಲ್ಲವೋ–ಸ್ಥಾವರಪ್ರಾಣಿಗಳನ್ನೇ ಆಗಲೀ (ವೃಕ್ಷಾದಿಗಳು) ಜಂಗಮ ಪ್ರಾಣಿಗಳನ್ನೇ ಆಗಲೀ (ಮನುಷ್ಯರು-ಪಶುಪಕ್ಷಿಗಳು)–ಹಿಂಸಿಸುವುದಿಲ್ಲವೋ, ಯಾರಿಗೆ ಸರ್ವಪ್ರಾಣಿಗಳೂ ತಮ್ಮ ಆತ್ಮಪ್ರಾಯವಾಗಿವೆಯೋ, ಯಾರು ಆಸೆ, ಮಮತೆ ಮತ್ತು ಆಸಕ್ತಿಗಳಿಂದ ರಹಿತರಾಗಿರುವರೋ,

ಲಾಭ-ನಷ್ಟಗಳಲ್ಲಾಗಲೀ, ನಿಂದಾ-ಸ್ತುತಿಗಳಲ್ಲಾಗಲೀ, ಸಮಭಾವದಿಂದಿರುವರೋ, (ಲಾಭವಾದರೆ ಹಿಗ್ಗುವುದಿಲ್ಲವೋ, ನಷ್ಟವಾದರೆ ಕುಗ್ಗುವುದಿಲ್ಲವೋ, ಹಾಗೆಯೇ ಶ್ಲಾಘನೆ ಮಾಡಿದರೆ ಹಿಗ್ಗುವುದಿಲ್ಲವೋ, ನಿಂದಿಸಿದರೆ ವ್ಯಥೆಪಡುವುದಿಲ್ಲವೋ)–ಅಂತಹವರಿಗೆ ಮಾತ್ರವೇ ಉತ್ತರಕುರುಲೋಕಗಳು ಮೀಸಲಾಗಿವೆ. ಆದರೆ ಧೃತರಾಷ್ಟ್ರನು ಮಾತ್ರ ಅಲ್ಲಿಗೆ ಹೋಗಲಾರನು."

ಗೌತಮಃ

ತತೋಽಪರೇ ಭಾನ್ತಿ ಲೋಕಾಃ ಸನಾತನಾಃ
ಸುಪುಣ್ಯಗನ್ಧಾ ವಿರಜಾ ವೀತಶೋಕಾಃ ।
ಸೋಮಸ್ಯ ರಾಜ್ಞಃ ಸದನೇ ಮಹಾತ್ಮನ-
ಸ್ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೨೯॥

"ಮಹಾತ್ಮನಾದ ಸೋಮನ ಲೋಕದಲ್ಲಿ ಸನಾತನವಾದ, ಪವಿತ್ರಗಂಧದಿಂದ ವ್ಯಾಪ್ತವಾದ, ಧೂಳಿಲ್ಲದ (ರಜೋಗುಣದಿಂದ ರಹಿತವಾದ), ಶೋಕರಹಿತವಾದ ಇನ್ನೂ ಇತರ ಲೋಕಗಳು ಪ್ರಕಾಶಿಸುತ್ತಿವೆ. ನೀನು ಅಲ್ಲಿಗೆ ಹೋದರೂ ನಾನು ನಿನ್ನನ್ನು ಬಿಡುವುದಿಲ್ಲ. ಬೆನ್ನಟ್ಟಿಬಂದು ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಯೇ ದಾನಶೀಲಾ ನ ಪ್ರತಿಗೃಹ್ಣತೇ ಸದಾ
ನ ಚಾಪ್ಯರ್ಥಾಂಶ್ಚಾದದತೇ ಪರೇಭ್ಯಃ ।
ಯೇಷಾಮದೇಯಮರ್ಹತೇ ನಾಸ್ತಿ ಕಿಂಚಿ-
ತ್ಸರ್ವಾತಿಥ್ಯಾಃ ಸುಪ್ರಸಾದಾ ಜನಾಶ್ಚ ॥೩೦॥

ಯೇ ಕ್ಷನ್ತಾರೋ ನಾಭಿಜಲ್ಪನ್ತಿ ಚಾನ್ಯಾ-
ನ್ಸತ್ರೀಭೂತಾಃ ಸತತಂ ಪುಣ್ಯಶೀಲಾಃ ।
ತಥಾವಿಧಾನಾಮೇಷ ಲೋಕೋ ಮಹರ್ಷೇ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೩೧॥

"ಯಾರು ಯಾವಾಗಲೂ ದಾನಶೀಲರಾಗಿರುವರೋ, ಯಾವಾಗಲೂ

ಪ್ರತಿಗ್ರಹವನ್ನು ಮಾಡುವುದಿಲ್ಲವೋ, ಇತರರಿಂದ ಯಾವ ಪ್ರಯೋಜನವನ್ನೂ ಪಡೆದುಕೊಳ್ಳಲು ಇಚ್ಛಿಪಡುವುದಿಲ್ಲವೋ, ಯಾರಲ್ಲಿ ಸತ್ಪಾತ್ರರಾದವರಿಗೆ ಕೊಡಬಾರದೆಂಬ ವಸ್ತುವೇ ಯಾವುದೂ ಇರುವುದಿಲ್ಲವೋ, ಯಾರು ಎಲ್ಲರಿಗೂ ಅತಿಥಿಸತ್ಕಾರಮಾಡುವರೋ, ಎಲ್ಲರ ವಿಷಯದಲ್ಲಿಯೂ ಕೃಪಾವಿಷ್ಟರಾಗಿರುವರೋ, ಕ್ಷಮಾಶೀಲರೋ, ಇತರರ ವಿಷಯದಲ್ಲಿ ಯಾವ ಬಿರುನುಡಿಗಳನ್ನೂ ಆಡುವುದಿಲ್ಲವೋ, ಸತ್ರರೂಪರಾಗಿರುವರೋ, ಸತತವಾಗಿ ಪುಣ್ಯಕಾರ್ಯವನ್ನೇ ಮಾಡುವರೋ–ಅಂತಹವರಿಗೆ ನೀನು ಹೇಳಿದ ಸೋಮನ ಸದನದಲ್ಲಿರುವ ಸನಾತನಲೋಕಗಳು ಮೀಸಲಾಗಿವೆ. ಆದರೆ ಧೃತರಾಷ್ಟ್ರನು ಅಲ್ಲಿಗೂ ಹೋಗತಕ್ಕವನಲ್ಲ."

ಗೌತಮಃ

ತತೋಽಪರೇ ಭಾನ್ತಿ ಲೋಕಾಃ ಸನಾತನಾ
ವಿರಜಸೋ ವಿತಮಸ್ಕಾ ವಿಶೋಕಾಃ ।
ಆದಿತ್ಯದೇವಸ್ಯ ಪದಂ ಮಹಾತ್ಮನ-
ಸ್ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೩೨॥

"ಸೋಮನ ಲೋಕಗಳ ಮೇಲೆ ರಜೋಗುಣ-ತಮೋಗುಣಗಳಿಲ್ಲದ (ಧೂಳು ಮತ್ತು ಅಂಧಕಾರಗಳಿಲ್ಲದ) ಶೋಕರಹಿತವಾದ ಸನಾತನ ಲೋಕಗಳು ಪ್ರಕಾಶಿಸುತ್ತಿವೆ. ಅದು ಮಹಾತ್ಮನಾದ ಸೂರ್ಯದೇವನ ಸ್ಥಾನವಾಗಿದೆ. ನೀನು ಅಲ್ಲಿಗೆ ಹೋದರೂ ನಾನು ನಿನ್ನನ್ನು ಬಿಡುವುದಿಲ್ಲ. ಬೆನ್ನಟ್ಟಿಬಂದು ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಸ್ವಾಧ್ಯಾಯಶೀಲಾ ಗುರುಶುಶ್ರೂಷಣೇ ರತಾ-
ಸ್ತಪಸ್ವಿನಃ ಸುವ್ರತಾಃ ಸತ್ಯಸನ್ಧಾಃ ।
ಆಚಾರ್ಯಾಣಾಮಪ್ರತಿಕೂಲಭಾಷಿಣೋ
ನಿತ್ಯೋತ್ಥಿತಾ ಗುರುಕರ್ಮಸ್ವಚೋದ್ಯಾಃ ॥೩೩॥
ತಥಾವಿಧಾನಾಮೇಷ ಲೋಕೋ ಮಹರ್ಷೇ
ವಿಶುದ್ಧಾನಾಂ ಭಾವಿತೋ ವಾಗ್ಯತಾನಾಮ್ ।

ಸತ್ಯೇ ಸ್ಥಿತಾನಾಂ ವೇದವಿದಾಂ ಮಹಾತ್ಮನಾಂ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೩೪॥

“ಮಹರ್ಷಿಯೇ! ಯಾರು ಸ್ವಾಧ್ಯಾಯಶೀಲರಾಗಿರುವರೋ, ಗುರುಸೇವಾಪರಾಯಣರೋ, ತಪಸ್ವಿಗಳೋ, ಉತ್ತಮವ್ರತಧಾರಿಗಳೋ, ಸತ್ಯಸಂಧರೋ, ಆಚಾರ್ಯರಿಗೆ ಪ್ರತಿಕೂಲವಾದ ಮಾತನ್ನು ಆಡದವರೋ, ನಿತ್ಯವೂ ಉದ್ಯೋಗಶೀಲರಾಗಿರುವರೋ, ಅಪ್ರೇರಿತರಾಗಿಯೇ ಗುರುಗಳ ಕಾರ್ಯದಲ್ಲಿ ನಿರತರಾಗಿರುವರೋ, ಶುದ್ಧಾತ್ಮರೋ, ವಾಕ್ಸಂಯಮದಿಂದ ಕೂಡಿರುವರೋ, ಸತ್ಯದಲ್ಲಿ ನಿಷ್ಠೆಯುಳ್ಳವರಾಗಿರುವರೋ, ವೇದ ವಿದರೋ–ಅಂತಹ ಮಹಾತ್ಮರಿಗೆ ಸೂರ್ಯದೇವನ ಲೋಕಗಳು ಮೀಸಲಾಗಿವೆ. ಆದರೆ ಧೃತರಾಷ್ಟ್ರನೆಂದಿಗೂ ಅಂತಹ ಲೋಕಗಳಿಗೆ ಹೋಗುವುದಿಲ್ಲ.”

ಗೌತಮಃ

ತತೋಽಪರೇ ಭಾನ್ತಿ ಲೋಕಾಃ ಸನಾತನಾಃ
ಸುಪುಣ್ಯಗನ್ಧಾ ವಿರಜಾ ವಿಶೋಕಾಃ ।
ವರುಣಸ್ಯ ರಾಜ್ಞಃ ಸದನೇ ಮಹಾತ್ಮನ-
ಸ್ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೩೫॥

“ಸೂರ್ಯನ ಲೋಕಗಳಿಗೂ ಮೇಲ್ಭಾಗದಲ್ಲಿರುವ ವರುಣನ ಸದನದಲ್ಲಿ ಸನಾತನವಾದ, ಪವಿತ್ರವಾದ ಗಂಧದಿಂದ ವ್ಯಾಪ್ತವಾದ ರಜೋ ಗುಣವಾಗಲೀ (ಧೂಳಾಗಲೀ) ಶೋಕವಾಗಲೀ ಇಲ್ಲದ ಲೋಕಗಳು ಪ್ರಕಾಶಿಸುತ್ತಿವೆ. ನೀನು ನಿನ್ನ ಆನೆಯನ್ನು ಅಲ್ಲಿಗೆ ಒಯ್ದರೂ ನಾನು ಬಿಡುವುದಿಲ್ಲ. ಅಲ್ಲಿಗೂ ಬಂದು ನನ್ನ ಆನೆಯನ್ನು ಹಿಂದಕ್ಕೆ ತರುತ್ತೇನೆ.”

ಧೃತರಾಷ್ಟ್ರಃ

ಚಾತುರ್ಮಾಸ್ಯೈರ್ಯೇ ಯಜನ್ತೇ ಜನಾಃ ಸದಾ
ತಥೇಷ್ಟೀನಾಂ ದಶಶತಂ ಪ್ರಾಪ್ನುವನ್ತಿ ।
ಯೇ ಚಾಗ್ನಿಹೋತ್ರಂ ಜುಹ್ವತಿ ಶ್ರದ್ದಧಾನಾ
ಯಥಾಮ್ನಾಯಂ ತ್ರೀಣಿ ವರ್ಷಾಣಿ ವಿಪ್ರಾಃ ॥೩೬॥

ಸುಧಾರಿಣಾಂ ಧರ್ಮಧುರೇ ಮಹಾತ್ಮನಾಂ
ಯಥೋಚಿತೇ ವರ್ತ್ಮನಿ ಸುಸ್ಥಿತಾನಾಮ್ ।
ಧರ್ಮಾತ್ಮನಾಮುದ್ವಹತಾಂ ಗತಿಂ ತಾಂ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೩೭॥

ಯಾರು ಚಾತುರ್ಮಾಸ್ಯಯಾಗವನ್ನು ಮಾಡುವರೋ, ಸಾವಿರ ಇಷ್ಟಿಗಳನ್ನು ಮಾಡುವರೋ, ವೇದೋಕ್ತವಿಧಿಗೆ ಅನುಸಾರವಾಗಿ ಮೂರು ವರ್ಷಗಳು ಶ್ರದ್ಧೆಯಿಂದ ಅಗ್ನಿಹೋತ್ರವನ್ನು ಮಾಡುವರೋ, ಧರ್ಮದ ಭಾರವನ್ನು ಚೆನ್ನಾಗಿ ಧರಿಸಿರುವರೋ, ಯಥೋಚಿತವಾದ ಶಾಸ್ತ್ರಮಾರ್ಗದಲ್ಲಿ ಸುಸ್ಥಿರವಾಗಿರುವರೋ–ಅಂತಹ ಧರ್ಮಾತ್ಮರಾದವರು ವರುಣನ ಲೋಕಗಳಿಗೆ ಹೋಗುತ್ತಾರೆ. ಆದರೆ ಧೃತರಾಷ್ಟ್ರನು ಅಲ್ಲಿಗೂ ಹೋಗತಕ್ಕವನಲ್ಲ. (ಅದಕ್ಕಿಂತಲೂ ಪುಣ್ಯತಮವಾದ ಲೋಕಕ್ಕೆ ಹೋಗತಕ್ಕವನು.)"

ಗೌತಮಃ

ಇನ್ದ್ರಸ್ಯ ಲೋಕಾ ವಿರಜಾ ವಿಶೋಕಾ
ದುರನ್ವಯಾಃ ಕಾಂಕ್ಷಿತಾ ಮಾನವಾನಾಮ್ ।
ತಸ್ಯಾಹಂ ತೇ ಭವನೇ ಭೂರಿತೇಜಸೋ
ರಾಜನ್ನಿಮಂ ಹಸ್ತಿನಂ ಯಾತಯಿಷ್ಯೇ ॥೩೮॥

"ಇಂದ್ರನ ಲೋಕಗಳು ರಜೋಗುಣದಿಂದ ರಹಿತವಾಗಿಯೂ ಶೋಕರಹಿತವಾಗಿಯೂ ಇವೆ. ಅವು ಬಹಳ ಕಷ್ಟದಿಂದ ಪ್ರಾಪ್ತವಾಗತಕ್ಕವುಗಳು. ಎಲ್ಲ ಜನರೂ ಅಲ್ಲಿಗೆ ಹೋಗಲು ಬಯಸುತ್ತಾರೆ. ಮಹಾತೇಜಸ್ವಿಯಾದ ಇಂದ್ರನ ಆ ಲೋಕಗಳಿಗೆ ನೀನು ಹೋದರೂ ನಿನ್ನನ್ನು ನಾನು ಬಿಡುವುದಿಲ್ಲ. ಅಲ್ಲಿಗೂ ಬಂದು ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಶತವರ್ಷಜೀವೀ ಯಶ್ಚ ಶೂರೋ ಮನುಷ್ಯೋ
ವೇದಾಧ್ಯಾಯೀ ಯಶ್ಚ ಯಜ್ವಾಪ್ರಮತ್ತಃ ।
ಏತೇ ಸರ್ವೇ ಶಕ್ರಲೋಕಂ ವ್ರಜನ್ತಿ
ಪರಂ ಗನ್ತಾ ಧೃತರಾಷ್ಟ್ರೋ ನ ತತ್ರ ॥೩೯॥

"ನೂರು ವರ್ಷಗಳವರೆಗೆ ಬದುಕಿರುವ ಶೂರನಾದ ಮನುಷ್ಯನು, ವೇದಾಧ್ಯಯನವನ್ನು ಮಾಡಿದವನು, ಜಾಗರೂಕತೆಯಿಂದ ಯಾಗವನ್ನು ಮಾಡುವವನು–ಇಂತಹವರೆಲ್ಲರೂ ನೀನು ವರ್ಣಿಸಿದ ಇಂದ್ರಲೋಕಕ್ಕೆ ಹೋಗುತ್ತಾರೆ. ಆದರೆ ಧೃತರಾಷ್ಟ್ರನು ಮಾತ್ರ ಅಲ್ಲಿಗೆ ಹೋಗತಕ್ಕವನಲ್ಲ."

ಗೌತಮಃ

ಪ್ರಾಜಾಪತ್ಯಾಃ ಸನ್ತಿ ಲೋಕಾ ಮಹಾನ್ತೋ
ನಾಕಸ್ಯ ಪೃಷ್ಠೇ ಪುಷ್ಕಲಾ ವೀತಶೋಕಾಃ ।
ಮನೀಷಿತಾಃ ಸರ್ವಲೋಕೋದ್ಭವಾನಾಂ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೪೦॥

"ಮಹಾರಾಜ! ಸ್ವರ್ಗದ ಮೇಲ್ಭಾಗದಲ್ಲಿ ಸರ್ವಸಮೃದ್ಧವಾದ, ಶೋಕರಹಿತವಾದ, ಸರ್ವಲೋಕಗಳಲ್ಲಿ ಹುಟ್ಟಿರುವವರೂ ಹೋಗಲು ಬಯಸುವ ಪ್ರಜಾಪತಿಗಳ ಮಹಾಲೋಕಗಳಿವೆ. ನೀನು ಆನೆಯನ್ನು ಅಲ್ಲಿಗೇ ಒಯ್ದರೂ ನಿನ್ನನ್ನು ಬಿಡುವುದಿಲ್ಲ. ಅಲ್ಲಿಂದಲಾದರೂ ನನ್ನ ಆನೆಯನ್ನು ಸೆಳೆದು ತರುತ್ತೇನೆ."

ಧೃತರಾಷ್ಟ್ರಃ

ಯೇ ರಾಜಾನೋ ರಾಜಸೂಯಾಭಿಷಿಕ್ತಾ
ಧರ್ಮಾತ್ಮಾನೋ ರಕ್ಷಿತಾರಃ ಪ್ರಜಾನಾಮ್।
ಯೇ ಚಾಶ್ವಮೇಧಾವಭೃಥೇ ಪ್ಲುತಾಙ್ಗಾ-
ಸ್ತೇಷಾಂ ಲೋಕಾ ಧೃತರಾಷ್ಟ್ರೋ ನ ತತ್ರ ॥೪೧॥

"ಯಾವ ರಾಜರು ರಾಜಸೂಯಯಾಗವನ್ನು ಮಾಡಿ ಚಕ್ರವರ್ತಿಯ ಪದವಿಯಲ್ಲಿ ಅಭಿಷಿಕ್ತರಾಗಿರುವರೋ, ಧರ್ಮಾತ್ಮರೋ, ಪ್ರಜೆಗಳ ರಕ್ಷಕರೋ, ಅಶ್ವಮೇಧಯಾಗವನ್ನು ಮಾಡಿ ಅದರ ಅವಭೃಥದಲ್ಲಿ ಯಾರ ಸರ್ವಾಂಗಗಳೂ ತೊಳೆಯಲ್ಪಟ್ಟಿವೆಯೋ–ಅಂತಹವರಿಗೆ ಪ್ರಾಜಾಪತ್ಯ ಲೋಕಗಳು, ಸೇರಿದುವುಗಳಾಗಿವೆ. ಆದರೆ ಧೃತರಾಷ್ಟ್ರನು ಮಾತ್ರ ಅಲ್ಲಿಗೆ ಹೋಗತಕ್ಕವನಲ್ಲ."

ಗೌತಮಃ

ತತಃ ಪರಂ ಭಾನ್ತಿ ಲೋಕಾಃ ಸನಾತನಾಃ
ಸುಪುಣ್ಯಗನ್ಧಾ ವಿರಜಾ ವೀತಶೋಕಾಃ ।
ತಸ್ಮಿನ್ನಹಂ ದುರ್ಲಭೇ ಚಾಪ್ಯಧೃಷ್ಯೇ
ಗವಾಂ ಲೋಕೇ ಹಸ್ತಿನಂ ಯಾತಯಿಷ್ಯೇ ॥೪೨॥

"ಪ್ರಾಜಾಪತ್ಯಲೋಕಗಳಿಗಿಂತಲೂ ಮೇಲೆ ಸನಾತನವಾದ, ಸುಂದರವಾದ ಪುಣ್ಯಗಂಧಗಳಿಂದ ವ್ಯಾಪ್ತವಾದ, ಧೂಳಿಲ್ಲದ, (ರಜೋಗುಣ ವಿಲ್ಲದ) ಶೋಕರಹಿತವಾದ ಗೋಲೋಕಗಳಿವೆ. ನೀನೇನಾದರೂ ದುರ್ಲಭವಾದ ಮತ್ತು ಅಜೇಯವಾದ ಗೋಲೋಕಕ್ಕೂ ಆನೆಯನ್ನು ಒಯ್ಯುವುದಾದರೆ ಅಲ್ಲಿಗೂ ನಾನು ಬಂದು ನನ್ನ ಆನೆಯನ್ನು ಹಿಂದಕ್ಕೆ ತರುತ್ತೇನೆ."

ಧೃತರಾಷ್ಟ್ರಃ

ಯೋ ಗೋಸಹಸ್ರೀ ಶತದಃ ಸಮಾಂ ಸಮಾಂ
ಗವಾಂ ಶತೀ ದಶ ದದ್ಯಾಚ್ಚ ಶಕ್ತ್ಯಾ ।
ತಥಾ ದಶಭ್ಯೋ ಯಶ್ಚ ದದ್ಯಾದಿಹೈಕಾಂ
ಪಞ್ಚಭ್ಯೋ ವಾ ದಾನಶೀಲಸ್ತಥೈಕಾಮ್ ॥೪೩॥
ಯೇ ಜೀರ್ಯನ್ತೇ ಬ್ರಹ್ಮಚರ್ಯೇಣ ವಿಪ್ರಾ
ಬ್ರಾಹ್ಮೀಂ ವಾಚಂ ಪರಿರಕ್ಷನ್ತಿ ಚೈವ ।
ಮನಸ್ವಿನಸ್ತೀರ್ಥಯಾತ್ರಾಪರಾಯಣಾ-
ಸ್ತೇ ತತ್ರ ಮೋದನ್ತಿ ಗವಾಂ ನಿವಾಸೇ ॥೪೪॥

"ಯಾವನು ಸಾವಿರ ಹಸುಗಳಿಗೆ ಒಡೆಯನಾಗಿದ್ದು ಪ್ರತಿವರ್ಷವೂ ನೂರು ನೂರು ಹಸುಗಳನ್ನು ದಾನಕೊಡುವನೋ, ನೂರು ಹಸುಗಳಿಗೆ ಒಡೆಯನಾಗಿದ್ದು ಪ್ರತಿವರ್ಷವೂ ಹತ್ತು ಹತ್ತು ಗೋವುಗಳನ್ನು ದಾನಕೊಡುವನೋ, ಹತ್ತು ಗೋವುಗಳಿಗೆ ಒಡೆಯನಾಗಿದ್ದು ಪ್ರತಿವರ್ಷವೂ ಒಂದೊಂದು ಗೋವನ್ನು ದಾನವಾಗಿ ಕೊಡುವನೋ ಅಥವಾ ಐದು ಗೋವುಗಳಿಗೆ ಯಜಮಾನನಾಗಿದ್ದು ದಾನಶೀಲನಾಗಿ ಒಂದು ಗೋವನ್ನು ಪ್ರತಿವರ್ಷವೂ ದಾನವಾಗಿ ಕೊಡುವನೋ, ಯಾವ ಬ್ರಾಹ್ಮಣರು ನೈಷ್ಠಿಕಬ್ರಹ್ಮಚಾರಿಗಳಾಗಿಯೇ ಇದ್ದು ವೃದ್ಧಾಪ್ಯವನ್ನು ಹೊಂದುವರೋ, ವೇದ

ಗಳನ್ನು ಅಧ್ಯಯನ-ಅಧ್ಯಾಪನಗಳ ಮೂಲಕವಾಗಿ ರಕ್ಷಿಸುವರೋ, ಮನಸ್ವಿಗಳಾದ (ಒಳ್ಳೆಯ ಮನಸ್ಸನ್ನು ಹೊಂದಿರುವ) ಯಾವ ಬ್ರಾಹ್ಮಣರು ತೀರ್ಥಯಾತ್ರೆಗಳನ್ನು ಮಾಡುವುದರಲ್ಲಿಯೇ ನಿರತರಾಗಿರುವರೋ– ಅಂತಹವರೆಲ್ಲರೂ ಗೋಲೋಕಗಳಿಗೆ ಹೋಗುತ್ತಾರೆ.

ಪ್ರಭಾಸಂ ಮಾನಸಂ ತೀರ್ಥಂ ಪುಷ್ಕರಾಣಿ ಮಹತ್ಸರಃ ।
ಪುಣ್ಯಂ ಚ ನೈಮಿಷಂ ತೀರ್ಥಂ ಬಾಹುದಾಂ ಕರತೋಯಿನೀಮ್ ॥
ಗಯಾಂ ಗಯಶಿರಶ್ಚೈವ ವಿಪಾಶಾಂ ಸ್ಥೂಲವಾಲುಕಾಮ್ ।
ಕೃಷ್ಣಾಂ ಗಜ್ಗಾಂ ಪಞ್ಚನದಂ ಮಹಾಹ್ರದಮಥಾಪಿ ಚ ॥೪೬॥

ಗೋಮತೀಂ ಕೌಶಿಕೀಂ ಪಮ್ಪಾಂ ಮಹಾತ್ಮಾನೋ ಧೃತವ್ರತಾಃ ।
ಸರಸ್ವತೀದೃಷದ್ವತ್ಯೌ ಯಮುನಾಂ ಯೇ ತು ಯಾನ್ತಿ ಚ ॥೪೭॥
ತತ್ರ ತೇ ದಿವ್ಯಸಂಸ್ಥಾನಾ ದಿವ್ಯಮಾಲ್ಯಧರಾಃ ಶಿವಾಃ ।
ಪ್ರಯಾನ್ತಿ ಪುಣ್ಯಗನ್ಧಾಢ್ಯಾ ಧೃತರಾಷ್ಟ್ರೋ ನ ತತ್ರ ವೈ ॥೪೮॥

ಪ್ರಭಾಸ, ಮಾನಸಸರೋವರತೀರ್ಥ, ತ್ರಿಪುಷ್ಕರವೆಂದು ಪ್ರಸಿದ್ಧವಾಗಿರುವ ಮಹಾಸರೋವರ, ಪುಣ್ಯಪ್ರದವಾದ ನೈಮಿಷತೀರ್ಥ, ಬಾಹುದಾ ನದೀ, ಕರತೋಯಾನದೀ, ಗಯಾ, ಗಯಶಿರಸ್ಸು, ದಪ್ಪ ಮರಳಿನಿಂದ ಕೂಡಿರುವ ವಿಪಾಶಾ, ಕೃಷ್ಣಾ, ಗಂಗಾ, ಪಂಚನದ, ಮಹಾಹ್ರದ, ಗೋಮತೀ, ಕೌಶಿಕೀ, ಪಂಪಾಸರೋವರ, ಸರಸ್ವತೀ, ದೃಷದ್ವತೀ ಮತ್ತು ಯಮುನಾ–ಈ ತೀರ್ಥಗಳಲ್ಲಿ ವ್ರತನಿಷ್ಠರಾಗಿ ಯಾರು ಸ್ನಾನ ಮಾಡುವರೋ–ಅಂತಹ ಮಹಾತ್ಮರೆಲ್ಲರೂ ದಿವ್ಯರೂಪಗಳನ್ನು ಧರಿಸಿ, ದಿವ್ಯಮಾಲೆಗಳಿಂದ ಸಮಲಂಕೃತರಾಗಿ ಗೋಲೋಕಗಳಿಗೆ ಹೋಗುತ್ತಾರೆ ಮತ್ತು ಕಲ್ಯಾಣಮಯಸ್ವರೂಪರಾಗಿ ಪವಿತ್ರಗಂಧದಿಂದ ವ್ಯಾಪ್ತರಾಗಿ ಅಲ್ಲಿ ವಾಸಮಾಡುತ್ತಾರೆ. ಆದರೆ ಧೃತರಾಷ್ಟ್ರನು ಅಲ್ಲಿಗೂ ಹೋಗತಕ್ಕವನಲ್ಲ."

ಗೌತಮಃ

ಯತ್ರ ಶೀತಭಯಂ ನಾಸ್ತಿ ನ ಚೋಷ್ಣಭಯಮಣ್ವಪಿ ।
ನ ಕ್ಷುತ್ಪಿಪಾಸೇ ನ ಗ್ಲಾನಿರ್ನ ದುಃಖಂ ನ ಸುಖಂ ತಥಾ ॥೪೯॥

ನ ದ್ವೇಷ್ಯೋ ನ ಪ್ರಿಯಃ ಕಶ್ಚಿನ್ನ ಬನ್ಧುರ್ನ ರಿಪುಸ್ತಥಾ ।
ನ ಜರಾಮರಣೇ ತತ್ರ ನ ಪುಣ್ಯಂ ನ ಚ ಪಾತಕಮ್ ॥೫೦॥

ತಸ್ಮಿನ್ನಿರಜಸಿ ಸ್ಫೀತೇ ಪ್ರಜ್ಞಾಸತ್ತ್ವವ್ಯವಸ್ಥಿತೇ ।
ಸ್ವಯಮ್ಭುಭವನೇ ಪುಣ್ಯೇ ಹಸ್ತಿನಂ ಮೇ ಪ್ರದಾಸ್ಯಸಿ ॥೩೧॥

"ಎಲ್ಲಿ ಚಳಿಯ ಭಯವಿಲ್ಲವೋ, ಸ್ವಲ್ಪವಾದರೂ ಸೆಕೆಯ ಭಯವೂ ಇಲ್ಲವೋ, ಹಸಿವು-ಬಾಯಾರಿಕೆಗಳಿಲ್ಲವೋ, ಬಳಲಿಕೆಯಿಲ್ಲವೋ, ಸುಖವಾಗಲೀ-ದುಃಖವಾಗಲೀ ಇಲ್ಲವೋ, ದ್ವೇಷಿಸುವವನಾಗಲೀ–ಪ್ರಿಯನಾಗಲೀ ಇಲ್ಲವೋ, ಬಂಧುವಾಗಲೀ-ಶತ್ರುವಾಗಲೀ ಇಲ್ಲವೋ, ಮುಪ್ಪಾಗಲೀ-ಮರಣವಾಗಲೀ ಇಲ್ಲವೋ, ಪುಣ್ಯವಾಗಲೀ-ಪಾಪವಾಗಲೀ ಇಲ್ಲವೋ–ಅಂತಹ ರಜೋಗುಣದಿಂದ (ಧೂಳಿನಿಂದ) ರಹಿತವಾದ, ಸಮೃದ್ಧಶಾಲಿಯಾದ, ಪ್ರಜ್ಞಾನದಿಂದಲೂ ಸತ್ತ್ವಗುಣದಿಂದಲೂ ಸಂಪನ್ನವಾದ, ಪುಣ್ಯಮಯವಾದ ಬ್ರಹ್ಮಲೋಕಕ್ಕೆ ನೀನು ಈ ಆನೆಯನ್ನು ಒಯ್ದಿಯಾದರೆ ಅಲ್ಲಿಗೂ ಬರುವ ನನಗೆ ನೀನೇ ಈ ಆನೆಯನ್ನು ಒಪ್ಪಿಸಿಬಿಡುವೆ."

ಧೃತರಾಷ್ಟ್ರಃ

ನಿರ್ಮುಕ್ತಾಃ ಸರ್ವಸಙ್ಗೈರ್ಯೇ ಕೃತಾತ್ಮಾನೋ ಯತವ್ರತಾಃ ।
ಅಧ್ಯಾತ್ಮಯೋಗಸಂಸ್ಥಾನೈರ್ಯುಕ್ತಾಃ ಸ್ವರ್ಗಗತಿಂ ಗತಾಃ ॥೩೨॥
ತೇ ಬ್ರಹ್ಮಭವನಂ ಪುಣ್ಯಂ ಪ್ರಾಪ್ನುವನ್ತೀಹ ಸಾತ್ತ್ವಿಕಾಃ ।
ನ ತತ್ರ ಧೃತರಾಷ್ಟ್ರಸ್ತೇ ಶಕ್ಯೋ ದ್ರಷ್ಟುಂ ಮಹಾಮುನೇ ॥೩೩॥

"ಮಹಾಮುನಿಯೇ! ಯಾರು ಸರ್ವಸಂಗಪರಿತ್ಯಾಗಮಾಡಿರುವರೋ, ಮನಸ್ಸನ್ನು ವಶಪಡಿಸಿಕೊಂಡಿರುವರೋ, ವ್ರತಾನುಷ್ಠಾನಪರರಾಗಿರುವರೋ, ಅಧ್ಯಾತ್ಮಜ್ಞಾನದಿಂದಲೂ ಅಷ್ಟಾಂಗಯೋಗದಿಂದಲೂ ಸಂಪನ್ನರಾಗಿರುವರೋ, ಸ್ವರ್ಗಲೋಕಕ್ಕೂ ಅಧಿಕಾರಿಗಳಾಗಿರುವರೋ–ಅಂತಹ ಸಾತ್ತ್ವಿಕರು ಮಾತ್ರವೇ ಪುಣ್ಯಮಯವಾದ ಬ್ರಹ್ಮಲೋಕಕ್ಕೆ ಹೋಗುತ್ತಾರೆ. ಆದರೆ ಅಲ್ಲಿ ನೀನು ಧೃತರಾಷ್ಟ್ರನನ್ನು ನೋಡಲು ಶಕ್ಯವಿಲ್ಲ."

ಗೌತಮಃ

ರಥನ್ತರಂ ಯಚ್ಚ ಬೃಹಚ್ಚ ಗೀಯತೇ
ಯತ್ರ ವೇದೀ ಪುಣ್ಡರೀಕೈಸ್ತೃಣೋತಿ ।

ಯತ್ರೋಪಯಾತಿ ಹರಿಭಿಃ ಸೋಮಪೀಥೀ
ತತ್ರ ತ್ವಾಹಂ ಹಸ್ತಿನಂ ಯಾತಯಿಷ್ಯೇ ॥೫೪॥

“ಎಲ್ಲಿ ರಥಂತರಸಾಮ ಮತ್ತು ಬೃಹತ್ಸಾಮಗಳ ಗಾನವಾಗುತ್ತಿರುವುದೋ, ಎಲ್ಲಿ ಯಾಜ್ಞಿಕರು ಯಜ್ಞವೇದಿಗಳನ್ನು ಕಮಲಪುಷ್ಪಗಳಿಂದ ಆಚ್ಛಾದಿಸಿರುವರೋ, ಸೋಮಪಾನಮಾಡಿದವರು ಕುದುರೆಗಳ ಮೇಲೆ ಕುಳಿತು ಎಲ್ಲಿಗೆ ಆಗಮಿಸುವರೋ–ಅಂತಹ ಪುಣ್ಯಭೂಮಿಯಲ್ಲಿಯೇ ನಾನು ನನ್ನ ಆನೆಯನ್ನು ನಿನ್ನಿಂದ ಹಿಂದಕ್ಕೆ ಪಡೆಯುತ್ತೇನೆ.

ಬುಧ್ಯಾಮಿ ತ್ವಾಂ ವೃತ್ರಹಣಂ ಶತಕ್ರತುಂ
ವ್ಯತಿಕ್ರಮನ್ತಂ ಭುವನಾನಿ ವಿಶ್ವಾ ।
ಕಚ್ಚಿನ್ನ ವಾಚಾ ವೃಜಿನಂ ಕದಾಚಿ-
ದಕಾರ್ಷಂ ತೇ ಮನಸೋಽಭಿಷಜ್ಗಾತ್ ॥೫೫॥

ನೀನು ಧೃತರಾಷ್ಟ್ರರಾಜನಲ್ಲವೆಂಬುದನ್ನೂ ವೃತ್ರಹಂತಕನಾದ ಶತಕ್ರತುವೆಂಬುದನ್ನೂ ಮತ್ತು ಸಂಪೂರ್ಣಜಗತ್ತನ್ನೂ ನೋಡುವ ಸಲುವಾಗಿ ಸಂಚರಿಸುತ್ತಿರುವೆಯೆಂಬುದನ್ನೂ ನಾನು ತಿಳಿದಿರುವೆನು. ನಾನು ನನ್ನ ಮನಸ್ಸಿನ ಆವೇಶದಿಂದ ಯಾವಾಗಲೂ ಮಾತಿನ ಮೂಲಕವಾಗಿ ನಿನಗೆ ಯಾವುದೇ ಅಪರಾಧವನ್ನೂ ಮಾಡಿಲ್ಲವಷ್ಟೇ? (ಆದುದರಿಂದ ನನ್ನ ಆನೆಯನ್ನು ಕೊಟ್ಟುಬಿಡು.)”

ಶತಕ್ರತುಃ

ಮಘವಾಹಂ ಲೋಕಪಥಂ ಪ್ರಜಾನಾ-
ಮನ್ವಾಗಮಂ ಪರಿವಾದೇ ಗಜಸ್ಯ ।
ತಸ್ಮಾದ್ಭವಾನ್ಪ್ರಣತಂ ಮಾನುಶಾಸ್ತು
ಬ್ರವೀಷಿ ಯತ್ತತ್ಕರವಾಣಿ ಸರ್ವಮ್ ॥೫೬॥

“ಗೌತಮ! ನಾನು ನೀನು ಹೇಳಿದಂತೆ ಇಂದ್ರನೇ ಆಗಿದ್ದೇನೆ. ನಿನ್ನ ಆನೆಯನ್ನು ಅಪಹರಣಮಾಡಿರುವ ಕಾರಣ ಪ್ರಜೆಗಳ ದೃಷ್ಟಿಯಿಂದ ನಾನು ನಿಂದಿತನಾಗಿದ್ದೇನೆ. ತಲೆಬಾಗಿ ನಮಸ್ಕರಿಸುತ್ತಿರುವ ನನಗೆ ಆಜ್ಞಾಪಿಸು. ನೀನು ಏನು ಹೇಳುವೆಯೋ ಆ ಎಲ್ಲ ಕಾರ್ಯಗಳನ್ನೂ ಮಾಡಿಕೊಡುವೆನು.”

ಗೌತಮಃ

ಶ್ವೇತಂ ಕರೇಣುಂ ಮಮ ಪುತ್ರಂ ಹಿ ನಾಗಂ
ಯಂ ಮೇಽಹಾರ್ಷೀರ್ದಶವರ್ಷಾಣಿ ಬಾಲಮ್ ।
ಯೋ ಮೇ ವನೇ ವಸತೋಽಭೂದ್ದ್ವಿತೀಯ-
ಸ್ತಮೇವ ಮೇ ದೇಹಿ ಸುರೇನ್ದ್ರ ನಾಗಮ್ ॥೫೭॥

“ದೇವೇಂದ್ರನೇ! ನನ್ನ ಮಗನ ರೂಪದಲ್ಲಿದ್ದ ಹತ್ತು ವರ್ಷದ ಬಿಳಿಯ ಆನೆಮರಿಯನ್ನು ನೀನು ಅಪಹರಿಸಿರುವೆ. ಈ ನಿರ್ಜನವಾದ ಅರಣ್ಯದಲ್ಲಿ ವಾಸಮಾಡುತ್ತಿರುವ ನನಗೆ ಆ ಆನೆಯು ಜೊತೆಗಾರನಾಗಿದ್ದಿತು. ಆ ನನ್ನ ಆನೆಮರಿಯನ್ನು ನನಗೆ ದಯಪಾಲಿಸು. (ನಿನ್ನಿಂದ ಬೇರೆ ಯಾವ ಕಾರ್ಯವೂ ನನಗೆ ಆಗಬೇಕಾಗಿಲ್ಲ.)”

ಶತಕ್ರತುಃ

ಅಯಂ ಸುತಸ್ತೇ ದ್ವಿಜಮುಖ್ಯ ನಾಗ
ಆಗಚ್ಛತಿ ತ್ವಾಮಭಿವೀಕ್ಷಮಾಣಃ ।
ಪಾದೌ ಚ ತೇ ನಾಸಿಕಯೋಪಜಿಘ್ರತೇ
ಶ್ರೇಯೋ ಮಮಾಧ್ಯಾಹಿ ನಮಶ್ಚ ತೇಽಸ್ತು ॥೫೮॥

“ಬ್ರಾಹ್ಮಣಶ್ರೇಷ್ಠನೇ! ನಿನಗೆ ನಮಸ್ಕರಿಸುತ್ತೇನೆ. ಮಗನ ರೂಪದಲ್ಲಿರುವ ಈ ಆನೆಯು ನಿನ್ನ ಕಡೆಯೇ ನೋಡುತ್ತಾ ನಿನ್ನ ಸಮೀಪಕ್ಕೇ ಬರುತ್ತಿದೆ. ನಿನ್ನ ಬಳಿಗೆ ಬಂದು ತನ್ನ ಸೊಂಡಿಲಿನಿಂದ ನಿನ್ನೆರಡು ಕಾಲುಗಳನ್ನೂ ಆಘ್ರಾಣಿಸುತ್ತದೆ. ನಿನ್ನ ಆನೆಯನ್ನು ಪಡೆದುಕೊಂಡನಂತರ ನನ್ನ ಶ್ರೇಯಸ್ಸಿನ ವಿಷಯವಾಗಿ ಚಿಂತಿಸು. ನಿನಗೆ ನಮಸ್ಕಾರವಿರಲಿ.”

ಗೌತಮಃ

ಶಿವಂ ಸದೈವೇಹ ಸುರೇನ್ದ್ರ ತುಭ್ಯಂ
ಧ್ಯಾಯಾಮಿ ಪೂಜಾಂ ಚ ಸದಾ ಪ್ರಯುಞ್ಜೇ ।
ಮಮಾಪಿ ತ್ವಂ ಶಕ್ರ ಶಿವಂ ದದಸ್ವ
ತ್ವಯಾ ದತ್ತಂ ಪ್ರತಿಗೃಹ್ಣಾಮಿ ನಾಗಮ್ ॥೫೯॥

“ಸುರೇಂದ್ರನೇ! ನಿನಗೆ ಮಂಗಳವಾಗಲೆಂದು ನಾನು ಯಾವಾಗಲೂ

ಚಿಂತಿಸುತ್ತಿರುತ್ತೇನೆ. ನಿನ್ನನ್ನು ಯಾವಾಗಲೂ ಪೂಜಿಸುತ್ತಿರುತ್ತೇನೆ. ನನಗೂ ನೀನು ಮಂಗಳವನ್ನುಂಟುಮಾಡು. ನೀನು ಕೊಡುವ ಆನೆಯನ್ನು ನಾನು ಪ್ರತಿಗ್ರಹಿಸುತ್ತೇನೆ."

ಶತಕ್ರತುಃ

ಯೇಷಾಂ ವೇದಾ ನಿಹಿತಾ ವೈ ಗುಹಾಯಾಂ
ಮನೀಷಿಣಾಂ ಸತ್ಯವತಾಂ ಮಹಾತ್ಮನಾಮ್ ।
ತೇಷಾಂ ತ್ವಯೈಕೇನ ಮಹಾತ್ಮನಾಸ್ಮಿ
ವೃದ್ಧಸ್ತಸ್ಮಾತ್ಪ್ರೀತಿಮಾಂಸ್ತೇಽಹಮದ್ಯ ॥೬೦॥

ಹನ್ತೈಹಿ ಬ್ರಾಹ್ಮಣ ಕ್ಷಿಪ್ರಂ ಸಹ ಪುತ್ರೇಣ ಹಸ್ತಿನಾ ।
ತ್ವಂ ಹಿ ಪ್ರಾಪ್ನುಂ ಶುಭಾಲ್ಲೋಕಾನಹ್ನಾಯ ಚ ಚಿರಾಯ ಚ ॥೬೧॥

"ಯಾವ ಮನನಶೀಲರಾದ, ಸತ್ಯವಂತರಾದ ಮಹಾತ್ಮರ ಹೃದಯ ಗುಹೆಗಳಲ್ಲಿ ವೇದಗಳು ಇಡಲ್ಪಟ್ಟಿವೆಯೋ–ಅಂತಹ ಮಹಾತ್ಮರಲ್ಲಿ ಒಬ್ಬನಾಗಿರುವ ನಿನ್ನಿಂದ ನಾನು ಜ್ಞಾನವನ್ನು ಪಡೆದಿರುತ್ತೇನೆ. ಆದುದರಿಂದ ನಾನು ನಿನ್ನ ವಿಷಯದಲ್ಲಿ ಸುಪ್ರೀತನಾಗಿದ್ದೇನೆ. ಬ್ರಾಹ್ಮಣನೇ! ನಾನು ಸಂತೋಷದಿಂದ ಹೇಳುತ್ತಿದ್ದೇನೆ. ನಿನ್ನ ಮಗನ ರೂಪದಲ್ಲಿರುವ ಆನೆಯೊಡನೆ ಮುಂದೆ ಬಹಳ ಕಾಲದವರೆಗೂ ಕಲ್ಯಾಣಮಯವಾದ ಲೋಕಗಳಲ್ಲಿರಲು ಶೀಘ್ರವಾಗಿ ಹೊರಡು."

ಭೀಷ್ಮನು ಹೇಳುತ್ತಾನೆ :

"ಯುಧಿಷ್ಠಿರ! ಮಗನ ರೂಪದಲ್ಲಿದ್ದ ಆನೆಯೊಡನೆ ಗೌತಮನನ್ನು ಮುಂದೆಮಾಡಿಕೊಂಡು ಇನ್ನೂ ಅನೇಕ ಸತ್ಪುರುಷರೊಡನೆ ಇಂದ್ರನು ದುರ್ಗಮವಾದ ದೇವಲೋಕಕ್ಕೆ ಹೊರಟುಹೋದನು.

ಇದಂ ಯ ಶೃಣುಯಾನ್ನಿತ್ಯಂ ಯಃ ಪಠೇದ್ವಾ ಜಿತೇನ್ದ್ರಿಯಃ ।
ಸ ಯಾತಿ ಬ್ರಹ್ಮಣೋ ಲೋಕಂ ಬ್ರಾಹ್ಮಣೋ ಗೌತಮೋ ಯಥಾ॥

ಈ ಆಖ್ಯಾನವನ್ನು ಯಾವನು ಕೇಳುವನೋ, ಜಿತೇಂದ್ರಿಯನಾದ

ಯಾವನು ಪಾರಾಯಣಮಾಡುವನೋ–ಅವನು ಬ್ರಾಹ್ಮಣನಾದ ಗೌತಮ ನಂತೆಯೇ ಬ್ರಹ್ಮಲೋಕಕ್ಕೆ ಹೋಗುತ್ತಾನೆ.”

೧೦೨ನೆಯ ಅಧ್ಯಾಯವು ಮುಗಿಯಿತು.

೧೦೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬ್ರಹ್ಮ-ಭಗೀರಥರ ಸಂವಾದ : ಯಜ್ಞ-ತಪಸ್ಸು -ದಾನ ಗಳಿಗಿಂತಲೂ ಅನಶನ ವ್ರತದ ವಿಶೇಷಮಹಿಮೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ದಾನಂ ಬಹುವಿಧಾಕಾರಂ ಶಾನ್ತಿಃ ಸತ್ಯಮಹಿಂಸಿತಮ್ ।
ಸ್ವದಾರತುಷ್ಟಿಶ್ಚೋಕ್ತಾ ತೇ ಫಲಂ ದಾನಸ್ಯ ಚೈವ ಯತ್ ॥೧॥
ಪಿತಾಮಹಸ್ಯ ವಿದಿತಂ ಕಿಮನ್ಯತ್ತಪಸೋ ಬಲಾತ್ ।
ತಪಸೋ ಯತ್ಪರಂ ತೇಽದ್ಯ ತನ್ನೋ ವ್ಯಾಖ್ಯಾತುಮರ್ಹಸಿ ॥೨॥

“ಪಿತಾಮಹನೇ! ನೀನು ಅನೇಕ ಪ್ರಕಾರವಾದ ದಾನಗಳನ್ನೂ ಅವುಗಳ ಫಲಗಳನ್ನೂ ಹೇಳಿರುವೆ. ಶಾಂತಿ (ಕ್ಷಮೆ), ಸತ್ಯನಿಷ್ಠೆ, ಅಹಿಂಸೆ– ಇವುಗಳ ಮಹತ್ತ್ವದ ವಿಷಯವಾಗಿಯೂ ಹೇಳಿರುವೆ. ತನ್ನ ಪತ್ನಿಯಲ್ಲಿಯೇ ಸಂತುಷ್ಟನಾಗಿರುವವನಿಗೆ ಪ್ರಾಪ್ತವಾಗುವ ಫಲವನ್ನೂ ಹೇಳಿರುವೆ. ನಿನಗೆ ತಿಳಿದಿರುವಂತೆ ತಪಸ್ಸಿನ ಬಲಕ್ಕಿಂತಲೂ ಅಧಿಕವಾದ ಬೇರೆ ಯಾವುದಾದರೂ ಬಲವಿರುವುದೇ? ಹಾಗಿದ್ದರೆ ಅದು ಯಾವುದೆಂಬುದನ್ನು ಈಗ ನಮಗೆ ಹೇಳುವ ಕೃಪೆಮಾಡು.”

ಭೀಷ್ಮನು ಹೇಳುತ್ತಾನೆ:

ತಪಃ ಪ್ರಚಕ್ಷತೇ ಯಾವತ್ತಾವಲ್ಲೋಕೋ ಯುಧಿಷ್ಠಿರ ।
ಮತಂ ಮಮಾತ್ರ ಕೌನ್ತೇಯ ತಪೋ ನಾನಶನಾತ್ಪರಮ್ ॥೩॥

“ಯುಧಿಷ್ಠಿರ! ಮನುಷ್ಯರು ಎಷ್ಟು ತಪಸ್ಸನ್ನು ಮಾಡುವರೋ ಅದಕ್ಕೆ ಅನುಸಾರವಾಗಿ ಅವರಿಗೆ ಉತ್ತಮಲೋಕವು ಸಿಕ್ಕುವುದೆಂದು ಹೇಳುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಅನಶನ (ಉಪವಾಸ) ವ್ರತಕ್ಕಿಂತಲೂ ಶ್ರೇಷ್ಠವಾದ ಯಾವ ತಪಸ್ಸೂ ಇಲ್ಲ.

ಈ ವಿಷಯದಲ್ಲಿ ಹಿಂದೆ ಭಗೀರಥನಿಗೂ–ಬ್ರಹ್ಮನಿಗೂ ನಡೆದ ಸಂವಾದರೂಪವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ.

ಭಗೀರಥನು ಒಮ್ಮೆ ದೇವಲೋಕವನ್ನೂ, ಗೋಲೋಕವನ್ನೂ, ಋಷಿಲೋಕವನ್ನೂ ಅತಿಕ್ರಮಿಸಿ ಬ್ರಹ್ಮಲೋಕಕ್ಕೆ ಹೋದನೆಂಬುದನ್ನು ನಾವು ಕೇಳಿದ್ದೇವೆ. ಭಗೀರಥನು ತನ್ನ ಲೋಕಕ್ಕೆ ಬಂದುದನ್ನು ಕಂಡು ಬ್ರಹ್ಮನು ಪ್ರಶ್ನಿಸಿದನು:

"ಭಗೀರಥನೇ! ಯಾರಿಂದಲೂ ಬರಲು ದುಸ್ಸಾಧ್ಯವಾದ ಈ ಲೋಕಕ್ಕೆ ನೀನು ಹೇಗೆ ಆಗಮಿಸಿದೆ? ದೇವತೆಗಳೂ ಇಲ್ಲಿಗೆ ಬರಲಾರರು. ಗಂಧರ್ವರೂ ಬರಲಾರರು. ತಪಸ್ಸು ಮಾಡದಿರುವ ಮನುಷ್ಯರೂ ಈ ಲೋಕಕ್ಕೆ ಬರಲಾರರು. ಹೀಗಿರುವಾಗ ನೀನು ಇಲ್ಲಿಗೆ ಹೇಗೆ ಆಗಮಿಸಿದೆ?"

ಭಗೀರಥನು ಹೇಳುತ್ತಾನೆ:

"ವಿದ್ವಾಂಸನೇ! ನಾನು ಬ್ರಹ್ಮಚರ್ಯವ್ರತವನ್ನಾಶ್ರಯಿಸಿ ಪ್ರತಿನಿತ್ಯವೂ ಒಂದು ಲಕ್ಷ ಸುವರ್ಣನಾಣ್ಯಗಳನ್ನು ಬ್ರಾಹ್ಮಣರಿಗೆ ದಾನಮಾಡುತ್ತಿದ್ದೆನು. ಆದರೆ ಆ ಸುವರ್ಣದಾನದ ಫಲದಿಂದ ನಾನು ಇಲ್ಲಿಗೆ ಬರಲಿಲ್ಲ.

ನಾನು ಒಂದು ರಾತ್ರಿಯಲ್ಲಿ ಪೂರ್ಣವಾಗುವ ಹತ್ತು ಯಜ್ಞಗಳನ್ನೂ, ಐದು ರಾತ್ರಿಗಳಲ್ಲಿ ಪೂರ್ಣವಾಗುವ ಹತ್ತು ಯಜ್ಞಗಳನ್ನೂ, ಹನ್ನೊಂದು ರಾತ್ರಿಗಳಲ್ಲಿ ಪೂರ್ಣವಾಗುವ ಹನ್ನೊಂದು ಯಜ್ಞಗಳನ್ನೂ, ನೂರು ಜ್ಯೋತಿಷ್ಟೋಮಗಳನ್ನೂ ಮಾಡಿರುವೆನು. ಆದರೆ ಆ ಎಲ್ಲ ಯಜ್ಞಗಳ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ನಾನು ಗಂಗಾನದಿಯ ತೀರದಲ್ಲಿಯೇ ವಾಸಮಾಡುತ್ತಿದ್ದು ನೂರು ವರ್ಷಗಳವರೆಗೆ ತಪಸ್ಸನ್ನು ಮಾಡುತ್ತಿದ್ದೆನು. ಅನಂತರ ನಾನು ಸಾವಿರ ಹೇಸರಗತ್ತೆಗಳನ್ನೂ ಮತ್ತು ಅನೇಕ ಕನ್ಯೆಯರನ್ನೂ ದಾನವಾಗಿ ಕೊಟ್ಟೆನು. ಆದರೆ ಅವುಗಳ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಪುಷ್ಕರಕ್ಷೇತ್ರದಲ್ಲಿ ನಾನು ನೂರಾರು-ಸಾವಿರಾರು ಬಾರಿ ಬ್ರಾಹ್ಮಣರಿಗೆ ಒಂದು ಲಕ್ಷ ಕುದುರೆಗಳನ್ನೂ, ಎರಡು ಲಕ್ಷ ಗೋವುಗಳನ್ನೂ, ಸುವರ್ಣ

ಮಯವಾದ ಚಂದ್ರಹಾರಗಳನ್ನು ಧರಿಸಿದ್ದ, ಚಿನ್ನದ ಆಭರಣಗಳಿಂದ ಸಮಲಂಕೃತರಾಗಿದ್ದ ಅರುವತ್ತು ಸಾವಿರ ಕನ್ಯೆಯರನ್ನೂ ದಾನವಾಗಿ ಕೊಟ್ಟೆನು. ಆದರೆ ಆ ದಾನದ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಲೋಕನಾಥನೇ! ಗೋಸವ ಎಂಬ ಯಜ್ಞವನ್ನು ಅನುಷ್ಠಾನಮಾಡಿ ಅದರಲ್ಲಿ ಹಾಲುಕೊಡುವ ನೂರು ಕೋಟಿ ಹಸುಗಳನ್ನು ದಾನವಾಗಿ ಕೊಟ್ಟೆನು. ಆ ಯಜ್ಞಕ್ಕೆ ಆಗಮಿಸಿದ್ದ ಪ್ರತಿಯೊಬ್ಬರಿಗೂ ಹತ್ತು ಹತ್ತು ಗೋವುಗಳು ಸಿಕ್ಕಿದುವು. ಆ ಹಸುಗಳೆಲ್ಲವೂ ಅನುರೂಪವಾದ ಕರುಗಳನ್ನು ಹೊಂದಿದ್ದುವು. ಸಮೃದ್ಧವಾಗಿ ಹಾಲುಕೊಡುತ್ತಿದ್ದುವು. ಹಸು ಮತ್ತು ಕರುಗಳೊಡನೆ ಒಂದೊಂದು ಚಿನ್ನದ ಮತ್ತು ಕಂಚಿನ ಕರೆಯುವ ಪಾತ್ರೆಯನ್ನೂ ದಾನಮಾಡಿದೆನು. ಆದರೆ ಆ ದಾನದ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಆಪ್ತೋರ್ಯಾಮಗಳಲ್ಲಿ (ಸೋಮಯಾಗದ ಪ್ರಭೇದ) ಪ್ರತಿಯೊಬ್ಬ ಬ್ರಾಹ್ಮಣನಿಗೂ ಮೊದಲನೆಯ ಬಾರಿಗೆ ಈಯ್ದ, ಹಾಲುಕೊಡುವ ಹತ್ತು-ಹತ್ತು ಹಸುಗಳನ್ನೂ, ರೋಹಿಣೀಜಾತಿಯ ನೂರು-ನೂರು ಹಸುಗಳನ್ನೂ ದಾನಮಾಡಿದೆನು. ಇಷ್ಟೇ ಅಲ್ಲದೇ ಹಾಲುಕರೆಯುವ ಹತ್ತು-ಹತ್ತು ಲಕ್ಷ ಗೋವುಗಳನ್ನೂ ಶ್ರೇಷ್ಠರಾದ ಬ್ರಾಹ್ಮಣರಿಗೆ ಹತ್ತು ಬಾರಿ ದಾನ ಮಾಡಿದೆನು. ಆದರೆ ಆ ದಾನಗಳ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಬಾಹ್ಲಿಕದೇಶದಲ್ಲಿ ಹುಟ್ಟಿದ, ಬಿಳಿಯ ಬಣ್ಣದ, ಸುವರ್ಣದ ಮಾಲೆಗಳಿಂದ ಸಮಲಂಕೃತವಾಗಿದ್ದ ಒಂದು ಲಕ್ಷ ಕುದುರೆಗಳನ್ನು ಬ್ರಾಹ್ಮಣರಿಗೆ ದಾನಮಾಡಿದೆನು. ಆ ದಾನದ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಬ್ರಹ್ಮನೇ! ನಾನು ಪ್ರತಿಯೊಂದು ಯಜ್ಞದಲ್ಲಿಯೂ ಹದಿನೆಂಟು ಕೋಟಿ ಸುವರ್ಣನಾಣ್ಯಗಳನ್ನು ಪ್ರತಿದಿನವೂ ಬ್ರಾಹ್ಮಣರಿಗೆ ದಕ್ಷಿಣೆಯನ್ನಾಗಿ ಕೊಟ್ಟೆನು. ಆದರೆ ಆ ಪುಣ್ಯದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಪಿತಾಮಹನೇ! ಪುನಃ ನಾನು ಸುವರ್ಣಹಾರಗಳಿಂದ ಸಮಲಂಕೃತವಾದ, ಕಪ್ಪಾದ ಕಿವಿಗಳಿದ್ದ, ಹಸಿರು ಬಣ್ಣದ ಹದಿನೇಳು ಕೋಟಿ ಕುದುರೆಗಳನ್ನೂ, ನೇಗಿಲಿನ ದಂಡಕ್ಕೆ ಸಮಾನವಾದ ದಂತಗಳಿಂದ ಕೂಡಿದ್ದ,

ಪರ್ವತೋಪಮವಾದ ಶರೀರಗಳನ್ನು ಹೊಂದಿದ್ದ, ಸುವರ್ಣಮಾಲೆಗಳಿಂದ ವಿಭೂಷಿತವಾಗಿದ್ದ, ಕಮಲದ ಚಿಹ್ನೆಯುಳ್ಳ, ಹದಿನೇಳು ಸಾವಿರ ಆನೆ ಗಳನ್ನೂ-ದಿವ್ಯವಾದ ಮತ್ತು ಸುವರ್ಣಮಯವಾದ ಭೂಷಣಗಳಿಂದ ಸಮಲಂಕೃತವಾಗಿದ್ದ, ಸುವರ್ಣಮಯವಾದ ಉಪಕರಣಗಳಿಂದ ಯುಕ್ತ ವಾಗಿದ್ದ, ಕುದುರೆಗಳಿಂದ ಕೂಡಿದ್ದ ಹದಿನೇಳು ಸಾವಿರ ರಥಗಳನ್ನೂ ದಾನಮಾಡಿದೆನು. ಇವೇ ಅಲ್ಲದೇ ಯಾವ ವಸ್ತುಗಳು ವೇದಗಳಲ್ಲಿ ದಕ್ಷಿಣೆಯ ಅವಯವರೂಪದಲ್ಲಿ ಹೇಳಲ್ಪಟ್ಟಿರುವುವೋ–ಆ ಎಲ್ಲ ವಸ್ತುಗಳನ್ನೂ ನಾನು ಮಾಡಿದ ಹತ್ತು ವಾಜಪೇಯಯಾಗಗಳಲ್ಲಿ ದಾನಮಾಡಿದೆನು. ಆದರೆ ಅದರ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ಯಜ್ಞಮಾಡುವುದರಲ್ಲಿಯೂ ಮತ್ತು ಪರಾಕ್ರಮದಲ್ಲಿಯೂ ಇಂದ್ರ ಸದೃಶರಾಗಿದ್ದ, ಕಂಠದಲ್ಲಿ ಸುವರ್ಣದ ಹಾರಗಳನ್ನು ಧರಿಸಿದ್ದ ಸಾವಿರಾರು ರಾಜರನ್ನು ಯುದ್ಧದಲ್ಲಿ ಜಯಿಸಿ ಅವರಿಂದ ತಂದ ಅಪಾರವಾದ ಐಶ್ವರ್ಯ ದಿಂದ ಎಂಟು ರಾಜಸೂಯಯಾಗಗಳನ್ನು ಮಾಡಿ ಎಲ್ಲವನ್ನೂ ಬ್ರಾಹ್ಮಣರಿಗೆ ದಕ್ಷಿಣಾರೂಪದಲ್ಲಿ ಕೊಟ್ಟೆನು. ಆದರೆ ಆ ರಾಜಸೂಯ ಯಾಗಗಳ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ. ಗಂಗಾನದಿಯ ಪ್ರವಾಹವು ಎಷ್ಟು ದೂರದವರೆಗಿರುವುದೋ ಅಷ್ಟು ದೂರದವರೆಗಿನ ಸ್ಥಳವನ್ನು ನಾನು ಕೊಟ್ಟ ದಕ್ಷಿಣೆಗಳಿಂದಲೇ ಮುಚ್ಚಿಬಿಡಬಹುದಾಗಿದ್ದಿತು. ಅಷ್ಟೊಂದು ಅಪಾರವಾದ ದಕ್ಷಿಣೆಗಳನ್ನು ನಾನು ಬ್ರಾಹ್ಮಣರಿಗೆ ದಾನ ಮಾಡಿದೆನು. ಆದರೆ ಅದರ ಫಲವಾಗಿ ನಾನು ಇಲ್ಲಿಗೆ ಬರಲಿಲ್ಲ.

ನಾನು ಮಾಡಿದ ಆ ರಾಜಸೂಯಯಾಗಗಳಲ್ಲಿ ಪ್ರತಿಯೊಬ್ಬ ಬ್ರಾಹ್ಮಣನಿಗೂ ಮೂರು-ಮೂರು ಬಾರಿ ನೂರಾರು ಸುವರ್ಣಾಭರಣ ಗಳಿಂದ ವಿಭೂಷಿತವಾಗಿದ್ದ, ಎರಡೆರಡು ಸಾವಿರ ಕುದುರೆಗಳನ್ನೂ ಶ್ರೇಷ್ಠ ವಾದ ನೂರು-ನೂರು ಗ್ರಾಮಗಳನ್ನೂ ದಕ್ಷಿಣೆಯ ರೂಪದಲ್ಲಿ ಕೊಟ್ಟೆನು.

ನಿಯತಾಹಾರನಾಗಿ ಶಾಂತಭಾವದಿಂದ ಮೌನಿಯಾಗಿರುತ್ತಾ ಹಿಮವತ್ಪರ್ವತದ ತಪ್ಪಲಿನಲ್ಲಿ ದೀರ್ಘಕಾಲದವರೆಗೆ ತಪಸ್ಸನ್ನು ಮಾಡಿದೆನು. ಆ ನನ್ನ ತಪಸ್ಸಿನ ಫಲವಾಗಿ ಮಹಾದೇವನು ಪ್ರಸನ್ನನಾಗಿ ಸುದುಸ್ಸಹವಾದ ಗಂಗಾಪ್ರವಾಹವನ್ನು ತನ್ನ ತಲೆಯಲ್ಲಿ ಧರಿಸಿದನು. ಆದರೆ ಆ ತಪಸ್ಸಿನ ಫಲವೂ ನನ್ನನ್ನು ಇಲ್ಲಿಗೆ ಕಳುಹಿಸಲು ಸಮರ್ಥವಾಗಲಿಲ್ಲ.

ಶಮ್ಯಾಕ್ಷೇಪದಿಂದ (ಕಾಷ್ಠದಂಡವನ್ನೆಸೆಯುವುದರಿಂದ) ಗುರುತಿಸಿದ ಭೂಮಿಯನ್ನೇ ವೇದಿಯನ್ನಾಗಿ ಮಾಡಿಕೊಂಡು ಅನೇಕ ಯಾಗಗಳನ್ನು ಮಾಡಿದೆನು. ಸಾದ್ಯಸ್ಕಗಳೆಂಬ ಹತ್ತು ಸಾವಿರ ಯಾಗಗಳನ್ನು ಮಾಡಿದೆನು. ಹದಿಮೂರು ದಿವಸಗಳಲ್ಲಿ ಮುಗಿಯುವ ಯಾಗಗಳನ್ನೂ, ಹನ್ನೆರಡು ದಿವಸಗಳಲ್ಲಿ ಮುಗಿಯುವ ಯಾಗಗಳನ್ನೂ ಪೌಂಡರೀಕಯಾಗಗಳನ್ನೂ ಮಾಡಿದೆನು. ಅವುಗಳಿಂದಲೂ ನಾನು ಇಲ್ಲಿಗೆ ಬರಲಿಲ್ಲ.

ನಾನು ಆ ಯಾಗಗಳಲ್ಲಿ, ಸುಂದರವಾದ ಹಿಳಲಿನಿಂದ ಕೂಡಿದ್ದ, ಬಿಳಿಯ ಬಣ್ಣದ ಎಂಟು ಸಾವಿರ ಹೋರಿಗಳನ್ನು ಬ್ರಾಹ್ಮಣರಿಗೆ ದಾನ ಮಾಡಿದೆನು. ಆ ಹೋರಿಗಳ ಒಂದೊಂದು ಕೊಂಬೂ ಸುವರ್ಣಮಯ ವಾಗಿದ್ದಿತು. (ಚಿನ್ನದ ತಗಡಿನಿಂದ ಆಚ್ಛಾದಿತವಾಗಿದ್ದಿತು.) ಸುವರ್ಣಮಯ ವಾದ ಹಾರಗಳಿಂದ ವಿಭೂಷಿತವಾದ ಎತ್ತುಗಳ ಪತ್ನಿಯರನ್ನೂ (ಹಸು ಗಳನ್ನೂ) ನಾನು ಬ್ರಾಹ್ಮಣರಿಗೆ ದಾನಮಾಡಿದೆನು.

ನಾನು ಆಲಸ್ಯವಿಲ್ಲದೇ ಅನೇಕ ಮಹಾ-ಮಹಾಯಜ್ಞಗಳನ್ನು ಅನುಷ್ಠಾನ ಮಾಡುತ್ತಾ, ಆ ಯಜ್ಞಗಳಲ್ಲಿ ದಕ್ಷಿಣಾರೂಪವಾಗಿ ಸುವರ್ಣದ ಮತ್ತು ರತ್ನದ ರಾಶಿಗಳನ್ನೇ ಬ್ರಾಹ್ಮಣರಿಗೆ ದಕ್ಷಿಣೆಯನ್ನಾಗಿ ಕೊಟ್ಟೆನು. ರತ್ನಪರ್ವತಗಳನ್ನೂ, ಧನ-ಧಾನ್ಯಗಳಿಂದ ತುಂಬಿದ್ದ ಸಾವಿರಾರು ಗ್ರಾಮಗಳನ್ನೂ, ಮೊದಲನೆಯ ಬಾರಿಗೆ ಈಯಿದ್ದ ಒಂದು ಲಕ್ಷ ಗೋವುಗಳನ್ನೂ ಬ್ರಾಹ್ಮಣರಿಗೆ ದಕ್ಷಿಣಾ ರೂಪದಲ್ಲಿ ಕೊಟ್ಟೆನು. ಆದರೆ ಹಾಗೆ ಗಳಿಸಿದ ಪುಣ್ಯದಿಂದಲೂ ನಾನು ಬ್ರಹ್ಮಭವನಕ್ಕೆ ಬರಲಿಲ್ಲ.

ದೇವದೇವನೆ! ನಾನು ಹನ್ನೊಂದು ದಿವಸಗಳಲ್ಲಿ ಮುಗಿಯುವ ಮತ್ತು ಇಪ್ಪತ್ತುನಾಲ್ಕು ದಿವಸಗಳಲ್ಲಿ ಮುಗಿಯುವ ದಕ್ಷಿಣಾಯುಕ್ತವಾದ ಯಜ್ಞಗಳನ್ನು ಮಾಡಿದೆನು. ಹಲವು ಬಾರಿ ಅಶ್ವಮೇಧಯಾಗಗಳನ್ನು ಮಾಡಿದೆನು. ಅಯನಗಳಲ್ಲಿ ಮುಗಿಯುವ ಹದಿನಾರು ಯಜ್ಞಗಳನ್ನು ಮಾಡಿದೆನು. ಆದರೆ ಆ ಯಜ್ಞಗಳನ್ನು ಮಾಡಿದುದರ ಫಲವಾಗಿಯೂ ನಾನು ಇಲ್ಲಿಗೆ ಬರಲಿಲ್ಲ.

ರತ್ನವಿಭೂಷಿತವಾಗಿದ್ದ ಮತ್ತು ಕಂಠದಲ್ಲಿ ಸುವರ್ಣಮಯವಾದ ಮಾಲೆಯಿದ್ದ, ಒಂದು ಯೋಜನದಷ್ಟು ವಿಸ್ತಾರವಾಗಿಯೂ ಇದ್ದ ನಾಗ ಸಂಪಿಗೇಮರಗಳ ಉದ್ಯಾನವನವನ್ನು ದಾನಮಾಡಿದೆನು. ಆದರೆ ಅದ್ಭುತ ವಾದ ಆ ಉದ್ಯಾನವನದ ದಾನದ ಫಲವಾಗಿಯೂ ನಾನು ಇಲ್ಲಿಗೆ ಬರಲಿಲ್ಲ.

ನಾನು ಮೂವತ್ತು ವರ್ಷಗಳವರೆಗೆ ಕೋಪವಿಲ್ಲದವನಾಗಿದ್ದು ತುರಾಯಣವೆಂಬ ಅತಿದುಷ್ಕರವಾದ ವ್ರತವನ್ನು ಆಚರಿಸಿದೆನು. ಆ ಸಮಯದಲ್ಲಿ ಪ್ರತಿನಿತ್ಯವೂ ಬ್ರಾಹ್ಮಣರಿಗೆ ಒಂಬತ್ತು ನೂರು ಗೋವುಗಳನ್ನು ದಾನಕೊಡುತ್ತಿದ್ದೆನು.

ಲೋಕನಾಥನೇ! ಇವುಗಳೇ ಅಲ್ಲದೆ ನಾನು ಪ್ರತಿನಿತ್ಯವೂ ಹಾಲುಕೊಡುವ ಕೆಂಪುಬಣ್ಣದ ಹಸುಗಳನ್ನೂ, ಬಹುಸಂಖ್ಯಾತವಾದ ಎತ್ತುಗಳನ್ನೂ ಬ್ರಾಹ್ಮಣರಿಗೆ ದಾನವಾಗಿ ಕೊಡುತ್ತಿದ್ದೆನು. ಆದರೆ ಆ ಯಾವ ದಾನದ ಫಲವಾಗಿಯೂ ನಾನು ನಿನ್ನ ಲೋಕಕ್ಕೆ ಬರಲಿಲ್ಲ.

ನಾನು ಮೂವತ್ತು ಅಗ್ನಿಚಯನಗಳನ್ನು ಮಾಡಿದೆನು. ಎಂಟು ಸಲ ಸರ್ವಮೇಧಯಾಗವನ್ನೂ, ಏಳು ಸಲ ನರಮೇಧಯಾಗವನ್ನೂ, ನೂರ ಇಪ್ಪತ್ತೆಂಟು ಬಾರಿ ವಿಶ್ವಜಿದ್ಯಜ್ಞವನ್ನೂ ಮಾಡಿದೆನು. ಆದರೆ ಆ ಯಜ್ಞಗಳ ಫಲದಿಂದಲೂ ನಾನು ಇಲ್ಲಿಗೆ ಬರಲಿಲ್ಲ. ಸರಯೂ, ಬಾಹುದಾ, ಗಂಗಾ ಮತ್ತು ನೈಮಿಷಾರಣ್ಯತೀರ್ಥಗಳಲ್ಲಿ ಹತ್ತು ಲಕ್ಷ ಹಸುಗಳನ್ನು ದಾನ ಮಾಡಿದೆನು. ಆದರೆ ಇಷ್ಟು ಫಲಗಳ ಪ್ರಭಾವದಿಂದಲೂ ನಾನು ನಿನ್ನ ಲೋಕಕ್ಕೆ ಬರಲಿಲ್ಲ. (ಕೇವಲ ಅನಶನವ್ರತದ ಪ್ರಭಾವದಿಂದಲೇ ನಾನು ಇಲ್ಲಿಗೆ ಬಂದಿದ್ದೇನೆ.)

ಇನ್ದ್ರೇಣ ಗುಹ್ಯಂ ನಿಹಿತಂ ವೈ ಗುಹಾಯಾಂ
ಯದ್ಭಾರ್ಗವಸ್ತಪಸೇಹಾಭ್ಯವಿನ್ದತ್ ।
ಜಾಜ್ವಲ್ಯಮಾನಮುಶನಸ್ತೇಜಸೇಹ
ತತ್ಸಾಧಯಾಮಾಸಮಹಂ ವರೇಣ್ಯ ॥೩೯॥

ವರೇಣ್ಯನಾದ ಪಿತಾಮಹನೇ! ಮೊದಲು ಇಂದ್ರನು ಅನಶನವ್ರತದ ಸಿದ್ಧಿಯನ್ನು ಮಾಡಿಕೊಂಡು ಅದನ್ನು ಗುಹೆಯಲ್ಲಿ (ಹೃದಯಗುಹೆಯಲ್ಲಿ) ಗೋಪ್ಯವಾಗಿಟ್ಟಿದ್ದನು. ಅನಂತರ ಶುಕ್ರನು ತಪಸ್ಸಿನ ಮೂಲಕವಾಗಿ ಅದರ

ಜ್ಞಾನವನ್ನು ಪಡೆದುಕೊಂಡನು. ಶುಕ್ರನ ತೇಜಸ್ಸಿನಿಂದ ಅದು ಜಾಜ್ವಲ್ಯಮಾನವಾಗಿ ಸರ್ವತ್ರ ಪ್ರಕಾಶಿಸಿತು. ವರೇಣ್ಯನೇ! ಕಡೆಯಲ್ಲಿ ನಾನೂ ಆ ಅನಶನವ್ರತವನ್ನೇ ಸಾಧಿಸತೊಡಗಿದೆನು.

ನಾನು ಅನಶನವ್ರತವನ್ನು ಸಾಧಿಸಿದನಂತರ ನನ್ನ ಬಳಿಗೆ ಸಾವಿರಾರು ಬ್ರಾಹ್ಮಣರೂ, ಋಷಿಗಳೂ ಆಗಮಿಸಿದರು. ಅವರೆಲ್ಲರೂ ನನ್ನ ವಿಷಯದಲ್ಲಿ ಸಂತುಷ್ಟರಾದರು. ಬ್ರಹ್ಮಲೋಕಕ್ಕೆ ಹೋಗುವಂತೆ ನನಗೆ ಹೇಳಿದರು. ಪ್ರಸನ್ನಚಿತ್ತರಾದ ಆ ಸಾವಿರಾರು ಬ್ರಾಹ್ಮಣರ ಮಾತಿನಂತೆ ನಾನು ಈ ನಿನ್ನ ಲೋಕಕ್ಕೆ ಬಂದಿರುತ್ತೇನೆ. ನೀನು ಈ ವಿಷಯದಲ್ಲಿ ಬೇರೆಯ ರೀತಿಯಲ್ಲಿ ಯೋಚಿಸಬೇಕಾದ ಕಾರಣವಿಲ್ಲ.

ಕಾಮಂ ಯಥಾವದ್ವಿಹಿತಂ ವಿಧಾತ್ರಾ
ಪೃಷ್ಟೇನ ವಾಚ್ಯಂ ತು ಮಯಾ ಯಥಾವತ್ ।
ತಪೋ ಹಿ ನಾನ್ಯಚ್ಚಾನಶನಾನ್ಮತಂ ಮೇ
ನಮೋಽಸ್ತುತೇ ದೇವವರ ಪ್ರಸೀದ ॥೪೨॥

ಎಲ್ಲವೂ ವಿಧಾತನಿಂದಲೇ ಯಥಾವತ್ತಾಗಿ ನಿಯಮಿಸಲ್ಪಟ್ಟಿದೆ. ಇದು ಸತ್ಯ. ಆದರೂ ನಿನ್ನ ಪ್ರಶ್ನೆಗೆ ಯಥಾವತ್ತಾಗಿ ಉತ್ತರವನ್ನು ಹೇಳುವುದು ನನ್ನ ಕರ್ತವ್ಯವಾಗಿದೆ. ಅಂತೆಯೇ ಎಲ್ಲ ವಿಷಯಗಳನ್ನೂ ಹೇಳಿದ್ದೇನೆ. ನನ್ನ ಅಭಿಪ್ರಾಯದಲ್ಲಿ ಅನಶನವ್ರತಕ್ಕಿಂತಲೂ ಶ್ರೇಷ್ಠವಾದ ತಪಸ್ಸು ಬೇರೆ ಯಾವುದೂ ಇಲ್ಲ. ದೇವಶ್ರೇಷ್ಠನೇ! ನಿನಗೆ ನಮಸ್ಕಾರಮಾಡುತ್ತೇನೆ. ನನ್ನ ವಿಷಯದಲ್ಲಿ ಪ್ರಸನ್ನನಾಗು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಹೀಗೆ ಹೇಳಿದ ಪೂಜಾರ್ಹನಾದ ಭಗೀರಥನನ್ನು ಬ್ರಹ್ಮನು ಯಥಾವಿಧಿಯಾಗಿ ಸತ್ಕರಿಸಿದನು. ಆದುದರಿಂದ ನೀನೂ ಅನಶನ ವ್ರತಗಳಿಂದ ಯುಕ್ತನಾಗಿ ಅನುದಿನವೂ ಬ್ರಾಹ್ಮಣರನ್ನು ಸತ್ಕರಿಸು. ವಿಪ್ರರ ಆಶೀರ್ವಾದಗಳಿಂದಲೇ ಇಹ-ಪರಗಳೆರಡರಲ್ಲಿ ಸರ್ವವೂ ಸಿದ್ಧಿಸುತ್ತದೆ. ಅನ್ನ-ವಸ್ತ್ರಗಳಿಂದಲೂ, ಗೋವುಗಳಿಂದಲೂ, ಸುಂದರವಾದ ಗೃಹ ಗಳಿಂದಲೂ ಬ್ರಾಹ್ಮಣರನ್ನು ಸಂತುಷ್ಟಗೊಳಿಸಬೇಕು. ಶುಭಪ್ರದರಾದ

ದೇವತೆಗಳೂ ಬ್ರಾಹ್ಮಣರನ್ನು ಸಂತುಷ್ಟಿಗೊಳಿಸುತ್ತಾರೆ. ಈ ಧರ್ಮವು ಪರಮಗುಹ್ಯವಾದುದು. ಲೋಭವನ್ನು ಪರಿತ್ಯಜಿಸಿ ಈ ಧರ್ಮವನ್ನು ಆಚರಿಸು."*

೧೦೩ನೆಯ ಅಧ್ಯಾಯವು ಮುಗಿಯಿತು.

೧೦೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಗೃಹಸ್ಥಾಶ್ರಮದ ಕರ್ತವ್ಯಗಳ ಬಗೆಗೆ ವಿಸ್ತಾರವಾದ ನಿರೂಪಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಶತಾಯುರುಕ್ತಃ ಪುರುಷಃ ಶತವೀರ್ಯಶ್ಚ ಜಾಯತೇ ।
ಕಸ್ಮಾನ್ಮ್ರಿಯನ್ತೇ ಪುರುಷಾ ಬಾಲಾ ಅಪಿ ಪಿತಾಮಹ ॥೧॥

ಪಿತಾಮಹ ! ವೇದಗಳಲ್ಲಿ 'ಶತಾಯುರ್ವೈ ಪುರುಷಃ ಶತವೀರ್ಯಃ' 'ಮನುಷ್ಯನು ನೂರು ವರ್ಷಗಳ ಆಯುಷ್ಯವನ್ನೂ ನೂರುಪ್ರಕಾರವಾದ ವೀರ್ಯವನ್ನೂ ಪಡೆದು ಹುಟ್ಟುತ್ತಾನೆ.'–ಎಂದು ಹೇಳಿದೆ.

ಆದರೆ ಹಾಗೆ ಹುಟ್ಟಿದ ಪುರುಷರು ಇನ್ನೂ ಬಾಲಕರಾಗಿದ್ದಾಗಲೇ ಎಳೆವಯಸ್ಸಿನಲ್ಲಿಯೇ ಏಕೆ ಮರಣಹೊಂದುತ್ತಾರೆ?

ಆಯುಷ್ಮಾನ್ಕೇನ ಭವತಿ ಅಲ್ಪಾಯುರ್ವಾಪಿ ಮಾನವಃ ।
ಕೇನ ವಾ ಲಭತೇ ಕೀರ್ತಿಂ ಕೇನ ವಾ ಲಭತೇ ಶ್ರಿಯಮ್ ॥೨॥

ಯಾವ ಕರ್ಮವನ್ನು ಮಾಡುವುದರಿಂದ ಮನುಷ್ಯನು ದೀರ್ಘಾಯುಷ್ಮಂತನಾಗುತ್ತಾನೆ? ಯಾವ ಕಾರಣದಿಂದ ಅಲ್ಪಾಯುವಾಗುತ್ತಾನೆ? ಯಾವ ಕಾರ್ಯವನ್ನು ಮಾಡುವುದರಿಂದ ಕೀರ್ತಿಯನ್ನೂ ಸಂಪತ್ತನ್ನೂ ಗಳಿಸುತ್ತಾನೆ?

ತಪಸಾ ಬ್ರಹ್ಮಚರ್ಯೇಣ ಜಪಹೋಮೈಸ್ತಥೌಷಧೈಃ ।
ಕರ್ಮಣಾ ಮನಸಾ ವಾಚಾ ತನ್ಮೇ ಬ್ರೂಹಿ ಪಿತಾಮಹ ॥೩॥

ಮನುಷ್ಯನು ಮಾತು, ಮನಸ್ಸು ಮತ್ತು ಶರೀರಗಳ ಮೂಲಕವಾಗಿ

---

*ತಪೋ ನಾನಶನಾತ್ಪರಮ್-ಎಂಬ ಉಪನಿಷದ್ವಾಕ್ಯವೂ ಇದನ್ನೇ ಹೇಳುತ್ತದೆ.

ತಪಸ್ಸು, ಬ್ರಹ್ಮಚರ್ಯ, ಜಪ-ಹೋಮ-ಔಷಧಿಗಳಿಂದ ದೀರ್ಘಾಯುಷ್ಯ ವನ್ನೂ ಐಶ್ವರ್ಯವನ್ನೂ ಪಡೆಯುವನೇ? ಈ ವಿಷಯವನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ನಿನ್ನ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತೇನೆ. ಮನುಷ್ಯನು ಅಲ್ಪಾಯುವೂ ಅಥವಾ ದೀರ್ಘಾಯುವೂ ಹೇಗಾಗುತ್ತಾನೆ? ಯಾವುದರಿಂದ ಕೀರ್ತಿಯನ್ನೂ ಸಂಪತ್ತನ್ನೂ ಗಳಿಸುತ್ತಾನೆ? ಈ ಎಲ್ಲ ವಿಷಯಗಳನ್ನೂ ಹೇಳುವೆನು; ಕೇಳು:

ಆಚಾರಾಲ್ಲಭತೇ ಹ್ಯಾಯುರಾಚಾರಾಲ್ಲಭತೇ ಶ್ರಿಯಮ್ ।
ಆಚಾರಾತ್ಕೀರ್ತಿಮಾಪ್ನೋತಿ ಪುರುಷಃ ಪ್ರೇತ್ಯ ಚೇಹ ಚ ॥೬॥

ಮನುಷ್ಯನು ಸದಾಚಾರದಿಂದ ಆಯುಷ್ಯವನ್ನೂ, ಸಂಪತ್ತನ್ನೂ, ಇಹ-ಪರಗಳೆರಡರಲ್ಲಿಯೂ ಕೀರ್ತಿಯನ್ನೂ ಹೊಂದುತ್ತಾನೆ.

ದುರಾಚಾರೋ ಹಿ ಪುರುಷೋ ನೇಹಾಯುರ್ವಿನ್ದತೇ ಮಹತ್ ।
ತ್ರಸನ್ತಿ ಯಸ್ಮಾದ್ಭೂತಾನಿ ತಥಾ ಪರಿಭವನ್ತಿ ಚ ॥೭॥

ದುರಾಚಾರಿಯಾದವನು ಸಮಸ್ತ ಪ್ರಾಣಿಗಳನ್ನೂ ಭಯಪಡಿಸುವುದ ರಿಂದಲೂ, ತಿರಸ್ಕಾರಭಾವನೆಯಿಂದ ಕಾಣುವುದರಿಂದಲೂ ದೀರ್ಘಾಯುಷ್ಯ ವನ್ನು ಹೊಂದುವುದಿಲ್ಲ.

ತಸ್ಮಾತ್ಕುರ್ಯಾದಿಹಾಚಾರಂ ಯದೀಚ್ಛೇದ್ಭೂತಿಮಾತ್ಮನಃ ।
ಅಪಿ ಪಾಪಶರೀರಸ್ಯ ಆಚಾರೋ ಹನ್ತ್ಯಲಕ್ಷಣಮ್ ॥೮॥

ಆದುದರಿಂದ ಆತ್ಮಕಲ್ಯಾಣವನ್ನು ಬಯಸುವ ಮನುಷ್ಯನು ಆಚಾರವಂತನಾಗಿರಬೇಕು. ಪಾಪಮಯವಾದ ಶರೀರವೇ ಆಗಿದ್ದರೂ ಸದಾಚಾರವನ್ನು ಪರಿಪಾಲಿಸುತ್ತಿದ್ದರೆ–ಅಂತಹ ಸದಾಚಾರವೇ ಮನುಷ್ಯ ನಲ್ಲಿರುವ ದುರ್ಲಕ್ಷಣಗಳನ್ನು (ಪಾಪಗಳನ್ನು) ನಾಶಗೊಳಿಸುತ್ತದೆ.

ಆಚಾರಲಕ್ಷಣೋ ಧರ್ಮಃ ಸನ್ತಶ್ಚಾರಿತ್ರಲಕ್ಷಣಾಃ ।
ಸಾಧೂನಾಂ ಚ ಯಥಾವೃತ್ತಮೇತದಾಚಾರಲಕ್ಷಣಮ್ ॥೯॥

ಸದಾಚಾರವೇ ಧರ್ಮದ ಲಕ್ಷಣವಾಗಿದೆ. ಸಚ್ಚಾರಿತ್ರ್ಯವೇ ಶ್ರೇಷ್ಠಪುರುಷರ ಲಕ್ಷಣವಾಗಿದೆ. ಆದುದರಿಂದ ಸಾಧುಗಳ ನಡವಳಿಕೆಯೇ ಸದಾಚಾರದ ಲಕ್ಷಣವಾಗಿದೆ.

ಅಪ್ಯದೃಷ್ಟಂ ಶ್ರವಾದೇವ ಪುರುಷಂ ಧರ್ಮಚಾರಿಣಮ್ ।
ಭೂರಿ ಕರ್ಮಾಣಿ ಕುರ್ವಾಣಂ ತಂ ಜನಾಃ ಕುರ್ವತೇ ಪ್ರಿಯಮ್ ॥

ಧರ್ಮಾಚರಣೆಯುಳ್ಳ, ಲೋಕಕಲ್ಯಾಣದ ಕಾರ್ಯದಲ್ಲಿ ತೊಡಗಿರುವ ಮನುಷ್ಯನನ್ನು ಜನರು ಕಾಣದೇ ಇದ್ದರೂ ಅಂತಹವನ ಹೆಸರನ್ನು ಕೇಳಿಯೇ ಅವನನ್ನು ಪ್ರೀತಿಸತೊಡಗುತ್ತಾರೆ.

ಯೇ ನಾಸ್ತಿಕಾ ನಿಷ್ಕ್ರಿಯಾಶ್ಚ ಗುರುಶಾಸ್ತ್ರಾಭಿಲಙ್ಘಿನಃ ।
ಅಧರ್ಮಜ್ಞಾ ದುರಾಚಾರಾಸ್ತೇ ಭವನ್ತಿ ಗತಾಯುಷಃ ॥೧೧॥

ನಾಸ್ತಿಕರು, ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡದೇ ಇರತಕ್ಕವರು, ಗುರುವಿನ ಮತ್ತು ಶಾಸ್ತ್ರಗಳ ಆಜ್ಞೆಯನ್ನು ಉಲ್ಲಂಘಿಸುವವರು, ಧರ್ಮವನ್ನು ತಿಳಿಯದೇ ಇರುವವರು ಮತ್ತು ದುರಾಚಾರಿಗಳು–ಇವರೆಲ್ಲರೂ ಅಲ್ಪಾಯುಗಳಾಗುತ್ತಾರೆ.

ವಿಶೀಲಾ ಭಿನ್ನಮರ್ಯಾದಾ ನಿತ್ಯಂ ಸಂಕೀರ್ಣಮೈಥುನಾಃ ।
ಅಲ್ಪಾಯುಷೋ ಭವನ್ತೀಹ ನರಾ ನಿರಯಗಾಮಿನಃ ॥೧೨॥

ಶೀಲದಿಂದ ಹೀನರಾದವರು, ಧರ್ಮದ ಮರ್ಯಾದೆಯನ್ನು ಮೀರಿ ನಡೆಯುವವರು, ತನಗಿಂತಲೂ ಭಿನ್ನವರ್ಣಗಳ ಸ್ತ್ರೀಯರೊಡನೆ ಸಮಾಗಮ ಮಾಡುವವರು–ಇವರೆಲ್ಲರೂ ಅಲ್ಪಾಯುಗಳಾಗುತ್ತಾರೆ ಮತ್ತು ಅವಸಾನಾ ನಂತರದಲ್ಲಿ ನರಕಕ್ಕೆ ಹೋಗುತ್ತಾರೆ.

ಸರ್ವಲಕ್ಷಣಹೀನೋಽಪಿ ಸಮುದಾಚಾರವಾನ್ನರಃ ।
ಶ್ರದ್ದಧಾನೋಽನಸೂಯಶ್ಚ ಶತಂ ವರ್ಷಾಣಿ ಜೀವತಿ ॥೧೩॥

ಎಲ್ಲ ಲಕ್ಷಣಗಳಿಂದ ಹೀನನಾಗಿದ್ದರೂ ಸದಾಚಾರಿಯಾಗಿರುವ, ಶ್ರದ್ಧಾಳುವಾದ, ಗುಣಗಳಲ್ಲಿ ದೋಷವನ್ನೆಣಿಸದ ಪುರುಷನು ನೂರು ವರ್ಷಗಳವರೆಗೂ ಜೀವಿಸಿರುತ್ತಾನೆ.

ಅಕ್ರೋಧನಃ ಸತ್ಯವಾದೀ ಭೂತಾನಾಮವಿಹಿಂಸಕಃ ।
ಅನಸೂಯುರಜಿಹ್ಮಶ್ಚ ಶತಂ ವರ್ಷಾಣಿ ಜೀವತಿ ॥೧೪॥

ಕೋಪವಿಲ್ಲದವನು, ಸತ್ಯವಾದಿಯು, ಪ್ರಾಣಿಗಳನ್ನು ಹಿಂಸಿಸದವನು, ಇತರರಲ್ಲಿರುವ ಐಶ್ವರ್ಯವನ್ನು ನೋಡಿ ಹೊಟ್ಟೇಕಿಚ್ಚುಪಡದವನು, ಕಪಟರಹಿತನು–ಇವರೆಲ್ಲರೂ ನೂರು ವರ್ಷಗಳ ಕಾಲ ಬದುಕಿರುತ್ತಾರೆ.

ಲೋಷ್ಟಮರ್ದೀ ತೃಣಚ್ಛೇದೀ ನಖಖಾದೀ ಚ ಯೋ ನರಃ ।
ನಿತ್ಯೋಚ್ಛಿಷ್ಟಃ ಸಂಕುಸುಕೋ ನೇಹಾಯುರ್ವಿನ್ದತೇ ಮಹತ್ ॥೧೫॥

ಕುಚೇಷ್ಟೆಗಾಗಿ ಮಣ್ಣುಹೆಂಟೆಗಳನ್ನು ಒಡೆಯುವವನು, ಹುಲ್ಲನ್ನು ಕೊಯ್ಯುವವನು, ಉಗುರನ್ನು ಕಚ್ಚುವವನು, ಪ್ರತಿನಿತ್ಯವೂ ಉಚ್ಛಿಷ್ಟವನ್ನು (ಅಶುದ್ಧ ಪದಾರ್ಥಗಳನ್ನು) ತಿನ್ನುವವನು, ಚಂಚಲವಾದ ಮನಸ್ಸುಳ್ಳವನು–ಇಂತಹವರು ಪೂರ್ಣಾಯುಷ್ಯವನ್ನು ಹೊಂದುವುದಿಲ್ಲ.

ಬ್ರಾಹ್ಮೇ ಮುಹೂರ್ತೇ ಬುಧ್ಯೇತ ಧರ್ಮಾರ್ಥೌ ಚಾನುಚಿನ್ತಯೇತ್ ।
ಉತ್ಥಾಯಾಚಮ್ಯ ತಿಷ್ಠೇತ ಪೂರ್ವಾಂ ಸಂಧ್ಯಾಂ ಕೃತಾಞ್ಜಲಿಃ ॥೧೬॥

ಏವಮೇವಾಪರಾಂ ಸಂಧ್ಯಾಂ ಸಮುಪಾಸೀತ ವಾಗ್ಯತಃ ।

ಪ್ರತಿನಿತ್ಯವೂ ಬ್ರಾಹ್ಮಮುಹೂರ್ತದಲ್ಲಿ ಏಳಬೇಕು. ಧರ್ಮಾರ್ಥಗಳನ್ನು ಚಿಂತಿಸಬೇಕು. ಅನಂತರ ಹಾಸಿಗೆಯಿಂದೆದ್ದು ಶೌಚ-ಸ್ನಾನಗಳನ್ನು ಮುಗಿಸಿ ಆಚಮನಮಾಡಿ ಬದ್ಧಾಂಜಲಿಯಾಗಿ ಪ್ರಾತಃಕಾಲದ ಸಂಧ್ಯಾವಂದನೆಯನ್ನು ಮಾಡಬೇಕು. ಹೀಗೆಯೇ ಸಾಯಂಕಾಲದಲ್ಲಿಯೂ ಮೌನಿಯಾಗಿದ್ದು ಸಾಯಂಸಂಧ್ಯೆಯನ್ನು ಮಾಡಬೇಕು.

ನೇಕ್ಷೇತಾದಿತ್ಯಮುದ್ಯನ್ತಂ ನಾಸ್ತಂ ಯಾನ್ತಂ ಕದಾಚನ ॥೧೭॥

ನೋಪಸೃಷ್ಟಂ ನ ವಾರಿಸ್ಥಂ ನ ಮಧ್ಯಂ ನಭಸೋ ಗತಮ್ ।
ಋಷಯೋ ನಿತ್ಯಸಂಧ್ಯತ್ವಾದ್ದೀರ್ಘಮಾಯುರವಾಪ್ನುವನ್ ।
ತಸ್ಮಾತ್ತಿಷ್ಠೇತ್ಸದಾ ಪೂರ್ವಾಂ ಪಶ್ಚಿಮಾಂ ಚೈವ ವಾಗ್ಯತಃ ॥೧೮॥

ಯಾವಾಗಲೂ ಸೂರ್ಯನು ಹುಟ್ಟುತ್ತಿರುವಾಗ ಮತ್ತು ಮುಳುಗುತ್ತಿರುವಾಗ ಅವನನ್ನು ನೋಡಬಾರದು. ಗ್ರಹಣಸಮಯದಲ್ಲಿಯೂ, ಮಧ್ಯಾಹ್ನದ

ಸಮಯದಲ್ಲಿಯೂ ಸೂರ್ಯನನ್ನು ನೋಡಬಾರದು. ನೀರಿನಲ್ಲಿ ಪ್ರತಿ ಬಿಂಬಿಸಿರುವಾಗಲೂ ನೋಡಬಾರದು. ಋಷಿಗಳು ನಿತ್ಯವೂ ಸಂಧ್ಯಾವಂದನೆಯನ್ನು ಮಾಡುತ್ತಿದ್ದುದರಿಂದಲೇ ದೀರ್ಘಾಯುಷ್ಯವನ್ನು ಪಡೆದುಕೊಂಡರು. ಆದುದರಿಂದ ದ್ವಿಜನಾದವನು ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಮೌನಿಯಾಗಿ ಸಂಧ್ಯಾವಂದನೆಯನ್ನು ಅವಶ್ಯವಾಗಿ ಮಾಡಬೇಕು.

ಯೇ ನ ಪೂರ್ವಾಮುಪಾಸನ್ತೇ ದ್ವಿಜಾಃ ಸಂಧ್ಯಾಂ ನ ಪಶ್ಚಿಮಾಮ್ ।
ಸರ್ವಾಂಸ್ತಾನ್ಧಾರ್ಮಿಕೋ ರಾಜಾ ಶೂದ್ರಕರ್ಮಾಣಿ ಕಾರಯೇತ್ ॥೧೯॥

ಪ್ರಾತಃಕಾಲ-ಸಾಯಂಕಾಲಗಳಲ್ಲಿ ಸಂಧ್ಯಾವಂದನೆಯನ್ನು ಮಾಡದಿರುವ ಬ್ರಾಹ್ಮಣರಿಂದ ಧಾರ್ಮಿಕನಾದ ರಾಜನು ಶೂದ್ರನಿಗೆ ಯೋಗ್ಯವಾದ ಕರ್ಮಗಳನ್ನು (ಸೇವಾಕಾರ್ಯವನ್ನು) ಮಾಡಿಸಬೇಕು.

ಪರದಾರಾ ನ ಗನ್ತವ್ಯಾ ಸರ್ವವರ್ಣೇಷು ಕರ್ಹಿಚಿತ್ ॥೨೦॥
ನ ಹೀದೃಶಮನಾಯುಷ್ಯಂ ಲೋಕೇ ಕಿಂಚನ ವಿದ್ಯತೇ ।
ಯಾದೃಶಂ ಪುರುಷಸ್ಯೇಹ ಪರದಾರೋಪಸೇವನಮ್ ॥೨೧॥

ಯಾವ ವರ್ಣದವರೇ ಆಗಲೀ ಪರಸ್ತ್ರೀಗಮನವನ್ನು ಮಾಡಬಾರದು. ಪರಸ್ತ್ರೀಗಮನದಿಂದ ಮನುಷ್ಯನ ಆಯುಸ್ಸು ಬಹಳ ಬೇಗ ಕ್ಷೀಣಿಸುತ್ತದೆ. ಪ್ರಪಂಚದಲ್ಲಿ ಪರಸ್ತ್ರೀಗಮನವು ಪುರುಷನ ಆಯುಷ್ಯವನ್ನು ಕ್ಷೀಣಗೊಳಿಸುವಂತೆ ಬೇರೆ ಯಾವುದೂ ಕ್ಷೀಣಗೊಳಿಸುವುದಿಲ್ಲ.

ಯಾವನ್ತೋ ರೋಮಕೂಪಾಃ ಸ್ಯುಃ ಸ್ತ್ರೀಣಾಂ ಗಾತ್ರೇಷು ನಿರ್ಮಿತಾಃ ।
ತಾವದ್ವರ್ಷಸಹಸ್ರಾಣಿ ನರಕಂ ಪರ್ಯುಪಾಸತೇ ॥೨೨॥

ಪರಸ್ತ್ರೀಗಮನಮಾಡಿದ ಪುರುಷನು–ಆ ಸ್ತ್ರೀಯಲ್ಲಿ ಎಷ್ಟು ರೋಮಕೂಪಗಳಿರುತ್ತವೆಯೋ–ಅಷ್ಟು ಸಾವಿರ ವರ್ಷಗಳ ಕಾಲ ನರಕವನ್ನು ಅನುಭವಿಸುತ್ತಿರುತ್ತಾನೆ.

ಪ್ರಸಾಧನಂ ಚ ಕೇಶಾನಾಮಞ್ಜನಂ ದನ್ತಧಾವನಮ್ ।
ಪೂರ್ವಾಹ್ಣ ಏವ ಕಾರ್ಯಾಣಿ ದೇವತಾನಾಂ ಚ ಪೂಜನಮ್ ॥೨೩॥

ಕೂದಲುಗಳನ್ನು ಸಿಂಗರಿಸಿಕೊಳ್ಳುವುದು, ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿಕೊಳ್ಳುವುದು, ಹಲ್ಲುಜ್ಜುವುದು, ಮುಖತೊಳೆಯುವುದು, ಸ್ನಾನ, ದೇವತೆಗಳ ಪೂಜೆ–ಈ ಎಲ್ಲ ಕಾರ್ಯಗಳನ್ನೂ ಪೂರ್ವಾಹ್ಣದಲ್ಲಿಯೇ (ಹಗಲಿನ ಮೂರು ಭಾಗಗಳಲ್ಲಿ ಮೊದಲನೆಯ ಭಾಗ) ಮಾಡಬೇಕು.

ಪುರೀಷಮೂತ್ರೇ ನೋದೀಕ್ಷೇನ್ನಾಧಿತಿಷ್ಠೇತ್ಕದಾಚನ ।
ನಾತಿಕಲ್ಯಂ ನಾತಿಸಾಯಂ ನ ಚ ಮಧ್ಯನ್ದಿನೇ ಸ್ಥಿತೇ ।
ನಾಜ್ಞಾತೈಃ ಸಹ ಗಚ್ಛೇತ ನೈಕೋ ನ ವೃಷಲೈಃ ಸಹ ॥೨೪॥

ಮಲ-ಮೂತ್ರಗಳನ್ನು ನೋಡಬಾರದು. ಅವುಗಳ ಮೇಲೆ ಯಾವಾಗಲೂ ಕಾಲಿಡಬಾರದು. ಮುಂಜಾನೆಯ ಮಬ್ಬಿನಲ್ಲಿ, ಮುಚ್ಚಂಜೆಯಲ್ಲಿ ಮತ್ತು ಮಟ-ಮಟಮಧ್ಯಾಹ್ನದ ಸಮಯದಲ್ಲಿ ಹೊರಗೆ ಹೋಗಬಾರದು. ಅಪರಿಚಿತರ ಜೊತೆಯಲ್ಲಾಗಲೀ, ಏಕಾಕಿಯಾಗಿಯೇ ಆಗಲೀ, ಶೂದ್ರರ ಜೊತೆಯಲ್ಲಾಗಲೀ ಪ್ರಯಾಣಮಾಡಬಾರದು.

ಪನ್ಥಾ ದೇಯೋ ಬ್ರಾಹ್ಮಣಾಯ ಗೋಭ್ಯೋ ರಾಜಭ್ಯ ಏವ ಚ ।
ವೃದ್ಧಾಯ ಭಾರತಪ್ತಾಯ ಗರ್ಭಿಣ್ಯೈ ದುರ್ಬಲಾಯ ಚ ॥೨೫॥

ಕಿರಿದಾದ ಹಾದಿಗಳಲ್ಲಿ ತನಗೆ ಎದುರಾಗಿ ಬ್ರಾಹ್ಮಣ, ಗೋವುಗಳು, ರಾಜರು, ವೃದ್ಧ, ಹೊರೆಹೊತ್ತವನು, ದುರ್ಬಲ ಮತ್ತು ಗರ್ಭವತಿಯಾದ ಹೆಂಗಸು–ಇವರು ಬಂದರೆ ತಾನು ಪಕ್ಕಕ್ಕೆ ಸರಿದು ನಿಂತು ಅವರು ಮುಂದೆ ಹೋಗಲು ಹಾದಿಯನ್ನು ಬಿಟ್ಟುಕೊಟ್ಟು ಅನಂತರ ತಾನು ಪ್ರಯಾಣವನ್ನು ಮುಂದುವರಿಸಬೇಕು.

ಪ್ರದಕ್ಷಿಣಂ ಚ ಕುರ್ವೀತ ಪರಿಜ್ಞಾತಾನ್ವನಸ್ಪತೀನ್ ।
ಚತುಷ್ಪಥಾನ್ಪ್ರಕುರ್ವೀತ ಸರ್ವಾನೇವ ಪ್ರದಕ್ಷಿಣಾನ್ ॥೨೬॥

ಮಾರ್ಗದಲ್ಲಿ ಹೋಗುತ್ತಿರುವಾಗ ಅಶ್ವತ್ಥವೇ ಮೊದಲಾದ ಪರಿಚಿತವಾದ ಮತ್ತು ಪವಿತ್ರವಾದ ವೃಕ್ಷಗಳನ್ನು ಬಲಕ್ಕೆ ಬಿಟ್ಟುಕೊಂಡು ಪ್ರದಕ್ಷಿಣವಾಗಿ ಹೋಗಬೇಕು. ನಾಲ್ಕು ದಾರಿಗಳು ಸೇರುವ ಎಲ್ಲ ವೃತ್ತಗಳನ್ನೂ ಬಲಕ್ಕೆ ಬಿಟ್ಟುಕೊಂಡು ಹೋಗಬೇಕು.

ಮಧ್ಯನ್ದಿನೇ ನಿಶಾಕಾಲೇ ಅರ್ಧರಾತ್ರೇ ಚ ಸರ್ವದಾ ।
ಚತುಷ್ಪಥಂ ನ ಸೇವೇತ ಉಭೇ ಸಂಧ್ಯೇ ತಥೈವ ಚ ॥೨೭॥

ಮಧ್ಯಾಹ್ನದ ಸಮಯದಲ್ಲಿಯೂ, ರಾತ್ರಿಯ ಸಮಯದಲ್ಲಿಯೂ, ಅರ್ಧರಾತ್ರಿಯಲ್ಲಿಯೂ, ಪೂರ್ವಾಪರಸಂಧ್ಯೆಗಳಲ್ಲಿಯೂ ನಾಲ್ಕು ಹಾದಿಗಳು ಸೇರುವ ಸ್ಥಳದಲ್ಲಿ ಇರಬಾರದು.

ಉಪಾನಹೌ ಚ ವಸ್ತ್ರಂ ಚ ಧೃತಮನ್ಯೈರ್ನ ಧಾರಯೇತ್ ।
ಬ್ರಹ್ಮಚಾರೀ ಚ ನಿತ್ಯಂ ಸ್ಯಾತ್ಪಾದಂ ಪಾದೇನ ನಾಕ್ರಮೇತ್ ॥೨೮॥

ಅಮಾವಾಸ್ಯಾಂ ಪೂರ್ಣಮಾಸ್ಯಾಂ ಚತುರ್ದಶ್ಯಾಂ ಚ ಸರ್ವಶಃ ।
ಅಷ್ಟಮ್ಯಾಂ ಸರ್ವಪಕ್ಷಾಣಾಂ ಬ್ರಹ್ಮಚಾರೀ ಸದಾ ಭವೇತ್ ॥೨೯॥

ಆಕ್ರೋಶಂ ಪರಿವಾದಂ ಚ ಪೈಶುನ್ಯಂ ಚ ವಿವರ್ಜಯೇತ್ ॥೩೦॥

ಇತರರು ಧರಿಸಿದ ಪಾದರಕ್ಷೆಗಳನ್ನಾಗಲೀ, ವಸ್ತ್ರಗಳನ್ನಾಗಲೀ ಧರಿಸಬಾರದು. ಸದಾ ಬ್ರಹ್ಮನಿಷ್ಠನಾಗಿರಬೇಕು. ಕಾಲಿನಿಂದ ಕಾಲನ್ನು ಮೆಟ್ಟಬಾರದು. ಅಮಾವಾಸ್ಯೆ, ಹುಣ್ಣಿಮೆ, ಎರಡು ಪಕ್ಷಗಳ ಚತುರ್ದಶೀ ಮತ್ತು ಅಷ್ಟಮೀ ಈ ದಿವಸಗಳಲ್ಲಿ ಬ್ರಹ್ಮಚರ್ಯದಿಂದಿರಬೇಕು. (ಸ್ತ್ರೀಸಮಾಗಮವನ್ನು ಮಾಡಬಾರದು.) ಬೈಗಳು, ಚಾಡಿ, ನಿಂದೆ –ಇವುಗಳನ್ನು ತ್ಯಜಿಸಬೇಕು.

ನಾರುನ್ತುದಃ ಸ್ಯಾನ್ನ ನೃಶಂಸವಾದೀ
ನ ಹೀನತಃ ಪರಮಭ್ಯಾದದೀತ ।
ಯಯಾಸ್ಯ ವಾಚಾ ಪರ ಉದ್ವಿಜೇತ
ನ ತಾಂ ವದೇದುಶತೀಂ ಪಾಪಲೋಕ್ಯಾಮ್ ॥೩೧॥

ಇತರರ ಮನಸ್ಸನ್ನು ನೋಯಿಸುವ ಮಾತುಗಳನ್ನೂ, ಕ್ರೂರವಾದ ಮಾತುಗಳನ್ನೂ ಆಡಬಾರದು. ಇತರರನ್ನು ತಿರಸ್ಕಾರವಾಗಿ ಕಾಣಬಾರದು. ಯಾವ ಮಾತಿನಿಂದ ಬೇರೆಯವನು ಉದ್ವೇಗಗೊಳ್ಳುವನೋ–ಅಂತಹ ಪಾಪಲೋಕಕ್ಕೊಯ್ಯುವ ಕರ್ಣಕಠೋರವಾದ ಮಾತುಗಳನ್ನು ಯಾವ ಕಾರಣದಿಂದಲೂ ಆಡಬಾರದು.

ವಾಕ್ಸಾಯಕಾ ವದನಾನ್ನಿಷ್ಪತನ್ತಿ
ಯೈರಾಹತಃ ಶೋಚತಿ ರಾತ್ರ್ಯಹಾನಿ ।
ಪರಸ್ಯ ವಾ ಮರ್ಮಸು ಯೇ ಪತನ್ತಿ
ತಾನ್ಪಣ್ಡಿತೋ ನಾವಸೃಜೇತ್ಪರೇಷು ॥೩೨॥

ಬಾಣರೂಪವಾದ ಮಾತುಗಳು ಮುಖದಿಂದ ಹೊರಬೀಳುತ್ತವೆ. ಅಂತಹ ವಾಗ್ಬಾಣಗಳಿಂದ ಪ್ರಹೃತನಾದ ಪುರುಷನು ಹಗಲು-ರಾತ್ರಿಗಳಲ್ಲಿ ಶೋಕಪಡುತ್ತಾನೆ. ಆದುದರಿಂದ ವಿದ್ವಾಂಸನಾದವನು ಮರ್ಮಸ್ಥಾನಗಳಲ್ಲಿ ಬೀಳುವ (ಮನನೋಯಿಸುವ) ವಾಗ್ಬಾಣಗಳನ್ನು ಇತರರ ಮೇಲೆ ಯಾವಾಗಲೂ ಪ್ರಯೋಗಿಸಬಾರದು. (ಚುಚ್ಚುಮಾತುಗಳನ್ನಾಡಬಾರದು.)

ರೋಹತೇ ಸಾಯಕೈರ್ವಿದ್ಧಂ ವನಂ ಪರಶುನಾ ಹತಮ್ ।
ವಾಚಾ ದುರುಕ್ತಂ ಬೀಭತ್ಸಂ ನ ಸಂರೋಹತಿ ವಾಕ್ಕ್ಷತಮ್ ॥೩೩॥

ಬಾಣಗಳಿಂದಾದ ಗಾಯವೂ ಮಾಯುತ್ತದೆ. ಕೊಡಲಿಯಿಂದ ಕತ್ತರಿಸಲ್ಪಟ್ಟ ಅರಣ್ಯವೂ (ಅರಣ್ಯದ ವೃಕ್ಷವೂ ಪುನಃ) ಚಿಗುರುತ್ತದೆ. ಆದರೆ ಭಯಂಕರವಾದ ದುರ್ವಚನರೂಪವಾದ ಮಾತಿನಿಂದ ಚುಚ್ಚಲ್ಪಟ್ಟವನ ಮಾನಸಿಕ ಕ್ಷತವು (ಮನಸ್ಸಿನ ಗಾಯವು) ಮಾಯುವುದೇ ಇಲ್ಲ.

ಕರ್ಣಿನಾಲೀಕನಾರಾಚಾನ್ನಿರ್ಹರನ್ತಿ ಶರೀರತಃ ।
ವಾಕ್ಶಲ್ಯಸ್ತು ನ ನಿರ್ಹರ್ತುಂ ಶಕ್ಯೋ ಹೃದಿಶಯೋ ಹಿ ಸಃ ॥೩೪॥

ಯುದ್ಧಸಮಯದಲ್ಲಿ ಶರೀರದಲ್ಲಿ ಚುಚ್ಚಿಕೊಂಡ ಕರ್ಣಿ, ನಾಲೀಕ, ನಾರಾಚ–ಎಂಬ ಬಾಣಗಳನ್ನು ಹೊರಕ್ಕೆ ತೆಗೆಯುತ್ತಾರೆ. ಆದರೆ ವಾಗ್ರೂಪ ವಾದ ಬಾಣವನ್ನು ಮಾತ್ರ ಹೊರತೆಗೆಯಲು ಸಾಧ್ಯವಿಲ್ಲ. ಏಕೆಂದರೆ: ಅದು ಹೃದಯದಲ್ಲಿಯೇ ಶಾಶ್ವತವಾಗಿ ಮಲಗಿಬಿಟ್ಟಿರುತ್ತದೆ.

ಹೀನಾಙ್ಗಾನತಿರಿಕ್ತಾಙ್ಗಾನ್ವಿದ್ಯಾಹೀನಾನ್ವಿಗರ್ಹಿತಾನ್ ।
ರೂಪದ್ರವಿಣಹೀನಾಂಶ್ಚ ಸತ್ವಹೀನಾಂಶ್ಚ ನಾಕ್ಷಿಪೇತ್ ॥೩೫॥

ಯಾವುದಾದರೂ ಅಂಗದಿಂದ ಹೀನರಾಗಿರುವವರನ್ನೂ, (ಕುರುಡರು-ಹೆಳವರು ಮೊದಲಾದವರನ್ನು) ಅಧಿಕವಾದ ಅಂಗವಿರುವವರನ್ನೂ

(ಆರು ಬೆರಳುಗಳು ಮುಂತಾದುವು ಇರುವವರನ್ನೂ), ಅವಿದ್ಯಾವಂತರನ್ನೂ, ನಿಂದೆಗೆ ಗುರಿಯಾಗಿರುವವರನ್ನೂ, ಕುರೂಪಿಗಳನ್ನೂ, ದರಿದ್ರರನ್ನೂ, ದುರ್ಬಲರನ್ನೂ ದೂಷಿಸಬಾರದು.

ನಾಸ್ತಿಕ್ಯಂ ವೇದನಿನ್ದಾಂ ಚ ದೇವತಾನಾಂ ಚ ಕುತ್ಸನಮ್ ।
ದ್ವೇಷಸ್ತಮ್ಭಾಭಿಮಾನಾಂಶ್ಚ ತೈಕ್ಷ್ಣ್ಯಂ ಚ ಪರಿವರ್ಜಯೇತ್ ॥೩೬॥

ನಾಸ್ತಿಕತೆ, ವೇದಗಳನ್ನು ನಿಂದಿಸುವುದು, ದೇವತೆಗಳನ್ನು ದೂಷಿಸುವುದು, ದ್ವೇಷ, ಉದ್ಧತತನ, ಅಭಿಮಾನ ಮತ್ತು ತೀಕ್ಷ್ಣತೆ–ಈ ದುರ್ಗುಣಗಳನ್ನು ತ್ಯಜಿಸಬೇಕು.

ಪರಸ್ಯ ದಣ್ಡಂ ನೋದ್ಯಚ್ಛೇತ್ಕ್ರುದ್ಧೋ ನೈವಂ ನಿಪಾತಯೇತ್ ।
ಅನ್ಯತ್ರ ಪುತ್ರಾಚ್ಛಿಷ್ಯಾಚ್ಚ ಶಿಕ್ಷಾರ್ಥಂ ತಾಡನಂ ಸ್ಮೃತಮ್ ॥೩೭॥

ಮಗನನ್ನೂ ಮತ್ತು ಶಿಷ್ಯನನ್ನೂ ಬಿಟ್ಟು ಬೇರೆಯವರನ್ನು ದಂಡಿಸಬಾರದು. ಕ್ರುದ್ಧನಾಗಿ ಯಾರನ್ನೂ ಹೊಡೆದು ಕೆಳಕ್ಕೆ ಕೆಡಹಬಾರದು. ವಿದ್ಯೆಯನ್ನು ಕಲಿಸುವ ಸಲುವಾಗಿ ಮಗನನ್ನಾಗಲೀ ಶಿಷ್ಯನನ್ನಾಗಲೀ ದಂಡಿಸಬಹುದೆಂದು ವಿದ್ವಾಂಸರು ಹೇಳುತ್ತಾರೆ.

ನ ಬ್ರಾಹ್ಮಣಾನ್ಪರಿವದೇನ್ನಕ್ಷತ್ರಾಣಿ ನ ನಿರ್ದಿಶೇತ್ ।
ತಿಥಿಂ ಪಕ್ಷಸ್ಯ ನ ಬ್ರೂಯಾತ್ತಥಾಸ್ಯಾಯುರ್ನ ರಿಷ್ಯತೇ ॥೩೮॥

ಬ್ರಾಹ್ಮಣರನ್ನು ನಿಂದಿಸಬಾರದು. ಮನೆ-ಮನೆಗೂ ಹೋಗಿ ತಿಥಿ-ವಾರ-ನಕ್ಷತ್ರಗಳನ್ನು ಹೇಳಬಾರದು. ಈ ನಿಯಮವನ್ನು ಪರಿಪಾಲಿಸಿದರೆ ಆಯುಷ್ಯವು ಕ್ಷೀಣಿಸುವುದಿಲ್ಲ.

ಕೃತ್ವಾ ಮೂತ್ರಪುರೀಷೇ ತು ರಥ್ಯಾಮಾಕ್ರಮ್ಯ ವಾ ಪುನಃ ।
ಪಾದಪ್ರಕ್ಷಾಲನಂ ಕುರ್ಯಾತ್ಸ್ವಾಧ್ಯಾಯೇ ಭೋಜನೇ ತಥಾ ॥೩೯॥

ಮಲ-ಮೂತ್ರಗಳನ್ನು ವಿಸರ್ಜಿಸಿದನಂತರ, ಬೀದಿಯಲ್ಲಿ ತಿರುಗಾಡಿ ಬಂದನಂತರ, ವೇದವನ್ನು ಹೇಳುವ ಮತ್ತು ಭೋಜನಮಾಡುವ ಮೊದಲು ಕಾಲುಗಳನ್ನು ತೊಳೆದುಕೊಳ್ಳಬೇಕು.

ತ್ರೀಣಿ ದೇವಾಃ ಪವಿತ್ರಾಣಿ ಬ್ರಾಹ್ಮಣಾನಾಮಕಲ್ಪಯತ್ ।
ಅದೃಷ್ಟಮದ್ಭಿರ್ನಿರ್ಣಿಕ್ತಂ ಯಚ್ಚ ವಾಚಾ ಪ್ರಶಸ್ಯತೇ ॥೪೦॥

ದೇವತೆಗಳು ಬ್ರಾಹ್ಮಣರಿಗೆ ಈ ಮೂರೂ ಪವಿತ್ರಪದಾರ್ಥಗಳೆಂದು ವಿಧಿಸಿದ್ದಾರೆ. ೧) ದುಷ್ಟರ ದೃಷ್ಟಿಗೆ ಬೀಳದೇ ಇರುವುದು ೨) ನೀರಿನಿಂದ ತೊಳೆಯಲ್ಪಟ್ಟಿರುವುದು ಮತ್ತು ೩) ಒಳ್ಳೆಯ ಮಾತಿನಿಂದ ಹೊಗಳಲ್ಪಟ್ಟಿರುವುದು.

ಸಂಯಾವಂ ಕೃಸರಂ ಮಾಂಸಂ ಶಷ್ಕುಲೀಂ ಪಾಯಸಂ ತಥಾ ।
ಆತ್ಮಾರ್ಥಂ ನ ಪ್ರಕರ್ತವ್ಯಂ ದೇವಾರ್ಥಂ ತು ಪ್ರಕಲ್ಪಯೇತ್ ॥೪೧॥

ಗೋಧಿಹಿಟ್ಟಿನ ತಂಬಿಟ್ಟು, ಎಳ್ಳನ್ನ, ಮಾಂಸ, ಚಕ್ಕುಲಿ, ಪಾಯಸ–ಇವುಗಳನ್ನು ತಾನೇ ತಿನ್ನುವ ಸಲುವಾಗಿ ಮಾಡಬಾರದು. ದೇವತೆಗಳ ನಿವೇದನಕ್ಕಾಗಿ ಮಾಡಬೇಕು.

ನಿತ್ಯಮಗ್ನಿಂ ಪರಿಚರೇದ್ಭಿಕ್ಷಾಂ ದದ್ಯಾಚ್ಚ ನಿತ್ಯದಾ ।
ವಾಗ್ಯತೋ ದನ್ತಕಾಷ್ಠಂ ಚ ನಿತ್ಯಮೇವ ಸಮಾಚರೇತ್ ॥೪೨॥

ಪ್ರತಿನಿತ್ಯವೂ ಅಗ್ನಿಕಾರ್ಯವನ್ನು ಮಾಡಬೇಕು. ನಿತ್ಯವೂ ಭಿಕ್ಷುಕರಿಗೆ ಭಿಕ್ಷೆಯನ್ನು ನೀಡಬೇಕು. ಮೌನಿಯಾಗಿದ್ದು ದಿನವೂ ದಂತಧಾವನವನ್ನು ಮಾಡಬೇಕು.

ಮಾತಾಪಿತರಮುತ್ಥಾಯ ಪೂರ್ವಮೇವಾಭಿವಾದಯೇತ್ ।
ಆಚಾರ್ಯಮಥವಾಪ್ಯನ್ಯಂ ತಥಾಯುರ್ವಿನ್ದತೇ ಮಹತ್ ॥೪೩॥

ಮುಂಜಾನೆ ಎದ್ದೊಡನೆಯೇ ಮೊದಲು ತಾಯಿ-ತಂದೆಗಳಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಬೇಕು. ಬಳಿಕ ಆಚಾರ್ಯನಿಗೂ ಇತರ ಗುರುಜನರಿಗೂ ನಮಸ್ಕರಿಸಬೇಕು. ಹೀಗೆ ಮಾಡುವುದರಿಂದ ಮನುಷ್ಯನು ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ವರ್ಜಯೇದ್ದನ್ತಕಾಷ್ಠಾನಿ ವರ್ಜನೀಯಾನಿ ನಿತ್ಯಶಃ ।
ಭಕ್ಷಯೇಚ್ಛಾಸ್ತ್ರದೃಷ್ಟಾನಿ ಪರ್ವಸ್ವಪಿ ವಿವರ್ಜಯೇತ್ ॥೪೪॥

ಶಾಸ್ತ್ರದಲ್ಲಿ ನಿಷೇಧಿಸಿರುವ ಕಾಷ್ಠಗಳಿಂದ ಹಲ್ಲುಜ್ಜಬಾರದು. ಶಾಸ್ತ್ರದಲ್ಲಿ ಹೇಳಿರುವ ದಂತಧಾವನಕಾಷ್ಠಗಳಿಂದಲೇ ಪ್ರತಿನಿತ್ಯವೂ ಹಲ್ಲುಗಳನ್ನುಜ್ಜಬೇಕು. ಪರ್ವದಿವಸಗಳಲ್ಲಿ ದಂತಧಾವನಕಾಷ್ಠಗಳಿಲ್ಲದೆಯೇ ಹಲ್ಲುಗಳನ್ನುಜ್ಜಬೇಕು.

ಉದಙ್ಮುಖಶ್ಚ ಸತತಂ ಶೌಚಂ ಕುರ್ಯಾತ್ಸಮಾಹಿತಃ ।
ಅಕೃತ್ವಾ ದೇವಪೂಜಾಂ ಚ ನಾಚರೇದ್ದನ್ತಧಾವನಮ್ ॥೪೫॥

ಏಕಾಗ್ರಚಿತ್ತನಾಗಿ ಉತ್ತರಾಭಿಮುಖವಾಗಿ ಕುಳಿತು ಮಲ-ಮೂತ್ರ-ಪ್ರಕ್ಷಾಲನೆಗಳನ್ನು ಮಾಡಬೇಕು. ಹಲ್ಲುಗಳನ್ನುಜ್ಜಿಕೊಳ್ಳದೇ ದೇವತೆಗಳಿಗೆ ಪೂಜೆಯನ್ನು ಮಾಡಬಾರದು.

ಅಕೃತ್ವಾ ದೇವಪೂಜಾಂ ಚ ನಾಭಿಗಚ್ಛೇತ್ಕದಾಚನ ।
ಅನ್ಯತ್ರ ತು ಗುರುಂ ವೃದ್ಧಂ ಧಾರ್ಮಿಕಂ ವಾ ವಿಚಕ್ಷಣಮ್ ॥೪೬॥

ದೇವರ ಪೂಜೆಯನ್ನು ಮಾಡದೇ ಯಾವಾಗಲೂ ಯಾರ ಬಳಿಗೂ ಹೋಗಬಾರದು. ಆದರೆ ಗುರು, ವೃದ್ಧ, ಧಾರ್ಮಿಕ ಮತ್ತು ವಿದ್ವಾಂಸ ಇವರ ಬಳಿಗೆ ಮಾರ್ಗದರ್ಶನಕ್ಕಾಗಿ ಹೋಗಬಹುದು.

ಅವಲೋಕ್ಯೋ ನ ಚಾದರ್ಶೋ ಮಲಿನೋ ಬುದ್ಧಿಮತ್ತರೈಃ ।
ನ ಚಾಜ್ಞಾತಾಂ ಸ್ತ್ರಿಯಂ ಗಚ್ಛೇದ್ಗರ್ಭಿಣೀಂ ವಾ ಕದಾಚನ ॥೪೭॥

ಅತ್ಯಂತ ಬುದ್ಧಿಶಾಲಿಯಾದವನು ಮಲಿನವಾಗಿರುವ ಕನ್ನಡಿಯಲ್ಲಿ ಮುಖವನ್ನು ನೋಡಿಕೊಳ್ಳಬಾರದು. ಅಪರಿಚಿತಳಾದವಳ ಮತ್ತು ಗರ್ಭಿಣೀಸ್ತ್ರೀಯ ಹತ್ತಿರಕ್ಕೂ ಹೋಗಬಾರದು.

ಉದಕ್ಶಿರಾ ನ ಸ್ವಪೇತ ತಥಾ ಪ್ರತ್ಯಕ್ಶಿರಾ ನ ಚ ।
ಪ್ರಾಕ್ಶಿರಾಸ್ತು ಸ್ವಪೇದ್ವಿದ್ವಾನಥವಾ ದಕ್ಷಿಣಾಶಿರಃ ॥೪೮॥

ಉತ್ತರದ ಕಡೆಗೆ ಅಥವಾ ಪಶ್ಚಿಮದ ಕಡೆಗೆ ತಲೆಮಾಡಿಕೊಂಡು ಮಲಗಬಾರದು. ವಿದ್ವಾಂಸನಾದವನು ಪೂರ್ವದಿಕ್ಕಿನ ಕಡೆಗೆ ಅಥವಾ ದಕ್ಷಿಣ ದಿಕ್ಕಿನ ಕಡೆಗೆ ತಲೆಮಾಡಿಕೊಂಡು ಮಲಗಬೇಕು.

ನ ಭಗ್ನೇ ನಾವಶೀರ್ಣೇ ಚ ಶಯನೇ ಪ್ರಸ್ವಪೀತ ಚ ।
ನಾನ್ತರ್ಧಾನೇ ನ ಸಂಯುಕ್ತೇ ನ ಚ ತಿರ್ಯಕ್ಕದಾಚನ ॥೪೯॥

ಹರಿದು ಹೋಗಿರುವ ಮತ್ತು ಶಿಥಿಲವಾಗಿರುವ ಹಾಸಿಗೆಯಲ್ಲಿ (ಮಂಚದಲ್ಲಿ) ಮಲಗಬಾರದು. ಕತ್ತಲೆಯಲ್ಲಿರುವ ಹಾಸಿಗೆಯಲ್ಲಿ ಮಲಗಬಾರದು. ಒಂದೇ ಹಾಸಿಗೆಯಲ್ಲಿ ಅನೇಕರು ಮಲಗಬಾರದು. ಎಂದಿಗೂ ಡೊಂಕಾಗಿ ಅಥವಾ ವಕ್ರವಾಗಿ ಮಲಗಬಾರದು. (ನೆಟ್ಟಗೆ ಮಲಗಬೇಕು.)

ನ ಚಾಪಿ ಗಚ್ಛೇತ್ಕಾರ್ಯೇಣ ಸಮಯಾದ್ವಾಪಿ ನಾಸ್ತಿಕೈಃ ।
ಆಸನಂ ತು ಪದಾಕೃಷ್ಯ ನ ಪ್ರಸಜ್ಜೇತ್ತಥಾ ನರಃ ॥೫೦॥

ಯಾವುದೇ ಕಾರ್ಯವಿದ್ದರೂ ನಾಸ್ತಿಕನ ಜೊತೆಯಲ್ಲಿ ಹೋಗಬಾರದು. ಜೊತೆಯಲ್ಲಿ ಬರುವೆನೆಂದು ಪ್ರತಿಜ್ಞೆಮಾಡಿದ್ದರೂ ನಾಸ್ತಿಕನ ಜೊತೆಯಲ್ಲಿ ಹೋಗಬಾರದು. ಕಾಲಿನಿಂದ ಮಣೆಯನ್ನು ಎಳೆದುಕೊಂಡು ಅದರ ಮೇಲೆ ಕುಳಿತುಕೊಳ್ಳಬಾರದು.

ನ ನಗ್ನಃ ಕರ್ಹಿಚಿತ್ಸ್ನಾಯಾನ್ನ ನಿಶಾಯಾಂ ಕದಾಚನ ।
ಸ್ನಾತ್ವಾ ಚ ನಾವಮೃಜ್ಯೇತ ಗಾತ್ರಾಣಿ ಸುವಿಚಕ್ಷಣಃ ॥೫೧॥

ವಿದ್ವಾಂಸನಾದವನು ಯಾವುದೇ ಸಮಯದಲ್ಲಿಯೂ ಬೆತ್ತಲೆಯಾಗಿ ಸ್ನಾನಮಾಡಬಾರದು. ರಾತ್ರಿಯಲ್ಲಿಯೂ ಸ್ನಾನಮಾಡಬಾರದು. ಸ್ನಾನ ಮಾಡಿದನಂತರ ಎಣ್ಣೆ ಮುಂತಾದುವನ್ನು ಮೈಗೆ ತಿಕ್ಕಿಕೊಳ್ಳಬಾರದು.

ನ ಚಾನುಲಿಮ್ಪೇದಸ್ನಾತ್ವಾ ಸ್ನಾತ್ವಾ ವಾಸೋ ನ ನಿರ್ಧುನೇತ್ ।
ನ ಚೈವಾರ್ದ್ರಾಣಿ ವಾಸಾಂಸಿ ನಿತ್ಯಂ ಸೇವೇತ ಮಾನವಃ ॥೫೨॥

ಸ್ನಾನವನ್ನು ಮಾಡದೇ ಶರೀರಕ್ಕೆ ಅಂಗರಾಗವನ್ನಾಗಲೀ ಚಂದನ ವನ್ನಾಗಲೀ ಪೂಸಿಕೊಳ್ಳಬಾರದು. ಸ್ನಾನಮಾಡಿದನಂತರ ಮೈಒರೆಸಿಕೊಂಡ ವಸ್ತ್ರವನ್ನು ಒದರಬಾರದು. ಒದ್ದೆಯಾದ ವಸ್ತ್ರವನ್ನು ಯಾವಾಗಲೂ ಧರಿಸಬಾರದು.

ಸ್ರಜಶ್ಚ ನಾವಕೃಷ್ಯೇತ ನ ಬರ್ಹಿರ್ಧಾರಯೀತ ಚ ।
ಉದಕ್ಯಯಾ ಚ ಸಂಭಾಷಾಂ ನ ಕುರ್ವೀತ ಕದಾಚನ ॥೫೩॥

ಕುತ್ತಿಗೆಗೆ ಹಾಕಿಕೊಂಡಿರುವ ಮಾಲೆಯನ್ನು ಎಳೆದು ಕಿತ್ತುಹಾಕಬಾರದು. ಬಟ್ಟೆಯ ಹೊರಗೆ ಮಾಲೆಯನ್ನು ಧರಿಸಬಾರದು. ಯಾವುದೇ ಸಮಯದಲ್ಲಿಯೂ ರಜಸ್ವಲೆಯಾದ ಹೆಂಗಸಿನೊಡನೆ ಮಾತನಾಡಬಾರದು.

ನೋತ್ಸೃಜೇತ ಪುರೀಷಂ ಚ ಕ್ಷೇತ್ರೇ ಗ್ರಾಮಸ್ಯ ಚಾನ್ತಿಕೇ ।
ಉಭೇ ಮೂತ್ರಪುರೀಷೇ ತು ನಾಪ್ಸು ಕುರ್ಯಾತ್ಕದಾಚನ ॥೫೪॥

ಉತ್ತು-ಬಿತ್ತಿರುವ ಹೊಲಗದ್ದೆಗಳಲ್ಲಾಗಲೀ, ಗ್ರಾಮದ ಸಮೀಪ ದಲ್ಲಾಗಲೀ, ನೀರಿನಲ್ಲಾಗಲೀ ಎಂದಿಗೂ ಮೂತ್ರ-ಪುರೀಷಗಳನ್ನು ವಿಸರ್ಜಿಸಬಾರದು.

ಅನ್ನಂ ಬುಭುಕ್ಷಮಾಣಸ್ತು ತ್ರಿರ್ಮುಖೇನ ಸ್ಪೃಶೇದಪಃ ।
ಭುಕ್ತ್ವಾ ಚಾನ್ನಂ ತಥೈವ ತ್ರಿರ್ದ್ವಿಃ ಪುನಃ ಪರಿಮಾರ್ಜಯೇತ್ ॥೫೫॥

ಭೋಜನಮಾಡಲು ಇಚ್ಛಿಸಿದ ಮನುಷ್ಯನು ಮೊದಲು ಮೂರುಬಾರಿ ನೀರಿನಿಂದ ಮುಖವನ್ನು ಸ್ಪರ್ಶಿಸಬೇಕು. (ಆಚಮನ ಮಾಡಬೇಕು.) ಭೋಜನಮಾಡಿದನಂತರವೂ ಆಚಮನಮಾಡಬೇಕು. ಅಂಗುಷ್ಠದ ಮೂಲಭಾಗದಿಂದ ಬಾಯನ್ನು ಎರಡು ಬಾರಿ ಒರೆಸಿಕೊಳ್ಳಬೇಕು.

ಪ್ರಾಙ್ಮುಖೋ ನಿತ್ಯಮಶ್ನೀಯಾದ್ವಾಗ್ಯತೋಽನ್ನಮಕುತ್ಸಯನ್ ।
ಪ್ರಸ್ಕನ್ದಯೇಚ್ಚ ಮನಸಾ ಭುಕ್ತ್ವಾ ಚಾಗ್ನಿಮುಪಸ್ಪೃಶೇತ್ ॥೫೬॥

ಭೋಜಮಾಡುವವನು ಪ್ರತಿನಿತ್ಯವೂ ಪೂರ್ವಾಭಿಮುಖವಾಗಿ ಕುಳಿತು ಮೌನದಿಂದ ಊಟಮಾಡಬೇಕು. ಬಡಿಸಿರುವ ಅನ್ನವನ್ನು ಯಾವುದೇ ಕಾರಣದಿಂದಲೂ ನಿಂದಿಸಬಾರದು. ಮನಸ್ಸಿನಿಂದಲೂ ನಿಂದಿಸಬಾರದು. ಸ್ವಲ್ಪ ಅನ್ನಶೇಷವನ್ನು ಎಲೆಯಲ್ಲಿ ಉಳಿಸಬೇಕು.* ಭೋಜನಾನಂತರ ಮನಸ್ಸಿನಿಂದ ಅಗ್ನಿಯನ್ನು ಸ್ಪರ್ಶಿಸಬೇಕು.

ಆಯುಷ್ಯಂ ಪ್ರಾಙ್ಮುಖೋ ಭುಙ್ಕ್ತೇ ಯಶಸ್ಯಂ ದಕ್ಷಿಣಾಮುಖಃ ।
ಧನ್ಯಂ ಪಶ್ಚಾನ್ಮುಖೋ ಭುಙ್ಕ್ತೇ ಋತಂ ಭುಙ್ಕ್ತೇ ಉದಙ್ಮುಖಃ ॥೫೭॥

ಪೂರ್ವಾಭಿಮುಖವಾಗಿ ಕುಳಿತು ಭೋಜನಮಾಡುವವನು ದೀರ್ಘಾಯುವಾಗುತ್ತಾನೆ. ದಕ್ಷಿಣಾಭಿಮುಖವಾಗಿ ಕುಳಿತು ಊಟಮಾಡು ವವನು ಯಶೋವಂತನಾಗುತ್ತಾನೆ. ಪಶ್ಚಿಮಾಭಿಮುಖವಾಗಿ ಕುಳಿತು ಊಟಮಾಡುವವನು ಐಶ್ವರ್ಯವಂತನಾಗುತ್ತಾನೆ. ಉತ್ತರಾಭಿಮುಖವಾಗಿ ಕುಳಿತು ಊಟಮಾಡುವವನು ಸತ್ಯವಂತನಾಗುತ್ತಾನೆ.

ಪ್ರಸ್ಕನ್ನವೆಂದರೆ ಕೆಳಕ್ಕೆ ಜಾರಿಬೀಳುವುದು. ವ್ಯಾಖ್ಯಾನಕಾರರು: ಪ್ರಸ್ಕನ್ದಯೇತ್–ಅನ್ನಶೇಷಂ ಕಿಂಚಿತ್ತ್ಯಜೇತ್-ಸ್ವಲ್ಪ ಅನ್ನಶೇಷವನ್ನು ಎಲೆಯಲ್ಲಿ ಬಿಡಬೇಕು-ಎಂದು ಅರ್ಥಮಾಡಿದ್ದಾರೆ.

ಅಗ್ನಿಮಾಲಭ್ಯ ತೋಯೇನ ಸರ್ವಾನ್ಪ್ರಾಣಾನುಪಸ್ಪೃಶೇತ್ ।
ಗಾತ್ರಾಣಿ ಚೈವ ಸರ್ವಾಣಿ ನಾಭಿಂ ಪಾಣಿತಲೇ ತಥಾ ॥೫೮॥

ಮನಸ್ಸಿನಿಂದ ಅಗ್ನಿಯನ್ನು ಸ್ಪರ್ಶಿಸಿ, ನೀರಿನಿಂದ ಸರ್ವೇಂದ್ರಿಯ ಗಳನ್ನೂ, ಸರ್ವಾಂಗಗಳನ್ನೂ, ಹೊಕ್ಕುಳನ್ನೂ, ಎರಡು ಕೈಗಳ ತಳಭಾಗಗಳನ್ನೂ ಸ್ಪರ್ಶಿಸಬೇಕು.

ನಾಧಿತಿಷ್ಠೇತ್ತುಷಂ ಜಾತು ಕೇಶಭಸ್ಮಕಪಾಲಿಕಾಃ ।
ಅನ್ಯಸ್ಯ ಚಾಪ್ಯವಸ್ನಾತಂ ದೂರತಃ ಪರಿವರ್ಜಯೇತ್ ॥೫೯॥

ಧಾನ್ಯದ ಹೊಟ್ಟು, ತಲೆಗೂದಲು, ಬೂದಿ ಮತ್ತು ತಲೆಬುರುಡೆ – ಇವುಗಳ ಮೇಲೆ ಯಾವಾಗಲೂ ಕುಳಿತುಕೊಳ್ಳಬಾರದು. ಬೇರೆಯವರು ಸ್ನಾನಮಾಡಿದ ನೀರನ್ನು ಸ್ಪರ್ಶಿಸಬಾರದು. ದೂರದಿಂದಲೇ ವರ್ಜಿಸಬೇಕು.

ಶಾನ್ತಿಹೋಮಾಂಶ್ಚ ಕುರ್ವೀತ ಸಾವಿತ್ರಾಣಿ ಚ ಧಾರಯೇತ್ ।
ನಿಷಣ್ಣಶ್ಚಾಪಿ ಖಾದೇತ ನ ತು ಗಚ್ಛನ್ಕದಾಚನ ॥೬೦॥

ಶಾಂತಿಹೋಮಗಳನ್ನು ಮಾಡಬೇಕು. ಸಾವಿತ್ರೀಸಂಜ್ಞಕವಾದ ಮಂತ್ರವನ್ನು ಜಪಿಸಬೇಕು. (ವೇದಗಳನ್ನು ಅಧ್ಯಯನಮಾಡುವುದರ ಮೂಲಕ ಧಾರಣೆಮಾಡಬೇಕು.) ಕುಳಿತುಕೊಂಡೇ ಊಟಮಾಡಬೇಕು. ಯಾವುದೇ ಕಾರಣದಿಂದಲೂ ತಿರುಗಾಡಿಕೊಂಡು ಊಟಮಾಡಬಾರದು.

ಮೂತ್ರಂ ನೋತ್ತಿಷ್ಠತಾ ಕಾರ್ಯಂ ನ ಭಸ್ಮನಿ ನ ಗೋವ್ರಜೇ ।
ಆರ್ದ್ರಪಾದಸ್ತು ಭುಞ್ಜೀತ ನಾರ್ದ್ರಪಾದಸ್ತು ಸಂವಿಶೇತ್ ॥೬೧॥

ನಿಂತುಕೊಂಡು ಮೂತ್ರೋತ್ಸರ್ಜನೆಮಾಡಬಾರದು. ಬೂದಿ ಯಲ್ಲಿಯೂ ಮತ್ತು ಕೊಟ್ಟಿಗೆಯಲ್ಲಿಯೂ ಮೂತ್ರೋತ್ಸರ್ಜನೆಯನ್ನು ಮಾಡ ಬಾರದು. ಕಾಲುಗಳು ಒದ್ದೆಯಾಗಿರುವಾಗ (ಕಾಲುಗಳನ್ನು ತೊಳೆದು ಕೊಂಡು) ಭೋಜನಮಾಡಬೇಕು. ಮಲಗುವಾಗ ಕಾಲುಗಳು ಒದ್ದೆಯಾಗಿರ ಬಾರದು.

ಆರ್ದ್ರಪಾದಸ್ತು ಭುಞ್ಜಾನೋ ವರ್ಷಾಣಾಂ ಜೀವತೇ ಶತಮ್ ।

ಒದ್ದೆಯ ಕಾಲಿನಲ್ಲಿ ಭೋಜನಮಾಡುವವನು ನೂರು ವರ್ಷಗಳ ವರೆಗೂ ಜೀವಿಸಿರುತ್ತಾನೆ.

ತ್ರೀಣಿ ತೇಜಾಂಸಿ ನೋಚ್ಛಿಷ್ಟ ಆಲಭೇತ ಕದಾಚನ ।
ಅಗ್ನಿಂ ಗಾಂ ಬ್ರಾಹ್ಮಣಂ ಚೈವ ತಥಾ ಹ್ಯಾಯುರ್ನ ರಿಷ್ಯತೇ ॥೬೨॥

ಭೋಜನಮಾಡಿದನಂತರ ಕೈತೊಳೆದು ಬಾಯಿಮುಕ್ಕಳಿಸಿ ಆಚಮನ ಮಾಡುವುದಕ್ಕೆ ಮೊದಲು ಮನುಷ್ಯನು ಉಚ್ಛಿಷ್ಟನಾಗುತ್ತಾನೆ. (ಅಪವಿತ್ರನಾಗುತ್ತಾನೆ.) ಆ ಸಮಯದಲ್ಲಿ ಅಗ್ನಿ, ಹಸು ಮತ್ತು ಬ್ರಾಹ್ಮಣ–ಈ ಮೂರು ತೇಜಸ್ಸುಗಳನ್ನೂ ಅವನು ಮುಟ್ಟಬಾರದು. ಹಾಗೆ ಮುಟ್ಟದಿದ್ದರೆ ಅವನ ಆಯುಷ್ಯವು ಕ್ಷೀಣಿಸುವುದಿಲ್ಲ.

ತ್ರೀಣಿ ತೇಜಾಂಸಿ ನೋಚ್ಛಿಷ್ಟ ಉದೀಕ್ಷೇತ ಕದಾಚನ ।
ಸೂರ್ಯಾಚನ್ದ್ರಮಸೌ ಚೈವ ನಕ್ಷತ್ರಾಣಿ ಚ ಸರ್ವಶಃ ॥೬೩॥

ಉಚ್ಛಿಷ್ಟನಾಗಿ (ಭೋಜನವಾದನಂತರ ಕೈತೊಳೆಯದೇ) ಮನುಷ್ಯನು ಸೂರ್ಯ, ಚಂದ್ರ ಮತ್ತು ನಕ್ಷತ್ರಮಂಡಲ–ಈ ಮೂರು ತೇಜಸ್ಸುಗಳನ್ನೂ ಯಾವುದೇ ಸಮಯದಲ್ಲಿಯೂ ನೋಡಬಾರದು.

ಊರ್ಧ್ವಂ ಪ್ರಾಣಾ ಹ್ಯುತ್ಕ್ರಮನ್ತಿ ಯೂನಃ ಸ್ಥವಿರ ಆಗತೇ ।
ಪ್ರತ್ಯುತ್ಥಾನಾಭಿವಾದಾಭ್ಯಾಂ ಪುನಸ್ತಾನ್ಪ್ರತಿಪದ್ಯತೇ ॥೬೪॥

ವೃದ್ಧನು ತನ್ನ ಸಮೀಪಕ್ಕೆ ಬಂದೊಡನೆಯೇ ಯುವಕನ ಪ್ರಾಣಗಳು ಊರ್ಧ್ವಮುಖವಾಗಿ ಮೇಲಕ್ಕೆ ಹೋಗುತ್ತವೆ. ಆ ಸ್ಥಿತಿಯಲ್ಲಿ ಯುವಕನಾದವನು ಒಡನೆಯೇ ಪ್ರತ್ಯುತ್ಥಾನಮಾಡಿ ನಮಸ್ಕಾರಮಾಡಿದರೆ ಪ್ರಾಣಗಳು ಪೂರ್ವಸ್ಥಿತಿಗೆ ಬರುತ್ತವೆ.

ಅಭಿವಾದಯೀತ ವೃದ್ಧಾಂಶ್ಚ ದದ್ಯಾಚ್ಚೈವಾಸನಂ ಸ್ವಯಮ್ ।
ಕೃತಾಞ್ಜಲಿರುಪಾಸೀತ ಗಚ್ಛನ್ತಂ ಪೃಷ್ಠತೋಽನ್ವಿಯಾತ್ ॥೬೫॥

ವೃದ್ಧರು ಬಂದೊಡನೆಯೇ ಎದ್ದು ಎದುರುಗೊಂಡು ಅವರಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಬೇಕು. ಕುಳಿತುಕೊಳ್ಳಲು ಆಸನವನ್ನು ಕೊಡಬೇಕು. ಕೈಜೋಡಿಸಿಕೊಂಡೇ ಅವರ ಸೇವೆಯಲ್ಲಿ ನಿರತನಾಗಿರಬೇಕು. ಅವರು ಹೊರಟರೆ ಹಿಂದೆಯೇ ಸ್ವಲ್ಪ ದೂರದವರೆಗೆ ಹೋಗಿಬರಬೇಕು.

ನ ಚಾಸೀತಾಸನೇ ಭಿನ್ನೇ ಭಿನ್ನಕಾಂಸ್ಯಂ ಚ ವರ್ಜಯೇತ್ ।
ನೈಕವಸ್ತ್ರೇಣ ಭೋಕ್ತವ್ಯಂ ನ ನಗ್ನಸ್ನಾತುಮರ್ಹತಿ ॥೬೬॥

ಮುರಿದುಹೋಗಿರುವ ಆಸನದಲ್ಲಿ ಕುಳಿತುಕೊಳ್ಳಬಾರದು. ಒಡೆದು ಹೋಗಿರುವ ಕಂಚಿನಪಾತ್ರೆಯನ್ನು ಉಪಯೋಗಿಸಬಾರದು. ಒಂದೇ ವಸ್ತ್ರದಲ್ಲಿ (ಮೇಲುಹೊದ್ದಿಕೆಯಿಲ್ಲದೇ) ಊಟಮಾಡಬಾರದು. ಬೆತ್ತಲೆಯಾಗಿ ಸ್ನಾನಮಾಡಬಾರದು.

ಸುಪ್ತವ್ಯಂ ನೈವ ನಗ್ನೇನ ನ ಚೋಚ್ಛಿಷ್ಟೋಽಪಿ ಸಂವಿಶೇತ್ ।
ಉಚ್ಛಿಷ್ಟೋ ನ ಸ್ಪೃಶೇಚ್ಛೀರ್ಷಂ ಸರ್ವೇ ಪ್ರಾಣಾಸ್ತದಾಶ್ರಯಾಃ ॥೬೭॥

ಬೆತ್ತಲೆಯಾಗಿ ಮಲಗಬಾರದು. ಅಶುಚಿಯಾಗಿ ಮಲಗಬಾರದು. ಅಶುಚಿಯಾಗಿರುವಾಗ ಅಥವಾ ಊಟಮಾಡುತ್ತಿರುವಾಗ (ಅಶುಚಿಯಾದ ಕೈಗಳಿಂದ) ತಲೆಯನ್ನು ಮುಟ್ಟಿಕೊಳ್ಳಬಾರದು. ಏಕೆಂದರೆ: ಎಲ್ಲ ಪ್ರಾಣಗಳೂ ತಲೆಯನ್ನೇ ಆಶ್ರಯಿಸಿವೆ.

ಕೇಶಗ್ರಹಂ ಪ್ರಹಾರಾಂಶ್ಚ ಶಿರಸ್ಯೇತಾನ್ವಿವರ್ಜಯೇತ್ ।
ನ ಸಂಹತಾಭ್ಯಾಂ ಪಾಣಿಭ್ಯಾಂ ಕಣ್ಡೂಯೇದಾತ್ಮನಃ ಶಿರಃ ॥೬೮॥

ನ ಚಾಭೀಕ್ಷ್ಣಂ ಶಿರಸ್ನಾಯಾತ್ತಥಾಸ್ಯಾಯುರ್ನ ರಿಷ್ಯತಿ ॥೬೯॥

ತಲೆಗೂದಲನ್ನು ಹಿಡಿದುಕೊಳ್ಳಬಾರದು. ತಲೆಯನ್ನು ಚಚ್ಚಿಕೊಳ್ಳಬಾರದು. ಎರಡು ಕೈಗಳನ್ನೂ ಜೋಡಿಸಿಕೊಂಡು ತಲೆಯನ್ನು ಕೆರೆದುಕೊಳ್ಳಬಾರದು. ಬಾರಿ-ಬಾರಿಗೂ ತಲೆಗೆ ಸ್ನಾನಮಾಡಬಾರದು. ಇವೆಲ್ಲವನ್ನೂ ಪಾಲಿಸುವುದರಿಂದ ಆಯುಷ್ಯವು ಕ್ಷೀಣಿಸುವುದಿಲ್ಲ.

ಶಿರಃ ಸ್ನಾತಸ್ತು ತೈಲೈಶ್ಚ ನಾಙ್ಗಂ ಕಂಚಿದಪಿ ಸ್ಪೃಶೇತ್ ।
ತಿಲಸೃಷ್ಟಂ ನ ಚಾಶ್ನೀಯಾತ್ತಥಾಚಾಯುರ್ನ ರಿಷ್ಯತೇ ॥೭೦॥

ತಲೆಗೆ ಎಣ್ಣೆಯನ್ನು ಹಚ್ಚಿಕೊಂಡು ಸ್ನಾನಮಾಡಿ ಅದೇ ಕೈಗಳಿಂದ ಬೇರೇ ಅವಯವಗಳನ್ನು ಮುಟ್ಟಬಾರದು. ಎಳ್ಳಿನಿಂದ ಮಾಡಿದ ಪದಾರ್ಥಗಳನ್ನು ತಿನ್ನಬಾರದು. ಹೀಗೆ ಮಾಡುವುದರಿಂದ ಆಯುಷ್ಯವು ಕ್ಷೀಣಿಸುವುದಿಲ್ಲ.

ನಾಧ್ಯಾಪಯೇತ್ತಥೋಚ್ಛಿಷ್ಟೋ ನಾಧೀಯೀತ ಕದಾಚನ ।
ವಾತೇ ಚ ಪೂತಿಗನ್ಧೇ ಚ ಮನಸಾಪಿ ನ ಚಿನ್ತಯೇತ್ ॥೭೧॥

ಅಶುಚಿಯಾಗಿರುವವನು ವೇದವನ್ನು ಹೇಳಿಕೊಡಬಾರದು; ಹೇಳಿಸಿಕೊಳ್ಳಲೂಬಾರದು. ದುರ್ಗಂಧಯುಕ್ತವಾದ ವಾಯುವಿನ ಸಂಚಾರವಿದ್ದಲ್ಲಿ ವೇದವನ್ನು ಮನಸ್ಸಿನಲ್ಲಿಯೂ ಸ್ಮರಿಸಬಾರದು.

ಈ ವಿಷಯದಲ್ಲಿ ಹಿಂದಿನ ವೃತ್ತಾಂತವನ್ನು ತಿಳಿದವರು, ಯಮನಿಂದ ಹೇಳಲ್ಪಟ್ಟ ಈ ಶ್ಲೋಕಗಳನ್ನು ಉದಾಹರಿಸುತ್ತಾರೆ :

ಯಮನ ಗೀತೆಗಳು :

ಆಯುರಸ್ಯ ನಿಕೃನ್ತಾಮಿ ಪ್ರಜಾಸ್ತಸ್ಯಾದದೇ ತಥಾ ।
ಉಚ್ಛಿಷ್ಟೋ ಯಃ ಪ್ರವದತಿ ಸ್ವಾಧ್ಯಾಯಂ ಚಾಧಿಗಚ್ಛತಿ ।
ಯಶ್ಚಾನಧ್ಯಾಯಕಾಲೇऽಪಿ ಮೋಹಾದಭ್ಯಸ್ಯತಿ ದ್ವಿಜಃ ॥೭೩॥

ತಸ್ಯ ವೇದಃ ಪ್ರಣಶ್ಯೇತ ಆಯುಶ್ಚ ಪರಿಹೀಯತೇ ।
ತಸ್ಮಾದ್ಯುಕ್ತೋ ಹ್ಯನಧ್ಯಾಯೇ ನಾಧೀಯೀತ ಕದಾಚನ ॥೭೪॥

"ಅಶುಚಿಯಾದ ಯಾವನು ವೇದವನ್ನು ಹೇಳುವನೋ, ಅಧ್ಯಯನ-ಅಧ್ಯಾಪನಗಳನ್ನು ಮಾಡುವನೋ–ಅಂತಹವನ ಆಯುಷ್ಯವನ್ನು ನಾನು ಕತ್ತರಿಸಿಬಿಡುತ್ತೇನೆ. (ಕಡಿಮೆ ಮಾಡುತ್ತೇನೆ.) ಅವನ ಮಕ್ಕಳ ಆಯುಷ್ಯಗಳನ್ನೂ ಅಪಹರಿಸುತ್ತೇನೆ. ಯಾವ ಬ್ರಾಹ್ಮಣನು ಮೋಹವಶನಾಗಿ ಅನಧ್ಯಯನಕಾಲದಲ್ಲಿಯೂ ವೇದವನ್ನು ಅಭ್ಯಾಸಮಾಡುವನೋ–ಅಂತಹವನ ವೇದಾಧ್ಯಯನವು ನಷ್ಟವಾಗಿ ಹೋಗುತ್ತದೆ. (ನಿಷ್ಫಲವಾಗುತ್ತದೆ.) ಆಯುಷ್ಯವೂ ನಷ್ಟವಾಗುತ್ತದೆ. ಆದುದರಿಂದ ಧರ್ಮಯುಕ್ತನಾದವನು ಅನಧ್ಯಯನದ ದಿನಗಳಲ್ಲಿ ವೇದವನ್ನು ಅಧ್ಯಯನ ಮಾಡಬಾರದು.

ಪ್ರತ್ಯಾದಿತ್ಯಂ ಪ್ರತ್ಯನಲಂ ಪ್ರತಿ ಗಾಂ ಚ ಪ್ರತಿ ದ್ವಿಜಾನ್ ।
ಯೇ ಮೇಹನ್ತಿ ಚ ಪನ್ಥಾನಂ ತೇ ಭವನ್ತಿ ಗತಾಯುಷಃ ॥೭೫॥

ಸೂರ್ಯ, ಅಗ್ನಿ, ಹಸು ಮತ್ತು ಬ್ರಾಹ್ಮಣರು–ಇವರ ಕಡೆಗೆ

ಮುಖಮಾಡಿಕೊಂಡು ಮತ್ತು ಹಾದಿಯ ಮಧ್ಯದಲ್ಲಿ ಯಾರು ಮಲ-ಮೂತ್ರಗಳನ್ನು ವಿಸರ್ಜನೆಮಾಡುವರೋ–ಅವರು ಅಲ್ಪಾಯುಗಳಾಗುತ್ತಾರೆ.

ಉಭೇ ಮೂತ್ರಪುರೀಷೇ ತು ದಿವಾ ಕುರ್ಯಾದುದಙ್ಮುಖಃ ।
ದಕ್ಷಿಣಾಭಿಮುಖೋ ರಾತ್ರೌ ತಥಾ ಹ್ಯಾಯುರ್ನ ರಿಷ್ಯತೇ ॥೭೬॥

ಮಲ-ಮೂತ್ರಗಳನ್ನು ಹಗಲಿನಲ್ಲಿ ಉತ್ತರಾಭಿಮುಖವಾಗಿ ಕುಳಿತು ಮಾಡಬೇಕು. ರಾತ್ರಿಯಲ್ಲಿ ದಕ್ಷಿಣಾಭಿಮುಖವಾಗಿ ಕುಳಿತು ಮಾಡಬೇಕು. ಹೀಗೆ ಮಾಡುವುದರಿಂದ ಆಯುಷ್ಯವು ಕ್ಷೀಣಿಸುವುದಿಲ್ಲ.

ತ್ರೀನ್ಕೃಶಾನ್ನಾವಜಾನೀಯಾದ್ದೀರ್ಘಮಾಯುರ್ಜಿಜೀವಿಷುಃ ।
ಬ್ರಾಹ್ಮಣಂ ಕ್ಷತ್ರಿಯಂ ಸರ್ಪಂ ಸರ್ವೇ ಹ್ಯಾಶೀವಿಷಾಸ್ತ್ರಯಃ ॥೭೭॥

ದೀರ್ಘಕಾಲದವರೆಗೆ ಜೀವಿಸಿರಲು ಇಚ್ಛಿಸುವವನು–ದುರ್ಬಲ ರಾಗಿದ್ದರೂ ಬ್ರಾಹ್ಮಣ, ಕ್ಷತ್ರಿಯ ಮತ್ತು ಸರ್ಪ–ಈ ಮೂವರನ್ನೂ ಅವಹೇಳನ ಮಾಡಬಾರದು. ಏಕೆಂದರೆ: ಈ ಮೂವರೂ ವಿಷದಿಂದ ಕೂಡಿರತಕ್ಕವರು.

ದಹತ್ಯಾಶೀವಿಷಃ ಕ್ರುದ್ಧೋ ಯಾವತ್ಪಶ್ಯತಿ ಚಕ್ಷುಷಾ ।
ಕ್ಷತ್ರಿಯೋಽಪಿ ದಹೇತ್ಕ್ರುದ್ಧೋ ಯಾವತ್ಸ್ಪೃಶತಿ ತೇಜಸಾ ॥೭೮॥

ಬ್ರಾಹ್ಮಣಸ್ತು ಕುಲಂ ಹನ್ಯಾದ್ಧ್ಯಾನೇನಾವೇಕ್ಷಿತೇನ ಚ ।
ತಸ್ಮಾದೇತತ್ತ್ರಯಂ ಯತ್ನಾದುಪಸೇವೇತ ಪಣ್ಡಿತಃ ॥೭೯॥

ಕೋಪಗೊಂಡ ಸರ್ಪವು ತನಗೆ ಹಿಂಸೆಮಾಡಿದವನನ್ನು ಯಾವಾಗ ಕಣ್ಣಿಂದ ನೋಡುತ್ತದೆಯೋ ಆಗಲೇ ಕೊಂದುಹಾಕುತ್ತದೆ. ಕ್ರುದ್ಧನಾದ ಕ್ಷತ್ರಿಯನು ತನ್ನ ತೇಜಸ್ಸಿನಿಂದಲೇ (ಪರಾಕ್ರಮದಿಂದಲೇ) ಶತ್ರುವನ್ನು ಧ್ವಂಸಮಾಡಿಬಿಡುತ್ತಾನೆ. ಬ್ರಾಹ್ಮಣನಾದರೋ ಕುಪಿತನಾದರೆ–ದೃಷ್ಟಿಪಾತ ದಿಂದಲೂ ಮತ್ತು ಸಂಕಲ್ಪದಿಂದಲೂ ಅವಹೇಳನಮಾಡಿದವನ ಕುಲವನ್ನೇ ನಾಶಗೊಳಿಸುತ್ತಾನೆ. ಆದುದರಿಂದ ವಿದ್ವಾಂಸನಾದವನು ಈ ಮೂವರನ್ನೂ ಪ್ರಯತ್ನಪೂರ್ವಕವಾಗಿ ಉಪಾಸಿಸಬೇಕು. (ಈ ಮೂವರ ಸೇವೆಯನ್ನು ಮಾಡಬೇಕು.)

ಗುರುಣಾ ವೈರನಿರ್ಬನ್ಧೋ ನ ಕರ್ತವ್ಯಃ ಕದಾಚನ ।
ಆನುಮಾನ್ಯಃ ಪ್ರಸಾದ್ಯಶ್ಚ ಗುರುಃ ಕ್ರುದ್ಧೋ ಯುಧಿಷ್ಠಿರ ॥೮೦॥

ಗುರುವಿನೊಡನೆ ಯಾವಾಗಲೂ ಯಾವುದೇ ಕಾರಣದಿಂದಲೂ ವೈರವನ್ನು ಕಟ್ಟಿಕೊಳ್ಳಬಾರದು. ಗುರುವೇನಾದರೂ ಕೋಪಗೊಂಡರೆ ಸರ್ವಪ್ರಯತ್ನದಿಂದಲೂ ಅವನನ್ನು ಒಲಿಸಿಕೊಂಡು ಸಮ್ಮಾನಿಸಿ ಪ್ರಸನ್ನಗೊಳಿಸಬೇಕು.

ಸಮ್ಯಙ್ಮಿಥ್ಯಾಪ್ರವೃತ್ತೇಽಪಿ ವರ್ತಿತವ್ಯಂ ಗುರಾವಿಹ ।
ಗುರುನಿನ್ದಾ ದಹತ್ಯಾಯುರ್ಮನುಷ್ಯಾಣಾಂ ನ ಸಂಶಯಃ ॥೮೧॥

ಗುರುವು ಪ್ರತಿಕೂಲವಾಗಿಯೇ ವರ್ತಿಸಿದರೂ ಅವನೊಡನೆ ಸದ್ವ್ಯವಹಾರವನ್ನೇ ಇಟ್ಟುಕೊಳ್ಳಬೇಕು. ಏಕೆಂದರೆ: ಗುರುನಿಂದೆಯು ಮನುಷ್ಯನ ಆಯುಷ್ಯವನ್ನೇ ಅಪಹರಿಸಿಬಿಡುತ್ತದೆ. ಇದರಲ್ಲಿ ಸಂಶಯವೇ ಇಲ್ಲ.

ದೂರಾದಾವಸಥಾನ್ಮೂತ್ರಂ ದೂರಾತ್ಪಾದಾವಸೇಚನಮ್ ।
ಉಚ್ಛಿಷ್ಟೋತ್ಸರ್ಜನಂ ಚೈವ ದೂರೇ ಕಾರ್ಯಂ ಹಿತೈಷಿಣಾ ॥೮೨॥

ತನ್ನ ಹಿತವನ್ನು ಬಯಸುವ ಮನುಷ್ಯನು ಮನೆಗೆ ಬಹಳ ದೂರದಲ್ಲಿ ಮೂತ್ರೋತ್ಸರ್ಜನೆಮಾಡಬೇಕು. ದೂರದಲ್ಲಿ ಕಾಲುಗಳನ್ನು ತೊಳೆಯಬೇಕು. ತಿಂದು ಮಿಕ್ಕ ಪದಾರ್ಥಗಳನ್ನು ದೂರದಲ್ಲಿ ವಿಸರ್ಜಿಸಬೇಕು.

ರಕ್ತಮಾಲ್ಯಂ ನ ಧಾರ್ಯಂ ಸ್ಯಾಚ್ಛುಕ್ಲಂ ಧಾರ್ಯಂ ತು ಪಣ್ಡಿತೈಃ ।
ವರ್ಜಯಿತ್ವಾ ತು ಕಮಲಂ ತಥಾ ಕುವಲಯಂ ಪ್ರಭೋ ॥೮೩॥

ಪ್ರಭುವೇ! ವಿದ್ವಾಂಸನಾದವನು ಕೆಂಪುಹೂವಿನ ಮಾಲೆಯನ್ನು ಧರಿಸಬಾರದು. ಬಿಳಿಯಹೂವಿನ ಮಾಲೆಯನ್ನು ಧರಿಸಬೇಕು. ಆದರೆ ಕಮಲ, ಕುವಲಯ (ನೈದಿಲೆ) ಗಳು ಕೆಂಪಗಿದ್ದರೂ ಅವುಗಳ ಮಾಲೆಯನ್ನು ಧರಿಸಬಹುದು.

ರಕ್ತಂ ಶಿರಸಿ ಧಾರ್ಯಂ ತು ತಥಾ ವಾನೇಯಮಿತ್ಯಪಿ ।
ಕಾಞ್ಚನೀಯಾಪಿ ಮಾಲಾ ಯಾ ನ ಸಾ ದುಷ್ಯತಿ ಕರ್ಹಿಚಿತ್ ॥೮೪॥

ಕೆಂಪುಹೂವುಗಳನ್ನೂ ಕಾಡಿನಹೂವುಗಳನ್ನೂ ತಲೆಯಲ್ಲಿ ಮುಡಿದುಕೊಳ್ಳಬಹುದು. ಸುವರ್ಣದ ಹಾರವು ಯಾವುದೇ ಕಾರಣದಿಂದಲೂ ದೂಷ್ಯವಾಗುವುದಿಲ್ಲ.

ಸ್ನಾತಸ್ಯ ವರ್ಣಕಂ ನಿತ್ಯಮಾರ್ದ್ರಂ ದದ್ಯಾದ್ವಿಶಾಂಪತೇ ।
ವಿಪರ್ಯಯಂ ನ ಕುರ್ವೀತ ವಾಸಸೋ ಬುದ್ಧಿಮಾನ್ನರಃ ॥೮೫॥

ಸ್ನಾನಮಾಡಿದನಂತರ ನಿತ್ಯವೂ ಹಸಿಯಾಗಿರುವ ಗಂಧವನ್ನೇ ಲೇಪಿಸಿಕೊಳ್ಳಬೇಕು. ಬುದ್ಧಿವಂತನಾದ ಮನುಷ್ಯನು ಉತ್ತರೀಯವನ್ನು (ಹೊದೆಯುವ ವಸ್ತ್ರವನ್ನು) ಉಡಬಾರದು. ಉಡುವ ವಸ್ತ್ರವನ್ನು ಹೊದೆಯಬಾರದು.

ತಥಾ ನಾನ್ಯಧೃತಂ ಧಾರ್ಯಂ ನ ಚಾಪದಶಮೇವ ಚ ।
ಅನ್ಯದೇವ ಭವೇದ್ವಾಸಃ ಶಯನೀಯೇ ನರೋತ್ತಮ ।
ಅನ್ಯದ್ರಥ್ಯಾಸು ದೇವಾನಾಮರ್ಚಾಯಾಮನ್ಯದೇವ ಹಿ ॥೮೬॥

ಮತ್ತೊಬ್ಬನು ಉಟ್ಟಬಟ್ಟೆಯನ್ನು ಉಡಬಾರದು. ಜೀರ್ಣವಾಗಿ ಹೋಗಿರುವ, ಅಂಚುಗಳು ಹರಿದುಹೋಗಿರುವ (ಅಂಚಿಲ್ಲದ) ಬಟ್ಟೆಯನ್ನು ಉಡಬಾರದು. ಮಲಗುವಾಗ ಬೇರೆಯ ಬಟ್ಟೆಯನ್ನೇ ಉಡಬೇಕು. ತಿರುಗಾಡಲು ಹೋಗುವಾಗಲೂ ಬೇರೆಯ ವಸ್ತ್ರವನ್ನು ಉಡಬೇಕು. ದೇವತೆಗಳನ್ನು ಅರ್ಚನೆಮಾಡುವಾಗಲೂ ಬೇರೆಯ ವಸ್ತ್ರವನ್ನು ಧರಿಸಬೇಕು. (ಒಂದು ಸಮಯದಲ್ಲಿ ಉಟ್ಟುದನ್ನೇ ಎಲ್ಲ ಸಮಯಗಳಲ್ಲಿಯೂ ಉಪಯೋಗಿಸಬಾರದು.)

ಪ್ರಿಯಙ್ಗುಚನ್ದನಾಭ್ಯಾಂ ಚ ಬಿಲ್ವೇನ ತಗರೇಣ ಚ ।
ಪೃಥಗೇವಾನುಲಿಮ್ಪೇತ ಕೇಸರೇಣ ಚ ಬುದ್ಧಿಮಾನ್ ॥೮೭॥

ಬುದ್ಧಿವಂತನಾದವನು ಪ್ರೇಂಖಣಗಿಡದ ಗಂಧವನ್ನೂ, ಚಂದನದ ಗಂಧವನ್ನೂ, ನಂದಬಟ್ಟಲುಗಿಡದ ಗಂಧವನ್ನೂ, ಕೇಸರಿಯನ್ನೂ ಪ್ರತ್ಯೇಕ-ಪ್ರತ್ಯೇಕವಾಗಿಯೇ ಲೇಪಿಸಿಕೊಳ್ಳಬೇಕು.

ಉಪವಾಸಂ ಚ ಕುರ್ವೀತ ಸ್ನಾತಃ ಶುಚಿರಲಂಕೃತಃ ।
ಪರ್ವಕಾಲೇಷು ಸರ್ವೇಷು ಬ್ರಹ್ಮಚಾರೀ ಸದಾ ಭವೇತ್ ॥೮೮॥

ಮನುಷ್ಯನು ಪರ್ವಕಾಲಗಳಲ್ಲಿ ಸ್ನಾನಮಾಡಿ ಪರಿಶುದ್ಧನಾಗಿ, ವಸ್ತ್ರಾದಿಗಳಿಂದ ಶರೀರವನ್ನು ಅಲಂಕರಿಸಿಕೊಂಡು ಉಪವಾಸಮಾಡಬೇಕು ಮತ್ತು ಬ್ರಹ್ಮಚರ್ಯವ್ರತದಿಂದಿರಬೇಕು. (ಆ ದಿವಸಗಳಲ್ಲಿ ಸ್ತ್ರೀಸಮಾಗಮ ವನ್ನು ಮಾಡಬಾರದು.)

ಸಮಾನಮೇಕಪಾತ್ರೇ ತು ಭುಞ್ಜೀನ್ನಾನ್ನಂ ಜನೇಶ್ವರ ॥೮೯॥
ನಾಲೀಢಯಾ ಪರಿಹತಂ ಭಕ್ಷಯೀತ ಕದಾಚನ ।
ತಥಾ ನೋದ್ಧೃತಸಾರಾಣಿ ಪ್ರೇಕ್ಷತೇ ನಾಪ್ರದಾಯ ಚ ॥೯೦॥

ಜನೇಶ್ವರನೇ! ಒಟ್ಟಿಗೆ ಕುಳಿತು ಒಂದೇ ತಟ್ಟೆಯಲ್ಲಿ ಊಟಮಾಡ ಬಾರದು. ರಜಸ್ವಲೆಯಾದವಳು ಮುಟ್ಟಿ ದೂಷ್ಯವಾಗಿರುವ ಅನ್ನವನ್ನು ಯಾವಾಗಲೂ ಭಕ್ಷಿಸಬಾರದು. ಸಾರವನ್ನು ತೆಗೆದಿರುವ ಪದಾರ್ಥವನ್ನು ತಿನ್ನಬಾರದು. ಯಾಚಕನೊಬ್ಬನು ನೋಡುತ್ತಿರುವಾಗ ಅವನಿಗೆ ಕೊಡದೇ ಭಕ್ಷಿಸಬಾರದು.

ನ ಸಂನಿಕೃಷ್ಟೇ ಮೇಧಾವೀ ನಾಶುಚೇರ್ನ ಚ ಸತ್ಸು ಚ ।
ಪ್ರತಿಷಿದ್ಧಾನ್ನ ಧರ್ಮೇಷು ಭಕ್ಷ್ಯಾನ್ಭುಞ್ಜೀತ ಪೃಷ್ಠತಃ ॥೯೧॥

ಮೇಧಾವಿಯಾದವನು ಅಪವಿತ್ರನಾದ ಮನುಷ್ಯನ ಹತ್ತಿರವಾಗಲೀ, ಸತ್ಪುರುಷರ ಎದುರಿನಲ್ಲಾಗಲೀ ಕುಳಿತು ಭೋಜನಮಾಡಬಾರದು. ಧರ್ಮ ಶಾಸ್ತ್ರದಲ್ಲಿ ತಿನ್ನಬಾರದೆಂದು ನಿಷೇಧಿಸಿರುವ ಭಕ್ಷ್ಯಗಳನ್ನು ಮರೆಯಲ್ಲಿಯೂ (ಮುಚ್ಚಿಟ್ಟುಕೊಂಡು) ತಿನ್ನಬಾರದು.

ಪಿಪ್ಪಲಂ ಚ ವಟಂ ಚೈವ ಶಣಶಾಕಂ ತಥೈವ ಚ ।
ಉದುಮ್ಬರಂ ನ ಖಾದೇಚ್ಚ ಭವಾರ್ಥೀ ಪುರುಷೋತ್ತಮಃ ॥೯೨॥

ತನ್ನ ಕಲ್ಯಾಣವನ್ನು ಬಯಸುವ ಶ್ರೇಷ್ಠಪುರುಷನು ಅರಳಿಯ ಹಣ್ಣನ್ನಾಗಲೀ, ಆಲದ ಹಣ್ಣನ್ನಾಗಲೀ, ಅತ್ತಿಯ ಹಣ್ಣನ್ನಾಗಲೀ, ಶಣಬಿನ ತರಕಾರಿಯನ್ನಾಗಲೀ (ನುಗ್ಗೇಕಾಯಿ) ತಿನ್ನಬಾರದು.

ಆಜಂ ಗವ್ಯಂ ತಥಾ ಮಾಂಸಂ ಮಾಯೂರಂ ಚೈವ ವರ್ಜಯೇತ್।
ವರ್ಜಯೇಚ್ಛುಷ್ಕಮಾಂಸಂ ಚ ತಥಾ ಪರ್ಯುಷಿತಂ ಚ ಯತ್ ॥

ಆಡಿನ, ಹಸುವಿನ ಮತ್ತು ನವಿಲಿನ ಮಾಂಸವನ್ನೂ, ಒಣಗಿದ ಮಾಂಸವನ್ನೂ ಹಳಸಿದ ಮಾಂಸವನ್ನೂ ಪರಿತ್ಯಜಿಸಬೇಕು.

ನ ಪಾಣೌ ಲವಣಂ ವಿದ್ವಾನ್ಪ್ರಾಶ್ನೀಯಾನ್ನ ಚ ರಾತ್ರಿಷು ।
ದಧಿಸಕ್ತೂನ್ನ ಭುಞ್ಜೀತ ವೃಥಾ ಮಾಂಸಂ ಚ ವರ್ಜಯೇತ್ ॥೯೪॥

ವಿದ್ವಾಂಸನಾದವನು ಕೈಯಲ್ಲಿಟ್ಟುಕೊಂಡು ಉಪ್ಪನ್ನೇ ಪ್ರತ್ಯೇಕವಾಗಿ ನೆಕ್ಕಬಾರದು. ರಾತ್ರಿಯಲ್ಲಿ ಮೊಸರಿನಿಂದ ಕಲಸಿದ ಹಿಟ್ಟನ್ನು (ಮೊಸರನ್ನೂ ಹಿಟ್ಟನ್ನೂ) ತಿನ್ನಬಾರದು. ಆಹಾರಾರ್ಥವಾಗಿ ಮಾಂಸವನ್ನು ತಿನ್ನುವುದನ್ನು ಬಿಡಬೇಕು.

ಸಾಯಂಪ್ರಾತಶ್ಚ ಭುಞ್ಜೀತ ನಾನ್ತರಾಲೇ ಸಮಾಹಿತಃ ।
ವಾಲೇನ ತು ನ ಭುಞ್ಜೀತ ಪರಶ್ರಾದ್ಧಂ ತಥೈವ ಚ ॥೯೫॥

ಪ್ರತಿನಿತ್ಯವೂ ಏಕಾಗ್ರಚಿತ್ತನಾಗಿ ಸಾಯಂಕಾಲ-ಪ್ರಾತಃಕಾಲಗಳಲ್ಲಿ ಮಾತ್ರವೇ ಭೋಜನಮಾಡಬೇಕು. ಒಂದು ಊಟಕ್ಕೂ ಮತ್ತೊಂದು ಊಟಕ್ಕೂ ಮಧ್ಯದಲ್ಲಿ ಏನನ್ನೂ ತಿನ್ನಬಾರದು. ಅನ್ನದಲ್ಲಿ ಕೂದಲಿದ್ದರೆ ಆ ಅನ್ನವನ್ನು ತಿನ್ನಬಾರದು. ಇತರರು ಮಾಡಿದ ಶ್ರಾದ್ಧದ ಅನ್ನಶೇಷವನ್ನು ತಿನ್ನಬಾರದು.

ವಾಗ್ಯತೋ ನೈಕವಸ್ತ್ರಶ್ಚ ನಾಸಂವಿಷ್ಟಃ ಕದಾಚನ ।
ಭೂಮೌ ಸದೈವ ನಾಶ್ನೀಯಾನ್ನಾನಾಸೀನೋ ನ ಶಬ್ದವತ್ ॥೯೬॥

ಮೌನದಿಂದ ಭೋಜನವನ್ನು ಮಾಡಬೇಕು. ಮೇಲುಹೊದ್ದಿಕೆಯಿಲ್ಲದೇ ಏಕವಸ್ತ್ರನಾಗಿ ಊಟಮಾಡಬಾರದು. ಸರಿಯಾಗಿ ಕುಳಿತುಕೊಳ್ಳದೇ ಊಟಮಾಡಬಾರದು. ಭೂಮಿಯ ಮೇಲಿಟ್ಟಿರುವ ಖಾದ್ಯವಸ್ತುಗಳನ್ನು ತಿನ್ನಬಾರದು. ನಿಂತುಕೊಂಡು ಊಟಮಾಡಬಾರದು. ಶಬ್ದಮಾಡುತ್ತಾ (ಸೂರ್-ಸೂರ್ ಎಂದು ಶಬ್ದಮಾಡಿಕೊಂಡು) ಊಟಮಾಡಬಾರದು.

ತೋಯಪೂರ್ವಂ ಪ್ರದಾಯಾನ್ನಮತಿಥಿಭ್ಯೋ ವಿಶಾಮ್ಪತೇ ।
ಪಶ್ಚಾದ್ಭುಞ್ಜೀತ ಮೇಧಾವೀ ನ ಚಾಪ್ಯನ್ಯಮನಾ ನರಃ ॥೯೭॥

ಮೇಧಾವಿಯಾದವನು ಮೊದಲು ಅತಿಥಿಗಳಿಗೆ ಅನ್ನವನ್ನೂ, ನೀರನ್ನೂ ಕೊಟ್ಟನಂತರ ಏಕಾಗ್ರಚಿತ್ತನಾಗಿ ಊಟಮಾಡಬೇಕು.

ಸಮಾನಮೇಕಪಙ್ಕ್ತ್ಯಾಂ ತು ಭೋಜ್ಯಮನ್ನಂ ನರೇಶ್ವರ ।
ವಿಷಂ ಹಾಲಾಹಲಂ ಭುಙ್ಕ್ತೇ ಯೋಽಪ್ರದಾಯ ಸುಹೃಜ್ಜನೇ ॥೯೮॥

ಪಂಕ್ತಿಯಲ್ಲಿ ಕುಳಿತಿರುವ ಎಲ್ಲರಿಗೂ ಒಂದೇ ರೀತಿಯ ಭೋಜನವನ್ನು ಮಾಡಿಸಬೇಕು. (ಪಂಕ್ತಿಭೇದಮಾಡಬಾರದು.) ಮನೆಗೆ ಆಗಮಿಸಿರುವ ತನ್ನ ಸುಹೃದರನ್ನು ಭೋಜನಕ್ಕೆ ಆಹ್ವಾನಿಸದೇ ತಾನೊಬ್ಬನೇ ಕುಳಿತು ಭೋಜನ ಮಾಡುವವನು ಹಾಲಾಹಲವಿಷವನ್ನೇ ಭೋಜನಮಾಡುತ್ತಾನೆ. (ಅವನು ಊಟಮಾಡುವ ಅನ್ನವು ವಿಷಪ್ರಾಯವಾಗುತ್ತದೆ.)

ಪಾನೀಯಂ ಪಾಯಸಂ ಸಕ್ತೂನ್ದಧಿಸರ್ಪಿರ್ಮಧೂನ್ಯಪಿ ।
ನಿರಸ್ಯ ಶೇಷಮನ್ಯೇಷಾಂ ನ ಪ್ರದೇಯಂ ತು ಕಸ್ಯಚಿತ್ ॥೯೯॥

ನೀರು, ಪಾಯಸ, ಹಿಟ್ಟು, ಮೊಸರು, ತುಪ್ಪ ಮತ್ತು ಜೇನುತುಪ್ಪ ಇವುಗಳನ್ನು ಬಿಟ್ಟು ಉಳಿದ ಭೋಜನಪದಾರ್ಥಗಳ ಅವಶೇಷವನ್ನು ಬೇರಾರಿಗೂ ಬಡಿಸಬಾರದು. ಒಬ್ಬರಿಗೆ ಬಡಿಸಿ ಅದೇ ಸೌಟಿನಲ್ಲಿರುವ ಶೇಷವನ್ನು ಇನ್ನೊಬ್ಬರಿಗೆ ಬಡಿಸಬಾರದು. (ದೊಡ್ಡಪಾತ್ರೆಯಲ್ಲಿ ಸಂಗ್ರಹಿಸಿ ರುವ ನೀರು, ಪಾಯಸ, ಹಿಟ್ಟು, ಮೊಸರು, ತುಪ್ಪ, ಜೇನುತುಪ್ಪ-ಇವುಗಳಿಗೆ ಶೇಷದೋಷವಿಲ್ಲ. ಉಳಿದ ಪದಾರ್ಥಗಳಿಗೆ ಶೇಷದೋಷವುಂಟು.)

ಭುಞ್ಜಾನೋ ಮನುಜವ್ಯಾಘ್ರ ನೈವ ಶಙ್ಕಾಂ ಸಮಾಚರೇತ್ ।
ದಧಿ ಚಾಪ್ಯನುಪಾನಂ ವೈ ನ ಕರ್ತವ್ಯಂ ಭವಾರ್ಥಿನಾ ॥೧೦೦॥

ಪುರುಷವ್ಯಾಘ್ರನೇ! ಭೋಜನಮಾಡುವಾಗ ತಾನು ತಿನ್ನುತ್ತಿರುವ ಅನ್ನದ ವಿಷಯದಲ್ಲಿ ಯಾವುದೇ ರೀತಿಯ ಶಂಕೆಯನ್ನೂ ಇಟ್ಟುಕೊಳ್ಳಬಾರದು. ಕಲ್ಯಾಣವನ್ನು ಬಯಸುವವನು ಊಟದ ಕೊನೆಯಲ್ಲಿ ಮೊಸರನ್ನು ಕುಡಿಯಬಾರದು.

ಆಚಮ್ಯ ಚೈಕಹಸ್ತೇನ ಪರಿಪ್ಲಾವ್ಯಂ ತಥೋದಕಮ್ ।
ಅಙ್ಗುಷ್ಠಂ ಚರಣಸ್ಯಾಥ ದಕ್ಷಿಣಸ್ಯಾವಸೇಚಯೇತ್ ॥೧೦೧॥

ಊಟವಾದನಂತರ ಕೈ-ಬಾಯಿಗಳನ್ನು ತೊಳೆದುಕೊಂಡು ಆಚಮನ ವನ್ನು ಮಾಡಿ ಒಂದು ಕೈಯಿಂದ (ಬಲದ ಕೈಯಿಂದ) ಬಲಗಾಲಿನ ಹೆಬ್ಬೆರಳನ್ನು ನೀರಿನಿಂದ ತೋಯಿಸಬೇಕು. (ಭೋಜನಾನಂತರ ಉತ್ತರ ಮಾಧ್ಯಾಹ್ನಿಕವನ್ನು ಮಾಡಬೇಕು. ಅದರ ಅಂಗವಾಗಿ "**ಅಂಗುಷ್ಠಮಾತ್ರಃ ಪುರುಷೋಽಂಗುಷ್ಠಂ ಚ ಸಮಾಶ್ರಿತಃ ಈಶಃ ಸರ್ವಸ್ಯ ಜಗತಃ ಪ್ರಭುಃ**

ಪ್ರೀಣಾತಿ ವಿಶ್ವಭುಕ್।'' ಎಂಬ ಮಂತ್ರದಿಂದ ಬಲಗಾಲಿನ ಹೆಬ್ಬೆರಳಿನ ಮೇಲೆ ಬಲಗೈಯಿಂದ ನೀರನ್ನು ಬಿಡಬೇಕು.)

ಪಾಣಿಂ ಮೂರ್ಧ್ನಿ ಸಮಾಧಾಯ ಸ್ಪೃಷ್ಟ್ವಾ ಚಾಗ್ನಿಂ ಸಮಾಹಿತಃ।
ಜ್ಞಾತಿಶ್ರೈಷ್ಠ್ಯಮವಾಪ್ನೋತಿ ಪ್ರಯೋಗಕುಶಲೋ ನರಃ ॥೧೦೨॥

ಪ್ರಯೋಗಕುಶಲನಾದ ಮನುಷ್ಯನು ಭೋಜನಾನಂತರದಲ್ಲಿ ಕೈಯನ್ನು ತಲೆಯಮೇಲಿಟ್ಟುಕೊಳ್ಳಬೇಕು. ಅನಂತರ ಅಗ್ನಿಯನ್ನು ಸ್ಪರ್ಶಿಸಬೇಕು. ಹೀಗೆ ಮಾಡುವುದರಿಂದ ಕುಟುಂಬದ ಜನರಲ್ಲಿ ಶ್ರೇಷ್ಠತೆಯನ್ನು ಪಡೆಯುತ್ತಾನೆ.

ಅದ್ಭಿಃ ಪ್ರಾಣಾನ್ಸಮಾಲಭ್ಯ ನಾಭಿಃ ಪಾಣಿತಲೇ ತಥಾ ।
ಸ್ಪೃಶಂಶ್ಚೈವ ಪ್ರತಿಷ್ಠೇತ ನ ಚಾಪ್ಯಾರ್ದ್ರೇಣ ಪಾಣಿನಾ ॥೧೦೩॥

ಅನಂತರ ನೀರಿನಿಂದ ಕಣ್ಣು-ಮೂಗು-ಕಿವಿಗಳೇ ಮೊದಲಾದ ಇಂದ್ರಿಯಗಳನ್ನೂ, ನಾಭಿಯನ್ನೂ, ಅಂಗೈಗಳನ್ನೂ ಸ್ಪರ್ಶಿಸಬೇಕು. (ಆಚಮನ ಮಾಡಬೇಕು.) ಕೈ ಒದ್ದೆಯಾಗಿರುವಾಗ ಹೊರಡಬಾರದು. ಕೈಯನ್ನು ವಸ್ತ್ರದಿಂದ ಚೆನ್ನಾಗಿ ಒರೆಸಿಕೊಂಡು ಪ್ರಯಾಣಮಾಡಬೇಕು.

ಅಙ್ಗುಷ್ಠಸ್ಯಾನ್ತರಾಲೇ ಚ ಬ್ರಾಹ್ಮಂ ತೀರ್ಥಮುದಾಹೃತಮ್ ।
ಕನಿಷ್ಠಿಕಾಯಾಃ ಪಶ್ಚಾತ್ತು ದೇವತೀರ್ಥಮಿಹೋಚ್ಯತೇ ॥೧೦೪॥

ಹೆಬ್ಬೆರಳಿನ ಒಳಭಾಗಕ್ಕೆ ಬ್ರಹ್ಮತೀರ್ಥವೆಂದು ಹೆಸರು. ಕಿರುಬೆರಳಿನ ಹಿಂಭಾಗಕ್ಕೆ ದೇವತೀರ್ಥವೆಂದು ಹೇಳುತ್ತಾರೆ.

ಅಙ್ಗುಷ್ಠಸ್ಯ ಚ ಯನ್ಮಧ್ಯಂ ಪ್ರದೇಶಿನ್ಯಾಶ್ಚ ಭಾರತ ।
ತೇನ ಪಿತ್ರ್ಯಾಣಿ ಕುರ್ವೀತ ಸ್ಪೃಷ್ಟ್ವಾಪೋ ನ್ಯಾಯತಃ ಸದಾ ॥೧೦೫॥

ಹೆಬ್ಬೆರಳಿಗೂ ಮತ್ತು ತೋರುಬೆರಳಿಗೂ ಮಧ್ಯದಲ್ಲಿರುವುದಕ್ಕೆ ಪಿತೃ ತೀರ್ಥವೆನ್ನುತ್ತಾರೆ. ಶಾಸ್ತ್ರದ ವಿಧಿಯಂತೆ ನೀರನ್ನು ತೆಗೆದುಕೊಂಡು ಹೆಬ್ಬೆರಳು ಮತ್ತು ತೋರುಬೆರಳುಗಳ ಮಧ್ಯದಲ್ಲಿ ತರ್ಪಣಾದಿ ಪಿತೃಕಾರ್ಯಗಳನ್ನು ಮಾಡಬೇಕು.

ಪರಾಪವಾದಂ ನ ಬ್ರೂಯನ್ನಾಪ್ರಿಯಂ ಚ ಕದಾಚನ।
ನ ಮನ್ಯುಃ ಕಶ್ಚಿದುತ್ಪಾದ್ಯಃ ಪುರುಷೇಣ ಭವಾರ್ಥಿನಾ ॥೧೦೬॥

ತನ್ನ ಕಲ್ಯಾಣವನ್ನು ಬಯಸುವವನು ಪರನಿಂದೆಯನ್ನು ಮಾಡ

ಬಾರದು. ಇತರರಿಗೆ ಅಪ್ರಿಯವಾಗುವುದನ್ನು ಹೇಳಬಾರದು. ಇತರರಿಗೆ ಕೋಪಬರುವ ಮಾತನ್ನು ಆಡಬಾರದು; ಕೋಪಬರುವ ಕಾರ್ಯವನ್ನೂ ಮಾಡಬಾರದು.

ಪತಿತೈಸ್ತು ಕಥಾಂ ನೇಚ್ಛೇದ್ದರ್ಶನಂ ಚ ವಿವರ್ಜಯೇತ್ ।
ಸಂಸರ್ಗಂ ಚ ನ ಗಚ್ಛೇತ ತಥಾಯುರ್ವಿನ್ದತೇ ಮಹತ್ ॥೧೦೭॥

ಪತಿತರಾದವರೊಡನೆ ಮಾತು-ಕತೆಗಳನ್ನಾಡಬಾರದು. ಅಂತಹವರನ್ನು ನೋಡಲೂಬಾರದು. ಅವರೊಡನೆ ಯಾವುದೇ ವಿಧವಾದ ಸಂಪರ್ಕವನ್ನೂ ಇಟ್ಟುಕೊಳ್ಳಬಾರದು. ಹೀಗೆ ಮಾಡುವುದರಿಂದ ಮನುಷ್ಯನು ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ನ ದಿವಾ ಮೈಥುನಂ ಗಚ್ಛೇನ್ನ ಕನ್ಯಾಂ ನ ಚ ಬನ್ಧಕೀಮ್ ।
ನ ಚಾಸ್ನಾತಾಂ ಸ್ತ್ರಿಯಂ ಗಚ್ಛೇತ್ತಥಾಯುರ್ವಿನ್ದತೇ ಮಹತ್ ॥೧೦೮॥

ಹಗಲಿನಲ್ಲಿ ಸ್ತ್ರೀ ಸಮಾಗಮವನ್ನು ಮಾಡಬಾರದು. ಕನ್ಯೆಯೊಡನೆ (ಋತುಮತಿಯಾಗದವಳೊಡನೆ), ವ್ಯಭಿಚಾರಿಣಿಯೊಡನೆ ಸಮಾಗಮ ಮಾಡಬಾರದು. ರಜಸ್ವಲೆಯಾಗಿ ಮೂರು ರಾತ್ರಿಗಳು ಕಳೆದು ಸ್ನಾನಮಾಡಿ ಶುದ್ಧಳಾಗದಿರುವ ಪತ್ನಿಯೊಡನೆಯೂ ಸಮಾಗಮಮಾಡಬಾರದು. ಹೀಗೆ ಮಾಡುವುದರಿಂದ ಮನುಷ್ಯನು ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಸ್ವೇ ಸ್ವೇ ತೀರ್ಥೇ ಸಮಾಚಮ್ಯ ಕಾರ್ಯೇ ಸಮುಪಕಲ್ಪಿತೇ ।
ತ್ರಿಃ ಪೀತ್ವಾಪೋ ದ್ವಿಃ ಪ್ರಮೃಜ್ಯ ಕೃತಶೌಚೋ ಭವೇನ್ನರಃ ॥೧೦೯॥

ಒಂದು ಕಾರ್ಯವು ಪ್ರಾರಂಭವಾಗುವ ಮೊದಲು ಪಾತ್ರೆಯಲ್ಲಿರುವ ನೀರಿನಿಂದ ಆಚಮನಮಾಡುತ್ತಾ ಮೂರು ಬಾರಿ ನೀರನ್ನು ಕುಡಿಯಬೇಕು. ಅನಂತರ ಎರಡು ಬಾರಿ ತುಟಿಗಳನ್ನು ತೊಳೆಯಬೇಕು. (ಒರೆಸಿಕೊಳ್ಳಬೇಕು.) ಹೀಗೆ ಮಾಡುವುದರಿಂದ ಮನುಷ್ಯನು ಶುದ್ಧನಾಗುತ್ತಾನೆ.

ಇನ್ದ್ರಿಯಾಣಿ ಸಕೃತ್ಸ್ಪೃಶ್ಯ ತ್ರಿರಭ್ಯುಕ್ಷ್ಯ ಚ ಮಾನವಃ ।
ಕುರ್ವೀತ ಪಿತ್ರ್ಯಂ ದೈವಂ ಚ ವೇದದೃಷ್ಟೇನ ಕರ್ಮಣಾ ॥೧೧೦॥

ಅನಂತರ ಕಣ್ಣು-ಕಿವಿ ಇವೇ ಮೊದಲಾದ ಇಂದ್ರಿಯಗಳೆಲ್ಲವನ್ನೂ ಸ್ಪರ್ಶಿಸಿ ಮೂರು ಬಾರಿ ನೀರಿನಿಂದ ಪ್ರೋಕ್ಷಣೆಯನ್ನು ಮಾಡಿಕೊಂಡು

ಮನುಷ್ಯನು ವೇದೋಕ್ತವಾದ ವಿಧಿಯಿಂದ ದೇವಕರ್ಮಗಳನ್ನೂ ಪಿತೃಕರ್ಮಗಳನ್ನೂ ಮಾಡಬೇಕು.

ಯುಧಿಷ್ಠಿರ! ಬ್ರಾಹ್ಮಣನ ಸಲುವಾಗಿ ಭೋಜನದ ಮೊದಲು ಮತ್ತು ಕಡೆಯಲ್ಲಿ ಪವಿತ್ರವೂ ಮತ್ತು ಹಿತಕರವೂ ಆದ ಶುದ್ಧಿಯ ವಿಧಾನವನ್ನು ಹೇಳುವೆನು; ಕೇಳು.

ಸರ್ವಶೌಚೇಷು ಬ್ರಾಹ್ಮೇಣ ತೀರ್ಥೇನ ಸಮುಪಸ್ಪೃಶೇತ್ ।
ನಿಷ್ಠೀವ್ಯ ತು ತಥಾಕ್ಷುತ್ವಾ ಸ್ಪೃಶ್ಯಾಪೋ ಹಿ ಶುಚಿರ್ಭವೇತ್ ॥೧೧೨॥

ಸಕಲವಿಧವಾದ ಶುದ್ಧಿಯ ಕಾರ್ಯಗಳಲ್ಲಿಯೂ ಬ್ರಾಹ್ಮಣನು ಬ್ರಾಹ್ಮತೀರ್ಥದಿಂದ ಆಚಮನಮಾಡಬೇಕು. ಎಂಜಲನ್ನು ಉಗಿದಾಗ ಮತ್ತು ಸೀನಿದಾಗ ಆಚಮನಮಾಡುವುದರಿಂದ ಬ್ರಾಹ್ಮಣನು ಶುದ್ಧನಾಗುತ್ತಾನೆ.

ವೃದ್ಧೋ ಜ್ಞಾತಿಸ್ತಥಾ ಮಿತ್ರಂ ದರಿದ್ರೋ ಯೋ ಭವೇದಪಿ ।
ಗೃಹೇ ವಾಸಯಿತವ್ಯಾಸ್ತೇ ಧನ್ಯಮಾಯುಷ್ಯಮೇವ ಚ ॥೧೧೩॥

ವೃದ್ಧನಾದ ಜ್ಞಾತಿ, ದರಿದ್ರನಾದ ಸ್ನೇಹಿತ–ಇವರನ್ನು ಗೃಹಸ್ಥನಾದವನು ತನ್ನ ಮನೆಯಲ್ಲಿಟ್ಟುಕೊಂಡು ಕಾಪಾಡಬೇಕು. ಅದರಿಂದ ಧನ ಮತ್ತು ಆಯುಷ್ಯಗಳು ವೃದ್ಧಿಯಾಗುತ್ತವೆ.

ಗೃಹೇ ಪಾರಾವತಾ ಧನ್ಯಾಃ ಶುಕಾಶ್ಚ ಸಹಸಾರಿಕಾಃ ।
ಗೃಹೇಷ್ವೇತೇ ನ ಪಾಪಾಯ ಯಥಾ ವೈ ತೈಲಪಾಯಿಕಾಃ ॥೧೧೪॥

ಪಾರಿವಾಳ, ಗಿಳಿ ಮತ್ತು ಮೈನಾಹಕ್ಕಿಗಳು ಮನೆಯಲ್ಲಿರುವುದರಿಂದ ಧನ-ದಾನ್ಯಗಳ ವೃದ್ಧಿಯಾಗುತ್ತದೆ. ಹೊಡೆಮೂಗುಹಕ್ಕಿ ಅಥವಾ ಜಿರಲೆಗಳಂತೆ ಇವು ಅಮಂಗಲವನ್ನುಂಟುಮಾಡತಕ್ಕುವುಗಳಲ್ಲ.

ಉದ್ದೀಪಕಾಶ್ಚ ಗೃಧ್ರಾಶ್ಚ ಕಪೋತಾ ಭ್ರಮರಾಸ್ತಥಾ ।
ನಿವಿಶೇಯುರ್ಯದಾ ತತ್ರ ಶಾನ್ತಿಮೇವ ತದಾಚರೇತ್ ।
ಅಮಙ್ಗಲ್ಯಾನಿ ಚೈತಾನಿ ತಥಾಕ್ರೋಶೋ ಮಹಾತ್ಮನಾಮ್ ॥೧೧೫॥

ಮಿಣುಕುಹುಳುಗಳು, ರಣಹದ್ದುಗಳು, ಕಪೋತಗಳು, ದುಂಬಿಗಳು

ಮನೆಯೊಳಕ್ಕೆ ಬಂದರೆ ಶಾಂತಿಯನ್ನೇ ಮಾಡಬೇಕು. ಏಕೆಂದರೆ ಅವೆಲ್ಲವೂ ಅಮಂಗಳಸೂಚಕಗಳಾದ ಪಕ್ಷಿಗಳಾಗಿವೆ. ಮಹಾತ್ಮರನ್ನು ನಿಂದಿಸುವುದೂ ಅಮಂಗಳಕ್ಕೆ ಕಾರಣವಾಗುತ್ತದೆ.

ಮಹಾತ್ಮನೋಽತಿಗುಹ್ಯಾನಿ ನ ವಕ್ತವ್ಯಾನಿ ಕರ್ಹಿಚಿತ್ ।
ಆಗಮ್ಯಾಶ್ಚ ನ ಗಚ್ಛೇತ ರಾಜ್ಞಃ ಪತ್ನೀಂ ಸಖೀಸ್ತಥಾ ॥೧೧೬॥

ಮಹಾತ್ಮರ ಅತಿಗುಹ್ಯವಾದ ವಿಷಯಗಳನ್ನು ಯಾವಾಗಲೂ ಯಾವುದೇ ಕಾರಣದಿಂದಲೂ ಬಹಿರಂಗಪಡಿಸಬಾರದು. ಪರಸ್ತ್ರೀಯರು ಯಾವಾಗಲೂ ಸಮಾಗಮಕ್ಕೆ ಅನರ್ಹರಾದವರು. ಆದುದರಿಂದ ಪರಸ್ತ್ರೀ ಸಮಾಗಮವನ್ನು ಮಾಡಬಾರದು. ರಾಜನ ಪತ್ನಿಯ ಬಳಿಗಾಗಲೀ ಅವಳ ಸಖಿಯರ ಸಮೀಪಕ್ಕಾಗಲೀ ಹೋಗಲೇಬಾರದು.

ವೈದ್ಯಾನಾಂ ಬಾಲವೃದ್ಧಾನಾಂ ಭೃತ್ಯಾನಾಂ ಚ ಯುಧಿಷ್ಠಿರ ।
ಬನ್ಧೂನಾಂ ಬ್ರಾಹ್ಮಣಾನಾಂ ಚ ತಥಾ ಶಾರಣಿಕಸ್ಯ ಚ ।
ಸಮ್ಬನ್ಧಿನಾಂ ಚ ರಾಜೇನ್ದ್ರ ತಥಾಯುರ್ವಿನ್ದತೇ ಮಹತ್ ॥೧೧೭॥

ವೈದ್ಯರ, ಬಾಲಕರ (ಎಳೆಯಪ್ರಾಯದವರ), ವೃದ್ಧರ, ಸೇವಕರ, ಬಂಧುಗಳ, ಬ್ರಾಹ್ಮಣರ, ಶರಣಾಗತರಾದವರ ಮತ್ತು ಸಂಬಂಧಿಗಳ ಪತ್ನಿಯರ ಸಮೀಪಕ್ಕೂ ಹೋಗಬಾರದು. ಹೀಗೆ ಮಾಡುವುದರಿಂದ ಮನುಷ್ಯನು ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಬ್ರಾಹ್ಮಣಸ್ಥಪತಿಭ್ಯಾಂ ಚ ನಿರ್ಮಿತಂ ಯನ್ನಿವೇಶನಮ್ ।
ತದಾವಸೇತ್ಸದಾ ಪ್ರಾಜ್ಞೋ ಭವಾರ್ಥೀ ಮನುಜೇಶ್ವರ ॥೧೧೮॥

ಔನ್ನತ್ಯವನ್ನು ಬಯಸುವವನು–ಬ್ರಾಹ್ಮಣನ ಮೂಲಕ ವಾಸ್ತುಪೂಜ ಮತ್ತು ಹೋಮಗಳನ್ನು ಮಾಡಿಸಿದ, ಸ್ಥಪತಿ (ಗೃಹಶಿಲ್ಪಿ) ಯಿಂದ ನಿರ್ಮಿಸಲ್ಪಟ್ಟ ಗೃಹದಲ್ಲಿ ವಾಸಮಾಡಬೇಕು.

ಸಂಧ್ಯಾಯಾಂ ನ ಸ್ವಪೇದ್ರಾಜನ್ವಿದ್ಯಾಂ ನ ಚ ಸಮಾಚರೇತ್ ।
ನ ಭುಞ್ಜೀತ ಚ ಮೇಧಾವೀ ತಥಾಯುರ್ವಿನ್ದತೇ ಮಹತ್ ॥೧೧೯॥

ಮೇಧಾವಿಯಾದವನು ಸಂಧ್ಯಾಕಾಲದ ಸಮಯದಲ್ಲಿ ಮಲಗಬಾರದು; ವಿದ್ಯೆಯನ್ನು ಅಭ್ಯಾಸಮಾಡಬಾರದು; ಊಟವನ್ನು ಮಾಡಬಾರದು. ಈ ನಿಯಮದಲ್ಲಿದ್ದರೆ ದೀರ್ಘಾಯುಷ್ಯವನ್ನು ಪಡೆಯುತ್ತಾನೆ.

ನಕ್ತಂ ನ ಕುರ್ಯಾತ್ಪಿತ್ರ್ಯಾಣಿ ಭುಕ್ತ್ವಾ ಚೈವ ಪ್ರಸಾಧನಮ್ ।
ಪಾನೀಯಸ್ಯ ಕ್ರಿಯಾ ನಕ್ತಂ ನ ಕಾರ್ಯಾ ಭೂತಿಮಿಚ್ಛತಾ ॥೧೨೦॥

ಆತ್ಮಕಲ್ಯಾಣವನ್ನು ಬಯಸುವವನು ರಾತ್ರಿಯಲ್ಲಿ ಶ್ರಾದ್ಧಾದಿ ಪಿತೃಕಾರ್ಯಗಳನ್ನು ಮಾಡಬಾರದು. ಊಟಮಾಡಿದನಂತರ ತಲೆಯನ್ನು ಬಾಚಿಕೊಳ್ಳಬಾರದು. ರಾತ್ರಿಯಲ್ಲಿ ಸ್ನಾನವನ್ನು ಮಾಡಬಾರದು.

ವರ್ಜನೀಯಾಶ್ಚೈವ ನಿತ್ಯಂ ಸಕ್ತವೋ ನಿಶಿ ಭಾರತ ।
ಶೇಷಾಣಿ ಚೈವ ಪಾನಾನಿ ಪಾನೀಯಂ ಚಾಪಿ ಭೋಜನೇ ॥೧೨೧॥

ರಾತ್ರಿಯಲ್ಲಿ ಯಾವುದೇ ಹಿಟ್ಟುಗಳನ್ನು ತಿನ್ನಬಾರದು. ಭೋಜನ ಕಾಲದಲ್ಲಿ ಬೇರೆಯವರು ಕುಡಿದು ಉಳಿದಿರುವ ಪಾನೀಯಗಳನ್ನಾಗಲೀ, ನೀರನ್ನಾಗಲೀ ಕುಡಿಯಬಾರದು.

ಸೌಹಿತ್ಯಂ ನ ಚ ಕರ್ತವ್ಯಂ ರಾತ್ರೌ ನ ಚ ಸಮಾಚರೇತ್ ।
ದ್ವಿಜಚ್ಛೇದಂ ನ ಕುರ್ವೀತ ಭುಕ್ತ್ವಾ ಪಾನಂ ಸಮಾಚರೇತ್ ॥೧೨೨॥

ರಾತ್ರಿಯ ವೇಳೆಯಲ್ಲಿ ಹೊಟ್ಟೆಯು ಬಿರಿಯುವಂತೆ ಊಟವನ್ನು ಮಾಡಬಾರದು; ಬೇರೆಯವರಿಗೂ ಮಾಡಿಸಬಾರದು. ಹಲ್ಲನ್ನು ಕೀಳಬಾರದು. ಊಟವಾದನಂತರ (ಕಡೆಯಲ್ಲಿ) ಮಜ್ಜಿಗೆಯನ್ನೋ ನೀರನ್ನೋ ಕುಡಿಯಬೇಕು.

ಮಹಾಕುಲೇ ಪ್ರಸೂತಾಂ ಚ ಪ್ರಶಸ್ತಾಂ ಲಕ್ಷಣೈಸ್ತಥಾ ।
ವಯಃಸ್ಥಾಂ ಚ ಮಹಾಪ್ರಾಜ್ಞಃ ಕನ್ಯಾಮಾವೋಢುಮರ್ಹತಿ ॥೧೨೩॥

ಮಹಾಪ್ರಾಜ್ಞನಾದವನು–ಶ್ರೇಷ್ಠಕುಲದಲ್ಲಿ ಹುಟ್ಟಿರುವ, ಪ್ರಶಸ್ತವಾದ ಲಕ್ಷಣಗಳಿಂದ ಕೂಡಿರುವ, ವಿವಾಹಯೋಗ್ಯವಯಸ್ಕಳಾದ ಕನ್ಯೆಯನ್ನು ವಿವಾಹವಾಗುವುದು ಯೋಗ್ಯವಾಗಿದೆ.

ಅಪತ್ಯಮುತ್ಪಾದ್ಯ ತತಃ ಪ್ರತಿಷ್ಠಾಪ್ಯ ಕುಲಂ ತಥಾ ।
ಪುತ್ರಾಃ ಪ್ರದೇಯಾ ಜ್ಞಾನೇಷು ಕುಲಧರ್ಮೇಷು ಭಾರತ ॥೧೨೪॥

ಅಂತಹ ಸತ್ಕುಲಪ್ರಸೂತೆಯಾದ ವಧುವಿನಿಂದ ಸಂತಾನವನ್ನು ಪಡೆದು ಕುಲವನ್ನು ಉದ್ಧರಿಸಿ, ನಾನಾವಿಧವಾದ ಶಾಸ್ತ್ರಜ್ಞಾನಗಳಲ್ಲಿಯೂ

ಕುಲಧರ್ಮಗಳಲ್ಲಿಯೂ ಪಾರಂಗತರನ್ನಾಗಿ ಮಾಡಲು ಮಕ್ಕಳನ್ನು ಗುರುಕುಲಕ್ಕೆ ಕಳುಹಿಸಬೇಕು.

ಕನ್ಯಾ ಚೋತ್ಪಾದ್ಯ ದಾತವ್ಯಾ ಕುಲಪುತ್ರಾಯ ಧೀಮತೇ ।
ಪುತ್ರಾ ನಿವೇಶ್ಯಾಶ್ಚ ಕುಲಾದ್ಭೃತ್ಯಾ ಲಭ್ಯಾಶ್ಚ ಭಾರತ ॥೧೨೫॥

ಹೆಣ್ಣುಮಕ್ಕಳನ್ನು ಪಡೆದು, ಧೀಮಂತನಾದ ಸತ್ಕುಲಪ್ರಸೂತನಾದ ವರನಿಗೆ ಕೊಟ್ಟು ಮದುವೆಮಾಡಬೇಕು. ಪುತ್ರರಿಗೂ ಸತ್ಕುಲಪ್ರಸೂತೆಯರಾದ ವಧುಗಳನ್ನು ತಂದು ಮದುವೆಮಾಡಬೇಕು. ಸೇವಕರನ್ನು ಸತ್ಕುಲದಿಂದಲೇ ಆರಿಸಿ ಕರೆತರಬೇಕು.

ಶಿರಃಸ್ನಾತೋಽಥ ಕುರ್ವೀತ ದೈವಂ ಪಿತ್ರ್ಯಮಥಾಪಿ ಚ ॥೧೨೬॥
ನಕ್ಷತ್ರೇ ನ ಚ ಕುರ್ವೀತ ಯಸ್ಮಿಞ್ಜಾತೋ ಭವೇನ್ನರಃ ।
ನ ಪ್ರೌಷ್ಠಪದಯೋಃ ಕಾರ್ಯಂ ತಥಾಗ್ನೇಯೇ ಚ ಭಾರತ ॥೧೨೭॥

ತಲೆಗೆ ಸ್ನಾನಮಾಡಿ ದೇವಕಾರ್ಯ-ಪಿತೃಕಾರ್ಯಗಳನ್ನು ಮಾಡಬೇಕು. ತನ್ನ ಜನ್ಮನಕ್ಷತ್ರದಲ್ಲಿಯೂ, ಪೂರ್ವಾಭಾದ್ರಪದಾ-ಉತ್ತರಾಭಾದ್ರಪದಾ ನಕ್ಷತ್ರಗಳಲ್ಲಿಯೂ–ಅಗ್ನಿಯ ನಕ್ಷತ್ರವಾದ ಕೃತ್ತಿಕೆಯಲ್ಲಿಯೂ ದೇವ-ಪಿತೃಕಾರ್ಯಗಳನ್ನು ಮಾಡಬಾರದು.

ದಾರುಣೇಷು ಚ ಸರ್ವೇಷು ಪ್ರತ್ಯರಿಂ ಚ ವಿವರ್ಜಯೇತ್ ।
ಜ್ಯೋತಿಷೇ ಯಾನಿ ಚೋಕ್ತಾನಿ ತಾನಿ ಸರ್ವಾಣಿ ವರ್ಜಯೇತ್ ॥

ದಾರುಣನಕ್ಷತ್ರಗಳಾದ ಆಶ್ಲೇಷಾ, ಆರ್ದ್ರಾ, ಜ್ಯೇಷ್ಠಾ ಮತ್ತು ಮೂಲ ನಕ್ಷತ್ರಗಳನ್ನೂ ಪರಿತ್ಯಜಿಸಬೇಕು. ಈ ನಕ್ಷತ್ರಗಳಿರುವ ದಿವಸಗಳಲ್ಲಿ ದೇವ-ಪಿತೃಕಾರ್ಯಗಳನ್ನು ಮಾಡಬಾರದು. ಪ್ರತ್ಯಕ್ತಾರೆಯಿರುವ* ನಕ್ಷತ್ರದಲ್ಲಿಯೂ ಮಾಡಬಾರದು. ಜ್ಯೋತಿಷಶಾಸ್ತ್ರದಲ್ಲಿ ದೇವ-ಪಿತೃಕಾರ್ಯಗಳಿಗೆ ಯಾವ ಯಾವ ನಕ್ಷತ್ರಗಳು ನಿಷಿದ್ಧವೆಂದು ಹೇಳಲ್ಪಟ್ಟಿರುವುವೋ- ಅಂತಹ ಎಲ್ಲ ನಕ್ಷತ್ರಗಳನ್ನೂ ಪರಿತ್ಯಜಿಸಬೇಕು.

---

*ಪ್ರತ್ಯಕ್ತಾರೆ=ಜನ್ಮನಕ್ಷತ್ರಮೊದಲ್ಗೊಂಡು ಆ ತಿಥಿಯಲ್ಲಿರುವ ನಕ್ಷತ್ರದವರೆಗೆ ಎಣಿಕೆ ಮಾಡಿ ಬಂದ ಸಂಖ್ಯೆಯನ್ನು ೯ರಿಂದ ಭಾಗಿಸಿ ಶೇಷವು ೫ ಉಳಿದರೆ ಅದಕ್ಕೆ ಪ್ರತ್ಯಕ್ತಾರೆ ಎಂದು ಹೆಸರು.

ಪ್ರಾಙ್ಮುಖಃ ಶ್ಮಶ್ರು ಕರ್ಮಾಣಿ ಕಾರಯೇತ್ಸುಸಮಾಹಿತಃ ।
ಉದಙ್ಮುಖೋ ವಾ ರಾಜೇನ್ದ್ರ ತಥಾಯುರ್ವಿನ್ದತೇ ಮಹತ್ ॥

ಪೂರ್ವಾಭಿಮುಖವಾಗಿ ಅಥವಾ ಉತ್ತರಾಭಿಮುಖವಾಗಿ ಕುಳಿತು ಏಕಾಗ್ರಚಿತ್ತನಾಗಿ ಕ್ಷೌರವನ್ನು ಮಾಡಿಸಿಕೊಳ್ಳಬೇಕು. ಅದರಿಂದ ಮನುಷ್ಯನು ದೀರ್ಘಾಯುಷ್ಯವನ್ನು ಹೊಂದುತ್ತಾನೆ.

ಪರಿವಾದಂ ನ ಚ ಬ್ರೂಯಾತ್ಪರೇಷಾಮಾತ್ಮನಸ್ತಥಾ ।
ಪರಿವಾದೋ ಹ್ಯಧರ್ಮಾಯ ಪ್ರೋಚ್ಯತೇ ಭರತರ್ಷಭ ॥೧೩೦॥

ಭರತಶ್ರೇಷ್ಠನೇ! ಯುಧಿಷ್ಠಿರ! ಪರನಿಂದೆಯನ್ನು ಮಾಡಬಾರದು. ಆತ್ಮನಿಂದನೆಯನ್ನೂ ಮಾಡಿಕೊಳ್ಳಬಾರದು. ನಿಂದೆಯು ಅಧರ್ಮಕ್ಕೆ ಕಾರಣವಾಗುತ್ತದೆಂದು ಹೇಳಲ್ಪಟ್ಟಿದೆ.

ವರ್ಜಯೇದ್ವ್ಯಙ್ಗಿನೀಂ ನಾರೀಂ ತಥಾ ಕನ್ಯಾಂ ನರೋತ್ತಮ ।
ಸಾಮಾರ್ಷಾಂ ವ್ಯಙ್ಗಿತಾಂ ಚೈವ ಮಾತುಃ ಸ್ವಕುಲಜಾಂ ತಥಾ ॥೧೩೧॥

ಅಂಗಗಳ ನ್ಯೂನತೆಯಿರುವ (ಕುರುಡಿ-ಕುಂಟಿ ಮೊದಲಾದವರು) ಕನ್ಯೆಯನ್ನೂ, ಅಂಗಗಳ ಆಧಿಕ್ಯವಿರುವ (ಆರು ಬೆರಳುಗಳು ಮುಂತಾದುವು) ಕನ್ಯೆಯನ್ನೂ ಮದುವೆಯಾಗಬಾರದು. ಸಮಾನಗೋತ್ರ-ಪ್ರವರವಿರುವವಳನ್ನೂ ಮಾತೃಕುಲದಲ್ಲಿ ಹುಟ್ಟಿದವಳನ್ನೂ ಮದುವೆಯಾಗಬಾರದು.

ವೃದ್ಧಾಂ ಪ್ರವ್ರಜಿತಾಂ ಚೈವ ತಥೈವ ಚ ಪತಿವ್ರತಾಮ್ ।
ತಥಾ ನಿಕೃಷ್ಟವರ್ಣಾಂ ಚ ವರ್ಣೋತ್ಕೃಷ್ಟಾಂ ಚ ವರ್ಜಯೇತ್ ॥

ವೃದ್ಧೆ, ಸಂನ್ಯಾಸಿನೀ, ಪತಿವ್ರತೆ, ನೀಚವರ್ಣದವಳು ಮತ್ತು ತನಗಿಂತಲೂ ಉತ್ತಮವರ್ಣದವಳು–ಇವರನ್ನು ಯಾವುದೇ ಕಾರಣದಿಂದಲೂ ಸಂಪರ್ಕಿಸಬಾರದು.

ಅಯೋನಿಂ ಚ ವಿಯೋನಿಂ ಚ ನ ಗಚ್ಛೇತ ವಿಚಕ್ಷಣಃ ।
ಪಿಙ್ಗಲಾಂ ಕುಷ್ಠಿನೀಂ ನಾರೀಂ ನ ತ್ವಮುದ್ವೋಢುಮರ್ಹಸಿ ॥೧೩೩॥

ಯಾವಳ ಕುಲ-ಗೋತ್ರಗಳು ತಿಳಿದಿಲ್ಲವೋ ಮತ್ತು ಯಾವಳು

ನೀಚಕುಲದಲ್ಲಿ ಹುಟ್ಟಿರುವಳೋ–ಅಂತಹವಳ ಸಮಾಗಮವನ್ನು ವಿದ್ವಾಂಸನಾದವನು ಮಾಡಬಾರದು. ಯುಧಿಷ್ಠಿರ! ಕಂದುಹಳದಿ ಬಣ್ಣದವಳನ್ನೂ ಕುಷ್ಠರೋಗವಿರುವವಳನ್ನೂ ಯಾವುದೇ ಕಾರಣದಿಂದಲೂ ಮದುವೆಯಾಗಬಾರದು.

ಅಪಸ್ಮಾರಿಕುಲೇ ಜಾತಾಂ ನಿಹೀನಾಂ ಚಾಪಿ ವರ್ಜಯೇತ್ ।
ಶ್ವಿತ್ರಿಣಾಂ ಚ ಕುಲೇ ಜಾತಾಂ ಕ್ಷಯಿಣಾಂ ಮನುಜೇಶ್ವರ ॥೧೩೪॥

ಅಪಸ್ಮಾರ (ಮೂರ್ಛೆ) ರೋಗವಿರುವ ಕುಲದಲ್ಲಿ ಹುಟ್ಟಿದವಳನ್ನೂ, ನೀಚಕುಲದವಳನ್ನೂ, ತೊನ್ನುರೋಗವಿರುವ ಕುಲದವಳನ್ನೂ, ಕ್ಷಯರೋಗವಿರುವ ಕುಲದವಳನ್ನೂ ಮದುವೆಯಾಗಬಾರದು.

ಲಕ್ಷಣೈರನ್ವಿತಾ ಯಾ ಚ ಪ್ರಶಸ್ತಾ ಯಾ ಚ ಲಕ್ಷಣೈಃ ।
ಮನೋಜ್ಞಾಂ ದರ್ಶನೀಯಾಂ ಚ ತಾಂ ಭವಾನ್ವೋಢುಮರ್ಹತಿ ॥

ಉತ್ತಮವಾದ ಲಕ್ಷಣಗಳಿಂದ ಯುಕ್ತಳಾದ, ಶ್ರೇಷ್ಠವಾದ ಆಚರಣೆಗಳ ಮೂಲಕ ಎಲ್ಲರ ಪ್ರಶಂಸೆಗೂ ಪಾತ್ರಳಾದ, ಮನೋಹಾರಿಣಿಯಾದ, ಸುಂದರಿಯಾದ ಕನ್ಯೆಯನ್ನು ನೀನು ವಿವಾಹಮಾಡಿಕೊಳ್ಳುವುದು ಯೋಗ್ಯವಾಗಿದೆ

ಮಹಾಕುಲೇ ನಿವೇಷ್ಟವ್ಯಂ ಸದೃಶೇ ವಾ ಯುಧಿಷ್ಠಿರ ।
ಅವರಾ ಪತಿತಾ ಚೈವ ನ ಗ್ರಾಹ್ಯಾ ಭೂತಿಮಿಚ್ಛತಾ ॥೧೩೬॥

ಆತ್ಮಕಲ್ಯಾಣವನ್ನು ಬಯಸುವ ಮನುಷ್ಯನು ತನಗಿಂತಲೂ ಶ್ರೇಷ್ಠವಾದ ಅಥವಾ ತನಗೆ ಸಮಾನವಾದ ಕುಲದ ಕನ್ಯೆಯನ್ನು ಮದುವೆಮಾಡಿಕೊಳ್ಳಬೇಕು. ತನಗಿಂತಲೂ ಹೀನವಾದ ಕುಲದವಳನ್ನಾಗಲೀ-ಪತಿತಳಾದವಳನ್ನಾಗಲೀ ಮದುವೆಯಾಗಬಾರದು.

ಅಗ್ನೀನುತ್ಪಾದ್ಯ ಯತ್ನೇನ ಕ್ರಿಯಾಃ ಸುವಿಹಿತಾಶ್ಚ ಯಾಃ ।
ವೇದೇ ಚ ಬ್ರಾಹ್ಮಣೈಃ ಪ್ರೋಕ್ತಾಸ್ತಾಶ್ಚ ಸರ್ವಾಃ ಸಮಾಚರೇತ್ ॥

ಅರಣಿಗಳನ್ನು ಕಡೆದು ಅಗ್ನಿಯನ್ನು ಉತ್ಪಾದಿಸಿ ಪ್ರತಿಷ್ಠಾಪಿಸಿ, ಬ್ರಾಹ್ಮಣರಿಂದ ಹೇಳಲ್ಪಡುವ ವೇದವಿಹಿತವಾದ ಕರ್ಮಗಳೆಲ್ಲವನ್ನೂ ಪ್ರಯತ್ನಪೂರ್ವಕವಾಗಿ ಮಾಡಿ ವಿವಾಹವನ್ನು ಮಾಡಿಕೊಳ್ಳಬೇಕು.

ನ ಚೇರ್ಷ್ಯಾ ಸ್ತ್ರೀಷು ಕರ್ತವ್ಯಾ ರಕ್ಷ್ಯಾ ದಾರಾಶ್ಚ ಸರ್ವಶಃ।
ಅನಾಯುಷ್ಯಾ ಭವೇದೀರ್ಷ್ಯಾ ತಸ್ಮಾದೀರ್ಷ್ಯಾಂ ವಿವರ್ಜಯೇತ್॥

ಸರ್ವೋಪಾಯಗಳಿಂದಲೂ ಪತ್ನಿಯನ್ನು ರಕ್ಷಿಸಬೇಕು. ಸ್ತ್ರೀಯರ ವಿಷಯದಲ್ಲಿ ಅಸಹನೆಯನ್ನು ತೋರಬಾರದು. ಅಸಹನೆಯಿಂದ ಆಯುಷ್ಯವು ಕ್ಷೀಣಿಸುತ್ತದೆ. ಆದುದರಿಂದ ಈರ್ಷ್ಯೆಯನ್ನು ಸರ್ವಥಾ ತ್ಯಜಿಸಬೇಕು.

ಅನಾಯುಷ್ಯಂ ದಿವಾ ಸ್ವಪ್ನಂ ತಥಾಭ್ಯುದಿತಶಾಯಿತಾ ।
ಪ್ರಗೇ ನಿಶಾಮಾಶು ತಥಾ ನೈವೋಚ್ಛಿಷ್ಟಾಃ ಸ್ವಪನ್ತಿ ವೈ ॥೧೩೯॥

ಹಗಲಿನಲ್ಲಿ ಮಲಗುವುದರಿಂದಲೂ-ಸೂರ್ಯೋದಯವಾದ ನಂತರವೂ ಮಲಗುವುದರಿಂದಲೂ ಆಯುಷ್ಯವು ಕ್ಷೀಣಿಸುತ್ತದೆ. ಪ್ರಾತಃ ಸಂಧ್ಯೆಯಲ್ಲಿಯೂ-ರಾತ್ರಿಯ ಆರಂಭದಲ್ಲಿಯೂ (ಸಾಯಂಸಂಧ್ಯೆ ಯಲ್ಲಿಯೂ) ಮಲಗಬಾರದು. ಸತ್ಪುರುಷರು ಅಪವಿತ್ರರಾಗಿ ರಾತ್ರಿಯಲ್ಲಿ ಮಲಗುವುದಿಲ್ಲ.

ಪಾರದಾರ್ಯಮನಾಯುಷ್ಯಂ ನಾಪಿತೋಚ್ಛಿಷ್ಟತಾ ತಥಾ।
ಯತ್ನತೋ ವೈ ನ ಕರ್ತವ್ಯಮಭ್ಯಾಸಶ್ಚೈವ ಭಾರತ ॥೧೪೦॥

ಪರಸ್ತ್ರೀಸಮಾಗಮಮಾಡುವುದೂ ಮತ್ತು ಕ್ಷುರಕರ್ಮವನ್ನು ಮಾಡಿಸಿಕೊಂಡು ಸ್ನಾನಮಾಡದೆಯೇ ಇರುವುದೂ ಆಯುಷ್ಯವನ್ನು ಕ್ಷೀಣಿಸುತ್ತವೆ. ಅಪವಿತ್ರವಾದ ಸ್ಥಾನದಲ್ಲಿ ಅಪವಿತ್ರನಾಗಿ ವೇದಾಧ್ಯಯನವನ್ನು ಮಾಡಬಾರದು.

ಸಂಧ್ಯಾಯಾಂ ಚ ನ ಭುಞ್ಜೀತ ನ ಸ್ನಾಯೇನ್ನ ತಥಾ ಪಠೇತ್ ।
ಪ್ರಯತಶ್ಚ ಭವೇತ್ತಸ್ಯಾಂ ನ ಚ ಕಿಂಚಿತ್ಸಮಾಚರೇತ್ ॥೧೪೧॥

ಸಂಧ್ಯಾಕಾಲದ ಸಮಯದಲ್ಲಿ ಸ್ನಾನವನ್ನಾಗಲೀ, ಭೋಜನವನ್ನಾಗಲೀ, ವೇದಾಧ್ಯಯನವನ್ನಾಗಲೀ ಮಾಡಬಾರದು. ಆ ಸಮಯದಲ್ಲಿ ಶುದ್ಧಚಿತ್ತನಾಗಿ ಏಕಾಗ್ರವಾದ ಮನಸ್ಸಿನಿಂದ ಧ್ಯಾನೋಪಾಸನೆಗಳನ್ನು ಮಾಡಬೇಕು. ಬೇರೆ ಯಾವ ಕಾರ್ಯವನ್ನೂ ಮಾಡಬಾರದು.

ಬ್ರಾಹ್ಮಣಾನ್ಪೂಜಯೇಚ್ಚಾಪಿ ತಥಾ ಸ್ನಾತ್ವಾ ನರಾಧಿಪ ।
ದೇವಾಂಶ್ಚ ಪ್ರಣಮೇತ್ಸ್ನಾತೋ ಗುರೂಂಶ್ಚಾಪ್ಯಭಿವಾದಯೇತ್ ॥೧೪೨॥

ಸ್ನಾನವಾದನಂತರವೇ ಬ್ರಾಹ್ಮಣರನ್ನು ಸತ್ಕರಿಸಬೇಕು. ದೇವತೆಗಳಿಗೆ ನಮಸ್ಕಾರಮಾಡಬೇಕು. ಗುರುಜನರಿಗೆ ಅಭಿವಾದನಪೂರ್ವಕವಾಗಿ ನಮಸ್ಕಾರಮಾಡಬೇಕು.

ಅನಿಮನ್ತ್ರಿತೋ ನ ಗಚ್ಛೇತ ಯಜ್ಞಂ ಗಚ್ಛೇತ ದರ್ಶಕಃ ।
ಅನರ್ಚಿತೇ ಹ್ಯನಾಯುಷ್ಯಂ ಗಮನಂ ತತ್ರ ಭಾರತ ॥೧೪೩॥

ಆಹ್ವಾನಿತನಾಗದೆ ಮನುಷ್ಯನು ಎಲ್ಲಿಗೂ ಹೋಗಬಾರದು. ಆದರೆ ಯಜ್ಞವನ್ನು ನೋಡುವ ಸಲುವಾಗಿ ಆಹ್ವಾನವಿಲ್ಲದಿದ್ದರೂ ಹೋಗಬಹುದು. ಆಹ್ವಾನವಿಲ್ಲದ ಕಡೆಗೆ ಹೋಗಿ ಆದರಿಸಲ್ಪಡದಿದ್ದರೆ ಆಯುಷ್ಯವು ಕ್ಷೀಣಿಸುತ್ತದೆ.

ನ ಚೈಕೇನ ಪರಿವ್ರಜ್ಯಂ ನ ಗನ್ತವ್ಯಂ ತಥಾ ನಿಶಿ ।
ಅನಾಗತಾಯಾಂ ಸಂಧ್ಯಾಯಾಂ ಪಶ್ಚಿಮಾಯಾಂ ಗೃಹೇ ವಸೇತ್ ॥

ಏಕಾಕಿಯಾಗಿ ಪರದೇಶಕ್ಕೆ ಹೋಗಬಾರದು. ರಾತ್ರಿಯಲ್ಲಿ ಪ್ರಯಾಣ ಮಾಡಬಾರದು. ಯಾವುದಾದರೂ ಕಾರ್ಯಕ್ಕಾಗಿ ಹೊರಗೆ ಹೋದರೆ ಸಾಯಂಕಾಲವಾಗುವ ಮೊದಲೇ ಮನೆಗೆ ಹಿಂದಿರುಗಬೇಕು.

ಮಾತುಃ ಪಿತುರ್ಗುರೂಣಾಂ ಚ ಕಾರ್ಯಮೇವಾನುಶಾಸನಮ್ ।
ಹಿತಂ ಚಾಪ್ಯಹಿತಂ ಚಾಪಿ ನ ವಿಚಾರ್ಯಂ ನರರ್ಷಭ ॥೧೪೫॥

ಮಾತಾ-ಪಿತೃ-ಗುರುಗಳ ಆಜ್ಞೆಯನ್ನು ಸಾವಕಾಶಮಾಡದೇ ಪರಿ ಪಾಲಿಸಲೇಬೇಕು. ಅವರ ಆಜ್ಞೆಯನ್ನು ಪರಿಪಾಲಿಸುವುದರಿಂದ ಹಿತ ವಾಗುವುದೇ? ಅಹಿತವಾಗುವುದೇ?–ಎಂಬುದನ್ನು ವಿಚಾರಮಾಡಲೂ ಹೋಗಬಾರದು.

ಧನುರ್ವೇದೇ ಚ ವೇದೇ ಚ ಯತ್ನಃ ಕಾರ್ಯೋ ನರಾಧಿಪ ।
ಹಸ್ತಿಪೃಷ್ಠೇಽಶ್ವಪೃಷ್ಠೇ ಚ ರಥಚರ್ಯಾಸು ಚೈವ ಹ ॥೧೪೬॥
ಯತ್ನವಾನ್ಭವ ರಾಜೇನ್ದ್ರ ಯತ್ನವಾನ್ಸುಖಮೇಧತೇ ।
ಅಪ್ರಧೃಷ್ಯಶ್ಚ ಶತ್ರೂಣಾಂ ಭೃತ್ಯಾನಾಂ ಸ್ವಜನಸ್ಯ ಚ ॥೧೪೭॥

ನರೇಶ್ವರನೇ! ಕ್ಷತ್ರಿಯನಾದವನು ಧನುರ್ವೇದದಲ್ಲಿಯೂ ವೇದ

ದಲ್ಲಿಯೂ ಪಾರಂಗತನಾಗಲು ಪ್ರಯತ್ನಿಸಬೇಕು. ಆನೆ-ಕುದುರೆಗಳ ಮೇಲೆ ಕುಳಿತು ಯುದ್ಧಮಾಡುವುದನ್ನೂ ರಥದಲ್ಲಿ ಕುಳಿತು ಯುದ್ಧಮಾಡುವುದನ್ನೂ ತಿಳಿದಿರಬೇಕು. ನೀನೂ ಪ್ರಯತ್ನಶೀಲನಾಗು. ಪ್ರಯತ್ನಶೀಲನಾದ ಮನುಷ್ಯನು ಸುಖವಾಗಿದ್ದು ವೃದ್ಧಿಯನ್ನು ಹೊಂದುತ್ತಾನೆ. ಅವನು ಶತ್ರುಗಳಿಗೂ, ಸ್ವಜನರಿಗೂ, ಸೇವಕರಿಗೂ ದುರ್ಧರ್ಷ (ಎದುರಿಸಲು ಅಸಾಧ್ಯ) ನಾಗುತ್ತಾನೆ.

ಪ್ರಜಾಪಾಲನಯುಕ್ತಶ್ಚ ನ ಕ್ಷತಿಂ ಲಭತೇ ಕ್ವಚಿತ್ ।
ಯುಕ್ತಶಾಸ್ತ್ರಂ ಚ ತೇ ಜ್ಞೇಯಂ ಶಬ್ದಶಾಸ್ತ್ರಂ ಚ ಭಾರತ ॥೧೪೮॥

ಪ್ರಜೆಗಳ ಪಾಲನೆಯಲ್ಲಿಯೇ ನಿರತನಾಗಿರುವ ರಾಜನು ಯಾವಾಗಲೂ ಹಾನಿಯನ್ನು ಹೊಂದುವುದಿಲ್ಲ. ಯುಧಿಷ್ಠಿರ! ನೀನು ತರ್ಕಶಾಸ್ತ್ರದಲ್ಲಿಯೂ ಮತ್ತು ಶಬ್ದಶಾಸ್ತ್ರ (ವ್ಯಾಕರಣ) ದಲ್ಲಿಯೂ ಸಂಪೂರ್ಣ ಜ್ಞಾನವನ್ನು ಪಡೆದುಕೊಳ್ಳಬೇಕು.

ಗಾನ್ಧರ್ವಶಾಸ್ತ್ರಂ ಚ ಕಲಾಃ ಪರಿಜ್ಞೇಯಾ ನರಾಧಿಪ ।
ಪುರಾಣಮಿತಿಹಾಸಾಶ್ಚ ತಥಾಖ್ಯಾನಾನಿ ಯಾನಿ ಚ ।
ಮಹಾತ್ಮನಾಂ ಚ ಚರಿತಂ ಶ್ರೋತವ್ಯಂ ನಿತ್ಯಮೇವ ತೇ ॥೧೪೯॥

ನರೇಶ್ವರನೇ! ನೀನು ಗಾಂಧರ್ವ (ಸಂಗೀತ) ಶಾಸ್ತ್ರವನ್ನೂ, ಎಲ್ಲ ಕಲೆಗಳನ್ನೂ ತಿಳಿದವನಾಗಿರಬೇಕು. ನೀನು ಪ್ರತಿನಿತ್ಯವೂ ಪುರಾಣೇತಿ ಹಾಸಗಳನ್ನೂ, ಉಪಾಖ್ಯಾನಗಳನ್ನೂ, ಮಹಾತ್ಮರ ಜೀವನಚರಿತ್ರೆಗಳನ್ನೂ ಕೇಳುತ್ತಲೇ ಇರಬೇಕು.

ಪತ್ನೀ ರಜಸ್ವಲಾ ಯಾ ಚ ನಾಭಿಗಚ್ಛೇನ್ನ ಚಾಹ್ವಯೇತ್ ।
ಸ್ನಾತಾಂ ಚತುರ್ಥೇ ದಿವಸೇ ರಾತ್ರೌ ಗಚ್ಛೇದ್ವಿಚಕ್ಷಣಃ ॥೧೫೦॥
ಪಞ್ಚಮೇ ದಿವಸೇ ನಾರೀ ಷಷ್ಠೇಽಹನಿ ಪುಮಾನ್ಭವೇತ್ ॥೧೫೧॥

ಪತ್ನಿಯು ರಜಸ್ವಲೆಯಾದಾಗ ಅವಳ ಸಮೀಪಕ್ಕೆ ಹೋಗಬಾರದು. ಅವಳನ್ನು ಹತ್ತಿರಕ್ಕೂ ಕರೆಯಬಾರದು. ನಾಲ್ಕನೆಯ ದಿವಸ ಸ್ನಾನಮಾಡಿದ ನಂತರ ಅಂದು ರಾತ್ರಿ ವಿದ್ವಾಂಸನಾದವನು ತನ್ನ ಪತ್ನಿಯೊಡನೆ ಸಮಾ ಗಮಮಾಡಬೇಕು. ರಜಸ್ವಲೆಯಾದ ಐದನೆಯ ದಿವಸ (ವಿಷಮದಿನದಲ್ಲಿ)

ಗರ್ಭಾಧಾನಮಾಡಿದರೆ ಹೆಣ್ಣುಮಗುವೂ ಆರನೆಯ ದಿವಸ (ಸಮದಿನದಲ್ಲಿ) ಗರ್ಭಾಧಾನಮಾಡಿದರೆ ಗಂಡುಮಗುವೂ ಹುಟ್ಟುತ್ತದೆ.

ಏತೇನ ವಿಧಿನಾ ಪತ್ನೀಮುಪಗಚ್ಛೇತ ಪಣ್ಡಿತಃ ।
ಜ್ಞಾತಿಸಮ್ಬನ್ಧಿಮಿತ್ರಾಣಿ ಪೂಜನೀಯಾನಿ ಸರ್ವಶಃ ॥೧೫೨॥

ವಿದ್ವಾಂಸನಾದವನು ಈ ವಿಧಿಗೆ ಅನುಸಾರವಾಗಿ ಪತ್ನಿಯೊಡನೆ ಸಮಾಗಮಮಾಡಬೇಕು. ಸಹೋದರರರನ್ನೂ, ನೆಂಟರನ್ನೂ, ಮಿತ್ರರನ್ನೂ ಯಾವಾಗಲೂ ಸಮಾದರಿಸಬೇಕು.

ಯಷ್ಟವ್ಯಂ ಚ ಯಥಾಶಕ್ತಿ ಯಜ್ಞೈರ್ವಿವಿಧದಕ್ಷಿಣೈಃ ।
ಅತ ಊರ್ಧ್ವಮರಣ್ಯಂ ಚ ಸೇವಿತವ್ಯಂ ನರಾಧಿಪ ॥೧೫೩॥

ನರಾಧಿಪನೇ! ತನ್ನ ಶಕ್ತಿಗೆ ಅನುಸಾರವಾಗಿ ವಿಧ-ವಿಧವಾದ ದಕ್ಷಿಣೆಗಳನ್ನೊಳಗೊಂಡ ಯಜ್ಞಗಳಿಂದ ದೇವತೆಗಳನ್ನು ಆರಾಧಿಸಬೇಕು. ಗೃಹಸ್ಥಾಶ್ರಮದ ಅವಧಿಯು ಮುಗಿದನಂತರ (ಕರ್ತವ್ಯಗಳು ಮುಗಿದನಂತರ) ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಿ ಅರಣ್ಯದಲ್ಲಿ ವಾಸಮಾಡಬೇಕು. ಯುಧಿಷ್ಠಿರ! ಹೀಗೆ ನಿನಗೆ ಆಯುಷ್ಯವನ್ನು ವೃದ್ಧಿಗೊಳಿಸುವ ನಿಯಮಗಳನ್ನು ಸಂಕ್ಷೇಪವಾಗಿ ಹೇಳಿದ್ದೇನೆ. ಇವುಗಳಲ್ಲದೇ ಇನ್ನೂ ಅನೇಕ ನಿಯಮಗಳಿವೆ. ನೀನು ಮೂರು ವೇದಗಳನ್ನೂ ತಿಳಿದಿರುವ ಜ್ಞಾನವೃದ್ಧರಿಂದ ಅವೆಲ್ಲವನ್ನೂ ತಿಳಿದುಕೊಳ್ಳಬೇಕು.

ಆಚಾರೋ ಭೂತಿಜನನ ಆಚಾರಃ ಕೀರ್ತಿವರ್ಧನಃ ।
ಆಚಾರಾದ್ವರ್ಧತೇ ಹ್ಯಾಯುರಾಚಾರೋ ಹನ್ತ್ಯಲಕ್ಷಣಮ್ ॥೧೫೪॥

ಮನುಷ್ಯನು ಯಾವಾಗಲೂ ಆಚಾರವಂತನಾಗಿರಬೇಕು. ಸದಾಚಾರವು ಮಂಗಳವನ್ನುಂಟುಮಾಡುತ್ತದೆ. ಕೀರ್ತಿಯನ್ನು ಹೆಚ್ಚಿಸುತ್ತದೆ. ಆಯುಷ್ಯವನ್ನು ಹೆಚ್ಚಿಸುತ್ತದೆ ಮತ್ತು ದುರ್ಲಕ್ಷಣಗಳನ್ನು ವಿನಾಶಗೊಳಿಸುತ್ತದೆ.

ಆಗಮಾನಾಂ ಹಿ ಸರ್ವೇಷಾಮಾಚಾರಃ ಶ್ರೇಷ್ಠ ಉಚ್ಯತೇ ।
ಆಚಾರಪ್ರಭವೋ ಧರ್ಮೋ ಧರ್ಮಾದಾಯುರ್ವಿವರ್ಧತೇ ॥೧೫೫॥

ಸದಾಚಾರವೇ ಶ್ರೇಷ್ಠವೆಂದು ಎಲ್ಲ ವೇದಗಳಲ್ಲಿಯೂ ಹೇಳಲ್ಪಟ್ಟಿದೆ. ಧರ್ಮವೆಂಬುದು ಸದಾಚಾರದಿಂದಲೇ ಹುಟ್ಟಿರುವುದು. ಧರ್ಮದಿಂದ ಆಯುಷ್ಯವು ವರ್ಧಿಸುತ್ತದೆ.

ಏತದ್ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್।
ಅನುಕಮ್ಪ್ಯ ಸರ್ವವರ್ಣಾನ್ಬ್ರಹ್ಮಣಾ ಸಮುದಾಹೃತಮ್ ॥೧೫೭॥

ಹಿಂದೆ ಬ್ರಹ್ಮನು ಎಲ್ಲ ವರ್ಣದವರ ವಿಷಯದಲ್ಲಿಯೂ ಅನುಕಂಪವನ್ನು ಹೊಂದಿ ಈ ಸದಾಚಾರಧರ್ಮವನ್ನು ಉಪದೇಶಿಸಿರುವನು. ಇದು ಕೀರ್ತಿಕರವಾದುದು; ಆಯುರ್ವರ್ಧಕವಾದುದು; ಸ್ವರ್ಗಪ್ರಾಪಕವಾದುದು; ಮನುಷ್ಯನ ಕಲ್ಯಾಣಕ್ಕೆ ಪರಮಾಶ್ರಯವಾದುದು."

ದಿ೦೪ನೆಯ ಅಧ್ಯಾಯವು ಮುಗಿಯಿತು.

೧೦೫ನೆಯ ಅಧ್ಯಾಯ ಧಾನಧರ್ಮಪರ್ವ (ಮುಂದುವರಿದಿದೆ.)

ಅಣ್ಣ-ತಮ್ಮಂದಿರ ಪರಸ್ಪರವ್ಯವಹಾರ: ಮಾತಾ-ಪಿತೃ-ಗುರುಗಳನ್ನು ಗೌರವಿಸುವ ವಿಧಾನ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಯಥಾ ಜ್ಯೇಷ್ಠಃ ಕನಿಷ್ಠೇಷು ವರ್ತತೇ ಭರತರ್ಷಭ।
ಕನಿಷ್ಠಾಶ್ಚ ಯಥಾ ಜ್ಯೇಷ್ಠೇ ವರ್ತೇರಂಸ್ತದ್ಬ್ರವೀಹಿ ಮೇ ॥೧॥

"ಭರತಶ್ರೇಷ್ಠನೇ! ಜ್ಯೇಷ್ಠಭ್ರಾತೃವು ತನ್ನ ಕನಿಷ್ಠಭ್ರಾತೃಗಳೊಡನೆ ಹೇಗೆ ವ್ಯವಹರಿಸಬೇಕು? ಕಿರಿಯರು ತಮ್ಮ ಹಿರಿಯಣ್ಣನೊಡನೆ ಹೇಗೆ ನಡೆದುಕೊಳ್ಳಬೇಕು? ಈ ವಿಷಯಗಳನ್ನು ನನಗೆ ಹೇಳು."

ಭೀಷ್ಮನು ಹೇಳುತ್ತಾನೆ:

ಜ್ಯೇಷ್ಠವತ್ತಾತ ವರ್ತಸ್ವ ಜ್ಯೇಷ್ಠೋಽಸಿ ಸತತಂ ಭವಾನ್।
ಗುರೋರ್ಗರೀಯಸೀ ವೃತ್ತಿರ್ಯಾ ಚ ಶಿಷ್ಯಸ್ಯ ಭಾರತ ॥೨॥

"ಭಾರತನೇ! ನೀನು ಎಲ್ಲರಿಗಿಂತಲೂ ಹಿರಿಯನಾಗಿರುವೆ. ಆದುದರಿಂದ ನೀನು ಜ್ಯೇಷ್ಠನಂತೆಯೇ ಯಾವಾಗಲೂ ವ್ಯವಹರಿಸಬೇಕು. ಗುರುವಿಗೆ ತನ್ನ ಶಿಷ್ಯರ ವಿಷಯದಲ್ಲಿ ಯಾವ ಅಪಾರವಾದ

ಪ್ರೀತ್ಯಾದರಗಳಿರುವುವೋ ಅದೇ ರೀತಿಯಲ್ಲಿ ನೀನೂ ನಿನ್ನ ಅನುಜರನ್ನು ಅಪಾರವಾದ ಪ್ರೀತ್ಯಾದರಗಳಿಂದ ಕಾಣಬೇಕು.

ನ ಗುರಾವಕೃತಪ್ರಜ್ಞೇ ಶಕ್ಯಂ ಶಿಷ್ಯೇಣ ವರ್ತಿತುಮ್ ।
ಗುರೋರ್ಹಿ ದೀರ್ಘದರ್ಶಿತ್ವಂ ಯತ್ತಚ್ಛಿಷ್ಯಸ್ಯ ಭಾರತ ॥೩॥

ಗುರುವಾಗಲೀ, ಹಿರಿಯಣ್ಣನಾಗಲೀ–ಪ್ರಾಜ್ಞನಾಗಿರದಿದ್ದರೆ ಶಿಷ್ಯನಾಗಲೀ, ಕಿರಿಯ ಸಹೋದರನಾಗಲೀ–ಗುರುವಿನ ಅಥವಾ ಹಿರಿಯಣ್ಣನ ಆಜ್ಞೆಯಂತೆ ನಡೆಯಲು ಸಾಧ್ಯವಾಗುವುದಿಲ್ಲ. ಗುರುವು ಅಥವಾ ಹಿರಿಯಣ್ಣನು ದೀರ್ಘದರ್ಶಿಯಾಗಿದ್ದರೆ (ವಿಚಾರಮಾಡುವ ಶಕ್ತಿಯುಳ್ಳವನಾಗಿದ್ದರೆ) ಶಿಷ್ಯನು ಅಥವಾ ಕಿರಿಯ ಸಹೋದರನು ದೀರ್ಘದರ್ಶಿಯಾಗುತ್ತಾನೆ.

ಅನ್ಧಃಸ್ಯಾದನ್ಧವೇಲಾಯಾಂ ಜಡಃ ಸ್ಯಾದಪಿ ವಾ ಬುಧಃ ।
ಪರಿಹಾರೇಣ ತದ್ಬ್ರೂಯಾದ್ಯಸ್ತೇಷಾಂ ಸ್ಯಾದ್ವ್ಯತಿಕ್ರಮಃ ॥೪॥

ಹಿರಿಯಣ್ಣನು ಕುರುಡನಾಗಬೇಕಾದ ಸಮಯಗಳಲ್ಲಿ ಕುರುಡನಂತೆಯೂ, ಜಡನಾಗಿರಬೇಕಾದಾಗ ಜಡನಂತೆಯೂ, ಕೆಲವು ಸಮಯಗಳಲ್ಲಿ ವಿದ್ವಾಂಸನಂತೆಯೂ ಇರಬೇಕಾಗುತ್ತದೆ. ತನ್ನ ಅನುಜರು ಯಾವುದಾದರೂ ಅಪರಾಧವನ್ನು ಮಾಡುತ್ತಿದ್ದರೆ ನೋಡಿದರೂ ನೋಡದವನಂತಿರಬೇಕು. ತನಗೆ ಅವನು ಅಪರಾಧಮಾಡಿದವನೆಂದು ತಿಳಿದಿದ್ದರೂ ಏನೂ ತಿಳಿಯದ ಜಡನಂತಿರಬೇಕು. ಅನುಜರು ಪುನಃ ಪುನಃ ಅಪರಾಧವನ್ನೆಸಗದಂತೆ ಸಮಯೋಚಿತವಾಗಿ ಒಳ್ಳೆಯ ಮಾತಿನಲ್ಲಿ ಅವರಿಗೆ ಬುದ್ಧಿಯನ್ನು ಹೇಳಬೇಕು.

ಪ್ರತ್ಯಕ್ಷಂ ಭಿನ್ನಹೃದಯಾ ಭೇದಯೇಯುಃ ಕೃತಂ ನರಾಃ ।
ಶ್ರಿಯಾಭಿತಪ್ತಾಃ ಕೌನ್ತೇಯ ಭೇದಕಾಮಾಸ್ತಥಾರಯಃ ॥೫॥

ಒಂದು ವೇಳೆ ಹಿರಿಯಣ್ಣನು ತಪ್ಪುಮಾಡಿದ ತಮ್ಮಂದಿರನ್ನು ಒಡನೆಯೇ ದಂಡಿಸಿದರೆ ಅವರ ಮನಸ್ಸಿನಲ್ಲಿ ಭೇದಭಾವವುಂಟಾಗುತ್ತದೆ. ಅವರು ಆ ವಿಷಯವನ್ನು ಎಲ್ಲೆಲ್ಲೂ ಪ್ರಚಾರಮಾಡುತ್ತಾರೆ. ಅಂತಹ ಸಮಯವನ್ನೇ ಕಾದಿರುವ, ಅವರ ಐಶ್ವರ್ಯವನ್ನು ನೋಡಿ ಸಹಿಸದಿರುವ

ಶತ್ರುಗಳು ಮಧ್ಯದಲ್ಲಿ ಪ್ರವೇಶಿಸಿ ಅಣ್ಣ-ತಮ್ಮಂದಿರನ್ನು ಒಡೆಯಲು ಪ್ರಯತ್ನಿಸುತ್ತಾರೆ.

ಜ್ಯೇಷ್ಠಃ ಕುಲಂ ವರ್ಧಯತಿ ವಿನಾಶಯತಿ ವಾ ಪುನಃ ।
ಹನ್ತಿ ಸರ್ವಮಪಿ ಜ್ಯೇಷ್ಠಃ ಕುಲಂ ಯತ್ರಾವಜಾಯತೇ ॥೭॥

ಹಿರಿಯಣ್ಣನು ತನ್ನ ಸುನೀತಿಯಿಂದ ಕುಲಕ್ಕೆ ಔನ್ನತ್ಯವನ್ನುಂಟು ಮಾಡುತ್ತಾನೆ. ಕೆಟ್ಟನೀತಿಯಿಂದ ಕುಲವನ್ನೇ ವಿನಾಶಗೊಳಿಸುತ್ತಾನೆ. ಯಾವಾಗ ಅವನು ನೀತಿಗೆಟ್ಟು ವ್ಯವಹರಿಸುವನೋ–ಆಗ ಸರ್ವವನ್ನೂ ನಾಶಗೊಳಿಸುತ್ತಾನೆ.

ಅಥ ಯೋ ವಿನಿಕುರ್ವೀತ ಜ್ಯೇಷ್ಠೋ ಭ್ರಾತಾ ಯವೀಯಸಃ ।
ಅಜ್ಯೇಷ್ಠಃ ಸ್ಯಾದಭಾಗಶ್ಚ ನಿಯಮ್ಯೋ ರಾಜಭಿಶ್ಚ ಸಃ ॥೮॥

ಯಾವನು ಹಿರಿಯಣ್ಣನಾಗಿದ್ದರೂ ತನ್ನ ತಮ್ಮಂದಿರೊಡನೆ ಸದ್ವ್ಯವಹಾರ ವನ್ನು ಇಟ್ಟುಕೊಂಡಿರುವುದಿಲ್ಲವೋ–ಅವನು ಅಣ್ಣನೂ ಆಗುವುದಿಲ್ಲ; ಜ್ಯೇಷ್ಠಾಂಶಕ್ಕೂ ಅಧಿಕಾರಿಯಾಗುವುದಿಲ್ಲ. ಅಂತಹವನನ್ನು ರಾಜನು ದಂಡಿಸಬೇಕು.

ನಿಕೃತೀ ಹಿ ನರೋ ಲೋಕಾನ್ಪಾಪಾನ್ಗಚ್ಛತ್ಯಸಂಶಯಮ್ ।
ವಿದುಲಸ್ಯೇವ ತತ್ಪುಷ್ಪಂ ಮೋಘಂ ಜನಯಿತುಃ ಸ್ಮೃತಮ್ ॥೯॥

ವಂಚಕನಾದ ಮನುಷ್ಯನು ನಿಸ್ಸಂದೇಹವಾಗಿ ಪಾಪಮಯವಾದ ನರಕಲೋಕಗಳನ್ನು ಹೊಂದುತ್ತಾನೆ. ಜನ್ಮದಾತನಾದ ತಂದೆಗೆ ಅಂತಹವನು ನೀರುಹಬ್ಬೇಗಿಡದ ಹೂವಿನಂತೆ ನಿರರ್ಥಕನಾಗುತ್ತಾನೆ.

ಸರ್ವಾನರ್ಥಃ ಕುಲೇ ಯತ್ರ ಜಾಯತೇ ಪಾಪಪೂರುಷಃ ।
ಅಕೀರ್ತಿಂ ಜನಯತ್ಯೇವ ಕೀರ್ತಿಮನ್ತರ್ದಧಾತಿ ಚ ॥೯॥

ಯಾವ ಕುಲದಲ್ಲಿ ಪಾಪಿಷ್ಠನು ಹುಟ್ಟುವನೋ–ಅವನು ಆ ಕುಲದಲ್ಲಿ ನಡೆಯುವ ಎಲ್ಲ ಅನರ್ಥಗಳಿಗೂ ಕಾರಣನಾಗುತ್ತಾನೆ. ಪಾಪಾತ್ಮನು ಕುಲದ ಕೀರ್ತಿಯನ್ನು ಹಾಳುಮಾಡುವುದಲ್ಲದೇ–ಅಪಯಶಸ್ಸನ್ನೂ ಉಂಟು ಮಾಡುತ್ತಾನೆ.

ಸರ್ವೇ ಚಾಪಿ ವಿಕರ್ಮಸ್ಥಾ ಭಾಗಂ ನಾರ್ಹನ್ತಿ ಸೋದರಾಃ ।
ನಾಪ್ರದಾಯ ಕನಿಷ್ಠೇಭ್ಯೋ ಜ್ಯೇಷ್ಠಃ ಕುರ್ವೀತ ಯೌತಕಮ್ ॥೧೦॥

ನಿಷಿದ್ಧಕರ್ಮಾಚರಣೆಯಲ್ಲಿ ತೊಡಗಿರುವ ಎಲ್ಲ ಸಹೋದರರೂ ಪಿತ್ರಾರ್ಜಿತವಾದ ಆಸ್ತಿಯ ಭಾಗಕ್ಕೆ ಅಧಿಕಾರಿಗಳಾಗುವುದಿಲ್ಲ. ಹಿರಿಯಣ್ಣನು ಕಿರಿಯರಿಗೆ ಪಿತ್ರಾರ್ಜಿತವಾದ ಆಸ್ತಿಯನ್ನು ಭಾಗಮಾಡಿಕೊಡದೇ ತಾನೇ ಭಾಗವನ್ನು ತೆಗೆದುಕೊಳ್ಳಬಾರದು.

ಅನುಪಘ್ನನ್ಪಿತುರ್ದಾಯಂ ಜಙ್ಘಾಶ್ರಮಫಲೋಽಧ್ವಗಃ ।
ಸ್ವಯಮೀಹೇತ ಲಬ್ಧಂ ತು ನಾಕಾಮೋ ದಾತುಮರ್ಹತಿ ॥೧೧॥

ಹಿರಿಯಣ್ಣನು ಪಿತ್ರಾರ್ಜಿತವಾದ ಆಸ್ತಿಗೆ ಯಾವ ಹಾನಿಯನ್ನೂ ಉಂಟುಮಾಡದೇ ಪರದೇಶಕ್ಕೆ ಹೋಗಿ ತನ್ನ ಕಾಲಿನ ಶ್ರಮದಿಂದ (ಶರೀರ ಶ್ರಮದಿಂದ) ಧನವನ್ನು ಸಂಪಾದಿಸಿದರೆ–ಅದು ಸ್ವಯಾರ್ಜಿತವಾದ ಧನವಾಗುತ್ತದೆ. ಅಂತಹ ವಿತ್ತವನ್ನು, ಜ್ಯೇಷ್ಠಭ್ರಾತೃವಿಗೆ ಅಪೇಕ್ಷೆಯಿಲ್ಲದಿದ್ದರೆ ತನ್ನ ಸಹೋದರರಿಗೆ ಹಂಚಿಕೊಡಬೇಕಾಗಿಲ್ಲ.

ಭ್ರಾತೃಣಾಮವಿಭಕ್ತಾನಾಮುತ್ಥಾನಮಪಿ ಚೇತ್ಸಹ ।
ನ ಪುತ್ರಭಾಗಂ ವಿಷಮಂ ಪಿತಾ ದದ್ಯಾತ್ಕದಾಚನ ॥೧೨॥

ಪಿತ್ರಾರ್ಜಿತವಾದ ಆಸ್ತಿಯಲ್ಲಿ ಯಾವ ವಿಭಾಗವೂ ಆಗದೇ ಸಹೋದರರೆಲ್ಲರೂ ಒಟ್ಟಾಗಿ ಸೇರಿ ದುಡಿದು ಆಸ್ತಿಯನ್ನು ವೃದ್ಧಿಪಡಿಸಿದ್ದರೆ– ತಂದೆಯಾದವನು ಎಲ್ಲ ಮಕ್ಕಳಿಗೂ ಸಮವಾಗಿ ಆಸ್ತಿಯನ್ನು ಹಂಚಿಕೊಡಬೇಕೇ ಹೊರತು ಯಾವುದೇ ಕಾರಣದಿಂದಲೂ ತಾರತಮ್ಯವನ್ನು ಮಾಡಬಾರದು.

ನ ಜ್ಯೇಷ್ಠೋ ವಾವಮನ್ಯೇತ ದುಷ್ಕೃತಃ ಸುಕೃತೋಽಪಿ ವಾ ।
ಯದಿ ಸ್ತ್ರೀ ಯದ್ಯವರಜಃ ಶ್ರೇಯಶ್ಚೇತ್ತತ್ತದಾಚರೇತ್ ।
ಧರ್ಮಂ ಹಿ ಶ್ರೇಯ ಇತ್ಯಾಹುರಿತಿ ಧರ್ಮವಿದೋ ಜನಾಃ ॥೧೩॥

ಕಿರಿಯ ಸಹೋದರನು ಕೆಟ್ಟವನೇ ಆಗಿರಲಿ; ಒಳ್ಳೆಯವನೇ ಆಗಿರಲಿ, ಹಿರಿಯಣ್ಣನು ಅವನನ್ನು ಅವಮಾನಿಸಬಾರದು. ತಂಗಿಯಾಗಲೀ, ತಮ್ಮನಾಗಲೀ ಅವರಿಗೆ ಶ್ರೇಯಸ್ಸುಂಟಾಗುವ ರೀತಿಯಲ್ಲಿ ಹಿರಿಯಣ್ಣನು ನಡೆದುಕೊಳ್ಳಬೇಕು. ಧರ್ಮವನ್ನು ತಿಳಿದ ಮಹಾತ್ಮರು ಧರ್ಮವೇ ಶ್ರೇಯಸ್ಸಿಗೆ ಸಾಧನವೆಂದು ಹೇಳುತ್ತಾರೆ.

ದಶಾಚಾರ್ಯಾನುಪಾಧ್ಯಾಯ ಉಪಧ್ಯಾಯಾನ್ಪಿತಾ ದಶ ।
ದಶಚೈವ ಪಿತೄನ್ಮಾತಾ ಸರ್ವಾಂ ವಾ ಪೃಥಿವೀಮಪಿ ॥೧೪॥
ಗೌರವೇಣಾಭಿಭವತಿ ನಾಸ್ತಿ ಮಾತೃಸಮೋ ಗುರುಃ ॥೧೫॥

ಗೌರವದಲ್ಲಿ ಹತ್ತು ಆಚಾರ್ಯರಿಗೆ ಒಬ್ಬ ಉಪಾಧ್ಯಾಯನು ಸಮಾನನು. ಹತ್ತು ಉಪಾಧ್ಯಾಯರಿಗೆ ಒಬ್ಬ ತಂದೆಯು ಸಮಾನನು. ಹತ್ತು ಜನ ತಂದೆಗಳಿಗೆ ಒಬ್ಬ ತಾಯಿಯು ಸಮಾನಳು. ತಾಯಿಯು ಗೌರವದಲ್ಲಿ ಸಮಗ್ರವಾದ ಭೂಮಿಯ ಗೌರವವನ್ನೂ ಮೀರಿಸಿರುವಳು. ಆದುದರಿಂದ ತಾಯಿಗೆ ಸಮಾನರಾದ ಗುರುವು ಬೇರೊಬ್ಬರಿಲ್ಲ.

ಮಾತಾ ಗರೀಯಸೀ ಯಚ್ಚ ತೇನೈತಾಂ ಮನ್ಯತೇ ಜನಃ ।
ಜ್ಯೇಷ್ಠೋ ಭ್ರಾತಾ ಪಿತೃಸಮೋ ಮೃತೇ ಪಿತರಿ ಭಾರತ ॥೧೬॥

ತಾಯಿಯು ಎಲ್ಲರಿಗಿಂತಲೂ ಅಧಿಕವಾದ ಗೌರವವುಳ್ಳವಳು. ಆದುದರಿಂದಲೇ ಜನರು ತಾಯಿಯನ್ನು ವಿಶೇಷವಾಗಿ ಸಮಾದರಿಸುತ್ತಾರೆ. ತಂದೆಯು ಸತ್ತುಹೋದನಂತರ ಹಿರಿಯಣ್ಣನೇ ತಂದೆಗೆ ಸಮಾನನಾಗಿರುತ್ತಾನೆ. ಕಿರಿಯರೆಲ್ಲರೂ ಹಿರಿಯಣ್ಣನನ್ನೇ ತಂದೆಯೆಂದು ಭಾವಿಸಬೇಕು.

ಸಹ್ಯೇಷಾಂ ವೃತ್ತಿದಾತಾ ಸ್ಯಾತ್ಸ ಚೈತನ್ಪ್ರತಿಪಾಲಯೇತ್ ।
ಕನಿಷ್ಠಾಸ್ತಂ ನಮಸ್ಯೇರನ್ಸರ್ವೇ ಛನ್ದಾನುವರ್ತಿನಃ ।
ತಮೇವ ಚೋಪಜೀವೇರನ್ಯಥೈವ ಪಿತರಂ ತಥಾ ॥೧೭॥

ಹಿರಿಯಣ್ಣನು ತನ್ನ ಅನುಜರೆಲ್ಲರಿಗೂ ಜೀವನವೃತ್ತಿಯನ್ನು ಒದಗಿಸಿ ಕೊಟ್ಟು ಪರಿಪಾಲಿಸಬೇಕು. ಅನುಜರು ಕೂಡ ಅಣ್ಣನ ಎದುರಿನಲ್ಲಿ ತಲೆತಗ್ಗಿಸಿಕೊಂಡಿರಬೇಕು ಮತ್ತು ಅವನ ಇಚ್ಛೆಗೆ ಅನುಸಾರವಾಗಿ ನಡೆದುಕೊಳ್ಳಬೇಕು. ತಂದೆಯು ಬದುಕಿದ್ದಾಗ ಅವನ ವಿಷಯದಲ್ಲಿ ನಡೆದುಕೊಳ್ಳುತ್ತಿದ್ದಂತೆಯೇ ತಂದೆಯ ಕಾಲವಾದನಂತರ ಹಿರಿಯಣ್ಣನ ವಿಷಯದಲ್ಲಿಯೂ ನಡೆದುಕೊಳ್ಳುತ್ತಾ ಅವನನ್ನು ಆಶ್ರಯಿಸಿಕೊಂಡಿದ್ದು ಜೀವನನಿರ್ವಹಣೆಮಾಡಬೇಕು.

ಶರೀರಮೇತೌ ಸೃಜತಃ ಪಿತಾ ಮಾತಾ ಚ ಭಾರತ ।
ಆಚಾರ್ಯಶಾಸ್ತಾ ಯಾ ಜಾತಿಃ ಸಾ ಸತ್ಯಾ ಸಾಜರಾಮರಾ ॥೧೮॥

ತಂದೆ-ತಾಯಿಗಳು ಈ ಶರೀರವನ್ನು ಮಾತ್ರವೇ ಸೃಷ್ಟಿಸಿರುತ್ತಾರೆ. ಆದರೆ ಆಚಾರ್ಯನಿಂದ ಯಾವ ಜ್ಞಾನಯುಕ್ತವಾದ ಜನ್ಮವು ಹುಟ್ಟುವುದೋ–ಅದೇ ಮುಪ್ಪಿಲ್ಲದ ಮತ್ತು ಸಾವಿಲ್ಲದ ಜನ್ಮವಾಗಿರುತ್ತದೆ.

ಜ್ಯೇಷ್ಠಾ ಮಾತೃಸಮಾ ಚಾಪಿ ಭಗಿನೀ ಭರತರ್ಷಭ ।
ಭ್ರಾತೃಭಾರ್ಯಾ ಚ ತದ್ವಾತ್ಸ್ಯಾದ್ಯಸ್ಯಾ ಬಾಲ್ಯೇ ಸ್ತನಂ ಪಿಬೇತ್ ॥೧೯॥

ಭರತಶ್ರೇಷ್ಠನೇ! ಹಿರಿಯಕ್ಕನೂ ತಾಯಿಗೆ ಸಮಾನಳು. ಹಿರಿಯಣ್ಣನ ಭಾರ್ಯೆಯೂ ಮತ್ತು ಬಾಲ್ಯದಲ್ಲಿ ಹಾಲುಣಿಸಿ ಸಾಕಿದವಳೂ ತಾಯಿಗೆ ಸಮಾನರು."

೧೦೫ನೆಯ ಅಧ್ಯಾಯವು ಮುಗಿಯಿತು.

೧೦೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಮಾಸ-ಪಕ್ಷ ಮತ್ತು ತಿಥಿಗಳಿಗೆ ಸಂಬಂಧಿಸಿದಂತೆ ವಿವಿಧ ವ್ರತೋಪವಾಸಗಳ ಫಲಗಳ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಸರ್ವೇಷಾಮೇವ ವರ್ಣಾನಾಂ ಮ್ಲೇಚ್ಛಾನಾಂ ಚ ಪಿತಾಮಹ ।
ಉಪವಾಸೇ ಮತಿರಿಯಂ ಕಾರಣಂ ಚ ನ ವಿದ್ಮಹೇ ॥೧॥

"ಪಿತಾಮಹನೇ! ಸರ್ವವರ್ಣದವರೂ ಮತ್ತು ಮ್ಲೇಚ್ಛಜಾತಿಯವರೂ ಉಪವಾಸಮಾಡಬಯಸುತ್ತಾರೆ. ಆದರೆ ಇದಕ್ಕೆ ಕಾರಣವನ್ನು ನಾವು ತಿಳಿದವರಾಗಿಲ್ಲ.

ಬ್ರಾಹ್ಮಣರೂ ಮತ್ತು ಕ್ಷತ್ರಿಯರೂ ನಿಯಮಪೂರ್ವಕವಾಗಿ ವ್ರತಗಳನ್ನು ಅನುಷ್ಠಾನಮಾಡಬೇಕೆಂದು ಕೇಳಿದ್ದೇವೆ. ಆದರೆ ಹೀಗೆ ಮಾಡುವುದರಿಂದ ಅವರಿಗೆ ಯಾವ ಪ್ರಯೋಜನವಿದೆ? ಪಾರ್ಥಿವನೇ! ನೀನು ದಯಮಾಡಿ ಸಂಪೂರ್ಣನಿಯಮಗಳುಳ್ಳ ಉಪವಾಸಗಳ ವಿಧಿಯನ್ನು ಹೇಳು. ಉಪವಾಸವನ್ನೇ ಆಶ್ರಯಿಸಿರತಕ್ಕವನು ಯಾವ ಗತಿಯನ್ನು ಹೊಂದುತ್ತಾನೆ?

ಉಪವಾಸಃ ಪರಂ ಪುಣ್ಯಮುಪವಾಸಃ ಪರಾಯಣಮ್ ।
ಉಪೋಷ್ಯೇಹ ನರಶ್ರೇಷ್ಠ ಕಿಂ ಫಲಂ ಪ್ರತಿಪದ್ಯತೇ ॥೪॥

ಉಪವಾಸಪರಾಯಣರು ಉಪವಾಸವ್ರತವೇ ಮಹಾಪುಣ್ಯದಾಯಕವೆಂದೂ-ಉಪವಾಸವೇ ಪರಮಾಶ್ರಯವೆಂದೂ ಹೇಳುತ್ತಾರೆ. ಈ ಲೋಕದಲ್ಲಿ ಉಪವಾಸಮಾಡಿದವನು ಯಾವ ಫಲವನ್ನು ಹೊಂದುತ್ತಾನೆ? ಮನುಷ್ಯನು ಯಾವ ಕಾರ್ಯವನ್ನು ಮಾಡುವುದರಿಂದ ಪಾಪವಿಮುಕ್ತನಾಗುತ್ತಾನೆ? ಹೇಗೆ ಧರ್ಮವನ್ನು ಹೊಂದುತ್ತಾನೆ? ಪುಣ್ಯವನ್ನೂ ಸ್ವರ್ಗವನ್ನೂ ಹೇಗೆ ಪಡೆದುಕೊಳ್ಳುತ್ತಾನೆ? ಉಪವಾಸಮಾಡಿ ಮನುಷ್ಯನು ಯಾವ ವಸ್ತುವನ್ನು ದಾನವಾಗಿ ಕೊಡಬೇಕು? ಯಾವ ಧರ್ಮಾಚರಣೆಯಿಂದ ಮನುಷ್ಯನು ಸುಖವನ್ನೂ ಧನವನ್ನೂ ಪಡೆದುಕೊಳ್ಳುತ್ತಾನೆ? ಈ ಎಲ್ಲ ವಿಷಯಗಳನ್ನೂ ನನಗೆ ಹೇಳು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಹೀಗೆ ಪ್ರಶ್ನಿಸಿದ, ಧರ್ಮದ ರಹಸ್ಯವನ್ನು ತಿಳಿದಿದ್ದ, ಧರ್ಮಜ್ಞನಾದ, ಕುಂತಿಯ ಮಗನಾದ ಧರ್ಮಪುತ್ರನನ್ನು ಕುರಿತು ಶಂತನುವಿನ ಮಗನಾದ ಭೀಷ್ಮನು ಹೇಳಿದನು:

"ಭರತಶ್ರೇಷ್ಠನೇ! ಯುಧಿಷ್ಠಿರ! ಉಪವಾಸಮಾಡುವುದರಲ್ಲಿ ಎಂತಹ ಶ್ರೇಷ್ಠವಾದ ಗುಣಗಳಿವೆಯೆಂಬ ಪುರಾತನವಾದ ಕಥನಗಳನ್ನು ನಾನು ಹಿಂದೆಯೇ ಹೇಳಿದ್ದೆನು. ಇಂದು ನೀನು ನನ್ನನ್ನು ಪ್ರಶ್ನಿಸಿದ್ದಂತೆಯೇ ಹಿಂದೆ ನಾನು ತಪೋಧನನಾದ ಅಂಗಿರಸಮಹರ್ಷಿಯನ್ನು ಪ್ರಶ್ನಿಸಿದ್ದೆನು. ನನ್ನ ಪ್ರಶ್ನೆಗೆ ಉತ್ತರವಾಗಿ ಪೂಜ್ಯನಾದ, ಅಗ್ನಿಪುತ್ರನಾದ ಅಂಗಿರಸನು ಪುಣ್ಯತಮವಾದ ಉಪವಾಸವಿಧಿಯನ್ನು ನನಗೆ ಹೇಳಿದನು:

ಬ್ರಹ್ಮಕ್ಷತ್ರೇ ತ್ರಿರಾತ್ರಂ ತು ವಿಹಿತಂ ಕುರುನನ್ದನ ।
ದ್ವಿಸ್ತ್ರಿರಾತ್ರಮಥೈಕಾಹಂ ನಿರ್ದಿಷ್ಟಂ ಪುರುಷರ್ಷಭ ॥೧೧॥

ಬ್ರಾಹ್ಮಣರೂ ಮತ್ತು ಕ್ಷತ್ರಿಯರೂ ಮೂರು ರಾತ್ರಿಗಳು ಉಪವಾಸ ಮಾಡಬೇಕೆಂದು ವಿಹಿತವಾಗಿದೆ. ಕೆಲವು ಸಮಯಗಳಲ್ಲಿ ಏಳುದಿವಸಗಳು ಉಪವಾಸಮಾಡಬೇಕೆಂದೂ ನಿರ್ದಿಷ್ಟವಾಗಿದೆ.

ವೈಶ್ಯಾಃ ಶೂದ್ರಾಶ್ಚ ಯನ್ಮೋಹಾದುಪವಾಸಂ ಪ್ರಚಕ್ರಿರೇ ।
ತ್ರಿರಾತ್ರಂ ವಾ ದ್ವಿರಾತ್ರಂ ವಾ ತಯೋರ್ವ್ಯುಷ್ಟಿರ್ನ ವಿದ್ಯತೇ ॥೧೨॥

ವೈಶ್ಯರೂ ಮತ್ತು ಶೂದ್ರರೂ ಮೋಹಪರವಶರಾಗಿ ಮೂರು ಅಥವಾ ಎರಡು ರಾತ್ರಿಗಳು ಉಪವಾಸವಿರುವುದರಿಂದ ಅವರಿಗೆ ಯಾವ ವಿಧವಾದ ಫಲವೂ ಲಭಿಸುವುದಿಲ್ಲ.

ಚತುರ್ಥಭುಕ್ತಕ್ಷಪಣಂ ವೈಶ್ಯೇ ಶೂದ್ರೇ ವಿಧೀಯತೇ ।
ತ್ರಿರಾತ್ರಂ ನ ತು ಧರ್ಮಜ್ಞೈರ್ವಿಹಿತಂ ಧರ್ಮದರ್ಶಿಭಿಃ ॥೧೩॥

ವೈಶ್ಯರಿಗೂ ಮತ್ತು ಶೂದ್ರರಿಗೂ ನಾಲ್ಕನೆಯ ಊಟವನ್ನು ಬಿಡಬೇಕೆಂಬುದು ಶಾಸ್ತ್ರದ ವಿಧಿಯಾಗಿದೆ. (ನಾಲ್ಕನೆಯ ಊಟವೆಂದರೆ : ಹಗಲು ರಾತ್ರಿ ಮತ್ತು ಹಗಲು ಊಟಮಾಡಿ ಎರಡನೆಯ ದಿನದ ರಾತ್ರಿಯಲ್ಲಿ ಉಪವಾಸವಿರುವುದು. ಹೀಗೆಯೇ ಪುನಃ ಹಗಲು, ರಾತ್ರಿ ಮತ್ತು ಹಗಲುಗಳಲ್ಲಿ ಮೂರು ಊಟಗಳನ್ನು ಮಾಡಿ ಎರಡನೆಯ ರಾತ್ರಿ ಉಪವಾಸವಿರುವುದು. ಇದಕ್ಕೆ ಚತುರ್ಥಭುಕ್ತಕ್ಷಪಣ–ನಾಲ್ಕನೆಯ ಊಟದ ವಿನಾಶ ಎಂದು ಹೆಸರು.) ಅದು ಹೊರತಾಗಿ ಅವಿಚ್ಛಿನ್ನವಾಗಿ ಎರಡು ಅಥವಾ ಮೂರು ರಾತ್ರಿಗಳು ವೈಶ್ಯ-ಶೂದ್ರರು ಉಪವಾಸಮಾಡುವುದು ಧರ್ಮದರ್ಶಿಗಳಾದ ಧರ್ಮಜ್ಞರಿಂದ ವಿಹಿತವಾಗಿಲ್ಲ.

ಪಞ್ಚಮ್ಯಾಂ ವಾಪಿ ಷಷ್ಠ್ಯಾಂ ಚ ಪೌರ್ಣಮಾಸ್ಯಾಂ ಚ ಭಾರತ ।
ಉಪೋಷ್ಯ ಏಕಭಕ್ತೇನ ನಿಯತಾತ್ಮಾ ಜಿತೇನ್ದ್ರಿಯಃ ॥೧೪॥
ಕ್ಷಮಾವಾನ್ರೂಪಸಂಪನ್ನಃ ಶ್ರುತವಾಂಶ್ಚೈವ ಜಾಯತೇ ।
ನಾನಪತ್ಯೋ ಭವೇತ್ಪ್ರಾಜ್ಞೋ ದರಿದ್ರೋ ವಾ ಕದಾಚನ ॥೧೫॥

ಪಂಚಮೀ, ಷಷ್ಠೀ ಮತ್ತು ಹುಣ್ಣಿಮೆಗಳಲ್ಲಿ ಒಂದೇ ಹೊತ್ತು ಊಟಮಾಡುತ್ತಾ ಮನಸ್ಸನ್ನೂ ಮತ್ತು ಇಂದ್ರಿಯಗಳನ್ನೂ ಹತೋಟಿಯಲ್ಲಿಟ್ಟುಕೊಂಡು ರಾತ್ರಿಯಲ್ಲಿ ಉಪವಾಸವಿರುವವನು ಜನ್ಮಾಂತರದಲ್ಲಿ ಕ್ಷಮಾವಂತನಾಗಿಯೂ, ರೂಪಸಂಪನ್ನನಾಗಿಯೂ, ವಿದ್ಯಾವಂತನಾಗಿಯೂ ಹುಟ್ಟುತ್ತಾನೆ. ಅಂತಹ ಪ್ರಾಜ್ಞನು ಮಕ್ಕಳಿಲ್ಲದವನೂ ಆಗುವುದಿಲ್ಲ. ದರಿದ್ರನೂ ಆಗುವುದಿಲ್ಲ.

ಯಜಿಷ್ಣುಃ ಪಞ್ಚಮೀಂ ಷಷ್ಠೀಂ ಕುಲೇ ಭೋಜಯತೇ ದ್ವಿಜಾನ್ ।
ಅಷ್ಟಮೀಮಥ ಕೌರವ್ಯ ಕೃಷ್ಣಪಕ್ಷೇ ಚತುರ್ದಶೀಮ್ ।
ಉಪೋಷ್ಯ ವ್ಯಾಧಿರಹಿತೋ ವೀರ್ಯವಾನಭಿಜಾಯತೇ ॥೧೬॥

ಕೌರವನೇ! ದೇವತೆಗಳನ್ನು ಪೂಜಿಸಲು ಬಯಸುವ ಯಾವನು

ಪಂಚಮೀ, ಷಷ್ಠೀ, ಅಷ್ಟಮೀ ಮತ್ತು ಕೃಷ್ಣಪಕ್ಷದ ಚತುರ್ದಶೀ–ಈ ದಿವಸಗಳಲ್ಲಿ ತನ್ನ ಮನೆಯಲ್ಲಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ತಾನು ಉಪವಾಸದಿಂದಿರುವನೋ–ಅವನು ರೋಗರಹಿತನಾಗಿಯೂ ವೀರ್ಯವಂತನಾಗಿಯೂ ಹುಟ್ಟುತ್ತಾನೆ.

ಮಾರ್ಗಶೀರ್ಷಂ ತು ಯೋ ಮಾಸಮೇಕಭಕ್ತೇನ ಸಂಕ್ಷಿಪೇತ್ ।
ಭೋಜಯೇಚ್ಚ ದ್ವಿಜಾಞ್ಶಕ್ತ್ಯಾ ಸ ಮುಚ್ಯೇದ್ವ್ಯಾಧಿಕಿಲ್ಬಿಷೈಃ ॥೧೭॥

ಯಾವನು ಮಾರ್ಗಶೀರ್ಷಮಾಸದಲ್ಲಿ ಒಪ್ಪತ್ತು ಊಟವನ್ನು ಮಾಡುತ್ತಾ ತನ್ನ ಶಕ್ತಿಗೆ ಅನುಸಾರವಾಗಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸುವನೋ–ಅವನು ರೋಗಗಳಿಂದಲೂ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಸರ್ವಕಲ್ಯಾಣಸಮ್ಪೂರ್ಣಃ ಸರ್ವೌಷಧಿಸಮನ್ವಿತಃ ।
ಉಪೋಷ್ಯ ವ್ಯಾಧಿರಹಿತೋ ವೀರ್ಯವಾನಭಿಜಾಯತೇ ॥೧೮॥
ಕೃಷಿಭಾಗೀ ಬಹುಧನೋ ಬಹುಧಾನ್ಯಶ್ಚ ಜಾಯತೇ ॥೧೯॥

ಮಾರ್ಗಶೀರ್ಷಮಾಸದಲ್ಲಿ ಉಪವಾಸಮಾಡುವ ಮನುಷ್ಯನು ಸರ್ವಮಂಗಳಸಂಪನ್ನನಾಗಿರುತ್ತಾನೆ ಮತ್ತು ಅನ್ನ-ಫಲಾದಿಗಳಿಂದ ಸಮೃದ್ಧನಾಗಿರುತ್ತಾನೆ. ಜನ್ಮಾಂತರದಲ್ಲಿಯೂ ಅವನು ರೋಗರಹಿತನಾಗಿಯೂ ವೀರ್ಯವಂತನಾಗಿಯೂ ಹುಟ್ಟುತ್ತಾನೆ. ಗದ್ದೆ-ತೋಟ ಇವೇ ಮೊದಲಾದ ಕ್ಷೇತ್ರಗಳುಳ್ಳವನಾಗಿಯೂ, ಬಹುಧನವಂತನಾಗಿಯೂ, ಧಾನ್ಯವಂತನಾಗಿಯೂ ಇರುತ್ತಾನೆ.

ಪೌಷಮಾಸಂ ತು ಕೌನ್ತೇಯ ಭಕ್ತೇನೈಕೇನ ಯಃ ಕ್ಷಿಪತ್ ।
ಸುಭಗೋ ದರ್ಶನೀಯಶ್ಚ ಯಶೋಭಾಗೀ ಚ ಜಾಯತೇ ॥೨೦॥

ಪುಷ್ಯಮಾಸವನ್ನು ದಿನಕ್ಕೊಂದು ಬಾರಿ ಭೋಜನಮಾಡುತ್ತಾ ಯಾವನು ಕಳೆಯುವನೋ–ಅವನು ಜನ್ಮಾಂತರದಲ್ಲಿ ಐಶ್ವರ್ಯವಂತನೂ, ಸುಂದರನೂ, ಯಶೋವಂತನೂ ಆಗುತ್ತಾನೆ.

ಮಾಘಂ ತು ನಿಯತೋ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಶ್ರೀಮತ್ಕುಲೇ ಜ್ಞಾತಿಮಧ್ಯೇ ಸ ಮಹತ್ತ್ವಂ ಪ್ರಪದ್ಯತೇ ॥೨೧॥

ಯಾವನು ಮಾಘಮಾಸವನ್ನು ಏಕಭಕ್ತದ ನಿಯಮದಿಂದ ಕಳೆಯುವನೋ–ಅವನು ಅವಸಾನಾನಂತರ ಶ್ರೀಮಂತಕುಲದಲ್ಲಿ ಹುಟ್ಟಿ ಜ್ಞಾತಿಗಳ ಮಧ್ಯದಲ್ಲಿ ಮಹತ್ತ್ವವನ್ನು ಹೊಂದುತ್ತಾನೆ.

ಭಗದೈವತಮಾಸಂ ತು ಏಕಭಕ್ತೇನ ಯಃ ಕ್ಷಿಪೇತ್ ।
ಸ್ತ್ರೀಷು ವಲ್ಲಭತಾಂ ಯಾತಿ ವಶ್ಯಾಶ್ಚಾಸ್ಯ ಭವನ್ತಿ ತಾಃ ॥೨೨॥

ಸೂರ್ಯದೇವತಾತ್ಮಕವಾದ ಫಾಲ್ಗುಣಮಾಸವನ್ನು ಯಾವನು ಒಪ್ಪತ್ತು ಊಟಮಾಡುತ್ತಾ ಕಳೆಯುವನೋ–ಅವನು ಸ್ತ್ರೀಯರಿಗೆ ಪ್ರಿಯನಾಗುತ್ತಾನೆ ಮತ್ತು ಸ್ತ್ರೀಯರು ಅವನಿಗೆ ವಶರಾಗುತ್ತಾರೆ.

ಚೈತ್ರಂ ತು ನಿಯತೋ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಸುವರ್ಣಮಣಿಮುಕ್ತಾಢ್ಯೇ ಕುಲೇ ಮಹತಿ ಜಾಯತೇ ॥೨೩॥

ಚೈತ್ರಮಾಸವನ್ನು ಯಾವನು ದಿನಕ್ಕೆ ಒಪ್ಪತ್ತು ಊಟಮಾಡುವ ನಿಯಮದಿಂದ ಕಳೆಯುವನೋ–ಅವನು ಸುವರ್ಣದಿಂದಲೂ ಮುತ್ತು-ಮಣಿಗಳಿಂದಲೂ ಸಮೃದ್ಧವಾದ ಮಹಾಕುಲದಲ್ಲಿ ಹುಟ್ಟುತ್ತಾನೆ.

ನಿಸ್ತರೇದೇಕಭಕ್ತೇನ ವೈಶಾಖಂ ಯೋ ಜಿತೇನ್ದ್ರಿಯಃ ।
ನರೋ ವಾ ಯದಿ ವಾ ನಾರೀ ಜ್ಞಾತೀನಾಂ ಶ್ರೇಷ್ಠತಾಂ ವ್ರಜೇತ್॥

ಜಿತೇಂದ್ರಿಯರಾಗಿ ದಿನಕ್ಕೆ ಒಪ್ಪತ್ತಿನ ಊಟದಿಂದ ವೈಶಾಖಮಾಸವನ್ನು ಕಳೆಯುವ ಸ್ತ್ರೀಯಾಗಲೀ ಪುರುಷನಾಗಲೀ–ಜ್ಞಾತಿಗಳಲ್ಲಿ ಶ್ರೇಷ್ಠತ್ವವನ್ನು ಪಡೆಯುತ್ತಾರೆ.

ಜ್ಯೇಷ್ಠಾಮೂಲಂ ತು ಯೋ ಮಾಸಮೇಕಭಕ್ತೇನ ಸಂಕ್ಷಿಪೇತ್ ।
ಐಶ್ವರ್ಯಮತುಲಂ ಶ್ರೇಷ್ಠಂ ಪುಮಾನ್ ಸ್ತ್ರೀ ವಾ ಪ್ರಪದ್ಯತೇ ॥೨೫॥

ಯಾರು ದಿನಕ್ಕೆ ಒಪ್ಪತ್ತು ಊಟಮಾಡುತ್ತಾ ಜ್ಯೇಷ್ಠಮಾಸವನ್ನು ಕಳೆಯುವರೋ–ಅವರು ಪುರುಷರಾಗಲೀ, ಸ್ತ್ರೀಯರಾಗಲೀ ಅಪಾರವಾದ ಮತ್ತು ಶ್ರೇಷ್ಠವಾದ ಐಶ್ವರ್ಯವನ್ನು ಹೊಂದುತ್ತಾರೆ.

ಆಷಾಢಮೇಕಭಕ್ತೇನ ಸ್ಥಿತ್ವಾ ಮಾಸಮತನ್ದ್ರಿತಃ ।
ಬಹುಧಾನ್ಯೋ ಬಹುಧನೋ ಬಹುಪುತ್ರಶ್ಚ ಜಾಯತೇ ॥೨೬॥

ಯಾವನು ಆಲಸ್ಯವನ್ನು ತೊರೆದು ಆಷಾಢಮಾಸವನ್ನು ದಿನಕ್ಕೆ ಒಪ್ಪತ್ತಿನ ಊಟದಿಂದ ಕಳೆಯುವನೋ–ಅವನು ಅವಸಾನಾನಂತರದಲ್ಲಿ ಬಹುಧಾನ್ಯ ವಂತನಾಗಿಯೂ, ಬಹುಧನವಂತನಾಗಿಯೂ, ಬಹುಪುತ್ರವಂತನಾಗಿಯೂ ಹುಟ್ಟುತ್ತಾನೆ.

ಶ್ರಾವಣಂ ನಿಯತೋ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಯತ್ರ ತತ್ರಾಭಿಷೇಕೇಣ ಯುಜ್ಯತೇ ಜ್ಞಾತಿವರ್ಧನಃ ॥೨೭॥

ಯಾವನು ನಿಯಮದಿಂದ ದಿನಕ್ಕೆ ಒಪ್ಪತ್ತು ಊಟಮಾಡುತ್ತಾ ಬೇರೆ-ಬೇರೆ ತೀರ್ಥಗಳಲ್ಲಿ ಸ್ನಾನಮಾಡುತ್ತಾ ಶ್ರಾವಣಮಾಸವನ್ನು ಕಳೆಯುವನೋ–ಅವನು ಪುಣ್ಯವನ್ನು ಗಳಿಸಿಕೊಳ್ಳುತ್ತಾನೆ ಮತ್ತು ಕುಟುಂಬದ ಜನರ ಅಭಿವೃದ್ಧಿಗೆ ಕಾರಣನಾಗುತ್ತಾನೆ.

ಪ್ರೌಷ್ಠಪದಂ ತು ಯೋ ಮಾಸಮೇಕಾಹಾರೋ ಭವೇನ್ನರಃ ।
ಗವಾಢ್ಯಂ ಸ್ಫೀತಮಚಲಮೈಶ್ವರ್ಯಂ ಪ್ರತಿಪದ್ಯತೇ ॥೨೮॥

ಯಾವನು ದಿನಕ್ಕೆ ಒಪ್ಪತ್ತು ಊಟಮಾಡುತ್ತಾ ಭಾದ್ರಪದಮಾಸವನ್ನು ಕಳೆಯುವನೋ ಅವನು ಗೋಧನದಿಂದ ಸಂಪನ್ನನಾಗುತ್ತಾನೆ. ಸ್ಥಿರವಾದ ಮತ್ತು ಸಮೃದ್ಧವಾದ ಐಶ್ವರ್ಯವನ್ನು ಹೊಂದುತ್ತಾನೆ.

ತಥೈವಾಶ್ವಯುಜಂ ಮಾಸಮೇಕಭಕ್ತೇನ ಯಃ ಕ್ಷಿಪೇತ್ ।
ಮೃಜಾವಾನ್ವಾಹನಾಢ್ಯಶ್ಚ ಬಹುಪುತ್ರಶ್ಚ ಜಾಯತೇ ॥೨೯॥

ಅದೇ ರೀತಿಯಲ್ಲಿ ಯಾವನು ಆಶ್ವಯುಜಮಾಸವನ್ನು ದಿನಕ್ಕೆ ಒಪ್ಪತ್ತಿನ ಊಟದಿಂದ ಕಳೆಯುವನೋ ಅವನು ಮರುಹುಟ್ಟಿನಲ್ಲಿ ಪರಿಶುದ್ಧನೂ, ವಾಹನಗಳ ಸಮೃದ್ಧಿಯುಳ್ಳವನೂ, ಬಹುಪುತ್ರವಂತನೂ ಆಗುತ್ತಾನೆ.

ಕಾರ್ತಿಕಂ ತು ನರೋ ಮಾಸಂ ಯಃ ಕುರ್ಯಾದೇಕಭೋಜನಮ್ ।
ಶೂರಶ್ಚ ಬಹುಭಾರ್ಯಶ್ಚ ಕೀರ್ತಿಮಾಂಶ್ಚೈವ ಜಾಯತೇ ॥೩೦॥

ಯಾವನು ಕಾರ್ತಿಕಮಾಸವನ್ನು ಏಕಭೋಜನವನ್ನಾಗಿ ಮಾಡು ವನೋ (ಕಾರ್ತಿಕಮಾಸಪೂರ್ತಿಯಾಗಿ ದಿನಕ್ಕೆ ಒಂದುಹೊತ್ತು ಮಾತ್ರ

ಊಟಮಾಡಿಕೊಂಡಿರುವನೋ)–ಅವನು ಮರುಹುಟ್ಟಿನಲ್ಲಿ ಶೂರನೂ, ಬಹುಭಾರ್ಯವಂತನೂ ಮತ್ತು ಕೀರ್ತಿವಂತನೂ ಆಗುತ್ತಾನೆ.

ಯುಧಿಷ್ಠಿರ! ಹೀಗೆ ನಾನು ನಿನಗೆ ಒಂದೊಂದು ಮಾಸದಲ್ಲಿಯೂ ದಿನಕ್ಕೆ ಒಪ್ಪತ್ತು ಊಟಮಾಡಿಕೊಂಡಿದ್ದರೆ ಪ್ರಾಪ್ತವಾಗುವ ಫಲವನ್ನು ಹೇಳಿದೆನು. ಇನ್ನು ಮುಂದೆ ಒಂದೊಂದು ತಿಥಿಯಲ್ಲಿಯೂ ಯಾವ ನಿಯಮದಿಂದ ಉಪವಾಸಮಾಡಬೇಕೆಂಬುದನ್ನೂ–ಅದರ ಫಲಗಳನ್ನೂ ಹೇಳುತ್ತೇನೆ.

ಪಕ್ಷೇ ಪಕ್ಷೇ ಗತೇ ಯಸ್ತು ಭಕ್ತಮಶ್ನಾತಿ ಭಾರತ ।
ಗವಾಢ್ಯೋ ಬಹುಪುತ್ರಶ್ಚ ಬಹುಭಾರ್ಯಃ ಸ ಜಾಯತೇ ॥೩೨॥

ಪ್ರತಿಪಕ್ಷದಲ್ಲಿಯೂ ಯಾವನು ಒಂದೇ ಹೊತ್ತು ಊಟಮಾಡುವನೋ ಅಂತಹವನು ಜನ್ಮಾಂತರದಲ್ಲಿ ಗೋಸಮೃದ್ಧಿಯುಳ್ಳವನೂ ಬಹುಪುತ್ರನೂ ಬಹುಭಾರ್ಯೆಯರಿಂದ ಕೂಡಿದವನೂ ಆಗುತ್ತಾನೆ.

(ಹಿಂದಿನ ಶ್ಲೋಕಗಳಲ್ಲಿ ಪ್ರತ್ಯೇಕವಾಗಿ ಒಂದೊಂದು ಮಾಸದ ಫಲಗಳನ್ನು ಹೇಳಿದೆ. ಈ ಶ್ಲೋಕದಲ್ಲಿ ಮಾಸದ ವಿವೇಚನೆಯೇ ಇಲ್ಲದೇ ಪ್ರತಿ ಪಕ್ಷಗಳಲ್ಲಿಯೂ ಎಂದರೆ ಅನವರತವಾಗಿ–ಎಂಬ ಅರ್ಥವನ್ನು ಇಟ್ಟುಕೊಳ್ಳಬಹುದಾಗಿದೆ. ಇಲ್ಲಿ ಏಕಭಕ್ತವೆಂದು ಹೇಳಿರದಿದ್ದರೂ ಅನುವರ್ತಿಯಾಗಿ ಬಂದಿರುವುದರಿಂದ ಏಕಭಕ್ತವೆಂದು ಇಟ್ಟುಕೊಳ್ಳಬಹುದಾಗಿದೆ. ಅದು ಹೊರತಾಗಿ ಹದಿನೈದು ದಿವಸಗಳಿಗೊಮ್ಮೆ ಊಟವೆಂಬ ಅರ್ಥವು ಸರಿಯಾಗಿ ಕಾಣುವುದಿಲ್ಲ. ಅಷ್ಟು ದಿವಸಗಳು ಉಪವಾಸವಿದ್ದರೆ ಯಾವ ಕರ್ಮಗಳನ್ನೂ ಮಾಡುವುದಕ್ಕಾಗುವುದಿಲ್ಲ. ಶರೀರಧಾರಣೆಯೂ ಕಷ್ಟವೇ ಆಗುತ್ತದೆ. ಮುಂದೆ ಹದಿನೈದು ದಿವಸಗಳಿಗೊಮ್ಮೆ ಊಟಮಾಡುವ ವಿಶೇಷನಿಯಮವ್ರತವೂ ನಿರೂಪಿತವಾಗಿದೆ. ಆದರೆ ಇಲ್ಲಿನದನ್ನು ಸಾಮಾನ್ಯನಿಯಮವೆಂದು ಭಾವಿಸಬಹುದು.)

ಮಾಸಿ ಮಾಸಿ ತ್ರಿರಾತ್ರಾಣಿ ಕೃತ್ವಾ ವರ್ಷಾಣಿ ದ್ವಾದಶ ।
ಗಣಾಧಿಪತ್ಯಂ ಪ್ರಾಪ್ನೋತಿ ನಿಃಸಪತ್ನಮನಾವಿಲಮ್ ॥೩೩॥

ಪ್ರತಿಮಾಸದಲ್ಲಿಯೂ ಮೂರು-ಮೂರು ರಾತ್ರಿಗಳು ಉಪವಾಸ

ವಿರುತ್ತಾ ಹನ್ನೆರಡು ವರ್ಷಗಳನ್ನು ಕಳೆದರೆ–ನಿಷ್ಕಂಟಕವಾದ ಮತ್ತು ನಿರ್ಮಲವಾದ ಶಿವನ ಗಣಗಳ ಆಧಿಪತ್ಯವನ್ನು (ಒಡೆತನವನ್ನು) ಹೊಂದುತ್ತಾನೆ.

ಏತೇ ತು ನಿಯಮಾಃ ಸರ್ವೇ ಕರ್ತವ್ಯಾಃ ಶರದೋ ದಶ ।
ದ್ವೇ ಚಾನ್ಯೇ ಭರತಶ್ರೇಷ್ಠ ಪ್ರವರ್ತಿಮನುವರ್ತತಾ ॥೩೪॥

ಪ್ರವರ್ತಿಮಾರ್ಗವನ್ನು ಅನುಸರಿಸುವವನು ಈ ಎಲ್ಲ ನಿಯಮಗಳನ್ನೂ ಹನ್ನೆರಡು ವರ್ಷಗಳವರೆಗೆ ಪರಿಪಾಲಿಸಬೇಕು.

ಯಸ್ತು ಪ್ರಾತಸ್ತಥಾ ಸಾಯಂ ಭುಞ್ಜಾನೋ ನಾನ್ತರಾ ಪಿಬೇತ್ ।
ಅಹಿಂಸಾನಿರತೋ ನಿತ್ಯಂ ಜುಹ್ವಾನೋ ಜಾತವೇದಸಮ್ ॥೩೫॥
ಷಡ್ಭಿಃ ಸ ವರ್ಷೈರ್ನೃಪತೇ ಸಿಧ್ಯತೇ ನಾತ್ರ ಸಂಶಯಃ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೩೬॥

ಯಾವನು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ ಮಾತ್ರವೇ ಊಟಮಾಡುತ್ತಾ ಮಧ್ಯದಲ್ಲಿ ಏನನ್ನೂ ಕುಡಿಯುವುದಿಲ್ಲವೋ, ಅಹಿಂಸಾ ನಿರತನಾಗಿರುವನೋ, ಅಗ್ನಿಹೋತ್ರವನ್ನು ಮಾಡುವನೋ–ಅಂತಹವನು ಆರುವರ್ಷಗಳಲ್ಲಿಯೇ ಸಿದ್ಧಿಯನ್ನು ಹೊಂದುವನು. ಇದರಲ್ಲಿ ಸಂದೇಹವೇ ಇಲ್ಲ. ಆ ಮನುಷ್ಯನು ಅಗ್ನಿಷ್ಟೋಮಯಾಗಮಾಡಿದ ಫಲವನ್ನೂ ಪಡೆದುಕೊಳ್ಳುತ್ತಾನೆ.

ಅಧಿವಾಸೇ ಸೋಽಪ್ಸರಸಾಂ ನೃತ್ಯಗೀತವಿನಾದಿತೇ ।
ರಮತೇ ಸ್ತ್ರೀಸಹಸ್ರಾಢ್ಯೇ ಸುಕೃತೀ ವಿರಜೋ ನರಃ ॥೩೭॥

ಸುಕೃತಿಯಾದ, ರಜೋಗುಣದಿಂದ ರಹಿತನಾದ ಅಂತಹ ಮನುಷ್ಯನು ಸಾವಿರಾರು ಸ್ತ್ರೀಯರಿಂದ ತುಂಬಿರುವ, ನೃತ್ಯ-ಗೀತಗಳಿಂದ ನಿನಾದಿತ ವಾಗುತ್ತಿರುವ ಅಪ್ಸರೆಯರ ಅರಮನೆಯಲ್ಲಿ ರಮಿಸುತ್ತಿರುತ್ತಾನೆ.

ತಪ್ತಕಾಞ್ಚನವರ್ಣಾಭಂ ವಿಮಾನಮಧಿರೋಹತಿ ।
ಪೂರ್ಣಂ ವರ್ಷಸಹಸ್ರಂ ಚ ಬ್ರಹ್ಮಲೋಕೇ ಮಹೀಯತೇ ।
ತತ್ ಕ್ಷಯಾದಿಹ ಚಾಗಮ್ಯ ಮಾಹಾತ್ಮ್ಯಂ ಪ್ರತಿಪದ್ಯತೇ ॥೩೮॥

ಪುಟಕ್ಕೆ ಹಾಕಿದ ಚಿನ್ನಕ್ಕೆ ಸಮಾನವಾದ ಕಾಂತಿಯಿಂದ ಕೂಡಿರುವ ವಿಮಾನವನ್ನು ಏರುತ್ತಾನೆ. ಒಂದುಸಾವಿರ ವರ್ಷಗಳು ಪೂರ್ತಿಯಾಗಿ

ಬ್ರಹ್ಮಲೋಕದಲ್ಲಿ ಸಮ್ಮಾನಿತನಾಗಿ ವಾಸಮಾಡುತ್ತಿರುತ್ತಾನೆ. ಪುಣ್ಯವೆಲ್ಲವೂ ಕಳೆದ ಬಳಿಕ ಪುನಃ ಅವನು ಈ ಲೋಕಕ್ಕೆ ಬಂದರೂ ತನ್ನ ಬಾಂಧವರಲ್ಲಿ ಮಹತ್ತ್ವಪೂರ್ಣವಾದ ಸ್ಥಾನವನ್ನು ಹೊಂದುತ್ತಾನೆ.

ಯಸ್ತು ಸಂವತ್ಸರಂ ಪೂರ್ಣಮೇಕಾಹಾರೋ ಭವೇನ್ನರಃ ।
ಅತಿರಾತ್ರಸ್ಯ ಯಜ್ಞಸ್ಯ ಸ ಫಲಂ ಸಮುಪಾಶ್ನುತೇ ॥೩೯॥
ದಶವರ್ಷಸಹಸ್ರಾಣಿ ಸ್ವರ್ಗೇ ಸ ಮಹೀಯತೇ ।
ತತ್ಕ್ಷಯಾದಿಹಚಾಗಮ್ಯ ಮಾಹಾತ್ಮ್ಯಂ ಪ್ರತಿಪದ್ಯತೇ ॥೪೦॥

ಯಾವ ಮನುಷ್ಯನು ಒಂದು ವರ್ಷ ಪೂರ್ತಿಯಾಗಿ ದಿನಕ್ಕೆ ಒಪ್ಪತ್ತು ಊಟಮಾಡಿಕೊಂಡಿರುವನೋ–ಅವನು ಅತಿರಾತ್ರಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಅವಸಾನಾನಂತರದಲ್ಲಿ ಹತ್ತು ಸಾವಿರ ವರ್ಷಗಳವರೆಗೆ ಸ್ವರ್ಗದಲ್ಲಿ ಸಮ್ಮಾನಿತನಾಗಿ ವಾಸಮಾಡುತ್ತಿರುತ್ತಾನೆ. ಪುಣ್ಯವು ಕ್ಷಯಿಸಿದನಂತರ ಪುನಃ ಈ ಲೋಕಕ್ಕೆ ಬಂದು ಜ್ಞಾತಿಗಳ ಮಧ್ಯದಲ್ಲಿ ಮಹತ್ತ್ವದ ಸ್ಥಾನವನ್ನು ಹೊಂದುತ್ತಾನೆ.

ಯಸ್ತು ಸಂವತ್ಸರಂ ಪೂರ್ಣಂ ಚತುರ್ಥಂ ಭುಕ್ತಮಶ್ನುತೇ ।
ಅಹಿಂಸಾನಿರತೋ ನಿತ್ಯಂ ಸತ್ಯವಾಗ್ವಿಜಿತೇನ್ದ್ರಿಯಃ ॥೪೧॥
ವಾಜಪೇಯಸ್ಯ ಯಜ್ಞಸ್ಯ ಸ ಫಲಂ ಸಮುಪಾಶ್ನುತೇ ।
ದಶವರ್ಷಸಹಸ್ರಾಣಿ ಸ್ವರ್ಗಲೋಕೇ ಮಹೀಯತೇ ॥೪೨॥

ಯಾವನು ಒಂದು ವರ್ಷದವರೆಗೆ ನಾಲ್ಕನೆಯ ಊಟವನ್ನು ಮಾತ್ರವೇ ಮಾಡುವನೋ (ಎರಡು ದಿವಸಗಳಿಗೊಮ್ಮೆ ಒಪ್ಪತ್ತು ಊಟಮಾಡು ವನೋ), ಅಹಿಂಸಾವ್ರತನಿಷ್ಠನಾಗಿರುವನೋ, ಸತ್ಯನಿಷ್ಠನಾಗಿರುವನೋ, ಜಿತೇಂದ್ರಿಯನಾಗಿರುವನೋ–ಅವನು ವಾಜಪೇಯಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಅವಸಾನಾನಂತರದಲ್ಲಿ ಹತ್ತುಸಾವಿರ ವರ್ಷಗಳು ಸ್ವರ್ಗಲೋಕದಲ್ಲಿ ಸರ್ವರಿಂದಲೂ ಸಮ್ಮಾನಿತನಾಗಿ ವಾಸಮಾಡುತ್ತಿರುತ್ತಾನೆ.

ಷಷ್ಠೇ ಕಾಲೇ ತು ಕೌನ್ತೇಯ ನರಃ ಸಂವತ್ಸರಂ ಕ್ಷಿಪನ್ ।
ಅಶ್ವಮೇಧಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೪೩॥

ಚಕ್ರವಾಕಪ್ರಯುಕ್ತೇನ ವಿಮಾನೇನ ಸ ಗಚ್ಛತಿ ।
ಚತ್ವಾರಿಂಶತ್ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೪೪॥

ಕುಂತೀಪುತ್ರನೇ! ಯಾವನು ಆರನೆಯ ಹೊತ್ತು ಮಾತ್ರವೇ ಊಟ ಮಾಡುತ್ತಾ ಒಂದು ವರ್ಷವನ್ನು ಕಳೆಯುವನೋ (ಮೂರುದಿವಸಗಳಿಗೊಮ್ಮೆ ಒಪ್ಪತ್ತು ಊಟಮಾಡುವನೋ)-ಅಂತಹ ಮನುಷ್ಯನು ಅಶ್ವಮೇಧಯಾಗ ವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಅವಸಾನಾನಂತರದಲ್ಲಿ ಚಕ್ರವಾಕಪಕ್ಷಿಗಳು ಹೊತ್ತ ವಿಮಾನದಲ್ಲಿ ಕುಳಿತು ಸ್ವರ್ಗಕ್ಕೆ ಹೋಗಿ ಅಲ್ಲಿ ನಲವತ್ತು ಸಾವಿರ ವರ್ಷಗಳವರೆಗೆ ಆನಂದದಿಂದಿರುತ್ತಾನೆ.

ಅಷ್ಟಮೇನ ತು ಭಕ್ತೇನ ಜೀವನ್ಸಂವತ್ಸರಂ ನೃಪ ।
ಗವಾಮಯಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೪೫॥

ಹಂಸಸಾರಸಯುಕ್ತೇನ ವಿಮಾನೇನ ಸ ಗಚ್ಛತಿ ।
ಪಞ್ಚಾಶತಂ ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೪೬॥

ಎಂಟನೆಯ ಹೊತ್ತು (ನಾಲ್ಕು ದಿವಸಗಳಿಗೊಮ್ಮೆ ಒಂದುಸಲ) ಮಾತ್ರವೇ ಊಟ ಮಾಡುತ್ತಾ ಒಂದು ವರ್ಷವನ್ನು ಕಳೆಯುವವನು ಗವಾಮಯ ಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಅವಸಾನಾನಂತರದಲ್ಲಿ ಹಂಸಪಕ್ಷಿಗಳಿಂದಲೂ-ಸಾರಸಪಕ್ಷಿಗಳಿಂದಲೂ ಒಯ್ಯಲ್ಪಡುವ ವಿಮಾನದಲ್ಲಿ ಸ್ವರ್ಗಕ್ಕೆ ಹೋಗಿ ಐವತ್ತು ಸಾವಿರ ವರ್ಷಗಳ ಕಾಲ ಅಲ್ಲಿ ಆನಂದದಿಂದಿರುತ್ತಾನೆ.

ಪಕ್ಷೇ ಪಕ್ಷೇ ಗತೇ ರಾಜನ್ಯೋಽಶ್ನೀಯಾದ್ವರ್ಷಮೇವ ತು ।
ಷಣ್ಮಾಸಾನಶನಂ ತಸ್ಯ ಭಗವಾನಙ್ಗಿರಾಬ್ರವೀತ್ ॥೪೭॥

ಹದಿನೈದು ದಿವಸಗಳಿಗೊಮ್ಮೆ ಒಪ್ಪತ್ತು ಊಟಮಾಡುತ್ತಾ ಯಾವನು ಒಂದು ವರ್ಷವನ್ನು ಕಳೆಯುವನೋ–ಅವನಿಗೆ ಆರು ತಿಂಗಳು ನಿರಶನ ವ್ರತವನ್ನು ಮಾಡಿದ ಫಲವು ಲಭಿಸುವುದೆಂದು ಪೂಜ್ಯನಾದ ಅಂಗಿರಸನು ಹೇಳಿದ್ದಾನೆ.

ಷಷ್ಟಿರ್ವರ್ಷಸಹಸ್ರಾಣಿ ದಿವಮಾವಸತೇ ಚ ಸಃ ।
ವೀಣಾನಾಂ ವಲ್ಲಕೀನಾಂ ಚ ವೇಣೂನಾಂ ಚ ವಿಶಾಂಪತೇ ॥೪೮॥
ಸುಘೋಷೈರ್ಮಧುರೈಃ ಶಬ್ದೈಃ ಸುಪ್ತಃ ಸ ಪ್ರತಿಬೋಧ್ಯತೇ ॥೪೯॥

ಹದಿನೈದು ದಿವಸಗಳಿಗೊಮ್ಮೆ ಊಟಮಾಡುತ್ತಾ ವರ್ಷವನ್ನು ಕಳೆಯುವವನು ಅರುವತ್ತು ಸಾವಿರ ವರ್ಷಗಳವರೆಗೆ ಸ್ವರ್ಗದಲ್ಲಿ ವಾಸ ಮಾಡುತ್ತಾನೆ. ಅಲ್ಲಿ ಮಲಗಿರುವಾಗ ವೀಣಾ-ವಲ್ಲಕೀ-ವೇಣುಗಳ ಸುಮಧುರಶಬ್ದಗಳಿಂದ ಅವನು ಎಚ್ಚರಗೊಳ್ಳುತ್ತಾನೆ.

ಸಂವತ್ಸರಮಿಹೈಕಂ ತು ಮಾಸಿ ಮಾಸಿ ಪಿಬೇದಪಃ ।
ಫಲಂ ವಿಶ್ವಜಿತಸ್ತಾತ ಪ್ರಾಪ್ನೋತಿ ಸ ನರೋ ನೃಪ ॥೫೦॥
ಸಿಂಹವ್ಯಾಘ್ರಪ್ರಯುಕ್ತೇನ ವಿಮಾನೇನ ಸ ಗಚ್ಛತಿ ।
ಸಪ್ತತಿಂ ಚ ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೫೧॥

ಯಾವ ಮನುಷ್ಯನು ತಿಂಗಳಿಗೊಮ್ಮೆ ನೀರುಕುಡಿಯುತ್ತಾ ಒಂದು ವರ್ಷವನ್ನು ಕಳೆಯುವನೋ–ಅವನು ವಿಶ್ವಜಿದ್ಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಅವಸಾನಾನಂತರದಲ್ಲಿ ಸಿಂಹ-ವ್ಯಾಘ್ರಗಳಿಂದ ಯುಕ್ತವಾದ ವಿಮಾನದಲ್ಲಿ ಸ್ವರ್ಗಕ್ಕೆ ಹೋಗುತ್ತಾನೆ. ಅಲ್ಲವನು ಎಪ್ಪತ್ತು ಸಾವಿರ ವರ್ಷಗಳವರೆಗೂ ಆನಂದದಿಂದಿರುತ್ತಾನೆ.

ಮಾಸಾದೂರ್ಧ್ವಂ ನರವ್ಯಾಘ್ರ ನೋಪವಾಸೋ ವಿಧೀಯತೇ ।
ವಿಧಿಂ ತ್ವನಶನಸ್ಯಾಹುಃ ಪಾರ್ಥ ಧರ್ಮವಿದೋ ಜನಾಃ ॥೫೨॥

ಒಂದು ತಿಂಗಳಿಗಿಂತಲೂ ಹೆಚ್ಚುದಿವಸಗಳು ಉಪವಾಸಮಾಡುವ ವಿಧಿಯಿರುವುದಿಲ್ಲ. ಧರ್ಮವಿದರಾದ ವಿದ್ವಾಂಸರು ಉಪವಾಸದ ವಿಧಿಯನ್ನು ಹೀಗೆ ಹೇಳಿದ್ದಾರೆ.

ಅನಾರ್ತೋ ವ್ಯಾಧಿರಹಿತೋ ಗಚ್ಛೇದನಶನಂ ತು ಯಃ ।
ಪದೇ ಪದೇ ಯಜ್ಞಫಲಂ ಸ ಪ್ರಾಪ್ನೋತಿ ನ ಸಂಶಯಃ ॥೫೩॥

ಯಾವ ಪೀಡೆಗೂ ತುತ್ತಾಗದೇ ರೋಗವಿಲ್ಲದೇ ಇರುವ ಯಾವನು ಅನಶನವ್ರತವನ್ನು ಮಾಡುವನೋ–ಅವನು ಅಡಿಗಡಿಗೂ ಯಜ್ಞಮಾಡಿದ ಫಲವನ್ನು ಹೊಂದುತ್ತಲೇ ಇರುತ್ತಾನೆ. ಇದರಲ್ಲಿ ಸಂಶಯವೇ ಇಲ್ಲ.

ದಿವಂ ಹಂಸಪ್ರಯುಕ್ತೇನ ವಿಮಾನೇನ ಸ ಗಚ್ಛತಿ ।
ಶತಂ ವರ್ಷಸಹಸ್ರಾಣಾಂ ಮೋದತೇ ಸ ದಿವಿ ಪ್ರಭೋ ।
ಶತಂ ಚಾಪ್ಸರಸಃ ಕನ್ಯಾ ರಮಯನ್ತ್ಯಪಿ ತಂ ನರಮ್ ॥೫೪॥

ಹಾಗೆ ಅನಶನವ್ರತವನ್ನು ಅನವರತವಾಗಿ ಮಾಡುವವನು ಅವಸಾನಾನಂತರದಲ್ಲಿ ಹಂಸಯುಕ್ತವಾದ ವಿಮಾನದ ಮೂಲಕ ಸ್ವರ್ಗಕ್ಕೆ ಹೋಗುತ್ತಾನೆ. ಅಲ್ಲಿ ಅವನು ಒಂದು ಲಕ್ಷವರ್ಷದವರೆಗೆ ಆನಂದ ದಿಂದಿರುತ್ತಾನೆ. ನೂರು ಮಂದಿ ಅಪ್ಸರಸ್ತ್ರೀಯರು ಅವನನ್ನು ಯಾವಾಗಲೂ ನೃತ್ಯ-ಗೀತಾದಿಗಳಿಂದ ಸಂತೋಷಗೊಳಿಸುತ್ತಿರುತ್ತಾರೆ.

ಆರ್ತೋ ವಾ ವ್ಯಾಧಿತೋ ವಾಪಿ ಗಚ್ಛೇದನಶನಂ ತು ಯಃ ।
ಶತಂ ವರ್ಷಸಹಸ್ರಾಣಾಂ ಮೋದತೇ ಸ ದಿವಿ ಪ್ರಭೋ ॥೫೫॥

ದುಃಖಿಯಾಗಿದ್ದರೂ, ರೋಗಿಯಾಗಿದ್ದರೂ–ಯಾವನು ಅನಶನವ್ರತ ವನ್ನು ಅನವರತವಾಗಿ ಮಾಡುವನೋ–ಅವನು ಕೂಡ ಒಂದು ಲಕ್ಷವರ್ಷದವರೆಗೆ ಸ್ವರ್ಗದಲ್ಲಿ ಆನಂದದಿಂದಿರುತ್ತಾನೆ.

ಕಾಞ್ಚೀನೂಪುರಶಬ್ದೇನ ಸುಪ್ತಶ್ಚೈವ ಪ್ರಬೋಧ್ಯತೇ ।
ಸಹಸ್ರಹಂಸಯುಕ್ತೇನ ವಿಮಾನೇನ ತು ಗಚ್ಛತಿ ॥೫೬॥

ಅವನು ಮಲಗಿ ನಿದ್ರಿಸುತ್ತಿರುವಾಗ ಸ್ತ್ರೀಯರ ಒಡ್ಯಾಣಗಳ ಶಬ್ದಗಳಿಂದಲೂ ಕಾಲಂದುಗೆಗಳ ಶಬ್ದಗಳಿಂದಲೂ ಎಚ್ಚರಗೊಳ್ಳುತ್ತಾನೆ. ಸಾವಿರ ಹಂಸಗಳಿಂದ ಯುಕ್ತವಾದ ವಿಮಾನದಲ್ಲಿ ಅವನು ಯಾವಾಗಲೂ ಸಂಚರಿಸುತ್ತಿರುತ್ತಾನೆ.

ಸ ಗತ್ವಾ ಸ್ತ್ರೀಶತಾಕೀರ್ಣೇ ರಮತೇ ಭರತರ್ಷಭ ॥೫೭॥
ಕ್ಷೀಣಸ್ಯಾಪ್ಯಾಯನಂ ದೃಷ್ಟಂ ಕ್ಷತಸ್ಯ ಕ್ಷತರೋಹಣಮ್ ।
ವ್ಯಾಧಿತಸ್ಯೌಷಧಿಗ್ರಾಮಃ ಕ್ರುದ್ಧಸ್ಯ ಚ ಪ್ರಸಾದನಮ್ ॥೫೮॥
ದುಃಖಿತಸ್ಯಾರ್ಥಮಾನಾಭ್ಯಾಂ ದುಃಖಾನಾಂ ಪ್ರತಿಷೇಧನಮ್ ।
ನ ಚೈತೇ ಸ್ವರ್ಗಕಾಮಸ್ಯ ರೋಚನ್ತೇ ಸುಖಮೇಧಸಃ ॥೫೯॥

ಅವನು ಸ್ವರ್ಗಕ್ಕೆ ಹೋಗಿ ನೂರಾರು ಸ್ತ್ರೀಯರಿಂದ ತುಂಬಿರುವ ಸೌಧದಲ್ಲಿ ರಮಿಸುತ್ತಿರುತ್ತಾನೆ. ಈ ಲೋಕದಲ್ಲಿ ಅನಶನವ್ರತದ ಫಲವಾಗಿ ಕ್ಷೀಣನಾದವನು ಹೃಷ್ಟ-ಪುಷ್ಟನಾಗುವುದನ್ನು ಕಾಣಬಹುದು. ಗಾಯ ಗೊಂಡವನು ಗಾಯವಿಲ್ಲದವನಾಗಿರುವುದನ್ನೂ ಕಾಣಬಹುದು. ರೋಗ

ಗ್ರಸ್ತನಾಗಿದ್ದರೆ ಔಷಧಗಳ ಸಮೂಹವೇ ಅವನ ಬಳಿಗೆ ಹೋಗುತ್ತವೆ. (ವ್ಯಾಧಿರಹಿತನೂ ಆಗುತ್ತಾನೆ.) ಕೋಪಿಷ್ಠನಿಗೆ ಪ್ರಸನ್ನತೆಯುಂಟಾಗುತ್ತದೆ. ಅರ್ಥ ಮತ್ತು ಮರ್ಯಾದೆಗಳಿಗೆ ನ್ಯೂನತೆಯುಂಟಾಗಿ ದುಃಖಿತನಾಗಿರುವವನಿಗೆ ಅರ್ಥದ ಲಾಭವಾಗಿ ಲೋಕದಲ್ಲಿ ಮರ್ಯಾದೆಯೂ ಸಿಕ್ಕುತ್ತದೆ. ಆದರೆ ದಿವ್ಯಸುಖವನ್ನು ಬಯಸುವ ಸ್ವರ್ಗಕಾಮನಿಗೆ ಇವು ಯಾವುವೂ ರುಚಿಸುವುದಿಲ್ಲ.

ಅತಃ ಸ ಕಾಮಸಂಯುಕ್ತೇ ವಿಮಾನೇ ಹೇಮಸಂನಿಭೇ ।
ರಮತೇ ಸ್ತ್ರೀಶತಾಕೀರ್ಣೇ ಪುರುಷೋಽಲಂಕೃತಃ ಶುಚಿಃ ।
ಸ್ವಸ್ಥಃ ಸಫಲಸಂಕಲ್ಪಃ ಸುಖೀ ವಿಗತಕಲ್ಮಷಃ ॥೬೦॥

ಅನಶನವ್ರತಸ್ಥನಾದ, ಪವಿತ್ರಾತ್ಮನಾದ ಆ ಪುರುಷನು ಸ್ವರ್ಗದಲ್ಲಿ ದಿವ್ಯವಾದ ವಸ್ತ್ರಾಭರಣಗಳಿಂದ ಸಮಲಂಕೃತನಾಗಿ ನೂರಾರು ಸ್ತ್ರೀಯರಿಂದ ನಿಬಿಡವಾಗಿರುವ ಕಾಮನಾವಸ್ತುಗಳಿಂದ ಸಮೃದ್ಧವಾಗಿರುವ, ಸುವರ್ಣ ಸದೃಶವಾದ ವಿಮಾನದಲ್ಲಿ ಸ್ವಸ್ಥನಾಗಿ, ಸಫಲಮನೋರಥನಾಗಿ, ಪಾಪರಹಿತನಾಗಿ ಸುಖಿಯಾಗಿ ರಮಿಸುತ್ತಿರುತ್ತಾನೆ.

ಅನಶ್ನನ್ದೇಹಮುತ್ಸೃಜ್ಯ ಫಲಂ ಪ್ರಾಪ್ನೋತಿ ಮಾನವಃ ।
ಬಾಲಸೂರ್ಯಪ್ರತೀಕಾಶೇ ವಿಮಾನೇ ಹೇಮವರ್ಚಸಿ ॥೬೧॥

ವೈದೂರ್ಯಮುಕ್ತಾಖಚಿತೇ ವೀಣಾಮುರಜನಾದಿತೇ ।
ಪತಾಕಾದೀಪಿಕಾಕೀರ್ಣೇ ದಿವ್ಯಘಂಟಾನಿನಾದಿತೇ ॥೬೨॥

ಸ್ತ್ರೀಸಹಸ್ರಾನುಚರಿತೇ ಸ ನರಃ ಸುಖಮೇಧತೇ ॥೬೩॥

ಅನಶನವ್ರತವನ್ನು ಕೈಗೊಂಡು ಅದರಿಂದಲೇ ಶರೀರತ್ಯಾಗಮಾಡುವ ಮನುಷ್ಯನು ಮಹಾಫಲವನ್ನು ಹೊಂದುತ್ತಾನೆ. ಬಾಲಸೂರ್ಯಸದೃಶವಾದ, ಸುವರ್ಣಮಯವಾದ ಕಾಂತಿಯಿಂದ ಕೂಡಿರುವ, ವೈಡೂರ್ಯಮುಕ್ತಾಮಣಿಗಳಿಂದ ಖಚಿತವಾದ, ವೀಣಾ-ಮೃದಂಗಾದಿ ವಾದ್ಯನಾದಗಳಿಂದ ಕೂಡಿರುವ, ಪತಾಕೆಗಳಿಂದಲೂ ದೀಪಗಳಿಂದಲೂ ವ್ಯಾಪ್ತವಾದ, ದಿವ್ಯವಾದ ಘಂಟಾರವಗಳಿಂದ ಕೂಡಿರುವ, ಸಾವಿರಾರು ಸ್ತ್ರೀಯರಿಂದ ಯುಕ್ತವಾದ ವಿಮಾನದಲ್ಲಿ ಕುಳಿತು ಪರಮಸುಖವನ್ನು ಹೊಂದುತ್ತಾನೆ.

ಯಾವನ್ತಿ ರೋಮಕೂಪಾಣಿ ತಸ್ಯ ಗಾತ್ರೇಷು ಪಾಣ್ಡವ ।
ತಾವನ್ತ್ಯೇವ ಸಹಸ್ರಾಣಿ ವರ್ಷಾಣಾಂ ದಿವಿ ಮೋದತೇ ॥೬೪॥

ಅನಶನವ್ರತದಿಂದ ದೇಹತ್ಯಾಗಮಾಡಿದವನು ತನ್ನ ಅವಯವಗಳಲ್ಲಿ ಎಷ್ಟು ರೋಮಕೂಪಗಳಿವೆಯೋ–ಅಷ್ಟುಸಾವಿರ ವರ್ಷಗಳವರೆಗೆ ಸ್ವರ್ಗದಲ್ಲಿ ಆನಂದದಿಂದಿರುತ್ತಾನೆ.

ನಾಸ್ತಿ ವೇದಾತ್ಪರಂ ಶಾಸ್ತ್ರಂ ನಾಸ್ತಿ ಮಾತೃಸಮೋ ಗುರುಃ ।
ನ ಧರ್ಮಾತ್ಪರಮೋ ಲಾಭಸ್ತಪೋ ನಾನಶನಾತ್ಪರಮ್ ॥೬೫॥

ವೇದಕ್ಕಿಂತಲೂ ಶ್ರೇಷ್ಠವಾದ ಬೇರೆ ಶಾಸ್ತ್ರವಿಲ್ಲ. ತಾಯಿಗೆ ಸಮಾನನಾದ ಬೇರೆ ಗುರುವಿಲ್ಲ. ಧರ್ಮಲಾಭಕ್ಕಿಂತಲೂ ಉತ್ತಮವಾದ ಬೇರೆ ಲಾಭವಿಲ್ಲ. ಅನಶನವ್ರತಕ್ಕಿಂತಲೂ ಉತ್ತಮವಾದ ಬೇರೆ ತಪಸ್ಸಿಲ್ಲ.

ಬ್ರಾಹ್ಮಣೇಭ್ಯಃ ಪರಂ ನಾಸ್ತಿ ಪಾವನಂ ದಿವಿ ಚೇಹ ಚ ।
ಉಪವಾಸೈಸ್ತಥಾ ತುಲ್ಯಂ ತಪಃಕರ್ಮ ನ ವಿದ್ಯತೇ ॥೬೬॥

ಇಹದಲ್ಲಾಗಲೀ ಪರದಲ್ಲಾಗಲೀ–ಬ್ರಹ್ಮವಿದನಾದ ಬ್ರಾಹ್ಮಣನಿಗಿಂತಲೂ ಪಾವನವಾದ ವಸ್ತುವು ಬೇರೊಂದಿಲ್ಲ. ಅಂತೆಯೇ ಉಪವಾಸಗಳಿಗೆ ಸಮಾನವಾದ ತಪಃಕ್ರಿಯೆಯೂ ಬೇರೆ ಯಾವುದೂ ಇಲ್ಲ.

ಉಪೋಷ್ಯ ವಿಧಿವದ್ದೇವಾಸ್ತ್ರಿದಿವಂ ಪ್ರತಿಪೇದಿರೇ ।
ಋಷಯಶ್ಚ ಪರಾಂ ಸಿದ್ಧಿಮುಪವಾಸೈರವಾಪ್ನುವನ್ ॥೬೭॥

ವಿಧಿವತ್ತಾಗಿ ಉಪವಾಸಮಾಡಿಯೇ ದೇವತೆಗಳು ಸ್ವರ್ಗವನ್ನು ಪಡೆದುಕೊಂಡರು. ಋಷಿಗಳೂ ಉಪವಾಸವ್ರತಗಳಿಂದಲೇ ಶ್ರೇಷ್ಠವಾದ ಸಿದ್ಧಿಯನ್ನು ಪಡೆದರು.

ದಿವ್ಯವರ್ಷಸಹಸ್ರಾಣಿ ವಿಶ್ವಾಮಿತ್ರೇಣ ಧೀಮತಾ ।
ಕ್ಷಾನ್ತಮೇಕೇನ ಭಕ್ತೇನ ತೇನ ವಿಪ್ರತ್ವಮಾಗತಃ ॥೬೮॥

ಧೀಮಂತನಾದ ವಿಶ್ವಾಮಿತ್ರನು ಒಂದು ಸಾವಿರ ದಿವ್ಯವರ್ಷಗಳವರೆಗೆ ದಿನಕ್ಕೆ ಒಪ್ಪತ್ತು ಊಟಮಾಡುತ್ತಾ ಕಷ್ಟವನ್ನು ಸಹಿಸಿಕೊಂಡು ತಪಸ್ಸನ್ನು ಮಾಡಿದನು. ಅಂತಹ ಕಷ್ಟಸಾಧ್ಯವಾದ ತಪಸ್ಸನ್ನು ಮಾಡಿದುದರಿಂದಲೇ ಅವನು ವಿಪ್ರತ್ವವನ್ನು ಪಡೆದನು.

ಚ್ಯವನೋ ಜಮದಗ್ನಿಶ್ಚ ವಸಿಷ್ಠೋ ಗೌತಮೋ ಭೃಗುಃ।
ಸರ್ವ ಏವ ದಿವಂ ಪ್ರಾಪ್ತಾಃ ಕ್ಷಮಾವನ್ತೋ ಮಹರ್ಷಯಃ ॥೬೯॥

ಕ್ಷಮಾವಂತರಾದ, ಮಹರ್ಷಿಗಳಾದ ಚ್ಯವನ, ಜಮದಗ್ನಿ, ವಸಿಷ್ಠ, ಗೌತಮ, ಭೃಗು–ಇವರೆಲ್ಲರೂ ಉಪವಾಸವ್ರತದ ಫಲವಾಗಿಯೇ ಸ್ವರ್ಗವನ್ನು ಸೇರಿದರು.

ಹಿಂದೆ ಅಂಗಿರಸಮುನಿಯು ಈ ಅನಶನವ್ರತದ ದಿಗ್ದರ್ಶನವನ್ನು ಮಾಡಿದನು. ಈಗಲೂ ಯಾವನು ಈ ಉಪವಾಸವ್ರತವನ್ನು ಪ್ರಚಾರ ಮಾಡುವನೋ–ಅವನು ಯಾವ ವಿಧವಾದ ದುಃಖವನ್ನೂ ಹೊಂದುವುದಿಲ್ಲ.

ಯುಧಿಷ್ಠಿರ! ಅಂಗಿರಸಮಹರ್ಷಿಯಿಂದ ಪ್ರವರ್ತಿತವಾದ ಈ ಉಪವಾಸವ್ರತದ ವಿಧಿಯನ್ನು ಯಾವನು ಅನುಕ್ರಮವಾಗಿ ಓದುವನೋ ಮತ್ತು ಕೇಳುವನೋ–ಅವನಿಗೆ ಪಾಪವೆಂಬುದೇ ಇರುವುದಿಲ್ಲ.

ವಿಮುಚ್ಯತೇ ಚಾಪಿ ಸ ಸರ್ವಸಂಕರೈ-
ರ್ನ ಚಾಸ್ಯ ದೋಷೈರಭಿಭೂಯತೇ ಮನಃ ।
ವಿಯೋನಿಜಾನಾಂ ಚ ವಿಜಾನತೇ ರುತಂ
ಧ್ರುವಾಂ ಚ ಕೀರ್ತಿಂ ಲಭತೇ ನರೋತ್ತಮಃ ॥೭೨॥

ಈ ಅಧ್ಯಾಯವನ್ನು ಪಠನಮಾಡಿದ ಮತ್ತು ಕೇಳಿದ ನರಶ್ರೇಷ್ಠನು ಸಕಲವಿಧವಾದ ಸಂಕೀರ್ಣಪಾಪಗಳಿಂದಲೂ ಮುಕ್ತನಾಗುತ್ತಾನೆ. ಅವನ ಮನಸ್ಸನ್ನು ಎಂದಿಗೂ ದೋಷವು ಆಕ್ರಮಿಸುವುದಿಲ್ಲ. ಅನ್ಯಯೋನಿಗಳಲ್ಲಿ ಹುಟ್ಟಿರುವ ಪ್ರಾಣಿಗಳ ಶಬ್ದವನ್ನೂ ಅರ್ಥಮಾಡಿಕೊಳ್ಳುತ್ತಾನೆ. ಶಾಶ್ವತವಾದ ಕೀರ್ತಿಯನ್ನೂ ಹೊಂದುತ್ತಾನೆ."

೧೦೬ನೆಯ ಅಧ್ಯಾಯವು ಮುಗಿಯಿತು.

೧೦೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದರಿದ್ರನಾದವನಿಗೆ ಯಜ್ಞದ ಫಲಕ್ಕೆ ಸಮಾನವಾದ ಫಲವನ್ನು ಕೊಡುವ ಉಪವಾಸವ್ರತದ ವರ್ಣನೆ

ಯುಧಿಷ್ಠಿರನು ಹೇಳುತ್ತಾನೆ:

ಪಿತಾಮಹೇನ ವಿಧಿವದ್ಯಜ್ಞಾಃ ಪ್ರೋಕ್ತಾ ಮಹಾತ್ಮನಾ ।
ಗುಣಾಶ್ಚೈಷಾಂ ಯಥಾತಥ್ಯಂ ಪ್ರೇತ್ಯ ಚೇಹ ಚ ಸರ್ವಶಃ ॥೧॥

“ಪಿತಾಮಹನೇ! ಮಹಾತ್ಮನಾದ ಬ್ರಹ್ಮನು ವಿಧಿವತ್ತಾಗಿ ಮಾಡಬೇಕಾದ ಅನೇಕಪ್ರಕಾರವಾದ ಯಜ್ಞಗಳನ್ನು ಹೇಳಿದ್ದಾನೆ. ಇಹಲೋಕ-ಪರಲೋಕಗಳಲ್ಲಿ ಆ ಯಜ್ಞಗಳನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲಗಳನ್ನೂ ಯಥಾವತ್ತಾಗಿ ಹೇಳಿದ್ದಾನೆ.

ಆದರೆ ಯಜ್ಞಗ್ಗಳಿಗೆ ಅನೇಕವಿಧವಾದ ಉಪಕರಣಗಳು ಬೇಕಾಗುತ್ತವೆ. ನಾನಾವಿಧವಾದ ಸಂಭಾರಗಳು (ಪದಾರ್ಥಗಳು) ಬೇಕಾಗುತ್ತವೆ. ಅಲ್ಲದೇ ಅವು ಅನೇಕವರ್ಷಗಳವರೆಗೆ ನಡೆಯತಕ್ಕುವುಗಳಾಗಿವೆ. ಈ ಕಾರಣದಿಂದ ದರಿದ್ರರಾದವರಿಂದ ಇಂತಹ ಯಜ್ಞಗ್ಗಳನ್ನು ಮಾಡಲು ಶಕ್ಯವಿಲ್ಲ. ಆದುದರಿಂದ ಇಂತಹ ಯಜ್ಞಗಳನ್ನು ರಾಜರಾಗಲೀ-ರಾಜಪುತ್ರರಾಗಲೀ ಮಾಡಬಲ್ಲರು. ಅರ್ಥಹೀನರೂ, ಗುಣಹೀನರೂ, ಏಕಾಕಿಗಳಾಗಿರುವವರೂ, ಅಸಹಾಯಕರೂ ಇಂತಹ ಯಜ್ಞಗಳನ್ನು ಮಾಡಲಾರರು.

ಯೋ ದರಿದ್ರೈರಪಿ ವಿಧಿಃ ಶಕ್ಯಃ ಪ್ರಾಪ್ತುಂ ಸದಾ ಭವೇತ್ ।
ಅರ್ಥನ್ಯೂನೈರವಗುಣೈರೇಕಾತ್ಮಭಿರಸಂಹತೈಃ ।
ತುಲ್ಯೋ ಯಜ್ಞಫಲೈರೇತೈಸ್ತನ್ಮೇ ಬ್ರೂಹಿ ಪಿತಾಮಹ ॥೪॥

ಆದುದರಿಂದ ಯಾವ ಕರ್ಮವಿಧಿಯನ್ನು ಹಣವಿಲ್ಲದ ದರಿದ್ರರೂ, ಗುಣಹೀನರೂ, ಏಕಾಕಿಗಳೂ, ಅಸಹಾಯಕರೂ ಮಾಡಲು ಸಾಧ್ಯವಾಗುವುದೋ ಮತ್ತು ಯಾವ ಕರ್ಮದ ಫಲಗಳು ಯಜ್ಞದ ಫಲಗಳಿಗೆ ಸದೃಶವಾಗಿರುವುವೋ–ಅಂತಹ ಕರ್ಮವನ್ನೂ ಮತ್ತು ಅದರ ವಿಧಿಯನ್ನೂ ಹೇಳು.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಅಂಗಿರಸಮುನಿಯಿಂದ ಹೇಳಲ್ಪಟ್ಟಿರುವ ಉಪವಾಸಫಲಾತ್ಮಕವಾದ ಮತ್ತು ಯಜ್ಞಫಲಕ್ಕೆ ಸದೃಶವಾದ ಫಲವನ್ನು ನೀಡುವ ಉಪವಾಸವಿಧಿಯನ್ನು ಹೇಳುವೆನು; ಕೇಳು.

ಯಾವನು ಪ್ರಾತಃಕಾಲ ಮತ್ತು ಸಾಯಂಕಾಲಗಳಲ್ಲಿ (ಮಧ್ಯಾಹ್ನ ಮತ್ತು ರಾತ್ರಿಗಳಲ್ಲಿ) ಮಾತ್ರವೇ ಊಟಮಾಡುತ್ತಾ ಮಧ್ಯದಲ್ಲಿ ಏನನ್ನೂ

ಕುಡಿಯುವುದಿಲ್ಲವೋ, ಯಾವ ಪ್ರಾಣಿಗಳಿಗೂ ಹಿಂಸೆಮಾಡುವುದಿಲ್ಲವೋ, ಅಗ್ನಿಹೋತ್ರವನ್ನು ಮಾಡುವನೋ–ಅಂತಹವನು ಆರು ವರ್ಷಗಳಲ್ಲಿಯೇ ಸಿದ್ಧಿಯನ್ನು ಹೊಂದುತ್ತಾನೆ.

ಅಂತಹ ಮನುಷ್ಯನು ಅವಸಾನಾನಂತರದಲ್ಲಿ ಪುಟಕ್ಕೆ ಹಾಕಿದ ಚಿನ್ನದ ಬಣ್ಣವಿರುವ ವಿಮಾನವನ್ನು ಪಡೆದುಕೊಳ್ಳುತ್ತಾನೆ. ಅಗ್ನಿಯ ತೇಜಸ್ಸಿಗೆ ಸದೃಶವಾದ ತೇಜಸ್ಸಿನಿಂದ ಕೂಡಿರುವ ಪ್ರಜಾಪತಿಯ ಲೋಕದಲ್ಲಿ ನೃತ್ಯ-ಗೀತಗಳಿಂದ ನಿನಾದಿತವಾಗಿರುವ ದೇವಾಂಗನೆಯರ ಮನೆಗಳಲ್ಲಿ ಪದ್ಮವರ್ಷಗಳವರೆಗೆ (ಒಂದರ ಮುಂದೆ ಹತ್ತೊಂಬತ್ತು ಸೊನ್ನೆಗಳಿಂದ ಕೂಡಿದ ಸಂಖ್ಯೆಗೆ ಪದ್ಮವೆಂದು ಹೆಸರು.) ವಾಸಮಾಡುತ್ತಾನೆ.

ತ್ರೀಣಿವರ್ಷಾಣಿ ಯಃ ಪ್ರಾಶೇತ್ಸತತಂ ತ್ವೇಕಭೋಜನಮ್ ।
ಧರ್ಮಪತ್ನೀರತೋ ನಿತ್ಯಮಗ್ನಿಷ್ಟೋಮಫಲಂ ಲಭೇತ್ ॥೯॥
ಯಜ್ಞಂ ಬಹುಸುವರ್ಣಂ ವಾ ವಾಸವಪ್ರಿಯಮಾಚರೇತ್ ॥೧೦॥

ಧರ್ಮಪತ್ನಿಯಲ್ಲಿಯೇ ಅನುರಾಗವುಳ್ಳವನಾಗಿ (ಏಕಪತ್ನೀವ್ರತಸ್ಥನಾಗಿ) ಯಾವನು ಮೂರು ವರ್ಷಗಳವರೆಗೆ ದಿನಕ್ಕೊಪ್ಪತ್ತು ಊಟಮಾಡಿ ಕೊಂಡಿರುವನೋ–ಅವನು ಅಗ್ನಿಷ್ಟೋಮಯಾಗವನ್ನು ಮಾಡಿದ ಫಲವನ್ನೋ ಬಹುಸುವರ್ಣದಕ್ಷಿಣೆಗಳುಳ್ಳ ಇಂದ್ರನಿಗೆ ಪ್ರಿಯವಾದ ಯಜ್ಞ ವನ್ನು ಮಾಡಿದ ಫಲವನ್ನೋ ಹೊಂದುತ್ತಾನೆ.

ಸತ್ಯವಾನ್ದಾನಶೀಲಶ್ಚ ಬ್ರಹ್ಮಣ್ಯಶ್ಚಾನಸೂಯಕಃ ।
ಕ್ಷಾನ್ತೋ ದಾನ್ತೋ ಜಿತಕ್ರೋಧಃ ಸ ಗಚ್ಛತಿ ಪರಾಂ ಗತಿಮ್ ॥೧೧॥
ಪಾಂಡುರಭ್ರಪ್ರತೀಕಾಶೇ ವಿಮಾನೇ ಹಂಸಲಕ್ಷಣೇ ।
ದ್ವೇ ಸಮಾಪ್ತೇ ತತಃ ಪದ್ಮೇ ಸೋಽಪ್ಸರೋಭಿರ್ವಸೇತ್ಸಹ ॥೧೨॥

ಯಾವನು ಸತ್ಯವಾದಿಯೋ, ದಾನಶೀಲನೋ, ಬ್ರಾಹ್ಮಣಪ್ರಿಯನೋ, ಇತರರಲ್ಲಿ ದೋಷವನ್ನೆಣಿಸದವನೋ, ಸಹನಶೀಲನೋ, ಜಿತೇಂದ್ರಿ ಯನೋ, ಕೋಪವನ್ನು ಜಯಿಸಿರುವನೋ–ಅಂತಹವನು ಶ್ರೇಷ್ಠವಾದ ಸದ್ಗತಿಯನ್ನು ಹೊಂದುತ್ತಾನೆ ಮತ್ತು ಬಿಳಿಯ ಮೋಡದಂತಿರುವ ಹಂಸದ

ಚಿಹ್ನೆಯುಳ್ಳ ವಿಮಾನದಲ್ಲಿ ಎರಡು ಪದ್ಮವರ್ಷದವರೆಗೆ ಅಪ್ಸರಸ್ತ್ರೀಯರೊಡನೆ ವಾಸವಾಗಿರುತ್ತಾನೆ.

ದ್ವಿತೀಯೇ ದಿವಸೇ ಯಸ್ತು ಪ್ರಾಶ್ನೀಯಾದೇಕಭೋಜನಮ್ ।
ಸದಾ ದ್ವಾದಶಮಾಸಾಂಸ್ತು ಜುಹ್ವಾನೋ ಜಾತವೇದಸಮ್ ॥೧೩॥
ಅಗ್ನಿಕಾರ್ಯಪರೋ ನಿತ್ಯಂ ನಿತ್ಯಂ ಕಲ್ಯಪ್ರಬೋಧನಃ ।
ಅಗ್ನಿಷ್ಟೋಮಸ್ಯ ಯಜ್ಞಸ್ಯ ಫಲಂ ಪ್ರಾಪ್ನೋತಿ ಮಾನವಃ ॥೧೪॥

ಯಾವ ಮನುಷ್ಯನು ನಿತ್ಯವೂ ಉಷಃಕಾಲದಲ್ಲಿ ಏಳುತ್ತಾ ಅಗ್ನಿಕಾರ್ಯಪರನಾಗಿದ್ದುಕೊಂಡು ನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಹನ್ನೆರಡು ತಿಂಗಳವರೆಗೆ ದಿನಬಿಟ್ಟುದಿನ ಒಂದು ಹೊತ್ತು ಊಟಮಾಡುವನೋ (ಒಂದು ದಿನ ಉಪವಾಸ. ಮಾರನೇ ದಿನ ಒಪ್ಪತ್ತು ಊಟ) ಅಂತಹವನು ಅಗ್ನಿಷ್ಟೋಮಯಾಗಮಾಡಿದ ಫಲವನ್ನು ಹೊಂದುತ್ತಾನೆ. ಆ ಪುಣ್ಯದಫಲವಾಗಿ ಆ ಮನುಷ್ಯನು ಹಂಸ-ಸಾರಸಪಕ್ಷಿಗಳಿಂದ ಯುಕ್ತವಾದ ವಿಮಾನವನ್ನು ಹೊಂದುತ್ತಾನೆ ಮತ್ತು ಶ್ರೇಷ್ಠರಾದ ಸ್ತ್ರೀಯರಿಂದ ಸಮಾವೃತನಾಗಿ ಇಂದ್ರಲೋಕದಲ್ಲಿ ವಾಸಮಾಡುತ್ತಾನೆ.

ಯಾವ ಮನುಷ್ಯನು ನಿತ್ಯವೂ ಉಷಃಕಾಲದಲ್ಲಿ ಏಳುತ್ತಾ ಅಗ್ನಿಕಾರ್ಯಪರನಾಗಿದ್ದುಕೊಂಡು ನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಹನ್ನೆರಡು ತಿಂಗಳವರೆಗೆ ಪ್ರತಿ ಮೂರನೆಯ ದಿವಸ (ಎರಡು ದಿವಸಗಳ ಉಪವಾಸ ಮೂರನೆಯ ದಿನ ಒಪ್ಪತ್ತು ಊಟ) ಏಕಭುಕ್ತನಾಗಿರುವನೋ–ಅವನು ಅತಿರಾತ್ರಯಾಗಮಾಡಿದ ಉತ್ತಮವಾದ ಫಲವನ್ನು ಹೊಂದುತ್ತಾನೆ. ಈ ಉಪವಾಸವ್ರತದ ಫಲವಾಗಿ ಅವನು ನವಿಲು ಮತ್ತು ಹಂಸಗಳಿಂದ ಯುಕ್ತವಾದ ವಿಮಾನವನ್ನು ಹೊಂದುತ್ತಾನೆ. ಸಪ್ತರ್ಷಿಗಳ ಲೋಕದಲ್ಲಿ ಅಪ್ಸರಸ್ತ್ರೀಯರೊಡನೆ ವಾಸಮಾಡುತ್ತಾನೆ. ಮೂರು ಪದ್ಮವರ್ಷಗಳು ಕಳೆದನಂತರ ಅವನು ಸಪ್ತರ್ಷಿಗಳ ಲೋಕದಿಂದ ಹಿಂದಿರುಗುತ್ತಾನೆ.

ಯಾವನು ಪ್ರತಿನಿತ್ಯವೂ ಅಗ್ನಿಹೋತ್ರಮಾಡುತ್ತಾ ಮೂರು ದಿವಸಗಳು ಉಪವಾಸವಿದ್ದು ನಾಲ್ಕನೆಯ ದಿನ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅವನು ವಾಜಪೇಯಯಾಗ

ಮಾಡಿದ ಫಲವನ್ನು ಹೊಂದುತ್ತಾನೆ. ಆ ಪುಣ್ಯದ ಫಲವಾಗಿ ಅವನು ದೇವಕನ್ಯೆಯರಿರುವ ವಿಮಾನವನ್ನು ಪಡೆದುಕೊಳ್ಳುತ್ತಾನೆ. ಪೂರ್ವಸಾಗರದ ತಟದಲ್ಲಿರುವ ಇಂದ್ರನ ಲೋಕದಲ್ಲಿ ವಾಸಮಾಡುತ್ತಾನೆ ಮತ್ತು ಅವನು ಅಲ್ಲಿದ್ದುಕೊಂಡು ದೇವರಾಜನಾದ ಇಂದ್ರನ ಕ್ರೀಡೆಯನ್ನು ಪ್ರತಿನಿತ್ಯವೂ ನೋಡುತ್ತಿರುತ್ತಾನೆ.

ಯಾವನು ನಿತ್ಯವೂ ಅಗ್ನಿಹೋತ್ರವನ್ನು ಮಾಡುತ್ತಾ ನಾಲ್ಕು ದಿವಸಗಳು ಉಪವಾಸವಿದ್ದು ಐದನೆಯ ದಿನ ಒಪ್ಪತ್ತು ಭೋಜನಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ, ಲೋಭಿಯಲ್ಲವೋ, ಸತ್ಯವಾದಿಯೋ, ಬ್ರಾಹ್ಮಣಪ್ರಿಯನೋ, ಅಹಿಂಸಕನೋ, ಅಸೂಯಾರಹಿತನೋ, ಪಾಪ ಕರ್ಮಗಳಿಂದ ದೂರವಿರುವನೋ–ಅಂತಹವನು ದ್ವಾದಶಾಹ ಯಜ್ಞದ (ಹನ್ನೆರಡು ದಿವಸಗಳ ಯಜ್ಞದ) ಫಲವನ್ನು ಹೊಂದುತ್ತಾನೆ. ಆ ಫಲದ ಪರಿಣಾಮವಾಗಿ ಅವನು ಅವಸಾನಾನಂತರದಲ್ಲಿ ಸೂರ್ಯಕಿರಣಗಳ ಮಾಲೆ ಯಂತೆ ಪ್ರಕಾಶಮಾನವಾದ, ಸುವರ್ಣಮಯವಾದ, ಹಂಸದ ಚಿಹ್ನೆ ಯಿರುವ, ಶ್ವೇತವರ್ಣದ ಗೃಹರೂಪವಾದ ವಿಮಾನವನ್ನು ಹತ್ತಿ ಕುಳಿತು ಕೊಳ್ಳುತ್ತಾನೆ ಮತ್ತು ಅಲ್ಲವನು ಐವತ್ತೊಂದು ಪದ್ಮವರ್ಷಗಳವರೆಗೆ ಸುಖವಾಗಿರುತ್ತಾನೆ.

ಯಾವನು ಪ್ರತಿದಿನವೂ ಅಗ್ನಿಹೋತ್ರಮಾಡುತ್ತಾ, ತ್ರಿಕಾಲದಲ್ಲಿಯೂ ಸ್ನಾನಮಾಡುತ್ತಾ ಬ್ರಹ್ಮಚರ್ಯವ್ರತನಿಷ್ಠನಾಗಿ, ಅಸೂಯಾರಹಿತನಾಗಿ, ಐದು ದಿವಸಗಳು ಉಪವಾಸವಿದ್ದು ಆರನೆಯ ದಿನ ಭೋಜನಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅವನು ಗೋಮೇಧಯಾಗದ ಫಲವನ್ನು ಹೊಂದುತ್ತಾನೆ. ಉಪವಾಸವ್ರತದ ಫಲವಾಗಿ ಅವನು ಅಗ್ನಿಯ ಜ್ವಾಲೆಗೆ ಸಮಾನವಾದ ಪ್ರಕಾಶದಿಂದ ಕೂಡಿರುವ, ಹಂಸಗಳಿಂದಲೂ, ನವಿಲು ಗಳಿಂದಲೂ ಸೇವಿಸಲ್ಪಡುತ್ತಿರುವ, ಸುವರ್ಣಮಯವಾದ ಶ್ರೇಷ್ಠವಾದ ವಿಮಾನವನ್ನು ಪಡೆದುಕೊಳ್ಳುತ್ತಾನೆ ಮತ್ತು ಆ ದಿವ್ಯವಿಮಾನದಲ್ಲಿ ಅಪ್ಸರೆಯರ ತೊಡೆಯ ಮೇಲೆ ಮಲಗಿ ನಿದ್ರಿಸುವ ಅವನು ವರಸ್ತ್ರೀಯರ ಒಡ್ಯಾಣಗಳ ಮತ್ತು ಕಾಲಂದುಗೆಗಳ ಸುಮಧುರಧ್ವನಿಗಳಿಂದ ಏಳುತ್ತಾನೆ.

ಆರು ದಿವಸಗಳಿಗೊಮ್ಮೆ ಒಪ್ಪತ್ತು ಭೋಜನಮಾಡುವ ಮುನಿಯು ಎರಡು ಪಾತಾಕ (ಮಹಾಪದ್ಮಗಳು) ಹದಿನೆಂಟು ಪದ್ಮ, ಸಾವಿರದ ಮುನ್ನೂರು ಕೋಟಿ ಐವತ್ತು ಅಯುತವರ್ಷಗಳವರೆಗೆ ಮತ್ತು ನೂರು ಕರಡಿಗಳ ಶರೀರದಲ್ಲಿ ಎಷ್ಟು ಕೂದಲುಗಳಿವೆಯೋ–ಅಷ್ಟು ವರ್ಷಗಳವರೆಗೆ ಬ್ರಹ್ಮಲೋಕದಲ್ಲಿ ಸಮ್ಮಾನಿತನಾಗುತ್ತಾನೆ.

ಯಾವನು ಪ್ರತಿನಿತ್ಯವೂ ಅಗ್ನಿಹೋತ್ರಮಾಡುತ್ತಾ, ಮೌನಿಯಾಗಿ ಬ್ರಹ್ಮಚರ್ಯವ್ರತವನ್ನು ಪರಿಪಾಲಿಸುತ್ತಾ ಹೂವಿನ ಮಾಲೆ, ಚಂದನ, ಮಧು ಮತ್ತು ಮಾಂಸಗಳನ್ನು ಸಂಪೂರ್ಣವಾಗಿ ಪರಿತ್ಯಾಗಮಾಡಿ, ಆರು ದಿವಸಗಳ ಉಪವಾಸವಿದ್ದು ಏಳನೆಯ ದಿವಸ ಒಪ್ಪತ್ತು ಭೋಜನಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅವನು ಮರುತ್ತುಗಳ ಲೋಕವನ್ನೂ ಹಾಗೂ ಇಂದ್ರನ ಲೋಕವನ್ನೂ ಹೊಂದುತ್ತಾನೆ. ಅವನು ಎಲ್ಲ ಸ್ಥಳಗಳಲ್ಲಿಯೂ ಮನೋರಥವನ್ನು ಪೂರ್ಣಗೊಳಿಸಿಕೊಂಡು ದೇವಕನ್ಯೆಯರಿಂದ ಪೂಜಿತ ನಾಗುತ್ತಾನೆ. ಬಹುಸುವರ್ಣದಕ್ಷಿಣೆಗಳಿಂದ ಕೂಡಿರುವ ಯಜ್ಞವನ್ನು ಮಾಡಿದ ಫಲವನ್ನು ಪಡೆಯುತ್ತಾನೆ. ಅಸಂಖ್ಯಾತವಾದ ವರ್ಷಗಳವರೆಗೆ ಅಂತಹ ಉಪವಾಸವ್ರತಿಯು ಇಂದ್ರನ ಮತ್ತು ಮರುತ್ತುಗಳ ಲೋಕಗಳಲ್ಲಿ ಆನಂದವಾಗಿರುತ್ತಾನೆ.

ಯಾವನು ಅನುದಿನವೂ ಅಗ್ನಿಯಲ್ಲಿ ಹೋಮಮಾಡುತ್ತಾ, ದೇವತಾ ಕಾರ್ಯಗಳಲ್ಲಿ ಆಸಕ್ತನಾಗಿದ್ದುಕೊಂಡು ಏಳು ದಿವಸಗಳು ಉಪವಾಸಮಾಡಿ ಎಂಟನೆಯ ದಿವಸ ಊಟಮಾಡುತ್ತಾ, ಒಂದು ವರ್ಷವನ್ನು ಕಳೆಯು ವನೋ–ಅವನು ಪೌಂಡರೀಕಯಾಗವನ್ನು ಮಾಡುವುದರಿಂದ ಪ್ರಾಪ್ತ ವಾಗುವ ಶ್ರೇಷ್ಠವಾದ ಫಲವನ್ನು ಹೊಂದುತ್ತಾನೆ. ಆ ಫಲದ ಕಾರಣದಿಂದ ಅವನು ಅವಸಾನಾನಂತರದಲ್ಲಿ ಕಮಲವರ್ಣಸದೃಶವಾದ ವಿಮಾನದಲ್ಲಿ ಕುಳಿತುಕೊಳ್ಳುತ್ತಾನೆ ಮತ್ತು ಅಲ್ಲಿ ಅವನು ಶ್ಯಾಮಲವರ್ಣದ, ಸುವರ್ಣವರ್ಣ ಸದೃಶರಾದ, ಗೌರವರ್ಣದ, ಹದಿನಾರು ವರ್ಷಗಳ ಪ್ರಾಯದ, ವಿಲಾಸವತಿಯರಾದ ದೇವಾಂಗನೆಯರನ್ನು ಪಡೆದುಕೊಳ್ಳುತ್ತಾನೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ಯಾವನು ಅನುದಿನವೂ ಅಗ್ನಿಯಲ್ಲಿ ಹೋಮಮಾಡುತ್ತಾ ಎಂಟು ದಿವಸಗಳು ಉಪವಾಸವಿದ್ದು ಒಂಬತ್ತನೆಯ ದಿವಸ ಭೋಜನವನ್ನು ಮಾಡುತ್ತಾ ಒಂದು ವರ್ಷವನ್ನು ಕಳೆಯುವನೋ–ಅಂತಹವನು ಸಾವಿರ ಅಶ್ವಮೇಧಗಳನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲವನ್ನು ಪಡೆಯುತ್ತಾನೆ. ಆ ಫಲದ ಕಾರಣದಿಂದ ಅವನು ಕಮಲದಂತೆ ಪ್ರಕಾಶಮಾನವಾದ ವಿಮಾನವನ್ನು ಹೊಂದುತ್ತಾನೆ. ಪ್ರದೀಪ್ತನಾದ ಸೂರ್ಯನ ಮತ್ತು ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸಿನಿಂದ ಬೆಳಗುತ್ತಿರುವ, ದಿವ್ಯಮಾಲೆಗಳನ್ನು ಧರಿಸಿರುವ ರುದ್ರಕನ್ಯೆಯರಿಂದ ಸನಾತನವಾದ ಅಂತರಿಕ್ಷಕ್ಕೆ (ಸ್ವರ್ಗಲೋಕಕ್ಕೆ) ಒಯ್ಯಲ್ಪಡುತ್ತಾನೆ. ಅಲ್ಲಿ ಅವನು ಒಂದು ಕಲ್ಪ, ಲಕ್ಷಕೋಟಿ ಮತ್ತು ಹದಿನೆಂಟು ಸಾವಿರ ವರ್ಷಗಳವರೆಗೆ ಆನಂದದಿಂದಿರುತ್ತಾನೆ.

ಯಾವನು ಅನುದಿನವೂ ಅಗ್ನಿಯಲ್ಲಿ ಹೋಮಮಾಡುತ್ತಾ ಒಂಬತ್ತು ದಿವಸಗಳು ಉಪವಾಸವಿದ್ದು ಹತ್ತನೆಯ ದಿವಸ ಭೋಜನಮಾಡುತ್ತಾ ಒಂದು ವರ್ಷವನ್ನು ಕಳೆಯುವನೊ–ಅಂತಹವನು ಸಾವಿರ ಅಶ್ವಮೇಧಗಳನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲವನ್ನು ಹೊಂದುತ್ತಾನೆ. ಆ ಫಲದ ಪರಿಣಾಮವಾಗಿ ಅವಸಾನಾನಂತರದಲ್ಲಿ ಸಕಲಪ್ರಾಣಿಗಳಿಗೂ ಸುಮನೋಹರವಾಗಿ ಕಾಣುವ ಬ್ರಹ್ಮಕನ್ಯೆಯರ ಮನೆಯಲ್ಲಿ ವಾಸಮಾಡುತ್ತಾನೆ. ಸನಾತನನಾದ ಆ ಪುರುಷನಿಗೆ ರೂಪವತಿಯರಾದ ಬ್ರಹ್ಮಕನ್ಯೆಯರು ಮನೋರಂಜನೆಯನ್ನುಂಟುಮಾಡುತ್ತಾರೆ.

ಹತ್ತು-ಹತ್ತು ದಿವಸಗಳು ಕಳೆದನಂತರ ಒಪ್ಪತ್ತು ಭೋಜನಮಾಡುತ್ತಾ ವರ್ಷವನ್ನು ಕಳೆಯುವವನು–ಕನ್ನೈದಿಲೆಯ ವರ್ಣಕ್ಕೆ ಸಮಾನವಾದ ವರ್ಣದಿಂದಲೂ-ಕೆಂಪುತಾವರೆಯ ವರ್ಣಕ್ಕೆ ಸಮಾನವಾದ ವರ್ಣದಿಂದಲೂ ಕೂಡಿರುವ, ಮಂಡಲಾಕಾರವಾಗಿಯೂ-ಸುಳಿಗೆ ಸಮಾನವಾಗಿಯೂ ಹಾರಬಲ್ಲ, ಸಮುದ್ರದ ಅಲೆಗಳಂತೆ ಮೇಲಕ್ಕೂ ಹಾರುವ, ವಿಚಿತ್ರವಾದ ಮಣಿಗಳ ಮಾಲೆಗಳಿಂದ ಸಮಲಂಕೃತವಾಗಿರುವ, ಶಂಖಧ್ವನಿಗಳಿಂದ ನಿನಾದಿತವಾದ ವಿಮಾನವನ್ನು ಪಡೆದುಕೊಳ್ಳುತ್ತಾನೆ. ಸ್ಫಟಿಕಶಿಲೆಯಿಂದಲೂ ವಜ್ರಸಾರಮಣಿಗಳಿಂದಲೂ ಮಾಡಲ್ಪಟ್ಟಿರುವ ಸ್ತಂಭಗಳಿಂದಲೂ, ಸುಂದರವಾಗಿ ಮಾಡಲ್ಪಟ್ಟಿರುವ ವೇದಿಕೆಯಿಂದಲೂ

ಕೂಡಿರುವ, ಹಂಸ-ಸಾರಸ-ಪಕ್ಷಿಗಳ ಕಲ-ಕಲನಿನಾದದಿಂದ ನಿನಾದಿತ ವಾಗಿರುವ ಆ ವಿಮಾನದಲ್ಲಿ ಸಂಚರಿಸುತ್ತಾನೆ.

ಯಾವನು ಪ್ರತಿನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಹತ್ತು ದಿವಸಗಳು ಉಪವಾಸವಿದ್ದು ಹನ್ನೊಂದನೆಯ ದಿವಸ ಭೋಜನವನ್ನು ಮಾಡುತ್ತಾ ಒಂದು ವರ್ಷವನ್ನು ಕಳೆಯುವನೋ–ಅವನು ಸಾವಿರ ಅಶ್ವಮೇಧಗಳನ್ನು ಮಾಡುವುದರಿಂದ ಲಭಿಸುವ ಉತ್ತಮೋತ್ತಮವಾದ ಫಲವನ್ನು ಹೊಂದುತ್ತಾನೆ.

ಪರಸ್ತ್ರಿಯಂ ನಾಭಿಲಷೇದ್ವಾಚಾಥ ಮನಸಾಪಿ ವಾ ।
ಅನೃತಂ ಚ ನ ಭಾಷೇತ ಮಾತಾಪಿತ್ರೋಃ ಕೃತೇऽಪಿ ವಾ ।
ಅಭಿಗಚ್ಛೇನ್ಮಹಾದೇವಂ ವಿಮಾನಸ್ಥಂ ಮಹಾಬಲಮ್ ॥೫೦॥

ಪರಸ್ತ್ರೀಯನ್ನು ಮಾತಿನಿಂದಾಗಲೀ ಮನಸ್ಸಿನಿಂದಾಗಲೀ ಬಯಸ ಬಾರದು. ತಂದೆ-ತಾಯಿಗಳ ಸಲುವಾಗಿಯೇ ಆದರೂ ಸುಳ್ಳು ಹೇಳ ಬಾರದು. ಹೀಗಿರುವ ಉಪವಾಸವ್ರತಿಯು ವಿಮಾನಸ್ಥನಾದ, ಮಹಾಬಲ ನಾದ ಮಹಾದೇವನ ಬಳಿಗೆ ಹೋಗುತ್ತಾನೆ.

ಅವಸಾನಾನಂತರದಲ್ಲಿ ಬ್ರಹ್ಮನ ವಿಮಾನವು ತನ್ನ ಸಮೀಪದಲ್ಲಿಯೇ ಬರುವುದನ್ನು ಅವನು ನೋಡುತ್ತಾನೆ. ಸುವರ್ಣಮಯವಾದ ಕಾಂತಿಯಿಂದ ಕೂಡಿರುವ ರೂಪವತಿಯರಾದ ಕುಮಾರಿಯರು ಅವನನ್ನು ಮನೋಹರ ವಾದ ದೇವಲೋಕಕ್ಕೂ-ರುದ್ರರ ಲೋಕಕ್ಕೂ ಒಯ್ಯುತ್ತಾರೆ. ಆ ಲೋಕಗಳಲ್ಲಿ ಅವನು ಪ್ರಳಯಕಾಲದ ಅಗ್ನಿಯ ತೇಜಸ್ಸಿಗೆ ಸಮಾನವಾದ ತೇಜಸ್ಸನ್ನು ಹೊಂದಿ ಒಂದು ಲಕ್ಷದ ಒಂದು ಸಾವಿರ ಕೋಟಿ ವರ್ಷಗಳಷ್ಟು ಅಸಂಖ್ಯಾತ ವಾದ ವರ್ಷಗಳವರೆಗೆ ವಾಸಮಾಡುತ್ತಿದ್ದು, ಅಲ್ಲಿ ದೇವ-ದಾನವಮಾನ್ಯನಾದ ರುದ್ರನನ್ನು ಅನುದಿನವೂ ನಮಸ್ಕರಿಸುತ್ತಿರುತ್ತಾನೆ. ಅನುದಿನವೂ ರುದ್ರನು ಅವನಿಗೆ ದರ್ಶನವನ್ನು ಕೊಡುತ್ತಿರುತ್ತಾನೆ.

ಯಾವನು ಹನ್ನೊಂದು ದಿವಸಗಳು ಉಪವಾಸವಿದ್ದು ಪ್ರತಿ ಹನ್ನೆರಡ ನೆಯ ದಿವಸ ಊಟಮಾಡುತ್ತಾ ಒಂದು ವರ್ಷವನ್ನು ಕಳೆಯುವನೋ ಅವನು ಸರ್ವಮೇಧಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ಅವನಿಗೆ ದ್ವಾದಶಾದಿತ್ಯರ ತೇಜಸ್ಸಿನಿಂದ ಕೂಡಿರುವ ಬಹುಮೂಲ್ಯವಾದ ಮಣಿ-ಮುಕ್ತಾ-ಪ್ರವಾಳಗಳಿಂದ ಸುಶೋಭಿತವಾದ, ಹಂಸಪಕ್ಷಿಗಳ ಸಾಲಿನಿಂದ ಸುತ್ತುವರಿಯಲ್ಪಟ್ಟ ನಾಗವೀಥಿಗಳಿಂದ ಸಮಾಕುಲವಾದ, ಕಲರವಗಳನ್ನು ಮಾಡುತ್ತಿರುವ ನವಿಲುಗಳಿಂದಲೂ–ಚಕ್ರವಾಕಪಕ್ಷಿಗಳಿಂದಲೂ ಶೋಭಾಯಮಾನವಾಗಿ ಕಾಣುತ್ತಿರುವ, ದೊಡ್ಡ-ದೊಡ್ಡ ಉಪ್ಪರಿಗೆಗಳಿಂದ ಕೂಡಿರುವ, ನರರಿಂದಲೂ ನಾರಿಯರಿಂದಲೂ ಸಮಾವೃತವಾದ, ಬ್ರಹ್ಮಲೋಕದಲ್ಲಿ ನೆಲೆಗೊಂಡಿರುವ, ನಿತ್ಯವಾಸಕ್ಕೆ ಯೋಗ್ಯವಾಗಿರುವ ವಿಮಾನವು ಲಭಿಸುವುದೆಂದು ಧರ್ಮವಿದನಾದ, ಮಹಾಭಾಗ್ಯಶಾಲಿಯಾದ ಅಂಗಿರಸಮುನಿಯೇ ಹೇಳಿರುವನು.

ಹನ್ನೆರಡು ದಿವಸಗಳು ಉಪವಾಸವಿದ್ದು ಹದಿಮೂರನೆಯ ದಿವಸ ಭೋಜನಮಾಡುತ್ತಾ ಹನ್ನೆರಡು ಮಾಸಗಳನ್ನೂ ಕಳೆಯುವವನು ದೇವಸತ್ರವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಆ ಫಲದ ಮೂಲಕವಾಗಿ ಅವನು ಸುವರ್ಣಮಯವಾದ, ರತ್ನಗಳ ಸಮೂಹದಿಂದ ಸಮಲಂಕೃತವಾದ, ದೇವಾಂಗನೆಯರಿಂದ ವ್ಯಾಪ್ತವಾದ, ದಿವ್ಯವಾದ ಆಭರಣಗಳಿಂದ ಭೂಷಿತವಾದ, ಪವಿತ್ರವಾದ ಸುಗಂಧವನ್ನು ಹೊರಸೂಸುತ್ತಿರುವ, ವಾಯವ್ಯಪುರುಷರಿಂದ ಶೋಭಾಯಮಾನವಾಗಿ ಕಾಣುತ್ತಿರುವ ರಕ್ತಪದ್ಮೋದಯವೆಂಬ ಹೆಸರಿನ ದಿವ್ಯವಾದ ವಿಮಾನವನ್ನು ಪಡೆದುಕೊಳ್ಳುತ್ತಾನೆ. ಅಲ್ಲಿ ಎರಡು ಶಂಖ, ಎರಡು ಪತಾಕಾ (ಮಹಾಪದ್ಮ), ಒಂದು ಕಲ್ಪ, ಒಂದು ಚತುರ್ಯುಗ, ನಾಲ್ಕು ಪದ್ಮ ಮತ್ತು ಹತ್ತು ಕೋಟಿವರ್ಷಗಳವರೆಗೆ ಬ್ರಹ್ಮಲೋಕದಲ್ಲಿರುತ್ತಾನೆ. ದೇವಕನ್ಯೆಯರು ಗೀತದಿಂದಲೂ, ಗಂಧರ್ವರು ಗಾಯನದಿಂದಲೂ, ಭೇರೀ-ಮೃದಂಗಗಳ ಧ್ವನಿಗಳಿಂದಲೂ ಅವನನ್ನು ಸಂತೋಷಗೊಳಿಸುತ್ತಾ ಪೂಜಿಸುತ್ತಾರೆ.

ಹದಿಮೂರು ದಿವಸಗಳು ಉಪವಾಸವಿದ್ದು ಹದಿನಾಲ್ಕನೆಯ ದಿವಸ ಭೋಜನಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವವನು–ಮಹಾಮೇಧಯಜ್ಞದಫಲವನ್ನು ಹೊಂದುತ್ತಾನೆ. ಅದರ ಫಲವಾಗಿ ಅನಿರ್ವಚನೀಯವಾದ ಸೌಂದರ್ಯದಿಂದ ಕೂಡಿ ಚಿನ್ನದ ತೋಳ್ಬಳೆಗಳನ್ನು ಧರಿಸಿರುವ ದೇವಕನ್ಯೆಯರು ಅವನ ಸೇವೆಗಾಗಿ ವಿಮಾನದಲ್ಲಿ ಬರುತ್ತಾರೆ.

ಹಂಸತೂಲಿಕಾತಲ್ಪದಲ್ಲಿ ಮಲಗಿರುವ ಅವನು ಕಲಹಂಸಪಕ್ಷಿಗಳ ಕಲ-ಕಲ ನಿನಾದಗಳಿಂದಲೂ, ಕಾಲಂದುಗೆಗಳ ಝಣ-ಝಣಾತ್ಕಾರಗಳಿಂದಲೂ, ಒಡ್ಯಾಣಗಳ ಸುಮಧುರವಾದ ಧ್ವನಿಗಳಿಂದಲೂ ಎಚ್ಚರಗೊಳ್ಳುತ್ತಾನೆ. ದೇವಕನ್ಯೆಯರ ಆ ನಿವಾಸದಲ್ಲಿ ಅವನು ಗಂಗಾನದಿಯಲ್ಲಿ ಮರಳಿನ ಕಣಗಳು ಎಷ್ಟಿವೆಯೋ–ಅಷ್ಟು ವರ್ಷಗಳವರೆಗೆ ವಾಸಮಾಡುತ್ತಾನೆ.

ಜಿತೇಂದ್ರಿಯನಾದ ಯಾವನು ನಿತ್ಯವೂ ಅಗ್ನಿಹೋತ್ರವನ್ನು ಮಾಡುತ್ತಾ ಹದಿನಾಲ್ಕು ದಿವಸಗಳು ಉಪವಾಸವಿದ್ದು ಹದಿನೈದನೆಯ ದಿನ ಒಂದು ಹೊತ್ತು ಊಟಮಾಡಿ ಒಂದು ವರ್ಷವನ್ನು ಕಳೆಯುವನೋ–ಅವನು ಸಾವಿರ ರಾಜಸೂಯಯಾಗಗಳನ್ನು ಮಾಡಿದ ಸರ್ವೋತ್ತಮವಾದ ಫಲವನ್ನು ಹೊಂದುತ್ತಾನೆ. ಆ ಫಲದ ಪರಿಣಾಮವಾಗಿ ಹಂಸಗಳಿಂದಲೂ, ನವಿಲುಗಳಿಂದಲೂ ಸಂಸೇವಿತವಾದ ದಿವ್ಯವಿಮಾನವನ್ನು ಹತ್ತುತ್ತಾನೆ. ಆ ವಿಮಾನವು ಸುವರ್ಣಮಯವಾಗಿಯೂ, ಮಂಡಲಾಕಾರವಾದ ಮಣಿಗಳಿಂದ ಚಿತ್ರಿತವಾಗಿಯೂ, ದಿವ್ಯವಾದ ಆಭರಣಗಳ ಶೋಭೆಯಿಂದ ಕಂಗೊಳಿಸುತ್ತಿರುವ ಶ್ರೇಷ್ಠರಾದ ಸ್ತ್ರೀಯರಿಂದ ಸಮಲಂಕೃತವಾಗಿಯೂ ಇರುತ್ತದೆ. ಆ ವಿಮಾನಕ್ಕೆ ಒಂದೇ ಕಂಬವಿರುತ್ತದೆ. ನಾಲ್ಕು ಬಾಗಿಲುಗಳಿರುತ್ತವೆ. ಏಳು ಉಪ್ಪರಿಗೆಗಳಿರುತ್ತವೆ. ಮಂಗಳಮಯವಾದ ಆ ವಿಮಾನವು ಸಾವಿರಾರು ವೈಜಯಂತೀಪತಾಕೆಗಳಿಂದ ಶೋಭಾಯಮಾನ ವಾಗಿರುತ್ತದೆ. ಗೀತಗಳ ಶಬ್ದಗಳಿಂದ ವ್ಯಾಪ್ತವಾಗಿರುತ್ತದೆ. ಮಣಿಗಳಿಂದಲೂ ಮುತ್ತುಗಳಿಂದಲೂ ಹವಳಗಳಿಂದಲೂ ಭೂಷಿತವಾದ, ಮಿಂಚಿನ ಪ್ರಭೆಯಂತೆ ಪ್ರಕಾಶಮಾನವಾಗಿ ಕಾಣುವ, ದಿವ್ಯಗುಣಗಳಿಂದ ಯುಕ್ತವಾಗಿ ರುವ ದಿವ್ಯವಿಮಾನವನ್ನು ಉಪವಾಸವ್ರತಿಯು ಆರೋಹಣಮಾಡುತ್ತಾನೆ. ಖಡ್ಗಮೃಗಗಳನ್ನೂ, ಆನೆಗಳನ್ನೂ ವಾಹನವನ್ನಾಗಿ ಹೊಂದಿರುವ ಆ ದಿವ್ಯವಿಮಾನದಲ್ಲಿ ಅವನು ಒಂದು ಸಾವಿರ ಯುಗಗಳವರೆಗೆ ವಾಸಮಾಡಿಕೊಂಡಿರುತ್ತಾನೆ.

ಯಾವನು ಹದಿನೈದು ದಿವಸಗಳು ಉಪವಾಸವಿದ್ದು ಹದಿನಾರನೆಯ ದಿವಸ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯು ವನೋ–ಅಂತಹವನು ಸೋಮಯಾಗದ ಫಲವನ್ನು ಹೊಂದುತ್ತಾನೆ. ಅದರ ಪರಿಣಾಮವಾಗಿ ಅವನು ಸೋಮಕನ್ಯೆಯರ ನಿವಾಸಗಳಲ್ಲಿ

ಯಾವಾಗಲೂ ವಾಸಮಾಡುತ್ತಿರುತ್ತಾನೆ. ಯಾವಾಗಲೂ ಸೌಮ್ಯವಾದ ಗಂಧದಿಂದ ಲಿಪ್ತನಾಗಿರುತ್ತಾನೆ. ತನ್ನ ಇಚ್ಛಾನುಸಾರವಾಗಿ ಎಲ್ಲಿಗೆಂದರಲ್ಲಿಗೆ ಹೋಗುತ್ತಾನೆ. ದಿವ್ಯವಾದ ವಿಮಾನದಲ್ಲಿ ಕುಳಿತುಕೊಳ್ಳುವ ಅವನನ್ನು ಸುಂದರವಾಗಿ ಕಾಣುವ ಮಧುರಭಾಷಿಣಿಯರಾದ ದೇವಾಂಗನೆಯರು ಪೂಜಿಸುತ್ತಾರೆ. ಸಕಲವಿಧವಾದ ಕಾಮೋಪಭೋಗಗಳನ್ನೂ ಅವನು ಅನುಭವಿಸುತ್ತಾನೆ. ಆ ಮನುಷ್ಯನು ನೂರು ಪದ್ಮವರ್ಷಗಳಿಗೆ ಸಮಾನವಾದ ಹತ್ತು ಮಹಾಕಲ್ಪಗಳು ಮತ್ತು ನಾಲ್ಕು ಚತುರ್ಯುಗಗಳವರೆಗೆ ಉಪವಾಸಮಾಡಿದ ಪುಣ್ಯಫಲವನ್ನು ಉಪಭೋಗಿಸುತ್ತಾನೆ.

ಯಾವನು ಪ್ರತಿನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಹದಿನಾರು ದಿವಸಗಳು ಉಪವಾಸವಿದ್ದು ಹದಿನೇಳನೆಯ ದಿವಸ ಭೋಜನಮಾಡುತ್ತಾ ಹನ್ನೆರಡು ತಿಂಗಳುಗಳನ್ನು ಕಳೆಯುವನೋ–ಅಂತಹವನು ವರುಣ, ಇಂದ್ರ, ರುದ್ರ, ಮಾರುತ, ಶುಕ್ರಾಚಾರ್ಯ ಮತ್ತು ಬ್ರಹ್ಮ– ಇವರ ಲೋಕಗಳಿಗೆ ಹೋಗುತ್ತಾನೆ. ಆ ಲೋಕಗಳಲ್ಲಿ ದೇವಕನ್ಯೆಯರು ಅವನಿಗೆ ಆಸನವನ್ನಿತ್ತು ಸತ್ಕರಿಸುತ್ತಾರೆ. ಅಲ್ಲವನು ಭೂಲೋಕ-ಭುವರ್ಲೋಕ ಮತ್ತು ಸುವರ್ಲೋಕಗಳನ್ನೂ, ದೇವರ್ಷಿಗಳನ್ನೂ ಮತ್ತು ವಿಶ್ವರೂಪವನ್ನೂ ನೋಡುತ್ತಾನೆ. ಅಲ್ಲಿ ಸುಂದರವಾದ ರೂಪಗಳನ್ನು ಧರಿಸಿರುವ, ಮಧುರಭಾಷಿಣಿಯರಾದ, ಸುಂದರವಾದ ಆಭರಣಗಳಿಂದ ಸಮಲಂಕೃತರಾದ, ದೇವಾಧಿದೇವನ (ಬ್ರಹ್ಮನ) ಕುಮಾರಿಯರು ಅವನನ್ನು ಸಂತೋಷಗೊಳಿಸುತ್ತಾರೆ. ಎಲ್ಲಿಯವರೆಗೆ ಸೂರ್ಯ-ಚಂದ್ರರು ಆಕಾಶದಲ್ಲಿ ಸಂಚರಿಸುತ್ತಿರುವರೋ ಅಲ್ಲಿಯವರೆಗೂ ಆ ಧೀರನು ಸುಧೆಯನ್ನೂ ಅಮೃತವನ್ನೂ ಪಾನಮಾಡುತ್ತಾ ಬ್ರಹ್ಮಲೋಕದಲ್ಲಿ ವಿಹರಿಸುತ್ತಿರುತ್ತಾನೆ.

ಯಾವನು ಹದಿನೇಳು ದಿವಸಗಳು ಉಪವಾಸವಿದ್ದು ಹದಿನೆಂಟನೆಯ ದಿವಸ ಒಂದು ಹೊತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ಭೂಲೋಕವೇ ಮೊದಲಾದ ಏಳು ಲೋಕಗಳನ್ನೂ ನೋಡುತ್ತಾನೆ. ದೇವಕನ್ಯೆಯರಿಂದ ಯುಕ್ತವಾದ ಜಯಘೋಷಗಳಿಂದ ನಿನಾದಿತವಾದ, ದೇದೀಪ್ಯಮಾನವಾಗಿ ಪ್ರಕಾಶಿಸುವ, ಮಣಿ-ರತ್ನಹಾರಗಳಿಂದ ಅಲಂಕೃತವಾದ ರಥಗಳು ಅವನ ಹಿಂದೆ ಹೋಗು

ತ್ತಿರುತ್ತವೆ. ಆ ರಥಗಳ ಮುಂಭಾಗದಲ್ಲಿ ವ್ಯಾಘ್ರಗಳಿಂದಲೂ ಸಿಂಹಗಳಿಂದಲೂ ಯುಕ್ತವಾದ, ಮೇಘನಾದದಂತೆ ಶಬ್ದಾಯಮಾನವಾದ, ದಿವ್ಯವಾದ ಮತ್ತು ಶ್ರೇಷ್ಠವಾದ ವಿಮಾನವನ್ನು ಉಪವಾಸವ್ರತಿಯು ಸುಖವಾಗಿ ಆರೋಹಣ ಮಾಡುತ್ತಾನೆ. ಅವನು ಅಲ್ಲಿ ಒಂದು ಸಾವಿರ ಕಲ್ಪಗಳವರೆಗೆ ದೇವಕನ್ಯೆಯ ರೊಡನೆ ಆನಂದದಿಂದಿರುತ್ತಾನೆ ಮತ್ತು ಅಮೃತಕ್ಕೆ ಸಮಾನವಾದ ಉತ್ತಮೋತ್ತಮವಾದ ಸುಧಾರಸವನ್ನು ಕುಡಿಯುತ್ತಿರುತ್ತಾನೆ.

ಹದಿನೆಂಟು ದಿವಸಗಳು ಉಪವಾಸವಿದ್ದು ಹತ್ತೊಂಬತ್ತನೆಯ ದಿವಸ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವವನು ಭೂರಾದಿ ಸಪ್ತಲೋಕಗಳನ್ನೂ ನೋಡುತ್ತಾನೆ. ಅದರ ಫಲವಾಗಿ ಅಪ್ಸರೆಯರ ಸಮೂಹದಿಂದ ಸೇವಿಸಲ್ಪಡುವ, ಗಂಧರ್ವರ ಗಾಯನದಿಂದ ನಿನಾದಿತ ವಾದ, ಸೂರ್ಯನ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವ ವಿಮಾನವನ್ನು ಪಡೆದುಕೊಳ್ಳುತ್ತಾನೆ. ಅಲ್ಲವನು ಯಾವವಿಧವಾದ ಚಿಂತೆಯಾಗಲೀ ರೋಗವಾಗಲೀ ಇಲ್ಲದೇ, ದಿವ್ಯವಾದ ವಸ್ತ್ರಗಳನ್ನು ಧರಿಸಿ, ಕಾಂತಿಯುಕ್ತನಾಗಿ, ಹತ್ತು ಕೋಟಿ ವರ್ಷಗಳವರೆಗೆ ದೇವಾಂಗನೆಯರೊಡನೆ ಆನಂದದಿಂದಿರುತ್ತಾನೆ.

ಸತ್ಯವಾದಿಯಾದ ಉಪವಾಸವ್ರತವನ್ನು ಕೈಗೊಂಡಿರುವ, ಮಾಂಸವನ್ನು ತಿನ್ನದ, ಬ್ರಹ್ಮಚಾರಿಯಾದ, ಸಕಲಪ್ರಾಣಿಗಳ ಹಿತದಲ್ಲಿಯೂ ತತ್ಪರನಾಗಿರುವ ಯಾವನು ಹತ್ತೊಂಬತ್ತು ದಿವಸಗಳು ಉಪವಾಸವಿದ್ದು ಇಪ್ಪತ್ತನೆಯ ದಿನ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ– ಅಂತಹವನು ಸೂರ್ಯದೇವನ ವಿಶಾಲವಾದ ಮತ್ತು ರಮಣೀಯವಾದ ಲೋಕಗಳಿಗೆ ಹೋಗುತ್ತಾನೆ. ಅವನ ಹಿಂದೆ ದಿವ್ಯವಾದ ಮಾಲೆಗಳನ್ನು ಧರಿಸಿರುವ ಮತ್ತು ದಿವ್ಯವಾದ ಗಂಧವನ್ನು ಲೇಪಿಸಿಕೊಂಡಿರುವ ಗಂಧರ್ವಾಪ್ಸರೆಯರು ಸುವರ್ಣಮಯವಾದ ಮತ್ತು ಮನಸ್ಸಿಗೆ ಆನಂದವನ್ನುಂಟುಮಾಡುವ ವಿಮಾನಗಳಲ್ಲಿ ಕುಳಿತು ಹೋಗುತ್ತಿರುತ್ತಾರೆ.

ಯಾವನು ಪ್ರತಿನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಇಪ್ಪತ್ತು ದಿವಸಗಳು ಉಪವಾಸವಿದ್ದು ಇಪ್ಪತ್ತೊಂದನೆಯ ದಿವಸ ಭೋಜನ

ಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ-ಅಂತಹವನು ಶುಕ್ರನ, ಇಂದ್ರನ, ಅಶ್ವಿನೀದೇವತೆಗಳ ಮತ್ತು ಮರುತ್ತುಗಳ ಲೋಕಗಳಿಗೆ ಹೋಗುತ್ತಾನೆ. ಯಾವಾಗಲೂ ಸುಖದಲ್ಲಿಯೇ ಇರುವ ಅವನಿಗೆ ದುಃಖವೆಂದರೇನೆಂಬುದೇ ತಿಳಿಯುವುದಿಲ್ಲ. ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ಶ್ರೇಷ್ಠರಾದ ಸ್ತ್ರೀಯರಿಂದ ಸೇವಿಸಲ್ಪಡುತ್ತಾ ದೇವತೆಗಳಂತೆಯೇ ವಿಹರಿಸುತ್ತಿರುತ್ತಾನೆ.

ಅಹಿಂಸಾನಿರತನಾದ, ಬುದ್ಧಿವಂತನಾದ, ಸತ್ಯವಂತನಾದ, ಅಸೂಯಾ ರಹಿತನಾದ ಯಾವನು ಪ್ರತಿನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಇಪ್ಪತ್ತೊಂದು ದಿವಸಗಳು ಉಪವಾಸವಿದ್ದು ಇಪ್ಪತ್ತೆರಡನೆಯ ದಿವಸ ಏಕಭೋಜನನಾಗಿ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ಸೂರ್ಯನ ಪ್ರಭೆಗೆ ಸಮಾನವಾದ ಪ್ರಭೆಯನ್ನು ಹೊಂದಿ ವಸುಗಳ ಲೋಕ ಗಳನ್ನು ಹೊಂದುತ್ತಾನೆ. ಇಚ್ಛಾನುಸಾರವಾಗಿ ವಿಹರಿಸುವ, ಅಮೃತವನ್ನೇ ಪಾನಮಾಡುವ ಅವನು ದಿವ್ಯಾಭರಣಭೂಷಿತನಾಗಿ ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ದೇವಕನ್ಯೆಯರೊಡನೆ ರಮಿಸುತ್ತಿರುತ್ತಾನೆ.

ಮಿತಾಹಾರಿಯಾದ, ಜಿತೇಂದ್ರಿಯನಾದ ಯಾವನು ಇಪ್ಪತ್ತೆರಡು ದಿವಸಗಳು ಉಪವಾಸವಿದ್ದು ಇಪ್ಪತ್ತಮೂರನೆಯ ದಿವಸ ಒಪ್ಪತ್ತು ಊಟ ಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ವಾಯು, ಶುಕ್ರ ಮತ್ತು ರುದ್ರರ ಲೋಕಗಳಿಗೆ ಹೋಗುತ್ತಾನೆ. ಸ್ವೇಚ್ಛೆಯಿಂದ ಸಂಚರಿಸುವ ಮತ್ತು ಇಚ್ಛೆಬಂದಲ್ಲಿಗೆ ಹೋಗುವ ಅವನು ಅಪ್ಸರೆಯರಿಂದ ಸಂಪೂಜಿತನಾಗಿ ಅನೇಕ ಗುಣಗಳಿಂದ ಯುಕ್ತವಾದ ವಿಮಾನದಲ್ಲಿ ಕುಳಿತು ದಿವ್ಯಾಭರಣಗಳಿಂದ ಸಮಲಂಕೃತನಾಗಿ ದೇವಕನ್ಯೆಯರೊಡನೆ ವಿಹರಿಸುತ್ತಾನೆ.

ಯಾವನು ಪ್ರತಿನಿತ್ಯವೂ ಅಗ್ನಿಯಲ್ಲಿ ಹೋಮಮಾಡುತ್ತಾ ಇಪ್ಪತ್ತು ಮೂರುದಿವಸಗಳವರೆಗೆ ಉಪವಾಸವನ್ನು ಮಾಡಿ ಇಪ್ಪತ್ತನಾಲ್ಕನೆಯ ದಿವಸ ಹವಿಸ್ಸನ್ನು ಪ್ರಾಶನಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯು ವನೋ–ಅಂತಹವನು ದಿವ್ಯವಾದ ಮಾಲೆಯನ್ನೂ, ದಿವ್ಯಾಂಬರವನ್ನೂ ಧರಿಸಿ, ದಿವ್ಯವಾದ ಗಂಧವನ್ನು ಲೇಪಿಸಿಕೊಂಡು ದ್ವಾದಶಾದಿತ್ಯರ ಲೋಕಗಳಲ್ಲಿ ಆನಂದತುಂದಿಲನಾಗಿ ಬಹಳ ಕಾಲದವರೆಗೂ ವಾಸಮಾಡಿ

ಕೊಂಡಿರುತ್ತಾನೆ. ಅಲ್ಲವನು ಹಂಸಪಕ್ಷಿಗಳಿಂದ ಯುಕ್ತವಾದ, ಸುವರ್ಣ ಮಯವಾದ, ಮನೋಹರವಾದ ವಿಮಾನದಲ್ಲಿ ಕುಳಿತು ಹತ್ತುಸಾವಿರ ದೇವಕನ್ಯೆಯರೊಡನೆ ರಮಿಸುತ್ತಿರುತ್ತಾನೆ.

ಯಾವನು ಇಪ್ಪತ್ತುನಾಲ್ಕು ದಿವಸಗಳವರೆಗೆ ಉಪವಾಸವನ್ನು ಮಾಡಿ ಪ್ರತಿ ಇಪ್ಪತ್ತೈದನೆಯ ದಿವಸ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ವಿಶಾಲವಾದ ಯಾನವನ್ನು ಅಥವಾ ವಿಮಾನವನ್ನು ಪಡೆದುಕೊಳ್ಳುತ್ತಾನೆ. ಅವನ ಹಿಂದೆ ಬಹುಸಂಖ್ಯಾತವಾದ ರಥಗಳು ಜಯಘೋಷಗಳನ್ನು ಮಾಡುತ್ತಾ ಹೋಗುತ್ತವೆ. ಸುವರ್ಣಮಯವಾದ, ಮಂಗಳಕರವಾದ ಆ ರಥಗಳಲ್ಲಿ ದೇವಕನ್ಯೆಯರು ಕುಳಿತಿರುತ್ತಾರೆ. ಉಪವಾಸವ್ರತಿಯು ಸುಮನೋಹರವಾದ ದಿವ್ಯವಾದ ಮತ್ತು ಉತ್ತಮವಾದ ವಿಮಾನದಲ್ಲಿ ಕುಳಿತು ನೂರಾರು ಸ್ತ್ರೀಯರಿಂದ ಸಮಾವೃತವಾದ ನಿವಾಸದಲ್ಲಿ ಅಮೃತೋಪಮವಾದ ಮತ್ತು ಉತ್ತಮವಾದ ಸುಧಾರಸವನ್ನೇ ಸೇವಿಸುತ್ತಾ ಒಂದು ಸಾವಿರ ಕಲ್ಪಗಳವರೆಗೆ ವಾಸಮಾಡುತ್ತಾನೆ.

ನಿಯತವಾದ ವ್ರತಾನುಷ್ಠಾನಗಳುಳ್ಳ, ಮಿತಾಹಾರಿಯಾದ, ಜಿತೇಂದ್ರಿಯನಾದ, ರೋಗರಹಿತನಾದ ಯಾವನು ಪ್ರತಿದಿನವೂ ಅಗ್ನಿ ಹೋತ್ರವನ್ನು ಮಾಡುತ್ತಾ ಇಪ್ಪತ್ತೈದು ದಿವಸಗಳವರೆಗೆ ಉಪವಾಸವಿದ್ದು ಇಪ್ಪತ್ತಾರನೆಯ ದಿವಸ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹ ಮಹಾಭಾಗ್ಯಶಾಲಿಯಾದ ಮನುಷ್ಯನು ಅಪ್ಸರೆಯರ ಸಮೂಹದಿಂದ ಪೂಜಿಸಲ್ಪಟ್ಟವನಾಗಿ ಸಪ್ತಮರುತ್ತುಗಳ ಮತ್ತು ಅಷ್ಟವಸುಗಳ ಲೋಕಗಳನ್ನು ಹೊಂದುತ್ತಾನೆ ಮತ್ತು ಅಲ್ಲಿಯ ಸುಖೋಪ ಭೋಗಗಳನ್ನು ಅನುಭವಿಸುತ್ತಾನೆ. ಸಕಲವಿಧವಾದ ರತ್ನಗಳಿಂದಲೂ ಸಮಲಂಕೃತವಾದ, ಸ್ಫಟಿಕಮಯವಾದ ವಿಮಾನಗಳಿಂದ ಯುಕ್ತನಾಗಿ ಗಂಧರ್ವಾಪ್ಸರೆಯರಿಂದ ಸಂಪೂಜಿತನಾಗಿ ಆನಂದಪಡುತ್ತಾನೆ. ದಿವ್ಯವಾದ ತೇಜಸ್ಸಿನಿಂದ ಯುಕ್ತನಾಗಿ ಆ ಲೋಕಗಳಲ್ಲಿ ಎರಡು ಸಾವಿರ ದಿವ್ಯಯುಗ ಗಳವರೆಗೂ ವಾಸವಾಗಿರುತ್ತಾನೆ.

ಯಾವನು ಪ್ರತಿದಿನವೂ ಅಗ್ನಿಹೋತ್ರವನ್ನು ಮಾಡುತ್ತಾ ಇಪ್ಪತ್ತಾರು ದಿವಸಗಳವರೆಗೆ ಉಪವಾಸದಿಂದಿದ್ದು ಪ್ರತಿ ಇಪ್ಪತ್ತೇಳನೆಯ ದಿವಸ ಒಪ್ಪತ್ತು

ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ವಿಪುಲವಾದ ಫಲವನ್ನು ಹೊಂದುವುದಲ್ಲದೇ ದೇವಲೋಕಗಳಲ್ಲಿಯೂ ಸಮ್ಮಾನಿತನಾಗುತ್ತಾನೆ. ಅಲ್ಲಿ ಅವನು ವಾಸಮಾಡುತ್ತಾ ಅಮೃತಪಾನ ಮಾಡುತ್ತಾ ತೃಷ್ಣೆಯಿಲ್ಲದವನಾಗಿ ಆನಂದದಿಂದಿರುತ್ತಾನೆ. ದಿವ್ಯರೂಪವನ್ನು ಧರಿಸುವ ಆ ಮಹಾತ್ಮನು ರಾಜರ್ಷಿಗಳಿಂದ ಹೇಳಲ್ಪಡುವ ದೇವರ್ಷಿಗಳ ಪುಣ್ಯಚರಿತ್ರೆಗಳನ್ನು ಕೇಳುತ್ತಿರುತ್ತಾನೆ. ಶ್ರೇಷ್ಠವಾದ ವಿಮಾನದಲ್ಲಿ ಕುಳಿತು ಮದೋತ್ಕಟನಾಗಿ ಮನೋಭಿರಾಮೆಯರಾದ ಸ್ತ್ರೀಯರೊಡನೆ ರಮಿಸುತ್ತಾ ಮೂರುಸಾವಿರ ಯುಗಕಲ್ಪಗಳವರೆಗೆ ಸುಖವಾಗಿರುತ್ತಾನೆ.

ಜಿತಮನಸ್ಕನಾದ ಮತ್ತು ಜಿತೇಂದ್ರಿಯನಾದ ಯಾವನು ಇಪ್ಪತ್ತೇಳು ದಿವಸಗಳು ಉಪವಾಸಮಾಡಿ ಪ್ರತಿ ಇಪ್ಪತ್ತೆಂಟನೆಯ ದಿವಸ ಒಪ್ಪತ್ತು ಭೋಜನಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ತಪಸ್ವಿಗಳಾದ ದೇವರ್ಷಿಗಳಿಗೆ ಪ್ರಾಪ್ತವಾಗುವ ಮಹಾಫಲವನ್ನು ಹೊಂದುತ್ತಾನೆ. ಸಕಲವಿಧವಾದ ಭೋಗಗಳಿಂದಲೂ ಸಂಪನ್ನನಾಗಿ ತನ್ನ ತೇಜಸ್ಸಿನಿಂದ ನಿರ್ಮಲನಾದ ಸೂರ್ಯನಂತೆಯೇ ಪ್ರಕಾಶಮಾನನಾಗುತ್ತಾನೆ. ಮನಸ್ಸಿಗೆ ಆಹ್ಲಾದವನ್ನುಂಟುಮಾಡುವ, ಸೂರ್ಯಸದೃಶವಾದ, ಸಕಲ ವಿಧವಾದ ಕಾಮನೆಗಳನ್ನೂ ಒದಗಿಸಿಕೊಡುವ, ದಿವ್ಯವಾದ ವಿಮಾನದಲ್ಲಿ ಕುಳಿತಿರುವ ಅವನನ್ನು ಸುಕುಮಾರಿಯರಾದ, ಸುಂದರವಾದ ಕಾಂತಿಯಿಂದ ಕೂಡಿರುವ, ಸ್ಥೂಲವಾದ ಕುಚಗಳನ್ನೂ ತೊಡೆಗಳನ್ನೂ ಮತ್ತು ಕಟಿಪ್ರದೇಶಗಳನ್ನೂ ಹೊಂದಿರುವ, ದಿವ್ಯಾಭರಣಭೂಷಿತೆಯರಾದ ನಾರಿಯರು ಹತ್ತು ಲಕ್ಷ ಕಲ್ಪವರ್ಷಗಳವರೆಗೂ ವಿಲಾಸ-ವಿಭ್ರಮಗಳಿಂದ ಸೇವಿಸುತ್ತಿರುತ್ತಾರೆ.

ಸತ್ಯಪರಾಯಣನಾದ ಯಾವನು ಇಪ್ಪತ್ತೆಂಟು ದಿವಸಗಳು ಉಪವಾಸ ಮಾಡಿ ಪ್ರತಿ ಇಪ್ಪತ್ತೊಂಬತ್ತನೆಯ ದಿವಸ ಒಂದು ಹೊತ್ತು ಭೋಜನ ಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನಿಗೆ ದೇವರ್ಷಿಗಳಿಂದಲೂ ಸಂಪೂಜಿತವಾದ, ಮಂಗಳಮಯವಾದ, ದಿವ್ಯವಾದ

ಲೋಕಗಳು ಲಭಿಸುತ್ತವೆ. ಸೂರ್ಯ-ಚಂದ್ರರಂತೆ ಪ್ರಕಾಶಮಾನವಾದ, ದಿವ್ಯವಾದ, ಸುವರ್ಣಮಯವಾದ, ಸರ್ವರತ್ನಗಳಿಂದಲೂ ವಿಭೂಷಿತ ವಾದ, ಅವಶ್ಯವಾದ ವಸ್ತುಗಳಿಂದ ಯುಕ್ತವಾದ ವಿಮಾನವನ್ನು ಪಡೆದು ಕೊಳ್ಳುತ್ತಾನೆ. ಆ ವಿಮಾನವು ಅಪ್ಸರೆಯರ ಸಮೂಹದಿಂದ ತುಂಬಿ ಹೋಗಿರುತ್ತದೆ. ಗಂಧರ್ವರ ಗಾಯನದಿಂದ ನಿನಾದಿತವಾಗಿರುತ್ತದೆ. ಅಲ್ಲಿ ಆ ಮಹಾಪುರುಷನೊಡನೆ ಮದಮತ್ತೆಯರಾದ, ಶುಭವನ್ನುಂಟುಮಾಡುವ, ದಿವ್ಯಾಭರಣಗಳಿಂದ ಸಮಲಂಕೃತೆಯರಾದ, ಮನಸ್ಸಿಗೆ ಆಹ್ಲಾದವನ್ನುಂಟು ಮಾಡುವ, ಮಧುರಭಾಷಿಣಿಯರಾದ ನಾರಿಯರು ರಮಿಸುತ್ತಿರುತ್ತಾರೆ. ಭೋಗವಂತನಾದ, ತೇಜೋವಂತನಾದ, ಅಗ್ನಿಯ ಪ್ರಭೆಗೆ ಸಮಾನವಾದ ಪ್ರಭೆಯಿಂದ ಕೂಡಿರುವ ತನ್ನ ದಿವ್ಯವಾದ ಶರೀರದಿಂದ ದೇವತೆಗಳಂತೆಯೇ ಪ್ರಕಾಶಮಾನನಾಗಿರುವ, ದಿವ್ಯಭಾವದಿಂದ ಯುಕ್ತನಾಗಿರುವ ಆ ಮಹಾ ಪುರುಷನು ವಸುಗಳ, ಮರುತ್ತರ, ಸಾಧ್ಯರ, ಅಶ್ವಿನೀದೇವತೆಗಳ, ರುದ್ರರ ಮತ್ತು ಬ್ರಹ್ಮನ ಲೋಕಗಳಿಗೆ ಹೋಗುತ್ತಾನೆ.

ಶಾಂತಾತ್ಮನಾದ ಯಾವನು ಇಪ್ಪತ್ತೊಂಬತ್ತು ದಿವಸಗಳು ಉಪವಾಸಮಾಡಿ ಪ್ರತಿ ಮೂವತ್ತನೆಯ ದಿನ ಒಪ್ಪತ್ತು ಊಟಮಾಡುತ್ತಾ ಹನ್ನೆರಡು ಮಾಸಗಳನ್ನು ಕಳೆಯುವನೋ–ಅಂತಹವನು ಬ್ರಹ್ಮಲೋಕವನ್ನು ಹೊಂದುತ್ತಾನೆ. ಸುಧಾರಸವನ್ನೇ ಆಹಾರವನ್ನಾಗಿ ಸೇವಿಸುವ, ಶ್ರೀಮಂತ ನಾದ, ಸರ್ವರ ಮನಸ್ಸನ್ನೂ ಆಕರ್ಷಿಸುವ ಆ ಮಹಾಪುರುಷನು ತೇಜಸ್ಸಿನಿಂದಲೂ, ಶರೀರದಿಂದಲೂ, ಕಾಂತಿಯಿಂದಲೂ ಸೂರ್ಯ ನಂತೆಯೇ ವಿರಾಜಿಸುತ್ತಾನೆ. ದಿವ್ಯವಾದ ಮಾಲೆಯನ್ನೂ-ವಸ್ತ್ರಗಳನ್ನೂ ಧರಿಸುತ್ತಾ ದಿವ್ಯಗಂಧವನ್ನೂ ಲೇಪಿಸಿಕೊಳ್ಳುವ ಆ ಮಹಾಪುರುಷನು ಸುಖ ಗಳಲ್ಲಿ ಅಭಿರುಚಿಯುಳ್ಳವನಾಗಿಯೂ, ಭೋಗಿಯಾಗಿಯೂ, ದುಃಖವೆಂಬು ದನ್ನೇ ತಿಳಿಯದವನಾಗಿಯೂ ಇರುತ್ತಾನೆ. ವಿಮಾನಾರೂಢನಾದ ಅವನನ್ನು ತಮ್ಮ ಪ್ರಭೆಯಿಂದಲೇ ಪ್ರಕಾಶಮಾನರಾಗಿ ಕಾಣುವ ನಾರಿಯರು ಸಮ್ಮಾ ನಿಸುತ್ತಾರೆ. ರುದ್ರಕನ್ಯೆಯರೂ, ದೇವಕನ್ಯೆಯರೂ ಮತ್ತು ಋಷಿಕನ್ಯೆಯರೂ ಯಾವಾಗಲೂ ಅವನನ್ನು ಪೂಜಿಸುತ್ತಾರೆ. ಅವರೆಲ್ಲರೂ ನಾನಾಪ್ರಕಾರ

ವಾದ ರಮಣೀಯವಾದ ರೂಪಗಳಿಂದಲೂ, ನಾನಾಪ್ರಕಾರವಾದ ಅನುರಾಗ ಗಳಿಂದಲೂ, ನಾನಾವಿಧವಾದ ಸುಮಧುರವಾದ ಮಾತುಗಳಿಂದಲೂ, ನಾನಾವಿಧವಾದ ರತಿವಿಲಾಸಗಳಿಂದಲೂ, ಸಂಪನ್ನರಾಗಿರುತ್ತಾರೆ. ಹಿಂಭಾಗ ದಲ್ಲಿ ಚಂದ್ರಸದೃಶವಾಗಿರುವ, ಮುಂಭಾಗದಲ್ಲಿ ಮೇಘಸದೃಶವಾಗಿರುವ, ಬಲಭಾಗದಲ್ಲಿ ಕೆಂಪಾದ ಪ್ರಭೆಯಿಂದ ಕೂಡಿರುವ, ಕೆಳಭಾಗದಲ್ಲಿ ನೀಲಮಂಡಲದಂತೆ ಕಾಣುತ್ತಿರುವ, ಮೇಲ್ಭಾಗದಲ್ಲಿ ಅನೇಕ ವರ್ಣಗಳ ಸಮ್ಮಿಶ್ರಣದಿಂದ ವಿಚಿತ್ರವಾಗಿ ಕಾಣುತ್ತಿರುವ, ಗಗನದಂತೆ ವಿಸ್ತಾರವಾಗಿರುವ, ಸೂರ್ಯನಂತೆಯೂ ವೈಡೂರ್ಯಮಣಿಯಂತೆಯೂ ಕಾಣುತ್ತಿರುವ ವಿಮಾನದಲ್ಲಿ ಅನೇಕ ನಾರೀಮಣಿಯರಿಂದ ಸಂಪೂಜಿತನಾಗಿ ಅವನು ವಾಸಮಾಡುತ್ತಿರುತ್ತಾನೆ.

ಮೇಘಮಂಡಲವು ಜಂಬೂದ್ವೀಪದಲ್ಲಿ ಎಷ್ಟು ಮಳೆಯ ಹನಿಗಳನ್ನು ಸುರಿಸುತ್ತದೆಯೋ–ಅಷ್ಟು ಸಾವಿರ ವರ್ಷಗಳು ಧೀಮಂತನಾದ ಆ ಮಹಾ ಪುರುಷನು ಬ್ರಹ್ಮಲೋಕದಲ್ಲಿ ವಾಸವಾಗಿರುತ್ತಾನೆ. ವರ್ಷರ್ತುವಿನಲ್ಲಿ ಆಕಾಶದಿಂದ ಭೂಮಿಯ ಮೇಲೆ ಎಷ್ಟು ತುಂತುರುಗಳು ಬೀಳುವುವೋ ಅಷ್ಟು ವರ್ಷಗಳವರೆಗೆ ದೇವೋಪಮತೇಜಸ್ವಿಯಾದ ಆ ಮಹಾಪುರುಷನು ಬ್ರಹ್ಮಲೋಕದಲ್ಲಿ ವಾಸವಾಗಿರುತ್ತಾನೆ.

ಯಾವನು ಮೂವತ್ತು ದಿವಸಗಳು ಉಪವಾಸಮಾಡಿ ಪ್ರತಿ ಮೂವತ್ತೊಂದನೆಯ ದಿವಸ ಭೋಜನಮಾಡುತ್ತಾ ಹತ್ತು ವರ್ಷಗಳನ್ನು ಕಳೆಯುವನೋ–ಅವನು ಶ್ರೇಷ್ಠವಾದ ಸ್ವರ್ಗವನ್ನು ಸೇರುತ್ತಾನೆ. ಮಹರ್ಷಿತ್ವವನ್ನು ಪಡೆಯುತ್ತಾನೆ ಮತ್ತು ಸಶರೀರನಾಗಿಯೇ ದಿವ್ಯಲೋಕ ಗಳಿಗೂ ಹೋಗುತ್ತಾನೆ.

ಮುನಿಯಾದ, ಜಿತೇಂದ್ರಿಯನಾದ, ಜಿತಕ್ರೋಧನಾದ, ಕಾಮವನ್ನೂ ಹಸಿವನ್ನೂ ಜಯಿಸಿರುವ, ನಿಯಮಪೂರ್ವಕವಾಗಿ ಅಗ್ನಿತ್ರಯಗಳಲ್ಲಿಯೂ ಆಹುತಿಯನ್ನರ್ಪಿಸುವ, ಸಂಧ್ಯೋಪಾಸನೆಯಲ್ಲಿ ತತ್ಪರನಾದ, ಪವಿತ್ರನಾದ ಯಾವ ಮನುಷ್ಯನು ಬಹುಪ್ರಕಾರವಾದ ಈ ನಿಯಮಗಳಿಂದ ಭೋಜನಮಾಡುವನೋ–ಅವನು ಆಕಾಶದಂತೆ ನಿರ್ಮಲನಾಗಿರುತ್ತಾನೆ. ಸೂರ್ಯನ ಪ್ರಕಾಶಕ್ಕೆ ಸಮಾನವಾದ ಪ್ರಕಾಶದಿಂದ ವಿರಾಜಿಸುತ್ತಾನೆ.

ಇಂತಹ ಗುಣಗಳಿಂದ ಯುಕ್ತನಾದ ಮನುಷ್ಯನು ಸಶರೀರನಾಗಿಯೇ ಸ್ವರ್ಗಕ್ಕೆ ಹೋಗಿ ದೇವತೆಯೋಪಾದಿಯಲ್ಲಿ ತನ್ನ ಇಚ್ಛಾನುಸಾರವಾಗಿ ಪುಣ್ಯಫಲವನ್ನು ಉಪಭೋಗಿಸುತ್ತಾನೆ.

ಭರತಶ್ರೇಷ್ಠನೇ! ಉಪವಾಸಫಲಾತ್ಮಕವಾದ ಯಜ್ಞಗಳ ಉತ್ತಮ ವಿಧಿಯನ್ನು ಅನುಕ್ರಮವಾಗಿ ಹೇಳಿದ್ದೇನೆ. ದರಿದ್ರರಾದವರೂ ಈ ಉಪವಾಸ ವ್ರತದಿಂದ ಯಜ್ಞಮಾಡಿದ ಫಲವನ್ನು ಹೇಗೆ ಹೊಂದುವರೆಂಬುದನ್ನೂ ಹೇಳಿದ್ದೇನೆ.

ದೇವ-ಬ್ರಾಹ್ಮಣಪೂಜೆಯಲ್ಲಿ ತತ್ಪರನಾಗಿದ್ದು ಇಲ್ಲಿ ಹೇಳಿರುವ ಉಪವಾಸವ್ರತಗಳನ್ನು ಅನುಷ್ಠಾನಮಾಡುವವನು ಪರಮಗತಿಯನ್ನು ಹೊಂದುತ್ತಾನೆ. ನಿಯಮಾನುಷ್ಠಾನದಿಂದಿರುವ, ಜಾಗ್ರತರಾಗಿರುವ, ಶೌಚಾಚಾರಗಳಿಂದ ಕೂಡಿರುವ, ದಂಭ-ದ್ರೋಹಗಳಿಂದ ರಹಿತರಾದ, ವಿಶುದ್ಧವಾದ ಬುದ್ಧಿಯುಳ್ಳ, ಅಚಲವಾದ ಮತ್ತು ಸ್ಥಿರವಾದ ಸ್ವಭಾವವುಳ್ಳ ಮಹಾತ್ಮರ ಸಲುವಾಗಿ ಈ ಉಪವಾಸವಿಧಿಯನ್ನು ವಿಸ್ತಾರವಾಗಿ ಹೇಳಿದ್ದೇನೆ. ಈ ವಿಷಯದಲ್ಲಿ ನೀನು ಸ್ವಲ್ಪವಾದರೂ ಸಂಶಯಪಡಬೇಕಾಗಿಲ್ಲ."

೧೦೭ನೆಯ ಅಧ್ಯಾಯವು ಮುಗಿಯಿತು..

೧೦೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಮಾನಸ ಮತ್ತು ಪಾರ್ಥಿವತೀರ್ಥಗಳ ಮಹತ್ತ್ವ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಯದ್ವರಂ ಸರ್ವತೀರ್ಥಾನಾಂ ತನ್ಮೇ ಬ್ರೂಹಿ ಪಿತಾಮಹ ।
ಯತ್ರ ಚೈವ ಪರಂ ಶೌಚಂ ತನ್ಮೇ ವ್ಯಾಖ್ಯಾತುಮರ್ಹಸಿ ॥೧॥

"ಪಿತಾಮಹನೇ! ಎಲ್ಲ ತೀರ್ಥಗಳಿಗಿಂತಲೂ ಶ್ರೇಷ್ಠವಾದ ತೀರ್ಥವು ಯಾವುದು? ಯಾವ ತೀರ್ಥಕ್ಕೆ ಹೋಗುವುದರಿಂದ ಮನುಷ್ಯನು ಪರಮಪವಿತ್ರನಾಗುತ್ತಾನೆ? ಈ ವಿಷಯವನ್ನು ನನಗೆ ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ವಿದ್ವಾಂಸರಾದವರಿಗೆ ಪೃಥ್ವಿಯಲ್ಲಿರುವ ಸರ್ವತೀರ್ಥಗಳೂ ಪಾವಿತ್ರ್ಯವನ್ನುಂಟುಮಾಡುವ ಸಕಲಗುಣಗಳಿಂದಲೂ ಯುಕ್ತವಾದ ತೀರ್ಥಗಳೇ ಆಗಿವೆ. ಆದರೆ ಆ ತೀರ್ಥಗಳಲ್ಲಿ ಯಾವುದು ಪರಮಪವಿತ್ರವಾದ ತೀರ್ಥವೆಂಬುದನ್ನು ಹೇಳುವೆನು; ಕೇಳು.

ಅಗಾಧೇ ವಿಮಲೇ ಶುದ್ಧೇ ಸತ್ಯತೋಯೇ ಧೃತಿಹ್ರದೇ ।
ಸ್ನಾತವ್ಯಂ ಮಾನಸೇ ತೀರ್ಥೇ ಸತ್ವಮಾಲಮ್ಬ್ಯ ಶಾಶ್ವತಮ್ ॥೩॥

ಯಾವುದರಲ್ಲಿ ಧೈರ್ಯರೂಪವಾದ ಮಡುವು ಇರುವುದೋ, ಸತ್ಯರೂಪವಾದ ನೀರಿರುವುದೋ ಮತ್ತು ಯಾವುದು ಹೆಚ್ಚು ಆಳವೂ, ನಿರ್ಮಲವೂ, ಶುದ್ಧವೂ ಆಗಿರುವುದೋ–ಅಂತಹ ಮನಸ್ಸೆಂಬ ತೀರ್ಥದಲ್ಲಿ ಶಾಶ್ವತಸತ್ತ್ವದ (ಪರಬ್ರಹ್ಮದ) ಆಶ್ರಯವನ್ನು ಪಡೆದು ಸ್ನಾನಮಾಡಬೇಕು.

ತೀರ್ಥಶೌಚಮನರ್ಥಿತ್ವಮಾರ್ಜವಂ ಸತ್ಯಮಾರ್ದವಮ್ ।
ಅಹಿಂಸಾ ಸರ್ವಭೂತಾನಾಮಾನೃಶಂಸ್ಯಂ ದಮಃ ಶಮಃ ॥೪॥

ಯಾಚನೆಮಾಡದೇ ಇರುವುದು, ಸರಳತೆ, ಸತ್ಯನಿಷ್ಠೆ, ಮೃದುತ್ವ, ಯಾವ ಪ್ರಾಣಿಯನ್ನೂ ಹಿಂಸಿಸದೇ ಇರುವುದು, ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾಪರತೆ, ಇಂದ್ರಿಯಗಳ ಸಂಯಮ ಮತ್ತು ಮನೋನಿಗ್ರಹ–ಇವು ಮಾನಸತೀರ್ಥಸ್ನಾನದಿಂದ ಪ್ರಾಪ್ತವಾಗುವ ಪಾವಿತ್ರ್ಯದ ಲಕ್ಷಣಗಳಾಗಿವೆ.

(ಮನಸ್ಸೆಂಬ ತೀರ್ಥದಲ್ಲಿ ಸತತವಾಗಿ ಮುಳುಗುತ್ತಾ ಹೃಚ್ಛಯನಾದ ಪರಮಾತ್ಮನನ್ನು ಧ್ಯಾನಮಾಡುತ್ತಿದ್ದರೆ ಈ ಗುಣಗಳೆಲ್ಲವೂ ಮೈಗೂಡಿ ಬರುತ್ತವೆ.)

ನಿರ್ಮಮಾ ನಿರಹಂಕಾರಾ ನಿರ್ದ್ವನ್ದ್ವಾ ನಿಷ್ಪರಿಗ್ರಹಾಃ ।
ಶುಚಯಸ್ತೀರ್ಥಭೂತಾಸ್ತೇ ಯೇ ಭೈಕ್ಷ್ಯಮುಪಭುಞ್ಜತೇ ॥೫॥

ಯಾರು ಮಮತೆ, ಅಹಂಕಾರ, ಸುಖ-ದುಃಖಾದಿ ದ್ವಂದ್ವಗಳು,

ಪರಿಗ್ರಹ ಇವುಗಳಿಂದ ರಹಿತರಾಗಿರುವರೋ–ಅಂತಹ ಶುದ್ಧಾಂತಃಕರಣ ರಾದ ಸತ್ಪುರುಷರೇ ತೀರ್ಥಸ್ವರೂಪರು.

ತತ್ತ್ವವಿತ್ತ್ವನಹಂಬುದ್ಧಿಸ್ತೀರ್ಥಪ್ರವರಮುಚ್ಯತೇ ।
ಶೌಚಲಕ್ಷಣಮೇತತ್ತೇ ಸರ್ವತ್ರೈವಾನ್ವವೇಕ್ಷತಃ ॥೬॥

ಯಾವನ ಬುದ್ಧಿಯಲ್ಲಿ ಅಹಂಕಾರದ ಕುರುಹೂ ಇಲ್ಲವೋ ಮತ್ತು ಯಾವನು ಬ್ರಹ್ಮತತ್ತ್ವವನ್ನು ತಿಳಿದಿರುವನೋ–ಅಂತಹವನನ್ನು ಶ್ರೇಷ್ಠನಾದ ತೀರ್ಥಸ್ವರೂಪನೆಂದು ಹೇಳುತ್ತಾರೆ. ಯುಧಿಷ್ಠಿರ! ನಿನಗೆ ಈ ಪವಿತ್ರತೆಯ ಲಕ್ಷಣವನ್ನು ಹೇಳಿದ್ದೇನೆ. ತೀರ್ಥದ ಈ ಲಕ್ಷಣವು ಸರ್ವತ್ರ ಕಂಡುಬರುತ್ತದೆ.

ರಜಸ್ತಮಃ ಸತ್ತ್ವಮಥೋ ಯೇಷಾಂ ನಿರ್ಧೌತಮಾತ್ಮನಃ ।
ಶೌಚಾಶೌಚಸಮಾಯುಕ್ತಾಃ ಸ್ವಕಾರ್ಯಪರಿಮಾರ್ಗಿಣಃ ॥೭॥

ಸರ್ವತ್ಯಾಗೇಷ್ವಭಿರತಾಃ ಸರ್ವಜ್ಞಾಃ ಸಮದರ್ಶಿನಃ ।
ಶೌಚೇನ ವೃತ್ತಶೌಚಾರ್ಥಾಸ್ತೇ ತೀರ್ಥಾಃ ಶುಚಯಶ್ಚ ಯೇ ॥೮॥

ಯಾರ ಮನಸ್ಸಿನಲ್ಲಿ ಸತ್ತ್ವರಜಸ್ತಮೋಗುಣಗಳು ತೊಳೆಯಲ್ಪಟ್ಟಿ ವೆಯೋ (ಯಾರು ತ್ರಿಗುಣಾತೀತರೋ), ಬಾಹ್ಯವಾದ ಪವಿತ್ರತೆ ಮತ್ತು ಅಪವಿತ್ರತೆಗಳಿಂದ ಯುಕ್ತರಾಗಿದ್ದರೂ ಸ್ವಕಾರ್ಯವಾದ ತತ್ತ್ವವಿಚಾರ-ಧ್ಯಾನ-ಉಪಾಸನಾದಿಗಳಲ್ಲಿ ಯಾವಾಗಲೂ ತೊಡಗಿರುವರೋ, ಸರ್ವಸ್ವವನ್ನೂ ತ್ಯಾಗಮಾಡುವುದರಲ್ಲಿಯೇ ಅಭಿರುಚಿಯುಳ್ಳವರೋ, ಸರ್ವಜ್ಞರೋ, ಸಮದರ್ಶಿಗಳೋ, ಶೌಚಾಚಾರಗಳ ಪಾಲನೆಯ ಮೂಲಕ ಆತ್ಮಶುದ್ಧಿಯನ್ನು ಸಾಧಿಸುವರೋ–ಅಂತಹವರೇ ಪರಮತೀರ್ಥಸ್ವರೂಪರು. ಅವರೇ ಶುಚಿಗಳು.

ನೋದಕಕ್ಲಿನ್ನಗಾತ್ರಸ್ತು ಸ್ನಾನ ಇತ್ಯಭಿಧೀಯತೇ ।
ಸ ಸ್ನಾತೋ ಯೋ ದಮಸ್ನಾತಃ ಸ ಬಾಹ್ಯಾಭ್ಯನ್ತರಃ ಶುಚಿಃ ॥೯॥

ಕೇವಲ ನೀರಿನಿಂದ ಶರೀರವನ್ನು ತೊಳೆದವನನ್ನು ಸ್ನಾನಮಾಡಿದವ ನೆಂದು ಹೇಳಲಾಗುವುದಿಲ್ಲ. ಇಂದ್ರಿಯನಿಗ್ರಹರೂಪವಾದ ನೀರಿನಲ್ಲಿ ಯಾವನು ಸ್ನಾನಮಾಡಿರುವನೋ ಅಂತಹವನನ್ನೇ 'ಸ್ನಾನಮಾಡಿದವನು'– ಎಂದು ಹೇಳಬೇಕು. ಇಂದ್ರಿಯನಿಗ್ರಹರೂಪವಾದ ನೀರಿನಲ್ಲಿ ಸ್ನಾನ ಮಾಡಿದವನು ಹೊರಗೂ ಮತ್ತು ಒಳಗೂ ಶುದ್ಧನಾಗುತ್ತಾನೆ.

ಅತೀತೇಷ್ವನಪೇಕ್ಷಾ ಯೇ ಪ್ರಾಪ್ತೇಷ್ವರ್ಥೇಷು ನಿರ್ಮಮಾಃ ।
ಶೌಚಮೇವಂ ಪರಂ ತೇಷಾಂ ಯೇಷಾಂ ನೋತ್ಪದ್ಯತೇ ಸ್ಪೃಹಾ ॥

ಯಾರು ಕಳೆದುಹೋದುದಕ್ಕಾಗಿ ಅಥವಾ ನಷ್ಟವಾದುದಕ್ಕಾಗಿ ಪುನಃ ಅಪೇಕ್ಷೆಪಡುವುದಿಲ್ಲವೋ (ಅದಕ್ಕಾಗಿ ಚಿಂತಿಸುವುದಿಲ್ಲವೋ), ಪ್ರಾಪ್ತವಾದ ಪದಾರ್ಥಗಳ ವಿಷಯದಲ್ಲಿ ಮಮತೆಯನ್ನು ಇಟ್ಟುಕೊಳ್ಳುವುದಿಲ್ಲವೋ, ಯಾರಿಗೆ ಯಾವುದರಲ್ಲಿಯೂ ಬಯಕೆಯುಂಟಾಗುವುದಿಲ್ಲವೋ ಅಂತಹ ವರಲ್ಲಿಯೇ ಪರಮಪವಿತ್ರತೆಯುಂಟಾಗುತ್ತದೆ.

ಪ್ರಜ್ಞಾನಂ ಶೌಚಮೇವೇಹ ಶರೀರಸ್ಯ ವಿಶೇಷತಃ ।
ತಥಾ ನಿಷ್ಕಿಂಚನತ್ವಂ ಚ ಮನಸಶ್ಚ ಪ್ರಸನ್ನತಾ ॥೧೧॥

ಈ ಪ್ರಪಂಚದಲ್ಲಿ ಪ್ರಜ್ಞಾನವೇ (ತಿಳಿದುಕೊಳ್ಳುವ ಮತ್ತು ವಿಚಾರಮಾಡುವ ಶಕ್ತಿಯೇ) ಶರೀರಶುದ್ಧಿಗೆ ವಿಶೇಷವಾದ ಸಾಧನವಾಗಿದೆ. ಹಾಗೆಯೇ ನಿಷ್ಕಿಂಚನತ್ವ (ತನ್ನದೆಂಬುದು ಯಾವುದೂ ಇಲ್ಲದೇ ಇರುವುದು) ಮತ್ತು ಮನಃಪ್ರಸನ್ನತೆಗಳೂ ಶರೀರಶುದ್ಧಿಗೆ ಸಾಧಕಗಳಾಗುತ್ತವೆ.

ವೃತ್ತಶೌಚಂ ಮನಃಶೌಚಂ ತೀರ್ಥಶೌಚಮತಃ ಪರಮ್ ।
ಜ್ಞಾನೋತ್ಪನ್ನಂ ಚ ಯಚ್ಛೌಚಂ ತಚ್ಛೌಚಂ ಪರಮಂ ಸ್ಮೃತಮ್ ॥೧೨॥

ಆಚಾರಶುದ್ಧಿ, ಮನಃಶುದ್ಧಿ, ತೀರ್ಥಶುದ್ಧಿ, ಮತ್ತು ಜ್ಞಾನಶುದ್ಧಿ–ಹೀಗೆ ಶುದ್ಧಿಯು ನಾಲ್ಕು ಪ್ರಕಾರವಾಗಿದೆ. ಇವುಗಳಲ್ಲಿ ಜ್ಞಾನದಿಂದ ಪ್ರಾಪ್ತವಾಗುವ ಶುದ್ಧಿಯೇ ಪರಮಶ್ರೇಷ್ಠವಾದುದೆಂದು ಹೇಳಲ್ಪಟ್ಟಿದೆ.

ಮನಸಾ ಚ ಪ್ರದೀಪ್ತೇನ ಬ್ರಹ್ಮಜ್ಞಾನಜಲೇನ ಚ ।
ಸ್ನಾತಿ ಯೋ ಮಾನಸೇ ತೀರ್ಥೇ ತತ್ಸ್ನಾನಂ ತತ್ತ್ವದರ್ಶಿನಃ ॥೧೩॥

ಪ್ರದೀಪ್ತವಾದ (ಪ್ರಸನ್ನವಾದ ಮತ್ತು ಶುದ್ಧವಾದ) ಮನಸ್ಸಿನಿಂದಲೂ ಬ್ರಹ್ಮಜ್ಞಾನವೆಂಬ ನೀರಿನಿಂದಲೂ ಕೂಡಿರುವ ಮಾನಸತೀರ್ಥದಲ್ಲಿ ಯಾವನು ಸ್ನಾನಮಾಡುವನೋ–ಅವನೇ ತೀರ್ಥಸ್ನಾತನಾಗುತ್ತಾನೆ. ಬ್ರಹ್ಮತತ್ತ್ವವನ್ನು ಕಂಡುಕೊಂಡವರ ಸ್ನಾನವು ಅದೇ ಆಗಿದೆ.

ಸಮಾರೋಪಿತಶೌಚಸ್ತು ನಿತ್ಯಂ ಭಾವಸಮಾಹಿತಃ ।
ಕೇವಲಂ ಗುಣಸಂಪನ್ನಃ ಶುಚಿರೇವ ನರಃ ಸದಾ ॥೧೪॥

ಯಾವನು ಶೌಚಾಚಾರದಿಂದ ಸಂಪನ್ನನಾಗಿರುವನೋ, ವಿಶುದ್ಧಭಾವದಿಂದ ಕೂಡಿರುವನೋ, ಸಕಲಸದ್ಗುಣಸಂಪನ್ನನೋ–ಅಂತಹ ಮನುಷ್ಯನು ಸದಾ ಶುಚಿಯಾಗಿರುವನೆಂದೇ ತಿಳಿಯಬೇಕು.

ಯುಧಿಷ್ಠಿರ! ಈಗ ನಾನು ನಮ್ಮ ಶರೀರದಲ್ಲಿಯೇ ಇರುವ ತೀರ್ಥದ ವಿಷಯವಾಗಿ ಹೇಳಿದೆನು. ಮುಂದೆ ನಾನು ಪೃಥ್ವಿಯಲ್ಲಿರುವ ಪುಣ್ಯತೀರ್ಥಗಳ ವಿಷಯವಾಗಿ ಹೇಳುತ್ತೇನೆ. ಶರೀರದಲ್ಲಿರುವ ಕೆಲವು ಸ್ಥಳಗಳು ಪವಿತ್ರವಾದುವೆಂದು ಹೇಳಲ್ಪಟ್ಟಿರುವಂತೆ–ಪೃಥ್ವಿಯಲ್ಲಿರುವ ಕೆಲವು ಪ್ರದೇಶಗಳೂ ಮತ್ತು ತೀರ್ಥಗಳೂ ಪವಿತ್ರವಾದುವೆಂದು ಹೇಳಲ್ಪಟ್ಟಿವೆ.

ಕೀರ್ತನಾಚ್ಚೈವ ತೀರ್ಥಸ್ಯ ಸ್ನಾನಾಚ್ಚ ಪಿತೃತರ್ಪಣಾತ್ ।
ಧುನನ್ತಿ ಪಾಪಂ ತೀರ್ಥೇಷು ತೇ ಪ್ರಯಾನ್ತಿ ಸುಖಂ ದಿವಮ್ ॥

ಯಾರು ತೀರ್ಥಗಳ ಹೆಸರನ್ನು ಹೇಳುವರೋ, ತೀರ್ಥಗಳಲ್ಲಿ ಸ್ನಾನಮಾಡುವರೋ ಮತ್ತು ಪಿತೃಗಳಿಗೆ ತರ್ಪಣವನ್ನು ಕೊಡುವರೋ–ಅಂತಹವರು ಆ ತೀರ್ಥಗಳಲ್ಲಿ ತಮ್ಮ ಪಾಪಗಳನ್ನು ತೊಳೆದುಕೊಳ್ಳುತ್ತಾರೆ ಮತ್ತು ಅವಸಾನಾನಂತರದಲ್ಲಿ ಸುಖವಾಗಿ ಸ್ವರ್ಗಕ್ಕೆ ಹೋಗುತ್ತಾರೆ.

ಪರಿಗ್ರಹಾಚ್ಚ ಸಾಧೂನಾಂ ಪೃಥಿವ್ಯಾಶ್ಚೈವ ತೇಜಸಾ ।
ಅತೀವ ಪುಣ್ಯಭಾಗಾಸ್ತೇ ಸಲಿಲಸ್ಯ ಚ ತೇಜಸಾ ॥೧೮॥

ತೀರ್ಥಗಳು–ಸಾಧುಗಳ ಸ್ವೀಕರಣೆಯಿಂದಲೂ (ಸಾಧುಗಳು ತೀರ್ಥಗಳಲ್ಲಿ ಸ್ನಾನಮಾಡುವುದರಿಂದಲೂ), ಸ್ವತಃ ಪೃಥಿವಿಗೆ ಮತ್ತು ನೀರಿಗೆ ಇರುವ ತೇಜಸ್ಸಿನಿಂದಲೂ ಪುಣ್ಯಕ್ಷೇತ್ರಗಳಲ್ಲಿರುವ ತೀರ್ಥಗಳಲ್ಲಿ ಸ್ನಾನ ಮಾಡಿದವರು ಅತ್ಯಂತಪುಣ್ಯಶಾಲಿಗಳಾಗುತ್ತಾರೆ.

ಮನಸಶ್ಚ ಪೃಥಿವ್ಯಾಶ್ಚ ಪುಣ್ಯಾಸ್ತೀರ್ಥಾಸ್ತಥಾಪರೇ ।
ಉಭಯೋರೇವ ಯಃ ಸ್ನಾಯಾತ್ಸ ಸಿದ್ಧಿಂ ಶೀಘ್ರಮಾಪ್ನುಯಾತ್ ॥

ಹೀಗೆ ಮನಸ್ಸಿನಲ್ಲಿಯೂ ಮತ್ತು ಪೃಥ್ವಿಯಲ್ಲಿಯೂ ಪುಣ್ಯಮಯವಾದ ಅನೇಕ ತೀರ್ಥಗಳಿವೆ. ಯಾವನು ಮಾನಸತೀರ್ಥ ಮತ್ತು ಪೃಥ್ವೀತೀರ್ಥಗಳೆರಡರಲ್ಲಿಯೂ ಸ್ನಾನಮಾಡುವನೋ–ಅಂತಹವನು ಬಹಳ ಶೀಘ್ರವಾಗಿ ಪರಮಾತ್ಮಪ್ರಾಪ್ತಿರೂಪವಾದ ಸಿದ್ಧಿಯನ್ನು ಹೊಂದುತ್ತಾನೆ.

ಯಥಾ ಬಲಂ ಕ್ರಿಯಾಹೀನಂ ಕ್ರಿಯಾ ವಾ ಬಲವರ್ಜಿತಾ ।
ನೇಹ ಸಾಧಯತೇ ಕಾರ್ಯಂ ಸಮಾಯುಕ್ತಾ ತು ಸಿಧ್ಯತಿ ॥೨೦॥
ಏವಂ ಶರೀರಶೌಚೇನ ತೀರ್ಥಶೌಚೇನ ಚಾನ್ವಿತಃ ।
ಶುಚಿಃ ಸಿದ್ಧಿಮವಾಪ್ನೋತಿ ದ್ವಿವಿಧಂ ಶೌಚಮುತ್ತಮಮ್ ॥೨೧॥

ಕ್ರಿಯಾಹೀನವಾದ ಬಲದಿಂದಾಗಲೀ–ಬಲವಿಲ್ಲದ ಕ್ರಿಯೆಯಿಂದಾಗಲೀ ಪ್ರಯೋಜನವಿಲ್ಲ. ಕ್ರಿಯೆ ಮತ್ತು ಶಕ್ತಿ ಎರಡೂ ಒಟ್ಟಾಗಿ ಸೇರಿದರೆ ಕಾರ್ಯದ ಸಿದ್ಧಿಯಾಗುತ್ತದೆ. ಹೀಗೆಯೇ ಮಾನಸತೀರ್ಥಸ್ನಾನದ ಮೂಲಕವಾಗಿ ಅಂತಃಕರಣಶುದ್ಧಿಯನ್ನೂ ಪುಣ್ಯತೀರ್ಥಗಳಲ್ಲಿ ಸ್ನಾನಮಾಡುವುದರ ಮೂಲಕವಾಗಿ ಒಳ ಮತ್ತು ಹೊರಶುದ್ಧಿಗಳನ್ನೂ ಹೊಂದಿರುವ ಮನುಷ್ಯನು ಮಹಾಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ಆದುದರಿಂದ ಎರಡೂ ಪ್ರಕಾರವಾದ ಶುದ್ಧಿಯು ಅಗತ್ಯವೆಂದೂ ಉತ್ತಮವೆಂದೂ ವಿದ್ವಾಂಸರು ಹೇಳುತ್ತಾರೆ."

೧೦೮ನೆಯ ಅಧ್ಯಾಯವು ಮುಗಿಯಿತು.

೧೦೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದ್ವಾದಶೀತಿಥಿಯ ಉಪಾಸನೆಯ ಫಲ: ವಿಷ್ಣುಪೂಜೆಯ ಮಹಿಮೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಸರ್ವೇಷಾಮುಪವಾಸಾನಾಂ ಯಚ್ಛ್ರೇಯಃ ಸುಮಹತ್ಫಲಮ್ ।
ಯಚ್ಚಾಪ್ಯಸಂಶಯಂ ಲೋಕೇ ತನ್ಮೇ ತ್ವಂ ವಕ್ತುಮರ್ಹಸಿ ॥೧॥

"ಪಿತಾಮಹನೇ! ಪ್ರಪಂಚದಲ್ಲಿ ಎಲ್ಲ ವಿಧವಾದ ಉಪವಾಸಗಳಲ್ಲಿ ಯಾವುದು ಶ್ರೇಷ್ಠವಾದುದು? ಮಹಾಫಲದಾಯಕವಾದುದು ಮತ್ತು ಸಂದೇಹಕ್ಕೆ ಎಡೆಯಿಲ್ಲದುದು ಯಾವುದು? ಈ ವಿಷಯವನ್ನು ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಈ ವಿಷಯದಲ್ಲಿ ಸಾಕ್ಷಾತ್ ಸ್ವಯಂಭುವೇ ಹೇಳಿರುವ

ಗೀತೆಯನ್ನು ಕೇಳು. ಈ ಗೀತೆಯಲ್ಲಿ ಹೇಳಿರುವಂತೆ ಅನುಷ್ಠಾನ ಮಾಡುವುದರಿಂದ ಮನುಷ್ಯನು ಪರಮಸುಖವನ್ನು ಹೊಂದುತ್ತಾನೆ. ಇದರಲ್ಲಿ ಸಂದೇಹವೇ ಇಲ್ಲ.

ದ್ವಾದಶ್ಯಾಂ ಮಾರ್ಗಶೀರ್ಷೇ ತು ಅಹೋರಾತ್ರೇಣ ಕೇಶವಮ್ ।
ಅರ್ಚ್ಯಾಶ್ವಮೇಧಂ ಪ್ರಾಪ್ನೋತಿ ದುಷ್ಕೃತಂ ಚಾಸ್ಯ ನಶ್ಯತಿ ॥೩॥

ಮಾರ್ಗಶೀರ್ಷಮಾಸದಲ್ಲಿ ಶುಕ್ಲ ದ್ವಾದಶೀತಿಥಿಯಂದು ಉಪವಾಸ ದಿಂದಿದ್ದು ಹಗಲು ಮತ್ತು ರಾತ್ರಿಗಳಲ್ಲಿ 'ಕೇಶವ' ನೆಂಬ ಹೆಸರಿನಿಂದ ವಿಷ್ಣುವನ್ನು ಪೂಜಿಸುವವನು ಅಶ್ವಮೇಧಯಾಗಮಾಡಿದ ಫಲವನ್ನು ಹೊಂದುತ್ತಾನೆ. ಅವನ ಸರ್ವಪಾಪಗಳೂ ನಾಶವಾಗುತ್ತವೆ.

ತಥೈವ ಪೌಷಮಾಸೇ ತು ಪೂಜ್ಯೋನಾರಾಯಣೇತಿ ಚ ।
ವಾಜಪೇಯಮವಾಪ್ನೋತಿ ಸಿದ್ಧಿಂ ಚ ಪರಮಾಂ ವ್ರಜೇತ್ ॥೪॥

ಅದೇ ರೀತಿಯಲ್ಲಿ ಪುಷ್ಯಮಾಸದಲ್ಲಿ ದ್ವಾದಶೀತಿಥಿಯಂದು 'ನಾರಾಯಣ' ಎಂಬ ಹೆಸರಿನಿಂದ ಮಹಾವಿಷ್ಣುವನ್ನು ಪೂಜಿಸಬೇಕು. ಹೀಗೆ ನಿಯಮಪೂರ್ವಕವಾಗಿ ಪೂಜೆಯನ್ನು ಮಾಡುವವನು ವಾಜಪೇಯ ಯಾಗವನ್ನು ಮಾಡುವುದರಿಂದ ಪ್ರಾಪ್ತವಾಗುವ ಫಲವನ್ನು ಪಡೆಯುತ್ತಾನೆ ಮತ್ತು ಪರಮಸಿದ್ಧಿಯನ್ನೂ ಪಡೆಯುತ್ತಾನೆ.

ಅಹೋರಾತ್ರೇಣ ದ್ವಾದಶ್ಯಾಂ ಮಾಘಮಾಸೇ ತು ಮಾಧವಮ್ ।
ರಾಜಸೂಯಮವಾಪ್ನೋತಿ ಕುಲಂ ಚೈವ ಸಮುದ್ಧರೇತ್ ॥೫॥

ಮಾಘಮಾಸದ ದ್ವಾದಶಿಯಲ್ಲಿ ಹಗಲು ಮತ್ತು ರಾತ್ರಿ ಮಹಾ ವಿಷ್ಣುವನ್ನು 'ಮಾಧವ'–ಎಂಬ ಹೆಸರಿನಿಂದ ಪೂಜಿಸುವವನು ರಾಜಸೂಯ ಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ತನ್ನ ಕುಲವನ್ನೂ ಉದ್ಧಾರಮಾಡುತ್ತಾನೆ.

ತಥೈವ ಫಾಲ್ಗುನೇ ಮಾಸಿ ಗೋವಿನ್ದೇತಿ ಚ ಪೂಜಯನ್ ।
ಅತಿರಾತ್ರಮವಾಪ್ನೋತಿ ಸೋಮಲೋಕಂ ಚ ಗಚ್ಛತಿ ॥೬॥

ಅದೇ ರೀತಿಯಲ್ಲಿ ಫಾಲ್ಗುನಮಾಸದ ದ್ವಾದಶಿಯ ದಿವಸ ಮಹಾ ವಿಷ್ಣುವನ್ನು 'ಗೋವಿಂದ'–ಎಂಬ ಹೆಸರಿನಿಂದ ಪೂಜಿಸುವವನು ಅತಿರಾತ್ರ

ಯಾಗಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ಅವಸಾನಾನಂತರದಲ್ಲಿ ಸೋಮಲೋಕಕ್ಕೆ ಹೋಗುತ್ತಾನೆ.

ಅಹೋರಾತ್ರೇಣ ದ್ವಾದಶ್ಯಾಂ ಚೈತ್ರೇ ವಿಷ್ಣುರಿತಿ ಸ್ಮರನ್ ।
ಪೌಣ್ಡರೀಕಮವಾಪ್ನೋತಿ ದೇವಲೋಕಂ ಚ ಗಚ್ಛತಿ ॥೭॥

ಚೈತ್ರಮಾಸದ ದ್ವಾದಶಿಯಂದು ಹಗಲು ಮತ್ತು ರಾತ್ರಿ ಮಹಾವಿಷ್ಣುವನ್ನು 'ವಿಷ್ಣು'–ಎಂಬ ಹೆಸರಿನಿಂದ ಆರಾಧಿಸುವವನು ಪೌಂಡರೀಕಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ಅವಸಾನಾನಂತರದಲ್ಲಿ ದೇವಲೋಕಕ್ಕೆ ಹೋಗುತ್ತಾನೆ.

ವೈಶಾಖಮಾಸೇ ದ್ವಾದಶ್ಯಾಂ ಪೂಜಯನ್ಮಧುಸೂದನಮ್ ।
ಅಗ್ನಿಷ್ಟೋಮಮವಾಪ್ನೋತಿ ಸೋಮಲೋಕಂ ಚ ಗಚ್ಛತಿ ॥೮॥

ವೈಶಾಖಮಾಸದ ದ್ವಾದಶಿಯಲ್ಲಿ ಮಹಾವಿಷ್ಣುವನ್ನು 'ಮಧುಸೂದನ' ಎಂಬ ಹೆಸರಿನಿಂದ ಪೂಜಿಸುವವನು ಅಗ್ನಿಷ್ಟೋಮಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ಅವಸಾನಾನಂತರದಲ್ಲಿ ಸೋಮಲೋಕಕ್ಕೂ ಹೋಗುತ್ತಾನೆ.

ಅಹೋರಾತ್ರೇಣ ದ್ವಾದಶ್ಯಾಂ ಜ್ಯೇಷ್ಠೇ ಮಾಸಿ ತ್ರಿವಿಕ್ರಮಮ್ ।
ಗವಾಂ ಮೇಧಮವಾಪ್ನೋತಿ ಅಪ್ಸರೋಭಿಶ್ಚ ಮೋದತೇ ॥೯॥

ಜ್ಯೇಷ್ಠಮಾಸದ ದ್ವಾದಶಿಯಂದು ಉಪವಾಸದಿಂದಿದ್ದು ಹಗಲು ಮತ್ತು ರಾತ್ರಿ ಮಹಾವಿಷ್ಣುವನ್ನು 'ತ್ರಿವಿಕ್ರಮ'–ಎಂಬ ಹೆಸರಿನಿಂದ ಪೂಜಿಸುವವನು ಗೋಮೇಧಯಜ್ಞದ ಫಲವನ್ನು ಹೊಂದುತ್ತಾನೆ. ಪರಲೋಕದಲ್ಲವನು ಅಪ್ಸರೆಯರೊಡನೆ ಆನಂದಪಡುತ್ತಾನೆ.

ಆಷಾಢೇ ಮಾಸಿ ದ್ವಾದಶ್ಯಾಂ ವಾಮನೇತಿ ಚ ಪೂಜಯನ್ ।
ನರಮೇಧಮವಾಪ್ನೋತಿ ಪುಣ್ಯಂ ಚ ಲಭತೇ ಮಹತ್ ॥೧೦॥

ಆಷಾಢಮಾಸದ ದ್ವಾದಶಿಯಲ್ಲಿ ಮಹಾವಿಷ್ಣುವನ್ನು 'ವಾಮನ'– ಎಂಬ ಹೆಸರಿನಿಂದ ಪೂಜಿಸುವವನು ನರಮೇಧಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ಮಹಾಪುಣ್ಯವನ್ನೂ ಹೊಂದುತ್ತಾನೆ.

ಅಹೋರಾತ್ರೇಣ ದ್ವಾದಶ್ಯಾಂ ಶ್ರಾವಣೇ ಮಾಸಿ ಶ್ರೀಧರಮ್ ।
ಪಞ್ಚಯಜ್ಞಾನವಾಪ್ನೋತಿ ವಿಮಾನಸ್ಥಶ್ಚ ಮೋದತೇ ॥೧೧॥

ಶ್ರಾವಣಮಾಸದ ದ್ವಾದಶಿಯಂದು ಹಗಲು ಮತ್ತು ರಾತ್ರಿ ಮಹಾವಿಷ್ಣುವನ್ನು 'ಶ್ರೀಧರ'–ಎಂಬ ಹೆಸರಿನಿಂದ ಪೂಜಿಸುವವನು ಪಂಚಯಜ್ಞಗಳನ್ನು ಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ವಿಮಾನದಲ್ಲಿ ಇದ್ದುಕೊಂಡು ಆನಂದಪಡುತ್ತಾನೆ.

ತಥಾ ಭಾದ್ರಪದೇ ಮಾಸಿ ಹೃಷೀಕೇಶೇತಿ ಪೂಜಯನ್ ।
ಸೌತ್ರಾಮಣಿಮವಾಪ್ನೋತಿ ಪೂತಾತ್ಮಾ ಭವತೇ ಚ ಹಿ ॥೧೨॥

ಅದೇ ರೀತಿಯಲ್ಲಿ ಭಾದ್ರಪದಮಾಸದ ದ್ವಾದಶಿಯಲ್ಲಿ ಮಹಾವಿಷ್ಣುವನ್ನು 'ಹೃಷೀಕೇಶ'–ಎಂಬ ಹೆಸರಿನಿಂದ ಪೂಜಿಸುವವನು ಸೌತ್ರಾಮಣಿಯಾಗವನ್ನು ಮಾಡಿದ ಫಲವನ್ನು ಹೊಂದುತ್ತಾನೆ ಮತ್ತು ಪೂತಾತ್ಮನಾಗುತ್ತಾನೆ.

ದ್ವಾದಶ್ಯಾಮಾಶ್ವಿನೇ ಮಾಸಿ ಪದ್ಮನಾಭೇತಿ ಚಾರ್ಚಯನ್ ।
ಗೋಸಹಸ್ರಫಲಂ ಪುಣ್ಯಂ ಪ್ರಾಪ್ನುಯಾನ್ನಾತ್ರ ಸಂಶಯಃ ॥೧೩॥

ಆಶ್ವಯುಜಮಾಸದ ದ್ವಾದಶಿಯಲ್ಲಿ ಮಹಾವಿಷ್ಣುವನ್ನು 'ಪದ್ಮನಾಭ'–ಎಂಬ ಹೆಸರಿನಿಂದ ಪೂಜಿಸುವವನು ಸಾವಿರ ಗೋವುಗಳನ್ನು ದಾನಮಾಡಿದ ಫಲವನ್ನು ಹೊಂದುವನೆಂಬುವುದರಲ್ಲಿ ಸಂಶಯವೇ ಇಲ್ಲ.

ದ್ವಾದಶ್ಯಾಂ ಕಾರ್ತಿಕೇ ಮಾಸಿ ಪೂಜ್ಯ ದಾಮೋದರೇತಿ ಚ ।
ಗವಾಂ ಯಜ್ಞಮವಾಪ್ನೋತಿ ಪುಮಾನ್ ಸ್ತ್ರೀ ವಾ ನ ಸಂಶಯಃ ॥೧೪॥

ಕಾರ್ತಿಕಮಾಸದ ದ್ವಾದಶಿಯಲ್ಲಿ ಮಹಾವಿಷ್ಣುವನ್ನು 'ದಾಮೋದರ'–ಎಂಬ ಹೆಸರಿನಿಂದ ಪೂಜಿಸುವವನು ಪುರುಷನಾಗಲೀ ಸ್ತ್ರೀಯಾಗಲೀ–ಗೋಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾರೆ.

ಅರ್ಚಯೇತ್ಪುಣ್ಡರೀಕಾಕ್ಷಮೇವಂ ಸಂವತ್ಸರಂ ತು ಯಃ ।
ಜಾತಿಸ್ಮರತ್ವಂ ಪ್ರಾಪ್ನೋತಿ ವಿನ್ದ್ಯಾದ್ಬಹುಸುವರ್ಣಕಮ್ ॥೧೫॥

ಪುಂಡರೀಕಾಕ್ಷನಾದ ಮಹಾವಿಷ್ಣುವನ್ನು ಪ್ರತಿ ದ್ವಾದಶಿಯಲ್ಲಿಯೂ

ಹೀಗೆ ಒಂದು ವರ್ಷದವರೆಗೆ ಪೂಜೆಮಾಡಬೇಕು. ಹಾಗೆ ಪೂಜಿಸಿದವನು ಜನ್ಮಾಂತರಗಳನ್ನು ಸ್ಮರಿಸಿಕೊಳ್ಳುವ ಶಕ್ತಿಯನ್ನು ಪಡೆಯುತ್ತಾನೆ ಮತ್ತು ಅಪಾರವಾದ ಸುವರ್ಣವನ್ನು (ಐಶ್ವರ್ಯವನ್ನು) ಪಡೆಯುತ್ತಾನೆ.

ಅಹನ್ಯಹನಿ ತದ್ಭಾವಮುಪೇನ್ದ್ರಂ ಯೋಽಧಿಗಚ್ಛತಿ ।
ಸಮಾಪ್ತೇ ಭೋಜಯೇದ್ವಿಪ್ರಾನಥವಾ ದಾಪಯೇದ್ಘೃತಮ್ ॥೧೬॥

ಹೀಗೆ ಯಾವನು ಪ್ರತಿದಿನವೂ ಭಗವಂತನಾದ ಉಪೇಂದ್ರನನ್ನು ಪೂಜಿಸುವನೋ–ಅವನು ಉಪೇಂದ್ರಭಾವವನ್ನೇ ಹೊಂದುತ್ತಾನೆ. ಒಂದು ವರ್ಷದ ಈ ವ್ರತವು ಮುಗಿದನಂತರ ಯಥಾಶಕ್ತಿ ಬ್ರಾಹ್ಮಣರಿಗೆ ಭೋಜನ ಮಾಡಿಸಬೇಕು. ಸಾಧ್ಯವಾಗದಿದ್ದರೆ ಘೃತದಾನವನ್ನಾದರೂ ಮಾಡಬೇಕು.

ಅತಃ ಪರಂ ನೋಪವಾಸೋ ಭವತೀತಿ ವಿನಿಶ್ಚಯಃ ।
ಉವಾಚ ಭಗವಾನ್ವಿಷ್ಣುಃ ಸ್ವಯಮೇವ ಪುರಾತನಮ್ ॥೧೭॥

ಇದಕ್ಕಿಂತಲೂ ಶ್ರೇಷ್ಠವಾದ ಬೇರೆ ಯಾವ ಉಪವಾಸವೂ ಇಲ್ಲ ವೆಂಬುದು ನಿಶ್ಚಿತವಾಗಿದೆ. ಭಗವಂತನಾದ ಮಹಾವಿಷ್ಣುವೇ ಪುರಾತನವಾದ ಈ ವ್ರತದ ವಿಷಯವಾಗಿ ಹೀಗೆ ಹೇಳಿದ್ದಾನೆ.”

೧೦೯ನೆಯ ಅಧ್ಯಾಯವು ಮುಗಿಯಿತು.

೧೧೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ರೂಪ-ಸೌಂದರ್ಯ ಮತ್ತು ಲೋಕಪ್ರಿಯತೆಗಳಿಗಾಗಿ ಮಾರ್ಗಶೀರ್ಷಮಾಸದಲ್ಲಿ ಚಂದ್ರವ್ರತಾಚರಣೆ

ವೈಶಂಪಾಯನರು ಹೇಳುತ್ತಾರೆ:

ಶರತಲ್ಪಗತಂ ಭೀಷ್ಮಂ ವೃದ್ಧಂ ಕುರುಪಿತಾಮಹಮ್ ।
ಉಪಗಮ್ಯ ಮಹಾಪ್ರಾಜ್ಞಃ ಪರ್ಯಪೃಚ್ಛದ್ಯುಧಿಷ್ಠಿರಃ ॥೧॥

“ಜನಮೇಜಯ! ಮಹಾಪ್ರಾಜ್ಞನಾದ ಯುಧಿಷ್ಠಿರನು, ಬಾಣಗಳ ಹಾಸಿಗೆಯಲ್ಲಿ ಮಲಗಿದ್ದ, ವೃದ್ಧನಾದ, ಕುರುಕುಲಪಿತಾಮಹನಾದ ಭೀಷ್ಮನ ಬಳಿಗೆ ಬಂದು ಪ್ರಶ್ನಿಸಿದನು:

ಅಜ್ಞಾನಾಂ ರೂಪಸೌಭಾಗ್ಯಂ ಪ್ರಿಯಂ ಚೈವ ಕಥಂ ಭವೇತ್ ।
ಧರ್ಮಾರ್ಥಕಾಮಸಂಯುಕ್ತಃ ಸುಖಭಾಗೀ ಕಥಂ ಭವೇತ್ ॥೨॥

"ಪಿತಾಮಹನೇ! ಮನುಷ್ಯರಿಗೆ ಶರೀರಸೌಂದರ್ಯಸೌಭಾಗ್ಯವು ಹೇಗೆ ಪ್ರಾಪ್ತವಾಗುತ್ತದೆ? ಮನುಷ್ಯನು ಲೋಕಪ್ರಿಯನು ಹೇಗಾಗುತ್ತಾನೆ? ಧರ್ಮಾರ್ಥಕಾಮಯುಕ್ತನಾದ ಪುರುಷನು ಹೇಗೆ ಸುಖವನ್ನು ಅನುಭವಿಸುತ್ತಾನೆ?–ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಮಾರ್ಗಶೀರ್ಷಸ್ಯ ಮಾಸಸ್ಯ ಚನ್ದ್ರೇ ಮೂಲೇನ ಸಂಯುತೇ ।
ಪಾದೌ ಮೂಲೇನ ರಾಜೇನ್ದ್ರ ಜಙ್ಘಾಯಾಮಥರೋಹಿಣೀಮ್ ॥೩॥

"ಮಾರ್ಗಶೀರ್ಷಮಾಸದ ಶುಕ್ಲ ಪಾಡ್ಯಮಿಯಂದು ಚಂದ್ರನು ಮೂಲಾನಕ್ಷತ್ರದಲ್ಲಿರುವಾಗ ಚಂದ್ರನ ಸಂಬಂಧವಾದ ಈ ವ್ರತವನ್ನು ಆರಂಭಿಸಬೇಕು. ಚಂದ್ರನ ಸ್ವರೂಪವನ್ನು ಸ್ಮರಿಸಿಕೊಂಡು ಅವನ ಪಾದ ಗಳಲ್ಲಿ ಮೂಲಾನಕ್ಷತ್ರಾಧಿದೇವತೆಯನ್ನು ಸ್ಥಾಪಿಸಬೇಕು. ಹಾಗೆಯೇ ಮೊಣಕಾಲು ಗಳಲ್ಲಿ ರೋಹಿಣೀನಕ್ಷತ್ರಾಧಿದೇವತೆಯನ್ನು ಆವಾಹನೆಮಾಡಬೇಕು.

ಅಶ್ವಿನ್ಯಾಂ ಸಕ್ಥಿನೀ ಚೈವ ಊರೂ ಚಾಷಾಢಯೋಸ್ತಥಾ ।
ಗುಹ್ಯಂ ತು ಫಲ್ಗುನೀ ವಿದ್ಯಾತ್ ಕೃತ್ತಿಕಾ ಕಟಿಕಾಸ್ತಥಾ ॥೪॥

ಚಂದ್ರನ ಒಂದು ತೊಡೆಯಲ್ಲಿ ಅಶ್ವಿನೀನಕ್ಷತ್ರಾಧಿದೇವತೆಯನ್ನೂ, ಮತ್ತೊಂದು ತೊಡೆಯಲ್ಲಿ ಪೂರ್ವಾಷಾಢಾ ಮತ್ತು ಉತ್ತರಾಷಾಢಾ ನಕ್ಷತ್ರಗಳ ಅಧಿದೇವತೆಗಳನ್ನೂ, ಗುಹ್ಯಸ್ಥಾನದಲ್ಲಿ ಪೂರ್ವಫಲ್ಗುನೀ ಮತ್ತು ಉತ್ತರಾ ಫಲ್ಗುನೀನಕ್ಷತ್ರಗಳ ಅಧಿದೇವತೆಗಳನ್ನೂ, ಸೊಂಟದಲ್ಲಿ ಕೃತ್ತಿಕಾನಕ್ಷತ್ರಾಧಿ ದೇವತೆಯನ್ನೂ ಆವಾಹಿಸಬೇಕು.

ನಾಭಿಂ ಭಾದ್ರಪದೇ ವಿದ್ಯಾದ್ರೇವತ್ಯಾಮಕ್ಷಿಮಣ್ಡಲಮ್ ।
ಪೃಷ್ಠಮೇವ ಧನಿಷ್ಠಾಸು ಅನುರಾಧೋತ್ತರಾಸ್ತಥಾ ॥೫॥

ಚಂದ್ರನ ನಾಭಿಪ್ರದೇಶದಲ್ಲಿ ಪೂರ್ವಭಾದ್ರಪದಾ ಮತ್ತು ಉತ್ತರ ಭಾದ್ರಪದಾನಕ್ಷತ್ರಗಳ ಅಧಿದೇವತೆಗಳನ್ನೂ, ನೇತ್ರಮಂಡಲಗಳಲ್ಲಿ

ರೇವತೀನಕ್ಷತ್ರದ ಅಧಿದೇವತೆಯನ್ನೂ, ಪೃಷ್ಠಭಾಗದಲ್ಲಿ ಧನಿಷ್ಠಾ- ಅನೂರಾಧಾ ಮತ್ತು ಉತ್ತರಾನಕ್ಷತ್ರಗಳ ಅಧಿದೇವತೆಗಳನ್ನೂ ಆವಾಹಿಸ ಬೇಕು.

ಬಾಹುಭ್ಯಾಂ ತು ವಿಶಾಖಾಸು ಹಸ್ತೌ ಹಸ್ತೇನ ನಿರ್ದಿಶೇತ್ ।
ಪುನರ್ವಸ್ವಙ್ಗುಲೀ ರಾಜನ್ನಾಶ್ಲೇಷಾಸು ನಖಾಸ್ತಥಾ ॥೬॥

ಚಂದ್ರನ ತೋಳುಗಳಲ್ಲಿ ವಿಶಾಖಾನಕ್ಷತ್ರಗಳ ಅಧಿದೇವತೆಗಳನ್ನೂ, ಹಸ್ತಗಳಲ್ಲಿ ಹಸ್ತನಕ್ಷತ್ರದ ಅಧಿದೇವತೆಯನ್ನೂ, ಬೆರಳುಗಳಲ್ಲಿ ಪುನರ್ವಸೂ ನಕ್ಷತ್ರದ ಅಧಿದೇವತೆಯನ್ನೂ, ಉಗುರುಗಳಲ್ಲಿ ಆಶ್ಲೇಷಾನಕ್ಷತ್ರಗಳ ಅಧಿದೇವತೆಗಳನ್ನೂ ಆವಾಹಿಸಬೇಕು.

ಗ್ರೀವಾಂ ಜ್ಯೇಷ್ಠಾ ಚ ರಾಜೇನ್ದ್ರ ಶ್ರವಣೇನ ಚ ಕರ್ಣಯೋಃ ।
ಮುಖಂ ಪುಷ್ಯೇಣ ದಾನೇನ ದನ್ತೋಷ್ಠೌ ಸ್ವಾತಿರುಚ್ಯತೇ ॥೭॥

ಚಂದ್ರನ ಕುತ್ತಿಗೆಯಲ್ಲಿ ಜ್ಯೇಷ್ಠಾನಕ್ಷತ್ರದ ಅಧಿದೇವತೆಯನ್ನೂ, ಕಿವಿಗಳಲ್ಲಿ ಶ್ರವಣನಕ್ಷತ್ರದ ಅಧಿದೇವತೆಯನ್ನೂ, ಮುಖದಲ್ಲಿ ಪುಷ್ಯನಕ್ಷತ್ರದ ಅಧಿದೇವತೆಯನ್ನೂ, ಹಲ್ಲು-ತುಟಿಗಳಲ್ಲಿ ಸ್ವಾತೀನಕ್ಷತ್ರದ ಅಧಿದೇವತೆಯನ್ನೂ ಆವಾಹಿಸಬೇಕು.

ಹಾಸಂ ಶತಭಿಷಾಂ ಚೈವ ಮಘಾಂ ಚೈವಾಥ ನಾಸಿಕಾಮ್ ।
ನೇತ್ರೇ ಮೃಗಶಿರೋ ವಿದ್ಯಾಲ್ಲಲಾಟೇ ಮಿತ್ರಮೇವ ತು ॥೮॥

ಚಂದ್ರನ ಹಾಸದಲ್ಲಿ (ನಗೆಯಲ್ಲಿ) ಶತಭಿಷಾನಕ್ಷತ್ರದ ಅಧಿದೇವತೆಯನ್ನೂ, ಮೂಗಿನಲ್ಲಿ ಮಘಾನಕ್ಷತ್ರದ ಅಧಿದೇವತೆಯನ್ನೂ, ಕಣ್ಣುಗಳಲ್ಲಿ ಮೃಗಶಿರಾನಕ್ಷತ್ರದ ಅಧಿದೇವತೆಯನ್ನೂ, ಹಣೆಯಲ್ಲಿ ಮಿತ್ರ (ಅನೂರಾಧಾ) ನಕ್ಷತ್ರದ ಅಧಿದೇವತೆಯನ್ನೂ ಆವಾಹಿಸಬೇಕು.

ಭರಣ್ಯಾಂ ತು ಶಿರೋ ವಿದ್ಯಾತ್ಕೇಶಾನಾರ್ದ್ರಾಂ ನರಾಧಿಪ ।
ಸಮಾಪ್ತೇ ತು ಘೃತಂ ದದ್ಯಾದ್ಬ್ರಾಹ್ಮಣೇ ವೇದಪಾರಗೇ ॥೯॥

ಚಂದ್ರನ ಶಿರಸ್ಸಿನಲ್ಲಿ ಭರಣೀನಕ್ಷತ್ರದ ಅಧಿದೇವತೆಯನ್ನೂ, ಕೇಶಗಳಲ್ಲಿ ಆರ್ದ್ರಾನಕ್ಷತ್ರದ ಅಧಿದೇವತೆಯನ್ನೂ ಆವಾಹಿಸಬೇಕು. ಅನಂತರ ಚಂದ್ರನನ್ನೂ, ನಕ್ಷತ್ರಾಧಿದೇವತೆಗಳನ್ನೂ ಆಯಾ ನಕ್ಷತ್ರಗಳ ಮತ್ತು

ಚಂದ್ರನ ಮಂತ್ರಗಳ ಮೂಲಕವಾಗಿ ಧ್ಯಾನಾವಾಹನಾದಿಗಳಿಂದ ಪೂಜಿಸಬೇಕು. ಹೀಗೆ ಮಾರ್ಗಶೀರ್ಷಮಾಸದ ಪೂರ್ತಿಯಾಗಿ ಮಾಡುತ್ತಿದ್ದ ಪೂಜೆಯು ಪರಿಸಮಾಪ್ತವಾದನಂತರ ವೇದಪಾರಂಗತನಾದ ಬ್ರಾಹ್ಮಣನಿಗೆ ತುಪ್ಪವನ್ನು ದಾನವನ್ನಾಗಿ ಕೊಡಬೇಕು.

ಸುಭಗೋ ದರ್ಶನೀಯಶ್ಚ ಜ್ಞಾನಭಾಗ್ಭವ ಜಾಯತೇ ।
ಜಾಯತೇ ಪರಿಪೂರ್ಣಾಙ್ಗಃ ಪೌರ್ಣಮಾಸ್ಯೇವ ಚನ್ದ್ರಮಾಃ ॥೧೦॥

ಮಾರ್ಗಶೀರ್ಷಮಾಸದ ನಕ್ಷತ್ರಸಹಿತನಾದ ಚಂದ್ರನ ಪೂಜೆಯ ಫಲವಾಗಿ ಮನುಷ್ಯನು ಹುಣ್ಣಿಮೆಯ ಚಂದ್ರನೋಪಾದಿಯಲ್ಲಿ ಪರಿಪೂರ್ಣಾಂಗನಾಗಿಯೂ, ಸೌಭಾಗ್ಯಶಾಲಿಯಾಗಿಯೂ, ದರ್ಶನೀಯನಾಗಿಯೂ, ಜ್ಞಾನಿಯಾಗಿಯೂ ಹುಟ್ಟುತ್ತಾನೆ."

೧೧೦ನೆಯ ಅಧ್ಯಾಯವು ಮುಗಿಯಿತು.

೧೧೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ನಾನಾವಿಧವಾದ ಪಾಪಗಳಿಗೆ ಲಭಿಸುವ ಜನ್ಮಗಳ ವಿಷಯವಾಗಿ ಬೃಹಸ್ಪತಿಯು ಯುಧಿಷ್ಠಿರನಿಗೆ ಹೇಳಿದುದು

ಯುಧಿಷ್ಠಿರನು ಹೇಳುತ್ತಾನೆ:

ಪಿತಾಮಹ ಮಹಾಪ್ರಾಜ್ಞ ಸರ್ವಶಾಸ್ತ್ರವಿಶಾರದ ।
ಶ್ರೋತುಮಿಚ್ಛಾಮಿ ಮರ್ತ್ಯಾನಾಂ ಸಂಸಾರವಿಧಿಮುತ್ತಮಮ್ ॥೧॥

"ಸರ್ವಶಾಸ್ತ್ರವಿಶಾರದನೇ! ಮಹಾಪ್ರಾಜ್ಞನೇ! ಪಿತಾಮಹನೇ! ಈ ಲೋಕದಲ್ಲಿ ಮನುಷ್ಯರ ಸಂಸಾರನಿರ್ವಹಣೆಗೆ ಉತ್ತಮವಾದ ವಿಧಿಯನ್ನು ಕೇಳಬಯಸುತ್ತೇನೆ.

ಈ ಪ್ರಪಂಚದಲ್ಲಿರುವ ಮನುಷ್ಯರು ಯಾವ ವಿಧವಾದ ವ್ಯವಹಾರದಿಂದ ಉತ್ತಮವಾದ ಸ್ವರ್ಗಲೋಕವನ್ನು ಪಡೆದುಕೊಳ್ಳುತ್ತಾರೆ ಮತ್ತು ಯಾವ ವರ್ತನೆಯಿಂದ ನರಕಕ್ಕೆ ಹೋಗುತ್ತಾರೆ? ಜನರು ಮರಣ ಹೊಂದಿದನಂತರ ಕಟ್ಟಿಗೆಗೆ ಮತ್ತು ಮಣ್ಣಿನ ಹೆಂಟೆಗೆ ಸಮಾನವಾದ ಈ ಶರೀರವನ್ನು ಬಿಟ್ಟು ಈ ಲೋಕದಿಂದ ಪರಲೋಕಕ್ಕೆ ಹೋಗುವ

ಸಮಯದಲ್ಲಿ ಅವರನ್ನು ಅನುಸರಿಸಿ ಯಾರು ಹೋಗುತ್ತಾರೆ?–ಈ ಎಲ್ಲ ವಿಷಯಗಳನ್ನೂ ಹೇಳು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಉದಾರಬುದ್ಧಿಯವನಾದ, ಪೂಜ್ಯನಾದ ಬೃಹಸ್ಪತಿಯು ಈಗ ಇಲ್ಲಿಗೆ ಬರುತ್ತಾನೆ. ಮಹಾಭಾಗ್ಯಶಾಲಿಯಾದ ಅವನನ್ನು ಅತ್ಯಂತ ನಿಗೂಢವಾದ ಮತ್ತು ಸನಾತನವಾದ ಈ ಧರ್ಮದ ವಿಷಯವಾಗಿ ಪ್ರಶ್ನಿಸು. ಬೃಹಸ್ಪತಿಯೊಬ್ಬನನ್ನು ಬಿಟ್ಟು ಬೇರೆ ಯಾರಿಂದಲೂ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳಲು ಸಾಧ್ಯವಾಗುವುದಿಲ್ಲ. ಬೃಹಸ್ಪತಿಗೆ ಸಮಾನನಾದ ವಾಗ್ಮಿಯು ಬೇರೆ ಯಾರೂ ಎಲ್ಲಿಯೂ ಇಲ್ಲ."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಯುಧಿಷ್ಠಿರ-ಭೀಷ್ಮರು ಹೀಗೆ ಪರಸ್ಪರವಾಗಿ ಮಾತನಾಡಿಕೊಳ್ಳುತ್ತಿದ್ದಾಗ ಶುದ್ಧಾಂತಃಕರಣನಾದ ಬೃಹಸ್ಪತಿಯು ಸ್ವರ್ಗಲೋಕದಿಂದ ಅಲ್ಲಿಗೆ ಆಗಮಿಸಿದನು. ಒಡನೆಯೇ ಯುಧಿಷ್ಠಿರರಾಜನು ಧೃತರಾಷ್ಟ್ರನನ್ನು ಮುಂದೆಮಾಡಿಕೊಂಡು ಬೃಹಸ್ಪತಿಯನ್ನು ಸ್ವಾಗತಿಸಿ ಅಸದೃಶವಾದ ಪೂಜೆಯನ್ನು ಮಾಡಿದನು. ಅಂತೆಯೇ ಸಭಾಸದರೂ ಬೃಹಸ್ಪತಿಯನ್ನು ಯಥೋಚಿತವಾಗಿ ಸತ್ಕರಿಸಿದರು.

ಅನಂತರ ಧರ್ಮಪುತ್ರನಾದ ಯುಧಿಷ್ಠಿರನು ಪೂಜ್ಯನಾದ ಬೃಹಸ್ಪತಿಯ ಸಮೀಪದಲ್ಲಿ ಕುಳಿತು ಯಥೋಚಿತವಾದ ರೀತಿಯಲ್ಲಿ ತಾತ್ತ್ವಿಕವಾದ ಈ ಪ್ರಶ್ನೆಯನ್ನು ಕೇಳಿದನು:

ಭಗವನ್ಸರ್ವಧರ್ಮಜ್ಞ ಸರ್ವಶಾಸ್ತ್ರವಿಶಾರದ ।
ಮರ್ತ್ಯಸ್ಯ ಕಃ ಸಹಾಯೋ ವೈ ಪಿತಾ ಮಾತಾ ಸುತೋ ಗುರುಃ ॥
ಜ್ಞಾತಿಸಮ್ಬನ್ಧಿವರ್ಗಶ್ಚ ಮಿತ್ರವರ್ಗಸ್ತಥೈವ ಚ ।
ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಜನಾಃ ।
ಗಚ್ಛನ್ತ್ಯಮುತ್ರ ಲೋಕಂ ವೈ ಕ ಏನಮುಪಗಚ್ಛತಿ ॥೧೦॥

"ಪೂಜ್ಯನೇ! ಸರ್ವಧರ್ಮಗಳನ್ನೂ ತಿಳಿದವನೇ! ಸರ್ವಶಾಸ್ತ್ರವಿಶಾರದನೇ! ತಂದೆ-ತಾಯಿ-ಮಗ-ಗುರು-ಜ್ಞಾತಿ-ಬಂಧುಗಳು-ನೆಂಟರಿಷ್ಟರು-ಮಿತ್ರವರ್ಗದವರು–ಇವರಲ್ಲಿ ಮನುಷ್ಯನಿಗೆ ನಿಜವಾದ ಸಹಾಯಕರು

ಯಾರು? ಜನರು ಮರಣಹೊಂದಿದನಂತರ ಕಟ್ಟಿಗೆ-ಮಣ್ಣುಹೆಂಟೆಗಳಿಗೆ ಸಮಾನವಾದ ಈ ಶರೀರವನ್ನು ಬಿಟ್ಟು ಜೀವನು ಇಹದಿಂದ ಪರಲೋಕಕ್ಕೆ ಹೋಗುವ ಸಮಯದಲ್ಲಿ ಅವನನ್ನು ಅನುಸರಿಸಿ ಯಾರು ಹೋಗುತ್ತಾರೆ?"

ಬೃಹಸ್ಪತಿಯು ಹೇಳುತ್ತಾನೆ:

ಏಕಃ ಪ್ರಸೂಯತೇ ರಾಜನ್ನೇಕ ಏವ ವಿನಶ್ಯತಿ ।
ಏಕಸ್ತರತಿ ದುರ್ಗಾಣಿ ಗಚ್ಛತ್ಯೇಕಸ್ತು ದುರ್ಗತಿಮ್ ॥೧೧॥

"ಮಹಾರಾಜ! ಮನುಷ್ಯನು ಹುಟ್ಟುವಾಗಲೂ ಒಬ್ಬನೇ ಹುಟ್ಟುತ್ತಾನೆ. ಸಾಯುವಾಗಲೂ ಒಬ್ಬನೇ ಸಾಯುತ್ತಾನೆ. ಏಕಾಕಿಯಾಗಿಯೇ ದುಃಸಹವಾದ ಕಾರ್ಯಗಳಿಂದ ಪಾರಾಗುತ್ತಾನೆ ಮತ್ತು ಏಕಾಕಿಯಾಗಿಯೇ ದುರ್ಗತಿಯನ್ನೂ ಹೊಂದುತ್ತಾನೆ.

ಅಸಹಾಯಃ ಪಿತಾ ಮಾತಾ ತಥಾ ಭ್ರಾತಾ ಸುತೋ ಗುರುಃ ।
ಜ್ಞಾತಿಸಮ್ಬನ್ಧಿವರ್ಗಶ್ಚ ಮಿತ್ರವರ್ಗಸ್ತಥೈವ ಚ ॥೧೨॥

ತಂದೆ, ತಾಯಿ, ಸಹೋದರ, ಪುತ್ರ, ಗುರು, ಜ್ಞಾತಿಗಳು, ಸಂಬಂಧಿ ವರ್ಗದವರು, ಮಿತ್ರವರ್ಗದವರು–ಇವರಲ್ಲಿ ಯಾರೊಬ್ಬರೂ ಇಹವನ್ನು ತ್ಯಜಿಸಿ ಪರಲೋಕಕ್ಕೆ ಹೋಗುತ್ತಿರುವ ಅವನಿಗೆ ಸಹಾಯಕರಾಗುವುದಿಲ್ಲ.

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಠಸಮಂ ಜನಾಃ ।
ಮುಹೂರ್ತಮಿವ ರೋದಿತ್ವಾ ತತೋ ಯಾನ್ತಿ ಪರಾಙ್ಮುಖಾಃ ॥೧೩॥

ಸಂಬಂಧಿಗಳು ಕಟ್ಟಿಗೆ ಮತ್ತು ಮಣ್ಣುಹೆಂಟೆಗಳಿಗೆ ಸಮಾನವಾದ ಮೃತನ ಶರೀರವನ್ನು ಸ್ಮಶಾನದಲ್ಲಿ ವಿಸರ್ಜಿಸಿ ಮುಹೂರ್ತಕಾಲದವರೆಗೆ ಅಳುತ್ತಿದ್ದು ಅನಂತರ ಮುಖವನ್ನು ತಿರುಗಿಸಿಕೊಂಡು ಹೊರಟುಹೋಗುತ್ತಾರೆ.

ತೈಸ್ತಚ್ಛರೀರಮುತ್ಸೃಷ್ಟಂ ಧರ್ಮ ಏಕೋಽನುಗಚ್ಛತಿ ।
ತಸ್ಮಾದ್ಧರ್ಮಃ ಸಹಾಯಶ್ಚ ಸೇವಿತವ್ಯಃ ಸದಾ ನೃಭಿಃ ॥೧೪॥

ಕುಟುಂಬವರ್ಗದವರು ಶರೀರವನ್ನು ಪರಿತ್ಯಜಿಸಿ ಹೊರಟು ಹೋಗುತ್ತಾರೆ. ಆದರೆ ಪರಲೋಕಕ್ಕೆ ಹೋಗುವ ಜೀವಾತ್ಮನನ್ನು ಧರ್ಮ

ವೊಂದೇ ಅನುಸರಿಸಿ ಹೋಗುತ್ತದೆ. ಧರ್ಮವೊಂದೇ ನಿಜವಾದ ಸಹಾಯವಾಗುತ್ತದೆ. ಆದುದರಿಂದ ಮನುಷ್ಯರು ಯಾವಾಗಲೂ ಧರ್ಮವನ್ನೇ ಸೇವಿಸಬೇಕು. (ಧಾರ್ಮಿಕರಾಗಿರಬೇಕು.)

ಪ್ರಾಣೀ ಧರ್ಮಸಮಾಯುಕ್ತೋ ಗಚ್ಛೇತ್ಸ್ವರ್ಗಗತಿಂ ಪರಾಮ್ ।
ತಥೈವಾಧರ್ಮಸಂಯುಕ್ತೋ ನರಕಂ ಚೋಪಪದ್ಯತೇ ॥೧೫॥

ಧರ್ಮಯುಕ್ತವಾದ ಪ್ರಾಣಿಯು ಸ್ವರ್ಗಕ್ಕೆ ಹೋಗುತ್ತದೆ. ಹಾಗೆಯೇ ಅಧರ್ಮಯುಕ್ತವಾದ ಪ್ರಾಣಿಯು ನರಕಕ್ಕೆ ಹೋಗುತ್ತದೆ.

ತಸ್ಮಾನ್ನ್ಯಾಯಾಗತೈರರ್ಥೈರ್ಧರ್ಮಂ ಸೇವೇತ ಪಣ್ಡಿತಃ ।
ಧರ್ಮ ಏಕೋ ಮನುಷ್ಯಾಣಾಂ ಸಹಾಯಃ ಪಾರಲೌಕಿಕಃ ॥೧೬॥

ಆದುದರಿಂದ ವಿದ್ವಾಂಸನಾದವನು ನ್ಯಾಯಾರ್ಜಿತವಾದ ಧನದಿಂದ ಧರ್ಮದ ಅನುಷ್ಠಾನವನ್ನು ಮಾಡಬೇಕು. (ಧರ್ಮಕಾರ್ಯಗಳನ್ನು ಮಾಡಬೇಕು.) ಪರಲೋಕದಲ್ಲಿ ಧರ್ಮವೊಂದೇ ಮನುಷ್ಯನಿಗೆ ಸಹಾಯಕವಾಗಿರುತ್ತದೆ.

ಲೋಭಾನ್ಮೋಹಾದನುಕ್ರೋಶಾದ್ಭಯಾದ್ವಾಪ್ಯಬಹುಶ್ರುತಃ ।
ನರಃ ಕರೋತ್ಯಕಾರ್ಯಾಣಿ ಪರಾರ್ಥೇ ಲೋಭಮೋಹಿತಃ ॥೧೭॥

ವಿದ್ಯಾವಂತನಲ್ಲದವನು ಲೋಭ-ಮೋಹಗಳಿಗೆ ವಶೀಭೂತನಾಗಿ ಲೋಭದಿಂದಲೋ, ಮೋಹದಿಂದಲೋ, ದಯಾಪರತೆಯಿಂದಲೋ, ಭಯದಿಂದಲೋ–ಇತರರ ಸಲುವಾಗಿ ಮಾಡಬಾರದ ಕೆಟ್ಟ ಕೆಲಸಗಳನ್ನು ಮಾಡುತ್ತಾನೆ.

ಧರ್ಮಶ್ಚಾರ್ಥಶ್ಚ ಕಾಮಶ್ಚ ತ್ರಿತಯಂ ಜೀವಿತೇ ಫಲಮ್ ।
ಏತತ್ತ್ರಯಮವಾಪ್ತವ್ಯಮಧರ್ಮಪರಿವರ್ಜಿತಮ್ ॥೧೮॥

ಧರ್ಮ, ಅರ್ಥ ಮತ್ತು ಕಾಮ–ಈ ಮೂರೂ ಜೀವಿತದ ಫಲಗಳಾಗಿವೆ. ಅಧರ್ಮದ ಸೋಂಕಿಲ್ಲದೇ ಮನುಷ್ಯನು ಧರ್ಮಾರ್ಥ-ಕಾಮಗಳನ್ನು ಸಾಧಿಸಿಕೊಳ್ಳಬೇಕು."

ಯುಧಿಷ್ಠಿರನು ಹೇಳುತ್ತಾನೆ:

"ಪೂಜ್ಯನೇ! ನಾನು ನಿನ್ನಿಂದ ಧರ್ಮಯುಕ್ತವಾದ ಮತ್ತು ಪರಮ

ಹಿತವಾದ ಮಾತುಗಳನ್ನು ಕೇಳಿದೆನು. ಈಗ ನನ್ನ ಬುದ್ಧಿಯು ಶರೀರದ ಸ್ಥಿತಿಯನ್ನು ತಿಳಿಯಬೇಕೆಂದು ಬಯಸುತ್ತದೆ.

ಮೃತಂ ಶರೀರಂ ಹಿ ನೃಣಾಂ ಸೂಕ್ಷ್ಮಮವ್ಯಕ್ತತಾಂ ಗತಮ್ ।
ಅಚಕ್ಷುರ್ವಿಷಯಂ ಪ್ರಾಪ್ತಂ ಕಥಂ ಧರ್ಮೋಽನುಗಚ್ಛತಿ ॥೨೦॥

ಮನುಷ್ಯನು ಮರಣಹೊಂದಿದನಂತರ ಮಣ್ಣುಹೆಂಟೆ-ಕಟ್ಟಿಗೆಗಳಿಗೆ ಸಮಾನವಾದ ಅವನ ಶರೀರವು ಈ ಲೋಕದಲ್ಲಿಯೇ ಬಿದ್ದಿರುತ್ತದೆ. ಆದರೆ ಅವನ ಸೂಕ್ಷ್ಮಶರೀರವು ಅವ್ಯಕ್ತಭಾವವನ್ನು ಹೊಂದಿರುತ್ತದೆ. ಕಣ್ಣುಗಳಿಗೆ ಕಾಣಿಸುವುದಿಲ್ಲ. ಅಂತಹ ಸ್ಥಿತಿಯಲ್ಲಿ ಧರ್ಮವು ಹೇಗೆ ಆ ಸೂಕ್ಷ್ಮಶರೀರವನ್ನು ಅನುಸರಿಸಿಹೋಗುತ್ತದೆ?"

ಬೃಹಸ್ಪತಿಯು ಹೇಳುತ್ತಾನೆ:

ಪೃಥಿವೀ ವಾಯುರಾಕಾಶಮಾಪೋ ಜ್ಯೋತಿರ್ಮನೋಽನ್ತಕಃ ।
ಬುದ್ಧಿರಾತ್ಮಾ ಚ ಸಹಿತಾ ಧರ್ಮಂ ಪಶ್ಯನ್ತಿ ನಿತ್ಯದಾ ॥೨೧॥

"ಯುಧಿಷ್ಠಿರ! ಪೃಥಿವೀ, ವಾಯು, ಆಕಾಶ, ಜಲ, ಅಗ್ನಿ, ಮನಸ್ಸು, ಯಮ, ಬುದ್ಧಿ ಮತ್ತು ಆತ್ಮಾ –ಇವರೆಲ್ಲರೂ ಒಟ್ಟಾಗಿ (ಏಕಕಾಲದಲ್ಲಿ) ಮನುಷ್ಯನು ಆಚರಿಸುವ ಧರ್ಮವನ್ನು ನಿತ್ಯವೂ ನೋಡುತ್ತಿರುತ್ತಾರೆ.

ಪ್ರಾಣಿನಾಮಿಹ ಸರ್ವೇಷಾಂ ಸಾಕ್ಷಿಭೂತಾನಿ ಚಾನಿಶಮ್ ।
ಏತೈಶ್ಚ ಸಹ ಧರ್ಮೋಽಪಿ ತಂ ಜೀವಮನುಗಚ್ಛತಿ ॥೨೨॥

ಇವುಗಳು ಎಲ್ಲ ಪ್ರಾಣಿಗಳೂ ಮಾಡುವ ಕರ್ಮಗಳಿಗೆ ಯಾವಾಗಲೂ ಸಾಕ್ಷಿಗಳಾಗಿವೆ. ಇವುಗಳೊಡನೆ ಧರ್ಮವೂ ಜೀವವನ್ನನುಸರಿಸಿ ಹೋಗುತ್ತದೆ.

ತ್ವಗಸ್ಥಿಮಾಂಸಂ ಶುಕ್ರಂ ಚ ಶೋಣಿತಂ ಚ ಮಹಾಮತೇ ।
ಶರೀರಂ ವರ್ಜಯನ್ತ್ಯೇತೇ ಜೀವಿತೇನ ವಿವರ್ಜಿತಮ್ ॥೨೩॥

ಮಹಾಪ್ರಾಜ್ಞನೇ! ಚರ್ಮ, ಮೂಳೆ, ಮಾಂಸ, ಶುಕ್ರ ಮತ್ತು ರಕ್ತ– ಈ ಎಲ್ಲ ಧಾತುಗಳೂ ಜೀವಾತ್ಮನಿಂದ ಬಿಡಲ್ಪಡುವ ಶರೀರವನ್ನು ಪರಿತ್ಯಜಿಸಿ ಹೋಗುತ್ತವೆ. (ಜೀವಾತ್ಮನಿಂದ ರಹಿತವಾದ ಶರೀರದೊಡಯೇ

ನಾಶಹೊಂದುತ್ತವೆ.) ಧರ್ಮವೊಂದೇ ಜೀವನ ಸೂಕ್ಷ್ಮಶರೀರವನ್ನು ಅನುಸರಿಸಿ ಹೋಗುತ್ತದೆ.

ತತೋ ಧರ್ಮಸಮಾಯುಕ್ತಃ ಪ್ರಾಪ್ನುತೇ ಜೀವ ಏವ ಹಿ ॥೨೪॥

ತತೋಽಸ್ಯ ಕರ್ಮ ಪಶ್ಯನ್ತಿ ಶುಭಂ ವಾ ಯದಿ ವಾಶುಭಮ್ ।
ದೇವತಾಃ ಪಞ್ಚಭೂತಸ್ಥಾಃ ಕಿಂ ಭೂಯಃ ಶ್ರೋತುಮಿಚ್ಛಸಿ ॥೨೫॥

ಆದುದರಿಂದ ಧರ್ಮಯುಕ್ತವಾದ ಜೀವವೇ ಪರಮಗತಿಯನ್ನು ಹೊಂದುತ್ತದೆ. ಆ ಜೀವನು ಪರಲೋಕದಲ್ಲಿ ತಾನು ಮಾಡಿದ ಶುಭಕರ್ಮದ ಫಲವನ್ನು ಉಪಭೋಗಿಸಿದನಂತರ ಬೇರೆಯ ಶರೀರವನ್ನು ಧಾರಣೆ ಮಾಡಬೇಕಾಗಿ ಬಂದಾಗ ಪಂಚಭೂತಸ್ಥರಾದ ದೇವತೆಗಳು ಜೀವನ ಶುಭಾಶುಭಕರ್ಮಗಳನ್ನು ಪರಿಶೀಲಿಸುತ್ತಾರೆ. ಬಳಿಕ ಧರ್ಮಯುಕ್ತವಾದ ಆ ಜೀವವು ಇಹ-ಪರಗಳೆರಡರಲ್ಲಿಯೂ ಸುಖವಾಗಿರುತ್ತದೆ. ಧರ್ಮಜ! ಪುನಃ ನೀನು ಮತ್ತೇನನ್ನು ಕೇಳಬಯಸುವೆ? ಮುಂದೆ ಯಾವ ವಿಷಯವನ್ನು ಹೇಳಲಿ?"

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ತದ್ದರ್ಶಿತಂ ಭಗವತಾ ಯಥಾ ಧರ್ಮೋಽನುಗಚ್ಛತಿ ।
ಏತತ್ತು ಜ್ಞಾತುಮಿಚ್ಛಾಮಿ ಕಥಂ ರೇತಃ ಪ್ರವರ್ತತೇ ॥೨೭॥

"ಪೂಜ್ಯನೇ! ಧರ್ಮವು ಯಾವ ರೀತಿಯಲ್ಲಿ ಜೀವನನ್ನು ಅನುಸರಿಸಿ ಹೋಗುವುದೆಂಬುದನ್ನು ಹೇಳಿದೆ. ಈಗ ನಾನು ವೀರ್ಯೋತ್ಪತ್ತಿಯು ಹೇಗಾಗುವುದೆಂಬುದನ್ನು ತಿಳಿಯಬಯಸುತ್ತೇನೆ."

ಬೃಹಸ್ಪತಿಃ

ಅನ್ನಮಶ್ನನ್ತಿ ಯದ್ದೇವಾಃ ಶರೀರಸ್ಥಾ ನರೇಶ್ವರ ।
ಪೃಥಿವೀ ವಾಯುರಾಕಾಶಮಾಪೋ ಜ್ಯೋತಿರ್ಮನಸ್ತಥಾ ॥೨೮॥

ತತಸ್ತೃಪ್ತೇಷು ರಾಜೇನ್ದ್ರ ತೇಷು ಭೂತೇಷು ಪಞ್ಚಸು ।
ಮನಃಷಷ್ಠೇಷು ಶುದ್ಧಾತ್ಮನ್ರೇತಃ ಸಮ್ಪದ್ಯತೇ ಮಹತ್ ॥೨೯॥

"ಶುದ್ಧಾತ್ಮನೇ! ನರೇಶ್ವರನೇ! ಯುಧಿಷ್ಠಿರ! ಈ ಶರೀರದಲ್ಲಿರುವ ಪೃಥ್ವೀ, ಜಲ, ಅಗ್ನಿ, ವಾಯು, ಆಕಾಶ ಮತ್ತು ಮನಸ್ಸುಗಳ ಅಧಿದೇವತೆಗಳು ಅನ್ನವನ್ನು ತಿನ್ನುತ್ತಾರೆ. ಮನಸ್ಸಿನಿಂದ ಕೂಡಿದ ಪಂಚಭೂತಾತ್ಮರಾದ

ದೇವತೆಗಳು ಅನ್ನವನ್ನು ತಿಂದು ತೃಪ್ತರಾದಾಗ ಮಹತ್ತಾದ ರೇತಸ್ಸು (ವೀರ್ಯವು) ಹುಟ್ಟುತ್ತದೆ.

ತತೋ ಗರ್ಭಃ ಸಮ್ಭವತಿ ಶ್ಲೇಷ್ಮಾ ತ್ರೀಪುಂಸಯೋರ್ನೃಪ ।
ಏತತ್ತೇ ಸರ್ವಮಾಖ್ಯಾತಂ ಭೂಯಃ ಕಿಂ ಶ್ರೋತುಮಿಚ್ಛಸಿ ॥೩೦॥

ಅನಂತರ ಸ್ತ್ರೀ-ಪುರುಷರ ಸಮಾಗಮವಾದಾಗ ಆ ವೀರ್ಯವು ಗರ್ಭದ ರೂಪವನ್ನು ಧರಿಸುತ್ತದೆ. ಯುಧಿಷ್ಠಿರ! ರೇತಸ್ಸಿನ ವಿಷಯವಾಗಿ ನಿನಗೆ ಎಲ್ಲವನ್ನೂ ಹೇಳಿಯಾಯಿತು. ಮತ್ತೇನನ್ನು ಕೇಳಬಯಸುವೆ?"

ಯುಧಿಷ್ಠಿರಃ

"ಪೂಜ್ಯನೇ! ಗರ್ಭವು ಹೇಗೆ ಉತ್ಪತ್ತಿಯಾಗುವುದೆಂಬುದನ್ನು ಹೇಳಿದೆ. ಆ ಗರ್ಭದ ಮೂಲಕವಾಗಿ ಹುಟ್ಟಿದ ಮನುಷ್ಯನು ಬಂಧನವನ್ನು ಹೇಗೆ ಹೊಂದುವನೆಂಬುದನ್ನು ಹೇಳು."

ಬೃಹಸ್ಪತಿಃ

ಆಸನ್ನಮಾತ್ರಃ ಪುರುಷಸ್ತೈರ್ಭೂತೈರಭಿಭೂಯತೇ ।
ವಿಪ್ರಯುಕ್ತಶ್ಚ ತೈರ್ಭೂತೈಃ ಪುನರ್ಯಾತ್ಯಪರಾಂ ಗತಿಮ್ ॥೩೧॥

"ಜೀವನು ಪುರುಷನ ವೀರ್ಯದಲ್ಲಿ ಪ್ರವೇಶಿಸಿ ಸ್ತ್ರೀ-ಪುರುಷರ ಸಮಾಗಮವಾದನಂತರ ಸ್ತ್ರೀಯ ಗರ್ಭವನ್ನು ಪ್ರವೇಶಿಸಿದೊಡನೆಯೇ– ಸ್ತ್ರೀಯ ಶರೀರದಲ್ಲಿರುವ ಪೃಥಿವ್ಯಾಕಾಶಾದಿ ಪಂಚಭೂತಗಳೂ ಗರ್ಭರೂಪನಾಗಿರುವ ಆ ಜೀವನ ಶರೀರವಾಗಿ ಪರಿಣಮಿಸಿ ಅದನ್ನು ಆ ಶರೀರದಲ್ಲಿ ಬಂಧಿಸಿಬಿಡುತ್ತವೆ. ಕಡೆಯಲ್ಲಿ ಶರೀರವಾಗಿ ಪರಿಣಮಿಸಿದ್ದ ಆ ಪಂಚಭೂತಗಳಿಂದ ವಿಮುಕ್ತಿಯನ್ನು ಹೊಂದುವ ಆ ಜೀವವು ಬೇರೊಂದು ಗತಿಯನ್ನು ಹೊಂದುತ್ತದೆ.

ಸರ್ವಭೂತಸಮಾಯುಕ್ತಃ ಪ್ರಾಪ್ನುತೇ ಜೀವ ಏವ ಹಿ ।
ತತೋಽಸ್ಯ ಕರ್ಮ ಪಶ್ಯನ್ತಿ ಶುಭಂ ವಾ ಯದಿ ವಾಶುಭಮ್ ।
ದೇವತಾಃ ಪಞ್ಚಭೂತಸ್ಥಾಃ ಕಿಂ ಭೂಯಃ ಶ್ರೋತುಮಿಚ್ಛಸಿ ॥೩೩॥

ಶರೀರದಲ್ಲಿ ಸರ್ವಭೂತಗಳಿಂದ ಯುಕ್ತನಾದ ಜೀವನೇ ಸುಖವನ್ನೋ ಅಥವಾ ದುಃಖವನ್ನೋ ಅನುಭವಿಸುತ್ತಾನೆ. ಈ ಕಾರಣದಿಂದಲೇ

ಪಂಚಭೂತಸ್ಥರಾದ ದೇವತೆಗಳು ಜೀವನ ಶುಭಾಶುಭಕರ್ಮಗಳನ್ನು ನೋಡುತ್ತಿರುತ್ತಾರೆ.

ಯುಧಿಷ್ಠಿರ! ಮತ್ತೇನನ್ನು ಕೇಳಲು ಬಯಸುವೆ?"

ಯುಧಿಷ್ಠಿರಃ

ತ್ವಗಸ್ಥಿಮಾಂಸಮುತ್ಸೃಜ್ಯ ತೈಶ್ಚ ಭೂತೈರ್ವಿವರ್ಜಿತಃ ।
ಜೀವಃ ಸ ಭಗವಾನ್ಕ್ವಸ್ಥಃ ಸುಖದುಃಖೇ ಸಮಶ್ನುತೇ ॥೩೪॥

"ಪೂಜ್ಯನೇ! ಪಂಚಭೂತಾತ್ಮಕನಾದ ಜೀವನು ಸುಖ-ದುಃಖಗಳನ್ನು ಅನುಭವಿಸುವನೆಂಬುದೇನೋ ಸರಿ. ಅವನು ಮಾಡುವ ಪಾಪ-ಪುಣ್ಯ ಕರ್ಮಗಳನ್ನು ಪಂಚಭೂತಾತ್ಮಕರಾದ ದೇವತೆಗಳು ನೋಡುವರೆಂಬುದೂ ಸರಿಯೇ. ಆದರೆ ಅವಸಾನಾನಂತರದಲ್ಲಿ ಜೀವನು ಚರ್ಮ, ಮೂಳೆ ಮತ್ತು ಮಾಂಸಗಳನ್ನು ಪರಿತ್ಯಾಗಮಾಡಿ ಹೋಗುತ್ತಾನೆ. ಶರೀರಾತ್ಮಕವಾದ ಪಂಚಭೂತಗಳೂ ಅವನನ್ನು ಪರಿತ್ಯಾಗಮಾಡುತ್ತವೆ. ಹೀಗೆ ಪಂಚಭೂತಗಳ ಸೋಂಕೇ ಇಲ್ಲದ ಆ ಸ್ಥಿತಿಯಲ್ಲಿ ಜೀವನು ಎಲ್ಲಿದ್ದುಕೊಂಡು ಸುಖ-ದುಃಖಗಳನ್ನು ಅನುಭವಿಸುತ್ತಾನೆ?"

ಬೃಹಸ್ಪತಿಃ

ಜೀವಃ ಕರ್ಮಸಮಾಯುಕ್ತಃ ಶೀಘ್ರಂ ರೇತಸ್ತ್ವಮಾಗತಃ ।
ಸ್ತ್ರೀಣಾಂ ಪುಷ್ಪಂ ಸಮಾಸಾದ್ಯ ಸೂತೇ ಕಾಲೇನ ಭಾರತ ॥೩೫॥

"ಭಾರತನೇ! ಜೀವನು ಸೂಕ್ಷ್ಮರೂಪದಲ್ಲಿದ್ದರೂ ಕರ್ಮಫಲಗಳಿಂದ ಕೂಡಿರುತ್ತಾನೆ. ಆ ಕರ್ಮಫಲಗಳ ಪ್ರಚೋದನೆಯಿಂದಲೇ ಅವನು ಶೀಘ್ರವಾಗಿ ರೇತಸ್ಸಾಗಿ ಪರಿಣಮಿಸುತ್ತಾನೆ. ಸ್ತ್ರೀಯರ ರಜಸ್ಸಿನಲ್ಲಿ ಸೇರಿಕೊಂಡು ಸಮಯಾನುಸಾರವಾಗಿ ಜನ್ಮವನ್ನು ತಾಳುತ್ತಾನೆ.

ಯಮಸ್ಯ ಪುರುಷೈಃ ಕ್ಲೇಶಂ ಯಮಸ್ಯ ಪುರುಷೈರ್ವಧಮ್ ।
ದುಃಖಂ ಸಂಸಾರಚಕ್ರಂ ಚ ನರಃ ಕ್ಲೇಶಂ ಸ ವಿನ್ದತಿ ॥೩೬॥

ರೇತಸ್ಸಾಗಿ ಪರಿವರ್ತನೆಹೊಂದುವ ಮೊದಲು ಸೂಕ್ಷ್ಮಶರೀರ ದಲ್ಲಿರುವಾಗ ತಾನು ಮಾಡಿದ ದುಷ್ಕರ್ಮಗಳ ಫಲವಾಗಿ ಜೀವನು ಯಮನ

ದೂತರಿಂದ ನಾನಾವಿಧವಾದ ಕ್ಲೇಶಗಳನ್ನು ಅನುಭವಿಸುತ್ತಾನೆ. ಯಮನ ದೂತರಿಂದ ಅನೇಕವಿಧವಾದ ಹಿಂಸೆಗಳನ್ನು ಅನುಭವಿಸುತ್ತಾನೆ. ಸಂಸಾರಚಕ್ರವನ್ನೂ, ಅದರಿಂದ ಪ್ರಾಪ್ತವಾಗುವ ದುಃಖವನ್ನೂ ಕ್ಲೇಶವನ್ನೂ ಜೀವನು ಅನುಭವಿಸುತ್ತಲೇ ಇರುತ್ತಾನೆ.

ಇಹಲೋಕೇ ಸ ಚ ಪ್ರಾಣೀ ಜನ್ಮಪ್ರಭೃತಿ ಪಾರ್ಥಿವ ।
ಸುಕೃತಂ ಕರ್ಮ ವೈ ಭುಙ್ಕ್ತೇ ಧರ್ಮಸ್ಯ ಫಲಮಾಶ್ರಿತಃ ॥೩೭॥
ಯದಿ ಧರ್ಮಂ ಯಥಾಶಕ್ತಿ ಜನ್ಮಪ್ರಭೃತಿ ಸೇವತೇ ।
ತತಃ ಸ ಪುರುಷೋ ಭೂತ್ವಾ ಸೇವತೇ ನಿತ್ಯದಾ ಸುಖಮ್ ॥೩೮॥

ಈ ಲೋಕದಲ್ಲಿ ಆ ಪ್ರಾಣಿಯು ಹಿಂದಿನ ಜನ್ಮದ ಧರ್ಮದ ಫಲವನ್ನು ಆಶ್ರಯಿಸಿ ಹುಟ್ಟಿದಾಗಿನಿಂದಲೂ, ಸುಕೃತಕರ್ಮಗಳನ್ನೇ ಉಪಭೋಗಿಸುತ್ತದೆ. ಒಂದು ವೇಳೆ ಆ ಪ್ರಾಣಿಯು ಹುಟ್ಟಿದಾಗಿನಿಂದ, ಯಥಾಶಕ್ತಿ ಧರ್ಮಕಾರ್ಯಗಳನ್ನು ಮಾಡುತ್ತಿದ್ದರೆ ಮರುಹುಟ್ಟಿನಲ್ಲಿ ಅದು ಮನುಷ್ಯನಾಗಿ ನಿತ್ಯವೂ ಸುಖವನ್ನು ಅನುಭವಿಸುತ್ತಿರುತ್ತದೆ.

ಅಥಾನ್ತರಾ ತು ಧರ್ಮಸ್ಯಾಪ್ಯಧರ್ಮಮುಪಸೇವತೇ ।
ಸುಖಸ್ಯಾನನ್ತರಂ ದುಃಖಂ ಸ ಜೀವೋಽಪ್ಯಧಿಗಚ್ಛತಿ ॥೩೯॥

ಜೀವನು ಧರ್ಮಕಾರ್ಯಗಳನ್ನು ಮಾಡುತ್ತಿರುವಾಗ ಮಧ್ಯದಲ್ಲಿ ಅಧರ್ಮಕಾರ್ಯಗಳನ್ನು ಮಾಡುತ್ತಿದ್ದರೆ ಮಾಡಿದ ಧರ್ಮಕಾರ್ಯಗಳ ಫಲವಾಗಿ ಸುಖವನ್ನು ಅನುಭವಿಸಿದನಂತರ ಅಧರ್ಮಕಾರ್ಯಗಳ ಫಲವಾಗಿ ದುಃಖವನ್ನೂ ಅನುಭವಿಸುತ್ತಾನೆ.

ಅಧರ್ಮೇಣ ಸಮಾಯುಕ್ತೋ ಯಮಸ್ಯ ವಿಷಯಂ ಗತಃ ।
ಮಹದ್ದುಃಖಂ ಸಮಾಸಾದ್ಯ ತಿರ್ಯಗ್ಯೋನೌ ಪ್ರಜಾಯತೇ ॥೪೦॥

ಅಧರ್ಮಕಾರ್ಯಗಳನ್ನೇ ಮಾಡಿರುವ ಮನುಷ್ಯನು ಅವಸಾನಾ ನಂತರದಲ್ಲಿ ಸೂಕ್ಷ್ಮಶರೀರವನ್ನು ಹೊಂದಿ ಪಾಪದಿಂದ ಯುಕ್ತನಾಗಿ ಯಮನ ಲೋಕಕ್ಕೆ ಹೋಗುತ್ತಾನೆ. ಅಲ್ಲಿ ಬಹಳ ಕಾಲದವರೆಗೆ ಮಹಾದುಃಖವನ್ನು ಅನುಭವಿಸುತ್ತಿದ್ದು ಅನಂತರ ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟುತ್ತಾನೆ.

ಯುಧಿಷ್ಠಿರ! ಜೀವನು ಮೋಹವಶನಾಗಿ ಯಾವ ಯಾವ ಕರ್ಮಗಳನ್ನು ಮಾಡುವುದರಿಂದ ಯಾವ ಯಾವ ಯೋನಿಗಳಲ್ಲಿ ಜನ್ಮವನ್ನು ಪಡೆಯುವನೆಂಬುದನ್ನು ಹೇಳುವೆನು; ಕೇಳು.

ಮರಣಹೊಂದಿದ ಮನುಷ್ಯನು ಸೂಕ್ಷ್ಮಶರೀರವನ್ನು ಹೊಂದಿ ಯಮನ ಭಯಂಕರವಾದ ರಾಜ್ಯಕ್ಕೆ ಹೋಗುವನೆಂಬ ಶಾಸ್ತ್ರೇತಿಹಾಸಾಗಮಗಳಲ್ಲಿ ಇರುವ ವಚನಗಳು ಸತ್ಯವಾದುವುಗಳು.

ಇಹ ಸ್ಥಾನಾನಿ ಪುಣ್ಯಾನಿ ದೇವತುಲ್ಯಾನಿ ಭೂಪತೇ ।
ತಿರ್ಯಗ್ಯೋನ್ಯತಿರಿಕ್ತಾನಿ ಗತಿಮನ್ತಿ ಚ ಸರ್ವಶಃ ॥೪೩॥

ಯಮನ ಲೋಕಗಳೆಂದರೆ ಎಲ್ಲವೂ ಭಯಂಕರವಾಗಿಯೇ ಇರುತ್ತವೆ–ಎಂದೇನೂ ಅಲ್ಲ. ಆ ಯಮಲೋಕಗಳಲ್ಲಿ ದೇವಲೋಕಗಳಿಗೆ ಸಮಾನವಾದ ಪುಣ್ಯಲೋಕಗಳೂ ಇವೆ. ತಿರ್ಯಕ್ಪ್ರಾಣಿಗಳನ್ನು (ಪಶು-ಪಕ್ಷಿಗಳನ್ನು) ಬಿಟ್ಟು ಪುಣ್ಯಾತ್ಮರಾದ ಮನುಷ್ಯರು ಅಲ್ಲಿದ್ದಾರೆ.

ಯಮಸ್ಯ ಭವನೇ ದಿವ್ಯೇ ಬ್ರಹ್ಮಲೋಕಸಮೇ ಗುಣೈಃ ।
ಕರ್ಮಭಿರ್ನಿಯತೈರ್ಬದ್ಧೋ ಜನ್ತುರ್ದುಃಖಾನ್ಯುಪಾಶ್ನುತೇ ॥೪೪॥

ಸೌಂದರ್ಯಾದಿಗುಣಗಳಿಂದ ಬ್ರಹ್ಮಲೋಕಕ್ಕೆ ಸಮಾನವಾಗಿರುವ ದಿವ್ಯವಾದ ಯಮನ ಲೋಕದಲ್ಲಿಯೂ ಪಾಪಕರ್ಮಗಳ ಫಲದಿಂದ ಬಂಧಿಸಲ್ಪಟ್ಟ ಜೀವನು ಬಹುವಿಧವಾದ ದುಃಖಗಳನ್ನೇ ಅನುಭವಿಸುತ್ತಾನೆ.

ಯುಧಿಷ್ಠಿರ! ಮನುಷ್ಯನು ಯಾವ ಯಾವ ಭಾವದಿಂದ ಮತ್ತು ಯಾವ ಯಾವ ಕರ್ಮದಿಂದ ಕಠಿನವಾದ ಮತ್ತು ಘೋರವಾದ ಗತಿಯನ್ನು ಹೊಂದುವನೆಂಬುದನ್ನು ಇನ್ನು ಮುಂದೆ ಹೇಳುತ್ತೇನೆ.

ಅಧೀತ್ಯ ಚತುರೋ ವೇದಾನ್ದ್ವಿಜೋ ಮೋಹಸಮನ್ವಿತಃ ।
ಪತಿತಾತ್ಪ್ರತಿಗೃಹ್ಯಾಥ ಖರಯೋನೌ ಪ್ರಜಾಯತೇ ॥೪೬॥

ಬ್ರಾಹ್ಮಣನು ನಾಲ್ಕು ವೇದಗಳನ್ನು ಅಧ್ಯಯನಮಾಡಿದ್ದರೂ ಮೋಹವಶನಾಗಿ ಪತಿತನಿಂದ ದಾನವನ್ನು ತೆಗೆದುಕೊಂಡರೆ ಜನ್ಮಾಂತರದಲ್ಲವನು ಕತ್ತೆಯಾಗಿ ಹುಟ್ಟುತ್ತಾನೆ.

ಖರೋ ಜೀವತಿ ವರ್ಷಾಣಿ ದಶ ಪಞ್ಚ ಚ ಭಾರತ ।
ಖರೋ ಮೃತೋ ಬಲೀವರ್ದಃ ಸಪ್ತ ವರ್ಷಾಣಿ ಜೀವತಿ ॥೪೭॥

ಕತ್ತೆಯಾಗಿ ಅವನು ಹದಿನೈದು ವರ್ಷಗಳವರೆಗೆ ಜೀವಿಸಿರುತ್ತಾನೆ. ಕತ್ತೆಯ ಜನ್ಮವನ್ನು ಕಳೆದುಕೊಂಡನಂತರ ಎತ್ತಾಗಿ ಹುಟ್ಟಿ ಏಳು ವರ್ಷಗಳವರೆಗೆ ಜೀವಿಸಿರುತ್ತಾನೆ.

ಬಲೀವರ್ದೋ ಮೃತಶ್ಚಾಪಿ ಜಾಯತೇ ಬ್ರಹ್ಮರಾಕ್ಷಸಃ ।
ಬ್ರಹ್ಮರಕ್ಷಶ್ಚ ಮಾಸಾಂಸ್ತ್ರೀಂಸ್ತತೋ ಜಾಯತಿ ಬ್ರಾಹ್ಮಣಃ ॥೪೮॥

ಎತ್ತಿನ ಜನ್ಮವನ್ನು ಕಳೆದುಕೊಂಡನಂತರ ಅವನೇ ಪುನಃ ಬ್ರಹ್ಮರಾಕ್ಷಸನಾಗಿ ಹುಟ್ಟುತ್ತಾನೆ. ಬ್ರಹ್ಮರಾಕ್ಷಸನಾಗಿ ಮೂರು ಮಾಸಗಳನ್ನು ಕಳೆದು ಆ ಜೀವನು ಪುನಃ ಬ್ರಾಹ್ಮಣಯೋನಿಯಲ್ಲಿ ಜನ್ಮತಾಳುತ್ತಾನೆ.

ಪತಿತಂ ಯಾಜಯಿತ್ವಾ ತು ಕೃಮಿಯೋನೌ ಪ್ರಜಾಯತೇ ।
ತತ್ರ ಜೀವತಿ ವರ್ಷಾಣಿ ದಶ ಪಞ್ಚ ಚ ಭಾರತ ॥೪೯॥

ವೇದ-ವೇದಾಂಗಪಾರಂಗತನಾದ ಬ್ರಾಹ್ಮಣನು ಪತಿತನಾದವನಿಗೆ ಯಜ್ಞವನ್ನು ಮಾಡಿಸಿದರೆ–ಆ ಪಾಪದ ಫಲವಾಗಿ ಅವನು ಮರಣಾ ನಂತರದಲ್ಲಿ ಕೃಮಿಯೋನಿಯಲ್ಲಿ ಹುಟ್ಟುತ್ತಾನೆ. ಆ ಜನ್ಮದಲ್ಲಿ ಅವನು ಹದಿನೈದು ವರ್ಷಗಳು ಜೀವಿಸಿರುತ್ತಾನೆ.

ಕೃಮಿಭಾವಾದ್ವಿಮುಕ್ತಸ್ತು ತತೋ ಜಾಯತಿ ಗರ್ದಭಃ ।
ಗರ್ದಭಃ ಪಞ್ಚ ವರ್ಷಾಣಿ ಪಞ್ಚ ವರ್ಷಾಣಿ ಸೂಕರಃ ॥೫೦॥
ಕುಕ್ಕುಟಃ ಪಞ್ಚ ವರ್ಷಾಣಿ ಪಞ್ಚ ವರ್ಷಾಣಿ ಜಮ್ಬುಕಃ ।
ಶ್ವಾ ವರ್ಷಮೇಕಂ ಭವತಿ ತತೋ ಜಾಯತಿ ಮಾನವಃ ॥೫೧॥

ಹದಿನೈದು ವರ್ಷಗಳಾದನಂತರ ಕೃಮಿಭಾವದಿಂದ ಮುಕ್ತಿಯನ್ನು ಹೊಂದಿ ಅನಂತರ ಕತ್ತೆಯಾಗಿ ಹುಟ್ಟುತ್ತಾನೆ. ಕತ್ತೆಯಾಗಿ ಐದು ವರ್ಷಗಳು ಜೀವಿಸಿದ್ದು ಮರಣವನ್ನು ಹೊಂದಿ ಕೋಳಿಯಾಗಿ ಹುಟ್ಟುತ್ತಾನೆ. ಕೋಳಿಯಾಗಿ ಐದು ವರ್ಷಗಳನ್ನು ಕಳೆದು ಮರಣವನ್ನು ಹೊಂದಿ ನಾಯಿಯಾಗಿ ಹುಟ್ಟುತ್ತಾನೆ. ನಾಯಿಯಾಗಿ ಒಂದು ವರ್ಷವನ್ನು ಕಳೆದು ಮರಣವನ್ನು ಹೊಂದಿ ಪುನಃ ಮನುಷ್ಯನಾಗಿ ಹುಟ್ಟುತ್ತಾನೆ.

ಉಪಾಧ್ಯಾಯಸ್ಯ ಯಃ ಪಾಪಂ ಶಿಷ್ಯಃ ಕುರ್ಯಾದಬುದ್ಧಿಮಾನ್ ।
ಸ ಜೀವ ಇಹ ಸಂಸಾರಾಂಸ್ತ್ರೀನಾಪ್ನೋತಿ ನ ಸಂಶಯಃ ॥೫೨॥

ಉಪಾಧ್ಯಾಯನ ವಿಷಯದಲ್ಲಿ ಪಾಪವನ್ನೆಸಗುವ ಮೂರ್ಖನಾದ ಶಿಷ್ಯನು ಮರಣಾನಂತರದಲ್ಲಿ ಮೂರು ವಿಧವಾದ ಯೋನಿಗಳಲ್ಲಿ ಜನ್ಮತಾಳುತ್ತಾನೆ. ಈ ವಿಷಯದಲ್ಲಿ ಸಂದೇಹವೇ ಇಲ್ಲ.

ಪ್ರಾಕ್ಶ್ವಾ ಭವತಿ ರಾಜೇನ್ದ್ರ ತತಃ ಕ್ರವ್ಯಾತ್ತತಃ ಖರಃ ।
ತತಃ ಪ್ರೇತಃ ಪರಿಕ್ಲಿಷ್ಟಃ ಪಶ್ಚಾಜ್ಜಾಯತಿ ಬ್ರಾಹ್ಮಣಃ ॥೫೩॥

ಮೊದಲು ನಾಯಿಯಾಗಿ ಹುಟ್ಟುತ್ತಾನೆ. ನಾಯಿಯ ಜನ್ಮದಲ್ಲಿ ಪೂರ್ಣಾಯುಷ್ಯವನ್ನು ಕಳೆದು ಮಾಂಸವನ್ನು ತಿನ್ನುವ ಕ್ರೂರಪ್ರಾಣಿಯಾಗಿ ಹುಟ್ಟುತ್ತಾನೆ. ಆ ಜನ್ಮದಲ್ಲಿಯೂ ಪೂರ್ಣಾಯುಷ್ಯವನ್ನು ಕಳೆದು ಮರಣ ಹೊಂದಿದನಂತರ ಕತ್ತೆಯಾಗಿ ಹುಟ್ಟಿ ಆ ಜನ್ಮದಲ್ಲಿಯೂ ಪೂರ್ಣಾಯುಷ್ಯ ವನ್ನು ಕಳೆದು ಮರಣಹೊಂದಿದನಂತರ ಪ್ರೇತಾವಸ್ಥೆಯನ್ನು ಹೊಂದಿ ಅನೇಕ ಕಷ್ಟಗಳನ್ನು ಅನುಭವಿಸುತ್ತಾನೆ. ಅನಂತರ ಬ್ರಾಹ್ಮಣನಾಗಿ ಹುಟ್ಟುತ್ತಾನೆ.

ಮನಸಾಪಿ ಗುರೋರ್ಭಾರ್ಯಾಂ ಯಃ ಶಿಷ್ಯೋ ಯಾತಿ ಪಾಪಕೃತ್
ಸ ಉಗ್ರಾನ್ಪ್ರೈತಿ ಸಂಸಾರಾನಧರ್ಮೇಣೇಹ ಚೇತಸಾ ॥೫೪॥

ಪಾಪಾಚಾರಿಯಾದ ಯಾವ ಶಿಷ್ಯನು ಮನಸ್ಸಿನಿಂದಾದರೂ ಗುರು ಭಾರ್ಯೆಯೊಡನೆ ಸಮಾಗಮವನ್ನು ಮಾಡುವನೋ–ಅವನು ಪಾಪಯುಕ್ತ ವಾದ ಮನಸ್ಸನ್ನು ಹೊಂದಿ ಭಯಂಕರವಾದ ಪಾಪಯೋನಿಗಳಲ್ಲಿ ಜನ್ಮತಾಳುತ್ತಾನೆ.

ಶ್ವಯೋನೌ ತು ಸ ಸಮ್ಭೂತಸ್ತ್ರೀಣಿ ವರ್ಷಾಣಿ ಜೀವತಿ ।
ತತ್ರಾಪಿ ನಿಧನಂ ಪ್ರಾಪ್ತಃ ಕೃಮಿಯೋನೌ ಪ್ರಜಾಯತೇ ॥೫೫॥

ಕೃಮಿಭಾವಮನುಪ್ರಾಪ್ತೋ ವರ್ಷಮೇಕಂ ತು ಜೀವತಿ ।
ತತಸ್ತು ನಿಧನಂ ಪ್ರಾಪ್ತೋ ಬ್ರಹ್ಮಯೋನೌ ಪ್ರಜಾಯತೇ ॥೫೬॥

ಅಂತಹ ಅಧಮಶಿಷ್ಯನು ಮರಣಾನಂತರ ಮೊದಲು ನಾಯಿಯಾಗಿ ಹುಟ್ಟುತ್ತಾನೆ. ಆ ಜನ್ಮದಲ್ಲಿ ಮೂರು ವರ್ಷಗಳು ಜೀವಿಸಿದ್ದು ಮರಣಹೊಂದಿ ಕೃಮಿಯಾಗಿ ಹುಟ್ಟುತ್ತಾನೆ. ಕೃಮಿಯಾಗಿ ಒಂದು ವರ್ಷ ಜೀವಿಸಿದ್ದು ಮರಣವನ್ನು ಹೊಂದಿ ಪುನಃ ಬ್ರಾಹ್ಮಣಯೋನಿಯಲ್ಲಿ ಹುಟ್ಟುತ್ತಾನೆ.

ಯದಿ ಪುತ್ರಸಮಂ ಶಿಷ್ಯಂ ಗುರುರ್ಹನ್ಯಾದಕಾರಣೇ ।
ಆತ್ಮನಃ ಕಾಮಕಾರೇಣ ಸೋಽಪಿ ಹಿಂಸ್ರಃ ಪ್ರಜಾಯತೇ ॥೫೭॥

ಒಂದು ವೇಳೆ ಗುರುವು ಪುತ್ರಸದೃಶನಾದ ಶಿಷ್ಯನನ್ನು ಕಾರಣವಿಲ್ಲದೇ ಹೊಡೆದು ಹಿಂಸಿಸಿದ್ದೇ ಆದರೆ–ತಾನು ಮಾಡಿದ ಸ್ವೇಚ್ಛಾಚಾರದ ಕಾರಣದಿಂದಾಗಿ ಆ ಗುರುವೂ ಮರಣಾನಂತರದಲ್ಲಿ ಕ್ರೂರಪ್ರಾಣಿಯಾಗಿ ಹುಟ್ಟುತ್ತಾನೆ.

ಪಿತರಂ ಮಾತರಂ ಚೈವ ಯಸ್ತು ಪುತ್ರೋಽವಮನ್ಯತೇ ।
ಸೋಽಪಿ ರಾಜನ್ಮೃತೋ ಜನ್ತುಃ ಪೂರ್ವಂ ಜಾಯೇತ ಗರ್ದಭಃ ॥

ಯಾವ ಮಗನು ತನ್ನ ತಾಯಿಯನ್ನಾಗಲೀ–ತಂದೆಯನ್ನಾಗಲೀ ಅವಮಾನಗೊಳಿಸುವನೋ, ಅನಾದರಣೆಮಾಡುವನೋ–ಅವನು ಕೂಡ ಮರಣಾನಂತರ ಮೊದಲು ಕತ್ತೆಯಾಗಿ ಹುಟ್ಟುತ್ತಾನೆ.

ಗರ್ದಭತ್ವಂ ತು ಸಮ್ಪ್ರಾಪ್ಯ ದಶ ವರ್ಷಾಣಿ ಜೀವತಿ ।
ಸಂವತ್ಸರಂ ತು ಕುಮ್ಭೀರಸ್ತತೋ ಜಾಯೇತ ಮಾನವಃ ॥೫೯॥

ಕತ್ತೆಯಾಗಿ ಹುಟ್ಟಿ ಹತ್ತು ವರ್ಷಗಳು ಜೀವಿಸಿದ್ದು ಮರಣವನ್ನು ಹೊಂದಿ ಮೊಸಳೆಯಾಗಿ ಹುಟ್ಟಿ ಆ ಜನ್ಮದಲ್ಲಿ ಒಂದು ವರ್ಷವನ್ನು ಕಳೆದು ಪುನರ್ಜನ್ಮದಲ್ಲಿ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ಪುತ್ರಸ್ಯ ಮಾತಾಪಿತರೌ ಯಸ್ಯ ರುಷ್ಟಾವುಭಾವಪಿ ।
ಗುರ್ವಪಧ್ಯಾನತಃ ಸೋಽಪಿ ಮೃತೋ ಜಾಯತಿ ಗರ್ದಭಃ ॥೬೦॥

ಯಾವ ಪುತ್ರನ ವಿಷಯದಲ್ಲಿ ತಂದೆ-ತಾಯಿಗಳಿಬ್ಬರೂ ಕೋಪ ಗೊಳ್ಳುವರೋ (ಕೋಪಗೊಂಡು ಶಪಿಸುವರೋ)–ಅಂತಹ ಪುತ್ರನು ಕೂಡ ಗುರುಜನರ ಅನಿಷ್ಟಚಿಂತನೆಗೆ ಕಾರಣನಾಗುವುದರಿಂದ ಮರಣಾನಂತರದಲ್ಲಿ ಕತ್ತೆಯಾಗಿ ಹುಟ್ಟುತ್ತಾನೆ.

ಖರೋ ಜೀವತಿ ಮಾಸಾಂಸ್ತು ದಶ ಶ್ವಾ ಚ ಚತುರ್ದಶ ।
ಬಿಡಾಲಃ ಸಪ್ತಮಾಸಾಂಸ್ತು ತತೋ ಜಾಯತಿ ಮಾನವಃ ॥೬೧॥

ಕತ್ತೆಯಾಗಿ ಹುಟ್ಟುವ ಅವನು ಹತ್ತು ತಿಂಗಳು ಮಾತ್ರವೇ ಜೀವಿಸಿದ್ದು ಮರಣವನ್ನು ಹೊಂದಿ ನಾಯಿಯಾಗಿ ಹುಟ್ಟುತ್ತಾನೆ. ನಾಯಿಯ ಜನ್ಮದಲ್ಲಿ

ಹದಿನಾಲ್ಕು ಮಾಸಗಳನ್ನು ಕಳೆದು ಮರಣವನ್ನು ಹೊಂದಿ ಬೆಕ್ಕಾಗಿ ಹುಟ್ಟುತ್ತಾನೆ. ಬೆಕ್ಕಾಗಿ ಏಳು ಮಾಸಗಳನ್ನು ಕಳೆದು ಪುನಃ ಮನುಷ್ಯಯೋನಿಯಲ್ಲಿ ಜನ್ಮತಾಳುತ್ತಾನೆ.

ಮಾತಾಪಿತರಾವಾಕ್ರುಶ್ಯ ಸಾರಿಕಃ ಸಮ್ಪ್ರಜಾಯತೇ ।
ತಾಡಯಿತ್ವಾ ತು ತಾವೇವ ಜಾಯತೇ ಕಚ್ಛಪೋ ನೃಪ ॥೬೨॥

ತಂದೆ-ತಾಯಿಗಳನ್ನು ನಿಂದಿಸಿದವನು ಸಾರಿಕಾ (ಮೈನಾಕ) ಪಕ್ಷಿಯಾಗಿ ಹುಟ್ಟುತ್ತಾನೆ. ತಂದೆ-ತಾಯಿಗಳನ್ನು ಹೊಡೆದವನು ಆಮೆಯಾಗಿ ಹುಟ್ಟುತ್ತಾನೆ.

ಕಚ್ಛಪೋ ದಶ ವರ್ಷಾಣಿ ತ್ರೀಣಿ ವರ್ಷಾಣಿ ಶಲ್ಯಕಃ ।
ವ್ಯಾಲೋ ಭೂತ್ವಾ ಚ ಷಣ್ಮಾಸಾಂಸ್ತತೋ ಜಾಯತಿ ಮಾನುಷಃ ॥

ಮಾತಾ-ಪಿತೃಗಳನ್ನು ಪ್ರಹರಿಸಿದವನು ಆಮೆಯಾಗಿ ಹುಟ್ಟಿ ಹತ್ತು ವರ್ಷಗಳು ಜೀವಿಸಿದ್ದು ಸತ್ತಮೇಲೆ ಮುಳ್ಳುಹಂದಿಯಾಗಿ ಹುಟ್ಟುತ್ತಾನೆ. ಮೂರು ವರ್ಷಗಳು ಮುಳ್ಳುಹಂದಿಯಾಗಿ ಕಳೆದು ಮರಣಹೊಂದಿ ಸರ್ಪವಾಗಿ ಹುಟ್ಟುತ್ತಾನೆ. ಸರ್ಪಜನ್ಮದಲ್ಲಿ ಆರು ತಿಂಗಳನ್ನು ಕಳೆದು ಪುನಃ ಮನುಷ್ಯನಾಗಿ ಹುಟ್ಟುತ್ತಾನೆ.

ಭರ್ತೃಪಿಣ್ಡಮುಪಾಶ್ನನ್ಯೋ ರಾಜದ್ವಿಷ್ಟಾನಿ ಸೇವತೇ ।
ಸೋಽಪಿ ಮೋಹಸಮಾಪನ್ನೋ ಮೃತೋ ಜಾಯತಿ ವಾನರಃ ॥೬೪॥

ಯಾವನು ಒಬ್ಬ ರಾಜನ ಅನ್ನವನ್ನೇ ತಿಂದು ಬದುಕುತ್ತಾ ಮೋಹವಶನಾಗಿ ಆ ರಾಜನ ಶತ್ರುಗಳನ್ನೇ ಸೇವಿಸುವನೋ–ಅವನು ಕೂಡ ಮರಣಾನಂತರದಲ್ಲಿ ಕಪಿಯಾಗಿ ಹುಟ್ಟುತ್ತಾನೆ.

ವಾನರೋ ದಶ ವರ್ಷಾಣಿ ಪಞ್ಚ ವರ್ಷಾಣಿ ಮೂಷಿಕಃ ।
ಶ್ವಾಥ ಭೂತ್ವಾ ತು ಷಣ್ಮಾಸಾಂಸ್ತತೋ ಜಾಯತಿ ಮಾನುಷಃ ॥೬೫॥

ರಾಜದ್ರೋಹಿಯು ಕಪಿಯಾಗಿ ಹತ್ತು ವರ್ಷಗಳನ್ನು ಕಳೆದು ಮರಣಹೊಂದಿ ಇಲಿಯಾಗಿ ಹುಟ್ಟುತ್ತಾನೆ. ಇಲಿಯ ಜನ್ಮದಲ್ಲಿ ಐದು ವರ್ಷಗಳನ್ನು ಕಳೆದು ನಾಯಿಯಾಗಿ ಹುಟ್ಟುತ್ತಾನೆ. ನಾಯಿಯ ಜನ್ಮದಲ್ಲಿ ಆರು ತಿಂಗಳನ್ನು ಕಳೆದು ಪುನಃ ಮನುಷ್ಯನಾಗಿ ಹುಟ್ಟುತ್ತಾನೆ.

ನ್ಯಾಸಾಪಹರ್ತಾ ತು ನರೋ ಯಮಸ್ಯ ವಿಷಯಂ ಗತಃ ।
ಸಂಸಾರಾಣಾಂ ಶತಂ ಗತ್ವಾ ಕೃಮಿಯೋನೌ ಪ್ರಜಾಯತೇ ॥೬೬॥

ಕೇಳಿದಾಗ ಹಿಂದಕ್ಕೆ ಕೊಡುವುದಾಗಿ ಹೇಳಿ ಇಟ್ಟುಕೊಂಡಿದ್ದ ನಿಕ್ಷೇಪವನ್ನು (ಇಡುಗಂಟನ್ನು) ಅಪಹರಿಸಿದವನು ಯಮಲೋಕಕ್ಕೆ ಹೋಗಿ ನಾನಾವಿಧವಾದ ನೂರಾರು ಕ್ಷುದ್ರಯೋನಿಗಳಲ್ಲಿ ಹುಟ್ಟುತ್ತಾ -ಸಾಯುತ್ತಾ ಕಡೆಗೆ ಕೃಮಿಯಾಗಿ ಹುಟ್ಟುತ್ತಾನೆ.

ತತ್ರ ಜೀವತಿ ವರ್ಷಾಣಿ ದಶ ಪಞ್ಚ ಚ ಭಾರತ ।
ದುಷ್ಕೃತಸ್ಯ ಕ್ಷಯಂ ಕೃತ್ವಾ ತತೋ ಜಾಯತಿ ಮಾನುಷಃ ॥೬೭॥

ಇಡುಗಂಟನ್ನು ಅಪಹರಿಸಿದವನು ಕೃಮಿಜನ್ಮದಲ್ಲಿ ಹದಿನೈದು ವರ್ಷಗಳನ್ನು ಕಳೆದು ತನ್ನ ಪಾಪಗಳೆಲ್ಲವನ್ನೂ ಆ ಮೂಲಕವಾಗಿ ತೊಳೆದು ಕೊಂಡು ಮರಣಾನಂತರದಲ್ಲಿ ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ಅಸೂಯಕೋ ನರಶ್ಚಾಪಿ ಮೃತೋ ಜಾಯತಿ ಶಾರ್ಙ್ಗಕಃ ।
ವಿಶ್ವಾಸಹರ್ತಾ ತು ನರೋ ಮೀನೋ ಜಾಯತಿ ದುರ್ಮತಿಃ ॥೬೮॥

ಇತರರಲ್ಲಿ ದೋಷವನ್ನೆಣಿಸುವವನು ಅವಸಾನಾನಂತರದಲ್ಲಿ ಜಿಂಕೆಯಾಗಿ ಹುಟ್ಟುತ್ತಾನೆ. ವಿಶ್ವಾಸಘಾತಕನಾದ ಆ ಮೂರ್ಖನು ಮರಣಹೊಂದಿದನಂತರ ಮೀನಿನ ಜನ್ಮವನ್ನು ಪಡೆಯುತ್ತಾನೆ.

ಭೂತ್ವಾ ಮೀನೋಽಷ್ಟ ವರ್ಷಾಣಿ ಮೃತೋ ಜಾಯತಿ ಭಾರತ ।
ಮೃಗಸ್ತು ಚತುರೋ ಮಾಸಾಂಸ್ತತಶ್ಛಾಗಃ ಪ್ರಜಾಯತೇ ॥೬೯॥

ವಿಶ್ವಾಸಘಾತಕನು ಮೀನಿನ ಜನ್ಮದಲ್ಲಿ ಎಂಟು ವರ್ಷಗಳನ್ನು ಕಳೆದು ಅವಸಾನಹೊಂದಿ ಮೃಗವಾಗಿ ಹುಟ್ಟುತ್ತಾನೆ. ಆ ಜನ್ಮದಲ್ಲವನು ನಾಲ್ಕುಮಾಸಗಳಕಾಲ ಜೀವಿಸಿದ್ದು ಬಳಿಕ ಆಡಾಗಿ ಹುಟ್ಟುತ್ತಾನೆ.

ಛಾಗಸ್ತು ನಿಧನಂ ಪ್ರಾಪ್ಯ ಪೂರ್ಣೇ ಸಂವತ್ಸರೇ ತತಃ ।
ಕೀಟಃ ಸಂಜಾಯತೇ ಜನ್ತುಸ್ತತೋ ಜಾಯತಿ ಮಾನುಷಃ ॥೭೦॥

ಆಡಾಗಿ ಒಂದು ವರ್ಷವಿದ್ದು ಅವಸಾನಹೊಂದಿ ಹುಳುವಾಗಿ ಹುಟ್ಟುತ್ತಾನೆ. ಆ ಹುಳುವಿನ ಜನ್ಮದಲ್ಲಿಯೂ ಹತ್ತಾರು ವರ್ಷಗಳನ್ನು ಕಳೆದು ಪುನಃ ಮನುಷ್ಯಜನ್ಮವನ್ನು ಪಡೆಯುತ್ತಾನೆ.

ಧಾನ್ಯಾನ್ಯವಾಂಸ್ತಿಲಾನ್ಮಾಷಾನ್ಕುಲಿತ್ಥಾನ್ಸರ್ಷಪಾಂಶ್ಚಣಾನ್ ।
ಕಲಾಪಾನಥ ಮುದ್ಗಾಂಶ್ಚ ಗೋಧೂಮಾನತಸೀಂಸ್ತಥಾ ॥೭೧॥
ಸಸ್ಯಸ್ಯಾನ್ಯಸ್ಯ ಹರ್ತಾ ಚ ಮೋಹಾಜ್ಜನ್ತುರಚೇತನಃ ।
ಸ ಜಾಯತೇ ಮಹಾರಾಜ ಮೂಷಿಕೋ ನಿರಪತ್ರಪಃ ॥೭೨॥

ಮಹಾರಾಜ! ಯಾವ ಮೂಢನು ಮೋಹಪರವಶನಾಗಿ ನಾಚಿಕೆಯಿಲ್ಲದೇ ಯವೆ, ಎಳ್ಳು, ಉದ್ದು, ಹುರುಳಿ, ಸಾಸವೆ, ಕಡಲೆ, ಬಟಾಣಿ, ಹೆಸರು, ಗೋಧಿ, ಅಗಸೆ–ಇವೇ ಮುಂತಾದ ಧಾನ್ಯಗಳನ್ನೂ, ಇತರ ಸಸ್ಯಗಳಿಂದ ದೊರಕುವ ಭತ್ತ, ರಾಗಿ ಇವೇ ಮುಂತಾದುವನ್ನೂ ಅಪ ಹರಿಸುವನೋ–ಅವನು ಅವಸಾನಾನಂತರದಲ್ಲಿ ಇಲಿಯಾಗಿ ಹುಟ್ಟುತ್ತಾನೆ.

ತತಃ ಪ್ರೇತ್ಯ ಮಹಾರಾಜ ಮೃತೋ ಜಾಯತಿ ಸೂಕರಃ ।
ಸೂಕರೋ ಜಾತಮಾತ್ರಸ್ತು ರೋಗೇಣ ಮ್ರಿಯತೇ ನೃಪ ॥೭೩॥

ಇಲಿಯಾಗಿ ಪೂರ್ಣಾಯುಷ್ಯವನ್ನು ಕಳೆದು ಮರಣಹೊಂದಿದನಂತರ ಹಂದಿಯಾಗಿ ಹುಟ್ಟುತ್ತಾನೆ. ಹಂದಿಯ ಜನ್ಮದಲ್ಲಿ ಹುಟ್ಟುತ್ತಲೇ ರೋಗಗ್ರಸ್ತನಾಗಿ ಶೀಘ್ರವಾಗಿ ಮರಣಹೊಂದುತ್ತಾನೆ.

ಶ್ವಾ ತತೋ ಜಾಯತೇ ಮೂಢಃ ಕರ್ಮಣಾ ತೇನ ಪಾರ್ಥಿವ ।
ಭೂತ್ವಾ ಶ್ವಾ ಪಞ್ಚ ವರ್ಷಾಣಿ ತತೋ ಜಾಯತಿ ಮಾನವಃ ॥೭೪॥

ಧಾನ್ಯಾಪಹಾರಕನಾದ ಆ ಮೂಢನು ಹಂದಿಯ ಜನ್ಮವನ್ನು ಕಳೆದುಕೊಂಡನಂತರ ನಾಯಿಯಾಗಿ ಹುಟ್ಟುತ್ತಾನೆ. ಶ್ವಾನಜನ್ಮದಲ್ಲಿ ಐದು ವರ್ಷಗಳನ್ನು ಕಳೆದು ಅನಂತರ ಮಾನವನಾಗಿ ಹುಟ್ಟುತ್ತಾನೆ.

ಪರದಾರಾಭಿಮರ್ಶಂ ತು ಕೃತ್ವಾ ಜಾಯತಿ ವೈ ವೃಕಃ ।
ಶ್ವಾ ಶೃಗಾಲಸ್ತತೋ ಗೃಧ್ರೋ ವ್ಯಾಲಃ ಕಙ್ಕೋ ಬಕಸ್ತಥಾ ॥೭೫॥

ಪರಸ್ತ್ರೀಸಮಾಗಮವನ್ನು ಮಾಡಿದ ಪಾಪಿಷ್ಠನು ಮರಣಾನಂತರದಲ್ಲಿ ಅನುಕ್ರಮವಾಗಿ ತೋಳ, ನಾಯಿ, ಗುಳ್ಳೇನರಿ, ರಣಹದ್ದು, ಸರ್ಪ, ಹದ್ದು, ಬಕ–ಇವುಗಳ ಜನ್ಮವನ್ನು ಹೊಂದುತ್ತಾನೆ.

ಭ್ರಾತುರ್ಭಾರ್ಯಾಂ ತು ಪಾಪಾತ್ಮಾ ಯೋ ಧರ್ಷಯತಿ ಮೋಹಿತಃ ।
ಪುಂಸ್ಕೋಕಿಲತ್ವಮಾಪ್ನೋತಿ ಸೋಽಪಿ ಸಂವತ್ಸರಂ ನೃಪ ॥೭೬॥

ಯಾವ ಪಾಪಾತ್ಮನು ಮೋಹವಶನಾಗಿ ಸೋದರನ ಪತ್ನಿಯನ್ನೇ ಕೆಡಿಸುವನೋ–ಅವನು ಅವಸಾನಾನಂತರದಲ್ಲಿ ಗಂಡುಕೋಗಿಲೆಯಾಗಿ ಹುಟ್ಟಿ ಒಂದು ವರ್ಷದವರೆಗೆ ಬದುಕಿರುತ್ತಾನೆ.

ಸಖಿಭಾರ್ಯಾಂ ಗುರೋರ್ಭಾರ್ಯಾಂ ರಾಜಭಾರ್ಯಾಂ ತಥೈವ ಚ ।
ಪ್ರಧರ್ಷಯಿತ್ವಾ ಕಾಮಾಯ ಮೃತೋ ಜಾಯತಿ ಸೂಕರಃ ॥೭೭॥

ಸ್ನೇಹಿತನ ಪತ್ನಿಯನ್ನೂ, ಗುರುಗಳ ಪತ್ನಿಯನ್ನೂ, ರಾಜನ ಪತ್ನಿಯನ್ನೂ ಕಾಮಪೂರ್ತಿಗಾಗಿ ಕೆಡಿಸುವವನು–ಅವಸಾನಾನಂತರದಲ್ಲಿ ಹಂದಿಯಾಗಿ ಹುಟ್ಟುತ್ತಾನೆ.

ಸೂಕರಃ ಪಞ್ಚ ವರ್ಷಾಣಿ ದಶ ವರ್ಷಾಣಿ ಶ್ವಾವಿಧಃ ।
ಬಿಡಾಲಃ ಪಞ್ಚ ವರ್ಷಾಣಿ ದಶ ವರ್ಷಾಣಿ ಕುಕ್ಕುಟಃ ॥೭೮॥
ಪಿಪೀಲಿಕಸ್ತು ಮಾಸಾಂಸ್ತ್ರೀನ್ಕೀಟಃ ಸ್ಯಾನ್ಮಾಸಮೇವ ತು ।
ಏತಾನಾಸಾದ್ಯ ಸಂಸಾರಾನ್ಕ್ರಿಮಿಯೋನೌ ಪ್ರಜಾಯತೇ ॥೭೯॥

ಹಂದಿಯಾಗಿ ಐದು ವರ್ಷಗಳನ್ನು ಕಳೆದು, ಮರಣಹೊಂದಿದನಂತರ ಮುಳ್ಳುಹಂದಿಯಾಗಿ ಹುಟ್ಟಿ ಹತ್ತು ವರ್ಷಗಳನ್ನು ಕಳೆದು, ಬೆಕ್ಕಾಗಿ ಹುಟ್ಟಿ ಐದು ವರ್ಷಗಳನ್ನು ಕಳೆದು, ಮರಣಹೊಂದಿ ಕೋಳಿಯಾಗಿ ಹುಟ್ಟಿ ಹತ್ತು ವರ್ಷಗಳನ್ನು ಕಳೆದು, ಆ ದೇಹವನ್ನು ತ್ಯಾಗಮಾಡಿ ಇರುವೆಯಾಗಿ ಹುಟ್ಟಿ ಮೂರು ಮಾಸಗಳನ್ನು ಕಳೆದು, ಮರಣಹೊಂದಿ ಕೀಟವಾಗಿ ಹುಟ್ಟಿ ಒಂದು ತಿಂಗಳು ಕಳೆದು ಕೃಮಿಯೋನಿಯಲ್ಲಿ ಹುಟ್ಟುತ್ತಾನೆ.

ತತ್ರ ಜೀವತಿ ಮಾಸಾಂಸ್ತು ಕೃಮಿಯೋನೌ ಚತುರ್ದಶ ।
ತತೋಽಧರ್ಮಕ್ಷಯಂ ಕೃತ್ವಾ ಪುನರ್ಜಾಯತಿ ಮಾನವಃ ॥೮೦॥

ಮಿತ್ರ-ಗುರು-ರಾಜಭಾರ್ಯೆಯರೊಡನೆ ಸಮಾಗಮಮಾಡಿದ ಪಾಪಿಷ್ಠನು ಕೃಮಿಯಾಗಿ ಹದಿನಾಲ್ಕು ಮಾಸಗಳನ್ನು ಕಳೆದು ಈ ವಿಧವಾದ ಹುಟ್ಟು-ಸಾವುಗಳಿಂದ ತನ್ನ ಪಾಪಗಳನ್ನು ಕಳೆದುಕೊಂಡು ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ಉಪಸ್ಥಿತೇ ವಿವಾಹೇ ತು ಯಜ್ಞೇ ದಾನೇಽಪಿ ವಾ ವಿಭೋ ।
ಮೋಹಾತ್ಕರೋತಿ ಯೋ ವಿಘ್ನಂ ಸ ಮೃತೋ ಜಾಯತೇ ಕೃಮಿಃ ॥

ವಿವಾಹ-ಯಜ್ಞ-ದಾನಾದಿಗಳು ನಡೆಯುತ್ತಿದ್ದಾಗ ಮೋಹವಶನಾಗಿ ಯಾವನು ಆ ಕಾರ್ಯಗಳಿಗೆ ವಿಘ್ನವನ್ನುಂಟುಮಾಡುವನೋ–ಅಂತಹ ಪಾಪಾತ್ಮನು ಅವಸಾನಾನಂತರದಲ್ಲಿ ಕೃಮಿಯಾಗಿ ಹುಟ್ಟುತ್ತಾನೆ.

ಕೃಮಿರ್ಜೀವತಿ ವರ್ಷಾಣಿ ದಶ ಪಞ್ಚ ಚ ಭಾರತ ।
ಅಧರ್ಮಸ್ಯ ಕ್ಷಯಂ ಕೃತ್ವಾ ತತೋ ಜಾಯತಿ ಮಾನವಃ ॥೮೨॥

ಕೃಮಿಯಾಗಿ ಹದಿನೈದು ವರ್ಷಗಳನ್ನು ಕಳೆದು ಆ ಮೂಲಕವಾಗಿ ಪಾಪಗಳನ್ನು ಕಳೆದುಕೊಂಡು ಪುನಃ ಮಾನವನಾಗಿ ಹುಟ್ಟುತ್ತಾನೆ.

ಪೂರ್ವಂ ದತ್ತ್ವಾ ತು ಯಃ ಕನ್ಯಾಂ ದ್ವಿತೀಯೇ ದಾತುಮಿಚ್ಛತಿ ।
ಸೋಽಪಿ ರಾಜನ್ಮೃತೋ ಜನ್ತುಃ ಕೃಮಿಯೋನೌ ಪ್ರಜಾಯತೇ ॥೮೩॥

ಯಾವನು ತನ್ನ ಮಗಳನ್ನು ಒಬ್ಬನಿಗೆ ವಿವಾಹಮಾಡಿಕೊಟ್ಟು ಅನಂತರ ಅವಳನ್ನೇ ಮತ್ತೊಬ್ಬನಿಗೆ ವಿವಾಹಮಾಡಿಕೊಡಲು ಬಯಸುವನೋ–ಅವನು ಅವಸಾನಾನಂತರದಲ್ಲಿ ಕೃಮಿಯಾಗಿ ಹುಟ್ಟುತ್ತಾನೆ.

ತತ್ರ ಜೀವತಿ ವರ್ಷಾಣಿ ತ್ರಯೋದಶ ಯುಧಿಷ್ಠಿರ ।
ಅಧರ್ಮಸಂಕ್ಷಯೇ ಮುಕ್ತಸ್ತತೋ ಜಾಯತಿ ಮಾನವಃ ॥೮೪॥

ಆ ಕೃಮಿಯೋನಿಯಲ್ಲಿ ಅವನು ಹದಿಮೂರು ವರ್ಷಗಳನ್ನು ಕಳೆದು ಪಾಪವನ್ನು ಕಳೆದುಕೊಂಡು ಕೃಮಿಯೋನಿಯಿಂದ ಮುಕ್ತನಾಗಿ ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ದೇವಕಾರ್ಯಮಕೃತ್ವಾ ತು ಪಿತೃಕಾರ್ಯಮಥಾಪಿ ವಾ ।
ಅನಿರ್ವಾಪ್ಯ ಸಮಶ್ನನ್ವೈ ಮೃತೋ ಜಾಯತಿ ವಾಯಸಃ ॥೮೫॥

ದೇವಕಾರ್ಯವನ್ನಾಗಲೀ–ಪಿತೃಕಾರ್ಯವನ್ನಾಗಲೀ ಮಾಡದೇ, ಪಿತೃಗಳಿಗೆ ತರ್ಪಣವನ್ನು ಕೊಡದೇ (ಬಲಿ-ವೈಶ್ವದೇವಗಳನ್ನು ಮಾಡದೇ) ಊಟಮಾಡುವವನು ಅವಸಾನಾನಂತರದಲ್ಲಿ ಕಾಗೆಯ ಜನ್ಮವನ್ನು ಪಡೆಯುತ್ತಾನೆ.

ವಾಯಸಃ ಶತವರ್ಷಾಣಿ ತತೋ ಜಾಯತಿ ಕುಕ್ಕುಟಃ ।
ಜಾಯತೇ ವ್ಯಾಲಕಶ್ಚಾಪಿ ಮಾಸಂ ತಸ್ಮಾತ್ತು ಮಾನುಷಃ ॥೮೬॥

ಕಾಗೆಯಾಗಿ ನೂರು ವರ್ಷಗಳನ್ನು ಕಳೆದು ಮರಣಹೊಂದಿ ಕೋಳಿ

ಯಾಗಿ ಹುಟ್ಟಿ ಪೂರ್ಣಾಯುಷ್ಯವನ್ನು ಕಳೆದು ಅವಸಾನ ಹೊಂದಿ ಸರ್ಪವಾಗಿ ಹುಟ್ಟಿ ಒಂದು ಮಾಸವನ್ನು ಕಳೆದು ಪುನಃ ಮನುಷ್ಯಯೋನಿಯನ್ನು ಪಡೆಯುತ್ತಾನೆ.

ಜ್ಯೇಷ್ಠಂ ಪಿತೃಸಮಂ ಚಾಪಿ ಭ್ರಾತರಂ ಯೋಽವಮನ್ಯತೇ ।
ಸೋಽಪಿ ಮೃತ್ಯುಮುಪಾಗಮ್ಯ ಕ್ರೌಞ್ಚಯೋನೌ ಪ್ರಜಾಯತೇ ॥೮೩॥

ತಂದೆಗೆ ಸಮಾನನಾದ ಹಿರಿಯಣ್ಣನನ್ನು ಅವಮಾನಗೊಳಿಸುವವನು ಅಥವಾ ಅನಾದರಣೆಮಾಡಿದವನು ಅವಸಾನಾನಂತರದಲ್ಲಿ ನೀರುಕೊಕ್ಕರೆ ಯಾಗಿ ಹುಟ್ಟುತ್ತಾನೆ.

ಕ್ರೌಞ್ಚೋ ಜೀವತಿ ವರ್ಷಂ ತು ತತೋ ಜಾಯತಿ ಚೀರಕಃ ।
ತತೋ ನಿಧನಮಾಪನ್ನೋ ಮನುಷ್ಯತ್ವಮುಪಾಶ್ನುತೇ ॥೮೮॥

ಕೊಕ್ಕರೆಯಾಗಿ ಒಂದು ವರ್ಷವನ್ನು ಕಳೆದು ಮರಣವನ್ನು ಹೊಂದಿ ಜೀರುಂಡೆಯಾಗಿ ಹುಟ್ಟಿ ಪೂರ್ಣಾಯುಷ್ಯವನ್ನು ಕಳೆದು ಪುನಃ ಮನುಷ್ಯ ಯೋನಿಯನ್ನು ಪಡೆದುಕೊಳ್ಳುತ್ತಾನೆ.

ವೃಷಲೋ ಬ್ರಾಹ್ಮಣೀಂ ಗತ್ವಾ ಕೃಮಿಯೋನೌ ಪ್ರಜಾಯತೇ ।
ತತಃ ಸಂಪ್ರಾಪ್ಯ ನಿಧನಂ ಜಾಯತೇ ಸೂಕರಃ ಪುನಃ ॥೮೯॥

ಶೂದ್ರನಾದವನು ಬ್ರಾಹ್ಮಣಸ್ತ್ರೀಯ ಸಮಾಗಮವನ್ನು ಮಾಡಿದರೆ ಅವಸಾನಾನಂತರದಲ್ಲಿ ಕೃಮಿಯಾಗಿ ಹುಟ್ಟುತ್ತಾನೆ. ಪೂರ್ಣಾಯುಷ್ಯವನ್ನು ಕೃಮಿಯಾಗಿ ಕಳೆದು ಅನಂತರ ಹಂದಿಯಾಗಿ ಹುಟ್ಟುತ್ತಾನೆ.

ಸೂಕರೋ ಜಾತಮಾತ್ರಸ್ತು ರೋಗೇಣ ಮ್ರಿಯತೇ ನೃಪ ।
ಶ್ವಾ ತತೋ ಜಾಯತೇ ಮೂಢಃ ಕರ್ಮಣಾ ತೇನ ಪಾರ್ಥಿವ ॥೯೦॥

ಹಂದಿಯಾಗಿ ಹುಟ್ಟುತ್ತಲೇ ರೋಗಗ್ರಸ್ತನಾಗಿ ಮರಣವನ್ನು ಹೊಂದಿ ಆ ಪಾಪಕರ್ಮದ ಫಲವಾಗಿ ನಾಯಿಯಾಗಿ ಹುಟ್ಟುತ್ತಾನೆ.

ಶ್ವಾ ಭೂತ್ವಾ ಕೃತಕರ್ಮಾಸೌ ಜಾಯತೇ ಮಾನುಷಸ್ತತಃ ।
ತತ್ರಾಪತ್ಯಂ ಸಮುತ್ಪಾದ್ಯ ಮೃತೋ ಜಾಯತಿ ಮೂಷಿಕಃ ॥೯೧॥

ನಾಯಿಯಾಗಿ ಹುಟ್ಟಿ ಮರಿಗಳನ್ನು ಪಡೆದು ಪೂರ್ಣಾಯುಷ್ಯವನ್ನು ಕಳೆದನಂತರ ಅವಸಾನವನ್ನು ಹೊಂದಿ ಇಲಿಯಾಗಿ ಹುಟ್ಟುತ್ತಾನೆ. ಇಲಿಯ

ಜನ್ಮದಲ್ಲಿ ಪೂರ್ಣಾಯುಷ್ಯವನ್ನು ಕಳೆದು ತನ್ನ ಪಾಪಗಳೆಲ್ಲವನ್ನೂ ತೊಳೆದುಕೊಂಡು ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ಕೃತಘ್ನಸ್ತು ಮೃತೋ ರಾಜನ್ಯಮಸ್ಯ ವಿಷಯಂ ಗತಃ ।
ಯಮಸ್ಯ ಪುರುಷೈಃ ಕ್ರುದ್ಧೈರ್ವಧಂ ಪ್ರಾಪ್ನೋತಿ ದಾರುಣಮ್ ॥

ಮಾಡಿದ ಉಪಕಾರವನ್ನು ಸ್ಮರಿಸದಿರುವ ಮನುಷ್ಯನು ಅವಸಾನಾನಂತರದಲ್ಲಿ ಯಮಲೋಕಕ್ಕೆ ಹೋಗುತ್ತಾನೆ. ಅಲ್ಲಿ ಕ್ರುದ್ಧರಾದ ಯಮಭಟರು ಅವನಿಗೆ ದಾರುಣವಾದ ಯಾತನೆಯನ್ನು ಕೊಡುತ್ತಾರೆ.

ದಣ್ಡಂ ಸಮುದ್ಗರಂ ಶೂಲಮಗ್ನಿಕುಮ್ಭಂ ಚ ದಾರುಣಮ್ ।
ಅಸಿಪತ್ರವನಂ ಘೋರವಾಲುಕಂ ಕೂಟಶಾಲ್ಮಲೀಮ್ ॥೯೩॥

ಏತಾಶ್ಚಾನ್ಯಾಶ್ಚ ಬಹ್ವೀಶ್ಚ ಯಮಸ್ಯ ವಿಷಯಂ ಗತಃ ।
ಯಾತನಾಃ ಪ್ರಾಪ್ಯ ತತ್ರೋಗ್ರಾಸ್ತತೋ ವಧ್ಯತಿ ಭಾರತ ॥೯೪॥

ಯಮನ ಲೋಕಕ್ಕೆ ಹೋದ ಆ ಕೃತಘ್ನನು ಯಮನ ದಂಡದಿಂದಲೂ, ಮುದ್ಗರದಿಂದಲೂ, ಶೂಲದಿಂದಲೂ ಹೊಡೆಯಲ್ಪಟ್ಟು ದಾರುಣವಾದ ಅಗ್ನಿಕುಂಭದಲ್ಲಿಯೂ, (ಕುಂಭೀಪಾಕವೆಂಬ ನರಕದಲ್ಲಿಯೂ), ಕತ್ತಿಗಳೇ ಎಲೆಯಾಗಿ ಉಳ್ಳ ಅಸಿಪತ್ರವನವೆಂಬ ನರಕದಲ್ಲಿಯೂ, ಬಹಳವಾಗಿ ಕಾದಿರುವ ಭಯಂಕರವಾದ ಮರಳಿನಲ್ಲಿಯೂ, (ಘೋರವಾಲುಕವೆಂಬ ನರಕದಲ್ಲಿಯೂ), ಮುಳ್ಳುಗಳಿಂದ ಕೂಡಿದ ಶಾಲ್ಮಲೀವೃಕ್ಷಗಳ ಕಾಡಿನಲ್ಲಿಯೂ (ಕೂಟಶಾಲ್ಮಲೀ ಎಂಬ ನರಕದಲ್ಲಿಯೂ) ಇದೇ ವಿಧವಾದ ಇನ್ನೂ ಅನೇಕ ನರಕಗಳಲ್ಲಿಯೂ ಬಿದ್ದು ದಾರುಣವಾದ ಯಾತನೆಯನ್ನು ಅನುಭವಿಸುತ್ತಾನೆ. ಬಳಿಕ ಅವನನ್ನು ಭಯಂಕರರಾದ ಯಮದೂತರು ಬಹಳವಾಗಿ ಹಿಂಸಿಸುತ್ತಾರೆ.

ತತೋ ಹತಃ ಕೃತಘ್ನಃ ಸ ತತ್ರೋಗ್ರೈರ್ಭರತರ್ಷಭ ।
ಸಂಸಾರಚಕ್ರಮಾಸಾದ್ಯ ಕೃಮಿಯೋನೌ ಪ್ರಜಾಯತೇ ॥೯೫॥

ನಿರ್ದಯರಾದ ಯಮದೂತರಿಂದ ಹೀಗೆ ಪೀಡಿಸಲ್ಪಟ್ಟ ಆ ಕೃತಘ್ನನು ಸಂಸಾರಚಕ್ರದಲ್ಲಿ ಬಿದ್ದು ಮೊದಲು ಕೃಮಿಯೋನಿಯಲ್ಲಿ ಹುಟ್ಟುತ್ತಾನೆ.

ಕೃಮಿರ್ಭವತಿ ವರ್ಷಾಣಿ ದಶ ಪಞ್ಚ ಚ ಭಾರತ ।
ತತೋ ಗರ್ಭಂ ಸಮಾಸಾದ್ಯ ತತ್ರೈವ ಮ್ರಿಯತೇ ಶಿಶುಃ ॥೯೬॥

ಕೃಮಿಯಾಗಿ ಹದಿನೈದು ವರ್ಷಗಳನ್ನು ಕಳೆದು ಅವಸಾನಹೊಂದಿ ಮನುಷ್ಯಗರ್ಭದಲ್ಲಿ ಸೇರಿಕೊಳ್ಳುತ್ತಾನೆ. ಗರ್ಭಸ್ಥನಾದ ಆ ಕೃತಘ್ನನು ಶಿಶುವಿನ ರೂಪವನ್ನು ಹೊಂದಿ ಅಲ್ಲಿಯೇ ಸಾಯುತ್ತಾನೆ.

ತತೋ ಗರ್ಭಶತೈರ್ಜನ್ತುರ್ಬಹುಭಿಃ ಸಂಪ್ರಪದ್ಯತೇ ।
ಸಂಸಾರಾಂಶ್ಚ ಬಹೂನ್ಗತ್ವಾ ತತಸ್ತಿರ್ಯಕ್ಷು ಜಾಯತೇ ॥೯೭॥

ಹೀಗೆ ಅವನು ನೂರಾರು ಬಾರಿ ನಾನಾಪ್ರಾಣಿಗಳ ಗರ್ಭವನ್ನು ಸೇರಿ ಅಲ್ಲಿಯೇ ಸಾಯುತ್ತಿರುತ್ತಾನೆ. ಅನೇಕಾನೇಕ ಜನ್ಮಗಳನ್ನು ತಾಳಿ ಅನಂತರ ಪಶು-ಪಕ್ಷಿಗಳ ಯೋನಿಯಲ್ಲಿ ಹುಟ್ಟುತ್ತಾನೆ.

ತತೋ ದುಃಖಮನುಪ್ರಾಪ್ಯ ಬಹು ವರ್ಷಗಣಾನಿಹ ।
ಅಪುನರ್ಭವಸಂಯುಕ್ತಸ್ತತಃ ಕೂರ್ಮಃ ಪ್ರಜಾಯತೇ ॥೯೮॥

ಪಶು-ಪಕ್ಷಿಗಳ ಯೋನಿಯಲ್ಲಿಯೇ ಪುನಃ ಪುನಃ ಹುಟ್ಟುತ್ತಾ ಅನೇಕ ವರ್ಷಗಳವರೆಗೆ ದುಃಖವನ್ನು ಅನುಭವಿಸುತ್ತಾ ಮನುಷ್ಯಯೋನಿಯನ್ನು ಪಡೆಯಲಾಗದೇ ಆಮೆಯಾಗಿ ಹುಟ್ಟುತ್ತಾನೆ.

ದಧಿ ಹೃತ್ವಾ ಬಕಶ್ಚಾಪಿ ಪ್ಲವೋ ಮತ್ಸ್ಯಾನಸಂಸ್ಕೃತಾನ್ ।
ಚೋರಯಿತ್ವಾ ತು ದುರ್ಬುದ್ಧಿರ್ಮಧು ದಂಶಃ ಪ್ರಜಾಯತೇ ॥೯೯॥

ದುರ್ಬುದ್ಧಿಯಿಂದ ಕೂಡಿರುವ ಮನುಷ್ಯನು ಮೊಸರನ್ನು ಕದ್ದು ಬಕಪಕ್ಷಿಯಾಗಿ ಹುಟ್ಟುತ್ತಾನೆ. ಅಸಂಸ್ಕೃತವಾದ ಮೀನುಗಳನ್ನು ಕದ್ದು ಕಪ್ಪೆಯಾಗಿ (ಕಾರಂಡವಪಕ್ಷಿಯಾಗಿ) ಹುಟ್ಟುತ್ತಾನೆ. ಜೇನುತುಪ್ಪವನ್ನು ಕದ್ದು ಕಾಡುನೊಣವಾಗಿ ಹುಟ್ಟುತ್ತಾನೆ.

ಫಲಂ ವಾ ಮೂಲಕಂ ಹೃತ್ವಾ ಅಪೂಪಂ ವಾ ಪಿಪೀಲಿಕಾಃ ।
ಚೋರಯಿತ್ವಾ ಚ ನಿಷ್ಪಾವಂ ಜಾಯತೇ ಹಲಗೋಲಕಃ ॥೧೦೦॥

ಹಣ್ಣುಗಳನ್ನಾಗಲೀ, ಗೆಡ್ಡೆ-ಗೆಣಸುಗಳನ್ನಾಗಲೀ, ಹೋಳಿಗೆಯನ್ನಾಗಲೀ ಕದ್ದವನು ಇರುವೆಯಾಗಿ ಹುಟ್ಟುತ್ತಾನೆ. ಅವರೆಯನ್ನು ಕದ್ದವನು ಹಲಗೋಲಕವೆಂಬ ಹುಳುವಾಗಿ ಹುಟ್ಟುತ್ತಾನೆ.

ಪಾಯಸಂ ಚೋರಯಿತ್ವಾ ತು ತಿತ್ತಿರಿತ್ವಮವಾಪ್ನುತೇ ।
ಹೃತ್ವಾ ಪಿಷ್ಟಮಯಂ ಪೂಪಂ ಕುಮ್ಭೋಲೂಕಃ ಪ್ರಜಾಯತೇ ॥

ಪಾಯಸವನ್ನು ಕದ್ದವನು ತಿತ್ತಿರಿಪಕ್ಷಿ (ವೇದಪಕ್ಷಿ) ಯಾಗಿ ಹುಟ್ಟುತ್ತಾನೆ. ಹಿಟ್ಟಿನಿಂದ ಮಾಡಿದ ರೊಟ್ಟಿಯನ್ನು ಕದ್ದವನು ಕುಂಬವೆಂಬ ಜಾತಿಯ ಗೂಬೆಯಾಗಿ ಹುಟ್ಟುತ್ತಾನೆ.

ಅಯೋ ಹೃತ್ವಾ ತು ದುರ್ಬುದ್ಧಿರ್ವಾಯಸೋ ಜಾಯತೇ ನರಃ ।
ಕಾಂಸ್ಯಂ ಹೃತ್ವಾ ತು ದುರ್ಬುದ್ಧಿರ್ಹಾರಿತೋ ಜಾಯತೇ ನರಃ ॥

ಕಬ್ಬಿಣವನ್ನು ಕದ್ದ ದುರ್ಬುದ್ಧಿಯ ಮನುಷ್ಯನು ಕಾಗೆಯಾಗಿ ಹುಟ್ಟುತ್ತಾನೆ. ಕಂಚನ್ನು ಕದ್ದ ದುರ್ಬುದ್ಧಿಯು ಹಾರಿತವೆಂಬ (ಹಸುಬನವೆಂಬ) ಪಕ್ಷಿಯಾಗಿ ಹುಟ್ಟುತ್ತಾನೆ.

ರಾಜತಂ ಭಾಜನಂ ಹೃತ್ವಾ ಕಪೋತಃ ಸಂಪ್ರಜಾಯತೇ ।
ಹೃತ್ವಾ ತು ಕಾಞ್ಚನಂ ಭಾಣ್ಡಂ ಕೃಮಿಯೋನೌ ಪ್ರಜಾಯತೇ ॥

ಬೆಳ್ಳಿಯ ಪಾತ್ರೆಯನ್ನು ಕದ್ದವನು ಪಾರಿವಾಳದ ಹಕ್ಕಿಯಾಗಿ ಹುಟ್ಟುತ್ತಾನೆ. ಸುವರ್ಣದ ಪಾತ್ರೆಯನ್ನು ಕದ್ದವನು ಕೃಮಿಯಾಗಿ ಹುಟ್ಟುತ್ತಾನೆ.

ಪತ್ರೋರ್ಣಂ ಚೋರಯಿತ್ವಾ ತು ಕೃಕಲತ್ವಂ ನಿಗಚ್ಛತಿ ।
ಕೌಶಿಕಂ ತು ತತೋ ಹೃತ್ವಾ ನರೋ ಜಾಯತಿ ವರ್ತಕಃ ॥೧೦೪॥

ಉಣ್ಣೆಯ ಬಟ್ಟೆಯನ್ನು ಕದ್ದವನು ಓತಿಕೇತವಾಗಿ ಹುಟ್ಟುತ್ತಾನೆ. ರೇಷ್ಮೆಯ ವಸ್ತ್ರವನ್ನು ಕದ್ದವನು ಬಾತುಕೋಳಿಯಾಗಿ ಹುಟ್ಟುತ್ತಾನೆ.

ಅಂಶುಕಂ ಚೋರಯಿತ್ವಾ ತು ಶುಕೋ ಜಾಯತಿ ಮಾನವಃ ।
ಚೋರಯಿತ್ವಾ ದುಕೂಲಂ ತು ಮೃತೋ ಹಂಸಃ ಪ್ರಜಾಯತೇ ॥

ನವುರಾದ ವಸ್ತ್ರವನ್ನು ಕದ್ದವನು ಗಿಳಿಯಾಗಿ ಹುಟ್ಟುತ್ತಾನೆ. ಪಟ್ಟೇ ವಸ್ತ್ರವನ್ನು ಕದ್ದವನು ಮರಣಾನಂತರದಲ್ಲಿ ಹಂಸಪಕ್ಷಿಯಾಗಿ ಹುಟ್ಟುತ್ತಾನೆ.

ಕ್ರೌಞ್ಚಃ ಕಾರ್ಪಾಸಿಕಂ ಹೃತ್ವಾ ಮೃತೋ ಜಾಯತಿ ಮಾನವಃ ।
ಚೋರಯಿತ್ವಾ ನರಃ ಪಟ್ಟಂ ತ್ವಾವಿಕಂ ಚೈವ ಭಾರತ ।
ಕ್ಷೌಮಂ ಚ ವಸ್ತ್ರಮಾದಾಯ ಶಶೋ ಜನ್ತುಃ ಪ್ರಜಾಯತೇ ॥

ಹತ್ತಿಯ ಬಟ್ಟೆಯನ್ನು ಕದ್ದವನು ಅವಸಾನಾನಂತರದಲ್ಲಿ ಕೊಕ್ಕರೆಯಾಗಿ ಹುಟ್ಟುತ್ತಾನೆ. ಪೀತಾಂಬರ, ಉಣ್ಣೆಬಟ್ಟೆ ಮತ್ತು ರೇಷ್ಮೆಯ ವಸ್ತ್ರ–ಇವುಗಳನ್ನು ಕದ್ದವನು ಮರಣಾನಂತರದಲ್ಲಿ ಮೊಲವಾಗಿ ಹುಟ್ಟುತ್ತಾನೆ.

ವರ್ಣಾನ್ಹೃತ್ವಾ ತು ಪುರುಷೋ ಮೃತೋ ಜಾಯತಿ ಬರ್ಹಿಣಃ ।
ಹೃತ್ವಾ ರಕ್ತಾನಿ ವಸ್ತ್ರಾಣಿ ಜಾಯತೇ ಜೀವಜೀವಿಕಃ ॥೧೦೭॥

ಬಣ್ಣದ ಬಟ್ಟೆಗಳನ್ನು ಕದ್ದವನು ಅವಸಾನಾನಂತರದಲ್ಲಿ ನವಿಲಾಗಿ ಹುಟ್ಟುತ್ತಾನೆ. ಕೆಂಪುಬಟ್ಟೆಗಳನ್ನು ಕದ್ದವನು ಚಕೋರಪಕ್ಷಿಯಾಗಿ ಹುಟ್ಟುತ್ತಾನೆ.

ವರ್ಣಕಾದೀಂಸ್ತಥಾ ಗನ್ಧಾಂಶ್ಚೋರಯಿತ್ವೇಹ ಮಾನವಃ ।
ಛುಚ್ಛುನ್ದರಿತ್ವಮಾಪ್ನೋತಿ ರಾಜಲ್ಲೋಭಪರಾಯಣಃ ॥೧೦೮॥
ತತ್ರ ಜೀವತಿ ವರ್ಷಾಣಿ ತತೋ ದಶ ಚ ಪಞ್ಚ ಚ ।
ಅಧರ್ಮಸ್ಯ ಕ್ಷಯಂ ಗತ್ವಾ ತತೋ ಜಾಯತಿ ಮಾನುಷಃ ॥೧೦೯॥

ಲೋಭವಶನಾಗಿ ಪೂಸಿಕೊಳ್ಳಲು ಯೋಗ್ಯವಾದ ಸುಗಂಧದ್ರವ್ಯ ಗಳನ್ನೂ, ಗಂಧವನ್ನೂ ಕದ್ದವನು ಮೂಗಿಲಿಯಾಗಿ ಹುಟ್ಟುತ್ತಾನೆ. ಆ ಜನ್ಮದಲ್ಲಿ ಹದಿನೈದು ವರ್ಷಗಳನ್ನು ಕಳೆದು ಪಾಪವನ್ನು ಕಳೆದುಕೊಂಡು ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ಚೋರಯಿತ್ವಾ ಪಯಶ್ಚಾಪಿ ಬಲಾಕಾ ಸಂಪ್ರಜಾಯತೇ ॥೧೧೦॥

ಹಾಲನ್ನು ಕದ್ದವನು ಬೆಳ್ಳಕ್ಕಿಯಾಗಿ ಹುಟ್ಟುತ್ತಾನೆ.

ಯಸ್ತು ಚೋರಯತೇ ತೈಲಂ ನರೋ ಮೋಹಸಮನ್ವಿತಃ ।
ಸೋಽಪಿ ರಾಜನ್ಮೃತೋ ಜನ್ತುಸ್ತೈಲಪಾಯೀ ಪ್ರಜಾಯತೇ ॥೧೧೧॥

ಯಾವನು ಮೋಹವಶನಾಗಿ ಎಣ್ಣೆಯನ್ನು ಕದಿಯುವನೋ– ಅವನು ಅವಸಾನಾನಂತರದಲ್ಲಿ ಜಿರಲೆಯಾಗಿ ಅಥವಾ ಹಂಡೆಮೂಗಕ್ಕಿಯಾಗಿ ಹುಟ್ಟುತ್ತಾನೆ.

ಅಶಸ್ತ್ರಂ ಪುರುಷಂ ಹತ್ವಾ ಸಶಸ್ತ್ರಃ ಪುರುಷಾಧಮಃ ।
ಅರ್ಥಾರ್ಥೀ ಯದಿ ವಾ ವೈರೀ ಸ ಮೃತೋ ಜಾಯತೇ ಖರಃ ॥

ಧನದ ಆಸೆಯಿಂದಾಗಲೀ, ದ್ವೇಷದ ಕಾರಣದಿಂದಾಗಲೀ ಪುರುಷಾಧಮನಾದ ಶಸ್ತ್ರಪಾಣಿಯಾದ ಯಾವನು ಶಸ್ತ್ರರಹಿತನಾದ ಪುರುಷನನ್ನು ಕೊಲ್ಲುವನೋ–ಅವನು ಅವಸಾನಾನಂತರದಲ್ಲಿ ಕತ್ತೆಯಾಗಿ ಹುಟ್ಟುತ್ತಾನೆ.

ಖರೋ ಜೀವತಿ ವರ್ಷೇ ದ್ವೇ ತತಃ ಶಸ್ತ್ರೇಣ ವಧ್ಯತೇ ।
ಸ ಮೃತೋ ಮೃಗಯೋನೌ ತು ನಿತ್ಯೋದ್ವಿಗ್ನೋಽಭಿಜಾಯತೇ ॥

ಕತ್ತೆಯಾಗಿ ಎರಡು ವರ್ಷಗಳನ್ನು ಕಳೆದನಂತರ ಶಸ್ತ್ರಘಾತದಿಂದಲೇ ಆ ಜನ್ಮವನ್ನು ನೀಗಿಕೊಳ್ಳುತ್ತಾನೆ. ಬಳಿಕ ಮೃಗಯೋನಿಯಲ್ಲಿ ಹುಟ್ಟಿ ಸದಾ ಉದ್ವಿಗ್ನನಾಗಿಯೇ ಇರುತ್ತಾನೆ.

ಮೃಗೋ ವಧ್ಯತಿ ಶಸ್ತ್ರೇಣ ಗತೇ ಸಂವತ್ಸರೇ ತು ಸಃ ।
ಹತೋ ಮೃಗಸ್ತತೋ ಮೀನಃ ಸೋಽಪಿ ಜಾಲೇನ ಬಧ್ಯತೇ ॥೧೧೪॥

ಮಾಸೇ ಚತುರ್ಥೇ ಸಂಪ್ರಾಪ್ತೇ ಶ್ವಾಪದಃ ಸಂಪ್ರಜಾಯತೇ ।
ಶ್ವಾಪದೋ ದಶ ವರ್ಷಾಣಿ ದ್ವೀಪೀ ವರ್ಷಾಣಿ ಪಞ್ಚ ಚ ॥೧೧೫॥

ಮೃಗವಾಗಿ ಒಂದು ವರ್ಷವು ಕಳೆದನಂತರ ಪುನಃ ಶಸ್ತ್ರಘಾತದಿಂದಲೇ ಅವನು ಮೃಗಜನ್ಮವನ್ನು ಪರಿತ್ಯಜಿಸುತ್ತಾನೆ. ಬಳಿಕ ಅವನು ಮೀನಾಗಿ ಹುಟ್ಟುತ್ತಾನೆ. ನಾಲ್ಕು ಮಾಸಗಳವರೆಗೆ ಮೀನಾಗಿದ್ದು ಅನಂತರ ಬೆಸ್ತರ ಬಲೆಗೆ ಸಿಕ್ಕಿಹಾಕಿಕೊಂಡು ಆ ಜನ್ಮವನ್ನು ತೊರೆಯುತ್ತಾನೆ. ಪುನಃ ಅವನು ಕ್ರೂರಪ್ರಾಣಿಯಾಗಿ ಹುಟ್ಟುತ್ತಾನೆ. ಕ್ರೂರಪ್ರಾಣಿಯಾಗಿ ಹತ್ತು ವರ್ಷಗಳನ್ನು ಕಳೆದು ಮರಣವನ್ನು ಹೊಂದಿ ಹುಲಿಯಾಗಿ ಹುಟ್ಟಿ ಐದು ವರ್ಷಗಳನ್ನು ಕಳೆಯುತ್ತಾನೆ.

ತತಸ್ತು ನಿಧನಂ ಪ್ರಾಪ್ತಃ ಕಾಲಪರ್ಯಾಯಚೋದಿತಃ ।
ಅಧರ್ಮಸ್ಯ ಕ್ಷಯಂ ಕೃತ್ವಾ ತತೋ ಜಾಯತಿ ಮಾನುಷಃ ॥೧೧೬॥

ಇಷ್ಟು ಜನ್ಮಗಳನ್ನು ಪಡೆದುಕೊಂಡು, ಶಸ್ತ್ರರಹಿತನಾದವನನ್ನು ಕೊಂದ ಪಾಪವನ್ನು ಕಳೆದುಕೊಂಡು, ಕಾಲಚೋದಿತನಾಗಿ ನಿಧನವನ್ನು ಹೊಂದಿ ಪುನಃ ಮನುಷ್ಯಯೋನಿಯಲ್ಲಿ ಜನ್ಮತಾಳುತ್ತಾನೆ.

ಸ್ತ್ರಿಯಂ ಹತ್ವಾ ತು ದುರ್ಬುದ್ಧಿರ್ಯಮಸ್ಯ ವಿಷಯಂ ಗತಃ ।
ಬಹೂನ್ಕ್ಲೇಶಾನ್ಸಮಾಸಾದ್ಯ ಸಂಸಾರಾಂಶ್ಚೈವ ವಿಂಶತಿಮ್ ॥೧೧೭॥

ಹೆಂಗಸನ್ನು ಹತ್ಯೆಮಾಡಿದ ದುರ್ಮತಿಯು ಯಮಲೋಕಕ್ಕೆ ಹೋಗಿ ಅಲ್ಲಿ ಅನೇಕವಿಧವಾದ ಕಷ್ಟಗಳನ್ನು ಅನುಭವಿಸಿ ಬಳಿಕ ಇಪ್ಪತ್ತು ಸಲ ದುಷ್ಟಯೋನಿಗಳಲ್ಲಿ ಹುಟ್ಟಿ ಸಾಯುತ್ತಿರುತ್ತಾನೆ.

ತತಃ ಪಶ್ಚಾನ್ಮಹಾರಾಜ ಕೃಮಿಯೋನೌ ಪ್ರಜಾಯತೇ ।
ಕೃಮಿರ್ವಿಂಶತಿ ವರ್ಷಾಣಿ ಭೂತ್ವಾ ಜಾಯತಿ ಮಾನುಷಃ ॥೧೧೮॥

ಬಳಿಕ ಕೃಮಿಯೋನಿಯಲ್ಲಿ ಹುಟ್ಟಿ ಇಪ್ಪತ್ತು ವರ್ಷಗಳನ್ನು ಕಳೆದು ಅನಂತರ ಅವಸಾನವನ್ನು ಹೊಂದಿ ಪುನಃ ಮನುಷ್ಯಯೋನಿಯಲ್ಲಿ ಜನ್ಮತಾಳುತ್ತಾನೆ.

ಭೋಜನಂ ಚೋರಯಿತ್ವಾ ತು ಮಕ್ಷಿಕಾ ಜಾಯತೇ ನರಃ ।
ಮಕ್ಷಿಕಾಸಂಘವಶಗೋ ಬಹೂನ್ಮಾಸಾನ್ಭವತ್ಯುತ ।
ತತಃ ಪಾಪಕ್ಷಯಂ ಕೃತ್ವಾ ಮಾನುಷತ್ವಮವಾಪ್ನುತೇ ॥೧೧೯॥

ಒಬ್ಬನಿಗೆ ಸಿದ್ಧಪಡಿಸಿದ್ದ ಭೋಜನವನ್ನು ಕದ್ದವನು ಅವಸಾನಾನಂತರದಲ್ಲಿ ನೊಣವಾಗಿ ಹುಟ್ಟುತ್ತಾನೆ. ನೊಣಗಳ ಸಮೂಹದಲ್ಲಿಯೇ ಸೇರಿ ಅಲ್ಲಿ ಅನೇಕಮಾಸಗಳನ್ನು ಕಳೆಯುತ್ತಾನೆ. ಹೀಗೆ ಅವನು ಪಾಪಗಳನ್ನು ಸವೆಸಿ ಪುನಃ ಮನುಷ್ಯಯೋನಿಯಲ್ಲಿ ಹುಟ್ಟುತ್ತಾನೆ.

ಧಾನ್ಯಂ ಹೃತ್ವಾ ತು ಪುರುಷೋ ಲೋಮಶಃ ಸಂಪ್ರಜಾಯತೇ ।
ತಥಾ ಪಿಣ್ಯಾಕಸಮ್ಮಿಶ್ರಮಶನಂ ಚೋರಯೇನ್ನರಃ ॥೧೨೦॥

ಸ ಜಾಯತೇ ಬಭ್ರುಸಮೋ ದಾರುಣೋ ಮೂಷಿಕೋ ನರಃ ।
ದಶನ್ವೈ ಮಾನುಷಾನ್ನಿತ್ಯಂ ಪಾಪಾತ್ಮಾ ಸ ವಿಶಾಮ್ಪತೇ ॥೧೨೧॥

ಧಾನ್ಯವನ್ನು ಕದ್ದವನು ಮರುಹುಟ್ಟಿನಲ್ಲಿ ಮೈತುಂಬಾ ಕೂದಲುಳ್ಳವನಾಗಿ (ಕಂಬಳಿಹುಳುವಾಗಿ) ಹುಟ್ಟುತ್ತಾನೆ. ಎಳ್ಳಿನ ಪುಡಿಯಿಂದ ಮಿಶ್ರವಾದ ಅನ್ನವನ್ನು ಕದ್ದವನು ಅವಸಾನಾನಂತರದಲ್ಲಿ ಮುಂಗುಸಿಯಂತಿರುವ ಭಯಂಕರವಾದ ಹೆಗ್ಗಣವಾಗಿ ಹುಟ್ಟುತ್ತಾನೆ. ಆ ಜನ್ಮದಲ್ಲಿಯೂ ಆ ಪಾಪಾತ್ಮನು ಮನುಷ್ಯರನ್ನು ಕಚ್ಚುತ್ತಲೇ ಇರುತ್ತಾನೆ.

ಘೃತಂ ಹೃತ್ವಾ ತು ದುರ್ಬುದ್ಧಿಃ ಕಾಕಮದ್ಗುಃ ಪ್ರಜಾಯತೇ ॥
ಮತ್ಸ್ಯಮಾಂಸಮಥೋ ಹೃತ್ವಾ ಕಾಕೋ ಜಾಯತಿ ದುರ್ಮತಿಃ ।
ಲವಣಂ ಚೋರಯಿತ್ವಾ ತು ಚಿರಿಕಾಕಃ ಪ್ರಜಾಯತೇ ॥೧೨೩॥

ತುಪ್ಪವನ್ನು ಕದ್ದ ದುರ್ಮತಿಯು ಅವಸಾನಾನಂತರದಲ್ಲಿ ಕಾಕಮದ್ಗುವಾಗಿ (ನೀರುಕಾಗೆಯಾಗಿ) ಹುಟ್ಟುತ್ತಾನೆ. ಮೀನಿನ ಮಾಂಸವನ್ನು ಕದ್ದವನು ಕಾಗೆಯಾಗಿ ಹುಟ್ಟುತ್ತಾನೆ. ಉಪ್ಪನ್ನು ಕದ್ದವನು ಚಿರಿಕಾಕಪಕ್ಷಿಯಾಗಿ (ಗಿಳಿಯ ಪ್ರಭೇದ) ಹುಟ್ಟುತ್ತಾನೆ.

ವಿಶ್ವಾಸೇನ ತು ನಿಕ್ಷಿಪ್ತಂ ಯೋ ವಿನಿಹ್ನೋತಿ ಮಾನವಃ ।
ಸ ಗತಾಯುರ್ನರಸ್ತಾತ ಮತ್ಸ್ಯಯೋನೌ ಪ್ರಜಾಯತೇ ॥೧೨೪॥

ಒಬ್ಬನು ನಂಬಿಕೆಯಿಂದ ತನ್ನಲ್ಲಿಟ್ಟಿದ್ದ ಪದಾರ್ಥವನ್ನು ಯಾವನು ನುಂಗಿಹಾಕುವನೋ–ಅವನು ಮೃತನಾದನಂತರ ಮೀನಾಗಿ ಹುಟ್ಟುತ್ತಾನೆ.

ಮತ್ಸ್ಯಯೋನಿಮನುಪ್ರಾಪ್ಯ ಮೃತೋ ಜಾಯತಿ ಮಾನುಷಃ ।
ಮಾನುಷತ್ವಮನುಪ್ರಾಪ್ಯ ಕ್ಷೀಣಾಯುರುಪಪದ್ಯತೇ ॥೧೨೫॥

ಮತ್ಸ್ಯಯೋನಿಯಲ್ಲಿ ಹುಟ್ಟಿದ ಅವನು ಪೂರ್ಣಾಯುಷ್ಯವನ್ನು ಕಳೆದು ಅವಸಾನಹೊಂದಿದನಂತರ ಪುನಃ ಮನುಷ್ಯನಾಗಿ ಹುಟ್ಟುತ್ತಾನೆ. ಆದರೆ ನಿಕ್ಷೇಪವನ್ನು ಅಪಹರಿಸಿದ ಪಾಪವು ಇನ್ನೂ ಕಳೆದಿರುವುದಿಲ್ಲವಾದುದರಿಂದ ಅವನು ಕ್ಷೀಣಾಯುವಾಗುತ್ತಾನೆ. (ಹುಟ್ಟಿದ ಸ್ವಲ್ಪದಿವಸಗಳಲ್ಲಿಯೇ ಸತ್ತುಹೋಗುತ್ತಾನೆ.)

ಪಾಪಾನಿ ತು ನರಾಃ ಕೃತ್ವಾ ತಿರ್ಯಗ್ಜಾಯನ್ತಿ ಭಾರತ ।
ನ ಚಾತ್ಮನಃ ಪ್ರಮಾಣಂ ತೇ ಧರ್ಮಂ ಜಾನನ್ತಿ ಕಿಂಚನ ॥೧೨೬॥

ಮನುಷ್ಯರು ಅನೇಕಪ್ರಕಾರವಾಗಿ ಪಾಪಗಳನ್ನು ಮಾಡಿ ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟುತ್ತಾರೆ. ಆ ಯೋನಿಗಳಲ್ಲಿರುವಾಗ ತಾವಾರೆಂಬುದನ್ನು ತಿಳಿದವರಾಗಿರುವುದಿಲ್ಲ; ಆತ್ಮೋದ್ಧಾರದ ಧರ್ಮವನ್ನೂ ತಿಳಿದವ ರಾಗಿರುವುದಿಲ್ಲ.

ಯೇ ಪಾಪಾನಿ ನರಾಃ ಕೃತ್ವಾ ನಿರಸ್ಯನ್ತಿ ವ್ರತೈಃ ಸದಾ ।
ಸುಖದುಃಖಸಮಾಯುಕ್ತಾ ವ್ಯಥಿತಾಸ್ತೇ ಭವನ್ತ್ಯುತ ॥೧೨೭॥

ಅಸಂವಾಸಾಃ ಪ್ರಜಾಯನ್ತೇ ಮ್ಲೇಚ್ಛಾಶ್ಚಾಪಿ ನ ಸಂಶಯಃ ।
ನರಾಃ ಪಾಪಸಮಾಚಾರಾಃ ಲೋಭಮೋಹಸಮನ್ವಿತಾಃ ॥೧೨೮॥

ಲೋಭ-ಮೋಹಗಳಿಗೆ ವಶರಾಗಿ ಪಾಪಾಚಾರಿಗಳಾಗಿರತಕ್ಕವರು ಪಾಪಗಳನ್ನು ಮಾಡುತ್ತಿರುತ್ತಾರೆ. ವ್ರತ-ನಿಯಮಾದಿಗಳಿಂದ ಆ ಪಾಪಗಳನ್ನು ತೊಳೆದುಕೊಳ್ಳಲು ಪ್ರಯತ್ನಿಸುತ್ತಿರುತ್ತಾರೆ. ಅಂತಹವರು ಸುಖ-ದುಃಖ ಗಳೆರಡನ್ನೂ ಅನುಕ್ರಮವಾಗಿ ಅನುಭವಿಸುತ್ತಾ ಮನಸ್ಸಿಗೆ ಶಾಂತಿಯು ಸಿಗದೇ ವ್ಯಥಿತರಾಗಿಯೇ ಇರುತ್ತಾರೆ. ಅಂತಹವರು ಅವಸಾನಾನಂತರದಲ್ಲಿ ನಿಂತಲ್ಲಿ ನಿಲ್ಲದಿರುವವರೂ (ಯಾವಾಗಲೂ ಅಲೆದಾಡುತ್ತಲೇ ಇರುವವರೂ), ಮ್ಲೇಚ್ಛರೂ ಆಗಿ ಹುಟ್ಟುತ್ತಾರೆಂಬುದರಲ್ಲಿ ಸಂಶಯವೇ ಇಲ್ಲ.

ವರ್ಜಯನ್ತಿ ಚ ಪಾಪಾನಿ ಜನ್ಮಪ್ರಭೃತಿ ಯೇ ನರಾಃ ।
ಅರೋಗಾ ರೂಪವನ್ತಸ್ತೇ ಧನಿನಶ್ಚ ಭವನ್ತ್ಯುತ ॥೧೨೯॥

ಯಾವ ಮನುಷ್ಯರು ಹುಟ್ಟಿದಾಗಿನಿಂದಲೂ ಪಾಪಗಳನ್ನೇ ಮಾಡುವುದಿಲ್ಲವೋ–ಅಂತಹವರು ರೋಗರಹಿತರೂ, ರೂಪವಂತರೂ, ಐಶ್ವರ್ಯವಂತರೂ ಆಗುತ್ತಾರೆ.

ಸ್ತ್ರೀಯೋಽಪ್ಯೇತೇನ ಕಲ್ಪೇನ ಕೃತ್ವಾ ಪಾಪಮವಾಪ್ನುಯುಃ ।
ಏತೇಷಾಮೇವ ಜನ್ತೂನಾಂ ಭಾರ್ಯಾತ್ವಮುಪಯಾನ್ತಿ ತಾಃ ॥೧೩೦॥

ಹೆಂಗಸರೂ ಕೂಡ ಇದೇ ವಿಧವಾದ ಪಾಪಗಳನ್ನು ಮಾಡಿದರೆ ಇದೇ ವಿಧವಾದ ಜನ್ಮಗಳನ್ನೇ ಹೊಂದುತ್ತಾರೆ. ಹಾಗೆ ಹುಟ್ಟುವಾಗ ಆಯಾ ಪ್ರಾಣಿಗಳ ಪತ್ನಿಯರೇ ಆಗುತ್ತಾರೆ.

ಯುಧಿಷ್ಠಿರ! ಹೀಗೆ ನಾನು ನಿನಗೆ ಇತರರ ಸ್ವತ್ತನ್ನು ಅಪಹರಿಸುವುದರಿಂದ ಎಂತೆಂತಹ ಪಾಪಗಳು ಸಂಘಟಿಸುವುವೆಂಬುದನ್ನು ಹೇಳಿದ್ದೇನೆ. ಆದರೆ ಈಗ ನಾನು ನಿನಗೆ ಹೇಳಿರುವುದು ಲೇಶಮಾತ್ರವಾಗಿದೆ. (ಬಹುಸೂಕ್ಷ್ಮವಾಗಿ ನಾನು ಇದನ್ನು ನಿನಗೆ ಹೇಳಿದ್ದೇನೆ.) ಬೇರೆ ಪ್ರಸಂಗದಲ್ಲಿ ಈ ವಿಷಯವನ್ನು ಇನ್ನೂ ವಿಸ್ತಾರವಾಗಿ ಕೇಳುವೆಯಂತೆ. ದೇವರ್ಷಿಗಳ ಮಧ್ಯದಲ್ಲಿ ಕುಳಿತು ಈ ಎಲ್ಲ ವಿಷಯಗಳನ್ನೂ ಹೇಳುತ್ತಿದ್ದ ಬ್ರಾಹ್ಮಣ ನೊಬ್ಬನಿಂದ ನಾನು ಕೇಳಿ ತಿಳಿದುಕೊಂಡೆನು. ನೀನೂ ಇದೇ ವಿಷಯ

ವಾಗಿಯೇ ಪ್ರಶ್ನೆಮಾಡಲಾಗಿ ನಾನು ಸಮಗ್ರವಾಗಿ–ಬ್ರಹ್ಮರ್ಷಿಯು ಹೇಗೆ ಹೇಳಿದ್ದನೋ ಹಾಗೆಯೇ-ಯಥಾವತ್ತಾಗಿ ನಿನಗೂ ಹೇಳಿದ್ದೇನೆ. ಈ ಪ್ರಸಂಗವನ್ನು ಕೇಳಿ ಬಳಿಕ ನೀನೂ ಕೂಡ ಮನಸ್ಸನ್ನು ಯಾವಾಗಲೂ ಧರ್ಮದಲ್ಲಿಯೇ ಸ್ಥಿರವಾಗಿ ಇರಿಸಿಕೋ."

೧೧೧ನೆಯ ಅಧ್ಯಾಯವು ಮುಗಿಯಿತು.

೧೧೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪಾಪಗಳನ್ನು ಕಳೆದುಕೊಳ್ಳುವ ಉಪಾಯ ಮತ್ತು ಅನ್ನದಾನದ ವಿಶೇಷಮಹಿಮೆ

ಯುಧಿಷ್ಠಿರನು ಹೇಳುತ್ತಾನೆ:

ಅಧರ್ಮಸ್ಯ ಗತಿರ್ಬ್ರಹ್ಮನ್ಕಥಿತಾ ಮೇ ತ್ವಯಾನಘ ।
ಧರ್ಮಸ್ಯ ತು ಗತಿಂ ಶ್ರೋತುಮಿಚ್ಛಾಮಿ ವದತಾಂ ವರ ॥೧॥

"ವಾಗ್ಮಿಗ್ರಳಲ್ಲಿ ಶ್ರೇಷ್ಠನಾದವನೇ! ನಿಷ್ಪಾಪನೇ! ಬೃಹಸ್ಪತಿಯೇ! ಈಗ ನಾನು ಅಧರ್ಮವರ್ತನೆಯಿಂದ ಎಂತಹ ಗತಿಯು ಪ್ರಾಪ್ತ ವಾಗುವುದೆಂಬುದನ್ನು ನಿನ್ನಿಂದ ಕೇಳಿದೆನು. ಇನ್ನು ಮುಂದೆ ನಾನು ಧರ್ಮವನ್ನು ಅನುಸರಿಸಿ ನಡೆಯುವುದರಿಂದ ಎಂತಹ ಗತಿಯು ಪ್ರಾಪ್ತವಾಗು ವುದೆಂಬುದನ್ನು ಕೇಳಲು ಬಯಸುತ್ತೇನೆ.

ಕೃತ್ವಾ ಕರ್ಮಾಣಿ ಪಾಪಾನಿ ಕಥಂ ಯಾನ್ತಿ ಶುಭಾಂ ಗತಿಮ್ ।
ಕರ್ಮಣಾ ಚ ಕೃತೇನೇಹ ಕೇನ ಯಾನ್ತಿ ಶುಭಾಂ ಗತಿಮ್ ॥೨॥

ಮನುಷ್ಯನು ಪಾಪಕರ್ಮಗಳನ್ನು ಮಾಡಿಯೂ ಸದ್ಗತಿಯನ್ನು ಹೇಗೆ ಹೊಂದುತ್ತಾನೆ? ಯಾವ ಸತ್ಕರ್ಮವನ್ನು ಮಾಡುವುದರಿಂದ ಪಾಪಿಷ್ಠನಿಗೂ ಸದ್ಗತಿಯು ಪ್ರಾಪ್ತವಾಗುತ್ತದೆ?"

ಬೃಹಸ್ಪತಿಯು ಹೇಳುತ್ತಾನೆ:

ಕೃತ್ವಾ ಪಾಪಾನಿ ಕರ್ಮಾಣಿ ಅಧರ್ಮವಶಮಾಗತಃ ।
ಮನಸಾ ವಿಪರೀತೇನ ನಿರಯಂ ಪ್ರತಿಪದ್ಯತೇ ॥೩॥

"ಯುಧಿಷ್ಠಿರ! ಮನುಷ್ಯನು ಪಾಪಕರ್ಮಗಳನ್ನು ಮಾಡುತ್ತಾ

ಅಧರ್ಮಕ್ಕೆ ಅಧೀನನಾಗುತ್ತಾನೆ. ಅದರ ಪರಿಣಾಮವಾಗಿ ಅವನ ಮನಸ್ಸೂ ಧರ್ಮಕ್ಕೆ ವಿರುದ್ಧವಾದ ಮಾರ್ಗದಲ್ಲಿಯೇ ಹೋಗುತ್ತಿರುತ್ತದೆ. ಈ ಕಾರಣದಿಂದಲೇ ಅವನು ಅವಸಾನಾನಂತರದಲ್ಲಿ ನರಕಕ್ಕೆ ಹೋಗುತ್ತಾನೆ.

ಮೋಹಾದಧರ್ಮಂ ಯಃ ಕೃತ್ವಾ ಪುನಃ ಸಮನುತಪ್ಯತೇ ।
ಮನಃಸಮಾಧಿಸಂಯುಕ್ತೋ ನ ಸ ಸೇವೇತ ದುಷ್ಕೃತಮ್ ॥೪॥

ಆದರೆ ಯಾವನು ಅಜ್ಞಾನದಿಂದ ಪಾಪಕರ್ಮವನ್ನು ಮಾಡಿ ತಾನು ಮಾಡಿದುದು ಪಾಪಕರ್ಮವೆಂದು ತಿಳಿದು ಪಶ್ಚಾತ್ತಾಪಪಡುವನೋ–ಅಂತಹ ಜಿತಮನಸ್ಕನಾದ ಮನುಷ್ಯನು ಪುನಃ ಪಾಪವನ್ನು ಮಾಡಲು ಹೋಗುವುದಿಲ್ಲ.

ಯಥಾ ಯಥಾ ಮನಸ್ತಸ್ಯ ದುಷ್ಕೃತಂ ಕರ್ಮ ಗರ್ಹತೇ ।
ತಥಾ ತಥಾ ಶರೀರಂ ತು ತೇನಾಧರ್ಮೇಣ ಮುಚ್ಯತೇ ॥೫॥

ಮನುಷ್ಯನ ಮನಸ್ಸು ಹೇಗೆ-ಹೇಗೆ ದುಷ್ಕೃತ್ಯವನ್ನು ನಿಂದಿಸುವುದೋ–ಹಾಗೆ-ಹಾಗೆಯೇ ಅವನ ಶರೀರವು ಪಾಪದಿಂದ ಬಿಡುಗಡೆಯನ್ನು ಹೊಂದುತ್ತದೆ.

ಯದಿ ವ್ಯಾಹರತೇ ರಾಜನ್ವಿಪ್ರಾಣಾಂ ಧರ್ಮವಾದಿನಾಮ್ ।
ತತೋಽಧರ್ಮಕೃತಾತ್ಕ್ಷಿಪ್ರಮಪವಾದಾತ್ಪ್ರಮುಚ್ಯತೇ ॥೬॥

ಪಾಪಮಾಡಿದವನು ಧರ್ಮಜ್ಞರಾದ ಬ್ರಾಹ್ಮಣರ ಸಮ್ಮುಖದಲ್ಲಿ ತಾನು ಮಾಡಿದ ಪಾಪಕಾರ್ಯವನ್ನು ಹೇಳಿಕೊಂಡು ಪಶ್ಚಾತ್ತಾಪಪಟ್ಟರೆ ಆದರೆ ಅಧರ್ಮಕಾರ್ಯವನ್ನು ಮಾಡಿದುದರಿಂದ ಪ್ರಾಪ್ತವಾದ ಅಪಕೀರ್ತಿಯಿಂದ ಮುಕ್ತನಾಗುತ್ತಾನೆ.

ಯಥಾ ಯಥಾ ನರಃ ಸಮ್ಯಗಧರ್ಮಮನುಭಾಷತೇ ।
ಸಮಾಹಿತೇನ ಮನಸಾ ವಿಮುಚ್ಯೇತ ತಥಾ ತಥಾ ।
ಭುಜಙ್ಗ ಇವ ನಿರ್ಮೋಕಾತ್ಪೂರ್ವಮುಕ್ತಾಜ್ಜರಾನ್ವಿತಾತ್ ॥೭॥

ಪಾಪಮಾಡಿದವನು ಯಾವ-ಯಾವ ರೀತಿಯಲ್ಲಿ ಸುಸ್ಥಿರವಾದ ಮನಸ್ಸಿನಿಂದ ತಾನು ಮಾಡಿದ ಅಧರ್ಮಕಾರ್ಯಗಳ ವಿಷಯವಾಗಿ ಹೇಳಿಕೊಂಡು ಪಶ್ಚಾತ್ತಾಪಪಡುವನೋ–ಅದೇ ರೀತಿಯಲ್ಲಿ-ಜೀರ್ಣವಾದ

ಪೊರೆಯನ್ನು ಕಳಚಿದ ಸರ್ಪದಂತೆ–ಪಾಪಗಳಿಂದ ಬಿಡುಗಡೆಯನ್ನು ಹೊಂದುತ್ತಾನೆ.

ದತ್ತ್ವಾ ವಿಪ್ರಸ್ಯ ದಾನಾನಿ ವಿವಿಧಾನಿ ಸಮಾಹಿತಃ ।
ಮನಃಸಮಾಧಿಸಂಯುಕ್ತಃ ಸುಗತಿಂ ಪ್ರತಿಪದ್ಯತೇ ॥೮॥

ಮನುಷ್ಯನು ಏಕಾಗ್ರಚಿತ್ತನಾಗಿ ಪರಮಾತ್ಮನಲ್ಲಿಯೇ ಸ್ಥಿರವಾದ ಮನಸ್ಸನ್ನು ಹೊಂದಿದವನಾಗಿ ಬ್ರಾಹ್ಮಣನಿಗೆ ವಿಧ-ವಿಧವಾದ ದಾನಗಳನ್ನು ಕೊಟ್ಟುದೇ ಆದರೆ ಪಾಪಗಳೆಲ್ಲವನ್ನೂ ಕಳೆದುಕೊಂಡು ಸದ್ಗತಿಯನ್ನು ಹೊಂದುತ್ತಾನೆ.

ಯುಧಿಷ್ಠಿರ! ಈಗ ನಿನಗೆ ಯಾವ ಯಾವ ಶ್ರೇಷ್ಠವಾದ ಪದಾರ್ಥಗಳನ್ನು ದಾನವಾಗಿ ಕೊಟ್ಟರೆ ಮನುಷ್ಯನು ಅಕಾರ್ಯಗಳನ್ನು ಮಾಡಿದ್ದರೂ ಪಾಪಗಳನ್ನು ಕಳೆದುಕೊಂಡು ಪುಣ್ಯಕ್ಕೆ ಭಾಗಿಯಾಗುವನೆಂಬುದನ್ನು ಹೇಳುತ್ತೇನೆ.

ಸರ್ವೇಷಾಮೇವ ದಾನಾನಾಮನ್ನಂ ಶ್ರೇಷ್ಠಮುದಾಹೃತಮ್ ।
ಪೂರ್ವಮನ್ನಂ ಪ್ರದಾತವ್ಯಮೃಜುನಾ ಧರ್ಮಮಿಚ್ಛತಾ ॥೧೦॥

ಎಲ್ಲ ದಾನಗಳಿಗಿಂತಲೂ ಅನ್ನದಾನವೇ ಶ್ರೇಷ್ಠವಾದುದೆಂದು ಹೇಳುತ್ತಾರೆ. ಆದುದರಿಂದ ಪುಣ್ಯವನ್ನು ಗಳಿಸಿಕೊಳ್ಳಲು ಬಯಸುವ ಸರಳ ಸ್ವಭಾವದವನಾದ ಮನುಷ್ಯನು ಮೊದಲು ಅನ್ನದಾನವನ್ನು ಮಾಡಬೇಕು.

ಪ್ರಾಣಾ ಹ್ಯನ್ನಂ ಮನುಷ್ಯಾಣಾಂ ತಸ್ಮಾಜ್ಜನ್ತುಶ್ಚ ಜಾಯತೇ ।
ಅನ್ನೇ ಪ್ರತಿಷ್ಠಿತೋ ಲೋಕಸ್ತಸ್ಮಾದನ್ನಂ ಪ್ರಶಸ್ಯತೇ ॥೧೧॥

ಮನುಷ್ಯರಿಗೆ ಅನ್ನವೇ ಪ್ರಾಣಸ್ವರೂಪವಾಗಿದೆ. (ಮನುಷ್ಯರು ಅನ್ನಗತಪ್ರಾಣರು.) ಪ್ರಾಣಿಗಳು ಹುಟ್ಟುವುದೂ ಅನ್ನದಿಂದಲೇ. ಅನ್ನದ ಆಧಾರದಿಂದಲೇ ಈ ಲೋಕವು ಪ್ರತಿಷ್ಠಿತವಾಗಿದೆ. ಆದುದರಿಂದಲೇ ಅನ್ನದಾನವು ಎಲ್ಲ ದಾನಗಳಿಗಿಂತಲೂ ಪ್ರಶಸ್ತವಾಗಿದೆ.

ಅನ್ನಮೇವ ಪ್ರಶಂಸನ್ತಿ ದೇವರ್ಷಿಪಿತೃಮಾನವಾಃ ।
ಅನ್ನಸ್ಯ ಹಿ ಪ್ರದಾನೇನ ರನ್ತಿದೇವೋ ದಿವಂ ಗತಃ ॥೧೨॥

ದೇವರ್ಷಿ-ಪಿತೃ-ಮಾನವರೆಲ್ಲರೂ ಅನ್ನವನ್ನೇ ಪ್ರಶಂಸೆಮಾಡುತ್ತಾರೆ.

ಸತತವಾಗಿ ಅನ್ನವನ್ನು ದಾನಮಾಡುತ್ತಿದ್ದುದರಿಂದಲೇ ರಂತಿದೇವನು ಸ್ವರ್ಗಕ್ಕೆ ಹೋದನು.

ನ್ಯಾಯಲಬ್ಧಂ ಪ್ರದಾತವ್ಯಂ ದ್ವಿಜಾತಿಭ್ಯೋಽನ್ನಮುತ್ತಮಮ್ ।
ಸ್ವಾಧ್ಯಾಯಂ ಸಮುಪೇತೇಭ್ಯಃ ಪ್ರಹೃಷ್ಟೇನಾನ್ತರಾತ್ಮನಾ ॥೧೩॥

ಯಸ್ಯ ಹ್ಯನ್ನಮುಪಾಶ್ನನ್ತಿ ಬ್ರಾಹ್ಮಣಾನಾಂ ಶತಂ ದಶ ।
ಹೃಷ್ಟೇನ ಮನಸಾ ದತ್ತಂ ನ ಸ ತಿರ್ಯಗ್ಗತಿರ್ಭವೇತ್ ॥೧೪॥

ನ್ಯಾಯವಾಗಿ ಸಂಪಾದಿಸಿದ ದ್ರವ್ಯದಿಂದ ಸಿದ್ಧಪಡಿಸಿದ ಶ್ರೇಷ್ಠವಾದ ಅನ್ನವನ್ನು ಪ್ರಸನ್ನವಾದ ಅಂತಃಕರಣದಿಂದ ಕೂಡಿದವನಾಗಿ ಅಧ್ಯಯನ-ಅಧ್ಯಾಪನಗಳಲ್ಲಿಯೇ ನಿರತರಾದ ಬ್ರಾಹ್ಮಣರಿಗೆ ದಾನಮಾಡಬೇಕು. ಪ್ರಸನ್ನಚಿತ್ತನಾದ ಯಾವ ಪುರುಷನು ಕೊಟ್ಟ ಮೃಷ್ಟಾನ್ನವನ್ನು ಒಂದು ಸಾವಿರ ಬ್ರಾಹ್ಮಣರು ಸಂತೋಷದಿಂದ ಭೋಜನಮಾಡುವರೋ–ಅಂತಹವನು ಪಶು-ಪಕ್ಷಿಗಳ ಯೋನಿಗಳಲ್ಲಿ ಹುಟ್ಟಬೇಕಾಗುವುದಿಲ್ಲ.

ಬ್ರಾಹ್ಮಣಾನಾಂ ಸಹಸ್ರಾಣಿ ದಶ ಭೋಜ್ಯ ನರರ್ಷಭ ।
ನರೋಽಧರ್ಮಾತ್ಪ್ರಮುಚ್ಯೇತ ಯೋಗೇಷ್ವಭಿರತಃ ಸದಾ ॥೧೫॥

ಯಾವ ಮನುಷ್ಯನು ಸದಾ ಯೋಗಸಾಧನೆಗಳಲ್ಲಿಯೇ ನಿರತನಾಗಿ ಹತ್ತು ಸಾವಿರ ಬ್ರಾಹ್ಮಣರಿಗೆ ಭೋಜನಮಾಡಿಸುವನೋ–ಅವನು ಸಕಲವಿಧ ವಾದ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ಭೈಕ್ಷ್ಯೇಣಾನ್ನಂ ಸಮಾಹೃತ್ಯ ವಿಪ್ರೋ ವೇದಪುರಸ್ಕೃತಃ ।
ಸ್ವಾಧ್ಯಾಯನಿರತೇ ವಿಪ್ರೇ ದತ್ತ್ವೇಹ ಸುಖಮೇಧತೇ ॥೧೬॥

ಬ್ರಾಹ್ಮಣನು ವೇದವನ್ನು ಹೇಳಿಕೊಂಡು ಭಿಕ್ಷಾಟನೆಯಿಂದ ಅನ್ನವನ್ನು ಸಂಗ್ರಹಿಸಿ ಅದನ್ನು ಸ್ವಾಧ್ಯಾಯನಿರತನಾದ ಬ್ರಾಹ್ಮಣನಿಗೆ ಭೋಜನ ಮಾಡಿಸಿದರೆ ಅವನು ಈ ಲೋಕದಲ್ಲಿ ಸುಖವಾಗಿರುತ್ತಾನೆ.

ಅಹಿಂಸನ್ಬ್ರಾಹ್ಮಣಸ್ವಾನಿ ನ್ಯಾಯೇನ ಪರಿಪಾಲ್ಯ ಚ ।
ಕ್ಷತ್ರಿಯಸ್ತರಸಾ ಪ್ರಾಪ್ತಮನ್ನಂ ಯೋ ವೈ ಪ್ರಯಚ್ಛತಿ ॥೧೭॥
ದ್ವಿಜೇಭ್ಯೋ ವೇದವೃದ್ಧೇಭ್ಯಃ ಪ್ರಯತಃ ಸುಸಮಾಹಿತಃ ।
ತೇನಾಪೋಹತಿ ಧರ್ಮಾತ್ಮನ್ದುಷ್ಕೃತಂ ಕರ್ಮ ಪಾಣ್ಡವ ॥೧೮॥

ಧರ್ಮಾತ್ಮನಾದ ಪಾಂಡುತನಯನೇ! ಯಾವ ಕ್ಷತ್ರಿಯನು ಬ್ರಾಹ್ಮಣರ ಸ್ವತ್ತನ್ನು ಅಪಹರಿಸದೇ, ನ್ಯಾಯಪೂರ್ವಕವಾಗಿ ಪ್ರಜೆಗಳನ್ನು ಪರಿಪಾಲಿಸುತ್ತಾ, ತನ್ನ ಬಾಹುಬಲದಿಂದ ಸಂಪಾದಿಸಿದ ಅನ್ನವನ್ನು ವೇದವಿದರಾದ ಬ್ರಾಹ್ಮಣರಿಗೆ ವಿನಯಶೀಲನಾಗಿ ಮತ್ತು ಏಕಾಗ್ರಚಿತ್ತನಾಗಿ ದಾನಮಾಡುವನೋ–ಅವನು ಆ ಅನ್ನದಾನದ ಫಲವಾಗಿ ತಾನು ಹಿಂದೆ ಮಾಡಿದ್ದ ಪಾಪಗಳೆಲ್ಲವನ್ನೂ ಕಳೆದುಕೊಳ್ಳುತ್ತಾನೆ.

ಷಡ್ಭಾಗಪರಿಶುದ್ಧಂ ಚ ಕೃಷೇರ್ಭಾಗಮುಪಾರ್ಜಿತಮ್ ।
ವೈಶ್ಯೋ ದದದ್ದ್ವಿಜಾತಿಭ್ಯಃ ಪಾಪೇಭ್ಯಃ ಪರಿಮುಚ್ಯತೇ ॥೧೯॥

ಯಾವ ವೈಶ್ಯನು ಧರ್ಮಶಾಸ್ತ್ರಗಳಲ್ಲಿ ಹೇಳಿರುವಂತೆ ತಾನು ಬೆಳೆದ ಬೆಳೆಯಲ್ಲಿ ರಾಜನಿಗೆ ಆರನೆಯ ಒಂದು ಭಾಗವನ್ನು ಕೊಟ್ಟು, ಉಳಿದ ಶುದ್ಧವಾದ ಧಾನ್ಯದಲ್ಲಿ ಭೋಜನವನ್ನು ಸಿದ್ಧಗೊಳಿಸಿ ಬ್ರಾಹ್ಮಣರಿಗೆ ದಾನಮಾಡುವನೋ–ಅವನು ಸಕಲವಿಧವಾದ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಅವಾಪ್ಯ ಪ್ರಾಣಸನ್ದೇಹಂ ಕಾರ್ಕಶ್ಯೇನ ಸಮಾರ್ಜಿತಮ್ ।
ಅನ್ನಂ ದತ್ತ್ವಾ ದ್ವಿಜಾತಿಭ್ಯಃ ಶೂದ್ರಃ ಪಾಪಾತ್ಪ್ರಮುಚ್ಯತೇ ॥೨೦॥

ಶೂದ್ರನು ಕೂಡ ಪ್ರಾಣದ ಮೇಲಿನ ಹಂಗನ್ನು ತೊರೆದು ಅತ್ಯಂತ ಪರಿಶ್ರಮದಿಂದ ಸಂಪಾದಿಸಿದ ಶುದ್ಧವಾದ ಅನ್ನವನ್ನು ಬ್ರಾಹ್ಮಣರಿಗೆ ದಾನಮಾಡುವುದರಿಂದ ಸಕಲಪಾಪಗಳಿಂದಲೂ ಮುಕ್ತನಾಗುತ್ತಾನೆ.

ಔರಸೇನ ಬಲೇನಾನ್ನಮರ್ಜಯಿತ್ವಾವಿಹಿಂಸಕಃ ।
ಯಃ ಪ್ರಯಚ್ಛತಿ ವಿಪ್ರೇಭ್ಯೋ ನ ಸ ದುರ್ಗಾಣಿ ಪಶ್ಯತಿ ॥೨೧॥

ಯಾರಿಗೂ ಯಾವ ವಿಧವಾದ ಹಿಂಸೆಯನ್ನೂ ಕೊಡದೇ ಆತ್ಮಬಲದಿಂದ ಶುದ್ಧವಾದ ಅನ್ನವನ್ನು ಸಂಪಾದಿಸಿ ಬ್ರಾಹ್ಮಣರಿಗೆ ದಾನಮಾಡುವವನು ನರಕಗಳನ್ನು ನೋಡಬೇಕಾಗುವುದಿಲ್ಲ.

ನ್ಯಾಯೇನೈವಾಪ್ತಮನ್ನಂ ತು ನರೋ ಹರ್ಷಸಮನ್ವಿತಃ ।
ದ್ವಿಜೇಭ್ಯೋ ವೇದವೃದ್ಧೇಭ್ಯೋ ದತ್ತ್ವಾ ಪಾಪಾತ್ಪ್ರಮುಚ್ಯತೇ ॥೨೨॥

ನ್ಯಾಯದಿಂದ ಸಂಪಾದಿಸಿದ ದ್ರವ್ಯದಿಂದ ಸಿದ್ಧಪಡಿಸಿದ ಅನ್ನವನ್ನು ವೇದವಿದರಾದ ಬ್ರಾಹ್ಮಣರಿಗೆ ಹರ್ಷಚಿತ್ತನಾಗಿ ದಾನಮಾಡುವವನು ಎಲ್ಲ ಪಾಪಗಳಿಂದಲೂ ಬಿಡುಗಡೆಯನ್ನು ಹೊಂದುತ್ತಾನೆ.

ಅನ್ನಮೂರ್ಜಸ್ಕರಂ ಲೋಕೇ ದತ್ವೋರ್ಜಸ್ವೀ ಭವೇನ್ನರಃ ।
ಸತಾಂ ಪನ್ಥಾನಮಾವೃತ್ಯ ಸರ್ವಪಾಪೈಃ ಪ್ರಮುಚ್ಯತೇ ॥೨೩॥

ಲೋಕದಲ್ಲಿ ಅನ್ನವು ಬಲವನ್ನು ಹೆಚ್ಚಿಸುವುದಾಗಿದೆ. ಆದುದರಿಂದ ಅನ್ನವನ್ನು ದಾನಮಾಡಿದವನು ಬಲಿಷ್ಠನಾಗುತ್ತಾನೆ ಮತ್ತು ಸತ್ಪುರುಷರ ಮಾರ್ಗವನ್ನೇ ಅನುಸರಿಸಿ ಸಕಲಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ದಾನವದ್ಭಿಃ ಕೃತಃ ಪನ್ಥಾ ಯೇನ ಯಾನ್ತಿ ಮನೀಷಿಣಃ ।
ತೇ ಹಿ ಪ್ರಾಣಸ್ಯ ದಾತಾರಸ್ತೇಭ್ಯೋ ಧರ್ಮಃ ಸನಾತನಃ ॥೨೪॥

ದಾನಿಗಳು ಕಲ್ಪಿಸಿಕೊಟ್ಟಿರುವ ಮಾರ್ಗದಲ್ಲಿಯೇ ವಿದ್ವಾಂಸರೂ ಹೋಗುತ್ತಾರೆ. (ದಾನಿಗಳನ್ನೇ ವಿದ್ವಾಂಸರೂ ಅನುಸರಿಸುತ್ತಾರೆ.) ವಾಸ್ತವವಾಗಿ ಅನ್ನದಾನಿಗಳೇ ಪ್ರಾಣದಾನವನ್ನು ಮಾಡುವವರು. ಅಂತಹವರ ಧರ್ಮವೇ ಸನಾತನಧರ್ಮವಾಗಿದೆ.

ಸರ್ವಾವಸ್ಥಂ ಮನುಷ್ಯೇಣ ನ್ಯಾಯೇನಾನ್ನಮುಪಾರ್ಜಿತಮ್ ।
ಕಾರ್ಯಂ ಪಾತ್ರಗತಂ ನಿತ್ಯಮನ್ನಂ ಹಿ ಪರಮಾಗತಿಃ ॥೨೫॥

ಮನುಷ್ಯನು ತನ್ನ ಎಲ್ಲ ಅವಸ್ಥೆಗಳಲ್ಲಿಯೂ ನ್ಯಾಯೋಪಾರ್ಜಿತವಾದ ದ್ರವ್ಯದಿಂದ ಸಿದ್ಧಪಡಿಸಿದ ಶುದ್ಧವಾದ ಅನ್ನವನ್ನು ಸತ್ಪಾತ್ರರಲ್ಲಿ ದಾನಮಾಡಬೇಕು. ಏಕೆಂದರೆ: ಅನ್ನವೇ ಸಕಲಪ್ರಾಣಿಗಳಿಗೂ ಜೀವಿಸಿರಲು ಮುಖ್ಯವಾದ ಆಧಾರವಾಗಿದೆ.

ಅನ್ನಸ್ಯ ಹಿ ಪ್ರದಾನೇನ ನರೋ ರೌದ್ರಂ ನ ಸೇವತೇ ।
ತಸ್ಮಾದನ್ನಂ ಪ್ರದಾತವ್ಯಮನ್ಯಾಯಪರಿವರ್ಜಿತಮ್ ॥೨೬॥

ಅನ್ನದಾನಮಾಡುವುದರಿಂದ ಮನುಷ್ಯನು ಯಾವುದೇ ಕಾರಣ ದಿಂದಲೂ ನರಕದ ಭಯಂಕರವಾದ ಯಾತನೆಯನ್ನು ಅನುಭವಿಸಬೇಕಾಗು ವುದಿಲ್ಲ. ಆದುದರಿಂದ ಅನ್ಯಾಯದ ಸಂಬಂಧವಿಲ್ಲದ (ನ್ಯಾಯವಾಗಿ ಸಂಪಾದಿಸಿದ ದ್ರವ್ಯದಿಂದ ಸಿದ್ಧಪಡಿಸಿದ) ಅನ್ನವನ್ನು ದಾನಮಾಡುತ್ತಿರಬೇಕು.

ಯತೇದ್ಬ್ರಾಹ್ಮಣಪೂರ್ವಂ ಹಿ ಭೋಕ್ತುಮನ್ನಂ ಗೃಹೀ ಸದಾ ।
ಅವನ್ಧ್ಯಂ ದಿವಸಂ ಕುರ್ಯಾದನ್ನದಾನೇನ ಮಾನವಃ ॥೨೭॥

ಪ್ರತಿಯೊಬ್ಬ ಗೃಹಸ್ಥನೂ ಮೊದಲು ಬ್ರಾಹ್ಮಣನೊಬ್ಬನಿಗೆ ಭೋಜನವನ್ನು ಮಾಡಿಸಿ ಅನಂತರ ತಾನು ಭೋಜನಮಾಡಲು ಪ್ರಯತ್ನಿಸಬೇಕು. ಅನ್ನದಾನದ ಮೂಲಕವಾಗಿ ಮನುಷ್ಯನು ಆ ದಿನವನ್ನು ವ್ಯರ್ಥವಲ್ಲದ್ದನ್ನಾಗಿ (ಸಫಲವನ್ನಾಗಿ) ಮಾಡಬೇಕು.

ಭೋಜಯಿತ್ವಾ ದಶಶತಂ ನರೋ ವೇದವಿದಾಂ ನೃಪ ।
ನ್ಯಾಯವಿದ್ಧರ್ಮವಿದುಷಾಮಿತಿಹಾಸವಿದಾಂ ತಥಾ ॥೨೮॥

ನ ಯಾತಿ ನರಕಂ ಘೋರಂ ಸಂಸಾರಾಂಶ್ಚ ನ ಸೇವತೇ ।
ಸರ್ವಕಾಮಸಮಾಯುಕ್ತಃ ಪ್ರೇತ್ಯ ಚಾಪ್ಯಶ್ನುತೇ ಸುಖಮ್ ॥೨೯॥

ಯುಧಿಷ್ಠಿರ ! ಯಾವ ಮನುಷ್ಯನು ವೇದ, ನ್ಯಾಯ, ಧರ್ಮಶಾಸ್ತ್ರ ಮತ್ತು ಇತಿಹಾಸಗಳನ್ನು ತಿಳಿದ ಒಂದು ಸಾವಿರ ಬ್ರಾಹ್ಮಣರಿಗೆ ಭೋಜನ ಮಾಡಿಸುವನೋ–ಅವನು ಘೋರವಾದ ನರಕಕ್ಕೆ ಹೋಗಬೇಕಾಗುವುದಿಲ್ಲ. ನಾನಾವಿಧವಾದ ಯೋನಿಗಳಲ್ಲಿಯೂ ಹುಟ್ಟುವುದಿಲ್ಲ. ಈ ಲೋಕದಲ್ಲಿ ಸಕಲವಿಧವಾದ ಕಾಮನೆಗಳಿಂದಲೂ ಯುಕ್ತನಾಗಿದ್ದು ಅವಸಾನಾನಂತರದಲ್ಲಿ ಪರಲೋಕದಲ್ಲಿಯೂ ಸುಖವನ್ನೇ ಅನುಭವಿಸುತ್ತಾನೆ.

ಏವಂ ಖಲು ಸಮಾಯುಕ್ತೋ ರಮತೇ ವಿಗತಜ್ವರಃ ।
ರೂಪವಾನ್ಕೀರ್ತಿಮಾಂಶ್ಚೈವ ಧನವಾಂಶ್ಚೋಪಪದ್ಯತೇ ॥೩೦॥

ಹೀಗೆ ಯಾವಾಗಲೂ ಅನ್ನದಾನದಲ್ಲಿಯೇ ನಿರತನಾಗಿರುವ ಮನುಷ್ಯನು ನಿಶ್ಚಿಂತನಾಗಿ ಸುಖವಾಗಿರುತ್ತಾನೆ. ರೂಪವಂತನೂ, ಕೀರ್ತಿವಂತನೂ, ಧನವಂತನೂ ಆಗುತ್ತಾನೆ.

ಏತತ್ತೇ ಸರ್ವಮಾಖ್ಯಾತಮನ್ನದಾನಫಲಂ ಮಹತ್ ।
ಮೂಲಮೇತತ್ತು ಧರ್ಮಾಣಾಂ ಪ್ರದಾನಾನಾಂ ಚ ಭಾರತ ॥೩೧॥

ಯುಧಿಷ್ಠಿರ! ಅನ್ನದಾನವು ಎಲ್ಲ ವಿಧವಾದ ಧರ್ಮಗಳಿಗೂ ಮತ್ತು

ದಾನಗಳಿಗೂ ಮೂಲವಾಗಿದೆ. ಹೀಗೆ ನಾನು ನಿನಗೆ ಅನ್ನದಾನದ ಮಹಾಫಲವನ್ನು ವಿವರಿಸಿ ಹೇಳಿರುತ್ತೇನೆ."

೧೧೨ನೆಯ ಅಧ್ಯಾಯವು ಮುಗಿಯಿತು.

೧೧೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಬೃಹಸ್ಪತಿಯು ಯುಧಿಷ್ಠಿರನಿಗೆ ಅಹಿಂಸಾಧರ್ಮದ ಮಹಿಮೆಯನ್ನು ತಿಳಿಸಿ ಸ್ವರ್ಗಕ್ಕೆ ಹೋದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಅಹಿಂಸಾ ವೈದಿಕಂ ಕರ್ಮ ಧ್ಯಾನಮಿನ್ದ್ರಿಯಸಂಯಮಃ ।
ತಪೋಽಥ ಗುರುಶುಶ್ರೂಷಾ ಕಿಂ ಶ್ರೇಯಃ ಪುರುಷಂ ಪ್ರತಿ ॥೧॥

"ದೇವಗುರುವೇ! ಅಹಿಂಸೆ, ವೇದೋಕ್ತವಾದ ಕರ್ಮಗಳು, ಧ್ಯಾನ, ಇಂದ್ರಿಯಸಂಯಮ, ತಪಸ್ಸು ಮತ್ತು ಗುರುಶುಶ್ರೂಷೆ–ಇವುಗಳಲ್ಲಿ ಯಾವ ಕರ್ಮವು ಮನುಷ್ಯನಿಗೆ ವಿಶೇಷವಾದ ಕಲ್ಯಾಣವನ್ನು ಉಂಟುಮಾಡುತ್ತದೆ?"

ಬೃಹಸ್ಪತಿಯು ಹೇಳುತ್ತಾನೆ:

ಸರ್ವಾಣ್ಯೇತಾನಿ ಧರ್ಮ್ಯಾಣಿ ಪೃಥಗ್ದ್ವಾರಾಣಿ ಸರ್ವಶಃ ।
ಶೃಣು ಸಂಕೀರ್ತ್ಯಮಾನಾನಿ ಷಡೇವ ಭರತರ್ಷಭ ॥೨॥

"ಭರತಶ್ರೇಷ್ಠನೇ! ನೀನು ಹೇಳಿದ ಈ ಆರು ವಿಧವಾದ ಕರ್ಮಗಳೂ ಧರ್ಮಕ್ಕೆ ಸಂಬಂಧಿಸಿದುವುಗಳೇ ಆಗಿವೆ. ಧರ್ಮಸಾಧನೆಗೆ ಇವೆಲ್ಲವೂ ಪ್ರತ್ಯೇಕ-ಪ್ರತ್ಯೇಕವಾದ ಬಾಗಿಲುಗಳಂತಿವೆ. ಈ ಆರರಲ್ಲಿ ಯಾವ ಬಾಗಿಲಿನ ಮೂಲಕವಾಗಿ ಹೋದರೂ ಧರ್ಮದ ಸಾಧನೆಯಾಗುತ್ತದೆ. ನಾನು ಈ ಆರು ಕರ್ಮಗಳನ್ನೂ ವಿವರಿಸಿ ಹೇಳುವೆನು; ಕೇಳು:

ಹನ್ತ ನಿಃಶ್ರೇಯಸಂ ಜನ್ತೋರಹಂ ವಕ್ಷ್ಯಾಮ್ಯನುತ್ತಮಮ್ ।
ಅಹಿಂಸಾಪಾಶ್ರಯಂ ಧರ್ಮಂ ಯಃ ಸಾಧಯತಿ ವೈ ನರಃ ॥೩॥

ತ್ರೀನ್ದೋಷಾನ್ಸರ್ವಭೂತೇಷು ನಿಧಾಯ ಪುರುಷಃ ಸದಾ ।
ಕಾಮಕ್ರೋಧೌ ಚ ಸಂಯಮ್ಯ ತತಃ ಸಿದ್ಧಿಮವಾಪ್ನುತೇ ॥೪॥

ಈಗ ನಾನು ಮನುಷ್ಯನ ಶ್ರೇಯಸ್ಸಿಗಾಗಿ ಸರ್ವಶ್ರೇಷ್ಠವಾದ ಉಪಾಯವೊಂದನ್ನು ಹೇಳುವೆನು. ಯಾವನು ಅಹಿಂಸಾಯುಕ್ತವಾದ ಧರ್ಮವನ್ನು ಪರಿಪಾಲಿಸುತ್ತಾ–ಅಪರಾಧ, ಅಪಚಾರ ಮತ್ತು ಅಪಕಾರ–ಎಂಬ ಮೂರು ದೋಷಗಳನ್ನೂ ಯಾವ ಪ್ರಾಣಿಗಳ ವಿಷಯದಲ್ಲಿಯೂ ಮಾಡುವುದಿಲ್ಲವೆಂಬ ನಿಯಮದಲ್ಲಿ ನೆಲೆಗೊಂಡು, ಕಾಮ-ಕ್ರೋಧಗಳನ್ನು ಸಂಯಮಗೊಳಿಸಿದಲ್ಲಿ ಸಿದ್ಧಿಯನ್ನು ಹೊಂದುತ್ತಾನೆ.

ಅಹಿಂಸಕಾನಿ ಭೂತಾನಿ ದಣ್ಡೇನ ವಿನಿಹನ್ತಿ ಯಃ ।
ಆತ್ಮನಃ ಸುಖಮನ್ವಿಚ್ಛನ್ಸ ಪ್ರೇತ್ಯ ನ ಸುಖೀ ಭವೇತ್ ॥೫॥

ಯಾವ ಮನುಷ್ಯನು ತನಗೆ ಸುಖವಾಗಬೇಕೆಂಬ ಬಯಕೆಯಿಂದ ಯಾರಿಗೂ ಹಿಂಸೆಮಾಡದಿರುವ ಪ್ರಾಣಿಗಳನ್ನು ಕೋಲಿನಿಂದ ಪ್ರಹರಿಸುವನೋ (ಹಿಂಸಿಸುವನೋ)–ಅಂತಹವನು ಪರಲೋಕದಲ್ಲಿ ಸುಖವನ್ನು ಅನುಭವಿಸುವುದಿಲ್ಲ.

ಆತ್ಮೋಪಮಸ್ತು ಭೂತೇಷು ಯೋ ವೈ ಭವತಿ ಪೂರುಷಃ ।
ನ್ಯಸ್ತದಣ್ಡೋ ಜಿತಕ್ರೋಧಃ ಸ ಪ್ರೇತ್ಯ ಸುಖಮೇಧತೇ ॥೬॥

ಯಾವ ಮನುಷ್ಯನು–'ತನ್ನಂತೆಯೇ ಎಲ್ಲರೂ'–ಎಂದು ಭಾವಿಸಿರುವನೋ, ಬೇರೆಯವರು ತನ್ನನ್ನು ಪ್ರಹರಿಸಿದರೆ ತನಗೆ ಪೆಟ್ಟಾಗುವಂತೆ, ತಾನು ಇತರರನ್ನು ಪ್ರಹರಿಸಿದರೆ ಅವರಿಗೂ ಪೆಟ್ಟಾಗುವುದೆಂಬುದನ್ನು ಮನಗಂಡು ದಂಡವನ್ನೇ ಪರಿತ್ಯಜಿಸಿರುವನೋ, ಕ್ರೋಧವನ್ನು ಜಯಿಸಿರುವನೋ–ಅಂತಹವನು ಪರಲೋಕದಲ್ಲಿ ಸುಖವಾಗಿರುತ್ತಾನೆ.

ಸರ್ವಭೂತಾತ್ಮಭೂತಸ್ಯ ಸರ್ವಭೂತಾನಿ ಪಶ್ಯತಃ ।
ದೇವಾಪಿ ಮಾರ್ಗೇ ಮುಹ್ಯನ್ತಿ ಅಪದಸ್ಯ ಪದೈಷಿಣಃ ॥೭॥

ಯಾವನು ಸಕಲಪ್ರಾಣಿಗಳಿಗೂ ಆತ್ಮಭೂತನಾಗಿರುವನೋ ಅರ್ಥಾತ್ ಸಕಲಪ್ರಾಣಿಗಳಲ್ಲಿರುವ ಆತ್ಮಗಳನ್ನೂ ತನ್ನ ಆತ್ಮವೆಂದೇ ಭಾವಿಸುವನೋ, ಆ ಕಾರಣದಿಂದಲೇ ಯಾವನು ಸರ್ವಪ್ರಾಣಿಗಳನ್ನೂ ಸಮಭಾವದಿಂದ ಕಾಣುವನೋ–ಅಂತಹ ಹೆಜ್ಜೆಗಳೇ ಇಲ್ಲದ (ಗಮನಾ

ಗಮನಗಳಿಂದ ರಹಿತವಾದ, ಹುಟ್ಟು-ಸಾವುಗಳಿಲ್ಲದ) ಸ್ಥಾನವನ್ನು ಬಯಸುವ ಜ್ಞಾನಿಯು ಹೋಗುವ ಮಾರ್ಗದಲ್ಲಿ ದೇವತೆಗಳೂ ಮೋಹಗೊಳ್ಳುತ್ತಾರೆ. (ಜ್ಞಾನಿಯ ಮಾರ್ಗವನ್ನು ಅನುಸರಿಸಲು ದೇವತೆಗಳಿಗೂ ಸಾಧ್ಯವಾಗುವುದಿಲ್ಲ.)

ನ ತತ್ಪರಸ್ಯ ಸಂದಧ್ಯಾತ್ಪ್ರತಿಕೂಲಂ ಯದಾತ್ಮನಃ ।
ಏಷ ಸಂಕ್ಷೇಪತೋ ಧರ್ಮಃ ಕಾಮಾದನ್ಯಃ ಪ್ರವರ್ತತೇ ॥೮॥

ತನಗೆ ಯಾವುದು ಪ್ರತಿಕೂಲವಾಗಿರುವುದೋ ಅದನ್ನು ಇತರರ ವಿಷಯದಲ್ಲಿ ಆಚರಿಸಬಾರದು. ಇದು ಧರ್ಮದ ಸಂಕ್ಷಿಪ್ತ (ಸೂಕ್ಷ್ಮ) ಲಕ್ಷಣವಾಗಿದೆ. ಇದಕ್ಕೆ ಭಿನ್ನವಾದ ವ್ಯವಹಾರಗಳೆಲ್ಲವೂ ಕಾಮಜನ್ಯವಾದುವುಗಳು. ಧರ್ಮಮೂಲವಾದುವುಗಳಲ್ಲ.

ಪ್ರತ್ಯಾಖ್ಯಾನೇ ಚ ದಾನೇ ಚ ಸುಖದುಃಖೇ ಪ್ರಿಯಾಪ್ರಿಯೇ ।
ಆತ್ಮೌಪಮ್ಯೇನ ಪುರುಷಃ ಪ್ರಮಾಣಮಧಿಗಚ್ಛತಿ ॥೯॥

ತಿರಸ್ಕಾರ, ದಾನಗಳು, ಸುಖ-ದುಃಖಗಳು, ಪ್ರಿಯಾಪ್ರಿಯಗಳು, ತನಗೆ ಉಂಟಾದಾಗ ಹೇಗೆ ಹರ್ಷ-ಶೋಕಗಳುಂಟಾಗುವುವೋ–ಹಾಗೇ ಇತರರಿಗೂ ಆಗುತ್ತವೆಂದು ಭಾವಿಸಬೇಕು. ಹೀಗೆ ಭಾವಿಸುವವನು ಯಥಾರ್ಥವಾದ ಅನುಭವವನ್ನು ಪಡೆದವನಾಗುತ್ತಾನೆ.

ಯಥಾ ಪರಃ ಪ್ರಕ್ರಮತೇ ಪರೇಷು
ತಥಾಪರೇ ಪ್ರಕ್ರಮನ್ತೇ ಪರಸ್ಮಿನ್ ।
ತಥೈವ ತೇಽಸ್ತೂಪಮಾ ಜೀವಲೋಕೇ
ಯಥಾ ಧರ್ಮೋ ನೈಪುಣೇನೋಪದಿಷ್ಟಃ ॥೧೦॥

ಇಂದು ಒಬ್ಬನು ಮತ್ತೊಬ್ಬರ ವಿಷಯದಲ್ಲಿ ಹೇಗೆ ನಡೆದುಕೊಳ್ಳುವನೋ ಹಾಗೆಯೇ ಮುಂದೆ ಅವನ ವಿಷಯದಲ್ಲಿ ಇತರರೂ ನಡೆದುಕೊಳ್ಳುತ್ತಾರೆ. ಮನುಷ್ಯಲೋಕದಲ್ಲಿ ಇದನ್ನೇ ನೀನು ದೃಷ್ಟಾಂತವನ್ನಾಗಿಟ್ಟುಕೊಂಡು ಇತರರ ವಿಷಯದಲ್ಲಿ ಸರಿಯಾಗಿ ನಡೆದುಕೊ. ಹೀಗೆ ನಾನು ನಿನಗೆ ನೈಪುಣ್ಯದಿಂದ ಧರ್ಮವನ್ನು ಉಪದೇಶಿಸಿದ್ದೇನೆ.”

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ಸುರಗುರುವಾದ, ಧೀಮಂತನಾದ ಬೃಹಸ್ಪತಿಯು ಧರ್ಮರಾಜನಿಗೆ ಹೀಗೆ ಹೇಳಿ ನಾವೆಲ್ಲರೂ ನೋಡುತ್ತಿದ್ದಂತೆಯೇ ಸ್ವರ್ಗಕ್ಕೆ ಹೊರಟುಹೋದನು."

೧೧೩ನೆಯ ಅಧ್ಯಾಯವು ಮುಗಿಯಿತು.

೧೧೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಹಿಂಸೆಯ ಮತ್ತು ಮಾಂಸಭಕ್ಷಣದ ನಿಂದೆ

ವೈಶಂಪಾಯನರು ಹೇಳುತ್ತಾರೆ:

ತತೋ ಯುಧಿಷ್ಠಿರೋ ರಾಜಾ ಶರತಲ್ಪೇ ಪಿತಾಮಹಮ್ ।
ಪುನರೇವ ಮಹಾತೇಜಾಃ ಪಪ್ರಚ್ಛ ವದತಾಂ ವರಃ ॥೧॥

ಜನಮೇಜಯ! ವಾಗ್ಮಿಗಳಲ್ಲಿ ಶ್ರೇಷ್ಠನಾದ, ಮಹಾತೇಜಸ್ವಿಯಾದ ಯುಧಿಷ್ಠಿರರಾಜನು ಶರತಲ್ಪದಲ್ಲಿದ್ದ ಭೀಷ್ಮನನ್ನು ಪುನಃ ಪ್ರಶ್ನಿಸಿದನು:

"ಮಹಾಮತಿಯೇ! ಋಷಿಗಳೂ, ಬ್ರಾಹ್ಮಣರೂ ಮತ್ತು ದೇವತೆಗಳೂ ವೇದಪ್ರಾಮಾಣ್ಯವನ್ನೇ ಆಧಾರವನ್ನಾಗಿಟ್ಟುಕೊಂಡು ಅಹಿಂಸಾಧರ್ಮವನ್ನು ಪ್ರತಿಪಾದನೆಮಾಡುತ್ತಾರೆ. ಮಾತಿನಿಂದಲೂ, ಮನಸ್ಸಿನಿಂದಲೂ ಮತ್ತು ಕರ್ಮದಿಂದಲೂ ಪ್ರಾಣಿಗಳಿಗೆ ಹಿಂಸೆಯನ್ನು ಮಾಡುವವನು ಆ ಪಾಪದಿಂದ ಹೇಗೆ ಮುಕ್ತನಾಗುತ್ತಾನೆ?"

ಭೀಷ್ಮನು ಹೇಳುತ್ತಾನೆ:

ಚತುರ್ವಿಧೇಯಂ ನಿರ್ದಿಷ್ಟಾ ಹ್ಯಹಿಂಸಾ ಬ್ರಹ್ಮವಾದಿಭಿಃ ।
ಏಕೈಕತೋಽಪಿ ವಿಭ್ರಷ್ಟಾ ನ ಭವತ್ಯರಿಸೂದನ ॥೪॥

"ಶತ್ರುಸೂದನನೇ! ಬ್ರಹ್ಮತತ್ತ್ವವನ್ನು ತಿಳಿದವರು ನಾಲ್ಕು ವಿಧವಾದ ಉಪಾಯಗಳಿಂದ ಅಹಿಂಸಾವ್ರತವನ್ನು ಪಾಲಿಸಬೇಕೆಂದು ನಿರ್ದೇಶಿಸಿದ್ದಾರೆ. ಮನಸ್ಸು, ಮಾತು ಮತ್ತು ಕರ್ಮ–ಇವುಗಳ ಮೂಲಕವಾಗಿ ಯಾವುದೇ ಪ್ರಾಣಿಯನ್ನಾದರೂ ಹಿಂಸಿಸದೇ ಇರುವುದು ಮತ್ತು ಮಾಂಸವನ್ನು ತಿನ್ನದೇ ಇರುವುದು–ಈ ನಾಲ್ಕು ಅವರು ಪಾಲಿಸಲು ಹೇಳಿರುವ ಅಹಿಂಸಾಧರ್ಮಗಳಾಗಿವೆ. ಈ ನಾಲ್ಕರಲ್ಲಿ ಒಂದನ್ನು ಪಾಲಿಸದಿದ್ದರೂ ಅದು ಅಹಿಂಸಾ ವ್ರತವೆನಿಸಿಕೊಳ್ಳುವುದಿಲ್ಲ.

ಯಥಾ ಸರ್ವಶ್ಚತುಷ್ಪಾದ್ವೈ ತ್ರಿಭಿಃ ಪಾದೈರ್ನ ತಿಷ್ಠತಿ ।
ತಥೈವೇಯಂ ಮಹೀಪಾಲ ಕಾರಣೈಃ ಪ್ರೋಚ್ಯತೇ ತ್ರಿಭಿಃ ॥೫॥

ಯಾವ ರೀತಿಯಲ್ಲಿ ನಾಲ್ಕು ಕಾಲುಗಳಿರುವ ಪಶುವು ಮೂರೇ ಕಾಲುಗಳಿಂದ ನಿಂತುಕೊಳ್ಳುವುದಿಲ್ಲವೋ–ಹಾಗೆಯೇ ಮೂರೇ ಪ್ರಕಾರಗಳಿಂದ ಪಾಲಿಸಿದ ಅಹಿಂಸಾವ್ರತವೂ ಪೂರ್ಣವಾಗುವುದಿಲ್ಲ.

ಯಥಾ ನಾಗಪದೇಽನ್ಯಾನಿ ಪದಾನಿ ಪದಗಾಮಿನಾಮ್ ।
ಸರ್ವಾಣ್ಯೇವಾಪಿಧೀಯನ್ತೇ ಪದಜಾತಾನಿ ಕೌಞ್ಜರೇ ।
ಏವಂ ಲೋಕೇಷ್ವಹಿಂಸಾ ತು ನಿರ್ದಿಷ್ಟಾ ಧರ್ಮತಃ ಪುರಾ ॥೬॥

ಯಾವ ರೀತಿಯಲ್ಲಿ ಆನೆಯು ಹೆಜ್ಜೆಯನ್ನಿಟ್ಟ ಸ್ಥಳದಲ್ಲಿ ಇತರ ಪ್ರಾಣಿಗಳು ಹೆಜ್ಜೆಯನ್ನಿಟ್ಟರೆ ಆನೆಯ ಹೆಜ್ಜೆಯೊಳಗೆ ಇತರ ಪ್ರಾಣಿಗಳ ಹೆಜ್ಜೆಗಳೆಲ್ಲವೂ ಐಕ್ಯವಾಗಿ ಹೋಗುವುವೋ–ಅದೇ ರೀತಿಯಲ್ಲಿ ಇತರ ಎಲ್ಲ ಧರ್ಮಗಳೂ ಅಹಿಂಸಾಧರ್ಮದಲ್ಲಿ ಅಡಕವಾಗಿವೆಯೆಂದು ಹಿಂದೆಯೇ ಹೇಳಲ್ಪಟ್ಟಿದೆ.

ಕರ್ಮಣಾ ಲಿಪ್ಯತೇ ಜನ್ತುರ್ವಾಚಾ ಚ ಮನಸಾಪಿ ಚ ।
ಪೂರ್ವಂ ತು ಮನಸಾ ತ್ಯಕ್ತ್ವಾ ತಥಾ ವಾಚಾಥ ಕರ್ಮಣಾ ।
ನ ಭಕ್ಷಯತಿ ಯೋ ಮಾಂಸಂ ತ್ರಿವಿಧಂ ಸ ವಿಮುಚ್ಯತೇ ॥೭॥

ಮನಸ್ಸು, ಮಾತು ಮತ್ತು ಕ್ರಿಯೆಗಳ ಮೂಲಕವಾಗಿ ಮನುಷ್ಯನು ಹಿಂಸೆಯ ದೋಷದಿಂದ ಲಿಪ್ತನಾಗುತ್ತಾನೆ. ಆದುದರಿಂದ ಮೊದಲು ಮಾಂಸಭಕ್ಷಣವನ್ನು ಮನಸ್ಸಿನಿಂದ ತ್ಯಜಿಸಬೇಕು. ಮಾಂಸಭಕ್ಷಣವನ್ನು ಮಾಡುವೆನೆಂದು ಬಾಯಿಂದಲೂ ಆಡಬಾರದು. ಮಾಂಸಭಕ್ಷಣದ ಕೆಲಸವನ್ನೂ ಮಾಡಬಾರದು. ಹೀಗೆ ಮುಬ್ಬಗೆಯಿಂದಲೂ ಅಹಿಂಸೆಯನ್ನು ತ್ಯಜಿಸಿದವನು ಪಾಪದಿಂದ ಬಿಡುಗಡೆಯನ್ನು ಹೊಂದುತ್ತಾನೆ.

ತ್ರಿಕಾರಣಂ ತು ನಿರ್ದಿಷ್ಟಂ ಶ್ರೂಯತೇ ಬ್ರಹ್ಮವಾದಿಭಿಃ ।
ಮನೋ ವಾಚಿ ತಥಾಸ್ವಾದೇ ದೋಷಾ ಹ್ಯೇಷು ಪ್ರತಿಷ್ಠಿತಾಃ ॥೮॥

ಬ್ರಹ್ಮತತ್ತ್ವವನ್ನು ತಿಳಿದ ಮಹಾತ್ಮರು ಹಿಂಸಾದೋಷಕ್ಕೆ ಪ್ರಧಾನವಾಗಿ

ಮೂರು ಕಾರಣಗಳನ್ನು ಹೇಳುತ್ತಾರೆ. ಮಾಂಸವನ್ನು ತಿನ್ನಲು ಬಯಸುವ ಮನಸ್ಸು, ಮಾಂಸವನ್ನು ತಿನ್ನಬೇಕೆಂದು ಹೇಳುವ ಮಾತು ಮತ್ತು ಪ್ರತ್ಯಕ್ಷವಾಗಿಯೇ ಮಾಂಸವನ್ನು ಭಕ್ಷಿಸುವುದು–ಈ ಮೂರು ದೋಷಗಳೇ ಪ್ರಾಣಿಗಳ ಹಿಂಸೆಗೆ ಆಧಾರಭೂತಗಳಾಗಿವೆ.

ನ ಭಕ್ಷಯನ್ತ್ಯತೋ ಮಾಂಸಂ ತಪೋಯುಕ್ತಾ ಮನೀಷಿಣಃ ।
ದೋಷಾಂಸ್ತು ಭಕ್ಷಣೇ ರಾಜನ್ಮಾಂಸಸ್ಯೇಹ ನಿಬೋಧ ಮೇ ॥೧೦॥

ಈ ಕಾರಣದಿಂದಲೇ ತಪಸ್ಸಿನಲ್ಲಿ ನಿರತರಾದ ವಿದ್ವಾಂಸರು ಮಾಂಸವನ್ನು ತಿನ್ನುವುದಿಲ್ಲ. ಮಾಂಸಭಕ್ಷಣದಲ್ಲಿರುವ ದೋಷಗಳನ್ನು ಹೇಳುವೆನು; ಕೇಳು.

ಪುತ್ರಮಾಂಸೋಪಮಂ ಜಾನನ್ಖಾದತೇ ಯೋಽವಿಚಕ್ಷಣಃ ।
ಮಾಂಸಂ ಮೋಹಸಮಾಯುಕ್ತಃ ಪುರುಷಃ ಸೋಽಧಮಃ ಸ್ಮೃತಃ ॥

ಯಾವ ಮನುಷ್ಯನು ತನ್ನ ಮಗನ ಮಾಂಸಕ್ಕೂ ಬೇರೇ ಪ್ರಾಣಿಗಳ ಮಾಂಸಕ್ಕೂ ಯಾವ ವ್ಯತ್ಯಾಸವೂ ಇಲ್ಲವೆಂಬುದನ್ನು ತಿಳಿದೂ ಕೂಡ ಮೋಹಪರವಶನಾಗಿ ಅನ್ಯಪ್ರಾಣಿಗಳ ಮಾಂಸವನ್ನು ತಿನ್ನುವನೋ–ಅವನನ್ನು ಪುರುಷಾಧಮನೆಂದು ತಿಳಿಯಬೇಕು.

ಪಿತೃಮಾತೃಸಮಾಯೋಗೇ ಪುತ್ರತ್ವಂ ಜಾಯತೇ ಯಥಾ ।
ಹಿಂಸಾಂ ಕೃತ್ವಾವಶಃ ಪಾಪೋ ಭೂಯಿಷ್ಠಂ ಜಾಯತೇ ತಥಾ ॥೧೨॥

ತಾಯಿ-ತಂದೆಗಳ ಸಂಯೋಗದಿಂದ ಹೇಗೆ ಮಗನು ಹುಟ್ಟುವನೋ–ಹಾಗೆಯೇ ಇಂದ್ರಿಯಪರವಶನಾಗಿ ಮಾಂಸವನ್ನು ತಿನ್ನುವ ಮನುಷ್ಯನು ಹೆಚ್ಚು-ಹೆಚ್ಚಾಗಿ ಪಾಪಿಷ್ಠನಾಗಿ ಹುಟ್ಟುತ್ತಾನೆ.

ರಸಂ ಚ ಪ್ರತಿಜಿಹ್ವಾಯಾ ಜ್ಞಾನಂ ಪ್ರಜ್ಞಾಯತೇ ಯಥಾ ।
ತಥಾ ಶಾಸ್ತ್ರೇಷು ನಿಯತಂ ರಾಗೋ ಹ್ಯಾಸ್ವಾದಿತಾದ್ಭವೇತ್ ॥೧೩॥

ರಸವನ್ನು ಆಸ್ವಾದಿಸಿದೊಡನೆಯೇ ಆ ರಸದ ಕಡೆಗೆ ನಾಲಿಗೆಯು ಆಕೃಷ್ಟವಾಗುತ್ತದೆ. (ಆ ರಸವನ್ನು ಮತ್ತೂ ಆಸ್ವಾದಿಸಬೇಕೆಂದು ಬಯಸುತ್ತದೆ.) ಹೀಗೆ ಒಮ್ಮೆ ಮಾಂಸವನ್ನು ಆಸ್ವಾದಿಸಿಬಿಟ್ಟರೆ ಅದರ ಮೇಲಿನ ಆಸಕ್ತಿಯು ಹೆಚ್ಚುತ್ತದೆ. ವಿಷಯಗಳ ಆಸ್ವಾದನೆಯಿಂದ ಅವುಗಳ ವಿಷಯ

ದಲ್ಲಿ ಆಸಕ್ತಿಯು ಹೆಚ್ಚುವುದೆಂದು ಶಾಸ್ತ್ರಗಳಲ್ಲಿಯೂ ಹೇಳಲ್ಪಟ್ಟಿದೆ. (ಆದುದರಿಂದ ಪಾಪಜನಕವಾದ ಮಾಂಸವನ್ನು ಆಸ್ವಾದಿಸಲೇಬಾರದು.)

ಸಂಸ್ಕೃತಾಸಂಸ್ಕೃತಾಃ ಪಕ್ವಾ ಲವಣಾಲವಣಾಸ್ತಥಾ ।
ಪ್ರಜಾಯನ್ತೇ ಯಥಾ ಭಾವಾಸ್ತಥಾ ಚಿತ್ತಂ ನಿರುಧ್ಯತೇ ॥೧೪॥

ಮಾಂಸದಲ್ಲಿ ತಿನ್ನುವವರ ಅಭಿರುಚಿಯಂತೆ ಸಂಸ್ಕೃತವಾದುದು (ಮಸಾಲೆ ಮೊದಲಾದುವುಗಳಿಂದ ಕೂಡಿದುದು), ಅಸಂಸ್ಕೃತವಾದುದು (ಹಸಿಮಾಂಸ), ಬೇಯಿಸಿದ್ದು, ಬೇಯಿಸಿ ಉಪ್ಪು ಹಾಕಿದುದು, ಉಪ್ಪು ಹಾಕದೇ ಇರುವುದು–ಹೀಗೆ ನಾನಾಪ್ರಕಾರಗಳಿರುತ್ತವೆ. ಮಾಂಸಾಹಾರಿಗಳಿಗೆ ಇದನ್ನು ತಿನ್ನಬೇಕು; ಅದನ್ನು ತಿನ್ನಬೇಕು–ಎಂಬ ರುಚಿಭೇದದ ಭಾವನೆಗಳು ಹುಟ್ಟುತ್ತಲೇ ಇರುತ್ತವೆ. ಅದರಿಂದಲೇ ಅವರ ಮನಸ್ಸು ಬಂಧಿಸಲ್ಪಟ್ಟಿರುತ್ತದೆ.

ಭೇರೀಮೃದಙ್ಗಶಬ್ದಾಂಶ್ಚ ತನ್ತ್ರೀಶಬ್ದಾಂಶ್ಚ ಪುಷ್ಕಲಾನ್ ।
ನಿಷೇವಿಷ್ಯನ್ತಿ ವೈ ಮನ್ದಾ ಮಾಂಸಭಕ್ಷಾಃ ಕಥಂ ನರಾಃ ॥೧೫॥

ಮೂಢರಾದ ಮಾಂಸಭಕ್ಷಕರು, ಸ್ವರ್ಗದಲ್ಲಿ ಲಭಿಸುವ ಭೇರೀ-ಮೃದಂಗಶಬ್ದಗಳನ್ನೂ, ಪುಷ್ಕಲವಾದ ವೀಣಾವಾದನಗಳನ್ನೂ ಹೇಗೆತಾನೇ ಕೇಳಬಲ್ಲರು? (ಮಾಂಸವನ್ನು ತಿನ್ನುವವರು ಪಾಪಿಷ್ಠರಾದುದರಿಂದ ಯಾವುದೇ ಕಾರಣದಿಂದಲೂ ಸ್ವರ್ಗಕ್ಕೆ ಹೋಗಲಾರರು.)

ಅಚಿನ್ತಿತಮನಿರ್ದಿಷ್ಟಮಸಂಕಲ್ಪಿತಮೇವ ಚ ।
ರಸಗೃದ್ಧ್ಯಾಭಿಭೂತಾ ಯೇ ಪ್ರಶಂಸನ್ತಿ ಫಲಾರ್ಥಿನಃ ॥೧೬॥

ಯಾರು ಮಾಂಸದ ರಸದ ಮೇಲಿನ ಪ್ರೀತಿಯಿಂದ ಆವಿಷ್ಟರಾಗಿ ಅಭೀಷ್ಟಫಲವಾದ ಮಾಂಸದಲ್ಲಿಯೇ ಆಸಕ್ತಿಯುಳ್ಳವರಾಗಿ ಅದರ ಗುಣಗಳನ್ನೇ ಯಾವಾಗಲೂ ಪ್ರಶಂಸೆಮಾಡುತ್ತಿರುವರೋ–ಅಂತಹವರಿಗೆ ಪ್ರಾಪ್ತವಾಗುವ ಅಧೋಗತಿಯು ಊಹಿಸಲೂ ಸಾಧ್ಯವಿಲ್ಲದುದು. ಮಾತಿನ ಮೂಲಕವಾಗಿ ವರ್ಣಿಸಲೂ ಸಾಧ್ಯವಿಲ್ಲದುದು ಮತ್ತು ಮನಸ್ಸಿನ ಕಲ್ಪನೆಗೂ ಮೀರಿದುದು. ಅವರು ಅಂತಹ ದುರ್ಗತಿಯನ್ನು ಹೊಂದುತ್ತಾರೆ.

ಪ್ರಶಂಸಾ ಹ್ಯೇವ ಮಾಂಸಸ್ಯ ದೋಷಕರ್ಮಫಲಾನ್ವಿತಾ ॥೧೭॥

ಮಾಂಸವನ್ನು ಪ್ರಶಂಸೆಮಾಡುವುದು ಕೂಡ ಪಾಪಮಯವಾದ ಕರ್ಮದಿಂದ ಪ್ರಾಪ್ತವಾಗುವ ಫಲವನ್ನೇ ಕೊಡುತ್ತದೆ.

ಜೀವಿತಂ ಹಿ ಪರಿತ್ಯಜ್ಯ ಬಹವಃ ಸಾಧವೋ ಜನಾಃ ।
ಸ್ವಮಾಂಸೈಃ ಪರಮಾಂಸಾನಿ ಪರಿಪಾಲ್ಯ ದಿವಂ ಗತಾಃ ॥೧೮॥

ಶಿಬಿಯೇ ಮುಂತಾದ ಬಹುಮಂದಿ ಸಾಧುಜನರು ಬೇರೆಯವರ ಮಾಂಸವನ್ನು (ಜೀವವನ್ನು) ಪರಿಪಾಲಿಸುವ ಸಲುವಾಗಿ ತಮ್ಮ ಮಾಂಸಗಳನ್ನೇ ಕೊಟ್ಟು ಜೀವಿತವನ್ನು ಪರಿತ್ಯಜಿಸಿ ಸ್ವರ್ಗಕ್ಕೆ ಹೋಗಿರುವರು.

ಮಹಾರಾಜ! ಹೀಗೆ ನಾನು ನಿನಗೆ ನಾಲ್ಕು ಉಪಾಯಗಳಿಂದ ಸಾಧಿಸಬಹುದಾದ ಸರ್ವಧರ್ಮಗಳನ್ನೂ ಒಳಗೊಂಡ ಅಹಿಂಸಾವ್ರತವನ್ನು ಹೇಳಿರುತ್ತೇನೆ.”

ಓಳನೆಯ ಅಧ್ಯಾಯವು ಮುಗಿಯಿತು.

೧೧೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಮದ್ಯ-ಮಾಂಸಗಳ ಭಕ್ಷಣದ ದೋಷ: ಅವುಗಳ ತ್ಯಾಗದ ಮಹಿಮೆ

ಯುಧಿಷ್ಠಿರನು ಹೇಳುತ್ತಾನೆ:

ಅಹಿಂಸಾ ಪರಮೋ ಧರ್ಮ ಇತ್ಯುಕ್ತಂ ಬಹುಶಸ್ತ್ವಯಾ ।
ಜಾತೋ ನಃ ಸಂಶಯೋ ಧರ್ಮೇ ಮಾಂಸಸ್ಯ ಪರಿವರ್ಜನೇ ।
ದೋಷೋ ಭಕ್ಷಯತಃ ಕಃ ಸ್ಯಾತ್ಕಶ್ಚಾಭಕ್ಷಯತೋ ಗುಣಃ ॥೧॥

“ಪಿತಾಮಹನೇ! ಅಹಿಂಸೆಯೇ ಶ್ರೇಷ್ಠವಾದ ಧರ್ಮವೆಂದು ನೀನು ಹಲವಾರು ಬಾರಿ ಹೇಳಿರುವೆ. ಇದರಿಂದ ಮಾಂಸದ ಪರಿತ್ಯಾಗರೂಪವಾದ ಧರ್ಮದಲ್ಲಿ ನನಗೆ ಸಂದೇಹವುಂಟಾಗಿದೆ. ಮಾಂಸವನ್ನು ಭಕ್ಷಿಸುವವನಿಗೆ ಯಾವ ದೋಷವು ಪ್ರಾಪ್ತವಾಗುತ್ತದೆ? ಭಕ್ಷಿಸದೇ ಇರುವವನಿಗೆ ಆಗುವ ಲಾಭವೇನು? ದಯಮಾಡಿ ಈ ಸಂದೇಹವನ್ನು ಬಗೆಹರಿಸುವ ಕೃಪೆಮಾಡು.

ಹತ್ವಾ ಭಕ್ಷಯತೋ ವಾಪಿ ಪರೇಣೋಪಹೃತಸ್ಯ ವಾ ।
ಹನ್ಯಾದ್ವಾ ಯಃ ಪರಸ್ಯಾರ್ಥೇ ಕ್ರೀತ್ವಾ ವಾ ಭಕ್ಷಯೇನ್ನರಃ ॥೨॥

ಪ್ರಾಣಿಯನ್ನು ತಾನೇ ಕೊಂದು ಅದರ ಮಾಂಸವನ್ನು ಭಕ್ಷಿಸುವವನಿಗೂ, ಬೇರೆಯವರು ಕೊಟ್ಟ ಮಾಂಸವನ್ನು ಭಕ್ಷಿಸುವವನಿಗೂ, ಇತರರ ಸಲುವಾಗಿ ಪ್ರಾಣಿಗಳನ್ನು ಕೊಲ್ಲುವವನಿಗೂ, ಕೊಂಡು ತಂದು ಮಾಂಸವನ್ನು ಭಕ್ಷಿಸುವವನಿಗೂ ಯಾವ ವಿಧವಾದ ದೋಷಗಳು ಪ್ರಾಪ್ತವಾಗುತ್ತವೆ?

ನಿಷ್ಪಾಪನೇ! ಈ ವಿಷಯವನ್ನು ನಾನು ನಿನ್ನಿಂದ ಯಥಾವತ್ತಾಗಿ ತಿಳಿಯಬೇಕೆಂದಿದ್ದೇನೆ. ನಾನು ನಿಶ್ಚಯವಾಗಿಯೂ ಈ ಸನಾತನಧರ್ಮವನ್ನು ಯಥಾವತ್ತಾಗಿ ಪರಿಪಾಲಿಸಲು ಬಯಸುತ್ತೇನೆ.

ಕಥಮಾಯುರವಾಪ್ನೋತಿ ಕಥಂ ಭವತಿ ಸತ್ತ್ವವಾನ್ ।
ಕಥಮವ್ಯಙ್ಗತಾಮೇತಿ ಲಕ್ಷಣ್ಯೋ ಜಾಯತೇ ಕಥಮ್ ॥೪॥

ಮನುಷ್ಯನು ಹೇಗೆ ದೀರ್ಘಾಯುಷ್ಯವನ್ನು ಪಡೆಯುತ್ತಾನೆ? ಬಲಿಷ್ಠನು ಹೇಗಾಗುತ್ತಾನೆ? ಪೂರ್ಣಾಂಗನು ಹೇಗಾಗುತ್ತಾನೆ? ಶುಭಲಕ್ಷಣಸಂಪನ್ನನು ಹೇಗಾಗುತ್ತಾನೆ?"

ಭೀಷ್ಮನು ಹೇಳುತ್ತಾನೆ:

"ಕುರುನಂದನನೇ! ಮಾಂಸವನ್ನು ತಿನ್ನದೇ ಇರುವುದರಿಂದ ಯಾವ ಧರ್ಮವು ಪ್ರಾಪ್ತವಾಗುವುದೋ–ಅದನ್ನು ಯಥಾವತ್ತಾಗಿ ಹೇಳುತ್ತೇನೆ. ಹಾಗೂ ಆ ಧರ್ಮದ ಶ್ರೇಷ್ಠವಾದ ವಿಧಿಯನ್ನೂ ಹೇಳುತ್ತೇನೆ, ಕೇಳು.

ರೂಪಮವ್ಯಙ್ಗತಾಮಾಯುರ್ಬುದ್ಧಿಂ ಸತ್ತ್ವಂ ಬಲಂ ಸ್ಮೃತಿಮ್ ।
ಪ್ರಾಪ್ತುಕಾಮೈರ್ನರೈರ್ಹಿಂಸಾ ವರ್ಜಿತಾ ವೈ ಮಹಾತ್ಮಭಿಃ ॥೬॥

ಸುಂದರವಾದ ರೂಪ, ಪೂರ್ಣವಾದ ಅಂಗಗಳು, ಪೂರ್ಣಾಯುಷ್ಯ, ಒಳ್ಳೆಯ ಬುದ್ಧಿ, ಸತ್ತ್ವ, ಬಲ ಮತ್ತು ಸ್ಮರಣಶಕ್ತಿ–ಇವುಗಳನ್ನು ಬಯಸುವ ಮಹಾತ್ಮರೆಲ್ಲರೂ ಹಿಂಸೆಯನ್ನು ಪೂರ್ಣವಾಗಿ ತ್ಯಾಗಮಾಡಿರುತ್ತಾರೆ.

ಕುರುನಂದನನೇ! ಈ ವಿಷಯದಲ್ಲಿ ಋಷಿಗಳಲ್ಲಿಯೇ ಹಲವಾರು ಬಾರಿ ಪ್ರಶ್ನೋತ್ತರಗಳು ನಡೆದಿವೆ. ಕಡೆಯಲ್ಲಿ ಅವರೆಲ್ಲರೂ ಸೇರಿ ಯಾವ ಸಿದ್ಧಾಂತಕ್ಕೆ ಬಂದರೆಂಬುದನ್ನು ಹೇಳುವೆನು; ಕೇಳು.

ಯೋ ಯಜೇತಾಶ್ವಮೇಧೇನ ಮಾಸಿ ಮಾಸಿ ಯತವ್ರತಃ ।
ವರ್ಜಯೇನ್ಮಧುಮಾಂಸಂ ಚ ಸಮಮೇತದ್ಯುಧಿಷ್ಠಿರ ॥೮॥

ಯಾವ ಮನುಷ್ಯನು ನಿಯಮಪೂರ್ವಕವಾಗಿ ವ್ರತಾನುಷ್ಠಾನಗಳನ್ನು ಮಾಡುತ್ತಾ ಪ್ರತಿಮಾಸವೂ ಅಶ್ವಮೇಧಯಾಗವನ್ನು ಮಾಡುವನೋ ಮತ್ತು ಯಾವನು ಮದ್ಯ-ಮಾಂಸಗಳನ್ನು ಸಂಪೂರ್ಣವಾಗಿ ತ್ಯಾಗಮಾಡಿರುವನೋ–ಆ ಇಬ್ಬರಿಗೂ ಲಭಿಸುವ ಫಲವು ಒಂದೇ ರೀತಿಯದು.

ಸಪ್ತರ್ಷಿಗಳೂ, ವಾಲಖಿಲ್ಯರೂ, ಮರೀಚಿಪರೂ ಮತ್ತು ಇನ್ನೂ ಅನೇಕ ವಿದ್ವಾಂಸರೂ ಮಾಂಸವನ್ನು ತಿನ್ನದಿರುವುದನ್ನೇ ಪ್ರಶಂಸೆ ಮಾಡಿರುತ್ತಾರೆ.

ನ ಭಕ್ಷಯತಿ ಯೋ ಮಾಂಸಂ ನ ಚ ಹನ್ಯಾನ್ನ ಘಾತಯೇತ್ ।
ತನ್ಮಿತ್ರಂ ಸರ್ವಭೂತಾನಾಂ ಮನುಃ ಸ್ವಾಯಮ್ಭುವೋಽಬ್ರವೀತ್ ॥

ಯಾವ ಮನುಷ್ಯನು ಮಾಂಸವನ್ನು ತಿನ್ನುವುದಿಲ್ಲವೋ, ಪ್ರಾಣಿಗಳನ್ನು ಕೊಲ್ಲುವುದಿಲ್ಲವೋ ಮತ್ತು ಇತರರಿಂದಲೂ ಕೊಲ್ಲಿಸುವುದಿಲ್ಲವೋ–ಅವನು ಎಲ್ಲ ಪ್ರಾಣಿಗಳಿಗೂ ಮಿತ್ರನೆಂದು ಸ್ವಾಯಂಭುವ ಮನುವೇ ಹೇಳಿದ್ದಾನೆ.

ಅಧೃಷ್ಯಃ ಸರ್ವಭೂತಾನಾಂ ವಿಶ್ವಾಸ್ಯಃ ಸರ್ವಜನ್ತುಷು ।
ಸಾಧೂನಾಂ ಸಮ್ಮತೋ ನಿತ್ಯಂ ಭವೇನ್ಮಾಂಸಂ ವಿವರ್ಜಯನ್ ॥

ಮಾಂಸವನ್ನು ಪರಿತ್ಯಾಗಮಾಡಿದವನು ಯಾವುದೇ ಪ್ರಾಣಿಯಿಂದಲೂ ತಿರಸ್ಕೃತನಾಗುವುದಿಲ್ಲ. ಎಲ್ಲ ಪ್ರಾಣಿಗಳ ವಿಶ್ವಾಸಕ್ಕೂ ಪಾತ್ರನಾಗುತ್ತಾನೆ. ಶ್ರೇಷ್ಠಪುರುಷರಿಂದ ಸಮ್ಮಾನಿತನಾಗುತ್ತಾನೆ.

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ನಾರದಃ ಪ್ರಾಹ ಧರ್ಮಾತ್ಮಾ ನಿಯತಂ ಸೋಽವಸೀದತಿ ॥೧೨॥

ಇತರ ಪ್ರಾಣಿಗಳ ಮಾಂಸದಿಂದ ತನ್ನ ಮಾಂಸಖಂಡವನ್ನು ಬೆಳೆಸಲು

ಇಚ್ಛಿಸುವವನು ಬಹಳ ಬೇಗ ವಿನಾಶಹೊಂದುವುದು ನಿಶ್ಚಯವೆಂದು ಧರ್ಮಾತ್ಮರಾದ ನಾರದರು ಹೇಳಿದ್ದಾರೆ.

ದದಾತಿ ಯಜತೇ ಚಾಪಿ ತಪಸ್ವೀ ಚ ಭವತ್ಯಪಿ ।
ಮಧುಮಾಂಸನಿವೃತ್ತ್ಯೇತಿ ಪ್ರಾಹ ಚೈವಂ ಬೃಹಸ್ಪತಿಃ ॥೧೩॥

ಮದ್ಯ-ಮಾಂಸಗಳನ್ನು ತ್ಯಾಗಮಾಡಿದವನು ದಾನಿಯೂ, ಯಾಜಕನೂ, ತಪಸ್ವಿಯೂ ಆಗುವನೆಂದು (ಮದ್ಯ-ಮಾಂಸತ್ಯಾಗದಿಂದಲೇ ದಾನ-ಯಜ್ಞ-ತಪಸ್ಸುಗಳನ್ನು ಮಾಡಿದ ಪುಣ್ಯವು ಲಭಿಸುವುದೆಂದು) ಬೃಹಸ್ಪತಿಯು ಹೇಳಿರುವನು.

ಮಾಸಿ ಮಾಸ್ಯಶ್ವಮೇಧೇನ ಯೋ ಯಜೇತ ಶತಂ ಸಮಾಃ ।
ನ ಖಾದತಿ ಚ ಯೋ ಮಾಂಸಂ ಸಮಮೇತನ್ಮತಂ ಮಮ ॥೧೪॥

ನೂರು ವರ್ಷಗಳ ಕಾಲ ಪ್ರತಿಮಾಸವೂ ಅಶ್ವಮೇಧಯಾಗವನ್ನು ಮಾಡುವವನಿಗೆ ಲಭಿಸುವ ಫಲವೂ, ಮದ್ಯ-ಮಾಂಸಗಳನ್ನು ಪರಿತ್ಯಾಗ ಮಾಡಿದವನಿಗೆ ಲಭಿಸುವ ಫಲವೂ ಒಂದೇ ಎಂಬುದು ನನ್ನ ಅಭಿಮತವಾಗಿದೆ.

ಸದಾ ಯಜತಿ ಸತ್ರೇಣ ಸದಾ ದಾನಂ ಪ್ರಯಚ್ಛತಿ ।
ಸದಾ ತಪಸ್ವೀ ಭವತಿ ಮಧುಮಾಂಸವಿವರ್ಜನಾತ್ ॥೧೫॥

ಮದ್ಯ-ಮಾಂಸಗಳನ್ನು ಪರಿತ್ಯಾಗಮಾಡಿದವನು, ಸದಾ ಸತ್ರಯಾಗ ಮಾಡುವವನಾಗುತ್ತಾನೆ; ಸದಾ ದಾನಮಾಡುವವನಾಗುತ್ತಾನೆ; ಸದಾ ತಪಸ್ವಿಯಾಗಿರುತ್ತಾನೆ.

ಸರ್ವೇ ವೇದಾ ನ ತತ್ಕುರ್ಯುಃ ಸರ್ವೇ ಯಜ್ಞಾಶ್ಚ ಭಾರತ ।
ಯೋ ಭಕ್ಷಯಿತ್ವಾ ಮಾಂಸಾನಿ ಪಶ್ಚಾದಪಿ ನಿವರ್ತತೇ ॥೧೬॥

ಯಾವನು ಮೊದಲು ಮಾಂಸವನ್ನು ತಿನ್ನುತ್ತಿದ್ದರೂ ಅನಂತರ ಅದನ್ನು ಪರಿತ್ಯಾಗಮಾಡುವನೋ–ಅಂತಹವನಿಗೆ ಪ್ರಾಪ್ತವಾಗುವ ಮಹಾಪುಣ್ಯವನ್ನು ಎಲ್ಲ ವೇದಗಳ ಅಧ್ಯಯನವಾಗಲೀ, ಸತತವಾದ ಯಜ್ಞಗಳ ಅನುಷ್ಠಾನ ವಾಗಲೀ–ಹೊಂದಿಸಲಾರವು.

ದುಷ್ಕರಂ ಚ ರಸಜ್ಞಾನೇ ಮಾಂಸಸ್ಯ ಪರಿವರ್ಜನಮ್ ।
ಚರ್ತುಂ ವ್ರತಮಿದಂ ಶ್ರೇಷ್ಠಂ ಸರ್ವಪ್ರಾಣ್ಯಭಯಪ್ರದಮ್ ॥೧೭॥

ರುಚಿಯು ಹತ್ತಿದನಂತರ ಮಾಂಸಭಕ್ಷಣವನ್ನು ಪರಿತ್ಯಜಿಸುವುದೂ ಮತ್ತು ಸಮಸ್ತಪ್ರಾಣಿಗಳಿಗೂ ಅಭಯಪ್ರದಾನವಾದ, ಸರ್ವಶ್ರೇಷ್ಠವಾದ ಈ ವ್ರತವನ್ನು ಆಚರಿಸುವುದೂ ಕಷ್ಟವೇ ಸರಿ.

ಸರ್ವಭೂತೇಷು ಯೋ ವಿದ್ವಾನ್ದದಾತ್ಯಭಯದಕ್ಷಿಣಾಮ್ ।
ದಾತಾ ಭವತಿ ಲೋಕೇ ಸ ಪ್ರಾಣಾನಾಂ ನಾತ್ರ ಸಂಶಯಃ ॥೧೮॥

ವಿದ್ವಾಂಸನಾದ ಯಾವನು ಅಹಿಂಸಾವ್ರತದ ಮೂಲಕ ಎಲ್ಲ ಪ್ರಾಣಿಗಳಿಗೂ ಅಭಯಪ್ರದಾನಮಾಡುವನೋ–ಅವನು ಈ ಪ್ರಪಂಚದಲ್ಲಿ ಎಲ್ಲ ಪ್ರಾಣಿಗಳಿಗೂ ಪ್ರಾಣದಾತನೇ ಆಗುತ್ತಾನೆಂಬುದರಲ್ಲಿ ಸಂಶಯವೇ ಇಲ್ಲ.

ಯುಧಿಷ್ಠಿರ! ಹೀಗೆ ವಿದ್ವಾಂಸರು ಅಹಿಂಸಾರೂಪವಾದ ಶ್ರೇಷ್ಠ ಧರ್ಮವನ್ನು ಪ್ರಶಂಸೆಮಾಡುತ್ತಾರೆ.

ಪ್ರಾಣಾ ಯಥಾತ್ಮನೋಽಭೀಷ್ಟಾ ಭೂತಾನಾಮಪಿ ವೈ ತಥಾ ॥೧೯॥

ತನಗೆ ತನ್ನ ಪ್ರಾಣಗಳು ಎಷ್ಟು ಪ್ರಿಯವಾಗಿವೆಯೊ–ಹಾಗೆಯೇ ಸಮಸ್ತಪ್ರಾಣಿಗಳಿಗೂ ತಮ್ಮ-ತಮ್ಮ ಪ್ರಾಣಗಳು ಅಷ್ಟೇ ಪ್ರಿಯವಾಗಿರುತ್ತವೆ.

ಆತ್ಮೌಪಮ್ಯೇನ ಮನ್ತವ್ಯಂ ಬುದ್ಧಿಮದ್ಭಿಃ ಕೃತಾತ್ಮಭಿಃ ।
ಮೃತ್ಯುತೋ ಭಯಮಸ್ತೀತಿ ವಿದುಷಾಂ ಭೂತಿಮಿಚ್ಛತಾಮ್ ॥೨೦॥
ಕಿಂ ಪುನರ್ಹನ್ಯಮಾನಾನಾಂ ತರಸಾ ಜೀವಿತಾರ್ಥಿನಾಮ್ ।
ಅರೋಗಾಣಾಮಪಾಪಾನಾಂ ಪಾಪೈರ್ಮಾಂಸೋಪಜೀವಿಭಿಃ ॥೨೧॥

ಬುದ್ಧಿವಂತರಾದವರು ಮತ್ತು ಪುಣ್ಯಾತ್ಮರು, ಎಲ್ಲ ಪ್ರಾಣಿಗಳೂ ತಮ್ಮಂತೆಯೇ ಎಂದು ತಿಳಿಯಬೇಕು. ಕಲ್ಯಾಣವನ್ನು ಬಯಸುವ ವಿದ್ವಾಂಸರಿಗೂ ಮೃತ್ಯುವಿನ ಭಯವಿದ್ದೇ ಇರುತ್ತದೆ. ಹೀಗಿರುವಾಗ ಜೀವಿಸಲು ಇಚ್ಛಿಸುತ್ತಾ, ರೋಗರಹಿತವಾಗಿ, ಯಾವ ಪಾಪವನ್ನೂ ಮಾಡದಿರುವ, ಮಾಂಸದಿಂದಲೇ ಜೀವಿಸುವ ಪಾಪಿಷ್ಠರಿಂದ ಕೊಲ್ಲಲ್ಪಡುವ ಪ್ರಾಣಿಗಳಿಗೆ ಮೃತ್ಯುವಿನ ಭಯವಿಲ್ಲದಿರುವುದಾದರೂ ಹೇಗೆ ಸಾಧ್ಯ?

ತಸ್ಮಾದ್ವಿದ್ಧಿ ಮಹಾರಾಜ ಮಾಂಸಸ್ಯ ಪರಿವರ್ಜನಮ್ ।
ಧರ್ಮಸ್ಯಾಯತನಂ ಶ್ರೇಷ್ಠಂ ಸ್ವರ್ಗಸ್ಯ ಚ ಸುಖಸ್ಯ ಚ ॥೨೨॥

ಮಹಾರಾಜ! ಆದುದರಿಂದ ಮಾಂಸದ ಪರಿತ್ಯಾಗವು ಧರ್ಮಕ್ಕೂ,

ಸ್ವರ್ಗಕ್ಕೂ ಮತ್ತು ಸುಖಕ್ಕೂ ಆಧಾರಭೂತವಾಗಿದೆ–ಎಂಬುದನ್ನು ಚೆನ್ನಾಗಿ ತಿಳಿದುಕೊ.

ಅಹಿಂಸಾ ಪರಮೋ ಧರ್ಮಸ್ತಥಾಹಿಂಸಾ ಪರಂ ತಪಃ ।
ಅಹಿಂಸಾ ಪರಮಂ ಸತ್ಯಂ ಯತೋ ಧರ್ಮಃ ಪ್ರವರ್ತತೇ ॥೨೩॥

ಅಹಿಂಸೆಯೇ ಪರಮಶ್ರೇಷ್ಠವಾದ ಧರ್ಮವು. ಅಹಿಂಸಾವ್ರತವೇ ಪರಮಶ್ರೇಷ್ಠವಾದ ತಪಸ್ಸು. ಅಹಿಂಸೆಯೇ ಶ್ರೇಷ್ಠವಾದ ಸತ್ಯವು. ಅಹಿಂಸೆಯಿಂದಲೇ ಧರ್ಮವು ಪ್ರವೃತ್ತವಾಗುತ್ತದೆ.

ನ ಹಿ ಮಾಂಸಂ ತೃಣಾತ್ಕಾಷ್ಠಾದುಪಲಾದ್ವಾಪಿ ಜಾಯತೇ ।
ಹತ್ವಾ ಜನ್ತುಂ ತತೋ ಮಾಂಸಂ ತಸ್ಮಾದ್ದೋಷಸ್ತು ಭಕ್ಷಣೇ ॥೨೪॥

ಹುಲ್ಲಿನಿಂದಾಗಲೀ, ಕಟ್ಟಿಗೆಯಿಂದಾಗಲೀ, ಕಲ್ಲಿನಿಂದಾಗಲೀ ಮಾಂಸವು ಹುಟ್ಟುವುದಿಲ್ಲ. ಒಂದು ಪ್ರಾಣಿಯನ್ನು ಕೊಂದೇ ಅದರ ಮಾಂಸವನ್ನು ತೆಗೆದುಕೊಳ್ಳಬೇಕಾಗಿದೆ. ಆದುದರಿಂದಲೇ ಮಾಂಸವನ್ನು ತಿನ್ನುವುದು ಮಹಾಪಾಪಕರ.

ಸ್ವಾಹಾಸ್ವಧಾಮೃತಭುಜೋ ದೇವಾಃ ಸತ್ಯಾರ್ಜವಪ್ರಿಯಾಃ ।
ಕ್ರವ್ಯಾದಾನ್ರಾಕ್ಷಸಾನ್ವಿದ್ಧಿ ಜಿಹ್ವಾನೃತಪರಾಯಣಾನ್ ॥೨೫॥

ಯಾರು ಸ್ವಾಹಾಕಾರ-ಸ್ವಧಾಕಾರಗಳಿಂದ ಕೊಡುವ ಹವ್ಯ-ಕವ್ಯಗಳನ್ನೂ ಅಮೃತವನ್ನೂ ಭುಂಜಿಸುವರೋ, ಸತ್ಯ ಮತ್ತು ಸರಳತೆಗಳಲ್ಲಿ ಪ್ರೀತಿಯುಳ್ಳವರಾಗಿರುವರೋ–ಅವರೇ ದೇವತೆಗಳು. ಯಾರು ಕುಟಿಲತೆಯಲ್ಲಿಯೂ ಸುಳ್ಳುಹೇಳುವುದರಲ್ಲಿಯೂ ಪ್ರವೃತ್ತರಾಗಿದ್ದು ಸದಾ ಮಾಂಸವನ್ನು ಭಕ್ಷಿಸುವರೋ–ಅವರೇ ರಾಕ್ಷಸರೆಂದು ತಿಳಿ.

ಕಾನ್ತಾರೇಷ್ವಥ ಘೋರೇಷು ದುರ್ಗೇಷು ಗಹನೇಷು ಚ ।
ರಾತ್ರ್ಯಾವಹನಿ ಸಂಧ್ಯಾಸು ಚತ್ವರೇಷು ಸಭಾಸು ಚ ।೨೬॥

ಉದ್ಯತೇಷು ಚ ಶಸ್ತ್ರೇಷು ಮೃಗವ್ಯಾಲಭಯೇಷು ಚ ।
ಅಮಾಂಸಭಕ್ಷಣೇ ರಾಜನ್ಭಯಮನ್ಯೈರ್ನ ಗಚ್ಛತಿ ॥೨೭॥

ಮಾಂಸವನ್ನು ತಿನ್ನದವನು–ಘೋರವಾದ ಕಾಡುಗಳಲ್ಲಾಗಲೀ, ಗಹನವಾದ ದುರ್ಗಗಳಲ್ಲಾಗಲೀ, ಹಗಲಿನಲ್ಲಾಗಲೀ, ರಾತ್ರಿಯಲ್ಲಾಗಲೀ, ಸಂಧ್ಯಾಕಾಲಗಳಲ್ಲಾಗಲೀ, ನಾಲ್ಕು ಬೀದಿಗಳು ಸೇರುವ ಸ್ಥಳಗಳಲ್ಲಾಗಲೀ,

ಸಭೆಗಳಲ್ಲಾಗಲೀ, ಯಾರಾದರೂ ತನ್ನೆದುರಾಗಿ ಆಯುಧವನ್ನು ಹಿಡಿದು ಕೊಂಡು ಬಂದ ಸಮಯದಲ್ಲಾಗಲೀ, ಸರ್ಪಗಳೂ–ದುಷ್ಟಮೃಗಗಳೂ ಎದುರಾಗಿ ಬಂದ ಸಮಯದಲ್ಲಾಗಲೀ ಭಯಪಡುವುದಿಲ್ಲ. ಮಾಂಸವನ್ನು ತಿನ್ನದವನಿಗೆ ಎಲ್ಲಿಯೂ ಯಾರಿಂದಲೂ ಭಯವೆಂಬುದೇ ಇರುವುದಿಲ್ಲ.

ಶರಣ್ಯಃ ಸರ್ವಭೂತಾನಾಂ ವಿಶ್ವಾಸ್ಯಃ ಸರ್ವಜನ್ತುಷು ।
ಅನುದ್ವೇಗಕರೋ ಲೋಕೇ ನ ಚಾಪ್ಯುದ್ವಿಜತೇ ಸದಾ ॥೨೮॥

ಮಾಂಸವನ್ನು ತಿನ್ನದವನು ಸರ್ವಪ್ರಾಣಿಗಳಿಗೂ ರಕ್ಷಕನಾಗಿರುತ್ತಾನೆ. ಎಲ್ಲ ಪ್ರಾಣಿಗಳ ವಿಶ್ವಾಸಕ್ಕೂ ಪಾತ್ರನಾಗಿರುತ್ತಾನೆ. ಪ್ರಪಂಚದಲ್ಲಿ ಅವನು ಯಾರನ್ನೂ ಉದ್ವೇಗಗೊಳಿಸುವುದಿಲ್ಲ; ತಾನೂ ಉದ್ವೇಗಗೊಳ್ಳುವುದಿಲ್ಲ.

ಯದಿ ಚೇತ್ಖಾದಕೋ ನ ಸ್ಯಾನ್ನ ತದಾ ಘಾತಕೋ ಭವೇತ್ ।
ಘಾತಕಃ ಖಾದಕಾರ್ಥಾಯ ತದ್ಘಾತಯತಿ ವೈ ನರಃ ॥೨೯॥

ಪ್ರಪಂಚದಲ್ಲಿ ಮಾಂಸವನ್ನು ತಿನ್ನುವವನೇ ಇರದಿದ್ದರೆ–ಪಶುಗಳನ್ನು ಕೊಲ್ಲುವವನೂ ಇರುತ್ತಲೇ ಇರಲಿಲ್ಲ. ಆದುದರಿಂದ ಕಟುಕನು ಮಾಂಸ ಭಕ್ಷಕರ ಸಲುವಾಗಿಯೇ ಪ್ರಾಣಿಗಳನ್ನು ಕೊಲ್ಲುತ್ತಾನೆ.

ಅಭಕ್ಷ್ಯಮೇತದಿತಿ ವೈ ಇತಿ ಹಿಂಸಾ ನಿವರ್ತತೇ ।
ಖಾದಕಾರ್ಥಮತೋ ಹಿಂಸಾ ಮೃಗಾದೀನಾಂ ಪ್ರವರ್ತತೇ ॥೩೦॥

ಅಭಕ್ಷ್ಯವೆಂದು ಭಾವಿಸಿ ಎಲ್ಲರೂ ಮಾಂಸವನ್ನು ತಿನ್ನುವುದನ್ನು ಬಿಟ್ಟುಬಿಟ್ಟರೆ, ಪ್ರಾಣಿಹತ್ಯೆಯು ತಾನಾಗಿಯೇ ನಿಂತುಹೋಗುತ್ತದೆ. ಮಾಂಸವನ್ನು ತಿನ್ನುವವರ ಸಲುವಾಗಿಯೇ ಪ್ರಪಂಚದಲ್ಲಿ ಅಪಾರವಾದ ಪ್ರಾಣಿಗಳ ಹತ್ಯೆಯಾಗುತ್ತಿದೆ.

ಯಸ್ಮಾದ್ಗ್ರಸತಿ ಚೈವಾಯುರ್ಹಿಂಸಕಾನಾಂ ಮಹಾದ್ಯುತೇ ।
ತಸ್ಮಾದ್ವಿವರ್ಜಯೇನ್ಮಾಂಸಂ ಯ ಇಚ್ಛೇದ್ಭೂತಿಮಾತ್ಮನಃ ॥೩೧॥

ದ್ಯುತಿಮಂತನೇ! ಪ್ರಾಣಿಗಳ ಹತ್ಯೆಯನ್ನು ಮಾಡಿದವನ ಪಾಪವು ಅವನ ಆಯುಷ್ಯವನ್ನೇ ನುಂಗಿಹಾಕುತ್ತದೆ. ಆದುದರಿಂದ ಆತ್ಮಕಲ್ಯಾಣವನ್ನು ಬಯಸುವವನು ಮಾಂಸವನ್ನು ಸಂಪೂರ್ಣವಾಗಿ ವರ್ಜಿಸಬೇಕು.

ತ್ರಾತಾರಂ ನಾಧಿಗಚ್ಛನ್ತಿ ಕ್ರೂರಾಃ ಪ್ರಾಣಿವಿಹಿಂಸಕಾಃ ।
ಉದ್ವೇಜನೀಯಾ ಭೂತಾನಾಂ ಯಥಾ ವ್ಯಾಲಮೃಗಾಸ್ತಥಾ ॥೩೨॥

ಯಾವ ರೀತಿಯಲ್ಲಿ ಸರ್ಪಗಳನ್ನೂ, ದುಷ್ಟಪ್ರಾಣಿಗಳನ್ನೂ ಜನರು ಬೇಟೆಯಾಡುವರೋ ಮತ್ತು ಆ ಸಮಯದಲ್ಲಿ ಅವುಗಳಿಗೆ ಯಾರ ರಕ್ಷಣೆಯೂ ಇರುವುದಿಲ್ಲವೋ–ಅದೇ ರೀತಿಯಲ್ಲಿ ಪ್ರಾಣಿಗಳನ್ನು ಹತ್ಯೆ ಮಾಡುವ ಕ್ರೂರಿಗಳೂ ಮರುಹುಟ್ಟಿನಲ್ಲಿ ಪ್ರಾಣಿಗಳ ಉದ್ವೇಗಕ್ಕೆ ಕಾರಣರಾಗುತ್ತಾರೆ ಮತ್ತು ಆ ಸಮಯದಲ್ಲಿ ಅವರಿಗೆ ರಕ್ಷಕರಾರೂ ಇರುವುದಿಲ್ಲ.

ಲೋಭಾದ್ವಾ ಬುದ್ಧಿಮೋಹಾದ್ವಾ ಬಲವೀರ್ಯಾರ್ಥಮೇವ ಚ ।
ಸಂಸರ್ಗಾದಥ ಪಾಪಾನಾಮಧರ್ಮರುಚಿತಾ ನೃಣಾಮ್ ॥೩೩॥

ಲೋಭದಿಂದಲೋ, ವಿಮೋಹಗೊಂಡ ಬುದ್ಧಿಯಿಂದಲೋ, ಬಲ-ವೀರ್ಯಗಳನ್ನು ಪಡೆಯುವ ಸಲುವಾಗಿಯೋ, ಪಾಪಿಷ್ಠರ ಸಂಸರ್ಗದಿಂದಲೋ ಮನುಷ್ಯರಿಗೆ ಅಧರ್ಮದಲ್ಲಿ (ಮಾಂಸವನ್ನು ತಿನ್ನುವುದರಲ್ಲಿ) ಅಭಿರುಚಿಯುಂಟಾಗುತ್ತದೆ.

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ಉದ್ವಿಗ್ನವಾಸೋ ವಸತಿ ಯತ್ರ ಯತ್ರಾಭಿಜಾಯತೇ ॥೩೪॥

ಯಾವನು ಇತರರ ಮಾಂಸದಿಂದ ತನ್ನ ಮಾಂಸವನ್ನು ಬೆಳೆಸಿಕೊಳ್ಳಲು ಇಚ್ಛಿಸುವನೋ–ಅಂತಹವನು ಅವಸಾನಾನಂತರದಲ್ಲಿ ಎಲ್ಲಿಯೇ ಹುಟ್ಟಲಿ; ಯಾರಾಗಿಯೇ ಹುಟ್ಟಲಿ–ಉದ್ವಿಗ್ನನಾಗಿಯೇ ಇರುತ್ತಾನೆ. ಅವನ ಮನಸ್ಸಿಗೆ ಸಮಾಧಾನವೆಂಬುದೇ ಇರುವುದಿಲ್ಲ.

ಧನ್ಯಂ ಯಶಸ್ಯಮಾಯುಷ್ಯಂ ಸ್ವರ್ಗ್ಯಂ ಸ್ವಸ್ತ್ಯಯನಂ ಮಹತ್ ।
ಮಾಂಸಸ್ಯಾಭಕ್ಷಣಂ ಪ್ರಾಹುರ್ನಿಯತಾಃ ಪರಮರ್ಷಯಃ ॥೩೫॥

ನಿಯಮಪರಾಯಣರಾದ ಮಹರ್ಷಿಗಳು–ಮಾಂಸದ ಅಭಕ್ಷಣವನ್ನು ಧನ, ಯಶಸ್ಸು, ಆಯುಸ್ಸು ಮತ್ತು ಸ್ವರ್ಗ–ಇವುಗಳ ಪ್ರಾಪ್ತಿಗೆ ಪ್ರಧಾನವಾದ ಉಪಾಯವೆಂದೂ ಮತ್ತು ಪರಮಕಲ್ಯಾಣಪ್ರಾಪ್ತಿಗೆ ಸಾಧನವೆಂದೂ ಹೇಳುತ್ತಾರೆ.

ಕೌಂತೇಯ! ಮಾರ್ಕಂಡೇಯಮಹರ್ಷಿಯು ಮಾಂಸಭಕ್ಷಣದಲ್ಲಿ

ಯಾವ ದೋಷಗಳಿವೆಯೆಂದು ಹೇಳುತ್ತಿದ್ದಾಗ ಹಿಂದೆ ನಾನು ಈ ವಿಷಯವನ್ನು ಕೇಳಿದ್ದೆನು.

ಯೋ ಹಿ ಖಾದತಿ ಮಾಂಸಾನಿ ಪ್ರಾಣಿನಾಂ ಜೀವಿತೈಷಿಣಾಮ್ ।
ಹತಾನಾಂ ವಾ ಮೃತಾನಾಂ ವಾ ಯಥಾ ಹನ್ತಾ ತಥೈವ ಸಃ ॥೩೭॥

ಆಯುಷ್ಯಪೂರ್ತಿಯಾಗಿ ಜೀವಿಸಿರಲು ಇಚ್ಛಿಸಿರುವ ಪ್ರಾಣಿಗಳ ಮಾಂಸವನ್ನು ಯಾವನು ತಿನ್ನುವನೋ–ಆ ಪ್ರಾಣಿಗಳು ಬೇರೆಯವರಿಂದ ಕೊಲ್ಲಲ್ಪಟ್ಟಿರಲಿ ಅಥವಾ ತಾವಾಗಿಯೇ ಮರಣಹೊಂದಿರಲಿ–ಅವನೇ ಆ ಪ್ರಾಣಿಗಳ ಹಂತಕನಾಗುತ್ತಾನೆ.

ಧನೇನ ಕ್ರಯಿಕೋ ಹನ್ತಿ ಖಾದಕಶ್ಚೋಪಭೋಗತಃ ।
ಘಾತಕೋ ವಧಬನ್ಧಾಭ್ಯಾಮಿತ್ಯೇಷ ತ್ರಿವಿಧೋ ವಧಃ ॥೩೮॥

ಮಾಂಸವನ್ನು ಕ್ರಯಕ್ಕೆ ಪಡೆಯುವವನು ಧನದ ಮೂಲಕವಾಗಿ ಪ್ರಾಣಿಯನ್ನು ಕೊಲ್ಲುತ್ತಾನೆ. ಮಾಂಸವನ್ನು ತಿನ್ನುವವನು ಉಪಭೋಗದ ಮೂಲಕವಾಗಿ ಪ್ರಾಣಿಯನ್ನು ಕೊಲ್ಲುತ್ತಾನೆ. ಕಟುಕನು ಬಂಧಿಸುವುದ ರಿಂದಲೂ–ಹಿಂಸೆಯಿಂದಲೂ ಪ್ರಾಣಿಯನ್ನು ಕೊಲ್ಲುತ್ತಾನೆ. ಹೀಗೆ ಮೂರು ಪ್ರಕಾರವಾಗಿ ಪ್ರಾಣಿಯ ವಧೆಯಾಗುತ್ತದೆ.

ಅಖಾದನ್ನನುಮೋದಂಶ್ಚ ಭಾವದೋಷೇಣ ಮಾನವಃ ।
ಯೋಽನುಮೋದತಿ ಹನ್ಯನ್ತಂ ಸೋಽಪಿ ದೋಷೇಣ ಲಿಪ್ಯತೇ ॥೩೯॥

ಯಾವ ಮನುಷ್ಯನು ತಾನು ಮಾಂಸವನ್ನು ತಿನ್ನದಿದ್ದರೂ ಇತರರನ್ನು ತಿನ್ನಲು ಅನುಮೋದಿಸಿದರೆ ಅವನು ಕೂಡ ಭಾವದೋಷದ ಕಾರಣದಿಂದ ಮಾಂಸಭಕ್ಷಣಮಾಡಿದ ಪಾಪಕ್ಕೆ ಗುರಿಯಾಗುತ್ತಾನೆ. ಹಾಗೆಯೇ ಪ್ರಾಣಿಯನ್ನು ಕೊಲ್ಲಲು ಅನುಮತಿಸಿದವನೂ ಮಾಂಸವನ್ನು ತಿಂದ ಪಾಪಕ್ಕೆ ಗುರಿಯಾಗುತ್ತಾನೆ.

ಅಧೃಷ್ಯಃ ಸರ್ವಭೂತಾನಾಮಾಯುಷ್ಮಾನ್ನೀರುಜಃ ಸದಾ ।
ಭವತ್ಯಭಕ್ಷಯನ್ಮಾಂಸಂ ದಯಾವಾನ್ಪ್ರಾಣಿನಾಮಿಹ ॥೪೦॥

ಮಾಂಸವನ್ನು ಭಕ್ಷಿಸದೇ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ಯಾವನು ದಯಾವಂತನಾಗಿರುವನೋ–ಅವನು ಎಲ್ಲ ಪ್ರಾಣಿಗಳನ್ನೂ

ಪ್ರೀತಿಯ ಮೂಲಕವಾಗಿ ಜಯಿಸಿದವನಾಗುತ್ತಾನೆ. ಆಯುಷ್ಮಂತನಾಗುತ್ತಾನೆ. ರೋಗವಿಲ್ಲದವನಾಗುತ್ತಾನೆ.

ಹಿರಣ್ಯದಾನೈರ್ಗೋದಾನೈರ್ಭೂಮಿದಾನೈಶ್ಚ ಸರ್ವಶಃ ।
ಮಾಂಸಸ್ಯಾಭಕ್ಷಣೇ ಧರ್ಮೋ ವಿಶಿಷ್ಟ ಇತಿ ನಃ ಶ್ರುತಿಃ ॥೪೧॥

ಸುವರ್ಣದಾನ-ಗೋದಾನ-ಭೂದಾನಗಳನ್ನು ಮಾಡುವುದರಿಂದ ಲಭಿಸುವ ಪುಣ್ಯಕ್ಕಿಂತಲೂ ಮಾಂಸವನ್ನು ಭಕ್ಷಿಸದೇ ಇರುವುದರಿಂದ ಲಭಿಸುವ ಪುಣ್ಯವೇ ವಿಶಿಷ್ಟವಾದುದೆಂದು ನಾವು ಕೇಳಿದ್ದೇವೆ.

ಖಾದಕಸ್ಯ ಕೃತೇ ಜನ್ತೂನ್ಯೋ ಹನ್ಯಾತ್ಪುರುಷಾಧಮಃ ।
ಮಹಾದೋಷತರಸ್ತತ್ರ ಘಾತಕೋ ನ ತು ಖಾದಕಃ ॥೪೨॥

ಯಾವನು ಮಾಂಸವನ್ನು ತಿನ್ನುವವರ ಸಲುವಾಗಿ ಪ್ರಾಣಿಗಳನ್ನು ಕೊಲ್ಲುವನೋ–ಅವನು ಪುರುಷಾಧಮನೇ ಸರಿ. ಘಾತಕ-ಖಾದಕರಲ್ಲಿ ಪ್ರಾಣಿಗಳನ್ನು ಕೊಲ್ಲುವವನಿಗೆ ಪ್ರಾಪ್ತವಾಗುವಷ್ಟು ಮಹಾಪಾಪವು ಮಾಂಸವನ್ನು ತಿನ್ನುವವನಿಗೆ ಪ್ರಾಪ್ತವಾಗುವುದಿಲ್ಲ.

ಇಜ್ಯಾಯಜ್ಞಶ್ರುತಿಕೃತೈರ್ಯೋ ಮಾರ್ಗೈರಬುಧೋಽಧಮಃ ।
ಹನ್ಯಾಜ್ಜನ್ತೂನ್ಮಾಂಸಗೃಧ್ನುಃ ಸ ವೈ ನರಕಭಾಙ್ನರಃ ॥೪೩॥

ಮಾಂಸಲೋಭಿಯಾದ ಅಧಮನಾದ ಯಾವ ಮೂರ್ಖನು ಯಜ್ಞ ಯಾಗಾದಿ ವೈದಿಕಕರ್ಮಗಳ ವ್ಯಾಜದಿಂದ ಪ್ರಾಣಿಗಳನ್ನು ಕೊಲ್ಲುವನೋ– ಅಂತಹವನು ಅವಸಾನಾನಂತರದಲ್ಲಿ ನರಕಕ್ಕೆ ಹೋಗುತ್ತಾನೆ.

ಭಕ್ಷಯಿತ್ವಾಪಿ ಯೋ ಮಾಂಸಂ ಪಶ್ಚಾದಪಿ ನಿವರ್ತತೇ ।
ತಸ್ಯಾಪಿ ಸುಮಹಾನ್ಧರ್ಮೋ ಯಃ ಪಾಪಾದ್ವಿನಿವರ್ತತೇ ॥೪೪॥

ಮೊದಲು ಮಾಂಸವನ್ನು ತಿನ್ನುತ್ತಿದ್ದರೂ ಅನಂತರ ಯಾವನು ಮಾಂಸ ಭಕ್ಷಣವನ್ನು ಬಿಟ್ಟುಬಿಡುವನೋ–ಅವನಿಗೂ ಕೂಡ ಮಹಾಪುಣ್ಯವೇ ಪ್ರಾಪ್ತ ವಾಗುತ್ತದೆ. ಏಕೆಂದರೆ: ಅವನು ಪಾಪಕರ್ಮದಿಂದ ನಿವೃತ್ತನಾಗಿರುತ್ತಾನೆ.

ಆಹರ್ತಾ ಚಾನುಮನ್ತಾ ಚ ವಿಶಸ್ತಾ ಕ್ರಯವಿಕ್ರಯೀ ।
ಸಂಸ್ಕರ್ತಾ ಚೋಪಭೋಕ್ತಾ ಚ ಖಾದಕಾಃ ಸರ್ವ ಏವ ತೇ ॥೪೫॥

ಪಶುವನ್ನು ತರುವವನು, ಕೊಲ್ಲಲು ಅನುಮತಿಸುವವನು, ಅದನ್ನು ಕೊಲ್ಲುವವನು, ಅದರ ಮಾಂಸವನ್ನು ಕೊಳ್ಳುವವನು ಮತ್ತು ಮಾರುವವನು, ಸಂಸ್ಕರಿಸುವವನು–ಇವರೆಲ್ಲರೂ ಮಾಂಸಭಕ್ಷಕರೇ. (ಮಾಂಸಭಕ್ಷಕರಿಗೆ ಸಮಾನರೇ ಆಗಿದ್ದಾರೆ.)

ಯುಧಿಷ್ಠಿರ! ಬ್ರಹ್ಮನಿಂದಲೇ ಪ್ರತಿಪಾದಿತವಾದ, ಋಷಿಗಳಿಂದ ಅನುಮೋದಿತವಾಗಿ ಆಚರಿಸಲ್ಪಡುತ್ತಿರುವ, ವೇದಗಳಿಂದ ಪರಿಷ್ಕೃತವಾದ, ಪುರಾತನವಾದ ಮತ್ತೊಂದು ಪ್ರಮಾಣವನ್ನು ಹೇಳುತ್ತೇನೆ.

ಪ್ರವೃತ್ತಿಲಕ್ಷಣೋ ಧರ್ಮಃ ಪ್ರಜಾರ್ಥಿಭಿರುದಾಹೃತಃ ।
ಯಥೋಕ್ತಂ ರಾಜಶಾರ್ದೂಲ ನ ತು ತನ್ಮೋಕ್ಷಕಾಂಕ್ಷಿಣಾಮ್ ॥೪೭॥

ರಾಜಶ್ರೇಷ್ಠನೇ! ಸಂತಾನಾಪೇಕ್ಷಿಗಳಾದ ಪುರುಷರು ಪ್ರವೃತ್ತಿರೂಪವಾದ ಧರ್ಮವನ್ನು ಪ್ರತಿಪಾದಿಸುತ್ತಾರೆ. ಆದರೆ ಮೋಕ್ಷಾಪೇಕ್ಷಿಗಳಾದ ವಿರಕ್ತಪುರುಷರಿಗೆ ಇದು ಸಮ್ಮತವಲ್ಲ.

ಯ ಇಚ್ಛೇತ್ಪುರುಷೋಽತ್ಯನ್ತಮಾತ್ಮಾನಂ ನಿರುಪದ್ರವಮ್ ।
ಸ ವರ್ಜಯೇತ ಮಾಂಸಾನಿ ಪ್ರಾಣಿನಾಮಿಹ ಸರ್ವಶಃ ॥೪೮॥

ಯಾವ ಮನುಷ್ಯನು ಅತ್ಯಂತನಿರುಪದ್ರವಿಯಾಗಿರಲು ಬಯಸುವನೋ–ಅವನು ಪ್ರಾಣಿಗಳ ಮಾಂಸವನ್ನು ಸರ್ವಥಾ ಪರಿತ್ಯಾಗ ಮಾಡಬೇಕು.

ಶ್ರೂಯತೇ ಹಿ ಪುರಾಕಲ್ಪೇ ನೃಣಾಂ ವ್ರೀಹಿಮಯಃ ಪಶುಃ ।
ಯೇನಾಯಜನ್ತ ಯಜ್ವಾನಃ ಪುಣ್ಯಲೋಕಪರಾಯಣಾಃ ॥೪೯॥

ಹಿಂದಿನ ಕಲ್ಪದಲ್ಲಿ ಮನುಷ್ಯರು ಯಜ್ಞದಲ್ಲಿ ತಂಡುಲಪಿಷ್ಟಮಯವಾದ ಪಶುವನ್ನೇ ಉಪಯೋಗಿಸುತ್ತಿದ್ದರೆಂಬುದನ್ನು ನಾವು ಕೇಳಿದ್ದೇವೆ. ಪುಣ್ಯಲೋಕಗಳನ್ನೇ ಆಶ್ರಯವನ್ನಾಗಿ ಹೊಂದಲು ಬಯಸಿದ್ದ ಯಾಜಕರು ಪಿಷ್ಟಪಶುವಿನಿಂದಲೇ ಯಜ್ಞಗಳನ್ನು ಮಾಡುತ್ತಿದ್ದರು.

ಹಿಂದೆ ಋಷಿಗಳು ಚೇದಿಪತಿಯಾದ ವಸುವನ್ನು ಮಾಂಸದ ವಿಷಯವಾಗಿ ಪ್ರಶ್ನಿಸಿದರು. ಆ ಸಮಯದಲ್ಲಿ ಆ ರಾಜನು ಮಾಂಸವು ಅಭಕ್ಷ್ಯವಾಗಿದ್ದರೂ ಭಕ್ಷ್ಯವೆಂದೇ ಪ್ರತಿಪಾದಿಸಿದನು. ಆ ಮಾತನ್ನು

ಹೇಳಿದೊಡನೆಯೇ ಆಕಾಶದಲ್ಲಿದ್ದ ಪೃಥಿವೀಪತಿಯಾದ ವಸುವು ಭೂಮಿಯ ಮೇಲೆ ಬಿದ್ದನು. ಅಲ್ಲಿಯೂ ಆ ಮಾತನ್ನೇ ಪುನಃ ಹೇಳಲು ಪಾತಾಳಕ್ಕೆ ಹೊರಟುಹೋದನು. ಆದುದರಿಂದ ಮಾಂಸವು ಅಭಕ್ಷ್ಯವೆಂಬುದರಲ್ಲಿ ಸಂದೇಹವೇ ಇಲ್ಲ.

ಅನಘನೇ! ನಾನು ಹೇಳುವ ಈ ಮಾತನ್ನು ಕೇಳು. ಮಾಂಸಸ್ಯ ಅಭಕ್ಷ್ಯೇಣ ಸರ್ವಸುಖಂ–ಮಾಂಸವನ್ನು ಭಕ್ಷಿಸದಿದ್ದರೆ ಸಕಲವಿಧವಾದ ಸುಖವೂ ಲಭಿಸುತ್ತದೆ.

ಯಸ್ತು ವರ್ಷಶತಂ ಪೂರ್ಣಂ ತಪಸ್ತಪ್ಯೇತ್ಸುದಾರುಣಮ್ ।
ಯಶ್ಚೈವ ವರ್ಜಯೇನ್ಮಾಂಸಂ ಸಮಮೇತನ್ಮತಂ ಮಮ ॥೫೩॥

ಯಾವನು ನೂರು ವರ್ಷಗಳು ಪೂರ್ತಿಯಾಗಿ ಅತಿತೀಕ್ಷ್ಣವಾದ ತಪಸ್ಸನ್ನು ಮಾಡುವನೋ–ಅವನಿಗೆ ಲಭಿಸುವ ಫಲವೂ ಮತ್ತು ಮಾಂಸವನ್ನು ಸಂಪೂರ್ಣವಾಗಿ ವರ್ಜಿಸಿದವನಿಗೆ ಲಭಿಸುವ ಫಲವೂ ಸಮಾನವೆಂಬುದು ನನ್ನ ಅಭಿಪ್ರಾಯವಾಗಿದೆ.

ಕೌಮುದೇ ತು ವಿಶೇಷೇಣ ಶುಕ್ಲಪಕ್ಷೇ ನರಾಧಿಪ ।
ವರ್ಜಯೇನ್ಮಧುಮಾಂಸಾನಿ ಧರ್ಮೋ ಹ್ಯತ್ರ ವಿಧೀಯತೇ ॥೫೪॥

ವಿಶೇಷವಾಗಿ ಕಾರ್ತಿಕಮಾಸದ (ಶರದೃತುವಿನ) ಶುಕ್ಲಪಕ್ಷದಲ್ಲಿ ಮದ್ಯ-ಮಾಂಸಗಳನ್ನು ಸಂಪೂರ್ಣವಾಗಿ ವರ್ಜಿಸಬೇಕು. ಧರ್ಮಶಾಸ್ತ್ರವು ಹೀಗೆ ವಿಧಾಯಕಮಾಡಿದೆ.

ಚತುರೋ ವಾರ್ಷಿಕಾನ್ಮಾಸಾನ್ಯೋ ಮಾಂಸಂ ಪರಿವರ್ಜಯೇತ್ ।
ಚತ್ವಾರಿ ಭದ್ರಾಣ್ಯಾಪ್ನೋತಿ ಕೀರ್ತಿಮಾಯುರ್ಯಶೋಬಲಮ್ ॥೫೫॥

ಯಾವ ಮನುಷ್ಯನು ಮಳೆಗಾಲದ ನಾಲ್ಕು ಮಾಸಗಳಲ್ಲಿ (ಚಾತುರ್ಮಾಸ್ಯದಲ್ಲಿ) ಮಾಂಸವನ್ನು ಪರಿತ್ಯಾಗಮಾಡುವನೋ–ಅವನು ಕೀರ್ತಿ, ಆಯುಷ್ಯ, ಯಶಸ್ಸು ಮತ್ತು ಬಲಗಳೆಂಬ ನಾಲ್ಕು ವಿಧವಾದ ಕಲ್ಯಾಣಗಳನ್ನು ಪಡೆದುಕೊಳ್ಳುತ್ತಾನೆ.

ಅಥವಾ ಮಾಸಮೇಕಂ ವೈ ಸರ್ವಮಾಂಸಾನ್ಯಭಕ್ಷಯನ್ ।
ಅತೀತ್ಯ ಸರ್ವದುಃಖಾನಿ ಸುಖಂ ಜೀವೇನ್ನಿರಾಮಯಃ ॥೫೬॥

ಅಥವಾ ವರ್ಷದಲ್ಲಿ ಒಂದು ತಿಂಗಳಾದರೂ ಎಲ್ಲ ಬಗೆಯ ಮಾಂಸವನ್ನೂ ವರ್ಜಿಸುವ ಪುರುಷನು ಸರ್ವದುಃಖಗಳನ್ನೂ ಕಳೆದುಕೊಂಡು ರೋಗರಹಿತನಾಗಿ ಸುಖವಾಗಿ ಜೀವಿಸುತ್ತಾನೆ.

ವರ್ಜಯನ್ತಿ ಹಿ ಮಾಂಸಾನಿ ಮಾಸಶಃ ಪಕ್ಷಶೋಽಪಿ ವಾ ।
ತೇಷಾಂ ಹಿಂಸಾನಿವೃತ್ತಾನಾಂ ಬ್ರಹ್ಮಲೋಕೋ ವಿಧೀಯತೇ ॥೫೭॥

ಯಾರು ಒಂದೊಂದು ತಿಂಗಳು ಅಥವಾ ಒಂದೊಂದು ಪಕ್ಷ-ಮಾಂಸವನ್ನು ತಿನ್ನದೇ ಅನುಕ್ರಮವಾಗಿ ಮಾಂಸವನ್ನು ಪರಿತ್ಯಾಗ ಮಾಡುವರೋ ಹಿಂಸೆಯಿಂದ ನಿವೃತ್ತರಾದ ಅಂತಹ ಮನುಷ್ಯರಿಗೆ ಬ್ರಹ್ಮಲೋಕವೇ ಸಿಕ್ಕುತ್ತದೆ.

ಮಾಂಸಂ ತು ಕೌಮುದಂ ಪಕ್ಷಂ ವರ್ಜಿತಂ ಪಾರ್ಥ ರಾಜಭಿಃ ।
ಸರ್ವಭೂತಾತ್ಮಭೂತಸ್ಥೈರ್ವಿದಿತಾರ್ಥಪರಾವರೈಃ ॥೫೮॥

ಸರ್ವಪ್ರಾಣಿಗಳಿಗೂ ಆತ್ಮಸ್ವರೂಪರಾದ, ಅತ್ಯಂತಶ್ರೇಷ್ಠರಾದ, ಆತ್ಮತತ್ತ್ವವನ್ನು ತಿಳಿದಿದ್ದ ರಾಜರು ಕಾರ್ತಿಕಮಾಸದ ಶುಕ್ಲಪಕ್ಷದಲ್ಲಿ ಮಾಂಸಭಕ್ಷಣವನ್ನು ಸಂಪೂರ್ಣವಾಗಿ ವರ್ಜಿಸುತ್ತಿದ್ದರು. ಅಂತಹ ಮಹಾನುಭಾವರ ಶುಭನಾಮಗಳು ಹೀಗಿವೆ:

ನಾಭಾಗ, ಅಂಬರೀಷ, ಮಹಾತ್ಮನಾದ ಗಯ, ಆಯು, ಅನರಣ್ಯ, ದಿಲೀಪ, ರಘು, ಪೂರು, ಕಾರ್ತವೀರ್ಯ, ಅನಿರುದ್ಧ, ನಹುಷ, ಯಯಾತಿ, ನೃಗ, ವಿಷ್ವಗಶ್ವ, ಶಶಬಿಂದು, ಯುವನಾಶ್ವ, ಉಶೀನರನ ಮಗನಾದ ಶಿಬಿ, ಮುಚುಕುಂದ, ಮಾಂಧಾತೃ, ಹರಿಶ್ಚಂದ್ರ–ಇವರಾರೂ ಕೌಮುದಪಕ್ಷದಲ್ಲಿ ಮಾಂಸವನ್ನು ತಿನ್ನುತ್ತಿರಲಿಲ್ಲ. (ಹರಿಶ್ಚಂದ್ರನ ಬಗೆಗೆ ಪುರಾತನವಾದ ಗಾಥೆಯೊಂದಿದೆ.)

ಸತ್ಯಂ ವದತ ಮಾಸತ್ಯಂ ಸತ್ಯಂ ಧರ್ಮಃ ಸನಾತನಃ ।
ಹರಿಶ್ಚನ್ದ್ರಶ್ಚರತಿ ವೈ ದಿವಿ ಸತ್ಯೇನ ಚನ್ದ್ರವತ್ ॥೬೨॥

'ಸತ್ಯವನ್ನೇ ಹೇಳಿರಿ. ಅಸತ್ಯವನ್ನು ಹೇಳಬೇಡಿರಿ. ಸತ್ಯವೇ ಸನಾತನವಾದ ಧರ್ಮವು. ಹರಿಶ್ಚಂದ್ರರಾಜನು ಸತ್ಯದ ಪ್ರಭಾವದಿಂದಲೇ ಚಂದ್ರನಂತೆ ಆಕಾಶದಲ್ಲಿ ಸಂಚರಿಸುತ್ತಿದ್ದಾನೆ.'

ಯುಧಿಷ್ಠಿರ! ಈಗ ನಾನು ರಾಜರಾಗಿದ್ದುಕೊಂಡೂ ಮಾಂಸವನ್ನು ಭಕ್ಷಿಸದೇ ಇದ್ದವರ ಶುಭನಾಮಗಳನ್ನು ಹೇಳುತ್ತೇನೆ.

ಶ್ಯೇನಚಿತ್ರ, ಸೋಮಕ, ವೃಕ, ರೈವತ, ರಂತಿದೇವ, ವಸು, ಸೃಂಜಯ, ಕೃಪ, ಭರತ, ದುಷ್ಯಂತ, ಕರೂಷ, ರಾಮ, ಅಲರ್ಕ, ನರ, ವಿರೂಪಾಶ್ವ, ನಿಮಿ, ಬುದ್ಧಿವಂತನಾದ ಜನಕ, ಪುರೂರವ, ಐಲ, ಪೃಥು, ವೀರಸೇನ, ಇಕ್ಷ್ವಾಕು, ಶಂಭು, ಶ್ವೇತ, ಸಗರ, ಅಜ, ಧುಂಧು, ಸುಬಾಹು, ಹರ್ಯಶ್ವ, ಕ್ಷುಪ, ಭರತ -ಇವರಲ್ಲದೇ ಇನ್ನೂ ಅನೇಕರಾಜರು ಯಾವಾಗಲೂ ಮಾಂಸವನ್ನು ತಿನ್ನುತ್ತಿರಲಿಲ್ಲ.

ಈ ಎಲ್ಲ ರಾಜರೂ ತಮ್ಮ ಕಾಂತಿಯಿಂದ ಪ್ರಜ್ವಲಿಸುತ್ತಾ ಬ್ರಹ್ಮಲೋಕದಲ್ಲಿ ಗಂಧರ್ವರಿಂದ ಉಪಾಸಿಸಲ್ಪಡುತ್ತಾ ಸಾವಿರಾರು ದೇವಾಂಗನೆಯರಿಂದ ಸಮನ್ವಿತರಾಗಿ ವಿರಾಜಿಸುತ್ತಿದ್ದಾರೆ.

ಯುಧಿಷ್ಠಿರ! ಆದುದರಿಂದ ಅಹಿಂಸಾರೂಪವಾದ ಈ ಧರ್ಮವು ಎಲ್ಲ ಧರ್ಮಗಳಿಗಿಂತಲೂ ಉತ್ತಮೋತ್ತಮವಾಗಿದೆ. ಅಹಿಂಸಾಧರ್ಮವನ್ನು ಆಚರಿಸುವ ಮಹಾತ್ಮರು ಅವಸಾನಾನಂತರದಲ್ಲಿ ಸ್ವರ್ಗಲೋಕದಲ್ಲಿ ವಾಸಮಾಡುತ್ತಾರೆ. ಯಾವ ಧಾರ್ಮಿಕಪುರುಷರು, ಹುಟ್ಟಿದಾಗಿನಿಂದಲೂ ಮಧುವನ್ನೂ, ಮಾಂಸವನ್ನೂ ಮತ್ತು ಮದ್ಯವನ್ನೂ ಪರಿತ್ಯಜಿಸುವರೋ–ಅವರೆಲ್ಲರೂ ಮುನಿಗಳೆಂದೇ ಭಾವಿಸಲ್ಪಡುತ್ತಾರೆ.

ಇಮಂ ಧರ್ಮಮಮಾಂಸಾದಂ ಯಶ್ಚರೇಚ್ಛ್ರಾವಯೀತ ವಾ ।
ಅಪಿ ಚೇತ್ಸುದುರಾಚಾರೋ ನ ಜಾತು ನಿರಯಂ ವ್ರಜೇತ್ ॥೭೧॥

ಮಾಂಸಭಕ್ಷಣಪರಿತ್ಯಾಗರೂಪವಾದ ಈ ಧರ್ಮವನ್ನು ಯಾವನು ಆಚರಿಸುವನೋ ಅಥವಾ ಬೇರೆಯವರಿಗೆ ಹೇಳುವನೋ–ಅವನು ದುರಾಚಾರಿಯೇ ಆಗಿದ್ದರೂ ಎಂದಿಗೂ ನರಕಕ್ಕೆ ಹೋಗುವುದಿಲ್ಲ.

ಪಠೇದ್ವಾ ಯ ಇದಂ ರಾಜಞ್ಛೃಣುಯಾದ್ವಾಪ್ಯಭೀಕ್ಷ್ಣಶಃ ।
ಅಮಾಂಸಭಕ್ಷಣವಿಧಿಂ ಪವಿತ್ರಮೃಷಿಪೂಜಿತಮ್ ॥೭೨॥

ವಿಮುಕ್ತಃ ಸರ್ವಪಾಪೇಭ್ಯಃ ಸರ್ವಕಾಮೈರ್ಮಹೀಯತೇ ।
ವಿಶಿಷ್ಟತಾಂ ಜ್ಞಾತಿಷು ಚ ಲಭತೇ ನಾತ್ರ ಸಂಶಯಃ ॥೭೩॥

ಪರಮಪವಿತ್ರವಾದ, ಋಷಿಗಳಿಂದ ಪುರಸ್ಕೃತವಾದ ಈ ಅಮಾಂಸಭಕ್ಷಣವಿಧಿಯನ್ನು ಯಾವನು ಪದೇ ಪದೇ ಓದುವನೋ ಅಥವಾ ಕೇಳುವನೋ–ಅವನು ಸರ್ವಪಾಪಗಳಿಂದಲೂ ಮುಕ್ತನಾಗಿ ಮನೋ ವಾಂಛಿತವಾದ ಸಕಲಕಾಮನೆಗಳಿಂದಲೂ ಸಂಪನ್ನನಾಗುತ್ತಾನೆ. ತನ್ನ ಜ್ಞಾತಿಗಳ ಮಧ್ಯದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆಯುತ್ತಾನೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಆಪನ್ನಶ್ಚಾಪದೋ ಮುಚ್ಯೇದ್ಬದ್ಧೋ ಮುಚ್ಯೇತ ಬನ್ಧನಾತ್ ।
ಮುಚ್ಯೇತ್ತಥಾತುರೋ ರೋಗಾದ್ದುಃಖಾನ್ಮುಚ್ಯೇತ ದುಃಖಿತಃ ॥೭೪॥

ಈ ಪ್ರಕರಣವನ್ನು ಪುನಃ ಪುನಃ ಪಾರಾಯಣಮಾಡುವವನು ಆಪತ್ತಿನಲ್ಲಿದ್ದರೆ ಆಪತ್ತಿನಿಂದ ಮುಕ್ತನಾಗುತ್ತಾನೆ. ಬಂಧನದಲ್ಲಿದ್ದರೆ ಬಂಧನ ದಿಂದ ಬಿಡುಗಡೆಯನ್ನು ಹೊಂದುತ್ತಾನೆ. ರೋಗಿಯಾಗಿದ್ದರೆ ನೀರೋಗಿ ಯಾಗುತ್ತಾನೆ. ದುಃಖಿಯಾಗಿದ್ದರೆ ದುಃಖದಿಂದ ಮುಕ್ತನಾಗಿ ಸುಖಿಯಾಗುತ್ತಾನೆ.

ತಿರ್ಯಗ್ಯೋನಿಂ ನ ಗಚ್ಛೇತ ರೂಪವಾಂಶ್ಚ ಭವೇನ್ನರಃ ।
ಬುದ್ಧಿಮಾನ್ವೈ ಕುರುಶ್ರೇಷ್ಠ ಪ್ರಾಪ್ನುಯಾಚ್ಚ ಮಹದ್ಯಶಃ ॥೭೫॥

ಕುರುಶ್ರೇಷ್ಠನೇ! ಪಠನ-ಶ್ರವಣಗಳ ಪ್ರಭಾವದಿಂದಾಗಿ ಮನುಷ್ಯನು ಪಶು-ಪಕ್ಷಿಗಳ ಯೋನಿಗಳಲ್ಲಿ ಜನ್ಮತಾಳುವುದಿಲ್ಲ. ರೂಪವಂತನಾಗುತ್ತಾನೆ. ಐಶ್ವರ್ಯವಂತನಾಗುತ್ತಾನೆ ಮತ್ತು ಮಹಾಯಶೋವಂತನಾಗುತ್ತಾನೆ.

ಯುಧಿಷ್ಠಿರ! ಹೀಗೆ ನಾನು ನಿನಗೆ ಮಾಂಸದ ಪರಿತ್ಯಾಗದಲ್ಲಿರುವ ಫಲವನ್ನೂ ಮಾಂಸವನ್ನು ತಿನ್ನುವ ಪ್ರವೃತ್ತಿಯಿದ್ದರೆ ಅದರಿಂದ ನಿವೃತ್ತಿಹೊಂದುವ ಋಷಿಪ್ರೋಕ್ತವಾದ ವಿಧಾನವನ್ನೂ ಹೇಳಿದ್ದೇನೆ."

ರ೧೧೫ನೆಯ ಅಧ್ಯಾಯವು ಮುಗಿಯಿತು.

೧೧೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಮಾಂಸವನ್ನು ತಿನ್ನದೇ ಇರುವುದರಿಂದ ಪ್ರಾಪ್ತವಾಗುವ ಲಾಭ ಮತ್ತು ಅಹಿಂಸಾಧರ್ಮದ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಇಮೇ ವೈ ಮಾನವಾ ಲೋಕೇ ನೃಶಂಸಾ ಮಾಂಸಗೃದ್ಧಿನಃ ।
ವಿಸೃಜ್ಯ ವಿವಿಧಾನ್ಭಕ್ಷ್ಯಾನ್ಮಹಾರಕ್ಷೋಗಣಾ ಇವ ॥೧॥

"ಪಿತಾಮಹನೇ! ಈ ಪ್ರಪಂಚದಲ್ಲಿ ನಿರ್ದಯಿಗಳಾದ ಮನುಷ್ಯರು ಒಳ್ಳೊಳ್ಳೆಯ ವಿಧ-ವಿಧವಾದ ಭಕ್ಷ್ಯಗಳನ್ನು ತಿನ್ನುವುದನ್ನು ಬಿಟ್ಟು ಮಹಾರಾಕ್ಷಸರಂತೆ ಮಾಂಸವನ್ನು ತಿನ್ನಲು ಆಸೆಪಡುತ್ತಾರೆ.

ಮಾಂಸವನ್ನು ತಿನ್ನಲು ಅಪೇಕ್ಷಿಸುವಂತೆ ಜನರು, ನಾನಾವಿಧವಾದ ಅಪೂಪಗಳನ್ನೂ (ಒಬ್ಬಟ್ಟು, ಹೋಳಿಗೆ ಮುಂತಾದುವನ್ನೂ), ನಾನಾವಿಧವಾದ ಕಾಯಿ-ಪಲ್ಯಗಳನ್ನೂ, ರಸಭರಿತವಾದ ಮಧುರ ಮೋದಕಗಳನ್ನೂ ತಿನ್ನಲು ಬಯಸುವುದಿಲ್ಲ.

ಪುರುಷರ್ಷಭನೇ! ಪ್ರಭುವೇ! ಆದುದರಿಂದ ಈಗ ನಾನು ಮಾಂಸವನ್ನು ತಿನ್ನದೇ ಇರುವುದರಿಂದ ಆಗುವ ಲಾಭವನ್ನೂ, ಮಾಂಸವನ್ನು ತಿನ್ನುವುದರಿಂದ ಪ್ರಾಪ್ತವಾಗುವ ದೋಷವನ್ನೂ ನಿನ್ನಿಂದ ತಿಳಿಯ ಬೇಕೆಂದಿದ್ದೇನೆ. ಧರ್ಮಜ್ಞನೇ! ಈ ಎಲ್ಲ ವಿಷಯಗಳನ್ನೂ ಯಥಾವತ್ತಾಗಿ ಧರ್ಮಾನುಸಾರವಾಗಿ ನನಗೆ ಹೇಳು. ಇದೂ ಅಲ್ಲದೇ ತಿನ್ನಲು ಯೋಗ್ಯವಾದ ಪದಾರ್ಥಗಳು ಯಾವುವೆಂಬುದನ್ನೂ ತಿನ್ನಲು ಅಯೋಗ್ಯವಾದ ಪದಾರ್ಥ ಗಳು ಯಾವುವೆಂಬುದನ್ನೂ ಹೇಳು. (ಭಕ್ಷ್ಯಾಭಕ್ಷ್ಯಗಳನ್ನು ನಿರೂಪಿಸು.)

ಯಥೈತದ್ಯಾದೃಶಂ ಚೈವ ಗುಣಾ ಯೇ ಚಾಸ್ಯ ವರ್ಜನೇ ।
ದೋಷಾ ಭಕ್ಷಯತೋ ಯೇಽಪಿ ತನ್ಮೇ ಬ್ರೂಹಿ ಪಿತಾಮಹ ॥೫॥

ಮಾಂಸದ ಸ್ವರೂಪವೇನು? ಅದು ಹೇಗಿರುತ್ತದೆ? ಅದನ್ನು ಪರಿತ್ಯಜಿಸುವುದರಿಂದ ಯಾವ ಲಾಭವಿದೆ? ಮಾಂಸಭಕ್ಷಕನಿಗೆ ಯಾವ ದೋಷಗಳು ಉಂಟಾಗುತ್ತವೆ? ಈ ಎಲ್ಲವನ್ನೂ ವಿಶದವಾಗಿ ಹೇಳು."

ಭೀಷ್ಮನು ಹೇಳುತ್ತಾನೆ:

ಏವಮೇತನ್ಮಹಾಬಾಹೋ ಯಥಾ ವದಸಿ ಭಾರತ ।
ನ ಮಾಂಸಾತ್ಪರಮಂ ಕಿಂಚಿದ್ರಸತೋ ವಿದ್ಯತೇ ಭುವಿ ॥೭॥

ಕ್ಷತಕ್ಷೀಣಾಭಿತಪ್ತಾನಾಂ ಗ್ರಾಮ್ಯಧರ್ಮರತಾತ್ಮನಾಮ್ ।
ಅಧ್ವನಾ ಕರ್ಶಿತಾನಾಂ ಚ ನ ಮಾಂಸಾದ್ವಿದ್ಯತೇ ಪರಮ್ ॥೮॥

ಸದ್ಯೋ ವರ್ಧಯತಿ ಪ್ರಾಣಾನ್ಪುಷ್ಟಿಮಗ್ರ್ಯಾಂ ದಧಾತಿ ಚ ।
ನ ಭಕ್ಷ್ಯೋಽಧ್ಯಧಿಕಃ ಕಶ್ಚಿನ್ಮಾಂಸಾದಸ್ತಿ ಪರಂತಪ ॥೯॥

ವಿವರ್ಜಿತೇ ತು ಬಹವೋ ಗುಣಾಃ ಕೌರವನನ್ದನ ।
ಯೇ ಭವನ್ತಿ ಮನುಷ್ಯಾಣಾಂ ತನ್ಮೇ ನಿಗದತಃ ಶೃಣು ॥೧೦॥

"ಭಾರತನೇ! ಇದು ಹೀಗೆಯೇ ಸರಿ. ನೀನು ಹೇಳಿದಂತೆ ಅಪೂಪಾದಿಗಳನ್ನು ಅಪೇಕ್ಷಿಸುವವರಿಗಿಂತಲೂ ಮಾಂಸಾಪೇಕ್ಷಿಗಳೇ ಹೆಚ್ಚಾಗಿದ್ದಾರೆ.

ಪ್ರಪಂಚದಲ್ಲಿ ರಸದ ದೃಷ್ಟಿಯಿಂದ ನೋಡಿದರೆ ಮಾಂಸಕ್ಕಿಂತಲೂ ರಸವತ್ತಾದ ಖಾದ್ಯವಸ್ತುವು ಬೇರೊಂದಿಲ್ಲ. ಯುದ್ಧದಲ್ಲಿ ಗಾಯಗೊಂಡಿರುವವರಿಗೂ, ರೋಗಗಳಿಂದ ಕ್ಷೀಣಿಸಿರುವವರಿಗೂ, ಗ್ರಾಮ್ಯಧರ್ಮಗಳಲ್ಲಿಯೇ (ಮೈಥುನಾದಿಗಳಲ್ಲಿಯೇ) ಹೆಚ್ಚಿನ ಆಸಕ್ತಿಯಿರುವವರಿಗೂ, ಹಾದಿಯನ್ನು ನಡೆದು ಬಳಲಿ ಬರುವವರಿಗೂ ಮಾಂಸಕ್ಕಿಂತಲೂ ಶ್ರೇಷ್ಠವಾದ ಆಹಾರ ಪದಾರ್ಥವು ಬೇರೊಂದಿಲ್ಲ. ಮಾಂಸವು ಬಹಳ ಬೇಗ ಬಲವನ್ನು ಹೆಚ್ಚಿಸುತ್ತದೆ. ಹೆಚ್ಚಿನ ಪುಷ್ಟಿಯನ್ನು ಕೊಡುತ್ತದೆ. ಪರಂತಪನೇ! ಈ ಕಾರಣಗಳಿಂದ ಮಾಂಸಕ್ಕಿಂತಲೂ ಶ್ರೇಷ್ಠವಾದ ಭಕ್ಷ್ಯವು ಬೇರೊಂದಿಲ್ಲ. ಆದರೆ ಮಾಂಸವನ್ನು ವರ್ಜಿಸಿದರೆ ಅದರಿಂದ ಬಹಳ ಲಾಭವೇ ಆಗುತ್ತದೆ. ಮಾಂಸಪರಿತ್ಯಾಗದಿಂದ ಎಂತಹ ಗುಣಗಳು ಪ್ರಾಪ್ತವಾಗುವುವೆಂಬುದನ್ನು ಹೇಳುವೆನು; ಕೇಳು:

ಸ್ವಮಾಂಸಂ ಪರಮಾಂಸೇನ ಯೋ ವರ್ಧಯಿತುಮಿಚ್ಛತಿ ।
ನಾಸ್ತಿ ಕ್ಷುದ್ರತರಸ್ತಸ್ಮಾತ್ಸ ನೃಶಂಸತರೋ ನರಃ ॥೧೧॥

ಯಾವನು ಇತರ ಪ್ರಾಣಿಗಳ ಮಾಂಸದಿಂದ ತನ್ನ ಮಾಂಸವನ್ನು ಪುಷ್ಟಿಗೊಳಿಸಲು ಇಚ್ಛಿಸುವನೋ–ಅವನಿಗಿಂತಲೂ ನೀಚನಾದ ಮತ್ತು ನಿರ್ದಯನಾದ ಮನುಷ್ಯನು ಬೇರೆ ಯಾವನೂ ಇರಲಾರನು.

ನ ಹಿ ಪ್ರಾಣಾತ್ಪ್ರಿಯತರಂ ಲೋಕೇ ಕಿಂಚನ ವಿದ್ಯತೇ ।
ತಸ್ಮಾದ್ದಯಾಂ ನರಃ ಕುರ್ಯಾದ್ಯಥಾತ್ಮನಿ ತಥಾಪರೇ ॥೧೨॥

ಪ್ರಪಂಚದಲ್ಲಿ ಪ್ರಾಣಿಗಳಿಗೆ ತಮ್ಮ ಪ್ರಾಣಕ್ಕಿಂತಲೂ ಪ್ರಿಯವಾದ ವಸ್ತುವು ಬೇರೆ ಯಾವುದೂ ಇಲ್ಲ. ಆದುದರಿಂದ ಮನುಷ್ಯನು ತನ್ನ ವಿಷಯದಲ್ಲಿ ಇತರರು ದಯಾವಂತರಾಗಬೇಕೆಂದು ಹೇಗೆ ಆಶಿಸುವನೋ– ಅದೇ ರೀತಿಯಲ್ಲಿ ಇತರ ಎಲ್ಲರ ವಿಷಯದಲ್ಲಿಯೂ ತಾನೂ ದಯಾವಂತನಾಗಿರಬೇಕು.

ಶುಕ್ರಾಚ್ಚ ತಾತ ಸಮ್ಭೂತಿರ್ಮಾಂಸಸ್ಯೇಹ ನ ಸಂಶಯಃ ।
ಭಕ್ಷಣೇ ತು ಮಹಾನ್ದೋಷೋ ನಿವೃತ್ತ್ಯಾ ಪುಣ್ಯಮುಚ್ಯತೇ ॥೧೩॥

ಮಾಂಸವನ್ನು ಭಕ್ಷಿಸುವುದರಿಂದ ಮಹಾದೋಷವು ಉಂಟಾಗುತ್ತದೆ. ಏಕೆಂದರೆ: ವೀರ್ಯದಿಂದಲೇ ಮಾಂಸದ ಉತ್ಪತ್ತಿಯಾಗುತ್ತದೆ. ಇದರಲ್ಲಿ ಸಂದೇಹವೇ ಇಲ್ಲ. ಆದುದರಿಂದ ಮಾಂಸವನ್ನು ತಿನ್ನದೇ ಇರುವುದರಿಂದ ಪುಣ್ಯವು ಲಭಿಸುತ್ತದೆ.

ವಿಧಿನಾ ವೇದದೃಷ್ಟೇನ ತದ್ಭುಕ್ತ್ವೇಹ ನ ದುಷ್ಯತಿ ।
ಯಜ್ಞಾರ್ಥಂ ಪಶವಃ ಸೃಷ್ಟಾ ಇತ್ಯಪಿ ಶ್ರೂಯತೇ ಶ್ರುತಿಃ ॥೧೪॥

ವೇದೋಕ್ತವಾದ ವಿಧಿಯಿಂದ ಸಂಸ್ಕೃತವಾದ ಮಾಂಸವನ್ನು ತಿನ್ನುವುದರಿಂದ ಮನುಷ್ಯನು ದೋಷಕ್ಕೆ ಭಾಗಿಯಾಗುವುದಿಲ್ಲ. ಪಶುಗಳು ಯಜ್ಞಕ್ಕೋಸ್ಕರವಾಗಿಯೇ ಸೃಷ್ಟಿಸಲ್ಪಟ್ಟಿವೆಯೆಂಬ ಶ್ರುತಿವಾಕ್ಯವೂ ಇದೆ.

ಅತೋಽನ್ಯಥಾ ಪ್ರವೃತ್ತಾನಾಂ ರಾಕ್ಷಸೋ ವಿಧಿರುಚ್ಯತೇ ।
ಕ್ಷತ್ರಿಯಾಣಾಂ ತು ಯೋ ದೃಷ್ಟೋ ವಿಧಿಸ್ತಮಪಿ ಮೇ ಶೃಣು ॥೧೫॥

ವೇದೋಕ್ತವಾದ ವಿಧಿಗಳನ್ನು ಬಿಟ್ಟು ಸ್ವೇಚ್ಛೆಯಿಂದ ಮಾಂಸವನ್ನು ಭಕ್ಷಿಸುವುದಕ್ಕೆ ರಾಕ್ಷಸವಿಧಿಯೆಂದು ಹೇಳಲ್ಪಟ್ಟಿದೆ. ಮಾಂಸವನ್ನು ಭಕ್ಷಿಸುವ ವಿಷಯದಲ್ಲಿ ಕ್ಷತ್ರಿಯರಿಗೆ ಯಾವ ವಿಧಿಯು ಉಕ್ತವಾಗಿದೆಯೆಂಬುದನ್ನು ಹೇಳುವೆನು; ಕೇಳು.

ವೀರ್ಯೇಣೋಪಾರ್ಜಿತಂ ಮಾಂಸಂ ಯಥಾ ಭುಞ್ಜನ್ನ ದುಷ್ಯತಿ ।
ಆರಣ್ಯಾಃ ಸರ್ವದೈವತ್ಯಾಃ ಸರ್ವಶಃ ಪ್ರೋಕ್ಷಿತಾ ಮೃಗಾಃ ।
ಅಗಸ್ತ್ಯೇನ ಪುರಾ ರಾಜನ್ಮೃಗಯಾ ಯೇನ ಪೂಜ್ಯತೇ ॥೧೬॥

ಪರಾಕ್ರಮದಿಂದ ಸಂಪಾದಿಸಿದ (ಬೇಟೆಯಾಡಿ ತಂದ) ಮಾಂಸವನ್ನು ಕ್ಷತ್ರಿಯನು ತಿನ್ನುವುದರಿಂದ ದೂಷ್ಯನಾಗುವುದಿಲ್ಲ. ಅರಣ್ಯದಲ್ಲಿರುವ ಮೃಗಗಳು ಎಲ್ಲ ದೇವತೆಗಳಿಗೂ ಸಂಬಂಧಿಸಿದುವುಗಳು. ಏಕೆಂದರೆ: ಹಿಂದೊಮ್ಮೆ ಅಗಸ್ತ್ಯನು ಅರಣ್ಯದಲ್ಲಿದ್ದ ಎಲ್ಲ ಪ್ರಾಣಿಗಳನ್ನೂ ಸಂಪ್ರೋಕ್ಷಿಸಿದ್ದನು. ಈ ಕಾರಣದಿಂದಲೇ ಬೇಟೆಯು ರಾಜರಿಂದ ಗೌರವಿಸಲ್ಪಟ್ಟಿದೆ.

ನಾತ್ಮಾನಮಪರಿತ್ಯಜ್ಯ ಮೃಗಯಾ ನಾಮ ವಿದ್ಯತೇ ॥೧೭॥

ಬೇಟೆಯಾಡುವ ಕಾಲದಲ್ಲಿ ಬೇಟೆಯಾಡುವವನಿಗೂ ಪ್ರಾಣಿಗಳಿಂದ ಅಪಾಯವಿರುವುದರಿಂದ ಮೃಗಯಾ (ಬೇಟೆ) ಎಂಬುದು ಬೇಟೆಯಾಡುವವನಿಗೂ–ಬೇಟೆಯಾಡಿಸಿಕೊಳ್ಳುವ ಪ್ರಾಣಿಗಳಿಗೂ (ಇಬ್ಬರಿಗೂ) ಅನ್ವಯಿಸುತ್ತದೆ. (ಬೇಟೆಯ ಸಮಯದಲ್ಲಿ ಪ್ರಾಣತೆತ್ತವರೂ ಅನೇಕರಿದ್ದಾರೆ.)

ಸಮತಾಮುಪಸಙ್ಗಮ್ಯ ಭೂತಂ ಹನ್ಯತಿ ಹನ್ತಿ ವಾ ।
ಅತೋ ರಾಜರ್ಷಯಃ ಸರ್ವೇ ಮೃಗಯಾಂ ಯಾನ್ತಿ ಭಾರತ ॥೧೮॥

ಬೇಟೆಯ ಸಮಯದಲ್ಲಿ ಬೇಟೆಯಾಡುವವನೂ ಮತ್ತು ದುಷ್ಟ ಮೃಗಗಳೂ ಸಮಾನಬಲರಾಗಿಯೇ ಇರುತ್ತಾರೆ. ಆದುದರಿಂದ ಬೇಟೆಯಾಡುವವನು ದುಷ್ಟಮೃಗಗಳನ್ನಾದರೂ ಕೊಲ್ಲಬಹುದು. ದುಷ್ಟಮೃಗಗಳಾದರೂ ಬೇಟೆಯಾಡುವವನನ್ನು ಕೊಲ್ಲಬಹುದು. ಆದುದರಿಂದ ಎಲ್ಲ ರಾಜರ್ಷಿಗಳೂ ವೀರೋಚಿತವಾದ ಬೇಟೆಗಾಗಿ ಕಾಡುಗಳಿಗೆ ಹೋಗುತ್ತಾರೆ.

ನ ಹಿ ಲಿಪ್ಯನ್ತಿ ಪಾಪೇನ ನ ಚೈತತ್ಪಾತಕಂ ವಿದುಃ ॥೧೯॥

ಹೀಗೆ ಬೇಟೆಯಾಡುವವನು ದೋಷದಿಂದ ಲಿಪ್ತನಾಗುವುದಿಲ್ಲ. ರಾಜನಾದವನು ಬೇಟೆಯಾಡುವುದು ಪಾಪಕರವಲ್ಲವೆಂದು ವಿದ್ವಾಂಸರು ತಿಳಿಯುತ್ತಾರೆ.

ನ ಹಿ ತತ್ಪರಮಂ ಕಿಂಚಿದಿಹ ಲೋಕೇ ಪರತ್ರ ಚ ।
ಯತ್ಸರ್ವೇಷ್ವಿಹ ಭೂತೇಷು ದಯಾ ಕೌರವನನ್ದನ ॥೨೦॥

ಆದರೆ 'ಸರ್ವಪ್ರಾಣಿಗಳ ವಿಷಯದಲ್ಲಿಯೂ ದಯೆಯಿಡಬೇಕು'– ಎಂಬ ಪ್ರಾಣಿದಯಾಧರ್ಮಕ್ಕಿಂತಲೂ ಶ್ರೇಷ್ಠವಾದ ಧರ್ಮವು ಈ ಲೋಕದಲ್ಲಾಗಲೀ-ಪರಲೋಕದಲ್ಲಾಗಲೀ ಬೇರೆ ಯಾವುದೂ ಇಲ್ಲ.

ನ ಭಯಂ ವಿದ್ಯತೇ ಜಾತು ನರಸ್ಯೇಹ ದಯಾವತಃ ।
ದಯಾವತಾಮಿಮೇ ಲೋಕಾಃ ಪರೇ ಚಾಪಿ ತಪಸ್ವಿನಾಮ್ ॥೨೧॥

ದಯಾವಂತನಾದವನಿಗೆ ಈ ಲೋಕದಲ್ಲಿ ಯಾವಾಗಲೂ ಭಯವೆಂಬುದೇ ಇಲ್ಲ. ದಯಾವಂತರಾದ ತಪಸ್ವಿಗಳಿಗೆ ಈ ಲೋಕಗಳೂ ಪರಲೋಕಗಳೂ ಸುಖದಾಯಕಗಳಾಗುತ್ತವೆ.

ಅಹಿಂಸಾಲಕ್ಷಣೋ ಧರ್ಮ ಇತಿ ಧರ್ಮವಿದೋ ವಿದುಃ ।
ಯದಹಿಂಸಾತ್ಮಕಂ ಕರ್ಮ ತತ್ಕುರ್ಯಾದಾತ್ಮವಾನ್ನರಃ ॥೨೨॥

ಅಹಿಂಸೆಯೇ ಧರ್ಮದ ಲಕ್ಷಣವೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ. ಮನಸ್ಸನ್ನು ವಶಪಡಿಸಿಕೊಂಡಿರುವ ಮನುಷ್ಯನು ಅಹಿಂಸಾತ್ಮಕವಾದ ಯಾವ ಕರ್ಮವಿದೆಯೋ–ಅದನ್ನೇ ಮಾಡಬೇಕು.

ಅಭಯಂ ಸರ್ವಭೂತೇಭ್ಯೋ ಯೋ ದದಾತಿ ದಯಾಪರಃ ।
ಅಭಯಂ ತಸ್ಯ ಭೂತಾನಿ ದದತೀತ್ಯನುಶುಶ್ರುಮ ॥೨೩॥

ದಯಾಪರನಾದ ಯಾವ ಮನುಷ್ಯನು ಸರ್ವಪ್ರಾಣಿಗಳಿಗೂ ಅಭಯದಾನಮಾಡುವನೋ–ಅವನಿಗೆ ಎಲ್ಲ ಪ್ರಾಣಿಗಳೂ ಅಭಯವನ್ನು ನೀಡುತ್ತವೆಯೆಂದು ನಾವು ಕೇಳಿದ್ದೇವೆ.

ಕ್ಷತಂ ಚ ಸ್ಖಲಿತಂ ಚೈವ ಪತಿತಂ ಕೃಷ್ಟಮಾಹತಮ್ ।
ಸರ್ವಭೂತಾನಿ ರಕ್ಷನ್ತಿ ಸಮೇಷು ವಿಷಮೇಷು ಚ ॥೨೪॥

ದಯಾವಂತನು ಗಾಯಗೊಂಡಿರಲಿ, ಜಾರಿಬಿದ್ದಿರಲಿ, ಕೆಳಕ್ಕೆ ಬಿದ್ದಿರಲಿ, ನೀರಿನ ಪ್ರವಾಹದಲ್ಲಿ ಕೊಚ್ಚಿಹೋಗುತ್ತಿರಲಿ, ಏಟುತಿಂದವನಾಗಿರಲಿ, ಸಮಾವಸ್ಥೆಯಲ್ಲಿರಲಿ, ವಿಷಮಾವಸ್ಥೆಯಲ್ಲಿರಲಿ (ಕಷ್ಟದಲ್ಲಿರಲಿ ಅಥವಾ ಸುಖದಲ್ಲಿರಲಿ)–ಅಂತಹವನನ್ನು ಎಲ್ಲ ಪ್ರಾಣಿಗಳೂ ಸಂರಕ್ಷಿಸುತ್ತವೆ.

ನೈನಂ ವ್ಯಾಲಮೃಗಾ ಘ್ನನ್ತಿ ನ ಪಿಶಾಚಾ ನ ರಾಕ್ಷಸಾಃ ।
ಮುಚ್ಯತೇ ಭಯಕಾಲೇಷು ಮೋಕ್ಷಯೇದ್ಯೋ ಭಯೇ ಪರಾನ್ ॥

ಯಾವನು ಇತರ ಪ್ರಾಣಿಗಳನ್ನು ಭಯದಿಂದ ಮುಕ್ತಿಗೊಳಿಸುವನೋ–ಅಂತಹ ದಯಾವಂತನನ್ನು ವಿಷಜಂತುಗಳಾಗಲೀ, ಹಿಂಸ್ರಪಶುಗಳಾಗಲೀ, ಪಿಶಾಚಗಳಾಗಲೀ, ರಾಕ್ಷಸರಾಗಲೀ ಕೊಲ್ಲುವುದಿಲ್ಲ. ಭಯವುಂಟಾದ ಸಮಯದಲ್ಲಿಯೂ ಅವನು ಭಯದಿಂದ ಮುಕ್ತನಾಗುತ್ತಾನೆ.

ಪ್ರಾಣದಾನಾತ್ಪರಂ ದಾನಂ ನ ಭೂತಂ ನ ಭವಿಷ್ಯತಿ ।
ನ ಹ್ಯಾತ್ಮನಃ ಪ್ರಿಯತರಂ ಕಿಂಚಿದಸ್ತೀಹ ನಿಶ್ಚಿತಮ್ ॥೨೬॥

ಪ್ರಾಣದಾನಕ್ಕಿಂತಲೂ ಶ್ರೇಷ್ಠವಾದ ದಾನವು ಹಿಂದೆಯೂ ಇರಲಿಲ್ಲ; ಮುಂದೆಯೂ ಇರುವುದಿಲ್ಲ. ತನ್ನ ಆತ್ಮಕ್ಕಿಂತಲೂ (ಜೀವಕ್ಕಿಂತಲೂ) ಪ್ರಿಯತರವಾದ ವಸ್ತುವು ಬೇರೆ ಯಾವುದೂ ಇಲ್ಲವೆಂಬುದು ನಿಶ್ಚಿತವಾಗಿದೆ.

ಅನಿಷ್ಟಂ ಸರ್ವಭೂತಾನಾಂ ಮರಣಂ ನಾಮ ಭಾರತ ।
ಮೃತ್ಯುಕಾಲೇ ಹಿ ಭೂತಾನಾಂ ಸದ್ಯೋ ಜಾಯತಿ ವೇಪಥುಃ ॥೨೭॥

ಯಾವುದೇ ಪ್ರಾಣಿಗಾಗಲೀ–ಮರಣವೆಂಬುದು ಇಷ್ಟವಾಗುವುದಿಲ್ಲ. ಆದುದರಿಂದ ಮರಣಕಾಲವು ಸನ್ನಿಹಿತವಾದೊಡನೆಯೇ ಎಲ್ಲ ಪ್ರಾಣಿಗಳಿಗೂ ನಡುಕವುಂಟಾಗುತ್ತದೆ.

ಜಾತಿಜನ್ಮಜರಾದುಃಖೈರ್ನಿತ್ಯಂ ಸಂಸಾರಸಾಗರೇ ।
ಜನ್ತವಃ ಪರಿವರ್ತನ್ತೇ ಮರಣಾದುದ್ವಿಜನ್ತಿ ಚ ॥೨೮॥

ಈ ಸಂಸಾರಸಾಗರದಲ್ಲಿ ಎಲ್ಲ ಪ್ರಾಣಿಗಳೂ ಗರ್ಭವಾಸ, ಜನ್ಮ, ಮುಪ್ಪು–ಇವೇ ಮೊದಲಾದ ದುಃಖಗಳಿಂದ ಯಾವಾಗಲೂ ಸುತ್ತುತ್ತಿರುತ್ತವೆ. ಮರಣವನ್ನು ನೆನೆದೊಡನೆಯೇ ಉದ್ವೇಗಗೊಳ್ಳುತ್ತವೆ.

ಗರ್ಭವಾಸೇಷು ಪಚ್ಯನ್ತೇ ಕ್ಷಾರಾಮ್ಲಕಟುಕೈ ರಸೈಃ ।
ಮೂತ್ರಸ್ವೇದಪುರೀಷಾಣಾಂ ಪರುಷೈರ್ಭೃಶದಾರುಣೈಃ ॥೨೯॥

ಪ್ರಾಣಿಗಳು ಗರ್ಭದಲ್ಲಿ ವಾಸಮಾಡುವಾಗ ಮಲ-ಮೂತ್ರ- ಬೆವರುಗಳ ಮಧ್ಯದಲ್ಲಿದ್ದುಕೊಂಡು ಅತ್ಯಂತಕ್ರೂರವಾದ ಮತ್ತು ದಾರುಣವಾದ ಉಪ್ಪು, ಹುಳಿ, ಖಾರ-ಇವೇ ಮುಂತಾದ ರಸಗಳಿಂದ ಬೇಯಿಸಲ್ಪಡುತ್ತವೆ.

ಜಾತಾಶ್ಚಾಪ್ಯವಶಾಸ್ತತ್ರ ಛಿದ್ಯಮಾನಾಃ ಪುನಃ ಪುನಃ ।
ಪಚ್ಯಮಾನಾಶ್ಚ ದೃಶ್ಯನ್ತೇ ವಿವಶಾ ಮಾಂಸಗೃದ್ಧಿನಃ ॥೩೦॥

ಮಾಂಸದಲ್ಲಿಯೇ ಲೋಲುಪರಾದ ಜನರು ಸಾಮಾನ್ಯವಾಗಿ ಜೀವಿತ

ಕಾಲದಲ್ಲಿ ಯಾವ ಪ್ರಾಣಿಗಳ ಮಾಂಸವನ್ನು ತಿನ್ನುವರೋ–ಆಯಾ ಪ್ರಾಣಿಗಳಾಗಿಯೇ ಜನ್ಮತಾಳುತ್ತಾರೆ. ಹಾಗೆ ಪ್ರಾಣಿಗಳಾಗಿ ಜನ್ಮತಾಳಿದನಂತರ ಅಸ್ವತಂತ್ರರಾಗಿ ಮಾಂಸಭಕ್ಷಣಪ್ರಿಯರಿಂದ ಪುನಃ ಪುನಃ ಕತ್ತರಿಸಲ್ಪಟ್ಟು ಬೇಯಿಸಲ್ಪಡುವುದು ಕಂಡುಬರುತ್ತದೆ.

ಕುಮ್ಭೀಪಾಕೇ ಚ ಪಚ್ಯನ್ತೇ ತಾಂ ತಾಂ ಯೋನಿಮುಪಾಗತಾಃ ।
ಆಕ್ರಮ್ಯ ಮಾರ್ಯಮಾಣಾಶ್ಚ ಭ್ರಾಮ್ಯನ್ತೇ ವೈ ಪುನಃ ಪುನಃ ॥೩೧॥

ಪ್ರಾಣಿಗಳನ್ನು ಸಂಹರಿಸಿದ ಪಾಪದ ಕಾರಣದಿಂದಾಗಿ ಅವರು ಕುಂಭೀಪಾಕವೆಂಬ ನರಕದಲ್ಲಿ ಬೇಯಿಸಲ್ಪಡುತ್ತಾರೆ. ಯಾವ ಯಾವ ಪ್ರಾಣಿಗಳ ಮಾಂಸವನ್ನು ತಿಂದಿರುವರೋ–ಆಯಾ ಪ್ರಾಣಿಗಳ ಯೋನಿಗಳಲ್ಲಿಯೇ ಜನ್ಮತಾಳಿ ಮಾಂಸಭಕ್ಷಿಗಳಿಂದ ಆಕ್ರಮಿಸಲ್ಪಟ್ಟು ಕೊಲ್ಲಲ್ಪಡುತ್ತಾ ಪುನಃ ಪುನಃ ಸಂಸಾರಚಕ್ರದಲ್ಲಿ ಸುತ್ತುತ್ತಲೇ ಇರುತ್ತಾರೆ.

ನಾತ್ಮನೋಽಸ್ತಿ ಪ್ರಿಯತರಃ ಪೃಥಿವೀಮನುಸೃತ್ಯ ಹ ।
ತಸ್ಮಾತ್ಪ್ರಾಣಿಷು ಸರ್ವೇಷು ದಯಾವಾನಾತ್ಮವಾನ್ಭವೇತ್ ॥೩೨॥

ಈ ಭೂಮಂಡಲದಲ್ಲಿ ಆತ್ಮಕ್ಕಿಂತಲೂ ಪ್ರಿಯವಾದ ವಸ್ತುವು ಬೇರೊಂದಿಲ್ಲ. ಆದುದರಿಂದ ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ ದಯಾವಂತನಾಗಿರಬೇಕು. ಎಲ್ಲ ಪ್ರಾಣಿಗಳನ್ನೂ ತನ್ನ ಆತ್ಮಪ್ರಾಯವೆಂದೇ ಭಾವಿಸಿಕೊಳ್ಳಬೇಕು.

ಸರ್ವಮಾಂಸಾನಿ ಯೋ ರಾಜನ್ಯಾವಜ್ಜೀವಂ ನ ಭಕ್ಷಯೇತ್ ।
ಸ್ವರ್ಗೇ ಸ ವಿಪುಲಂ ಸ್ಥಾನಂ ಪ್ರಾಪ್ನುಯಾನ್ನಾತ್ರ ಸಂಶಯಃ ॥೩೩॥

ಯಾವನು ಜೀವಪರ್ಯಂತವಾಗಿ ಯಾವುದೇ ಪ್ರಾಣಿಯ ಮಾಂಸವನ್ನೂ ತಿನ್ನುವುದಿಲ್ಲವೋ–ಅಂತಹವನು ಸ್ವರ್ಗದಲ್ಲಿ ಶ್ರೇಷ್ಠವೂ ಮತ್ತು ವಿಶಾಲವೂ ಆದ ಸ್ಥಾನವನ್ನು ಪಡೆದುಕೊಳ್ಳುತ್ತಾನೆ. ಇದರಲ್ಲಿ ಸಂಶಯವಿಲ್ಲ.

ಯೇ ಭಕ್ಷಯನ್ತಿ ಮಾಂಸಾನಿ ಭೂತಾನಾಂ ಜೀವಿತೈಷಿಣಾಮ್ ।
ಭಕ್ಷ್ಯನ್ತೇ ತೇಽಪಿ ಭೂತೈಸ್ತೈರಿತಿ ಮೇ ನಾಸ್ತಿ ಸಂಶಯಃ ॥೩೪॥

ಬದುಕಿರಬೇಕೆಂದು ಬಯಸುವ ಪ್ರಾಣಿಗಳ ಮಾಂಸವನ್ನು ಯಾರು ತಿನ್ನುವರೋ–ಅವರು ಇನ್ನೊಂದು ಜನ್ಮದಲ್ಲಿ ಆ ಪ್ರಾಣಿಗಳಿಂದಲೇ

ಭಕ್ಷಿಸಲ್ಪಡುತ್ತಾರೆ. (ಪ್ರಾಣಿಯ ಮಾಂಸವನ್ನು ತಿನ್ನುವವನಿಗೂ ಪುನರ್ಜನ್ಮವುಂಟು. ಬದುಕಲು ಬಯಸುತ್ತಿದ್ದ ಪ್ರಾಣಿಗೂ ಪುನರ್ಜನ್ಮವುಂಟು. ಈ ಜನ್ಮದಲ್ಲಿ ಮನುಷ್ಯನಾಗಿ ಹುಟ್ಟಿ ಜಿಂಕೆಯೊಂದರ ಮಾಂಸವನ್ನು ತಿಂದರೆ ಮರುಹುಟ್ಟಿನಲ್ಲಿ ಅವನು ಜಿಂಕೆಯಾಗಿಯೇ ಹುಟ್ಟುತ್ತಾನೆ. ಜಿಂಕೆಯು ಮನುಷ್ಯನಾಗಿ ಹುಟ್ಟಿ ಆ ಜಿಂಕೆಯ ಮಾಂಸವನ್ನೇ ತಿನ್ನುತ್ತಾನೆ. ಮನುಷ್ಯನಾಗಿಯೇ ಹುಟ್ಟಬೇಕೆಂಬ ನಿಯಮವೇನೂ ಇಲ್ಲ. ಪರಸ್ಪರವಿರೋಧಿಗಳಾದ ಪ್ರಾಣಿಗಳಾಗಿ ಹುಟ್ಟಿ ಪೂರ್ವಜನ್ಮದಲ್ಲಿ ಭಕ್ಷಿಸಿದವನನ್ನು ಈ ಜನ್ಮದಲ್ಲಿ ಭಕ್ಷಿಸಬಹುದು. ಪುನರ್ಜನ್ಮದ ಇತಿಹಾಸಗಳಲ್ಲಿ ಇಂತಹವು ಹಲವಾರು ಬಾರಿ ಬರುತ್ತವೆ.)

ಮಾಂ ಸ ಭಕ್ಷಯತೇ ಯಸ್ಮಾದ್ಭಕ್ಷಯಿಷ್ಯೇ ತಮಪ್ಯಹಮ್ ।
ಏತನ್ಮಾಂಸಸ್ಯ ಮಾಂಸತ್ವಮನುಬುದ್ಧ್ಯಸ್ವ ಭಾರತ ॥೩೫॥

ಭಾರತನೇ! ಮಾಂಸಶಬ್ದದ ನಿರ್ವಚನವೇ ಹಾಗಿದೆ. ಮನುಷ್ಯನು ಯಾವ ಪ್ರಾಣಿಯ ಮಾಂಸವನ್ನು ತಿನ್ನುವನೋ–ಆ ಪ್ರಾಣಿಯು ಮರಣಕಾಲದಲ್ಲಿ ಹೀಗೆ ಹೇಳಿಕೊಳ್ಳುತ್ತದೆ: '**ಮಾಂ ಸ ಭಕ್ಷಯತೇ ಯಸ್ಮಾದ್ಭಕ್ಷಯಿಷ್ಯೇ ತಮಪ್ಯಹಂ**–ಅವನು ನನ್ನನ್ನು ಯಾವ ಕಾರಣದಿಂದ ಭಕ್ಷಿಸುತ್ತಿರುವನೋ–ಅವನನ್ನು ಕೂಡ ನಾನು ಅದೇ ಕಾರಣದಿಂದ ಭಕ್ಷಿಸುತ್ತೇನೆ.' ಹೀಗೆಂದು ಸಂಕಲ್ಪಿಸಿ ಸಾಯುವ ಪ್ರಾಣಿಯು ಜನ್ಮಾಂತರಗಳಲ್ಲಿ ತನ್ನ ಸಂಕಲ್ಪವನ್ನು ಈಡೇರಿಸಿಕೊಳ್ಳುತ್ತದೆ. ಮಾಂಸಶಬ್ದದ ಮಾಂಸತ್ವವೇ (ನಿರುಕ್ತಿಯೇ) ಇದಾಗಿದೆ.

ಘಾತಕೋ ವಧ್ಯತೇ ನಿತ್ಯಂ ತಥಾ ವಧ್ಯತಿ ಭಕ್ಷಿತಾ ।
ಆಕ್ರೋಷ್ಟಾ ಕ್ರುಧ್ಯತೇ ರಾಜಂಸ್ತಥಾ ದ್ವೇಷ್ಯತ್ವಮಾಪ್ನುತೇ ॥೩೬॥

ಒಬ್ಬರನ್ನು ನಿಂದಿಸುವವನು ನಿಂದಿಸಲ್ಪಟ್ಟವರ ಕ್ರೋಧಕ್ಕೂ ದ್ವೇಷಕ್ಕೂ ಹೇಗೆ ಪಾತ್ರನಾಗುವನೋ–ಹಾಗೆಯೇ ಪ್ರಾಣಿಗಳನ್ನು ಕೊಲ್ಲುವವನೂ, ಪ್ರಾಣಿಗಳ ಮಾಂಸವನ್ನು ಭಕ್ಷಿಸುವವನೂ ಮರುಹುಟ್ಟಿನಲ್ಲಿ ಅದೇ ಪ್ರಾಣಿಗಳಿಂದ ಕೊಲ್ಲಲ್ಪಡುತ್ತಾನೆ.

ಯೇನ ಯೇನ ಶರೀರೇಣ ಯದ್ಯತ್ಕರ್ಮ ಕರೋತಿ ಯಃ ।
ತೇನ ತೇನ ಶರೀರೇಣ ತತ್ತತ್ಫಲಮುಪಾಶ್ನುತೇ ॥೩೭॥

ಯಾವ ಯಾವ ಶರೀರವನ್ನು ಹೊಂದಿ ಯಾವನು ಯಾವ ಯಾವ ಕರ್ಮಗಳನ್ನು ಮಾಡುವನೋ–ಅವನು ಅಂತಹ ಕರ್ಮಗಳಿಗೆ ಅನುರೂಪವಾದ ಶರೀರವನ್ನೇ ಹೊಂದಿ ಆ ಶರೀರದ ಮೂಲಕವಾಗಿಯೇ ಅದರ ಫಲವನ್ನು ಅನುಭವಿಸುತ್ತಾನೆ.

ಅಹಿಂಸಾ ಪರಮೋ ಧರ್ಮಸ್ತಥಾಹಿಂಸಾ ಪರೋ ದಮಃ ।
ಅಹಿಂಸಾ ಪರಮಂ ದಾನಮಹಿಂಸಾ ಪರಮಂ ತಪಃ ॥೩೮॥
ಅಹಿಂಸಾ ಪರಮೋ ಯಜ್ಞಸ್ತಥಾಹಿಂಸಾ ಪರಂ ಫಲಮ್ ।
ಅಹಿಂಸಾ ಪರಮಂ ಮಿತ್ರಮಹಿಂಸಾ ಪರಮಂ ಸುಖಮ್ ॥೩೯॥

ಅಹಿಂಸೆಯೇ ಪರಮಶ್ರೇಷ್ಠವಾದ ಧರ್ಮ. ಅಹಿಂಸೆಯೇ ದಮವು. (ಜಿತೇಂದ್ರಿಯತೆಯು.) ಅಹಿಂಸೆಯೇ ಶ್ರೇಷ್ಠವಾದ ದಾನವು. ಅಹಿಂಸೆಯೇ ಶ್ರೇಷ್ಠವಾದ ತಪಸ್ಸು. ಅಹಿಂಸೆಯೇ ಶ್ರೇಷ್ಠವಾದ ಯಜ್ಞವು. ಅಹಿಂಸೆಯೇ ಶ್ರೇಷ್ಠವಾದ ಫಲವು. ಅಹಿಂಸೆಯೇ ಪರಮಮಿತ್ರಸ್ವರೂಪವು. ಅಹಿಂಸೆಯೇ ಪರಮಸುಖದಾಯಕವು.

ಸರ್ವಯಜ್ಞೇಷು ವಾ ದಾನಂ ಸರ್ವತೀರ್ಥೇಷು ವಾಪ್ಲುತಮ್ ।
ಸರ್ವದಾನಫಲಂ ವಾಪಿ ನೈತತ್ತುಲ್ಯಮಹಿಂಸಯಾ ॥೪೦॥

ಸಕಲವಿಧವಾದ ಯಜ್ಞಗಳಲ್ಲಿಯೂ ದಾನಮಾಡುವುದಾಗಲೀ, ಸರ್ವ ತೀರ್ಥಗಳಲ್ಲಿಯೂ ಸ್ನಾನಮಾಡುವುದಾಗಲೀ, ಸಕಲವಿಧವಾದ ದಾನಗಳ ಫಲಗಳಾಗಲೀ–ಅಹಿಂಸಾವ್ರತಕ್ಕೆ ಸಮನಾಗಲಾರವು.

ಅಹಿಂಸ್ರಸ್ಯ ತಪೋಽಕ್ಷಯ್ಯಮಹಿಂಸ್ರೋ ಯಜತೇ ಸದಾ ।
ಅಹಿಂಸ್ರಃ ಸರ್ವಭೂತಾನಾಂ ಯಥಾ ಮಾತಾ ಯಥಾ ಪಿತಾ ॥೪೧॥

ಯಾವನು ಯಾವ ಪ್ರಾಣಿಗೂ ಹಿಂಸೆಯನ್ನು ಮಾಡುವುದಿಲ್ಲವೋ–ಅವನು ಮಾಡುವ ತಪಸ್ಸು ಅಕ್ಷಯವಾಗುತ್ತದೆ. ಅಹಿಂಸಕನು ಸದಾ ಯಜ್ಞಮಾಡಿದ ಫಲವನ್ನು ಹೊಂದುತ್ತಾನೆ. ಅಹಿಂಸಕನು ಎಲ್ಲ ಪ್ರಾಣಿಗಳಿಗೂ ತಂದೆ-ತಾಯಿಗಳಿದ್ದಂತೆ.

ಕುರುಶ್ರೇಷ್ಠನೇ! ಇದು ಅಹಿಂಸೆಯ ಫಲವಾಗಿದೆ. ಇಷ್ಟು ಮಾತ್ರವಲ್ಲ. ಇನ್ನೂ ಅಪಾರವಾಗಿದೆ. ಅಹಿಂಸೆಯಿಂದ ಪ್ರಾಪ್ತವಾಗುವ ಗುಣಗಳನ್ನು ನೂರು ವರ್ಷಗಳ ಕಾಲ ಹೇಳಿದರೂ ಮುಗಿಸಲು ಸಾಧ್ಯವಾಗುವುದಿಲ್ಲ."

೧೧೬ನೆಯ ಅಧ್ಯಾಯವು ಮುಗಿಯಿತು.

೧೧೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಒಂದು ಹುಳುವಿಗೆ ಹಿಂದಿನ ಜನ್ಮದಲ್ಲಿ ಮಾಡಿದ ಶುಭಕರ್ಮವೊಂದರ ಫಲವಾಗಿ ಪೂರ್ವಜನ್ಮದ ಸ್ಮರಣೆಯಾದುದು: ಹುಳುವಿನ ಜನ್ಮದಲ್ಲಿಯೂ ಮೃತ್ಯುವಿನ ಭಯ: ಕೀಟವು ತನ್ನ ಮೋಕ್ಷೋಪಾಯದ ವಿಷಯವಾಗಿ ವ್ಯಾಸರನ್ನು ಪ್ರಶ್ನಿಸಿದುದು

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಅಕಾಮಾಶ್ಚ ಸಕಾಮಾಶ್ಚ ಯೇ ಹತಾಃ ಸ್ಮ ಮಹಾಮೃಧೇ ।
ಕಾಂ ಗತಿಂ ಪ್ರತಿಪನ್ನಾಸ್ತೇ ತನ್ಮೇ ಬ್ರೂಹಿ ಪಿತಾಮಹ ॥೧॥

"ಪಿತಾಮಹನೇ! ಮಹಾಯುದ್ಧವು ನಡೆಯುವಾಗ ಇಚ್ಛೆಯಿರಲಿ, ಇಲ್ಲದಿರಲಿ–ಶತ್ರುವಿನ ಆಯುಧಕ್ಕೆ ಲಕ್ಷ್ಯರಾಗಿ ಯಾರು ಮೃತರಾಗಿರುವರೋ–ಅಂತಹವರು ಯಾವ ಗತಿಯನ್ನು ಹೊಂದಿದ್ದಾರೆ? ಈ ವಿಷಯವನ್ನು ಹೇಳು.

ದುಃಖಂ ಪ್ರಾಣಪರಿತ್ಯಾಗಃ ಪುರುಷಾಣಾಂ ಮಹಾಮೃಧೇ ।
ಜಾನಾಸಿ ತ್ವಂ ಮಹಾಪ್ರಾಜ್ಞ ಪ್ರಾಣತ್ಯಾಗಂ ಸುದುಷ್ಕರಮ್ ॥೨॥

ಸಮೃದ್ಧೌ ವಾಸಮೃದ್ಧೌ ವಾ ಶುಭೇ ವಾ ಯದಿ ವಾಶುಭೇ ।
ಕಾರಣಂ ತತ್ರ ಮೇ ಬ್ರೂಹಿ ಸರ್ವಜ್ಞೋ ಹ್ಯಸಿ ಮೇ ಮತಃ ॥೩॥

ಮಹಾಪ್ರಾಜ್ಞನೇ! ಮಹಾಯುದ್ಧದಲ್ಲಿ ಪ್ರಾಣಪರಿತ್ಯಾಗಮಾಡುವುದು ಮನುಷ್ಯರಿಗೆ ದುಃಖಕರವಾದುದು.

ಒಬ್ಬ ಮನುಷ್ಯನು ಅಥವಾ ಒಂದು ಪ್ರಾಣಿಯು ಉನ್ನತಿಯ ಸ್ಥಿತಿಯಲ್ಲಿರಲಿ, ಅವನತಿಯ ಸ್ಥಿತಿಯಲ್ಲಿರಲಿ, ಮಂಗಳಕರವಾದ ಪರಿಸ್ಥಿತಿಯಲ್ಲಿರಲಿ ಅಮಂಗಳಕರವಾದ ಪರಿಸ್ಥಿತಿಯಲ್ಲಿರಲಿ, (ಆಯುರಾರೋಗ್ಯ-

ಐಶ್ವರ್ಯಗಳಿಂದ ಯುಕ್ತವಾಗಿರಲಿ ದಾರಿದ್ರ್ಯ-ರೋಗಾದಿಗಳಿಂದ ಪೀಡಿತವಾಗಿರಲಿ) ಪ್ರಾಣತ್ಯಾಗವು ಅತಿದುಷ್ಕರವಾದುದೆಂದು ನೀನು ತಿಳಿದಿರುವೆ. ಇದರ ಕಾರಣವನ್ನು ಹೇಳು. ನೀನು ಎಲ್ಲವನ್ನೂ ತಿಳಿದಿರುವೆಯೆಂಬುದು ನನ್ನ ಅಭಿಪ್ರಾಯವಾಗಿದೆ.”

ಭೀಷ್ಮನು ಹೇಳುತ್ತಾನೆ:

ಸಮೃದ್ಧೌ ವಾಸಮೃದ್ಧೌ ವಾ ಶುಭೇ ವಾ ಯದಿ ವಾಶುಭೇ ।
ಸಂಸಾರೇಽಸ್ಮಿನ್ಸಮಾಯಾತಾಃ ಪ್ರಾಣಿನಃ ಪೃಥಿವೀಪತೇ ॥೪॥

ನಿರತಾ ಯೇನ ಭಾವೇನ ತತ್ರ ಮೇ ಶೃಣು ಕಾರಣಮ್ ।
ಸಮ್ಯಕ್ಚಾಯಮನುಪ್ರಶ್ನಸ್ತ್ವಯೋಕ್ತಸ್ತು ಯುಧಿಷ್ಠಿರ ॥೫॥

“ಯುಧಿಷ್ಠಿರ! ನೀನು ಕೇಳಿರುವ ಈ ಪ್ರಶ್ನೆಯು ಅತ್ಯಂತ ಸಮೀಚೀನ ವಾಗಿದೆ. ಒಬ್ಬ ಮನುಷ್ಯನು ಉನ್ನತಸ್ಥಿತಿಯಲ್ಲಿರಲಿ, ಅವನತಸ್ಥಿತಿಯಲ್ಲಿರಲಿ, ಮಂಗಳಕರವಾದ ಪರಿಸ್ಥಿತಿಯಲ್ಲಿರಲಿ, ಅಮಂಗಳಕರವಾದ ಪರಿಸ್ಥಿತಿಯಲ್ಲಿ ರಲಿ–ಸಾಯಲು ಬಯಸದೇ ಯಾವ ಭಾವನೆಯಿಂದ ಜೀವನನಿರ್ವಹಣೆ ಯಲ್ಲಿ ನಿರತರಾಗಿರುವನೆಂಬುದನ್ನೂ ಮತ್ತು ಅದಕ್ಕೆ ಕಾರಣವನ್ನೂ ಹೇಳುವೆನು; ಕೇಳು. ಈ ವಿಷಯದಲ್ಲಿ ಹಿಂದೆ ಕೃಷ್ಣದ್ವೈಪಾಯನವ್ಯಾಸರಿಗೂ ಮತ್ತು ಒಂದು ಹುಳುವಿಗೂ ನಡೆದ ಸಂಭಾಷಣೆಯನ್ನು ಹೇಳುತ್ತೇನೆ.

ಬ್ರಹ್ಮಸ್ವರೂಪರಾದ, ವಿಪ್ರಶ್ರೇಷ್ಠರಾದ ಕೃಷ್ಣದ್ವೈಪಾಯನರು ಒಮ್ಮೆ ಪೃಥ್ವಿಯಲ್ಲಿ ಸಂಚರಿಸುತ್ತಿದ್ದಾಗ, ಗಾಡಿಯ ಜಾಡಿನಲ್ಲಿ ವೇಗವಾಗಿ ಹರಿದುಹೋಗುತ್ತಿದ್ದ ಹುಳುವೊಂದನ್ನು ನೋಡಿದರು.

ಗತಿಜ್ಞಃ ಸರ್ವಭೂತಾನಾಂ ಭಾಷಾಜ್ಞಶ್ಚ ಶರೀರಿಣಾಮ್ ।
ಸರ್ವಜ್ಞಃ ಸ ತದಾ ದೃಷ್ಟ್ವಾ ಕೀಟಂ ವಚನಮಬ್ರವೀತ್ ॥೬॥

ಎಲ್ಲ ಪ್ರಾಣಿಗಳ ಇಹ-ಪರಗತಿಗಳನ್ನೂ ತಿಳಿದಿದ್ದ, ಎಲ್ಲ ಪ್ರಾಣಿಗಳೂ ಆಡುವ ಭಾಷೆಗಳನ್ನೂ ತಿಳಿದವರಾಗಿದ್ದ ಸರ್ವಜ್ಞರಾದ ವ್ಯಾಸರು ವೇಗವಾಗಿ ಹರಿದುಹೋಗುತ್ತಿದ್ದ ಹುಳುವನ್ನು ಕುರಿತು ಹೇಳಿದರು:

ಕೀಟ ಸಂತ್ರಸ್ತರೂಪೋಽಸಿ ತ್ವರಿತಶ್ಚೈವ ಲಕ್ಷ್ಯಸೇ ।
ಕ್ವ ಧಾವಸಿ ತದಾಚಕ್ಷ್ವ ಕುತಸ್ತೇ ಭಯಮಾಗತಮ್ ॥೭॥

“ಕೀಟವೇ! ನೀನು ಭಯಗೊಂಡಿರುವಂತೆ ಕಾಣುತ್ತಿರುವೆ. ಆತುರದಿಂದ ಕೂಡಿರುವಂತೆಯೂ ಕಾಣುತ್ತಿರುವೆ. ಎಲ್ಲಿಗೆ ಓಡಿಹೋಗುತ್ತಿರುವೆ? ಯಾವುದರಿಂದ ನಿನಗೆ ಇಂತಹ ಭಯವುಂಟಾಗಿದೆ?–ಈ ವಿಷಯವನ್ನು ಹೇಳು.”

ಕೀಟವು ಹೇಳುತ್ತದೆ:

ಶಕಟಸ್ಯಾಸ್ಯ ಮಹತೋ ಘೋಷಂ ಶ್ರುತ್ವಾ ಭಯಂ ಮಮ ।
ಆಗತಂ ವೈ ಮಹಾಬುದ್ಧೇ ಸ್ವನ ಏಷ ಹಿ ದಾರುಣಃ ॥೧೦॥
ಶ್ರೂಯತೇ ನ ಚ ಮಾಂ ಹನ್ಯಾದಿತಿ ಹ್ಯಸ್ಮಾದಪಕ್ರಮೇ ।
ಶ್ವಸತಾಂ ಚ ಶೃಣೋಮ್ಯೇನಂ ಗೋಪುತ್ರಾಣಾಂ ಪ್ರತೋದ್ಯತಾಮ್ ॥
ವಹತಾಂ ಸುಮಹಾಭಾರಂ ಸಂನಿಕರ್ಷೇ ಸ್ವನಂ ಪ್ರಭೋ ।
ನೃಣಾಂ ಚ ಸಂವಾಹಯತಾಂ ಶ್ರೂಯತೇ ವಿವಿಧಃ ಸ್ವರಃ ॥೧೨॥

“ಮಹಾಬುದ್ಧಿಶಾಲಿಯೇ! ದೂರದಲ್ಲಿ ಬರುತ್ತಿರುವ ಗಾಡಿಯ ಮಹಾಶಬ್ದವನ್ನು ಕೇಳಿ ನನಗೆ ಭಯವುಂಟಾಗಿಬಿಟ್ಟಿದೆ. ಭಯವನ್ನುಂಟು ಮಾಡುವ ಈ ಗಡ-ಗಡಾಶಬ್ದವು ಕೇಳಿಬರುತ್ತಿದೆ. ಗಾಡಿಯು ನನ್ನನ್ನು ಕೊಲ್ಲದಿರಲೆಂದು ಅದರ ಜಾಡನ್ನು ಬಿಟ್ಟು ವೇಗವಾಗಿ ಹೋಗುತ್ತಿದ್ದೇನೆ. ಚಾಟಿಯ ಏಟಿನಿಂದ ನಿಟ್ಟುಸಿರುಬಿಡುತ್ತಿರುವ, ಮಹಾಭಾರವನ್ನು ಹೊತ್ತು ಇತ್ತ ಕಡೆಯೇ ಬರುತ್ತಿರುವ ಎತ್ತುಗಳ ಶಬ್ದವನ್ನು ಹತ್ತಿರದಲ್ಲಿಯೇ ಕೇಳುತ್ತಿದ್ದೇನೆ. ಗಾಡಿಯಲ್ಲಿ ಕುಳಿತಿರುವ ಮನುಷ್ಯರು ಮಾಡುತ್ತಿರುವ ನಾನಾವಿಧವಾದ ಶಬ್ದಗಳೂ ಕೇಳಿಬರುತ್ತಿವೆ.

ಶ್ರೋತುಮಸ್ಮದ್ವಿಧೇನೈಷ ನ ಶಕ್ಯಃ ಕೀಟಯೋನಿನಾ ।
ತಸ್ಮಾದತಿಕ್ರಮಾಮ್ಯೇಷ ಭಯಾದಸ್ಮಾತ್ಸುದಾರುಣಾತ್ ॥೧೩॥

ಕೀಟಯೋನಿಯಲ್ಲಿ ಹುಟ್ಟಿರುವ ನಾನು ಇಂತಹ ಭಯಂಕರಶಬ್ದವನ್ನು ಕೇಳಲು ಸಮರ್ಥನಲ್ಲ. ಆದುದರಿಂದ ಈ ಭಯಂಕರವಾದ ಮತ್ತು ಸುದಾರುಣವಾದ ಹಾದಿಯಿಂದ ಪಾರಾಗುತ್ತಿದ್ದೇನೆ.

ದುಃಖಂ ಹಿ ಮೃತ್ಯುರ್ಭೂತಾನಾಂ ಜೀವಿತಂ ಚ ಸುದುರ್ಲಭಮ್ ।
ಅತೋ ಭೀತಃ ಪಲಾಯಾಮಿ ಗಚ್ಛೇಯಂ ನಾ ಸುಖಂ ಸುಖಾತ್ ॥

ಪ್ರಾಣಿಗಳಿಗೆ ಮೃತ್ಯುವು ಅತ್ಯಂತ ದುಃಖದಾಯಕವಾದುದು. ಜೀವಿತವು ಎಲ್ಲರಿಗೂ ಸುದುರ್ಲಭವಾದುದು. ಇದುವರೆಗೂ ಸುಖವಾಗಿದ್ದುಕೊಂಡು ಈಗ ಅಸುಖವನ್ನು (ಮೃತ್ಯುವನ್ನು) ಪಡೆಯಕೂಡದೆಂಬ ಕಾರಣದಿಂದ ನಾನು ಭಯದಿಂದ ಪಲಾಯನಮಾಡುತ್ತಿದ್ದೇನೆ."

ಭೀಷ್ಮನು ಹೇಳುತ್ತಾನೆ:

ಯುಧಿಷ್ಠಿರ! ಕೀಟದ ಆ ಮಾತಿಗೆ ವ್ಯಾಸರು ಹೇಳಿದರು:

'ಕುತಃ ಕೀಟ ಸುಖಂ ತವ-ಕೀಟವೇ ನಿನಗೆ ಸುಖವೆಂಬುದೆಲ್ಲಿದೆ?

ಮರಣಂ ತೇ ಸುಖಂ ಮನ್ಯೇ ತಿರ್ಯಗ್ಯೋನೌ ತು ವರ್ತಸೇ ॥

ನೀನು ತಿರ್ಯಗ್ಯೋನಿಯಲ್ಲಿರುವೆ. ಆದುದರಿಂದ ನಿನಗೆ ಮರಣವೇ ಲೇಸೆಂದು ನಾನು ಭಾವಿಸುತ್ತೇನೆ.

ಶಬ್ದಂ ಸ್ಪರ್ಶಂ ರಸಂ ಗನ್ಧಂ ಭೋಗಾಂಶ್ಚೋಚ್ಚಾವಚಾನ್ಬಹೂನ್ ।
ನಾಭಿಜಾನಾಸಿ ಕೀಟ ತ್ವಂ ಶ್ರೇಯೋ ಮರಣಮೇವ ತೇ ॥೧೬॥

ಕೀಟವೇ! ನೀನು ಶಬ್ದ, ಸ್ಪರ್ಶ, ರಸ, ಗಂಧ, ಅನೇಕವಿಧವಾದ ಭೋಗಗಳು-ಇವುಗಳಾವುದನ್ನೂ ತಿಳಿಯಲಾರೆ. (ಶಬ್ದ-ಸ್ಪರ್ಶಾದಿಗಳನ್ನು ತಿಳಿಯುವ ಶಕ್ತಿಯು ನಿನಗಿಲ್ಲ.) ಆದುದರಿಂದ ನಿನಗೆ ಮರಣವೇ ಶ್ರೇಯಸ್ಕರವಾದುದು.'

ಕೀಟವು ಹೇಳುತ್ತದೆ:

ಸರ್ವತ್ರ ನಿರತೋ ಜೀವ ಇತಶ್ಚಾಪಿ ಸುಖಂ ಮಮ ।
ಚಿನ್ತಯಾಮಿ ಮಹಾಪ್ರಾಜ್ಞ ತಸ್ಮಾದಿಚ್ಛಾಮಿ ಜೀವಿತುಮ್ ॥೧೭॥

"ಮಹಾಪ್ರಾಜ್ಞನೇ! ಜೀವವು ತಾನು ಪ್ರವೇಶಿಸುವ ಪ್ರತಿಯೊಂದು ಯೋನಿಯಲ್ಲಿಯೂ ಸುಖದ ಅನುಭವವನ್ನು ಪಡೆಯುತ್ತದೆ. ಆದುದರಿಂದ ಈ ಕೀಟದ ಜನ್ಮದಲ್ಲಿಯೂ ನನಗೆ ಸುಖವಿದೆ. ಹೀಗೆ ನಾನು ಯೋಚಿಸುತ್ತೇನೆ. ಆದುದರಿಂದಲೇ ಈ ಕೀಟವಾಗಿಯೇ ಇನ್ನೂ ಜೀವಿಸಿರಲು ಬಯಸುತ್ತೇನೆ.

ಇಹಾಪಿ ವಿಷಯಃ ಸರ್ವೋ ಯಥಾ ದೇಹಂ ಪ್ರವರ್ತಿತಃ ।
ಮಾನುಷಾ ಸ್ಥೈರ್ಯಜಾಶ್ಚೈವ ಪೃಥಗ್ಭೋಗಾ ವಿಶೇಷತಃ ॥೧೮॥

ಈ ನನ್ನ ಕೀಟದೇಹದಲ್ಲಿಯೂ ಶರೀರದ ರಚನೆಗೆ ಅನುಗುಣವಾಗಿ ಸಕಲವಿಧವಾದ ವಿಷಯಸುಖಗಳೂ ಸಿಕ್ಕುತ್ತವೆ. ಆದರೆ ಮನುಷ್ಯರಿಗೂ ಸ್ಥಾವರಪ್ರಾಣಿಗಳಿಗೂ (ವೃಕ್ಷವೇ ಮೊದಲಾದುವುಗಳಿಗೂ) ಭೋಗದಲ್ಲಿ ವ್ಯತ್ಯಾಸವಿದೆ. (ಅಂತಹ ವ್ಯತ್ಯಾಸವು ಮನುಷ್ಯರಿಗೂ ಪಶು-ಪಕ್ಷಿಗಳಿಗೂ ಇರುವುದಿಲ್ಲ.)

ಅಹಮಾಸಂ ಮನುಷ್ಯೋ ವೈ ಶೂದ್ರೋ ಬಹುಧನಃ ಪ್ರಭೋ ।
ಅಬ್ರಹ್ಮಣ್ಯೋ ನೃಶಂಸಶ್ಚ ಕದರ್ಯೋ ವೃದ್ಧಿಜೀವನಃ ॥೧೯॥

ನಾನು ಹಿಂದಿನ ಜನ್ಮದಲ್ಲಿ ಧನಿಕನಾದ ಶೂದ್ರನಾಗಿದ್ದೆನು. ಬ್ರಾಹ್ಮಣರನ್ನು ಆದರಿಸುತ್ತಿರಲಿಲ್ಲ. ಕ್ರೂರಿಯೂ ಜಿಪುಣನೂ ಆಗಿದ್ದೆನು. ಬಡ್ಡಿಹಣದಿಂದ ಜೀವನವನ್ನು ನಿರ್ವಹಿಸುತ್ತಿದ್ದೆನು.

ವಾಕ್ತೀಕ್ಷ್ಣೋ ನಿಕೃತಿಪ್ರಜ್ಞೋ ದ್ವೇಷ್ಟಾ ವಿಶ್ವಸ್ಯ ಸರ್ವಶಃ ।
ಮಿಥ್ಯಾಕೃತೋಽಪಿ ವಿಧಿನಾ ಪರಸ್ವಹರಣೇ ರತಃ ॥೨೦॥

ಎಲ್ಲರೊಡನೆಯೂ ಕಠೋರವಾದ ಮಾತುಗಳನ್ನಾಡುತ್ತಿದ್ದೆನು. ಎಲ್ಲರನ್ನೂ ವಂಚಿಸುವ ಬುದ್ಧಿಯುಳ್ಳವನಾಗಿದ್ದೆನು. ಎಲ್ಲರನ್ನೂ ದ್ವೇಷಿಸುತ್ತಿದ್ದೆನು. ಇದು ನನ್ನ ಸ್ವಭಾವವಾಗಿದ್ದಿತು. ಸುಳ್ಳುಹೇಳಿ ಜನರನ್ನು ವಂಚಿಸುತ್ತಾ ಪರರ ಸ್ವತ್ತನ್ನು ಅಪಹರಿಸುವುದರಲ್ಲಿಯೇ ನಾನು ಯಾವಾಗಲೂ ನಿರತನಾಗಿರುತ್ತಿದ್ದೆನು.

ಭೃತ್ಯಾತಿಥಿಜನಶ್ಚಾಪಿ ಗೃಹೇ ಪರ್ಯಶಿತೋ ಮಯಾ ।
ಮಾತ್ಸರ್ಯಾತ್ಸ್ವಾದುಕಾಮೇನ ನೃಶಂಸೇನ ಬುಭುಕ್ಷತಾ ॥೨೧॥

ರುಚಿ-ರುಚಿಯಾದ ಭಕ್ಷ್ಯಭೋಜ್ಯಾದಿಗಳನ್ನು ಒಬ್ಬನೇ ತಿನ್ನಲು ಬಯಸುತ್ತಿದ್ದ ನಿರ್ದಯನಾದ ನಾನು ಇತರರು ನನಗಿಂತಲೂ ಮೊದಲು ತಿಂದುಬಿಟ್ಟಾರೆಂಬ ಹೊಟ್ಟೇಕಿಚ್ಚಿನಿಂದ ಮನೆಗೆ ಬರುತ್ತಿದ್ದ ಅತಿಥಿಗಳಿಗಾಗಲೀ, ಬಂಧುಜನಕ್ಕಾಗಲೀ ಭೋಜನವನ್ನು ಮಾಡಿಸದೇ ನಾನೇ ಮೊದಲು ಭೋಜನಮಾಡುತ್ತಿದ್ದೆನು. ನಾನು ತಿಂದು ಮಿಕ್ಕುದನ್ನು ಅವರೆಲ್ಲರೂ ತಿನ್ನುತ್ತಿದ್ದರು.

ದೇವಾರ್ಥಂ ಪಿತೃಯಜ್ಞಾರ್ಥಮನ್ನಂ ಶ್ರದ್ಧಾ ಹೃತಂ ಮಯಾ ।
ನ ದತ್ತಮರ್ಥಕಾಮೇನ ದೇಯಮನ್ನಂ ಪುರಾ ಕಿಲ ॥೨೨॥

ಹಿಂದಿನ ಜನ್ಮದಲ್ಲಿ ನಾನು ದೇವತೆಗಳ ಸಲುವಾಗಿಯೂ ಮತ್ತು ಪಿತೃಗಳ ಸಲುವಾಗಿಯೂ ಶ್ರದ್ಧಾಪೂರ್ವಕವಾಗಿ ಆಹಾರವನ್ನು ಸಂಗ್ರಹಿಸುತ್ತಿದ್ದೆನು. ಆದರೆ ಧನಲೋಭಿಯಾಗಿದ್ದ ನಾನು ದೇವ-ಪಿತೃಗಳ ಸಲುವಾಗಿ ಮಾಡಬೇಕಾಗಿದ್ದ ಅನ್ನದಾನವನ್ನು ಮಾತ್ರ ಮಾಡುತ್ತಿರಲಿಲ್ಲ.

ಗುಪ್ತಂ ಶರಣಮಾಶ್ರಿತ್ಯ ಭಯೇಷು ಶರಣಾಗತಾಃ ।
ಅಕಸ್ಮಾತ್ತೇ ಮಯಾ ತ್ಯಕ್ತಾ ನ ತ್ರಾತಾ ಅಭಯೈಷಿಣಃ ॥೨೩॥

ಭಯದ ಸಮಯದಲ್ಲಿ ಆಶ್ರಯವನ್ನು ಅಪೇಕ್ಷಿಸಿ ನನ್ನ ಬಳಿಗೆ ಅನೇಕ ಶರಣಾರ್ಥಿಗಳು ಬರುತ್ತಿದ್ದರು. ನಾನು ಅವರನ್ನು ಗುಪ್ತವಾದ ಮತ್ತು ಸುರಕ್ಷಿತವಾದ ಸ್ಥಳಗಳಲ್ಲಿ ಇಡುತ್ತಿದ್ದರೂ ಕೆಲವು ವೇಳೆ ಅಕಸ್ಮಾತ್ತಾಗಿ ಅವರನ್ನು ತ್ಯಜಿಸಿಬಿಡುತ್ತಿದ್ದೆನು. ಅವರನ್ನು ರಕ್ಷಿಸುತ್ತಿರಲಿಲ್ಲ.

ಧನಂ ಧಾನ್ಯಂ ಪ್ರಿಯಾನ್ದಾರಾನ್ಯಾನಂ ವಾಸಸ್ತಥಾದ್ಭುತಮ್ ।
ಶ್ರಿಯಂ ದೃಷ್ಟ್ವಾ ಮನುಷ್ಯಾಣಾಮಸೂಯಾಮಿ ನಿರರ್ಥಕಮ್ ॥೨೪॥

ಇತರರಲ್ಲಿರುತ್ತಿದ್ದ ಧನವನ್ನೂ, ಧಾನ್ಯವನ್ನೂ, ಸುಂದರಸ್ತ್ರೀಯರನ್ನೂ, ಯಾನಗಳನ್ನೂ, ಅದ್ಭುತವಾದ ವಸ್ತ್ರಗಳನ್ನೂ, ಸಂಪತ್ತನ್ನೂ ನೋಡಿ ನಿಷ್ಕಾರಣವಾಗಿ ಹೊಟ್ಟೇಕಿಚ್ಚುಪಡುತ್ತಿದ್ದೆನು.

ಈರ್ಷ್ಯುಃ ಪರಸುಖಂ ದೃಷ್ಟ್ವಾ ಅನ್ಯಸ್ಯ ನ ಬುಭೂಷಕಃ ।
ತ್ರಿವರ್ಗಹನ್ತಾ ಚಾನ್ಯೇಷಾಮಾತ್ಮಕಾಮಾನುವರ್ತಕಃ ॥೨೫॥

ಇತರರು ಸುಖಪಡುತ್ತಿರುವುದನ್ನು ನೋಡಿ ಅಸೂಯೆಪಡುತ್ತಿದ್ದೆನು. ಇತರರಿಗೆ ಒಳ್ಳೆಯದನ್ನು ಬಯಸುತ್ತಿರಲಿಲ್ಲ. ಇತರರ ಧರ್ಮಾರ್ಥ-ಕಾಮಗಳನ್ನು ಹಾಳುಮಾಡುತ್ತಿದ್ದೆನು. ನನ್ನ ಇಚ್ಛಾನುಸಾರವಾಗಿ ವ್ಯವಹರಿಸುತ್ತಿದ್ದೆನು.

ನೃಶಂಸಗುಣಭೂಯಿಷ್ಠಂ ಪುರಾ ಕರ್ಮ ಕೃತಂ ಮಯಾ ।
ಸ್ಮೃತ್ವಾ ತದನುತಪ್ಯೇಽಹಂ ಹಿತ್ವಾ ಪ್ರಿಯಮಿವಾತ್ಮಜಮ್ ॥೨೬॥

ಹಿಂದಿನ ಜನ್ಮದಲ್ಲಿ ನಾನು ಮಾಡುತ್ತಿದ್ದ ಕರ್ಮವು ಕ್ರೂರವಾದ ಕರ್ಮಗಳಿಂದ ತುಂಬಿಹೋಗಿದ್ದಿತು. ನಾನು ಮಾಡುತ್ತಿದ್ದ ಅಂತಹ ಕ್ರೂರಕರ್ಮಗಳನ್ನು ಸ್ಮರಿಸಿಕೊಂಡು ಪ್ರಿಯಪುತ್ರನನ್ನು ಕಳೆದುಕೊಂಡವನಂತೆ ಈಗ ಪರಿತಪಿಸುತ್ತಿದ್ದೇನೆ.

ಶುಭಾನಾಂ ನಾಭಿಜಾನಾಮಿ ಕೃತಾನಾಂ ಕರ್ಮಣಾಂ ಫಲಮ್ ।
ಮಾತಾ ಚ ಪೂಜಿತಾ ವೃದ್ಧಾ ಬ್ರಾಹ್ಮಣಶ್ಚಾರ್ಚಿತೋ ಮಯಾ ॥೨೭॥

ಸಕೃಜ್ಜಾತಿಗುಣೋಪೇತಃ ಸಙ್ಗತ್ಯಾ ಗೃಹಮಾಗತಃ ।
ಅತಿಥಿಃ ಪೂಜಿತೋ ಬ್ರಹ್ಮಂಸ್ತೇನ ಮಾಂ ನಾಜಹತ್ ಸ್ಮೃತಿಃ ॥೨೮॥

ನಾನು ಹಿಂದೆ ಮಾಡಿದ ಶುಭಕರ್ಮಗಳ ಫಲವನ್ನೂ ತಿಳಿದವನಾಗಿದ್ದೇನೆ. ನನ್ನ ಸ್ಮರಣೆಯಲ್ಲಿರುವಂತೆ ಮುದುಕಿಯಾಗಿದ್ದ ನನ್ನ ತಾಯಿಯನ್ನು ಶುಶ್ರೂಷಿಸುತ್ತಿದ್ದೆನು. ಯಾರ ಜೊತೆಯಲ್ಲಿಯೋ ನನ್ನ ಮನೆಗೆ ಅತಿಥಿಯಾಗಿ ಆಗಮಿಸಿದ ತನ್ನ ಜಾತಿಗುಣಗಳಿಂದ ಯುಕ್ತನಾಗಿದ್ದ ಬ್ರಾಹ್ಮಣನನ್ನು ಒಂದು ದಿನ ಸತ್ಕರಿಸಿದೆನು. ಆ ಎರಡು ಸತ್ಕರ್ಮಗಳಿಂದ ನನ್ನ ಪೂರ್ವಜನ್ಮದ ಸ್ಮರಣೆಯು ಬಿಟ್ಟುಹೋಗಿಲ್ಲ. (ಮರೆತಿಲ್ಲ.)

ಕರ್ಮಣಾ ಪುನರೇವಾಹಂ ಸುಖಮಾಗಾಮಿ ಲಕ್ಷಯೇ ।
ತಚ್ಛ್ರೋತುಮಹಮಿಚ್ಛಾಮಿ ತ್ವತ್ತಃ ಶ್ರೇಯಸ್ತಪೋಧನ ॥೨೯॥

ತಪೋಧನನೇ! ನಾನು ಪುನಃ ಯಾವುದಾದರೂ ಶುಭಕರ್ಮಗಳ ಮೂಲಕವಾಗಿ ಮುಂದೆ ಸುಖವನ್ನು ಹೊಂದುವ ಆಸೆಯುಳ್ಳವನಾಗಿದ್ದೇನೆ. ಅಂತಹ ಶ್ರೇಯಸ್ಕರವಾದ ಕರ್ಮವು ಯಾವುದೆಂಬುದನ್ನು ತಮ್ಮಿಂದ ತಿಳಿಯಲು ಬಯಸುತ್ತೇನೆ.”

ಎ೧೧೭ನೆಯ ಅಧ್ಯಾಯವು ಮುಗಿಯಿತು.

ಕೀಟವು ವ್ಯಾಸರ ಆದೇಶದಂತೆ ಕ್ಷತ್ರಿಯನಾಗಿ ಹುಟ್ಟಿ ವ್ಯಾಸರನ್ನು ಸಂದರ್ಶಿಸಿದುದು: ಸದ್ಗತಿಯ ಪ್ರಾಪ್ತಿಗಾಗಿ ವ್ಯಾಸರಿಂದ ವರದಾನ

ವ್ಯಾಸರು ಹೇಳುತ್ತಾರೆ:

ಶುಭೇನ ಕರ್ಮಣಾ ಯದ್ವೈ ತಿರ್ಯಗ್ಯೋನೌ ನ ಮುಹ್ಯಸೇ ।
ಮಮೈವ ಕೀಟ ತತ್ಕರ್ಮ ಯೇನ ತ್ವಂ ನ ಪ್ರಮುಹ್ಯಸೇ ॥೧॥

"ಕೀಟವೇ! ನೀನು ಹುಳುವಾಗಿ ಹುಟ್ಟಿದ್ದರೂ ಹಿಂದಿನ ಜನ್ಮದಲ್ಲಿ ಮಾಡಿದ್ದ ಎರಡು ಶುಭಕರ್ಮಗಳ ಫಲದಿಂದ ಮೋಹಿತನಾಗಿಲ್ಲವೆಂದೂ- ಹಿಂದಿನ ಜನ್ಮದ ಸ್ಮರಣೆಯಿರುವುದೆಂದೂ ಹೇಳಿದೆಯಲ್ಲವೇ? ನೀನು ಮೋಹಗೊಳ್ಳದಿರಲು ಮತ್ತು ಹಿಂದಿನ ಜನ್ಮದ ವೃತ್ತಾಂತವನ್ನು ಸ್ಮರಿಸಿಕೊಳ್ಳಲು ನನ್ನ ಕರ್ಮವೇ (ಅನುಗ್ರಹವೇ) ಕಾರಣವಾಗಿದೆ.

ಅಹಂ ತ್ವಾಂ ದರ್ಶನಾದೇವ ತಾರಯಾಮಿ ತಪೋಬಲಾತ್ ।
ತಪೋಬಲಾದ್ಧಿ ಬಲವದ್ಬಲಮನ್ಯನ್ನ ವಿದ್ಯತೇ ॥೨॥

ನಾನು ನನ್ನ ತಪೋಬಲದಿಂದ ನಿನ್ನನ್ನು ನೋಡಿದ ಮಾತ್ರದಿಂದಲೇ ಈ ಕೀಟಜನ್ಮದಿಂದ ಉದ್ಧರಿಸಬಲ್ಲೆನು. ತಪೋಬಲಕ್ಕಿಂತಲೂ ಅಧಿಕವಾದ ಬೇರೆಯ ಬಲವು ಯಾವುದೂ ಇಲ್ಲ.

ಜಾನಾಮಿ ಪಾಪೈಃ ಸ್ವಕೃತೈರ್ಗತಂ ತ್ವಾಂ ಕೀಟ ಕೀಟತಾಮ್ ।
ಅವಾಪ್ಸ್ಯಸಿ ಪುನರ್ಧರ್ಮಂ ಧರ್ಮಂ ತು ಯದಿ ಮನ್ಯಸೇ ॥೩॥

ಕೀಟವೇ! ನೀನು ಹಿಂದೆ ಮಾಡಿದ ಪಾಪದ ಕಾರಣದಿಂದಲೇ ಕೀಟತ್ವವನ್ನು ಪಡೆದುಕೊಂಡಿರುವೆಯೆಂಬುದನ್ನು ನಾನು ತಿಳಿದಿರುವೆನು. ನೀನು ಧರ್ಮವನ್ನು ಆತ್ಮೋದ್ಧಾರಕರವೆಂದು ಭಾವಿಸುವಿಯಾದರೆ- ಅಂತಹ ಧರ್ಮವನ್ನು ನೀನು ಪುನಃ ಪಡೆಯುವೆ.

ಕರ್ಮ ಭೂಮಿಕೃತಂ ದೇವಾ ಭುಞ್ಜತೇ ತಿರ್ಯಗಾಶ್ಚ ಯೇ ।
ಧರ್ಮಾದಪಿ ಮನುಷ್ಯೇಷು ಕಾಮೋಽರ್ಥಶ್ಚ ಯಥಾ ಗುಣೈಃ ॥೪॥

ಕರ್ಮಭೂಮಿಯಲ್ಲಿ ಮಾಡಿದ ಕರ್ಮದ ಫಲವನ್ನು ದೇವತೆಗಳೂ ಉಪಭೋಗಿಸುತ್ತಾರೆ. ಪಶು-ಪಕ್ಷಿಗಳೂ ಉಪಭೋಗಿಸುತ್ತವೆ. ಮನುಷ್ಯನಿಗೆ ಸದ್ಗುಣಗಳಿಂದ ಕಾಮಾರ್ಥಗಳು ಸಿದ್ಧಿಸುವಂತೆ ಧರ್ಮದಿಂದಲೂ ಕಾಮಾರ್ಥಗಳು ಸಿದ್ಧಿಸುತ್ತವೆ.

ವಾಗ್ಬುದ್ಧಿಪಾಣಿಪಾದೈಶ್ಚಾಪ್ಯುಪೇತಸ್ಯ ವಿಪಶ್ಚಿತಃ ।
ಕಿಂ ಹೀಯತೇ ಮನುಷ್ಯಸ್ಯ ಮನ್ದಸ್ಯಾಪಿ ಹಿ ಜೀವತಃ ॥೫॥

ಮನುಷ್ಯನು ವಿದ್ವಾಂಸನಾಗಿರಲೀ, ಮಂದಬುದ್ಧಿಯವನಾಗಿರಲೀ, ಮಾತು, ಬುದ್ಧಿ, ಕೈ-ಕಾಲು–ಇವುಗಳಿಂದ ಯುಕ್ತನಾಗಿದ್ದರೆ ಜೀವಿಸಿರುವಾಗ ಅವನನ್ನು ಯಾವುದು ತಾನೇ ನಾಶಗೊಳಿಸುತ್ತದೆ?

ಜೀವನ್ಹಿ ಕುರುತೇ ಪೂಜಾಂ ವಿಪ್ರಾಗ್ರ್ಯಃ ಶಶಿಸೂರ್ಯಯೋಃ ।
ಬ್ರುವನ್ನಪಿ ಕಥಾಂ ಪುಣ್ಯಾಂ ತತ್ರ ಕೀಟ ತ್ವಮೇಷ್ಯಸಿ ॥೬॥

ಭೂಮಂಡಲದ ಒಂದು ಸ್ಥಳದಲ್ಲಿ ಬ್ರಾಹ್ಮಣಶ್ರೇಷ್ಠನೊಬ್ಬನು ಸೂರ್ಯ-ಚಂದ್ರರನ್ನು ಶ್ರದ್ಧಾಭಕ್ತಿಗಳಿಂದ ಅನುದಿನವೂ ಪೂಜೆಮಾಡುತ್ತಾ ಲೋಕದ ಜನರಿಗೆ ಪುಣ್ಯಕಥೆಗಳನ್ನು ಹೇಳುತ್ತಾ ಜೀವಿಸುತ್ತಿದ್ದಾನೆ. ನೀನು ಅವನ ಪುತ್ರನಾಗಿ ಹುಟ್ಟುವೆ.

ಗುಣಭೂತಾನಿ ಭೂತಾನಿ ತತ್ರ ತ್ವಮುಪಭೋಕ್ಷ್ಯಸೇ ।
ತತ್ರ ತೇಽಹಂ ವಿನೇಷ್ಯಾಮಿ ಬ್ರಹ್ಮ ತ್ವಂ ಯತ್ರ ವೈಷ್ಯಸಿ ॥೭॥

ಅಲ್ಲಿ ನೀನು ವಿಷಯಗಳನ್ನು ಪಂಚಭೂತಗಳ ವಿಕಾರಗಳೆಂದು ಭಾವಿಸಿ ಅನಾಸಕ್ತಿಭಾವದಿಂದ ಉಪಭೋಗಿಸುವೆ. ಆ ಸಮಯದಲ್ಲಿ ನಾನು ಪುನಃ ನಿನ್ನ ಬಳಿಗೆ ಬಂದು ಬ್ರಹ್ಮತತ್ತ್ವವನ್ನು ಉಪದೇಶಿಸಿ, ಮುಂದೆ ನೀನು ಯಾವ ಪುಣ್ಯಲೋಕಕ್ಕೆ ಹೋಗಲು ಅಪೇಕ್ಷಿಸುವೆಯೋ–ಅಲ್ಲಿಗೇ ಕಳುಹಿಸುವೆನು."

ಯುಧಿಷ್ಠಿರ! ವ್ಯಾಸರ ಆ ಮಾತಿಗೆ ಕೀಟವು ಹಾಗೆಯೇ ಆಗಲೆಂದು ಹೇಳಿ ಗಾಡಿಯ ಜಾಡಿನಲ್ಲಿಯೇ ಇದ್ದುಬಿಟ್ಟಿತು. ಆ ಸಮಯಕ್ಕೆ ಸರಿಯಾಗಿ ದೊಡ್ಡದಾಗಿದ್ದ ಆ ಗಾಡಿಯೂ ದೈವೇಚ್ಛೆಯಿಂದ ಅದೇ ಮಾರ್ಗವಾಗಿ ಆಗಮಿಸಿತು. ಗಾಡಿಯ ಜಾಡಿನಲ್ಲಿದ್ದ ಕೀಟವು ಚಕ್ರದ ಉರುಳಾಟದಿಂದ

ಚೂರು-ಚೂರಾಗಿ ಮಾಡಲ್ಪಟ್ಟು ಪ್ರಾಣಗಳನ್ನು ತೊರೆಯಿತು. ಅನಂತರ ಅದು ಅನುಕ್ರಮವಾಗಿ ಮುಳ್ಳುಹಂದಿ, ನೀರುಡ, ಹಂದಿ, ಮೃಗಗಳು, ಪಕ್ಷಿಗಳು, ಚಾಂಡಾಲ, ಶೂದ್ರ, ವೈಶ್ಯ-ಇವೇ ಮೊದಲಾದ ಭಿನ್ನ-ಭಿನ್ನ ಯೋನಿಗಳಲ್ಲಿ ಜನ್ಮವನ್ನು ತಾಳಿ ಅನಂತರ ಮಹಾತೇಜಸ್ವಿಗಳಾದ ವ್ಯಾಸರ ಅನುಗ್ರಹದಿಂದ ಕ್ಷತ್ರಿಯಕುಲದಲ್ಲಿ ಹುಟ್ಟಿತು. ಪ್ರೌಢನಾದನಂತರ ಹಿಂದಿನ ಜನ್ಮಗಳ ಸ್ಮರಣೆಯಿದ್ದ ಆ ಕ್ಷತ್ರಿಯಕುಮಾರನು ವ್ಯಾಸರನ್ನು ಸಂದರ್ಶಿಸುವ ಸಲುವಾಗಿ ಅವರ ಬಳಿಗೆ ಹೋದನು.

ಆ ಕ್ಷತ್ರಿಯಕುಮಾರನು ತಾನು ಕೀಟವಾಗಿದ್ದಾಗ ಸತ್ಯವಾದಿಗಳಾದ ವ್ಯಾಸಮಹರ್ಷಿಗಳು ಹೇಳಿದ್ದ ಮಾತುಗಳನ್ನು ಸ್ಮರಿಸಿ ವ್ಯಾಸಮಹರ್ಷಿಗಳನ್ನು ಸಂಧಿಸಿ ಅವರ ಪಾದಗಳೆರಡನ್ನೂ ಹಿಡಿದುಕೊಂಡು ತನ್ನ ತಲೆಯನ್ನು ಅವರ ಪಾದಗಳ ಮೇಲಿಟ್ಟು ನಮಸ್ಕರಿಸಿ ಬದ್ಧಾಂಜಲಿಯಾಗಿ ಹೇಳಿದನು:

“ಪೂಜ್ಯರೇ! ಹತ್ತು ಜನ್ಮಗಳನಂತರ ನಾನು ಈ ಶ್ರೇಷ್ಠವಾದ ಸ್ಥಾನವನ್ನು (ಕ್ಷತ್ರಿಯತ್ವವನ್ನು) ಬಯಸಿದ್ದೆನು. ಕೀಟವಾಗಿದ್ದ ನಾನು ತಮ್ಮ ಅನುಗ್ರಹದಿಂದ ರಾಜಪುತ್ರತ್ವವನ್ನು ಹೊಂದಿ ನಿಮ್ಮ ಸಮೀಪಕ್ಕೆ ಬಂದಿರುವೆನು.

ಸುವರ್ಣಮಾಲೆಗಳಿಂದ ಸುಶೋಭಿತವಾದ, ಮಹಾಬಲಿಷ್ಠವಾದ ಆನೆಗಳು ನನ್ನನ್ನು ನಾನು ಅಪೇಕ್ಷಿಸಿದ ಸ್ಥಳಕ್ಕೆ ಒಯ್ಯುತ್ತವೆ. ನಾನು ಕುಳಿತುಕೊಳ್ಳುವ ರಥಗಳು ಕಾಂಬೋಜದೇಶದ ಶ್ರೇಷ್ಠವಾದ ಕುದುರೆಗಳಿಂದ ಯುಕ್ತವಾಗಿರುತ್ತವೆ.

ಒಂಟೆಗಳಿಂದಲೂ, ಹೇಸರಗತ್ತೆಗಳಿಂದಲೂ ಯುಕ್ತವಾದ ಯಾನಗಳು ನನ್ನನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಒಯ್ಯುತ್ತವೆ. ಜ್ಞಾತಿಬಾಂಧವ ರೊಡನೆಯೂ ಮತ್ತು ಮಂತ್ರಿಗಳೊಡನೆಯೂ ಮಾಂಸಸಹಿತವಾದ ಅನ್ನವನ್ನು ಊಟಮಾಡುತ್ತೇನೆ.

ಮಹಾಭಾಗರೇ! ಎಲ್ಲರಿಂದಲೂ ಪೂಜಿಸಲ್ಪಡುತ್ತಿರುವ ನಾನು ವಾಸ ಮಾಡಲು ಯೋಗ್ಯವಾದ, ಸುಂದರವಾದ ಮತ್ತು ಸುಖಾವಹವಾದ ಗೃಹ ಗಳಲ್ಲಿರುವ ಬಹುಮೂಲ್ಯವಾದ ಹಂಸತೂಲಿಕಾತಲ್ಪದಲ್ಲಿ ಮಲಗುತ್ತೇನೆ.

ಪ್ರಿಯವಾದಿಗಳಾದ ದೇವತೆಗಳು ದೇವೇಂದ್ರನನ್ನು ಸ್ತುತಿಸುವಂತೆ–ಪ್ರತಿರಾತ್ರಿಯ ಕಡೆಯ ಯಾಮದಲ್ಲಿ ಸೂತ-ಮಾಗಧ-ವಂದಿಗಳು ನನ್ನನ್ನು ಸ್ತೋತ್ರಮಾಡುತ್ತಾರೆ.

ಕೀಟತ್ವವನ್ನು ಹೊಂದಿದ್ದ ನಾನು ಸತ್ಯಸಂಧರಾದ, ಮಹಾತೇಜಸ್ವಿಗಳಾದ ನಿಮ್ಮ ಪರಮಾನುಗ್ರಹದಿಂದ ರಾಜಪುತ್ರನಾಗಿ ಹುಟ್ಟಿದೆನು.

ಮಹಾಪ್ರಾಜ್ಞರೇ! ನಿಮಗೆ ನಮಸ್ಕರಿಸುತ್ತೇನೆ. ನಾನು ಮುಂದೇನು ಮಾಡಲಿ? ಆಜ್ಞಾಪಿಸಿರಿ. ತಮ್ಮ ತಪೋಬಲದ ಕಾರಣದಿಂದಲೇ ನನಗೆ ಈ ರಾಜಪದವಿಯು ಲಭಿಸಿದೆ.”

ವ್ಯಾಸರು ಹೇಳುತ್ತಾರೆ:

“ರಾಜಪುತ್ರನೇ! ಒಳ್ಳೆಯ ಮಾತುಗಳಿಂದಲೇ ನೀನು ನನ್ನನ್ನು ಬಹಳವಾಗಿ ಸ್ತೋತ್ರಮಾಡಿರುವೆ. ಈಗ ನಿನಗೆ ಕೀಟಜನ್ಮದಲ್ಲಿನ ಜುಗುಪ್ಸಿತವಾಗಿದ್ದ ಆ ಅವಸ್ಥೆಯ ಸ್ಮೃತಿಯುಂಟಾಗಿದೆ. ನೀನು ಹಿಂದೆ ಅರ್ಥಪರಾಯಣನಾಗಿದ್ದ, ಕೊಲ್ಲುವ ಸ್ವಭಾವವನ್ನು ಹೊಂದಿದ್ದ ಶೂದ್ರನಾಗಿ ಯಾವ ಪಾಪಗಳನ್ನು ಸಂಗ್ರಹಿಸಿಕೊಂಡಿದ್ದೆಯೋ–ಆ ಪಾಪಗಳು ನಾಶವಾಗ ತಕ್ಕುವುಗಳಲ್ಲ. ಆ ಪಾಪಗಳ ಫಲವಾಗಿ ತಿರ್ಯಗ್ಯೋನಿಯಲ್ಲಿ ಹುಳುವಾಗಿ ಹುಟ್ಟಿದ್ದರೂ ನಿನಗೆ ನನ್ನ ದರ್ಶನಲಾಭವು ಸಿಕ್ಕಿತು. ನೀನು ನನ್ನನ್ನು ಸಂದರ್ಶಿಸಿದ ಮಹಾಸುಕೃತದಿಂದ ರಾಜಪುತ್ರನಾಗಿ ಹುಟ್ಟಿರುವೆ. ಈಗ ಸ್ತೋತ್ರದ ಮೂಲಕವಾಗಿಯೂ ನನ್ನನ್ನು ಗೌರವಿಸಿರುವೆ. ಈಗ ರಾಜಪುತ್ರನಾಗಿರುವ ನೀನು ಇದರ ಫಲವಾಗಿ ಅವಸಾನಾನಂತರದಲ್ಲಿ ಬ್ರಾಹ್ಮಣತ್ವವನ್ನು ಪಡೆಯುವೆ.

ಗೋಬ್ರಾಹ್ಮಣಕೃತೇ ಪ್ರಾಣಾನುತ್ಸೃಜ್ಯಾತ್ಮಾನಂ ರಣಾಜಿರೇ ।
ರಾಜಪುತ್ರ ಸುಖಂ ಪ್ರಾಪ್ಯ ಕ್ರತೂಂಶ್ಚಾವಾಪ್ತದಕ್ಷಿಣಾನ್ ।
ಅಥ ಮೋದಿಷ್ಯಸೇ ಸ್ವರ್ಗೇ ಬ್ರಹ್ಮಭೂತೋಽವ್ಯಯಃ ಸುಖೀ ॥೨೩॥

ರಾಜಪುತ್ರನೇ! ಈ ಜನ್ಮದಲ್ಲಿ ನೀನು ನಾನಾಪ್ರಕಾರವಾದ ಭೋಗಗಳ ಮೂಲಕವಾಗಿ ಸುಖವನ್ನು ಪಡೆದು, ಪರ್ಯಾಪ್ತವಾದ ದಕ್ಷಿಣೆಗಳಿಂದ

ಕೂಡಿದ ಯಜ್ಞಗಳನ್ನು ಮಾಡಿ, ಗೋಬ್ರಾಹ್ಮಣರ ರಕ್ಷಣಾರ್ಥವಾಗಿ ರಣಭೂಮಿಯಲ್ಲಿ ಪ್ರಾಣಗಳನ್ನು ಸಮರ್ಪಿಸಿ ಸ್ವರ್ಗದಲ್ಲಿ ಆನಂದಪಡುವೆ. ಅನಂತರ ಬ್ರಾಹ್ಮಣನಾಗಿ ಹುಟ್ಟಿ ಶಾಶ್ವತವಾದ ಬ್ರಹ್ಮಸ್ಥಿತಿಯನ್ನು ಪಡೆದು ಪರಮಸುಖವನ್ನು ಹೊಂದುವೆ.

ತಿರ್ಯಗ್ಯೋನ್ಯಾಃ ಶೂದ್ರತಾಮಭ್ಯುಪೈತಿ
ಶೂದ್ರೋ ವೈಶ್ಯಂ ಕ್ಷತ್ರಿಯತ್ವಂ ಚ ವೈಶ್ಯಃ ।
ವೃತ್ತಶ್ಲಾಘೀ ಕ್ಷತ್ರಿಯೋ ಬ್ರಾಹ್ಮಣತ್ವಂ
ಸ್ವರ್ಗಂ ಪುಣ್ಯಂ ಬ್ರಾಹ್ಮಣಃ ಸಾಧುವೃತ್ತಃ ॥೨೪॥

ಪಶು-ಪಕ್ಷಿಗಳಲ್ಲಿ ಹುಟ್ಟಿದ ಜೀವನು ಮೇಲು-ಮೇಲಿನ ಗತಿಗಳನ್ನು ಹೊಂದಲು ಪ್ರಾರಂಭಿಸಿದಾಗ ಮೊದಲು ಶೂದ್ರನಾಗಿ ಹುಟ್ಟುತ್ತಾನೆ. ಶೂದ್ರತ್ವವನ್ನು ಕಳೆದುಕೊಂಡನಂತರ ವೈಶ್ಯನಾಗಿಯೂ, ವೈಶ್ಯತ್ವವು ಮುಗಿದನಂತರ ಕ್ಷತ್ರಿಯನಾಗಿಯೂ ಹುಟ್ಟುತ್ತಾನೆ. ಸದಾಚಾರಸಂಪನ್ನನಾದ ಕ್ಷತ್ರಿಯನು ಬ್ರಾಹ್ಮಣತ್ವವನ್ನು ಹೊಂದುತ್ತಾನೆ. ಬ್ರಾಹ್ಮಣಜನ್ಮವನ್ನು ಪಡೆದು ಸದಾಚಾರ-ಸದ್ವೃತ್ತಿಗಳಲ್ಲಿರುವವನು ಅವಸಾನಾನಂತರಲ್ಲಿ ಪುಣ್ಯಮಯವಾದ ಸ್ವರ್ಗವನ್ನು ಹೊಂದುತ್ತಾನೆ."

ಗಿ೧೮ನೆಯ ಅಧ್ಯಾಯವು ಮುಗಿಯಿತು.

೧೧೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಕೀಟವು ಬ್ರಾಹ್ಮಣನಾಗಿ ಹುಟ್ಟಿ ಬ್ರಹ್ಮಸಾಲೋಕ್ಯವನ್ನು ಪಡೆದುದು

ಭೀಷ್ಮನು ಹೇಳುತ್ತಾನೆ:

ಕ್ಷತ್ರಧರ್ಮಮನುಪ್ರಾಪ್ತಃ ಸ್ಮರನ್ನೇವ ಚ ವೀರ್ಯವಾನ್ ।
ತ್ಯಕ್ತ್ವಾ ಸ ಕೀಟತಾಂ ರಾಜಂಶ್ಚಚಾರ ವಿಪುಲಂ ತಪಃ ॥೧॥

"ಯುಧಿಷ್ಠಿರ! ಹೀಗೆ ಕೀಟತ್ವವನ್ನು ತ್ಯಜಿಸಿದ, ವೀರ್ಯವತ್ತಾದ ಆ ಜೀವನು ಅನೇಕಜನ್ಮಗಳನ್ನು ಪಡೆದನಂತರ ಕ್ಷತ್ರಿಯಯೋನಿಯಲ್ಲಿ ಹುಟ್ಟಿ ಕ್ಷಾತ್ರಧರ್ಮವನ್ನು ಪಡೆದು ತನ್ನ ಹಿಂದಿನ ಜನ್ಮಗಳನ್ನು ಸ್ಮರಿಸುತ್ತಾ ವಿಪುಲವಾದ ತಪಸ್ಸನ್ನು ಮಾಡಿದನು.

ಧರ್ಮಾರ್ಥಗಳ ತತ್ತ್ವವನ್ನು ತಿಳಿದಿದ್ದ ರಾಜಕುಮಾರನ ಉಗ್ರವಾದ ತಪಸ್ಸನ್ನು ನೋಡಿ ದ್ವಿಜಶ್ರೇಷ್ಠರಾದ ಕೃಷ್ಣದ್ವೈಪಾಯನರು ಅವನ ಬಳಿಗೆ ಆಗಮಿಸಿ ಹೇಳಿದರು:

"ಹಿಂದೆ ಕೀಟವಾಗಿದ್ದ ರಾಜಕುಮಾರನೇ! ಪ್ರಾಣಿಗಳನ್ನು ರಕ್ಷಿಸುವುದು ದೇವತೆಗಳ ವ್ರತವೂ ಆಗಿದೆ. ಕ್ಷತ್ರಿಯರ ಧರ್ಮವೂ ಆಗಿದೆ. ಇಂತಹ ದೇವವ್ರತವನ್ನೂ ಮತ್ತು ಕ್ಷಾತ್ರಧರ್ಮವನ್ನೂ ಚಿಂತಿಸುತ್ತಾ ಪ್ರಜೆಗಳನ್ನು ಪರಿಪಾಲನೆಮಾಡುತ್ತಿರು. ಮುಂದಿನ ಜನ್ಮದಲ್ಲಿ ನೀನು ಬ್ರಾಹ್ಮಣತ್ವವನ್ನು ಪಡೆಯುವೆ. ರಾಜಕುಮಾರನೇ! ನೀನು ನಿನ್ನ ಎಲ್ಲ ಪ್ರಜೆಗಳನ್ನೂ ಚೆನ್ನಾಗಿ ಪರಿಪಾಲಿಸು. ಜಿತೇಂದ್ರಿಯನಾಗಿ ಶುಭವಾದ ಮತ್ತು ಅಶುಭವಾದ ಕರ್ಮಗಳು ಯಾವುವೆಂಬುದನ್ನು ತಿಳಿದುಕೊ. ಶುಭವಾದ ಕಾಮನೆಗಳಿಂದ ನಿನ್ನ ಐಶ್ವರ್ಯವನ್ನು ಸತ್ಪುರುಷರಿಗೆ ದಾನಮಾಡು. ಅಶುಭಕರ್ಮಗಳನ್ನು ಪರಿತ್ಯಜಿಸು. ಆತ್ಮಜ್ಞಾನಿಯಾಗು. ಸರ್ವದಾ ಸಂತೃಪ್ತನಾಗಿರು. ಸ್ವಧರ್ಮದಲ್ಲಿಯೇ ಯಾವಾಗಲೂ ನಿರತನಾಗಿರು. ಹೀಗೆ ಮಾಡುತ್ತಾ ಕ್ಷತ್ರಿಯ ದೇಹವನ್ನು ಪರಿತ್ಯಜಿಸು. ಮರುಹುಟ್ಟಿನಲ್ಲಿ ನೀನು ಬ್ರಾಹ್ಮಣನಾಗುವೆ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ರಾಜಕುಮಾರನು ವ್ಯಾಸರು ಹೇಳಿದುದನ್ನು ಕೇಳಿ ಅವರ ಆಜ್ಞಾನುಸಾರವಾಗಿ ಪ್ರಜೆಗಳನ್ನು ಧರ್ಮದಿಂದ ಪರಿಪಾಲಿಸುತ್ತಿದ್ದನು. ಅನಂತರ ಪುನಃ ಆ ರಾಜಕುಮಾರನು ಕಾಡಿಗೆ ಹೋಗಿ ತಪಸ್ಸಿನಲ್ಲಿ ನಿರತನಾದನು. ಅತ್ಯಲ್ಪಕಾಲದಲ್ಲಿಯೇ ಹಿಂದೆ ಕೀಟವಾಗಿದ್ದ ಆ ಜೀವನು ಮರಣಹೊಂದಿ ಪ್ರಜಾಪಾಲನಧರ್ಮದಿಂದ ವಿಪ್ರತ್ವವನ್ನು ಪಡೆದನು.

ಕೀಟವಾಗಿದ್ದ ಆ ಜೀವನು ಬ್ರಾಹ್ಮಣಯೋನಿಯಲ್ಲಿ ಜನ್ಮವನ್ನು ತಾಳಿರುವುದನ್ನು ನೋಡಿ ಮಹಾಯಶೋವಂತರಾದ, ಮಹಾಪ್ರಾಜ್ಞರಾದ ಕೃಷ್ಣದ್ವೈಪಾಯನರು ಅವನ ಬಳಿಗೆ ಹೋಗಿ ಹೇಳಿದರು:

"ಶ್ರೀಮಂತನಾದ ಬ್ರಾಹ್ಮಣಶ್ರೇಷ್ಠನೇ! ಇನ್ನು ಮುಂದೆ ನೀನು ಯಾವುದೇ ಕಾರಣದಿಂದಲೂ ವ್ಯಥೆಪಡಬೇಡ. ಪುಣ್ಯಮಾಡಿದವನು

ಉತ್ತಮಯೋನಿಗಳಲ್ಲಿಯೂ, ಪಾಪಮಾಡಿದವನು ಪಾಪಯೋನಿಗಳಲ್ಲಿಯೂ ಹುಟ್ಟುತ್ತಾನೆ. ಮನುಷ್ಯನು ಎಂತಹ ಪಾಪಮಾಡುವನೋ–ಆ ಪಾಪಕ್ಕೆ ತಕ್ಕುದಾದ ಫಲವನ್ನೇ ಅನುಭವಿಸುತ್ತಾನೆ. ಕೀಟವಾಗಿದ್ದ ಜೀವನೇ! ಯಾವುದೇ ಕಾರಣದಿಂದಲೂ ನೀನು ಭಯದಿಂದ ವ್ಯಥೆಪಡಬೇಡ. ಅಜಾಗರೂಕತೆಯಿಂದ ಧರ್ಮವು ಲೋಪವಾದೀತೆಂಬ ಭಯವು ಯಾವಾಗಲೂ ನಿನ್ನ ಮನಸ್ಸಿನಲ್ಲಿರಲಿ. ಮನಸ್ಸಿನಲ್ಲಿ ಈ ಭಯವನ್ನಿಟ್ಟುಕೊಂಡು ಜಾಗರೂಕನಾಗಿರುತ್ತಾ ಉತ್ತಮವಾದ ಧರ್ಮವನ್ನು ಆಚರಿಸು.”

ಬ್ರಾಹ್ಮಣನಾಗಿ ಜನ್ಮತಾಳಿದ್ದ ಕೀಟವು ಹೇಳಿತು:

“ ಪೂಜ್ಯರೇ! ನಿಮ್ಮ ಅನುಗ್ರಹದಿಂದಾಗಿ ಒಂದು ಸುಖಸ್ಥಾನದಿಂದ ಇನ್ನೂ ಹೆಚ್ಚಿನ ಮತ್ತೊಂದು ಸುಖದ ಸ್ಥಾನವನ್ನು ಹೊಂದಿದೆನು. ಈ ಜನ್ಮದಲ್ಲಿ ಧರ್ಮಮೂಲವಾದ ಸಂಪತ್ತನ್ನು ಹೊಂದಿರುವ ನಾನು ಎಲ್ಲ ಪಾಪಗಳಿಂದಲೂ ಮುಕ್ತನಾಗಿರುವೆನು.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಸುದುರ್ಲಭವಾದ ಬ್ರಾಹ್ಮಣ್ಯವನ್ನು ಪಡೆದುಕೊಂಡಿದ್ದ ಆ ಕೀಟವು ಪೂಜ್ಯರಾದ ವ್ಯಾಸರು ಹೇಳಿದಂತೆ ಪೃಥ್ವಿಯನ್ನು ನೂರು ಯಜ್ಞಯೂಪಗಳಿಂದ ಅಂಕಿತವನ್ನಾಗಿ ಮಾಡಿತು. (ನೂರು ಯಜ್ಞಗಳನ್ನು ಮಾಡಿತು.). ಅನಂತರ ಆ ಬ್ರಾಹ್ಮಣನು ಬ್ರಹ್ಮವಿದರಲ್ಲಿಯೇ ಶ್ರೇಷ್ಠನಾಗಿ ಅವಸಾನಾನಂತರ ಬ್ರಹ್ಮಸಾಲೋಕ್ಯವನ್ನು ಹೊಂದಿದನು. ವ್ಯಾಸರ ಮಾತಿನಂತೆ ಆ ಕೀಟವು ಯಾವುದೇ ಯೋನಿಯಲ್ಲಿ ಅಥವಾ ವರ್ಣದಲ್ಲಿ ಹುಟ್ಟಿದರೂ ಆಯಾ ವರ್ಣದ ಧರ್ಮವನ್ನು ಪರಿಪಾಲಿಸುತ್ತಿದ್ದಿತು. ಅದರ ಫಲವಾಗಿ ಕೀಟವಾಗಿದ್ದ ಆ ಜೀವನು ಸನಾತನವಾದ ಬ್ರಹ್ಮಪದವಿಯನ್ನು ಪಡೆದುಕೊಂಡನು. ನಾನು ಹಿಂದೆ ಹೇಳಿದಂತೆ ಕೀಟವು ಕ್ಷತ್ರಿಯನಾಗಿ ಹುಟ್ಟಿದ್ದಾಗ ಕ್ಷತ್ರಧರ್ಮಾನುಸಾರವಾಗಿ ಪ್ರಜೆಗಳನ್ನು ಪರಿಪಾಲಿಸುತ್ತಿದ್ದು ಉತ್ತಮಗತಿಯನ್ನು ಪಡೆಯಿತು. ಅದರಂತೆಯೇ ನಿನ್ನೊಡನೆ ಯುದ್ಧಮಾಡಿದ ಕ್ಷತ್ರಿಯ ಶ್ರೇಷ್ಠರೆಲ್ಲರೂ ಸ್ವಧರ್ಮಾನುಸಾರವಾಗಿ ಪ್ರಭಾವಪೂರ್ಣವಾಗಿ ಯುದ್ಧಮಾಡಿ

ರಣಭೂಮಿಯಲ್ಲಿ ಹತರಾಗಿ ಪುಣ್ಯಮಯವಾದ ಸದ್ಗತಿಯನ್ನು ಹೊಂದಿರುತ್ತಾರೆ. ಆದುದರಿಂದ ನೀನು ಅವರ ವಿಷಯದಲ್ಲಿ ದುಃಖಿಸಬೇಡ"[೧]

೧೧೯ನೆಯ ಅಧ್ಯಾಯವು ಮುಗಿಯಿತು.

೧೨೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವ್ಯಾಸ-ಮೈತ್ರೇಯರ ಸಂವಾದ: ಕರ್ಮದ ರಹಸ್ಯ ಮತ್ತು ದಾನದ ಪ್ರಶಂಸೆ

ಯುಧಿಷ್ಠಿರನು ಹೇಳುತ್ತಾನೆ:

ವಿದ್ಯಾ ತಪಶ್ಚ ದಾನಂ ಚ ಕಿಮೇತೇಷಾಂ ವಿಶಿಷ್ಯತೇ ।
ಪೃಚ್ಛಾಮಿ ತ್ವಾಂ ಸತಾಂ ಶ್ರೇಷ್ಠಂ ತನ್ಮೇ ಬ್ರೂಹಿ ಪಿತಾಮಹ ॥೧॥

"ಸತ್ಪುರುಷರಲ್ಲಿ ಶ್ರೇಷ್ಠನಾದ ಪಿತಾಮಹನೇ! ವಿದ್ಯೆ, ತಪಸ್ಸು ಮತ್ತು ದಾನ–ಈ ಮೂರರಲ್ಲಿ ಯಾವುದು ಶ್ರೇಷ್ಠವಾದುದು? ಈ ವಿಷಯವನ್ನೀಗ ಪ್ರಶ್ನಿಸುತ್ತಿದ್ದೇನೆ. ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ಈ ವಿಷಯದಲ್ಲಿ ಹಿಂದೆ ಕೃಷ್ಣದ್ವೈಪಾಯನವ್ಯಾಸರಿಗೂ ಮತ್ತು ಮೈತ್ರೇಯಬ್ರಾಹ್ಮಣನಿಗೂ ನಡೆದ ಪುರಾತನವಾದ ಇತಿಹಾಸ ರೂಪವಾದ ಸಂವಾದವನ್ನು ಉದಾಹರಿಸುತ್ತಾರೆ.

ಕೃಷ್ಣದ್ವೈಪಾಯನರೊಮ್ಮೆ ಗುಪ್ತರೂಪದಲ್ಲಿ ಭೂಮಂಡಲದಲ್ಲಿ ಸಂಚರಿಸುತ್ತಾ ವಾರಣಾಸಿಗೆ ಬಂದರು. ಅಲ್ಲಿ [೨]ಸ್ವೈರಿಣೀಕುಲದಲ್ಲಿ (ಮುನಿ

---

[೧]ಕೀಟವಾಗಿದ್ದು ಬ್ರಾಹ್ಮಣತ್ವವನ್ನು ಪಡೆದವರೇ ಮೈತ್ರೇಯಮಹರ್ಷಿಗಳೆಂದು ಪ್ರಸಿದ್ಧರಾದರು. ಈ ವಿಷಯವು ವಿಷ್ಣುಪುರಾಣದಲ್ಲಿದೆ.

[೨]ಸ್ವೈರಿಣೀಕುಲವೆಂಬುದಕ್ಕೆ ವ್ಯಾಖ್ಯಾನಕಾರರು ಮುನಿಗಳ ಸಮೂಹವೆಂದು ಅರ್ಥಮಾಡಿರುತ್ತಾರೆ. **ಸ್ವಂ ಈರಯತಿ ಧರ್ಮಾನ್ ಪ್ರೇರಯತಿ ಸ್ವೈರಿಣೀ ಮುನಿಶ್ರೇಣೀ** ತಮ್ಮನ್ನು ಧರ್ಮದ ಕಡೆಗೆ ಪ್ರಚೋದಿಸಿಕೊಳ್ಳುವುದರಿಂದ ಸ್ವೈರಿಣೀ ಮುನಿಸಮೂಹ. ಯಾರ ಶಾಸನಕ್ಕೂ ಒಳಪಡದೆ ಯಥೇಚ್ಛವಾಗಿ ಸಂಚರಿಸುವ ಮುನಿಗಳ ಕುಲದಲ್ಲಿ-ಎಂದೂ ಅರ್ಥಮಾಡಬಹುದು. **ತಸ್ಯಾಃ ಕುಲೇ=ಗೃಹೇ-** ಮುನಿಮಂಡಲದ ಮನೆಯಲ್ಲಿ.

ಗಳ ಮಂಡಲವಿದ್ದ ಗೃಹದಲ್ಲಿ) ಮೈತ್ರೇಯನನ್ನು ಸಂಧಿಸಿದರು. ತನ್ನ ಸಮೀಪಕ್ಕೆ ಬಂದು ಕುಳಿತಿರುವ ಮುನಿಶ್ರೇಷ್ಠರು ವ್ಯಾಸರೇ ಎಂಬುದನ್ನು ನಿರ್ಧರಿಸಿದ ಮೈತ್ರೇಯನು ಅವರನ್ನು ಯಥೋಚಿತವಾಗಿ ಸತ್ಕರಿಸಿ ಶ್ರೇಷ್ಠವಾದ ಅನ್ನದಿಂದ ಭೋಜನಮಾಡಿಸಿದನು. ಸರ್ವರಿಂದಲೂ ಅಪೇಕ್ಷಿತವಾಗಿದ್ದ, ಎಲ್ಲ ಗುಣಗಳಿಂದಲೂ ಯುಕ್ತವಾಗಿದ್ದ, ಶ್ರೇಷ್ಠವಾದ ಆ ಅನ್ನವನ್ನು ಊಟಮಾಡಿ ಮಹಾತ್ಮರಾದ ವ್ಯಾಸರು ಪರಮಪ್ರೀತರಾಗಿ ಅಲ್ಲಿಂದ ಹೊರಡುವಾಗ ಮುಗುಳ್ನಗೆಯನ್ನು ಬೀರಿದರು. ನಸುನಗುತ್ತಿದ್ದ ವ್ಯಾಸರನ್ನು ನೋಡಿ ಮೈತ್ರೇಯನು ಪ್ರಶ್ನಿಸಿದನು: “ಮಹಾತ್ಮರೇ! ನಿಮ್ಮ ಈ ಮುಗುಳ್ನಗೆಗೆ ಕಾರಣವನ್ನು ಹೇಳಿರಿ. ಯಾವ ಕಾರಣದಿಂದ ಹೀಗೆ ನಗುತ್ತಿರುವಿರಿ? ನೀವಾದರೋ ಮಹಾತಪಸ್ವಿಗಳು. ಧೈರ್ಯಶಾಲಿಗಳು. ಮುಖದಲ್ಲಿ ತೋರಿಸಿಕೊಳ್ಳುವಷ್ಟು ಪ್ರಮೋದವು ನಿಮಗುಂಟಾಗಿದೆ. ವಿದ್ವಾಂಸರೇ! ಅಭಿವಾದನಪೂರ್ವಕವಾಗಿ ನಮಸ್ಕರಿಸಿ ಇದನ್ನು ಕೇಳುತ್ತಿದ್ದೇನೆ. ದಯಮಾಡಿ ತಮಗಾಗಿರುವ ಈ ಪ್ರಮೋದಕ್ಕೆ ಕಾರಣವನ್ನು ತಿಳಿಸಿರಿ.

ಆತ್ಮನಶ್ಚ ತಪೋಭಾಗ್ಯಂ ಮಹಾಭಾಗ್ಯಂ ತವೇಹ ಚ ।
ಪೃಥಗಾಚರತಸ್ತಾತ ಪೃಥಗಾತ್ಮಸುಖಾತ್ಮನೋಃ ।
ಅಲ್ಪಾನ್ತರಮಹಂ ಮನ್ಯೇ ವಿಶಿಷ್ಟಮಪಿ ಚಾನ್ವಯಾತ್ ॥೮॥

ನನ್ನ ತಪಸ್ಸಿನ ಭಾಗ್ಯದ ವಿಷಯವಾಗಿಯೂ, ನಿಮ್ಮ ಮಹಾಭಾಗ್ಯದ ವಿಷಯವಾಗಿಯೂ ನಾನು ನಿಮ್ಮನ್ನು ಪ್ರಶ್ನಿಸುತ್ತಿದ್ದೇನೆ. ಜೀವಾತ್ಮ-ಪರಮಾತ್ಮರ ಸ್ವರೂಪವನ್ನು ತಿಳಿದಿರುವ ಮತ್ತು ಜೀವನ್ಮುಕ್ತರಾಗಿರುವ ನಿಮಗೂ ನನಗೂ ಅಲ್ಪವಾದ ಅಂತರವಿರುವುದೆಂದು ನಾನು ಭಾವಿಸುತ್ತೇನೆ. ಮೇಲಾಗಿ ನೀವು ವಂಶದಿಂದಲೂ ನನಗಿಂತ ವಿಶಿಷ್ಟರಾಗಿರುವಿರಿ.”

ವ್ಯಾಸರು ಹೇಳುತ್ತಾರೆ:

ಅತಿಚ್ಛನ್ನಾತಿವಾದಾಭ್ಯಾಂ ಸ್ಮಯೋಽಯಂ ಸಮುಪಾಗತಃ ।
ಅಸತ್ಯಂ ವೇದವಚನಂ ಕಸ್ಮಾದ್ವೇದೋಽನೃತಂ ವದೇತ್ ॥೯॥

(ಅತಿಥಿಯನ್ನು ಬಹಳವಾಗಿ ಗೌರವಿಸಿ ಅತಿಥಿಯ ಇಚ್ಛಾನುಸಾರವಾಗಿ ಅವರನ್ನು ಸತ್ಕರಿಸುವುದಕ್ಕೆ ಅತಿಚ್ಛಂದ-ಎಂದು ಹೇಳುತ್ತಾರೆ. ಮಾತಿನ ಮೂಲಕವಾಗಿ ಅತಿಥಿಯನ್ನು ಗೌರವಿಸುವುದಕ್ಕೆ ಅತಿವಾದವೆಂದು ಹೇಳುತ್ತಾರೆ.)

"ನೀನು ಮಾಡಿದ ಅತಿಚ್ಛಂದ-ಅತಿವಾದಗಳಿಂದ, (ಮನಸ್ಸಿನಿಂದಲೂ-ಮಾತಿನಿಂದಲೂ ಮತ್ತು ಕಾರ್ಯತಃ ಮಾಡಿದ ಅತಿಥಿಸತ್ಕಾರದಿಂದ) ನನ್ನ ಮುಖದಲ್ಲಿ ಆನಂದಸೂಚಕವಾದ ಈ ಮುಗುಳ್ನಗೆಯು ಮೂಡಿಬಂದಿತು. (ದಾನದ ಮತ್ತು ಅತಿಥಿಸತ್ಕಾರದ ಮಹತ್ತ್ವವು ವೇದದಲ್ಲಿ ಪ್ರತಿಪಾದಿತ ವಾಗಿದೆ.) ವೇದವಚನವು ಅಸತ್ಯವು ಹೇಗಾಗುತ್ತದೆ? ವೇದವು ಸುಳ್ಳನ್ನೇಕೆ ಹೇಳುತ್ತದೆ?

ತ್ರೀಣ್ಯೇವತು ಪದಾನ್ಯಾಹುಃ ಪುರುಷಸ್ಯೋತ್ತಮಂ ವ್ರತಮ್ ।
ನ ದ್ರುಹ್ಯೇಚ್ಚೈವ ದದ್ಯಾಚ್ಚ ಸತ್ಯಂ ಚೈವ ಪರಂ ವದೇತ್ ॥೧೦॥

ವೇದಗಳು ಮನುಷ್ಯನಿಗೆ ಉತ್ತಮವಾದ ವ್ರತವನ್ನು ಮೂರೇ ವಾಕ್ಯಗಳಲ್ಲಿ ಹೇಳಿವೆ. ನ ದ್ರುಹ್ಯೇತ್-ಯಾವನಿಗೂ ದ್ರೋಹವನ್ನೆಸಗ ಬಾರದು. ದದ್ಯಾತ್-ದಾನಮಾಡಬೇಕು. ಸತ್ಯಂ ಚೈವ ಪರಂ ವದೇತ್-ಇತರರೊಡನೆ ಯಾವಾಗಲೂ ಸತ್ಯವನ್ನೇ ಹೇಳಬೇಕು.

ಇತಿ ವೇದೋಕ್ತಮೃಷಿಭಿಃ ಪುರಸ್ತಾತ್ಪರಿಕಲ್ಪಿತಮ್ ।
ಇದಾನೀಂ ಚೈವ ನಃ ಕೃತ್ಯಂ ಪುರಸ್ತಾಚ್ಚ ಪರಿಶ್ರುತಮ್ ॥೧೧॥

ವೇದೋಕ್ತವಾದ ಈ ವಾಕ್ಯಗಳನ್ನು ಹಿಂದೆಯೇ ಮುನಿಗಳು ಆಚರಣೆಗೆ ತಂದಿದ್ದರು. ನಾವೂ ಕೂಡ ಬಹಳ ಹಿಂದಿನಿಂದಲೂ ಈ ವಾಕ್ಯಗಳನ್ನು ಕೇಳುತ್ತಲೇ ಇದ್ದೇವೆ. ವೇದಗಳ ಈ ಆಜ್ಞೆಯನ್ನು ಇಂದೂ ಪರಿಪಾಲಿಸುವುದು ನಮ್ಮ ಮುಖ್ಯಕರ್ತವ್ಯವಾಗಿದೆ.

ಅಲ್ಪೋಽಪಿ ತಾದೃಶೋ ದಾಯೋ ಭವತ್ಯುತ ಮಹಾಫಲಃ ।
ತೃಷಿತಾಯ ಚ ತೇ ದತ್ತಂ ಹೃದಯೇನಾನಸೂಯತಾ ॥೧೨॥

ಶಾಸ್ತ್ರವಿಧಿಗೆ ಅನುಸಾರವಾಗಿ ಕೊಟ್ಟ ಅತ್ಯಲ್ಪದಾನವೂ ಮಹಾಫಲ

ವನ್ನು ಕೊಡುತ್ತದೆ. ನೀನು ಈರ್ಷ್ಯಾರಹಿತವಾದ ಮನಸ್ಸಿನಿಂದ ಹಸಿದು ಬಾಯಾರಿಬಂದ ನನಗೆ ಅನ್ನವನ್ನೂ ನೀರನ್ನೂ ಕೊಟ್ಟಿರುವೆ.

ತೃಷಿತಸ್ತೃಷಿತಾಯ ತ್ವಂ ದತ್ತ್ವೈತದ್ದರ್ಶನಂ ಮಮ ।
ಅಜೈಷೀರ್ಮಹತೋ ಲೋಕಾನ್ಮಹಾಯಜ್ಞೈರಿವ ಪ್ರಭೋ ॥೧೩॥

ಪ್ರಭುವೇ! ನಾನು ಹಸಿವು-ಬಾಯಾರಿಕೆಗಳಿಂದ ಬಹಳವಾಗಿ ಬಳಲಿದ್ದೆನು. ಹಸಿದುಬಂದ ನನಗೆ ಭೋಜನವಿಟ್ಟು ತೃಪ್ತಿಪಡಿಸಿರುವೆ. ಇದರಿಂದಲೇ ನೀನು–ಮಹಾಯಜ್ಞಗಳನ್ನು ಮಾಡಿ ಶ್ರೇಷ್ಠವಾದ ಲೋಕವನ್ನು ಹೊಂದುವಂತೆ–ಸರ್ವೋತ್ತಮವಾದ ಲೋಕಗಳನ್ನು ಪಡೆದುಕೊಂಡಿರುವೆ. ಇದನ್ನು ನಾನು ಪ್ರತ್ಯಕ್ಷವಾಗಿ ಕಾಣುತ್ತಿದ್ದೇನೆ.

ತತೋ ದಾನಪವಿತ್ರೇಣ ಪ್ರೀತೋಽಸ್ಮಿ ತಪಸೈವ ಚ ।
ಪುಣ್ಯಸ್ಯೈವ ಹಿ ತೇ ಸತ್ತ್ವಂ ಪುಣ್ಯಸ್ಯೈವ ಚ ದರ್ಶನಮ್ ॥೧೪॥

ಅನ್ನದಾನದ ಮೂಲಕವಾಗಿ ನೀನು ಮಾಡುತ್ತಿರುವ ಪವಿತ್ರವಾದ ತಪಸ್ಸಿನಿಂದ ನಾನು ಸುಪ್ರೀತನಾಗಿದ್ದೇನೆ. ನಿನ್ನ ಬಲವೂ ಪುಣ್ಯದ ಬಲವೇ ಆಗಿದೆ. ನಿನ್ನ ದರ್ಶನವೂ ಪುಣ್ಯದರ್ಶನವೇ ಆಗಿದೆ.

ಪುಣ್ಯಸ್ಯೈವಾಭಿಗನ್ಧಸ್ತೇ ಮನ್ಯೇ ಕರ್ಮವಿಧಾನಜಮ್ ।
ಅಧಿಕಂ ಮಾರ್ಜನಾತ್ತಾತ ತಥಾ ಚೈವಾನುಲೇಪನಾತ್ ॥೧೫॥

ನಿನ್ನ ಶರೀರದಿಂದ ಹೊರಸೂಸುತ್ತಿರುವ ಈ ಗಂಧವು ನಿನ್ನ ದಾನವೆಂಬ ಪುಣ್ಯಕರ್ಮದಿಂದಲೇ ಹುಟ್ಟಿರುವುದೆಂದೇ ನಾನು ಭಾವಿಸುತ್ತೇನೆ. ಈ ದಾನಕರ್ಮವು ತೀರ್ಥಗಳಲ್ಲಿ ಸ್ನಾನಮಾಡುವುದಕ್ಕಿಂತಲೂ ಮತ್ತು ವೇದವ್ರತಗಳನ್ನು ಸಮಾಪನಮಾಡುವುದಕ್ಕಿಂತಲೂ ಅಧಿಕಪುಣ್ಯವನ್ನು ಹೊಂದಿಸುವುದಾಗಿದೆ.

ಶುಭಂ ಸರ್ವಪವಿತ್ರೇಭ್ಯೋ ದಾನಮೇವ ಪರಂ ದ್ವಿಜ ।
ನೋ ಚೇತ್ಸರ್ವಪವಿತ್ರೇಭ್ಯೋ ದಾನಮೇವ ಪರಂ ಭವೇತ್ ॥೧೬॥

ಎಲ್ಲ ಪ್ರಕಾರವಾದ ಪವಿತ್ರಕರ್ಮಗಳಿಗಿಂತಲೂ ದಾನಕರ್ಮವೇ ಪರಮಪವಿತ್ರವಾದ ಮತ್ತು ಕಲ್ಯಾಣಕರವಾದ ಕರ್ಮವಾಗಿದೆ. ಒಂದು ವೇಳೆ

ದಾನಕರ್ಮವು ಎಲ್ಲ ಪವಿತ್ರಕರ್ಮಗಳಿಗಿಂತಲೂ ಶ್ರೇಷ್ಠವಲ್ಲದಿದ್ದರೆ-ವೇದಶಾಸ್ತ್ರಗಳಲ್ಲಿ ಇದರ ಪ್ರಶಂಸೆಯು ಬರುತ್ತಲೇ ಇರಲಿಲ್ಲ.

ಯಾನೀಮಾನ್ಯುತ್ತಮಾನೀಹ ವೇದೋಕ್ತಾನಿ ಪ್ರಶಂಸಸಿ ।
ತೇಷಾಂ ಶ್ರೇಷ್ಠತರಂ ದಾನಮಿತಿ ಮೇ ನಾತ್ರ ಸಂಶಯಃ ॥೧೭॥

ನೀನಿಲ್ಲಿ ಯಾವ ಉತ್ತಮವಾದ ವೇದೋಕ್ತಕರ್ಮಗಳನ್ನು ಪ್ರಶಂಸೆ ಮಾಡುವೆಯೋ–ಆ ಎಲ್ಲ ಕರ್ಮಗಳಲ್ಲೂ ಶ್ರೇಷ್ಠತರವಾದುದು ದಾನಕರ್ಮವೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

ದಾನಕೃದ್ಭಿಃ ಕೃತಃ ಪನ್ಥಾ ಯೇನ ಯಾನ್ತಿ ಮನೀಷಿಣಃ ।
ತೇ ಹಿ ಪ್ರಾಣಸ್ಯ ದಾತಾರಸ್ತೇಷು ಧರ್ಮಃ ಪ್ರತಿಷ್ಠಿತಃ ॥೧೮॥

ದಾನಿಗಳು ಯಾವ ಪುಣ್ಯಮಾರ್ಗವನ್ನು ಕಲ್ಪಿಸಿಕೊಟ್ಟಿರುವರೋ–ಆ ಮಾರ್ಗವನ್ನೇ ವಿದ್ವಾಂಸರು ಅನುಸರಿಸುತ್ತಾರೆ. ಅನ್ನದಾನಿಗಳೇ ಪ್ರಾಣ ದಾನಿಗಳು. ಅವರಲ್ಲಿಯೇ ಸನಾತನಧರ್ಮವು ಪ್ರತಿಷ್ಠಿತವಾಗಿದೆ.

ಯಥಾ ವೇದಾಃ ಸ್ವಧೀತಾಶ್ಚ ಯಥಾ ಚೇನ್ದ್ರಿಯಸಂಯಮಃ ।
ಸರ್ವತ್ಯಾಗೋ ಯಥಾ ಚೇಹ ತಥಾ ದಾನಮನುತ್ತಮಮ್ ॥೧೯॥

ಯಾವ ರೀತಿಯಲ್ಲಿ ವೇದಗಳ ಅಧ್ಯಯನ, ಇಂದ್ರಿಯಗಳ ಸಂಯಮ, ಸರ್ವಸ್ವತ್ಯಾಗ-ಇವುಗಳು ಉತ್ತಮಕರ್ಮಗಳೋ-ಅದೇ ರೀತಿಯಲ್ಲಿ ದಾನವೂ ಉತ್ತಮೋತ್ತಮವಾದ ಕರ್ಮವಾಗಿದೆ.

ತ್ವಂ ಹಿ ತಾತ ಮಹಾಬುದ್ಧೇ ಸುಖಮೇಷ್ಯಸಿ ಶೋಭನಮ್ ।
ಸುಖಾತ್ಸುಖತರಪ್ರಾಪ್ತಿಮಾಪ್ನುತೇ ಮತಿಮಾನ್ನರಃ ॥೨೦॥

ಮಹಾಬುದ್ಧಿಶಾಲಿಯೇ! ಈ ದಾನಕರ್ಮದಿಂದ ನೀನು ಉತ್ತಮ ಸುಖವನ್ನು ಪಡೆಯುವೆ. ಬುದ್ಧಿವಂತನಾದ ಮನುಷ್ಯನು ದಾನವನ್ನು ಮಾಡಿ ಉತ್ತರೋತ್ತರಸುಖವನ್ನು ಹೊಂದುತ್ತಾನೆ.

ತನ್ನಃ ಪ್ರತ್ಯಕ್ಷಮೇವೇದಮುಪಲಭ್ಯಮಸಂಶಯಮ್ ।
ಶ್ರೀಮನ್ತಃ ಪ್ರಾಪ್ನುವನ್ತ್ಯರ್ಥಾನ್ದಾನಂ ಯಜ್ಞಂ ತಥಾ ಸುಖಮ್ ॥೨೧॥

ದಾನಿಯು ಉತ್ತರೋತ್ತರವಾಗಿ ಸುಖವನ್ನು ಹೊಂದುವನೆಂಬುದು

ನಮಗೆ ಪ್ರತ್ಯಕ್ಷನಿದರ್ಶನವೇ ಆಗಿದೆ. ನಿಸ್ಸಂದೇಹವಾಗಿ ದಾನಿಯು ಮಹಾಸುಖವನ್ನು ಹೊಂದಿಯೇ ಹೊಂದುತ್ತಾನೆ. ಶ್ರೀಮಂತರಾದವರು ಐಶ್ವರ್ಯಗಳನ್ನು ಸಂಗ್ರಹಿಸುತ್ತಾರೆ. ಅನಂತರ ಅವರು ದಾನವನ್ನೂ ಯಜ್ಞವನ್ನೂ ಮಾಡಿ ಸುಖವನ್ನೂ ಅನುಭವಿಸುತ್ತಾರೆ.

ಸುಖಾದೇವ ಪರಂ ದುಃಖಂ ದುಃಖಾದಪ್ಯಪರಂ ಸುಖಮ್ ।
ದೃಶ್ಯತೇ ಹಿ ಮಹಾಪ್ರಾಜ್ಞ ನಿಯತಂ ವೈ ಸ್ವಭಾವತಃ ॥೨೨॥

ಮಹಾಪ್ರಾಜ್ಞನೇ! ಆದರೆ ಯಾರು ವಿಷಯಸುಖದಲ್ಲಿಯೇ ಆಸಕ್ತರಾಗಿರುವರೋ-ಅಂತಹವರಿಗೆ ಸುಖದಿಂದಲೇ ಮಹಾದುಃಖವು ಸಂಭವಿಸುತ್ತದೆ. ತಪಸ್ಸು, ವ್ರತಗಳು ಮೊದಲಾದುವುಗಳನ್ನು ಮಾಡುತ್ತಾ ಯಾರು ಕಷ್ಟಪಡುವರೋ—ಅಂತಹವರಿಗೆ ಆ ಕಷ್ಟದಿಂದಲೇ ಸುಖವು ಲಭಿಸುತ್ತದೆ. ಸುಖ-ದುಃಖಗಳು ಮನುಷ್ಯನ ಸ್ವಭಾವಾನುಗುಣವಾಗಿ ನಿಶ್ಚಿತವಾಗಿ ಕಂಡುಬರುತ್ತವೆ.

ತ್ರಿವಿಧಾನೀಹ ವೃತ್ತಾನಿ ನರಸ್ಯಾಹುರ್ಮನೀಷಿಣಃ ।
ಪುಣ್ಯಮನ್ಯತ್ಪಾಪಮನ್ಯನ್ನ ಪುಣ್ಯಂ ನ ಚ ಪಾಪಕಮ್ ॥೨೩॥

ಈ ಪ್ರಪಂಚದಲ್ಲಿ ಮನುಷ್ಯನಿಗೆ ಮೂರು ವಿಧವಾದ ಆಚರಣೆಗಳಿರುತ್ತವೆಯೆಂದು ವಿದ್ವಾಂಸರು ಹೇಳುತ್ತಾರೆ. ಪುಣ್ಯಮಯವಾದ ಆಚರಣೆ; ಪಾಪಮಯವಾದ ಆಚರಣೆ ಮತ್ತು ಪುಣ್ಯ-ಪಾಪಗಳೆರಡ ರಿಂದಲೂ ರಹಿತವಾದ ಆಚರಣೆ.

ನ ವೃತ್ತಂ ಮನ್ಯತೇ ತಸ್ಯ ಮನ್ಯತೇ ನ ಚ ಪಾತಕಮ್ ।
ತಥಾ ಸ್ವಕರ್ಮನಿವೃತ್ತಂ ನ ಪುಣ್ಯಂ ನ ಚ ಪಾಪಕಮ್ ॥೨೪॥

ಬ್ರಹ್ಮನಿಷ್ಠನಾದ ಪುರುಷನು ಯಾವುದೇ ಕರ್ಮವನ್ನು ಮಾಡಿದರೂ-ಅದನ್ನು ತಾನು ಮಾಡಿದೆನೆಂದು ಭಾವಿಸಿಕೊಳ್ಳುವುದಿಲ್ಲ. ಆದುದರಿಂದ ಅವನು ಸ್ವಕರ್ಮಜನಿತವಾದ ಪಾಪವನ್ನಾಗಲೀ—ಪುಣ್ಯವನ್ನಾಗಲೀ ಹೊಂದುವುದಿಲ್ಲ.

ಯಜ್ಞದಾನತಪಃಶೀಲಾ ನರಾ ವೈ ಪುಣ್ಯಕರ್ಮಿಣಃ ।
ಯೇಽಭಿದ್ರುಹ್ಯನ್ತಿ ಭೂತಾನಿ ತೇ ವೈ ಪಾಪಕೃತೋ ಜನಾಃ ॥೨೫॥

ಯಾರು ಯಜ್ಞ-ದಾನ-ತಪಃಶೀಲರಾಗಿರುವರೋ–ಅವರೇ ಪುಣ್ಯ ಕರ್ಮಿಗಳು. ಯಾರು ಪ್ರಾಣಿಗಳಿಗೆ ದ್ರೋಹವನ್ನೆಸಗುವರೋ–ಅವರೇ ಪಾಪಕರ್ಮಿಗಳು.

ದ್ರವ್ಯಾಣ್ಯಾದದತೇ ಚೈವ ದುಃಖಂ ಯಾನ್ತಿ ಪತನ್ತಿ ಚ ।
ತತೋಽನ್ಯತ್ಕರ್ಮ ಯತ್ಕಿಂಚಿನ್ನಪುಣ್ಯಂ ನ ಚ ಪಾತಕಮ್ ॥೨೯॥

ಯಾರು ಇತರರ ದ್ರವ್ಯವನ್ನು ಅಪಹರಿಸುವರೋ–ಅವರು ದುಃಖಕ್ಕೊಳಗಾಗುತ್ತಾರೆ ಮತ್ತು ಅವಸಾನಾನಂತರದಲ್ಲಿ ನರಕದಲ್ಲಿಯೂ ಬೀಳುತ್ತಾರೆ. ಪುಣ್ಯಕರ್ಮ ಮತ್ತು ಪಾಪಕರ್ಮ ಇವೆರಡಕ್ಕಿಂತಲೂ ಬೇರೆ ಯಾದುದು ಮತ್ತೊಂದು ಉಂಟು. ಅದು ಜ್ಞಾನಸ್ಥಿತಿ.

ರಮಸ್ವೈಧಸ್ವ ಮೋದಸ್ವ ದೇಹಿ ಚೈವ ಯಜಸ್ವ ಚ ।
ನ ತ್ವಾಮಭಿಭವಿಷ್ಯನ್ತಿ ವೈದ್ಯಾ ನ ಚ ತಪಸ್ವಿನಃ ॥೨೮॥

ನೀನು ಆನಂದವಾಗಿರು. ಉನ್ನತಿಯನ್ನು ಹೊಂದು. ಆಮೋದದಿಂದಿರು. ದಾನಮಾಡು. ಯಜ್ಞಮಾಡು. ಹೀಗೆ ಮಾಡುತ್ತಿದ್ದರೆ ವಿದ್ವಾಂಸರಾಗಲೀ, ತಪಸ್ವಿಗಳಾಗಲೀ ನಿನ್ನನ್ನು ತಿರಸ್ಕರಿಸುವುದಿಲ್ಲ. (ವಿದ್ವಾಂಸರೂ, ತಪಸ್ವಿಗಳೂ ನಿನ್ನನ್ನು ಪುರಸ್ಕರಿಸುತ್ತಾರೆ.)"

೧೨೦ನೆಯ ಅಧ್ಯಾಯವು ಮುಗಿಯಿತು.

೧೨೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವ್ಯಾಸ-ಮೈತ್ರೇಯರ ಸಂವಾದ: ಸದಾಚಾರಿಯಾದ ಬ್ರಾಹ್ಮಣನಿಗೆ ಅನ್ನದಾನಮಾಡುವುದರ ಪ್ರಶಂಸೆ

ಭೀಷ್ಮನು ಹೇಳುತ್ತಾನೆ:

ಏವಮುಕ್ತಃ ಪ್ರತ್ಯುವಾಚ ಮೈತ್ರೇಯಃ ಕರ್ಮಪೂಜಕಃ ।
ಅತ್ಯನ್ತಶ್ರೀಮತಿ ಕುಲೇ ಜಾತಃ ಪ್ರಾಜ್ಞೋ ಬಹುಶ್ರುತಃ ॥೧॥

"ಯುಧಿಷ್ಠಿರ! ವ್ಯಾಸರು ಹೀಗೆ ಹೇಳಲಾಗಿ ಕರ್ಮಠನಾದ, ಸಂಪದ್ಭರಿತವಾದ ಕುಲದಲ್ಲಿ ಹುಟ್ಟಿದ್ದ, ಪ್ರಾಜ್ಞನಾದ, ಅನೇಕಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಪಡೆದಿದ್ದ ಮೈತ್ರೇಯನು ಹೇಳಿದನು:

"ಮಹಾಪ್ರಾಜ್ಞರೇ! ನೀವು ಹೇಗೆ ಹೇಳಿದಿರೋ ಅದು ಹಾಗೆಯೇ ಸರಿ. ಇದರಲ್ಲಿ ಸಂಶಯವೇ ಇಲ್ಲ. ತಾವು ಅಪ್ಪಣೆಕೊಟ್ಟರೆ ನಾನೂ ಈ ವಿಷಯದಲ್ಲಿ ನನಗೆ ತಿಳಿದಿರುವ ಸ್ವಲ್ಪ ವಿಷಯವನ್ನು ಹೇಳುತ್ತೇನೆ."

ವ್ಯಾಸಃ:

"ಮಹಾಪ್ರಾಜ್ಞನೇ! ಮೈತ್ರೇಯ! ನೀನು ಯಾವು-ಯಾವುದನ್ನು ಎಷ್ಟೆಷ್ಟು, ಯಾವ ಯಾವ ರೀತಿಯಲ್ಲಿ ಹೇಳಲು ಬಯಸುವೆಯೋ– ಹಾಗೆಯೇ ಹೇಳು. ನಾನು ನಿನ್ನ ಮಾತುಗಳನ್ನು ಕೇಳುತ್ತೇನೆ."

ಮೈತ್ರೇಯಃ:

ನಿರ್ದೋಷಂ ನಿರ್ಮಲಂ ಚೈವ ವಚನಂ ದಾನಸಂಹಿತಮ್ ।
ವಿದ್ಯಾತಪೋಭ್ಯಾಂ ಹಿ ಭವಾನ್ಭಾವಿತಾತ್ಮಾ ನ ಸಂಶಯಃ ॥೪॥

"ಪೂಜ್ಯರೇ! ನೀವು ದಾನದ ವಿಷಯವಾಗಿ ಹೇಳಿರುವ ಮಾತು ನಿರ್ಮಲವಾದುದು ಮತ್ತು ದೋಷರಹಿತವಾದುದು. ನೀವು, ವಿದ್ಯೆ ಮತ್ತು ತಪಸ್ಸುಗಳಿಂದ ಪರಮಪವಿತ್ರವಾದ ಅಂತಃಕರಣವುಳ್ಳವರಾಗಿರುವಿರಿ. ಇದರಲ್ಲಿ ಸಂಶಯವಿಲ್ಲ.

ಭವತೋ ಭಾವಿತಾತ್ಮತ್ವಾಲ್ಲಾಭೋಽಯಂ ಸುಮಹಾನ್ಮಮ ।
ಭೂಯೋಬುದ್ಧ್ಯಾನುಪಶ್ಯಾಮಿ ಸುಸಮೃದ್ಧತಪಾ ಇವ ॥೫॥

ತಾವು ಶುದ್ಧಾಂತಃಕರಣರಾಗಿರುವುದರಿಂದ ತಮ್ಮ ಆಗಮನವು ನನಗೆ ಅತ್ಯಂತಲಾಭದಾಯಕವಾಗಿದೆ. ಸುಸಮೃದ್ಧವಾದ ತಪೋಬಲಯುಕ್ತನಾದ ಮಹರ್ಷಿಯು ಅಂತರ್ದೃಷ್ಟಿಯಿಂದ ವಿಷಯಗಳನ್ನು ತಿಳಿಯುವಂತೆ–ನಾನು ನನ್ನ ಬುದ್ಧಿಯ ಮೂಲಕವಾಗಿ ಎಲ್ಲವನ್ನೂ ಕಾಣುತ್ತಿದ್ದೇನೆ.

ಅಪಿ ನೋ ದರ್ಶನಾದೇವ ಭವತೋಽಭ್ಯುದಯೋ ಭವೇತ್ ।
ಮನ್ಯೇ ಭವತ್ಪ್ರಸಾದೋಽಯಂ ತದ್ಧಿ ಕರ್ಮ ಸ್ವಭಾವತಃ ॥೬॥

ತಮ್ಮಂತಹ ವಿದ್ವಾಂಸರ ಮತ್ತು ತಪಸ್ವಿಗಳ ದರ್ಶನಮಾತ್ರದಿಂದಲೇ ನಮ್ಮ ಅಭ್ಯುದಯ (ಏಳಿಗೆ) ವಾಗುತ್ತದೆ. ತಮ್ಮ ಕೃಪೆಯಿಂದಲೇ ನನಗೆ ತಮ್ಮ ದರ್ಶನವು ಲಭಿಸಿತೆಂದು ಭಾವಿಸಿದ್ದೇನೆ. ಈ ಅನ್ನದಾನಕರ್ಮವೂ ತಮ್ಮ ಕೃಪೆಯಿಂದಲೇ ಸ್ವಭಾವಸಿದ್ಧವಾದಂತೆ ನಡೆಯುತ್ತಿದೆ.

ತಪಃ ಶ್ರುತಂ ಚ ಯೋನಿಶ್ಚಾಪ್ಯೇತದ್ಬ್ರಾಹ್ಮಣ್ಯಕಾರಣಮ್ ।
ತ್ರಿಭಿರ್ಗುಣೈಃ ಸಮುದಿತಸ್ತತೋ ಭವತಿ ವೈ ದ್ವಿಜಃ ॥೭॥

ಬ್ರಾಹ್ಮಣನಾಗಲು ಮೂರು ಕಾರಣಗಳಿವೆ. ತಪಸ್ಸು, ಶಾಸ್ತ್ರಜ್ಞಾನ ಮತ್ತು ವಿಶುದ್ಧವಾದ ಬ್ರಾಹ್ಮಣಕುಲದಲ್ಲಿ ಜನ್ಮ–ಈ ಮೂರು ಗುಣಗಳಿಂದ ಯಾವನು ಕೂಡಿರುವನೋ–ಅವನು ಬ್ರಾಹ್ಮಣನಾಗುತ್ತಾನೆ.

ಅಸ್ಮಿಂಸ್ತೃಪ್ತೇ ಚ ತೃಪ್ಯನ್ತೇ ಪಿತರೋ ದೈವತಾನಿ ಚ ।
ನ ಹಿ ಶ್ರುತವತಾಂ ಕಿಂಚಿದಧಿಕಂ ಬ್ರಾಹ್ಮಣಾದೃತೇ ॥೮॥

ಈ ಮೂರು ಗುಣಗಳಿಂದ ಯುಕ್ತನಾದ ಬ್ರಾಹ್ಮಣನು ತೃಪ್ತನಾದರೆ ದೇವತೆಗಳೂ ಮತ್ತು ಪಿತೃಗಳೂ ತೃಪ್ತರಾಗುತ್ತಾರೆ. ವಿದ್ವಾಂಸರಿಗೆ ಬ್ರಾಹ್ಮಣನನ್ನು ಬಿಟ್ಟು ಅವನಿಗಿಂತಲೂ ಅಧಿಕನಾದವನು (ಪವಿತ್ರನಾದವನು) ಅಥವಾ ಅಧಿಕವಾದ (ಪವಿತ್ರವಾದ) ವಸ್ತುವು ಬೇರೆ ಯಾವುದೂ ಇಲ್ಲ.

ಅನ್ಧಂ ಸ್ಯಾತ್ತಮ ಏವೇದಂ ನ ಪ್ರಜ್ಞಾಯೇತ ಕಿಂಚನ ।
ಚಾತುರ್ವರ್ಣ್ಯಂ ನ ವರ್ತೇತ ಧರ್ಮಾಧರ್ಮಾವೃತಾನೃತೇ ॥೯॥

ಒಂದು ವೇಳೆ ಅಂತಹ ತ್ರಿಗುಣಯುಕ್ತನಾದ ಬ್ರಾಹ್ಮಣನೇ ಇರದಿದ್ದರೆ–ಈ ಜಗತ್ತು ಗಾಢಾಂಧಕಾರದಲ್ಲಿ ಮುಚ್ಚಿಹೋಗಿಬಿಡುತ್ತಿದ್ದಿತು. ಯಾರಿಗೂ ಯಾವ ವಿಷಯವೂ ತಿಳಿಯುತ್ತಲೇ ಇರಲಿಲ್ಲ. ಚಾತುರ್ವರ್ಣ್ಯವಾಗಲೀ, ಧರ್ಮಾಧರ್ಮಗಳಾಗಲೀ, ಸತ್ಯಾಸತ್ಯಗಳಾಗಲೀ ಯಾವುದೂ ಇರುತ್ತಿರಲಿಲ್ಲ.

ಯಥಾ ಹಿ ಸುಕೃತೇ ಕ್ಷೇತ್ರೇ ಫಲಂ ವಿನ್ದತಿ ಮಾನವಃ ।
ಏವಂ ದತ್ತ್ವಾ ಶ್ರುತವತಿ ಫಲಂ ದಾತಾ ಸಮಶ್ನುತೇ ॥೧೦॥

ಯಾವ ರೀತಿಯಲ್ಲಿ ಮನುಷ್ಯನು ಉತ್ತು ಹಸನಾಗಿ ಮಾಡಿರುವ ಭೂಮಿಯಲ್ಲಿ ಬೀಜವನ್ನು ಬಿತ್ತಿ ಫಲವನ್ನು ಪಡೆದುಕೊಳ್ಳುವನೋ– ಅದೇ ರೀತಿಯಲ್ಲಿ ಶಾಸ್ತ್ರಪಾರಂಗತನಾದ, ತಪಸ್ವಿಯಾದ ಬ್ರಾಹ್ಮಣನಿಗೆ ದಾನವನ್ನು ಕೊಟ್ಟ ದಾನಿಯು ಮಹಾಫಲವನ್ನು ಹೊಂದುತ್ತಾನೆ.

ಬ್ರಾಹ್ಮಣಶ್ಚೇನ್ನ ವಿನ್ದೇತ ಶ್ರುತವೃತ್ತೋಪಸಂಹಿತಃ ।
ಪ್ರತಿಗ್ರಹೀತಾ ದಾನಸ್ಯ ಮೋಘಂ ಸ್ಯಾದ್ಧನಿನಾಂ ಧನಮ್ ॥೧೧॥

ವಿದ್ಯೆಯಿಂದಲೂ ಸದಾಚಾರದಿಂದಲೂ ಸಂಪನ್ನನಾದ, ದಾನವನ್ನು ಪ್ರತಿಗ್ರಹಿಸಲು ಅಧಿಕಾರಿಯಾದ ಬ್ರಾಹ್ಮಣನು ದಾನವನ್ನು ಪಡೆಯದಿದ್ದರೆ ಐಶ್ವರ್ಯವಂತನಲ್ಲಿರುವ ಧನವು ವ್ಯರ್ಥವಾಗಿ ಹೋಗುತ್ತದೆ.

ಅದನ್ನವಿದ್ವಾನ್ಹನ್ತ್ಯನ್ನಮದ್ಯಮಾನಂ ಚ ಹನ್ತಿ ತಮ್ ।
ತಂ ಚಾನ್ನಂ ಪಾತಿ ಯಶ್ಚಾನ್ನಂ ಸ ಹನ್ತಾ ಹನ್ಯತೇಽಬುಧಃ ॥೧೨॥

ಮೂರ್ಖನಾದವನು ಇತರರಿಗೆ ಸೇರಬೇಕಾದ ಅನ್ನವನ್ನು ಊಟ ಮಾಡಿದರೆ ಆ ಅನ್ನವೇ ವ್ಯರ್ಥವಾಗಿ ಹೋಗುತ್ತದೆ. (ಮೂರ್ಖನಿಗೆ ಅನ್ನದಾನಮಾಡುವುದರಿಂದ ದಾನಿಗೆ ಯಾವ ಫಲವೂ ಲಭಿಸುವುದಿಲ್ಲ.) ಆ ಅನ್ನವು–ಅದನ್ನು ಭಕ್ಷಿಸುವ ಮೂರ್ಖನನ್ನೂ ವಿನಾಶಗೊಳಿಸುತ್ತದೆ. ಸತ್ಪಾತ್ರನು ಊಟಮಾಡಿದ ಅನ್ನವು ಸಾರ್ಥಕವಾಗುವುದಲ್ಲದೇ ಅನ್ನದಾನಿಯನ್ನೂ ಉದ್ಧರಿಸುತ್ತದೆ. ಸತ್ಪಾತ್ರನನ್ನೂ ರಕ್ಷಿಸುತ್ತದೆ. ಮೂರ್ಖನು ಯಾವ ದಾನದ ಫಲವನ್ನು ವಿನಾಶಮಾಡುವನೋ–ಆ ದಾನವೇ ದಾನಪಡೆದ ಮೂರ್ಖನನ್ನೂ ವಿನಾಶಮಾಡುತ್ತದೆ.

ಪ್ರಭುರ್ಹ್ಯನ್ನಮದನ್ವಿದ್ವಾನ್ಪುನರ್ಜನಯತೀಶ್ವರಃ ।
ಸ ಚಾನ್ನಾಜ್ಜಾಯತೇ ತಸ್ಮಾತ್ಸೂಕ್ಷ್ಮ ಏಷ ವ್ಯತಿಕ್ರಮಃ ॥೧೩॥

ಭೋಜನವನ್ನು ಮಾಡುವ, ಪ್ರಭಾವ ಮತ್ತು ಶಕ್ತಿಯಿಂದ ಸಂಪನ್ನನಾದ, ವಿದ್ವಾಂಸನಾದ ಬ್ರಾಹ್ಮಣನು ಪುನಃ ಅನ್ನವನ್ನು ಉತ್ಪಾದಿಸುತ್ತಾನೆ. (ಅಂತಹ ಬ್ರಾಹ್ಮಣನು ಊಟಮಾಡುವುದರಿಂದ ಆ ಮನೆಯಲ್ಲಿ ಅನ್ನಸಮೃದ್ಧಿಯಿರುತ್ತದೆ.) ಆದರೆ ವೃಷ್ಟೇರನ್ನಂ ತತಃ ಪ್ರಜಾಃ ಎಂಬ ಉಕ್ತಿಗೆ ಅನುಸಾರವಾಗಿ ವೃಷ್ಟಿಯಿಂದ ಅನ್ನವೂ ಅನ್ನದಿಂದ ಪ್ರಜೆಗಳೂ ಅರ್ಥಾತ್ ಆ ಬ್ರಾಹ್ಮಣನೂ ಹುಟ್ಟುವುದಾದರೂ ಬ್ರಾಹ್ಮಣನಿಂದ ಪುನಃ ಅನ್ನವು ಹುಟ್ಟುವುದೆಂಬ ಈ ವ್ಯತಿಕ್ರಮವು ಅತಿ ಸೂಕ್ಷ್ಮವಾದುದು ಮತ್ತು ತಿಳಿಯಲು ಕಷ್ಟಸಾಧ್ಯವಾದುದು.

ಯದೇವ ದದತಃ ಪುಣ್ಯಂ ತದೇವ ಪ್ರತಿಗೃಹ್ಣತಃ ।
ನ ಹ್ಯೇಕಚಕ್ರಂ ವರ್ತೇತ ಇತ್ಯೇವಮೃಷಯೋ ವಿದುಃ ॥೧೪॥

ದಾನವನ್ನು ಮಾಡುವವನಿಗೆ (ದಾನಪಡೆಯುವವನು ಸತ್ಪಾತ್ರನಾಗಿದ್ದರೆ) ಯಾವ ಪುಣ್ಯವು ಲಭಿಸುವುದೋ–ಅದೇ ಪುಣ್ಯವು ಪ್ರತಿಗ್ರಹ

ಮಾಡುವವನಿಗೂ ಸಿಕ್ಕುತ್ತದೆ. ಒಂದೇ ಚಕ್ರದಿಂದ ಗಾಡಿಯು ಮುಂದೆ ಹೋಗಲಾರದು. ಅದರಂತೆ ಸತ್ಪಾತ್ರನಾದ ಪ್ರತಿಗ್ರಾಹಿಯು ಸಿಕ್ಕದಿದ್ದರೆ ಮಾಡಿದ ದಾನವು ಸಫಲವಾಗುವುದಿಲ್ಲ–ಎಂದು ಋಷಿಗಳು ತಿಳಿಯುತ್ತಾರೆ.

ಯತ್ರ ವೈ ಬ್ರಾಹ್ಮಣಾಃ ಸನ್ತಿ ಶ್ರುತವೃತ್ತೋಪಸಂಹಿತಾಃ ।
ತತ್ರ ದಾನಫಲಂ ಪುಣ್ಯಮಿಹ ಚಾಮುತ್ರ ಚಾಶ್ನುತೇ ॥೧೫॥

ಎಲ್ಲಿ ಶಾಸ್ತ್ರಜ್ಞರಾದ ಸದಾಚಾರಪರಾಯಣರಾದ ಬ್ರಾಹ್ಮಣರಿರುವರೋ–ಅಲ್ಲಿ ಕೊಡುವ ದಾನದ ಫಲವನ್ನು ದಾನಿಯು ಇಹ-ಪರಗಳೆರಡರಲ್ಲಿಯೂ ಉಪಭೋಗಿಸುತ್ತಾನೆ.

ಯೋ ಯೋನಿಶುದ್ಧಾಃ ಸತತಂ ತಪಸ್ಯಭಿರತಾ ಭೃಶಮ್ ।
ದಾನಾಧ್ಯಯನಸಂಪನ್ನಾಸ್ತೇ ವೈ ಪೂಜ್ಯತಮಾಃ ಸದಾ ॥೧೬॥

ಯಾರು ಶುದ್ಧವಾದ ಕುಲದಲ್ಲಿ ಹುಟ್ಟಿರುವರೋ, ಯಾವಾಗಲೂ ತಪಸ್ಸಿನಲ್ಲಿಯೇ ನಿರತರಾಗಿರುವರೋ, ದಾನಪರಾಯಣರೋ, ವೇದಾಧ್ಯಯನನಿರತರೋ–ಅಂತಹ ಬ್ರಾಹ್ಮಣರು ಪೂಜ್ಯತಮರೆಂದು ತಿಳಿಯಬೇಕು.

ತೈರ್ಹಿ ಸದ್ಭಿಃ ಕೃತಃ ಪನ್ಥಾಸ್ತೇನ ಯಾತೋ ನ ಮುಹ್ಯತಿ ।
ತೇ ಹಿ ಸ್ವರ್ಗಸ್ಯ ನೇತಾರೋ ಯಜ್ಞವಾಹಾಃ ಸನಾತನಾಃ ॥೧೭॥

ಅಂತಹ ಸತ್ಪುರುಷರು ಯಾವ ಧರ್ಮಮಾರ್ಗವನ್ನು ನಿರ್ಮಾಣ ಮಾಡಿರುವರೋ–ಆ ಮಾರ್ಗದ ಮೂಲಕವಾಗಿ ಹೋಗುವವನು ಯಾವುದೇ ಕಾರಣದಿಂದಲೂ ಮೋಹಪರವಶನಾಗುವುದಿಲ್ಲ. ಅಂತಹ ಸತ್ಪುರುಷರೇ ಯಜ್ಞಗಳನ್ನು ನಿರ್ವಹಿಸುವವರೂ–ಮನುಷ್ಯನನ್ನು ಸ್ವರ್ಗಕ್ಕೆ ಒಯ್ಯುವ ಸನಾತನಿಗಳೂ ಆಗುವರು.”

೧೨೧ನೆಯ ಅಧ್ಯಾಯವು ಮುಗಿಯಿತು.

೧೨೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವ್ಯಾಸ-ಮೈತ್ರೇಯರ ಸಂವಾದ-ತಪಸ್ಸಿನ ಪ್ರಶಂಸೆ: ಗೃಹಸ್ಥನ ಕರ್ತವ್ಯಗಳ ನಿರ್ದೇಶನ.

ಭೀಷ್ಮನು ಹೇಳುತ್ತಾನೆ:

ಏವಮುಕ್ತಃ ಸ ಭಗವಾನ್ಮೈತ್ರೇಯಂ ಪ್ರತ್ಯಭಾಷತ ।
ದಿಷ್ಟ್ಯೈವಂ ತ್ವಂ ವಿಜಾನಾಸಿ ದಿಷ್ಟ್ಯಾ ತೇ ಬುದ್ಧಿರೀದೃಶೀ ॥೧॥

"ಯುಧಿಷ್ಠಿರ! ಮೈತ್ರೇಯನು ಹೀಗೆ ಹೇಳಿದನಂತರ ವ್ಯಾಸರು ಅವನಿಗೆ ಈ ಮಾತುಗಳನ್ನು ಹೇಳಿದರು: "ಮೈತ್ರೇಯನೇ! ಭಾಗ್ಯದ ಕಾರಣದಿಂದ ನೀನು ಈ ಎಲ್ಲ ವಿಷಯಗಳನ್ನೂ ಹೀಗೆಯೇ ತಿಳಿದುಕೊಂಡಿರುವೆ. ಭಾಗ್ಯದ ಕಾರಣದಿಂದಲೇ ನಿನಗೆ ಇಂತಹ ಬುದ್ಧಿಯು ಉಂಟಾಗಿದೆ.

ಲೋಕೋ ಹ್ಯಾರ್ಯಗುಣಾನೇವ ಭೂಯಿಷ್ಠಂ ತು ಪ್ರಶಂಸತಿ ।
ರೂಪಮಾನವಯೋಮಾನಶ್ರೀಮಾನಾಶ್ಚಾಪ್ಯಸಂಶಯಮ್ ।
ದಿಷ್ಟ್ಯಾ ನಾಭಿಭವನ್ತಿ ತ್ವಾಂ ದೈವಸ್ತೇಯಮನುಗ್ರಹಃ ॥೨॥

ಲೋಕದ ಜನರು ಉತ್ತಮಗುಣಶಾಲಿಯಾದ ಮನುಷ್ಯರನ್ನೇ ಯಾವಾಗಲೂ ಪ್ರಶಂಸೆಮಾಡುತ್ತಾರೆ. ಭಾಗ್ಯವಶದಿಂದ ರೂಪ, ವಯಸ್ಸು ಮತ್ತು ಸಂಪತ್ತುಗಳ ಅಭಿಮಾನವು ನಿನ್ನ ಮೇಲೆ ಯಾವ ವಿಧವಾದ ಪ್ರಭಾವವನ್ನೂ ಬೀರಿರುವುದಿಲ್ಲ. ಇದು ನಿಶ್ಚಯವಾಗಿಯೂ ದೇವತೆಗಳ ಅನುಗ್ರಹವೇ ಆಗಿದೆ. ಇದರಲ್ಲಿ ಯಾವ ಸಂಶಯವೂ ಇಲ್ಲ.

ಯತ್ತೇ ಭೃಶತರಂ ದಾನಾದ್ವರ್ತಯಿಷ್ಯಾಮಿ ತಚ್ಛೃಣು ।
ಯಾನೀಹಾಗಮಶಾಸ್ತ್ರಾಣಿ ಯಾಶ್ಚ ಕಾಶ್ಚಿತ್ಪ್ರವೃತ್ತಯಃ ॥೩॥
ತಾನಿ ವೇದಂ ಪುರಸ್ಕೃತ್ಯ ಪ್ರವೃತ್ತಾನಿ ಯಥಾಕ್ರಮಮ್ ॥೪॥

ನಾನೀಗ ದಾನಕ್ಕಿಂತಲೂ ಉತ್ತಮವಾದ ಧರ್ಮವನ್ನು ಹೇಳುತ್ತೇನೆ, ಕೇಳು. ಈ ಜಗತ್ತಿನಲ್ಲಿ ಎಷ್ಟು ಶಾಸ್ತ್ರಗಳಿವೆಯೋ, ಎಷ್ಟು ಬಗೆಯಾದ ಪ್ರವೃತ್ತಿಗಳಿವೆಯೋ–ಅವೆಲ್ಲವೂ ವೇದವನ್ನೇ ಪುರಸ್ಕರಿಸಿ ಯಥಾಕ್ರಮವಾಗಿ ಪ್ರಚಲಿತವಾಗಿವೆ.

ಅಹಂ ದಾನಂ ಪ್ರಶಂಸಾಮಿ ಭವಾನಪಿ ತಪಃಶ್ರುತೇ ।
ತಪಃ ಪವಿತ್ರಂ ವೇದಸ್ಯ ತಪಃ ಸ್ವರ್ಗಸ್ಯ ಸಾಧನಮ್ ॥೫॥

ನಾನು ದಾನವನ್ನು ಪ್ರಶಂಸೆಮಾಡುತ್ತೇನೆ. ನೀನು ತಪಸ್ಸನ್ನೂ ಮತ್ತು ಶಾಸ್ತ್ರಜ್ಞಾನವನ್ನೂ ಪ್ರಶಂಸಿಸುವೆ. ತಪಸ್ಸು ಪವಿತ್ರವಾದುದು. ಸ್ವರ್ಗಕ್ಕೆ ಸಾಧನಭೂತವಾದುದು. ತಪಸ್ಸು ವೇದಕ್ಕೆ ಆವಶ್ಯಕವಾದುದು. ವೇದವು ತಪೋರೂಪವೂ ಆಗಿದೆ.

ತಪಸಾ ಮಹದಾಪ್ನೋತಿ ವಿದ್ಯಯಾ ಚೇತಿ ನಃ ಶ್ರುತಮ್ ।
ತಪಸೈವ ಚಾಪನುದೇದ್ಯಚ್ಚಾನ್ಯದಪಿ ದುಷ್ಕೃತಮ್ ॥೬॥

ತಪಸ್ಸಿನಿಂದಲೂ ಮತ್ತು ವೇದವಿದ್ಯೆಯಿಂದಲೂ ಮನುಷ್ಯನು ಮಹತ್ತ್ವವನ್ನು ಪಡೆಯುವನೆಂದು ನಾವು ಕೇಳಿದ್ದೇವೆ. ನಾನಾವಿಧವಾದ ಪಾಪಗಳನ್ನೂ ತಪಸ್ಸಿನಿಂದಲೇ ಹೋಗಲಾಡಿಸಿಕೊಳ್ಳಬಹುದು.

ಯದ್ಯದ್ಧಿ ಕಿಂಚಿತ್ಸಂಧಾಯ ಪುರುಷಸ್ತಪ್ಯತೇ ತಪಃ ।
ಸರ್ವಮೇತದವಾಪ್ನೋತಿ ವಿದ್ಯಯಾ ಚೇತಿ ನಃ ಶ್ರುತಮ್ ॥೭॥

ಯಾವ ಯಾವ ಉದ್ದೇಶಗಳನ್ನಿಟ್ಟುಕೊಂಡು ಮನುಷ್ಯನು ತಪಸ್ಸಿನಲ್ಲಿ ತೊಡಗುವನೋ–ಆ ಎಲ್ಲ ಉದ್ದೇಶಗಳನ್ನೂ ಅವನು ತಪಸ್ಸಿನಿಂದಲೂ ಮತ್ತು ವೇದಾಧ್ಯಯನದಿಂದಲೂ ಪಡೆಯುವನೆಂದು ನಾವು ಕೇಳಿದ್ದೇವೆ.

ದುರನ್ವಯಂ ದುಷ್ಪ್ರಧರ್ಷಂ ದುರಾಪಂ ದುರತಿಕ್ರಮಮ್ ।
ಸರ್ವಂ ವೈ ತಪಸಾಭ್ಯೇತಿ ತಪೋ ಹಿ ಬಲವತ್ತರಮ್ ॥೮॥

ಯಾವುದರೊಡನೆ (ಯಾವ ದೇವತೆಯೊಡನೆ) ಸಂಬಂಧವನ್ನು ಕಲ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೋ–ಅದರೊಡನೆ (ಅಂತಹ ದೇವತೆಯೊಡನೆ) ಸಂಬಂಧವನ್ನೂ ತಪಸ್ಸಿನಿಂದಲೇ ಕಲ್ಪಿಸಿಕೊಳ್ಳಬಹುದು. ಎದುರಿಸಲು ಸಾಧ್ಯವಾಗದಿರುವ ಶತ್ರುವನ್ನು ತಪಸ್ಸಿನ ಪ್ರಭಾವದಿಂದ ಎದುರಿಸಬಹುದು. ದುರ್ಲಭವಾದ ವಸ್ತುವನ್ನು ತಪಸ್ಸಿನಿಂದ ಪಡೆದುಕೊಳ್ಳಬಹುದು. ದಾಟಲು ಅಸಾಧ್ಯವಾದ ಕಷ್ಟಗಳನ್ನೂ ತಪಸ್ಸಿನಿಂದ

ದಾಟಬಹುದು. ಎಲ್ಲವೂ ತಪಸ್ಸಿನಿಂದಲೇ ಸಾಧ್ಯವಾಗುತ್ತದೆ. ಆದುದರಿಂದ ತಪಸ್ಸೇ ಬಲವತ್ತರವಾದುದು.

ಸುರಾಪೋಽಸಮ್ಮತಾದಾಯೀ ಭ್ರೂಣಹಾ ಗುರುತಲ್ಪಗಃ ।
ತಪಸಾ ತರತೇ ಸರ್ವಮೇನಸಶ್ಚ ಪ್ರಮುಚ್ಯತೇ ॥೯॥

ಸುರಾಪಾನವನ್ನು ಮಾಡುವವನು, ದುರ್ದಾನಗಳನ್ನು ಸ್ವೀಕರಿಸುವವನು ಅಥವಾ ಕಳ್ಳನು, ಭ್ರೂಣಹತ್ಯೆಯನ್ನು ಮಾಡಿದವನು, ಗುರುಪತ್ನಿಯೊಡನೆ ಸಮಾಗಮಮಾಡಿದವನು–ಇಂತಹ ಪಾಪಿಷ್ಠರು ಕೂಡ ತಪಸ್ಸಿನಿಂದ ಪಾಪಮುಕ್ತರಾಗುತ್ತಾರೆ ಮತ್ತು ಸಂಸಾರಸಾಗರವನ್ನು ದಾಟುತ್ತಾರೆ.

ಸರ್ವವಿದ್ಯಸ್ತು ಚಕ್ಷುಷ್ಮಾನಪಿ ಯಾದೃಶತಾದೃಶಮ್ ।
ತಪಸ್ವಿನಂ ತಥೈವಾಹುಸ್ತಾಭ್ಯಾಂ ಕಾರ್ಯಂ ಸದಾ ನಮಃ ॥೧೦॥

ಎಲ್ಲ ವಿದ್ಯೆಗಳಲ್ಲಿಯೂ ಪ್ರವೀಣನಾದವನನ್ನು ಚಕ್ಷುಷ್ಮಂತನೆಂದು ಕರೆಯುತ್ತಾರೆ. ಹಾಗೆಯೇ ತಪಸ್ವಿಯು ಎಂತಹವನೇ ಆಗಿರಲಿ ಅಂತಹವನನ್ನೂ ನೇತ್ರವಂತನೆಂದು ಕರೆಯುತ್ತಾರೆ. ಬಹುಶ್ರುತನಿಗೂ ಮತ್ತು ತಪಸ್ವಿಗೂ ಯಾವಾಗಲೂ ನಮಸ್ಕಾರವನ್ನು ಮಾಡಬೇಕು.

ಸರ್ವೇ ಪೂಜ್ಯಾಃ ಶ್ರುತಧನಾಸ್ತಥೈವ ಚ ತಪಸ್ವಿನಃ ।
ದಾನಪ್ರದಾಃ ಸುಖಂ ಪ್ರೇತ್ಯ ಪ್ರಾಪ್ನುವನ್ತೀಹ ಚ ಶ್ರಿಯಮ್ ॥೧೧॥

ಯಾರು ವಿದ್ಯೆಯನ್ನೇ ಧನವನ್ನಾಗಿ ಹೊಂದಿರುವರೋ ಮತ್ತು ತಪಸ್ವಿಗಳೋ–ಅವರೆಲ್ಲರೂ ಪೂಜನೀಯರೇ ಸರಿ. ದಾನಿಗಳು ಕೂಡ ಈ ಲೋಕದಲ್ಲಿ ಸಂಪತ್ತನ್ನು ಹೊಂದಿ ಪರಲೋಕದಲ್ಲಿ ಸುಖಿಗಳಾಗುತ್ತಾರೆ.

ಇಮಂ ಚ ಬ್ರಹ್ಮಲೋಕಂ ಚ ಲೋಕಂ ಚ ಬಲವತ್ತರಮ್ ।
ಅನ್ನದಾನೈಃ ಸುಕೃತಿನಃ ಪ್ರತಿಪದ್ಯನ್ತಿ ಲೌಕಿಕಾಃ ॥೧೨॥

ಈ ಪ್ರಪಂಚದಲ್ಲಿ ಪುಣ್ಯಾತ್ಮರಾಗಿರತಕ್ಕವರು ಅನ್ನದಾನವೇ ಮೊದಲಾದ ದಾನಗಳಿಂದ ಈ ಲೋಕದಲ್ಲಿಯೂ ಸುಖಿಗಳಾಗಿರುತ್ತಾರೆ. ಅವಸಾನಾನಂತರದಲ್ಲಿ ಬ್ರಹ್ಮಲೋಕವನ್ನೂ ಬಲವತ್ತರವಾದ ಇನ್ನೂ ಅನೇಕ ಲೋಕಗಳನ್ನೂ ಹೊಂದುತ್ತಾರೆ.

ಪೂಜಿತಾಃ ಪೂಜಯನ್ತ್ಯೇತೇ ಮಾನಿತಾ ಮಾನಯನ್ತಿ ಚ ।
ಸ ದಾತಾ ಯತ್ರ ಯತ್ರೈತಿ ಸರ್ವತಃ ಸಮ್ಪ್ರಣೂಯತೇ ॥೧೩॥

ಪೂಜಿಸಲ್ಪಟ್ಟ ಮತ್ತು ಗೌರವಿಸಲ್ಪಟ್ಟ ದಾನಿಗಳು ಇತರರನ್ನು ಪೂಜಿಸಿ ಗೌರವಿಸುತ್ತಾರೆ. ದಾನಿಯು ಎಲ್ಲೆಲ್ಲಿಗೆ ಹೋಗುವನೋ ಆ ಎಲ್ಲ ಕಡೆಗಳಲ್ಲಿಯೂ ಅವನನ್ನು ಸ್ತೋತ್ರಮಾಡುತ್ತಿರುತ್ತಾರೆ.

ಅಕರ್ತಾ ಚೈವ ಕರ್ತಾಚ ಲಭತೇ ಯಸ್ಯ ಯಾದೃಶಮ್ ।
ಯದಿ ಚೋರ್ಧ್ವಂ ಯದ್ಯಧೋ ವಾ ಸ್ವಾಲ್ಲೋಕಾನಭಿಯಾಸ್ಯತಿ ॥೧೪॥

ದಾನಮಾಡದವನೂ-ದಾನಮಾಡಿದವನೂ ತನ್ನ-ತನ್ನ ಕರ್ಮಗಳಿಗೆ ತಕ್ಕಂತೆ ಫಲವನ್ನು ಪಡೆದುಕೊಳ್ಳುತ್ತಾನೆ. ಅವಸಾನಾನಂತರದಲ್ಲಿ ಕರ್ಮದ ಫಲಾನುಸಾರವಾಗಿ ಮೇಲಿನ ಅಥವಾ ಕೆಳಗಿನ ತನ್ನ ಲೋಕಗಳಿಗೆ ಹೋಗುತ್ತಾನೆ.

ಪ್ರಾಪ್ಸ್ಯಸಿ ತ್ವನ್ನಪಾನಾನಿ ಯಾನಿ ವಾಞ್ಛಸಿ ಕಾನಿಚಿತ್ ।
ಮೇಧಾವ್ಯಸಿ ಕುಲೇ ಜಾತಃ ಶ್ರುತವಾನನೃಂಶಸವಾನ್ ॥೧೫॥
ಕೌಮಾರಚಾರೀ ವ್ರತವಾನ್ಮೈತ್ರೇಯ ನಿರತೋ ಭವ ।
ಏತದ್ಗೃಹಾಣ ಪ್ರಥಮಂ ಪ್ರಶಸ್ತಂ ಗೃಹಮೇಧಿನಾಮ್ ॥೧೬॥

ಮೈತ್ರೇಯನೇ! ನೀನು ಯಾವ ವಸ್ತುಗಳನ್ನು ಅಪೇಕ್ಷಿಸುವೆಯೋ–ಆ ಎಲ್ಲ ವಸ್ತುಗಳನ್ನೂ ನೀನು ಪಡೆದುಕೊಳ್ಳುವೆ. ಅನ್ನ-ಪಾನಗಳನ್ನೂ ಪಡೆದುಕೊಳ್ಳುವೆ. ನೀನು ಮೇಧಾವಿಯು. ಸತ್ಕುಲಪ್ರಸೂತನು. ಶಾಸ್ತ್ರಜ್ಞನು, ದಯಾಳುವು. ತರುಣನಾಗಿರುವೆ. ವ್ರತನಿಷ್ಠನಾಗಿರುವೆ. ಸದಾ ಧರ್ಮಪಾಲನೆಯಲ್ಲಿಯೇ ನಿರತನಾಗಿರು. ಗೃಹಸ್ಥರಾದವರಿಗೆ ಯಾವ ಸರ್ವೋತ್ತಮವಾದ ಮುಖ್ಯಕರ್ತವ್ಯವಿರುವುದೋ ಅದನ್ನು ಅಂಗೀಕರಿಸು.

ಯೋ ಭರ್ತಾ ವಾಸಿತಾತುಷ್ಟೋ ಭರ್ತುಸ್ತುಷ್ಟಾ ಚ ವಾಸಿತಾ ।
ಯಸ್ಮಿನ್ನೇವಂ ಕುಲೇ ಸರ್ವಂ ಕಲ್ಯಾಣಂ ತತ್ರ ವರ್ತತೇ ॥೧೭॥

ಯಾವ ಕುಲದಲ್ಲಿ (ಸಂಸಾರದಲ್ಲಿ) ಪತಿಯು ತನ್ನ ಪತ್ನಿಯೊಡನೆಯೂ-ಪತ್ನಿಯು ತನ್ನ ಪತಿಯೊಡನೆಯೂ ಒಬ್ಬರಿಗೊಬ್ಬರು ಹೊಂದಾಣಿಕೆಯಿಂದಿರುತ್ತಾ ಸಂತುಷ್ಟರಾಗಿರುವರೋ–ಆ ಸಂಸಾರವು ಸದಾ ಮಂಗಳಮಯವಾಗಿರುತ್ತದೆ.

ಅದ್ಭಿರ್ಗಾತ್ರಾನ್ಮಲಮಿವ ತಮೋಽಗ್ನಿಪ್ರಭಯಾ ಯಥಾ ।
ದಾನೇನ ತಪಸಾ ಚೈವ ಸರ್ವಪಾಪಮಪೋಹತಿ ।।೧೮।।

ನೀರಿನಿಂದ ಶರೀರದಲ್ಲಿರುವ ಕೊಳೆಯನ್ನು ಹೋಗಲಾಡಿಸುವಂತೆ ಅಗ್ನಿಯ ಪ್ರಭೆಯಿಂದ ಕತ್ತಲೆಯನ್ನು ನಾಶಪಡಿಸುವಂತೆ–ದಾನದಿಂದಲೂ ಮತ್ತು ತಪಸ್ಸಿನಿಂದಲೂ ಮನುಷ್ಯನು ಸಕಲವಿಧವಾದ ಪಾಪಗಳನ್ನೂ ಕಳೆದುಕೊಳ್ಳುತ್ತಾನೆ.

ಮೈತ್ರೇಯನೇ! ನಿನಗೆ ಮಂಗಳವಾಗಲಿ. ನಾನಿನ್ನು ನನ್ನ ಆಶ್ರಮಕ್ಕೆ ಹೋಗುತ್ತೇನೆ. ನಾನು ಹೇಳಿರುವುದನ್ನು ಸ್ಮರಣೆಯಲ್ಲಿಟ್ಟುಕೊಂಡು ಅದರಂತೆಯೇ ಮಾಡು. ಹಾಗೆ ಮಾಡುವುದರಿಂದ ಶ್ರೇಯಸ್ಸುಂಟಾಗುತ್ತದೆ.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ವ್ಯಾಸರು ಹೀಗೆ ಹೇಳಿದನಂತರ ಮೈತ್ರೇಯನು ವ್ಯಾಸರಿಗೆ ಪ್ರದಕ್ಷಿಣ-ನಮಸ್ಕಾರವನ್ನು ಮಾಡಿ ಬದ್ಧಾಂಜಲಿಯಾಗಿ - ‘**ಸ್ವಸ್ತಿ ಪ್ರಾಪ್ನೋತು ಭಗವಾನ್**’– ‘ಪೂಜ್ಯರು ಕಲ್ಯಾಣವನ್ನು ಹೊಂದಲಿ’– ಎಂದು ಹೇಳಿ ಅವರನ್ನು ಬೀಳ್ಕೊಟ್ಟನು.”

೧೨೨ನೆಯ ಅಧ್ಯಾಯವು ಮುಗಿಯಿತು.

೧೨೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶಾಂಡಿಲೀ ಮತ್ತು ಸುಮನೆಯರ ಸಂವಾದ: ಪತಿವ್ರತಾಸ್ತ್ರೀಯರ ಕರ್ತವ್ಯದ ವರ್ಣನೆ

ಯುಧಿಷ್ಠಿರನು ಹೇಳುತ್ತಾನೆ:

ಸತ್ಸ್ತ್ರೀಣಾಂ ಸಮುದಾಚಾರಂ ಸರ್ವಧರ್ಮವಿದಾಂ ವರ ।
ಶ್ರೋತುಮಿಚ್ಛಾಮ್ಯಹಂ ತ್ವತ್ತಸ್ತನ್ಮೇ ಬ್ರೂಹಿ ಪಿತಾಮಹ ।।೧।।

“ಸರ್ವಧರ್ಮಗಳನ್ನೂ ತಿಳಿದವರಲ್ಲಿ ಶ್ರೇಷ್ಠನಾದವನೇ! ಪಿತಾಮಹನೇ! ಸಾಧ್ವಿಯರ ಸದಾಚಾರವನ್ನು ನಿನ್ನಿಂದ ಕೇಳಬೇಕೆಂದಿರುವೆನು. ಈ ವಿಷಯವನ್ನು ಹೇಳುವ ಕೃಪೆಮಾಡು.”

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ದೇವಲೋಕದಲ್ಲಿ ನಡೆದ ಘಟನೆಯಿದು. ಸರ್ವಜ್ಞಳಾದ, ಎಲ್ಲ ತತ್ತ್ವಗಳನ್ನೂ ತಿಳಿದಿದ್ದ, ಮನಸ್ವಿನಿಯಾದ ಶಾಂಡಿಲಿಯನ್ನು ಕೇಕಯರಾಜನ ಪುತ್ರಿಯಾದ ಸುಮನಾ ಎಂಬುವಳು ಪ್ರಶ್ನಿಸಿದಳು:

ಕೇನ ವೃತ್ತೇನ ಕಲ್ಯಾಣಿ ಸಮಾಚಾರೇಣ ಕೇನ ವಾ ।
ವಿಧೂಯ ಸರ್ವಪಾಪಾನಿ ದೇವಲೋಕಂ ತ್ವಮಾಗತಾ ॥೩॥

“ಕಲ್ಯಾಣಿಯೇ! ನೀನು ಯಾವ ಸದ್ವ್ಯವಹಾರದಿಂದ ಅಥವಾ ಯಾವ ಸದಾಚಾರದ ಪ್ರಭಾವದಿಂದ ಸಕಲಪಾಪಗಳನ್ನೂ ಕಳೆದುಕೊಂಡು ದೇವಲೋಕಕ್ಕೆ ಆಗಮಿಸಿದೆ?

ಹುತಾಶನಶಿಖೇವ ತ್ವಂ ಜ್ವಲಮಾನಾ ಸ್ವತೇಜಸಾ ।
ಸುತಾ ತಾರಾಧಿಪಸ್ಯೇವ ಪ್ರಭಯಾ ದಿವಮಾಗತಾ ॥೪॥

ಯಜ್ಞೇಶ್ವರನ ಜ್ವಾಲೆಯೋಪಾದಿಯಲ್ಲಿ ನಿನ್ನ ತೇಜಸ್ಸಿನಿಂದ ಪ್ರಜ್ವಲಿಸುತ್ತಾ, ತಾರಾಧಿಪನಾದ ಚಂದ್ರನ ಮಗಳೋ ಎಂಬಂತೆ ದಿವ್ಯಪ್ರಭೆಯಿಂದ ಕೂಡಿ ಸ್ವರ್ಗಕ್ಕೆ ಆಗಮಿಸಿರುವೆ.

ಅರಂಜಾಸಿ ಚ ವಸ್ತ್ರಾಣಿ ಧಾರಯನ್ತೀ ಗತಕ್ಲಮಾ ।
ವಿಮಾನಸ್ಥಾ ಶುಭಾ ಭಾಸಿ ಸಹಸ್ರಗುಣಮೋಜಸಾ ॥೫॥

ನಿರ್ಮಲವಾದ ವಸ್ತ್ರಗಳನ್ನು ಧರಿಸಿದವಳಾಗಿ, ಸ್ವಲ್ಪವಾದರೂ ಆಯಾಸವಿಲ್ಲದವಳಾಗಿ, ವಿಮಾನದಲ್ಲಿ ಕುಳಿತಿರುವ ಶುಭಾಂಗಿಯಾದ ನೀನು, ನಿನ್ನ ಮೊದಲಿನ ತೇಜಸ್ಸಿಗಿಂತಲೂ ಸಾವಿರಪಟ್ಟು ಮಿಗಿಲಾದ ತೇಜಸ್ಸಿನಿಂದ ಪ್ರಕಾಶಿಸುತ್ತಿರುವೆ.

ನ ತ್ವಮಲ್ಪೇನ ತಪಸಾ ದಾನೇನ ನಿಯಮೇನ ವಾ ।
ಇಮಂ ಲೋಕಮನುಪ್ರಾಪ್ತಾ ತ್ವಂ ಹಿ ತತ್ತ್ವಂ ವದಸ್ವ ಮೇ ॥೬॥

ನೀನು ಅಲ್ಪವಾದ ತಪಸ್ಸನ್ನು ಮಾಡಿಯಾಗಲೀ, ಅಲ್ಪವಾದ ದಾನವನ್ನು ಮಾಡಿಯಾಗಲೀ, ಅಲ್ಪವಾದ ನಿಯಮಾನುಷ್ಠಾನವನ್ನು ಮಾಡಿಯಾಗಲೀ ಇಲ್ಲಿಗೆ ಬಂದಿರುವುದಿಲ್ಲ. (ಯಾವುದೋ ಮಹಾತಪಸ್ಸನ್ನು ಮಾಡಿಯೇ ಇಲ್ಲಿಗೆ ಬಂದಿರಬೇಕು.) ನೀನು ಈ ದೇವಲೋಕಕ್ಕೆ ಹೇಗೆ ಬಂದೆಯೆಂಬುದನ್ನು ಯಥಾವತ್ತಾಗಿ ಹೇಳು.”

ಸುಮನೆಯಿಂದ ಹೀಗೆ ಪ್ರಶ್ನಿಸಲ್ಪಟ್ಟ ಚಾರುಹಾಸಿನಿಯಾದ ಶಾಂಡಿಲಿಯು ಮಧುರವಾದ ಮತ್ತು ವಿನಯದಿಂದ ಕೂಡಿದ ಈ ಮಾತನ್ನು ಹೇಳಿದಳು:

ನಾಹಂ ಕಾಷಾಯವಸನಾ ನಾಪಿ ವಲ್ಕಲಧಾರಿಣೀ ।
ನ ಚ ಮುಣ್ಡಾ ನ ಚ ಜಟಿಲಾ ಭೂತ್ವಾ ದೇವತ್ವಮಾಗತಾ ॥೮॥

"ಸುಮನೆಯೇ! ನಾನು ಕಾಷಾಯವಸ್ತ್ರಗಳನ್ನು ತೊಟ್ಟವಳಲ್ಲ. ನಾರುಮಡಿಯನ್ನು ಉಟ್ಟವಳಲ್ಲ. ಮುಂಡನಮಾಡಿಕೊಂಡವಳಲ್ಲ. ಜಟೆಯನ್ನು ಬಿಟ್ಟವಳೂ ಅಲ್ಲ. ಸಂನ್ಯಾಸಿನಿಯ ಈ ಯಾವ ನಿಯಮಗಳಿಂದಲೂ ನಾನು ದೇವತ್ವವನ್ನು ಪಡೆದು ದೇವಲೋಕಕ್ಕೆ ಬರಲಿಲ್ಲ.

ಅಹಿತಾನಿ ಚ ವಾಕ್ಯಾನಿ ಸರ್ವಾಣಿ ಪರುಷಾಣಿ ಚ ।
ಅಪ್ರಮತ್ತಾ ಚ ಭರ್ತಾರಂ ಕದಾಚಿನ್ನಾಹಮಬ್ರುವಮ್ ॥೯॥

ನಾನು ಯಾವಾಗಲೂ ಜಾಗರೂಕಳಾಗಿರುತ್ತಿದ್ದು, ನನ್ನ ಪತಿಯೊಡನೆ ಅಹಿತವಾದ ಮತ್ತು ಕಠೋರವಾದ ಮಾತುಗಳನ್ನು ಒಮ್ಮೆಯಾದರೂ ಆಡಲಿಲ್ಲ.

ದೇವತಾನಾಂ ಪಿತೄಣಾಂ ಚ ಬ್ರಾಹ್ಮಣಾನಾಂ ಚ ಪೂಜನೇ ।
ಅಪ್ರಮತ್ತಾ ಸದಾ ಯುಕ್ತಾ ಶ್ವಶ್ರೂಶ್ವಶುರವರ್ತಿನೀ ॥೧೦॥

ನಾನು ಯಾವಾಗಲೂ ಅತ್ತೆ-ಮಾವಂದಿರ ಆಜ್ಞಾನುಸಾರವಾಗಿ ನಡೆದುಕೊಳ್ಳುತ್ತಿದ್ದೆನು. ದೇವತೆಗಳ, ಪಿತೃಗಳ ಮತ್ತು ಬ್ರಾಹ್ಮಣರ ಪೂಜೆಯ ವಿಷಯದಲ್ಲಿ ಸದಾ ಜಾಗರೂಕಳಾಗಿರುತ್ತಿದ್ದೆನು.

ಪೈಶುನ್ಯೇ ನ ಪ್ರವರ್ತಾಮಿ ನ ಮಮೈತನ್ಮನೋಗತಮ್।
ಅದ್ವಾರಿ ನ ಚ ತಿಷ್ಠಾಮಿ ಚಿರಂ ನ ಕಥಯಾಮಿ ಚ ॥೧೧॥

ಚಾಡಿಯ ಮಾತನ್ನು ಕೇಳಿ ಅದರಂತೆ ನಡೆದುಕೊಳ್ಳುತ್ತಿರಲಿಲ್ಲ. ಬೇರೆಯವರ ಮೇಲೆ ಚಾಡಿಹೇಳುವುದೂ ನನ್ನ ಮನಸ್ಸಿಗೆ ಹಿಡಿಸುತ್ತಿರಲಿಲ್ಲ. ದುಷ್ಟರ ಮನೆಯ ಬಾಗಿಲಲ್ಲೂ ನಿಂತವಳಲ್ಲ. ಬಹಳ ಹೊತ್ತಿನವರೆಗೆ ಬೇರೆಯವರೊಡನೆ ಮಾತನಾಡುತ್ತಿರಲಿಲ್ಲ.

ಅಸದ್ವಾ ಹಸಿತಂ ಕಿಂಚಿದಹಿತಂ ವಾಪಿ ಕರ್ಮಣಾ ।
ರಹಸ್ಯಮರಹಸ್ಯಂ ವಾ ನ ಪ್ರವರ್ತಾಮಿ ಸರ್ವದಾ ॥೧೨॥

ನಾನು ಏಕಾಂತದಲ್ಲಿಯೇ ಆಗಲಿ ಬಹಿರಂಗದಲ್ಲಿಯೇ ಆಗಲಿ ಯಾರೊಡನೆಯೂ ಅಶ್ಲೀಲವಾದ ರೀತಿಯಲ್ಲಿ ಪರಿಹಾಸಮಾಡುತ್ತಿರಲಿಲ್ಲ. ಯಾವುದೇ ಕಾರ್ಯದ ಮೂಲಕವಾಗಿ ಯಾರಿಗೂ ಸ್ವಲ್ಪವಾದರೂ ಅಹಿತವಾದ ಕಾರ್ಯವನ್ನು ಮಾಡುತ್ತಿರಲಿಲ್ಲ. ಇಂತಹ ಕಾರ್ಯಗಳಲ್ಲಿ ನಾನು ಯಾವಾಗಲೂ ತೊಡಗುತ್ತಿರಲಿಲ್ಲ.

ಕಾರ್ಯಾರ್ಥೇ ನಿರ್ಗತಂ ಚಾಪಿ ಭರ್ತಾರಂ ಗೃಹಮಾಗತಮ್ ।
ಆಸನೇನೋಪಸಂಯೋಜ್ಯ ಪೂಜಯಾಮಿ ಸಮಾಹಿತಾ ॥೧೩॥

ಯಾವುದಾದರೂ ಕಾರ್ಯದ ಸಲುವಾಗಿ ಮನೆಯಿಂದ ಹೊರಗೆ ಹೋಗಿದ್ದ ನನ್ನ ಪತಿಯು ಕಾರ್ಯವನ್ನು ಮುಗಿಸಿಕೊಂಡು ಮನೆಗೆ ಆಗಮಿಸಿದೊಡನೆಯೇ ಮೇಲೆದ್ದು ಅವನಿಗೆ ಆಸನವನ್ನಿತ್ತು ಏಕಾಗ್ರಚಿತ್ತಳಾಗಿ ಅವನನ್ನು ಸತ್ಕರಿಸುತ್ತಿದ್ದೆನು.

ಯದನ್ನಂ ನಾಭಿಜಾನಾತಿ ಯದ್ಭೋಜ್ಯಂ ನಾಭಿನನ್ದತಿ ।
ಭಕ್ಷ್ಯಂ ವಾ ಯದಿ ವಾ ಲೇಹ್ಯಂ ತತ್ಸರ್ವಂ ವರ್ಜಯಾಮ್ಯಹಮ್॥

ನನ್ನ ಸ್ವಾಮಿಯು ಎಂತಹ ಅನ್ನವನ್ನು ಊಟಮಾಡಲು ಯೋಗ್ಯವಲ್ಲವೆಂದು ಭಾವಿಸುತ್ತಿದ್ದನೋ, ಯಾವ ಭಕ್ಷ್ಯ-ಭೋಜ್ಯ-ಲೇಹ್ಯಗಳನ್ನು ಇಷ್ಟಪಡುತ್ತಿರಲಿಲ್ಲವೋ–ಅಂತಹವುಗಳನ್ನು ನಾನೂ ತ್ಯಾಗಮಾಡುತ್ತಿದ್ದೆನು.

ಕುಟುಮ್ಬಾರ್ಥೇ ಸಮಾನೀತಂ ಯತ್ಕಿಂಚಿತ್ಕಾರ್ಯಮೇವ ತು।
ಪ್ರಾತರುತ್ಥಾಯ ತತ್ಸರ್ವಂ ಕಾರಯಾಮಿ ಕರೋಮಿ ಚ ॥೧೫॥

ಕುಟುಂಬದ ಸಲುವಾಗಿ ಯಾವುದಾದರೂ ಕಾರ್ಯವು ಒದಗಿದಾಗ ನಾನು ಮುಂಜಾನೆ ಬೇಗ ಎದ್ದು ಆ ಎಲ್ಲ ಕಾರ್ಯಗಳನ್ನೂ ಮಾಡುತ್ತಿದ್ದೆನು. ಇತರರಿಂದಲೂ ಮಾಡಿಸುತ್ತಿದ್ದೆನು.

ಪ್ರವಾಸಂ ಯದಿ ಮೇ ಯಾತಿ ಭರ್ತಾ ಕಾರ್ಯೇಣ ಕೇನಚಿತ್।
ಮಙ್ಗಲೈರ್ಬಹುಭಿರ್ಯುಕ್ತಾ ಭವಾಮಿ ನಿಯತಾ ಸದಾ ॥೧೬॥

ನನ್ನ ಪತಿಯೇನಾದರೂ ಯಾವುದಾದರೂ ಕಾರ್ಯದ ಸಲುವಾಗಿ ಬೇರೆಯ ದೇಶಗಳಿಗೆ ಪ್ರವಾಸಹೋಗಿದ್ದಾಗ ನಾನು ನಿಯಮದಿಂದಿರುತ್ತಾ ಪತಿಯ ಪ್ರವಾಸವು ಸುಖಮಯವಾಗಲೆಂದಾಶಿಸಿ ಅನೇಕ ಮಂಗಳ ಕಾರ್ಯಗಳನ್ನು ಮಾಡುತ್ತಿದ್ದೆನು.

ಅಞ್ಜನಂ ರೋಚನಾಂ ಚೈವ ಸ್ನಾನಂ ಮಾಲ್ಯಾನುಲೇಪನಮ್ ।
ಪ್ರಸಾಧನಂ ಚ ನಿಷ್ಕ್ರಾನ್ತೇ ನಾಭಿನನ್ದಾಮಿ ಭರ್ತರಿ ॥೧೭॥

ಪತಿಯು ಪ್ರವಾಸಹೋದಸಮಯದಲ್ಲಿ ನಾನು ಕಣ್ಣುಗಳಿಗೆ ಕಾಡಿಗೆಯನ್ನು ಹಚ್ಚಿಕೊಳ್ಳುತ್ತಿರಲಿಲ್ಲ. ಗೋರೋಚನದ ತಿಲಕವನ್ನಿಟ್ಟುಕೊಳ್ಳುತ್ತಿರಲಿಲ್ಲ. ಎಣ್ಣೆನೀರು ಹಾಕಿಕೊಳ್ಳುತ್ತಿರಲಿಲ್ಲ. ಹೂವನ್ನು ಮುಡಿದುಕೊಳ್ಳುತ್ತಿರಲಿಲ್ಲ. ಗಂಧವನ್ನು ಪೂಸಿಕೊಳ್ಳುತ್ತಿರಲಿಲ್ಲ. ಯಾವ ವಿಧವಾದ ಅಲಂಕಾರವನ್ನೂ ಮಾಡಿಕೊಳ್ಳುತ್ತಿರಲಿಲ್ಲ. ಪತಿಯಿಲ್ಲದ ಸಮಯದಲ್ಲಿ ಅಲಂಕಾರಮಾಡಿಕೊಳ್ಳುವುದು ನನಗೆ ಇಷ್ಟವಾಗುತ್ತಿರಲಿಲ್ಲ.

ನೋತ್ಥಾಪಯಾಮಿ ಭರ್ತಾರಂ ಸುಖಸುಪ್ತಮಹಂ ಸದಾ ।
ಅನ್ತರೇಷ್ವಪಿ ಕಾರ್ಯೇಷು ತೇನ ತುಷ್ಯತಿ ಮೇ ಮನಃ ॥೧೮॥

ಸುಖವಾಗಿ ಮಲಗಿರುವ ಸಮಯದಲ್ಲಿ ನನ್ನ ಪತಿಯನ್ನು ಎಚ್ಚರಗೊಳಿಸುತ್ತಿರಲಿಲ್ಲ. ಯಾವುದಾದರೂ ಕಾರ್ಯದ ಮಧ್ಯದಲ್ಲಿ ನಾನು ಅವರನ್ನು ಎಬ್ಬಿಸುತ್ತಿರಲಿಲ್ಲ. ಹೀಗೆ ಮಾಡುತ್ತಿದ್ದುದರಿಂದ ನನ್ನ ಮನಸ್ಸಿಗೆ ಸಂತೋಷವಿದ್ದಿತು.

ನಾಯಾಸಯಾಮಿ ಭರ್ತಾರಂ ಕುಟುಮ್ಬಾರ್ಥೇಽಪಿ ಸರ್ವದಾ ।
ಗುಪ್ತಗುಹ್ಯಾ ಸದಾಚಾಸ್ಮಿ ಸುಸಮ್ಮೃಷ್ಟನಿವೇಶನಾ ॥೧೯॥

ಕುಟುಂಬದ ಪಾಲನೆ-ಪೋಷಣೆಗಳ ವಿಷಯದಲ್ಲಿಯೂ ನಾನು ಯಾವಾಗಲೂ ನನ್ನ ಪತಿಗೆ ತ್ರಾಸವನ್ನು ಕೊಡುತ್ತಿರಲಿಲ್ಲ. ಕುಟುಂಬದ ರಹಸ್ಯವಿಷಯಗಳನ್ನು ಯಾವಾಗಲೂ ಗುಪ್ತವಾಗಿಯೇ ಇಡುತ್ತಿದ್ದೆನು. ಗುಡಿಸಿ-ಸಾರಿಸಿ ಮನೆಯನ್ನು ಯಾವಾಗಲೂ ಸ್ವಚ್ಛವಾಗಿಡುತ್ತಿದ್ದೆನು.

ಇಮಂ ಧರ್ಮಪಥಂ ನಾರೀ ಪಾಲಯನ್ತೀ ಸಮಾಹಿತಾ ।
ಅರುನ್ಧತೀವ ನಾರೀಣಾಂ ಸ್ವರ್ಗಲೋಕೇ ಮಹೀಯತೇ ॥೨೦॥

ಯಾವ ಸ್ತ್ರೀಯು ಸದಾ ಏಕಾಗ್ರಚಿತ್ತಳಾಗಿ ಈ ಧರ್ಮವನ್ನು ಪರಿಪಾಲಿಸುವಳೋ ಅಂತಹವಳು ನಾರಿಯರಲ್ಲಿ ಅರುಂಧತಿಗೆ ಸಮಾನಳೆನಿಸಿ ಎಲ್ಲರಿಗೂ ಆದರಣೀಯಳಾಗಿರುತ್ತಾಳೆ. ಅವಸಾನಾನಂತರ ದಲ್ಲಿ ಸ್ವರ್ಗದಲ್ಲಿಯೂ ಸಮ್ಮಾನಿತಳಾಗುತ್ತಾಳೆ."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ತಪಸ್ವಿನಿಯಾದ ಮಹಾಭಾಗ್ಯಶಾಲಿನಿಯಾದ, ದೇವತಾಸ್ವರೂಪಿಣಿಯಾಗಿದ್ದ ಶಾಂಡಿಲಿಯು ಸುಮನೆಗೆ ಈ ಪಾತಿವ್ರತ್ಯಧರ್ಮವನ್ನು ಹೇಳಿ ಅದೃಶ್ಯಳಾದಳು.

ಯಶ್ಚೇದಂ ಪಾಣ್ಡವಾಖ್ಯಾನಂ ಪಠೇತ್ಪರ್ವಣಿ ಪರ್ವಣಿ ।
ಸ ದೇವಲೋಕಂ ಸಂಪ್ರಾಪ್ಯ ನನ್ದನೇ ಸ ಸುಖೀ ವಸೇತ್ ॥೨೨॥

ಪಾಂಡುನಂದನನೇ! ಯಾವನು ಪ್ರತಿಯೊಂದು ಪರ್ವದಿನದಲ್ಲಿಯೂ ಈ ಆಖ್ಯಾನವನ್ನು ಪಠಿಸುವನೋ–ಅವನು ಅವಸಾನಾನಂತರದಲ್ಲಿ ದೇವಲೋಕಕ್ಕೆ ಹೋಗಿ ನಂದನವನದಲ್ಲಿ ಸುಖವಾಗಿ ವಾಸಮಾಡಿ ಕೊಂಡಿರುತ್ತಾನೆ."

೧೨೩ನೆಯ ಅಧ್ಯಾಯವು ಮುಗಿಯಿತು.

.೧೨೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸಾಮೋಪಾಯದ ಪ್ರಶಂಸೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಸಾಮ್ನಿ ಚಾಪಿ ಪ್ರದಾನೇ ಚ ಜ್ಯಾಯಃ ಕಿಂ ಭವತೋ ಮತಮ್ ।
ಪ್ರಬ್ರೂಹಿ ಭರತಶ್ರೇಷ್ಠ ಯದತ್ರ ವ್ಯತಿರಿಚ್ಯತೇ ॥೧॥

"ಭರತಶ್ರೇಷ್ಠನೇ! ನಿನ್ನ ಅಭಿಪ್ರಾಯದಲ್ಲಿ ಸಾಮ-ದಾನಗಳೆರಡರಲ್ಲಿ ಯಾವುದು ಶ್ರೇಷ್ಠವಾದುದು? ಈ ಎರಡರಲ್ಲಿ ಯಾವುದು ಅತಿಶಯಿಸುತ್ತದೆ? ಈ ವಿಷಯವನ್ನು ಹೇಳು."

ಭೀಷ್ಮನು ಹೇಳುತ್ತಾನೆ:

ಸಾಮ್ನಾ ಪ್ರಸಾದ್ಯತೇ ಕಶ್ಚಿದ್ದಾನೇನ ಚ ತಥಾ ಪರಃ ।
ಪುರುಷಪ್ರಕೃತಿಂ ಜ್ಞಾತ್ವಾ ತಯೋರೇಕತರಂ ಭಜೇತ್ ॥೨॥

"ಒಬ್ಬನು ಸಾಮೋಪಾಯದಿಂದ ಪ್ರಸನ್ನನಾಗುತ್ತಾನೆ. ಮತ್ತೊಬ್ಬನು ದಾನೋಪಾಯದಿಂದ ಪ್ರಸನ್ನನಾಗುತ್ತಾನೆ. ಮನುಷ್ಯನ ಸ್ವಭಾವವನ್ನು ತಿಳಿದು ಈ ಎರಡರಲ್ಲಿ ಒಂದನ್ನು ಆಶ್ರಯಿಸಬೇಕು.

ಭರತಶ್ರೇಷ್ಠನೇ! ಸಾಮದ ಗುಣಗಳನ್ನು ಹೇಳುವೆನು; ಕೇಳು. ಮನುಷ್ಯನು ಸಾಮೋಪಾಯದ ಮೂಲಕವಾಗಿ ಅತ್ಯಂತಭಯಂಕರವಾದ ಪ್ರಾಣಿಗಳನ್ನಾದರೂ ವಶಪಡಿಸಿಕೊಳ್ಳಬಹುದು.

ಈ ವಿಷಯದಲ್ಲಿ ಪುರಾತನವಾದ ಇತಿಹಾಸವನ್ನು ವಿದ್ವಾಂಸರು ಉದಾಹರಿಸುತ್ತಾರೆ. ಕಾಡಿನಲ್ಲಿ ರಾಕ್ಷಸನಿಂದ ಆಕ್ರಮಿಸಲ್ಪಟ್ಟ ಬ್ರಾಹ್ಮಣ ನೊಬ್ಬನು ಸಾಮೋಪಾಯವನ್ನೇ ಆಶ್ರಯಿಸಿ ಬಿಡುಗಡೆಯನ್ನು ಹೊಂದಿದನು.

ವಾಗ್ಮಿಯಾದ ಮತ್ತು ಬುದ್ಧಿವಂತನಾದ ಬ್ರಾಹ್ಮಣನೊಬ್ಬನು ನಿರ್ಜನವಾದ ಅರಣ್ಯಪ್ರದೇಶದಲ್ಲಿ ಹೋಗುತ್ತಿದ್ದನು. ಅಲ್ಲಿಯೇ ವಾಸಮಾಡುತ್ತಿದ್ದ ರಾಕ್ಷಸನೊಬ್ಬನು ತಿಂದುಹಾಕುವ ಇಚ್ಛೆಯಿಂದ ಬ್ರಾಹ್ಮಣನನ್ನು ಹಿಡಿದುಕೊಂಡನು. ಏಕಾಕಿಯಾದ ಮತ್ತು ನಿರ್ಬಲನಾದ ಬ್ರಾಹ್ಮಣನು ಪ್ರಾಣಾಂತ ಕಷ್ಟದಲ್ಲಿ ಸಿಲುಕಿದನು. ಆದರೆ ಶಾಸ್ತ್ರಜ್ಞಾನದಿಂದಲೂ ಸೂಕ್ಷ್ಮವಾದ ಬುದ್ಧಿಯಿಂದಲೂ ಸಂಪನ್ನನಾಗಿದ್ದ ಆ ಬ್ರಾಹ್ಮಣನು ಅತಿ ಭಯಂಕರನಾದ ಆ ರಾಕ್ಷಸನನ್ನು ನೋಡಿ ಭ್ರಾಂತನೂ ಆಗಲಿಲ್ಲ; ದುಃಖಿಸಲೂ ಇಲ್ಲ. ರಾಕ್ಷಸನೊಡನೆ ಸಾಂತ್ವನದ ಮಾತುಗಳನ್ನೇ ಆಡಿದನು. ರಾಕ್ಷಸನು ಬ್ರಾಹ್ಮಣನ ಮಾತುಗಳನ್ನು ಶ್ಲಾಘಿಸುತ್ತಾ ಅವನನ್ನು ಕುರಿತು ಕೆಲವು ಪ್ರಶ್ನೆಗಳನ್ನು ಕೇಳಿದನು:

ಮೋಕ್ಷ್ಯಸೇ ಬ್ರೂಹಿ ಮೇ ಪ್ರಶ್ನಂ ಕೇನಾಸ್ಮಿ ಹರಿಣಃ ಕೃಶಃ ॥೭॥

"ಬ್ರಾಹ್ಮಣಶ್ರೇಷ್ಠನೇ! ನನ್ನ ಈ ಪ್ರಶ್ನೆಗಳಿಗೆ ಉತ್ತರಿಸಿದರೆ ನೀನು ನನ್ನಿಂದ ಬಿಡುಗಡೆಯನ್ನು ಹೊಂದುವೆ. ನಾನೇಕೆ ಬಿಳಿಚಿಕೊಂಡಿದ್ದೇನೆ ಮತ್ತು ದುರ್ಬಲನೂ ಆಗಿದ್ದೇನೆ?"

ಬ್ರಾಹ್ಮಣನು ಮುಹೂರ್ತಕಾಲದವರೆಗೆ ಅವ್ಯಗ್ರವಾದ ಮನಸ್ಸಿನಿಂದ ಯೋಚಿಸುತ್ತಿದ್ದು ಅನಂತರ ಮುಂದಿನ ಶ್ಲೋಕಗಳ ಮೂಲಕ ರಾಕ್ಷಸನ ಪ್ರಶ್ನೆಗೆ ಉತ್ತರವನ್ನಿತ್ತನು:

ವಿದೇಶಸ್ಥೋ ವಿಲೋಕಸ್ಥೋ ವಿನಾ ನೂನಂ ಸುಹೃಜ್ಜನೈಃ ।
ವಿಷಯಾನತುಲಾನ್ಭುಂಕ್ಷೇ ತೇನಾಸಿ ಹರಿಣಃ ಕೃಶಃ ॥೯॥

"ರಾಕ್ಷಸನೇ! ನೀನು ನಿಶ್ಚಯವಾಗಿಯೂ ಸುಹೃಜ್ಜನರಿಂದ ಪ್ರತ್ಯೇಕವಾಗಿರುವೆ. ವಿದೇಶದಲ್ಲಿರುವೆ. ಕಂಡರಿಯದ ಜನರೊಡನೆ ಬಾಳ್ವೆಯನ್ನು ನಡೆಸುತ್ತಿರುವೆ. ಮೇಲಾಗಿ ಮಿತಿಮೀರಿದ ವಿಷಯೋಪಭೋಗಗಳಲ್ಲಿ ಆಸಕ್ತನಾಗಿರುವೆ. ಈ ಕಾರಣಗಳಿಂದ ನೀನು ಬಿಳಿಚಿಕೊಂಡಿರುವೆ ಮತ್ತು ದುರ್ಬಲನಾಗಿರುವೆ.

ನೂನಂ ಮಿತ್ರಾಣಿ ತೇ ರಕ್ಷಃ ಸಾಧೂಪಚರಿತಾನ್ಯಪಿ ।
ಸ್ವದೋಷಾದಪರಜ್ಯನ್ತೇ ತೇನಾಸಿ ಹರಿಣಃ ಕೃಶಃ ॥೧೦॥

ರಾಕ್ಷಸನೇ! ನಿನ್ನ ಮಿತ್ರರು ನಿನ್ನಿಂದ ಚೆನ್ನಾಗಿ ಸಮ್ಮಾನಿತರಾಗಿದ್ದರೂ ಅವರ ಸ್ವಭಾವದೋಷದ ಕಾರಣದಿಂದಾಗಿ ನಿನ್ನಿಂದ ವಿಮುಖರಾಗಿದ್ದಾರೆ. ಈ ಕಾರಣದಿಂದ ನೀನು ಬಿಳಿಚಿಕೊಂಡಿರುವೆ ಮತ್ತು ದುರ್ಬಲನಾಗಿರುವೆ.

ಧನೈಶ್ವರ್ಯಾಧಿಕಾಃ ಸ್ತಬ್ಧಾಸ್ತ್ವದ್ಗುಣೈಃ ಪರಮಾವರಾಃ ।
ಅವಜಾನನ್ತಿ ನೂನಂ ತ್ವಾಂ ತೇನಾಸಿ ಹರಿಣಃ ಕೃಶಃ ॥೧೧॥

ನಿನ್ನಲ್ಲಿರುವ ಗುಣಗಳಿಗಿಂತಲೂ ಅತ್ಯಂತನೀಚವಾದ ಗುಣವುಳ್ಳವರೂ ಮತ್ತು ಬುದ್ಧಿವಂತರೂ ಅಲ್ಲದ ಜಡಮನುಷ್ಯರೂ-ಧನದಿಂದಲೂ ಐಶ್ವರ್ಯದಿಂದಲೂ ಕೊಬ್ಬಿದವರಾಗಿ ನಿನ್ನನ್ನೇ ಅವಹೇಳನಮಾಡುತ್ತಾರೆ. ಈ ಕಾರಣದಿಂದ ನೀನು ಬಿಳಿಚಿಕೊಂಡಿರುವೆ ಮತ್ತು ದುರ್ಬಲನಾಗಿರುವೆ.

ಗುಣವಾನ್ವಿಗುಣಾನನ್ಯಾನ್ನೂನಂ ಪಶ್ಯಸಿ ಸತ್ಕೃತಾನ್ ।
ಪ್ರಾಜ್ಞೋಽಪ್ರಾಜ್ಞಾನ್ವಿನೀತಾತ್ಮಾ ತೇನಾಸಿ ಹರಿಣಃ ಕೃಶಃ ॥೧೨॥

ನೀನು ಗುಣವಂತನೂ, ವಿದ್ಯಾವಂತನೂ, ವಿನಯಶೀಲನೂ ಆಗಿದ್ದರೂ ನಿನ್ನನ್ನು ಯಾರೂ ಗೌರವಿಸಿ ಸಮ್ಮಾನಿಸುತ್ತಿಲ್ಲ. ಇದಕ್ಕೆ ಬದಲಾಗಿ

ಗುಣಹೀನರನ್ನೂ ಮೂಢರನ್ನೂ ಜನರು ಸತ್ಕರಿಸುವುದನ್ನು ನೀನು ನೋಡುತ್ತಿರುವೆ. ಈ ಕಾರಣದಿಂದ ನೀನು ಬಿಳಿಚಿಕೊಂಡಿರುವೆ ಮತ್ತು ದುರ್ಬಲನಾಗಿರುವೆ.

ಅವೃತ್ತ್ಯಾ ಕ್ಲಿಶ್ಯಮಾನೋಽಪಿ ವೃತ್ತ್ಯುಪಾಯಾನ್ವಿಗರ್ಹಯನ್ ।
ಮಾಹಾತ್ಮ್ಯಾದ್ವ್ಯಥಸೇ ನೂನಂ ತೇನಾಸಿ ಹರಿಣಃ ಕೃಶಃ ॥೧೩॥

ನೀನು ಜೀವನೋಪಾಯಕ್ಕೆ ಮಾರ್ಗವಿಲ್ಲದವನಾಗಿ ಕ್ಲೇಶಪಡುತ್ತಿದ್ದರೂ ಆತ್ಮಗೌರವದ ಕಾರಣದಿಂದ ಪ್ರತಿಗ್ರಹವೇ ಮೊದಲಾದ ಜೀವನ ನಿರ್ವಹಣೆಯ ಉಪಾಯಗಳನ್ನು ನಿಂದಿಸುವೆ. ಈ ಕಾರಣದಿಂದಲೇ ನೀನು ಬಹಳವಾಗಿ ವ್ಯಥೆಪಡುತ್ತಿರುವೆ. ಇದರ ಪರಿಣಾಮವಾಗಿಯೇ ನೀನು ಬಿಳಿಚಿಕೊಂಡಿರುವೆ ಮತ್ತು ದುರ್ಬಲನಾಗಿರುವೆ.

ಸಮ್ಪೀಡ್ಯಾತ್ಮಾನಮಾರ್ಯತ್ವಾತ್ತ್ವಯಾ ಕಶ್ಚಿದುಪಸ್ಕೃತಃ ।
ಜಿತಂ ತ್ವಾಂ ಮನ್ಯತೇ ಸಾಧೋ ತೇನಾಸಿ ಹರಿಣಃ ಕೃಶಃ ॥೧೪॥

ನೀನು ಆರ್ಯನಾಗಿರುವ ಕಾರಣ ಕಾಯಕ್ಲೇಶವನ್ನು ಅನುಭವಿಸುತ್ತಿದ್ದರೂ ಒಬ್ಬನಿಗೆ ಉಪಕರಿಸಿರುವೆ. ಹಾಗೆ ನಿನ್ನಿಂದ ಉಪಕಾರವನ್ನು ಹೊಂದಿದವನು ನಿನ್ನನ್ನು ಜಯಿಸಿದೆನೆಂದೂ, ಉಪಾಯಾಂತರಗಳಿಂದ ಕಾರ್ಯವನ್ನೂ ಸಾಧಿಸಿದೆನೆಂದೂ ಭಾವಿಸುತ್ತಾನೆ. ಈ ಕಾರಣದಿಂದಲೇ ನಿನ್ನ ಶರೀರವು ಕೃಶವಾಗಿದೆ. ಶರೀರದ ಬಣ್ಣವು ಬಿಳಿಚಿಕೊಂಡಿದೆ.

ಕ್ಲಿಶ್ಯಮಾನಾನ್ವಿಮಾರ್ಗೇಷು ಕಾಮಕ್ರೋಧಾವೃತಾತ್ಮನಃ ।
ಮನ್ಯೇ ತ್ವಂ ಧ್ಯಾಯಸಿ ಜನಾಂಸ್ತೇನಾಸಿ ಹರಿಣಃ ಕೃಶಃ ॥೧೫॥

ಕಾಮ-ಕ್ರೋಧಾದಿಗಳಿಂದ ಆಕ್ರಮಿಸಲ್ಪಟ್ಟ ಮನಸ್ಸಿನಿಂದ ಕೂಡಿ ದುರ್ಮಾರ್ಗದಲ್ಲಿ ಪ್ರವೃತ್ತರಾಗಿ ಕಷ್ಟಪಡುತ್ತಿರುವ ಜನರ ವಿಷಯವಾಗಿ ನೀನು ಸದಾ ಚಿಂತಿಸುತ್ತಿರುವೆಯೆಂದು ನಾನು ಭಾವಿಸುತ್ತೇನೆ. ಈ ಕಾರಣದಿಂದಲೇ ನಿನ್ನ ಶರೀರವು ಕೃಶವಾಗಿದೆ ಮತ್ತು ಬಣ್ಣವೂ ಬಿಳಿಚಿಕೊಂಡಿದೆ.

ಪ್ರಜ್ಞಾ ಸಮ್ಭಾವಿತೋ ನೂನಮಪ್ರಜ್ಞೈರುಪಸಂಹಿತಃ ।
ಹೀಯಮಾನೋಽಸಿ ದುರ್ವೃತ್ತೈಸ್ತೇನಾಸಿ ಹರಿಣಃ ಕೃಶಃ ॥೧೬॥

ನೀನು ನಿಶ್ಚಯವಾಗಿಯೂ ಒಳ್ಳೆಯ ಪ್ರಜ್ಞೆಯುಳ್ಳವನಾಗಿರುವುದರಿಂದ ಸಮ್ಮಾನಕ್ಕೆ ಯೋಗ್ಯವಾಗಿರುವೆ. ಆದರೆ ಅಜ್ಞಾನಿಗಳೂ ನಿನ್ನನ್ನು ಅಪಹಾಸ್ಯಮಾಡುತ್ತಾರೆ. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವೂ ಬಿಳಿಚಿಕೊಂಡಿದೆ.

ನೂನಂ ಮಿತ್ರಮುಖಃ ಶತ್ರುಃ ಕಶ್ಚಿದಾರ್ಯವದಾಚರನ್ ।
ವಞ್ಚಯಿತ್ವಾ ಗತಸ್ತ್ವಾಂ ವೈ ತೇನಾಸಿ ಹರಿಣಃ ಕೃಶಃ ॥೧೭॥

ಮಿತ್ರನಂತೆ ನಟಿಸುತ್ತಿದ್ದ ನಿನ್ನ ಶತ್ರುವೊಬ್ಬನು ಶ್ರೇಷ್ಠಪುರುಷನಂತೆ ವ್ಯವಹರಿಸುತ್ತಿದ್ದ ನಿನ್ನನ್ನು ಸಂಪೂರ್ಣವಾಗಿ ನಂಬಿಸಿ ಸಮಯವನ್ನು ಕಾಯುತ್ತಿದ್ದು ನಿನ್ನನ್ನು ವಂಚಿಸಿ ಹೊರಟುಹೋಗಿದ್ದಾನೆ. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವೂ ಬಿಳಿಚಿಕೊಂಡಿದೆ.

ಪ್ರಕಾಶಾರ್ಥಗತಿರ್ನೂನಂ ರಹಸ್ಯ ಕುಶಲಃ ಕೃತೀ ।
ತಜ್ಜ್ಞೈರ್ನ ಪೂಜ್ಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೧೮॥

ನಿನ್ನ ಅರ್ಥಗತಿಯು (ಕಾರ್ಯಪದ್ಧತಿಯು) ಎಲ್ಲರಿಗೂ ತಿಳಿದಿದೆ. ನೀನು ರಹಸ್ಯವನ್ನು ಕಾಪಾಡುವುದರಲ್ಲಿ ಕುಶಲನೂ ಮತ್ತು ವಿದ್ವಾಂಸನೂ ಆಗಿರುವೆ. ಆದರೂ ನಿನ್ನನ್ನು ವಿದ್ವಾಂಸರು ಗೌರವಿಸುವುದಿಲ್ಲ. ಈ ಕಾರಣದಿಂದ ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ಅಸತ್ಸ್ವಪಿ ನಿವಿಷ್ಟೇಷು ಬ್ರುವತೋ ಮುಕ್ತಸಂಶಯಮ್ ।
ಗುಣಾಸ್ತೇ ನ ವಿರಾಜನ್ತೇ ತೇನಾಸಿ ಹರಿಣಃ ಕೃಶಃ ॥೧೯॥

ನೀನು ದುಷ್ಟಪುರುಷರ ಮಧ್ಯದಲ್ಲಿದ್ದರೂ ಯಾವ ವಿಧವಾದ ಸಂಶಯವೂ ಇಲ್ಲದೇ ಉತ್ತಮವಾದ ಮಾತುಗಳನ್ನೇ ಹೇಳುವೆ. ಆದರೂ ನಿನ್ನ ಗುಣಗಳು ಅವರಲ್ಲಿ ಪ್ರಕಾಶಿಸುವುದಿಲ್ಲ. (ನಿನ್ನ ಒಳ್ಳೆಯ ಮಾತುಗಳು ಅವರ ಮೇಲೆ ಯಾವ ವಿಧವಾದ ಪರಿಣಾಮಗಳನ್ನೂ ಉಂಟುಮಾಡುವುದಿಲ್ಲ.) ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ಧನಬುದ್ಧಿಶ್ರುತೈರ್ಹೀನಃ ಕೇವಲಂ ತೇಜಸಾನ್ವಿತಃ ।
ಮಹತ್ಪ್ರಾರ್ಥಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೨೦॥

ಅಥವಾ ಹೀಗಾದರೂ ಇರಬಹುದು. ಧನ, ಬುದ್ಧಿ ಮತ್ತು ಶಾಸ್ತ್ರಜ್ಞಾನಗಳಿಂದ ವಿಹೀನನಾಗಿರುವ ನೀನು ಕೇವಲ ಶರೀರಬಲದಿಂದ ಕೂಡಿದವನಾಗಿ ಮಹಾಪದವಿಯನ್ನು ಅಪೇಕ್ಷಿಸುತ್ತಿರುವೆ. ನಿನ್ನ ಮಹತ್ವಾಕಾಂಕ್ಷೆಯಂತೆ ಆ ಮಹಾಪದವಿಯು ಸಿಕ್ಕದಿರುವ ಕಾರಣ ನೀನೂ ಕೃಶನಾದೆ: ನಿನ್ನ ಶರೀರವೂ ಬಿಳಿಚಿಕೊಂಡಿತು.

ತಪಃಪ್ರಣಿಹಿತಾತ್ಮಾನಂ ಮನ್ಯೇ ತ್ವಾರಣ್ಯಕಾಂಕ್ಷಿಣಮ್ ।
ಬಾನ್ಧವಾ ನಾಭಿನನ್ದನ್ತಿ ತೇನಾಸಿ ಹರಿಣಃ ಕೃಶಃ ॥೨೧॥

ನಿನ್ನ ಮನಸ್ಸು ತಪಸ್ಸಿನಲ್ಲಿಯೇ ಆಸಕ್ತವಾಗಿದೆ. ಆದುದರಿಂದ ನೀನು ಅರಣ್ಯದಲ್ಲಿಯೇ ಇರಲು ಬಯಸಿರುವೆ. ಆದರೆ ನಿನ್ನ ಬಂಧುಜನರು ಇದನ್ನು ಪ್ರೋತ್ಸಾಹಿಸುತ್ತಿಲ್ಲ. ಆದುದರಿಂದ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ಇಷ್ಟಭಾರ್ಯಸ್ಯ ತೇ ನೂನಂ ಪ್ರಾತಿವೇಶ್ಯೋ ಮಹಾಧನಃ ।
ಯುವಾ ಸುಲಲಿತಃ ಕಾಮೀ ತೇನಾಸಿ ಹರಿಣಃ ಕೃಶಃ ॥೨೨॥

ನಿನ್ನ ಭಾರ್ಯೆಯು ಕಡುಚೆಲುವೆಯಾಗಿರುವುದರಿಂದ ನಿನಗೆ ಪರಮಪ್ರಿಯಳಾಗಿದ್ದಾಳೆ. ಆದರೆ ನಿನ್ನ ಪಕ್ಕದ ಮನೆಯಲ್ಲಿಯೇ ಕಡುಚೆಲುವ ನಾದ ಮಹಾಧನವಂತನಾದ, ಕಾಮಿಯಾದ ನವಯುವಕನು ವಾಸ ಮಾಡುತ್ತಿದ್ದಾನೆ. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ನೂನಮರ್ಥವತಾಂ ಮಧ್ಯೇ ತವ ವಾಕ್ಯಮನುತ್ತಮಮ್ ।
ನ ಭಾತಿ ಕಾಲೇಽಭಿಹಿತಂ ತೇನಾಸಿ ಹರಿಣಃ ಕೃಶಃ ॥೨೩॥

ನೀನು ಧನವಂತರ ಮಧ್ಯದಲ್ಲಿ ಪರಮಶ್ರೇಷ್ಠವಾದ ಮತ್ತು ಸಮಯೋಚಿತವಾದ ಮಾತನ್ನೇ ಹೇಳುವೆ. ಆದರೆ ಆ ಮಾತು ಅವರಲ್ಲಿ ಯಾವ ಪ್ರಭಾವವನ್ನೂ ಉಂಟುಮಾಡಿಲ್ಲ. ನೀನು ಕೃಶನಾಗಿರುವುದಕ್ಕೆ ಮತ್ತು ಬಿಳಿಚಿಕೊಂಡಿರುವುದಕ್ಕೆ ಇದಾದರೂ ಕಾರಣವಿರಬಹುದು.

ದೃಢಪೂರ್ವಂ ಶ್ರುತಂ ಮೂರ್ಖಂ ಕುಪಿತಂ ಹೃದಯಪ್ರಿಯಮ್ ।
ಅನುನೇತುಂ ನ ಶಕ್ನೋಸಿ ತೇನಾಸಿ ಹರಿಣಃ ಕೃಶಃ ॥೨೪॥

ದೃಢವಾದ ನಿಶ್ಚಯವುಳ್ಳ, ಮೂರ್ಖನಾದ, ಕೋಪಗೊಂಡಿರುವ ಅತ್ಯಂತಪ್ರಿಯನಾದವನೊಬ್ಬನನ್ನು ನೀನು ಸಮಾಧಾನಗೊಳಿಸಲು ಅಸಮರ್ಥನಾಗಿರುವೆ. ಆದುದರಿಂದ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ನೂನಮಾಸಂಜಯಿತ್ವಾ ತ್ವಾಂ ಕೃತ್ಯೇ ಕಸ್ಮಿಂಶ್ಚಿದೀಪ್ಸಿತೇ ।
ಕಶ್ಚಿದರ್ಥಯತೇ ನಿತ್ಯಂ ತೇನಾಸಿ ಹರಿಣಃ ಕೃಶಃ ॥೨೫॥

ಯಾವನೋ ಒಬ್ಬನು ನಿನ್ನನ್ನು ಒಂದುಕೆಲಸದಲ್ಲಿ ನೇಮಿಸಿ ನಿತ್ಯವೂ ಮತ್ತೆ-ಮತ್ತೆ ಒತ್ತಾಯಮಾಡುತ್ತಿದ್ದಾನೆ. (ಆ ಕೆಲಸವನ್ನು ಪೂರೈಸಲು ನಿನಗಿನ್ನೂ ಸಾಧ್ಯವಾಗಿಲ್ಲ.) ಈ ಕಾರಣದಿಂದ ನೀನು ಕೃಶನಾಗಿರುವೆ ಮತ್ತು ನಿನ್ನ ಶರೀರವು ಬಿಳಿಚಿಕೊಂಡಿದೆ.

ನೂನಂ ತ್ವಾಂ ಸುಗುಣೈರ್ಯುಕ್ತಂ ಪೂಜಯಾನಂ ಸುಹೃದ್ಧ್ರುವಮ್ ।
ಮಮಾರ್ಥ ಇತಿ ಜಾನೀತೇ ತೇನಾಸಿ ಹರಿಣಃ ಕೃಶಃ ॥೨೬॥

ನೀನು ಸದ್ಗುಣಗಳಿಂದ ಯುಕ್ತನಾಗಿರುವುದರಿಂದ ಇತರರು ನಿನ್ನನ್ನು ಗೌರವಿಸುತ್ತಾರೆ. ಆದರೆ ನಿನ್ನ ಮಿತ್ರನು ತನ್ನ ಪ್ರಭಾವದಿಂದಲೇ ನಿನ್ನನ್ನು ಜನರು ಗೌರವಿಸುತ್ತಿರುವರೆಂದು ಭಾವಿಸುತ್ತಾನೆ. ಈ ಕಾರಣದಿಂದ ನೀನು ಕೃಶನಾಗಿರುವೆ ಮತ್ತು ನಿನ್ನ ಮುಖವು ಬಿಳಿಚಿಕೊಂಡಿದೆ.

ಅನ್ತರ್ಗತಮಭಿಪ್ರಾಯಂ ನೂನಂ ನೇಚ್ಛಸಿ ಲಜ್ಜಯಾ ।
ವಿವೇಕ್ತುಂ ಪ್ರಾಪ್ತಿಶೈಥಿಲ್ಯಾತ್ತೇನಾಸಿ ಹರಿಣಃ ಕೃಶಃ ॥೨೬॥

ನೀನು ನಾಚಿಕೆಯಿಂದ ನಿನ್ನ ಮನಸ್ಸಿನಲ್ಲಿರುವ ಅಭಿಪ್ರಾಯವನ್ನು ಯಾರೊಡನೆಯೂ ಹೇಳಲು ಇಚ್ಛಿಪಡದಿರಬಹುದು. ಏಕೆಂದರೆ: ಅಭೀಷ್ಟವಾದ ವಸ್ತುವನ್ನು ಪಡೆದುಕೊಳ್ಳುವುದರಲ್ಲಿ ನಿನಗೇ ಸಂದೇಹವುಂಟಾಗಿದೆ. ಆದುದರಿಂದಲೇ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ನಾನಾಬುದ್ಧಿರುಚೀ ಲೋಕೇ ಮನುಷ್ಯಾನ್ನೂನಮಿಚ್ಛಸಿ ।
ಗ್ರಹೀತುಂ ಸ್ವಗುಣೈಃ ಸರ್ವಾಂಸ್ತೇನಾಸಿ ಹರಿಣಃ ಕೃಶಃ ॥೨೮॥

ನಿಶ್ಚಯವಾಗಿಯೂ ಪ್ರಪಂಚದಲ್ಲಿ ಭಿನ್ನ-ಭಿನ್ನಬುದ್ಧಿಗಳಿರುವ, ನಾನಾ

ಪ್ರಕಾರವಾದ ಅಭಿರುಚಿಗಳುಳ್ಳ ಮನುಷ್ಯರಿದ್ದಾರೆ. ನೀನು ಆ ಎಲ್ಲ ಮನುಷ್ಯರನ್ನೂ ನಿನ್ನ ಗುಣಗಳಿಂದ ವಶಪಡಿಸಿಕೊಳ್ಳಲು ಇಚ್ಛಿಸಿರುವೆ. ಈ ಕಾರಣದಿಂದಲೇ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ಅವಿದ್ವಾನ್ಭೀರುರಲ್ಪಾರ್ಥೋ ವಿದ್ಯಾವಿಕ್ರಮದಾನಜಮ್ ।
ಯಶಃ ಪ್ರಾರ್ಥಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೨೯॥

ನೀನು ಅವಿದ್ಯಾವಂತನಾಗಿದ್ದರೂ ವಿದ್ಯೆಗೆ ಲಭಿಸುವ ಯಶಸ್ಸನ್ನು ಆಶಿಸುವೆ. ಹೇಡಿಯಾಗಿದ್ದರೂ ಪರಾಕ್ರಮಕ್ಕೆ ಲಭಿಸುವ ಯಶಸ್ಸನ್ನು ಆಶಿಸುವೆ. ಅಲ್ಪಧನನಾಗಿದ್ದರೂ ದಾನದಿಂದ ಲಭಿಸುವ ಯಶಸ್ಸನ್ನು ಪಡೆದುಕೊಳ್ಳಬೇಕೆಂದು ಬಯಸುವೆ. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವೂ ಬಿಳಿಚಿಕೊಂಡಿದೆ.

ಚಿರಾಭಿಲಷಿತಂ ಕಿಂಚಿತ್ಫಲಮಪ್ರಾಪ್ತಮೇವ ತೇ ।
ಕೃತಮನ್ಯೈರಪಹೃತಂ ತೇನಾಸಿ ಹರಿಣಃ ಕೃಶಃ ॥೩೦॥

ನೀನು ಯಾವುದೋ ಫಲವನ್ನು ಪಡೆದುಕೊಳ್ಳಬೇಕೆಂದು ಬಹಳ ಕಾಲದಿಂದ ಪ್ರಯತ್ನಿಸುತ್ತಿದ್ದೆ. ಆ ಫಲವು ನಿನಗೆ ಸಿಕ್ಕಲೇ ಇಲ್ಲ. ಆದರೆ ನೀನು ಹೊಂದಲಿದ್ದ ಆ ಫಲವನ್ನೇ ಬೇರೆಯವರು ಅಪಹರಿಸಿಕೊಂಡು ಹೊರಟುಹೋದರು. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವೂ ಬಿಳಿಚಿಕೊಂಡಿದೆ.

ನೂನಮಾತ್ಮಕೃತಂ ದೋಷಮಪಶ್ಯನ್ಕಿಂಚಿದಾತ್ಮನಃ ।
ಅಕಾರಣೇಽಭಿಶಪ್ತೋಽಸಿ ತೇನಾಸಿ ಹರಿಣಃ ಕೃಶಃ ॥೩೧॥

ನಿಶ್ಚಯವಾಗಿಯೂ ನೀನು ಯಾವ ಅಪರಾಧವನ್ನೂ ಮಾಡಿದವನಲ್ಲ. ಯಾವುದೂ ನಿನ್ನ ತಿಳಿವಳಿಕೆಗೂ ಬಂದಿರುವುದಿಲ್ಲ. ನೀನು ಯಾವುದನ್ನೂ ಅರಿಯೆ. ಆದರೂ ಇತರರು ನಿಷ್ಕಾರಣವಾಗಿ ನೀನೇ ಅಪರಾಧಿಯೆಂದು ಆಪಾದಿಸುತ್ತಿದ್ದಾರೆ. ಈ ಕಾರಣದಿಂದ ನೀನು ಕೃಶನಾಗಿರುವೆ ಮತ್ತು ನಿನ್ನ ಶರೀರವು ಬಿಳಿಚಿಕೊಂಡಿದೆ.

ಸಾಧೂನ್ಗೃಹಸ್ಥಾನ್ದೃಷ್ಟ್ವಾ ಚ ತಥಾಸಾಧೂನ್ವನೇಚರಾನ್ ।
ಮುಕ್ತಾಂಶ್ಚಾವಸಥೇ ಸಕ್ತಾಂಸ್ತೇನಾಸಿ ಹರಿಣಃ ಕೃಶಃ ॥೩೨॥

ವಿರಕ್ತರಾದ ಸಾಧುಗಳು ಗೃಹಸ್ಥರಾಗಿರುವುದನ್ನೂ, ದುರ್ಜನರು ಅರಣ್ಯಗಳಲ್ಲಿ ತಿರುಗುತ್ತಿರುವುದನ್ನೂ, ಸನ್ಯಾಸಿಗಳು ಮನೆ-ಮಂದಿರಗಳನ್ನು ಕಟ್ಟಿಕೊಂಡು ವಾಸಿಸುವುದರಲ್ಲಿ ಆಸಕ್ತರಾಗಿರುವುದನ್ನೂ ನೋಡಿ ನೀನು ಕೃಶನಾಗಿರುವೆ ಮತ್ತು ನಿನ್ನ ಶರೀರವು ಬಿಳಿಚಿಕೊಂಡಿದೆ.

ಸುಹೃದಾಂ ದುಃಖಮಾರ್ತಾನಾಂ ನ ಪ್ರಮೋಕ್ಷ್ಯಸಿ ಚಾರ್ತಿಜಮ್ ।
ಅಲಮರ್ಥಗುಣೈರ್ಹೀನಂ ತೇನಾಸಿ ಹರಿಣಃ ಕೃಶಃ ॥೩೩॥

ವ್ಯಾಧಿಗ್ರಸ್ತರಾದ ಸುಹೃದರ ಆರ್ಥಿಕಸಂಬಂಧವಾದ ದುಃಖವನ್ನಾಗಲೀ, ರೋಗಸಂಬಂಧವಾದ ದುಃಖವನ್ನಾಗಲೀ ಪರಿಹರಿಸಲು ನೀನು ಸಮರ್ಥನಾಗಿಲ್ಲ. ಈ ಕಾರಣದಿಂದ ನೀನು ಕೃಶನಾಗಿರುವೆ ಮತ್ತು ಬಿಳಿಚಿಕೊಂಡಿರುವೆ.

ಧರ್ಮ್ಯಮರ್ಥ್ಯಂ ಚ ಕಾಮ್ಯಂ ಚ ಕಾಲೇ ಚಾಭಿಹಿತಂ ವಚಃ ।
ನ ಪ್ರತೀಯನ್ತಿ ತೇ ನೂನಂ ತೇನಾಸಿ ಹರಿಣಃ ಕೃಶಃ ॥೩೪॥

ನೀನು ಹೇಳುವ ಮಾತುಗಳು ಧರ್ಮಾರ್ಥ-ಕಾಮಗಳ ಸಾಧನೆಗೆ ಅನುಕೂಲವಾಗಿಯೂ ಕಾಲೋಚಿತವಾಗಿಯೂ ಇರುತ್ತವೆ. ಆದರೆ ಇತರರು ನಿನ್ನ ಮಾತಿನ ಮೇಲೆ ವಿಶ್ವಾಸವನ್ನಿಡುತ್ತಿಲ್ಲ. ಆದುದರಿಂದ ನೀನು ಕೃಶನಾಗಿರುವೆ ಮತ್ತು ನಿನ್ನ ಶರೀರವು ಬಿಳಿಚಿಕೊಂಡಿದೆ.

ದತ್ತಾನಕುಶಲೈರರ್ಥಾನ್ಮನೀಷೀ ಸಂಜಿಜೀವಿಷುಃ ।
ಪ್ರಾಪ್ಯ ವರ್ತಯಸೇ ನೂನಂ ತೇನಾಸಿ ಹರಿಣಃ ಕೃಶಃ ॥೩೫॥

ನೀನು ವಿದ್ವಾಂಸನಾಗಿದ್ದರೂ ಜೀವನವನ್ನು ನಿರ್ವಹಿಸುವ ಇಚ್ಛೆಯಿಂದ ಅಜ್ಞಾನಿಗಳು ಕೊಡುವ ಧನ-ಧಾನ್ಯಗಳಿಂದ ಜೀವನವನ್ನು ನಿರ್ವಹಿಸುತ್ತಿರುವೆ. ಈ ಕಾರಣದಿಂದ ನೀನು ಕೃಶನಾಗಿರುವೆ ಮತ್ತು ನಿನ್ನ ಶರೀರವು ಬಿಳಿಚಿಕೊಂಡಿದೆ.

ಪಾಪಾನ್ಪ್ರವರ್ಧತೋ ದೃಷ್ಟ್ವಾ ಕಲ್ಯಾಣಾನವಸೀದತಃ ।
ಧ್ರುವಂ ಗರ್ಹಯತೇ ನಿತ್ಯಂ ತೇನಾಸಿ ಹರಿಣಃ ಕೃಶಃ ॥೩೬॥

ಪಾಪಿಗಳು ಅಭಿವೃದ್ಧಿಗೆ ಬರುತ್ತಿರುವುದನ್ನೂ, ಪುಣ್ಯವಂತರು ನಾಶ ಹೊಂದುತ್ತಿರುವುದನ್ನೂ ನೋಡಿ ಇಂತಹ ಕಾಲವು ಸನ್ನಿಹಿತವಾದುದಕ್ಕಾಗಿ

ಸದಾ ನಿಂದಿಸುತ್ತಿರುವೆ. ಈ ಯೋಚನೆಯಿಂದಾಗಿಯೇ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ಪರಸ್ಪರವಿರುದ್ಧಾನಾಂ ಪ್ರಿಯಂ ನೂನಂ ಚಿಕೀರ್ಷಸಿ ।
ಸುಹೃದಾಮುಪರೋಧೇನ ತೇನಾಸಿ ಹರಿಣಃ ಕೃಶಃ ॥೩೭॥

ಪರಸ್ಪರವಾಗಿ ದ್ವೇಷಭಾವವನ್ನು ತಾಳಿರುವ ನಿನ್ನ ಮಿತ್ರರಿಗೆ ಪ್ರಿಯವನ್ನುಂಟುಮಾಡಲು ನೀನು ಬಯಸುವೆ. ಆದರೆ ಅವರು ಅದಕ್ಕೆ ಅವಕಾಶವನ್ನು ಕೊಡುತ್ತಿಲ್ಲ. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ.

ಶ್ರೋತ್ರಿಯಾಂಶ್ಚ ವಿಕರ್ಮಸ್ಥಾನ್ಪ್ರಾಜ್ಞಾಂಶ್ಚಾಪ್ಯಜಿತೇನ್ದ್ರಿಯಾನ್ ।
ಮನ್ಯೇನುಧ್ಯಾಯಸಿ ಜನಾಂಸ್ತೇನಾಸಿ ಹರಿಣಃ ಕೃಶಃ ॥೩೮॥

ವೇದಜ್ಞರಾದ ಶ್ರೋತ್ರಿಯಬ್ರಾಹ್ಮಣರು ವೇದವಿರುದ್ಧವಾದ ಮತ್ತು ಕುತ್ಸಿತವಾದ ಕರ್ಮಗಳಲ್ಲಿ ತತ್ಪರರಾಗಿರುವುದನ್ನೂ, ಪ್ರಾಜ್ಞರು ಇಂದ್ರಿಯಗಳಿಗೆ ಅಧೀನರಾಗಿರುವುದನ್ನೂ ನೋಡಿ ಅಂತಹ ಕಾಲವು ಸನ್ನಿಹಿತವಾದುದಕ್ಕಾಗಿ ಸದಾ ನೀನು ಆ ಜನರ ವಿಷಯವಾಗಿ ಚಿಂತೆಯಲ್ಲಿಯೇ ಮಗ್ನನಾಗಿರುವೆಯೆಂದು ಭಾವಿಸುತ್ತೇನೆ. ಈ ಕಾರಣದಿಂದ ನೀನು ಕೃಶನಾಗಿರುವೆ. ನಿನ್ನ ಶರೀರವು ಬಿಳಿಚಿಕೊಂಡಿದೆ."

ಯುಧಿಷ್ಠಿರ! ಬ್ರಾಹ್ಮಣನು ಹೀಗೆ ಸಾಂತ್ವನದ ಮಾತುಗಳಿಂದಲೇ ರಾಕ್ಷಸನನ್ನು ಸಮಾದರಿಸಿದನು. ಅದಕ್ಕೆ ಪ್ರತಿಯಾಗಿ ರಾಕ್ಷಸನು ಬ್ರಾಹ್ಮಣನನ್ನು ಯಥೋಚಿತವಾಗಿ ಸತ್ಕರಿಸಿ ತನ್ನ ಸ್ನೇಹಿತನನ್ನಾಗಿ ಮಾಡಿಕೊಂಡು ಅವನಿಗೆ ಬೇಕಾದಷ್ಟು ಹಣವನ್ನು ಕೊಟ್ಟು ಬಿಟ್ಟುಬಿಟ್ಟನು."

೧೭೪ನೆಯ ಅಧ್ಯಾಯವು ಮುಗಿಯಿತು.

೧೨೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಶ್ರಾದ್ಧದ ವಿಷಯದಲ್ಲಿ ದೇವದೂತ ಮತ್ತು ಪಿತೃಗಳ ಸಂವಾದ: ಪಾಪದಿಂದ ಮುಕ್ತಿಹೊಂದುವ ವಿಷಯದಲ್ಲಿ ವಿದ್ಯುತ್ಪ್ರಭ ಮತ್ತು ಇಂದ್ರರ ಸಂವಾದ: ಧರ್ಮದ ವಿಷಯದಲ್ಲಿ ಇಂದ್ರ-ಬೃಹಸ್ಪತಿಗಳ ಸಂವಾದ: ವೃಷೋತ್ಸರ್ಗವೇ ಮುಂತಾದ ವಿಷಯಗಳಲ್ಲಿ ದೇವರ್ಷಿ-ಪಿತೃಗಳ ಸಂವಾದ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಜನ್ಮ ಮಾನುಷ್ಯಕಂ ಪ್ರಾಪ್ಯ ಕರ್ಮಕ್ಷೇತ್ರಂ ಸುದುರ್ಲಭಮ್ ।
ಶ್ರೇಯೋಽರ್ಥಿನಾ ದರಿದ್ರೇಣ ಕಿಂ ಕರ್ತವ್ಯಂ ಪಿತಾಮಹ ॥೧॥

"ಪಿತಾಮಹನೇ! ಕರ್ಮಕ್ಷೇತ್ರವಾದ, ಪರಮದುರ್ಲಭವಾದ ಮನುಷ್ಯಜನ್ಮವನ್ನು ಹೊಂದಿ ಕಲ್ಯಾಣವನ್ನು ಸಾಧಿಸಿಕೊಳ್ಳಬೇಕೆಂದು ಬಯಸುವ ದರಿದ್ರನ ಕರ್ತವ್ಯವೇನು?

ದಾನಾನಾಮುತ್ತಮಂ ಯಚ್ಚ ದೇಯಂ ಯಚ್ಚ ಯಥಾ ಯಥಾ ।
ಮಾನ್ಯಾನ್ಪೂಜ್ಯಾಂಶ್ಚ ಗಾಙ್ಗೇಯ ರಹಸ್ಯಂ ವಕ್ತುಮರ್ಹಸಿ ॥೨॥

ಗಂಗಾತನಯನೇ! ದಾನಗಳಲ್ಲಿ ಉತ್ತಮವಾದ ದಾನವು ಯಾವುದು? ಯಾವ ಯಾವ ವಸ್ತುಗಳನ್ನು ಯಾವ ಯಾವ ರೀತಿಯಲ್ಲಿ ಕೊಡಬೇಕು? ಮಾನನೀಯರೂ ಪೂಜನೀಯರೂ ಯಾರು?—ಈ ಎಲ್ಲದರ ರಹಸ್ಯವನ್ನೂ ಹೇಳುವ ಕೃಪೆಮಾಡು."

ವೈಶಂಪಾಯನರು ಹೇಳುತ್ತಾರೆ:

ಜನಮೇಜಯ! ನರೇಂದ್ರನಾದ ಯಶೋವಂತನಾದ ಯುಧಿಷ್ಠಿರನು ಹೀಗೆ ಪ್ರಶ್ನಿಸಲಾಗಿ, ಭೀಷ್ಮಪಿತಾಮಹನು ಧರ್ಮಗಳ ಪರಮರಹಸ್ಯವನ್ನು ಹೇಳತೊಡಗಿದನು:

"ಯುಧಿಷ್ಠಿರಮಹಾರಾಜ! ಹಿಂದೆ ಪೂಜ್ಯರಾದ ವ್ಯಾಸರು ನನಗೆ ಹೇಳಿರುವ ಧರ್ಮರಹಸ್ಯಗಳನ್ನು ಯಥಾವತ್ತಾಗಿ ಹೇಳುವೆನು. ಏಕಾಗ್ರ ಚಿತ್ತನಾಗಿ ಕೇಳು. ಎಂತಹ ಕಾರ್ಯವನ್ನಾದರೂ ಕ್ಲೇಶವಿಲ್ಲದೇ ಮಾಡುವ ಸಾಮರ್ಥ್ಯವನ್ನು ಹೊಂದಿರುವ ಯಮನು, ನಿಯತವ್ರತಾನುಷ್ಠಾನಪರನಾಗಿ

ಯೋಗಯುಕ್ತನಾಗಿ ತಾನು ಮಾಡಿದ ತಪಸ್ಸಿನ ಫಲರೂಪವಾಗಿ ಈ ದೇವರಹಸ್ಯವನ್ನು ತಿಳಿದುಕೊಂಡನು. ಈ ರಹಸ್ಯವನ್ನು ತಿಳಿದಿರುವವನ ಮತ್ತು ಅನುಷ್ಠಾನಮಾಡುವವನ ವಿಷಯದಲ್ಲಿ ಯಮರಾಜನು ಸುಪ್ರೀತನಾಗುವನು ಮತ್ತು ಪಿತೃಗಳೂ, ಋಷಿಗಳೂ, ಪ್ರಮಥಗಣಗಳೂ, ಲಕ್ಷ್ಮಿಯೂ, ಚಿತ್ರಗುಪ್ತನೂ, ದಿಗ್ಗಜಗಳೂ ಪ್ರೀತರಾಗುವರು.

ಈ ಧರ್ಮರಹಸ್ಯದಲ್ಲಿ ಮಹಾಫಲದಾಯಕವಾದ ರಹಸ್ಯಗಳಿಂದ ಕೂಡಿದ ಋಷಿಧರ್ಮವು ಹೇಳಲ್ಪಟ್ಟಿದೆ. ಮಹಾದಾನಗಳ ಫಲವೂ ಸಕಲವಿಧವಾದ ಯಜ್ಞಗಳ ಫಲವೂ ಹೇಳಲ್ಪಟ್ಟಿದೆ. ಈ ಧರ್ಮರಹಸ್ಯವನ್ನು ಯಾವನು ತಿಳಿಯುವನೋ ಮತ್ತು ತಿಳಿದುಕೊಂಡು ಅದರಂತೆ ಆಚರಿಸುವನೋ–ಅಂತಹವನು ಪಾಪಿಯಾಗಿದ್ದರೂ ಪಾಪಗಳಿಂದ ಮುಕ್ತನಾಗಿ ಸದ್ಗುಣಗಳಿಂದ ಸಂಪನ್ನನಾಗುತ್ತಾನೆ.

ದಶಸೂನಾಸಮಂ ಚಕ್ರಂ ದಶಚಕ್ರಸಮೋ ಧ್ವಜಃ ।
ದಶಧ್ವಜಸಮಾ ವೇಶ್ಯಾ ದಶವೇಶ್ಯಾ ಸಮೋನೃಪಃ ॥೯॥

ಹತ್ತು ಮಂದಿ ಕಟುಕರಿಗೆ ಒಬ್ಬ ಗಾಣಿಗನು ಸಮ. ಹತ್ತು ಮಂದಿ ಗಾಣಿಗರಿಗೆ ಒಬ್ಬ ಈಡಿಗನು ಸಮ. ಹತ್ತು ಮಂದಿ ಈಡಿಗರಿಗೆ ಒಬ್ಬ ವೇಶ್ಯೆಯು ಸಮಾನಳು. ಹತ್ತು ವೇಶ್ಯೆಯರಿಗೆ ಒಬ್ಬ ರಾಜನು ಸಮಾನನು.

ಅರ್ಧೇನೈತಾನಿ ಸರ್ವಾಣಿ ನೃಪತಿಃ ಕಥ್ಯತೇऽಧಿಕಃ ।
ತ್ರಿವರ್ಗಸಹಿತಂ ಶಾಸ್ತ್ರಂ ಪವಿತ್ರಂ ಪುಣ್ಯಲಕ್ಷಣಮ್ ॥೧೦॥

ಕಟುಕ, ಗಾಣಿಗ, ಈಡಿಗ ಮತ್ತು ವೇಶ್ಯೆ -ಇವರೆಲ್ಲರ ಪಾಪಕ್ಕಿಂತಲೂ ರಾಜನು ಅರ್ಧದಷ್ಟು ಅಧಿಕಪಾಪಿಷ್ಠನೆಂದು ಹೇಳುತ್ತಾರೆ. (ಆದುದರಿಂದ ರಾಜನಿಂದ ಯಾವುದನ್ನೂ ಪ್ರತಿಗ್ರಹಿಸಬಾರದು.) ಧರ್ಮಾರ್ಥಕಾಮಗಳೆಂಬ ಪುರುಷಾರ್ಥಗಳನ್ನು ಪ್ರತಿಪಾದಿಸುವ ಶಾಸ್ತ್ರವು ಪವಿತ್ರವೂ, ಪುಣ್ಯಲಕ್ಷಣಗಳಿಂದ ಕೂಡಿರುವುದೂ ಆಗಿದೆ. ಅದರಲ್ಲಿ ಧರ್ಮದ ಮತ್ತು ಧರ್ಮರಹಸ್ಯದ ವಿವರಣೆಯಿದೆ. ಅದು ಪರಮಪವಿತ್ರವಾದುದು. ಈ

ಮಹಾಶಾಸ್ತ್ರವನ್ನು ರಹಸ್ಯದಲ್ಲಿ ಕೇಳಬೇಕು. ಧರ್ಮಯುಕ್ತವಾದ ಮತ್ತು ದೇವತೆಗಳಿಂದಲೇ ರಚಿಸಲ್ಪಟ್ಟ ತ್ರಿವರ್ಗಸಹಿತವಾದ ಶಾಸ್ತ್ರವನ್ನು ಕೇಳಲೇಬೇಕು. ಈ ಶಾಸ್ತ್ರದಲ್ಲಿ ಪಿತೃಗಳ ಸಲುವಾಗಿ ಮಾಡುವ ಶ್ರಾದ್ಧಕರ್ಮದ ರಹಸ್ಯವಿಷಯಗಳನ್ನು ಹೇಳಿದೆ. ಎಲ್ಲ ದೇವತೆಗಳ ಅಖಿಲವಾದ ರಹಸ್ಯ ವಿಷಯಗಳನ್ನೂ ಹೇಳಿದೆ. ಮಹಾಫಲದಾಯಕವಾದ ರಹಸ್ಯವಿಷಯಗಳಿಂದ ಕೂಡಿದ ಋಷಿಧರ್ಮವು ಉಕ್ತವಾಗಿದೆ. ಮಹಾದಾನಗಳ ಫಲವೂ, ಸಕಲವಿಧವಾದ ಯಜ್ಞಗಳ ಫಲವೂ ಉಕ್ತವಾಗಿದೆ. ಯಾವ ಮನುಷ್ಯರು ಈ ಶಾಸ್ತ್ರವನ್ನು ಸದಾ ಪಠನಮಾಡುವರೋ, ಹೃದ್ಗತಮಾಡಿಕೊಳ್ಳುವರೋ ಮತ್ತು ಅದರ ಫಲವನ್ನು ಕೇಳಿ ಅದನ್ನು ಇತರರಿಗೂ ವಿವರಿಸಿ ಹೇಳುವರೋ– ಅವರು ನಾರಾಯಣಸ್ವರೂಪರೇ ಆಗುವರು. ಯಾವ ಮನುಷ್ಯನು ಅತಿಥಿಗಳನ್ನು ಸತ್ಕರಿಸುವನೋ–ಅವನು ಗೋದಾನ, ತೀರ್ಥಸ್ನಾನ, ಯಜ್ಞಾನುಷ್ಠಾನಗಳ ಫಲವನ್ನು ಹೊಂದುತ್ತಾನೆ. ಯಾರು ಶ್ರದ್ಧಾಪೂರ್ವಕವಾಗಿ ಈ ಧರ್ಮಶಾಸ್ತ್ರವನ್ನು ಕೇಳುವರೋ, ಯಾರ ಮನಸ್ಸು ಶುದ್ಧವಾಗಿರುವುದೋ–ಅಂತಹವರು ಶ್ರದ್ಧೆಯಿಂದಲೂ ಶುದ್ಧವಾದ ಮನಸ್ಸಿನಿಂದಲೂ ಪುಣ್ಯಲೋಕಗಳನ್ನು ಜಯಿಸುವರೆಂಬುದು ಸ್ಪಷ್ಟವಾಗಿಯೇ ಇದೆ.

ಶ್ರದ್ಧಾಪೂರ್ವಕವಾಗಿ ಈ ಧರ್ಮಶಾಸ್ತ್ರವನ್ನು ಶ್ರವಣಮಾಡುವುದರಿಂದ ಮನುಷ್ಯನು ಹಿಂದೆ ಮಾಡಿದ ಪಾಪದಿಂದ ಮುಕ್ತನಾಗುತ್ತಾನೆ. ಪುನಃ ಅವನು ಪಾಪಲಿಪ್ತನಾಗುವುದಿಲ್ಲ. ಸತತವಾಗಿ ಧರ್ಮಕಾರ್ಯಗಳನ್ನು ಮಾಡುತ್ತಲೇ ಇರುತ್ತಾನೆ. ಅವಸಾನಾನಂತರದಲ್ಲಿ ಪುಣ್ಯಲೋಕಗಳನ್ನೂ ಹೊಂದುತ್ತಾನೆ.

ಹಿಂದೊಮ್ಮೆ ದೇವದೂತನೊಬ್ಬನು ಆಕಸ್ಮಿಕವಾಗಿ ಆಗಮಿಸಿ ಅದೃಶ್ಯನಾಗಿಯೇ ಇದ್ದು ಇಂದ್ರನೊಡನೆ ಹೇಳಿದನು:

"ದೇವೇಂದ್ರನೇ! ಕಮನೀಯವಾದ ಗುಣಗಳಿಂದ ಸಂಪನ್ನರಾಗಿರುವ, ವೈದ್ಯಶ್ರೇಷ್ಠರಾದ ಅಶ್ವಿನೀದೇವತೆಗಳ ಆಜ್ಞಾನುಸಾರವಾಗಿ ನಾನು ಮನುಷ್ಯರ, ಪಿತೃಗಳ ಮತ್ತು ದೇವತೆಗಳ ಸಮೀಪಕ್ಕೆ ಬಂದಿರುವೆನು.

ಕಸ್ಮಾದ್ಧಿ ಮೈಥುನಂ ಶ್ರಾದ್ಧೇ ದಾತುರ್ಭೋಕ್ತುಶ್ಚ ವರ್ಜಿತಮ್ ।
ಕಿಮರ್ಥಂ ಚ ತ್ರಯಃ ಪಿಣ್ಡಾಃ ಪ್ರವಿಭಕ್ತಾಃ ಪೃಥಕ್ಪೃಥಕ್ ॥೨೦॥

ಶ್ರಾದ್ಧದಿನದಲ್ಲಿ ಶ್ರಾದ್ಧಕರ್ತೃವಿಗೂ ನಿಮಂತ್ರಿತನಾದ ಬ್ರಾಹ್ಮಣನಿಗೂ ಮೈಥುನಕ್ರಿಯೆಯು ನಿಷೇಧಿಸಲ್ಪಟ್ಟಿದೆ. ಇದಕ್ಕೆ ಕಾರಣವೇನು? ಶ್ರಾದ್ಧದಲ್ಲಿ ಯಾವ ಕಾರಣದಿಂದ ಮೂರು ಪಿಂಡಗಳನ್ನು ಪ್ರತ್ಯೇಕ-ಪ್ರತ್ಯೇಕವಾಗಿ ವಿಭಜಿಸುತ್ತಾರೆ?

ಪ್ರಥಮಃ ಕಸ್ಯ ದಾತವ್ಯೋ ಮಧ್ಯಮಃ ಕ್ವ ಚ ಗಚ್ಛತಿ ।
ಉತ್ತರಶ್ಚ ಸ್ಮೃತಃ ಕಸ್ಯ ಏತದಿಚ್ಛಾಮಿ ವೇದಿತುಮ್ ॥೨೧॥

ಮೊದಲನೆಯ ಪಿಂಡವನ್ನು ಯಾರಿಗೆ ಪ್ರದಾನಮಾಡಬೇಕು? ಎರಡನೆಯ ಪಿಂಡವು ಯಾರಿಗೆ ಸೇರುತ್ತದೆ? ಮೂರನೆಯ ಪಿಂಡವು ಯಾರಸಲುವಾಗಿ ಇಡಲ್ಪಡುತ್ತದೆ?–ಈ ಎಲ್ಲ ವಿಷಯಗಳನ್ನೂ ತಿಳಿಯಬಯಸುತ್ತೇನೆ.”

ಶ್ರದ್ಧಾಳುವಾದ ದೇವದೂತನ ಧರ್ಮಯುಕ್ತವಾದ ಈ ಮಾತನ್ನು ಕೇಳಿ ಪೂರ್ವದೇವತೆಗಳಾಗಿದ್ದ ಪಿತೃಗಳು ದೇವದೂತನನ್ನು ಶ್ಲಾಘಿಸುತ್ತಾ ಹೇಳಿದರು:

“ಆಕಾಶಗಾಮಿಗಳಲ್ಲಿ ಶ್ರೇಷ್ಠನಾದ ದೇವದೂತನೇ! ನಿನಗೆ ಸ್ವಾಗತವನ್ನು ಬಯಸುತ್ತೇವೆ. ನಿನಗೆ ಮಂಗಳವಾಗಲಿ. ನೀನು ಕೇಳಿದ ಪ್ರಶ್ನೆಯು ಪರಮಗೂಢಾರ್ಥವುಳ್ಳದ್ದು. ನಿನ್ನ ಪ್ರಶ್ನೆಗೆ ಉತ್ತರವನ್ನು ಕೇಳು.

ಶ್ರಾದ್ಧಂ ದತ್ತ್ವಾ ಚ ಭುಕ್ತ್ವಾ ಚ ಪುರುಷೋ ಯಃ ಸ್ತ್ರಿಯಂ ವ್ರಜೇತ್ ।
ಪಿತರಸ್ತಸ್ಯ ತಂ ಮಾಸಂ ತಸ್ಮಿನ್ರೇತಸಿ ಶೇರತೇ ॥೨೪॥

ಶ್ರಾದ್ಧಕರ್ತೃವಾಗಲೀ ಶ್ರಾದ್ಧಭೋಜನಮಾಡಿದವನಾಗಲೀ–ಶ್ರಾದ್ಧದ ದಿನ ಸ್ತ್ರೀಸಮಾಗಮವನ್ನು ಮಾಡಿದ್ದೇ ಆದರೆ ಅವನ ಪಿತೃಗಳು ಆ ತಿಂಗಳು ಪೂರ್ತಿಯಾಗಿ ಅವನ ರೇತಸ್ಸಿನಲ್ಲಿ ಮಲಗುತ್ತಾರೆ. ಮುಂದೆ ನಾನು ಅನುಕ್ರಮವಾಗಿ ಪಿಂಡಗಳ ವಿಭಾಗವನ್ನು ಹೇಳುತ್ತೇನೆ.

ಪಿಣ್ಡೋಽಹ್ಯಧಸ್ತಾದ್ಗಚ್ಛಂಸ್ತು ಅಪ ಆವಿಶ್ಯ ಭಾವಯೇತ್ ।
ಪಿಣ್ಡಂ ತು ಮಧ್ಯಮಂ ತತ್ರ ಪತ್ನೀ ತ್ವೇಕಾ ಸಮಶ್ನುತೇ ।
ಪಿಣ್ಡಸ್ತೃತೀಯೋ ಯಸ್ತೇಷಾಂ ತಂ ದದ್ಯಾಜ್ಜಾತವೇದಸಿ ॥೨೬॥

ಮೂರು ಪಿಂಡಗಳಲ್ಲಿ ಮೊದಲನೆಯದನ್ನು ನೀರಿನಲ್ಲಿ ಬಿಡಬೇಕು. ಎರಡನೆಯದನ್ನು ಕರ್ತೃವಿನ ಪತ್ನಿಯೊಬ್ಬಳೇ ತಿನ್ನಬೇಕು. ಮೂರನೆಯದನ್ನು ಅಗ್ನಿಯಲ್ಲಿ ಹೋಮಮಾಡಬೇಕು.

ಶ್ರಾದ್ಧದ ವಿಧಿಯು ಹೀಗೆ ಹೇಳಲ್ಪಟ್ಟಿದೆ. ಹೀಗೆ ಮಾಡುವುದರಿಂದ ಧರ್ಮಲೋಪವಾಗುವುದಿಲ್ಲ. ಕರ್ತೃವಿನ ಪಿತೃಗಳು ಯಾವಾಗಲೂ ಪ್ರಸನ್ನಚಿತ್ತರಾಗಿ ಸಂತುಷ್ಟರಾಗಿರುತ್ತಾರೆ. ಕರ್ತೃವಿನ ಸಂತಾನವು ವೃದ್ಧಿಯನ್ನು ಹೊಂದುತ್ತದೆ. ಯಾವಾಗಲೂ ಕ್ಷೀಣಿಸುವುದಿಲ್ಲ."

ಪಿತೃದೇವತೆಗಳ ಮಾತನ್ನು ಕೇಳಿ ದೇವದೂತನು ಹೇಳುತ್ತಾನೆ:

"ಪಿತೃದೇವತೆಗಳೇ! ನೀವು ಅನುಕ್ರಮವಾಗಿ ಪಿಂಡಗಳ ಪ್ರತ್ಯೇಕ-ಪ್ರತ್ಯೇಕವಾದ ವಿಭಾಗಗಳನ್ನು ಹೇಳಿದಿರಿ ಮತ್ತು ಮೂರುಲೋಕಗಳಲ್ಲಿರುವ ಸಮಸ್ತಪಿತೃಗಳಿಗೂ ಪಿಂಡಪ್ರದಾನಮಾಡುವ ಶಾಸ್ತ್ರೋಕ್ತವಾದ ವಿಧಿಯನ್ನೂ ಹೇಳಿದಿರಿ. ಈ ಮೂರು ಪಿಂಡಗಳೂ ಯಾರಿಗೆ ಸೇರುತ್ತವೆಯೆಂಬುದನ್ನು ತಿಳಿಯಲು ಬಯಸುತ್ತೇನೆ.

ಏಕಃ ಸಮುದ್ಧೃತಃ ಪಿಣ್ಡೋ ಹ್ಯಧಸ್ತಾತ್ಕಸ್ಯ ಗಚ್ಛತಿ ।
ಕಂ ವಾ ಪ್ರೀಣಯತೇ ದೇವಂ ಕಥಂ ತಾರಯತೇ ಪಿತೄನ್ ॥೨೯॥

ನೀವು ಹೇಳಿದಂತೆ ಮೊದಲನೆಯ ಪಿಂಡವನ್ನು ತೆಗೆದುಕೊಂಡು ನೀರಿಗೆ ಹಾಕಿದರೆ ಅದು ಯಾರಿಗೆ ತಲುಪುತ್ತದೆ? ಯಾವದೇವತೆಯನ್ನು ಅದು ತೃಪ್ತಿಗೊಳಿಸುತ್ತದೆ? ಪಿತೃಗಳನ್ನು ಆ ಪಿಂಡವು ಹೇಗೆ ಉದ್ಧರಿಸುತ್ತದೆ?

ಮಧ್ಯಮಂ ತು ತದಾ ಪತ್ನೀ ಭುಙ್ಕ್ತೇಽನುಜ್ಞಾತಮೇವ ಹಿ ।
ಕಿಮರ್ಥಂ ಪಿತರಸ್ತಸ್ಯ ಕವ್ಯಮೇವ ಚ ಭುಞ್ಜತೇ ॥೩೦॥

ಗುರುಜನರ ಅನುಜ್ಞೆಯನ್ನು ಪಡೆದು ಕರ್ತೃವಿನ ಪತ್ನಿಯು ಮಧ್ಯಮಪಿಂಡವನ್ನು ಭುಂಜಿಸಿದರೆ ಪಿತೃಗಳು ಅದೇ ಪಿಂಡವನ್ನೇ ಏತಕ್ಕಾಗಿ ಉಪಭೋಗಿಸುತ್ತಾರೆ?

ಅತ್ರ ಯಸ್ತ್ವನ್ತಿಮಃ ಪಿಣ್ಡೋ ಗಚ್ಛತೇ ಜಾತವೇದಸಮ್ ।
ಭವತೇ ಕಾ ಗತಿಸ್ತಸ್ಯ ಕಿಂ ವಾ ಸಮನುಗಚ್ಛತಿ ॥೩೧॥

ಕಡೆಯ ಪಿಂಡವನ್ನು ಅಗ್ನಿಗೆ ಹಾಕಿದನಂತರ ಅದರ ಗತಿಯೇನಾಗುತ್ತದೆ? ಅದು ಯಾವದೇವತೆಗೆ ಸೇರುತ್ತದೆ? ಪಿತೃದೇವತೆಗಳೇ! ಈ ಮೂರು ಪಿಂಡಗಳಿಗೂ ಯಾವಗತಿಯೆಂಬುದನ್ನೂ ಅದರ ಫಲ, ವೃತ್ತಿ ಮತ್ತು ಮಾರ್ಗಗಳನ್ನೂ, ಯಾವ-ಯಾವ ದೇವತೆಗಳು ಆ ಪಿಂಡಗಳನ್ನು ಹೊಂದುವರೆಂಬುದನ್ನೂ ತಿಳಿಯಲು ಬಯಸುತ್ತೇನೆ."

ಪಿತೃದೇವತೆಗಳು ಹೇಳುತ್ತಾರೆ:

"ಆಕಾಶಚರನಾದ ದೇವದೂತನೇ! ನೀನು ಕೇಳಿರುವುದು ಅತ್ಯಂತ ಮಹತ್ತ್ವದ ಪ್ರಶ್ನೆಯಾಗಿದೆ. ರಹಸ್ಯವೂ ಅದ್ಭುತವೂ ಆದ ಪ್ರಶ್ನೆಯನ್ನೇ ಕೇಳಿರುವೆ. ಇಂತಹ ಪ್ರಶ್ನೆಯನ್ನೇ ದೇವತೆಗಳೂ ಮತ್ತು ಮುನಿಗಳೂ ಪ್ರಶಂಸೆಮಾಡುತ್ತಾರೆ. ಏಕೆಂದರೆ ಅವರು ಕೂಡ ಪಿತೃಕಾರ್ಯದ ರಹಸ್ಯವನ್ನು ನಿಶ್ಚಯಪೂರ್ವಕವಾಗಿ ತಿಳಿದುಕೊಂಡಿಲ್ಲ. ಮಹಾತ್ಮನಾದ, ಚಿರಂಜೀವಿಯಾದ, ಪಿತೃಭಕ್ತನಾದ, ಮಹಾಯಶೋವಂತನಾದ, ವರಗಳನ್ನು ಪಡೆದವನಾದ, ಶ್ರೇಷ್ಠನಾದ ಮಾರ್ಕಂಡೇಯನೊಬ್ಬನನ್ನು ಬಿಟ್ಟು ಬೇರೆ ಯಾರಿಗೂ ಪಿತೃಕರ್ಮದ ರಹಸ್ಯವು ತಿಳಿಯದು. ಮಾರ್ಕಂಡೇಯನು ಭಗವಾನ್ ವಿಷ್ಣುವಿನಿಂದಲೇ ಮೂರುಪಿಂಡಗಳ ಗತಿಗಳನ್ನೂ ಕೇಳಿ ತಿಳಿದುಕೊಂಡು ಶ್ರಾದ್ಧದ ರಹಸ್ಯವನ್ನು ಅರಿತನು. ದೇವದೂತನೇ! ನೀನು ಯಾವ ಶ್ರಾದ್ಧವಿಧಿಯ ನಿರ್ಣಯವನ್ನೂ ಮತ್ತು ಮೂರು ಪಿಂಡಗಳ ಗತಿಗಳನ್ನೂ ಕೇಳಿರುವೆಯೋ ಅದನ್ನೇ ಹೇಳುತ್ತೇನೆ. ಏಕಾಗ್ರಚಿತ್ತನಾಗಿ ಕೇಳು.

ಅಪೋ ಗಚ್ಛತಿ ಯೋ ಹ್ಯತ್ರ ಶಶಿನಂ ಹ್ಯೇಷ ಪ್ರೀಣಯೇತ್ ।
ಶಶೀ ಪ್ರೀಣಯತೇ ದೇವಾನ್ಪಿತೄಂಶ್ಚೈವ ಮಹಾಮತೇ ॥೩೮॥

ಮಹಾಮತಿಯೇ! ಶ್ರಾದ್ಧಕರ್ಮದಲ್ಲಿ ಸಿದ್ಧಪಡಿಸಿದ ಮೂರು ಪಿಂಡಗಳಲ್ಲಿ ಮೊದಲನೆಯ ಪಿಂಡವು ನೀರಿನಲ್ಲಿ ಹಾಕಲ್ಪಟ್ಟು ಚಂದ್ರನನ್ನು ಸೇರಿ ಅವನಿಗೆ ತೃಪ್ತಿಯನ್ನುಂಟುಮಾಡುತ್ತದೆ. ಅನಂತರ ಚಂದ್ರನು ದೇವತೆಗಳನ್ನೂ ಪಿತೃಗಳನ್ನೂ ತೃಪ್ತಿಗೊಳಿಸುತ್ತಾನೆ.

ಭುಜ್ಕ್ತೇ ತು ಪತ್ನೀ ಯಂ ಚೈಷಾಮನುಜ್ಞಾತಾ ತು ಮಧ್ಯಮಮ್ ।
ಪುತ್ರಕಾಮಾಯ ಪುತ್ರಂ ತು ಪ್ರಯಚ್ಛನ್ತಿ ಪಿತಾಮಹಾಃ ॥೩೯॥

ಹೀಗೆಯೇ ಶ್ರಾದ್ಧಕರ್ತೃವಿನ ಪತ್ನಿಯು ಗುರುಜನರ ಅನುಮತಿಯನ್ನು ಪಡೆದು ಮಧ್ಯಮಪಿಂಡವನ್ನು ಭುಂಜಿಸಿದರೆ ಅದರಿಂದ ಮಾತಾಮಹರು ಸುಪ್ರೀತರಾಗಿ ಪುತ್ರಕಾಮನಾದ ಕರ್ತೃವಿಗೆ ಪುತ್ರನನ್ನು ಅನುಗ್ರಹಿಸುತ್ತಾರೆ.

ಹವ್ಯವಾಹೇ ತು ಯಃ ಪಿಣ್ಡೋ ದೀಯತೇ ತನ್ನಿಬೋಧ ಮೇ ।
ಪಿತರಸ್ತೇನ ತೃಪ್ಯನ್ತಿ ಪ್ರೀತಾಃ ಕಾಮಾನ್ದಿಶನ್ತಿ ಚ ॥೪೦॥

ಮೂರನೆಯ ಪಿಂಡವನ್ನು ಅಗ್ನಿಗೆ ಸಮರ್ಪಿಸುವುದರಿಂದ ಪ್ರಾಪ್ತವಾಗುವ ಫಲವನ್ನು ಕೇಳು. ಮೂರನೆಯ ಪಿಂಡವನ್ನು ಅಗ್ನಿಗೆ ಸಮರ್ಪಿಸುವುದರಿಂದ ಪಿತೃಗಳು ತೃಪ್ತರಾಗುತ್ತಾರೆ. ಹಾಗೆ ಪ್ರೀತರಾದ ಪಿತೃಗಳು ಕರ್ತೃವಿನ ಸಕಲಕಾಮನೆಗಳನ್ನೂ ಈಡೇರಿಸುತ್ತಾರೆ.

ದೇವದೂತನೇ! ಹೀಗೆ ನಾವು ನಿನಗೆ ಮೂರು ಪಿಂಡಗಳ ಗತಿಯನ್ನು ವಿವರಿಸಿ ಹೇಳಿದ್ದೇವೆ.

ಋತ್ವಿಗ್ಯೋ ಯಜಮಾನಸ್ಯ ಪಿತೃತ್ವಮನುಗಚ್ಛತಿ ।
ತಸ್ಮಿನ್ನಹನಿ ಮನ್ಯನ್ತೇ ಪರಿಹಾರ್ಯಂ ಹಿ ಮೈಥುನಮ್ ।
ಶುಚಿನಾ ತು ಸದಾ ಶ್ರಾದ್ಧಂ ಭೋಕ್ತವ್ಯಂ ಖೇಚರೋತ್ತಮ ॥೪೨॥

ಶ್ರಾದ್ಧದ ದಿನ ಶ್ರಾದ್ಧಕರ್ಮಕ್ಕಾಗಿ ನಿಮಂತ್ರಿತರಾದ ಬ್ರಾಹ್ಮಣರು ಕರ್ತೃವಿನ ಪಿತೃಭಾವವನ್ನು ಹೊಂದುತ್ತಾರೆ. (ಶ್ರಾದ್ಧದಿನದಂದು ಋತ್ವಿಜರು ತಮ್ಮ ಪತ್ನಿಯರಿಗೆ ಪರಪುರುಷರಾಗಿರುತ್ತಾರೆ.) ಈ ಕಾರಣದಿಂದ ಋತ್ವಿಜರು ಸ್ತ್ರೀಸಮಾಗಮಮಾಡದಿರುವುದು ಯೋಗ್ಯವೆಂದು ವಿದ್ವಾಂಸರು ಭಾವಿಸುತ್ತಾರೆ. ಬ್ರಾಹ್ಮಣನು ಸ್ನಾನಾದಿಗಳಿಂದ ಶುದ್ಧನಾಗಿ ಶ್ರಾದ್ಧಭೋಜನವನ್ನು ಮಾಡಬೇಕು. ಶ್ರಾದ್ಧದ ವಿಷಯದಲ್ಲಿ ಯಾವ ದೋಷಗಳನ್ನು ಹೇಳಿರುವೆನೋ ಆ ದೋಷಗಳೆಲ್ಲವೂ ಶ್ರಾದ್ಧವಿಧಿಯನ್ನು ಮೀರಿ ನಡೆಯುವುದರಿಂದ ಪ್ರಾಪ್ತವಾಗುತ್ತವೆ. ಆದುದರಿಂದ ಬ್ರಾಹ್ಮಣನು ಶುದ್ಧನಾಗಿ ತಾಳ್ಮೆಯಿಂದ ಶ್ರಾದ್ಧಭೋಜನವನ್ನು ಮಾಡಬೇಕು. ಹೀಗೆ ಯಾರು ಶಾಸ್ತ್ರವಿಹಿತವಾದ ರೀತಿಯಲ್ಲಿ ಶ್ರಾದ್ಧಮಾಡುವರೋ ಅವರ ಸಂತಾನವು ವೃದ್ಧಿಸುತ್ತದೆ."

ಪಿತೃಗಳು ದೇವದೂತನಿಗೆ ಶ್ರಾದ್ಧದ ವಿಧಿಯನ್ನು ಹೇಳಿದನಂತರ ಮಹಾತಪಸ್ವಿಯಾದ ವಿದ್ಯುತ್ಪ್ರಭನೆಂಬ ಋಷಿಯು ಹೇಳಿದನು. ಆ ಋಷಿಯ ತೇಜಸ್ಸು ಸೂರ್ಯನ ತೇಜಸ್ಸಿಗೆ ಸಮಾನವಾಗಿ ಪ್ರಕಾಶಿಸುತ್ತಿದ್ದಿತು. ಪಿತೃಗಳು ಹೇಳಿದ ಧರ್ಮರಹಸ್ಯವನ್ನು ಕೇಳಿ ಆ ಋಷಿಯು ಇಂದ್ರನನ್ನು ಪ್ರಶ್ನಿಸಿದನು:

ತಿರ್ಯಗ್ಯೋನಿಗತಾನ್ಸತ್ತ್ವಾನ್ಮರ್ತ್ಯಾ ಹಿಂಸನ್ತಿ ಮೋಹಿತಾಃ ।
ಕೀಟಾನ್ಪಿಪೀಲಿಕಾನ್ಸರ್ಪಾನ್ಮೇಷಾನ್ಸಮೃಗಪಕ್ಷಿಣಃ ।
ಕಿಲ್ಬಿಷಂ ಸುಬಹು ಪ್ರಾಪ್ತಾಃ ಕಿಂಸ್ವಿದೇಷಾಂ ಪ್ರತಿಕ್ರಿಯಾ ॥೪೭॥

ಮನುಷ್ಯರು ಮೋಹಪರವಶರಾಗಿ ತಿರ್ಯಗ್ಯೋನಿಗಳಲ್ಲಿ ಹುಟ್ಟಿರುವ ಪ್ರಾಣಿಗಳನ್ನೂ, ಮೃಗಗಳನ್ನೂ, ಪಕ್ಷಿಗಳನ್ನೂ, ಹುಳುಗಳನ್ನೂ, ಇರುವೆಗಳನ್ನೂ, ಸರ್ಪಗಳನ್ನೂ, ಟಗರುಗಳನ್ನೂ ಹಿಂಸಿಸುತ್ತಾರೆ ಮತ್ತು ಅದರಿಂದ ಮಹಾಪಾಪವನ್ನು ಹೊಂದುತ್ತಾರೆ. ಅಂತಹ ಪಾಪದಿಂದ ಮನುಷ್ಯರು ಹೇಗೆ ಮುಕ್ತರಾಗುತ್ತಾರೆ?"

ವಿದ್ಯುತ್ಪ್ರಭನು ಈ ಪ್ರಶ್ನೆಯನ್ನು ಕೇಳಲಾಗಿ–ದೇವತೆಗಳೂ, ತಪೋಧನರಾದ ಋಷಿಗಳೂ, ಮಹಾಭಾಗ್ಯಶಾಲಿಗಳಾದ ಪಿತೃಗಳೂ ಆ ಮುನಿಯನ್ನು ಶ್ಲಾಘಿಸಿದರು. ಋಷಿಯಪ್ರಶ್ನೆಗೆ ಉತ್ತರವಾಗಿ ಇಂದ್ರನು ಹೇಳುತ್ತಾನೆ:

ಕುರುಕ್ಷೇತ್ರಂ ಗಯಾಂ ಗಙ್ಗಾಂ ಪ್ರಭಾಸಂ ಪುಷ್ಕರಾಣಿ ಚ ।
ಏತಾನಿ ಮನಸಾ ಧ್ಯಾತ್ವಾ ಅವಗಾಹೇತ್ತತೋ ಜಲಮ್ ।
ತಥಾ ಮುಚ್ಯತಿ ಪಾಪೇನ ರಾಹುಣಾ ಚನ್ದ್ರಮಾ ಯಥಾ ॥೪೮॥

"ಮಹರ್ಷಿಯೇ! ಕುರುಕ್ಷೇತ್ರ, ಗಯೆ, ಗಂಗೆ, ಪ್ರಭಾಸ ಮತ್ತು ಪುಷ್ಕರಕ್ಷೇತ್ರಗಳನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಮನುಷ್ಯನು ನೀರಿನಲ್ಲಿ ಮುಳುಗಬೇಕು. ಹೀಗೆ ಮಾಡುವುದರಿಂದ–ಚಂದ್ರನು ರಾಹುವಿನಿಂದ ಮುಕ್ತನಾಗುವಂತೆ–ಮನುಷ್ಯನು ಪಾಪದಿಂದ ಮುಕ್ತನಾಗುತ್ತಾನೆ.

ತ್ರ್ಯಹಂ ಸ್ನಾತಃ ಸ ಭವತಿ ನಿರಾಹಾರಶ್ಚ ವರ್ತತೇ ।
ಸ್ಪೃಶತೇ ಯೋ ಗವಾಂ ಪೃಷ್ಠಂ ವಾಲಧಿಂ ಚ ನಮಸ್ಯತಿ ॥೫೦॥

ಯಾವ ಮನುಷ್ಯನು ಗೋವಿನ ಪೃಷ್ಠಭಾಗವನ್ನು ಸ್ಪರ್ಶಿಸಿ ಬಾಲವನ್ನು ಕಣ್ಣಿಗೊತ್ತಿಕೊಳ್ಳುವನೋ–ಅವನು ಗಂಗಾ-ಪ್ರಭಾಸಾದಿ ತೀರ್ಥಗಳಲ್ಲಿ ಉಪವಾಸವಿದ್ದು ಮೂರು ದಿವಸಗಳು ಸ್ನಾನಮಾಡಿದ ಫಲವನ್ನು ಹೊಂದುತ್ತಾನೆ."

ಇಂದ್ರನು ಹೀಗೆ ಹೇಳಿದನಂತರ ವಿದ್ಯುತ್ಪ್ರಭನು ಇಂದ್ರನಿಗೆ ಹೇಳಿದನು:

"ಶತಕ್ರತುವೇ! ಅತಿಸೂಕ್ಷ್ಮತರವಾದ ಈ ಧರ್ಮವನ್ನು ಹೇಳುವೆನು ಕೇಳು:

ಘೃಷ್ಟೋ ವಟಕಷಾಯೇಣ ಅನುಲಿಪ್ತಃ ಪ್ರಿಯಂಗುಣಾ ।
ಕ್ಷೀರೇಣ ಷಷ್ಟಿಕಾನ್ಭುಕ್ತ್ವಾ ಸರ್ವಪಾಪೈಃ ಪ್ರಮುಚ್ಯತೇ ॥೫೨॥

ವಟವೃಕ್ಷದ ಬಿಳಲಿನ ಕಷಾಯದಿಂದ ಅರೆದ ಕರೀಸಾಸಿವೆಯನ್ನು ಮೈಗೆಲ್ಲಾ ಲೇಪಿಸಿಕೊಂಡು, ಷಷ್ಟಿಕವೆಂಬ ಅಕ್ಕಿಯಿಂದ ಮಾಡಿದ ಅನ್ನವನ್ನು ಹಾಲಿನೊಡನೆ ಊಟಮಾಡಿದವನು ಸಮಸ್ತಪಾಪಗಳಿಂದಲೂ ಮುಕ್ತನಾಗು ತ್ತಾನೆ.

ಋಷಿಗಳು ಸತತವಾಗಿ ಚಿಂತಿಸುತ್ತಿರುವ ಮತ್ತೊಂದು ನಿಗೂಢವಾದ ಧರ್ಮರಹಸ್ಯವನ್ನು ಹೇಳುವೆನು ಕೇಳಿರಿ. ನಾನು ರುದ್ರನ ಸ್ಥಾನದಲ್ಲಿ (ಕೈಲಾಸದಲ್ಲಿ) ರುದ್ರನೊಡನೆ ಮಾತನಾಡುತ್ತಿದ್ದಾಗ ಬೃಹಸ್ಪತಿಯಿಂದ ಈ ಧರ್ಮರಹಸ್ಯವನ್ನು ಕೇಳಿದೆನು. ಶಚೀಪತಿಯೇ! ಅದನ್ನೇ ನಿನಗೂ ಹೇಳುವೆನು; ಕೇಳು.

ಪರ್ವತಾರೋಹಣಂ ಕೃತ್ವಾ ಏಕಪಾದೋ ವಿಭಾವಸುಮ್ ।
ನಿರೀಕ್ಷೇತ ನಿರಾಹಾರ ಊರ್ಧ್ವಬಾಹುಃ ಕೃತಾಞ್ಜಲಿಃ ।
ತಪಸಾ ಮಹತಾ ಯುಕ್ತ ಉಪವಾಸಫಲಂ ಲಭೇತ್ ॥೫೫॥

ಯಾವನು ನಿರಾಹಾರಿಯಾಗಿ ಪರ್ವತವನ್ನು ಹತ್ತಿ ಒಂದೇ ಕಾಲಿನಲ್ಲಿ ನಿಂತು, ತೋಳುಗಳೆರಡನ್ನೂ ಮೇಲಕ್ಕೆತ್ತಿ ಬದ್ಧಾಂಜಲಿಯಾಗಿ ಸೂರ್ಯನನ್ನು ಸಂದರ್ಶಿಸುವನೋ–ಅವನು ಮಹಾತಪಸ್ಸಿನಿಂದ ಯುಕ್ತನಾಗಿ ಉಪವಾಸ ವ್ರತವನ್ನು ಮಾಡಿದ ಫಲವನ್ನು ಹೊಂದುತ್ತಾನೆ.

ರಶ್ಮಿಭಿಸ್ತಾಪಿತೋರ್ಕಸ್ಯ ಸರ್ವಪಾಪಮಪೋಹತಿ ।
ಗ್ರೀಷ್ಮಕಾಲೇಽಥ ವಾ ಶೀತೇ ಏವಂ ಪಾಪಮಪೋಹತಿ ॥೫೬॥
ತತಃ ಪಾಪಾತ್ಪ್ರಮುಕ್ತಸ್ಯ ದ್ಯುತಿರ್ಭವತಿ ಶಾಶ್ವತೀ ।
ತೇಜಸಾ ಸೂರ್ಯವದ್ದೀಪ್ತೋ ಭ್ರಾಜತೇ ಸೋಮವತ್ಪುನಃ ॥೫೭॥

ಯಾವನು ಗ್ರೀಷ್ಮರ್ತುವಿನ ಅಥವಾ ಶೀತಕಾಲದ ಸೂರ್ಯನ ಕಿರಣಗಳಿಂದ ತನ್ನ ಶರೀರವನ್ನು ತಾಪನಗೊಳಿಸುವನೋ-ಅವನು ಸರ್ವಪಾಪಗಳಿಂದಲೂ ಮುಕ್ತನಾಗುತ್ತಾನೆ. ಪಾಪದಿಂದ ಮುಕ್ತನಾದ ಅವನಿಗೆ ಶಾಶ್ವತವಾದ ಕಾಂತಿಯು ಪ್ರಾಪ್ತವಾಗುತ್ತದೆ. ಅವನು ತನ್ನ ತೇಜಸ್ಸಿನಿಂದ ಸೂರ್ಯನಂತೆ ದೇದೀಪ್ಯಮಾನನಾಗಿ ವಿರಾಜಿಸುತ್ತಾನೆ ಮತ್ತು ಚಂದ್ರನಂತೆ ಸರ್ವರಿಗೂ ಆಹ್ಲಾದಕರನಾಗಿರುತ್ತಾನೆ."

ವಿದ್ಯುತ್ಪ್ರಭಮುನಿಯು ಹೀಗೆ ಹೇಳಿದನಂತರ ದೇವರಾಜನಾದ ಶತಕ್ರತುವು ದೇವಮಂಡಲದ ಮಧ್ಯದಲ್ಲಿ ಸರ್ವಶ್ರೇಷ್ಠನಾದ ಬೃಹಸ್ಪತಿಗೆ ಈ ಮಾತನ್ನು ಹೇಳಿದನು:

"ಪೂಜ್ಯರೇ! ಮನುಷ್ಯರಿಗೆ ಸುಖವನ್ನುಂಟುಮಾಡುವ ಧರ್ಮರಹಸ್ಯವನ್ನೂ ಮತ್ತು ರಹಸ್ಯದಿಂದ ಕೂಡಿದ ದೋಷಗಳನ್ನೂ ಯಥಾವತ್ತಾಗಿ ಹೇಳಿರಿ."

ಬೃಹಸ್ಪತಿಯು ಹೇಳುತ್ತಾನೆ:

ಪ್ರತಿಮೇಹನ್ತಿ ಯೇ ಸೂರ್ಯಮನಿಲಂ ದ್ವಿಷತೇ ಚ ಯಃ ।
ಹವ್ಯವಾಹೇ ಪ್ರದೀಪ್ತೇ ಚ ಸಮಿಧಂ ಯೇ ನ ಜುಹ್ವತಿ ॥೬೦॥
ಬಾಲವತ್ಸಾಂ ಚ ಯೇ ಧೇನುಂ ದುಹನ್ತಿ ಕ್ಷೀರಕಾರಣಾತ್ ।
ತೇಷಾಂ ದೋಷಾನ್ಪ್ರವಕ್ಷ್ಯಾಮಿ ತಾನ್ನಿಬೋಧ ಶಚೀಪತೇ ॥೬೧॥

"ಶಚೀಪತಿಯೇ! ಯಾರು ಸೂರ್ಯನಿಗೆ ಅಭಿಮುಖವಾಗಿ ಕುಳಿತು ಮೂತ್ರವಿಸರ್ಜನೆಯನ್ನು ಮಾಡುವರೋ, ವಾಯುದೇವನನ್ನು ದ್ವೇಷಿಸುವರೋ (ವಾತಾವರಣವನ್ನು ಕೆಡಿಸುವರೋ–ಪರಿಸರಮಾಲಿನ್ಯಕ್ಕೆ ಕಾರಣರಾಗುವರೋ), ಪ್ರದೀಪ್ತವಾದ ಅಗ್ನಿಯಲ್ಲಿ ಸಮಿತ್ತನ್ನು ಹೋಮಮಾಡುವುದಿಲ್ಲವೋ, ಹಾಲಿನ ಲೋಭದಿಂದ ಎಳೆಗರುವಿನ ತಾಯಿಯನ್ನು

ಕರೆಯುವರೋ -ಅಂತಹವರಿಗೆ ಪ್ರಾಪ್ತವಾಗುವ ದೋಷಗಳನ್ನು ಹೇಳುವೆನು ಕೇಳು.

ಭಾನುಮಾನನಿಲಶ್ಚೈವ ಹವ್ಯವಾಹಶ್ಚ ವಾಸವ ।
ಲೋಕಾನಾಂ ಮಾತರಶ್ಚೈವ ಗಾವಃ ಸೃಷ್ಟಾಃ ಸ್ವಯಮ್ಭುವಾ ॥೬೨॥

ವಾಸವನೇ! ಬ್ರಹ್ಮನು ಸೂರ್ಯ, ವಾಯು, ಅಗ್ನಿ ಮತ್ತು ಲೋಕಮಾತೆಯರಾದ ಹಸುಗಳು ಇವರೆಲ್ಲರನ್ನೂ ಸೃಷ್ಟಿಸಿದನು.

ಲೋಕಾಂಸ್ತಾರಯಿತುಂ ಶಕ್ತಾ ಮರ್ತ್ಯೇಷ್ವೇತೇಷು ದೇವತಾಃ ।
ಸರ್ವೇ ಭವನ್ತಃ ಶೃಣ್ವನ್ತು ಏಕೈಕಂ ಧರ್ಮನಿಶ್ಚಯಮ್ ॥೬೩॥

ಇವರೆಲ್ಲರೂ ಮರ್ತ್ಯಲೋಕದ ದೇವತೆಗಳಾಗಿದ್ದಾರೆ. ಅಖಿಲವಾದ ಜಗತ್ತನ್ನೂ ಉದ್ಧರಿಸುವ ಸಾಮರ್ಥ್ಯವನ್ನು ಹೊಂದಿದ್ದಾರೆ. ಈ ದೇವತೆಗಳಿಗೆ ಅಪರಾಧವನ್ನೆಸಗುವುದರಿಂದ ಪ್ರಾಪ್ತವಾಗುವ ದೋಷಗಳ ವಿಷಯವಾಗಿ ಧರ್ಮಶಾಸ್ತ್ರದ ನಿರ್ಣಯವೇನೆಂಬುದನ್ನು ನೀವೆಲ್ಲರೂ ಒಂದೊಂದನ್ನಾಗಿ ಕೇಳಿರಿ.

ವರ್ಷಾಣಿ ಷಡಶೀತಿಂ ತು ದುರ್ವೃತ್ತಾಃ ಕುಲಪಾಂಸನಾಃ ।
ಸ್ತ್ರೀಯಃ ಸರ್ವಾಶ್ಚ ದುರ್ವೃತ್ತಾಃ ಪ್ರತಿಮೇಹನ್ತಿ ಯಾ ರವಿಮ್ ।
ಅನಿಲದ್ವೇಷಿಣಃ ಶಕ್ರ ಗರ್ಭಸ್ಥಾ ಚ್ಯವತೇ ಪ್ರಜಾ ॥೬೪॥

ಪುರುಷರು ಸೂರ್ಯನಿಗೆ ಅಭಿಮುಖವಾಗಿ ಮೂತ್ರವಿಸರ್ಜನೆ ಮಾಡಿದರೆ ಎಂಬತ್ತಾರು ವರ್ಷಗಳವರೆಗೆ ದುರ್ವೃತ್ತರಾಗಿ ಕುಲಕಳಂಕರಾಗುತ್ತಾರೆ. ಸ್ತ್ರೀಯರು ಹೀಗೆ ಮಾಡಿದರೆ ದುರಾಚಾರಿಣಿಯರಾಗುತ್ತಾರೆ. ವಾಯುವನ್ನು ದ್ವೇಷಿಸಿದವನ (ವಾಯುವನ್ನು ಕೆಡಿಸಿದವನ ಅಥವಾ ಪರಿಸರಮಾಲಿನ್ಯಕ್ಕೆ ಕಾರಣನಾದವನ) ಪ್ರಜೆಯು ಗರ್ಭದಲ್ಲಿಯೇ ನಾಶವಾಗುತ್ತದೆ.

ಹವ್ಯವಾಹಸ್ಯ ದೀಪ್ತಸ್ಯ ಸಮಿಧಂ ಯೇ ನ ಜುಹ್ವತಿ ।
ಅಗ್ನಿಕಾರ್ಯೇಷು ವೈ ತೇಷಾಂ ಹವ್ಯಂ ನಾಶ್ನಾತಿ ಪಾವಕಃ ॥೬೫॥

ಪ್ರಜ್ವಲಿಸುತ್ತಿರುವ ಅಗ್ನಿಯಲ್ಲಿ ಯಾರು ಸಮಿತ್ತನ್ನು ಹೋಮ ಮಾಡುವುದಿಲ್ಲವೋ – ಅಂತಹವರು ಮಾಡುವ ಅಗ್ನಿಕಾರ್ಯಗಳಲ್ಲಿ

ಯಜ್ಞೇಶ್ವರನು ಹವ್ಯವನ್ನು ಪ್ರತಿಗ್ರಹಿಸುವುದಿಲ್ಲ. (ಯಜ್ಞೇಶ್ವರನನ್ನು ಚೆನ್ನಾಗಿ ಹುತಮಾಡದೇ ಸಮಿತ್ತನ್ನು ಹೋಮಮಾಡಬಾರದು.)

ಕ್ಷೀರಂ ತು ಬಾಲವತ್ಸಾನಾಂ ಯೇ ಪಿಬನ್ತೀಹ ಮಾನವಾಃ ।
ನ ತೇಷಾಂ ಕ್ಷೀರಪಾಃ ಕೇಚಿಜ್ಜಾಯನ್ತೇ ಕುಲವರ್ಧನಾಃ ।
ಪ್ರಜಾಕ್ಷಯೇಣ ಯುಜ್ಯನ್ತೇ ಕುಲವಂಶಕ್ಷಯೇಣ ಚ ॥೬೭॥

ಯಾವ ಮನುಷ್ಯರು ಎಳಗಂದಿಯ ಹಾಲನ್ನು ಕುಡಿಯುವರೋ– ಅವರಿಗೆ ಹಾಲನ್ನು ಕುಡಿಯುವ ವಂಶವರ್ಧಕರಾದ ಮಕ್ಕಳು ಹುಟ್ಟುವುದಿಲ್ಲ. ಅವರ ಸಂತಾನವೂ ನಷ್ಟವಾಗುತ್ತದೆ. ಕುಲವೂ ಕ್ಷಯಿಸುತ್ತದೆ. ಹಿಂದೆ ಉತ್ತಮಕುಲದಲ್ಲಿ ಹುಟ್ಟಿದ ಬ್ರಾಹ್ಮಣರು ಹೀಗೆ ನಡೆದುದನ್ನು ಪ್ರತ್ಯಕ್ಷವಾಗಿ ಕಂಡಿದ್ದರು. ಆದುದರಿಂದ ಆತ್ಮಕಲ್ಯಾಣವನ್ನು ಬಯಸುವ ಮನುಷ್ಯನು ಶಾಸ್ತ್ರದಲ್ಲಿ ನಿಷೇಧಿಸಿರುವುದನ್ನು ಪರಿತ್ಯಜಿಸಬೇಕು. ಮಾಡಲೇ ಬೇಕಾದ ಶಾಸ್ತ್ರಸಮ್ಮತವಾದ ಕಾರ್ಯಗಳನ್ನು ಸದಾ ಮಾಡುತ್ತಿರಬೇಕು. ಸತ್ಯವಾದ ಈ ಮಾತನ್ನು ನಾನು ನಿನಗೆ ಹೇಳುತ್ತಿದ್ದೇನೆ."

ಬೃಹಸ್ಪತಿಯು ಹೀಗೆ ಹೇಳಿದನಂತರ ಮರುದ್ಗಣಗಳಿಂದ ಕೂಡಿದ ಮಹಾಭಾಗ್ಯಶಾಲಿಗಳಾದ ದೇವತೆಗಳೂ ಮತ್ತು ಮಹಾಭಾಗರಾದ ಋಷಿಗಳೂ ಪಿತೃಗಳನ್ನು ಪ್ರಶ್ನಿಸಿದರು:

ಪಿತರಃ ಕೇನ ತುಷ್ಯನ್ತಿ ಮರ್ತ್ಯಾನಾಮಲ್ಪಚೇತಸಾಮ್ ।
ಅಕ್ಷಯಂ ಚ ಕಥಂ ದಾನಂ ಭವೇಚ್ಚೈವೌರ್ಧ್ವದೇಹಿಕಮ್ ॥
ಅನೃಣ್ಯಂ ವಾ ಕಥಂ ಮರ್ತ್ಯಾ ಗಚ್ಛೇಯುಃ ಕೇನ ಕರ್ಮಣಾ ।
ಏತದಿಚ್ಛಾಮಹೇ ಶ್ರೋತುಂ ಪರಂ ಕೌತೂಹಲಂ ಹಿ ನಃ ॥೭೧॥

"ಪಿತೃಗಳೇ! ಅಲ್ಪಬುದ್ಧಿಯುಳ್ಳ ಮನುಷ್ಯರು ಯಾವ ಕರ್ಮವನ್ನು ಮಾಡುವುದರಿಂದ ಪಿತೃಗಳು ತೃಪ್ತಿಹೊಂದುತ್ತಾರೆ? ಶ್ರಾದ್ಧದಲ್ಲಿ ಕೊಡುವ ದಾನವು ಅಥವಾ ಅನ್ನವು ಮತ್ತು ಜೀವವು ದೇಹವನ್ನು ಬಿಟ್ಟನಂತರ ಮಾಡಲ್ಪಡುವ ಸಂಸ್ಕಾರವು ಪಿತೃಗಳಿಗೆ ಹೇಗೆ ಅಕ್ಷಯವಾಗುತ್ತದೆ? ಮನುಷ್ಯನು ಯಾವ ಕರ್ಮವನ್ನು ಮಾಡುವುದರಿಂದ ಪಿತೃಋಣದಿಂದ

ಮುಕ್ತಿಯನ್ನು ಪಡೆಯುತ್ತಾನೆ? ಈ ವಿಷಯಗಳನ್ನು ನಾವು ತಿಳಿಯಬಯಸಿದ್ದೇವೆ. ಇದನ್ನು ನಿಮ್ಮಿಂದಲೇ ಕೇಳಿ ತಿಳಿಯಬೇಕೆಂಬ ಕುತೂಹಲವುಂಟಾಗಿದೆ."

ಪಿತೃಗಳು ಹೇಳುತ್ತಾರೆ:

"ಮಹಾಭಾಗ್ಯಶಾಲಿಗಳಾದ ದೇವತೆಗಳೇ! ನೀವು ನ್ಯಾಯಸಮ್ಮತವಾದ ರೀತಿಯಲ್ಲಿಯೇ ನಿಮ್ಮ ಸಂದೇಹವನ್ನು ತಿಳಿಸಿರುವಿರಿ. ಸತ್ಕರ್ಮಿಯಾದ ಮನುಷ್ಯನ ಯಾವ ಕರ್ಮಗಳಿಂದ ನಾವು ತೃಪ್ತರಾಗುತ್ತೇವೆ– ಎಂಬುದನ್ನು ಹೇಳುವೆನು ಕೇಳಿರಿ.

ನೀಲಷಣ್ಡಪ್ರಮೋಕ್ಷೇಣ ಅಮಾವಾಸ್ಯಾಂ ತಿಲೋದಕೈಃ।
ವರ್ಷಾಸು ದೀಪಕೈಶ್ಚೈವ ಪಿತೄಣಾಮನೃಣೋ ಭವೇತ್ ॥೨೩॥

ಕಪ್ಪುಬಣ್ಣದ ಹೋರಿಯನ್ನು ಬಿಡುವುದರಿಂದಲೂ, (ವೃಷೋತ್ಸರ್ಗದಿಂದಲೂ), ಅಮಾವಾಸ್ಯೆಯಲ್ಲಿ ತಿಲಮಿಶ್ರವಾದ ನೀರಿನಿಂದ ತರ್ಪಣ ಮಾಡುವುದರಿಂದಲೂ, ವರ್ಷರ್ತುವಿನಲ್ಲಿ ಪಿತೃಗಳ ಪ್ರೀತ್ಯರ್ಥವಾಗಿ ದೀಪ ದಾನಮಾಡುವುದರಿಂದಲೂ ಮನುಷ್ಯನು ಪಿತೃಋಣದಿಂದ ಮುಕ್ತನಾಗುತ್ತಾನೆ.

ಅಕ್ಷಯಂ ನಿರ್ವ್ಯಲೀಕಂ ಚ ದಾನಮೇತನ್ಮಹಾಫಲಮ್।
ಅಸ್ಮಾಕಂ ಪರಿತೋಷಶ್ಚ ಅಕ್ಷಯಃ ಪರಿಕೀರ್ತ್ಯತೇ ॥೨೪॥

ಈ ರೀತಿಯಲ್ಲಿ ನಿಷ್ಕಪಟಭಾವದಿಂದ ಮಾಡುವ ದಾನವು ಅಕ್ಷಯವಾದ ಮಹಾಫಲವನ್ನು ಕೊಡುತ್ತದೆ. ಇದರಿಂದ ನಮಗೂ ಅಕ್ಷಯವಾದ ತೃಪ್ತಿಯೇ ಉಂಟಾಗುತ್ತದೆ. ಶಾಸ್ತ್ರವೂ ಇದನ್ನೇ ಹೇಳುತ್ತದೆ.

ಶ್ರದ್ದಧಾನಾಶ್ಚ ಯೇ ಮರ್ತ್ಯಾ ಆಹರಿಷ್ಯನ್ತಿ ಸನ್ತತಿಮ್।
ದುರ್ಗಾತ್ತೇ ತಾರಯಿಷ್ಯನ್ತಿ ನರಕಾತ್ಪ್ರಪಿತಾಮಹಾನ್ ॥೨೫॥

ಯಾವ ಮನುಷ್ಯರು ಶಾಸ್ತ್ರವಾಕ್ಯಗಳಲ್ಲಿ ಶ್ರದ್ಧೆಯನ್ನಿಟ್ಟು ಒಳ್ಳೆಯ ಸಂತಾನವನ್ನು ಪಡೆದುಕೊಳ್ಳುವರೋ–ಅವರು ತಮ್ಮ ಪ್ರಪಿತಾಮಹರನ್ನು ಅತಿದುಃಖಕರವಾದ ನರಕದಿಂದ ಉದ್ಧರಿಸುತ್ತಾರೆ."

ತಪೋಧನನಾದ ಮಹಾತೇಜಸ್ವಿಯಾದ ವೃದ್ಧಗಾರ್ಗ್ಯನು ಪಿತೃಗಳು

ಹೇಳಿದ ಆ ಮಾತನ್ನು ಕೇಳಿ ಸಂತೋಷದಿಂದ ರೋಮಾಂಚಿತನಾಗಿ ಅವರಿಗೆ ಹೇಳಿದನು:

"ತಪೋಧನರಾದ ಪಿತೃದೇವತೆಗಳೇ! ಕಪ್ಪುಹೋರಿಯನ್ನು ವಿಸರ್ಜಿಸುವುದರಿಂದ, ವರ್ಷರ್ತುವಿನಲ್ಲಿ ದೀಪವನ್ನು ದಾನಮಾಡುವುದರಿಂದ ಮತ್ತು ಅಮಾವಾಸ್ಯೆಯಲ್ಲಿ ತಿಲತರ್ಪಣಮಾಡುವುದರಿಂದ ಯಾವ ಫಲಗಳು ಲಭಿಸುತ್ತವೆ?"

ಪಿತೃಗಳು ಹೇಳುತ್ತಾರೆ:

ನೀಲಷಣ್ಡಸ್ಯ ಲಾಙ್ಗೂಲಂ ತೋಯಮಭ್ಯುದ್ಧರೇದ್ಯದಿ ।
ಷಷ್ಟಿಂ ವರ್ಷಸಹಸ್ರಾಣಿ ಪಿತರಸ್ತೇನ ತರ್ಪಿತಾಃ ॥೭೮॥

"ಉತ್ಸರ್ಜಿಸಿದ ಕಪ್ಪು ಹೋರಿಯ ಬಾಲವು ನೀರನ್ನು ಮೇಲಕ್ಕೆ ಎತ್ತಿದ್ದೇ ಆದರೆ (ಆ ಹೋರಿಯು ನದಿಯನ್ನು ದಾಟುವಾಗ ಅದರ ಬಾಲವು ನೆನೆದು ನದಿಯಿಂದ ಹೊರಕ್ಕೆ ಬಂದಾಗ ಬಾಲದಿಂದ ನೀರು ಸೋರುತ್ತಿದ್ದರೆ) ಅದರಿಂದ ಪಿತೃಗಳು ಅರುವತ್ತುಸಾವಿರ ವರ್ಷಗಳವರೆಗೆ ತೃಪ್ತರಾಗಿರುತ್ತಾರೆ.

ಯಸ್ತು ಶೃಙ್ಗಗತಂ ಪಙ್ಕಂ ಕೂಲಾದುದ್ಧೃತ್ಯ ತಿಷ್ಠತಿ ।
ಪಿತರಸ್ತೇನ ಗಚ್ಛನ್ತಿ ಸೋಮಲೋಕಮಸಂಶಯಮ್ ॥೭೯॥

ಯಾವ ಹೋರಿಯು ನದಿಯ ದಡದಲ್ಲಿರುವ ಕೆಸರನ್ನು ತನ್ನ ಕೊಂಬಿನಿಂದ ಮೇಲೆತ್ತಿ ನಿಲ್ಲುವುದೋ–ಪಿತೃಗಳ ಪ್ರೀತ್ಯರ್ಥವಾಗಿ ಅಂತಹ ಹೋರಿಯನ್ನು ಬಿಟ್ಟವನ ಪಿತೃಗಳು ನಿಸ್ಸಂದೇಹವಾಗಿ ಚಂದ್ರಲೋಕಕ್ಕೆ ಹೋಗುತ್ತಾರೆ.

ವರ್ಷಾಸು ದೀಪದಾನೇನ ಶಶಿವಚ್ಛೋಭತೇ ನರಃ ।
ತಮೋರೂಪಂ ನ ತಸ್ಯಾಸ್ತಿ ದೀಪಕಂ ಯಃ ಪ್ರಯಚ್ಛತಿ ॥೮೦॥

ವರ್ಷರ್ತುವಿನಲ್ಲಿ ದೀಪದಾನಮಾಡುವ ಮನುಷ್ಯನು ಚಂದ್ರನ ಕಾಂತಿಗೆ ಸಮಾನವಾದ ಕಾಂತಿಯನ್ನು ಹೊಂದುತ್ತಾನೆ. ದೀಪದಾನಿಗೆ ತಮೋರೂಪವಾದ ನರಕದ ಬಾಧೆಯಿರುವುದಿಲ್ಲ.

ಅಮಾವಾಸ್ಯಾಂ ತು ಯೇ ಮರ್ತ್ಯಾಃ ಪ್ರಯಚ್ಛನ್ತಿ ತಿಲೋದಕಮ್ ।
ಪಾತ್ರಮೌದುಮ್ಬರಂ ಗೃಹ್ಯ ಮಧುಮಿಶ್ರಂ ತಪೋಧನ ।
ಕೃತಂ ಭವತಿ ವೈ ಶ್ರಾದ್ಧಂ ಸರಹಸ್ಯಂ ಯಥಾರ್ಥವತ್ ॥೮೨॥

ಅಮಾವಾಸ್ಯೆಯಂದು ಯಾವ ಮನುಷ್ಯನು ತಾಮ್ರದ ತಟ್ಟೆಯನ್ನು ಹಿಡಿದುಕೊಂಡು ಅದರಲ್ಲಿ ಜೇನುತುಪ್ಪದಿಂದ ಮಿಶ್ರವಾದ ತಿಲೋದಕವನ್ನು ಪಿತೃಗಳ ತೃಪ್ತಿಗಾಗಿ ಬಿಡುವನೋ (ತರ್ಪಣಮಾಡುವನೋ)–ಅವನು ರಹಸ್ಯಯುಕ್ತವಾದ ಶ್ರಾದ್ಧವನ್ನು ಯಥಾವತ್ತಾಗಿ ಮಾಡಿದವನಾಗುತ್ತಾನೆ. (ಬ್ರಾಹ್ಮಣಭೋಜನಪೂರ್ವಕವಾಗಿ ಶ್ರಾದ್ಧವನ್ನು ಮಾಡಿದ ಫಲವೇ ಅವನಿಗೆ ಲಭಿಸುತ್ತದೆ.)

ಹೃಷ್ಟಪುಷ್ಟಮನಾಸ್ತೇಷಾಂ ಪ್ರಜಾ ಭವತಿ ನಿತ್ಯದಾ ।
ಕುಲವಂಶಸ್ಯ ವೃದ್ಧಿಸ್ತು ಪಿಣ್ಡದಸ್ಯ ಫಲಂ ಭವೇತ್ ।
ಶ್ರದ್ದಧಾನಸ್ತು ಯಃ ಕುರ್ಯಾತ್ಪಿತೄಣಾಮನೃಣೋ ಭವೇತ್ ॥೮೪॥

ಅವನ ಸಂತಾನದ ಮನಸ್ಸು ಸದಾ ಹರ್ಷದಿಂದ ಕೂಡಿರುತ್ತದೆ. ಸಂತಾನವು ಪುಷ್ಟವಾಗಿರುತ್ತದೆ. ಕುಲವಂಶದ ವೃದ್ಧಿಯೇ ಪಿಂಡಪ್ರದಾನ ಮಾಡುವವನಿಗೆ ಮುಖ್ಯವಾದ ಫಲವಾಗಿರುತ್ತದೆ. ಶ್ರದ್ಧಾವಂತನಾಗಿ ಯಾವನು ಅಮಾವಾಸ್ಯೆಯ ದಿನ ತರ್ಪಣವನ್ನು ಮಾಡುವನೋ– ಅವನು ಪಿತೃಋಣದಿಂದ ಮುಕ್ತನಾಗುತ್ತಾನೆ.

ತಪೋಧನನೇ! ಹೀಗೆ ಶ್ರಾದ್ಧಮಾಡಬೇಕಾದ ಕಾಲ, ಕ್ರಮ, ವಿಧಿ, ಶ್ರಾದ್ಧಕ್ಕೆ ಯೋಗ್ಯರಾದವರು ಮತ್ತು ಶ್ರಾದ್ಧಕರ್ಮದ ಫಲ – ಇವುಗಳನ್ನು ಯಥಾವತ್ತಾಗಿ ಹೇಳಿದ್ದೇನೆ.”

೧೨೫ನೆಯ ಅಧ್ಯಾಯವು ಮುಗಿಯಿತು.

೧೨೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಿಷ್ಣು, ಬಲರಾಮ, ದೇವಗಣಗಳು, ಧರ್ಮ, ಅಗ್ನಿ, ವಿಶ್ವಾಮಿತ್ರ, ಗೋವುಗಳು ಮತ್ತು ಬ್ರಹ್ಮ–ಇವರಿಂದ ಧರ್ಮದ ನಿರೂಪಣೆ

ಭೀಷ್ಮನು ಹೇಳುತ್ತಾನೆ:

ಕೇನ ತೇ ಚ ಭವೇತ್ಪ್ರೀತಿಃ ಕಥಂ ತುಷ್ಟಿಂ ತು ಗಚ್ಛಸಿ ।
ಇತಿ ಪೃಷ್ಟಃ ಸುರೇನ್ದ್ರೇಣ ಪ್ರೋವಾಚ ಹರಿರೀಶ್ವರಃ ॥೧॥

"ಯುಧಿಷ್ಠಿರ! ಹಿಂದೊಮ್ಮೆ ಇಂದ್ರನು ಮಹಾವಿಷ್ಣುವನ್ನು ಸಂಧಿಸಿ ಪ್ರಶ್ನಿಸಿದನು: "ಪೂಜ್ಯನೇ! ನೀನು ಯಾವಕರ್ಮದಿಂದ ಪ್ರಸನ್ನನಾಗುವೆ? ನೀನು ಹೇಗೆ ತೃಪ್ತಿಯನ್ನು ಹೊಂದುವೆ?

ಅದಕ್ಕೆ ಉತ್ತರವಾಗಿ ಮಹಾವಿಷ್ಣುವು ಹೇಳುತ್ತಾನೆ:

ಬ್ರಾಹ್ಮಣಾನಾಂ ಪರೀವಾದೋ ಮಮ ವಿದ್ವೇಷಣಂ ಮಹತ್ ।
ಬ್ರಾಹ್ಮಣೈಃ ಪೂಜಿತೈರ್ನಿತ್ಯಂ ಪೂಜಿತೋಽಹಂ ನ ಸಂಶಯಃ ॥೨॥

"ದೇವೇಂದ್ರನೇ! ಬ್ರಾಹ್ಮಣರನ್ನು ನಿಂದಿಸುವುದು ನನ್ನನ್ನೇ ಬಹಳವಾಗಿ ದ್ವೇಷಿಸಿದಂತೆ. ನಿತ್ಯವೂ ಬ್ರಾಹ್ಮಣರನ್ನು ಸತ್ಕರಿಸುವುದರಿಂದ ನಾನೇ ಪೂಜಿತನಾಗುತ್ತೇನೆ. ಇದರಲ್ಲಿ ಸಂಶಯವೇ ಇಲ್ಲ.

ನಿತ್ಯಾಭಿವಾದ್ಯಾ ವಿಪ್ರೇನ್ದ್ರಾ ಭುಕ್ತ್ವಾ ಪಾದೌ ತಥಾತ್ಮನಃ ।
ತೇಷಾಂ ತುಷ್ಯಾಮಿ ಮರ್ತ್ಯಾನಾಂ ಯಶ್ಚಕ್ರೇ ಚ ಬಲಿಂ ಹರೇತ್ ॥

ಬ್ರಾಹ್ಮಣಶ್ರೇಷ್ಠರನ್ನು ನಿತ್ಯವೂ ಅಭಿವಾದನಪೂರ್ವಕವಾಗಿ ನಮಸ್ಕರಿಸಬೇಕು. ಊಟವಾದಮೇಲೆ (ಸಂಧ್ಯಾವಂದನೆಯಲ್ಲಿ ದೇವತೆಗಳನ್ನು ಸ್ಮರಿಸಿ ಅಭಿವಾದನ ಮಾಡಿ ತನ್ನ ಕಾಲುಗಳನ್ನು ಮುಟ್ಟಿಕೊಳ್ಳುವಂತೆ) ತನ್ನ ಪಾದಗಳನ್ನು ಸ್ಪರ್ಶಿಸಬೇಕು. ಯಾರು ಸುದರ್ಶನ ಚಕ್ರ, ಸಾಲಿಗ್ರಾಮ, ಶ್ರೀಚಕ್ರ ಮುಂತಾದ ಚಕ್ರಗಳ ಮೂಲಕ ಆರಾಧನೆಯನ್ನು ಮಾಡುವರೋ–ಅಂತಹವರ ವಿಷಯದಲ್ಲಿ ನಾನು ಸಂತುಷ್ಟನಾಗುತ್ತೇನೆ.

ವಾಮನಂ ಬ್ರಾಹ್ಮಣಂ ದೃಷ್ಟ್ವಾ ವರಾಹಂ ಚ ಜಲೋತ್ಥಿತಮ್ ।
ಉದ್ಧೃತಾಂ ಧರಣೀಂ ಚೈವ ಮೂರ್ಧ್ನಾ ಧಾರಯತೇ ತು ಯಃ ।
ನ ತೇಷಾಮಶುಭಂ ಕಿಂಚಿತ್ಕಲ್ಮಷಂ ಚೋಪಪದ್ಯತೇ ॥೪॥

ಯಾವ ಮನುಷ್ಯನು ಕುಳ್ಳನಾಗಿರುವ ಬ್ರಾಹ್ಮಣನನ್ನೂ, ನೀರಿನಿಂದ ಹೊರಬಂದ ಕಾಡುಹಂದಿಯನ್ನೂ ನೋಡಿ ನಮಸ್ಕರಿಸುವನೋ ಮತ್ತು ಕಾಡುಹಂದಿಯು ತೋಡಿರುವ ಮೃತ್ತಿಕೆಯನ್ನು ತಲೆಯಲ್ಲಿ ಧರಿಸುವನೋ–ಅಂತಹವನಿಗೆ ಅಮಂಗಳವಾಗಲೀ ಪಾಪವಾಗಲೀ ಸಂಘಟಿಸುವುದಿಲ್ಲ.

ಅಶ್ವತ್ಥಂ ರೋಚನಾಂ ಗಾಂ ಚ ಪೂಜಯೇದ್ಯೋ ನರಃ ಸದಾ ।
ಪೂಜಿತಂ ಜಗತ್ತೇನ ಸದೇವಾಸುರಮಾನುಷಮ್ ॥೫॥

ಅಶ್ವತ್ಥವೃಕ್ಷವನ್ನೂ ಗೋರೋಚನವಿರುವ ಗೋವನ್ನೂ ಯಾವ ಮನುಷ್ಯನು ಸದಾ ಪೂಜಿಸುವನೋ ಅಂತಹವನಿಂದ ದೇವಾಸುರ-ಮನುಷ್ಯರಿಂದ ಕೂಡಿರುವ ಜಗತ್ತೇ ಪೂಜಿಸಲ್ಪಟ್ಟಂತಾಗುತ್ತದೆ.

ತೇನ ರೂಪೇಣ ತೇಷಾಂ ಚ ಪೂಜಾಂ ಗೃಹ್ಣಾಮಿ ತತ್ತ್ವತಃ ।
ಪೂಜಾ ಮಮೈಷಾ ನಾಸ್ತ್ಯನ್ಯಾ ಯಾವಲ್ಲೋಕಾಃ ಪ್ರತಿಷ್ಠಿತಾಃ ॥೭॥

ಅಶ್ವತ್ಥವೇ ಮೊದಲಾದುವು ನನ್ನ ಸ್ವರೂಪಗಳೇ ಆಗಿವೆ. ಆ ರೂಪಗಳಿಂದ ನಾನು ಭಕ್ತರ ಪೂಜೆಯನ್ನು ಪ್ರತಿಗ್ರಹಿಸುತ್ತೇನೆ. ಅಶ್ವತ್ಥಾದಿಗಳಿಗೆ ಮಾಡುವ ಪೂಜೆಯು, ಲೋಕಗಳೆಲ್ಲವೂ ಇರುವವರೆಗೂ ನನ್ನ ಪೂಜೆಯೇ ಆಗುತ್ತದೆ. ಇದೇ ನನ್ನ ಪೂಜೆ; ಬೇರೆಯಲ್ಲ. (ಅವುಗಳೆಲ್ಲವೂ ನನ್ನ ವಿಭೂತಿಗಳೇ ಆಗಿರುವುದರಿಂದ ಅವುಗಳ ಪೂಜೆಯು ನನಗೇ ಸಲ್ಲುತ್ತದೆ.)

ಅನ್ಯಥಾ ಹಿ ವೃಥಾ ಮರ್ತ್ಯಾಃ ಪೂಜಯನ್ತ್ಯಲ್ಪಬುದ್ಧಯಃ।
ನಾಹಂ ತತ್ಪ್ರತಿಗೃಹ್ಣಾಮಿ ನ ಸಾ ತುಷ್ಟಿಕರೀ ಮಮ ॥೮॥

ಅಲ್ಪಬುದ್ಧಿಯವರಾದ ಮನುಷ್ಯರು ನನ್ನನ್ನು ಬೇರೆಯ ರೀತಿಯಲ್ಲಿ (ಶಾಸ್ತ್ರವಿಹಿತವಲ್ಲದ ರೀತಿಯಲ್ಲಿ) ವ್ಯರ್ಥವಾಗಿ ಪೂಜಿಸುತ್ತಾರೆ. ಅವರ ಅಂತಹ ಪೂಜೆಗಳನ್ನು ನಾನು ಪ್ರತಿಗ್ರಹಿಸುವುದಿಲ್ಲ. ಅಂತಹ ಪೂಜೆಯಿಂದ ನನಗೆ ತೃಪ್ತಿಯೂ ಆಗುವುದಿಲ್ಲ."

ಇಂದ್ರನು ಪ್ರಶ್ನಿಸುತ್ತಾನೆ:

ಚಕ್ರಂ ಪಾದೌ ವರಾಹಂ ಚ ಬ್ರಾಹ್ಮಣಂ ಚಾಪಿ ವಾಮನಮ್ ।
ಉದ್ಧೃತಾಂ ಧರಣೀಂ ಚೈವ ಕಿಮರ್ಥಂ ತ್ವಂ ಪ್ರಶಂಸಸಿ ॥೯॥

"ಪೂಜ್ಯನೇ! ನೀನು ಚಕ್ರಗಳನ್ನೂ, ಪಾದಗಳನ್ನೂ, ವರಾಹವನ್ನೂ ಕುಳ್ಳನಾದ ಬ್ರಾಹ್ಮಣನನ್ನೂ ಮತ್ತು ವರಾಹವು ಬಗೆದಿರುವ ಮೃತ್ತಿಕೆಯನ್ನೂ ಏಕೆ ಪ್ರಶಂಸಿಸುವೆ?

ಭವಾನ್ಸೃಜತಿ ಭೂತಾನಿ ಭವಾನ್ಸಂಹರತಿ ಪ್ರಜಾಃ ।
ಪ್ರಕೃತಿಃ ಸರ್ವಭೂತಾನಾಂ ಸಮರ್ತ್ಯಾನಾಂ ಸನಾತನೀ ॥೧೦॥

ನೀನೇ ಎಲ್ಲ ಪ್ರಾಣಿಗಳನ್ನೂ ಸೃಷ್ಟಿಸುವೆ. ಪುನಃ ನೀನೇ ಸಮಸ್ತ ಪ್ರಾಣಿಗಳನ್ನೂ ಸಂಹರಿಸುವೆ. ಮನುಷ್ಯರಿಂದ ಕೂಡಿದ ಸಕಲಪ್ರಾಣಿಗಳಿಗೂ ನೀನೇ ಸನಾತನಪ್ರಕೃತಿಯಾಗಿರುವೆ. (ಮೂಲಕಾರಣನಾಗಿರುವೆ.)"

ಯುಧಿಷ್ಠಿರ! ಇಂದ್ರನ ಈ ಮಾತುಗಳನ್ನು ಕೇಳಿ ಮಹಾವಿಷ್ಣುವೊಮ್ಮೆ ನಕ್ಕು ಹೇಳಿದನು:

ಚಕ್ರೇಣ ನಿಹತಾ ದೈತ್ಯಾಃ ಪದ್ಭ್ಯಾಂ ಕ್ರಾನ್ತಾ ವಸುನ್ಧರಾ ।
ವಾರಾಹಂ ರೂಪಮಾಸ್ಥಾಯ ಹಿರಣ್ಯಾಕ್ಷೋ ನಿಪಾತಿತಃ।
ವಾಮನಂ ರೂಪಮಾಸ್ಥಾಯ ಜಿತೋ ರಾಜಾ ಮಯಾ ಬಲಿಃ ॥೧೨॥

"ಶಕ್ರನೇ! ನನ್ನ ಚಕ್ರದಿಂದ ಎಲ್ಲ ದೈತ್ಯರೂ ಸಂಹೃತರಾದರು. ತ್ರಿವಿಕ್ರಮಾವತಾರದಲ್ಲಿ ನನ್ನೆರಡು ಹೆಜ್ಜೆಗಳಿಂದಲೇ ಭೂಮಿಯು (ಸ್ವರ್ಗ ಲೋಕ-ಭೂಲೋಕಗಳು) ಆಕ್ರಮಿತವಾಯಿತು. ವರಾಹರೂಪವನ್ನು ಧರಿಸಿ ಹಿರಣ್ಯಾಕ್ಷನನ್ನು ಕೊಂದೆನು. ವಾಮನಾವತಾರವನ್ನು ಧರಿಸಿ ಬಲಿಚಕ್ರವರ್ತಿ ಯನ್ನು ಜಯಿಸಿದೆನು.

ಆದುದರಿಂದಲೇ ಈ ಎಲ್ಲದರ ಪೂಜೆಯನ್ನೂ ಮಾಡುವ ಮಹಾತ್ಮರ ವಿಷಯದಲ್ಲಿ ನಾನು ಸಂತುಷ್ಟನಾಗುವೆನು. ನನ್ನನ್ನು ಈ ರೂಪಗಳಲ್ಲಿ ಯಾರು ಪೂಜಿಸುವರೋ–ಅವರಿಗೆ ಪರಾಭವವೆಂಬುದೇ ಇಲ್ಲ.

ಅಪಿ ವಾ ಬ್ರಾಹ್ಮಣಂ ದೃಷ್ಟ್ವಾ ಬ್ರಹ್ಮಚಾರಿಣಮಾಗತಮ್ ।
ಬ್ರಾಹ್ಮಣಾಗ್ರ್ಯಾಹುತಿಂ ದತ್ತ್ವಾ ಅಮೃತಂ ತಸ್ಯ ಭೋಜನಮ್ ॥೧೪॥

ಬ್ರಹ್ಮಚಾರಿಯಾದ ಬ್ರಾಹ್ಮಣವಟುವು ಮನೆಯ ಬಾಗಿಲಿಗೆ ಬಂದೊಡ ನೆಯೇ ಗೃಹಸ್ಥನು ಅವನನ್ನು ಒಳಕ್ಕೆ ಕರೆದು ಸತ್ಕರಿಸಿ ಮೊದಲು ಭೋಜನ ಮಾಡಿಸಬೇಕು. ಅನಂತರ ಉಳಿದುದನ್ನು ತಾನು ಊಟಮಾಡಬೇಕು. ಆ ಭೋಜನವು ಗೃಹಸ್ಥನಿಗೆ ಅಮೃತಕ್ಕೆ ಸಮಾನವಾಗುವುದು.

ಐನ್ದ್ರೀಂ ಸನ್ಧ್ಯಾಮುಪಾಸಿತ್ವಾ ಆದಿತ್ಯಾಭಿಮುಖಃ ಸ್ಥಿತಃ ।
ಸರ್ವತೀರ್ಥೇಷು ಸ ಸ್ನಾತೋ ಮುಚ್ಯತೇ ಸರ್ವಕಿಲ್ಬಿಷೈಃ ॥೧೫॥

ಪೂರ್ವದಿಕ್ಕಿಗೆ ಅಭಿಮುಖವಾಗಿ ಕುಳಿತು ಮಾಡಬೇಕಾದ ಪ್ರಾತಃ

ಸಂಧ್ಯಾವಂದನೆಯನ್ನು ಮಾಡಿ ಸೂರ್ಯನಿಗೆ ಅಭಿಮುಖವಾಗಿ ಕುಳಿತವನು ಸರ್ವತೀರ್ಥಗಳಲ್ಲಿಯೂ ಸ್ನಾನಮಾಡಿದ ಫಲವನ್ನು ಹೊಂದುವುದಲ್ಲದೇ ಸರ್ವಪಾಪಗಳಿಂದಲೂ ವಿಮುಕ್ತನಾಗುತ್ತಾನೆ.

ಏತದ್ವಃ ಕಥಿತಂ ಗುಹ್ಯಮಖಿಲೇನ ತಪೋಧನಾಃ ।
ಸಂಶಯಂ ಪೃಚ್ಛಮಾನಾನಾಂ ಕಿಂ ಭೂಯಃ ಕಥಯಾಮ್ಯಹಮ್ ॥

ತಪೋಧನರೇ! ಸಂಶಯಪರಿಹಾರಕ್ಕಾಗಿ ನೀವು ಕೇಳಿದ ಪ್ರಶ್ನೆಗಳಿಗೆ ಅತ್ಯಂತಗುಹ್ಯವಾದ ಧರ್ಮರಹಸ್ಯವನ್ನು ಸಂಪೂರ್ಣವಾಗಿ ಹೇಳಿದ್ದೇನೆ. ಮುಂದೇನು ಹೇಳಬೇಕೆಂಬುದನ್ನು ಹೇಳಿರಿ."*

ಬಲದೇವನು ಹೇಳುತ್ತಾನೆ:

"ಮನುಷ್ಯನಿಗೆ ಸುಖವನ್ನುಂಟುಮಾಡುವ, ಪರಮರಹಸ್ಯವಾದ ಈ ನನ್ನ ಮಾತುಗಳನ್ನು ಕೇಳಿರಿ. ಮೂರ್ಖರಾದ ಮನುಷ್ಯರು ಈ ಧರ್ಮರಹಸ್ಯವನ್ನು ತಿಳಿಯದೇ ಭೂತಗಳಿಂದ ಪೀಡಿಸಲ್ಪಡುತ್ತಾರೆ.

ಕಲ್ಯ ಉತ್ಥಾಯ ಯೋ ಮರ್ತ್ಯಃ ಸ್ಪೃಶೇದ್ಗಾಂ ವೈ ಘೃತಂ ದಧಿ ।
ಸರ್ಷಪಂ ಚ ಪ್ರಿಯಙ್ಗುಂ ಚ ಕಲ್ಮಷಾತ್ಪ್ರತಿಮುಚ್ಯತೇ ॥೧೮॥

ಪ್ರತಿದಿನವೂ ಬೆಳಗಾಗಿ ಎದ್ದೊಡನೆಯೇ ಯಾವ ಮನುಷ್ಯನು ಹಸುವನ್ನೂ, ತುಪ್ಪವನ್ನೂ, ಮೊಸರನ್ನೂ, ಸಾಸಿವೆಯನ್ನೂ, ನವಣೆಯನ್ನೂ ಮುಟ್ಟುವನೋ –ಅವನು ಪಾಪದಿಂದ ಮುಕ್ತನಾಗುತ್ತಾನೆ.

ಭೂತಾನಿ ಚೈವ ಸರ್ವಾಣಿ ಅಗ್ರತಃ ಪೃಷ್ಠತೋಽಪಿ ವಾ ।
ಉಚ್ಛಿಷ್ಟಂ ವಾಪಿ ಛಿದ್ರೇಷು ವರ್ಜಯನ್ತಿ ತಪೋಧನಾಃ ॥೧೯॥

ತಪೋಧನರು ಮುಂದೆ ಹೋಗುವ ಅಥವಾ ಹಿಂದೆ ಬರುತ್ತಿರುವ

---

* ಈ ಪ್ರಕರಣದಲ್ಲಿ ಅಧ್ಯಾಯದ ಮೊದಲಿನಿಂದಲೂ ಇಂದ್ರನೂ ಮತ್ತು ಮಹಾವಿಷ್ಣುವೂ ಸಂಭಾಷಿಸುತ್ತಿದ್ದಾರೆ. ತಪೋಧನರು ಪ್ರಶ್ನೆಯನ್ನು ಕೇಳಿಲ್ಲ. ತಪೋಧನರು ಅಲ್ಲಿರುವ ಪ್ರಸಂಗವೂ ಇಲ್ಲ. ಮಧ್ಯದಲ್ಲಿ ಈ ಶ್ಲೋಕವು ಹೇಗೆ ಬಂತೆಂಬುದನ್ನು ಹೇಳಲು ಸಾಧ್ಯವಿಲ್ಲ. ಮುಂದೆ ಬಲದೇವನ ಮಾತಿದೆ. ಬಲದೇವನೆಂಬುವನು ಯಾರು? ಅವನು ಎಲ್ಲಿದ್ದನು? ಯಾರೊಡನೆ ಮಾತನಾಡುತ್ತಿದ್ದಾನೆ? ಎಂಬುದರ ಹಿನ್ನೆಲೆಯು ಈ ಪ್ರಕರಣದಲ್ಲಿ ತಿಳಿಯುವುದಿಲ್ಲ. ಇಲ್ಲಿಯ ಕೆಲವು ಅಧ್ಯಾಯಗಳು ಹಿಂದಿನ ಅಧ್ಯಾಯಗಳಿಗಿಂತಲೂ ಬೇರೆಯ ಧಾಟಿಯಲ್ಲಿವೆ-ಎಂದು ಹೇಳಬಹುದಾಗಿದೆ.

ಸಕಲ ದುಷ್ಟಪ್ರಾಣಿಗಳನ್ನೂ ವರ್ಜಿಸುತ್ತಾರೆ. (ಬೇರೆ ದಾರಿಯನ್ನು ಹಿಡಿದು ಹೋಗುತ್ತಾರೆ.) ಹಾಗೆಯೇ ಕಷ್ಟಸಮಯದಲ್ಲಿಯೂ ಉಚ್ಛಿಷ್ಟವಾದ ವಸ್ತುಗಳನ್ನು ತ್ಯಾಗಮಾಡುತ್ತಾರೆ.

ಪ್ರತಿಗೃಹ್ಯೌದುಮ್ಬರಂ ಪಾತ್ರಂ ತೋಯಪೂರ್ಣಮುದಙ್ಮುಖಃ ।
ಉಪವಾಸಂ ತು ಗೃಹ್ಣೀಯಾದ್ಯದ್ವಾ ಸಂಕಲ್ಪಯೇದ್ವ್ರತಮ್ ॥೨೦॥

ಮನುಷ್ಯನು ಜಲಪೂರ್ಣವಾದ ತಾಮ್ರದ ಪಾತ್ರೆಯನ್ನು ಹಿಡಿದು ಕೊಂಡು ಉತ್ತರಾಭಿಮುಖವಾಗಿ ಕುಳಿತು ಉಪವಾಸವ್ರತವನ್ನು ಕೈಗೊಳ್ಳ ಬೇಕು ಅಥವಾ ಬೇರೆ ಯಾವುದಾದರೂ ವ್ರತವನ್ನು ಮಾಡಲು ಸಂಕಲ್ಪಮಾಡಬೇಕು.

ದೇವತಾಸ್ತಸ್ಯ ತುಷ್ಯನ್ತಿ ಕಾಮಿಕಂ ಚಾಪಿ ಸಿಧ್ಯತಿ ।
ಅನ್ಯಥಾ ಹಿ ವೃಥಾ ಮರ್ತ್ಯಾಃ ಕುರ್ವತೇ ಸ್ವಲ್ಪಬುದ್ಧಯಃ ॥೨೧॥

ಹೀಗೆ ಮಾಡುವುದರಿಂದ ದೇವತೆಗಳು ಸುಪ್ರೀತರಾಗುತ್ತಾರೆ. ಮನೋವಾಂಛಿತವಾದ ಕಾಮನೆಗಳೆಲ್ಲವೂ ಸಿದ್ಧಿಸುತ್ತವೆ. ಆದರೆ ಮಂದಬುದ್ಧಿಗಳಾದ ಜನರು ಹೀಗೆ ಮಾಡದೇ ವ್ಯರ್ಥವಾಗಿ ಬೇರೆ-ಬೇರೆ ವಿಧಾನಗಳಲ್ಲಿ ಸಂಕಲ್ಪವನ್ನು ಮಾಡುತ್ತಾರೆ.

ಉಪವಾಸೇ ಬಲೌ ಚಾಪಿ ತಾಮ್ರಪಾತ್ರಂ ವಿಶಿಷ್ಯತೇ ।
ಬಲಿರ್ಭಿಕ್ಷಾ ತಥಾರ್ಘ್ಯಂ ಚ ಪಿತೄಣಾಂ ಚ ತಿಲೋದಕಮ್ ॥೨೨॥
ತಾಮ್ರಪಾತ್ರೇಣ ದಾತವ್ಯಮನ್ಯಥಾಲ್ಪಫಲಂ ಭವೇತ್ ।
ಗುಹ್ಯಮೇತತ್ಸಮುದ್ದಿಷ್ಟಂ ಯಥಾ ತುಷ್ಯನ್ತಿ ದೇವತಾಃ ॥೨೩॥

ಉಪವಾಸವ್ರತವನ್ನು ಕೈಗೊಳ್ಳುವಾಗಲೂ, ಬಲಿಹರಣ ಸಮಯದಲ್ಲಿಯೂ ತಾಮ್ರಪಾತ್ರೆಯು ಶ್ರೇಷ್ಠವಾದುದೆಂದು ಹೇಳಲ್ಪಟ್ಟಿದೆ. ಪೂಜಾಸಾಮಗ್ರಿಗಳನ್ನು ತಾಮ್ರದ ತಟ್ಟೆಯಲ್ಲಿಡಬೇಕು. ಭಿಕ್ಷೆಯನ್ನು ತಾಮ್ರದ ಪಾತ್ರೆಯಿಂದಲೇ ಹಾಕಬೇಕು. ಅರ್ಘ್ಯವನ್ನೂ, ಪಿತೃಗಳಿಗೆ ತಿಲೋದಕ ವನ್ನೂ ತಾಮ್ರದ ಪಾತ್ರೆಯಿಂದಲೇ ಬಿಡಬೇಕು. ಇವುಗಳಿಗೆ ಬೇರೆಯ ಲೋಹದ ಪಾತ್ರೆಗಳನ್ನು ಉಪಯೋಗಿಸಿದರೆ ಅಲ್ಪಫಲವು ಲಭಿಸುತ್ತದೆ. ಅತ್ಯಂತ ನಿಗೂಢವಾದ ಈ ಧರ್ಮರಹಸ್ಯವನ್ನು ಹೇಳಿದ್ದೇನೆ. ಹೀಗೆ ತಾಮ್ರದ

ಪಾತ್ರೆಗಳನ್ನು ಉಪಯೋಗಿಸುವುದರಿಂದ ದೇವತೆಗಳು ಸಂತುಷ್ಟರಾಗುತ್ತಾರೆ."

ಯಮಧರ್ಮನು ಹೇಳುತ್ತಾನೆ:

ರಾಜಪೌರುಷಿಕೇ ವಿಪ್ರೇ ಘಾಣ್ಟಿಕೇ ಪರಿಚಾರಿಕೇ ।
ಗೋರಕ್ಷಕೇ ವಾಣಿಜಕೇ ತಥಾ ಕಾರುಕುಶೀಲವೇ ॥೨೪॥
ಮಿತ್ರದ್ರುಹ್ಯನಧೀಯಾನೇ ಯಶ್ಚ ಸ್ಯಾದ್ವೃಷಲೀಪತಿಃ ।
ಏತೇಷು ದೈವಂ ಪಿತ್ರ್ಯಂ ವಾ ನ ದೇಯಂ ಸ್ಯಾತ್ಕಥಂಚನ।
ಪಿಣ್ಡದಾಸ್ತಸ್ಯ ಹೀಯನ್ತೇ ನ ಚ ಪ್ರೀಣಾತಿ ವೈ ಪಿತೄನ್ ॥೨೫॥

"ಬ್ರಾಹ್ಮಣನಾಗಿದ್ದೂ ರಾಜನ ಸೇವೆಯನ್ನು ಮಾಡುವವನಿಗೆ, ಗಂಟೆಯನ್ನು ಬಾರಿಸುವವನಿಗೆ, ಇತರರ ಸೇವೆಮಾಡುವವನಿಗೆ, ದನಗಳನ್ನು ಕಾಯುವವನಿಗೆ, ವ್ಯಾಪಾರಮಾಡುವವನಿಗೆ, ಮರಗೆಲಸದವನಿಗೆ, ನಟನ ಮಾಡುವವನಿಗೆ, ಮಿತ್ರನಿಗೆ ದ್ರೋಹವನ್ನೆಸಗಿದವನಿಗೆ, ವೇದವನ್ನು ಅಧ್ಯಯನಮಾಡದೇ ಇರುವವನಿಗೆ, ಶೂದ್ರಸ್ತ್ರೀಗೆ ಪತಿಯಾದವನಿಗೆ– ದೇವ ಸಂಬಂಧವಾದ (ಯಜ್ಞಸಂಬಂಧವಾದ), ಪಿತೃಸಂಬಂಧವಾದ (ಶ್ರಾದ್ಧ ಸಂಬಂಧವಾದ) ಭೋಜನವನ್ನು ಮಾಡಿಸಬಾರದು. ದಾನಾದಿಗಳನ್ನೂ ಕೊಡಬಾರದು. ಇಂತಹವರಿಗೆ ಶ್ರಾದ್ಧಾದಿಗಳಲ್ಲಿ ಭೋಜನಮಾಡಿಸಿದವರು ವಿನಾಶಹೊಂದುತ್ತಾರೆ. ಇಂತಹವರ ಮೂಲಕವಾಗಿ ನಡೆಯುವ ಶ್ರಾದ್ಧಾದಿಗಳಿಂದ ಪಿತೃಗಳೂ ತೃಪ್ತರಾಗುವುದಿಲ್ಲ.

ಅತಿಥಿರ್ಯಸ್ಯ ಭಗ್ನಾಶೋ ಗೃಹಾತ್ಪ್ರತಿನಿವರ್ತತೇ ॥೨೬॥
ಪಿತರಸ್ತಸ್ಯ ದೇವಾಶ್ಚ ಅಗ್ನಯಶ್ಚ ತಥೈವ ಹಿ ।
ನಿರಾಶಾಃ ಪ್ರತಿಗಚ್ಛನ್ತಿ ಅತಿಥೇರಪ್ರತಿಗ್ರಹಾತ್ ॥೨೭॥

ಯಾವನ ಮನೆಯಿಂದ ಅತಿಥಿಯು ನಿರಾಶನಾಗಿ ಹಿಂದಿರುಗುವನೋ– ಅಂತಹವನ ಮನೆಯಿಂದ ಪಿತೃಗಳೂ, ದೇವತೆಗಳೂ ಮತ್ತು ಅಗ್ನಿಗಳೂ ಅತಿಥಿಗೆ ಸತ್ಕಾರವಾಗದಿದ್ದುದರಿಂದ ನಿರಾಶರಾಗಿ ಹೊರಟುಹೋಗುತ್ತಾರೆ.

ಸ್ತ್ರೀಘ್ನೈರ್ಗೋಘ್ನೈಃ ಕೃತಘ್ನೈಶ್ಚ ಬ್ರಹ್ಮಘ್ನೈರ್ಗುರುತಲ್ಪಗೈಃ ।
ತುಲ್ಯದೋಷೋ ಭವತ್ಯೇಭಿರ್ಯಸ್ಯಾತಿಥಿರನರ್ಚಿತಃ ॥೨೮॥

ಮನೆಗೆ ಆಗಮಿಸಿದ ಅತಿಥಿಯನ್ನು ಸತ್ಕರಿಸದೇ ಇರುವವನು–ಸ್ತ್ರೀಹತ್ಯೆ-ಗೋಹತ್ಯೆ-ಬ್ರಹ್ಮಹತ್ಯೆಗಳನ್ನು ಮಾಡಿದವರಿಗೆ, ಗುರುಪತ್ನೀ ಸಮಾಗಮಮಾಡಿದವರಿಗೆ ಮತ್ತು ಕೃತಘ್ನರಿಗೆ ಪ್ರಾಪ್ತವಾಗುವ ಪಾಪಕ್ಕೆ ಸಮಾನವಾದ ಪಾಪವನ್ನೇ ಹೊಂದುತ್ತಾನೆ.”

ಅಗ್ನಿಯು ಹೇಳುತ್ತಾನೆ:

ಪಾದಮುದ್ಯಮ್ಯ ಯೋ ಮರ್ತ್ಯಃ ಸ್ಪೃಶೇದ್ಗಾಶ್ಚ ಸುದುರ್ಮತಿಃ ।
ಬ್ರಾಹ್ಮಣಂ ವಾ ಮಹಾಭಾಗಂ ದೀಪ್ಯಮಾನಂ ತಥಾನಲಮ್ ।
ತಸ್ಯ ದೋಷಾನ್ಪ್ರವಕ್ಷ್ಯಾಮಿ ತಚ್ಛೃಣುಧ್ವಂ ಸಮಾಹಿತಾಃ ॥೨೯॥

“ದುರ್ಬುದ್ಧಿಯುಳ್ಳ ಯಾವ ಮನುಷ್ಯನು ಕಾಲನ್ನೆತ್ತಿ ಹಸುವನ್ನೂ, ಮಹಾಭಾಗ್ಯಶಾಲಿಯಾದ ಬ್ರಾಹ್ಮಣನನ್ನೂ, ಪ್ರಜ್ವಲಿಸುತ್ತಿರುವ ಅಗ್ನಿಯನ್ನೂ ಒದೆಯುವನೋ–ಅವನಿಗೆ ಪ್ರಾಪ್ತವಾಗುವ ಪಾಪಗಳನ್ನು ಹೇಳುವೆನು. ಎಲ್ಲರೂ ಏಕಾಗ್ರಚಿತ್ತರಾಗಿ ಕೇಳಿರಿ.

ದಿವಂ ಸ್ಪೃಶತ್ಯಶಬ್ದೋಽಸ್ಯ ತ್ರಸ್ಯನ್ತಿ ಪಿತರಶ್ಚ ವೈ ।
ವೈಮನಸ್ಯಂ ಚ ದೇವಾನಾಂ ಕೃತಂ ಭವತಿ ಪುಷ್ಕಲಮ್ ।
ಪಾವಕಶ್ಚ ಮಹಾತೇಜಾ ಹವ್ಯಂ ನ ಪ್ರತಿಗೃಹ್ಣತಿ ॥೩೦॥

ಅಂತಹವನ ಅಪಕೀರ್ತಿಯು ಸ್ವರ್ಗಕ್ಕೂ ಮುಟ್ಟುತ್ತದೆ. ಅಂತಹವನ ಪಿತೃಗಳೂ ಭಯಪಡುತ್ತಾರೆ. ದೇವತೆಗಳೊಡನೆಯೂ ಅವನಿಗೆ ವೈಮನಸ್ಯ ವುಂಟಾಗುತ್ತದೆ. (ದೇವತೆಗಳು ಅಂತಹವನಿಗೆ ಅನುಗ್ರಹಮಾಡುವುದಿಲ್ಲ.) ಮಹಾತೇಜಸ್ವಿಯಾದ ಅಗ್ನಿಯು ಅವನು ಕೊಟ್ಟ ಹವ್ಯವನ್ನು ಪ್ರತಿಗ್ರಹಿಸುವುದಿಲ್ಲ.

ಆಜನ್ಮನಾಂ ಶತಂ ಚೈವ ನರಕೇ ಪಚ್ಯತೇ ತು ಸಃ ।
ನಿಷ್ಕೃತಿಂ ಚ ನ ತಸ್ಯಾಪಿ ಅನುಮನ್ಯನ್ತಿ ಕರ್ಹಿಚಿತ್ ॥೩೧॥

ಅವನು ನೂರುಜನ್ಮಗಳವರೆಗೆ ನರಕದಲ್ಲಿ ಬೇಯಿಸಲ್ಪಡುತ್ತಾನೆ.

ದೇವ-ಪಿತೃಗಳಾಗಲೀ ಋಷಿಗಳಾಗಲೀ ಅವನ ಉದ್ಧಾರಕ್ಕೆ ಯಾವುದೇ ಕಾರಣದಿಂದಲೂ ಅನುಮೋದಿಸುವುದಿಲ್ಲ.

ಆದುದರಿಂದ ಆತ್ಮಹಿತವನ್ನು ಬಯಸುವ ಶ್ರದ್ಧಾವಂತನಾದ ಮನುಷ್ಯನು ಹಸುಗಳನ್ನಾಗಲೀ, ಬ್ರಾಹ್ಮಣರನ್ನಾಗಲೀ, ಪ್ರಜ್ವಲಿಸುತ್ತಿರುವ ಅಗ್ನಿಯನ್ನಾಗಲೀ ಕಾಲಿನಿಂದ ಸ್ಪರ್ಶಿಸಬಾರದು.

ಹೀಗೆ ನಾನು ಗೋವು, ಬ್ರಾಹ್ಮಣರು ಮತ್ತು ಅಗ್ನಿಗಳನ್ನು ಕಾಲಿನಿಂದ ಸ್ಪರ್ಶಿಸುವವನಿಗೆ ಪ್ರಾಪ್ತವಾಗುವ ದೋಷಗಳನ್ನು ಹೇಳಿದ್ದೇನೆ."

ವಿಶ್ವಾಮಿತ್ರನು ಹೇಳುತ್ತಾನೆ:

"ದೇವತೆಗಳೇ! ಧರ್ಮಯುಕ್ತವಾದ ರಹಸ್ಯವಾದ ಮತ್ತು ಅತ್ಯಂತ ನಿಗೂಢವಾದ ಈ ವಿಷಯವನ್ನು ಕೇಳಿರಿ.

ಪರಮಾನ್ನೇನ ಯೋ ದದ್ಯಾತ್ಪಿತೄಣಾಮೌಪಹಾರಿಕಮ್ ।
ಗಜಚ್ಛಾಯಾಯಾಂ ಪೂರ್ವಸ್ಯಾಂ ಕುತಪೇ ದಕ್ಷಿಣಾಮುಖಃ ।
ಯದಾ ಭಾದ್ರಪದೇ ಮಾಸಿ ಭವತೇ ಬಹುಲೇ ಮಘಾ ॥೩೬॥
ಶ್ರೂಯತಾಂ ತಸ್ಯ ದಾನಸ್ಯ ಯಾದೃಶೋ ಗುಣವಿಸ್ತರಃ ।
ಕೃತಂ ತೇನ ಮಹಚ್ಛ್ರಾದ್ಧಂ ವರ್ಷಾಣೀಹ ತ್ರಯೋದಶ ॥೩೭॥

ಭಾದ್ರಪದ ಶುಕ್ಲತ್ರಯೋದಶಿಯು ಮಘಾನಕ್ಷತ್ರಯುಕ್ತವಾಗಿರುವಾಗ ಕುತಪಕಾಲದಲ್ಲಿ (ಹಗಲಿನ ಎಂಟನೆಯ ಮುಹೂರ್ತದಲ್ಲಿ), ಗಜಚ್ಛಾಯಾ ಯೋಗದ ಆದಿಭಾಗದಲ್ಲಿ, ದಕ್ಷಿಣಾಭಿಮುಖವಾಗಿ ಕುಳಿತು ಪಿತೃಗಳ ಉಪಹಾರಾರ್ಥವಾಗಿ ಪರಮಾನ್ನವನ್ನು (ಹಾಲಿನಲ್ಲಿ ಪಕ್ವವಾದ ಅನ್ನವನ್ನು) ಬ್ರಾಹ್ಮಣನಿಗೆ ಭೋಜನಮಾಡಿಸಿದರೆ ಎಂತಹ ಫಲವು ಸಿಕ್ಕುವುದೆಂಬುದನ್ನು ಹೇಳುವೆನು; ಕೇಳಿರಿ. ಪಿತೃಗಳನ್ನು ಹದಿಮೂರು ವರ್ಷಗಳವರೆಗೆ ತೃಪ್ತಿಗೊಳಿಸುವ ಮಹಾಶ್ರಾದ್ಧವನ್ನು ಅವನು ಮಾಡಿದಂತಾಗುತ್ತದೆ.*

ಗೋವುಗಳು ಹೇಳುತ್ತವೆ:

---

* ಮತ್ಸ್ಯಪುರಾಣದಲ್ಲಿಯೂ ಕುತಪಕಾಲಶ್ರಾದ್ಧದ ವಿಷಯವನ್ನು ಹೇಳಿದ್ದಾರೆ.
ದಿವಸಸ್ಯಾಷ್ಟಮೇ ಭಾಗೇ ಮನ್ದೀ ಭವತಿ ಭಾಸ್ಕರಃ ।
ಕಾಲಃ ಕುತಪೋ ಜ್ಞೇಯಃ ಪಿತೄಣಾಂ ದತ್ತಮಕ್ಷಯಮ್ ॥

ಬಹುಲೇ ಸಮಂಗೇ ಹ್ಯಕುತೋಭಯೇ ಚ
ಕ್ಷೇಮೇ ಚ ಸಖ್ಯೇವ ಹಿ ಭೂಯಸೀ ಚ ।
ಯಥಾ ಪುರಾ ಬ್ರಹ್ಮಪುರೇ ಸವತ್ಸಾ
ಶತಕ್ರತೋರ್ವಜ್ರಧರಸ್ಯ ಯಜ್ಞೇ ॥೩೮॥
ಭೂಯಶ್ಚ ಯಾ ವಿಷ್ಣುಪದೇ ಸ್ಥಿತಾ ಯಾ
ವಿಭಾವಸೋಶ್ಚಾಪಿ ಪಥೇ ಸ್ಥಿತಾ ಯಾ ।
ದೇವಾಶ್ಚ ಸರ್ವೇ ಸಹ ನಾರದೇನ
ಪ್ರಕುರ್ವತೇ ಸರ್ವಸಹೇತಿ ನಾಮ ॥೩೯॥

ಹಿಂದೆ ಬ್ರಹ್ಮಲೋಕದಲ್ಲಿ ನಡೆದ ವಜ್ರಧರನಾದ ಶತಕ್ರತುವಿನ ಯಜ್ಞದಲ್ಲಿ ಕರುಗಳಿಂದ ಕೂಡಿದ ಗೋವುಗಳನ್ನು–ಬಹುಲೇ! ಸಮಂಗೇ! ಅಕುತೋಭಯೇ! ಕ್ಷೇಮೇ! ಸಖಿ! ಭೂಯಸೀ! ಇವೇ ಮುಂತಾದ ಸ್ತೋತ್ರಗಳಿಂದ ಸ್ತೋತ್ರಮಾಡುತ್ತಿದ್ದರು. ಪುನಃ ಆಕಾಶಮಾರ್ಗದಲ್ಲಿದ್ದ ಗೋವನ್ನೂ ಸೂರ್ಯನ ಮಾರ್ಗದಲ್ಲಿದ್ದ ಗೋವನ್ನೂ ನಾರದರಿಂದ ಕೂಡಿದ ಎಲ್ಲ ದೇವತೆಗಳೂ 'ಸರ್ವಸಹಾ'–ಎಂಬ ಹೆಸರಿನಿಂದ ಕರೆದರು.

ಮನ್ತ್ರೇಣೈತೇನಾಭಿವನ್ದೇತ ಯೋ ವೈ
ವಿಮುಚ್ಯತೇ ಪಾಪಕೃತೇನ ಕರ್ಮಣಾ ।
ಲೋಕಾನವಾಪ್ನೋತಿ ಪುರನ್ದರಸ್ಯ
ಗವಾಂ ಫಲಂ ಚನ್ದ್ರಮಸೋ ದ್ಯುತಿಂ ಚ ॥೪೦॥

ಈ ಎರಡು ಶ್ಲೋಕಗಳೂ ಮಂತ್ರರೂಪವಾಗಿವೆ. ಈ ಮಂತ್ರವನ್ನು ಹೇಳಿಕೊಂಡು ಯಾರು ಗೋವುಗಳನ್ನು ನಮಸ್ಕರಿಸುವರೋ – ಅವರು ಪಾಪಕರ್ಮಗಳಿಂದ ಮುಕ್ತರಾಗುತ್ತಾರೆ. ಗೋವುಗಳನ್ನು ಸೇವೆಮಾಡಿದ ಫಲದಿಂದ ಅವರು ಅವಸಾನಾನಂತರದಲ್ಲಿ ಚಂದ್ರನ ಕಾಂತಿಯನ್ನು ಹೊಂದಿ ಇಂದ್ರನ ಲೋಕಗಳನ್ನು ಸೇರುತ್ತಾರೆ.

ಏತಂ ಹಿ ಮನ್ತ್ರಂ ತ್ರಿದಶಾಭಿಜುಷ್ಟಂ
ಪಠೇತ ಯಃ ಪರ್ವಸು ಗೋಷ್ಠಿಮಧ್ಯೇ ।
ನ ತಸ್ಯ ಪಾಪಂ ನ ಭಯಂ ನ ಶೋಕಃ
ಸಹಸ್ರನೇತ್ರಸ್ಯ ಚ ಯಾತಿ ಲೋಕಮ್ ॥೪೧॥

ದೇವತೆಗಳಿಂದಲೂ ಪುನಶ್ಚರಿತವಾದ ಈ ಮಂತ್ರವನ್ನು ಯಾವನು ಪರ್ವಕಾಲಗಳಲ್ಲಿ ಗೋಶಾಲೆಯ ಮಧ್ಯದಲ್ಲಿ ಪಠಿಸುವನೋ–ಅವನಿಗೆ ಪಾಪವಾಗಲೀ, ಭಯವಾಗಲೀ, ಶೋಕವಾಗಲೀ ಇರುವುದಿಲ್ಲ. ಅವಸಾನಾನಂತರದಲ್ಲಿ ಅವನು ಪೂತಾತ್ಮನಾಗಿ ಸಹಸ್ರನೇತ್ರನಾದ ಇಂದ್ರನ ಲೋಕಕ್ಕೆ ಹೋಗುತ್ತಾನೆ."

ಭೀಷ್ಮನು ಹೇಳುತ್ತಾನೆ:

"ಅನಂತರ ಮಹಾಭಾಗ್ಯಶಾಲಿಗಳಾದ, ಲೋಕವಿಖ್ಯಾತರಾದ, ವಸಿಷ್ಠಪ್ರಮುಖರಾದ ಸಪ್ತರ್ಷಿಗಳು ಪದ್ಮಸಂಭವನಾದ ಬ್ರಹ್ಮನಿಗೆ ಪ್ರದಕ್ಷಿಣೆಯನ್ನು ಮಾಡಿ ಕೈಜೋಡಿಸಿಕೊಂಡು ಅವನ ಮುಂದೆ ನಿಂತುಕೊಂಡರು. ಬ್ರಹ್ಮವಿದರಲ್ಲಿ ಶ್ರೇಷ್ಠರಾದ ವಸಿಷ್ಠರು ಸರ್ವಪ್ರಾಣಿಗಳಿಗೂ ಹಿತಕರವಾದ, ಅದರಲ್ಲಿಯೂ ವಿಶೇಷವಾಗಿ ಬ್ರಾಹ್ಮಣ-ಕ್ಷತ್ರಿಯರಿಗೆ ಲಾಭದಾಯಕವಾದ ಈ ಪ್ರಶ್ನೆಗಳನ್ನು ಕೇಳಿದರು:

ದ್ರವ್ಯಹೀನಾ ಕಥಂ ಮರ್ತ್ಯಾ ದರಿದ್ರಾಃ ಸಾಧುವರ್ತಿನಃ ।
ಪ್ರಾಪ್ನುವಂತೀಹ ಯಜ್ಞಸ್ಯ ಫಲಂ ಕೇನ ಚ ಕರ್ಮಣಾ ॥೪೪॥

"ಪೂಜ್ಯನೇ! ಸದ್ವ್ಯವಹಾರವುಳ್ಳ, ದ್ರವ್ಯಹೀನರಾದ, ದರಿದ್ರರಾದ ಮನುಷ್ಯರು ಯಾವ ಕರ್ಮವನ್ನು ಮಾಡುವುದರಿಂದ ಬಹುದಕ್ಷಿಣೆಯಿಂದ ಸಾಧ್ಯವಾಗುವ ಯಜ್ಞದ ಫಲವನ್ನು ಪಡೆದುಕೊಳ್ಳುತ್ತಾರೆ?"

ಸಪ್ತರ್ಷಿಗಳಲ್ಲಿ ಪ್ರಮುಖರಾದ ವಸಿಷ್ಠರು ಹೇಳಿದ ಆ ಮಾತನ್ನು ಕೇಳಿ ಬ್ರಹ್ಮನು ಹೇಳಿದನು:

"ಮಹಾಭಾಗರೇ! ನೀವು ಕೇಳಿದ ಪ್ರಶ್ನೆಯು ಪರಮಶುಭವನ್ನುಂಟು ಮಾಡತಕ್ಕುದು. ಗೂಢಾರ್ಥಯುಕ್ತವಾದುದು. ಅತಿಸೂಕ್ಷ್ಮವಾದುದು. ಮನುಷ್ಯರಿಗೆ ಶ್ರೇಯಸ್ಸನ್ನು ಉಂಟುಮಾಡತಕ್ಕುದು. ತಪೋಧನರೇ! ಕೇಳಿರಿ. ಯಾವ ರೀತಿಯಲ್ಲಿ ಮನುಷ್ಯನು ಯಜ್ಞವನ್ನು ಮಾಡದಿದ್ದರೂ ಸಂಶಯಕ್ಕೆ ಎಡೆಯೇ ಇಲ್ಲದಂತೆ ಯಜ್ಞಫಲವನ್ನು ಹೊಂದುವನೆಂಬುದನ್ನು ಸಮಗ್ರವಾಗಿ ಹೇಳುತ್ತೇನೆ.

ಪೌಷಮಾಸಸ್ಯ ಶುಕ್ಲೇ ವೈ ಯದಾ ಯುಜ್ಯೇತ ರೋಹಿಣೀ ।
ತೇನ ನಕ್ಷತ್ರಯೋಗೇನ ಆಕಾಶಶಯನೋ ಭವೇತ್ ॥೪೫॥

ಏಕವಸ್ತ್ರಃ ಶುಚಿಃ ಸ್ನಾತಃ ಶ್ರದ್ದಧಾನಃ ಸಮಾಹಿತಃ ।
ಸೋಮಸ್ಯ ರಶ್ಮಯಃ ಪೀತ್ವಾ ಮಹಾಯಜ್ಞಫಲಂ ಲಭೇತ್ ॥೪೯॥

ಪುಷ್ಯಮಾಸದ ಶುಕ್ಲಪಕ್ಷದಲ್ಲಿ ರೋಹಿಣೀನಕ್ಷತ್ರವಿರುವ ದಿನದಂದು ರಾತ್ರಿ ಮನುಷ್ಯನು ಸ್ನಾನಾದಿಗಳಿಂದ ಪರಿಶುದ್ಧನಾಗಿ, ಒಂದೇ ಬಟ್ಟೆಯನ್ನುಟ್ಟು, ಶ್ರದ್ಧಾಯುಕ್ತನಾಗಿ, ಏಕಾಗ್ರಚಿತ್ತನಾಗಿ, ಆಕಾಶವನ್ನೇ ಹೊದ್ದಿಕೆಯನ್ನಾಗಿ ಮಾಡಿಕೊಂಡು ಬಯಲಿನಲ್ಲಿ ಮಲಗಬೇಕು. ಚಂದ್ರನ ಕಿರಣವನ್ನೇ ಪಾನಮಾಡುತ್ತಿರಬೇಕು. ಹೀಗೆ ಮಾಡುವವನು ಮಹಾಯಜ್ಞವನ್ನು ಮಾಡಿದ ಫಲವನ್ನು ಹೊಂದುತ್ತಾನೆ. ಸೂಕ್ಷ್ಮತತ್ತ್ವಾರ್ಥವನ್ನು ತಿಳಿದುಕೊಂಡಿರುವ ದ್ವಿಜಶ್ರೇಷ್ಠರೇ! ನಿಮ್ಮ ಪ್ರಶ್ನೆಗೆ ಅನುಸಾರವಾಗಿ ಪರಮಗುಹ್ಯವಾದ ಈ ವಿಷಯವನ್ನು ನಿಮಗೆ ಹೇಳಿರುತ್ತೇನೆ.”

೧೨೬ನೆಯ ಅಧ್ಯಾಯವು ಮುಗಿಯಿತು.

೧೨೭ನೆಯ ಅಧ್ಯಾಯ ದಾನಧರ್ಮಪರ್ವ(ಮುಂದುವರಿದಿದೆ.)

ಅಗ್ನಿ, ಲಕ್ಷ್ಮೀ, ಅಂಗಿರಸ, ಗಾರ್ಗ್ಯ, ಧೌಮ್ಯ, ಜಮದಗ್ನಿ ಇವರಿಂದ ಧರ್ಮರಹಸ್ಯಗಳ ವರ್ಣನೆ

ವಿಭಾವಸುವು ಹೇಳುತ್ತಾನೆ:

ಸಲಿಲಸ್ಯಾಞ್ಜಲಿಂ ಪೂರ್ಣಮಕ್ಷತಾಶ್ಚ ಘೃತೋತ್ತರಾಃ ।
ಸೋಮಸ್ಯೋತ್ತಿಷ್ಠಮಾನಸ್ಯ ತಜ್ಜಲಂ ಚಾಕ್ಷತಾಂಶ್ಚ ತಾನ್ ॥೧॥
ಸ್ಥಿತೋ ಹ್ಯಭಿಮುಖೋ ಮರ್ತ್ಯಃ ಪೂರ್ಣಮಾಸ್ಯಾಂ ಬಲಿಂ ಹರೇತ್ ।
ಅಗ್ನಿಕಾರ್ಯಂ ಕೃತಂ ತೇನ ಹುತಾಶ್ಚಾಸ್ಯಾಗ್ನಯಸ್ತ್ರಯಃ ॥೨॥

“ಯಾವ ಮನುಷ್ಯನು ಹುಣ್ಣಿಮೆಯಂದು ಚಂದ್ರೋದಯಸಮಯದಲ್ಲಿ ಚಂದ್ರನಿಗೆ ಅಭಿಮುಖನಾಗಿ ನಿಂತು ಬೊಗಸೆಯಲ್ಲಿ ನೀರನ್ನು ತುಂಬಿಕೊಂಡು ಅಕ್ಷತೆ ಮತ್ತು ತುಪ್ಪದೊಡನೆ ಬಲಿಯನ್ನು ಸಮರ್ಪಿಸುವನೋ ಅವನು ಅಗ್ನಿಹೋತ್ರವನ್ನೇ ಮಾಡಿದವನಾಗುತ್ತಾನೆ. ಹೀಗೆ ಮಾಡುವುದರಿಂದ ಅಗ್ನಿತ್ರಯಗಳಿಗೂ ಆಹುತಿಯನ್ನು ಸಮರ್ಪಿಸಿದಂತಾಗುತ್ತದೆ.

ವನಸ್ಪತಿಂ ತು ಯೋ ಹನ್ಯಾದಮಾವಾಸ್ಯಾಮಬುದ್ಧಿಮಾನ್ ।
ಅಪಿ ಹ್ಯೇಕೇನ ಪತ್ರೇಣ ಲಿಪ್ಯತೇ ಬ್ರಹ್ಮಹತ್ಯಯಾ ॥೩॥

ಅಮಾವಾಸ್ಯೆಯ ದಿನ ಬುದ್ಧಿಶೂನ್ಯನಾಗಿ ಯಾವನು ಒಂದೇ ಒಂದು ಎಲೆಯನ್ನು ಕೀಳುವುದರ ಮೂಲಕವಾಗಿಯೇ ಆದರೂ ವನಸ್ಪತಿಯನ್ನು (ಗಿಡ-ಮರ-ಬಳ್ಳಿಗಳನ್ನು) ಹಿಂಸಿಸುವನೋ–ಅವನು ಬ್ರಹ್ಮಹತ್ಯಾದೋಷಕ್ಕೆ ಭಾಗಿಯಾಗುತ್ತಾನೆ.

ದನ್ತಕಾಷ್ಠಂ ತು ಯಃ ಖಾದೇದಮಾವಾಸ್ಯಾಮಬುದ್ಧಿಮಾನ್ ।
ಹಿಂಸಿತಶ್ಚನ್ದ್ರಮಾಸ್ತೇನ ಪಿತರಶ್ಚೋದ್ವಿಜನ್ತಿ ಚ ॥೪॥

ಬುದ್ಧಿಹೀನನಾದ ಯಾವ ಮನುಷ್ಯನು ಅಮಾವಾಸ್ಯೆಯ ದಿನ ದಂತಧಾವನ ಕಡ್ಡಿಯನ್ನು (ಬೇವಿನ ಕಡ್ಡಿಯನ್ನು) ಹಲ್ಲುಜ್ಜುವ ಸಲುವಾಗಿ ಅಗಿಯುವನೋ–ಅವನು ಚಂದ್ರಹಿಂಸಕನಾಗುತ್ತಾನೆ. ಆ ಕರ್ಮದಿಂದ ಚಂದ್ರನಿಗೂ ಹಿಂಸೆಯುಂಟಾಗುತ್ತದೆ. ಪಿತೃಗಳೂ ಉದ್ವೇಗಗೊಳ್ಳುತ್ತಾರೆ.

ಹವ್ಯಂ ನ ತಸ್ಯ ದೇವಾಶ್ಚ ಪ್ರತಿಗೃಹ್ಣನ್ತಿ ಪರ್ವಸು ।
ಕುಪ್ಯನ್ತೇ ಪಿತರಶ್ಚಾಸ್ಯ ಕುಲೇ ವಂಶೋಽಸ್ಯ ಹೀಯತೇ ॥೫॥

ಪರ್ವದಿವಸಗಳಲ್ಲಿ ಅವನಿಂದ ಕೊಡಲ್ಪಡುವ ಹವ್ಯವನ್ನು ದೇವತೆಗಳು ಪ್ರತಿಗ್ರಹಿಸುವುದಿಲ್ಲ. ಅವನ ಪಿತೃಗಳೂ ಕುಪಿತರಾಗುತ್ತಾರೆ. ಅವನ ಕುಲದಲ್ಲಿ ವಂಶಾವಳಿಗೆ ಹಾನಿಯುಂಟಾಗುತ್ತದೆ.”

ಲಕ್ಷ್ಮಿಯು ಹೇಳುತ್ತಾಳೆ:

ಪ್ರಕೀರ್ಣಂ ಭಾಜನಂ ಯತ್ರ ಭಿನ್ನಭಾಂಡಮಥಾಸನಮ್ ।
ಯೋಷಿತಶ್ಚೈವ ಹನ್ಯನ್ತೇ ಕಶ್ಮಲೋಪಹತೇ ಗೃಹೇ ॥೬॥
ದೇವತಾಃ ಪಿತರಶ್ಚೈವ ಉತ್ಸವೇ ಪರ್ವಣೀಷು ವಾ ।
ನಿರಾಶಾಃ ಪ್ರತಿಗಚ್ಛನ್ತಿ ಕಶ್ಮಲೋಪಹತಾದ್ಗೃಹಾತ್ ॥೭॥

ಯಾವ ಮನೆಯಲ್ಲಿ ಪಾತ್ರೆ-ಪದಾರ್ಥಗಳು ಎಲ್ಲೆಂದರಲ್ಲಿ ಅಸ್ತವ್ಯಸ್ತವಾಗಿ ಬಿದ್ದಿರುವುವೋ, ಆಸನ-ಭಾಜನಗಳು ಒಡೆದುಹೋಗಿರುವುವೋ, ಸ್ತ್ರೀಯರು ಹಿಂಸಿಸಲ್ಪಡುವರೋ–ಅಂತಹ ಮನೆಯು ಪಾಪದಿಂದ

ದೂಷಿತವಾಗುತ್ತದೆ. ಪಾಪಭೂಯಿಷ್ಠವಾದ ಅಂತಹ ಮನೆಯಿಂದ ಉತ್ಸವದಿನಗಳಲ್ಲಿಯೂ ಪರ್ವದಿನಗಳಲ್ಲಿಯೂ ಆಗಮಿಸುವ ದೇವ-ಪಿತೃಗಳು ನಿರಾಶರಾಗಿ ಹಿಂದಿರುಗುತ್ತಾರೆ. ಅಂತಹ ಮನೆಗಳಲ್ಲಿ ಪೂಜೆಯನ್ನು ಸ್ವೀಕರಿಸುವುದಿಲ್ಲ."

ಅಂಗಿರಸರು ಹೇಳುತ್ತಾರೆ:

ಯಸ್ತು ಸಂವತ್ಸರಂ ಪೂರ್ಣಂ ದದ್ಯಾದ್ದೀಪಂ ಕರಞ್ಜಕೇ ।
ಸುವರ್ಚಲಾಮೂಲಹಸ್ತಃ ಪ್ರಜಾ ತಸ್ಯ ವಿವರ್ಧತೇ ॥೮॥

"ಯಾವನು ಒಂದು ವರ್ಷದವರೆಗೆ ಹೊಂಗೇಮರದ ಬುಡದಲ್ಲಿ ಸುವರ್ಚಲಾ ಎಂಬ ಗಿಡದ (ಹೊತ್ತು ತಿರುಗನ ಗಿಡ) ಬೇರನ್ನು ಕೈಯ್ಯಲ್ಲಿಟ್ಟುಕೊಂಡು ದೀಪವನ್ನು ಹಚ್ಚುವನೋ (ದೀಪವನ್ನು ದಾನ ಮಾಡುವನೋ) ಅವನ ಸಂತಾನವು ವೃದ್ಧಿಹೊಂದುತ್ತದೆ."

ಗಾರ್ಗ್ಯನು ಹೇಳುತ್ತಾನೆ:

ಆತಿಥ್ಯಂ ಸತತಂ ಕುರ್ಯಾದ್ದೀಪಂ ದದ್ಯಾತ್ಪ್ರತಿಶ್ರಯೇ ।
ವರ್ಜಯಾನೋ ದಿವಾ ಸ್ವಾಪಂ ನ ಚ ಮಾಂಸಾನಿ ಭಕ್ಷಯೇತ್ ॥
ಗೋಬ್ರಾಹ್ಮಣಂ ನ ಹಿಂಸ್ಯಾಚ್ಚ ಪುಷ್ಕರಾಣಿ ಚ ಕೀರ್ತಯೇತ್ ।
ಏಷ ಶ್ರೇಷ್ಠತಮೋ ಧರ್ಮಃ ಸರಹಸ್ಯೋ ಮಹಾಫಲಃ ॥೧೦॥

"ಯಾವಾಗಲೂ ಅತಿಥಿಸತ್ಕಾರವನ್ನು ಮಾಡಬೇಕು. ಮನೆಯಲ್ಲಿ ದೀಪವನ್ನು ಬೆಳಗಬೇಕು. ಹಗಲು ಮಲಗಬಾರದು. ಮಾಂಸವನ್ನು ತಿನ್ನಬಾರದು. ಗೋ-ಬ್ರಾಹ್ಮಣರನ್ನು ಹಿಂಸಿಸಬಾರದು. ಪುಣ್ಯತೀರ್ಥಗಳ ಹೆಸರುಗಳನ್ನು ಸಂಕೀರ್ತನಮಾಡಬೇಕು. ಇದು ರಹಸ್ಯಯುಕ್ತವಾದ ಶ್ರೇಷ್ಠ ಧರ್ಮವಾಗಿದೆ ಮತ್ತು ಮಹಾಫಲವನ್ನು ಕೊಡುವುದಾಗಿದೆ.

ಅಪಿ ಕ್ರತುಶತೈರಿಷ್ಟ್ವಾ ಕ್ಷಯಂ ಗಚ್ಛತಿ ತದ್ಧವಿಃ ।
ನ ತು ಕ್ಷೀಯನ್ತಿ ತೇ ಧರ್ಮಾಃ ಶ್ರದ್ದಧಾನೈಃ ಪ್ರಯೋಜಿತಾಃ ॥೧೧॥

ನೂರು ಯಜ್ಞಗಳನ್ನು ಮಾಡಿದರೂ ಆ ಯಜ್ಞಗಳ ಫಲವು ಕಾಲಾನುಕ್ರಮವಾಗಿ ಕ್ಷೀಣಿಸುತ್ತದೆ. ಆದರೆ ಶ್ರದ್ಧಾವಂತರು ಮಾಡಿದ ಅತಿಥಿಸತ್ಕಾರಾದಿ ಧರ್ಮಗಳ ಫಲವು ಯಾವಾಗಲೂ ನಾಶವನ್ನು ಹೊಂದುವುದಿಲ್ಲ.

ಪರಮಗೋಪನೀಯವಾದ ರಹಸ್ಯಯುಕ್ತವಾದ ಈ ಧರ್ಮವನ್ನು ಕೇಳಿರಿ:

ಶ್ರಾದ್ಧಕಲ್ಪೇ ಚ ದೈವೇ ಚ ತೈರ್ಥಿಕೇ ಪರ್ವಣೀಷು ಚ ।
ರಜಸ್ವಲಾ ಚ ಯಾ ನಾರೀ ಶ್ವಿತ್ರಿಕಾಪುತ್ರಿಕಾ ಚ ಯಾ ॥೧೨॥

ಏತಾಭಿಶ್ಚಕ್ಷುಷಾ ದೃಷ್ಟಂ ಹವಿರ್ನಾಶ್ನಂತಿ ದೇವತಾಃ ।
ಪಿತರಶ್ಚ ನ ತುಷ್ಯನ್ತಿ ವರ್ಷಾಣ್ಯಪಿ ತ್ರಯೋದಶ ॥೧೩॥

ಶ್ರಾದ್ಧಸಮಯದಲ್ಲಿ, ಯಜ್ಞದಲ್ಲಿ, ತೀರ್ಥಕ್ಷೇತ್ರಗಳಲ್ಲಿ, ಪರ್ವದಿವಸಗಳಲ್ಲಿ ದೇವಪಿತೃಗಳಿಗಾಗಿ ಸಿದ್ಧಪಡಿಸಿರುವ ಹವ್ಯ-ಕವ್ಯಗಳನ್ನು ರಜಸ್ವಲೆಯಾಗಿರುವ ಹೆಂಗಸಾಗಲೀ, ಕುಷ್ಠರೋಗಿಣಿಯಾಗಲೀ, ಬಂಜೆಯಾಗಲೀ ನೋಡಿದ್ದೇ ಆದರೆ ಅಂತಹ ಹವ್ಯ-ಕವ್ಯಗಳನ್ನು ದೇವತೆಗಳಾಗಲೀ, ಪಿತೃಗಳಾಗಲೀ ಸ್ವೀಕರಿಸುವುದಿಲ್ಲ. ಇದರ ಪರಿಣಾಮವಾಗಿ ಪಿತೃಗಳು ಹದಿಮೂರು ವರ್ಷಗಳವರೆಗೆ ಅಸಂತುಷ್ಟರಾಗಿರುತ್ತಾರೆ.

ಶುಕ್ಲವಾಸಾಃ ಶುಚಿರ್ಭೂತ್ವಾ ಬ್ರಾಹ್ಮಣಾನ್ಸ್ವಸ್ತಿ ವಾಚಯೇತ್ ।
ಕೀರ್ತಯೇದ್ಭಾರತಂ ಚೈವ ತಥಾ ಸ್ಯಾದಕ್ಷಯಂ ಹವಿಃ ॥೧೪॥

ಶ್ರಾದ್ಧದ ದಿವಸ ಅಥವಾ ಯಜ್ಞವು ನಡೆಯುವ ಸಮಯದಲ್ಲಿ ಕರ್ತೃವು ಸ್ನಾನಾದಿಗಳಿಂದ ಪರಿಶುದ್ಧನಾಗಿ ಬಿಳೀಬಟ್ಟೆಗಳನ್ನು ಧರಿಸಿ ಬ್ರಾಹ್ಮಣರಿಂದ ಸ್ವಸ್ತಿವಾಚನವನ್ನು ಮಾಡಿಸಬೇಕು. ಮಹಾಭಾರತವನ್ನು ಪಾರಾಯಣಮಾಡಬೇಕು. ಹೀಗೆ ಶ್ರಾದ್ಧಮಾಡುವುದರಿಂದ ಮತ್ತು ಯಜ್ಞಮಾಡುವುದರಿಂದ ಹವ್ಯ-ಕವ್ಯಗಳು ಅಕ್ಷಯವಾಗುತ್ತವೆ. ದೇವ-ಪಿತೃಗಳು ತೃಪ್ತರಾಗುತ್ತಾರೆ."

ಧೌಮ್ಯರು ಹೇಳುತ್ತಾರೆ:

ಭಿನ್ನಭಾಣ್ಡಂ ಚ ಖಟ್ವಾಂ ಚ ಕುಕ್ಕುಟಂ ಶುನಕಂ ತಥಾ ।
ಅಪ್ರಶಸ್ತಾನಿ ಸರ್ವಾಣಿ ಯಶ್ಚ ವೃಕ್ಷೋ ಗೃಹೇರುಹಃ ॥೧೫॥

"ಒಡೆದು ಹೋಗಿರುವ ಮಡಕೆ-ಗಡಿಗೆಗಳು, ಮುರಿದುಹೋಗಿರುವ ಮಂಚ ಮತ್ತು ಉಯ್ಯಾಲೆ, ಕೋಳಿ, ನಾಯಿ, ಮನೆಯ ಆವರಣದಲ್ಲಿ ಹುಟ್ಟಿರುವ ಅಶ್ವತ್ಥಾದಿ ವೃಕ್ಷಗಳು–ಇವೆಲ್ಲವನ್ನೂ ಅಮಂಗಳಕರವೆನ್ನುತ್ತಾರೆ.

ಭಿನ್ನಭಾಣ್ಡೇ ಕಲಿಂ ಪ್ರಾಹುಃ ಖಟ್ವಾಯಾಂ ತು ಧನಕ್ಷಯಃ ।
ಕುಕ್ಕುಟೇ ಶುನಕೇ ಚೈವ ಹವಿರ್ನಾಶ್ನನ್ತಿ ದೇವತಾಃ ।
ವೃಕ್ಷಮೂಲೇ ಧ್ರುವಂ ಸತ್ತ್ವಂ ತಸ್ಮಾದ್ವೃಕ್ಷಂ ನ ರೋಪಯೇತ್ ॥೧೬॥

ಒಡೆದ ಮಡಕೆ-ಗಡಿಗೆಗಳಿದ್ದರೆ ಆ ಮನೆಯಲ್ಲಿ ಕಲಿಪ್ರವೇಶ ವಾಗುವುದೆಂದು ಹೇಳುತ್ತಾರೆ. ಮುರಿದುಹೋದ ಮಂಚವಿದ್ದರೆ ಧನಕ್ಷಯ ವಾಗುತ್ತದೆ. ಕೋಳಿಯಾಗಲೀ ನಾಯಿಯಾಗಲೀ ಮನೆಯಲ್ಲಿದ್ದರೆ ದೇವತೆಗಳು ಹವಿಸ್ಸನ್ನು ಸ್ವೀಕರಿಸುವುದಿಲ್ಲ. ಅಶ್ವತ್ಥಾದಿ ವೃಕ್ಷಗಳು ಮನೆಯ ಆವರಣದಲ್ಲಿ ಬೆಳೆದರೆ ಅವುಗಳ ಪೊಟರೆಗಳಲ್ಲಿ ಹಾವು-ಚೇಳು ಮುಂತಾದುವು ಸೇರಿಕೊಳ್ಳುತ್ತವೆ. ಹುಣಸೇ ಮುಂತಾದ ವೃಕ್ಷಗಳು ಭೂತಪ್ರೇತಗಳಿಗೂ ವಾಸಸ್ಥಾನವಾಗಬಹುದು. ಆದುದರಿಂದ ಅಂತಹ ವೃಕ್ಷಗಳನ್ನು ಮನೆಯ ಆವರಣದಲ್ಲಿ ಬೆಳೆಸಬಾರದು."

ಜಮದಗ್ನಿಯು ಹೇಳುತ್ತಾನೆ:

ಯೋ ಯಜೇದಶ್ವಮೇಧೇನ ವಾಜಪೇಯಶತೇನ ಹ ।
ಅವಾಕ್ಶಿರಾ ವಾ ಲಮ್ಬೇತ ಸತ್ರಂ ವಾ ಸ್ಫೀತಮಾಹರೇತ್ ॥೧೭॥

ನ ಯಸ್ಯ ಹೃದಯಂ ಶುದ್ಧಂ ನರಕಂ ಸ ಧ್ರುವಂ ವ್ರಜೇತ್ ।
ತುಲ್ಯಂ ಯಜ್ಞಶ್ಚ ಸತ್ಯಂ ಚ ಹೃದಯಸ್ಯ ಚ ಶುದ್ಧತಾ ॥೧೮॥

"ಒಬ್ಬನು ಅಶ್ವಮೇಧಯಾಗವನ್ನು ಮಾಡಿರಬಹುದು. ನೂರು ವಾಜಪೇಯಯಾಗಗಳಿಂದ ದೇವತೆಗಳನ್ನು ಆರಾಧಿಸಿರಬಹುದು. ಮರದಲ್ಲಿ ತಲೆಕೆಳಗಾಗಿ ಜೋಲಾಡುತ್ತಾ ಅನೇಕ ವರ್ಷಗಳನ್ನು ಕಳೆದಿರಬಹುದು. ಸರ್ವಸಮೃದ್ಧಿಯಿಂದ ಕೂಡಿದ ಸತ್ರವನ್ನು ಆಚರಿಸಿರಬಹುದು. ಆದರೆ ಹೃದಯಶುದ್ಧಿಯಿಲ್ಲದಿದ್ದರೆ ಅಂತಹವನು ಮಾಡಿದ ಕರ್ಮಗಳೆಲ್ಲವೂ ವ್ಯರ್ಥವಾಗುತ್ತವೆ. ಅವನು ನಿಶ್ಚಯವಾಗಿಯೂ ನರಕಕ್ಕೆ ಹೋಗುತ್ತಾನೆ. ಯಜ್ಞ, ಸತ್ಯ, ಹೃದಯಶುದ್ಧಿ–ಇವು ಮೂರೂ ಸಮಾನವಾದ ಫಲವನ್ನು ಕೊಡತಕ್ಕುವುಗಳು.

ಶುದ್ಧೇನ ಮನಸಾ ದತ್ತ್ವಾ ಸಕ್ತುಪ್ರಸ್ಥಂ ದ್ವಿಜಾತಯೇ ।
ಬ್ರಹ್ಮಲೋಕಮನುಪ್ರಾಪ್ತಃ ಪರ್ಯಾಪ್ತಂ ತನ್ನಿದರ್ಶನಮ್ ॥೧೯॥

ಹಿಂದೊಮ್ಮೆ ಬಡಬ್ರಾಹ್ಮಣನೊಬ್ಬನು ಶುದ್ಧಾಂತಃಕರಣನಾಗಿ ಒಂದು ಬಳ್ಳಹಿಟ್ಟನ್ನು ಒಬ್ಬ ಬ್ರಾಹ್ಮಣನಿಗೆ ದಾನಮಾಡಿ ಅದರ ಫಲವಾಗಿ ಅವಸಾನಾನಂತರದಲ್ಲಿ ಬ್ರಹ್ಮಲೋಕವನ್ನು ಸೇರಿದನು. ಹೃದಯಶುದ್ಧಿಯಿಂದ ಮಹಾಫಲವು ಲಭಿಸುವುದೆಂಬುದಕ್ಕೆ ಇದೊಂದು ನಿದರ್ಶನವೇ ಸಾಕಾಗಿದೆ.”

೧೨೭ನೆಯ ಅಧ್ಯಾಯವು ಮುಗಿಯಿತು.

೧೨೮ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ವಾಯುವಿನಿಂದ ಧರ್ಮರಹಸ್ಯದ ವರ್ಣನೆ

ವಾಯುವು ಹೇಳುತ್ತಾನೆ:

ಕಿಂಚಿದ್ಧರ್ಮಂ ಪ್ರವಕ್ಷ್ಯಾಮಿ ಮಾನುಷಾಣಾಂ ಸುಖಾವಹಮ್ ।
ಸರಹಸ್ಯಾಶ್ಚ ಯೇ ದೋಷಾಸ್ತಾಞ್ಶೃಣುಧ್ವಂ ಸಮಾಹಿತಾಃ ॥೧॥

“ನಾನು ಮನುಷ್ಯರಿಗೆ ಸುಖವನ್ನುಂಟುಮಾಡುವ ಧರ್ಮವನ್ನು ಸ್ವಲ್ಪಹೇಳುತ್ತೇನೆ. ರಹಸ್ಯಗಳಿಂದ ಯುಕ್ತವಾದ ದೋಷಗಳನ್ನೂ ಹೇಳುತ್ತೇನೆ. ಏಕಾಗ್ರತೆಯಿಂದ ಕೇಳಿರಿ.

ಅಗ್ನಿಕಾರ್ಯಂ ಚ ಕರ್ತವ್ಯಂ ಪರಮಾನ್ನೇನ ಭೋಜನಮ್ ।
ದೀಪಕಶ್ಚಾಪಿ ಕರ್ತವ್ಯಃ ಪಿತೄಣಾಂ ಸತಿಲೋದಕಃ ॥೨॥

ಪಿತೃಗಳ ಸಲುವಾಗಿ ಅಗ್ನಿಯಲ್ಲಿ ಹೋಮಮಾಡಬೇಕು. ಶ್ರಾದ್ಧದ ದಿನ ಬ್ರಾಹ್ಮಣರಿಗೆ ಪಾಯಸದಿಂದ ಯುಕ್ತವಾದ ಭೋಜನವನ್ನು ಮಾಡಿಸಬೇಕು. ಪಿತೃಗಳ ತೃಪ್ತಿಗಾಗಿ ಮನೆಯಲ್ಲಿ ಸದಾ ದೀಪವನ್ನು ಬೆಳಗಿಸಬೇಕು. (ಪಿತೃಗಳ ಸಲುವಾಗಿ ದೀಪಗಳನ್ನು ದಾನಮಾಡಬೇಕು.) ತಿಲಮಿಶ್ರವಾದ ಜಲದಿಂದ ಪಿತೃಗಳಿಗೆ ತರ್ಪಣವನ್ನು ಕೊಡಬೇಕು.

ಏತೇನ ವಿಧಿನಾ ಮರ್ತ್ಯಃ ಶ್ರದ್ದಧಾನಃ ಸಮಾಹಿತಃ ।
ಚತುರೋ ವಾರ್ಷಿಕಾನ್ಮಾಸಾನ್ಯೋ ದದಾತಿ ತಿಲೋದಕಮ್ ॥೩॥

ಭೋಜನಂ ಚ ಯಥಾಶಕ್ತ್ಯಾ ಬ್ರಾಹ್ಮಣೇ ವೇದಪಾರಗೇ ।
ಪಶುಬನ್ಧಶತಸ್ಯೇಹ ಫಲಂ ಪ್ರಾಪ್ನೋತಿ ಪುಷ್ಕಲಮ್ ॥೪॥

ಈ ವಿಧಾನದಿಂದ ಯಾವನು ಶ್ರದ್ಧಾವಂತನಾಗಿ ಮತ್ತು ಏಕಾಗ್ರಚಿತ್ತನಾಗಿ ವರ್ಷದಲ್ಲಿ ಮಳೆಗಾಲದ ನಾಲ್ಕು ಮಾಸಗಳು ಪಿತೃಗಳಿಗೆ ತಿಲೋದಕವನ್ನು ಕೊಡುವನೋ ಮತ್ತು ವೇದಪಾರಂಗತನಾದ ಬ್ರಾಹ್ಮಣನನ್ನು ನಿಮಂತ್ರಿಸಿ ಯಥಾಶಕ್ತಿ ಭೋಜನವನ್ನು ಮಾಡಿಸುವನೋ–ಅವನು ನೂರು ಪಶುಬಂಧಯಜ್ಞಗಳನ್ನು ಮಾಡಿದ ಮಹಾಫಲವನ್ನು ಹೊಂದುತ್ತಾನೆ.

ನಿಂದನೀಯವಾದ ಮತ್ತು ಗೋಪನೀಯವಾದ ಈ ನನ್ನ ಮತ್ತೊಂದು ಮಾತನ್ನೂ ಕೇಳಿರಿ.

ಅಗ್ನೇಸ್ತು ವೃಷಲೋ ನೇತಾ ಹವಿರ್ಮೂಢಾಶ್ಚ ಯೋಷಿತಃ ॥೫॥
ಮನ್ಯತೇ ಧರ್ಮ ಏವೇತಿ ಸ ಚಾಧರ್ಮೇಣ ಲಿಪ್ಯತೇ ।
ಅಗ್ನಯಸ್ತಸ್ಯ ಕುಪ್ಯನ್ತಿ ಶೂದ್ರಯೋನಿಂ ಸ ಗಚ್ಛತಿ ॥೬॥

ಯಾವನ ಅಗ್ನಿಹೋತ್ರಾಗ್ನಿಯನ್ನು ಶೂದ್ರನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಒಯ್ಯುವನೋ, ಯಾವನ ಯಜ್ಞದ ಹವಿಸ್ಸನ್ನು ಮೂರ್ಖರಾದ ಸ್ತ್ರೀಯರು ತರುವರೋ ಮತ್ತು ಯಾವನು ಅಂತಹ ಕಾರ್ಯವು ಧರ್ಮಸಮ್ಮತವೆಂದು ಭಾವಿಸುವನೋ–ಅಂತಹವನು ಪಾಪಲಿಪ್ತನಾಗುತ್ತಾನೆ. ಅಂತಹವನ ವಿಷಯದಲ್ಲಿ ಅಗ್ನಿತ್ರಯರೂ ಕೋಪಗೊಳ್ಳುತ್ತಾರೆ. ಜನ್ಮಾಂತರದಲ್ಲಿ ಅವನು ಶೂದ್ರಯೋನಿಯಲ್ಲಿ ಹುಟ್ಟುತ್ತಾನೆ.

ಪಿತರಶ್ಚ ನ ತುಷ್ಯನ್ತಿ ಸಹ ದೇವೈರ್ವಿಶೇಷತಃ ।
ಪ್ರಾಯಶ್ಚಿತ್ತಂ ತು ಯತ್ತತ್ರ ಬ್ರುವತಸ್ತನ್ನಿಬೋಧ ಮೇ ।
ಯತ್ಕೃತ್ವಾ ತು ನರಃ ಸಮ್ಯಕ್ಸುಖೀ ಭವತಿ ವಿಜ್ವರಃ ॥೭॥

ಅಂತಹವನ ವಿಷಯದಲ್ಲಿ ವಿಶೇಷವಾಗಿ ದೇವತೆಗಳೂ ಪಿತೃಗಳೂ ತೃಪ್ತಿಹೊಂದುವುದಿಲ್ಲ. ಇಂತಹ ಅಧರ್ಮಕಾರ್ಯಗಳಿಗೆ ಮಾಡಿಕೊಳ್ಳ ಬೇಕಾಗಿರುವ ಪ್ರಾಯಶ್ಚಿತ್ತದ ವಿಧಿಯನ್ನು ಹೇಳುವೆನು; ಕೇಳಿರಿ. ನಾನು ಹೇಳಲಿರುವ ಈ ಪ್ರಾಯಶ್ಚಿತ್ತವನ್ನು ಮಾಡಿಕೊಂಡರೆ ಮನುಷ್ಯನು ನಿಶ್ಚಿಂತನೂ ಸುಖಿಯೂ ಆಗುತ್ತಾನೆ.

ಗವಾಂ ಮೂತ್ರಪುರೀಷೇಣ ಪಯಸಾ ಚ ಘೃತೇನ ಚ ।
ಅಗ್ನಿಕಾರ್ಯಂ ತ್ರ್ಯಹಂ ಕುರ್ಯಾನ್ನಿರಾಹಾರಃ ಸಮಾಹಿತಃ ॥೮॥
ತತಃ ಸಂವತ್ಸರೇ ಪೂರ್ಣೇ ಪ್ರತಿಗೃಹ್ಣನ್ತಿ ದೇವತಾಃ ।
ಹೃಷ್ಯನ್ತಿ ಪಿತರಶ್ಚಾಸ್ಯ ಶ್ರಾದ್ಧಕಾಲ ಉಪಸ್ಥಿತೇ ॥೯॥

ಅಂತಹ ಬ್ರಾಹ್ಮಣನು ನಿರಾಹಾರನಾಗಿ, ಏಕಾಗ್ರಚಿತ್ತನಾಗಿ ಮೂರು ದಿನಗಳು ಗೋಮೂತ್ರದಿಂದಲೂ, ಸಗಣಿಯಿಂದಲೂ, ಹಾಲಿನಿಂದಲೂ ಮತ್ತು ತುಪ್ಪದಿಂದಲೂ ಅಗ್ನಿಕಾರ್ಯವನ್ನು ಮಾಡಬೇಕು. ವರ್ಷವು ಪೂರ್ಣವಾದನಂತರ ದೇವತೆಗಳು ಅವನು ಕೊಡುವ ಹವಿಸ್ಸನ್ನು ಸ್ವೀಕರಿಸುತ್ತಾರೆ. ಶ್ರಾದ್ಧಕಾಲವು ಉಪಸ್ಥಿತವಾದಾಗ ಪಿತೃಗಳು ಅವನ ವಿಷಯದಲ್ಲಿ ಪ್ರಸನ್ನರಾಗುತ್ತಾರೆ.

ಹೀಗೆ ನಾನು ರಹಸ್ಯಪೂರ್ಣವಾದ ಧರ್ಮವನ್ನೂ ಅಧರ್ಮವನ್ನೂ ಹೇಳಿದ್ದೇನೆ. ಇದು ಸ್ವರ್ಗಕಾಮರಾದ ಮನುಷ್ಯರಿಗೆ ಅವಸಾನಾನಂತರ ಸ್ವರ್ಗೀಯಸುಖವನ್ನು ಸಿದ್ಧಮಾಡಿಕೊಡುತ್ತದೆ.”

೧೨೮ನೆಯ ಅಧ್ಯಾಯವು ಮುಗಿಯಿತು.

೧೨೯ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಲೋಮಶರಿಂದ ಧರ್ಮರಹಸ್ಯದ ವರ್ಣನೆ

ಲೋಮಶರು ಹೇಳುತ್ತಾರೆ:

ಪರದಾರೇಷು ಯೇ ಸಕ್ತಾ ಅಕೃತ್ವಾ ದಾರಸಂಗ್ರಹಮ್ ।
ನಿರಾಶಾಃ ಪಿತರಸ್ತೇಷಾಂ ಶ್ರಾದ್ಧಕಾಲೇ ಭವನ್ತಿ ವೈ ॥೧॥

“ಯಾರು ತಾವು ಮದುವೆಯಾಗದೇ ಪರಸ್ತ್ರೀಯಲ್ಲಿ ಆಸಕ್ತ ರಾಗಿರುವರೋ ಅಂತಹವರ ಮನೆಗಳಿಗೆ ಶ್ರಾದ್ಧಸಮಯದಲ್ಲಿ ಬರುವ ಪಿತೃಗಳು ನಿರಾಶರಾಗುತ್ತಾರೆ.

ಪರದಾರರತಿರ್ಯಶ್ಚ ಯಶ್ಚ ವನ್ಧ್ಯಾಮುಪಾಸತೇ ।
ಬ್ರಹ್ಮಸ್ವಂ ಹರತೇ ಯಶ್ಚ ಸಮದೋಷಾ ಭವನ್ತಿ ತೇ ॥೨॥

ಪರಸ್ತ್ರೀಯಲ್ಲಿ ಆಸಕ್ತನಾಗಿರುವವನು, ಬಂಜೆಯನ್ನು ಸೇವಿಸುವವನು, ಬ್ರಾಹ್ಮಣನ ಸ್ವತ್ತನ್ನು ಅಪಹರಿಸುವವನು–ಈ ಮೂವರೂ ಸಮಾನವಾದ ದೋಷಕ್ಕೆ ಭಾಗಿಗಳಾಗುತ್ತಾರೆ.

ಅಸಂಭಾಷ್ಯಾ ಭವನ್ತ್ಯೇತೇ ಪಿತೄಣಾಂ ನಾತ್ರ ಸಂಶಯಃ ।
ದೇವತಾ ಪಿತರಶ್ಚೈಷಾಂ ನಾಭಿನನ್ದನ್ತಿ ತದ್ಧವಿಃ ॥೩॥

ಪಿತೃಗಳ ವಿಷಯದಲ್ಲಿ ಈ ಮೂವರೂ ಮಾತನಾಡಲು ಕೂಡ ಅಯೋಗ್ಯರು. ಈ ವಿಷಯದಲ್ಲಿ ಸಂಶಯವೇ ಇಲ್ಲ. ಇವರು ಕೊಡುವ ಹವ್ಯ-ಕವ್ಯಗಳನ್ನು ದೇವತೆಗಳೂ ಮತ್ತು ಪಿತೃಗಳೂ ಪ್ರಶಂಸಿಸುವುದಿಲ್ಲ.

ತಸ್ಮಾತ್ಪರಸ್ಯ ವೈ ದಾರಾಂಸ್ತ್ಯಜೇದ್ವನ್ಧ್ಯಾಂ ಚ ಯೋಷಿತಾಮ್ ।
ಬ್ರಹ್ಮಸ್ವಂ ಹಿ ನ ಕರ್ತವ್ಯಮಾತ್ಮನೋ ಹಿತಮಿಚ್ಛತಾ ॥೪॥

ಆದುದರಿಂದ ಆತ್ಮಹಿತವನ್ನು ಬಯಸುವವನು ಪರಸ್ತ್ರೀಯನ್ನೂ ಬಂಜೆಯನ್ನೂ ಪರಿತ್ಯಜಿಸಬೇಕು. ಬ್ರಾಹ್ಮಣನ ಸ್ವತ್ತನ್ನು ಅಪಹರಿಸಬಾರದು.

ಮತ್ತೊಂದು ಧರ್ಮಯುಕ್ತವಾದ ಮತ್ತು ನಿಗೂಢವಾದ ರಹಸ್ಯವನ್ನೂ ಹೇಳುವೆನು; ಕೇಳಿರಿ.

ಶ್ರದ್ದಧಾನೇನ ಕರ್ತವ್ಯಂ ಗುರೂಣಾಂ ವಚನಂ ಸದಾ ॥೫॥

ಯಾವಾಗಲೂ ಗುರುಜನರ ಆಜ್ಞೆಯನ್ನು ಶ್ರದ್ಧಾಪೂರ್ವಕವಾಗಿ ಪರಿಪಾಲಿಸಬೇಕು.

ದ್ವಾದಶ್ಯಾಂ ಪೂರ್ಣಮಾಸ್ಯಾಂ ಚ ಮಾಸಿ ಮಾಸಿ ಘೃತಾಕ್ಷತಮ್ ।
ಬ್ರಾಹ್ಮಣೇಭ್ಯಃ ಪ್ರಯಚ್ಛೇತ ತಸ್ಯ ಪುಣ್ಯಂ ನಿಬೋಧತ ॥೬॥

ಪ್ರತಿಯೊಂದು ತಿಂಗಳಿನ ದ್ವಾದಶೀ ಮತ್ತು ಹುಣ್ಣಿಮೆಗಳಲ್ಲಿ ಬ್ರಾಹ್ಮಣರಿಗೆ ತುಪ್ಪದೊಡನೆ ಅಕ್ಕಿಯನ್ನು ದಾನಮಾಡಬೇಕು. ಇದರಿಂದ ಪ್ರಾಪ್ತವಾಗುವ ಪುಣ್ಯವನ್ನು ಕೇಳಿರಿ.

ಸೋಮಶ್ಚ ವರ್ಧತೇ ತೇನ ಸಮುದ್ರಶ್ಚ ಮಹೋದಧಿಃ ।
ಅಶ್ವಮೇಧಚತುರ್ಭಾಗಂ ಫಲಂ ಸೃಜತಿ ವಾಸವಃ ॥೭॥

ಹೀಗೆ ದಾನಮಾಡುವುದರಿಂದ ಚಂದ್ರನು ವೃದ್ಧಿಯನ್ನು ಹೊಂದುತ್ತಾನೆ. ಸಮುದ್ರವು ಉಕ್ಕುತ್ತದೆ. ದಾನಮಾಡಿದವನಿಗೆ ಇಂದ್ರನು ಅಶ್ವಮೇಧಯಾಗ ಮಾಡುವುದರಿಂದ ಪ್ರಾಪ್ತವಾಗುವ ಫಲದಲ್ಲಿ ನಾಲ್ಕನೆಯ ಒಂದು ಭಾಗ ಫಲವನ್ನು ದಯಪಾಲಿಸುತ್ತಾನೆ.

ದಾನೇನೈತೇನ ತೇಜಸ್ವೀ ವೀರ್ಯವಾಂಶ್ಚ ಭವೇನ್ನರಃ ।
ಪ್ರೀತಶ್ಚ ಭಾಗವಾನ್ಸೋಮ ಇಷ್ಟಾನ್ಕಾಮಾನ್ಪ್ರಯಚ್ಛತಿ ॥೮॥

ದಾನಿಯು ಈ ದಾನದಿಂದ ತೇಜಸ್ವಿಯೂ-ವೀರ್ಯವಂತನೂ ಆಗುತ್ತಾನೆ. ಪೂಜ್ಯನಾದ ಸೋಮನು ಸುಪ್ರೀತನಾಗಿ ದಾನಿಗೆ ಇಷ್ಟವಾದ ಕಾಮನೆಗಳನ್ನು ಅನುಗ್ರಹಿಸುತ್ತಾನೆ.

ರಹಸ್ಯಯುಕ್ತವಾದ ಮಹಾಫಲದಾಯಕವಾದ ಮತ್ತೊಂದು ಧರ್ಮವನ್ನು ಕೇಳಿರಿ. ಕಲಿಯುಗದಲ್ಲಿ ಹುಟ್ಟುವ ಮನುಷ್ಯರಿಗೆ ಈ ಧರ್ಮವು ಸುಖಕ್ಕೆ ಕಾರಣವಾಗುತ್ತದೆ.

ಕಲ್ಯಮುತ್ಥಾಯ ಯೋ ಮರ್ತ್ಯಃ ಸ್ನಾತಃ ಶುಕ್ಲೇನ ವಾಸಸಾ ।
ತಿಲಪಾತ್ರಂ ಪ್ರಯಚ್ಛೇತ ಬ್ರಾಹ್ಮಣೇಭ್ಯಃ ಸಮಾಹಿತಃ ॥೧೦॥

ತಿಲೋದಕಂ ಚ ಯೋದದ್ಯಾತ್ಪಿತೃಣಾಂ ಮಧುನಾ ಸಹ ।
ದೀಪಕಂ ಕೃಸರಂ ಚೈವ ಶ್ರೂಯತಾಂ ತಸ್ಯ ಯತ್ಫಲಮ್ ॥೧೧॥

ಯಾವ ಮನುಷ್ಯನು ಮುಂಜಾನೆ ಎದ್ದು, ಶೌಚ-ಮುಖ ಮಾರ್ಜನಗಳಾದನಂತರ ಸ್ನಾನಮಾಡಿ, ಬಿಳುಪಾದ ವಸ್ತ್ರಗಳನ್ನುಟ್ಟು, ಏಕಾಗ್ರಚಿತ್ತನಾಗಿ, ಬ್ರಾಹ್ಮಣರಿಗೆ ಎಳ್ಳುತುಂಬಿದ ಪಾತ್ರೆಯನ್ನು ದಾನ ಮಾಡುವನೋ–ಪಿತೃಗಳಿಗೆ ಜೇನುತುಪ್ಪದಿಂದ ಕೂಡಿದ ತಿಲೋದಕದಿಂದ ತರ್ಪಣಮಾಡುವನೋ–ದೀಪವನ್ನೂ ಎಳ್ಳನ್ನವನ್ನೂ ದಾನವಾಗಿ ಕೊಡುವನೋ–ಅಂತಹವನಿಗೆ ಪ್ರಾಪ್ತವಾಗುವ ಫಲವನ್ನು ಕೇಳಿರಿ.

ಭಗವಾನ್ ಇಂದ್ರನು ತಿಲಪಾತ್ರದಾನಕ್ಕೆ ಈ ಫಲವನ್ನು ಹೇಳಿದ್ದಾನೆ.

ಗೋಪ್ರದಾನಂ ಚ ಯಃ ಕುರ್ಯಾದ್ಭೂಮಿದಾನಂ ಚ ಶಾಶ್ವತಮ್ ।
ಅಗ್ನಿಷ್ಟೋಮಂ ಚ ಯೋ ಯಜ್ಞಂ ಯಜೇತ ಬಹುದಕ್ಷಿಣಮ್ ।
ತಿಲಪಾತ್ರಂ ಸಹೈತೇನ ಸಮಂ ಮನ್ಯನ್ತಿ ದೇವತಾಃ ॥೧೩॥

ಯಾವನು ಯಾವಾಗಲೂ ಗೋದಾನಮಾಡುವನೋ ಮತ್ತು ಭೂದಾನಮಾಡುವನೋ, ಬಹುದಕ್ಷಿಣೆಯಿಂದ ಸಾಧ್ಯವಾಗುವ ಅಗ್ನಿಷ್ಟೋಮ ಯಾಗವನ್ನು ಮಾಡುವನೋ–ಅಂತಹವರಿಗೆ ಪ್ರಾಪ್ತವಾಗುವ ಪುಣ್ಯಕ್ಕೆ ಸಮಾನವಾದ ಪುಣ್ಯವೇ ತಿಲಪಾತ್ರವನ್ನು ದಾನಮಾಡಿದವನಿಗೂ ಲಭಿಸುವುದೆಂದು ದೇವತೆಗಳು ಭಾವಿಸುತ್ತಾರೆ.

ತಿಲೋದಕಂ ಸದಾ ಶ್ರಾದ್ಧೇ ಮನ್ಯನ್ತೇ ಪಿತರೋಽಕ್ಷಯಮ್ ।
ದೀಪೇ ಚ ಕೃಸರೇ ಚೈವ ತುಷ್ಯನ್ತೇಽಸ್ಯ ಪಿತಾಮಹಾಃ ॥೧೪॥

ಶ್ರಾದ್ಧದಲ್ಲಿ ಮಧುಮಿಶ್ರಿತವಾದ ತಿಲೋದಕದಿಂದ ಪಿತೃಗಳ ಸಲುವಾಗಿ ತರ್ಪಣವನ್ನು ಕೊಡುವುದು ಅಕ್ಷಯ ಪುಣ್ಯಲೋಕಪ್ರಾಪ್ತಿಗೆ ಸಾಧಕವಾಗುವುದೆಂದು ಪಿತೃಗಳೂ ಭಾವಿಸುತ್ತಾರೆ. ದೀಪದಾನದಿಂದಲೂ ಮತ್ತು ಎಳ್ಳನ್ನದಾನದಿಂದಲೂ ಕರ್ತೃವಿನ ಪಿತಾಮಹರು ಸಂತುಷ್ಟರಾಗುತ್ತಾರೆ.

ಸ್ವರ್ಗೇ ಚ ಪಿತೃಲೋಕೇ ಚ ಪಿತೃದೇವಾಭಿಪೂಜಿತಮ್ ।
ಏವಮೇತನ್ಮಯೋದ್ದಿಷ್ಟಮೃಷಿದೃಷ್ಟಂ ಪುರಾತನಮ್ ॥೧೫॥

ಪುರಾತನವಾದ ಈ ಧರ್ಮರಹಸ್ಯವು ಋಷಿದೃಷ್ಟವಾಗಿದೆ. ಋಷಿಗಳು ಇದನ್ನು ಕಂಡುಕೊಂಡಿರುವರು. ಸ್ವರ್ಗಲೋಕದಲ್ಲಿ ದೇವತೆಗಳೂ-ಪಿತೃಲೋಕದಲ್ಲಿ ಪಿತೃಗಳೂ ಈ ಧರ್ಮವನ್ನು ಶ್ಲಾಘಿಸುತ್ತಾರೆ. ಅಂತಹ ಶ್ರೇಷ್ಠವಾದ ಧರ್ಮವನ್ನು ನಾನು ಹೇಳಿರುವೆನು."

ರ೨೯ನೆಯ ಅಧ್ಯಾಯವು ಮುಗಿಯಿತು.

೧೩೦ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಅರುಂಧತೀ, ಯಮಧರ್ಮ ಮತ್ತು ಚಿತ್ರಗುಪ್ತರಿಂದ ಧರ್ಮರಹಸ್ಯದ ವರ್ಣನೆ.

ಭೀಷ್ಮನು ಹೇಳುತ್ತಾನೆ:

ತತಸ್ತ್ವೃಷಿಗಣಾಃ ಸರ್ವೇ ಪಿತರಶ್ಚ ಸದೇವತಾಃ ।
ಅರುನ್ಧತೀಂ ತಪೋವೃದ್ಧಾಮಪೃಚ್ಛನ್ತ ಸಮಾಹಿತಾಃ ॥೧॥

"ಯುಧಿಷ್ಠಿರ! ಬಳಿಕ ಎಲ್ಲ ಋಷಿಗಳೂ, ಪಿತೃಗಳಿಂದ ಯುಕ್ತರಾದ ದೇವತೆಗಳೂ–ತಪೋವೃದ್ಧೆಯಾಗಿದ್ದ, ಶೀಲದಲ್ಲಿಯೂ ಮತ್ತು ಶಕ್ತಿಯಲ್ಲಿಯೂ ಮಹಾತ್ಮರಾದ ವಸಿಷ್ಠರಿಗೆ ಸಮಾನಳಾಗಿದ್ದ ಅರುಂಧತಿಯ ಬಳಿಗೆ ಹೋಗಿ ಏಕಾಗ್ರಚಿತ್ತರಾಗಿ ಹೇಳಿದರು:

"ಮಂಗಳದಾಯಿನಿಯೇ! ನಾವು ನಿನ್ನಿಂದ ಧರ್ಮರಹಸ್ಯಗಳನ್ನು ಕೇಳಬೇಕೆಂದಿರುವೆವು. ನೀನು ಯಾವುದನ್ನು ಪರಮಗುಹ್ಯವಾದ ಧರ್ಮ ವೆಂದು ಭಾವಿಸುವೆಯೋ–ಅಂತಹ ಧರ್ಮವನ್ನು ಹೇಳುವ ಕೃಪೆಮಾಡು."

ಅರುಂಧತಿಯು ಹೇಳುತ್ತಾಳೆ:

"ದೇವತೆಗಳೇ! ನೀವು ನನ್ನನ್ನು ಸ್ಮರಿಸಿರುವುದರಿಂದಲೇ ನನ್ನ ತಪಸ್ಸು ವೃದ್ಧಿಹೊಂದಿದೆ. ನಿಮ್ಮ ಅನುಗ್ರಹದಿಂದಲೇ ನಾನು ಶಾಶ್ವತವಾದ ಅತ್ಯಂತ ನಿಗೂಢವಾದ ರಹಸ್ಯಯುಕ್ತವಾದ ಧರ್ಮಗಳನ್ನು ಹೇಳುತ್ತೇನೆ. ಅದನ್ನು ಸಮಗ್ರವಾಗಿ ಕೇಳಿರಿ. ಯಾವನ ಮನಸ್ಸು ಪರಿಶುದ್ಧವಾಗಿರುವುದೋ– ಅಂತಹ ಶ್ರದ್ಧಾವಂತನಾದವನಿಗೆ ಮಾತ್ರವೇ ಈ ಧರ್ಮವನ್ನು ಉಪದೇಶಿಸಬೇಕು.

ಅಶ್ರದ್ದಧಾನೋ ಮಾನೀ ಚ ಬ್ರಹ್ಮಹಾ ಗುರುತಲ್ಪಗಃ ।
ಅಸಮ್ಭಾಷ್ಯಾ ಹಿ ಚತ್ವಾರೋ ನೈಷಾಂ ಧರ್ಮಃ ಪ್ರಕಾಶಯೇತ್ ॥

ಶ್ರದ್ಧೆಯಿಲ್ಲದವನು, ದುರಭಿಮಾನೀ, ಬ್ರಹ್ಮಹತ್ಯೆಮಾಡಿದವನು, ಗುರುಪತ್ನೀಸಮಾಗಮಮಾಡಿದವನು–ಈ ನಾಲ್ವರೊಡನೆ ಮಾತನ್ನೇ ಆಡ ಬಾರದು. ಸಂಭಾಷಣೆಗೂ ಇವರು ಅಯೋಗ್ಯರು. ಇಂತಹವರು ಮಾಡುವ ಧರ್ಮಕಾರ್ಯವೂ ಇವರನ್ನು ಪ್ರಕಾಶಪಡಿಸಲಾರದು.

ಅಹನ್ಯಹನಿ ಯೋ ದದ್ಯಾತ್ಕಪಿಲಾಂ ದ್ವಾದಶೀಃ ಸಮಾಃ ।
ಮಾಸಿ ಮಾಸಿ ಚ ಸತ್ರೇಣ ಯೋ ಯಜೇತ ಸದಾ ನರಃ ॥೬॥
ಗವಾಂ ಶತಸಹಸ್ರಂ ಚ ಯೋ ದದ್ಯಾಜ್ಜ್ಯೇಷ್ಠಪುಷ್ಕರೇ ।
ನ ತದ್ಧರ್ಮಫಲಂ ತುಲ್ಯಮತಿಥಿರ್ಯಸ್ಯ ತುಷ್ಯತಿ ॥೭॥

ಹನ್ನೆರಡು ವರ್ಷಗಳವರೆಗೆ ಪ್ರತಿದಿನವೂ ಒಂದೊಂದು ಕಪಿಲಾಧೇನುವನ್ನು ದಾನಮಾಡುವವನಿಗೆ ಲಭಿಸುವ ಫಲವೂ, ಪ್ರತಿಮಾಸವೂ ಸತ್ರಯಾಗಮಾಡುವವನಿಗೆ ಲಭಿಸುವ ಫಲವೂ, ಶ್ರೇಷ್ಠವಾದ ಪುಷ್ಕರತೀರ್ಥದಲ್ಲಿ ಒಂದು ಲಕ್ಷ ಗೋವುಗಳನ್ನು ದಾನಮಾಡುವವನಿಗೆ ಲಭಿಸುವ ಫಲವೂ–ಅತಿಥಿಯನ್ನು ಸತ್ಕಾರಗಳಿಂದ ತುಷ್ಟಿಪಡಿಸುವವನಿಗೆ ಲಭಿಸುವ ಫಲಕ್ಕೆ ಸಮಾನವಾಗಲಾರದು. ಅತಿಥಿಸತ್ಕಾರವು ಈ ಎಲ್ಲ ಕರ್ಮಗಳಿಗಿಂತಲೂ ಹೆಚ್ಚಿನ ಫಲವನ್ನು ಕೊಡುತ್ತದೆ.

ಮನುಷ್ಯರಿಗೆ ಸುಖವನ್ನುಂಟುಮಾಡುವ ಮತ್ತೊಂದು ಧರ್ಮವನ್ನು ಕೇಳಿರಿ. ಈ ಧರ್ಮವನ್ನು ಶ್ರದ್ಧೆಯಿಂದ ಆಚರಿಸಬೇಕು. ರಹಸ್ಯದಿಂದ ಯುಕ್ತವಾದ ಈ ಧರ್ಮವು ಮಹಾಫಲದಾಯಕವಾದುದು.

ಕಲ್ಯಮುತ್ಥಾಯ ಗೋಮಧ್ಯೇ ಗೃಹ್ಯ ದರ್ಭಾನ್ಸಹೋದಕಾನ್ ।
ನಿಷಿಞ್ಚೇತ ಗವಾಂ ಶೃಙ್ಗೇ ಮಸ್ತಕೇನ ಚ ತಜ್ಜಲಮ್ ।
ಪ್ರತೀಚ್ಛೇತ ನಿರಾಹಾರಸ್ತಸ್ಯ ಧರ್ಮಫಲಂ ಶೃಣು ॥೮॥

ಬೆಳಗಾಗಿ ಎದ್ದೊಡನೆಯೇ ಶುಚೀಭೂತನಾಗಿ, ದರ್ಭೆಯನ್ನೂ ನೀರನ್ನೂ ತೆಗೆದುಕೊಂಡು ಗೋಶಾಲೆಗೆ ಹೋಗಿ ಗೋವುಗಳ ಮಧ್ಯದಲ್ಲಿ ನಿಂತು, ದರ್ಭೆಯ ಮೂಲಕವಾಗಿ ನೀರನ್ನು ಗೋವುಗಳ ಕೋಡಿನ ಮೂಲಕ ಅಭಿಷೇಚಿಸಬೇಕು. ಕೋಡುಗಳಿಂದ ಕೆಳಕ್ಕೆ ಸುರಿಯುವ ಆ ನೀರನ್ನು ತಲೆಯಲ್ಲಿ ಧರಿಸಬೇಕು. ಅಂದು ಅವನು ನಿರಾಹಾರಿಯಾಗಿರಬೇಕು. ಈ ವಿಧವಾದ ಧರ್ಮಾನುಸರಣೆಯಿಂದ ಲಭಿಸುವ ಪುಣ್ಯವನ್ನು ಕೇಳಿರಿ.

ಶ್ರೂಯನ್ತೇ ಯಾನಿ ತೀರ್ಥಾನಿ ತ್ರಿಷು ಲೋಕೇಷು ಕಾನಿಚಿತ್ ॥೧೦॥
ಸಿದ್ಧಚಾರಣಜುಷ್ಟಾನಿ ಸೇವಿತಾನಿ ಮಹರ್ಷಿಭಿಃ ।
ಅಭಿಷೇಕಃ ಸಮಸ್ತೇಷಾಂ ಗವಾಂ ಶೃಙ್ಗೋದಕಸ್ಯ ಚ ॥೧೧॥

ಮೂರು ಲೋಕಗಳಲ್ಲಿ ಸಿದ್ಧ-ಚಾರಣರಿಂದಲೂ ಮತ್ತು ಮಹರ್ಷಿಗಳಿಂದಲೂ ಸಂಸೇವಿತವಾದ ಎಷ್ಟು ತೀರ್ಥಗಳು ಹೇಳಲ್ಪಟ್ಟಿವೆಯೋ, ಆ ಎಲ್ಲ ತೀರ್ಥಗಳಲ್ಲಿಯೂ ಸ್ನಾನಮಾಡುವುದರಿಂದ ಯಾವ ಫಲವು ಪ್ರಾಪ್ತವಾಗುವುದೋ–ಅದಕ್ಕೆ ಸಮಾನವಾದ ಫಲವೇ ಹಸುವಿನ ಕೊಂಬುಗಳ ಮೂಲಕವಾಗಿ ಬೀಳುವ ನೀರಿನಿಂದ ಸ್ನಾನಮಾಡಿದವನಿಗೂ ದೊರಕುತ್ತದೆ."

ಅರುಂಧತಿಯು ಹೇಳಿದ ಆ ಮಾತನ್ನು ಕೇಳಿ ಹೃಷ್ಟರಾದ ದೇವತೆಗಳೂ, ಪಿತೃಗಳೂ ಮತ್ತು ಸಮಸ್ತಪ್ರಾಣಿಗಳೂ 'ಸಾಧು-ಸಾಧು' ಎಂದು ಉದ್ಗರಿಸಿದುವು. ಅಂತೆಯೇ ಅರುಂಧತಿಯನ್ನೂ ಸಂಪೂಜಿಸಿದುವು. ಪಿತಾಮಹನು ಅರುಂಧತಿಯನ್ನು ಕುರಿತು ಹೇಳಿದನು:

"ಮಹಾಭಾಗಳೇ! ನೀನೇ ಧನ್ಯಳು. ರಹಸ್ಯಯುಕ್ತವಾದ ಧರ್ಮವನ್ನು ಹೇಳಿರುವೆ. ನಿನ್ನ ತಪಸ್ಸು ಸದಾ ವರ್ಧಿಸುತ್ತಿರಲೆಂಬ ವರವನ್ನು ನಿನಗೆ ಕೊಡುತ್ತೇನೆ"–ಎಂದು ಹೇಳಿ ಅರುಂಧತಿಗೆ ವರವನ್ನು ದಯಪಾಲಿಸಿದನು.

ಅನಂತರ ಯಮನು ಹೇಳುತ್ತಾನೆ:

"ದೇವತೆಗಳೇ ಮತ್ತು ಮಹರ್ಷಿಗಳೇ! ನಿಮ್ಮಿಂದ ನಾನು ರಮಣೀಯವಾದ ಮತ್ತು ದಿವ್ಯವಾದ ಕಥೆಗಳನ್ನು ಕೇಳಿದೆನು. ಈಗ ನಾನೂ ಮತ್ತು ಚಿತ್ರಗುಪ್ತನೂ ಹೇಳಲಿರುವ ಪ್ರಿಯವಾದ ಮಾತುಗಳನ್ನು ಕೇಳಿರಿ.

ಧರ್ಮದಿಂದ ಯುಕ್ತವಾದ ಈ ರಹಸ್ಯವಿಷಯವನ್ನು ಮಹರ್ಷಿಗಳೂ ಕೇಳಬೇಕು. ಆತ್ಮಹಿತವನ್ನು ಬಯಸುವ ಶ್ರದ್ಧಾವಂತರಾದ ಮನುಷ್ಯರೂ ನಾನು ಹೇಳಲಿರುವ ಈ ಧರ್ಮರಹಸ್ಯವನ್ನು ಕೇಳಬೇಕು.

ನ ಹಿ ಪುಣ್ಯಂ ತಥಾ ಪಾಪಂ ಕೃತಂ ಕಿಂಚಿದ್ವಿನಶ್ಯತಿ ।
ಪರ್ವಕಾಲೇ ಚ ಯತ್ಕಿಂಚಿದಾದಿತ್ಯಂ ಚಾಧಿತಿಷ್ಠತಿ ॥೧೬॥

ಮನುಷ್ಯನು ಮಾಡುವ ಪುಣ್ಯವಾಗಲೀ, ಪಾಪವಾಗಲೀ–ಉಪಭೋಗಿಸದೇ ನಷ್ಟವಾಗಿ ಹೋಗುವುದಿಲ್ಲ. ಪರ್ವಕಾಲದಲ್ಲಿ ಕೊಡುವ ಯಾವುದೇ ದಾನವೂ (ದಾನದ ಫಲವೂ) ಸೂರ್ಯನ ಬಳಿಗೆ ಹೋಗಿ ನಿಲ್ಲುತ್ತದೆ.

ಪ್ರೇತಲೋಕಂ ಗತೇ ಮರ್ತ್ಯೇ ತತ್ತತ್ಸರ್ವಂ ವಿಭಾವಸುಃ ।
ಪ್ರತಿಜಾನಾತಿ ಪುಣ್ಯಾತ್ಮಾ ತತ್ರ ತತ್ರೋಪಯುಜ್ಯತೇ ॥೧೭॥

ಮನುಷ್ಯನು ಪ್ರೇತಲೋಕಕ್ಕೆ ಹೋದನಂತರ ಪುಣ್ಯಾತ್ಮನಾದ ಸೂರ್ಯನು ಆಯಾ ದಾನವನ್ನರಿತು ಆ ದಾನಗಳ ಫಲಗಳೆಲ್ಲವೂ ಅವನಿಗೆ ಸೇರುವಂತೆ ಮಾಡುತ್ತಾನೆ.

ಈಗ ನಾನು ಚಿತ್ರಗುಪ್ತನ ಅಭಿಪ್ರಾಯಾನುಸಾರವಾಗಿ ಕೆಲವು ಕಲ್ಯಾಣಕಾರಿಯಾದ ಧರ್ಮಗಳನ್ನೂ ಹೇಳುತ್ತೇನೆ.

ಪಾನೀಯಂ ಚೈವ ದೀಪಂ ಚ ದಾತವ್ಯಂ ಸತತಂ ತಥಾ ॥೧೮॥

ಮನುಷ್ಯನು ಜಲದಾನ ಮತ್ತು ದೀಪದಾನಗಳನ್ನು ಸತತವಾಗಿ ಮಾಡುತ್ತಲೇ ಇರಬೇಕು.

ಉಪಾನಹೌ ಚ ಛತ್ರಂ ಚ ಕಪಿಲಾಂ ಚ ಯಥಾತಥಮ್ ।
ಪುಷ್ಕರೇ ಕಪಿಲಾ ದೇಯಾ ಬ್ರಾಹ್ಮಣೇ ವೇದಪಾರಗೇ ।
ಅಗ್ನಿಹೋತ್ರಂ ಚ ಯತ್ನೇನ ಸರ್ವಶಃ ಪ್ರತಿಪಾಲಯೇತ್ ॥೧೯॥

ಪಾದರಕ್ಷೆಗಳನ್ನೂ, ಛತ್ರಿಯನ್ನೂ, ಕಪಿಲಾಧೇನುವನ್ನೂ ಯಥೋಚಿತವಾಗಿ ದಾನಮಾಡಬೇಕು. ಪುಷ್ಕರತೀರ್ಥದಲ್ಲಿ ವೇದಪಾರಂಗತನಾದ ಬ್ರಾಹ್ಮಣನಿಗೆ ಕಪಿಲಾಧೇನುವನ್ನು ದಾನಮಾಡಬೇಕು. ನಿತ್ಯವೂ ಅಗ್ನಿ ಹೋತ್ರವನ್ನು ಮಾಡಬೇಕೆನ್ನುವ ನಿಯಮವನ್ನು ಸರ್ವಪ್ರಕಾರದಿಂದಲೂ ಪರಿಪಾಲಿಸಬೇಕು.

ಈ ಧರ್ಮವೇ ಅಲ್ಲದೇ ಚಿತ್ರಗುಪ್ತನು ಮತ್ತೊಂದು ಧರ್ಮವನ್ನೂ ಹೇಳಿರುವನು. ಸತ್ಪುರುಷಶ್ರೇಷ್ಠರೇ! ಆ ಧರ್ಮದ ಪ್ರತ್ಯೇಕ-ಪ್ರತ್ಯೇಕವಾದ ಫಲಗಳನ್ನು ಕೇಳಿರಿ. ಸಮಸ್ತಪ್ರಾಣಿಗಳೂ ಕಾಲಾನುಕ್ರಮವಾಗಿ ಪ್ರಳಯವನ್ನು ಹೊಂದುತ್ತವೆ. (ಅವಸಾನವನ್ನು ಹೊಂದುತ್ತವೆ.)

ತತ್ರ ದುರ್ಗಮನುಪ್ರಾಪ್ತಾಃ ಕ್ಷುತ್ತೃಷ್ಣಾಪರಿಪೀಡಿತಾಃ ।
ದಹ್ಯಮಾನಾ ವಿಪಚ್ಯನ್ತೇ ನ ತತ್ರಾಸ್ತಿ ಪಲಾಯನಮ್ ॥೨೦॥

ಪಾಪದ ಕಾರಣದಿಂದ ದುರ್ಗಮವಾದ ನರಕದಲ್ಲಿ ಬೀಳುವ ಪ್ರಾಣಿಗಳು ಹಸಿವು-ಬಾಯಾರಿಕೆಗಳಿಂದ ಪೀಡಿಸಲ್ಪಟ್ಟುವುಗಳಾಗಿ ಅಗ್ನಿಯಿಂದ ದಹಿಸಲ್ಪಡುತ್ತಾ ಬೇಯಿಸಲ್ಪಡುತ್ತವೆ. ಆ ನರಕಯಾತನೆಗಳಿಂದ ತಪ್ಪಿಸಿಕೊಂಡು ಓಡಿಹೋಗುವ ಸಾಧ್ಯತೆಯೇ ಇಲ್ಲ.

ಅನ್ಧಕಾರಂ ತಮೋ ಘೋರಂ ಪ್ರವಿಶನ್ತ್ಯಲ್ಪಬುದ್ಧಯಃ ।
ತತ್ರ ಧರ್ಮಂ ಪ್ರವಕ್ಷ್ಯಾಮಿ ಯೇನ ದುರ್ಗಾಣಿ ಸಂತರೇತ್ ॥೨೩॥

ಮಂದಬುದ್ಧಿಗಳಾದ ಮನುಷ್ಯರು ಘೋರವಾದ, ಅಂಧಕಾರಮಯವಾದ ಅಂಧಂತಮಸ್ಸೆಂಬ ನರಕವನ್ನು ಪ್ರವೇಶಿಸುತ್ತಾರೆ. ಯಾವುದರಿಂದ ದುಃಖಮಯವಾದ ನರಕವನ್ನು ದಾಟಲು ಸಾಧ್ಯವಾಗುವುದೋ ಅಂತಹ ಧರ್ಮವನ್ನು ಹೇಳುತ್ತೇನೆ.

ಅಲ್ಪವ್ಯಯಂ ಮಹಾರ್ಥಂ ಚ ಪ್ರೇತ್ಯ ಚೈವ ಸುಖೋದಯಮ್ ।
ಪಾನೀಯಸ್ಯ ಗುಣಾ ದಿವ್ಯಾಃ ಪ್ರೇತಲೋಕೇ ವಿಶೇಷತಃ ॥೨೪॥

ಈ ಧರ್ಮದಲ್ಲಿ ವ್ಯಯವು ಅತ್ಯಲ್ಪ. ಆದರೆ ಲಾಭವು ಅತ್ಯಧಿಕ. ಅವಸಾನಾನಂತರದಲ್ಲಿಯೂ ಸುಖದಾಯಕವಾದುದು. ಪಾನೀಯದಾನಕ್ಕೆ ದಿವ್ಯಗುಣಗಳಿವೆ. ಅದರಲ್ಲಿಯೂ ವಿಶೇಷವಾಗಿ ಪ್ರೇತಲೋಕದಲ್ಲಿ ಇವು ಹೆಚ್ಚಿನ ಪರಿಣಾಮವನ್ನುಂಟುಮಾಡುತ್ತವೆ.

ತತ್ರ ಪುಣ್ಯೋದಕಾ ನಾಮ ನದೀ ತೇಷಾಂ ವಿಧೀಯತೇ ।
ಅಕ್ಷಯಂ ಸಲಿಲಂ ತತ್ರ ಶೀತಲಂ ಹ್ಯಮೃತೋಪಮಮ್ ॥೨೫॥

ಪ್ರೇತಲೋಕದಲ್ಲಿ 'ಪುಣ್ಯೋದಕ' ಎಂಬ ಹೆಸರಿನಿಂದ ಪ್ರಸಿದ್ಧವಾದ ನದಿಯಿದೆ. ಅದು ಜಲದಾನಿಗಳಿಗಾಗಿಯೇ ವಿಹಿತವಾಗಿದೆ. ಅದರಲ್ಲಿ ಅಮೃತಕ್ಕೆ ಸಮಾನವಾದ ರುಚಿಯುಳ್ಳ, ಶೀತಲವಾದ ಮತ್ತು ಎಂದೂ ಬತ್ತಿಹೋಗದಿರುವ ನೀರು ತುಂಬಿದೆ.

ಸ ತತ್ರ ತೋಯಂ ಪಿಬತಿ ಪಾನೀಯಂ ಯಃ ಪ್ರಯಚ್ಛತಿ ।
ಪ್ರದೀಪಸ್ಯ ಪ್ರದಾನೇನ ಶ್ರೂಯತಾಂ ಗುಣವಿಸ್ತರಃ ॥೨೬॥

ಇಹಲೋಕದಲ್ಲಿ ಯಾವನು ಪಾನೀಯವನ್ನು ದಾನಮಾಡಿರುವನೋ–ಅವನು ಅಲ್ಲಿ ಅಮೃತೋಪಮವಾದ ಆ ನೀರನ್ನು ಕುಡಿಯುತ್ತಾನೆ. ದೀಪದಾನದಿಂದ ಯಾವ ವಿಪುಲವಾದ ಫಲವು ಪ್ರಾಪ್ತವಾಗುವುದೆಂಬುದನ್ನು ಕೇಳಿರಿ.

ತಮೋಽನ್ಧಕಾರಂ ನಿಯತಂ ದೀಪದೋ ನ ಪ್ರಪಶ್ಯತಿ ।
ಪ್ರಭಾಂ ಚಾಸ್ಯ ಪ್ರಯಚ್ಛನ್ತಿ ಸೋಮಭಾಸ್ಕರಪಾವಕಾಃ ॥೨೭॥

ದೀಪದಾನಮಾಡಿದ ಮನುಷ್ಯನು ನರಕದಲ್ಲಿ ನಿಯತವಾದ ಅಂಧಕಾರವನ್ನು ಕಾಣುವುದಿಲ್ಲ. ಸೋಮ-ಸೂರ್ಯಾಗ್ನಿಗಳು ಅವನಿಗೆ ಪ್ರಭೆಯನ್ನು ಒದಗಿಸಿಕೊಡುತ್ತಾರೆ.

ದೇವತಾಶ್ಚಾನುಮನ್ಯನ್ತೇ ವಿಮಲಾಃ ಸರ್ವತೋ ದಿಶಃ ।
ದ್ಯೋತತೇ ಚ ಯಥಾದಿತ್ಯಃ ಪ್ರೇತಲೋಕಗತೋ ನರಃ ।
ತಸ್ಮಾದ್ದೀಪಃ ಪ್ರದಾತವ್ಯಃ ಪಾನೀಯಂ ಚ ವಿಶೇಷತಃ ॥೨೮॥

ದೇವತೆಗಳೂ ದೀಪದಾನಮಾಡಿದವನನ್ನು ಆದರಿಸುತ್ತಾರೆ. ಅವನ ಸಲುವಾಗಿ ಎಲ್ಲ ದಿಕ್ಕುಗಳೂ ನಿರ್ಮಲವಾಗಿರುತ್ತವೆ. ಪ್ರೇತಲೋಕಕ್ಕೆ ಹೋದ ಮನುಷ್ಯನು ಸೂರ್ಯನಂತೆಯೇ ಪ್ರಕಾಶಿಸುತ್ತಾನೆ. ಆದುದರಿಂದ ವಿಶೇಷಪ್ರಯತ್ನದಿಂದ ದೀಪದಾನ-ಪಾನೀಯದಾನಗಳನ್ನು ಮಾಡಬೇಕು.

ಯಾವನು ವೇದ-ವೇದಾಂಗಪಾರಂಗತನಾದ ಬ್ರಾಹ್ಮಣನಿಗೆ ಕಪಿಲಾ ಧೇನುವನ್ನು ಅದರಲ್ಲಿಯೂ ವಿಶೇಷವಾಗಿ ಪುಷ್ಕರಕ್ಷೇತ್ರದಲ್ಲಿ ದಾನ ಮಾಡುವನೋ–ಅವನಿಗೆ ಎಂತಹ ಮಹಾಫಲವು ಲಭಿಸುವುದೆಂಬುದನ್ನು ಕೇಳಿರಿ.

ಗೋಶತಂ ಸವೃಷಂ ತೇನ ದತ್ತಂ ಭವತಿ ಶಾಶ್ವತಮ್ ॥೩೦॥

ಹೋರಿಗಳೊಡನೆ ನೂರು ಗೋವುಗಳನ್ನು ದಾನಮಾಡಿದ ಶಾಶ್ವತವಾದ ಫಲವು ಲಭಿಸುತ್ತದೆ.

ಪಾಪಂ ಕರ್ಮ ಚ ಯತ್ಕಿಂಚಿದ್ಬ್ರಹ್ಮಹತ್ಯಾಸಮಂ ಭವೇತ್ ।
ಶೋಧಯೇತ್ಕಪಿಲಾ ಹ್ಯೇಕಾ ಪ್ರದತ್ತಂ ಗೋಶತಂ ಯಥಾ ।
ತಸ್ಮಾತ್ತು ಕಪಿಲಾ ದೇಯಾ ಕೌಮುದ್ಯಾಂ ಜ್ಯೇಷ್ಠ ಪುಷ್ಕರೇ ॥೩೧॥

ಬ್ರಹ್ಮಹತ್ಯೆಗೆ ಸಮಾನವಾದ ಯಾವುದೇ ಪಾಪವು ಕೂಡ ಒಂದೇ ಒಂದು ಕಪಿಲಾಧೇನುವಿನ ದಾನದಿಂದಲೇ ನಿರಸ್ತವಾಗುತ್ತದೆ. ಒಂದು ಕಪಿಲಾಧೇನುವಿನ ದಾನವು ನೂರು ಸಾಧಾರಣಗೋವುಗಳ ದಾನಕ್ಕೆ ಸಮಾನ ವಾಗುತ್ತದೆ. ಆದುದರಿಂದ ಜ್ಯೇಷ್ಠಪುಷ್ಕರತೀರ್ಥಕ್ಷೇತ್ರದಲ್ಲಿ ಕಾರ್ತಿಕಮಾಸದ ಹುಣ್ಣಿಮೆಯದಿನ ಅವಶ್ಯವಾಗಿ ಕಪಿಲಾಧೇನುವನ್ನು ದಾನಮಾಡಬೇಕು.

ನ ತೇಷಾಂ ವಿಷಮಂ ಕಿಂಚಿನ್ನ ದುಃಖಂ ನ ಚ ಕಣ್ಟಕಾಃ ॥೩೨॥

ಉಪಾನಹೌ ಚ ಯೋ ದದ್ಯಾತ್ಪಾತ್ರಭೂತೇ ದ್ವಿಜೋತ್ತಮೇ ।
ಛತ್ರದಾನೇ ಸುಖಾಂ ಛಾಯಾಂ ಲಭತೇ ಪರಲೋಕಗಃ ॥೩೩॥

ಯಾವನು ಶ್ರೇಷ್ಠನಾದ ಮತ್ತು ಸುಪಾತ್ರನಾದ ಬ್ರಾಹ್ಮಣನಿಗೆ ಪಾದರಕ್ಷೆಗಳನ್ನು ದಾನಮಾಡುವನೋ–ಅಂತಹವನಿಗೆ ಯಾವ ವಿಧವಾದ ವಿಷಮಸ್ಥಿತಿಯಾಗಲೀ ದುಃಖವಾಗಲೀ ಉಂಟಾಗುವುದಿಲ್ಲ. ಮಾರ್ಗದ ಮಧ್ಯದಲ್ಲಿ ಯಾವುದೇ ಕಂಟಕಗಳೂ (ಮುಳ್ಳುಗಳೂ) ಇರುವುದಿಲ್ಲ. ಛತ್ರಿಯನ್ನು ದಾನಮಾಡಿದವನು ಪರಲೋಕಕ್ಕೆ ಹೋದನಂತರ ಸುಖಕರವಾದ ನೆಳಲನ್ನು ಹೊಂದುತ್ತಾನೆ.

ನ ಹಿ ದತ್ತಸ್ಯ ದಾನಸ್ಯ ನಾಶೋಽಸ್ತೀಹ ಕದಾಚನ ॥೩೪॥

ಈ ಲೋಕದಲ್ಲಿ ಮಾಡುವ ಯಾವುದೇ ದಾನವಾಗಲೀ-ಯಾವಾಗಲೂ ನಿರರ್ಥಕವಾಗುವುದಿಲ್ಲ."

ಧರ್ಮದ ವಿಷಯವಾಗಿ ಚಿತ್ರಗುಪ್ತನ ಅಭಿಪ್ರಾಯವನ್ನು ಯಮನ ಮೂಲಕವಾಗಿ ಕೇಳಿ ಮಹಾತೇಜಸ್ವಿಯಾದ ಸೂರ್ಯನು ರೋಮಾಂಚಿತನಾಗಿ ಸಕಲದೇವತೆಗಳನ್ನೂ ಮತ್ತು ಪಿತೃಗಳನ್ನೂ ಕುರಿತು ಹೇಳಿದನು:

"ನಾವೆಲ್ಲರೂ ಮಹಾತ್ಮನಾದ ಚಿತ್ರಗುಪ್ತನಿಗೆ ಅಭಿಮತವಾದ ಧರ್ಮರಹಸ್ಯವನ್ನು ಕೇಳಿದೆವು. ಶ್ರದ್ಧಾಯುಕ್ತರಾದ ಯಾವ ಮನುಷ್ಯರು ಮಹಾತ್ಮರಾದ ಬ್ರಾಹ್ಮಣರಿಗೆ ಈ ದಾನವನ್ನು (ಛತ್ರಿಯೇ ಮೊದಲಾದ ದಾನವನ್ನು) ಕೊಡುವರೋ–ಅವರಿಗೆ ಭಯವೆಂಬುದೇ ಇರುವುದಿಲ್ಲ.

ಧರ್ಮದೋಷಾಸ್ತ್ವಿಮೇ ಪಞ್ಚ ಯೇಷಾಂ ನಾಸ್ತೀಹ ನಿಷ್ಕೃತಿಃ ।
ಅಸಮ್ಭಾಷ್ಯಾ ಅನಾಚಾರಾ ವರ್ಜನೀಯಾ ನರಾಧಮಾಃ ॥೩೭॥

ಧರ್ಮವಿಷಯಕವಾದ ಐದು ದೋಷಗಳಿವೆ. ಆ ದೋಷಗಳು ಯಾರಲ್ಲಿವೆಯೋ–ಅವರಿಗೆ ಪ್ರಾಯಶ್ಚಿತ್ತವೆಂಬುದೇ ಇಲ್ಲ. ದುರಾಚಾರಿಗಳಾದ ಅಂತಹ ನರಾಧಮರು ಮಾತನಾಡಲು ಕೂಡ ಅರ್ಹರಾದವರಲ್ಲ. ಅಂತಹವರನ್ನು ದೂರದಿಂದಲೇ ಪರಿತ್ಯಜಿಸಬೇಕು.

ಬ್ರಹ್ಮಹಾ ಚೈವ ಗೋಘ್ನಶ್ಚ ಪರದಾರರತಶ್ಚ ಯಃ ।
ಅಶ್ರದ್ಧಧಾನಶ್ಚ ನರಃ ಸ್ತ್ರಿಯಂ ಯಶ್ಚೋಪಜೀವತಿ ॥೩೮॥

ಬ್ರಹ್ಮಹತ್ಯೆಮಾಡಿದವನು, ಗೋಹತ್ಯೆಮಾಡಿದವನು, ಪರಸ್ತ್ರೀಲಂಪ

ಟನು, ವೇದ-ಶಾಸ್ತ್ರಗಳಲ್ಲಿ ನಂಬಿಕೆಯಿಲ್ಲದವನು ಮತ್ತು ಸ್ತ್ರೀಯನ್ನೇ ಅವಲಂಬಿಸಿ ಜೀವನವನ್ನು ನಿರ್ವಹಿಸುವವನು–ಈ ಐವರೂ ನರಾಧಮರು.

ಪ್ರೇತಲೋಕಗತಾ ಹ್ಯೇತೇ ನರಕೇ ಪಾಪಕರ್ಮಿಣಃ ।
ಪಚ್ಯನ್ತೇ ವೈ ಯಥಾ ಮೀನಾಃ ಪೂಯಶೋಣಿತಭೋಜನಾಃ ॥೩೯॥

ಅವಸಾನಾನಂತರದಲ್ಲಿ ಪ್ರೇತಲೋಕಕ್ಕೆ ಹೋಗುವ ಪಾಪಕರ್ಮಿಗಳಾದ ಈ ಮನುಷ್ಯರು–ಬೆಂಕಿಯಲ್ಲಿ ಮೀನುಗಳು ಬೇಯಿಸಲ್ಪಡುವಂತೆ–ನರಕದ ಅಗ್ನಿಯಲ್ಲಿ ಬೇಯಿಸಲ್ಪಡುತ್ತಾರೆ. ಕೀವು ಮತ್ತು ರಕ್ತಗಳೇ ಇವರ ಆಹಾರವಾಗಿರುತ್ತವೆ.

ಅಸಮ್ಭಾಷ್ಯಾಃ ಪಿತೄಣಾಂ ಚ ದೇವಾನಾಂ ಚೈವ ಪಞ್ಚ ತೇ ।
ಸ್ನಾತಕಾನಾಂ ಚ ವಿಪ್ರಾಣಾಂ ಯೇ ಚಾನ್ಯೇ ಚ ತಪೋಧನಾಃ ॥೪೦॥

ಪಿತೃಕಾರ್ಯ-ದೇವತಾಕಾರ್ಯಗಳನ್ನು ಮಾಡುವಾಗ ಮಹಾಪಾತಕಿಗಳಾದ ಈ ಐವರೊಡನೆ ಮಾತನಾಡಬಾರದು. ಸ್ನಾತಕರಾಗಲೀ, ಬ್ರಾಹ್ಮಣರಾಗಲೀ, ಇತರ ತಪೋಧನರಾಗಲೀ ಇವರೊಡನೆ ಮಾತನಾಡಬಾರದು.”

೧೩೦ನೆಯ ಅಧ್ಯಾಯವು ಮುಗಿಯಿತು.

೧೩೧ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪ್ರಮಥಗಣಗಳಿಂದ ಧರ್ಮರಹಸ್ಯದ ವಿವರಣೆ

ಭೀಷ್ಮನು ಹೇಳುತ್ತಾನೆ:

ತತಃ ಸರ್ವೇ ಮಹಾಭಾಗಾ ದೇವಾಶ್ಚ ಪಿತರಶ್ಚ ಹ ।
ಋಷಯಶ್ಚ ಮಹಾಭಾಗಾಃ ಪ್ರಮಥಾನ್ವಾಕ್ಯಮಬ್ರುವನ್ ॥೧॥

“ಯುಧಿಷ್ಠಿರ! ಅನಂತರ ಮಹಾಭಾಗ್ಯಶಾಲಿಗಳಾದ ಎಲ್ಲ ದೇವತೆಗಳೂ, ಪಿತೃಗಳೂ, ಋಷಿಗಳೂ-ಪ್ರಮಥಗಣಗಳಿಗೆ ಹೇಳಿದರು:

ಭವನ್ತೋ ವೈ ಮಹಾಭಾಗಾ ಅಪರೋಕ್ಷನಿಶಾಚರಾಃ ।
ಉಚ್ಛಿಷ್ಟಾನಶುಚೀನ್ಕ್ಷುದ್ರಾನ್ಕಥಂ ಹಿಂಸಥ ಮಾನವಾನ್ ॥೨॥

“ಮಹಾಭಾಗರಾದ ಪ್ರಮಥಗಣಗಳೇ! ನೀವು ಪ್ರತ್ಯಕ್ಷನಿಶಾಚರರಾಗಿ

ರುವಿರಿ. ಉಚ್ಛಿಷ್ಟರಾದ, ಅಶುಚಿಗಳಾದ, ಕ್ಷುದ್ರರಾದ ಮನುಷ್ಯರನ್ನು ನೀವು ಹೇಗೆ ಹಿಂಸಿಸುವಿರಿ ಮತ್ತು ಏತಕ್ಕಾಗಿ ಹಿಂಸಿಸುವಿರಿ?–ಎಂಬುದನ್ನು ಹೇಳಿರಿ.

ಕೇ ಚ ಸ್ಮೃತಾಃ ಪ್ರತೀಘಾತಾ ಯೇನ ಮರ್ತ್ಯಾನ್ನಹಿಂಸಥ ।
ರಕ್ಷೋಘ್ನಾನಿ ಚ ಕಾನಿ ಸ್ಯುರ್ಯೈರ್ಗೃಹೇಷು ಪ್ರಣಶ್ಯಥ ।
ಶ್ರೋತುಮಿಚ್ಛಾಮ ಯುಷ್ಮಾಕಂ ಸರ್ವಮೇತನ್ನಿಶಾಚರಾಃ ॥೩॥

ಪ್ರತಿಘಾತಗಳು (ನಿಮ್ಮ ಕಾರ್ಯಕ್ಕೆ ತಡೆಮಾಡತಕ್ಕ ಉಪಾಯಗಳು) ಯಾವುವು? ಯಾವ ಕಾರಣದಿಂದ ನೀವು ಅಂತಹ ಮನುಷ್ಯರನ್ನು ಹಿಂಸಿಸುವುದಿಲ್ಲ? ರಾಕ್ಷಸರನ್ನು ವಿನಾಶಗೊಳಿಸುವ ವಸ್ತುಗಳು ಯಾವುವು? ಯಾವ ವಸ್ತುಗಳಿರುವ ಮನೆಗಳಲ್ಲಿ ನೀವು ವಿನಾಶಹೊಂದುವಿರಿ? ನಿಶಾಚರರೇ! ಈ ಎಲ್ಲ ವಿಷಯಗಳನ್ನೂ ನಿಮ್ಮಿಂದಲೇ ಕೇಳಬೇಕೆಂದಿರುತ್ತೇವೆ.”

ಪ್ರಮಥರು ಹೇಳುತ್ತಾರೆ:

ಮೈಥುನೇನ ಸದೋಚ್ಛಿಷ್ಟಾಃ ಕೃತೇ ಚೈವ ಧರೋತ್ತರೇ ।
ಮೋಹಾನ್ಮಾಂಸಾನಿ ಖಾದೇತ ವೃಕ್ಷಮೂಲೇ ಚ ಯಃ ಸ್ವಪೇತ್ ॥೪॥
ಆಮಿಷಂ ಶೀರ್ಷತೋ ಯಸ್ಯ ಪಾದತೋ ಯಶ್ಚ ಸಂವಿಶೇತ್ ।
ತತ ಉಚ್ಛಿಷ್ಟಕಾಃ ಸರ್ವೇ ಬಹುಚ್ಛಿದ್ರಾಶ್ಚ ಮಾನವಾಃ ॥೫॥
ಉದಕೇ ಚಾಪ್ಯಮೇಧ್ಯಾನಿ ಶ್ಲೇಷ್ಮಾಣಂ ಚ ಪ್ರಮುಞ್ಚತಿ ।
ಏತೇ ಭಕ್ಷ್ಯಾಶ್ಚ ವಧ್ಯಾಶ್ಚ ಮಾನುಷಾ ನಾತ್ರ ಸಂಶಯಃ ॥೬॥

“ಯಾವಾಗಲೂ ಸ್ತ್ರೀಸಮಾಗಮದಲ್ಲಿಯೇ ಆಸಕ್ತರಾಗಿರುವ ಮನುಷ್ಯರು ಉಚ್ಛಿಷ್ಟರೆನಿಸಿಕೊಳ್ಳುತ್ತಾರೆ. ಶ್ರೇಷ್ಠರನ್ನು ಅವಮಾನ ಗೊಳಿಸುವವನು, ಮೋಹವಶನಾಗಿ ಮಾಂಸವನ್ನು ತಿನ್ನುವವನು, ವೃಕ್ಷದ ಬುಡದಲ್ಲಿಯೇ ಮಲಗುವವನು, ತಲೆಯ ಮೇಲೆ ಮಾಂಸವನ್ನು ಹೊತ್ತುಕೊಂಡು ಹೋಗುವವನು, ಕಾಲಿನ ಕಡೆಗೆ ತಲೆಯನ್ನಿಟ್ಟುಕೊಂಡು ಮಲಗುವವನು-ಇವರೆಲ್ಲರೂ ಉಚ್ಛಿಷ್ಟರು ಅಥವಾ ಅಪವಿತ್ರರು ಎನಿಸಿ ಕೊಳ್ಳುತ್ತಾರೆ. ಇವರೆಲ್ಲರೂ ಬಹಳ ದೋಷಯುಕ್ತರಾದವರು.

ನೀರಿನಲ್ಲಿ ಮಲ-ಮೂತ್ರಗಳನ್ನು ವಿಸರ್ಜಿಸುವವರೂ ಮತ್ತು ಶ್ಲೇಷ್ಮವನ್ನು (ಕಫವನ್ನು) ಉಗಿಯುವವರೂ ಉಚ್ಛಿಷ್ಟರೆನಿಸಿಕೊಳ್ಳುತ್ತಾರೆ. ಈ ಎಲ್ಲ ಮನುಷ್ಯರೂ ನಮ್ಮ ದೃಷ್ಟಿಯಿಂದ ಭಕ್ಷಿಸಲೂ ಮತ್ತು ವಧಿಸಲೂ ಯೋಗ್ಯರಾಗಿರುತ್ತಾರೆ. ಈ ವಿಷಯದಲ್ಲಿ ಸಂಶಯವೇ ಇಲ್ಲ.

ಏವಂಶೀಲಸಮಾಚಾರಾನ್ಧರ್ಷಯಾಮೋ ಹಿ ಮಾನವಾನ್ ।
ಶ್ರೂಯತಾಂ ಚ ಪ್ರತೀಘಾತಾನ್ಯೈರ್ನ ಶಕ್ನುಮ ಹಿಂಸಿತುಮ್ ॥೭॥

ಇಂತಹ ದುಃಶೀಲರನ್ನೂ-ದುರಾಚಾರಿಗಳನ್ನೂ ನಾವು ಆಕ್ರಮಿಸುತ್ತೇವೆ. ನಮ್ಮ ಆಕ್ರಮಣವನ್ನು ತಡೆಯುವ ವಸ್ತುಗಳು ಯಾವುವೆಂಬುದನ್ನು ಕೇಳಿರಿ. ಅಂತಹ ವಸ್ತುಗಳನ್ನು ಹೊಂದಿರುವವನನ್ನು ಹಿಂಸಿಸಲು ನಾವು ಸಮರ್ಥರಲ್ಲ.

ಗೋರೋಚನಾಸಮಾಲಬ್ಧೋ ವಚಾಹಸ್ತಶ್ಚ ಯೋ ಭವೇತ್ ।
ಘೃತಾಕ್ಷತಂ ಚ ಯೋ ದದ್ಯಾನ್ಮಸ್ತಕೇ ತತ್ಪರಾಯಣಃ ।
ಯೇ ಚ ಮಾಂಸಂ ನ ಖಾದನ್ತಿ ತಾನ್ನ ಶಕ್ನುಮ ಹಿಂಸಿತುಮ್ ॥೮॥

ಯಾವನು ಗೋರೋಚನವನ್ನು ಲೇಪಿಸಿಕೊಂಡಿರುವನೋ, ಬಜೆಯನ್ನು ಕೈಯಲ್ಲಿ ಇಟ್ಟುಕೊಂಡಿರುವನೋ, ಘೃತಮಿಶ್ರಿತವಾದ ಅಕ್ಷತೆಯನ್ನು ತಲೆಯ ಮೇಲೆ ಹಾಕಿಕೊಳ್ಳುವನೋ ಮತ್ತು ಯಾವನು ಮಾಂಸವನ್ನು ತಿನ್ನುವುದಿಲ್ಲವೋ–ಅಂತಹವರನ್ನು ಹಿಂಸಿಸಲು ನಾವು ಸಮರ್ಥರಲ್ಲ.

ಯಸ್ಯ ಚಾಗ್ನಿರ್ಗೃಹೇ ನಿತ್ಯಂ ದಿವಾರಾತ್ರೌ ಚ ದೀಪ್ಯತೇ ।
ತರಕ್ಷೋಶ್ಚರ್ಮ ದಂಷ್ಟ್ರಾಶ್ಚ ತಥೈವ ಗಿರಿಕಚ್ಛಪಃ ॥೯॥

ಆಜ್ಯಧೂಮೋ ಬಿಡಾಲಶ್ಚಚ್ಛಾಗಃ ಕೃಷ್ಣೋಽಥ ಪಿಙ್ಗಲಃ ।
ಯೇಷಾಮೇತಾನಿ ತಿಷ್ಠನ್ತಿ ಗೃಹೇಷು ಗೃಹಮೇಧಿನಾಮ್ ॥೧೦॥

ತಾನ್ಯಧೃಷ್ಯಾಣ್ಯಗಾರಾಣಿ ಪಿಶಿತಾಶೈಃ ಸುದಾರುಣೈಃ ॥೧೧॥

ಯಾರ ಮನೆಯಲ್ಲಿ ಅಗ್ನಿಹೋತ್ರಾಗ್ನಿಯು ಹಗಲು-ರಾತ್ರಿ ದೇದೀಪ್ಯಮಾನವಾಗಿ ಬೆಳಗುತ್ತಿರುವುದೋ, ಕಿರುಬದ ಚರ್ಮ ಮತ್ತು ಕೋರೆ ದಾಡೆಗಳು ಯಾವ ಮನೆಯಲ್ಲಿರುವುವೋ, ಬೆಟ್ಟದ ಪೊದರುಗಳಲ್ಲಿ ವಾಸ

ಮಾಡುವ ಆಮೆ, ಬೆಕ್ಕು, ಕುರಿ ಅಥವಾ ಕಂದು ಹಳದಿಬಣ್ಣದ ಆಡು–ಇವು ಯಾರ ಮನೆಯಲ್ಲಿರುವುವೋ, ಆಜ್ಯಾಹುತಿಯಿಂದ ಹೊರಟ ಧೂಮವು ಯಾರ ಮನೆಯಲ್ಲಿ ಹರಡಿರುವುದೋ–ಇಂತಹ ವಸ್ತುಗಳಿರುವ ಗೃಹಸ್ಥರ ಮನೆಗಳು ಭಯಂಕರರಾದ, ಮಾಂಸಭಕ್ಷಕರಾದ ನಿಶಾಚರರಿಂದ ಆಕ್ರಮಿಸಲು ಅಸಾಧ್ಯವಾದುವುಗಳು.

ಲೋಕಾನಸ್ಮದ್ವಿಧಾ ಯೇ ಚ ವಿಚರನ್ತಿ ಯಥಾಸುಖಮ್ ।
ತಸ್ಮಾದೇತಾನಿ ಗೇಹೇಷು ರಕ್ಷೋಘ್ನಾನಿ ವಿಶಾಮ್ಪತೇ ।
ಏತದ್ವಃ ಕಥಿತಂ ಸರ್ವಂ ಯತ್ರ ವಃ ಸಂಶಯೋ ಮಹಾನ್ ॥೧೨॥

ನಮ್ಮಂತಹ ಅನೇಕನಿಶಾಚರರು ಈ ಲೋಕದಲ್ಲಿ ಸುಖವಾಗಿ ಸಂಚರಿಸುತ್ತಿರುತ್ತಾರೆ. ಅದುದರಿಂದ ಅಂತಹ ರಾಕ್ಷಸರನ್ನು ಹಿಂಸಿಸಲು ಸಮರ್ಥವಾದ ಈ ಪದಾರ್ಥಗಳನ್ನು ಮನೆಯಲ್ಲಿ ಇಟ್ಟುಕೊಳ್ಳಬೇಕು. ಯಾವ ವಿಷಯದಲ್ಲಿ ನಿಮಗೆ ಸಂದೇಹವಿದ್ದಿತೋ ಆ ವಿಷಯವನ್ನು ನಿಮಗೆ ಹೇಳಿರುತ್ತೇವೆ."

೧೩೧ನೆಯ ಅಧ್ಯಾಯವು ಮುಗಿಯಿತು.

೧೩೨ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದಿಗ್ಗಜಗಳಿಂದ ಧರ್ಮರಹಸ್ಯದ ವರ್ಣನೆ.

ಭೀಷ್ಮನು ಹೇಳುತ್ತಾನೆ:

ತತಃ ಪದ್ಮಪ್ರತೀಕಾಶಃ ಪದ್ಮೋದ್ಭೂತಃ ಪಿತಾಮಹಃ ।
ಉವಾಚ ವಚನಂ ದೇವಾನ್ವಾಸವಂ ಚ ಶಚೀಪತಿಮ್ ॥೧॥

"ಯುಧಿಷ್ಠಿರ! ಬಳಿಕ ಪದ್ಮಸಂಭವನಾದ, ಪದ್ಮಸದೃಶನಾದ ಪಿತಾಮಹಬ್ರಹ್ಮನು ಶಚೀಪತಿಯಾದ ವಾಸವನನ್ನೂ ದೇವತೆಗಳನ್ನೂ ಕುರಿತು ಹೇಳಿದನು:

"ರಸಾತಲದಲ್ಲಿ ಸಂಚರಿಸುವ, ಬಲಿಷ್ಠವಾದ, ಮಹಾಬಲಯುಕ್ತವಾದ, ತೇಜಸ್ಸಿನಿಂದಲೂ, ಸತ್ತ್ವ ಮತ್ತು ಪರಾಕ್ರಮಗಳಿಂದಲೂ ಕೂಡಿರುವ ರೇಣುಕ ಎಂಬ ಹೆಸರಿನ ಆನೆಯಿದೆ. ದಿಗ್ಗಜಗಳೆಲ್ಲವೂ

ಮಹಾವೀರ್ಯದಿಂದಲೂ ಮಹಾತೇಜಸ್ಸಿನಿಂದಲೂ ಕೂಡಿರತಕ್ಕುವುಗಳು. ಶೈಲ-ವನ-ಕಾನನಗಳಿಂದ ಯುಕ್ತವಾದ, ಸಮಗ್ರವಾದ ಈ ಭೂಮಂಡಲವನ್ನೇ ಅವು ಧಾರಣೆಮಾಡಿವೆ. ನಿಮ್ಮ ಅನುಜ್ಞೆಯನ್ನು ಪಡೆದು ಈ ರೇಣುಕನು ದಿಗ್ಗಜಗಳ ಸಮೀಪಕ್ಕೆ ಹೋಗಿ ಸಕಲವಿಧವಾದ ಧರ್ಮರಹಸ್ಯಗಳನ್ನೂ ಕೇಳಲಿ."

ಪಿತಾಮಹನು ಹೇಳಿದ ಮಾತನ್ನು ಕೇಳಿ ಶಾಂತಚಿತ್ತರಾದ ದೇವತೆಗಳು ಧರ್ಮರಹಸ್ಯವನ್ನು ತಿಳಿಯುವ ಸಲುವಾಗಿ ರೇಣುಕನನ್ನು ದಿಗ್ಗಜಗಳ ಸಮೀಪಕ್ಕೆ ಕಳುಹಿಸಿದರು. ದಿಗ್ಗಜಗಳ ಬಳಿಗೆ ಹೋಗಿ ರೇಣುಕವು ಹೇಳಿತು:

"ಮಹಾಬಲಿಷ್ಠರಾದ ದಿಗ್ಗಜಗಳೇ! ನಾನು ದೇವತೆಗಳ ಮತ್ತು ಪಿತೃಗಳ ಅನುಜ್ಞೆಯನ್ನು ಪಡೆದು ಬಂದಿರುವೆನು. ಮಹಾಭಾಗರೇ! ನಿಮ್ಮ ಮನಸ್ಸಿನಲ್ಲಿ ಅಡಗಿರುವ ಧರ್ಮದ ರಹಸ್ಯಗಳನ್ನು ಹೇಳಿರಿ."

ದಿಗ್ಗಜಗಳು ಹೇಳುತ್ತವೆ:

ಕಾರ್ತಿಕೇ ಮಾಸಿ ಚಾಶ್ಲೇಷಾ ಬಹುಲಸ್ಯಾಷ್ಟಮೀ ಶಿವಾ ।
ತೇನ ನಕ್ಷತ್ರಯೋಗೇನ ಯೋ ದದಾತಿ ಗುಡೌದನಮ್ ।

"ಕಾರ್ತಿಕಮಾಸದ ಕೃಷ್ಣಪಕ್ಷದ ಶುಭಪ್ರದವಾದ ಅಷ್ಟಮಿಯಲ್ಲಿ ಆಶ್ಲೇಷಾನಕ್ಷತ್ರದ ಯೋಗವಿರುವಾಗ ಯಾವನು ಬೆಲ್ಲದಿಂದ ಮಿಶ್ರಿತವಾದ ಅನ್ನವನ್ನು ದಾನಮಾಡುವನೋ–ಅವನು ಮಹಾಫಲವನ್ನು ಹೊಂದುತ್ತಾನೆ.

ಇಮಂ ಮನ್ತ್ರಂ ಜಪಞ್ಶ್ರಾದ್ಧೇ ಯತಾಹಾರೋ ಹ್ಯಕೋಪನಃ ॥

ಆಹಾರನಿಯಮವಿರುವ, ಕ್ರೋಧರಹಿತನಾದ ಮನುಷ್ಯನು ಸರ್ಪಗಳ ಪ್ರೀತ್ಯರ್ಥವಾಗಿ ಶ್ರಾದ್ಧಸಮಯದಲ್ಲಿ ಈ ಮಂತ್ರವನ್ನು ಜಪಿಸಬೇಕು.

ಬಲದೇವಪ್ರಭೃತಯೋ ಯೇ ನಾಗಾ ಬಲವತ್ತರಾಃ ।
ಅನನ್ತಾ ಹ್ಯಕ್ಷಯಾ ನಿತ್ಯಂ ಭೋಗಿನಃ ಸುಮಹಾಬಲಾಃ ॥೮॥

ತೇಷಾಂ ಕುಲೋದ್ಭವಾ ಯೇ ಚ ಮಹಾಭೂತಾ ಭುಜಙ್ಗಮಾಃ ।
ತೇ ಮೇ ಬಲಿಂ ಪ್ರತೀಚ್ಛನ್ತು ಬಲತೇಜೋಽಭಿವೃದ್ಧಯೇ ॥೯॥

ಯದಾ ನಾರಾಯಣಃ ಶ್ರೀಮಾನುಜ್ಜಹಾರ ವಸುಂಧರಾಮ್ ।
ತದ್ಬಲಂ ತಸ್ಯ ದೇವಸ್ಯ ಧರಾಮುದ್ಧರತಸ್ತಥಾ ॥೧೦॥

"ಬಲದೇವನೇ (ಶೇಷನೇ) ಮೊದಲಾದ ಯಾವ ಬಲಿಷ್ಠವಾದ ನಾಗಗಳಿವೆಯೋ ಅವೆಲ್ಲವೂ ಅನಂತಗಳೂ, ಅಕ್ಷಯಗಳೂ, ಹೆಡೆಯಿಂದ ಯುಕ್ತವಾದುವುಗಳೂ ಒಳ್ಳೆಯ ಬಲವುಳ್ಳವುಗಳೂ ಆಗಿವೆ. ಆ ನಾಗಗಳೂ ಮತ್ತು ಅವುಗಳ ಕುಲದಲ್ಲಿ ಹುಟ್ಟಿರುವ ಮಹಾಕಾಯಗಳಾದ ಸರ್ಪಗಳೂ ನನ್ನ ಬಲವನ್ನೂ ಮತ್ತು ತೇಜಸ್ಸನ್ನೂ ಹೆಚ್ಚಿಸುವ ಸಲುವಾಗಿ ನಾನು ಕೊಡಲಿರುವ ಈ ಬಲಿಯನ್ನು ಪ್ರತಿಗ್ರಹಿಸಲಿ. ಶ್ರೀಮನ್ನಾರಾಯಣನು ವಸುಂಧರೆಯನ್ನು (ಭೂಮಿಯನ್ನು) ಮೇಲಕ್ಕೆತ್ತಿದ ಸಮಯದಲ್ಲಿ ನಾರಾಯಣನಿಗಿದ್ದ ಬಲವದು."

ಹೀಗೆ ಈ ಮಂತ್ರವನ್ನು ಹೇಳಿಕೊಂಡು ಹಾವಿನ ಹುತ್ತದಲ್ಲಿ ಬಲಿಯನ್ನು ಹಾಕಬೇಕು. ಸೂರ್ಯನು ಮುಳುಗಿದನಂತರ ಗಜೇಂದ್ರ ಕುಸುಮಗಳಿಂದ (ನಾಗಕೇಸರಹೂವು) ಆ ಹುತ್ತವನ್ನು ಪೂಜಿಸಬೇಕು. ನೀಲವಸ್ತ್ರವನ್ನು ಹೊದ್ದಿಸಬೇಕು. ಗಂಧವನ್ನು ಹಚ್ಚಬೇಕು. ಅನಂತರ ಬಲಿಯನ್ನು ಹುತ್ತದಲ್ಲಿ ಹಾಕಬೇಕು.

ಹೀಗೆ ಹುತ್ತದಲ್ಲಿ ಬಲಿದಾನಮಾಡುವುದರಿಂದ ಸಂತುಷ್ಟರಾಗುವ ನಾವು, ಕೆಳಭಾಗದಲ್ಲಿ ಭೂಭಾರದಿಂದ ಪೀಡಿತರಾಗಿದ್ದರೂ ಆ ಶ್ರಮವನ್ನೇ ತಿಳಿಯುವುದಿಲ್ಲ. ಸುಖವಾಗಿಯೇ ವಸುಂಧರೆಯನ್ನು ಹೊತ್ತುಕೊಂಡಿರು ತ್ತೇವೆ. ಯಾವುದನ್ನೂ ಅಪೇಕ್ಷಿಸದೇ ಭಾರದಿಂದ ಪೀಡಿತರಾದ ನಾವೆಲ್ಲರೂ ಹೀಗೆ ಭಾವಿಸುತ್ತೇವೆ.

ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯಃ ಶೂದ್ರೋ ವಾ ಯದ್ಯುಪೋಷಿತಃ ।
ಏವಂ ಸಂವತ್ಸರಂ ಕೃತ್ವಾ ದಾನಂ ಬಹುಫಲಂ ಲಭೇತ್ ।
ವಲ್ಮೀಕೇ ಬಲಿಮಾದಾಯ ತನ್ನೋ ಬಹುಫಲಂ ಮತಮ್ ॥೧೫॥

ಬ್ರಾಹ್ಮಣನಾಗಲೀ, ಕ್ಷತ್ರಿಯನಾಗಲೀ, ವೈಶ್ಯನಾಗಲೀ, ಶೂದ್ರನಾಗಲೀ ಉಪವಾಸವ್ರತದಿಂದಿದ್ದು ಒಂದು ವರ್ಷದವರೆಗೆ ನಮ್ಮ ಪ್ರೀತ್ಯರ್ಥವಾಗಿ ಬಲಿದಾನಮಾಡಿದರೆ ಬಹುಫಲವನ್ನು ಹೊಂದುತ್ತಾನೆ. ಹುತ್ತದಲ್ಲಿ ಬಲಿಯನ್ನು ಅರ್ಪಿಸುವುದರಿಂದ ನಮಗೆ ಅಧಿಕವಾದ ಫಲ(ಬಲ)ವುಂಟಾಗುವುದೆಂಬುದು ನಮ್ಮ ನಿಶ್ಚಯವಾಗಿದೆ.

ಯೇ ಚ ನಾಗಾ ಮಹಾವೀರ್ಯಾಸ್ತ್ರಿಷು ಲೋಕೇಷು ಕೃತ್ಸ್ನಶಃ ।
ಕೃತಾತಿಥ್ಯಾ ಭವೇಯುಸ್ತೇ ಶತಂ ವರ್ಷಾಣಿ ತತ್ತ್ವತಃ ॥೧೬॥

ಮೂರು ಲೋಕಗಳಲ್ಲಿಯೂ ಮಹಾವೀರ್ಯದಿಂದ ಕೂಡಿರುವ ಎಷ್ಟು ನಾಗಗಳಿವೆಯೋ–ಅವೆಲ್ಲವೂ ಈ ಬಲಿದಾನದಿಂದ ನೂರುವರ್ಷಗಳವರೆಗೆ ಯಥಾವತ್ತಾದ ಸತ್ಕಾರವನ್ನು ಹೊಂದುತ್ತವೆ. (ಒಂದು ವರ್ಷಮಾಡಿದ ಈ ಬಲಿದಾನದಿಂದ ಎಲ್ಲ ನಾಗಗಳೂ ನೂರು ವರ್ಷಗಳವರೆಗೆ ತೃಪ್ತಿಯಿಂದಿರುತ್ತವೆ.)"

ರೇಣುಕಗಜವು, ದಿಗ್ಗಜಗಳು ಹೇಳಿದ ಧರ್ಮರಹಸ್ಯವನ್ನು ದೇವತೆಗಳಿಗೂ ಪಿತೃಗಳಿಗೂ ಹೇಳಿತು.

ದಿಗ್ಗಜಗಳು ಹೇಳಿದ ಈ ಧರ್ಮರಹಸ್ಯವನ್ನು ಕೇಳಿ ದೇವತೆಗಳೂ, ಪಿತೃಗಳೂ, ಮಹಾಭಾಗರಾದ ಋಷಿಗಳೂ ರೇಣುಕನಾಗನನ್ನು ಬಹಳವಾಗಿ ಪ್ರಶಂಸಿಸಿದರು."*

೧೩೨ನೆಯ ಅಧ್ಯಾಯವು ಮುಗಿಯಿತು.

೧೩೩ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಮಹಾದೇವನಿಂದ ಧರ್ಮರಹಸ್ಯದ ವರ್ಣನೆ

ಮಹೇಶ್ವರನು ಹೇಳುತ್ತಾನೆ:

ಸಾರಮುದ್ಧೃತ್ಯ ಯುಷ್ಮಾಭಿಃ ಸಾಧುಧರ್ಮ ಉದಾಹೃತಃ ।
ಧರ್ಮಗುಹ್ಯಮಿದಂ ಮತ್ತಃ ಶೃಣುಧ್ವಂ ಸರ್ವ ಏವ ಹ ॥೧॥

"ದೇವತೆಗಳೇ! ಪಿತೃಗಳೇ! ಋಷಿಗಳೇ! ನೀವೆಲ್ಲರೂ ಧರ್ಮಶಾಸ್ತ್ರದ ಸಾರವನ್ನು ಮೇಲೆತ್ತಿ ಧರ್ಮರಹಸ್ಯವನ್ನು ಹೇಳಿರುವಿರಿ. ಈಗ ನೀವೆಲ್ಲರೂ ನಾನು ಹೇಳಲಿರುವ ಧರ್ಮರಹಸ್ಯವನ್ನು ಕೇಳಿರಿ.

---

* ಸರ್ಪರಾಜರಿಗೆ ಪೂಜೆಮಾಡಿ ಅವರ ಬಲವೆಲ್ಲಾ ಭಗವಂತನಾದ ಯಜ್ಞವರಾಹನ ಬಲದಿಂದಲೇ ಉಂಟಾಗಿದೆ ಎಂಬುದನ್ನರಿತರೆ ದಿಗ್ಗಜಗಳಿಗೂ ಸಂತೋಷ. ಅವುಗಳಿಗೆ ಅನಾಯಾಸವಾಗಿ ಭೂಮಿಯನ್ನು ಹೊರುವ ಶಕ್ತಿಯು ಬರುತ್ತದೆ.

ಯೇಷಾಂ ಧರ್ಮಾಶ್ರಿತಾ ಬುದ್ಧಿಃ ಶ್ರದ್ದಧಾನಾಶ್ಚ ಯೇ ನರಾಃ ।
ತೇಷಾಂ ಸ್ಯಾದುಪದೇಷ್ಟವ್ಯಃ ಸರಹಸ್ಯೋ ಮಹಾಫಲಃ ॥೨॥

ಯಾರ ಬುದ್ಧಿಯು ಯಾವಾಗಲೂ ಧರ್ಮವನ್ನೇ ಆಶ್ರಯಿಸಿರುವುದೋ, ಯಾರು ಪರಮಶ್ರದ್ಧಾಳುಗಳಾಗಿರುವರೋ–ಅಂತಹವರಿಗೆ ಮಾತ್ರವೇ ಮಹಾಫಲದಾಯಕವಾದ ಈ ಧರ್ಮರಹಸ್ಯವನ್ನು ಉಪದೇಶಿಸಬೇಕು.

ನಿರುದ್ವಿಗ್ನಸ್ತು ಯೋ ದದ್ಯಾನ್ಮಾಸಮೇಕಂ ಗವಾಹ್ನಿಕಮ್ ।
ಏಕಭಕ್ತಂ ತಥಾಶ್ನೀಯಾಚ್ಛ್ರೂಯತಾಂ ತಸ್ಯ ಯತ್ಫಲಮ್ ॥೩॥

ಯಾವನು ಉದ್ವೇಗವಿಲ್ಲದೆ ಒಂದು ತಿಂಗಳವರೆಗೆ ಒಪ್ಪತ್ತು ಊಟ ಮಾಡಿಕೊಂಡು ಹಸುವಿಗೆ ಭೋಜನವನ್ನು ಮಾಡಿಸುವನೋ (ಗೋಗ್ರಾಸವನ್ನು ಕೊಡುವನೋ) ಅವನಿಗೆ ಪ್ರಾಪ್ತವಾಗುವ ಫಲವನ್ನು ಕೇಳಿರಿ.

ಇಮಾ ಗಾವೋ ಮಹಾಭಾಗಾಃ ಪವಿತ್ರಂ ಪರಮಂ ಸ್ಮೃತಾಃ ।
ತ್ರೀಲ್ಲೋಕಾನ್ಧಾರಯನ್ತಿ ಸ್ಮ ಸದೇವಾಸುರಮಾನುಷಾನ್ ॥೪॥

ಮಹಾಭಾಗ್ಯಶಾಲಿಗಳಾದ ಈ ಗೋವುಗಳು ಪರಮಪವಿತ್ರವಾದುವುಗಳೆಂದು ಹೇಳಲ್ಪಟ್ಟಿವೆ. ದೇವಾಸುರ-ಮನುಷ್ಯರಿಂದ ಸಹಿತವಾದ ಮೂರು ಲೋಕಗಳನ್ನೂ ಇವು ಧರಿಸಿವೆ.

ತಾಸು ಚೈವ ಮಹಾಪುಣ್ಯಂ ಶುಶ್ರೂಷಾ ಚ ಮಹಾಫಲಮ್ ।
ಅಹನ್ಯಹನಿ ಧರ್ಮೇಣ ಯುಜ್ಯತೇ ವೈ ಗವಾಹ್ನಿಕಃ ॥೫॥

ಗೋವುಗಳ ಶುಶ್ರೂಷೆಯು ಮಹಾಪುಣ್ಯದಾಯಕವು ಮತ್ತು ಮಹಾಫಲವನ್ನು ಕೊಡತಕ್ಕುದು. ಪ್ರತಿನಿತ್ಯವೂ ಗೋವುಗಳಿಗೆ ಭೋಜನವನ್ನು ಮಾಡಿಸುವವನು (ಹುಲ್ಲು-ನೀರುಗಳನ್ನು ಕೊಡುವವನು) ಮಹಾಫಲವನ್ನು ಸಂಪಾದಿಸುತ್ತಾನೆ.

ಕೃತಯುಗದಲ್ಲಿ ಗೋವುಗಳು ನನ್ನ ಬಳಿಯಲ್ಲಿರುವಂತೆ ಆಜ್ಞಾಪಿಸಿದ್ದೆನು. ಅನಂತರ ಪದ್ಮಯೋನಿಯಾದ ಬ್ರಹ್ಮನು ಗೋವುಗಳ ವಿಷಯವಾಗಿ ಸಮಾಧಾನಕರವಾದ ಮಾತುಗಳನ್ನು ಹೇಳಿದನು.

ಆದುದರಿಂದ ಗೋವುಗಳ ಸಮೂಹದಲ್ಲಿದ್ದ ಈ ವೃಷಭವು ನನ್ನ

ರಥದ ಮೇಲಿರುವ ಧ್ವಜದಲ್ಲಿ ಪ್ರತಿಷ್ಠಿತವಾಗಿದೆ. ನಾನು ಯಾವಾಗಲೂ ಗೋವುಗಳೊಡನೆ ಇರುತ್ತಾ ಆನಂದಪಡುತ್ತೇನೆ. ಆದುದರಿಂದ ಗೋವುಗಳನ್ನು ಸದಾ ಪೂಜಿಸುತ್ತಿರಬೇಕು. ಗೋವುಗಳು ಮಹಾಪ್ರಭಾವವುಳ್ಳವುಗಳು. ವರವನ್ನುಕೊಡತಕ್ಕುವುಗಳು. ಉಪಾಸನೆಮಾಡಿದವರಿಗೆ ಸೇವೆಮಾಡಿದವರಿಗೆ ವರಗಳನ್ನು ಕೊಡುತ್ತವೆ. ಎಲ್ಲ ವಿಧವಾದ ಕರ್ಮಗಳಲ್ಲಿಯೂ ಯಾವ ಫಲಗಳಿರುವುವೋ–ಅವೆಲ್ಲವೂ ಕರ್ತೃವಿಗೆ ಲಭಿಸುವಂತೆ ಗೋವುಗಳು ಅನುಮೋದಿಸುತ್ತವೆ. ಯಾವನು ಹಿಂದೆ ಹೇಳಿದಂತೆ ಒಂದು ತಿಂಗಳ ಕಾಲ ಒಪ್ಪತ್ತು ಊಟಮಾಡುತ್ತಾ ಗೋವುಗಳಿಗೆ ಭೋಜನವನ್ನು ಮಾಡಿಸುವನೋ–ಅವನಿಗೆ ಸತತವಾಗಿ ಗೋಸೇವೆಯನ್ನು ಮಾಡುವವನಿಗೆ ಲಭಿಸುವ ಫಲದಲ್ಲಿ ನಾಲ್ಕನೆಯ ಒಂದು ಭಾಗವು ಲಭಿಸುವುದು.”

೧೩೩ನೆಯ ಅಧ್ಯಾಯವು ಮುಗಿಯಿತು.

೧೩೪ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಸ್ಕಂದನಿಂದ ಧರ್ಮರಹಸ್ಯದ ಕಥನ

ಸ್ಕಂದನು ಹೇಳುತ್ತಾನೆ:

ಮಮಾಪ್ಯನುಮತೋ ಧರ್ಮಸ್ತಂ ಶೃಣುಧ್ವಂ ಸಮಾಹಿತಾಃ ।
ನೀಲಷಣ್ಡಸ್ಯ ಶೃಙ್ಗಾಭ್ಯಾಂ ಗೃಹೀತ್ವಾ ಮೃತ್ತಿಕಾಂ ತು ಯಃ ।
ಅಭಿಷೇಕಂ ತ್ರ್ಯಹಂ ಕುರ್ಯಾತ್ತಸ್ಯ ಧರ್ಮಂ ನಿಬೋಧತ ॥೧॥

“ದೇವತೆಗಳೇ! ನನ್ನಿಂದಲೂ ಅನುಮೋದಿಸಲ್ಪಟ್ಟಿರುವ ಧರ್ಮದ ರಹಸ್ಯವನ್ನು ಏಕಾಗ್ರಚಿತ್ತರಾಗಿ ಕೇಳಿರಿ.

ಕಪ್ಪಾಗಿರುವ ಎತ್ತಿನ ಕೋಡುಗಳಲ್ಲಿ ಅಂಟಿಕೊಂಡಿರುವ ಮಣ್ಣನ್ನು ತೆಗೆದುಕೊಂಡು ಆ ಮಣ್ಣನ್ನು ಶರೀರಕ್ಕೆ ಲೇಪಿಸಿಕೊಂಡು ಮೂರು ದಿನಗಳು ಸ್ನಾನಮಾಡುವವನಿಗೆ ಪ್ರಾಪ್ತವಾಗುವ ಪುಣ್ಯವನ್ನು ಕೇಳಿರಿ.

ಶೋಧಯೇದಶುಭಂ ಸರ್ವಮಾಧಿಪತ್ಯಂ ಪರತ್ರ ಚ ।
ಯಾವಚ್ಚ ಜಾಯತೇ ಮರ್ತ್ಯಸ್ತಾವಚ್ಛೂರೋ ಭವಿಷ್ಯತಿ ॥೨॥

ಅವನು ತನ್ನ ಪಾಪಗಳೆಲ್ಲವನ್ನೂ ಕಳೆದುಕೊಳ್ಳುತ್ತಾನೆ. ಪರಲೋಕದಲ್ಲಿ

ಆಧಿಪತ್ಯವನ್ನು ಪಡೆದುಕೊಳ್ಳುತ್ತಾನೆ. ಮನುಷ್ಯನಾಗಿ ಹುಟ್ಟಿದಾಗ ಮಹಾಶೂರನಾಗುತ್ತಾನೆ.

ದೇವತೆಗಳೇ! ಮತ್ತೊಂದು ರಹಸ್ಯಯುಕ್ತವಾದ ಅತ್ಯಂತನಿಗೂಢವಾದ ಧರ್ಮವನ್ನು ಕೇಳಿರಿ:

ಪ್ರಗೃಹ್ಯೌದುಮ್ಬರಂ ಪಾತ್ರಂ ಪಕ್ವಾನ್ನಂ ಮಧುನಾ ಸಹ ।
ಸೋಮಸ್ಯೋತ್ತಿಷ್ಠಮಾನಸ್ಯ ಪೌರ್ಣಮಾಸ್ಯಾಂ ಬಲಿಂ ಹರೇತ್ ॥

ಹುಣ್ಣಿಮೆಯಂದು ಚಂದ್ರನು ಉದಯಿಸುತ್ತಿರುವಾಗ ತಾಮ್ರದ ಪಾತ್ರೆಯನ್ನು ತೆಗೆದುಕೊಂಡು ಪಕ್ವವಾದ ಅನ್ನವನ್ನು ಜೇನುತುಪ್ಪದೊಡನೆ ಸೇರಿಸಿ ಬಲಿಪ್ರದಾನವನ್ನು ಮಾಡಬೇಕು.

ದೇವತೆಗಳೇ! ಹಾಗೆ ಮಾಡಿದರೆ ಪ್ರಾಪ್ತವಾಗುವ ಶಾಶ್ವತವಾದ ಫಲವು ಯಾವುದೆಂಬುದನ್ನು ಶ್ರದ್ಧೆಯಿಂದ ಕೇಳಿರಿ.

ಸಾಧ್ಯಾ ರುದ್ರಾಸ್ತಥಾದಿತ್ಯಾ ವಿಶ್ವೇದೇವಾಸ್ತಥಾಶ್ವಿನೌ ।
ಮರುತೋ ವಸವಶ್ಚೈವ ಪ್ರತಿಗೃಹ್ಣನ್ತಿ ತಂ ಬಲಿಮ್ ॥೬॥
ಸೋಮಶ್ಚ ವರ್ಧತೇ ತೇನ ಸಮುದ್ರಶ್ಚ ಮಹೋದಧಿಃ ।
ಏಷ ಧರ್ಮೋ ಮಯೋದ್ದಿಷ್ಟಃ ಸರಹಸ್ಯಃ ಸುಖಾವಹಃ ॥೭॥

ಆ ಮನುಷ್ಯನು ಹಾಗೆ ಕೊಡುವ ಬಲಿಯನ್ನು ಸಾಧ್ಯರು, ರುದ್ರರು, ಆದಿತ್ಯರು, ವಿಶ್ವೇದೇವತೆಗಳು, ಅಶ್ವಿನೀದೇವತೆಗಳು, ಮರುದ್ಗಣಗಳು, ವಸುಗಳು–ಇವರೆಲ್ಲರೂ ಪ್ರತಿಗ್ರಹಿಸುತ್ತಾರೆ. ಆ ಬಲಿಪ್ರದಾನದಿಂದ ಸೋಮನೂ ಮತ್ತು ಸಮುದ್ರನೂ ವೃದ್ಧಿಹೊಂದುತ್ತಾರೆ. ಹೀಗೆ ನಾನು ನಿಮಗೆ ರಹಸ್ಯಯುಕ್ತವಾದ ಸುಖದಾಯಕವಾದ ಧರ್ಮವನ್ನು ಹೇಳಿದ್ದೇನೆ."

ಮಹಾವಿಷ್ಣುವು ಹೇಳುತ್ತಾನೆ:

"ಯಾರು ದೇವತೆಗಳೂ ಮತ್ತು ಮಹಾತ್ಮರಾದ ಋಷಿಗಳೂ ಹೇಳಿರುವ ಧರ್ಮಸಂಬಂಧವಾದ ಗೂಢವಾದ ರಹಸ್ಯವಿಷಯಗಳನ್ನು ದೋಷ ದೃಷ್ಟಿಯಿಲ್ಲದೇ, ಶ್ರದ್ಧಾವಂತನಾಗಿ, ಏಕಾಗ್ರಚಿತ್ತನಾಗಿ ಪಾರಾಯಣ ಮಾಡುವನೋ ಅಥವಾ ಪಾರಾಯಣಮಾಡುತ್ತಿರುವುದನ್ನು ಕೇಳುವನೋ–

ಅವನಿಗೆ ಕಾರ್ಯಗಳ ಮಧ್ಯದಲ್ಲಿ ಯಾವ ವಿಘ್ನಗಳೂ ಉಂಟಾಗುವುದಿಲ್ಲ ಮತ್ತು ಯಾವ ವಿಧವಾದ ಭಯವೂ ಇರುವುದಿಲ್ಲ. ಈ ಪ್ರಕರಣದಲ್ಲಿ ಶುಭಾವಹವಾದ ಪುಣ್ಯಪ್ರದವಾದ ರಹಸ್ಯಗಳಿಂದ ಕೂಡಿರುವ ಯಾವ ಯಾವ ಧರ್ಮಗಳು ಹೇಳಲ್ಪಟ್ಟಿರುವುವೋ-ಆ ಧರ್ಮಗಳ ಎಲ್ಲ ಫಲಗಳೂ, ಈ ಪ್ರಕರಣವನ್ನು ಜಿತೇಂದ್ರಿಯನಾಗಿ ಪಾರಾಯಣಮಾಡಿದವನಿಗೆ ಲಭಿಸುತ್ತವೆ. ಅವನ ವಿಷಯದಲ್ಲಿ ಪಾಪಕರ್ಮವು ಯಾವ ವಿಧವಾದ ಪ್ರಭಾವವನ್ನೂ ಬೀರುವುದಿಲ್ಲ. ಅವನು ಪಾಪದಿಂದ ಲಿಪ್ತನಾಗುವುದಿಲ್ಲ. ಪಾರಾಯಣಮಾಡಿದರೂ, ಮತ್ತೊಬ್ಬನಿಗೆ ಕೇಳಿಸಿದರೂ, ಪಾರಾಯಣ ಮಾಡುತ್ತಿರುವುದನ್ನು ಕೇಳಿದರೂ ಆ ಧರ್ಮಕರ್ಮಗಳನ್ನು ಮಾಡಿದುದರ ಫಲವೇ ಲಭಿಸುತ್ತದೆ. ದೇವತೆಗಳೂ, ಪಿತೃಗಳೂ, ಅಕ್ಷಯವಾದ ಹವ್ಯ-ಕವ್ಯಗಳನ್ನು ಅವನಿಂದ ಪಡೆದುಕೊಂಡು ಭುಂಜಿಸುತ್ತಾರೆ.

ಯಾವ ಮನುಷ್ಯನು ಪರ್ವದಿನಗಳಲ್ಲಿ ಶುದ್ಧಚಿತ್ತನಾಗಿ ಶ್ರೇಷ್ಠರಾದ ಬ್ರಾಹ್ಮಣರಿಗೆ ಧರ್ಮಗಳ ಈ ನಿಗೂಢರಹಸ್ಯವನ್ನು ಪ್ರಯತ್ನಪೂರ್ವಕವಾಗಿ ಕೇಳಿಸುವನೋ–ಅವನು ಯಾವಾಗಲೂ ದೇವರ್ಷಿಗಳ ಮತ್ತು ಪಿತೃಗಳ ಪ್ರೀತಿಗೆ ಪಾತ್ರನೂ ಶ್ರೀಸಂಪನ್ನನೂ ಆಗುತ್ತಾನೆ. ಅವನಿಗೆ ಯಾವಾಗಲೂ ಧರ್ಮದಲ್ಲಿಯೇ ಪ್ರವೃತ್ತಿಯಿರುತ್ತದೆ. ಮಹಾಪಾತಕಗಳನ್ನು ಬಿಟ್ಟು ಉಳಿದ ಸಾಧಾರಣವಾದ ಪಾಪಗಳನ್ನು ಮನುಷ್ಯನು ಮಾಡಿದರೂ ಹೀಗೆ ಧರ್ಮರಹಸ್ಯವನ್ನು ಕೇಳಿದಮಾತ್ರದಿಂದಲೇ ಅಂತಹ ಸಮಸ್ತಪಾಪ ಗಳಿಂದಲೂ ವಿಮುಕ್ತನಾಗುತ್ತಾನೆ."

ಭೀಷ್ಮನು ಹೇಳುತ್ತಾನೆ:

ನರೇಶ್ವರನೇ! ದೇವತೆಗಳು ಹೇಳಿದ ಈ ಧರ್ಮರಹಸ್ಯವನ್ನು ವ್ಯಾಸರು ಈ ಹಿಂದೆ ನನಗೆ ಹೇಳಿದ್ದರು. ದೇವತೆಗಳಿಂದ ಸಮಾದೃತವಾದ ಆ ಎಲ್ಲ ಧರ್ಮರಹಸ್ಯಗಳನ್ನೂ ನಾನು ನಿನಗೂ ಹೇಳಿದ್ದೇನೆ. ಒಂದು ಕಡೆಯಲ್ಲಿ ರತ್ನಗಳಿಂದ ಪರಿಪೂರ್ಣವಾದ ಭೂಮಿಯು ಸಿಕ್ಕುವುದಾಗಿದ್ದು ಮತ್ತೊಂದು ಕಡೆಯಲ್ಲಿ ಈ ಧರ್ಮರಹಸ್ಯವೆಂಬ ಉತ್ತಮಜ್ಞಾನವು ಪ್ರಾಪ್ತವಾಗುವುದಾಗಿದ್ದಲ್ಲಿ ಧರ್ಮರಹಸ್ಯವೆಂಬ ಉತ್ತಮಜ್ಞಾನವನ್ನೇ ಶ್ರವಣಮಾಡಲು ಮತ್ತು ಮನನಮಾಡಲು ತೊಡಗಬೇಕೆಂದು ಧರ್ಮವಿದರು ತಿಳಿಯುತ್ತಾರೆ.

ನಾಶ್ರದ್ದಧಾನಾಯ ನ ನಾಸ್ತಿಕಾಯ
ನ ನಷ್ಟಧರ್ಮಾಯ ನ ನಿರ್ಘೃಣಾಯ।
ನ ಹೇತುದುಷ್ಟಾಯ ಗುರುದ್ವಿಷೇ ವಾ
ನಾನಾತ್ಮಭೂತಾಯ ನಿವೇದ್ಯಮೇತತ್ ॥೧೭॥

ಶ್ರದ್ಧೆಯಿಲ್ಲದವನಿಗೂ, ನಾಸ್ತಿಕನಿಗೂ, ಧರ್ಮಹೀನನಿಗೂ, ಕ್ರೂರಿಗೂ, ಯುಕ್ತಿವಾದವನ್ನೇ ಆಶ್ರಯಿಸಿ ದುಷ್ಟನಾಗಿರುವವನಿಗೂ, ಗುರುವನ್ನು ದ್ವೇಷಿಸುವವನಿಗೂ, ದೇಹಾಭಿಮಾನಿಗೂ ಈ ಧರ್ಮದ ರಹಸ್ಯಗಳನ್ನು ಉಪದೇಶಿಸಬಾರದು."*

೧೩೪ನೆಯ ಅಧ್ಯಾಯವು ಮುಗಿಯಿತು.

೧೩೫ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಯಾರ ಅನ್ನವನ್ನು ಊಟಮಾಡಬಹುದು ಮತ್ತು ಯಾರ ಅನ್ನವನ್ನು ಊಟಮಾಡಬಾರದೆಂಬುದರ ಬಗೆಗೆ ವಿವರಣೆ

ಯುಧಿಷ್ಠಿರನು ಪ್ರಶ್ನಿಸುತ್ತಾನೆ:

ಕೇ ಭೋಜ್ಯಾ ಬ್ರಾಹ್ಮಣಸ್ಯೇಹ ಕೇ ಭೋಜ್ಯಾಃ ಕ್ಷತ್ರಿಯಸ್ಯ ಹ ।
ತಥಾ ವೈಶ್ಯಸ್ಯ ಕೇ ಭೋಜ್ಯಾಃ ಕೇ ಶೂದ್ರಸ್ಯ ಚ ಭಾರತ ॥೧॥

"ಭಾರತನೇ! ಈ ಪ್ರಪಂಚದಲ್ಲಿ ಬ್ರಾಹ್ಮಣನು ಯಾರಿಗೆ ಭೋಜನವನ್ನು ಮಾಡಿಸಬೇಕು? ಅಂತೆಯೇ ಕ್ಷತ್ರಿಯ-ವೈಶ್ಯ-ಶೂದ್ರರಿಗೆ ಯಾರು ಭೋಜನಮಾಡಿಸಲು ಅರ್ಹರು?"

ಭೀಷ್ಮನು ಹೇಳುತ್ತಾನೆ;

ಬ್ರಾಹ್ಮಣಾ ಬ್ರಾಹ್ಮಣಸ್ಯೇಹ ಭೋಜ್ಯಾ ಯೇ ಚೈವ ಕ್ಷತ್ರಿಯಾಃ ।
ವೈಶ್ಯಾಶ್ಚಾಪಿ ತಥಾ ಭೋಜ್ಯಾಃ ಶೂದ್ರಾಶ್ಚ ಪರಿವರ್ಜಿತಾಃ ॥೨॥

---

*೧೨೫ನೆಯ ಅಧ್ಯಾಯದಿಂದ ಈ ಅಧ್ಯಾಯದವರೆಗಿನ ವಿಷಯಗಳು ವಿಶೇಷ ರೀತಿಯಲ್ಲಿವೆ. ಈ ಅಧ್ಯಾಯಗಳಲ್ಲಿರುವ ವಿಷಯಗಳೆಲ್ಲವೂ ಸಾಮಾನ್ಯವಾಗಿ ಹಿಂದಿನ ಅಧ್ಯಾಯಗಳಲ್ಲಿ ಬಂದಿರುವುವೆಂದೇ ಹೇಳಬಹುದು. ಕೆಲವು ಹೊಸ ವಿಷಯಗಳೂ ಇವೆ. ಇವಿಷ್ಟು ಅಧ್ಯಾಯಗಳೂ ಮುಂದಿನ ನಾಲ್ಕು ಅಧ್ಯಾಯಗಳೂ ಭಂ. ರಿ. ಇನ್ಸ್ಟಿಟ್ಯೂಟಿನವರ ಪುಸ್ತಕದಲ್ಲಿರುವುದಿಲ್ಲ.

“ಈ ಲೋಕದಲ್ಲಿ ಬ್ರಾಹ್ಮಣನಿಗೆ ಬ್ರಾಹ್ಮಣರು ಭೋಜನಮಾಡಿಸಲು ಯೋಗ್ಯರು. ಕ್ಷತ್ರಿಯ-ವೈಶ್ಯರೂ ಭೋಜ್ಯರು. ಆದರೆ ಶೂದ್ರರು ಭೋಜ್ಯರಲ್ಲ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ಭೋಜ್ಯಾ ವೈ ಕ್ಷತ್ರಿಯಸ್ಯ ಹ ।
ವರ್ಜನೀಯಾಸ್ತು ವೈ ಶೂದ್ರಾಃ ಸರ್ವಭಕ್ಷಾ ವಿಕರ್ಮಿಣಃ ॥೩॥

ಹಾಗೆಯೇ ಕ್ಷತ್ರಿಯನಿಗೆ ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಭೋಜನ ಮಾಡಿಸಲು ಯೋಗ್ಯರು. ಭಕ್ಷ್ಯಾಭಕ್ಷ್ಯವಿವೇಚನೆಯಿಲ್ಲದೇ ತಿನ್ನುವ, ಶಾಸ್ತ್ರಕ್ಕೆ ವಿರುದ್ಧವಾದ ಆಚರಣೆಯುಳ್ಳ ಶೂದ್ರರು ಭೋಜನ ವಿಷಯದಲ್ಲಿ ವರ್ಜಿಸಲ್ಪಡತಕ್ಕವರು.

ವೈಶ್ಯಾಸ್ತು ಭೋಜ್ಯಾ ವಿಪ್ರಾಣಾಂ ಕ್ಷತ್ರಿಯಾಣಾಂ ತಥೈವ ಚ ।
ನಿತ್ಯಾಗ್ನಯೋ ವಿವಿಕ್ತಾಶ್ಚ ಚಾತುರ್ಮಾಸ್ಯರತಾಶ್ಚ ಯೇ ॥೪॥

ಯಾರು ನಿತ್ಯಾಗ್ನಿಹೋತ್ರಿಗಳಾಗಿರುವರೋ, ಪರಿಶುದ್ಧರಾಗಿರುವರೋ ಚಾತುರ್ಮಾಸ್ಯವ್ರತವನ್ನು ಪರಿಪಾಲಿಸುವರೋ–ಅಂತಹ ವೈಶ್ಯರು ಬ್ರಾಹ್ಮಣ-ಕ್ಷತ್ರಿಯರಿಗೆ ಭೋಜನಮಾಡಿಸಬಹುದು.

ಶೂದ್ರಾಣಾಮಥ ಯೋ ಭುಙ್ಕ್ತೇ ಸ ಭುಙ್ಕ್ತೇ ಪೃಥಿವೀಮಲಮ್ ।
ಮಲಂ ನೃಣಾಂ ಸ ಪಿಬತಿ ಮಲಂ ಭುಙ್ಕ್ತೇ ಜನಸ್ಯ ಚ ॥೫॥

ಶೂದ್ರನ ಮನೆಯಲ್ಲಿ ಯಾವನು ಭೋಜನಮಾಡುವನೋ ಅವನು ಪೃಥಿವಿಯ ಮಲವನ್ನೂ, ಸಮಸ್ತಜನರ ಮಲವನ್ನೂ ಕುಡಿಯುತ್ತಾನೆ ಮತ್ತು ತಿನ್ನುತ್ತಾನೆ.

ಶೂದ್ರಾಣಾಂ ಯಸ್ತಥಾ ಭುಙ್ಕ್ತೇ ಸ ಭುಙ್ಕ್ತೇ ಪೃಥಿವೀಮಲಮ್ ।
ಪೃಥಿವೀಮಲಮಶ್ನನ್ತಿ ಯೇ ದ್ವಿಜಾಃ ಶೂದ್ರಭೋಜಿನಃ ॥೬॥

ಯಾವನು ಶೂದ್ರಾನ್ನವನ್ನು ಊಟಮಾಡುವನೋ ಅವನು ಪೃಥಿವಿಯ ಮಲವನ್ನೇ ಭೋಜನಮಾಡುತ್ತಾನೆ. ಶೂದ್ರನ ಮನೆಯಲ್ಲಿ ಭೋಜನ ಮಾಡುವ ಬ್ರಾಹ್ಮಣರು ಪೃಥಿವಿಯ ಮಲವನ್ನೇ ಊಟಮಾಡುತ್ತಾರೆ.

ಶೂದ್ರಸ್ಯ ಕರ್ಮನಿಷ್ಠಾಯಾಂ ವಿಕರ್ಮಸ್ಥೋಽಪಿ ಪಚ್ಯತೇ ।
ಬ್ರಾಹ್ಮಣಃ ಕ್ಷತ್ರಿಯೋ ವೈಶ್ಯೋ ವಿಕರ್ಮಸ್ಥಶ್ಚ ಪಚ್ಯತೇ ॥೭॥

ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಶೂದ್ರಕರ್ಮದಲ್ಲಿ ನಿಷ್ಠೆಯುಳ್ಳವರಾಗಿದ್ದರೆ ಅವರು ವರ್ಣಾಶ್ರಮೋಕ್ತವಾದ ಕರ್ಮಾನುಷ್ಠಾನಗಳನ್ನು ಮಾಡುತ್ತಿದ್ದರೂ ನರಕದಲ್ಲಿ ಬೇಯಿಸಲ್ಪಡುತ್ತಾರೆ. ಬ್ರಾಹ್ಮಣ-ಕ್ಷತ್ರಿಯ-ವೈಶ್ಯರು ಶೂದ್ರಕರ್ಮವನ್ನು ಮಾಡದಿದ್ದರೂ ವರ್ಣಾಶ್ರಮೋಕ್ತವಾದ ಕರ್ಮಗಳನ್ನು ಮಾಡದಿದ್ದರೆ ಅಂತಹವರು ಕೂಡ ನರಕದಲ್ಲಿ ಬೇಯಿಸಲ್ಪಡುತ್ತಾರೆ.

ಸ್ವಾಧ್ಯಾಯನಿರತಾ ವಿಪ್ರಾಸ್ತಥಾ ಸ್ವಸ್ತ್ಯಯನೇ ನೃಣಾಮ್ ।
ರಕ್ಷಣೇ ಕ್ಷತ್ರಿಯಂ ಪ್ರಾಹುರ್ವೈಶ್ಯಂ ಪುಷ್ಟ್ಯರ್ಥಮೇವ ಚ ॥೮॥

ಬ್ರಾಹ್ಮಣರು ಯಾವಾಗಲೂ ವೇದಗಳ ಅಧ್ಯಯನ-ಅಧ್ಯಾಪನಗಳಲ್ಲಿಯೂ-ಪ್ರಜಾಕೋಟಿಗೆ ಮಂಗಳಕರವಾದ ಕಾರ್ಯಗಳಲ್ಲಿಯೂ ನಿರತರಾಗಿರಬೇಕು. ಪ್ರಜೆಗಳೆಲ್ಲರ ರಕ್ಷಣಾಭಾರವು ಕ್ಷತ್ರಿಯನದೆಂದು ಋಷಿಗಳು ಹೇಳಿದ್ದಾರೆ. ಪ್ರಜೆಗಳ ಪುಷ್ಟ್ಯರ್ಥವಾಗಿ ಕೃಷಿ-ಗೋರಕ್ಷಣೆ-ವಾಣಿಜ್ಯಗಳನ್ನು ವೈಶ್ಯನು ಮಾಡಬೇಕು. ಇದು ವೈಶ್ಯನ ಕರ್ಮಗಳಾಗಿವೆ.

ಕರೋತಿ ಕರ್ಮ ಯದ್ವೈಶ್ಯಸ್ತದ್ಗತ್ವಾ ಹ್ಯುಪಜೀವತಿ ।
ಕೃಷಿಗೋರಕ್ಷ್ಯವಾಣಿಜ್ಯಮಕುತ್ಸಾ ವೈಶ್ಯಕರ್ಮಣಿ ॥೯॥

ವೈಶ್ಯನು ಯಾವ ಕರ್ಮವನ್ನು ಮಾಡುವನೋ–ಆ ಕರ್ಮವನ್ನೇ ಆಶ್ರಯಿಸಿ ಉಳಿದ ಪ್ರಜೆಗಳು ತಮ್ಮ ಜೀವಿಕೆಯನ್ನು ನಡೆಸುತ್ತಾರೆ. ಕೃಷಿ-ಗೋರಕ್ಷಣೆ-ವಾಣಿಜ್ಯಗಳು ವೈಶ್ಯನ ಕರ್ಮಗಳಾಗಿವೆ. ವೈಶ್ಯನಿಗೆ ತನ್ನ ಕರ್ಮಗಳಲ್ಲಿ ನಿಂದಾಭಾವನೆಯಿರಬಾರದು.

ಶೂದ್ರಕರ್ಮ ತು ಯಃ ಕುರ್ಯಾದಪಹಾಯ ಸ್ವಕರ್ಮ ಚ ।
ಸ ವಿಜ್ಞೇಯೋ ಯಥಾ ಶೂದ್ರೋ ನ ಚ ಭೋಜ್ಯಃ ಕದಾಚನ ॥

ಯಾವ ವೈಶ್ಯನು ತನ್ನ ಕರ್ಮವನ್ನು ಬಿಟ್ಟು ಶೂದ್ರಕರ್ಮವನ್ನು ಮಾಡುವನೋ–ಅವನನ್ನು ಶೂದ್ರನಿಗೆ ಸಮಾನನೆಂದೇ ತಿಳಿಯಬೇಕು. ಅಂತಹ ವೈಶ್ಯನು (ಬ್ರಾಹ್ಮಣ-ಕ್ಷತ್ರಿಯ-ವೈಶ್ಯರಿಗೆ) ಭೋಜನವನ್ನು ಮಾಡಿಸಲು ಯೋಗ್ಯನಲ್ಲ.

ಚಿಕಿತ್ಸಕಃ ಕಾಣ್ಡಪೃಷ್ಠಃ ಪುರಾಧ್ಯಕ್ಷಃ ಪುರೋಹಿತಃ ।
ಸಾಂವತ್ಸರೋ ವೃಥಾಧ್ಯಾಯೀ ಸರ್ವೇ ತೇ ಶೂದ್ರಸಮ್ಮಿತಾಃ ॥೧೧॥

ರೋಗದ ಚಿಕಿತ್ಸೆಯನ್ನು ಮಾಡುವ ವೈದ್ಯ, ಆಯುಧಗಳನ್ನು ತಯಾರಿಸಿ ಅದರಿಂದಲೇ ಜೀವನವನ್ನು ನಡೆಸುವವ, ಗ್ರಾಮಾಧ್ಯಕ್ಷ, ಗ್ರಾಮಪುರೋಹಿತ, ಸಂವತ್ಸರಫಲವನ್ನು ಹೇಳುವ ಜ್ಯೋತಿಷಿ, ವೇದ-ಶಾಸ್ತ್ರಗಳಿಂದ ಭಿನ್ನವಾದ ಗ್ರಂಥಗಳನ್ನು ವ್ಯರ್ಥವಾಗಿ ಅಧ್ಯಯನಮಾಡುವವನು–ಇವರೆಲ್ಲರೂ (ಭೋಜನಮಾಡಿಸುವ ವಿಷಯದಲ್ಲಿ) ಶೂದ್ರನಿಗೆ ಸಮಾನರು.*

ಶೂದ್ರಕರ್ಮಸ್ವಥೈತೇಷು ಯೋ ಭುಙ್ಕ್ತೇ ನಿರಪತ್ರಪಃ।
ಅಭೋಜ್ಯಭೋಜನಂ ಭುಕ್ತ್ವಾ ಭಯಂ ಪ್ರಾಪ್ನೋತಿ ದಾರುಣಮ್॥

ನಾಚಿಕೆಗೆಟ್ಟು ಯಾವ ಮನುಷ್ಯನು ಶೂದ್ರಕರ್ಮವನ್ನು ಮಾಡುವ ಅಂತಹ ಬ್ರಾಹ್ಮಣರ ಮನೆಯಲ್ಲಿ ಭೋಜನಮಾಡುವನೋ–ಅವನು ಅಭಕ್ಷ್ಯ ಭಕ್ಷಣದ ಪಾಪವನ್ನು ಹೊಂದಿ ದಾರುಣವಾದ ಭಯವನ್ನು ಹೊಂದುತ್ತಾನೆ.

ಕುಲಂ ವೀರ್ಯಂ ಚ ತೇಜಶ್ಚ ತಿರ್ಯಗ್ಯೋನಿತ್ವಮೇವ ಚ ।
ಸ ಪ್ರಯಾತಿ ಯಥಾ ಶ್ವಾ ವೈ ನಿಷ್ಕ್ರಿಯೋ ಧರ್ಮವರ್ಜಿತಃ ॥೧೩॥

ಅಂತಹವನ ಕುಲ, ವೀರ್ಯ, ತೇಜಸ್ಸುಗಳು ನಷ್ಟವಾಗುತ್ತವೆ. ಅವನು ಧರ್ಮ-ಕರ್ಮಗಳಿಂದ ವಿಹೀನನಾಗಿ ನಾಯಿಯಂತೆ ತಿರ್ಯಗ್ಯೋನಿಯಲ್ಲಿ ಹುಟ್ಟುತ್ತಾನೆ.

ಭುಙ್ಕ್ತೇ ಚಿಕಿತ್ಸಕಸ್ಯಾನ್ನಂ ತದನ್ನಂ ಚ ಪುರೀಷವತ್ ।
ಪುಂಶ್ಚಲ್ಯನ್ನಂ ಚ ಮೂತ್ರಂ ಸ್ಯಾತ್ಕಾರುಕಾನ್ನಂ ಚ ಶೋಣಿತಮ್ ॥೧೪॥

ವೈದ್ಯನ ಅನ್ನವನ್ನು ಊಟಮಾಡುವವನು ನಿಂದ್ಯನಾಗುತ್ತಾನೆ. ವೈದ್ಯಾನ್ನವು ವಿಷ್ಠೆಗೆ ಸಮಾನವಾದುದು. ಅಂತೆಯೇ ವ್ಯಭಿಚಾರಿಣೀಸ್ತ್ರೀಯ ಅಥವಾ ವೇಶ್ಯೆಯ ಅನ್ನವೂ ಮೂತ್ರಕ್ಕೆ ಸಮಾನವಾದುದು. ಶಿಲ್ಪಿಯ ಅನ್ನವು ರಕ್ತಕ್ಕೆ ಸಮಾನವಾದುದು.

---

*ವೈದ್ಯವೇ ಮುಂತಾದ ವೃತ್ತಿಯಲ್ಲಿರುವವರು ಶಾಂತಿಕರ್ಮಗಳನ್ನು ಮಾಡಿಕೊಂಡು ದೋಷಪರಿಹಾರವನ್ನು ಮಾಡಿಕೊಳ್ಳಬಹುದು.

ವಿದ್ಯೋಪಜೀವಿನೋಽನ್ನಂ ಚ ಯೋ ಭುಙ್ಕ್ತೇ ಸಾಧುಸಮ್ಮತಃ ।
ತದಪ್ಯನ್ನಂ ಯಥಾ ಶೌದ್ರಂ ತತ್ಸಾಧುಃ ಪರಿವರ್ಜಯೇತ್ ॥೧೫॥

ಸಾಧುಸಮ್ಮತನಾದ ಪುರುಷನು–ವಿದ್ಯೆಯನ್ನು ಮಾರಿ ಜೀವನ ನಿರ್ವಹಿಸುವ ಬ್ರಾಹ್ಮಣನ ಅನ್ನವನ್ನು ತಿನ್ನಬಾರದು. ಏಕೆಂದರೆ: ಆ ಅನ್ನವು ಕೂಡ ಶೂದ್ರಾನ್ನಕ್ಕೆ ಸಮಾನವಾದುದು. ಆದುದರಿಂದ ಸಾಧುಪುರುಷನು ಅಂತಹ ಅನ್ನವನ್ನು ಪರಿತ್ಯಜಿಸಬೇಕು.

ವಚನೀಯಸ್ಯ ಯೋ ಭುಙ್ಕ್ತೇ ತಮಾಹುಃ ಶೋಣಿತಂ ಹ್ರದಮ್ ।
ಪಿಶುನಂ ಭೋಜನಂ ಭುಙ್ಕ್ತೇ ಬ್ರಹ್ಮಹತ್ಯಾ ಸಮಂ ವಿದುಃ ।
ಅಸತ್ಕೃತಮವಜ್ಞಾತಂ ನ ಭೋಕ್ತವ್ಯಂ ಕದಾಚನ ॥೧೭॥

ಕಳಂಕಿತನಾದ ಮನುಷ್ಯನ ಅನ್ನವನ್ನು ತಿಂದವನನ್ನು ರಕ್ತದ ಮಡುವೆಂದು ಕರೆಯುತ್ತಾರೆ. ಚಾಡಿಕೋರನ ಮನೆಯಲ್ಲಿ ಭೋಜನಮಾಡಿದವನನ್ನು ಬ್ರಹ್ಮಹತ್ಯೆಮಾಡಿದವನಿಗೆ ಸಮಾನನೆನ್ನುತ್ತಾರೆ. ಯಥಾಯೋಗ್ಯವಾಗಿ ಸತ್ಕರಿಸದೇ ಅವಹೇಳನಪೂರ್ವಕವಾಗಿ ಪ್ರಾಪ್ತವಾಗುವ ಭೋಜನವನ್ನು ಯಾವಾಗಲೂ ಮಾಡಲೇಬಾರದು.

ವ್ಯಾಧಿಂ ಕುಲಕ್ಷಯಂ ಚೈವ ಕ್ಷಿಪ್ರಂ ಪ್ರಾಪ್ನೋತಿ ಬ್ರಾಹ್ಮಣಃ ।
ನಗರೀರಕ್ಷಿಣೋ ಭುಙ್ಕ್ತೇ ಶ್ವಪಚಪ್ರವಣೋ ಭವೇತ್ ॥೧೮॥

ಅಸತ್ಕೃತನಾಗಿ ಅವಹೇಳನದಿಂದ ಕೂಡಿದ ಭೋಜನವನ್ನು ಮಾಡುವವನು ರೋಗಗ್ರಸ್ತನಾಗುತ್ತಾನೆ. ಬಹಳಬೇಗ ಅವನ ಕುಲವೂ ಕ್ಷಯಿಸಿ ಹೋಗುತ್ತದೆ. ನಗರರಕ್ಷಕನ ಅನ್ನವನ್ನು ಊಟಮಾಡುವವನು ಚಾಂಡಾಲನಿಗೆ ಸಮಾನನಾಗುತ್ತಾನೆ.

ಗೋಘ್ನೇ ಚ ಬ್ರಾಹ್ಮಣಘ್ನೇ ಚ ಸುರಾಪೇ ಗುರುತಲ್ಪಗೇ ।
ಭುಕ್ತ್ವಾನ್ನಂ ಜಾಯತೇ ವಿಪ್ರೋ ರಕ್ಷಸಾಂ ಕುಲವರ್ಧನಃ ॥೧೯॥

ಗೋವಧೆ, ಬ್ರಾಹ್ಮಣವಧೆ, ಸುರಾಪಾನ ಮತ್ತು ಗುರುಪತ್ನೀಸಮಾಗಮ–ಇವುಗಳನ್ನು ಮಾಡಿದವರ ಮನೆಯಲ್ಲಿ ಊಟಮಾಡುವ ಬ್ರಾಹ್ಮಣನು ರಾಕ್ಷಸರ ಕುಲವರ್ಧಕನಾಗಿ ಹುಟ್ಟುತ್ತಾನೆ. (ರಾಕ್ಷಸನಾಗಿ ಹುಟ್ಟುತ್ತಾನೆ.)

ನ್ಯಾಸಾಪಹಾರಿಣೋ ಭುಕ್ತ್ವಾ ಕೃತಘ್ನೇ ಕ್ಲೀಬವರ್ತಿನಿ ।
ಜಾಯತೇ ಶಬರಾವಾಸೇ ಮಧ್ಯದೇಶಬಹಿಷ್ಕೃತೇ ॥೨೦॥

ನಿಕ್ಷೇಪವನ್ನಿಟ್ಟುದನ್ನು ಅಪಹರಿಸಿದವನ, ಕೃತಘ್ನನ ಮತ್ತು ನಪುಂಸಕನ ಅನ್ನವನ್ನು ತಿನ್ನುವವನು ಮಧ್ಯದೇಶದಲ್ಲಿ ಬಹಿಷ್ಕೃತರಾದ ಬೇಡರಕುಲದಲ್ಲಿ ಹುಟ್ಟುತ್ತಾನೆ.

ಯುಧಿಷ್ಠಿರ! ನಾನೀಗ ನಿನಗೆ ಯಾರ ಮನೆಯಲ್ಲಿ ಊಟ ಮಾಡಬಹುದು ಮತ್ತು ಯಾರ ಮನೆಯಲ್ಲಿ ಊಟಮಾಡಕೂಡದು–ಎಂಬುದನ್ನು ವಿಧಿವತ್ತಾಗಿ ಹೇಳಿದ್ದೇನೆ. ನನ್ನಿಂದ ಮತ್ತೇನನ್ನು ಕೇಳಬಯಸುವೆ?"

ಗ೩೫ನೆಯ ಅಧ್ಯಾಯವು ಮುಗಿಯಿತು.

ಗ೩೬ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ಪ್ರತಿಗ್ರಹ ಮತ್ತು ಅನುಚಿತಭೋಜನಗಳ ಪ್ರಾಯಶ್ಚಿತ್ತವಿಧಿ

ಯುಧಿಷ್ಠಿರನು ಹೇಳುತ್ತಾನೆ:

ಉಕ್ತಾಸ್ತು ಭವತಾ ಭೋಜ್ಯಾಸ್ತಥಾಭೋಜ್ಯಾಶ್ಚ ಸರ್ವಶಃ ।
ಅತ್ರ ಮೇ ಪ್ರಶ್ನಸಂದೇಹಸ್ತನ್ಮೇ ವದ ಪಿತಾಮಹ ॥೧॥

"ಪಿತಾಮಹನೇ! ನೀನು ನನಗೆ ಯಾವ ಆಹಾರವನ್ನು ಭಕ್ಷಿಸಬಹುದು ಮತ್ತು ಯಾವ ಆಹಾರವನ್ನು ಭಕ್ಷಿಸಬಾರದು?–ಎಂಬ ವಿಷಯವನ್ನು ಸಮಗ್ರವಾಗಿ ಹೇಳಿರುವೆ. ಆದರೆ ಈ ವಿಷಯದಲ್ಲಿ ನನಗೆ ಪ್ರಶ್ನಿಸಬೇಕಾದ ಒಂದು ಸಂದೇಹವುಂಟಾಗಿದೆ. ಈ ನನ್ನ ಪ್ರಶ್ನೆಗೆ ಉತ್ತರಿಸುವ ಕೃಪೆಮಾಡು.

ಬ್ರಾಹ್ಮಣಾನಾಂ ವಿಶೇಷೇಣ ಹವ್ಯಕವ್ಯಪ್ರತಿಗ್ರಹೇ ।
ನಾನಾವಿಧೇಷು ಭೋಜ್ಯೇಷು ಪ್ರಾಯಶ್ಚಿತ್ತಾನಿ ಶಂಸ ಮೇ ॥೨॥

ಬ್ರಾಹ್ಮಣರು ವಿಶೇಷವಾಗಿ ದೇವತಾಸಂಬಂಧವಾದ ಹವಿಷ್ಯಾನ್ನವನ್ನೂ–ಪಿತೃಸಂಬಂಧವಾದ ಕವ್ಯಾನ್ನವನ್ನೂ (ಶ್ರಾದ್ಧಾನ್ನವನ್ನೂ) ತಿನ್ನಬೇಕಾಗಿ ಬರುತ್ತದೆ. ಹಾಗೆ ಊಟಮಾಡುವಾಗ ಪಾಪಸಂಘಟನೆಯೂ ಆಗುತ್ತದೆ. ಆ ಪಾಪಗಳ ಪರಿಹಾರಕ್ಕಾಗಿ ಯಾವ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು?–ಎಂಬುದನ್ನು ಹೇಳು."

ಭೀಷ್ಮನು ಹೇಳುತ್ತಾನೆ:

“ಯುಧಿಷ್ಠಿರ! ಮಹಾತ್ಮರಾದ ಬ್ರಾಹ್ಮಣರು ಮಾಡುವ ಭೋಜನ ಮತ್ತು ಪ್ರತಿಗ್ರಹಗಳಿಂದ ಸಂಭವಿಸಬಹುದಾದ ಪಾಪಗಳ ನಿರಸನಕ್ಕೆ ಪ್ರಾಯಶ್ಚಿತ್ತವಿಧಿಯನ್ನು ಸಂತೋಷದಿಂದ ಹೇಳುವೆನು; ಕೇಳು.

ಘೃತಪ್ರತಿಗ್ರಹೇ ಚೈವ ಸಾವಿತ್ರೀಸಮಿದಾಹುತಿಃ ।
ತಿಲಪ್ರತಿಗ್ರಹೇ ಚೈವ ಸಮಮೇತದ್ಯುಧಿಷ್ಠಿರ ॥೪॥

ಬ್ರಾಹ್ಮಣರು ತುಪ್ಪದ ದಾನವನ್ನು ತೆಗೆದುಕೊಂಡರೆ ಆ ಪಾಪಪರಿಹಾರಕ್ಕಾಗಿ ಸಾವಿತ್ರೀ (ಗಾಯತ್ರೀ) ಮಂತ್ರವನ್ನು ಹೇಳಿಕೊಂಡು ಅಗ್ನಿಯಲ್ಲಿ ಸಮಿತ್ತನ್ನು ಹೋಮಮಾಡಬೇಕು. ಎಳ್ಳನ್ನು ದಾನತೆಗೆದು ಕೊಂಡರೂ ಹೀಗೆಯೇ ಮಾಡಬೇಕು.

ಮಾಂಸಪ್ರತಿಗ್ರಹೇ ಚೈವ ಮಧುನೋ ಲವಣಸ್ಯ ಚ ।
ಆದಿತ್ಯೋದಯನಂ ಸ್ಥಿತ್ವಾ ಪೂತೋ ಭವತಿ ಬ್ರಾಹ್ಮಣಃ ॥೫॥

ಮಾಂಸ, ಜೇನುತುಪ್ಪ ಮತ್ತು ಉಪ್ಪುಗಳನ್ನು ದಾನತೆಗೆದುಕೊಂಡರೆ ದಾನತೆಗೆದುಕೊಂಡ ಸಮಯದಿಂದ ಸೂರ್ಯೋದಯದವರೆಗೆ ನಿಂತು ಕೊಂಡಿದ್ದರೆ ಪ್ರತಿಗ್ರಹದ ಪಾಪದಿಂದ ಮುಕ್ತನಾಗಿ ಪೂತನಾಗುತ್ತಾನೆ.

ಕಾಞ್ಚನಂ ಪ್ರತಿಗೃಹ್ಯಾಥ ಜಪಮಾನೋ ಗುರುಶ್ರುತಿಮ್ ।
ಕೃಷ್ಣಾಯಸಂ ಚ ವಿವೃತಂ ಧಾರಯನ್ಮುಚ್ಯತೇ ದ್ವಿಜಃ ॥೬॥

ಸುವರ್ಣದಾನವನ್ನು ತೆಗೆದುಕೊಂಡ ಬ್ರಾಹ್ಮಣನು ಶ್ರೇಷ್ಠವಾದ ಗಾಯತ್ರೀಮಂತ್ರವನ್ನು ಜಪಿಸುತ್ತಾ ಕಬ್ಬಿಣದ ಸಲಾಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡರೆ ಸುವರ್ಣದಾನವನ್ನು ತೆಗೆದುಕೊಂಡ ಪಾಪದಿಂದ ಮುಕ್ತನಾಗುತ್ತಾನೆ.

ಏವಂ ಪ್ರತಿಗೃಹೀತೇಽಥ ಧನೇ ವಸ್ತ್ರೇ ತಥಾ ಸ್ತ್ರಿಯಮ್ ।
ಏವಮೇವ ನರಶ್ರೇಷ್ಠ ಸುವರ್ಣಸ್ಯ ಪ್ರತಿಗ್ರಹೇ ।
ಅನ್ನಪ್ರತಿಗ್ರಹೇ ಚೈವ ಪಾಯಸೇಕ್ಷುರಸೇ ತಥಾ ॥೭॥

ಹೀಗೆಯೇ ಧನ, ವಸ್ತ್ರ, ಕನ್ಯೆ, ಅನ್ನ, ಪಾಯಸ ಮತ್ತು ಕಬ್ಬಿನರಸ ಇವನ್ನು ದಾನತೆಗೆದುಕೊಂಡಾಗಲೂ ಬ್ರಾಹ್ಮಣನು ಸುವರ್ಣಪ್ರತಿಗ್ರಹದ ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳಬೇಕು.

ಇಕ್ಷುತೈಲಪವಿತ್ರಾಣಾಂ ತ್ರಿಸಂಧ್ಯೇಪ್ಸು ನಿಮಜ್ಜನಮ್ ।
ವ್ರೀಹೌ ಪುಷ್ಪೇ ಫಲೇ ಚೈವ ಜಲೇ ಪಿಷ್ಟಮಯೇ ತಥಾ ॥೮॥
ಯಾವಕೇ ದಧಿ ದುಗ್ಧೇ ಚ ಸಾವಿತ್ರೀಂ ಶತಶೋಽನ್ವಿತಾಮ್ ॥೯॥

ಕಬ್ಬು, ಎಣ್ಣೆ, ತುಪ್ಪ–ಇವುಗಳನ್ನು ದಾನತೆಗೆದುಕೊಂಡ ಬ್ರಾಹ್ಮಣನು ಮೂರು ಸಂಧ್ಯೆಗಳಲ್ಲಿ ನೀರಿನಲ್ಲಿ ಮುಳುಗುವುದರಿಂದ ಪಾಪವನ್ನು ಕಳೆದುಕೊಳ್ಳುತ್ತಾನೆ. ಧಾನ್ಯ, ಪುಷ್ಪ, ಫಲ, ಜಲ, ಹಿಟ್ಟು, ಜವೇಗೋಧಿ (ಅಲಸಂದಿ), ಮೊಸರು ಮತ್ತು ಹಾಲು–ಇವುಗಳನ್ನು ದಾನವಾಗಿ ಪಡೆದವನು ನೂರುಸಲ ಗಾಯತ್ರೀಮಂತ್ರವನ್ನು ಜಪಿಸಬೇಕು.

ಉಪಾನಹೌ ಚ ಚ್ಛತ್ರಂ ಚ ಪ್ರತಿಗೃಹ್ಯೌರ್ಧ್ವದೇಹಿಕೇ ।
ಜಪೇಚ್ಛತಂ ಸಮಾಯುಕ್ತಸ್ತೇನ ಮುಚ್ಯೇತ ಪಾಪ್ಮನಾ ॥೧೦॥

ಉತ್ತರಕ್ರಿಯೆಗೆ ಸಂಬಂಧಿಸಿದ ದಾನಕರ್ಮಗಳಲ್ಲಿ ಪಾದರಕ್ಷೆಗಳನ್ನೂ ಛತ್ರಿಯನ್ನೂ ದಾನವಾಗಿ ತೆಗೆದುಕೊಂಡರೆ ಏಕಾಗ್ರಚಿತ್ತನಾಗಿ ನೂರು ಸಲ ಗಾಯತ್ರೀಮಂತ್ರವನ್ನು ಜಪಿಸುವುದರಿಂದ ಬ್ರಾಹ್ಮಣನು ಪಾಪದಿಂದ ಮುಕ್ತನಾಗುತ್ತಾನೆ.

ಕ್ಷೇತ್ರಪ್ರತಿಗ್ರಹೇ ಚೈವ ಗ್ರಹಸೂತಕಯೋಸ್ತಥಾ ।
ತ್ರೀಣಿ ರಾತ್ರಾಣ್ಯುಪೋಷಿತ್ವಾ ತೇನ ಪಾಪಾದ್ವಿಮುಚ್ಯತೇ ॥೧೦॥

ಸೂರ್ಯ-ಚಂದ್ರರ ಗ್ರಹಣಗಳ ಸಮಯದಲ್ಲಿ ಗದ್ದೆ-ತೋಟ-ಹೊಲ ಗಳನ್ನು ದಾನವಾಗಿ ತೆಗೆದುಕೊಂಡರೆ ದಾನಪಡೆದ ಬ್ರಾಹ್ಮಣನು ಮೂರು ರಾತ್ರಿಗಳು ಉಪವಾಸವಿದ್ದರೆ ಆ ಪಾಪದಿಂದ ವಿಮುಕ್ತನಾಗುತ್ತಾನೆ.

ಕೃಷ್ಣಪಕ್ಷೇ ತು ಯಃ ಶ್ರಾದ್ಧಂ ಪಿತೄಣಾಮಶ್ನುತೇ ದ್ವಿಜಃ ।
ಅನ್ನಮೇತದಹೋರಾತ್ರಾತ್ಪೂತೋ ಭವತಿ ಬ್ರಾಹ್ಮಣಃ ॥೧೨॥

ಯಾವ ಬ್ರಾಹ್ಮಣನು ಕೃಷ್ಣಪಕ್ಷದಲ್ಲಿ ಪಿತೃಗಳ ಶ್ರಾದ್ಧದಲ್ಲಿ ಭೋಜನ ಮಾಡುವನೋ–ಅವನು ಒಂದು ಹಗಲು ಮತ್ತು ಒಂದು ರಾತ್ರಿ ಕಳೆದನಂತರ ಪವಿತ್ರನಾಗುತ್ತಾನೆ.

ನ ಚ ಸಂಧ್ಯಾಮುಪಾಸೀತ ನ ಚ ಜಾಪ್ಯಂ ಪ್ರವರ್ತಯೇತ್ ।
ನ ಸಂಕಿರೇತ್ತದನ್ನಂ ಚ ತತಃ ಪೂಯೇತ ಬ್ರಾಹ್ಮಣಃ ॥೧೩॥

ಬ್ರಾಹ್ಮಣನು ಶ್ರಾದ್ಧಭೋಜನವನ್ನು ಮಾಡಿದ ದಿನ (ಪ್ರಾಯಶ್ಚಿತ್ತ

ಮಾಡಿಕೊಳ್ಳದೇ) ಸಂಧ್ಯಾವಂದನೆಯನ್ನು ಮಾಡಬಾರದು. ಗಾಯತ್ರೀಮಂತ್ರ ವನ್ನು ಪುನಶ್ಚರಣೆಮಾಡಬಾರದು. ಪುನಃ ಭೋಜನವನ್ನು ಮಾಡಬಾರದು.*

ಇತ್ಯರ್ಥಮಪರಾಹ್ಣೇ ತು ಪಿತೄಣಾಂ ಶ್ರಾದ್ಧಮುಚ್ಯತೇ ।
ಯಥೋಕ್ತಾನಾಂ ಯದಶ್ನೀಯುರ್ಬ್ರಾಹ್ಮಣಾಃ ಪೂರ್ವಕೀರ್ತಿತಾಃ ॥

ಈ ಕಾರಣದಿಂದಲೇ ಅಪರಾಹ್ಣದಲ್ಲಿ ಪಿತೃಶ್ರಾದ್ಧವನ್ನು ಮಾಡಬೇಕೆಂದು ವಿಧಾನವನ್ನು ಮಾಡಿದ್ದಾರೆ. (ಇದರಿಂದ ಪ್ರಾತಃಕಾಲದ ಸಂಧ್ಯಾವಂದನೆ ಯಾಗಿರುತ್ತದೆ. ರಾತ್ರಿಯಲ್ಲಿ ಭೋಜನದ ಅವಶ್ಯಕತೆಯಿರುವುದಿಲ್ಲ.) ಬ್ರಾಹ್ಮಣನನ್ನು ಒಂದು ದಿನ ಮುಂಚಿತವಾಗಿ ನಿಮಂತ್ರಣಮಾಡಬೇಕು. ಹೀಗೆ ಮಾಡುವುದರಿಂದ ಹಿಂದೆ ಹೇಳಿದಂತೆ ಪರಿಶುದ್ಧರಾದವರ ಮನೆಯಲ್ಲಿ ಯಥಾವತ್ತಾಗಿ ಬ್ರಾಹ್ಮಣರು ಊಟಮಾಡಬಲ್ಲರು.

ಮೃತಕಸ್ಯ ತೃತೀಯಾಹೇ ಬ್ರಾಹ್ಮಣೋ ಯೋಽನ್ನಮಶ್ನುತೇ ।
ಸ ತ್ರಿವೇಲಂ ಸಮುನ್ಮಜ್ಜ್ಯ ದ್ವಾದಶಾಹೇನ ಶುಧ್ಯತಿ ॥೧೫॥

ಸತ್ತವನ ಮನೆಯಲ್ಲಿ ಮೂರುದಿನಗಳೊಳಗೆ ಭೋಜನಮಾಡುವ ಬ್ರಾಹ್ಮಣನು ಹನ್ನೆರಡು ದಿವಸಗಳು ತ್ರಿಕಾಲಸ್ನಾನಮಾಡುವುದರಿಂದ ಶುದ್ಧನಾಗುತ್ತಾನೆ.

ದ್ವಾದಶಾಹೇ ವ್ಯತೀತೇ ತು ಕೃತಶೌಚೋ ವಿಶೇಷತಃ ।
ಬ್ರಾಹ್ಮಣೇಭ್ಯೋ ಹವಿರ್ದತ್ತ್ವಾ ಮುಚ್ಯತೇ ತೇನ ಪಾಪ್ಮನಾ ॥೧೬॥

ಹನ್ನೆರಡು ದಿವಸಗಳು ನಿಯಮಪೂರ್ವಕವಾಗಿ ತ್ರಿಕಾಲಸ್ನಾನ ಮಾಡುತ್ತಿದ್ದು ಹದಿಮೂರನೆಯ ದಿವಸ ವಿಶೇಷವಾದ ರೀತಿಯಲ್ಲಿ ಮೃತ್ತಿಕಾದಿಗಳಿಂದ ಸ್ನಾನಮಾಡಿ ಪರಿಶುದ್ಧನಾಗಿ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿದರೆ, ಆ ಪಾಪದಿಂದ ಮುಕ್ತನಾಗುತ್ತಾನೆ.

---

*ಶ್ರಾದ್ಧಭೋಜನವನ್ನು ಮಾಡಿದುದಕ್ಕೆ ಪ್ರಾಯಶ್ಚಿತ್ತವಾಗಿ ಅಂದು ಸಾಯಂಕಾಲ **ಆಪೋಹಿಷ್ಠಾ ಮಯೋಭುವಃ** ಎಂಬ ಮಂತ್ರದಿಂದ ಮಂತ್ರಸ್ನಾನಮಾಡಿಕೊಂಡು ಹತ್ತು ಸಲ ಗಾಯತ್ರಿಯಿಂದ ಅಭಿಮಂತ್ರಿಸಿದ ಉದಕವನ್ನು ಪ್ರಾಶನಮಾಡಬೇಕು. ಆಗ ಸಾಯಂ ಸಂಧ್ಯಾವಂದನೆಯನ್ನು ಮಾಡುವುದಕ್ಕೆ ಯೋಗ್ಯತೆ ಬರುತ್ತದೆ.

ಮೃತಸ್ಯ ದಶ ರಾತ್ರೇಣ ಪ್ರಾಯಶ್ಚಿತ್ತಾನಿ ದಾಪಯೇತ್ ।
ಸಾವಿತ್ರೀಂ ರೈವತೀಮಿಷ್ಟಿಂ ಕೂಶ್ಮಾಣ್ಡಮಘಮರ್ಷಣಮ್ ॥೧೭॥

ಯಾವ ಮನುಷ್ಯನು ಸತ್ತವನ ಮನೆಯಲ್ಲಿ ಹತ್ತು ದಿವಸಗಳವರೆಗೆ ಊಟಮಾಡುವನೋ–ಅವನು ಗಾಯತ್ರೀಮಂತ್ರವನ್ನೂ, ರೈವತಸಾಮವನ್ನೂ, ಪವಿತ್ರೇಷ್ಟಿಯನ್ನೂ, ಕೂಶ್ಮಾಂಡಾನುವಾಕವನ್ನೂ, ಅಘಮರ್ಷಣ ಸೂಕ್ತವನ್ನೂ ಜಪಿಸಿ ಪ್ರಾಯಶ್ಚಿತ್ತಮಾಡಿಕೊಳ್ಳಬೇಕು.

ಮೃತಕಸ್ಯ ತ್ರಿರಾತ್ರೇ ಯಃ ಸಮುದ್ದಿಷ್ಟೇ ಸಮಶ್ನುತೇ ।
ಸಪ್ತ ತ್ರಿಷವಣಂ ಸ್ನಾತ್ವಾ ಪೂತೋ ಭವತಿ ಬ್ರಾಹ್ಮಣಃ ॥೧೮॥

ಮೃತನ ಮನೆಯಲ್ಲಿ ನಿಮಂತ್ರಿತನಾಗಿ ಯಾರು ಮೂರು ದಿವಸಗಳು ಊಟಮಾಡುವನೋ–ಆ ಬ್ರಾಹ್ಮಣನು ಏಳು ದಿವಸಗಳು ತ್ರಿಕಾಲಸ್ನಾನ ಮಾಡುವುದರಿಂದ ಪೂತನಾಗುತ್ತಾನೆ.

ಸಿದ್ಧಿಮಾಪ್ನೋತಿ ವಿಪುಲಾಮಾಪದಂ ಚೈವ ನಾಪ್ನುಯಾತ್ ॥೧೯॥

ಈ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುವುದರಿಂದ ಸಿದ್ಧಿಯನ್ನು ಪಡೆದುಕೊಳ್ಳುತ್ತಾನೆ. ಮುಂದೆ ಅವನು ಯಾವ ವಿಧವಾದ ಆಪತ್ತಿಗೂ ಒಳಗಾಗುವುದಿಲ್ಲ.

ಯಸ್ತು ಶೂದ್ರೈಃ ಸಮಶ್ನೀಯಾದ್ಬ್ರಾಹ್ಮಣೋಽಪ್ಯೇಕಭೋಜನೇ ।
ಆಶೌಚಂ ವಿಧಿವತ್ತಸ್ಯ ಶೌಚಮತ್ರ ವಿಧೀಯತೇ ॥೨೦॥

ಯಾವ ಬ್ರಾಹ್ಮಣನು ಶೂದ್ರನ ಜೊತೆಯಲ್ಲಿ ಅಥವಾ ಪಂಕ್ತಿಯಲ್ಲಿ ಕುಳಿತು ಭೋಜನಮಾಡುವನೋ–ಅವನು ಅಶುದ್ಧನಾಗುತ್ತಾನೆ. ಅವನ ಶುದ್ಧಿಗಾಗಿ ಶಾಸ್ತ್ರವಿಧಿಗೆ ಅನುಸಾರವಾಗಿ ಪ್ರಾಯಶ್ಚಿತ್ತವಿದೆ.

ಯಸ್ತು ವೈಶ್ಯೈಃ ಸಹಾಶ್ನೀಯಾದ್ಬ್ರಾಹ್ಮಣೋಽಪ್ಯೇಕಭೋಜನೇ ।
ಸ ವೈ ತ್ರಿರಾತ್ರಂ ದೀಕ್ಷಿತ್ವಾ ಮುಚ್ಯತೇ ತೇನ ಕರ್ಮಣಾ ॥೨೧॥

ಯಾವ ಬ್ರಾಹ್ಮಣನು ವೈಶ್ಯನೊಡನೆ ಸಹಪಂಕ್ತಿಭೋಜನವನ್ನು

“ದಶಕೃತ್ವಃ ಪಿಬೇಚ್ಚಾಪಃ ಗಾಯತ್ರ್ಯಾ ಶ್ರಾದ್ಧಭುಗ್ದ್ವಿಜಃ। ತತಃ ಸಂಧ್ಯಾಮುಪಾಸೀತ ಜಪೇಚ್ಚ ಜುಹುಯಾದಪಿ (ಭವಿಷ್ಯತ್ಪುರಾಣ). ಸಂಧ್ಯಾಹೋಮಯೋಃ ಪ್ರತಿಷೇಧಸ್ತು ಅಕೃತಪ್ರಾಯಶ್ಚಿತ್ತಸ್ಯ ಕೃತೇ ಪ್ರಾಯಶ್ಚಿತ್ತೇ ಕುರ್ಯಾತ್ (ವೈದ್ಯನಾಥೀಯ ಶ್ರಾದ್ಧಕಾಂಡ)

ಮಾಡುವನೋ–ಅವನು ಮೂರು ರಾತ್ರಿಗಳವರೆಗೆ ವ್ರತಾನುಷ್ಠಾನಪರನಾಗಿದ್ದರೆ ಆ ದೋಷದಿಂದ ವಿಮುಕ್ತನಾಗುತ್ತಾನೆ.

ಕ್ಷತ್ರಿಯೈಃ ಸಹ ಯೋಽಶ್ನೀಯಾದ್ಬ್ರಾಹ್ಮಣೋಽಪ್ಯೇಕಭೋಜನೇ ।
ಆಪ್ಲುತಃ ಸಹ ವಾಸೋಭಿಸ್ತೇನ ಮುಚ್ಯೇತ ಪಾಪ್ಮನಾ ॥೨೨॥

ಯಾವ ಬ್ರಾಹ್ಮಣನು ಕ್ಷತ್ರಿಯನೊಡನೆ ಸಹಪಂಕ್ತಿಭೋಜನ ಮಾಡುವನೋ–ಅವನು ಸಚೇಲಸ್ನಾನಮಾಡಿದರೆ ಆ ದೋಷದಿಂದ ವಿಮುಕ್ತನಾಗುತ್ತಾನೆ.

ಶೂದ್ರಸ್ಯ ತು ಕುಲಂ ಹನ್ತಿ ವೈಶ್ಯಸ್ಯ ಪಶುಬಾನ್ಧವಾನ್ ।
ಕ್ಷತ್ರಿಯಸ್ಯ ಶ್ರಿಯಂ ಹನ್ತಿ ಬ್ರಾಹ್ಮಣಸ್ಯ ಸುವರ್ಚಸಮ್ ॥೨೩॥

ಬ್ರಾಹ್ಮಣನ ಜೊತೆಯಲ್ಲಿ ಭೋಜನಮಾಡುವ ಶೂದ್ರನ ಕುಲವು ನಾಶವಾಗುತ್ತದೆ. ವೈಶ್ಯನ ಪಶುಗಳೂ ಮತ್ತು ಬಾಂಧವರೂ ವಿನಾಶ ಹೊಂದುತ್ತಾರೆ. ಕ್ಷತ್ರಿಯನ ಸಂಪತ್ತು ನಾಶವಾಗುತ್ತದೆ. ಬ್ರಾಹ್ಮಣನ ತೇಜಸ್ಸು ನಾಶವಾಗುತ್ತದೆ.

ಪ್ರಾಯಶ್ಚಿತ್ತಂ ಚ ಶಾನ್ತಿಂ ಚ ಜುಹುಯಾತ್ತೇನ ಮುಚ್ಯತೇ ।
ಸಾವಿತ್ರೀಂ ರೈವತೀಮಿಷ್ಟಿಂ ಕೂಶ್ಮಾಣ್ಡಮಘಮರ್ಷಣಮ್ ॥೨೪॥

ಆ ದೋಷಗಳ ನಿವಾರಣೆಗಾಗಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಶಾಂತಿಹೋಮವನ್ನು ಮಾಡಬೇಕು. ಗಾಯತ್ರೀಮಂತ್ರಜಪ, ರೈವತಸಾಮ ಪಾರಾಯಣ ಮತ್ತು ಹೋಮ, ಕೂಶ್ಮಾಂಡಾನುವಾಕಗಳ ಪಾರಾಯಣ ಮತ್ತು ಹೋಮ. (ಯದ್ದೇವಾ ದೇವಹೇಡನಂ ಎಂದು ಪ್ರಾರಂಭವಾಗುವ ಐದು ಅನುವಾಕಗಳು ಕೂಶ್ಮಾಂಡಮಂತ್ರಗಳೆಂದು ಹೇಳಲ್ಪಟ್ಟಿವೆ.) ಅಘಮರ್ಷಣ ಮಂತ್ರಜಪ–ಇವುಗಳನ್ನು ಮಾಡಬೇಕು.

ತಥೋಚ್ಛಿಷ್ಟಮಥಾನ್ಯೋನ್ಯಂ ಸಮ್ಪ್ರಾಶೇನ್ನಾತ್ರ ಸಂಶಯಃ।
ರೋಚನಾ ವಿರಾಜಾ ರಾತ್ರಿರ್ಮಙ್ಗಲಾಲಮ್ಭನಾನಿ ಚ ॥೨೫॥

ಒಬ್ಬರ ಎಂಜಲನ್ನು ತಿನ್ನುವುದರಿಂದಲೂ, ಪರಸ್ಪರವಾಗಿ ಸೇರಿ ಕುಳಿತು ಊಟಮಾಡುವುದರಿಂದಲೂ ದೋಷವುಂಟಾಗುವುದೆಂಬುದರಲ್ಲಿ

ಸಂಶಯವೇ ಇಲ್ಲ. ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಅನಂತರ ಗೋರೋಚನ, ಗರಿಕೆ, ಅರಿಶಿನ-ಇವೇ ಮೊದಲಾದ ಮಂಗಳದ್ರವ್ಯಗಳನ್ನು ಸ್ಪರ್ಶಿಸಬೇಕು."*

೧೩೬ನೆಯ ಅಧ್ಯಾಯವು ಮುಗಿಯಿತು.

೧೩೭ನೆಯ ಅಧ್ಯಾಯ ದಾನಧರ್ಮಪರ್ವ (ಮುಂದುವರಿದಿದೆ.)

ದಾನಗಳಿಂದ ಸ್ವರ್ಗಲೋಕಕ್ಕೆ ಹೋಗಿರುವ ರಾಜರ ವರ್ಣನೆ

ಯುಧಿಷ್ಠಿರನು ಹೇಳುತ್ತಾನೆ:

ದಾನೇನ ವರ್ತತೇತ್ಯಾಹ ತಪಸಾ ಚೈವ ಭಾರತ ।
ತದೇತನ್ಮೇ ಮನೋದುಃಖಂ ವ್ಯಪೋಹತ್ವಂ ಪಿತಾಮಹ ।
ಕಿಂ ಸ್ವಿತ್ಪೃಥಿವ್ಯಾಂ ಹ್ಯೇತನ್ಮೇ ಭವಾಞ್ಶಂಸಿತುಮರ್ಹತಿ ॥೧॥

"ಭರತನಂದನನೇ! ಪಿತಾಮಹ! ದಾನ ಮತ್ತು ತಪಸ್ಸುಗಳೆರಡರಿಂದಲೂ ಮನುಷ್ಯನು ಸ್ವರ್ಗಕ್ಕೆ ಹೋಗುವನೆಂದು ನೀನು ಹೇಳುತ್ತಿರುವೆ. ಆದರೆ ನನ್ನ ಮನಸ್ಸಿನಲ್ಲಿ ಸಂಶಯಜನಿತವಾದ ದುಃಖವುಂಟಾಗಿದೆ. ನೀನು ಈ ನನ್ನ ದುಃಖವನ್ನು ಹೋಗಲಾಡಿಸು. ನಿಶ್ಚಯವಾಗಿಯೂ ಈ ಪೃಥ್ವಿಯಲ್ಲಿ ಸ್ವರ್ಗಪ್ರಾಪ್ತಿಗೆ ಸಾಧನವು ಯಾವುದು? ಆ ಮಾರ್ಗವನ್ನು ಹೇಳುವ ಕೃಪೆಮಾಡು."

ಭೀಷ್ಮನು ಹೇಳುತ್ತಾನೆ:

"ಯುಧಿಷ್ಠಿರ! ತಪಸ್ಸಿನಿಂದ ಶುದ್ಧಾಂತಃಕರಣರಾದ, ಧರ್ಮನಿರತರಾದ, ದಾನಪುಣ್ಯತತ್ಪರರಾದ ಯಾವ ರಾಜರು ಕರ್ಮಗಳ ಫಲವಾಗಿ ಸಂದೇಹಕ್ಕೆಡೆಯೇ ಇಲ್ಲದಂತೆ ಉತ್ತಮಲೋಕಗಳನ್ನು ಪಡೆದರೆಂಬುದನ್ನು ಹೇಳುವೆನು; ಕೇಳು.

---

* **ಆಲಾಪಾದ್ಗಾತ್ರಸಂಸ್ಪರ್ಶಾಚ್ಛಯನಾತ್ಸಹಭೋಜನಾತ್ ।**
ಸಚರನ್ತಿ ಹಿ ಪಾಪಾನಿ ಪುಣ್ಯಂ ಚೈವ ತಥಾವಿಶೇತ್ ॥

ಮಾತನಾಡುವುದರಿಂದ, ಒಬ್ಬರನ್ನೊಬ್ಬರು ಮುಟ್ಟುವುದರಿಂದ, ಒಂದೇ ಕೋಣೆಯಲ್ಲಿ ಮಲಗುವುದರಿಂದ, ಸಹಪಂಕ್ತಿಭೋಜನದಿಂದ ಪಾಪ-ಪುಣ್ಯಗಳ ವಿನಿಮಯವಾಗುತ್ತದೆ. (ನಾರದಪಾಂಚರಾತ್ರ)

ಲೋಕಸಮ್ಮಾನಿತನಾದ ಆತ್ರೇಯಮಹರ್ಷಿಯು ತನ್ನ ಶಿಷ್ಯರಿಗೆ ನಿರ್ಗುಣಬ್ರಹ್ಮದ ಉಪದೇಶವನ್ನಿತ್ತು ಶ್ರೇಷ್ಠವಾದ ಲೋಕಗಳಿಗೆ ಹೋಗಿರುವನು. ಉಶೀನರನ ಮಗನಾದ ಶಿಬಿಯು ತನ್ನ ಪ್ರಿಯಪುತ್ರನ ಪ್ರಾಣಗಳನ್ನು ಬ್ರಾಹ್ಮಣನ ಸಲುವಾಗಿ ಬಲಿಗೊಟ್ಟು ಅದರ ಫಲವಾಗಿ ಅವಸಾನಾನಂತರದಲ್ಲಿ ಇಲ್ಲಿಂದ ಸ್ವರ್ಗಕ್ಕೆ ಹೋದನು. ಕಾಶಿಯ ರಾಜನಾದ ಪ್ರತರ್ದನನು ತನ್ನ ಪ್ರಿಯಪುತ್ರನನ್ನು ಬ್ರಾಹ್ಮಣನ ಸೇವೆಮಾಡಲು ಒಪ್ಪಿಸಿಕೊಟ್ಟು ಈ ಲೋಕದಲ್ಲಿ ಕೀರ್ತಿಯನ್ನು ಪಡೆದು ಪರಲೋಕದಲ್ಲಿ ಅಮಿತವಾದ ಆನಂದವನ್ನೂ ಪಡೆದುಕೊಂಡನು.

ಸಂಕೃತಿಯ ಮಗನಾದ ರಂತಿದೇವನು ಮಹಾತ್ಮರಾದ ವಸಿಷ್ಠರಿಗೆ ವಿಧಿವತ್ತಾಗಿ ಅರ್ಘ್ಯ-ಪಾದ್ಯಾದಿಗಳನ್ನಿತ್ತು ಶ್ರೇಷ್ಠವಾದ ಲೋಕಗಳನ್ನು ಪಡೆದುಕೊಂಡನು.

ದೇವಾವೃಧ ಎಂಬ ರಾಜನು ಯಜ್ಞದಲ್ಲಿ ನೂರು ಚಿನ್ನದ ಕಡ್ಡಿಗಳಿಂದ ಕೂಡಿದ್ದ, ದಿವ್ಯವಾದ, ಸುಂದರವಾದ ಛತ್ರಿಯನ್ನು ಬ್ರಾಹ್ಮಣನಿಗೆ ದಾನಮಾಡಿ ಸ್ವರ್ಗಕ್ಕೆ ಹೋದನು. ಐಶ್ವರ್ಯವಂತನಾದ ಅಂಬರೀಷನು ಮಹಾತೇಜಸ್ವಿಯಾದ ಬ್ರಾಹ್ಮಣನಿಗೆ ಸಮಗ್ರವಾದ ರಾಷ್ಟ್ರವನ್ನೇ ದಾನವಾಗಿ ಕೊಟ್ಟು ದೇವಲೋಕಕ್ಕೆ ಹೋದನು.

ಸೂರ್ಯಪುತ್ರನಾದ ಕರ್ಣನು ದಿವ್ಯವಾದ ಕುಂಡಲಗಳನ್ನು ಬ್ರಾಹ್ಮಣನಿಗೆ ದಾನಮಾಡಿ ಉತ್ತಮಲೋಕಗಳಿಗೆ ಹೋದನು. ಜನಮೇಜಯ ರಾಜನು ಯಾನವನ್ನೂ ಮತ್ತು ಗೋವುಗಳನ್ನೂ ಬ್ರಾಹ್ಮಣರಿಗೆ ದಾನಮಾಡಿ ಉತ್ತಮಲೋಕಗಳಿಗೆ ಹೋದನು.

ರಾಜರ್ಷಿಯಾದ ವೃಷಾದರ್ಭಿಯು ಬ್ರಾಹ್ಮಣರಿಗೆ ವಿಧ-ವಿಧವಾದ ರತ್ನಗಳನ್ನೂ ಸುಂದರವಾದ ಮನೆಗಳನ್ನೂ ದಾನಮಾಡಿ ಸ್ವರ್ಗಕ್ಕೆ ಹೋದನು.

ವಿದರ್ಭನ ಮಗನಾದ ನಿಮಿಯು ಮಹಾತ್ಮರಾದ ಅಗಸ್ತ್ಯರಿಗೆ ತನ್ನ ಕನ್ಯೆಯನ್ನೂ ಮತ್ತು ರಾಷ್ಟ್ರವನ್ನೂ ದಾನಮಾಡಿ ಪುತ್ರ-ಪಶು-ಬಂಧುಗಳೊಡನೆ ಸ್ವರ್ಗಕ್ಕೆ ಹೋದನು.

ಮಹಾಯಶೋವಂತನಾದ, ಜಮದಗ್ನಿಯ ಮಗನಾದ ಪರಶು

ರಾಮನು ಬ್ರಾಹ್ಮಣನಿಗೆ ಭೂಮಿಯನ್ನು ದಾನಮಾಡಿ ಮನಸ್ಸಿನ ಕಲ್ಪನೆಗೂ ಮೀರಿದ ಅಕ್ಷಯಲೋಕಗಳನ್ನು ಪಡೆದುಕೊಂಡನು.

ಒಮ್ಮೆ ಅನೇಕವರ್ಷಗಳ ಕಾಲ ಪರ್ಜನ್ಯನು ಮಳೆಗರೆಯದಿರಲಾಗಿ ಭೂದೇವತೆಗಳ (ಬ್ರಾಹ್ಮಣರ) ರಾಜನಾದ ವಸಿಷ್ಠನು ತನ್ನ ಅದ್ಭುತವಾದ ತಪಶ್ಶಕ್ತಿಯಿಂದ ಎಲ್ಲ ಪ್ರಾಣಿಗಳನ್ನೂ ಜೀವಿಸಿರುವಂತೆ ಮಾಡಿದನು. ಆ ಪುಣ್ಯಕರ್ಮದಿಂದಾಗಿ ಅವನು ಅಕ್ಷಯವಾದ ಲೋಕಗಳನ್ನು ಹೊಂದಿದನು.

ದಶರಥನ ಮಗನಾದ ಶ್ರೀರಾಮಚಂದ್ರನು ಅನೇಕಯಜ್ಞಗಳನ್ನು ಮಾಡಿ ಪ್ರಚುರವಾದ ಐಶ್ವರ್ಯವನ್ನು ದಕ್ಷಿಣೆಯನ್ನಾಗಿ ಕೊಟ್ಟು ಲೋಕದಲ್ಲಿ ಮಹಾಯಶಸ್ಸನ್ನು ಗಳಿಸಿ ಅವಸಾನಾನಂತರ ಅಕ್ಷಯವಾದ ಪುಣ್ಯಲೋಕಗಳಿಗೆ ಹೋದನು.

ಮಹಾಯಶೋವಂತನಾದ ರಾಜರ್ಷಿಯಾದ ಕಕ್ಷಸೇನನು ಮಹಾತ್ಮರಾದ ವಸಿಷ್ಠರಲ್ಲಿ ತನ್ನ ಸರ್ವಸ್ವವನ್ನೂ ನ್ಯಾಸವನ್ನಾಗಿಟ್ಟು (ಸಮರ್ಪಿಸಿ) ಅದರ ಫಲವಾಗಿ ಸ್ವರ್ಗವನ್ನು ಹೊಂದಿದನು.

ಕರಂಧಮನ ಮೊಮ್ಮಗನಾದ, ಅವಿಕ್ಷಿತನ ಮಗನಾದ ಮರುತ್ತರಾಜನು ತನ್ನ ಮಗಳನ್ನು ಅಂಗೀರಸನ ಮಗನಾದ ಸಂವರ್ತಕನಿಗೆ ದಾನಮಾಡಿ ಬಹಳ ಶೀಘ್ರವಾಗಿ ಸ್ವರ್ಗಕ್ಕೆ ಹೋದನು.

ಪಾಂಚಾಲದೇಶದ ರಾಜನಾದ, ಧರ್ಮಾತ್ಮರಲ್ಲಿ ಶ್ರೇಷ್ಠನಾದ ಬ್ರಹ್ಮದತ್ತನು ಬ್ರಾಹ್ಮಣನಿಗೆ ಶಂಖಸಂಖ್ಯಾತವಾದ ನಿಧಿಯನ್ನು ದಾನಮಾಡಿ ಪರಮಶ್ರೇಷ್ಠವಾದ ಸದ್ಗತಿಯನ್ನು ಹೊಂದಿದನು.

ಮಿತ್ರಸಹನೆಂಬ ರಾಜನು ಮಹಾತ್ಮರಾದ ವಸಿಷ್ಠರಿಗೆ ತನ್ನ ಪ್ರಿಯಭಾರ್ಯೆಯಾದ ಮದಯಂತಿಯನ್ನು ಸೇವೆಮಾಡಲು ಕಳುಹಿಸಿಕೊಟ್ಟು ಆ ಪುಣ್ಯಕರ್ಮದ ಫಲವಾಗಿ ಸ್ವರ್ಗಕ್ಕೆ ಹೋದನು.

ಮನುವಿನ ಮಗನಾದ ಸುದ್ಯುಮ್ನರಾಜನು ಮಹಾತ್ಮನಾದ ಲಿಖಿತನಿಗೆ ಧರ್ಮಾನುರೂಪವಾಗಿ ದಂಡವನ್ನು ವಿಧಿಸಿ ಅದರ ಫಲವಾಗಿ ಉತ್ತಮಲೋಕಗಳನ್ನು ಸೇರಿದನು.

ಮಹಾಯಶೋವಂತನಾದ ಸಹಸ್ರಚಿತ್ಯನೆಂಬ ರಾಜರ್ಷಿಯು ಬ್ರಾಹ್ಮಣರ ಸಲುವಾಗಿ ತನ್ನ ಪ್ರಿಯವಾದ ಪ್ರಾಣಗಳನ್ನೇ ಪರಿತ್ಯಜಿಸಿ ಶ್ರೇಷ್ಠವಾದ ಲೋಕಗಳನ್ನು ಪಡೆದುಕೊಂಡನು.

ಶತದ್ಯುಮ್ನನೆಂಬ ಭೂಪಾಲನು ಮೌದ್ಗಲ್ಯನೆಂಬ ಬ್ರಾಹ್ಮಣನಿಗೆ ಸಕಲವಿಧವಾದ ಕಾಮನಾವಸ್ತುಗಳಿಂದಲೂ ಪರಿಪೂರ್ಣವಾಗಿದ್ದ ಸುವರ್ಣಮಯವಾದ ಮನೆಯನ್ನು ದಾನಮಾಡಿ ಸ್ವರ್ಗವನ್ನು ಸೇರಿದನು.

ಹಿಂದೆ ಸುಮನ್ಯು ಎಂಬ ರಾಜನು ಭಕ್ಷ್ಯ-ಭೋಜ್ಯಗಳ ಪರ್ವತೋಪಮವಾದ ರಾಶಿಗಳನ್ನು ಶಾಂಡಿಲ್ಯನೆಂಬ ಬ್ರಾಹ್ಮಣನಿಗೆ ದಾನಮಾಡಿ ಅದರ ಫಲವಾಗಿ ಸ್ವರ್ಗವನ್ನು ಪಡೆದುಕೊಂಡನು.

ಮಹಾತೇಜಸ್ವಿಯಾಗಿದ್ದ ದ್ಯುತಿಮಂತನೆಂಬ ಹೆಸರಿನಿಂದ ವಿಖ್ಯಾತನಾಗಿದ್ದ ಶಾಲ್ವರಾಜನು ಋಚೀಕಮಹರ್ಷಿಗೆ ರಾಜ್ಯವನ್ನೇ ದಾನಮಾಡಿ ಶ್ರೇಷ್ಠವಾದ ಲೋಕಗಳಿಗೆ ಹೋದನು. ರಾಜರ್ಷಿಯಾದ ಮದಿರಾಶ್ವನು ಸುಂದರವಾದ ನಡುವಿನಿಂದ ಕೂಡಿದ್ದ ತನ್ನ ಕನ್ಯೆಯನ್ನು ಹಿರಣ್ಯಹಸ್ತನೆಂಬ ಬ್ರಾಹ್ಮಣನಿಗೆ ದಾನಮಾಡಿ ದೇವತೆಗಳಿಂದ ಅಧಿಷ್ಠಿತವಾದ ಲೋಕಗಳಿಗೆ ಹೋದನು.

ಪ್ರಭಾವಶಾಲಿಯಾದ, ರಾಜರ್ಷಿಯಾದ ಲೋಮಪಾದನು ತನ್ನ ಮಗಳಾದ ಶಾಂತಾದೇವಿಯನ್ನು ಋಷ್ಯಶೃಂಗನಿಗೆ ದಾನಮಾಡಿ ವಿಪುಲವಾದ ಸರ್ವಕಾಮನೆಗಳನ್ನೂ ಪಡೆದುಕೊಂಡನು.

ರಾಜರ್ಷಿಯಾದ ಭಗೀರಥನು ಯಶೋವತಿಯಾದ ಹಂಸೀ ಎಂಬ ಹೆಸರಿನ ತನ್ನ ಕನ್ಯೆಯನ್ನು ಕೌತ್ಸನೆಂಬ ಮಹರ್ಷಿಗೆ ದಾನಮಾಡಿ ಅಕ್ಷಯವಾದ ಪುಣ್ಯಲೋಕಗಳಿಗೆ ಹೋದನು.

ಭಗೀರಥರಾಜನು ಕರುಗಳಿಂದ ಕೂಡಿದ ಒಂದು ಲಕ್ಷ ಗೋವುಗಳನ್ನು ಕೋಹಲನೆಂಬ ಬ್ರಾಹ್ಮಣನಿಗೆ ದಾನಮಾಡಿ ಉತ್ತಮವಾದ ಲೋಕಗಳನ್ನು ಹೊಂದಿದನು.

ಯುಧಿಷ್ಠಿರ! ಇವರೇ ಅಲ್ಲದೇ ಇನ್ನೂ ಅನೇಕ ರಾಜರು ದಾನ-ತಪಸ್ಸುಗಳ ಪ್ರಭಾವದಿಂದ ಸ್ವರ್ಗಕ್ಕೆ ಹೋಗಿರುವರು. ಪುಣ್ಯವು ಕ್ಷೀಣಿಸಿದ ನಂತರ ಅವರು ಭೂಲೋಕಕ್ಕೆ ಹಿಂದಿರುಗುತ್ತಾರೆ.

ಯಾವ ಗೃಹಸ್ಥರು ದಾನ ಮತ್ತು ತಪಸ್ಸುಗಳಿಂದ ಯಾವ ಪುಣ್ಯಲೋಕಗಳನ್ನು ಜಯಿಸಿರುವರೋ–ಅವರ ಕೀರ್ತಿಯು ಭೂಮಿಯಿರುವವರೆಗೆ ಚಿರಸ್ಥಾಯಿಯಾಗಿ ಇಲ್ಲಿ ಉಳಿದಿರುತ್ತದೆ.

ಯುಧಿಷ್ಠಿರ! ಹೀಗೆ ನಾನು ನಿನಗೆ ಶಿಷ್ಟಪುರುಷರ ಚರಿತ್ರೆಯನ್ನು ಹೇಳಿರುವೆನು. ಈ ಎಲ್ಲ ಶಿಷ್ಟಪುರುಷರೂ ದಾನ-ಯಜ್ಞ-ಸಂತಾನೋತ್ಪತ್ತಿಗಳಿಂದ ಸ್ವರ್ಗವನ್ನು ಹೊಂದಿದರು. ಕೌರವಧುರಂಧರನೇ! ನೀನೂ ಕೂಡ ಯಾವಾಗಲೂ ದಾನಮಾಡುತ್ತಿರು. ನಿನ್ನ ಬುದ್ಧಿಯು ಯಾವಾಗಲೂ ದಾನ-ಯಜ್ಞಕ್ರಿಯೆಗಳಲ್ಲಿಯೇ ಮಗ್ನವಾಗಿರಲಿ. ಧರ್ಮವನ್ನು ವೃದ್ಧಿಪಡಿಸಲಿ.

ನೃಪಶ್ರೇಷ್ಠನೇ! ಈಗ ನಿನಗೆ ಯಾವ ವಿಷಯದಲ್ಲಿ ಸಂದೇಹ ವುಂಟಾಗಿರುವುದೋ–ಆ ಸಂದೇಹದ ನಿವಾರಣೆಯನ್ನು ನಾಳೆ ಬೆಳಗಾಗುತ್ತಲೇ ಮಾಡುತ್ತೇನೆ. ಈಗ ಸಂಧ್ಯಾಕಾಲವು ಸನ್ನಿಹಿತವಾಗಿದೆ.”

೧೩೭ನೆಯ ಅಧ್ಯಾಯವು ಮುಗಿಯಿತು.

೨೮ನೆಯ ಸಂಪುಟವು ಮುಗಿಯಿತು.

ಕಾಯೇನ ವಾಚಾ ಮನಸೇನ್ದ್ರಿಯೈರ್ವಾ
ಬುದ್ಧ್ಯಾತ್ಮನಾ ವಾ ಪ್ರಕೃತೇಃ ಸ್ವಭಾವಾತ್ ।
ಕರೋಮಿ ಯದ್ಯತ್ಸಕಲಂ ಪರಸ್ಮೈ
ನಾರಾಯಣಾಯೇತಿ ಸಮರ್ಪಯಾಮಿ ॥
ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತು ತೇ ॥

ಶ್ರೀಕೃಷ್ಣಾರ್ಪಣಮಸ್ತು ಶ್ರೀಸದ್ಗುರುಚರಣಾರವಿನ್ದಾರ್ಪಣಮಸ್ತು.

ಓಂ ತತ್ಸತ್

License No. WPP-13 Licensed to Post without pre-payment of postage
Posted at Thayagaraja Nagar Post Office

Reg. No. K.R.N.U. 86, BHARATHA DARSHANA R.N. 13245/57



Edited by : "Viswamitra", Printed & Published by
K. S. Kowshik at Bharatha Darshana Press, Bangalore - 560 028.